KANNADA UNIVERSITY, HAMPI

VIDYARANYA 583 276
HOSAPETE TQ., VIJAYANAGARA DIST.,
KARNATAKA (ST.,) INDIA



3.4.5. Supporting Document

2023-24

ISSN 2249-0396

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು (ಸ್ವಾಯತ್ತ), ಉಜಿರೆ
ಡಾ. ಹಾಮಾನಾ ಸಂಶೋಧನ ಕೇಂದ್ರ

ಶೋಧ

SHODHA

ಸಂಪುಟ -೧೩ ಸಂಚಿಕೆ -೧ Volume-13 No-1 ಜುಲೈ -೨೦೨೩ July-2023



Published By
SHRI DHARMASTHALA MANJUNATHESHWARA COLLEGE
(AUTONOMOUS)
UJIRE-574 240, D. K.
Dr. HaMaNa Research Centre

SHODHA

Biannual Bilingual Research Periodical

Published by : Dr. HaMaNa Research Center, Sri D. M. College, Ujire, D. K.
© Rights : Reserved
Price : Rs. 100-00
Issue : July 2023
Pages : 164
Printed at : Manjushri Printers, Ujire

ಸಲಹಾ ಮಂಡಳಿ

ಡಾ. ಬಿ. ಎ. ವಿವೇಕ ರೈ
ವಿಶ್ರಾಂತ ಕುಲಪತಿಗಳು
"ಸುಯಿಲ್", ಜೆಪ್ಪು, ಕುಡ್ಪಾಡಿ ರಸ್ತೆ
ಮಂಗಳೂರು – 575002

ಡಾ. ಹಂಪ ನಾಗರಾಜಯ್ಯ
ನಂ. 1079 ಸ್ವನಿಮಾ 18ನೇ ಮೇನ್
5ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು

ಡಾ. ಜ್ಯೋತಿ ಎಸ್. ಹಳ್ಳದ
ನಿರ್ದೇಶಕರು
ಜನಸಂಖ್ಯಾ ಸಂಶೋಧನ ಕೇಂದ್ರ
ಜೆ. ಎಸ್. ಎಸ್. ಇನ್‌ಸ್ಟಿಟ್ಯೂಟ್
ಆಫ್ ಎಕನಾಮಿಕ್ ರಿಸರ್ಚ್
ಕೌಶಲ್ಯ ಬಿಲ್ಡಿಂಗ್, ಜೆ. ಎಸ್. ಎಸ್. ಕ್ಯಾಂಪಸ್
ವಿದ್ಯಾಗಿರಿ, ಧಾರವಾಡ–580 004

ಸಂಪಾದಕ ಮಂಡಳಿ

ಕಾರ್ಯನಿರ್ವಾಹಕ ಸಂಪಾದಕ
ಡಾ. ಎಸ್. ಡಿ. ಶೆಟ್ಟಿ
ನಿರ್ದೇಶಕರು
ಡಾ. ಹಾಮಾನಾ ಸಂಶೋಧನ ಕೇಂದ್ರ
ಉಜಿರೆ – 574 240, ದ. ಕ.

ಸಹ ಕಾರ್ಯನಿರ್ವಾಹಕ ಸಂಪಾದಕ
ಡಾ. ದಿವಾಕರ ಕೆ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಶ್ರೀ ಧ. ಮಂ. ಕಾಲೇಜು
ಉಜಿರೆ – 574 240, ದ. ಕ.

ಸಹ ಸಂಪಾದಕರು

ಡಾ. ಶಂಕರ ನಾರಾಯಣ ಕೆ.
ವಿಶ್ರಾಂತ ಆಂಗ್ಲಭಾಷಾ ಪ್ರಾಧ್ಯಾಪಕರು
ಉಜಿರೆ – 574 240, ದ. ಕ.

ಡಾ. ವಂದನಾ ಜೈನ್
ಮುಖ್ಯಸ್ಥರು, ಮನಃಶಾಸ್ತ್ರ ವಿಭಾಗ
ಶ್ರೀ ಧ. ಮಂ. ಕಾಲೇಜು
ಉಜಿರೆ – 574 240, ದ. ಕ.

ಡಾ. ಗಣರಾಜ ಕೆ.
ಸಹಾಯಕ ಪ್ರಾಧ್ಯಾಪಕರು
ಅರ್ಥಶಾಸ್ತ್ರ ವಿಭಾಗ
ಶ್ರೀ ಧ. ಮಂ. ಕಾಲೇಜು
ಉಜಿರೆ – 574 240, ದ. ಕ.

ಡಾ. ಸೌಮ್ಯ ಬಿ. ಪಿ.
ಸಹಾಯಕ ಪ್ರಾಧ್ಯಾಪಕರು
ರಸಾಯನಶಾಸ್ತ್ರ ವಿಭಾಗ
ಶ್ರೀ ಧ. ಮಂ. ಕಾಲೇಜು
ಉಜಿರೆ – 574 240, ದ. ಕ.

ವಿಷಯ ಪರಿಣಿತರು

ಡಾ. ಶಿವರಾಮ ಹೊಳ್ಳ
ವಿಶ್ರಾಂತ ರಸಾಯನ ಶಾಸ್ತ್ರ
ಪ್ರಾಧ್ಯಾಪಕರು, ಮಂಗಳೂರು

ಪ್ರೊ. ಪ್ರಕಾಶ್ ಪ್ರಭು
ವಿಶ್ರಾಂತ ಗಣಿತಶಾಸ್ತ್ರ ಪ್ರಾಧ್ಯಾಪಕರು
ಉಜಿರೆ – 574 240, ದ. ಕ.

ಡಾ. ಹೆಚ್. ಮಾಧವ ಭಟ್
ವಿಶ್ರಾಂತ ಆಂಗ್ಲಭಾಷಾ ಪ್ರಾಧ್ಯಾಪಕರು
ಪುತ್ತೂರು

ಪ್ರೊ. ಸಂತೋಷ ಅಲ್ಫೋರ್ಟ್ ಸಲ್ದಾನ
ಪ್ರಭಾರ ಪ್ರಾಂಶುಪಾಲರು
ಶ್ರೀ ಧ. ಮಂ. ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ
ಉಜಿರೆ – 574 240, ದ. ಕ.

ಡಾ. ಶಶಿಕಾಂತ ಎಸ್. ಕುರೋಡಿ
ಆಂಗ್ಲ ಭಾಷಾ ಪ್ರಾಧ್ಯಾಪಕರು
ಧಾರವಾಡ–580002

ಡಾ. ಅಶೋಕ್ ಕುಮಾರ್ ಟಿ.
ಪ್ರಾಂಶುಪಾಲರು
ಶ್ರೀ ಧ. ಮಂ. ತಾಂತ್ರಿಕ ಮಹಾವಿದ್ಯಾಲಯ
ಉಜಿರೆ – 574 240, ದ. ಕ.

ಡಾ. ಧನಂಜಯ ಕುಂಬ್ಳೆ
ಕನ್ನಡ ಪ್ರಾಧ್ಯಾಪಕರು
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳೂರು–574199

ಡಾ. ರಾಕೇಶ್ ಟಿ. ಎಸ್.
ಪ್ರಾಂಶುಪಾಲರು
ಜಿ. ಎಸ್. ಎಸ್. ಎಸ್.,
ಎಸ್. ಎಸ್. ಎಫ್. ಜಿ., ಕಾಲೇಜು
ಮೇಟಗಳ್ಳಿ, ಮೈಸೂರು–570016

ಚಂದಾ ವಿವರ : ರೂ. 1,000/– ಮಾತ್ರ. ಐದು ವರ್ಷಗಳಿಗೆ (10 ಸಂಚಿಕೆಗಳು)
ಚಂದಾ ಹಣವನ್ನು – ನಿರ್ದೇಶಕರು, ಡಾ. ಹಾಮಾನಾ ಸಂಶೋಧನ ಕೇಂದ್ರ
ಶ್ರೀ ಧ. ಮಂ. ಕಾಲೇಜು, ಉಜಿರೆ – 574 240 ದ. ಕ.
ಈ ವಿಳಾಸಕ್ಕೆ ಡಿ. ಡಿ. ತೆಗೆದು ಪೂರ್ಣ ವಿಳಾಸದೊಂದಿಗೆ ಕಳುಹಿಸುವುದು.

CamScanner

೪. ಅಲ್ಲಮನ ವಚನಗಳ ಸಂಪಾದನಾನುಸಂಧಾನ

* ವೀರೇಶ ಬಡಿಗೇರ

ಅಲ್ಲಮನ ವಚನಗಳು ಹಾಗೂ ಅವನ ಜೀವನ ಚರಿತ್ರೆಯೊಂದಿಗೆ ಕನ್ನಡ ಪ್ರಜ್ಞೆ ಸುದೀರ್ಘವಾದ ಅನುಸಂಧಾನ ಮಾಡುತ್ತ ಬಂದಿದೆ. ಪಂಥ, ಮತ, ಆಚಾರ, ವಿಚಾರ, ಸ್ಥಳ ನಿರ್ದೇಶನ, ಏಕರೂಪೀಕರಣ , ಅನುವಾದ ಹೀಗೆ ಆಯಾ ಕಾಲದ ಶಿಸ್ತು ಹಾಗೂ ಮನೋಧರ್ಮಗಳ ವ್ಯಾಕರಣಕ್ಕೆ ಅಲ್ಲಮನ ವಚನ ಹಾಗೂ ಆತನ ಜೀವನ ಕಥನಗಳನ್ನು ಹೊಂದಿಸುವ ಕೆಲಸ ಮಾಡಲಾಗಿದೆ. ಬಾಲಲೀಲಾ ಮಹಾಂತ ಶಿವಯೋಗಿಯ ಮಾತಿನಲ್ಲಿ ಹೇಳುವುದಾದರೆ 'ಇರುವೊಂದು ಕನ್ನಡಿಯ ನೂರಾರು ಜನರು ಪಿಡಿಯೆ ಅವರವರ ರೂಪನು ಅವರವರು ಕಾಂಬಂತೆ'. 1200 ರಿಂದ 1900ರ ವರೆಗೆ, ಇನ್ನಷ್ಟು ವಿಸ್ತರಿಸಿದರೆ ನಮ್ಮ ಕಾಲದವರೆಗೆ ಅಲ್ಲಮನನ್ನು ಅನೇಕರು ಅವರವರ ಭಾವಗನ್ನಡಿಯಲ್ಲಿ ನೋಡಿದ್ದಾರೆ. ನನ್ನ ಪ್ರಕಾರ ಈ ಸುದೀರ್ಘ ಅನುಸಂಧಾನದಲ್ಲಿ ನೂರಾರು ಅಲ್ಲಮ ಹಾಗೂ ಅಲ್ಲಮ ಪ್ರಜ್ಞೆಗಳು ಮರುಹುಟ್ಟು ಪಡೆದಿವೆ. ಸಂಗ್ರಹ, ಸಂಕಲನ, ಸಂಪಾದನೆ, ಟೀಕು, ವ್ಯಾಖ್ಯಾನ, ಪುರಾಣ, ಪ್ರವಚನ, ನಾಟಕ, ಯಕ್ಷಗಾನ, ಸ್ಥಲಗತಿಗಳಲ್ಲಿ ನಡೆದ ಹೊಕ್ಕು ಬಳಕೆಯಲ್ಲಿ ಹಲವು ರೀತಿಯ ವಿನ್ಯಾಸ ಹಾಗೂ ಚಲನೆಗಳೂ ನಡೆದು ಹೋಗಿವೆ. 'ಹರಿವ ನದಿಗೆ ಮೈಯೆಲ್ಲ ಕಾಲು, ಉರಿವ ಬೆಂಕಿಗೆ ಮೈಯಲ್ಲ ನಾಲಿಗೆ' ಎನ್ನುವ ಅಲ್ಲಮನ ಮಾತೇ ಅವನ ಅನೇಕತೆಯ ಪ್ರಜ್ಞೆಗೆ ಸಾಕ್ಷಿಯಾಗಿದೆ.

ಅಲ್ಲಮನ ಲಭ್ಯ ವಚನಗಳನ್ನು ಮೂರು ರೀತಿಯಲ್ಲಿ ವಿದ್ವಾಂಸರು ಗುರುತಿಸಿದ್ದಾರೆ. 1) ವಚನಗಳು 2) ಬೆಡಗಿನ ವಚನಗಳು 3) ಗೀತೆಗಳು ಅಥವಾ ಹಾಡುಗಳು (ಸ್ವರವಚನಗಳು). ಇವುಗಳು ನಾಲ್ಕು ರೀತಿಯ ಆಕರಗಳಲ್ಲಿ ದೊರೆಯುತ್ತವೆ. 1) ಷಟ್ಸ್ಥಲಾನುಕ್ರಮವಾಗಿ ಜೋಡಿಸಿ, ವ್ಯಾಖ್ಯಾನ ಬರೆದು ವೀರಶೈವ ಸಿದ್ಧಾಂತ ಪ್ರತಿಪಾದನೆ ಮಾಡಿದ ವಚನಗಳು 2) ಶೂನ್ಯ ಸಂಪಾದನೆಗಳಲ್ಲಿ ಎರಕಹೊಯ್ದ ವಚನಗಳು 3) ಹಲವು ಶರಣರ ವಚನಕಟ್ಟುಗಳೊಂದಿಗೆ ಸೇರಿದ ಅಲ್ಲಮನ ವಚನಗಳು 4) ಶರಣರ ಜೀವನಚರಿತ್ರಾತ್ಮಕ ವೀರಶೈವ ಪುರಾಣಗಳು.[1] ಅಲ್ಲಮನನ್ನು ಅನುಸಂಧಾನ ಮಾಡಿದ ಬಗೆಗಳನ್ನು ಅಭ್ಯಾಸಕ್ಕಾಗಿ ಆಧುನಿಕಪೂರ್ವ ಮತ್ತು ಆಧುನಿಕೋತ್ತರ ಎಂದು ಗುರುತಿಸಬಹುದು.

* **ಪ್ರಾಧ್ಯಾಪಕರು,** ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–583276

1) ಆಧುನಿಕ ಪೂರ್ವ:

ಅ) ಕಥನರೂಪಿ ಅಲ್ಲಮ: ಹರಿಹರ, ರಾಘವಾಂಕ, ಪಾಲ್ಕುರಿಕೆ ಸೋಮನಾಥ ಮುಂತಾದವರು ತಮ್ಮ ಕಾವ್ಯಗಳನ್ನು ಹೆಣೆಯಲು ಪ್ರಭುವಿನ ವಚನಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡಿದ್ದಾರೆ. ಸಿಂಗಿರಾಜನ ಅಮಲಬಸವಚಾರಿತ್ರ್ಯ, ರಾಘವಾಂಕನ ಸಿದ್ಧರಾಮಚಾರಿತ್ರ್ಯ, ಸಿದ್ಧನಂಜೇಶನ ಗುರುರಾಜಚರಿತ್ರ, ಚೆನ್ನಪ್ಪ ಕವಿಯ ಶರಣಲೀಲಾಮೃತ ಈ ಕೃತಿಗಳಲ್ಲಿ, ಇತರ ಶರಣರ ಜೊತೆಗೆ ಅಲ್ಲಮನ ಕಥನವೂ ನಿರೂಪಿತವಾಗಿದೆ. ಕೆಲವು ಕವಿಗಳು ಅಲ್ಲಮನನ್ನೇ ಪ್ರಧಾನ ಭೂಮಿಕೆಯಲ್ಲಿಟ್ಟು ಕಥಿಸಿದರೆ,[2] ಇನ್ನು ಕೆಲವರು ಇತರ ಶರಣ ಜೀವನ ಕಥನದ ಭಾಗವಾಗಿ ಅಲ್ಲಮನನ್ನು ಕಥಿಸಿಕೊಂಡಿದ್ದಾರೆ.[3] ಅಲ್ಲಮನ ವಚನಗಳನ್ನು ರಗಳೆ, ಷಟ್ಪದಿ, ಸಾಂಗತ್ಯ ಸಾಹಿತ್ಯ ಪ್ರಕಾರಗಳಲ್ಲಿ ಅನೇಕ ಕವಿಗಳು ಪರಿವರ್ತಿಸಿಕೊಂಡಿದ್ದಾರೆ.

'ಹೆಣ್ಣು ಮಾಯೆಯಲ್ಲ' ಎಂದು ಅಲ್ಲಮ ಹೇಳಿದ್ದರೂ ಅವನ ಕುರಿತ ಎಲ್ಲ ಕಾವ್ಯಗಳಲ್ಲಿ ಹೆಣ್ಣು ಮಾಯೆಯೆಂಬ ಪ್ರತಿಪಾದನೆಯೇ ಮುಖ್ಯವಾಗಿದೆ. ಹೆಣ್ಣು ಗಂಡೆಂಬ ಅವಳಿ ವೈರುಧ್ಯಗಳನ್ನು ಮೀರಿದ್ದ ಅಲ್ಲಮನ ಚರಿತ್ರೆಗಳಲ್ಲಿ ಹೆಣ್ಣು ಮಾಯೆ ಎಂಬ ಚರ್ಚೆ ನಡೆದಿದ್ದು ವಿರೋಧಾಭಾಸ ಎನಿಸುತ್ತದೆ. ಪ್ರಭುವಿನಂತಹ ವಚನಕಾರರು ಹೆಣ್ಣಿನ ಬಗ್ಗೆ ಹೊಂದಿದ್ದ ನಿಲುವಿಗೂ, ನಂತರದ ಅನುಸಂಧಾನಕಾರರು ಹೊಂದಿದ್ದ ನಿಲುವಿಗೂ ಸಾಕಷ್ಟು ವ್ಯತ್ಯಾಸಗಳಿರುವುದನ್ನು ಇಂತಹ ಅನೇಕ ಕಥನಗಳಿಂದ ಅರಿಯಬಹುದು.

ಹಲವು ಮಂದಿ ಟೀಕು, ವ್ಯಾಖ್ಯಾನಕಾರರು, ಕವಿಗಳು, ಆಧುನಿಕ ಚಿಂತಕರು, ಜನಪದ ಕವಿ, ಲೇಖಕರು ಅಲ್ಲಮನ ವ್ಯಕ್ತಿತ್ವವನ್ನು ಅವನ ವಚನಗಳ ಮೂಲಕವೂ ಕಟ್ಟಿಕೊಳ್ಳುತ್ತ ಬಂದಿದ್ದಾರೆ. ಪ್ರಭುದೇವರ ಸ್ತೋತ್ರದ ವಚನಗಳು ಇಂತಹ ಆಕರಗಳಲ್ಲಿ ಪ್ರಮುಖವಾಗಿವೆ. ಅದೇ ರೀತಿ ಅನುವಾದಗಳ ಮೂಲಕವೂ ಅಲ್ಲಮನ ಕಥನವನ್ನು ಕಟ್ಟಿಕೊಂಡು ಬರಲಾಗಿದೆ.[4]

ಆ) ಸಂಪಾದನಾ ಮಾರ್ಗ: ವಚನ ಕಾಲದ ನಂತರ ದೊಡ್ಡಮಟ್ಟದಲ್ಲಿ ವಚನಗಳ ಸಂಗ್ರಹ, ಸಂಕಲನ, ಸಂಪಾದನೆ ನಡೆದಿದೆ. '13ನೇ ಶತಮಾನದಲ್ಲಿ ಆಂಧ್ರ ಮಂಡಲದಲ್ಲಿ ಪಂಡಿತತ್ರಯರೆಂದು ಪ್ರಖ್ಯಾತರಾಗಿದ್ದ ಶಿವಲೆಂಕ ಮಂಚಣ್ಣ ಪಂಡಿತಾರಾಧ್ಯ, ಮಲ್ಲಿಕಾರ್ಜುನ ಪಂಡಿತಾರಾಧ್ಯ, ಶ್ರೀಪತಿ ಪಂಡಿತಾರಾಧ್ಯ ಇವರು ಬಸವಾದಿ ಶರಣ ಸಿದ್ಧಾಂತಗಳನ್ನು ಸಂಸ್ಕೃತ ಭಾಷೆಯಲ್ಲಿ ಪ್ರಚಾರ ಮಾಡುತ್ತಾರೆ. ಪಾಲ್ಕುರಿಕೆ ಸೋಮನಾಥನು ವಚನಗಳಲ್ಲಿ ಪ್ರತಿಪಾದಿತವಾದ ಸಿದ್ಧಾಂತಗಳನ್ನು ಷಟ್ಸ್ಥಲ ಮತ್ತು ಏಕೋತ್ತರಶತಸ್ಥಲಗಳ ರೂಪದಲ್ಲಿ ಗ್ರಹಿಸಿ, ವಚನ ಸಿದ್ಧಾಂತಗಳಿಗೆ ಭಾರತೀಯ ತತ್ತ್ವಸಿದ್ಧಾಂತಗಳಲ್ಲಿ ಗಣ್ಯಸ್ಥಾನ ದೊರೆಯುವಂತೆ ಮಾಡಿದ ಮೊದಲಿಗನಾಗಿದ್ದಾನೆ'.[5]

ವಚನಗಳ ಬಗೆಗಿನ ಈ ಆಸಕ್ತಿ ಕನ್ನಡ ನಾಡಿನಲ್ಲಿ 14ನೇ ಶತಮಾನದಲ್ಲಿ ಹುಟ್ಟಿಕೊಳ್ಳುತ್ತದೆ. ವಿಶೇಷವಾಗಿ 15ನೇ ಶತಮಾನದಲ್ಲಿ ಪ್ರೌಢದೇವರಾಯನ (ಕ್ರಿ.ಶ. 1419–1447) ಆಶ್ರಯಿತರಾಗಿದ್ದ ಜಕ್ಕಣಾರ್ಯ, ಲಕ್ಕಣ ದಂಡೇಶರು ಅನೇಕ ವೀರಶೈವ ಕವಿಗಳಿಗೆ, ಪಂಡಿತರಿಗೆ, ಅನುಭಾವಿಗಳಿಗೆ ಆಶ್ರಯ ನೀಡಿ ವಚನಗಳ

ಸಂಗ್ರಹ, ಸಂಕಲನ, ಸಂಪಾದನೆ ಕಾರ್ಯ ಕ್ರಮಬದ್ಧವಾಗಿ ಮತ್ತು ವ್ಯಾಪಕವಾಗಿ ನಡೆಯುವಂತೆ ಪ್ರೋತ್ಸಾಹಿಸುತ್ತಾರೆ. ಸಂಪಾದನೆ ಮಠಗಳು, ಓಲೆ ಮಠಗಳು, ಟೀಕಿನ ಮಠಗಳೆಂದು ಸಂಸ್ಥೆಗಳು ಹುಟ್ಟಿಕೊಳ್ಳುವಷ್ಟು ಈ ಕೆಲಸ ಭರದಿಂದ ನಡೆಯುತ್ತದೆ. ವಚನಗಳನ್ನು ಸಂಗ್ರಹಿಸಿ, ಸಂಯೋಜಿಸಿ ವೀರಶೈವ ತತ್ತ್ವಪ್ರತಿಪಾದನೆ ಅಥವಾ ಅನುಭಾವದ ಆಳವನ್ನು ನಿರೂಪಿಸುವ ದೃಷ್ಟಿಯನ್ನಿಟ್ಟುಕೊಂಡು ಈ ಸಂಪಾದನಾ ಕಾರ್ಯ ನಡೆಯುತ್ತದೆ.

ಈ ಕಾಲದಲ್ಲಿ ಸಿದ್ಧಗೊಂಡ ಶೂನ್ಯಸಂಪಾದನೆಗಳು ವಚನಕಾರರನ್ನು ಮರು ಕಟ್ಟಿಕೊಟ್ಟ ಮುಖ್ಯ ಆಕರಗಳು, ಸಿಂಗಿರಾಜನ ಅಮಲಬಸವಚಾರಿತ್ರ್ಯದಲ್ಲಿ ಉಲ್ಲೇಖವಾಗಿರುವಂತೆ ಪ್ರಭುಸಂಪಾದನೆ (2–16ಗ. 2–40ಗ) ಕ್ರಿಯಾ ಸಂಪಾದನೆ ಮಾರ್ಗಗಳು ರೂಢಿಯಲ್ಲಿದ್ದವು. ಇದಕ್ಕೊಂದು ಸಮಗ್ರ ರೂಪವನ್ನು ಶಿವಗಣಪ್ರಸಾದಿ ಮಹಾದೇವಯ್ಯ ನೀಡುತ್ತಾನೆ.[6] ಕ್ರಮವಾಗಿ ನಾಲ್ಕು ಶೂನ್ಯ ಸಂಪಾದನೆಗಳು ಅಲ್ಲಮನನ್ನು ಕೇಂದ್ರವಾಗಿಸಿಕೊಂಡು ರಚಿತವಾಗುತ್ತವೆ.

ಮತ್ತೊಂದೆಡೆಗೆ ಷಟ್ಸ್ಥಲಗಳಿಗೆ, ನೂರೊಂದುಸ್ಥಲಗಳಿಗೆ, ಅಷ್ಟವರ್ಗಗಳಿಗೆ, ಪಂಚಾಚಾರಗಳಿಗೆ, ಆಚಾರ ದೀಕ್ಷೆಗಳಿಗೆ ಅನುಗುಣವಾಗಿ ವಚನಗಳನ್ನು ಸಂಪಾದಿಸುವ ಮತ್ತು ವ್ಯಾಖ್ಯಾನ ಮಾಡುವ ಕೆಲಸವು ದೊಡ್ಡ ಮಟ್ಟದಲ್ಲಿ ನಡೆಯುತ್ತದೆ. ಸ್ಥಲಕಟ್ಟು ಸಂಪಾದನೆಯಲ್ಲಿ ಮುಖ್ಯವಾಗಿ ಮಹಾಲಿಂಗನ ಏಕೋತ್ತರಶತಸ್ಥಲ, ಸಿದ್ಧಲಿಂಗನ ಏಕೋತ್ತರಶತಸ್ಥಲ, ಜಕ್ಕಣಾರ್ಯನ ಏಕೋತ್ತರಶತಸ್ಥಲಗಳನ್ನು ಹೆಸರಿಸಬಹುದು. ಸ್ಥಲಗಳಿಗೆ ಅನುಗುಣವಾಗಿ ವಚನಗಳಿಗೆ ಟೀಕೆಯನ್ನು ಬರೆಯಲಾಗುತ್ತದೆ. ಕಲ್ಲುಮಠದ ಪ್ರಭುದೇವನ ಲಿಂಗಲೀಲಾವಿಲಾಸ ಚಾರಿತ್ರ್ಯ ವಚನದ ಟೀಕೆ ಬೆಡಗಿನ ವಚನ ಟೀಕು ಇಲ್ಲಿ ಮುಖ್ಯವಾದವು. ಇದೂ ಅಲ್ಲದೆ ಸ್ತೋತ್ರದ ರೂಪದ ಸಂಪಾದನೆಗಳು,[7] ಸಕಲ ಪುರಾತನರ ಸಂಪಾದನೆಗಳು, ಈ ಯಾವ ವಿಂಗಡಣೆಗೂ ಸೇರದ ಸಂಕೀರ್ಣ ವಚನ ಸಂಪುಟಗಳು ಬಂದಿರುವುದನ್ನು ಗುರುತಿಸಬಹುದು.

2) ಆಧುನಿಕ ಸಂದರ್ಭ

ಅ) ಕವಿಚರಿತೆ ಸಂಪುಟ–1 (1907), ಸಟೀಕಾ ಗಣಭಾಷಿತ ರತ್ನಮಾಲೆ (1909): ಈ ಕೃತಿಗಳಲ್ಲಿ 'ಗುಹೇಶ್ವರಗುಟ್ಟು', 'ಗುಹೇಶ್ವರ ವಚನ' ಎಂದು ವಚನಾಂಕಿತದಿಂದ ವಚನಕಾರರನ್ನು ಗುರುತಿಸುವ ಕ್ರಮ ಕಾಣುತ್ತದೆ. ಕವಿಚರಿತೆ ಸಂಪುಟ ಒಂದರಲ್ಲಿ 'ಪ್ರಭುದೇವನ ವಚನ', 'ಪ್ರಭುದೇವರ ಮಂತ್ರಗೋಪ್ಯದ ಟೀಕು' (ಕಲ್ಕುಠದ ಪ್ರಭುದೇವ 15ನೇ ಶತಮಾನ) 'ಪ್ರಭುದೇವರ ಟೀಕಿನ ವಚನ'ಗಳ (ಕುಮಾರ ಬಂಕನಾಥ) ಪ್ರಸ್ತಾಪ ಬಂದಿದೆ.

ಆ) ಪ್ರಭುದೇವರ ವಚನಗಳು : 1931ರಲ್ಲಿ ಫ.ಗು.ಹಳಕಟ್ಟಿಯವರು ಮೊದಲ ಬಾರಿಗೆ ಪ್ರಭುದೇವನ 693 ವಚನಗಳನ್ನು ಹಸ್ತಪ್ರತಿ ಒಡಲಿನಿಂದ ಬಿಡಿಸಿ 'ಪ್ರಭುದೇವರ ವಚನಗಳು' ಶೀರ್ಷಿಕೆಯಲ್ಲಿ ಶಿವಾನುಭವ ಗ್ರಂಥಮಾಲೆಯಿಂದ ಪ್ರಕಟಿಸುತ್ತಾರೆ. ಅಲ್ಲಮನ ವಚನಗಳ ಸಂಪಾದನೆಗೆ ಮುಂದೆ ಈ ಕೃತಿ ಪ್ರಮುಖ ಆಧಾರವಾಗುತ್ತದೆ.

ಇ) ಜ್ಯೋತಿರ್ಮಯ ಶಾಂಭವಿ ಜ್ಞಾನದೀಕ್ಷಾ ಟೀಕೆ (1933–34): ಚೆನ್ನಮಲ್ಲಿಕಾರ್ಜುನರು ಸಂಪಾದಿಸಿದ ಈ ಕೃತಿಯಲ್ಲಿ ಪ್ರಭುದೇವರ 46 ವಚನಗಳಿವೆ. ಈ ಕೃತಿ ಮೂರು ಭಾಗದಲ್ಲಿದ್ದು, ಮೊದಲ ಭಾಗದಲ್ಲಿ ಪ್ರಭುವಿನ 37 ವಚನಗಳಿವೆ. ಎರಡನೆ ಭಾಗದಲ್ಲಿ 40 ಸಂಸ್ಕೃತ ಶ್ಲೋಕಗಳಿವೆ. ಮೂರನೆ ಭಾಗದಲ್ಲಿ ಪ್ರಭುವಿನ 9 ವಚನಗಳಿವೆ. ಮೊದಲ ಭಾಗದ 37 ವಚನಗಳನ್ನು ಶೂನ್ಯನಿರಾಲಂಬಸ್ಥಲ, ನಿರಾಲಸ್ಥಲಗಳೆಂದೂ, ನಂತರ ಇದೀಗ ನಿರಾಳಸೃಷ್ಟಿ, ಇದು ಈಶಾನ್ಯ ಮೂರ್ತಿಯ ನಿರ್ಮಲಸೃಷ್ಟಿ, ಇದು ಸೃಷ್ಟಿ ವೀರಶೈವ ಸಿದ್ಧಾಂತ ನಿರ್ಣಯ, ಅದ್ವೈತ ವೇದಾಂತ ನಿರ್ಣಯ, ಭಕ್ತ ಲಕ್ಷಣ, ಪರವಸ್ತು ಸ್ವರೂಪ ನಿರ್ಣಯ ಎಂಬ ಉಪಶೀರ್ಷಿಕೆಗಳಲ್ಲಿ ಅಲ್ಲಮನ ವಚನಗಳನ್ನು ಜೋಡಿಸಲಾಗಿದೆ. ಮೂರನೇ ಭಾಗದಲ್ಲಿ 9 ವಚನಗಳನ್ನು ಲಿಂಗಸೂತ್ರದ ವಚನಗಳೆಂದು ಕರೆಯಲಾಗಿದೆ.

ಸದರಿ ಕೃತಿಯನ್ನು ಎರಡು ಕಾಗದದ ಪ್ರತಿ ಮತ್ತು ಒಂದು ಓಲೆಪ್ರತಿ ಬಳಸಿ ಸಂಪಾದಿಸಲಾಗಿದೆ. ಎಲ್ಲ ವಚನಗಳು ಗದ್ಯರೂಪದಲ್ಲಿ ಮುದ್ರಿತಗೊಂಡಿವೆ. ಪಾಠಾಂತರಗಳನ್ನು ಗುರುತಿಸಿರುವುದಿಲ್ಲ. ಈ ಕೃತಿ ಇದಕ್ಕೂ ಮೊದಲು ಆರ್. ತಿಪ್ಪೇಸ್ವಾಮಿಯವರಿಂದ ಸಂಪಾದಿಸಲ್ಪಟ್ಟಿದೆ ಎನ್ನುವ ಉಲ್ಲೇಖವಿದೆ. ಆದರೆ ಖಚಿತ ಮಾಹಿತಿ ನನಗೆ ದೊರೆತಿಲ್ಲ.

ಈ) ಅಲ್ಲಮನ ವಚನಚಂದ್ರಿಕೆ 1960 ಮತ್ತು 1986: ಡಾ. ಎಲ್. ಬಸವರಾಜು ಅವರ ಸಂಪಾದನೆಯ ಅಲ್ಲಮನ ವಚನಚಂದ್ರಿಕೆ ಒಂದು ಮಹತ್ವದ ಕೃತಿ. 694 ವಚನಗಳನ್ನು ಪಿಂಡಸ್ಥಲ (1–4) ಪಿಂಡಜ್ಞಾನಸ್ಥಲ (5–11) ಮಾಯಾವಿಲಾಸ ವಿಡಂಬನಸ್ಥಲ (12–45) ಸಂಸಾರಹೇಯಸ್ಥಲ (46–50) ಗುರುಕರುಣಸ್ಥಲ (51–63) ಭಕ್ತಸ್ಥಲ (64–112) ಮಾಹೇಶ್ವರ ಸ್ಥಲ (113–156) ಪ್ರಸಾದಿಸ್ಥಲ (157–173) ಪ್ರಾಣಲಿಂಗಿ (174–310) ಶರಣಸ್ಥಲ (311–605) ಐಕ್ಯಸ್ಥಲಗಳಲ್ಲಿ ವಿಂಗಡಿಸಿ (606–694) ಕೊಟ್ಟಿದ್ದಾರೆ. ಅಧಿಕ ವಚನಗಳು (695–1294) ಸ್ಫುರವಚನಗಳು (1295–1321) ಹೀಗೆ ಒಟ್ಟು 1294 ವಚನಗಳು, 27 ಸ್ಫುರವಚನಗಳು ಈ ಕೃತಿಯಲ್ಲಿವೆ.

'ವಚನಕಾರರಿದ್ದ ಗುರು ಪರಂಪರೆಗೆ ಸೇರಿದ ಪ್ರಭುವಿನ ವಚನಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಮೊದಲ ಬಾರಿಗೆ ಸಂಗ್ರಹಿಸಿದ ಮಹಲಿಂಗನ 'ಪ್ರಭುದೇವರ ವಚನಗಳ' ಮೂಲರೂಪವನ್ನು ಶೋಧಿಸಿ ಖಚಿತಗೊಳಿಸುವ' ಕೆಲಸವನ್ನು ಡಾ. ಎಲ್. ಬಸವರಾಜ ಅವರು ಮಾಡಿದ್ದಾರೆ. ಅದಕ್ಕಾಗಿ ಓಲೆ ಮತ್ತು ಕಾಗದ ಪ್ರತಿಯಲ್ಲಿದ್ದ 27 ಆಕರಗಳನ್ನು, ಅಧಿಕ ವಚನಗಳ ಪರಿಷ್ಕರಣೆಗೆ 20 ಆಕರಗಳನ್ನು ಬಳಸಿಕೊಂಡಿದ್ದಾರೆ. ಆಧುನಿಕ ಪೂರ್ವಪಠ್ಯಗಳಾದ ಮಹಲಿಂಗರಂಗನ ಏಕೋತ್ತರಶತಸ್ಥಲಾದಿಯಾಗಿ ಗಣಭಾಷಿತ ರತ್ನಮಾಲೆ, ಬಸವ ಬಿರುದಾವಳಿ, ಮಿಶ್ರಸ್ತೋತ್ರದ ವಚನಗಳು, ಲಿಂಗಲೀಲಾವಿಲಾಸ ಚಾರಿತ್ರ್ಯ, ಪ್ರಭುಲಿಂಗಲೀಲೆ, ಸಿಂಗಿರಾಜ ಪುರಾಣ ಶೂನ್ಯಸಂಪಾದನೆಗಳಲ್ಲಿ ಹುದುಗಿದ್ದ ವಚನಗಳನ್ನು ಪರಿಶೋಧಿಸಿ ಪರಿಷ್ಕರಣೆಗೆ ಬಳಸಿಕೊಂಡ ಶ್ರೇಯಸ್ಸು ಎಲ್. ಬಸವರಾಜು ಅವರದು.

ಪಾಠಭೇದಗಳನ್ನು ಅವುಗಳ ಅನುಪೂರ್ವಿ ವ್ಯತ್ಯಾಸದ ವಿವರಗಳನ್ನು ಸಣ್ಣಗಾತ್ರದ ಅಕ್ಷರಗಳಲ್ಲಿ ನೀಡಿದ್ದಾರೆ. ವಚನಗಳನ್ನು ಗದ್ಯರೂಪದಲ್ಲಿ ನೀಡಿದ್ದಾರೆ.

CamScanner

ಅಭ್ಯಾಸಮೂರ್ಣವಾದ ಪ್ರಸ್ತಾವನೆ, ಪಾರಿಭಾಷಿಕ ಪದಕೋಶ, ಅವುಗಳ ವಿವರಣೆ, ವ್ಯಕ್ತಿನಾಮ, ಸ್ಥಳನಾಮ ಸೂಚಿ, ಬೆಡಗಿನ ಪದಕೋಶ, ಅರ್ಥಕೋಶ, ಸಂಕೇತ ಮುಂತಾದ ತಾಂತ್ರಿಕ ಸಂಗತಿಗಳನ್ನು ಅಭ್ಯಾಸಪೂರ್ಣವಾಗಿ ನೀಡಿದ್ದಾರೆ. ಇದೊಂದು ಬಹು ಆಕರಮುಖಿ ಸಂಪಾದನ ವಿಧಾನವಾಗಿದೆ. 1986ರಲ್ಲಿ ಈ ಕೃತಿ ಎರಡನೇ ಆವೃತ್ತಿಯಾಗಿ ಜಗದ್ಗುರು ಮೂರುಸಾವಿರ ಮಠದ ಗ್ರಂಥಮಾಲೆಯ 242ನೆಯ ಆವೃತ್ತಿಯಾಗಿ ಪ್ರಕಟವಾಗುತ್ತದೆ. ಇಲ್ಲಿ ಪಾಠಾಂತರದ ಗೋಜು ಇಲ್ಲ. ಇದರ ಮೂರನೇ ಮುದ್ರಣ 2001ರಲ್ಲಿ ಬಳ್ಳಾರಿಯ ಲೋಹಿಯಾ ಪ್ರಕಾಶನದಿಂದ ನಡೆದಿದೆ. ಹೊಸ ಪರಿಷ್ಕರಣವೇನು ಇಲ್ಲಿ ಕಾಣುವುದಿಲ್ಲ.

ಈ) ಅಲ್ಲಮನ ವಚನಗಳು: ಡಾ. ಎಲ್. ಬಸವರಾಜು ಅವರ ಸಂಪಾದನೆಯಲ್ಲಿ 1969, 1977, 1990 ಹಾಗೂ 1995ರಲ್ಲಿ 304 ಷಟಸ್ಥಲ ವಚನಗಳು 'ಅಲ್ಲಮನ ವಚನಗಳು' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿವೆ. ಇದೊಂದು ಜನಪ್ರಿಯ ಆವೃತ್ತಿಯಾಗಿದೆ. ಪಿಂಡಸ್ಥಲ (1–2) ಪಿಂಡಜ್ಞಾನಸ್ಥಲ (3–6) ಮಾಯಾವಿಲಾಸ ವಿಡಂಬನಸ್ಥಲ (7–27) ಸಂಸಾರಹೇಯಸ್ಥಲ (28–31) ಗುರುಕರುಣಸ್ಥಲ (32–42) ಭಕ್ತಸ್ಥಲ (43–73) ಮಾಹೇಶ್ವರಸ್ಥಲ (74–92) ಪ್ರಸಾದಿಸ್ಥಲ (93–157) ಶರಣಸ್ಥಲ (158–298) ಐಕ್ಯಸ್ಥಲ (299–325), ನಂತರ ಅಲ್ಲಮನ ಅಧಿಕ ವಚನಗಳೆಂದು ಮೂರುಸಾವಿರ ವಚನಗಳಕಟ್ಟು (326–327) ಮಹಲಿಂಗನ ಏಕೋತ್ತರಶತಸ್ಥಲ (328–332) ಗಣಭಾಷಿತ ರತ್ನಮಾಲೆ (333–344) ಲಿಂಗಲೀಲಾವಿಲಾಸ ಚಾರಿತ್ರ್ಯ (345–369) ವಚನಸಾರ (370–414) ಬಸವಸ್ತೋತ್ರದ ವಚನಗಳು (415–416) ಆಚರಣೆಯ ವಚನಗಳು (417–419) ಶೂನ್ಯ ಸಂಪಾದನೆ (420–461) ಕೆ499 (462–492) ಪ್ರಭುಲಿಂಗಲೀಲೆ (493–499) ಗಣಭಾಷಿತ ರತ್ನಮಾಲೆ (500–503) ಲಿಂಗಸೂತ್ರ (504) ಇತ್ಯಾದಿ ಆಕರಗಳ ವಿವರ ನೀಡಿದ್ದಾರೆ. ಲೇಖನ ಚಿಹ್ನೆಗಳನ್ನು ಬಳಸಿ ಪರಿಷ್ಕರಿಸಿದ್ದಾರೆ. ವಚನಗಳ ಅಕಾರಾದಿ ಅರ್ಥಕೋಶ ನೀಡಿದ್ದಾರೆ. ಉತ್ತಮ ಪ್ರಸ್ತಾವನೆ ಬರೆದಿದ್ದಾರೆ.

ಎಲ್. ಬಸವರಾಜ ಅವರು 'ಪ್ರಭುದೇವರ ಷಟಸ್ಥಲದ ವಚನಗಳು' ಎಂಬ ಶೀರ್ಷಿಕೆಯಲ್ಲಿ 2005ರಲ್ಲಿ ಮತ್ತೊಂದು ಕೃತಿ ಪ್ರಕಟಿಸಿದ್ದಾರೆ. 1960ರಲ್ಲಿ ಸಂಪಾದಿಸಿದ ಅಲ್ಲಮನ ವಚನಚಂದ್ರಿಕೆಯನ್ನು ಮೂಲ ಆಕರವಾಗಿರಿಸಿಕೊಂಡಿದ್ದಾರೆ. ವಚನಗಳಿಗೆ ವಾಖ್ಯಾನ ಬರೆದು ವಿದ್ಯಾರ್ಥಿಗಳೂ ಸೇರಿದಂತೆ ಜನಸಾಮಾನ್ಯರಿಗೂ ಸುಲಭವಾಗಿ ತಿಳಿಯುವಂತೆ ಸಂಪಾದಿಸಿದ್ದಾರೆ. ಎಲ್ ಬಸವರಾಜು ಅವರ ಅಪಾರ ಶ್ರದ್ಧೆ ಹಾಗೂ ವಿದ್ವತ್ತು ಈ ಪರಿಷ್ಕರಣೆಗಳಲ್ಲಿ ಮಡುಗಟ್ಟಿದೆ.

ಉ) ಅಲ್ಲಮನ ಹೆಚ್ಚಿನ ವಚನಗಳು (1975): ಎಸ್ ಉಮಾಪತಿಯವರು, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ 1975ರಲ್ಲಿ ಅಲ್ಲಮ ಪ್ರಭುವಿನ ಏಳು ವಚನಗಳನ್ನು ಶೋಧಿಸಿ ಪ್ರಕಟಿಸುತ್ತಾರೆ. ತಮಗೆ ದೊರೆತ ಎರಡು ಆಕರಗಳಿಂದ ಪಾಠಾಂತರಗಳಿಲ್ಲದೆ ಪದ್ಯರೂಪದಲ್ಲಿ ಪ್ರಕಟಿಸಿದ್ದಾರೆ. ವಚನಸಂಖ್ಯೆ ಐದು ಮತ್ತು ಆರನ್ನು ಶಿವಯೋಗ ಮಂದಿರ ಹಾಗೂ ದಾವಣಗೆರೆ ಗ್ರಂಥ ಭಂಡಾರದಲ್ಲಿ ದೊರೆತ ಓಲೆ ಪ್ರತಿಯಿಂದ, ಇತರ ವಚನಗಳನ್ನು ಚಿತ್ರದುರ್ಗ ಮುರುಘಾಮಠದ ತಾಡೋಲೆ ಪ್ರತಿಯಿಂದ ಪ್ರತಿ ಮಾಡಿದ್ದಾರೆ.

ಊ) ಮ್ಯೋಮಮೂರುತಿ ಅಲ್ಲಮಪ್ರಭುದೇವರ ವಚನಗಳು (1976): ಡಾ. ಆರ್. ಸಿ. ಹಿರೇಮಠ, ಡಾ. ಎಂ. ಎಸ್. ಸುಂಕಾಪುರ ಅವರ ಸಂಪಾದಕತ್ವದಲ್ಲಿ 1976ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ರಜತ ಮಹೋತ್ಸವದ ಪ್ರಕಟಣೆಯಾಗಿ ಹೊರಬರುತ್ತದೆ. ಸಂಪಾದನೆಗೆ ಒಟ್ಟು 49 ಮೂಲ ಆಕರಗಳನ್ನು ಬಳಸಿದ್ದಾರೆ (51) ಅವುಗಳನ್ನು 9 ಬಗೆಯಲ್ಲಿ ವಿಂಗಡಿಸಿದ್ದಾರೆ. 1) ಷಟಸ್ಥಲ ಗ್ರಂಥಗಳು–7, 2) ಏಕೋತ್ತರ ಶತಸ್ಥಲ–6, 3) ಸರ್ವ ಪುರಾತನರ ವಚನಗಳು–4, 4) ಸಂಪಾದನೆಯ ವಚನಗಳು (I ಶೂನ್ಯಸಂಪಾದನೆಗಳು–4, II ಇತರ ಸಂಪಾದನೆಗಳು–3), 5) ಆಚರಣೆ ಸಂಬಂಧದ ವಚನಗಳು–3, 6) ಸ್ತೋತ್ರದ ವಚನಗಳು–11, 7) ಕಾವ್ಯಗಳಲ್ಲಿ ದೊರೆಯುವ ವಚನಗಳು–2 (ಚಾಮರಸ/ಸಿಂಗಿರಾಜ), 8) ಸಂಕೀರ್ಣ ವಚನಗಳು–5, 9) ಮುದ್ರಿತ ಗ್ರಂಥಗಳು–6, 10) ಒಂದು ಓಲೆ ಹಾಗೂ ಒಂದು ಕಾಗದ ಪ್ರತಿ.

ಹಸ್ತಪ್ರತಿ ಕೊಟ್ಟವರ ಹೆಸರು, ಕೃತಿಗಳ ಸ್ವರೂಪ, ವಚನಗಳ ಸಂಖ್ಯೆ ಕುರಿತು ಚರ್ಚಿಸಿದ್ದಾರೆ. ಪ್ರತಿಯೊಂದು ಗುಂಪಿನ ಮಾತೃಕೆಗಳಲ್ಲಿನ ಗ್ರಂಥ, ಅವುಗಳ ಬೇರೆ ಬೇರೆ ಆಕರ, ಈ ಗ್ರಂಥಗಳಲ್ಲಿರುವ ವಚನ ಸಂಖ್ಯೆ, ಇವುಗಳಲ್ಲಿ ಪ್ರಭುದೇವರ ಷಟ್ಸ್ಥಲ ವಚನಗಳ ಸಂಗ್ರಹಕ್ಕಾಗಿ ಆಯ್ಕೆ ಮಾಡಿಕೊಂಡ ವಚನಗಳ ಸಂಖ್ಯೆಯನ್ನು ಹಾಗೂ ಅವುಗಳ ಮೂಲ ಆಕರಗಳನ್ನು ಕೊಟ್ಟಿದ್ದಾರೆ.

ವಚನಗಳನ್ನು 3 ಭಾಗದಲ್ಲಿ ಅಳವಡಿಸಿದ್ದಾರೆ. ಕಾಂಡ 1 ರಲ್ಲಿ ಹಿಂದಿನ ಸಂಕಲನಕಾರರು ಜೋಡಿಸಿ ಷಟ್ಸ್ಥಲ ಕಟ್ಟಿಗೆ ಹೊಂದಿಸಿದ 694 ವಚನಗಳನ್ನು, ಕಾಂಡ 2 ರಲ್ಲಿ ವಿವಿಧ ಆಕರಗಳಿಂದ ಸಂಗ್ರಹಿಸಿದ 715 ವಚನಗಳನ್ನು ನೀಡಿರುವರು. ಎರಡೂ ಕಾಂಡದಲ್ಲಿನ 1409 ವಚನಗಳನ್ನು ಷಟ್ಸ್ಥಲ ಹಾಗೂ ಷಡ್ಲಿಂಗಗಳಿಗೆ ಅನುಗುಣವಾಗಿ ಪದ್ಯಾತ್ಮಕವಾಗಿ ಪಾಠಾಂತರ ಸಮೇತ ನೀಡಿದ್ದಾರೆ.

ಕಾಂಡ 3ರಲ್ಲಿ ಅಲ್ಲಮನ ಕೃತಿಗಳಾದ ಸೃಷ್ಟಿಯ ವಚನ, ಪರಮಯೋಗ ಮಂತ್ರಗೋಪ್ಯ, ಅನುಭಾವ ಗೀತೆಗಳನ್ನು ರಾಗ ಹಾಗೂ ಆಕರ ನಿರ್ದೇಶನದೊಂದಿಗೆ ನೀಡಿದ್ದಾರೆ. ಹೆಚ್ಚಿಗೆ ದೊರೆತ ಪ್ರಭುದೇವರ 3 ವಚನಗಳನ್ನೂ ನೀಡಿದ್ದಾರೆ. ಪರಿಶಿಷ್ಟಗಳಲ್ಲಿ ಪಾರಿಭಾಷಿಕ ಪದಸೂಚಿ, ವಿಶಿಷ್ಟ ಪದಸೂಚಿ, ವ್ಯಕ್ತಿನಾಮ ಸೂಚಿ, ಜೀವರಾಶಿಗಳ ಸೂಚಿ, ಸ್ಥಳನಾಮ ಸೂಚಿ, ಕಠಿಣ ಶಬ್ದಕೋಶ, ಬೆಡಗಿನ ಪದಗಳ ಕೋಶ, ಕೆಲವು ಬೆಡಗಿನ ವಚನಗಳ ಭಾವಾನುವಾದ, ಪ್ರಭುದೇವರ ಪರಮಯೋಗ ಮಂತ್ರಗೋಪ್ಯ, ಅನುಭಾವಗೀತೆಗಳಿಗೆ ಬರೆದ ವ್ಯಾಖ್ಯಾನ, ವಚನಗಳ ಮತ್ತು ಪದಗಳ ವರ್ಣಾನುಕ್ರಮ, ಒಪ್ಪೋಲೆಗಳನ್ನು ನೀಡಿದ್ದಾರೆ. ಒಂದು ರೀತಿ ಪ್ರಭುದೇವರ ಕುರಿತ ಸಮಗ್ರ ಸಾಹಿತ್ಯವೇ ಇಲ್ಲಿದೆ.

ಆಕರಗಳ ಕಾಲವನ್ನು ಗಮನದಲ್ಲಿಟ್ಟುಕೊಂಡು ಪಾಠಾಂತರಕ್ಕೆ ಬಳಸಿಕೊಂಡಿದ್ದಾರೆ. ಅರ್ಥದ ದೃಷ್ಟಿಯಿಂದ ಪಾಠಾಂತರ ಸ್ವೀಕರಿಸಿದ್ದಾರೆ. ಲಿಪಿಕಾರನ ಬರವಣಿಗೆ ದೋಷಕ್ಕೆ ಮಹತ್ವ ನೀಡಿಲ್ಲ. ಒಂದೊಂದು ವಚನವನ್ನು ಒಂದೊಂದು ಘಟಕವನ್ನಾಗಿ ಭಾವಿಸಿದ್ದಾರೆ. ಉದಾಹರಣೆಗೆ ಪಿಂಡಸ್ಥಲದ 'ಶಿಲೆವೊಳಗನ ಪಾವಕದಂತೆ' (1) ಕಲ್ಲೊಳಗಿನ ಕಿಚ್ಚು ಉರಿಯ ಬಲ್ಲುದೆ (2) ಜಲದೊಳಗಿರ್ದ ಕಿಚ್ಚು ಜಲವ ಸುಡದೆ. ಪ್ರತ್ಯೇಕ ಪ್ರತ್ಯೇಕ ಆಕರಗಳ ಮೂಲಕ ಪ್ರತ್ಯೇಕವಾಗಿಯೇ ಪ್ರತಿ

CamScanner

ವಚನದ ಪಾಠ ಪರಿಷ್ಕರಣ ಮಾಡುತ್ತಾರೆ. ಬಹು ಆಕರಗಳ ಬಳಕೆ ಪ್ರಧಾನವಾಗಿ ಕಾಣುತ್ತದೆ. 'ಒಟ್ಟಿನಲ್ಲಿ ವಚನಕಾರನಿಗೂ ರಸಿಕ ಓದುಗರಿಗೂ ಅಪಚಾರವಾಗದಂತೆ ಈ ಕೃತಿ ಹೊರತರಲು ಪ್ರಯತ್ನಿಸಿದ್ದೇವೆ' ಎನ್ನುವುದು ಸಂಪಾದಕರ ಅಭಿಮತ.

ಖ) ಅಲ್ಲಮ ಪ್ರಭುವಿನ ಟೀಕಿನ ವಚನಗಳು (1986): ಇಮ್ಮಡಿ ಶಿವಬಸವಸ್ವಾಮಿಗಳು ಸಂಪಾದಿಸಿ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆಯಿಂದ ಅಲ್ಲಮ ಪ್ರಭುವಿನ ಟೀಕಿನ ವಚನಗಳು ಕೃತಿ ಪ್ರಕಟಿಸಿದ್ದಾರೆ. ಇದರ ಮೂಲ ಕರ್ತೃ ಮಹಾಲಿಂಗ ದೇವರು. ಮೂರು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿದ್ದಾರೆ. ಡಾ. ಫ. ಗು. ಹಳಕಟ್ಟಿ (1931) ಡಾ. ಎಲ್. ಬಸವರಾಜು (1960) ಅವರ ಪರಿಷ್ಕರಣಗಳನ್ನು ಗಮನಿಸಿ ಪಾಠಶುದ್ಧೀಕರಣ ಮಾಡಿದ್ದಾರೆ. 694 ವಚನಗಳು ಇಲ್ಲಿ ಸಂಕಲಿತಗೊಂಡಿವೆ. 695ರಿಂದ ಕಲ್ಲುಮಠ ಪ್ರಭುದೇವರ ಟೀಕಿನ ವಚನಗಳನ್ನು, ಸಿಂಗಳದ ಸಿದ್ಧಬಸವರಾಜ ದೇವರು, ಚೆನ್ನವೀರಾಚಾರ್ಯರ ಟೀಕಿನ ವಚನಗಳನ್ನು ದಾಖಲಿಸಿದ್ದಾರೆ. ಶಕಟರೇಫೆಯನ್ನು ಕೈಬಿಟ್ಟಿದ್ದಾರೆ. ತತ್ತ್ವಶಾಸ್ತ್ರ, ವೇದ, ಆಗಮ, ಉಪನಿಷತ್ತು, ಯೋಗಶಾಸ್ತ್ರ, ಶಿಲ್ಪಶಾಸ್ತ್ರ ಮುಂತಾದ ಬಹುಶಾಸ್ತ್ರಗಳ ನೆಲೆಯಲ್ಲಿ ವಚನಗಳನ್ನು ವ್ಯಾಖ್ಯಾನಿಸಿದ್ದಾರೆ.

ಪೀಠಿಕೆ (ಗದ್ಯ) ಪಿಂಡಸ್ಥಲ (1–4) ಪಿಂಡಜ್ಞಾನಸ್ಥಲ (5–11) ಮಾಯಾವಿಲಾಸ ವಿಡಂಬನಸ್ಥಲ (12–45) ಸಂಸಾರಹೇಯಸ್ಥಲ (46–51) ಗುರುಕರುಣಸ್ಥಲ (51–63) ಭಕ್ತಸ್ಥಲ (64–112) ಮಾಹೇಶ್ವರಸ್ಥಲ (113–156) ಪ್ರಸಾದಸ್ಥಲ (157–173) ಪ್ರಾಣಲಿಂಗಸ್ಥಲ (174–310) ಶರಣಸ್ಥಲ (311–605) ಐಕ್ಯಸ್ಥಲ (606–797) ಹೆಚ್ಚಿನ ವಚನಗಳು ಸೇರಿ ಒಟ್ಟು 797 ವಚನಗಳು ಇಲ್ಲಿವೆ. ಪ್ರತಿ ವಚನಗಳಿಗೆ ಟೀಕು ಬರೆಯಲಾಗಿದೆ. ಪಾಠಾಂತರಗಳನ್ನು ಚೌಕ ಕಂಸಿನಲ್ಲಿ (ಸ್ಥಾ[ಪ]ನವ ಮಾಡಿ) ನೀಡಿದ್ದಾರೆ. ಉಳಿದ ಪಾಠಗಳನ್ನು ಅಡಿಯಲ್ಲಿ ನೀಡಿ ವಚನಗಳನ್ನು ವರ್ಣಾನುಕ್ರಮದಲ್ಲಿ ಕೊಟ್ಟಿದ್ದಾರೆ. ಒಪ್ಪೋಲೆ ಇದೆ.

ಗ) ಪ್ರಭುದೇವರ ಷಟ್ಸ್ಥಲ ಜಂಗಮಸ್ಥಲ ನಿರ್ದೇಶನ (1989): ಸ್ಥಲಸಹಿತವಾದ ಪ್ರಾಚೀನ ವಚನ ಸಂಕಲನ. ಸಂಕಲನಕಾರನ ಹೆಸರು ಅಜ್ಞಾತವಾಗಿದೆ. ಡಾ. ವೀರಣ್ಣ ರಾಜೂರು ಸಂಪಾದಕತ್ವದಲ್ಲಿ ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯಮಠ ಸಂಸ್ಥಾನ ಗದಗ ಇವರು 1989ರಲ್ಲಿ ಪ್ರಕಟಿಸಿದ್ದಾರೆ.

ಸಂಪಾದಕರೇ ಹೇಳುವಂತೆ ಜಂಗಮಮೂರ್ತಿಯಾದ ಪ್ರಭುದೇವರು ಸಾಧಿಸಿದ ಷಟ್ಸ್ಥಲ ಸಿದ್ಧಿಯನ್ನು ಅವರದೇ ವಚನಗಳ ಮೂಲಕ ಎತ್ತಿ ತೋರಿಸುವುದರಿಂದ ಈ ಕೃತಿಗೆ 'ಪ್ರಭುದೇವರ ಷಟಸ್ಥಲ ಜಂಗಮಸ್ಥಲ ನಿರ್ದೇಶನ' ಎನ್ನುವ ಹೆಸರು ಬಂದಿದೆ. ಇದರಲ್ಲಿ ಭಕ್ತಾದಿ ಐಕ್ಯಾಂತ ಆರು ಸ್ಥಲಗಳಿದ್ದು ಒಟ್ಟು 180 ವಚನಗಳು ಪ್ರತಿಸ್ಥಲಕ್ಕೆ 28ರಂತೆ ಹಂಚಿಕೊಂಡಿವೆ. ಭಕ್ತಸ್ಥಲ ಆದಿಯಲ್ಲಿ ಐಕ್ಯಸ್ಥಲ ಅಂತ್ಯದಲ್ಲಿ 5 ವಚನಗಳನ್ನು ಕೃತಿಯ ಪೀಠಿಕೆ ಹಾಗೂ ಸಮಾರೋಪದ ರೀತಿಯಲ್ಲಿ ಜೋಡಿಸಲಾಗಿದೆ. ಒಂದು ತಾಳೆಓಲೆ ಮತ್ತು ಪ್ರಕಟಿತ ವ್ಯೋಮಮೂರುತಿ ಅಲ್ಲಮ ಪ್ರಭುದೇವರ ವಚನಗಳು ಕೃತಿಯನ್ನು ಆಧರಿಸಿ ಸಂಪಾದಿಸಲಾಗಿದೆ.

180 ವಚನಗಳಲ್ಲಿ 164 ವಚನಗಳು ಈಗಾಗಲೇ ಪ್ರಕಟಗೊಂಡಿದ್ದು 16 ವಚನಗಳು ಈ ಕೃತಿಯ ಮೂಲಕ ಮೊದಲ ಬಾರಿಗೆ ಬೆಳಕು ಕಂಡಿವೆ. ಇವು ಮೂಲ ವಚನಕಾರನವೋ ಅಥವಾ ಸಂಕಲನಕಾರನು ಸೇರಿಸಿರಬಹುದೇ ಎನ್ನುವ ಸಂಶಯ ಸಂಪಾದಕರಾದ ವೀರಣ್ಣ ರಾಜೂರು ಅವರದ್ದಾಗಿದೆ. ಈ ವಚನಗಳು ಪದ್ಯಾತ್ಮಕವಾಗಿವೆ. ಪಾಠಾಂತರ ನೀಡಿದ್ದಾರೆ. ವಚನಗಳ ಅಕಾರಾದಿ ಕೊಟ್ಟಿದ್ದಾರೆ. ಇದೇ 16 ವಚನಗಳನ್ನು 1990ರಲ್ಲಿ ವೀರಣ್ಣ ರಾಜೂರು ಅವರು ಪರಂಜ್ಯೋತಿ ಪತ್ರಿಕೆ (ಸಂಪುಟ 25 ಸಂಚಿಕೆ 1 ಪು. 20–28 ಆಗಸ್ಟ್ 1990)ಯಲ್ಲಿ ಪ್ರಕಟಿಸಿದ್ದರು.

ಎ) ಅಲ್ಲಮ ಪ್ರಭುದೇವರ ವಚನಸಂಪುಟ: ಡಾ. ಬಿ. ವಿ. ಮಲ್ಲಾಪುರ: ಅಲ್ಲಮನ 1645 ವಚನಗಳನ್ನು ಸಂಪಾದಿಸಿದ್ದಾರೆ. ಇದರಲ್ಲಿ ಎರಡು ಕಾಂಡಗಳಿವೆ. ಕಾಂಡ–1ರಲ್ಲಿ ಷಟಸ್ಥಲ ಕಟ್ಟಿಗೆ ಹೊಂದಿಸಿದ ಪ್ರಭುದೇವರ 694 ವಚನಗಳು, ಕಾಂಡ ಎರಡರಲ್ಲಿ ಷಟಸ್ಥಲ ಕಟ್ಟು ಹೊರತುಪಡಿಸಿ ಬೇರೆ ಮೂಲಗಳಿಂದ ದೊರೆತ ಇತರೆ ಹೆಚ್ಚಿನ ವಚನಗಳಿವೆ. ಇದರಲ್ಲಿ 951 ವಚನಗಳಿವೆ. ಇಲ್ಲಿಯವರೆಗೆ ಲಭ್ಯವಾದ ಪ್ರಭುದೇವರ 1645 ವಚನಗಳು ಸಮಗ್ರವಾಗಿ ಬಂದಿವೆ. ಅಕಾರಾದಿ, ಕಠಿಣಪದಕೋಶ, ಆಕರಗ್ರಂಥ, ಒಪ್ಪೋಲೆ ನೀಡಿದ್ದಾರೆ. ಪ್ರಸ್ತಾವನೆಯಲ್ಲಿ ಅಲ್ಲಮನ ಜೀವನ, ವ್ಯಕ್ತಿತ್ವ, ಬಳಸಿದ ಆಕರಗಳ ಕುರಿತು ವಿವರಿಸಿದ್ದಾರೆ.

ಕ್ರಿ.ಶ. 1425ರಲ್ಲಿ ಅಲ್ಲಮನ ವಚನಗಳನ್ನು ಷಟ್ಸ್ಥಲಾನುಸಾರಿಯಾಗಿ ಸಂಯೋಜಿಸಿ ವ್ಯಾಖ್ಯಾನ ಬರೆದು ಅವು ಸುಲಭ ಗಮ್ಯವಾಗುವಂತೆ ಮಾಡಿದ ಮೊದಲ ಕೀರ್ತಿ ಮಹಲಿಂಗನಿಗೆ ಸಲ್ಲುತ್ತದೆ.[9] ನಂತರ ಅಂದಿನಿಂದ ಇಂದಿನವರೆಗೂ ಭಿನ್ನ ಭಿನ್ನ ಪಾತಳಿಯಲ್ಲಿ ಅಲ್ಲಮನ ವಚನಗಳನ್ನು ಕನ್ನಡ ಪ್ರಜ್ಞೆ ಅನುಸಂಧಾನ ಮಾಡಿದ್ದನ್ನು ಈ ಲೇಖನದಲ್ಲಿ ಇದುವರೆಗೂ ಚರ್ಚಿಸಿದ್ದೇನೆ. ಆಳಿದು ಹೋಗಬಹುದಾದ ಅಲ್ಲಮ ಹಾಗೂ ಆತನ ವಚನಗಳನ್ನು ಹಲವು ಮೂಲಗಳಿಂದ ಸಂಗ್ರಹಿಸಿ, ಸಂಶೋಧಿಸಿ, ಸಂಪಾದಿಸಿ, ಪರಿಷ್ಕರಿಸಿ ಅಲ್ಲಮನನ್ನು ನಮಗೆ ದಕ್ಕಿಸಿರುವ ನಮ್ಮ ಎಲ್ಲ ಹಿರಿಯರ ಶ್ರಮ ಹಾಗೂ ವಿದ್ವತ್ತು ಸ್ಮರಣೀಯವಾದದ್ದು ಹಾಗೂ ಚಾರಿತ್ರಿಕವಾದದ್ದು. ಇವೆಲ್ಲವನ್ನು ನಮ್ಮ ಕಾಲದ ಹೊಸರೀತಿಯ ಅನುಸಂಧಾನಗಳಿಗೆ ಅಳವಡಿಸುವ ಅಗತ್ಯವಿದೆ.

ಬಹು ಆಕರ, ಬಹು ಶಾಸ್ತ್ರ, ಬಹು ಪ್ರತಿ, ಬಹು ನಾಯಕ ಹಾಗೂ ಬಹು ಸಾಮುದಾಯಿಕ, ಬಹು ದೃಷ್ಟಿಕೋನಗಳು ಈ ಎಲ್ಲ ಸಂಪಾದನೆ ಪರಿಷ್ಕರಣಗಳ ಜೀವಧಾತು ಆಗಿದ್ದರೂ ಇವುಗಳ ಮಿತಿ ಎಂದರೆ ಒಂದು ಕೇಂದ್ರೀಕೃತ ಧಾರ್ಮಿಕ ವ್ಯವಸ್ಥೆಯೊಳಗೆ ಅಲ್ಲಮ ತತ್ತ್ವಗಳನ್ನು ಪ್ರತಿಪಾದಿಸಿರುವುದು.

ಅಲ್ಲಮನಾದಿಯಾಗಿ ಎಲ್ಲ ವಚನಕಾರರೂ ಅಧಿಕಾರ, ಜಾತಿ ಹಾಗೂ ನಿರ್ದಿಷ್ಟ ಧರ್ಮಕೇಂದ್ರಿತ ಸಾಂಸ್ಥಿಕ ರಚನೆಗಳನ್ನು, ಅಕ್ಷರದ ಕಾರಣವಾಗಿ ಹುಟ್ಟುವ ಪಾಂಡಿತ್ಯದ ಶುಷ್ಕ ನೆಲೆಗಳನ್ನು ಧಿಕ್ಕರಿಸಿದವರು. ಸಂಪಾದಕರು ಪ್ರತಿಪಾದಿಸುವ ವೀರಶೈವ ಸಿದ್ಧಾಂತಗಳನ್ನಾಗಲೀ ನೂರೊಂದು ಸ್ಥಲಗಳನ್ನಾಗಲೀ ಮೂಲ ಮಾತೃಕೆ ಅಥವಾ ಪ್ರಣಾಳಿಕೆಯನ್ನಾಗಿಟ್ಟುಕೊಂಡವರಲ್ಲ. ರಾಜಪ್ರಭುತ್ವಕ್ಕಿಂತ ಭಕ್ತಿ ಹಾಗೂ ದೈವ ದೊಡ್ಡದು ಎನ್ನುವ ಪರ್ಯಾಯವನ್ನು ಪ್ರತಿಪಾದಿಸಿದವರು. ವಚನಕಾರರು ಹಾಗೂ ನಂತರದ ಹರಿಹರನಲ್ಲಿ ಈ ಆಶಯಗಳನ್ನು ಖಚಿತವಾಗಿ ಕಾಣಬಹುದು.

CamScanner

14–16ನೇ ಶತಮಾನಕ್ಕೆ ಬರುವ ಹೊತ್ತಿಗೆ ದೈವ ಮತ್ತು ಭಕ್ತಿ ಧರ್ಮ ಮತ್ತು ಮಠ ಪ್ರಭುತ್ವದ ಸಾಧನಗಳಾಗಿ ಪರಿವರ್ತನೆಯಾಗುತ್ತವೆ. ಭಕ್ತಿ ನಿರ್ದಿಷ್ಟ ಸಮುದಾಯದ ಧರ್ಮವಾಗುವ ರೂಪಾಂತರವನ್ನು ಕಾಣುತ್ತೇವೆ. ಮಹಲಿಂಗ, ಚಾಮರಸ, ಜಕ್ಕಣ, ಕಲ್ಲುಮಠದ ಪ್ರಭುದೇವ, ಆಧುನಿಕ ಕಾಲದ ಚೆನ್ನಮಲ್ಲಿಕಾರ್ಜುನರು, ಎಲ್. ಬಸವರಾಜ, ಆರ್. ಸಿ. ಹಿರೇಮಠ ಇವರೆಲ್ಲರ ಪರಿಷ್ಕರಣೆಗಳು ಆಚಾರ ಸಂಹಿತೆಗೆ ನಿಯಮಗಳಿಗೆ ಒತ್ತು ನೀಡುತ್ತವೆ. ಪೀಠಿಕೆ, ಪಿಂಡಸ್ಥಲದಿಂದ ಹಿಡಿದು ಐಕ್ಯಸ್ಥಲದವರೆಗೆ ಪ್ರಭುವಿನ ವಚನಗಳನ್ನು ನಿರ್ದಿಷ್ಟ ತಾತ್ವಿಕತೆಗೆ ಎರಕ ಹೊಯ್ದ ಬಗೆಗಳಲ್ಲಿ ಇದನ್ನು ಖಚಿತವಾಗಿ ಗುರುತಿಸಬಹುದು.

ಪ್ರಭುತ್ವದೊಂದಿಗೆ ಸೆಣಸುವ ನೆಲೆಗಳಿಂದ ಹುಟ್ಟಿದ ವಚನಗಳು, ವಚನೋತ್ತರ ಕಾಲದ ಅನುಸಂಧಾನಗಳಲ್ಲಿ ಪ್ರಭುತ್ವವನ್ನು ಆಶ್ರಯಿಸುವ ಕಡೆಗೆ ಮಾರ್ಗ ಬದಲಿಸುವುದನ್ನು ಈ ಸಂಪಾದನೆಗಳಲ್ಲಿ ಗಮನಿಸಬಹುದು. ಪ್ರೌಢದೇವರಾಯನ ಕಾಲ, ನೂರೊಂದು ವಿರಕ್ತರು, ಸಂಪಾದನೆ ಮಠಗಳು, ಓಲೆಮಠಗಳ ಸ್ಥಾಪನೆ, "ವೀರಶೈವ ಆಚಾರ ಸಂಹಿತೆಗಳ ರಚನೆ, ಲಿಂಗದೀಕ್ಷೆ, ವಚನಗಳ ಮರೀಕರಣ, ಸ್ಥಳೀಕರಣ, ಟೀಕು, ಸ್ಥಲಕಟ್ಟು, ಧರ್ಮಬದ್ಧ ವ್ಯಾಖ್ಯಾನ ಹಾಗೂ ಸಂಕಲನಾನುಸಂಧಾನಗಳ ಮೂಲಕ ಅಲ್ಲಮನ ವಚನಗಳನ್ನು ಪವಿತ್ರೀಕರಣ ಹಾಗೂ ಪುರಾಣೀಕರಣಗೊಳಿಸುವ ಕೆಲಸ ನಡೆಯುತ್ತದೆ."[10] ವಚನಕಾರರ ಜಾತ್ಯಾತೀತ ವಿಚಾರಗಳು 15–16ನೇ ಶತಮಾನದ ಹೊತ್ತಿಗೆ ಧರ್ಮ ವಿಸ್ತರಣೆಯ ಆಚಾರಗಳಾಗಿ ಬಲಗೊಳ್ಳುತ್ತವೆ.

ಅಲ್ಲಮನ ವಚನಗಳು ರಗಳೆ, ಷಟ್ಪದಿ, ಸಾಂಗತ್ಯ, ಟೀಕು, ನಾಟಕ ಹೀಗೆ ಅನೇಕ ರೂಪಾಂತರಗಳನ್ನು ಪಡೆಯುತ್ತವೆ. ಬಹುಪಠ್ಯೀಕರಣದ ಈ ನೆಲೆ ಕನ್ನಡ ಪ್ರಜ್ಞೆಯ ಅಗಾಧತೆಯನ್ನು ತೋರಿಸಿದರೂ ಈ ಪಠ್ಯದೊಳಗಿನ ತತ್ವಗಳು ಏಕರೂಪೀಕರಣಕ್ಕೆ ಒಗ್ಗಿವೆ. ಒಬ್ಬನೆ ಕವಿಯಲ್ಲಿ ಒಬ್ಬೊಬ್ಬ ಸಾಧಕನಲ್ಲಿ ಇರಬಹುದಾದ ಭಿನ್ನತೆಗಳನ್ನು ವಚನೋತ್ತರ ಕಾಲದಲ್ಲಿ ಉಪೇಕ್ಷಿಸಲಾಯಿತು. 'ಪದವನರ್ಪಿಸಬಹುದಲ್ಲದೆ ಪದಾರ್ಥವನರ್ಪಿಸಲಾಗದು' ಎನ್ನುವ ಅಲ್ಲಮ ಪ್ರಜ್ಞೆಯ ಭಿನ್ನ ಧ್ವನಿ ಹಾಗೂ ಭಿನ್ನ ಅರ್ಥಸಾಧ್ಯತೆಗಳನ್ನು ಧರ್ಮಬದ್ಧ ಏಕರೂಪಿಕೃತ ಅರ್ಥಕ್ಕೆ ಸೀಮಿತಗೊಳಿಸಲಾಯಿತು.

'ರಾಗವಾವುದು ರಚನೆಯಾವುದು', 'ಅಸಂಖ್ಯಾತ ಮಹಾಗಣಂಗಳು ಪರಮ ಕಲ್ಯಾಣ ಪುರದೊಳು ವಿರಚಿಸಿದ ಹರಭಕ್ತಿ ಮಾರ್ಗಮಮೂ ಸ್ಥಲವಿಟ್ಟು ನುಡಿದ ವಚನಗಳು... ನೂತನ ಗಣಂಗಳರಿಯಲೊರೆದು..."[11] ಇಂಥಲ್ಲಿ ನಿಯಮಬದ್ಧ ಕಾವ್ಯದ ಅಸ್ಥಿರತೆ ಹಾಗೂ ಹಾಡಿಗಿರುವ ನಿಯಮರಾಹಿತ್ಯವನ್ನು ಗುರುತಿಸಬಹುದು. 'ಒಲಿದಂತೆ ಹಾಡುವ' ಕ್ರಿಯೆಯಲ್ಲಿಯೇ ಸಾಂಸ್ಥಿಕ ಬಂಧನಗಳನ್ನು, ಅಧಿಕಾರದ ಗುರುತುಗಳನ್ನು ವಿಸರ್ಜಿಸಿ ಸ್ವತಂತ್ರವಾಗುವ ಮನೋಧರ್ಮವನ್ನು ಕಾಣುತ್ತೇವೆ.

ಸಾಂಸ್ಥಿಕ ಬಂಧನದಿಂದ ಹೊರಬರಲು ಹಂಬಲಿಸಿದ ಅಲ್ಲಮ ಅಥವಾ ಬಸವಾದಿ ಶರಣರ ವಚನಗಳನ್ನು ಸಿದ್ಧಾಂತೀಕರಿಸುವ, ಸಿದ್ಧಾಂತಗಳಿಗೆ ಹೊಂದದ ವಚನಗಳನ್ನು ಅಧಿಕ ವಚನಗಳು, ಸಂಕೀರ್ಣ ವಚನಗಳು, ಹೆಚ್ಚಿನ ವಚನಗಳೆಂದು ಎಲ್ಲ ಸಂಪಾದಕರು ಪ್ರತ್ಯೇಕವಾಗಿ ಕೊಟ್ಟಿದ್ದಾರೆ. ಸ್ವರ ವಚನಗಳೆಂದು ಅವುಗಳಿಗೆ

ರಾಗ ತಾಳ ನಿರ್ದೇಶನಗಳಿದ್ದರು ಅದನ್ನು ಗಂಭೀರವಾಗಿ ಗ್ರಹಿಸದೆ ಶುದ್ಧ ಅಶುದ್ಧ ಎನ್ನುವ ನೆಲೆಗೆ ಸೀಮಿತ ಮಾಡಿದ್ದಾರೆ.

ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರಗೋಷ್ಠಿ, ತರ್ಕವೆಂಬುದು ತಗರ ಹೋರಟೆ' ಅಲ್ಲಮನ ಇಂತಹ ಮಾತುಗಳು ಎಲ್ಲ ಸಂಕಲನಕಾರರು ಹಾಗೂ ಸಂಪಾದಕರಲ್ಲಿ ಅಪ್ರಸ್ತುತವಾಗಿವೆ, ಅನುಪಯುಕ್ತವಾಗಿವೆ. ಸುದೀರ್ಘ ಕಾಲದ ಕನ್ನಡ ಪ್ರಜ್ಞೆ ಅಲ್ಲಮನೊಂದಿಗೆ ನಡೆಸಿದ ಈ ಅನುಸಂಧಾನವನ್ನು ಭಿನ್ನ ಬಗೆಯಲ್ಲಿ ಇನ್ನಷ್ಟು ಸಂಶೋಧಿಸುವ ಅಗತ್ಯವಿದೆ.

(ದಿನಾಂಕ. 18, 19 ಅಕ್ಟೋಬರ್ 2022 ರಂದು ಬಾಗಲಕೋಟೆಯಲ್ಲಿ ನಡೆದ ಅಖಿಲ ಕರ್ನಾಟಕ 19ನೇ ಹಸ್ತಪ್ರತಿ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧ)

ಕೊನೆ ಟಿಪ್ಪಣಿ

1. ಹೆಚ್ಚಿನ ಮಾಹಿತಿಗಾಗಿ **ಡಾ. ಎಲ್ ಬಸವರಾಜು,** ಅಲ್ಲಮನ ವಚನಚಂದ್ರಿಕೆ, ಪೀಠಿಕೆ 29; 2001 (ಪ್ರ.ಮು) ನೋಡಿ.
2. **ಹರಿಹರನ ಪ್ರಭುದೇವರ ರಗಳೆ,** ಚಾಮರಸನ ಪ್ರಭುಲಿಂಗಲೀಲೆ, ಎಳಂದೂರು ಹರೀಶ್ವರನ ಪ್ರಭುದೇವರ ಪುರಾಣ, ಮಗ್ಗೆಯ ಮಾಯಿದೇವನ ಮಹದೈಪುರೀಶ್ವರ ಶತಕ, ಮುರಿಗೆ ಶಾಂತವೀರನ ಪ್ರಭುಲಿಂಗಕಂದ, ಮರಿರಾಜ ಭಟ್ಟದೇವನ ಪ್ರಭುವಚನ ತಾರಾವಳಿ, ರುದ್ರಕವಿಯ ಪ್ರಭುವಚನ ತಾರಾವಳಿ, ಪರ್ವತೇಶ ಕವಿಯ ಪ್ರಭುದೇವರ ಸಾಂಗತ್ಯ, ಕೊಡೇಕಲ್ಲ ರಾಜಪ್ಪಯ್ಯನ ಮಾಯಾಸಾಂಗತ್ಯ ಮತ್ತು ಪ್ರಭುಚರಿತೆ.
3. **ಸಿಂಗಿರಾಜನ ಅಮಲಬಸವಚಾರಿತ್ರ್ಯ;** ರಾಘವಾಂಕನ ಸಿದ್ಧರಾಮಚಾರಿತ್ರ್ಯ, ಗುಬ್ಬಿ ಮಲ್ಲಣಾರ್ಯನ ವೀರಶೈವಾಮೃತ ಪುರಾಣ, ಪಾಲ್ಕುರಿಕೆ ಸೋಮನಾಥನ ಬಸವಪುರಾಣ, ಭೀಮಕವಿಯ ಬಸವಪುರಾಣ, ಸಿದ್ಧನಂಜೇಶನ ಗುರುರಾಜ ಚಾರಿತ್ರ, ಮಹದೇವ ಯೋಗಿಯ ವೀರಶೈವ ಚಿಂತಾಮಣಿ, ಉತ್ತರ ದೇಶದ ಬಸವಲಿಂಗನ ಬಸವೇಶ್ವರ ಪುರಾಣ, ಕತಾಸಾಗರ, ಚೆನ್ನಪ್ಪಕವಿಯ ಶರಣಲೀಲಾಮೃತ.
4. **ಮೊಗ್ಗೆಯ ಮಾಯಿದೇವನ ಪ್ರಭುವಚನ** (ಸಂಸ್ಕೃತ), ರೇವಣಸಿದ್ಧ ಕವಿಯ ಪ್ರಭುದೇವ ವಾಕ್ಯಮು (ತೆಲುಗು) ಪಿ.ಸಿ. ಬ್ರೌನ್ ಅವರ ಇಂಗ್ಲೀಷ್ ಅನುವಾದ (1840) ಪ್ರಭುಲಿಂಗಲೀಲೆ ಮತ್ತು ಬಸವಪುರಾಣ. ಚಾಮರಸನ ಪ್ರಭುಲಿಂಗಲೀಲೆಯು ಕುಮಾರಶಾಸ್ತ್ರೀಯಿಂದ ಸಂಸ್ಕೃತಕ್ಕೆ, ತುರೈಯಾರ್ ಶಿವಪ್ರಕಾಶ ಸ್ವಾಮಿಯಿಂದ ತಮಿಳಿಗೆ, ಪಿಡುಪರ್ತಿ ಬಸವ ಮತ್ತು ಸೋಮನಾರಾಧ್ಯರಿಂದ ತೆಲುಗಿಗೆ, ಬ್ರಹ್ಮದಾಸನಿಂದ ವಿಶ್ವಂಭರಾ ಹೆಸರಿನಿಂದ ಮರಾಠಿಗೆ ಅನುವಾದಗೊಂಡಿದೆ.
5. ಹೆಚ್ಚಿನ ಮಾಹಿತಿಗಾಗಿ **ಡಾ. ಆರ್. ಸಿ. ಹಿರೇಮಠ ಹಾಗೂ ಡಾ ಎಂ. ಎಸ್. ಸುಂಕಾಪುರ** ಅವರ ವ್ಯೋಮಮೂರುತಿ ಅಲ್ಲಮ ಪ್ರಭುದೇವರ ವಚನಗಳು, ಪುಟ, ಮುನ್ನುಡಿ ಖ ; 1936 ನೋಡಿ.
6. **ಡಾ. ಎಲ್ ಬಸವರಾಜು,** ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆ, ಪೀಠಿಕೆ, ಪುಟ, 40; 1969

CamScanner

7. **ಬೋಳಬಸವದೇವರ ಬಸವಸ್ತೋತ್ರದ ವಚನಗಳು,** ಸಂಪಾದನೆಯ ಬನ್ನಂಜೆದೇವರ ಮಿಶ್ರಸ್ತೋತ್ರದ ವಚನಗಳು, ಎಳಮಲೆಯ ಗುರುಶಾಂತದೇವರ ಶರಣಸ್ತೋತ್ರದ ವಚನಗಳು, ಸಂಪಾದನೆಯ ಸಿದ್ಧವೀರಣ್ಣ ದೇವರ ಲಿಂಗಸ್ತೋತ್ರದ ವಚನಗಳು, ಇತ್ಯಾದಿ.
8. **ಗುಬ್ಬಿ ಮಲ್ಲಣಾರ್ಯನ ಗಣಭಾಷಿತ ರತ್ನಮಾಲೆ,** ಕಂಬಾಳ ಶಾಂತಮಲ್ಲೇಶನ ಗಣವಚನ ರತ್ನಾವಳಿ, ಸಿಂಗಳ ಸಿದ್ದಬಸವನ ಸಕಲ ಪುರಾತನರ ಬೆಡಗಿನ ವಚನಗಳು, ಕಂತೂರು ಮಹಂತದೇವನ ಎಲ್ಲ ಪುರಾತನರ ವಚನ, ಮೂರುಸಾವಿರ ವಚನಗಳ ಕಟ್ಟು, ವಚನಸಾರ ಇತ್ಯಾದಿ.
9. **ಡಾ. ಎಲ್. ಬಸವರಾಜು, ಅಲ್ಲಮನ ವಚನ ಚಂದ್ರಿಕೆ,** ಪೀಠಿಕೆ, ಪುಟ 19; 1960
10. **ಡಾ. ರಾಮಲಿಂಗಪ್ಪ ಟಿ ಬೇಗೂರು,** ಆಧುನಿಕ ಪೂರ್ವ : ಅಲ್ಲಮಪ್ರಭು ಕುರಿತ ಅನುಸಂಧಾನಗಳು, ಪುಟ, 121; 2010 (ಅಲ್ಲಮಪ್ರಭು ವಚನಗಳು ಸಾಂಸ್ಕೃತಿಕ ಮುಖಾಮುಖಿ : ಸಂ ಅಮರೇಶ ನುಗಡೋಣಿ)
11. **ಗುಬ್ಬಿಯ ಮಲ್ಲಣಾರ್ಯ,** ಗಣಭಾಷಿತ ರತ್ನಮಾಲೆ ಪುಟ, 70; 1400

ಪರಾಮರ್ಶನ ಗ್ರಂಥಗಳು

1. **ಎಲ್. ಬಸವರಾಜು (ಸಂ) ಅಲ್ಲಮನ ವಚನಚಂದ್ರಿಕೆ,** 1960 (ಮೊ.ಮು) ನಳಿನಿಶಂಕರ ಪ್ರಕಾಶನ, ಮೈಸೂರು, 1986 (ದ್ವಿ.ಮು) ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳಿ, ಮೂರು ಸಾವಿರಮಠ ಹುಬ್ಬಳ್ಳಿ, 2001 (ತೃ.ಮು) ಲೋಹಿಯಾ ಪ್ರಕಾಶನ, ಬಳ್ಳಾರಿ
2. **ಎಲ್. ಬಸವರಾಜು (ಸಂ) ಅಲ್ಲಮನ ವಚನಗಳು,** ಗೀತಾ ಬುಕ್‌ಹೌಸ್, ಮೈಸೂರು, 1995 (ನಾ.ಮು)
3. **ಆರ್. ಸಿ. ಹಿರೇಮಠ, ಎಂ ಎಸ್ ಸುಂಕಾಪುರ (ಸಂ)** ವ್ಯೋಮಮೂರುತಿ ಅಲ್ಲಮಪ್ರಭುದೇವರ ವಚನಗಳು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1976
4. **ವೀರಣ್ಣ ರಾಜೂರು** (ಸಂ) ಪ್ರಭುದೇವರ ಷಟ್ಸ್ಥಲ ಜಂಗಮಸ್ಥಲ ನಿರ್ದೇಶನ, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಮಠ, ಗದಗ, 1989
5. **ಕಾವ್ಯಪ್ರೇಮಿ** (ಸಂ) ಅಲ್ಲಮನ ವಚನ ಸುಧೆ, ಸಮಾಜ ಪುಸ್ತಕಾಲಯ, ಧಾರವಾಡ, 1989
6. **ಶ್ರೀಮನ್ನಿಪ್ರ ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು,** ಜಂಗಮ ಪುಂಗವ ಅಲ್ಲಮ ಪ್ರಭುದೇವರ ನೂರೆಂಟು ವಚನಗಳು (ಭಾವ ನಿರೂಪಣೆ) ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠ, ಮುಂಡರಗಿ, 1991
7. **ಬಿ. ವ್ಹಿ. ಮಲ್ಲಾಪುರ,** ಅಲ್ಲಮ ಪ್ರಭುದೇವರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2001 (ದ್ವಿ.ಮು)
8. **ಎಸ್. ಕೆ. ಕೊಪ್ಪ** (ಸಂ) ಅಲ್ಲಮಪ್ರಭು ಚಿಂತನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2004
9. **ಅಮರೇಶ ನುಗಡೋಣಿ** (ಸಂ) ಅಲ್ಲಮಪ್ರಭು ವಚನಗಳು : ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010

ನೆಚ್ಚಿದಿಯ ನಾಳೆ ನಮ್ಮದು

ಕ್ರಾನಿಕ

ಜನಪರ ಹೆಜ್ಜೆಗೆ ಇಪ್ಪತ್ತೈದು ವರ್ಷ

ISSN 2319-7307

ಸೆಪ್ಟೆಂಬರ್ ೨೦೨೩

ಬೆಲೆ : ₹ ೩೦

ನವಕರ್ನಾಟಕ ಪ್ರಕಾಶನ

ಗೌರಿ-ಗಣೇಶ

ಹೊಸತು

ಒಳಗೇನಿದೆ?

ನೆಮ್ಮದಿಯ ನಾಳೆ ನಮ್ಮದು

ಅಂಬೇಡ್ಕರರ ಸಹವರ್ತಿ ಅನಂತ ಚಿತ್ರೆ — ಜಿ. ರಾಮಕೃಷ್ಣ ... ೭

ಅಮೆರಿಕದ ಶಾಲೆಗಳಿಂದ ದೇವರನ್ನು ಹೊರಹಾಕಿದ ಮ್ಯಾಡಲಿನ್ ಮರ್ರೆ ಒ'ಹೇರ್ — ಪ್ರೊ॥ ಎಂ. ಅಬ್ದುಲ್ ರೆಹಮಾನ್ ಪಾಷ ... ೧೧

ಲಿಕ್ಕರ್ ಕುಡಿಯದೆಯೂ ಲಿವರ್ ಕೆಡುವುದು — ಡಾ॥ ಶ್ರೀನಿವಾಸ ಕಕ್ಕಿಲ್ಲಾಯ ... ೩೭

ಕನ್ನಡ ಸಾಹಿತ್ಯ ಲೋಕದ ಒಂಟಿ ನಕ್ಷತ್ರ – ನಿರಂಜನ — ಡಾ॥ ಸಿದ್ದನಗೌಡ ಪಾಟೀಲ ... ೫೩

ಫೆಡರಲ್ ಸ್ಟ್ರಕ್ಚರನ್ನು ಅಲುಗಾಡಿಸುತ್ತಿರುವ ಇತ್ತೀಚಿನ ಕೆಲವು ಬೆಳವಣಿಗೆಗಳು — ಡಾ॥ ಎಂ. ಚಂದ್ರ ಪೂಜಾರಿ ... ೪೫

ಏಕೆಂದು ಕೇಳಿ! ವೈಜ್ಞಾನಿಕತೆ ಮತ್ತು ವೈಚಾರಿಕತೆ — ಡಾ॥ ಪ್ರಜ್ವಲ್ ಶಾಸ್ತ್ರಿ ... ೩೫

ಕಾವ್ಯಲೋಕ — ೬, ೧೪, ೨೩, ೪೦, ೪೪, ೫೧, ೬೨

ಅಂಕಣಗಳು

ನಾಡಿಯಾ ಮುರಾದ್ ಎಂಬ ಸ್ತ್ರೀ ಲೋಕದ ಧ್ವನಿ — ಡಾ॥ ಎನ್. ಜಗದೀಶ್ ಕೊಪ್ಪ ... ೧೫

ಪಿಎಲ್‌ಐ ಯೋಜನೆ ಹಾಗೂ ನಮ್ಮ ನರಸಾಪುರದ ಕಾರ್ಮಿಕ — ಟಿ. ಎಸ್. ವೇಣುಗೋಪಾಲ್ ... ೨೪

ಮಹಿಳಾ ಸ್ವಾತಂತ್ರ್ಯಕ್ಕಿರುವ ಕಣ್ಣ ಗಾಯಗಳು — ಡಾ॥ ವಿನಯಾ ಒಕ್ಕುಂದ ... ೪೩

ಮರೆಯಲಾಗದ, ಮರೆಯಬಾರದ ಮಹನೀಯರು — ಡಾ॥ ವಿಜಯಾ ... ೩೩

ಬಾವಲಿ ಮರ ಹಿಂದಿ ಮೂಲ : ರಾಜೇಶ್ ಜೋಶಿ, ಕನ್ನಡಕ್ಕೆ : ಕಾದಂಬಿನಿ ... ೪೯

ಹಾಕಿದ ಜನಿವಾರವ! — ಈರಪ್ಪ ಎಂ. ಕಂಬಳಿ ... ೧೭

ಶತಮಾನದ ಹಿಂದೆಯೇ ಬೇಲೂರು ಶಾಲಾಮಕ್ಕಳಿಗೆ ಕಾನೂನು ಶಿಕ್ಷಣ! — ಸಿ. ಯು. ಬೆಳ್ಳಕ್ಕಿ ... ೩೯

ಹಾಯ್ಕು ಎನ್ನುವ ಹೊಕ್ಕಳ ಬಳ್ಳಿಯ ಸುತ್ತ... — ಎ. ಎಸ್. ಮಕಾನದಾರ ... ೧೯

ಶರಣರು ಮತ್ತು ಆಹಾರ ಸಂಸ್ಕೃತಿ — ಪ್ರಕಾಶ ಗಿರಿಮಲ್ಲನವರ ... ೨೧

ವಚನಗಳ ಮೂಲಕ ಹನ್ನೆರಡನೇ ಶತಮಾನದ ಗ್ರಹಿಕೆ ಪರಿಪೂರ್ಣವೇ? — ಡಾ॥ ಮೃತ್ಯುಂಜಯ ರುಮಾಲೆ ... ೬೦

ಓಪನ್‌ಹೈಮರ್ ಸಿನಿಮಾ : ಒಂದಿಷ್ಟು ಪ್ರಶ್ನೆಗಳು, ಆಲೋಚನೆಗಳು — ಮ. ಶ್ರೀ. ಮುರಳಿ ಕೃಷ್ಣ ... ೨೯

ಕಮ್ಯುನಿಸ್ಟ್ ಕ್ರಾಂತಿಕಾರಿ – ತೆಲುಗು ಜನಪದ ಲಾವಣಿಕಾರ ಗದ್ದರ್ — ಡಾ॥ ಎಂ. ವೆಂಕಟಸ್ವಾಮಿ ... ೪೧

ನಾನು ಓದಿದ ಪುಸ್ತಕ : ಸಮಗ್ರ ಕನ್ನಡ ನಾಡುನುಡಿ ಗೀತೆಗಳು ಸಂಪುಟ ೧ ಮತ್ತು ೨ — ಡಾ॥ ವಿ. ವಿ. ಗೋಪಾಲ್ ... ೩೧

ಮನಸ್ಸಿನ ದಣಿವು ನಮ್ಮ ಎಲ್ಲ ಸಮಸ್ಯೆಗಳ ಮೂಲ... — ಡಾ॥ ವೀರೇಶ ಬಡಿಗೇರ ... ೩೨

ನಭಾವಲೋಕನ : ಶುಕ್ರಗ್ರಹದ ಮಾರ್ಗದರ್ಶನ — ಡಾ॥ ಬಿ. ಎಸ್. ಶೈಲಜಾ ... ೫೨

ಹೊಸ ಓದು — ಇಂದಿರಾಕುಮಾರಿ, ಶ್ರೀಸುಮಿತ್ರಾಸುತ ಅಗಸಬಾಳ ... ೪೮

ಚಿತ್ರಗಳು : ಬಸವರಾಜ ಕಲೆಗಾರ, ತನು

ಮುಖಪುಟ : ಕಲಾವಿದ ಶಿವು ಹೂಗಾರ ಅವರ ಕಲಾಕೃತಿ

ವಿನ್ಯಾಸ : ನವಕರ್ನಾಟಕ ವಿನ್ಯಾಸ

ಕಚೇರಿ ಸಹಕಾರ : ಸುಲಕ್ಷಣಾ ಆರ್., ಆನಂದ ಕೆ.

ವಿದ್ಯಮಾನ...

ಅಯೋಧ್ಯೆ ಮರುಕಳಿಸಲು ನಮ್ಮ ದೇಶದಲ್ಲಿ ತಯಾರಿ ಭರದಿಂದ ಸಾಗುತ್ತಿದೆ. ಶ್ರೀರಾಮಚಂದ್ರನಿಗಾಗಿ ಆ ಪಟ್ಟಣದಲ್ಲಿ ಒಂದು ಮಸೀದಿಯನ್ನು ಉರುಳಿಸಲಾಯಿತು. ಅದು ನಿಜಕ್ಕೂ ಸ್ಫೋಟಕಗಳ ಬಳಕೆಯಿಂದ ನಡೆದದ್ದು, ಆದರೆ ಕರಸೇವಕರು ಕೆಡವಿದರೆಂದು ಹೇಳಲಾಯಿತು. ಆ ಮಿಥ್ಯೆಯನ್ನು ಈಗಲೂ ಉಸಿರುತ್ತಿದ್ದಾರೆ. ಆದರೆ ಅದು ವ್ಯರ್ಥಾಲಾಪ. ಆ ಜಾಗದಲ್ಲಿ ಒಂದು ದೇವಸ್ಥಾನವಿತ್ತೆಂದು ಗುಲ್ಲೆಬ್ಬಿಸಿ ಅದನ್ನು ಸಾಬೀತು ಮಾಡಲು ದೇಶದ ಉತ್ಖನನ ಶಾಸ್ತ್ರ ನಿರ್ದೇಶನಾಲಯವನ್ನು ಯಾವ ಅಳುಕೂ ಇಲ್ಲದೆ ಬಳಸಲಾಗಿತ್ತು. ಕೋಟಿಗಟ್ಟಲೆ ಹಣ ಸುರಿದು ಅಂದ-ಚೆಂದ ಯಾವುದೂ ಇಲ್ಲದ ದೇವಾಲಯವನ್ನುನಿರ್ಮಿಸಲಾಗುತ್ತಿದೆ. ಸಮಾಜದಲ್ಲಿ ಒಡಕು ಮತ್ತು ಉನ್ನತ ಸ್ಥಾನಗಳಲ್ಲಿ ಸುಳ್ಳು ಸಾಕ್ಷಿ ನೀಡುವುದು ಉಗ್ರವಾಗಿ ಬೆಳೆಯಿತು. ಉತ್ಖನನ ವಿಭಾಗದ ನಿರ್ದೇಶಕ ಬಿ. ಬಿ. ಲಾಲ್ ಅಯೋಧ್ಯೆಗೆ ಎಲ್ಲಿಂದಲೋ ತಂದು ತೂರಿಸಿ ಅದನ್ನು ಭಗ್ನ ದೇವಾಲಯದ ಅವಶೇಷವೆಂದು ಹಸಿಸುಳ್ಳು ಹೇಳಿದರೂ ದೇಶದ ಪ್ರಜ್ಞೆಯಲ್ಲಿ ಯಾವ ಸಂಚಲನವೂ ಉಂಟಾಗಲಿಲ್ಲ.

ಈಗ ಅಂತಹ ಇನ್ನೊಂದು ಉರುಳಿಸುವಿಕೆಗೆ ಪೀಠಿಕೆಯನ್ನು ಬಿರುಸಾಗಿ ಹುಟ್ಟುಹಾಕಲಾಗಿದೆ. ಈ ಬಾರಿ 'ಮಾನ್ಯ' ಅದ್ವಾನಿಯಂಥವರ ರಥಯಾತ್ರೆಯ ಅವಶ್ಯಕತೆಯೂ ಇಲ್ಲ, ಏಕೆಂದರೆ ಯೋಗಿ ಮತ್ತು ವಿಶ್ವಗುರು ಜೊತೆಯಾಗಿ ಎಲ್ಲವನ್ನೂ ನಿಭಾಯಿಸಲು ಕ್ಷಮತೆ ಹೊಂದಿದ್ದಾರೆ ಎಂದು ಹೇಳಲಾಗಿದೆ. ಕಾಶಿಯ ವಿಶ್ವನಾಥ ದೇವಾಲಯದ ಬಳಿ ಇರುವ ಜ್ಞಾನವಾಪಿ ಮಸೀದಿಗೆ ಸಂಚಕಾರ ತರುವುದು ಮೂಲ ಉದ್ದೇಶ. ಒಂದು ಮಸೀದಿಯನ್ನು ಭಗ್ನಗೊಳಿಸಲಾದರೆ ಆಕಾಶ ಕಳಚಿ ಬೀಳುವುದಿಲ್ಲ, ಆದರೆ ನಾಗರಿಕ ಸಮಾಜಕ್ಕೆ, ಸಾಂಸ್ಕೃತಿಕ ವ್ಯಕ್ತಿತ್ವಕ್ಕೆ ಮತ್ತು ಸಂವಿಧಾನದ ಆಶಯಗಳಿಗೆ ಘೋರವಾದ ಪೆಟ್ಟು ಬೀಳುತ್ತದೆ, ಆಂತರಿಕವಾಗಿ ವಿಷಗಾಳಿಯನ್ನು ಹಾಯಿಸಿದಂತಾಗುತ್ತದೆ. ಮತ್ತೆ ಅದೇ ಕ್ಷುದ್ರ ನಾಟಕ ಜಾರಿಯಲ್ಲಿದೆ: ಜ್ಞಾನವಾಪಿಯ ಆವರಣದಲ್ಲಿ ಶಿವಲಿಂಗ ಇತ್ತಂತೆ, ಅಲ್ಲಿ ಪೂಜೆ ಸಲ್ಲಿಸಲಾಗುತ್ತಿತ್ತಂತೆ, ಅದರ ಖಚಿತ ಸಾಕ್ಷಿ ದೊರೆತಿದೆಯಂತೆ. ಅಲ್ಲಿ ಉತ್ಖನನಕ್ಕೆ ಪೂರ್ವಭಾವಿಯಾಗಿ ಉತ್ಖನನ ಪರಿಣತರು ಯಾವುದಕ್ಕೂ ಹಾನಿಯುಂಟುಮಾಡದೆ ಸರ್ವೇಕ್ಷಣದಲ್ಲಿ ತೊಡಗಬಹುದೆಂದು ನ್ಯಾಯಾಲಯ ಹಸಿರು ನಿಶಾನೆ ತೋರಿಸಿದೆ. ಇನ್ನುಳಿದಿರುವುದು ಹಾರೆ-ಗುದ್ದಲಿ ಪ್ರಯೋಗ ಮತ್ತು ಇತಿಹಾಸವನ್ನು ಸೂಕ್ತವಾಗಿ ತಿರುಚುವುದು, ಅಷ್ಟೇ. ಹನ್ನೆರಡನೆಯ ಶತಮಾನದ ಒಂದೆರಡು ಪುರಾವೆಗಳನ್ನು ಸಿದ್ಧಗೊಳಿಸಲು ಚತುರ ಇತಿಹಾಸಕಾರರಿದ್ದಾರೆ. ಕಟ್ಟಡ ಉರುಳಿಸಲು ವೀರಪಡೆ ಸನ್ನದ್ಧವಾಗಿದೆ. ಆಮೇಲೆ ೧೦-೧೫ ವರ್ಷ ನ್ಯಾಯಾಲಯದಲ್ಲಿ ಕಟ್ಟಳೆ ಜಾರಿಯಲ್ಲಿರುತ್ತದೆ, ಅದೇ ದೇವಾಲಯವಿದ್ದ ಜಾಗವೆಂದು ಸ್ಥಿರಗೊಳಿಸಲಾಗುತ್ತದೆ.

ಪ್ರಾಮಾಣಿಕತೆ ಎಂಬುದನ್ನು ಹೂತುಹಾಕಿ ಮತೀಯ ದ್ವೇಷವನ್ನು ಇಮ್ಮಡಿಗೊಳಿಸಿ "ತಪ್ಪು ಇತಿಹಾಸವನ್ನು ತಿದ್ದಿ ಬರೆಯಲಾಗುತ್ತದೆ." ದೇಶದ ವ್ಯಕ್ತಿತ್ವಕ್ಕೆ ಕೆಸರು ಮೆತ್ತುವ ಕೆಲಸ ಇದು. ಕಾನೂನು, ಸಂವಿಧಾನ, ಸಾಂಸ್ಕೃತಿಕ ಪ್ರಜ್ಞೆ, ಪರಸ್ಪರ ಮೈತ್ರಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ದೇಶದ ಘನತೆ ಮಣ್ಣು ಮುಕ್ಕುತ್ತವೆ. ನಮ್ಮ ನಾಗರಿಕರು ಐಕ್ಯತೆಯಿಂದ ದೇಶದ ಗೌರವವನ್ನು ರಕ್ಷಿಸ ಹೊರಡುವರೆ? ■

ಮನಸ್ಸಿನ ದಣಿವು ನಮ್ಮ ಎಲ್ಲ ಸಮಸ್ಯೆಗಳ ಮೂಲ...

ನಾನು ಓದಿದ ಪುಸ್ತಕ

"ದೇವರು-ದೆವ್ವ, ಮಾಟ-ಮಂತ್ರ, ಗ್ರಹಗತಿ-ಜಾತಕ, ನಾಗದೋಷ ನಂಬಬೇಕೆ?" ಖ್ಯಾತ ಮನೋವೈದ್ಯರಾದ ಡಾ॥ ಸಿ. ಆರ್. ಚಂದ್ರಶೇಖರ ಅವರ ಹೊಸ ಬರಹ. ಸಮಾಧಾನ ಸಲಹಾ ಕೇಂದ್ರ, ಅರೇಕೆರೆ ಮೈಕೋ ಲೇಔಟ್ ಬೆಂಗಳೂರು ಇವರು ಪ್ರಕಟಿಸಿದ್ದಾರೆ (೨೦೨೩).

ಇಂದು ಮನುಷ್ಯನ ಬದುಕು ಬಾಹ್ಯ ಮತ್ತು ಆಂತರಿಕ ಒತ್ತಡದ ಕಾರಣವಾಗಿ ಆತ್ಮವಿಶ್ವಾಸ ಕಳೆದುಕೊಂಡು ಋಣಾತ್ಮಕ ಭಾವನೆಗಳ ಕೊಂಪೆಯಾಗಿದೆ. ತನ್ನ ದೈನಂದಿನ ಸಮಸ್ಯೆಗಳಿಗೆ ತಾನೇ ಪರಿಹಾರ ಹುಡುಕಿಕೊಳ್ಳದೆ, ಅತಿಮಾನುಷ ವ್ಯಕ್ತಿ ಮತ್ತು ಶಕ್ತಿಗಳನ್ನು ಅವಲಂಬಿಸುತ್ತಿದೆ. ಮನುಷ್ಯರೆಲ್ಲ ಹೀಗೆ ಅಂಧಾಭಿಮಾನಿಗಳಾಗಿ ಸಮಯ, ಹಣ, ವಿವೇಚನೆಯನ್ನು ಕಳೆದುಕೊಳ್ಳುತ್ತಿರುವ ಹೊತ್ತಿನಲ್ಲಿ, ಹಸಿ ಹಾಗೂ ಹುಸಿ ಸುಳ್ಳುಗಳನ್ನು ಎದುರಿಸಲು ಇರಬೇಕಾದ ಸ್ವಂತ ವಿವೇಚನಾಶಕ್ತಿಯ ಬಗ್ಗೆ ಈ ಪುಸ್ತಕ ತಿಳುವಳಿಕೆ ನೀಡುತ್ತದೆ.

ದೇವರು-ದೆವ್ವ, ಮಾಟ-ಮಂತ್ರ, ಗ್ರಹಗತಿ-ಜಾತಕ, ನಾಗದೋಷ ಮುಂತಾದ ಮೂಢನಂಬಿಕೆಗಳು ಇಂದು ನಾಗರಿಕ ಸಮಾಜವನ್ನು ಆವರಿಸಿವೆ. ಆಧುನಿಕ ವಿಜ್ಞಾನ ತಂತ್ರಜ್ಞಾನದ ಫಲಿತಗಳಾದ ಖಾಸಗಿ ವಾಹಿನಿಗಳು, ಕೆಲವು ಸಾಮಾಜಿಕ ಜಾಲತಾಣಗಳು, ಲ್ಯಾಪ್‌ಟಾಪ್ ಬಳಸಿ ಅದೃಷ್ಟ ತಿದ್ದುವ ಹುಸಿ ಜ್ಯೋತಿಷಿಗಳು, ಕೆಲವೇ ಹೊತ್ತಿನಲ್ಲಿ ನಿಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆಂದು ನಂಬಿಸಿ ಹಣದೋಚುವ ದೋಚುಗಾರರು ಬಿತ್ತುತ್ತಿರುವ ಭ್ರಮೆಗಳು

(೩೪ನೇ ಪುಟಕ್ಕೆ ಮುಂದುವರೆದಿದೆ)

ಡಾ॥ ವೀರೇಶ ಬಡಿಗೇರ

ದೇವರು-ದೆವ್ವ, ಮಾಟ-ಮಂತ್ರ, ಗ್ರಹಗತಿ-ಜಾತಕ, ನಾಗದೋಷ ನಂಬಬೇಕೆ?

ಲೇಖಕರು

ಡಾ॥ ಸಿ. ಆರ್. ಚಂದ್ರಶೇಖರ್

ಪುಟಗಳು : ೫೨

ಬೆಲೆ : ರೂ. ೪೦

ಪ್ರಕಾಶಕರು

ಸಮಾಧಾನ ಸಲಹಾ ಕೇಂದ್ರ

ಅರೇಕೆರೆ ಮೈಕೋ ಲೇಔಟ್

ಬೆಂಗಳೂರು - ೭೬

ವೈಚಾರಿಕ ಚಿಂತನೆಗಾಗಿ ಆಂತರಿಕ ವಿತರಣೆಗಾಗಿ ಪ್ರಕಟಣೆ



CamScanner

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ



ರಾಷ್ಟ್ರೀಯ ವಿಜ್ಞಾನ ದಿನಾಚರಣೆ ವಿಶೇಷ ಸಂಚಿಕೆ

ವಿಜ್ಞಾನ ಸಂಗಾತಿ

ಸಂಪುಟ ೨೯, ಸಂಚಿಕೆ ೯-೧೨, ಏಪ್ರಿಲ್-ಜುಲೈ ೨೦೨೨
ಸಂಪುಟ ೩೦, ಸಂಚಿಕೆ ೧-೫, ಆಗಸ್ಟ್-ಡಿಸೆಂಬರ್ ೨೦೨೨
ಸಂಪುಟ ೩೦, ಸಂಚಿಕೆ ೬-೭, ಜನವರಿ-ಫೆಬ್ರವರಿ ೨೦೨೩

CamScanner

VIJNAANA SANGAATHI

A Special Issue in Memory of National Science Day

Vol. 29 Issue-9-12 April-July 2022
Vol. 30 Issue-1-5 August-December 2022
Vol. 30 Issue-6-7 January-February 2023

Chief Editor
Dr. D.V. Paramashivamurthy
Vice-Chancellor
Kannada University, Hampi
Vidyaranya 583 276

Editor
Dr. Madhava Peraje
Professor
Kannada University, Hampi
Vidyaranya 583 276

Published by
Dr. Shailaja I. Hiremath
Director, Prasaranga
Kannada University, Hampi
Vidyaranya 583 276
www.kannadauniversity.org

Pages: 105

© ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬೆಲೆ ರೂ: ೨೦೦/-

ಪುಟವಿನ್ಯಾಸ: **ಡಾ. ನಾಗವೇಣ ಎ.**

ಛಾಯಾಚಿತ್ರಗಳು ಕೃಪೆ: ಜಗಜ್ಜಾಲ

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
ದೂರವಾಣಿ: ೦೮೫೯೪-೨೧೦೪೧೦

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ನಂ. ೧, ಕಾನೂನು ಕಾಲೇಜಿನ ಹಳೆಯ ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂರವಾಣಿ: ೦೮೦-೨೨೩೭೨೩೫೮

ಮುದ್ರಣ
ಮಾರ್ಕೆಟಿಂಗ್ ಕಮ್ಯುನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿ., ಬೆಂಗಳೂರು

ಒಳಪುಟಗಳು

ಪ್ರಧಾನ ಸಂಪಾದಕರ ಮಾತು – ಡಾ. ಡಿ.ವಿ. ಪರಮಶಿವಮೂರ್ತಿ

ಸಂಪಾದಕೀಯ – ಡಾ. ಮಾಧವ ಪೆರಾಜೆ

ಲೇಖನಗಳು

೧. **ವಿಜಯನಗರ ಕಾಲದ ಅಣೆಕಟ್ಟುಗಳು ಮತ್ತು ಪರಿಸರಸ್ನೇಹಿ ತಂತ್ರಜ್ಞಾನವೂ...** – ಡಾ. ಎಸ್.ವೈ.ಸೋಮಶೇಖರ್ / ೮

೨. **ಕೀಟಭಕ್ಷಕ ಸಸ್ಯಗಳು: ಒಂದು ಕಿರುನೋಟ** – ಮಹದೇವಮ್ಮ ಎಸ್., ಬೆಂಗಳೂರು / ೧೪

೩. **ಧೂಮಕೇತುಗಳು: ಬಾಹ್ಯಾಕಾಶದ ಅನಿರೀಕ್ಷಿತ ಅತಿಥಿಗಳು** – ಶ್ರೀಮತಿ ಸೌಭಾಗ್ಯ / ೧೮

೪. **ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ** – ಉಮಾ ಬಿ.ಆರ್. / ೨೮

೫. **ಕರ್ನಾಟಕ ಜಲವಿಜ್ಞಾನ ತಂತ್ರಜ್ಞಾನ** – ಡಾ. ಹರಿಹರ ಶ್ರೀನಿವಾಸರಾವ್ / ೩೯

೬. **ಪ್ರಾಚೀನ ಭಾರತೀಯ ವಿಜ್ಞಾನ ಮತ್ತು ತಂತ್ರಜ್ಞಾನದ ಹಿನ್ನೆಲೆಯಲ್ಲಿ ಬಡಿಗ ವೃತ್ತಿ** – ಡಾ. ವೀರೇಶ ಬಡಿಗೇರ / ೫೧

೭ **ಭಾರತೀಯ ಪಾರಂಪರಿಕ ದೇಸೀ ವೈದ್ಯ ಪದ್ಧತಿ** – ಕರಣಂ ಹನುಮಂತರಾವ್, ಮಾನ್ವಿ / ೬೨

೮. **ಮಣ್ಣು ಸಂಗ್ರಹಣೆ ಮತ್ತು ವಿಶ್ಲೇಷಣೆ** – ಡಾ. ದಾಕ್ಷಾಯಣಿ ಕೆ. ಮೇತ್ರಿ / ೭೯

೯. **ಮಳೆ, ಮಲೆನಾಡು** – ಕಲ್ಕುಳಿ ವಿಠ್ಠಲ ಹೆಗ್ಗಡೆ / ೮೫

೧೦. **ಅಶ್ವದ ಉಗಮ ಮತ್ತು ಉತ್ಕ್ರಾಂತಿ** – ಸಿದ್ಧಲಿಂಗಪ್ಪ ಮರಿಬಾಶೆಟ್ಟಿ / ೯೫

CamScanner

೬. ಪ್ರಾಚೀನ ಭಾರತೀಯ ವಿಜ್ಞಾನ ಮತ್ತು ತಂತ್ರಜ್ಞಾನದ ಹಿನ್ನೆಲೆಯಲ್ಲಿ ಬಡಿಗ ವೃತ್ತಿ

• ಡಾ. ವೀರೇಶ ಬಡಿಗೇರ

ಅಳತೆ ಮತ್ತು ಮಾಪನಗಳು

ಅಳತೆ ಮತ್ತು ಮಾಪನಗಳನ್ನು ಶಿಲ್ಪಶಾಸ್ತ್ರ ಕೃತಿಗಳಲ್ಲಿ 'ಆಯಾದಿ ಗಣಿತ' ಎಂದು ಕರೆಯಲಾಗಿದೆ. ಬಡಿಗರು ಅಥವಾ ಪಾಂಚಾಳರು ಬಳಸುವ ಮಾಪನ ಸಾಧನಗಳು ದೇಹ ಮತ್ತು ಬುದ್ಧಿಯನ್ನು ಸಂಘಟನಾತ್ಮಕ ನೆಲೆಯಲ್ಲಿ ಪರಿಭಾವಿಸಿ ಅದನ್ನು ಶರೀರ ಮೀಮಾಂಸೆಯಾಗಿ ಗ್ರಹಿಸುತ್ತವೆ. ದೇಹ ಮತ್ತು ಮನಸ್ಸು, ಬುದ್ಧಿ ಮತ್ತು ಕ್ರಿಯೆಗಳನ್ನು ವರ್ಗ, ವರ್ಣ, ವೃತ್ತಿ, ಜಾತಿ, ಲಿಂಗ ಎನ್ನುವ ಸೀಳುನೋಟದಲ್ಲಿ ನೋಡಿದ್ದ ಮಿಥ್ಯಾಜ್ಞಾನದ ಸ್ಥಾಪಿತ ನೆಲೆಗಳನ್ನು ಪಾಂಚಾಳರ ಅಳತೆ ಮತ್ತು ಮಾಪನದ ಪರಿಕಲ್ಪನೆಗಳು ನಿರಾಕರಿಸುತ್ತವೆ. ಶರೀರ ಶ್ರಮ ಮತ್ತು ಬುದ್ಧಿಯ ಕ್ರಿಯಾಶೀಲತೆಯನ್ನು ಏಕೀಭವಿಸಿ ತನ್ನ ಉತ್ಪಾದನೆ ಮತ್ತು ವಿವೇಕಗಳನ್ನು ಸಂಘಟನಾತ್ಮಕ ನೆಲೆಯಲ್ಲಿ ಹುರಿಗೊಳಿಸಿದ್ದನ್ನು ಬಡಿಗ ವೃತ್ತಿಯಲ್ಲಿ ನಿಚ್ಚಳವಾಗಿ ಕಾಣಬಹುದು. ಪರಂಪರೆಯಲ್ಲಿ ಜಡತೆ ಮತ್ತು ಕೀಳಿನ ಸಂಕೇತವಾಗಿದ್ದ ಮನುಷ್ಯ ದೇಹವನ್ನು ರಚನಾತ್ಮಗೊಳಿಸಿ ದೇಹದ ವಿವಿಧ ಅಂಗಗಳನ್ನೇ ಮಾಪನ ಸಾಧನವಾಗಿಸಿರುವ ವಿಶಿಷ್ಟತೆಯನ್ನು ಪಾಂಚಾಳ ವೃತ್ತಿಗಳಲ್ಲಿ ಕಾಣುತ್ತೇವೆ.

ಸನತ್ಕುಮಾರವಾಸ್ತು ಹಾಗೂ ಸಮರಾಂಗಣ ಸೂತ್ರಧಾರದಂತಹ ವಾಸ್ತು ಹಾಗೂ ಶಿಲ್ಪಶಾಸ್ತ್ರ ಕೃತಿಗಳಲ್ಲಿ ಯಾರು ಮನೆ ಕಟ್ಟಿಸುತ್ತಾರೋ ಅಥವಾ ಶಿಲ್ಪ ರಚನೆ ಮಾಡಿಸುತ್ತಾರೋ ಆ ಯಜಮಾನನ ಬಲಹಸ್ತದ ಅಳತೆಯನ್ನು ಪ್ರಮಾಣ ಮಾಡಿಕೊಳ್ಳಬೇಕೆಂದು ಹೇಳುತ್ತವೆ. ಈ ಆಶಯವು ಕೆಲಸ ಮಾಡಿಸುವವನ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಅನುಲಕ್ಷಿಸಿ ಅದಕ್ಕೆ ತಕ್ಕ ಹಾಗೆ ಯೋಜನೆಗಳನ್ನು ರೂಪಿಸಬೇಕು ಎನ್ನುವ ಜೀವಪರ ಕಾಳಜಿಯನ್ನು ಸೂಚಿಸುತ್ತದೆ.

ಮಾಪನಗಳ ಪ್ರಾಚೀನತೆ

ಜಗತ್ತಿನ ಮೊಟ್ಟ ಮೊದಲ ನಗರಗಳೆನಿಸಿಕೊಂಡಿರುವ ಈಜಿಪ್ಟ್, ಮೆಸೊಪೊಟೊಮಿಯಾ, ಹರಪ್ಪ ನಾಗರಿಕತೆಯ ಸುಂದರ ಹಾಗೂ ಯೋಜನಾಬದ್ಧ ಕಟ್ಟಡಗಳು ಪ್ರಥಮ ನಗರೀಕರಣದ ಗುರುತುಗಳೆನಿಸಿವೆ. ಮೊಹೊಂಜೋದಾರೋದಲ್ಲಿ ದೊರೆತ ಚಿಪ್ಪಿನಿಂದ ತಯಾರಿಸಿದ ಒಂಬತ್ತು ಭಾಗಗಳುಳ್ಳ, ಅಳತೆಗೋಲು, ಹರಪ್ಪದಲ್ಲಿ ದೊರೆತ ಕಂಚಿನ ಅಳತೆಗೋಲು, ಲೋಥಾಲ್‌ನಲ್ಲಿ ಸಿಕ್ಕ ದಂತದ ಅಳತೆಗೋಲು, ಕೋನಗಳನ್ನು ಅಳೆಯಲು ಬಳಸುತ್ತಿದ್ದ ಮತ್ತೊಂದು ಮಾಪಕವು ಬೋಪಾಲ್‌ನಲ್ಲಿ ಸಿಕ್ಕಿದೆ. ಇವು ದಶಮಾಂಶ ಪದ್ಧತಿ ಮತ್ತು ಮಾನಾಂಗುಳ ಪದ್ಧತಿಯನ್ನು ಅನುಸರಿಸಿ ಯೋಜನಾಬದ್ಧ ಕಟ್ಟಡ ನಿರ್ಮಿಸುತ್ತಿದ್ದ ರೀತಿಯನ್ನು ಹೇಳುತ್ತವೆ.

ಶಾಸ್ತ್ರೀಯ ಮಾಪನಗಳಲ್ಲಿ ಬಳಕೆಯಾಗುವ ಸಾಧನಗಳೆಂದರೆ 'ಶುಲ್ಬಸೂತ್ರಗಳು'. ಭಾರತೀಯ ಗಣಿತಶಾಸ್ತ್ರದ ಪ್ರಪ್ರಥಮ ಕೃತಿಗಳೆಂದರೆ ಈ ಶುಲ್ಬಸೂತ್ರಗಳು. ಶುಲ್ಬ ಸೂತ್ರಗಳು ಕಲ್ಪ, ವೇದಾಂಗ, ಶೌತ್ರ ವಿಭಾಗಕ್ಕೆ ಸೇರಿದ್ದು, ಯಜ್ಞಭೂಮಿಕೆಗೆ ಬೇಕಾದ ನಿಯಮ ಮತ್ತು ಲೆಕ್ಕಾಚಾರಗಳನ್ನು ಒಳಗೊಂಡಿವೆ. ಅಂಕಗಣಿತ, ರೇಖಾಗಣಿತ, ಕ್ಷೇತ್ರಗಣಿತ ಮತ್ತು ಬೀಜಗಣಿತ ನಿಯಮಗಳು ಶುಲ್ಬಸೂತ್ರದ ಜೀವಾಳ.

ಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬ ಮೊ. ೯೪೪೮೮ ೪೫೭೮೯

'ಶುಲ್ಬ' ಎಂದರೆ 'ಅಳೆಯುವುದು' ಎಂದರ್ಥ. ಅಲ್ಲದೆ ರಜ್ಜು, ಹಗ್ಗ, ದಾರ ಎನ್ನುವ ಅರ್ಥಗಳೂ ಇವೆ. ಅಳತೆಯ ಅಧಿಕಾರಿಗೆ 'ರಜ್ಜುಗ್ರಾಹಕ'(ರಜ್ಜುಗ್ರಾಹಕ ಅಮಾತ್ಯ) ಎಂದು ಕರೆಯುತ್ತಿದ್ದರು. ರಜ್ಜು ಅಥವಾ ಹಗ್ಗ ಶಿಲ್ಪಿ ಅಥವಾ ಬಡಿಗನು ಬಳಸುವ ಅಳತೆಯ ಪ್ರಮುಖ ವಸ್ತು. ಹಗ್ಗದಷ್ಟೇ ಮಹತ್ವದ ಮತ್ತೊಂದು ಮಾಪನ ಸಾಧನ ಎಂದರೆ ದಂಡ (ಕೋಲು). ಶುಲ್ಬ ಎಂದರೆ ಅಳತೆಗಳೇ ಪ್ರಧಾನವಾಗಿರುವ ಒಂದು ಶಾಸ್ತ್ರ. ಈ ಸೂತ್ರಗಳೇ ಬಡಿಗ, ಶಿಲ್ಪಿ ಮತ್ತು ಶಿಲ್ಪಶಾಸ್ತ್ರದ ಬೀಜಮಂತ್ರಗಳು. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಮಾಪನ ತಂತ್ರಜ್ಞಾನವು ಶಾಸ್ತ್ರಬದ್ಧವಾಗಿ ರಚನೆಗೊಳ್ಳಲು ಕಾರಣವಾದ ವಾಹಕಗಳೇ ಶುಲ್ಬಸೂತ್ರಗಳು.

ಆಯಾದಿ ಗಣಿತದ ಮೊದಲ ಬಿಂದುವೆಂದರೆ ಅಂಗುಲಗಳು. ಅಂಗುಲ ಎಂದರೆ ಹದಿನಾಲ್ಕು ಬೀಜಗಳ(ಬಾರ್ಲಿ/ಭತ್ತ) ಉದ್ದದ ಪ್ರಮಾಣ. ಅತ್ಯಂತ ಸೂಕ್ಷ್ಮವಾಗಿರುವುದು ಪರಮಾಣು. ಇಂತಹ ಎಂಟು ಪರಮಾಣುಗಳು ಸೇರಿದರೆ ಒಂದು ತಸ್ರರೇಣು (ರಥಧೂಳಿ), ಎಂಟು ತಸ್ರರೇಣು ಸೇರಿದರೆ ಒಂದು ವಾಲಾಗ್ರ (ಕೂದಲಿನ ಕೊನೆ ತುದಿ), ಎಂಟು ವಾಲಾಗ್ರಗಳು ಸೇರಿದರೆ ಒಂದು ಲೀಕ್ಷ, ಎಂಟು ಲೀಕ್ಷಗಳು ಸೇರಿದರೆ ಒಂದು ಯೂಕ, ಎಂಟು ಯೂಕಗಳು ಸೇರಿದರೆ ಒಂದು ಯವ(ಬಾರ್ಲಿಕಾಳಿನ ಗಾತ್ರ) ಆರು ಯವಗಳನ್ನು(ಬಾರ್ಲಿ ಕಾಳು) ಅಗಲದಲ್ಲಿ ಒಂದರ ಪಕ್ಕದಲ್ಲೊಂದು ಇಟ್ಟರೆ ಬರುವ ಉದ್ದವೆ ಅಂಗುಲ, ಹದಿನಾಲ್ಕು ಅಣು ಅಥವಾ ಎಳ್ಳಿನ ಬೀಜಗಳನ್ನು ಒಂದರ ಬಗಲಲ್ಲಿ ಒಂದನ್ನು ಜೋಡಿಸಿದರೆ ಬರುವ ಉದ್ದ ಅಂಗುಲಕ್ಕೆ ಸಮವಾಗಿರುತ್ತದೆ. ಕೆಲವೊಂದು ವಿಶಿಷ್ಟ ತಾಲಮಾನಗಳನ್ನು ಕೆಳಗಿನಂತೆ ವಿವರಿಸಲಾಗಿದೆ.

೧. **ಅಂಗುಲ:** ಅಂಗುಲವೆಂದರೆ ಇಂಗ್ಲಿಷ್ ಮಾಪನದಲ್ಲಿ ಒಂದು ಇಂಚು ಕಾಲು ಸೆಂಟಿಮೀಟರ್. ಅಂದರೆ ನಮ್ಮ ಬಲಹಸ್ತದ ಮಧ್ಯದ ಬೆರಳಿನ ಒಂದು ಕಂಡಿಕೆ(ಗೆಣ್ಣು). ಅಂಗುಳದಲ್ಲಿ ಮೂರು ವಿಧ. ೧. ಮಾನಾಂಗುಳ, ೨. ಮಾತ್ರಾಂಗುಳ, ೩. ಬೇರಾಂಗುಳ.

ಮಾನಾಂಗುಳ: ಎಂಟು ಯವಗಳು ಸೇರಿದರೆ ಒಂದು ಮಾನಾಂಗುಳ. ಯವ ಅಂದರೆ ನೆಲ್ಲು(ಭತ್ತದ ಕಾಳು) ಅಥವಾ 'ಶಾಲಿ'(ಭತ್ತ)ಯಷ್ಟು ಉದ್ದ ಮತ್ತು ದಪ್ಪ. ಭತ್ತಗಳಲ್ಲಿ ಐದು ವಿಧಗಳು. ೧. ಶ್ವೇತಶಾಲಿ (ಬಿಳಿಭತ್ತ), ೨. ಮಹಾಶಾಲಿ(ದಪ್ಪಭತ್ತ), ೩. ರಕ್ತಶಾಲಿ (ಕೆಂಪುಭತ್ತ), ೪. ಹೇಮಶಾಲಿ(ಬಂಗಾರ, ಸಣ್ಣಭತ್ತ), ೫. ಸೌಗಂಧಿಕಾಶಾಲಿ (ಸುಗಂಧಭತ್ತ) ಈ ಐದು ಬಗೆಯಲ್ಲಿ ಯಾವ ವಿಧದ ಭತ್ತ ವನ್ನಾದರೂ ಅಂಗುಳದ ಅಳತೆಗೆ ಬಳಸಬಹುದು. ಇವುಗಳಲ್ಲಿ ಕೆಂಪುಶಾಲಿ ಶ್ರೇಷ್ಠವೆಂದು ಶಾಸ್ತ್ರಗ್ರಂಥಗಳು ಹೇಳುತ್ತವೆ. ಎಂಟು ಕೆಂಪು ಭತ್ತದ ಕಾಳನ್ನು ಒಂದರ ಪಕ್ಕದಲ್ಲಿ ಒಂದರಂತೆ ಜೋಡಿಸಿದಾಗ ಬರುವ ಅಳತೆಯನ್ನು ಒಂದು ಶ್ರೇಷ್ಠ ಮಾನಾಂಗುಳ ಎಂದು ಕರೆಯುತ್ತಾರೆ. ದೇವಾಲಯ, ಅರಮನೆ ಇತ್ಯಾದಿ ಪ್ರತಿಷ್ಠಿತ ಕಟ್ಟಡಗಳನ್ನು ಈ ಮಾನಾಂಗುಳದಲ್ಲಿಯೇ ಕಟ್ಟುತ್ತಾರೆ. ಆರು ಯವಗಳು ಸೇರಿದರೆ ಕನಿಷ್ಠ ಮಾನಾಂಗುಳವೆಂದೂ, ಏಳು ಯವಗಳು ಸೇರಿದರೆ ಮಧ್ಯಮ ಮಾನಾಂಗುಳವೆಂದೂ, ಎಂಟು ಯವಗಳು ಸೇರಿದರೆ ಶ್ರೇಷ್ಠ ಮಾನಾಂಗುಳವೆಂದು ಭಾವಿಸಲಾಗುತ್ತದೆ.

ಮಾತ್ರಾಂಗುಳ: ಶಿಲ್ಪ ಮಾಡಿಸುವವನ ಬಲಹಸ್ತದ ಮಧ್ಯಮ ಗೆಣ್ಣಿನ(ಪರ್ವದ) ಉದ್ದ ಅಥವಾ ಅಗಲವನ್ನು ಮಾತ್ರಾಂಗುಳವೆಂದು ಕರೆಯುತ್ತಾರೆ.

ಬೇರಾಂಗುಳ: ಇದನ್ನು ದೇಹಾಂಗುಲ ಅಥವಾ ದೇಹಲಬ್ದಾಂಗುಳವೆಂದೂ ಕರೆಯಲಾಗುತ್ತದೆ. ಒಂದು ಪ್ರತಿಮೆಯ ಪಾದಾದಿ ಉಷ್ಣೀಕ್ಷ ಪರ್ಯಂತದ ಎತ್ತರವನ್ನು ನಿಗದಿತ ಸಮಭಾಗ ಮಾಡಿ ಅದರಲ್ಲಿ ಒಂದು ಭಾಗವನ್ನು ಅಂಗುಲವಾಗಿ ಸ್ವೀಕರಿಸುವುದನ್ನು ಬೇರಾಂಗುಳವೆಂದು ಕರೆಯಲಾಗುತ್ತದೆ. ಈ ಮೂರು ಅಂಗುಳಗಳು ಸೇರಿದರೆ ಒಂದು 'ಮುಷ್ಠಿ'ಯಾಗುತ್ತದೆ. ನಾಲ್ಕು ಮುಷ್ಠಿಗಳು ಸೇರಿ ಒಂದು 'ವಿತಸ್ತಿ'ಯಾಗುತ್ತದೆ.

೨. **ವಿತಸ್ತಿ:** ವಿತಸ್ತಿಗೆ 'ತಾಲ'ವೆಂದು ಕರೆಯುತ್ತಾರೆ. ಇದರಲ್ಲಿ ಮತ್ತೇ ನಾಲ್ಕು ಬಗೆಗಳು ಪ್ರಾದೇಶ, ತಾಲ, ವಿತಸ್ತಿ ಮತ್ತು ಗೋಕರ್ಣ(ಗೇಣು).

ಪ್ರಾದೇಶ : ಇದಕ್ಕೆ 'ಚೋಟು'(ಇಂದಿನ ಎಂಟು ಇಂಚು) ಎಂದು ಕರೆಯುತ್ತಾರೆ. ಇದು ಹನ್ನೆರಡು ಅಂಗುಳವನ್ನು ಹೊಂದಿರುತ್ತದೆ. ಹೆಬ್ಬೆರಳು ಮತ್ತು ತೋರು ಬೆರಳನ್ನು ವಿರುದ್ಧ ದಿಕ್ಕಿಗೆ ಚಾಚಿದಾಗ ಹೆಬ್ಬೆರಳಿನ ಕೊನೆಯಿಂದ ತೋರುಬೆರಳಿನ ಕೊನೆಯವರೆಗಿನ ಮಧ್ಯದ ದೂರವನ್ನು ಪ್ರಾದೇಶ ಎನ್ನುತ್ತಾರೆ.

ತಾಲ : ಹೆಬ್ಬೆರಳಿನ ಕೊನೆಯಿಂದ ಮಧ್ಯಬೆರಳಿನ ತುದಿಯ ತನಕದ ದೂರವನ್ನು ತಾಲ ಎಂದು ಕರೆಯುತ್ತಾರೆ.

ವಿತಸ್ತಿ : ಉಂಗುರ ಬೆರಳಿನ ಕೊನೆಯಿಂದ(ಅನಾಮಿಕಾ) ಹೆಬ್ಬೆರಳಿನ ಕೊನೆಯತನಕ ಇರುವ ದೂರವನ್ನು ವಿತಸ್ತಿ ಎನ್ನುತ್ತಾರೆ. ಇವರಲ್ಲಿ ಹದಿಮೂರು ಅಂಗುಲಗಳಿರುತ್ತವೆ.

ಗೋಕರ್ಣ(ಗೇಣು): ಹೆಬ್ಬೆರಳು ಮತ್ತು ಕಿರುಬೆರಳಿನ ಕೊನೆಯವರೆಗಿನ ಅಂತರವನ್ನು ಗೇಣು(ಇಂದಿನ ಒಂಭತ್ತು ಇಂಚು) ಅಥವಾ ಗೋಕರ್ಣ ಎಂದು ಕರೆಯಲಾಗುತ್ತದೆ.

೩. **ಯುಗ:** ಹದಿಮೂರು ಅಂಗುಳಗಳು ಸೇರಿ ಪೃಥ ಅಥವಾ ಯುಗ ಎನ್ನುತ್ತಾರೆ.

೪. **ಪದ:** ಹದಿನೈದು ಅಂಗುಳವನ್ನು ಪದ ಎಂದು ಕರೆಯಲಾಗುತ್ತದೆ.

೫. **ಹಸ್ತ:** ಎರಡು ವಿತಸ್ತಿ ಅಥವಾ ತಾಳ ಸೇರಿದರೆ ಒಂದು ಹಸ್ತವಾಗುತ್ತದೆ. ಹಸ್ತದಲ್ಲಿ ೨೪ ಅಂಗುಲಗಳಿರುತ್ತವೆ. ಇದನ್ನೇ ಕಿಷ್ಕು ಎಂದು ಹೇಳಲಾಗುತ್ತದೆ. ಹಸ್ತದ ಅಳತೆ ಇಪತ್ನಾಲ್ಕು ಅಂಗುಳಗಳು. ಹಸ್ತಕ್ಕೆ ಒಂದು ಅಂಗುಳ ಸೇರಿದರೆ ಧನುರ್ಹಸ್ತ (೨೫ ಅಂಗುಳ) ಇದಕ್ಕೆ ಒಂದು ಅಂಗುಳ ಸೇರಿದರೆ ಮುಷ್ಕಿ(೨೬ ಅಂಗುಳ). ಮುಷ್ಕಿಗೆ ಒಂದು ಅಂಗುಳ ಸೇರಿದರೆ ಚಾಪ(೨೭ ಅಂಗುಳ). ಚಾಪಕ್ಕೆ ಒಂದು ಅಂಗುಳ ಸೇರಿದರೆ ಗ್ರಹ(೨೮ ಅಂಗುಳ). ಗ್ರಹಕ್ಕೆ ಒಂದು ಅಂಗುಳ ಸೇರಿದರೆ ಪ್ರಾಚ್ಯ(೨೯ ಅಂಗುಳ). ಪ್ರಾಚ್ಯಕ್ಕೆ ಒಂದು ಅಂಗುಳ ಸೇರಿದರೆ ವೈದೇಹ(೩೦ ಅಂಗುಳ). ವೈದೇಹಕ್ಕೆ ಒಂದು ಅಂಗುಳ ಸೇರಿದರೆ ವೈಪುಲ್ಯ ವಾಗುತ್ತದೆ(೩೧ ಅಂಗುಳ). ಹೀಗೆ ಎಂಟು ಬಗೆಯ ಹಸ್ತಗಳನ್ನು ಹೇಳಲಾಗಿದೆ.

೬. **ಮೊಳ:** ರೂಢಿಯಲ್ಲಿ ಹಸ್ತವೆಂಬುದಕ್ಕೆ 'ಮೊಳ' ಎನ್ನುತ್ತಾರೆ (ಇಂದಿನ ೧೮ ಇಂಚು). ಇದರಲ್ಲಿ ರತ್ನಿ ಮತ್ತು ಅರತಿ ಹಸ್ತವೆಂಬ ಎರಡು ಭೇದಗಳಿವೆ. ಚಾಚಿರುವ ಹಸ್ತದ ಮೊಣಕೈ ಗಂಟಿನಿಂದ ಹಸ್ತದ ಮಧ್ಯದ ಬೆರಳಿನ ತುದಿಯ ಅಂತರವನ್ನು ಅರತ್ನಿಹಸ್ತ. ಚಾಚಿರುವ ಹಸ್ತದಲ್ಲಿ ನಾಲ್ಕು ಬೆರಳುಗಳನ್ನು ಮಡಚಿಕೊಂಡು ಅಳತೆ ಪಡೆದುಕೊಂಡರೆ ಅದನ್ನು 'ರತ್ನಿಹಸ್ತ' ಎಂದು ಕರೆಯುತ್ತಾರೆ.

೭. **ಬಾಹು ಅಥವಾ ಶ್ಯಾಮಂ:** ಮೂರು ಪ್ರಾದೇಶಗಳನ್ನು(ಚೋಟು) ಸೇರಿಸಿದರೆ ಬರುವ ಮೊತ್ತವನ್ನು ಬಾಹು ಎನ್ನುತ್ತಾರೆ. ಇದರಲ್ಲಿ ಮೂವತ್ತಾರು ಅಂಗುಳಗಳಿರುತ್ತವೆ. ಬೇಕಾದರೆ ಇದನ್ನು ಅರ್ಧ ಮಾರು ಎಂದು ಕರೆಯಬಹುದು.

೮. **ದಂಡ:** ನಾಲ್ಕು ಮೊಳ ಸೇರಿ ಒಂದು ದಂಡ. ಎಂಟು ದಂಡಗಳು ಸೇರಿ ಒಂದು ಹಗ್ಗ(ರಜ್ಜು), ಒಂದು ಹಗ್ಗದಲ್ಲಿ ೩೨ ಹಸ್ತಗಳಿರುತ್ತವೆ. ಶಿಲ್ಪಶಾಸ್ತ್ರದಲ್ಲಿ ಶಿಲ್ಪಿಯ ಅಳತೆಯನ್ನು 'ಕೋಲು' ಎಂದು ಕರೆಯುತ್ತಾರೆ. ಕೋಲನ್ನು ಹಳ್ಳಿಗಳಲ್ಲಿ 'ಕಟಿಗೆ' ಎಂದು ಕರೆಯುತ್ತಾರೆ. ಕೋಲು ಭಾರತೀಯ ಶಿಲ್ಪಶಾಸ್ತ್ರ ಸಂಪ್ರದಾಯದಲ್ಲಿ ಕ್ರಿಸ್ತಶಕದ ಆರಂಭದ ಮೂರು ಸಾವಿರ ವರ್ಷ ಮೊದಲೇ ರೂಪಗೊಂಡ ಬಗ್ಗೆ ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ ಉಲ್ಲೇಖವಿದೆ. ಕೋಲಿನ ಉದ್ದ ಇಪತ್ನಾಲ್ಕು ಅಂಗುಳ. ಇದರಲ್ಲಿ ನಾಲ್ಕು ಭಾಗ ಮಾಡಿ ಹಸ್ತಗಳನ್ನು ಗುರುತಿಸಲಾಗುತ್ತದೆ. ಚಂದನ, ಕಗ್ಗಲ, ನುಗ್ಗೆ, ಮಾವು, ತಾಳೆ, ಬೇವು, ಸಂಪಿಗೆ, ಬಿದಿರು ಇತ್ಯಾದಿ ಮರಗಳಲ್ಲಿ ದಂಡವನ್ನು ತಯಾರಿಸುತ್ತಾರೆ.

೯. **ರಜ್ಜು :** ರಜ್ಜು ಅಂದರೆ ಹಗ್ಗ, ದಂಡ ಅಥವಾ ದಾರ. ರಜ್ಜು ಎಂದರೆ ಎಂಟು ದಂಡ. ದಂಡವನ್ನು ತಯಾರಿಸಲು ಚಂದನ, ದೇವದಾರು, ಕಗ್ಗಲಿ, ತೇಗ, ನುಗ್ಗೆ, ಮಾವು, ತಾಳೆ, ಬೇವು, ಸಂಪಿಗೆ, ಬನ್ನಿ, ಹುಣಸೆ, ಅಡಿಕೆ, ಬಿದಿರು ಇತ್ಯಾದಿ ಮರಗಳನ್ನು ಬಳಸಲಾಗುತ್ತದೆ. ಒಂದು ದಂಡಕ್ಕೆ ನಾಲ್ಕು ಹಸ್ತಗಳು. ೪ X ೮ X ೧೨ X ೧೬ X ೨೦ X ೨೪ X ೩೨. ರಜ್ಜುವಿನ ಉದ್ದ ೩೨ ಹಸ್ತಗಳು. ವಾಸುಕಿ ಇದರ ಅಧಿದೇವತೆ. ಉಳಿದ ಅಳತೆಗಳಿಗೆ ಬ್ರಹ್ಮ ಅಧಿದೇವತೆ. ತೆಂಗಿನ ನಾರು, ದರ್ಭೆ, ಆಲದ ಮರದ ಬೇರು, ಹತ್ತಿಯ ನೂಲು, ರೇಷ್ಮೆದಾರ, ತಾಳೆನಾರು ಇವುಗಳಿಂದ ಹಗ್ಗವನ್ನು ಮಾಡಲಾಗುತ್ತದೆ. ಹಗ್ಗದ ದಪ್ಪ ಒಂದು ಅಂಗುಲ ಇರಬೇಕು. ಹಗ್ಗದಲ್ಲಿ ಮೂರು ಹುರಿಗಳು ಇರಬೇಕು. ಗಂಟು ಇರಬಾರದು. ಉದ್ದ ಕನಿಷ್ಠ ಮೂವತ್ತೆರಡು ಅಂಗುಲ ಇರಬೇಕು. ರಜ್ಜುವಿನಲ್ಲಿ

ಸಮ ಹಾಗೂ ವಿಷಮ ಭಾಗಗಳನ್ನು ಗುರ್ತಿಸಿ ಆಯ ವ್ಯಯ ಮಾಡುತ್ತಾರೆ. ರಜ್ಜುವಿನ ಸಂಪೂರ್ಣ ಉದ್ದದಲ್ಲಿ ೧/೨, ೧/೪, ೧/೬, ೧/೮, ೧/೧೦ ಮುಂತಾದ ಭಾಗಗಳನ್ನು ಗುರ್ತಿಸಿ ಅಳತೆಗೆ ಬಳಸಿಕೊಳ್ಳಲಾಗುತ್ತದೆ. ಹಸ್ತದಂಡ (ಮೊಳ ಕೋಲು), ಮಾನದಂಡ (ಡಂಡಕೋಲು), ಮತ್ತು ರಜ್ಜು (ಹಗ್ಗ) ಇವನ್ನು ಬಳಸುವ ಮೊದಲು ಶಿಲ್ಪಿಯು ಇವುಗಳ ಅಧಿದೇವತೆಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಧ್ಯಾನಿಸಬೇಕು ಎಂದು ಶಾಸ್ತ್ರಗಳು ಹೇಳುತ್ತವೆ.

ವಾಸ್ತು ಮತ್ತು ಶಿಲ್ಪಶಾಸ್ತ್ರದಲ್ಲಿ ಬಳಕೆಯಾಗಿರುವ ತಿಂತಿಣಿ ಮೌನೇಶ್ವರರ ವಚನದಲ್ಲಿ ದಾರದ ಪ್ರಸ್ತಾಪ ಬರುತ್ತದೆ. ಎರಡು ಅರ್ಥದಲ್ಲಿ ದಾರದ ಬಳಕೆಯನ್ನು ಮಾಡಿದ್ದಾರೆ. ಒಂದು: ಅಳತೆಯ ಸಾಧನವಾಗಿ, ಎರಡು: ವಿಡಂಬಣಾತ್ಮಕವಾಗಿ.

ಕುಂಟಿ ಕೂರಿಗಿಯ ಅಳೆದ ದಾರ ಒಂದಳತೆಯದು
ಧಾರುಣಿಯ ಅಳೆವ ಈ ದಾರ ಯಾರಿಗೆ ಸಲ್ಲುವುದು
ವೀರ ಶೂರ ಉದಾರ ಗಂಭೀರ ವಿಚಾರ
ಮೂರುದಾರ ಮಾರಿಕೊಂಬುವರು
ಮಗಳು ಮೈನೆರೆದರೆ ಮರುದಿವಸ ತ್ಯಾಗವ ಮಾಡುವರು
ಇವರ ಕೊರಳಲ್ಲಿ ದಾರ ಸಲ್ಲುವುದೆ
ದಿನ ಬರುವ ತನಕ ಹಳೆದಾರ ಹಾಕೆಂದ ಬಸವಣ್ಣ

ಬಡಿಗ ಕೂರಿಗಿ ಮತ್ತು ಕುಂಟಿಯ ಕಡದು, ಬಳದು ತೆಗೆಯಲು ಬಳಸುವ ಈ ದಾರವನ್ನು ಮೂರು ಎಳೆಯಾಗಿ ಹೊಸೆಯಲಾಗಿರುತ್ತದೆ. ಒಂದು ಹುರಿ ದಪ್ಪವಿರುತ್ತದೆ. ಬಡಿಗ ತಾನು ಹಾಸುವ (ತಯಾರಿಸುವ) ಕುಂಟಿ ಮತ್ತು ಕೂರಿಗಿಗಳ 'ಯಾಸಿ' ತೆಗೆಯಲು (ಅಂಕು-ಡೊಂಕು) ಕಡದು ಬಳದು ನೋಡಲು 'ಯಾಸಿದಾರ'ವನ್ನು ಬಳಸಿ ಕುಂಟಿ ಮತ್ತು ಕೂರಿಗಿ ಪ್ರಯೋಜನಕ್ಕೆ ಬರುವಂತೆ ಮಾಡುತ್ತಾನೆ. ಕಾರಣ ದಾರ(ಜನಿವಾರ) ಎನ್ನುವುದು ಕೇವಲ ಸಂಪ್ರದಾಯವಲ್ಲ. ಅದೊಂದು ಜ್ಞಾನ, ತಿಳುವಳಿಕೆ, ಅಳತೆ. ಸುಸಜ್ಜಿತ ನಿರ್ಮಾತೃ ಪರಂಪರೆಯ ವಾಹಕ. ದಾರ ಇಲ್ಲದಿದ್ದರೆ ಯಾವುದನ್ನು ಸುಸಜ್ಜಿತವಾಗಿ ಸುಂದರವಾಗಿ ನಿರ್ಮಾಣ ಮಾಡಲು ಸಾಧ್ಯವಿಲ್ಲ. ದಾರ ನಾರಿನದಾಗಲಿ, ಹುಲ್ಲಿನದಾಗಲಿ ಅದು ಬಡಿಗ ಸಂಸ್ಕೃತಿಯ ತಾಂತ್ರಿಕ ಪರಿಣಿತಿಯ ಗುರುತಾಗಿದೆ. ಮಾಪನ ಮತ್ತು ಅವುಗಳ ಸ್ವರೂಪವನ್ನು ಗಮನಿಸಿದಾಗ ಸಿಂಧೂ ಸಂಸ್ಕೃತಿಯಿಂದ ಇಂದಿನವರೆಗೂ ಈ ಮಾಪನ ಸಾಧನಗಳು ಬಳಕೆಯಾಗುತ್ತ ಬೆಳೆಯುತ್ತ ಬಂದಿವೆ. ಬಹುಮುಖ್ಯವಾಗಿ ಗೇಣು, ಚೋಟು, ಮೊಳ, ಹಸ್ತ, ಮಾರು, ಗೇಣು ಎಂದು ಮನುಷ್ಯ ದೇಹದ ವಿವಿಧ ಅಂಗಗಳನ್ನೂ ಎಳ್ಳು, ಭತ್ತ, ಬಾರ್ಲಿ, ಕೆಂಪುಶಾಲಿ ಮುಂತಾದ ಆಹಾರ ಪದಾರ್ಥಗಳನ್ನು ಮರ, ಹುಲ್ಲು, ನಾರು, ದಾರಗಳಂತಹ ಪ್ರಾಕೃತಿಕ ಪದಾರ್ಥಗಳನ್ನು ಬಳಸಿಕೊಂಡು ರೂಪಿಸಿದ ಮಾಪನ ಸಾಧನಗಳು ಜೀವಂತ ಸಮುದಾಯವೊಂದರ ಜ್ಞಾನ ಪರಂಪರೆಯ ಪ್ರತೀಕಗಳಾಗಿವೆ.

ಜ್ಞಾನ ಎನ್ನುವುದು ಮನುಷ್ಯನಿಗೆ ಧ್ಯಾನಮೂಲವಾಗಿ ಬರಲಿಲ್ಲ. ಅದು ಕ್ರಿಯಾ ಮೂಲವಾಗಿ ಬಂದಿತು. ಇಂತಹ ಕ್ರಿಯಾಮೂಲ ಜ್ಞಾನದ ಬಡಗಿಯನ್ನು ಋಗ್ವೇದವು 'ಜ್ಞಾನಿ' ಎಂದು ಕರೆಯುತ್ತದೆ. ಉಪನಿಷತ್ತುಗಳ ಕಾಲಕ್ಕೆ ದೈಹಿಕ ಶ್ರಮ ಮತ್ತು ಅರಿವಿನ ಆಕರಗಳು ತುಚ್ಛವಾಗಿ ಬ್ರಹ್ಮಜ್ಞಾನವು ಶ್ರೇಷ್ಠವೆನಿಸಿತು. ಆದರೆ ಬಡಿಗ ಮತ್ತು ಆತನ ಕ್ರಿಯೆಗಳು, ಸಾಧನೋಪಕರಣಗಳು, ಕ್ರಿಯಾರಹಿತ ಬದುಕಿನ ಅರ್ಥಹೀನತೆಯನ್ನು ಎತ್ತಿ ಹೇಳುತ್ತಲೇ ದೇಹ ಮತ್ತು ಮನಸ್ಸಿನ ಸೃಷ್ಟ್ಯಾತ್ಮಕತೆಯನ್ನು ವಿಸ್ತರಿಸುವತ್ತ ಆಸಕ್ತಿ ವಹಿಸಿದ್ದನ್ನು ಮಾಪನ ಸಾಧನಗಳ ಚಾರಿತ್ರಿಕ ಬೆಳವಣಿಗೆಯಲ್ಲಿ ಕಾಣುತ್ತೇವೆ. ದೇಹ ಸತ್ಯ ಪ್ರಕೃತಿ ನಿತ್ಯ ಕಾಯವೇ ಕಾಯಕ ಎನ್ನುವ ಸಂಗತಿಗಳನ್ನು ಇವು ಎತ್ತಿ ಹೇಳುತ್ತವೆ.

ಕಾವ್ಯ ಮತ್ತು ಶಾಸ್ತ್ರ ಗ್ರಂಥಗಳಲ್ಲಿ ಪದೇ ಪದೇ ಬಳಕೆಯಾಗುವ ದಂಡಕ(ಕೋಲಿನಂತೆ ಉದ್ದವಾದ) ಸರ್ವತೋಭದ್ರ(ಚಚ್ಚೌಕ) ನಂದ್ಯಾವರ್ತ(ಹೂವಿನ ದಳಗಳಂತೆ ಹರಡಿದ್ದು) ಪದ್ಮಕ (ಅಪ್ಪ ಭುಜಾ ಕೃತಿಯುಳ್ಳದ್ದು) ಸ್ವಸ್ತಿಕ (ಉದ್ದ ಅಗಲ ಸಮ, ಒಳವಿನ್ಯಾಸ ಭಿನ್ನ), ಪ್ರಸ್ತರ (ಚತುಷ್ಕೋನ), ಕಾರ್ಮುಕ (ಬಿಲ್ಲಿನಂತಹ ವಿನ್ಯಾಸ) ವಿನ್ಯಾಸಗಳು ರಾಚನಿಕತೆ ದೃಷ್ಟಿಯಿಂದ ಐತಿಹಾಸಿಕವಾದಂಥವು. ಚಚ್ಚೌಕ, ಚತುರಸ್ರ, ದಂಡಕ ಇವು ಬೆಟ್ಟಗುಡ್ಡಗಳಿಗಿಂತ ಭಿನ್ನವಾದ, ಮೈದಾನ ಪ್ರದೇಶಕ್ಕೆ

CamScanner

ಸೂಕ್ತವಾದ ರಚನೆ ಹಾಗೂ ಮಾಪನಗಳಾಗಿವೆ. ಪಂಪ, ರನ್ನ, ಕುಮಾರವ್ಯಾಸ, ಬಾಚಿಕಾಯಕದ ಬಸವಯ್ಯ ಇವರೆಲ್ಲ ಬಯಲುಸೀಮೆ ಕವಿಗಳು. ಮಯ ಸಭೆ, ವಿವಾಹ ಮಂಟಪ, ಸಭಾಮಂಟಪ, ಅರಮನೆ, ಗುರುಮನೆ ಇವು ಎಲ್ಲವೂ ಚತುರಸ್ರ ವಾಸ್ತು ತಾಂತ್ರಿಕತೆಯನ್ನು ಅವಲಂಭಿಸಿವೆ. ಇವು ದ್ರಾವಿಡ ಪರಿಕಲ್ಪನೆಗಳು ಎಂದು ಶ್ರೀ ಎಸ್.ಕೆ.ರಾಮಚಂದ್ರರಾವ ಅವರು ಅಭಿವ್ಯಾಯಪಡುತ್ತಾರೆ.

ಇಷ್ಟೊಂದು ವೈಭವೋಪೇತವಾದ ಮಹಲುಗಳು, ಕಟ್ಟಡಗಳು, ಯುದ್ಧ ಸಾಮಗ್ರಿಗಳು, ನಾಣ್ಯ, ಶಾಸನ, ಕೋಟೆ, ಕೊತ್ತಲ, ದೇವಾಲಯಗಳು, ವಿವಿಧ ರೀತಿ ಮಂಟಪಗಳು ಗ್ರಾಮ ಮತ್ತು ನಗರ ವಿನ್ಯಾಸಗಳಿಗೆ ಕಾರಣವಾದ ಬಡಿಗ ಅಥವಾ ಕಾಷ್ಠ ಶಿಲ್ಪಿಗಳನ್ನು ಕನ್ನಡ ಕವಿಗಳು ಮತ್ತು ಸಾಹಿತ್ಯ ಅಧ್ಯಯನಕಾರರು ಸ್ಮರಿಸಿದ್ದು ಕಡಿಮೆಯೇ. ಕಾರಣ ಕನ್ನಡ ಸಾಹಿತ್ಯವನ್ನು ಸಾಮಂತಶಾಹಿ ಮತ್ತು ಸಾಮ್ರಾಜ್ಯಶಾಹಿ ವಿದ್ವತ್ತಿನಲ್ಲಿ ವ್ಯಾಖ್ಯಾನಿಸಿದ ಫಲ. ಇಂತಹ ಅಭಿಜಾತ ದೌಷ್ಠಿಕತೆಗೆ ಬಡಿಗರಂತಹ ಕುಶಲಕರ್ಮಿ ವರ್ಗಗಳು ಮಖ್ಯವಾಗುವುದಿಲ್ಲ.

ಮರದ ಬಳಕೆ : ಭೂ-ಜೀವಶಾಸ್ತ್ರ

ಪ್ರಾಚೀನ ಭಾರತೀಯ ಅಥವಾ ಕನ್ನಡದ ಯಾವುದೇ ಕಾವ್ಯಗಳನ್ನು ತೆಗೆದುಕೊಂಡರೂ ನಗರ ವರ್ಣನೆ ಮತ್ತು ಪ್ರಕೃತಿ ವರ್ಣನೆ ಸಂದರ್ಭದಲ್ಲಿ ಕವಿ ತರುವ ಗಿಡ, ಮರ, ತರುಲತೆ, ಹಕ್ಕಿಪಕ್ಷಿ, ಗದ್ದೆ, ಬೆಳೆ, ನದಿ, ನೀರು, ಕೆರೆ, ಭತ್ತ, ರಾಗಿ, ಗೋದಿ ಮುಂತಾದ ಪ್ರಾಕೃತಿಕ ವರ್ಣನೆಗಳ ಹಿಂದೆ ದಟ್ಟವಾದ ಪರಿಸರ ಪ್ರಜ್ಞೆ ಇದ್ದಂತೆ ಆರೋಗ್ಯ ಮತ್ತು ಆಯುರ್ವೇದದ ಉದ್ದೇಶಗಳೂ ಇದ್ದವು. ಜೊತೆಗೆ ಅಂತರ್ಜಲ ರಕ್ಷಣೆ ಕ್ಷಾರರಹಿತ ಶುದ್ಧ ನೀರಿನ ಬಳಕೆ, ಸುಗಂಧ ದ್ರವ್ಯಗಳ ತಯಾರಿಕೆ, ಇಮಾರತಿ ನಿರ್ಮಾಣಕ್ಕೂ ಇಲ್ಲಿನ ಗಿಡ ಮರಗಳು ಬಳಕೆಯಾಗುತ್ತಿದ್ದವೆಂದು ಕೃಷಿಪರಾಶರ ಗ್ರಂಥದಲ್ಲಿ ಹೇಳಲಾಗಿದೆ. ಅಂದರೆ ಮರಬಳಕೆಯ ಕುರಿತು ಇಂದಿನ ಸಸ್ಯ ಶಾಸ್ತ್ರೀಯ, ಜೀವಶಾಸ್ತ್ರೀಯ, ಪ್ರಾಣಿಶಾಸ್ತ್ರೀಯ ಹಾಗೂ ಭೂ-ಜೀವಶಾಸ್ತ್ರ (Giobilogy) ಪ್ರಣೀತ ಅಧ್ಯಯನಗಳು ಮಂಡಿಸುವ ಪರಿಸರ ಕಾಳಜಿಯನ್ನು ಪ್ರಾಚೀನ ವಾಸ್ತುಶಾಸ್ತ್ರ ಗ್ರಂಥಗಳು ಹೇಳುತ್ತವೆ.

ಮರ ಜೈವಿಕ ಮೂಲದ ಸಾಮಗ್ರಿಯಾಗಿದೆ. ಅತಿ ಪ್ರಾಚೀನ ಕಾಲದಿಂದಲೂ ಮನುಷ್ಯ ತನ್ನ ದಿನನಿತ್ಯದ ಬಳಕೆಗಾಗಿ, ಕಲಾ ಹಾಗೂ ಅಲಂಕಾರಿಕ ವಸ್ತುಗಳಿಗಾಗಿ ಮರವನ್ನು ಬಳಸುತ್ತ ಬಂದಿದ್ದಾನೆ. ಮರದ ತೊಗಟೆ ಪ್ರಾಚೀನ ಮಾನವನ ಮೊದಲ ಉಡುಪು ಆದಂತೆ ಸಿಂಧೂ ಸಂಸ್ಕೃತಿಯ ಪೂರ್ವದಿಂದಲೇ ಮನೆ, ಮಠ, ಪೀಠೋಪಕರಣಗಳು, ರಥಗಳು, ಬಂಡಿಗಳು, ವಿವಿಧ ರೀತಿಯ ದೇವತಾಮೂರ್ತಿಗಳು, ವಾಹನಗಳು, ರಥಗಳು, ಬಗೆ ಬಗೆಯ ಗೊಂಬೆಗಳು, ಯಂತ್ರಗಳು, ಕೃಷಿ ಪರಿಕರಗಳು, ಕೋಟೆ ಗೋಡೆಗಳ ನಿರ್ಮಿತಿಯಲ್ಲಿ ಮರಮುಟ್ಟುಗಳನ್ನು ಕಲಾತ್ಮಕವಾಗಿ ಬಳಸುತ್ತ ಬರಲಾಗಿದೆ. ಋಗ್ವೇದ, ಬೃಹತ್‌ಸಂಹಿತೆ, ವಿಷ್ಣುಧರ್ಮೋತ್ತರ ಪುರಾಣಗಳಲ್ಲಿ ಬಡಗಿ ಮತ್ತು ಆತ ಮರ ಮುಟ್ಟುಗಳನ್ನು ಬಳಸಿ ತಯಾರಿಸುವ ಸಾಮಗ್ರಿಗಳ ಕುರಿತ ವಿವರಗಳಿವೆ. ಮೌರ್ಯರ ಹೆಚ್ಚಿನ ಕಟ್ಟಡಗಳು ಮರದ ಉತ್ಪನ್ನಗಳೇ ಆಗಿದ್ದವು. ಕಾಷ್ಠಶಿಲ್ಪಿಗಳು (ಬಡಗಿಗಳು) ಇವುಗಳ ನಿರ್ಮಾತೃ ಗಳಾಗಿದ್ದರು.

ಮರ ಭಾರತೀಯರಲ್ಲಿ ದೇವತಾ ಸ್ವರೂಪ ಪಡೆದಿತ್ತು. ತಮಿಳುನಾಡಿನ ಅತ್ಯಂತ ಹಳೆಯ ಗೊಂಬೆಗಳು, ಕೇರಳದ ದೇವತಾಮೂರ್ತಿಗಳು ಮರದವೇ ಆಗಿದ್ದವು. ಸೈಂಧವ ಸಂಸ್ಕೃತಿಯಲ್ಲಿ ಮರದ ಕೊಂಬೆಯೇ ದೇವರಾಗಿತ್ತು. ಮುಂದೆ ಅದೇ ಯಜ್ಞದ ಯೂಪವಾಗಿ ಬದಲಾಗುತ್ತದೆ. ಇಂದಿಗೂ ಹಳ್ಳಿಗಳಲ್ಲಿ ಮಜ್ಜಿಗೆ ಕಡಿಯಲು ನೆಟ್ಟ ಮಜ್ಜಿಗೆ ಕಂಬ ದೇವರೆಂದು ಪೂಜಿಸಲ್ಪಡುತ್ತದೆ. ದೇವರು, ಆಯುರ್ವೇದ, ನಂಬಿಕೆ, ವೈಜ್ಞಾನಿಕತೆ ಹೀಗೆ ಹಲವು ಆಯಾಮಗಳು ಮರದ ಬಳಕೆಯ ಒಂದೆ ಒತ್ತಾಸೆಯಾಗಿ ನಿಂತಿದ್ದವು. ಮರ ಸ್ತ್ರೀ ದೇವತೆಯ ಪ್ರತಿರೂಪವಾಗಿತ್ತು.

ದೇವತಾ ಮೂರ್ತಿಗಳಿಗೆ ಬಳಸುತ್ತಿದ್ದ ಪ್ರಮುಖ ಮರಗಳೆಂದರೆ ಬನ್ನಿ, ಬಾರಿ, ಬೇವು, ಹುಣಸೆ (ಕೆಲಭಾಗಗಳಿಗೆ) ಹೆಬ್ಬೇವು, ಕಗ್ಗಲಿ, ಹಲಸು, ದಿಂಡಿಗ, ರಕ್ತಚಂದನ, ರಕ್ತಗಂಧಿ (ದೇವತೆಯ ಮುಖ ಭಾಗ) ಸಾಗವಾಣಿ, ಮಾವು, ಮಳಿಗೆ, ಕಟ್ಟಿಗೆಗಳನ್ನು ಬಳಸುತ್ತಾರೆ. ಮರಗವ್ವ, ದುರಗವ್ವ ಇಂತಹ ಕೆಳವರ್ಗದ ದೇವತಾ ಶಿಲ್ಪಗಳಿಗೆ ಜಾಲಿಮರ ಬಳಸುವುದು ಕಂಡುಬರುತ್ತದೆ.

ಗೊಂಬೆ ಮತ್ತು ಆಟಿಕೆ ಸಾಮಾನುಗಳು: ಹೆಬ್ಬೇವು, ಕಳ್ಳಿ, ಗೊಬ್ಬಳಿ, ಈಚಲು, ಬೆಳ್ಳಿ, ಕಿತ್ತಾಳೆ, ಚಂಡರಿಕೆ, ಹುಣಸೆ, ಬೆಬ್ಬಲಿ, ಹಲಸು ಹುರುಗಲ, ಸಾಗವಾಣಿ ಮುಂತಾದ ಮರಗಳನ್ನು ಬಳಸುತ್ತಿದ್ದರು.

ದೇವತಾ ವಾಹನ ಮತ್ತು ರಥಗಳು: ಹೆಬ್ಬೇವು, ಮತ್ತಿ, ಹೊನ್ನಿ, ಶ್ರೀಗಂಧ, ರಕ್ತ ಹೊನ್ನಿ, ದಿಂಡಲ, ಬಾರಿ, ಹಲಸು, ಜೇವು, ಕರಿಜಾಲಿ, ಬಿಳಿಜಾಲಿ, ಗೊಬ್ಬಳಿ, ಹೊಂಗೆ, ಮಡ್ಡಿ, ನಂದಿ, ಬಿದಿರು, ಕಗ್ಗಲಿ ಮರ ಬಳಸುತ್ತಿದ್ದರು.

ಪೂಜಾ ಸಾಮಗ್ರಿಗಳು: ಪಲ್ಲಕ್ಕಿ, ವಿಭೂತಿ, ಕರಂಡಕಗಳಿಗೆ ಜಾಲಿ, ಬಾರಿ, ಬೇವು, ಶ್ರೀಗಂಧ, ಹಲಸು, ಕರಿಮತ್ತಿ, ದಿಂಡಿಗ, ಮಾವು, ಬೇವು ಬಳಸುತ್ತಿದ್ದರು.

ಕಟ್ಟಡ ನಿರ್ಮಾಣ: ಜಾಲಿ, ಬೇವು, ಬಾರಿ, ಬನ್ನಿ, ಹಲಸು, ಸಾಗವಾಣಿ, ಬೀಟಿ, ಅತ್ತಿ, ರೋಜ್‌ವುಡ್, ಸಾಲುಡ್ ಇತ್ಯಾದಿ ಬಳಸುತ್ತಾರೆ.

ಕೃಷಿ ಉಪಕರಣಗಳು: ಜಾಲಿ, ಕರಿಜಾಲಿ, ಬಿಳಿಜಾಲಿ, ಬೇವು, ಬಾರಿ, ಗೋವಿನಮರ ಇತ್ಯಾದಿ.

ಯಜ್ಞಪರಿಕರಗಳು: ಖದಿರ, ಪಲಾಶ(ಮುತ್ತುಗ), ಬಿಲ್ವ(ಯೂಪಗಳು), ಶಮಿ, ಔದುಂಬರ(ರಥಚಕ್ರ), ಖಾದಿರ(ಕಗ್ಗಲಿ), ಖರ್ಜೂರ, ವೈಕಂಕಟ, ಭೂರ್ಜ, ಅರ್ಕ, ಕಾಷ್ಮರ್ಯ, ವ್ಯಗ್ರೋದ ವೃಕ್ಷ (ಆಲದ ಮರ), ರೌಹೀತಕ, ವಾರಣ ಹೀಗೆ ಅಗತ್ಯ, ಅನುಕೂಲ ಮತ್ತು ಪ್ರಾದೇಶಿಕತೆ ಹಿನ್ನೆಲೆಯಲ್ಲಿ ವಿವಿಧ ಮರದ ಬಳಕೆ ಆಗಿದ್ದನ್ನು ಗುರುತಿಸಬಹುದು.

ಮರದ ಆಯ್ಕೆ ಮತ್ತು ತರುವ ಪದ್ಧತಿ

ಯಜ್ಞಕಾರ್ಯ ಮತ್ತು ಸಲಕರಣೆಗಳಿಗೆ ಬಳಸುವ ಮರಗಳನ್ನು ಯಜಮಾನನ ಉದ್ದೇಶಿತ ಕಾರ್ಯಗಳನ್ನು ಅನುಲಕ್ಷಿಸಿ ಆಯ್ಕೆ ಮಾಡಿ ತರಲಾಗುತ್ತಿತ್ತು. ಯೂಪ ಅಥವಾ ಯಜ್ಞ ಸಾಮಗ್ರಿಗಳಿಗೆ ಬೇಕಾದ ಮರಗಳನ್ನು ತರಲು ಬಡಿಗನೇ ನಿರ್ದಿಷ್ಟ ದಿನ ಮತ್ತು ಮೂಹೂರ್ತದಲ್ಲಿ ಪೂರ್ವ ಅಥವಾ ಉತ್ತರಾಭಿಮುಖವಾಗಿ ಕಾಡಿಗೆ ಹೋಗುತ್ತಿದ್ದನು. ಕಡಿಯುವ ಮರವನ್ನು ಮೊದಲು ಗಾರ್ಹಪತ್ಯಾಗ್ನಿಯಲ್ಲಿ ಯೂಪಾಹುತಿಗಳನ್ನು ಅರ್ಪಿಸಿದ ನಂತರ ಯೂಪಸ್ಥಂಬದ ಬುಡವನ್ನು ಕೊಡಲಿಯಿಂದ ಕತ್ತರಿಸಲಾಗುತ್ತಿತ್ತು. ಹೀಗೆ ಮರ ಕಡಿಯುವಾಗ ಬಂದ ಮೊದಲ ಚಿಕ್ಕೆಯನ್ನು 'ಸ್ಫರು' ಎನ್ನುತ್ತಾರೆ. ಅದನ್ನು ಎಲೆಯ ಪೊರೆಯ ರಕ್ಷಣೆಯಲ್ಲಿ ಹಿಡಿದು ಹವಿಸ್ಸನ್ನು ಬುಡದ ಮೇಲೆ ಹಾಕಿ ಯೂಪದ ಮರದ ಕೊಂಬೆಗಳನ್ನು ಕತ್ತರಿಸುವಂತೆ ನಟಿಸುತ್ತ ಯೂಪದ ಸ್ಥಂಭವನ್ನು ಅರತ್ನಿಗಳಲ್ಲಿ(ಎದರೆ ೨೪ ಅಂಗಗಳು) ಅಳೆದು ಕತ್ತರಿಸಿ ತರುತ್ತಿದ್ದನು.

ಯಜಮಾನನ ಉದ್ದೇಶಕ್ಕೆ ತಕ್ಕಂತೆ ಯೂಪಕ್ಕೆ ಬೇಕಾದ ಮರವನ್ನು ಆಯ್ಕೆ ಮಾಡಲಾಗುತ್ತಿತ್ತು. 'ಪುಷ್ಟಿಯನ್ನು ಕೇಳುವಾಗ ಪಲಾಶ' ಮರ(ಮುತ್ತುಗ), ಬ್ರಹ್ಮ ವರ್ಚಸ್ಸು ಕೋರುವಾಗ ಬಿಲ್ವಮರ, ಅನ್ನ ಬಯಸಿದಾಗ ಔದುಂಬರ(ಅತ್ತಿ), ಬಲ ಇಚ್ಚಿಸಿದಾಗ ಖಾದಿರ (ಕಗ್ಗಲಿ) ಸೋದರರ ಸುಖ ಬಯಸುವಾಗ ವಿಭಿತಕ ಮತ್ತು ರಾಜಪ್ರಕ್ಷ, ಯಶಸ್ಸು ಬಯಸುವಾಗ ಕ್ರಮಕ(ಅಡಿಕೆಮರ) ಮತ್ತು ಅಶ್ವತ ಮರದಿಂದ ಯೂಪ ತಯಾರಿಸಲಾಗುತ್ತದೆ. ಯೂಪಕ್ಕೆ ಮರದ ಜಾತಿ ಮಾತ್ರವೇ ಅಲ್ಲದೆ ಮರದ ಸ್ಥಿತಿಯನ್ನು ಪರಿಗಣಿಸಲಾಗುತ್ತದೆ. ಯೂಪಕ್ಕೆ ಆಯ್ಕೆ ಮಾಡುವ ಮರವು ಹಲವು ರೆಂಬೆ ಕೊಂಬೆಗಳನ್ನು ಹೊಂದಿರಬೇಕು. ಅದರ ತುದಿ ಕತ್ತರಿಸಬಾರದು, ಮುರುದಿರಬಾರದು, ಬಾಗಿರಬಾರದು, ಕಾಂಡ ಟೊಳ್ಳಾಗಿರಬಾರದು, ಮತ್ತೊಂದು ಮರಕ್ಕೆ ಆಶ್ರಯಿಸಿ ಬೆಳೆದಿರಬಾರದು, ನೇರವಾಗಿ ಬೆಳೆದಿರಬೇಕು. ಕೊಂಬೆಗಳು ಮೇಲ್ಮುಖವಾಗಿದ್ದು ಈಶಾನ್ಯ, ಪೂರ್ವ ಪಶ್ಚಿಮಕ್ಕೆ ಅದರ ಗರಿಗಳು ತಿರುಗಿರಬೇಕು, ಗೂನಾಗಿರುವ, ಗಂಟಾಗಿರುವ, ಮೊಂಡಾದ, ಸುಟ್ಟುಹೋದ, ಸಿಡಿಲು ಬಡಿದ, ಒಣಗಿರುವ, ರಂಧ್ರಗಳಿರುವ, ಹುಳು ಹುಪ್ಪಟೆಗಳು ತೂತು ಕೊರೆದಿರುವ ಮರವನ್ನು ಬಳಸಬಾರದು. ಅರುಣಿ, ಸೌಟು ಮುಂತಾದ ಯಜ್ಞ ಸಲಕರಣೆಗಳಿಗೆ ಬಳಸುವ ಬನ್ನಿ, ಅರಳಿ ಮರಗಳು, ಸ್ವತಂತ್ರವಾಗಿ ಬೆಳೆದಿರಬೇಕು. ಸಿಡಿಲು ಬಡಿದಿರಬಾರದು, ಬಿರುಗಾಳಿಯಿಂದ ನಾಶವಾಗಿರಬಾರದು, ಕಾಡಿನ ಬೆಂಕಿ ತಗುಲಿರಬಾರದು, ತುಂಬಾ ಹಳೆಯದಾಗಿರಬಾರದು, ಒಣಗಿರಬಾರದು, ಹಕ್ಕಿಗಳು ಗೂಡು ಕಟ್ಟಿರಬಾರದು ಎನ್ನುವ ನಿಯಮಗಳು ವಾಸ್ತುಶಾಸ್ತ್ರದಲ್ಲಿವೆ.

CamScanner

ದೇವತಾ ಮೂರ್ತಿಗಳು ಅವುಗಳ ವಾಹನ, ಪಲ್ಲಕ್ಕಿಗಳು, ಕೃಷಿ ಉಪಕರಣಗಳು, ಕಟ್ಟಡ ನಿರ್ಮಾಣ, ಗೃಹೋಪಯೋಗಿ ಸಲಕರಣೆಗಳು ಮುಂತಾದ ಅಗತ್ಯಗಳಿಗೆ ಬಳಸುವ ಮರಗಳನ್ನು ತರಲು ಅವುಗಳದೇ ಆದ ಸಂಪ್ರದಾಯ, ನಂಬಿಕೆ ಮತ್ತು ಆಚರಣೆಗಳಿವೆ.

ದ್ಯಾಮವ್ವನ ಮೂರ್ತಿ ಮಾಡಲು ಮಂಗಳವಾರ ಅಥವಾ ಶುಕ್ರವಾರ ಸೂರ್ಯೋದಯದೊಂದಿಗೆ ಸ್ನಾನ ಮಾಡಿ ಶುಚಿರ್ಭೂತರಾಗಿ ಬಡಿಗರು ಕಾಡಿಗೆ ಹೋಗುತ್ತಾರೆ. ಅಲ್ಲಿ ಮೂರ್ತಿಗೆ ತಕ್ಕ ಮರವನ್ನು ಹುಡುಕಿ 'ನಾನು ನಿನ್ನನ್ನು ಇಂತಹ ಕೆಲಸಕ್ಕೆ ಕಡಿದುಕೊಂಡು ಹೋಗುತ್ತೇನೆ ಕ್ಷಮಿಸು' ಎಂದು ಪೂಜಿಸಿ ಮರವನ್ನು ಕೊಡಲಿ ಅಥವಾ ದಾಟಿಯಿಂದ ಕಡಿಯುತ್ತಾರೆ. ಬಂಡಿಯಲ್ಲಿ ಹೇರಿಕೊಂಡು ಊದಿಸುತ್ತ ಬಾರಿಸುತ್ತ ಮೆರವಣಿಗೆಯೊಂದಿಗೆ ದ್ಯಾಮವ್ವನನ್ನು ಮಾಡುವ ಬಡಿಗನ ಮನೆಗೆ ತಂದು ಇಳಿಸುತ್ತಾರೆ. ಮತ್ತೊಂದು ದಿನ ಶುಭ ಲಕ್ಷಣದಲ್ಲಿ ಬಡಿಗ ತನ್ನ ಸಹಾಯಕರೊಂದಿಗೆ ಊರ ಪಂಚರ ಸಮ್ಮುಖದಲ್ಲಿ ಕೆಲಸ ಆರಂಭಿಸುತ್ತಾನೆ. ಈ ಪ್ರಕ್ರಿಯೆ ಸುಮಾರು ಒಂದರಿಂದ ಎರಡು ತಿಂಗಳವರೆಗೆ ನಡೆಯುತ್ತದೆ.

ದ್ಯಾಮವ್ವನ ಶಿಲ್ಪವನ್ನು ಬಿಡಿಬಿಡಿಯಾಗಿ ಅಳತೆಗೆ ಅನುಸಾರ ಕೆತ್ತುತ್ತಾರೆ. ಮುಂಡ, ಕೈ, ಕಾಲುಗಳನ್ನು ಸಾಮಾನ್ಯವಾಗಿ ಬೇವಿನ ಮರ ಅಥವಾ ಹೆಬ್ಬೇವಿನ ಮರದಿಂದ ಮಾಡಿದರೆ, ರುಂಡವನ್ನು 'ರಕ್ತಗಂಧಿ' ಮರದಿಂದ ಮಾಡಿ ನಂತರ ಅವುಗಳನ್ನು ಒಂದೊಂದಾಗಿ ಜೋಡಿಸುತ್ತಾರೆ. ಈ ಜೋಡಣೆಯನ್ನು ಮೂರು ರೀತಿಯಲ್ಲಿ ಗುರುತಿಸಲಾಗುತ್ತದೆ.

೧. **ಕೀಲು ಜೋಡಣೆ:** ತೋಳು ಮತ್ತು ಮುಂಡ, ತೊಡೆ ಮತ್ತು ಜಂಗ, ಜಂಗ ಮತ್ತು ಪಾದ ಇವುಗಳನ್ನು ಕೀಲು ಜೋಡಣೆಯಿಂದ ಹೊಂದಿಸಲಾಗುತ್ತದೆ.

೨. **ಕೂಲು ಜೋಡಣೆ:** ಕುತ್ತಿಗೆ ಮತ್ತು ಮುಂಡ, ಮುಂಡ ಮತ್ತು ತೋಳು, ಮುಂಡ ಮತ್ತು ಪೀಠ ಇವುಗಳನ್ನು ಕೂಲು ಜೋಡಣೆಯಿಂದ ಜೋಡಿಸುತ್ತಾರೆ.

೩. **ಕತ್ತರಿ ಜೋಡಣೆ:** ಕೀಲು ಮತ್ತು ಕೂಲು ಜೋಡಣೆ ಇವೆರಡೂ ಕತ್ತರಿ ಜೋಡಣೆ (ಒಂದಕ್ಕೊಂದು ಅಪ್ಪಿಗೆ ಹಾಕುವುದು)ಯಲ್ಲಿ ಸಮಾವೇಶಗೊಳ್ಳುತ್ತವೆ. ನಂತರ ಜನಗಾರರು, ಒಮ್ಮೊಮ್ಮೆ ಬಡಿಗ ಪತ್ತಾರರೇ ಬಣ್ಣ ಮಾಡಿ ಪ್ರತಿಷ್ಠಾಪಿಸುತ್ತಾರೆ. ಹೀಗೆ ಬಣ್ಣ ಮಾಡುವವರನ್ನು ಕೆಲವು ಪ್ರದೇಶಗಳಲ್ಲಿ 'ಬಣ್ಣದ ಬಡಿಗೇರರು' ಎಂದು ಕರೆಯುತ್ತಾರೆ. ಇವರು ದ್ಯಾಮವ್ವ, ದುರಗವ್ವರನ್ನು ಕಟ್ಟಿಗೆಯಲ್ಲಿ ತಯಾರು ಮಾಡಿ ಬಣ್ಣ ಹಚ್ಚುವುದರಲ್ಲಿ ನಿಸ್ಸೀಮರಾಗಿದ್ದರು. ದೈತ್ಯರೊಂದಿಗೆ ಯುದ್ಧ ಮಾಡಿ ಬರುವ ಶಕ್ತಿದೇವಿ ಬಡಿಗನ ಕನಸಲ್ಲಿ ಬಂದು ಯುದ್ಧದಲ್ಲಿ ಇಂತಿಂಥ ಭಾಗದಲ್ಲಿ ಇಂತಿಂಥ ಬಣ್ಣ ಕುಂದಿದೆ, ಅದಕ್ಕೆ ಹೊಸ ಬಣ್ಣ ಹಚ್ಚಲು ಹೇಳುತ್ತಾಳೆನ್ನುವ ಪ್ರತೀತಿ ಇದೆ. ಕಟ್ಟಡ ನಿರ್ಮಾಣಕ್ಕೆ ಬೇಕಾದ ಮರಗಳನ್ನು ತರಲು ಮತ್ತೊಂದು ರೀತಿ ಆಚರಣೆ ಮತ್ತು ಸಂಪ್ರದಾಯಗಳಿವೆ.

ಮರ ಕಡಿವ ವಿಧಾನಗಳು

ಬೃಹತ್ ಸಂಹಿತೆ ಮತ್ತು ಶಿಲ್ಪಶಾಸ್ತ್ರ ಕೃತಿಗಳಲ್ಲಿ ಮರ ಕಡಿಯುವ, ವಿಧಾನ ಮತ್ತು ಯಾವ ಯಾವ ಶಿಲ್ಪಗಳಿಗೆ ಎಂಥ ಕಟ್ಟಿಗೆಗಳನ್ನು ಬಳಸಬೇಕೆನ್ನುವ ವಿವರಗಳಿವೆ.

ಸನತ್ಕುಮಾರ ಮತ್ತು *ವಿಶ್ವಕರ್ಮ ಸಂಪ್ರದಾಯದ ವಾಸ್ತುಶಾಸ್ತ್ರ* ಕೃತಿಗಳಲ್ಲಿ 'ಮನೆಗೆ ಮರ ಕಡಿವ ಲಕ್ಷಣ' ಎನ್ನುವ ಪ್ರತ್ಯೇಕ ಅಧ್ಯಾಯವಿದೆ. ಇದರಲ್ಲಿ ಮನೆಗೆ ಯಾವ ಜಾತಿಯ ಮರ ಬಳಸಬೇಕು, ಎಂಥ ಮರ ಕಡಿಯಬೇಕು, ಹೇಗೆ ಕಡಿಯಬೇಕು ಎನ್ನುವ ಸಂಗತಿಗಳನ್ನು ಶುಂಬ ಸೊಗಸಾಗಿ ವಿವರಿಸಲಾಗಿದೆ.

ನಕ್ಷತ್ರ ಧೃತ್ಯವರ್ಗಂಚ ಪೂಜಯಿತ್ವಾತಯಂಥಾವಿಧಿಂ
ಇಷ್ಟದೈವಂ ಪಿತೃದೇವಾನ್ ಗಣಪತಿಂ ರವಿಂನಾಗಂ
ಚಂದ್ರಮುಖ್ಯಚನಂಗಂ। ಧೃತಿ ಪುಷ್ಪಂ ನೈವೇದ್ಯರಕ್ಷಿಪಂ।

ಮರ ಕಡಿಯುವ ಮೊದಲು ಮನೆ ನಿರ್ಮಿತಿಯ ಜವಾಬ್ದಾರಿ ಹೊತ್ತ ಬಡಗಿಯನ್ನು, ಜೋಯಿಷರನ್ನು ಮತ್ತು ಇಷ್ಟ ದೇವರುಗಳನ್ನು, ನಾಗರನ್ನು, ಗಣಪತಿಯನ್ನು, ಸೂರ್ಯ ಮತ್ತು ಚಂದ್ರರನ್ನು, ಪುಷ್ಪ ದೀಪ ಧೂಪ ನೈವೇದ್ಯಗಳಿಂದ

ಪೂಜೆ ಮಾಡಬೇಕು. ನಂತರ ಪಡುವ ಜಾವದ ಹೊತ್ತಿಗೆ ಮನೆಯ ಯಜಮಾನನನ್ನು ಮರ ಕಡಿಯಲು ಕಳಿಸಬೇಕು ಎಂಬುದು ನಿಯಮ.

ಮೇಲ್ಕಾಣಿಸಿದ ಪದ್ಯದಲ್ಲಿ ಉಲ್ಲೇಖಗೊಂಡ ದೇವತೆಗಳೆಲ್ಲರೂ ನಿಸರ್ಗ ಸಮ್ಮಿತವಾದಂಥ ದೇವತೆಗಳು. ನಿಸರ್ಗದ ಚಲನವಲನಗಳಿಗೆ ಒಂದಿಲ್ಲೊಂದು ರೀತಿ ಸಂಬಂಧಿಸಿದವರು. ಇವರ್ಯಾರು ನಾಡದೇವತೆಗಳಲ್ಲ. ಇನ್ನು ಬಡಗಿ ಮತ್ತು ಜೋಯಿಷರು ಮನೆಯ ತಾಂತ್ರಿಕ ಕೆಲಸಗಳ ನಿಯಾಮಕರು. ನಿಸರ್ಗದ ಕ್ರಿಯಾಶೀಲ ಮಗ್ಗುಲುಗಳನ್ನು ಇಲ್ಲಿನ ಪ್ರತಿಯೊಂದು ವಸ್ತುವು ಸಂಕೇತಿಸುತ್ತದೆ. ಇನ್ನು ಮನೆಯ ಯಜಮಾನನೇ ಗಿಡ ಕಡಿಯಲು ಹೋಗಬೇಕೆನ್ನುವ ಮಾತು ಮುಖ್ಯವಾದುದು.

ವಾಸ್ತುಶಾಸ್ತ್ರದ ಪ್ರಧಾನ ಕಾಳಜಿ ಎಂದರೆ ಮನೆ ನಿರ್ಮಾಣದಲ್ಲಿ ಮನೆಯ ಯಜಮಾನನನ್ನು ಕೇಂದ್ರವಾಗಿಸಬೇಕೆನ್ನುವುದು. ಮನೆಯ ಆಯವ್ಯಯವನ್ನು ಮಾಲೀಕನ ಬಲಗೈ ಅಳತೆಯಿಂದ ನಿರ್ಧರಿಸಲಾಗುತ್ತದೆ. 'ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು' ಎನ್ನುವ ಜನಪದ ಗಾದೆಯಂತೆ ಮಾಲೀಕನ ಆರ್ಥಿಕ ಹಾಗೂ ಕೌಟುಂಬಿಕ ಶಕ್ತ್ಯಾನುಸಾರ ಆತನ ವಾಸದ ಮನೆಯನ್ನು ನಿರ್ಮಿಸಬೇಕೆಂದು ವಾಸ್ತುಶಾಸ್ತ್ರ ಹೇಳುತ್ತದೆ. ಅಂದರೆ ಮನೆ ನಿರ್ಮಾಣ ಎನ್ನುವುದು ಯಾರೋ ಹೇಗೋ ಕಟ್ಟಿ ನಿಲ್ಲಿಸುವ ನಿರ್ಭಾವುಕ ಕಟ್ಟಡವಲ್ಲ. ಅದು ಆ ಯಜಮಾನನ ಆರ್ಥಿಕ ಹಾಗೂ ಕೌಟುಂಬಿಕ ಸ್ಥಿತಿಗಳ ಮೇಲೆ ನಿರ್ಮಾಣವಾಗುವ ಭಾವನಾತ್ಮಕ ಹಾಗೂ ಜೀವಂತ ಸದನ ಎನ್ನುವುದು ಎಲ್ಲ ವಾಸ್ತುಶಾಸ್ತ್ರ ಕೃತಿಗಳ ತಿಳುವಳಿಕೆ ಯಾಗಿದೆ. ವಾಸ್ತು, ಪೂಜೆ, ಪುನಸ್ಕಾರಗಳ ಹೆಸರಲ್ಲಿ ಮನುಷ್ಯನನ್ನು ಅಜ್ಞಾನದ ಕೂಪಕ್ಕೆ ತಳ್ಳುವುದನ್ನು ಯಾವ ಶಾಸ್ತ್ರವೂ ಹೇಳಿಲ್ಲ.

ಆಯುಧಗಳ ಬಳಕೆಯ ರೀತಿ

ಪೂಜೆಗೊಂಡ ಮರವನ್ನು ಕಡಿಯುವ ರೀತಿ, ಬಳಸುವ ಆಯುಧಗಳು, ಅದರ ವಿಧಾನಗಳು ಇಂದಿನ ನಾಗರಿಕ ಬದುಕಿಗೆ ಒಳ್ಳೆಯ ನೀತಿ ಪಾಠಗಳಾಗಿವೆ.

ಪ್ರಾತರುತ್ಥಾಯತಂ ವೃಕ್ಷಂ ಜಲಸಂಪ್ರೋಕ್ಷ್ಯಪೂರ್ವತಃ।
ಜತ್ರಾಗಗತಂ ಮನಿನಾಂನಾ। ಮಧ್ಯಭ್ಯುಂವಿತೀಪಯೇತ್
ತದಕೂರವದಾತ್ರಶ್ಚ ದ್ವೈಕ್ಷಾಣಾ ಮನಂತರಂ
ಪ್ರದಕ್ಷಿಣಂ ಚಾವಧಾನಂ ತತ್ಪ್ರಣಾಗಚ್ಛಂಯದೇವಪ್ರಿಯಂ

ಕಡಿಯಲು ನಿರ್ಧರಿಸಿದ ಮರನ ಉದಯದಲೆದ್ದು ಆ ಮರದ ಮೂಡಲು ಬಡಗಲು ಹರಿದ ಬೇರುಗಳಿಗೆ ಉದಕವಂ ತಳೆದು ಜೇನುತುಪ್ಪವನ್ನು ತೊಡೆಯಬೇಕು. ನಂತರ ಮರ ಕಡಿವ ಕೊಡಲಿ ಅಥವಾ ಬಾಚಿಗಳನ್ನು ಉದಕದಿಂದ ತೊಳೆದು ಜೇನುತುಪ್ಪವನ್ನು ತೊಡೆದು ಅವುಗಳ ಸಮೇತ ಮರಕ್ಕೆ ಪ್ರದಕ್ಷಿಣೆ ಹಾಕಬೇಕು. ನಂತರ ಮನಸ್ಸು ಬಂದ ಕಡೆ ಹೋಗಬೇಕು. ಆ ಮೇಲೆ ಕೃಷ್ಣ ಪಕ್ಷದ ತಿಥಿಯಲ್ಲಿ, ಪಂಚಮಿ, ನವಮಿ ಅಥವಾ ರೋಹಿಣಿ ನಕ್ಷತ್ರದಲ್ಲಿ ಮರ ಕಡಿಯಬೇಕು. ಕಾರಣ ಕಡಿದ ಹೂ, ಬಳ್ಳಿ ಮರ ಹುಳಿಯಲಾರದು.

ರಥಶಿಲ್ಪದ ಪ್ರಕಾರ ಈ ಎಲ್ಲಾ ನಿಯಮಗಳನ್ನು ಅನುಸರಿಸಿ ಮರದ ಆಯ್ಕೆ ಮಾಡಿದ ನಂತರ ಬಡಿಗ ಮರದಲ್ಲಿ ಆಶ್ರಯಿಸಿದ ಭೂತ ಪಿಶಾಚಿ ಪ್ರೇತಾದಿಗಳಿಗೆ ತಮ್ಮ ನಿವಾಸವನ್ನು ಬದಲಿಸಬೇಕೆಂದು ಭಕ್ತಿಯಿಂದ ಪ್ರಾರ್ಥಿಸಬೇಕು. ಬಡಿಗ ಆ ರಾತ್ರಿ ಮರದ ಕೆಳಗೆ ಮಲಗಬೇಕು. ರಾತ್ರಿಯಲ್ಲಿ ಅವನಿಗೆ ದುಃಸ್ವಪ್ನ ಬಿದ್ದರೆ ಆ ಮರವನ್ನು ಕಡಿಯುವಂತಿಲ್ಲ. ಶುಭ ಸ್ವಪ್ನ ಬಿದ್ದರೆ ಆ ಮರವನ್ನು ಕಡಿಯಬೇಕು. ಈ ಕಟ್ಟಿಗೆ ಮೀಸಲು ಕಟ್ಟಿಗೆಯಾಗಿರಬೇಕು. ಅವು ಎಳೆಯ ಮರವಾಗಿರದೆ ತೀರ ಹಳೆಯವೂ ಆಗಿರದೆ ಸುಮಾರು ನಲವತ್ತರಿಂದ ಐವತ್ತು ವರ್ಷ ವಯಸ್ಸಿನ ಮರಗಳಾಗಿರಬೇಕು. ಅವು ರಥಶಿಲ್ಪಕ್ಕೆ ಹೆಚ್ಚು ಪ್ರಶಸ್ತವೆನಿಸುತ್ತವೆ. ಕಡಿಯುವ ಸಂದರ್ಭದಲ್ಲಿ ಮರ ಮೂರ್ವ ಇಲ್ಲವೆ ಉತ್ತರಕ್ಕೆ ಉರುಳಿಬಿದ್ದರೆ ಹೆಚ್ಚು ಉಪಯುಕ್ತ ಎನ್ನುವುದು ವಿಷ್ಣು ಮರಾಣದ ಅಭಿಪ್ರಾಯ.

CamScanner

ಮರ ಕಡಿವ ಆಯುಧಗಳ ಬಾಯಿಗೆ ಹಾಲು, ತುಪ್ಪ, ಜೇನು ಸವರುವ ವಿಧಾನಗಳು ತುಂಬಾ ವೈಜ್ಞಾನಿಕವಾದಂಥವು. ಮನೆಗೆ ಮರವ ಕಡಿಯಬೇಕಾದರೆ ಮೊದಲು ಮರದ ಹತ್ತಿರ ಹೋಗಿ ಹಾಲು ಜೇನುತುಪ್ಪ ಎರೆದು ಆಹ್ವಾನ ನೀಡಿ ಸಕಲ ದೇವತೆಗಳನ್ನು ನೆನೆದು 'ಮರದ ಕ್ಷಮೆ ಕೋರಿ' ಬರಬೇಕು. ಬಂದ ಮೇಲೆ ಮರ ಕಡಿಯುವ ಕೊಡಲಿ ಮತ್ತು ದಾಚಿಗಳಿಗೆ ಉದಕವ ತಳೆದು ಜೇನುತುಪ್ಪವ ತೊಡೆದು ಕಡಿದರೆ ಮರ ಹದವಾಗಿ ಹರಿಯುವುದಲ್ಲದೆ ಅದು ಹುಳಿಯದು ಮತ್ತು ಹುಳ ಹತ್ತದು. ಈ ವಿವರ ನಿಸರ್ಗಕೂ ಜೀವವಿದೆ, ಅದರ ಬಳಕೆ ಮಾನವೀಯತೆಯಿಂದ ನಡೆಯಬೇಕು ಎನ್ನುವ ಜೀವಪರ ನಿಲುವನ್ನು ತೋರುತ್ತದೆ. ಬಯೋಲಾಜಿಕಲ್ ಮತ್ತು ಬಟ್ಯಾನಿಕಲ್ ಆದಂಥ ಇಂತಹ ಸಂಗತಿಗಳು ನಮ್ಮ ವಾಸ್ತುಶಾಸ್ತ್ರದಂತಹ ಪಾರಂಪರಿಕ ಶಾಸ್ತ್ರ ಗ್ರಂಥಗಳಲ್ಲಿ ಅಡಗಿರುವುದು ವಿಶೇಷವಾಗಿದೆ.

ಇಂದಿಗೂ ಉತ್ತರ ಕರ್ನಾಟಕದ ಭಾಗಗಳಲ್ಲಿ ಇಂಥ ಪದ್ಧತಿಗಳು ಚಾಲ್ತಿಯಲ್ಲಿವೆ. ಹಿಂಗಾರಿ ಬೆಳೆಗಳನ್ನು ಕೊಯ್ಲು ಮಾಡುವಾಗ ಬೆಳೆ ಕೊಯ್ಯಲು ಬಳಸುವ ಕುಡುಗೋಲುಗಳನ್ನು ಚೆನ್ನಾಗಿ ಮಸೆದು ಅವುಗಳಿಗೆ ಬೆಣ್ಣೆ ಅಥವಾ ತುಪ್ಪ ಆಥವಾ ಜೇನು ಸವರಿ ಇಟ್ಟು, ನಂತರ ಕೊಯ್ಯಲು ಬಳಸುತ್ತಾರೆ. ವರ್ಷದುದ್ದಕ್ಕೂ ಬಳಕೆಯಾಗದೆ ತುಕ್ಕು ಹಿಡಿದಿದ್ದ ಆಯುಧಗಳಿಂದ ಬೆಳೆ ಕೊಯ್ದರೆ ಬೆಳೆಗೆ ನಂಜೇರುವುದಲ್ಲದೆ ಅದನ್ನು 'ಹೊಟ್ಟು' ಕಣಿಕಿ ರೂಪದಲ್ಲಿ ತಿನ್ನುವ ದನಗಳಿಗೆ ಅನಾರೋಗ್ಯದಂಥ ಅಪಾಯಗಳು ಬರುತ್ತದೆ ಎನ್ನುವ ತಿಳುವಳಿಕೆಯಿತ್ತು.

ಬೆಳೆ, ದನ, ಮನುಷ್ಯ, ಪರಿಸರದ ಪರಸ್ಪರ ಅವಲಂಬನೆ ಮತ್ತು ಅನ್ಯೋನ್ಯತೆಗಳನ್ನು ಪೂಜಾ ಪದ್ಧತಿಗಳಲ್ಲಿ ಕಾಣಬಹುದು. ಬೆಳೆಗೆ ಅಥವಾ ಮರಕ್ಕೆ 'ನಂಜೇರುತ್ತದೆ' ಎನ್ನುವ ಗ್ರಾಮೀಣ ಜನರ ಪ್ರತ್ಯಕ್ಷಾನುಭವವೇ ಎಷ್ಟೊಂದು ವೈಜ್ಞಾನಿಕವಾದದ್ದು. ಇಂದಿನ ಜೀವಶಾಸ್ತ್ರೀಯ, ಸಸ್ಯಶಾಸ್ತ್ರೀಯ ಹಾಗೂ ಪ್ರಾಣಿಶಾಸ್ತ್ರೀಯ ಅಧ್ಯಯನಗಳು ಮಂಡಿಸುವ ಪ್ರಮೇಯಗಳನ್ನು ವಾಸ್ತುಶಾಸ್ತ್ರದ ಈ ಕೃತಿಗಳು ನೂರಾರು ವರ್ಷಗಳ ಹಿಂದೆಯೇ ಕಟ್ಟಿಕೊಟ್ಟಿವೆ. ಇಂತಹ ಸಂಗತಿಗಳು ವೈಜ್ಞಾನಿಕ ಅಧ್ಯಯನಗಳ ಮೊದಲ ಪ್ರಮೇಯಗಳಾಗಬೇಕಾಗಿದೆ. ಶುಷ್ಕ ವೈಜ್ಞಾನಿಕತೆಯ ನೆಪದಲ್ಲಿ ಬ್ರಿಟಿಷ್ ಪ್ರಣೀತ ನಿರ್ಧಾವುಕ ಶೋಧಗಳ ಅವಲಂಬನೆಯಲ್ಲಿ ಸ್ಥಳೀಯ ಜೀವವೈವಿಧ್ಯತೆಗಳನ್ನು ಅಧ್ಯಯನಿಸುವ ನಮ್ಮ ಅಕಾಡೆಮಿಕ್ ಪ್ರಜ್ಞೆಗಳಿಗೆ ಇಂಥ ಜೈವಿಕ ಸತ್ಯಗಳು ಸವಾಲುಗಳಾಗಿವೆ.

ಇಂದು ಮನುಷ್ಯ ತನ್ನ ಉಪಭೋಗಕ್ಕಾಗಿ ಕಾಡನ್ನೇ ಸರ್ವನಾಶ ಮಾಡುತ್ತಿದ್ದಾನೆ. ಎಲ್ಲೆಂದರಲ್ಲಿ ನಿಸರ್ಗದ ಮೇಲೆ ಹಲ್ಲೆಗೈದು ಜೀವವೈವಿಧ್ಯಕ್ಕೆ ಸಂಚಕಾರ ತಂದಿದ್ದಾನೆ. ಬಳಕೆಯ ಯೋಗ್ಯ ಮರವನ್ನು ಅನುನಯದಿಂದ ಬಳಸಿಕೊಳ್ಳುವ ಮನುಷ್ಯ ಒಲವಿಗೂ ನಿಸರ್ಗವನ್ನು ಪೂಜಿಸಿ, ಆರಾಧಿಸಿ ಒಲಿಸಿಕೊಂಡು ಬದುಕುವ ದೇಸೀ ಬದುಕಿನ ಜೀವಪರ ಕಾಳಜಿಗಳಿಗೂ ನಿಸರ್ಗವನ್ನು ಒತ್ತಾಯವಾಗಿ ವಶಪಡಿಸಿಕೊಳ್ಳುವ ಆಧುನಿಕ ಮಾನವನ ರಾಕ್ಷಸಿತನಗಳಿಗೂ ಇರುವ ವ್ಯತ್ಯಾಸವನ್ನು ಇಂಥಲ್ಲಿ ಕಾಣಬಹುದು.

ದೇಸೀ ಜೀವಶಾಸ್ತ್ರದ ಪರಮೋಚ್ಚ ಪ್ರಜ್ಞೆಯನ್ನು ಕೆಳಗಿನ ಶ್ಲೋಕದಲ್ಲಿ ಕಾಣಬಹುದು.

ದೂತಿವೃತ್ತೆ ಭೂತಚೇಷ್ಟೆ ಮಧುರಂಗಜ ಬಂಧನಂ।
ಜನಾಶ್ರಯಕ್ಕುಲಾಲೋಕಂ ಶಪಣಂ ತಪನಾಶ್ರಯಂ।

ಬಳ್ಳಿ ಸುತ್ತಿಕೊಂಡ ಮರ, ಕಲ್ಲನೊಡೆದು ಹುಟ್ಟಿ ಬಂದ ಮರ, ಭೂತಗಳಿದ್ದ ಮರ, ಇಪ್ಪೆಮರ, ಮಂದಿ ಕುಳಿತುಕೊಳ್ಳುವ ಮರ, ತಪಸ್ವಿಗಳಿಗೆ ಆಶ್ರಯ ನೀಡಿದ ಮರ, ಹಕ್ಕಿ ಗೂಡು ಕಟ್ಟಿದ ಮರ ಇಂಥ ಮರಗಳನ್ನು ಕಡಿಯಬಾರದು ಎನ್ನುವುದು ನಿಯಮ. ಶ್ಲೋಕದಲ್ಲಿ ಕಾಣುವ ನಿಷೇಧಾತ್ಮಕ ಪ್ರವೃತ್ತಿ ಜೀವಪರ ನೆಲೆಯದ್ದು ಹೊರತು ಜೀವವಿರೋಧಿ ನೆಲೆಯದ್ದಲ್ಲ. ಜೀವವಿರೋಧಿ ಶಾಸ್ತ್ರಗಳು ಸೂಚಿಸುವ ಇಂಥ ಗುಣಾತ್ಮಕ ನಿಷೇಧಗಳೇ ಇಂದು ನಮ್ಮ ಅಜ್ಞಾನದ ಮತ್ತು ಶೋಷಣೆಯ ಪ್ರಮುಖ ಸರಕಾಗಿರುವುದನ್ನು ಹುಲುಸಾಗಿ ನೋಡಬಹುದು. ಇದೂ ಅಲ್ಲದೆ ಹಣ್ಣಿನ ಮರಗಳಾದ ಮಾವು, ಹುಣಸಿ, ಹಲಸಿನ ಮರ, ನೆರಳಿಗೆ ಪ್ರಧಾನವಾದ ಬೇವಿನಮರ, ತಾಳಯ ಮರಗಳನ್ನು ಕಡಿಯಬಾರದು ಎಂದು ವಾಸ್ತುಶಾಸ್ತ್ರ ಹೇಳುತ್ತದೆ. ಇದೂ ಅಲ್ಲದೆ ಒಂದೊಂದು ಋತುಮಾನದಲ್ಲಿ ಒಂದೊಂದು ರೀತಿಯ ಮರಗಳನ್ನು ಕಡಿಯ ಬಾರದು ಎಂದೂ ಹೇಳಲಾಗಿದೆ. ಉದಾಹರಣೆಗೆ ವಸಂತ ಮತ್ತು ಗ್ರೀಷ್ಮ ಋತುಗಳಲ್ಲಿ ಮಾವು, ಬೇವು

ಕಡಿಯಬಾರದು ಎನ್ನುವ ಮಾತಿದೆ. ಈ ಋತುಮಾನಗಳಲ್ಲಿ ಮಾವು ಮತ್ತು ಬೇವು ಸಮೃದ್ಧ ಫಲ ಹೊತ್ತು ನಿಂತಿರುತ್ತವೆ. ಕಡಿದಾಗ ಆ ಫಲ ಮಣ್ಣುಗೂಡಿ ಹೋಗುತ್ತದೆ. ಆಯಾ ಋತುಮಾನಗಳಿಗೆ ಹೊಂದಿಕೊಂಡಂತೆ ಮರದ ಬಳಕೆಯನ್ನು ಮಾಡುವ ವಿಧಾನಗಳನ್ನು ವಾಸ್ತುಶಾಸ್ತ್ರ ತಿಳಿಸುತ್ತದೆಯೇ ಹೊರತು ಅದು ಯೋಗ್ಯವಲ್ಲ, ಅದು ಮನುಷ್ಯನಿಗೆ ಕೆಡಕನ್ನುಂಟು ಮಾಡುತ್ತದೆ, ಆತನ ಎಲ್ಲ ಸಂಕಟಗಳಿಗೆ ಇಂತಹ ಮರಗಳು ಕಾರಣವಾಗುತ್ತವೆ ಎನ್ನುವ ಹೆನ್ನೆಲೆಯಲ್ಲಿ ಅಲ್ಲ ಎನ್ನುವುದನ್ನು ಗಮನಿಸಬೇಕು.

ಒಂದೊಂದು ಮರ ಒಂದೊಂದು ಜೀವರಾಶಿಗೆ ಆಶ್ರಯ ನೀಡಿರುತ್ತದೆ. ಪರಸ್ಪರ ಬದುಕು ಮತ್ತು ಬೆಳವಣಿಗೆಗೆ ಕಾರಣವಾದ ಮರಗಳನ್ನು ಕಡಿಯುವುದರಿಂದ ಅವಲಂಬಿತವಾದ ಜೀವರಾಶಿಗಳ ಬದುಕುವ ಹಕ್ಕನ್ನು ನಾಶ ಮಾಡಿದಂತಾಗುತ್ತದೆ. ತಾನೂ ಬದುಕಿ ಮತ್ತೊಬ್ಬರೂ ಬಾಳಬೇಕೆನ್ನುವ ಇಲ್ಲಿನ ಸಾಮುದಾಯಿಕ ಜೀವನ ಸಿದ್ಧಾಂತ ನಮಗೆಷ್ಟು ಅರ್ಥವಾಗಿದೆ? ನೆರೆಹೊರೆಯವರನ್ನು ಹೊಡಿದು ಬಡಿದು ಸುಲಿದು ಬದುಕುವ ಮನುಷ್ಯನ ದುರದ್ದೇಶಗಳು ಇಂಥ ಜೈವಿಕ ನೆಲೆಗಳಿಂದ ಕಲಿಯಬೇಕಾದದ್ದು ಬಹಳವಿದೆ. ಬರೀ ಘೋಷಣೆ ಹಾಗೂ ಯೋಜನೆಯ ರೂಪದಲ್ಲಿರುವ ರೇಖಾತ್ಮಕವಾದಂಥ ಪರಿಸರ ಮತ್ತು ಜೈವಿಕ ಅಭಿವೃದ್ಧಿಯ ನೀತಿ ನಿಯಮಗಳು ಇಂಥ ಅಂತಃಕರಣಯುಕ್ತ ಜೀವಪರ ನೆಲೆಗಳಿಂದ ಪ್ರೇರಿತವಾಗಬೇಕಾಗಿದೆ. ಅಪಾರ ಜೀವ ವೈವಿಧ್ಯತೆಯ ಒಡಲನ್ನು ದರ್ಶಿಸದೆ, ಪುಸ್ತಕೀಯವಾದ ಅಕ್ಷರ ರೂಪದ ತಿಳುವಳಿಕೆಯಿಂದ ಬರುವ ಜ್ಞಾನದ ಅಪಾಯಕಾರಿ ಅನರ್ಥಗಳನ್ನು ಇಂಥಲ್ಲಿ ಕಾಣುತ್ತೇವೆ. ವಾಸ್ತುಶಾಸ್ತ್ರವಾಗಲೀ ಶಿಲ್ಪಶಾಸ್ತ್ರವಾಗಲೀ ಯಾವುದೇ ಶಾಸ್ತ್ರಗಳು ಹೇಳುವುದು ಸಾಮುದಾಯಿಕ ಬದುಕಿನ ನಡತೆಗಳನ್ನೇ ಹೊರತು ಬೇರೇನೂ ಇಲ್ಲ. ಆದರೆ ಸ್ವಾರ್ಥಪರ ಹಿತಾಸಕ್ತಿಗಳ, ಇಂಥ ಜೀವಪರ ಶಾಸ್ತ್ರಗಳನ್ನು ತಿರುಚಿ ಶೋಷಣೆಯ ಮಾಧ್ಯಮಗಳನ್ನಾಗಿ ಮಾಡಿಕೊಂಡಿರುವುದನ್ನು ಇಂದಿನ ದುರಂತ.

ಮನೆಗಳ ಸಮೀಪ ಮರಗಳಿರುವ ಲಕ್ಷಣ

ಪೂರ್ವಭಾಗ ವಟಂಪ್ರೋಕ್ತಂ ಅಪರಿಗ್ನಂಗದಂ ಫಲಂ
ಪುತ್ರಪೌತ್ರಶ್ರೇಯಂಸ್ಯಾಚೌಬೀಯ ಲಾಭಂ ಭವೆನ್ನರಃ ॥

ಮನೆಯ ಪೂರ್ವದಿಕ್ಕಿನಲ್ಲಿ ಆಲದ ಮರವು ಫಲದಿಂದ ಸಮೃದ್ಧಿಯಾಗಿರಲು ಆ ಮನೆಯಲ್ಲಿ ಪುತ್ರಪೌತ್ರಶೋಭೆಯಾಗಿ ಬಾಳುವರು. ಈಶಾನ್ಯ ದಿಕ್ಕಿನಲ್ಲಿ ಹಲಸಿನ ಮರ ಇದ್ದರೆ ಸಂತಾನವೃದ್ಧಿ. ಆ ಮರದಲ್ಲಿ ಫಲವಿಲ್ಲದಿದ್ದರೆ ದನ ನಾಶ, ಫಲವಿಲ್ಲದೆ ಬರೀ ಎಲೆಗಳಿಂದ ಕೋಮಲವಾಗಿದ್ದರೆ ಸ್ತ್ರೀ ನಾಶವಾಗುವುದು.

ವಾಸ್ತುಶಾಸ್ತ್ರದ ಈ ಸಂಗತಿಗಳು ತುಂಬ ವೈಚಾರಿಕವಾದಂಥವು. ಪೂರ್ವದಿಕ್ಕಿನಲ್ಲಿ ಅರಳಿ, ಆಲ, ಬಸರಿ ಇಂಥ ಮರಗಳಿರಬೇಕೆಂದು, ವಾಯುವ್ಯ ಮತ್ತು ಈಶಾನ್ಯದಲ್ಲಿ ಹಲಸು, ಮಾವು, ತೆಂಗುಗಳಂತಹ ಫಲವಂತಿಕೆ ಮರಗಳಿರಬೇಕೆಂದು, ದಕ್ಷಿಣ, ಪಶ್ಚಿಮ ಹಾಗೂ ನೈರುತ್ಯದಲ್ಲಿ ಮುಳ್ಳುಗಳಿಂದ ಕೂಡಿದ ಪೊದೆಗಳಂತಹ ಮರಗಳಿರಬೇಕೆಂದು ವಾಸ್ತುಶಾಸ್ತ್ರ ಗ್ರಂಥಗಳು ಹೇಳುತ್ತವೆ. ಕಾರಣ ಪೂರ್ವದಲ್ಲಿರುವ ಹಾಲು ಪ್ರಧಾನವಾದ ಅರಳಿ, ಆಲ, ಬಸರಿಯಂಥ ಮೃದುವಾದ ಮರಗಳು ಸೂರ್ಯನಿಂದ ಹೊರಸೂಸುವ ಅಲ್ಟ್ರಾ ವೈಯಲೆಟ್ ಕಿರಣಗಳ ಪ್ರಯೋಜನ ಪಡೆದುಕೊಳ್ಳಲು ಕಾರಣವಾಗುತ್ತವೆ. ವಾಯುವ್ಯ ಮತ್ತು ಈಶಾನ್ಯದಲ್ಲಿ ಫಲಭರಿತ ಮರಗಳಿದ್ದರೆ ಸೂರ್ಯನ ಪ್ರಖರ ಬೆಳಕಿನಿಂದ ಹಾಗೂ ಪ್ರಚಂಡ ಮಾರುತಗಳಿಂದ ರಕ್ಷಣೆ ದೊರೆಯುತ್ತದೆ. ಕಾರಣ ಭೂಮಿಯ ಕಾಂತರೇಖೆಗಳು ದಕ್ಷಿಣೋತ್ತರವಾಗಿರುತ್ತವೆ. ಭೂಮಿಯು ದಕ್ಷಿಣ ಗೋಳದಲ್ಲಿ ೨೩ ಡಿಗ್ರಿ ವಾಲಿಕೊಂಡು ತಿರುಗುವುದರಿಂದ ಈಶಾನ್ಯ ದಕ್ಕು ಸ್ಥಿರ ದಿಕ್ಕು ಎನಿಸಿಕೊಂಡು ಮಹತ್ವ ಪಡೆದಿದೆ. ಉತ್ತರ ಗೋಳಾರ್ಧದಲ್ಲಿರುವ ನಮಗೆ ನೈರುತ್ಯ ಮಾನ್ಸೂನುಗಳ ಅಬ್ಬರದಿಂದ ಸಂರಕ್ಷಿಸಿಕೊಳ್ಳಲು ಮಧ್ಯಾಹ್ನದ ತಾಪಮಾನವನ್ನು ನಿಯಂತ್ರಿಸಲು ಎತ್ತರವಾದ ಮತ್ತು ಪೊದೆ ಸ್ವರೂಪದ ಗಿಡಮರಗಳನ್ನು ಬೆಳೆಸಲು ವಾಸ್ತುಶಾಸ್ತ್ರ ಕೃತಿಗಳು ಹೇಳುತ್ತವೆ. ಇದರಿಂದ ಮನೆ ಮತ್ತು ಮನೆಯ ಬೇರೆ ಭಾಗಗಳಲ್ಲಿರುವ ಫಲಭರಿತ ಮರಗಳಿಗೆ ರಕ್ಷಣೆ ದೊರೆಯುತ್ತದೆ ಎನ್ನುವ ಸದಾಶಯವಿದೆ.

CamScanner

ಇನ್ನು ಸಂತಾನದ ಸಂಗತಿಗಳತ್ತ ಗಮನಹರಿಸಿದಾಗ ವಿಸ್ಮಯ ವಾಗುತ್ತದೆ. ಜಾನಪದ ಬದುಕಲ್ಲಿ ಒಂದು ವಾಡಿಕೆಯಿದ್ದ ಋತುಮತಿಯಾದ ಹುಡಿಗಿಯಿಂದ ಅವರೆಕಂಟಿ (ತಂಗಟೆ) ಹಾಗೂ ಹಾಲುಯುಕ್ತವಾದ ಮರಗಳನ್ನು ಮುಟ್ಟಿಸುವ ಪದ್ಧತಿಯಿದೆ. ಹಾಗೆ ಹಸುಗಳು ಗರ್ಭಧರಿಸುವ ಸಂದರ್ಭದಲ್ಲಿ ಅವುಗಳನ್ನು ಬಿಳಿ ದನಗಳ ಮತ್ತು ಜಾತಿ ದನಗಳ ಪಕ್ಕದಲ್ಲಿ ಕಟ್ಟುತ್ತಾರೆ. ಇದರಿಂದ ಪಕ್ಕದ ದನದ ಬಣ್ಣ ಗುಣ ಸ್ವರೂಪಗಳು ಮುಂದೆ ಹುಟ್ಟಲಿರುವ ಕರುವಿಗೆ ಬರಬೇಕೆನ್ನುವುದು ದೇಶಿಗರ ಸದಾಶಯವಾಗಿರುತ್ತದೆ. ಮನೆಯಂಗಳದಲ್ಲಿ ಹೂ ಮತ್ತು ಫಲ ಬಿಡುವ ಸಸ್ಯಗಳಿದ್ದರೆ ಅಂತಹ ಆಹ್ಲಾದಕರ ವಾತಾವರಣ ಸಂತಾನ ಸಮೃದ್ಧಿಗೆ ಕಾರಣವಾಗುತ್ತದೆನ್ನುವ ವೈಚಾರಿಕ ಪ್ರಜ್ಞೆಯನ್ನು ಕಾಣುತ್ತೇವೆ.

ಮರದ ಸ್ವರೂಪ

ಮೂಲಸ್ಥೂಲಭವೆನ್ನಾರಿ ಅಗ್ರಸ್ಥೂಲೋನಪುಂಸಕಃ।
ಮೂಲಮಾಗ್ರಸಮಂ ಚೈವಸೋ ವೃಕ್ಷಪುರುಷ ಲಕ್ಷಣಂ॥
ಪುರುಷಾಣಾಂ ಕುಲವೃದ್ಧಿ ಸರ್ವಸೌಭಾಗ್ಯ ವರ್ಧನಂ।
ನಪುಂಸಕ ಕುಲನಾಶಂ ಚ ವೃಕ್ಷಾಣಾಂ ಗೃಹತತ್ವಲಂ॥

ಮೊದಲು(ಬಡ್ಡೆ) ತೋರವಾಗಿ (ದಪ್ಪ) ತುದಿ ಅಸ್ತಾಗಿದ್ದಂತಾ (ಸಣ್ಣ) ಮರ ಹೆಣ್ಣು ಮರವೆಂದೂ ಮೊದಲು ಅಸ್ತಾಗಿ(ಸಣ್ಣ) ತುದಿ ತೋರವಾಗಿದ್ದಂತಾ ಮರ ಅದು ಶಿಖಂಡಿ ಮರವೆಂದೂ ಮೊದಲು ಮತ್ತು ತುದಿಯು ಸಮನಾಗಿ ಇದ್ದಂತಾ ಮರ ಗಂಡು ಮರವೆಂದು ಹೇಳಲಾಗಿದೆ. ಮರದ ಸ್ವರೂಪ ಲಕ್ಷಣವನ್ನು ಹೇಳುವ ಈ ಮಾತುಗಳು ಅದರ ಸ್ವರೂಪಕ್ಕೆ ಅನುಗುಣವಾಗಿ ಬಳಸಿಕೊಳ್ಳಲು ಸೂಚಿಸುತ್ತವೆ. ಗಂಡು ಸ್ವರೂಪದ ಅಂದರೆ ಬೊಡ್ಡೆಯಿಂದ ತುದಿಯವರೆಗೆ ಒಂದೇ ಗಾತ್ರದಲ್ಲಿರುವ ಮರ ದಷ್ಟಪುಷ್ಟವಾಗಿದ್ದು ಅದು ಭಾರವನ್ನು ಸಮನಾಗಿ ಹೊತ್ತು ನಿಲ್ಲಲು ಸಶಕ್ತವಾಗಿರುತ್ತದೆ. ತುದಿ ಅಥವಾ ಬೊಡ್ಡೆ ಸಣ್ಣದಾಗಿರುವ ಮರವು ಇಂತಹ ಭಾರವನ್ನು ಹೊರಲಾರದು. ಅಂತಹ ಮರದಿಂದ ಕಟ್ಟಿದ ಮನೆ ಮುರಿದು ಬೀಳಬಹುದು. ಹೀಗಾಗಿ ಇಲ್ಲಿ ಗಂಡು, ಹೆಣ್ಣು, ಶಿಖಂಡಿ ಎನ್ನುವ ಶಬ್ದಗಳಿಗಿಂತ ಮರದ ಬಾಳಿಕೆಯ ಗುಣವನ್ನು ಆಧರಿಸಿ ಮನೆ ಕಟ್ಟಬೇಕೆನ್ನುವ ಸತ್ಯವನ್ನು ಅರಿಯಬೇಕಾಗಿದೆ. ಆರೋಗ್ಯಪೂರ್ಣ ಮರವಿದ್ದರೆ ಅಷ್ಟೇ ಅಂದ ಚಂದವಾದ ಮನೆಯನ್ನು, ಬಹುಕಾಲ ಬಾಳುವ ಇಮಾರತಿಯನ್ನು ನಿರ್ಮಿಸಬಹುದು. ಮರದ ಈ ಗುಣಗಳನ್ನು ನಿರ್ಧರಿಸುವಲ್ಲಿ ಬಡಿಗರು ಪ್ರಾಜ್ಞರಾಗಿದ್ದರು.

ಹೀಗೆ ವಾಸ್ತುಶಾಸ್ತ್ರ ಕೃತಿಗಳಲ್ಲಿ ಕಾಣುವ ಪರಿಸರಸ್ನೇಹಿ ಸಂಗತಿಗಳ ಕುರಿತು ವೈಜ್ಞಾನಿಕ ರೀತಿಯ ಅಧ್ಯಯನ ನಡೆಯಬೇಕಿದೆ. ನಿಸರ್ಗ ಸಮ್ಮುಖ ಕ್ರಿಯೆಗಳಿಂದ ದೊರೆಯುವ ಗಾಳಿ, ಬೆಳಕುಗಳಂತಹ ಪ್ರಯೋಜನಗಳನ್ನು ಪಡೆದುಕೊಂಡು ಆರೋಗ್ಯ ಪೂರ್ಣ ಬದುಕನ್ನು ನಡೆಸಬೇಕೆನ್ನುವ ಪಂಚಭೂತಾತ್ಮಕ ಪರಿಕಲ್ಪನೆ ಇಲ್ಲಿದೆ. ಯಾಕೆಂದರೆ ದೇಸೀ ಜ್ಞಾನ ಪರಂಪರೆಯಲ್ಲಿ ವಾಸ್ತು ಎಂದರೆ ಕೇವಲ ಗೋಡೆ ಕಿಟಕಿ ಬಾಗಿಲುಗಳಂತಹ ಘನವಸ್ತುಗಳ ಅಧ್ಯಯನವಲ್ಲ. ಅದು ಆ ಭೌಗೋಳಿಕ ಪರಿಸರದಲ್ಲಿ ಬದುಕಿದ ಜನ ಸಮುದಾಯಗಳ ಜೀವಸಂಕುಲಗಳ ಸಾಂಸ್ಕೃತಿಕ ಪರಂಪರೆಯನ್ನು ಅರ್ಥ ಮಾಡಿಕೊಳ್ಳುವುದಾಗಿದೆ. ವ್ಯಕ್ತಿಯ ಆಗುಹೋಗು ಆರೋಗ್ಯಗಳನ್ನು ನಿರ್ಧರಿಸುವ ಈ ಶಾಸ್ತ್ರವು ಭೂಜೀವಶಾಸ್ತ್ರ (Giobiology)ವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಇಂತಹ ಒಂದು ಲೋಕೋಪಯೋಗಿ ವೈಜ್ಞಾನಿಕ ತಿಳುವಳಿಕೆ ಬಡಿಗ ವೃತ್ತಿಯ ಬೆನ್ನಿಗಿರುವುದು ವಿಶಿಷ್ಟ ಸಂಗತಿಯಾಗಿದೆ.

ಮುಂದುವರಿಯುವುದು....

ನಿಮಗೆ ತಿಳಿದಿರಲಿ

'ವಿಜ್ಞಾನ ಸಂಗಾತಿ'ಯಲ್ಲಿ ಪ್ರಕಟವಾಗುವ ಲೇಖನಗಳಿಗೆ, ಅಭಿಪ್ರಾಯಗಳಿಗೆ, ವಿಚಾರಗಳಿಗೆ ಆಯಾಯ ಲೇಖಕರೇ ಹೊಣೆಗಾರರು

ISSN 2319-7307

ನೆಮ್ಮದಿಯ ನಾಳೆ ನಮ್ಮದು

ಹೊಸತು

ಜೂನ್ ೨೦೨೩ ✤ ಬೆಲೆ : ₹ ೩೦

ನವಕರ್ನಾಟಕ ಪ್ರಕಾಶನ



ಹೊಸತು

ಒಳಗೇನಿದೆ?

ನೆಮ್ಮದಿಯ ನಾಳೆ ನಮ್ಮದು

ಇಂದಿನ ನೆನಪಿನ ಅಂದಿನ ದಿನಗಳು (ನೆನಪಿನಂಗಳದಿಂದ) — ಜಿ. ರಾಮಕೃಷ್ಣ ... ೬

ಸಂದರ್ಶನ : ಹೋರಾಟವೇ ಉಸಿರಾದ ವಿದ್ಯಾ ದಿನಕರ್ — ನವೀನ್ ಸೂರಿಂಜೆ ... ೨೧

ಡಾನ್ ಕ್ಯಾಮಿಲೊ ಕಥೆಗಳು — ಪಾಲಹಳ್ಳಿ ವಿಶ್ವನಾಥ್ ... ೩೯

ಅಂಕಣಗಳು

ಚುನಾವಣಾ ಆಯೋಗವೆಂಬ ಅಂಗವಿಕಲ ಶಿಶು — ಡಾ॥ ಎನ್. ಜಗದೀಶ್ ಕೊಪ್ಪ ... ೫೩

ಸರ್ಕಾರದ ಗ್ಯಾರಂಟಿ ಹಾಗೂ ಆರ್ಥಿಕತೆ — ಟಿ. ಎಸ್. ವೇಣುಗೋಪಾಲ್ ... ೨೯

ಭಾರತ ಅಪಮಾನಿತವಾಗುತ್ತಿದೆ — ಡಾ॥ ವಿನಯಾ ಒಕ್ಕುಂದ ... ೧೯

ಕಾವ್ಯಲೋಕ — ೨೦, ೨೮, ೩೨, ೩೪, ೩೮, ೪೫, ೫೨

ಕರ್ನಾಟಕದ ಚುನಾವಣೆ – ಬಡಬಗ್ಗರ ಪ್ರತಿಭಟನೆಯ ಅಭಿವ್ಯಕ್ತಿ — ಡಾ॥ ಬಿ. ಆರ್. ಮಂಜುನಾಥ್ ... ೫೭

ರಾಷ್ಟ್ರೀಯ ಪಕ್ಷಕ್ರಮ ಚೌಕಟ್ಟು ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿಸುವ ಟೂಲ್‌ಕಿಟ್‌ನಂತಿದೆ — ನಿರಂಜನಾರಾಧ್ಯ ವಿ. ಪಿ. ... ೨೭

ಬಡಿಗರು : ತಂತ್ರ ಮತ್ತು ಯಂತ್ರಜ್ಞಾನ — ಡಾ॥ ವೀರೇಶ ಬಡಿಗೇರ ... ೪೭

ಬೌದ್ಧ ಸಂಸ್ಕೃತಿ – ಒಂದು ಸಮ್ಯಕ್ ಪರ್ಯಾಯ — ಮರಾಠಿ ಮೂಲ : ಅರ್ಜುನ ಡಾಂಗಳೆ, ಸಂಗ್ರಹ : ಚಂದ್ರಕಾಂತ ಪೋಕಳೆ ... ೧೧

ಹೋರಾಟದ ಬಿಗಿಪಟ್ಟು ಹಾಕಿರುವ ಮಹಿಳಾ ಕುಸ್ತಿಪಟುಗಳು — ಡಾ॥ ಎಚ್. ಜಿ. ಜಯಲಕ್ಷ್ಮಿ ... ೬೧

ನವ ಸಾಮಾಜಿಕತೆಯ ಹೊಸ್ತಿಲಲ್ಲಿ ಗೌರಿಯರು — ಡಾ॥ ಸಬಿತಾ ಬನ್ನಾಡಿ ... ೫೦

ಏಕ – ಅನೇಕ! ನೃತ್ಯ ಸೌಂದರ್ಯ ವೈವಿಧ್ಯ — ಡಾ॥ ಕೆ. ಎಸ್. ಪವಿತ್ರ ... ೧೫

ಮಹಾಡ್‌ನಲ್ಲಿರುವ ಗಾಂಧಾರ ಪಲೆ ಬೌದ್ಧ ಗುಹೆಗಳು — ಡಾ॥ ಎನ್. ಗಾಯತ್ರಿ ... ೫೫

ಗೋಪಾಲಕೃಷ್ಣ ಅಡಿಗರ ಕವಿತೆಗಳಲ್ಲಿ ಜಾತಿ ಮೀಮಾಂಸೆ — ಚಾಂದ್ ಪಾಷ ಎನ್. ಎಸ್. ... ೧೩

ಬೇಟೆಗಾರನಿಗೂ ಒಂದು ಕಥೆ ಇರುವಂತೆ ಬೇಟೆಗೂ ಒಂದು ಕಥೆ ಇದೆ — ರಮೇಶ ಗಬ್ಬೂರ್ ... ೧೭

ಇವತ್ತಿನ ಮಾಧ್ಯಮ, ನಾಗರಿಕನಾಗಿ ಉಳಿಯುವ ತುರ್ತು ಹಾಗೂ ಭಕ್ತಗಣ...!! — ದೇವರಾಜ್ ಹುಣಸಿಕಟ್ಟಿ ... ೩೩

ಏರಿಧಾನ್ಯ : ಕಲಿಯಬೇಕಾದ ಕಲಿಸಬೇಕಾದ ಜೀವನ ಪಾಠ — ಡಾ॥ ನಿಂಗಪ್ಪ ಮುದೇನೂರು ... ೩೫

ಆದಿವಾಸಿಗಳ ಜೀವನದ ಕಷ್ಟಕೋಟಲೆಗಳತ್ತ ಕ್ಷಕಿರಣವನ್ನು ಬೀರುವ ೧೯. ೨೦. ೨೧ — ಮ. ಶ್ರೀ. ಮುರಳಿ ಕೃಷ್ಣ ... ೪೩

ನಾನು ಓದಿದ ಪುಸ್ತಕ : ಕುತ್ತೂರು ಕಥನ ಓದಿನ ನೆಪದಲ್ಲಿ ನನ್ನ ಹಲವು ನೆನಪುಗಳು... — ಯಮುನಾ ಗಾಂವ್ಕರ್ ... ೩೭

ನಭಾವಲೋಕನ : ಮಂಗಳ-ಶುಕ್ರ ಜೋಡಿ — ಡಾ॥ ಬಿ. ಎಸ್. ಶೈಲಜಾ ... ೪೨

ಹೊಸ ಓದು — ಡಾ॥ ಎಂ. ವೆಂಕಟಸ್ವಾಮಿ ... ೪೬

ಸಾದರ ಸ್ವೀಕಾರ — ೨೬

ಚಿತ್ರಗಳು : ಬಸವರಾಜ ಕಲೆಗಾರ

ಮುಖಪುಟ : ವಿಧಾನಸಭಾ ಚುನಾವಣಾ ಫಲಿತಾಂಶ ಕುರಿತ ಚಿತ್ರ

ವಿನ್ಯಾಸ : ನವಕರ್ನಾಟಕ ವಿನ್ಯಾಸ

ಕಚೇರಿ ಸಹಕಾರ : ಸುಲಕ್ಷಣಾ ಆರ್., ಆನಂದ ಕೆ.

ವಿದ್ಯಮಾನ...

ಮಾರ್ಚ್ ಮತ್ತು ಏಪ್ರಿಲ್ ತಿಂಗಳಿನಲ್ಲಿ ಕರ್ನಾಟಕದೊಳಗೆ ಹಾಲಿನ ಮಾರಾಟವನ್ನು ಸುತ್ತುವರೆದಂತೆ ದೊಡ್ಡ ಕೋಲಾಹಲವೇ ನಡೆಯಿತು. ಫುಡ್ ಸೇಫ್ಟಿ ಅಂಡ್ ಸ್ಟಾಂಡರ್ಡ್ ಅಥಾರಿಟಿ ಆಫ್ ಇಂಡಿಯಾ ಎಂಬ ಕೇಂದ್ರ ಸರ್ಕಾರದ ಕೆಳಗಡೆ ಬರುವ ಸಂಸ್ಥೆಯೊಂದು ಇನ್ನು ಮುಂದೆ ಕರ್ನಾಟಕದ ನಂದಿನಿ ಹಾಲಿನ, ಮೊಸರಿನ ಪ್ಯಾಕೆಟ್‌ನ ಮೇಲೆ ದಹಿ ಎಂದು ಮುದ್ರಿಸ ಬೇಕೆಂದು ಮಾರ್ಚ್ ತಿಂಗಳ ಕೊನೆಯ ವಾರದಲ್ಲಿ ತಾಕೀತು ಮಾಡಿತು. ಇದಕ್ಕೆ ಕನ್ನಡ ಸಂಘಟನೆಗಳಿಂದ ಪ್ರತಿಭಟನೆ ಬರುತ್ತಿದ್ದಂತೆ ಅದು ಕಡ್ಡಾಯವಲ್ಲ ಎಂದು ಅಧಿಕಾರಸ್ಥರು ಘೋಷಣೆ ಮಾಡಿ ವಿವಾದವನ್ನು ತಣ್ಣಗಾಗಿಸಿದರು.

ಆದರೆ ಇದರ ಹಿಂದಿನ ಕುಟೀಲ ಕಾರಸ್ಥಾನ ಬಹಳ ದೊಡ್ಡದು ಎಂಬುದು ಬೆಳಕಿಗೆ ಬಂದದ್ದು ಏಪ್ರಿಲ್ ತಿಂಗಳಿನಲ್ಲಿ. ಗುಜರಾತ್‌ನ ಹಾಲು ಸಹಕಾರಿ ಸಂಸ್ಥೆಯಾದ ಅಮುಲ್ ತಾನು ಇನ್ನು ಮುಂದೆ ಡಂಜೋ ಮುಂತಾದ ಮನೆಬಾಗಿಲಿಗೆ ಸಾಮಾನು ಒದಗಿಸುವ ಕಂಪನಿಗಳ ಮೂಲಕ ಹಾಲು ಮತ್ತು ಮೊಸರನ್ನು ಸರಬರಾಜು ಮಾಡುತ್ತೇನೆ ಎಂದಾಗ ಕರ್ನಾಟಕದ ಸಹಕಾರಿ ಮಿಲ್ಕ್ ಸೊಸೈಟಿಗಳಲ್ಲಿ ಹಾಗೂ ಅವುಗಳ ಸದಸ್ಯರಾದ ರೈತರಲ್ಲಿ ಗಾಢ ಆತಂಕ ಸ್ಫೋಟವಾಯಿತು. ಚುನಾವಣಾ ಸಮಯವಾದ್ದರಿಂದ ವಿರೋಧ ಪಕ್ಷಗಳು ಕೂಡಲೇ ಈ ನಡೆಯನ್ನು ಖಂಡಿಸಿ ಇದನ್ನು ಚುನಾವಣಾ ವಿಷಯವನ್ನಾಗಿ ಮಾಡಿದವು. ಇದರಿಂದ ಅಪಾಯವಿಲ್ಲ, ಈಗಾಗಲೇ ಅಮುಲ್ ನಮ್ಮ ರಾಜ್ಯದ ಮಾರುಕಟ್ಟೆಗೆ ಬಂದಿದೆ ಎಂದು ಮುಖ್ಯಮಂತ್ರಿಗಳು ಏನೇ ಸಮಜಾಯಿಶಿ ನೀಡಿದರೂ ಜನ ಇದನ್ನು ನಂಬಲಿಲ್ಲ. ಪರಿಣಾಮವಾಗಿ ಕರ್ನಾಟಕದಲ್ಲಿ ಯಾವೆಲ್ಲಾ ಜಿಲ್ಲೆಗಳಲ್ಲಿ ಅತ್ಯಧಿಕ ಹಾಲು ಉತ್ಪಾದನೆಯಾಗುತ್ತದೋ ಅಲ್ಲೆಲ್ಲಾ ಬಿಜೆಪಿ ಚುನಾವಣೆಯಲ್ಲಿ ನೆಲಕಚ್ಚಿತು. ಹಾಲು ಉತ್ಪಾದಕ ರೈತರ ಆಕ್ರೋಶ ನಿರಾಧಾರವಲ್ಲ.

ಭಾರತದಲ್ಲಿ ಒಂದು ಕಾಲದಲ್ಲಿ ಸಹಕಾರಿ ಕ್ಷೇತ್ರ ಸಮೃದ್ಧವಾಗಿ ಬೆಳೆಯಿತು. ಅದರಲ್ಲಿ ಮಹಾರಾಷ್ಟ್ರದ ಸಕ್ಕರೆ ಕ್ಷೇತ್ರ ಮತ್ತು ಕರ್ನಾಟಕದ ಹಾಲಿನ ಕ್ಷೇತ್ರಗಳು ಚಿನ್ನದ ಮೊಟ್ಟೆ ಇಡುವ ಕೋಳಿಗಳಂತೆ ಅದಾನಿ, ಅಂಬಾನಿ ಮುಂತಾದ ಕಾರ್ಪೊರೇಟ್ ಬಂಡವಾಳಗಾರರಿಗೆ ಕಾಣುತ್ತಿದೆ. ಕರ್ನಾಟಕದ ನಂದಿನಿಯು ಹಳ್ಳಿಗಳಲ್ಲಿ ರೈತರಿಂದ ಹಾಲನ್ನು ಕೊಂಡು ಅದನ್ನು ಎಲ್ಲೆಡೆ ಮಾರುತ್ತಿದೆ. ಹೆಚ್ಚುವರಿ ಹಾಲು, ಪೌಡರ್, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ, ಸಿಹಿ ತಿಂಡಿ, ಚೀಸ್ ಇತ್ಯಾದಿಯಾಗಿ ಮಾರ್ಪಾಟಾಗಿ ಅಪಾರ ಲಾಭವನ್ನು ಗಳಿಸುತ್ತಿವೆ. ಇದನ್ನು ಮೊದಲು ದೈತ್ಯ ಅಮುಲ್‌ನೊಂದಿಗೆ ವಿಲೀನಗೊಳಿಸಿ ನಂತರ ಅದನ್ನು ಖಾಸಗಿಯವರಿಗೆ ಮಾರುವುದು ಕೇಂದ್ರ ಸರ್ಕಾರದ ಉದ್ದೇಶ.

ಆದ್ದರಿಂದಲೇ ಇಷ್ಟು ದಿನ ರಾಜ್ಯಗಳ ಕೆಳಗಿದ್ದ ಸಹಕಾರಿ ಕ್ಷೇತ್ರವನ್ನು ರೂಪಿಸಲು ಹೊಸ ಕಾನೂನು ಮಾಡಲಾಗಿದೆ. ಇದರ ಪ್ರಕಾರ ಅನೇಕ ರಾಜ್ಯಗಳ ಹಾಲಿನ ಸಹಕಾರ ಸಂಘಗಳನ್ನು ಕೇಂದ್ರ ಸರ್ಕಾರದಡಿ ವಿಲೀನಗೊಳಿಸಬಹುದು. ಇದಕ್ಕಾಗಿ ಯಾರಿಗೂ ಬೇಡವಾಗಿದ್ದ ನಗಣ್ಯ ಸಹಕಾರಿ ಇಲಾಖೆಯನ್ನು ಅಮಿತ್ ಶಾ ಕೆಳಗೆ ತರಲಾಗಿದೆ. ಆ ಅಮಿತ್ ಶಾ ಕೇವಲ ೫-೬ ತಿಂಗಳ ಕೆಳಗೆ ಕರ್ನಾಟಕಕ್ಕೆ ಬಂದಿದ್ದಾಗ ಈ ವಿಲೀನದ ಬಗ್ಗೆ ಮಾತನಾಡಿ ಗುಟ್ಟನ್ನು ರಟ್ಟು ಮಾಡಿದ್ದರು. ಹಳ್ಳಿ ಹಳ್ಳಿಗೆ ಪ್ರವೇಶಿಸಿ ಅಮುಲ್ ಮೊದಲು ನಂದಿನಿಗಿಂತ ಹೆಚ್ಚು ದರ ಕೊಟ್ಟು ಹಾಲು ಖರೀದಿಸಿ ನಂತರ ಎಲ್ಲವನ್ನೂ ಸ್ವಾಹ ಮಾಡಲಿದೆ. ಈ ವಿಲೀನಕ್ಕೆ ನಂದಿನಿಯಲ್ಲಿರುವ ೧೬ ಘಟಕಗಳ ಅಧ್ಯಕ್ಷರು ಒಪ್ಪಿದರೆ ಸಾಕು ಎನ್ನುತ್ತದೆ ಹೊಸ ಕಾನೂನು. ಆ ಅಧ್ಯಕ್ಷರುಗಳು ಆಳುವ ಪಕ್ಷದ ಮರ್ಜಿಯಲ್ಲಿ ಇರುವಂಥವರು. ಇತ್ತೀಚೆಗೆ ಅಮುಲ್‌ನ ಮಾಜಿ ಮುಖ್ಯಾಧಿಕಾರಿ ರಿಲೈಯನ್ಸ್ ಸಂಸ್ಥೆ ಸೇರಿದ್ದಾರೆ ಎಂಬುದು ಪಿತೂರಿಯ ಮುಂದಿನ ಭಾಗವನ್ನು ಸೂಚಿಸುತ್ತದೆ, ಹೀಗಾಗಿ ಅಮುಲ್ ಬಿಟ್ಟರೆ ದೇಶದ ಅತಿದೊಡ್ಡ ಹಾಲಿನ ಸಹಕಾರ ಸಂಘವಾದ ನಂದಿನಿಯ ಭವಿಷ್ಯದ ಮೇಲೆ ದೊಡ್ಡ ಪ್ರಶ್ನಾರ್ಥಕ ಚಿಹ್ನೆ ಉಳಿದಿದೆ.







ಬಡಿಗರು
ತಂತ್ರ ಮತ್ತು ಯಂತ್ರಜ್ಞಾನ

ಬಡಿಗತನದಂತಹ ಸಾಂಪ್ರದಾಯಿಕ ಕಸುಬುಗಳಲ್ಲಿ 'ತಂತ್ರ' ಎನ್ನುವುದು ಕೇವಲ ಸಲಕರಣೆ ರೂಪದ್ದು ಎಂಬುದಷ್ಟೇ ಅಲ್ಲ, ಅದು ತಾರ್ಕಿಕ ಹಾಗೂ ವೈಜ್ಞಾನಿಕ ವಿಧಾನಗಳಿಂದಲೂ ಸೃಷ್ಟಿಯಾಗಿರುತ್ತದೆ. ಬಡಿಗತನದಂತಹ ಕೌಶಲ್ಯಶೀಲ ಕಸುಬಿಗೆ ಅಂತರ್ಬೋಧಪರ ಜ್ಞಾನ ವಿಧಾನ ಹಾಗೂ ಇಂದ್ರಿಯಾತ್ಮಕ ಜ್ಞಾನ ವಿಧಾನಗಳ ಸಂಶ್ಲೇಷಣೆಯ ಅಗತ್ಯವನ್ನು ಒತ್ತಿಹೇಳುವುದೇ ತಾಂತ್ರಿಕತೆ.

ತಂತ್ರ ಎಂದರೆ ಮಾಟ ಅಥವಾ ಮಂತ್ರವಲ್ಲ. ಹಲವು ಹುಸಿ ತಂತ್ರ ಸಾಧಕರು ತಂತ್ರಕ್ಕೆ ಒಂದು ವಿಕೃತ ರೂಪ ಕೊಟ್ಟುಬಿಟ್ಟಿದ್ದಾರೆ. 'ವಾಸ್ತವವಾಗಿ ತಂತ್ರವೆಂದರೆ ಮಾಟವಲ್ಲ, ಅದು ಜನಸಾಮಾನ್ಯರಿಗೆ ಸಾಧಿಸಲು ಸುಲಭ ಮಾಡಲಾದ ತತ್ವಜ್ಞಾನ.'

ಲೋಕೋತ್ತರವಾದುದನ್ನು ಕಾಣಲು ತತ್ವಶಾಸ್ತ್ರ ನಡೆಸಿದ ಪ್ರಯತ್ನಗಳಲ್ಲಿ ತಂತ್ರವೂ ಒಂದು. ಅದ್ವಿತೀಯ ಸತ್ಯವನ್ನು ಗ್ರಹಿಸುವ, ರೂಪಿಸುವ ಮತ್ತು ಅಂತಹ ಸತ್ಯವನ್ನು ತಲುಪುವುದೇ ಮಾನವನ ಗುರಿ ಎಂದು ತಂತ್ರಗಳು ಸಾರುತ್ತವೆ. ವಸ್ತು ಸತ್ಯವನ್ನು ಕಂಡುಕೊಳ್ಳಲು ರೂಪಿಸುವ ಕೆಲವು ಮೂರ್ತ ಪ್ರಯೋಗಗಳೇ ಯಂತ್ರಗಳು. ಈ ಪ್ರಯೋಗಗಳನ್ನು ಕ್ರಮಬದ್ಧಗೊಳಿಸುವ ಸಂಗತಿಗಳೇ ಮಂತ್ರಗಳು.

ಮಂತ್ರ ಎಂಬುದಕ್ಕೆ 'ಥಿಯರಿ' ಅಥವಾ ಒಂದು 'ಕ್ರಮಬದ್ಧ ಯೋಜನೆ' ಅಥವಾ 'ಸಿದ್ಧಾಂತ' ಎಂಬ ಅರ್ಥಗಳಿವೆ. ಅಂದರೆ ಸುಸಂಬದ್ಧವಾಗಿ ನಿರ್ಮಿಸುವುದು ಹಾಗೂ ಕ್ರಿಯಾಶೀಲಗೊಳಿಸುವುದು. 'ಶಿಲ್ಪವನ್ನು ಕ್ರಿಯೆಯಲ್ಲಿ ಅನ್ವಯಿಸಿ ನಿರ್ಮಾಣ ಮಾಡುವ ಶಿಲ್ಪಿಯನ್ನು ಮಂತ್ರಗಾರ ಮತ್ತು ಮಾಟಗಾರ ಎಂದು ಪುರಾಣಗಳು ಹೇಳುತ್ತವೆ'. 'ಮಾಯ' ಎನ್ನುವುದಕ್ಕೆ ಇಂದ್ರಜಾಲ, ಯಕ್ಷಿಣಿವಿದ್ಯೆ ಎನ್ನುವ ಅರ್ಥವಿದ್ದರೆ, ಮಾಟಕ್ಕೆ ಸೊಗಸು, ಸುಂದರ, ಚೆಲುವು ಎನ್ನುವ ಅರ್ಥಗಳಿವೆ. 'ಮಾಟ' ಎಂದರೆ ಸುಂದರವಾದ ನಿರ್ಮಿತಿ, ಮಾಟವಾದದ್ದು, ಪ್ರಮಾಣಬದ್ಧವಾದದ್ದು. 'ಮಾಟ ಕೂಟ ಪ್ರಾಸಾದಂಗಳಂಗೈಯ್ದರ್' ಎನ್ನುವ ಶಾಸನಸ್ಥ ಉಲ್ಲೇಖಗಳು ಒಂದು ಕಟ್ಟಡವನ್ನು ಕ್ರಮಬದ್ಧವಾಗಿ ಕಟ್ಟುವ ಕ್ರಿಯೆಯನ್ನು ಹೇಳುತ್ತವೆ. ಇಂತಹ ತತ್ವ, ಸಿದ್ಧಾಂತ ಹಾಗೂ ನಿಯಮಗಳಿಂದ ರೂಪಗೊಂಡಿದ್ದು ತಂತ್ರವಾಗುತ್ತದೆ. ಅದರ ನಿಯಮಗಳು ತಂತ್ರಶಾಸ್ತ್ರವೆನಿಸಿದರೆ ಅದರ ಸರಿಯಾದ ಅರಿವು ತಂತ್ರಜ್ಞಾನವಾಗುತ್ತದೆ, ತಾಂತ್ರಿಕ ವಿದ್ಯೆಯಾಗುತ್ತದೆ. ಹೊಸ ಕಾಲಕ್ಕೆ ಅನ್ವಯಿಸಿ ಹೇಳುವುದಾದರೆ 'ಟೆಕ್ನಾಲಜಿ'ಯಾಗುತ್ತದೆ. ಮಯ

ಈ ಕಾಲದ ಕಾಷ್ಠಶಿಲ್ಪಿಗಳ ಲಂಬ, ಅಡ್ಡ, ಓರೆಯಾದ ವಿನ್ಯಾಸದಲ್ಲಿ ಮರದ ಕಂಬ, ಬೋದಿಗೆ, ತೊಲೆ, ಜಂತಿಗಳ ಸಹಾಯದಿಂದ ಇಮಾರತಿಯನ್ನು ನಿಲ್ಲಿಸುತ್ತಿದ್ದರು. ನಂತರ ಅವಕ್ಕೆ ಬೇಕಾದ ಚಿತ್ರಕರ್ಮ, ರತ್ನಕರ್ಮಗಳಿಂದ ಅಲಂಕರಿಸುತ್ತಿದ್ದರು. ವಿವಿಧ ರೀತಿಯ ಯಂತ್ರಗಳನ್ನು ನಿರ್ಮಿಸುವ ಚಮತ್ಕಾರವುಳ್ಳವರಾಗಿದ್ದರು. ವಾಸ್ತು, ಪ್ರತಿಮೆ, ರತ್ನ ವಿದ್ಯೆಗಳ ರಹಸ್ಯಗಳು, ಬಡಿಗವಂಶಕ್ಕೆ ಪರಂಪರಾಗತವಾಗಿ ಬಂದಿದ್ದವು.

ಡಾ॥ ವೀರೇಶ ಬಡಿಗೇರ

514

ಬಸವ ಪಥ



BASAVA PATHA - Kannada Monthly

ಸೆಪ್ಟೆಂಬರ್ 2023 | ಸಂಪುಟ – 44 | ಸಂಚಿಕೆ – 06 | ಬಿಡಿ ಪ್ರತಿ ₹ 25 | ISSN 2348-425X

September 2023 | Volume - 44 | Issue - 06 | Single Copy ₹ 25 | ISSN 2348-425X

ಬಸವ ಸಮಿತಿಯ ಆವರಣದಲ್ಲಿ ಡಾ. ಬಿ.ಡಿ. ಜತ್ತಿಯವರ ಪುತ್ಥಳಿಯ ಎದುರು ಭಾರತದ 76ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು



Scanned with OKEN Scanner

CamScanner



॥ ಶ್ರೀ ಗುರುಬಸವಲಿಂಗಾಯ ನಮಃ ॥

ಬಸವ ಸಮಿತಿ

ಅನುಭವ ಮಂಟಪ, ಬೆಂಗಳೂರು

ಭಾರತದ ಮಾಜಿ ರಾಷ್ಟ್ರಪತಿಗಳು ಹಾಗೂ ಬಸವ ಸಮಿತಿಯ ಸಂಸ್ಥಾಪಕರಾದ
ಗೌರವಾನ್ವಿತ ಡಾ. ಬಿ.ಡಿ. ಜತ್ತಿಯವರ 111ನೆಯ ಜನ್ಮದಿನೋತ್ಸವದ ಅಂಗವಾಗಿ

ಸಂಸ್ಥಾಪಕರ ದಿನಾಚರಣೆ

ದಿನಾಂಕ: 10 ಸೆಪ್ಟೆಂಬರ್ 2023 ರಂದು ಬೆಳಗ್ಗೆ 10.30 ಗಂಟೆಗೆ
ಸ್ಥಳ: ಅನುಭವ ಮಂಟಪ, ಬಸವ ಸಮಿತಿ, ಬೆಂಗಳೂರು

ಉದ್ಘಾಟನೆ

ಶ್ರೀ ಥಾವರ್ ಚಂದ್ ಗೆಹ್ಲೋಟ್
ಘನತೆವೆತ್ತ ರಾಜ್ಯಪಾಲರು, ಕರ್ನಾಟಕ

ದಿವ್ಯ ಸಾನಿಧ್ಯ ಹಾಗೂ ಗ್ರಂಥ ಲೋಕಾರ್ಪಣೆ

ಪೂಜ್ಯಶ್ರೀ ಶಿವರುದ್ರ ಮಹಾಸ್ವಾಮಿಗಳು
ಅಧ್ಯಕ್ಷರು, ಬೇಲಿಮಠ, ಬೆಂಗಳೂರು

ಅಧ್ಯಕ್ಷತೆ

ಶ್ರೀ ಅರವಿಂದ ಜತ್ತಿ
ಅಧ್ಯಕ್ಷರು, ಬಸವ ಸಮಿತಿ, ಬೆಂಗಳೂರು

ಮುಖ್ಯ ಅತಿಥಿಗಳು

ಶ್ರೀ ವಾಟಾಳ್ ನಾಗರಾಜ್
ಕನ್ನಡ ಪರ ಹೋರಾಟಗಾರರು

ಗೌರವ ಸನ್ಮಾನ

ಶ್ರೀಮತಿ ಲೀನಾ ಕಲಬುರಗಿ
ಬಸವ ಸಮಿತಿ, ಏಷ್ಯಾ ಫೆಸಿಫಿಕ್, ಆಕ್‌ಲ್ಯಾಂಡ್, ನ್ಯೂಜಿಲ್ಯಾಂಡ್

ಶ್ರೀಮತಿ ವಿಜಯ ನಂದೀಶ್ವರ್
ಬಸವ ಸಮಿತಿಯ ಮಾಜಿ ಜಂಟಿ ಕಾರ್ಯದರ್ಶಿ ಹಾಗೂ ಸಾಹಿತಿಗಳು

ಶ್ರೀಮತಿ ಸಿದ್ಧಗಂಗಮ್ಮ ಸಿದ್ಧರಾಮಣ್ಣ
ಅಧ್ಯಕ್ಷರು, ಬಸವ ಕೇಂದ್ರ, ತುಮಕೂರು

Scanned with OKEN Scanner

CamScanner

ಪರಿವಿಡಿ

ಸಂಪಾದಕೀಯ ೬

ಅಧ್ಯಕ್ಷರ ನುಡಿ ೧೨

ಕನ್ನಡ ಕವಿಗಳು ಕಂಡ ಡಾ. ಬಿ.ಡಿ. ಜತ್ತಿ ೧೮
ಡಾ. ಪ್ರಕಾಶ ಗ. ಖಾಡೆ

ಸಿದ್ಧರಾಮೇಶ್ವರರ ಬಸವಸ್ತೋತ್ರದ ತ್ರಿವಿಧ: ಬಸವಣ್ಣನವರ ವ್ಯಕ್ತಿತ್ವ ೨೬
ಡಾ. ಕೆ. ರವೀಂದ್ರನಾಥ

ಮಹಾಂತಜ್ಯೋತಿಗೆ – ವ್ಯಸನಮುಕ್ತ ಆಂದೋಲನ ೩೪
ಪ್ರೊ. ಸಿದ್ಧಣ್ಣ ಲಂಗೋಟಿ

ಪದ ಸುಡೊಕು – ೧ ೪೨
ಶ್ರೀಮತಿ ವಿದ್ಯಾ ವಿ. ಹಾಲಭಾವಿ

ಪಾರ್ಲಿಮೆಂಟ್, ಮ್ಯಾಗ್ನಾ ಕಾರ್ಟಾ ಮತ್ತು ಶ್ರೀ ಬಸವೇಶ್ವರರು ೪೩
ಶ್ರೀ ವಿಜಯಕುಮಾರ ಕಮ್ಮಾರ

"ಲಿಂಗಾಯತ ಧರ್ಮ – ಇತಿಹಾಸ" ಪರಿಚಯ ಸರಣಿ ೪೯
ಡಾ. ಜೆ.ಎಸ್. ಪಾಟೀಲ

ಜನಪದ ಸಾಹಿತ್ಯದಲ್ಲಿ ಮಡಿವಾಳ ಮಾಚಿದೇವರು ೫೪
ಶ್ರೀ ಶಿವಲಿಂಗ ಹೇಡೆ

ನಾಮದಲ್ಲಿ ಹೆಂಗೂಸೆಂಬ ಅಕ್ಕ ೬೨
ಶ್ರೀ ಚನ್ನಪ್ಪ ಅಂಗಡಿ

ಮೋಳಿಗೆಯ ಮಾರಯ್ಯ ೬೮
ಶ್ರೀಮತಿ ಸುಧಾ ಪಾಟೀಲ

ಕಲಬುರಗಿ ಬಸವ ಸಮಿತಿ – ಮಹಾದೇವಿಯಕ್ಕಗಳ ಸಮ್ಮೇಳನ ೭೩
ಡಾ. ವಿಲಾಸವತಿ ಖೂಬಾ, ಡಾ. ಜಯಶ್ರೀ ದಂಡೆ

ಶರಣಾಕ್ಷರ ಬಂಧ – ೧೧ ೭೪
ಡಾ. ಸಿ.ಕೆ ಜಗದೀಶ್

ಬಸವಪಥಿಕರ ಅನಿಸಿಕೆಗಳು ೭೬

Scanned with OKEN Scanner

CamScanner

ಸಿದ್ಧರಾಮೇಶ್ವರರ ಬಸವಸ್ತೋತ್ರದ ತ್ರಿವಿಧ : ಬಸವಣ್ಣನವರ ವ್ಯಕ್ತಿತ್ವ

ಡಾ. ಕೆ. ರವೀಂದ್ರನಾಥ

'ತ್ರಿಪದಿ' ಜನಪದೀಯರು ರೂಪಿಸಿದ ಹಾಡುಗಬ್ಬ. ಇದು ದೇಶೀ ಛಂದೋಮಟ್ಟು ಭಕ್ತಿ ಪ್ರತಿಪಾದನೆಗಾಗಿ ಜಾನಪದಿಯರು ನೇಯ್ದ ಅಪ್ಪಟ ಕನ್ನಡ ಛಂದೋಪ್ರಕಾರ.

ಬೆಳಗಾಗಿ ನಾನೆದ್ದು ಯಾರ್ಯಾರ ನೆನಯಲಿ
ಎಳ್ಳುಜೀರಿಗೆ ಬೆಳೆವಂಥ! ಭೂತಾಯಿ
ಎದ್ದೊಮ್ಮೆ ಗಳಿಗೆ ನೆನೆದೇನಾ।

ಎಂದು ಆರಂಭವಾಗುವ ಜನಪದರ ಭಕ್ತಿಯಿಂದ ಹಿಡಿದು ಬದುಕಿನ ನಾನಾ ಸಂಗತಿಗಳನ್ನು ತ್ರಿಪದಿಯಲ್ಲಿ ಹುರಿಗೊಳಿಸಿ ಅಭಿವ್ಯಕ್ತಿಸಿದ ಕನ್ನಡ ಗಂಗೋತ್ರಿ. ಇಂಥ ಜಾನಪದೀಯರು ರಚಿಸಿದ ತ್ರಿಪದಿಯನ್ನು ಶಿಷ್ಟಸಾಹಿತ್ಯ ವೇದಿಕೆಗೆ ತಂದು ನಿಲ್ಲಿಸಿದ ಕವಿ ಸರ್ವಜ್ಞ. ತಾನು ಕಂಡ ಸಾಮಾಜಿಕ ಚಿತ್ರಣಗಳನ್ನು ತ್ರಿಪದಿಯ ಮೂಲಕ ಬಿಡಿಸಿ ತೋರಿಸಿದವನು ಸರ್ವಜ್ಞ. ಸರ್ವಜ್ಞನ ತರುವಾಯ ಶಿವಶರಣರ ವಚನಗಳು, ಅಕ್ಕಮಹಾದೇವಿಯ ಯೋಗಾಂಗ ತ್ರಿವಿಧಿ, ಸಿದ್ಧರಾಮೇಶ್ವರರ ಬಸವಸ್ತೋತ್ರದ ತ್ರಿವಿಧಿ, ಅಷ್ಟಾವರಣ ತ್ರಿವಿಧಿ, ಮಿಶ್ರಸ್ತೋತ್ರದ ತ್ರಿವಿಧಿ, ಶಿವಯೋಗ ಷಟ್‌ಸ್ಥಲಾಭರಣ ತ್ರಿವಿಧಿಗಳು ಪ್ರಮುಖವಾಗಿವೆ. ತಮ್ಮ ಅನುಭಾವದ ಸಂಪತ್ತನ್ನು ಸಹಜವಾದ ದೇಶಿ ಹಾಡುಗಬ್ಬವೆನಿಸಿದ ತ್ರಿಪದಿ ಪ್ರಕಾರದಲ್ಲಿ ನಿರೂಪಿಸುವ ಕೃತಿಗಳಲ್ಲಿ ಶೀಲವಂತಯ್ಯನ ಆತ್ಮಲಿಂಗ ಪ್ರಣವ ಸಂಯೋಗಸ್ಥಲ ತ್ರಿವಿಧಿ, ಕರಸ್ಥಲ ನಾಗಿದೇವನ ತ್ರಿವಿಧಿ, ಪರಂಜ್ಯೋತಿಯ ಅನುಭವ ಮಕುರ, ನಿಜಗುಣರ ಅರವತ್ತುಮೂವರು ತ್ರಿವಿಧಿ, ಅನುಭವಸಾರ, ಮೈಲಾರ ಬಸವಲಿಂಗಶರಣರ ಗುರುಕರಣತ್ರಿವಿಧಿಗಳಲ್ಲದೆ ಸಿದ್ಧರಾಮೇಶ್ವರರ ವ್ಯಕ್ತಿತ್ವವನ್ನು ಮಹಾಕಾವ್ಯದಲ್ಲಿ ನಿರೂಪಿಸಿರುವ ಜಯದೇವಿತಾಯಿ ಲಿಗಾಡೆ ಅವರ ಸಿದ್ಧರಾಮೇಶ್ವರ ಪುರಾಣಗಳಲ್ಲದೆ ಚಾರಿತ್ರಿಕ ಕೃತಿಗಳಾದ ಗುಂಡಬ್ರಹ್ಮಯ್ಯ, ಶಿಬಿರಾಯರ ಚರಿತ್ರೆಗಳು ತ್ರಿಪದಿಯಲ್ಲಿ ಬರೆದವುಗಳಾಗಿವೆ.

Scanned with OKEN Scanner
CamScanner

ಕರ್ಮಯೋಗಿ ಶಿವಯೋಗಿ ಸಿದ್ಧರಾಮರು ತಾತ್ವಿಕವಾದ ತ್ರಿವಿಧಿಗಳನ್ನು ರಚಿಸಿದ್ದಾರೆ. ಸದ್ಯ ಯೋಗಿನಾಥ ಅಂಕಿತದ ೭೦೦ ತ್ರಿವಿಧಿಗಳು ಲಭ್ಯವಿವೆ. ಈ ೭೦೦ ತ್ರಿವಿಧಿಗಳು ಬಸವಸ್ತೋತ್ರ, ಅಷ್ಟಾವರಣ, ಮಿಶ್ರಸ್ತೋತ್ರ ಹಾಗೂ ಷಟಸ್ಥಲಾಭರಣ ಕೃತಿಗಳಲ್ಲಿ ಹಂಚಿಹೋಗಿವೆಂಬುದು ವಿದ್ವಾಂಸರ ಅಭಿಪ್ರಾಯ. ಬಸವಾದಿ ಪ್ರಮಥರ ವ್ಯಕ್ತಿತ್ವವನ್ನು ನಿರೂಪಿಸುವುದಕ್ಕೆ ಮಿಶ್ರಸ್ತೋತ್ರದ ತ್ರಿವಿಧಿ ರಚನೆಯಾಗಿದ್ದರೆ, ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ ಮಂತ್ರಗಳೆಂಬ ಶರಣ ತತ್ತ್ವದ ಅಷ್ಟಾವರಣಗಳನ್ನು ನಿರೂಪಿಸುವುದಕ್ಕೆ ಅಷ್ಟಾವರಣ ತ್ರಿವಿಧಿ ರಚನೆಯಾಗಿದೆ. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗ, ಶರಣ, ಐಕ್ಯವೆಂಬ ಷಟ್ಸ್ಥಲಗಳ ಮಹಿಮೆಯನ್ನು ನಿರೂಪಿಸುವುದಕ್ಕೆ ಶಿವಯೋಗ ಷಟ್ಸ್ಥಲಾಭರಣ ತ್ರಿವಿಧಿ ರಚಿಸಿದ್ದಾರೆ. ಆದರೆ ಶರಣ ಚಳುವಳಿಯ ನೇತಾರನಾದ ಬಸವಣ್ಣನವರ ವ್ಯಕ್ತಿತ್ವವನ್ನು ಕೊಂಡಾಡುವುದಕ್ಕೆ ೧೨೫ ತ್ರಿವಿಧಿಗಳ ಒಂದು ಸ್ವತಂತ್ರ ಚಿಕ್ಕ ಕೃತಿಯನ್ನು ರಚಿಸಿರುವುದು ಚಾರಿತ್ರಿಕ ದೃಷ್ಟಿಯಿಂದ ಮಹತ್ವದ ಸಂಗತಿ. ಯಾಕೆಂದರೆ ಬಸವಣ್ಣನವರನ್ನು ಕುರಿತು ತೆಲುಗು ಬಸವಪುರಾಣ, ಹರಿಹರನ ಬಸವರಾಜದೇವರ ರಗಳೆ, ಸಿಂಗಿರಾಜ ಪುರಾಣ, ವೃಷಭೇಂದ್ರ ವಿಜಯ, ಭಕ್ತಿರಸಸೋನೆಗಳಂಥ ಕೃತಿಗಳು ಬಸವಯುಗ ಮುಗಿದ ನಂತರದ ಕಾಲದಲ್ಲಿ ರಚನೆಯಾದ ಕೃತಿಗಳು. ಬಸವಣ್ಣನವರ ಸಮಕಾಲೀನನೂ, ಬಸವಣ್ಣನವರ ಆಶೋತ್ತರಗಳನ್ನು ಅನುಷ್ಠಾನಗೊಳಿಸುವ ಉದ್ದೇಶದಲ್ಲಿ ನೆರಳಿನಂತೆ ಹಿಂಬಾಲಿಸಿದವರಾದ ಸಿದ್ಧರಾಮೇಶ್ವರರು ಬರೆದ ಬಸವಸ್ತೋತ್ರದ ತ್ರಿವಿಧಿಗೆ ಸಾಹಿತ್ಯ ಮಹತ್ವದಷ್ಟೇ ಚಾರಿತ್ರಿಕ ಮಹತ್ವವೂ ಇದೆ.

ಪ್ರಾಚೀನ ಭಾರತೀಯರಿಗೆ ಐತಿಹಾಸಿಕ ಪ್ರಜ್ಞೆ ಕಡಿಮೆಯೆಂಬುದು ಸರ್ವವಿಧಿತ. ವಾಸ್ತವ ಸಂಗತಿಗಳಿಗೆ ಪೌರಾಣಿಕ ಬಣ್ಣವನ್ನು ಲೇಪಿಸಿ ಪವಾಡಗಳ ಜಾಲಗಳನ್ನು ಹೆಣೆದು ಕಥೆ ಹೇಳುವ ಸಂಪ್ರದಾಯ ಪ್ರಾಚೀನ ಕಾಲದಿಂದಲೂ ಬಂದಿದೆ. ಶಿವಶರಣರು ಈ ನೆಲದಲ್ಲಿ ಜನಿಸಿ, ತಮ್ಮ ನಡೆ-ನುಡಿಗಳಿಂದ ವ್ಯಕ್ತಿತ್ವ ವಿಕಸನ ಮಾಡಿಕೊಂಡರಲ್ಲದೆ ದೈವತ್ವದ ಮಟ್ಟವನ್ನು ಮುಟ್ಟಿದ್ದು ಸತ್ಯ ಸಂಗತಿ.

ಬಸವಣ್ಣನವರ ಸಮಕಾಲೀನರಾಗಿದ್ದ ಸಿದ್ಧರಾಮೇಶ್ವರರು ಅಸಾದೃಶ್ಯ ಮಹಾವ್ಯಕ್ತಿ. ಈತನನ್ನು ಕುರಿತು ಅಲ್ಲಮಪ್ರಭುಗಳ ವಚನವೊಂದು ಹೀಗಿದೆ.

ನಿರ್ವಿಕಲ್ಪಿತದ ಅದ್ವೈತವ ನೋಡಿರೆ !
ಬೆಳಗಿನೊಳಗಣ ಬೆಳಗು ಅಡಗಿತ್ತು ನೋಡಿರೆ !
ಚಂದ್ರ ಸೂರ್ಯರು ಭೂಲೋಕದೊಳು ಅಂದು ಅದಾರುವ ಕಾಣೆ !
ಜ್ಯೋತಿಯಿಲ್ಲದ ಬೆಳಗಿನ ಪ್ರಭೆಯೊ,
ಗುಹೇಶ್ವರಲಿಂಗದಲ್ಲಿ ಸಿದ್ಧರಾಮಯ್ಯದೇವರ ಮಹಾಘನವು !(೨,೧೩೦೯)

Scanned with OKEN Scanner
CamScanner



ನಿರ್ವಿಕಲ್ಪದ ಅದ್ವೈತದಲ್ಲಿ ಮೈಮರೆತು ನಿಬ್ಬೆರಗಿನಲ್ಲಿ ನೆಲೆನಿಂತ ಸಿದ್ಧರಾಮ ಶಿವಯೋಗಿಯ ಜ್ಯೋತಿಪ್ರಭೆಯ ಘನವ್ಯಕ್ತಿತ್ವವನ್ನು ಆ ಯುಗದ ಮಹಾಚೇತನ ಅಲ್ಲಮಪ್ರಭುಗಳು ಕೊಂಡಾಡಿದ ರೀತಿಯಿದು. ಶಿವಯೋಗದಲ್ಲಿ, ಅನುಭಾವದಲ್ಲಿ, ಕರ್ಮಯೋಗದಲ್ಲಿ ಏರಿದ ಎತ್ತರದ ದ್ಯೋತಕವಾಗಿದೆ; ಸಿದ್ಧರಾಮನ ವ್ಯಕ್ತಿತ್ವ ಸಿದ್ಧರಾಮದೇವರು ಹಿಮಗಿರಿಯ ಸದೃಶ್ಯ ವ್ಯಕ್ತಿತ್ವವನ್ನು ಹೊತ್ತುಕೊಂಡು ಭೂಮಿಗೆ ಇಳಿದುಬಂದ ಪವಾಡ ಪುರುಷರಲ್ಲ. ನಮ್ಮಂತೆ ಒಬ್ಬ ಸಾಮಾನ್ಯ ಮಾನವನಾಗಿ ಜನ್ಮ ತಳೆದು ಮಾನವೀಯತೆಯ ಉದಾತ್ತ ಮೌಲ್ಯಗಳ ಕುಲುಮೆಯಲ್ಲಿ ಅಂದರೆ ಮರ್ತ್ಯಲೋಕದ ಕರ್ತಾರನ ಕಮ್ಮಟದಲ್ಲಿ ಕಾಸಿ, ಕರಗಿಸಿಕೊಂಡು ಎರಕಹೊಯ್ದು ದಿವ್ಯಪ್ರಭೆಯನ್ನು ಅಂಗವಿಸಿಕೊಂಡ ಮಹಾನುಭಾವ.

ಸಿದ್ಧರಾಮನನ್ನು ಕುರಿತು ಶಾಸನಗಳು, ಸಮಕಾಲೀನ ವಚನಗಳು ಹರಿಹರ, ರಾಘವಾಂಕ, ಭೀಮಕವಿ, ಶೂನ್ಯಸಂಪಾದನಕಾರರು, ಲಕ್ಕಣ್ಣದಂಡೇಶ, ಚಾಮರಸ ಮುಂತಾದ ಕವಿಗಳ ತಮ್ಮ ಕಾವ್ಯಗಳಲ್ಲಿ ಉಲ್ಲೇಖಿಸಿರುವುದನ್ನು ಕಾಣುತ್ತೇವೆ. ಈ ಎಲ್ಲ ಕಾವ್ಯಪುರಾಣಗಳನ್ನು ಅಳೆದು ತೂಗಿ ಒಟ್ಟುಗೂಡಿಸಿ ವಿದ್ವಾಂಸರು ಸಿದ್ಧರಾಮೇಶ್ವರರ ಜೀವನವನ್ನು ಎರಡು ಹಂತಗಳಲ್ಲಿ ನಿರೂಪಿಸಿದ್ದಾರೆ. ಒಂದು; ಸಿದ್ಧರಾಮ ಕಲ್ಯಾಣಕ್ಕೆ ಬರುವ ಮುನ್ನ ಸೊನ್ನಲಿಗೆಯಲ್ಲಿ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿದ್ದು–ಇದು ಕ್ರಿಯೆ ಸಾದೃಶ್ಯವಾದದ್ದು. ಇನ್ನೊಂದು; ಕಲ್ಯಾಣಕ್ಕೆ ಬಂದು ಬಸವಾದಿ ಶರಣರ ಸಂಗದಲ್ಲಿ ಅನುಭಾವದ ಹಾದಿಯನ್ನು ಕಂಡುಕೊಂಡಿದ್ದು–ಇದು ಜ್ಞಾನ ಸಾದೃಶ್ಯವಾದದ್ದು. ಒಂದು ಕರ್ಮಯೋಗಿಯ ಹಂತ; ಇನ್ನೊಂದು ಶಿವಯೋಗಿಯ ಹಂತ; ಬಸವಸ್ತೋತ್ರದ ತ್ರಿವಿಧಿಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ.

ಹಸುಳೆಯಾಗಿಯು ನಾನು ಕೆರೆ–ಬಾವಿ–ದೇವಾಲ್ಯ
ವಿರಚಿಸಿ ಭವಕ್ಕೆ ಬಂದು ಫಲವನ್ನುಂಡು
ನರಕಕ್ಕೆ ಬೀಳುವವನ ಕರುಣ ಕರೆದಿಂದೆತ್ತಿ
ನಿನ್ನ ಹೊರೆಯೊಳಗಿರಿಸಿದೆ ಯೋಗಿನಾಥಾ!

ಕೆರೆ ಬಾವಿ ದೇವಾಲಯಗಳನ್ನು ನಿರ್ಮಿಸಿಕೊಂಡು ಭವದ ಫಲವನ್ನುಂಡು ನರಕಕ್ಕೆ ಬೀಳುವವನನ್ನು ಕರುಣದಿಂದೆತ್ತಿಕೊಂಡು ತನ್ನ ಹೊರೆಯೊಳಗೆ ಇರಿಸಿಕೊಂಡ ನಿಜಗುರು ಬಸವಣ್ಣನವರು. ಶಿವಯೋಗಿಯ ಶರೀರಂ ವೃಥಾ ಸವೆಸಲಾಗದು ಎಂಬ ಬದುಕಿನ ಆದರ್ಶವನ್ನು ಜಗತ್ತಿಗೆ ನೀಡಿದ ಕರ್ಮಯೋಗಿಯನ್ನು ಶಿವಯೋಗಿಯನ್ನಾಗಿ ಮಾಡಿದಾತ ಬಸವಣ್ಣನವರು.

Scanned with OKEN Scanner
CamScanner

'ತ್ರಿವಿಧಿ' ಎಂಬುದಕ್ಕೆ ವಚನಕಾರರಲ್ಲಿ ವಿಶೇಷ ಅರ್ಥವಿದೆ. ಮೂರು ಸಾಲಿನ ಪದ್ಯ ಪ್ರಕಾರವನ್ನು ಛಂದಸ್ಸಿನ ಲೆಕ್ಕಾಚಾರದಲ್ಲಿ ತ್ರಿಪದಿ ಎನ್ನಲಾಗಿದೆ. ಆದರೆ ಅಕ್ಕಮಹಾದೇವಿಯ ಯೋಗಾಂಗ ತ್ರಿವಿಧಿ, ಸಿದ್ಧರಾಮರ ತ್ರಿವಿಧಿಗಳನ್ನು ಗಮನಿಸಿದರೆ ಇಲ್ಲಿಯ 'ತ್ರಿವಿಧಿ' ಎಂಬುದಕ್ಕೆ ವಚನಕಾರರ ದೃಷ್ಟಿಯಲ್ಲಿ ವಿಶೇಷ ಅರ್ಥವಿದೆ ಎನಿಸುತ್ತದೆ. ಸ್ಥೂಲ-ಸೂಕ್ಷ್ಮ-ಕಾರಣ ಶರೀರಗಳಿಗೆ ಕ್ರಮವಾಗಿ ಇಷ್ಟಲಿಂಗ-ಪ್ರಾಣಲಿಂಗ-ಭಾವಲಿಂಗಗಳನ್ನು ಧರಿಸಿ ತ್ರಿವಿಧ ಪೂರ್ವಕವಾಗಿ ಅಂಗಗುಣಗಳನ್ನು ಅಳಿದು ಲಿಂಗಗುಣಗಳನ್ನು ತಾಳುವುದೇ "ತ್ರಿವಿಧಿ" ಶಬ್ದಕ್ಕಿರುವ ವಿಶೇಷಾರ್ಥ.

ಬಸವಸ್ತೋತ್ರದ ತ್ರಿವಿಧಿ: ಬಸವಣ್ಣನ ವ್ಯಕ್ತಿತ್ವ; ಬಸವಣ್ಣನವರ ಭಕ್ತಿಯ ಪ್ರಭಾವದಿಂದ ಬಸವಸ್ತೋತ್ರದ ತ್ರಿವಿಧಿಯನ್ನು ಸಿದ್ಧರಾಮೇಶ್ವರರು ರಚಿಸಿದ್ದಾರೆ. ೧೨೫ ತ್ರಿವಿಧಿಗಳಿಂದ ಕೂಡಿದ ಈ ಲಘುಕೃತಿ. ಸಿದ್ಧರಾಮೇಶ್ವರ ತ್ರಿವಿಧಿಗಳನ್ನು ಸಂಪಾದಿಸಿದ ಜಿ.ಎ. ಶಿವಲಿಂಗಯ್ಯನವರು "ಬಸವಣ್ಣನವರು ಬಯಲಾದ ಮೇಲೆ ರಚಿಸಿರುವ ಸಾಧ್ಯತೆಯಿದೆ ಯೆಂದು ಅಭಿಪ್ರಾಯಪಟ್ಟಿದ್ದಾರೆ." ಒಂದರ್ಥದಲ್ಲಿ ಬಸವಣ್ಣನವರನ್ನು ಕುರಿತ 'ಚರಮಗೀತೆ' ಯಾಗಿದೆ ಎನ್ನುತ್ತಾರೆ.

ಕನ್ನಡದಲ್ಲಿ ಬಸವಣ್ಣನವರನ್ನು ಕುರಿತು ರಚನೆಯಾದಷ್ಟು ಸಾಹಿತ್ಯ ಸಾಮಾಗ್ರಿ ಬೇರಾರನ್ನೂ ಕುರಿತು ರಚನೆಯಾಗಿಲ್ಲವೆನಿಸುತ್ತದೆ. ವಚನ, ಚಂಪೂ, ರಗಳೆ, ಸಾಂಗತ್ಯ, ಷಟ್ಪದಿ, ಯಕ್ಷಗಾನ, ತ್ರಿವಿಧಿ ಮುಂತಾದ ಆಕರಗಳನ್ನೆಲ್ಲ ಬಳಸಿಕೊಂಡು ಬಸವಣ್ಣನವರ ಚರಿತ್ರೆಯನ್ನು ಹರಿಹರನ ಸಂಪ್ರದಾಯ, ಭೀಮಕವಿಯ ಸಂಪ್ರದಾಯ(ಪಾಲ್ಕುರಿಕೆ ಸೋಮನಾಥ), ಸಿಂಗಿರಾಜ ಸಂಪ್ರದಾಯ ಹಾಗೂ ಕೊಡೇಕಲ್ಲ ಸಂಪ್ರದಾಯಗಳ ನೆಲೆಯಲ್ಲಿ ನಿರೂಪಿಸಲಾಗಿದೆ. ಆದರೆ ತ್ರಿವಿಧಿಗಳ ಮೂಲಕ ಬಸವಣ್ಣನವರ ಉದಾತ್ತ ಚರಿತ್ರೆಯನ್ನು ರಚಿಸಬಹುದು ಎಂಬುದಕ್ಕೆ ಸಿದ್ಧರಾಮೇಶ್ವರರ ಬಸವಸ್ತೋತ್ರದ ತ್ರಿವಿಧಿ ಉತ್ತಮ ನಿದರ್ಶನವಾಗಿದೆ.

ಅಲ್ಲಮಪ್ರಭು ಲೋಕಯಾತ್ರೆ ಗೈಯುತ್ತಾ ಸೊನ್ನಲಿಗೆಗೆ ಬಂದು ಸಿದ್ಧರಾಮೇಶ್ವರರನ್ನು ಕಲ್ಯಾಣಕ್ಕೆ ಕರೆದೊಯ್ಯುತ್ತಾರೆ. ಅಲ್ಲಿ ವೈರಾಗ್ಯನಿಧಿ ಅಲ್ಲಮಪ್ರಭು, ಭಕ್ತಿಭಂಡಾರಿ ಬಸವಣ್ಣ, ಮಹಾಜ್ಞಾನಿ ಚನ್ನಬಸವಣ್ಣ ಮುಂತಾದ ಚೇತನಗಳು ಸಿದ್ಧರಾಮನನ್ನು ಷಟ್ಸ್ಥಲದ ಮಾರ್ಗದಲ್ಲಿ ಮುನ್ನಡೆಸುತ್ತವೆ. ಇದು ಸಿದ್ಧರಾಮನ ಜೀವನದಲ್ಲಿ ಮಹತ್ತರವಾದ ಘಟನೆ. ಬಸವಣ್ಣನವರ ವಿಶ್ವವಿಶಾಲ ತತ್ವಗಳ ಆವಿಷ್ಕಾರಕ್ಕೆ ಬೆರಗಾಗಿ, ತನಗಾದ ಸತ್ಯದರ್ಶನವನ್ನು ದಣಿವಿಲ್ಲದೆ ಹಾಡಿ ಹೊಗಳಿದ್ದಾನೆ. ಬಸವಣ್ಣ ಲಿಂಗಾಯತ ಧರ್ಮವನ್ನು ಸ್ಥಾಪಿಸಿದ ಮಹಾವ್ಯಕ್ತಿ. ಲೌಕಿಕವಾಗಿ ಬಿಜ್ಜಳನ ಭಂಡಾರಿಯಾದರೂ, ಕಲ್ಯಾಣದ ಶಿವಶರಣರ ಸಂಗದಲ್ಲಿ ಆತ ಭಕ್ತಿಭಂಡಾರಿ! ಎನಗಿಂತ ಕಿರಿಯರಿಲ್ಲ ಶಿವ ಭಕ್ತರಿಗಿಂತ

Scanned with OKEN Scanner
CamScanner

ಹಿರಿಯರಿಲ್ಲ ಎಂದು ಸಾರಿ ಸಾರಿ ಹೇಳಿದ್ದರಿಂದಲೇ ಆತನನ್ನು ವಿಕಾಸಶೀಲವಾದ ನಿಲುವಿಗೆ ಏರಿಸಿತ್ತು. ಇಂಥ ವ್ಯಕ್ತಿತ್ವವುಳ್ಳ ಬಸವಣ್ಣನವರನ್ನು ಎಷ್ಟು ಸ್ತುತಿ ಮಾಡಿದರೂ ಸಿದ್ಧರಾಮೇಶ್ವರರಿಗೆ ತೃಪ್ತಿಯಿಲ್ಲ. ಹಾಗಾಗಿ ಬಸವಸ್ತೋತ್ರದ ತ್ರಿವಿಧಿಗಳಲ್ಲದೆ, ಮಿಶ್ರಸ್ತೋತ್ರದ ತ್ರಿವಿಧಿಗಳಲ್ಲಿಯೂ ಬಹುಪಾಲು ಬಸವಸ್ತುತಿಯ ತ್ರಿವಿಧಿಗಳಿವೆ.

ಮೂರಾರು ಛೇದವನು ಜಾರಿ ನಿಜದಲಿ ನಿಂದು
ಬೇರ ತೊಟ್ಟನೆ ಕಡಿದು ಖಂಡಿಸಿದನು
ನೀರ ನಿಃಪತಿಯಾದ ನಿರ್ಮಲ ಪದದಲ್ಲಿ
ಆರೂಢ ಬಸವನೈ ಯೋಗಿನಾಥ।

ಬಸವಣ್ಣ ಭವದ ಬೇರನ್ನು ಕಿತ್ತು ಹಾಕಿದ ಮಹಿಮ. ಮಲತ್ರಯಗಳನ್ನು, ಅರಿಷಡ್ವರ್ಗಗಳನ್ನು ಗೆದ್ದು ನಿಜದ ನಿಲುವನ್ನು ಸಾಧಿಸಿದ ಆರೂಢನಾಗಿದ್ದಾನೆ.

ಬಸವೇಶನೇ ಬಸವರಾಜನೇ
ಬಸವಣ್ಣನೇ ಬಸವತಂದೆ ಬಸವ ಕೃಪಾನಿಧಿ।
ಬಸವನೀ ಪರಮೇಶ್ವರಾ
ಬಸವಪ್ರಮಥಾದಿದೇವ ರಕ್ಷಿಸು ಬಸವಾ!!

ಎನ್ನುವಲ್ಲಿ ಸಿದ್ಧರಾಮೇಶ್ವರರಿಗೆ ಪರಶಿವ ಬೇರೆಯಲ್ಲ. ಬಸವಣ್ಣನವರೂ ಬೇರೆಯಲ್ಲ ಆತ ಸಾಕ್ಷಾತ್ ಶಿವಸ್ವರೂಪಿ. ಲಿಂಗಾಯತ ಪರಿಭಾಷೆಯಲ್ಲಿ 'ಪರತತ್ವ' ಎಂಬುದು ಆದಿಗೆ ಆದಿ, ಅನಾದಿಗೆ ಅನಾದಿ. ಬಸವಣ್ಣ ನಿಃಕಲ ಶೂನ್ಯಸ್ವರೂಪಿ. ಆತನಿಂದಲೇ ಲಿಂಗವಾಯಿತು, ಸಕಲತತ್ವ ಬ್ರಹ್ಮಾಂಡವೆಲ್ಲ ರೂಪತಾಳಿತು, ಆತನೇ ಮೊದಲಿಗ ಎಂದು ಕೊಂಡಾಡುವ ತ್ರಿವಿಧಿ ಹೀಗಿದೆ.

ಪ್ರಥಮಂತು ಬಸವಣ್ಣ ದ್ವಿತಿಯಂತು ಲಿಂಗವು
ತೃತಿಯಂತು ತತ್ತ್ವ ಬ್ರಹ್ಮಾಂಡವೆಲ್ಲ।
ಅಕಳಂಕ ಗುಣನಿಧಿ ಚಿದಾನಂದ ಬಸವಂಗೆ
ಭಕುತನಾದೆನು ಗುರುವೆ ಯೋಗಿನಾಥಾ॥

ಭೂಮಿ ಹುಟ್ಟಿದ ಮುನ್ನ ಬಸವಣ್ಣನವರು ಜನಿಸಿದರೆಂಬುದು ಸಿದ್ಧರಾಮೇಶ್ವರರ ಗುಣಗಾನವಾಗಿದೆ. ಸೃಷ್ಟಿಗೆ ಆದಿ-ಅಂತ್ಯ ಎಲ್ಲವೂ ಸರ್ವಶೂನ್ಯಲಿಂಗ. ಬಸವಣ್ಣ ಈ ಲಿಂಗಕ್ಕಿಂತಲೂ ಪ್ರಥಮನಾಗಿದ್ದಾನೆ.

ವಸುಧೆ ಹುಟ್ಟದ ಮುನ್ನ ಬಸವಣ್ಣ ಹುಟ್ಟಿದನು
ಶಶಿಧರನು ಶಿವಮೂರ್ತಿ ಒರದನಯ್ಯಾ।

Scanned with OKEN Scanner
CamScanner

ಅಸಮಾಕ್ಷನವತಾರ ಮೂರ್ತಿ ತಾಳಿದ ಗುರು
ಬಸವಣ್ಣ ಬಸವಯ್ಯಾ ಯೋಗಿನಾಥ॥

ಬಸವನೇ ಜಗದಾದಿ ತತ್ವಕ್ಕತೀತನು
ಬಸವನೇ ಪರಬ್ರಹ್ಮ ಸ್ವರೂಪನು
ಬಸವನಾದಿ ಲಿಂಗ ಬಸವನಾದಿಚರ
ಬಸವನಿಂದಧಿಕವುಂಟೇ ಯೋಗಿನಾಥ।

ಬಸವಣ್ಣನೇ ಜಗದಾದಿ, ಆತನೇ ತತ್ವಕ್ಕೆ ಅತೀತ, ಆತನೇ ಸತ್ಯ-ಲಿಂಗ-ನಿತ್ಯಾಂಗ ಆತನೇ

ಆದಿಗುರು ಬಸವಣ್ಣ ಅನಾದಿಗುರು ಬಸವಣ್ಣ
ಬೇದಕ್ಕೆ ಬೇಧ್ಯನು ಬಸವಣ್ಣನು
ನಾದ ಬಿಂದು ಕಳಾತೀತ ಬಸವಯ್ಯನೂ
ಎನ್ನಾರಾಧ್ಯ ಗುರುಬಸವ ಯೋಗಿನಾಥ।

ಬಸವನೇ ಸತ್ಯಾಂಗ ಬಸವನೇ ನಿತ್ಯಾಂಗ
ಬಸವನೇ ಪರಮ ಚಿತ್‌ಸ್ವರೂಪನು
ಬಸವನನಾದಿ ಲಿಂಗ ಬಸವನನಾದಿ ಚರ
ಬಸವನಿಂದಧಿಕವುಂಟಿ ಯೋಗಿನಾಥ

ಸಿದ್ಧರಾಮೇಶ್ವರರಿಗೆ ಬಸವನಿಂದಧಿಕನು ಯಾರೂ ಇಲ್ಲ. ಯಾಕೆಂದರೆ ಕಲ್ಯಾಣದ ಶಿವಶರಣರ ದಿವ್ಯಸಂಗವನ್ನು ದೊರಕಿಸಿ, ತನ್ನ ಜೀವನವನ್ನು ಪಾವನಗೊಳಿಸಿದ ಬಸವಣ್ಣನವರು ಸಿದ್ಧರಾಮೇಶ್ವರರ ದೃಷ್ಟಿಯಲ್ಲಿ ಪರಮ ಶ್ರೀಗುರುವಾದರು. ತೊತ್ತಿನ ಮಗನೆ ನೀನಿತ್ತ ಬಾ ಎಂದು ಎತ್ತಿ ಸಲಹಿದ ಬಸವಣ್ಣನವರು ನಿತ್ಯಲಿಂಗಾರ್ಚಕರ ಭೃತ್ಯನಾಗಿರುವಂತೆ ಸಿದ್ಧರಾಮೇಶ್ವರರಿಗೆ ಕರುಣಿಸಿ ಉದ್ಧರಿಸಿದವನು. ಅಷ್ಟೇ ಅಲ್ಲ ಭಕ್ತಿಗೆ ಬೀಜ ಬಸವಣ್ಣನಾಗಿದ್ದಾನೆ.

ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ಬೀಜ
ಬಸವಪ್ಪ ನಿಮ್ಮಡಿಗೆ ಶರಣು ಶರಣು
ಬಸವ ಗುರುಪದಧ್ಯಾನ ಬಸವಶಿವಪದಧ್ಯಾನ
ಬಸವ ಧ್ಯಾನವೇ ಧ್ಯಾನ ಯೋಗಿನಾಥ

ಬಸವ ಬೀಜದ ಸಂಕೇತ, ಬಸವ ಧ್ಯಾನದ ಸಂಕೇತ, ಬಸವ ಗುರುಪದ ಸಂಕೇತ, ಬಸವ ಶಿವಪದ ಸಂಕೇತ. ಮುಸುಕಿದ್ದ ಶಿವಜ್ಞಾನ, ಶಿವಭಕ್ತಿಗಳು

Scanned with OKEN Scanner
CamScanner

ಬಸವಾಕ್ಷರತ್ರಯದಲ್ಲಿ ಬೆಳಕಿಗೆ ಬಂದಿವೆ. ಜಗತ್ತಿನಲ್ಲಿ ಮುಕ್ತಿ ಮೂರುತಿಯವರು ಇದ್ದಾರೆ; ಮೂರುತಿಗಳಲ್ಲಿ ಮುಕ್ತಿ ಬಯಸುವವರಿದ್ದಾರೆ. ಇವರೀರ್ವರು ಯುಕ್ತರೇ ಸರಿ. ಆದರೆ, ಲಿಂಗನಿಷ್ಠರಲ್ಲ! ಬಸವಣ್ಣನಲ್ಲಿಯೇ ಮುಕ್ತಿ ಅಡಗಿ ಕುಳಿತಿರುವಾಗ ಮುಕ್ತಿಯೋಗಿಗಳೇಕೆ ಬೇಕು ಎಂಬುದು ಸಿದ್ಧರಾಮನ ಪ್ರಶ್ನೆ. ಬಸವಣ್ಣ ಕರ್ಮಯೋಗದವರ ಕಳಿದು ಖಂಡಿಸಿದವನು. ಅಂದರೆ ಶರಣ ತತ್ತ್ವದಲ್ಲಿ ಕ್ರಿಯೆ-ಜ್ಞಾನಗಳಿಗೆ ಹೆಚ್ಚು ಮಹತ್ವ. ಕೇವಲ ಕ್ರಿಯೆ ಪೂರ್ಣ ತತ್ವವಲ್ಲ! ಕೇವಲ ಜ್ಞಾನ ಪೂರ್ಣ ತತ್ತ್ವವಲ್ಲ! ಕ್ರಿಯೆ-ಜ್ಞಾನಗಳ ಸಮನ್ವಯವೇ ಶರಣ ಸಿದ್ಧಾಂತ. ಕರ್ಮಯೋಗಿಯಾಗಿದ್ದ ಸಿದ್ಧರಾಮನನ್ನು ಶಿವಯೋಗಿಯನ್ನಾಗಿ ರೂಪಿಸಿದ ಬಸವಣ್ಣ. ಆತ್ಮ ಉದ್ಧಾರ ಮತ್ತು ಸಮಾಜ ಉದ್ಧಾರ ಶರಣಸಿದ್ಧಾಂತ. ಬಸವಣ್ಣನ ದೃಷ್ಟಿಯಲ್ಲಿ ಒಂದು ಅಂತರಂಗ ಶುದ್ಧಿ ಮತ್ತೊಂದು ಬಹಿರಂಗ ಶುದ್ಧಿ- ಈ ಎರಡೂ ಶುದ್ಧಿಗಳಿಂದ ಕೂಡಲ ಸಂಗಮನನ್ನು ಒಲಿಸಿಕೊಳ್ಳಲು ಸಾಧ್ಯವೆಂಬುದು ಆತನ ವಚನಗಳಿಂದ ತಿಳಿದು ಬರುವ ಸಂಗತಿ. ಇದನ್ನೆ ಸಿದ್ಧರಾಮನು ಒಳಗೆ ಲಿಂಗದ ಕೂಟ-ಹೊರಗೆ ಜಂಗಮ ಮಾಟ, ಒಳಹೊರಗೆ ಭಿನ್ನವಿಲ್ಲದೆ ನಿಂದನ್ಯೆ ಬಸವಣ್ಣ ಎನ್ನುವಲ್ಲಿ ಲಿಂಗ-ಜಂಗಮಲಿಂಗವಾಗಬೇಕು. ಸಮಾಜಮುಖಿಯಾಗಬೇಕೆಂಬ ಆಶಯವನ್ನು ವ್ಯಕ್ತಪಡಿಸಿದ್ದಾನೆ. ಆ ರೀತಿ ಬದುಕಿದಾತ ಬಸವಣ್ಣ! ತತ್ತ್ವತುಯಾರ್ಥ ದಿಂದತ್ತತ್ತಲಾದುದನು ಅತ್ಯಂತ ಕರತಲದಲಿ ನಿಲಿಸಿ! ಅಗಲದಾನಂತರದ ಮಿಗೆಮಿಗೆ ಬ್ರಹ್ಮಾವನು ತೆಗೆತೆಗೆದು ತೋರಿದನು ಕರತಲದಲಿ ಎನ್ನುವ ಸಿದ್ಧರಾಮನ ತ್ರಿಪದಿ ಬಸವಣ್ಣನವರ

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ,
ಪಾತಾಳದಿಂದವೆ ಅತ್ತತ್ತ ನಿಮ್ಮ ಶ್ರೀಚರಣ,
ಬ್ರಹ್ಮಾಂಡದಿಂದವೆ ಅತ್ತತ್ತ ನಿಮ್ಮ ಶ್ರೀಮಕುಟ,
ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ, ಕೂಡಲಸಂಗಮದೇವಯ್ಯಾ,
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ. (೧, ೭೪೪)

ಎಂಬ ವಚನ ತಾತ್ವಿಕತೆಯನ್ನು ಚಿತ್ರಿಸುತ್ತದೆ. ಉತ್ಕಟ ಭಾವಾವೇಶದ ಬಸವಸ್ತೋತ್ರದ ತ್ರಿಪದಿಗಳು ಮನೋಜ್ಞಗೀತೆಗಳಾಗಿವೆ. ನಿರ್ಮಲವೂ ನಿಷ್ಕಪಟವೂ ಆದ ಭಾವನೆಗಳಿಂದ ಇಲ್ಲಿಯ ಪದ್ಯಗಳು ಸುಂದರ ಭಾವಗೀತೆಗಳಾಗಿವೆ. ಹಿರಿಯ ವ್ಯಕ್ತಿತ್ವವನ್ನು ಪಡೆದ ಬಸವಣ್ಣನವರು ಸಿದ್ಧರಾಮನಂಥ ಸಂಸ್ಕೃತಿ ಸಂಪನ್ನನನ್ನು ಯಾವ ರೀತಿ ಆಕರ್ಷಿಸಿದ್ದಾರೆ ಎಂಬುದು ಇಲ್ಲಿಯ ಪದ್ಯಗಳಿಂದ ತಿಳಿದು ಬರುತ್ತದೆ. "ಸಂಗನ ಬಸವನ ಶ್ರೀಪಾದ ಕಮಲದೊಳು ಭೃಂಗನಾಗಿರಿಸಯ್ಯ ಯೋಗಿನಾಥಾ" ಎಂದು ವಿನಮ್ರವಾಗಿ ಹೇಳುವಲ್ಲಿ ಬಸವಣ್ಣ ವ್ಯಕ್ತಿತ್ವದ ಸೊಗಸಿದೆ. ಸಿದ್ಧರಾಮನ ಕಣ್ಣಿಗೆ "ಮಾತು ತಾ ಬಸವಣ್ಣ ನೀತಿ ತಾ

Scanned with OKEN Scanner
CamScanner

ಬಸವಣ್ಣ ಆತುಮ ಶಿವರೂಪವೂ ಬಸವಣ್ಣನಾಗಿ ತೋರುತ್ತಾನೆ." ಹರಿಹರನ ಶತಕಗಳ ಭಾವವೇಶ ಇಲ್ಲಿ ಕಂಡುಬರುತ್ತದೆ.

ಭಕ್ತಿಯ ಜೀವಸೆಲೆಯಾಗಿರುವ ಸಿದ್ಧರಾಮನ ತ್ರಿವಿಧಿಗಳಲ್ಲಿ ಐತಿಹಾಸಿಕ ಸಂಗತಿಗಳನ್ನು ಹುಡುಕುವ ಪ್ರಯತ್ನವನ್ನು ವಿದ್ವಾಂಸರು ಮಾಡಿದ್ದಾರೆ.

ಕಲುಗಿರಿಯ ಮಠದಲ್ಲಿ ಕಂಗೊಳಿಸಿ ಕಳಶವನು
ನೆಲೆಯ ಬ್ರಹ್ಮಾಂಡವನು ಅನುವು ಮಾಡಿ
ಸುಲಲಿತ ಪ್ರಸಾದ ರೂಪು ಎನ್ನಯ ಭಾವ
ತಲೆರೂಪು ಬಸವಣ್ಣ ಯೋಗಿನಾಥ॥

ಸಾಗರದ ಬ್ರಹ್ಮವನು ಸಾಧಿಸಿ ಬ್ರಹ್ಮಾಂಡದಲಿ
ನೀಗಿನಿಃಪತಿಯಾದ ಮಳೆಯ ಮಠದ
ಆಗದ ಅರಸನ ಕಳೆದು ಕಂಗೊಳಿಸಿದನು
ಯೋಗಿ ಗುರುಬಸವನ್ಯೆ ಯೋಗಿನಾಥ॥

ಈ ಎರಡೂ ತ್ರಿವಿಧಿಗಳನನು ಆಶ್ರಯಿಸಿ ಜಿ.ಎ. ಶಿವಲಿಂಗಯ್ಯನವರು ಕಲ್ಯಾಣಕ್ರಾಂತಿಯಿಂದ ನೊಂದ ಬಸವಣ್ಣ ತನ್ನ ಜೀವಿತದ ಕೊನೆಗಾಲವನ್ನು ಕಲುಗಿರಿಯ ಮಠ-ಮಳೆಯ ಮಠಗಳಲ್ಲಿ ಕಳೆದಿರಬೇಕೆಂದು ಊಹಿಸುತ್ತಾರೆ. ಐತಿಹಾಸಿಕ ವ್ಯಕ್ತಿಯಾದ ಬಸವಣ್ಣನವರ ನಿಜಚರಿತ್ರೆಯ ನಿರೂಪಣೆಗೆ ತ್ರಿವಿಧಿಯಂಥ ಲಘುಸಾಹಿತ್ಯವೂ ಆಕರವಾಗಬಹುದು ಎಂಬುದನ್ನು ವಿದ್ವಾಂಸರು ಪರಿಗಣಿಸಬಹುದಾಗಿದೆ.

ಪೂರಕ ಸಾಹಿತ್ಯ

೧. ಬಸವಯುಗದ ವಚನೇತರ ಸಾಹಿತ್ಯ: ಸಂ.ಡಾ.ಕೆ. ರವೀಂದ್ರನಾಥ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೨. ಸಿದ್ಧರಾಮನ ಶಿವಯೋಗಿ:ಎಂ.ಬಿ.ಕೊಟ್ರಶೆಟ್ಟಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫

೩. ಶ್ರೀ ಸಿದ್ಧರಾಮೇಶ್ವರ ತ್ರಿವಿಧಿಗಳು:ಸಂ.ಜಿ.ಎ.ಶಿವಲಿಂಗಯ್ಯ, ಶಿವಕರಿ ಪ್ರಕಾಶನ, ಮೈಸೂರು ೧೯೯೪

ಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಮೊ: 95911 09790

◈◈

ಸೆಪ್ಟೆಂಬರ್ ೨೦೨೩

ಬಂದಡೊಂದು ಲೇಸು, ಬಾರದಿದ್ದಡೆರಡು ಲೇಸು.

Scanned with OKEN Scanner
CamScanner

ISSN: 2348-7666
ISSN: 2348-7666; Volume 10, Issue 2(1), April-June, 2023
IMPACT FACTOR: 6.023

International Journal of Academic Research

Quarterly

VOICE OF INTELLECTUALS

PEER REVIEWED JOURNAL

Editors:

Dr. Haniyuru Chandre Gowda

Associate Professor in Kannada, National Tribals & Folkloric Researcher
Director & Head, Birsa Munda Tribals Community Development &
Research Center (BMTC-DRC), Bengaluru

Dr. Mallappa Bandi
Shri Anand Indoor
Manjula T. Badami



Multidisciplinary, Multiple Languages
Refereed and Indexed Journal

Editor-in-Chief
Dr. T.V. Ramana

18	Role Of Government Of India In Promoting Sports Culture - **Parasuram Manappa Lamani**	94
19	ಬರಪೀಡಿತ ಪ್ರದೇಶದ ರೈತರ ಸ್ಥಿತಿಗತಿಗಳು – **ತಿಮ್ಮನಾಯಕ ಕೆ.ಬಿ., ಡಾ. ಆಂಜನಪ್ಪ ಬಿ.ಹೆಚ್**	98
20	ಲಕ್ಕುಂಡಿಯ ಕಲ್ಯಾಣದ ಚಾಲುಕ್ಯರ ರಾಜಕೀಯ ಇತಿಹಾಸ – **ಶ್ರೀ ರಮಜಾನಸಾಬ ನದಾಫ**	106
21	ಅಮೃತಮತಿ – **ಪವಿತ್ರ ಎಸ್**	109
22	ಕನ್ನಡ ಭಾಷೆಯ ಸ್ಥಿತಿ–ಗತಿ – **ಲೋಕಾಂಬಿಕಾ**	116
23	ದಾಸ ಸಾಹಿತ್ಯದಲ್ಲಿ ಸಂಸ್ಕೃತಿ ಮತ್ತು ಜೀವನಾದರ್ಶಗಳು – **ಸುಜಾತ ಬಿ**	121
24	ಮರಾತತ್ವಶಾಸ್ತ್ರಜ್ಞರಾಗಿ ಡಾ. ಅ ಸುಂದರ – **ಬಸವರಾಜ, ಡಾ. ಎಸ್ ಜಿ ಚಲವಾದಿ**	125
25	ಮಹಿಳಾ ಜಾಗೃತಿ – **ಪ್ರೋ. ಸಾವಿತ್ರಿ .ಸಿ. ಶಿಗ್ಲಿ**	130
26	ಸತಿಪತಿಗಳೊಂದಾದ ಭಕ್ತಿ – **ಡಾ. ಎ.ಸಿ. ವಾಲಿ**	134
27	ಮಡಿವಾಳರ ಕುರಿತಾದ ಗಾದೆ ಹಾಗೂ ಒಗಟುಗಳು – **ಡಾ. ಚನಬಸಪ್ಪ ಎಸ್. ಕುಮ್ಮೂರ**	138
28	News Paper Reading Habits Among Postgraduate Students Of Karnataka Folklore University Gotagodi: A Study - **Dr. Manjunath Angadi**	143
29	ದಖ್ಖಿನ್ ಬಹಮನಿಯರ ಕಲೆ ಮತ್ತು ವಾಸ್ತುಶಿಲ್ಪ – **ಡಾ.ಗಂಗಮ್ಮ.ಎಂ**	151
30	ಸದಮಲ ಜ್ಞಾನದಕುದಿಯುಕ್ಕಿ ಬಂದಾಗ – **ಡಾ.ಎಸ್.ಶಶಿರೇಖಾ**	157
31	ವೈಶಾಖ ಕಾದಂಬರಿಯಲ್ಲಿ ಅಂತರಂಗ ಪರಿವೀಕ್ಷಣಾ ಪಾತ್ರಗಳು – **ಶ್ರೀ ಆನಂದ ಇಂದೂರ**	162
32	ನೆಲೆಬೆಲೆ ಕಾದಂಬರಿ : ಸ್ತ್ರೀ ಪಾತ್ರಗಳು – **ಅಕ್ಕಮಹಾದೇವಿ ಮಾದಣ್ಣವರ**	167
33	Psychic intricacies in women characters in novels of Shobha De - **B K Manjunath**	172
34	ಕುವೆಂಪು ಅವರ 'ಜಲಗಾರ' ನಾಟಕ ತೋರುತ್ತಿರುವುದೇನು? – **ಡಾ. ಬಿ.ಎಂ. ಪುಟ್ಟಯ್ಯ**	179
35	Status of Sericulture in Present Scenario: A Sociological Study - **Dr. Sanjay Gandhi, Kumara P B**	187
36	Problems Of Unorganized Sector Workers In Davanagere District - **Dr. Ramachandrappa S**	199
37	ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಮೈಸೂರು ಪ್ರಾಂತ್ಯದ ವಿದ್ಯಾರ್ಥಿಗಳ ಪಾತ್ರ – **ಡಾ. ಮಾರುತಿ ಹೆಚ್**	206

International Journal of Academic Research
ISSN: 2348-7666; Vol.10, Issue 2(1), April-June, 2023
Impact Factor: 6.023; Email: drtribe79@gmail.com

KUVEMPU AVARA 'JALAGARA' NATAKA TORUTTIRUVUDENU?

ಕುವೆಂಪು ಅವರ 'ಜಲಗಾರ' ನಾಟಕ ತೋರುತ್ತಿರುವುದೇನು?

– ಡಾ. ಬಿ.ಎಂ. ಪುಟ್ಟಯ್ಯ
ಪ್ರಾಧ್ಯಾಪಕರು,
ಕನ್ನಡ ವಿಶ್ವವಿದ್ಯಾಲಯ, ಹಂಪಿ.



'ಜಲಗಾರ' ನಾಟಕವನ್ನು ಕುವೆಂಪು 1928ರಲ್ಲಿ ಪ್ರಕಟಿಸಿದರು. ಆ ಹೊತ್ತಿಗೆ ಇವರು ಕಾವ್ಯ ಹಾಗೂ ನಾಟಕ ಪ್ರಕಾರದಲ್ಲಿ ಕೃಷಿಮಾಡಿದ್ದರು. ಕನ್ನಡ ನಾಟಕ ಪರಂಪರೆಯಲ್ಲಿ ಸಂಸ್ಕೃತ ಹಾಗೂ ಇಂಗ್ಲಿಶ್ ನಾಟಕಗಳ ಕನ್ನಡ ಅನುವಾದ ಮತ್ತು ಸ್ವತಂತ್ರ ನಾಟಕಗಳು ಬರುತ್ತಿದ್ದವು. ಕುವೆಂಪು ಅವರ ನಾಟಕದ ಶೀರ್ಷಿಕೆ 'ಜಲಗಾರ'. ಇದು ಭಾರತೀಯ ಸಮಾಜದಲ್ಲಿ ವೃತ್ತಿಸೂಚಕ ಪದ. ನಾಟಕದ ಕೊನೆಯಲ್ಲಿ ಶಿವ ಪ್ರತ್ಯಕ್ಷನಾಗಿ ಬಂದು, ಶಿವ ಜಲಗಾರನಾಗುವ, ಜಲಗಾರ ಶಿವನಾಗುವ ರೂಪಾಂತರ, ಪರಿವರ್ತನೆ ಇದೆ.

ಈ ನಾಟಕವನ್ನು ಇದುವರಗೆ ಪುರೋಹಿತಶಾಹಿ ವಿರೋಧಿ ಅಥವಾ ವೈದಿಕ ವಿರೋಧಿ ನೆಲೆಯಲ್ಲಿ ಓದಲಾಗಿದೆ, ಮೌಲ್ಯಮಾಪನ ಮಾಡಲಾಗಿದೆ. ಪುರೋಹಿತಶಾಹಿ ವಿರೋಧಿ ಮತ್ತು ವೈದಿಕ ವಿರೋಧಿ ವೈಚಾರಿಕತೆಗೆ ಅಕಾಡೆಮಿಕ್ ವಲಯದಲ್ಲಿ ಮಹತ್ವ ಕೊಡಲಾಗಿದೆ. ಆ ಮಹತ್ವ ಶೂದ್ರ ಹಿತಾಸಕ್ತಿಯಲ್ಲಿ ಹುಟ್ಟಿ ಶೂದ್ರ ಸಮರ್ಥನೆಯಲ್ಲಿ ನಿಂತುಬಿಡುತ್ತದೆ. ಸಾಹಿತ್ಯಕ, ಸಾಂಸ್ಕೃತಿಕ ವಲಯದಲ್ಲಿ ಈ ವೈಚಾರಿಕ ಚೌಕಟ್ಟಿನ ಪರವಾಗಿ ಅಭಿಪ್ರಾಯವನ್ನು ರೂಪಿಸಿ, ಅದನ್ನು ಒಪ್ಪುವಂತೆ, ನಂಬುವಂತೆ ಮಾಡಲಾಗಿದೆ. ಆದರೆ ಈ ಚೌಕಟ್ಟು ಜಡವಾದುದು ಮತ್ತು ಯಾಂತ್ರಿಕವಾದುದು. ಅದರಲ್ಲೂ 'ಜಲಗಾರ' ನಾಟಕವನ್ನು ಪ್ರವೇಶ ಮಾಡುವಾಗ ಈ ಚೌಕಟ್ಟು ಯಾಂತ್ರಿಕವಾದ ಹಾಗೂ ಜಡವಾದ ಚೌಕಟ್ಟಾಗಿ ಪರಿಣಮಿಸುತ್ತದೆ. ಇದು 'ಜಲಗಾರ' ನಾಟಕವನ್ನು ಪ್ರವೇಶ ಮಾಡಲು, ಅದರ ಅನುಭವವನ್ನು ಅರಿಯಲು ಅಡ್ಡಿಗಳನ್ನು ಉಂಟುಮಾಡುತ್ತಿದೆ.

ನಾಟಕದ ಬಗೆಗೆ ಚರ್ಚೆ ಮಾಡುವಾಗ ಎರಡು ವಿಧಾನಗಳು ಸಾಧ್ಯ. ನಾಟಕದ ರಂಗಪ್ರಯೋಗವನ್ನು ನೋಡಿ ಚರ್ಚೆಮಾಡುವುದು ಮತ್ತು ನಾಟಕ ಕೃತಿಯನ್ನು ಓದಿನಲ್ಲಿ ಗ್ರಹಿಸಿ, ಅರ್ಥೈಸಿ, ಅದರ ಲಯವನ್ನು ಹಿಡಿದು ಚರ್ಚೆಮಾಡುವುದು. ನನ್ನದು ಎರಡನೆಯ ವಿಧಾನ.

'ಜಲಗಾರ' ನಾಟಕ ಒಂದು ದಿನದ ಹಗಲಿನಲ್ಲಿ ನಡೆಯುತ್ತದೆ. ಇದು ಒಂದು ದಿನದ ಬೆಳಗ್ಗೆ ಆರಂಭವಾಗುತ್ತದೆ ಮತ್ತು ಅದೇ ದಿನ ಸಂಜೆಗೆ ಮುಗಿಯುತ್ತದೆ. ಇದರಲ್ಲಿ ಎರಡು ದೃಶ್ಯಗಳಿವೆ. ಮೊದಲ ದೃಶ್ಯ ಬೆಳಗಿನ ಉಷಾಃ ಕಾಲದಲ್ಲಿ ಆರಂಭವಾಗುತ್ತದೆ. ಭೂದೇವಿಯ ಹಾಡಿನಿಂದ ಇದು ಶುರುವಾಗುತ್ತದೆ.

ಬಾರಾ, ಸಖಿಯೇ, ಉಷೆಯೇ, ಬಾರಾ;
ಕೆಂಪಿನ ಮುತ್ತಿನ ಮಾಲೆಯ ತಾರ.
ಮಬ್ಬಿನ ಮಂಜಿನ ಮುಸುಗನು ಎತ್ತಿ
ಬಾರಾ ಉದಯಾಚಲವನು ಹತ್ತಿ.
ಹಸುರಿನ ಬನಗಳ ಮುದ್ದಿಸಿ ಬಾರ;
. . . . . .



ಉದಯಾನಂದದ ಕಲಶವ ತಾರ;

. . . . . .

ಎಶ್ವದ ಗರ್ಭದ ಚೆಲುವನು ಹೊದ್ದು,
ಮಾಯಾ ಮೋಹದ ಜಾಲವ ನೆಯ್ದು,
ತಳಿರಿನ ಹೂಗಳ ಸಂಕವ ಮಾಡಿ
ಬಾರಾ, ಉಷೆಯೇ, ನಲಿನಲಿದಾಡಿ.

'ಜಲಗಾರ' ನಾಟಕ ಭೂದೇವಿಯ ಹಾಡಿನಿಂದ, ಹೆಣ್ಣು ಹಾಡುವ ಹಾಡಿನಿಂದ ಶುರುವಾಗಿದೆ. ಇದರ ಜೊತೆಯಲ್ಲೆ ಕನ್ನಡದ ಇತರೆ ಕೃತಿಗಳ ಆರಂಭವನ್ನು ನೆನಪಿಸಿಕೊಳ್ಳಬಹುದು. 'ಕುಸುಮಬಾಲೆ'ಯು ಜೋತಮ್ಮಗಳು ಮಾತಾಡುವ ಮಾತುಗಳಿಂದ ಶುರುವಾಗುತ್ತದೆ. ಈ ಎಳೆ ಹಿಡಿದು ಒಂದು ಪರಂಪರೆಯನ್ನು ಸೃಷ್ಟಿಸಿಕೊಳ್ಳಬಹುದು. ಇಲ್ಲಿ ಹೆಣ್ಣನ್ನು ಕರೆಯುವ, ಹೆಣ್ಣನ್ನು ಕುರಿತು ಕೋರುವ ಮತ್ತು ಅಪೇಕ್ಷಿಸುವ ನಿರೂಪಣೆ ಇದೆ. ಈ ಮೂಲಕ ಹೆಣ್ಣು ಹಿತಾಸಕ್ತಿ ಹಾಗೂ ಹೆಣ್ಣೋಟವನ್ನು ರೂಪಿಸಿಕೊಳ್ಳುವ ಆಶಯವೂ ಇದ್ದಂತಿದೆ. ಈ ದೃಶ್ಯವು ಜಲಗಾರನ ಮಾತಿನೊಂದಿಗೆ ಮುಕ್ತಾಯವಾಗುತ್ತದೆ. 'ಹೊಟ್ಟೆಗಿಲ್ಲದೆ ಸಾಯುತ್ತಿದ್ದೇನೆ, ತುತ್ತು ಅನ್ನ ಹಾಕು' ಎಂದು ತಿರುಕನು ಕೇಳುತ್ತಿರುವಾಗ, ಅದಕ್ಕೆ ಜಲಗಾರನು 'ಬಡವರಿಗೆ ಬಡವರಲ್ಲದೆ ಬೇರೆಯವರು ಗತಿಯಿಲ್ಲ. ಲೋಕದಲ್ಲಿ ಒಂದು ಕಣ್ಣೀರನ್ನು ಒರೆಸಿದವನು ಧನ್ಯ. ಎದ್ದೇಳು, ಭಿಕ್ಷುಕನೆ, ನನ್ನ ಅನ್ನದೊಳೆ ಮುಷ್ಟಿಯನು ನಿನಗಿಕ್ಕಿ ಶಿವಪೂಜೆ ಮಾಡುವೆನು, ನೀನೆನ್ನ ಸೋದರ, ನೀನೆನ್ನ ದೇಗುಲ, ನೀನೆನಗೆ ಪರಶಿವ, ಏಳು ಮೇಲೇಳು ಸೋದರನೆ' ಎಂದು ಹೇಳುವ ಮೂಲಕ ಇದು ಮುಕ್ತಾಯವಾಗುತ್ತದೆ. ಇದೇ ವಿನ್ಯಾಸದಲ್ಲಿ ನಾಟಕದ ಕೊನೆಯ (ಎರಡನೆಯ) ದೃಶ್ಯ ಮುಕ್ತಾಯವಾಗುತ್ತದೆ. ಜಲಗಾರನನ್ನು ಕುರಿತು ಶಿವ ಈ ಮುಂದಿನಂತೆ ಹೇಳುತ್ತಾನೆ. '. . . . . ನೀನು ಎನ್ನ ನಿಜಭಕ್ತನಾಗಿರುವೆ. ಅದಕಾಗಿ ಕಲ್ಪನೆಯ ರೂಪವನು ತೆಗೆದೊಗೆದು ಬಂದಿರುವೆ. ಚಂದ್ರನನ್ನು ಗಗನಕ್ಕೆ ಬಿಸಾಡಿದ್ದೇನೆ. ಗಂಗೆಯನ್ನು ಹಿಮಗಿರಿಗೆ ಎಸೆದಿದ್ದೇನೆ. ಹಾವುಗಳನ್ನು ಎಸೆದಿದ್ದೇನೆ. ಜ್ಯೋತಿಷ್ಯರು ಹಚ್ಚಿದ್ದ ಬೂದಿಯನ್ನು ಮಸಣಕ್ಕೆ ಎಸೆದಿದ್ದೇನೆ. ನನಗೆ ತೊಡಿಸಿದ್ದ ಯಜ್ಞೋಪವೀತವು ಚಟ್ಟಗಳನ್ನು ಕಟ್ಟುತ್ತಿದೆ. ಅವರು ಕೊಟ್ಟ ಶೂಲವು ಪೊರಕೆಯ ರೀತಿಯಿದ್ದು ಬ್ರಹ್ಮಗಳ ಬೀದಿಯನ್ನು ಗುಡಿಸುತ್ತಿದೆ. ಇವೆಲ್ಲವನ್ನೂ ತೊಲಗಿಸಿರುವುದರಿಂದ ನಾನು ಜಗದ ಜಲಗಾರನಾಗಿ ಉಳಿದಿದ್ದೇನೆ. ನೀನು ಊರಿನ ತೋಟಿ; ನಾನು ಜಗದ ತೋಟಿ. ಬಾ ಎನ್ನ ಸೋದರನೆ, ನೀನೆನ್ನ ನಿಜಭಕ್ತ. ನೀನೇ ನಾನಾಗಿಹೆನು; ನಾನೇ ನೀನಾಗಿರುವೆ. ನೀವು ಶಿವ! ನೀನು ಶಿವ!'

ಮೊದಲ ದೃಶ್ಯದ ಕೊನೆಯ ಸಾಲುಗಳು: 'ನೀನೆನ್ನ ಸೋದರ, ನೀನೆನ್ನ ದೇಗುಲ, ನೀನೆನಗೆ ಪರಶಿವ, ಏಳು ಮೇಲೇಳು ಸೋದರನೆ'. ಈ ಸಾಲುಗಳ ಜೊತೆಗೆ ಎರಡನೇ ದೃಶ್ಯದ ಕೊನೆಯ ಸಾಲುಗಳನ್ನು ಜೋಡಿಸಿಕೊಳ್ಳಬೇಕು. ಬಾ ಎನ್ನ ಸೋದರನೆ, ನೀನೆನ್ನ ನಿಜಭಕ್ತ. ನೀನೇ ನಾನಾಗಿಹೆನು; ನಾನೇ ನೀನಾಗಿರುವೆ. ನೀವು ಶಿವ! ನೀನು ಶಿವ!'

ಶಿವನ ಮೂಲಕ ಜಲಗಾರನನ್ನು, ಜಲಗಾರನ ಮೂಲಕ ಭಿಕ್ಷುಕನನ್ನು ನೋಡುತ್ತಿದೆ. ಇಲ್ಲಿ ಜಲಗಾರನಷ್ಟೇ ಭಿಕ್ಷುಕನೂ ಮುಖ್ಯ. ಶಿವನಿಗೆ ಮತಧರ್ಮದ ಮೌಲ್ಯಪ್ರಜ್ಞೆಯು ವೇಷ ತೊಡಿಸಿದೆ; ಆರ್ಥಿಕ ಅಸಮಾನತೆಯು ಭಿಕ್ಷುಕನನ್ನು ಸೃಷ್ಟಿ ಮಾಡಿದೆ. ಹಾಗಾಗಿ ಮತಧರ್ಮದ ಮೌಲ್ಯಪ್ರಜ್ಞೆಯು ಸೃಷ್ಟಿಸಿರುವ ವೇಷದ ಪಾತ್ರವೂ, ಭಿಕ್ಷುಕನನ್ನು ಸೃಷ್ಟಿಸಿರುವ ಆರ್ಥಿಕ ಅಸಮಾನತೆಯ ಕಾರ್ಯದ ವಸ್ತುಸ್ಥಿಯೂ ಕೇಂದ್ರ ಎಳೆಯಾಗಿ ನಾಟಕವನ್ನು ಸೃಜನಶೀಲಗೊಳಿಸಿದೆ.

ನಾಟಕದ ಎರಡನೆ ದೃಶ್ಯ ಅದೇ ದಿನ ಸಾಯಂಕಾಲ ಆರಂಭವಾಗುತ್ತದೆ. ಅದು ಭೂದೇವಿಯ ಹಾಡಿನಿಂದ ಶುರುವಾಗುತ್ತದೆ.

'ದೂರದಿಂದ ಮೆಲುನಡೆಯಲಿ
ಸಂಜೆವೆಣ್ಣು ಬರುವಳು, ಬಹು
ದೂರದಿಂದ ಬರುವಳು!
ನೀಲಗಗನದಾಚೆಯಿಂದ
ನಲಿದು ತೇಲಿ ಬರುವಳು, ತವ
ರೂರಿನಿಂದ ಬರುವಳು'.

. . . . . .

ದಿನದ ಬೇಗೆಯಿಂದ ಬೆಂದು
ಬಲು ಬಳಲಿಹ ಭೂಮಿಗೆ-ವಿ
ಶ್ರಾಂತಿಯಿತ್ತು ಬರುವಳು.
ನಲಿನಲಿಯುತ ಮೆಲುನಡೆಯಲಿ



ಸಂಜೆವೆಣ್ಣು ಬರುವಳು–ನೋ
ಡದೋ ತೇಲಿಬರುವಳು!

ಮೊದಲ ದೃಶ್ಯವು ಉಷಾಕಾಲದಲ್ಲಿ ಭೂದೇವಿಯ ಹಾಡಿನಿಂದ ಶುರುವಾಗುತ್ತದೆ. ಎರಡನೇ ದೃಶ್ಯವು ಅದೇ ದಿನ ಸಾಯಂಕಾಲ ಭೂದೇವಿಯ ಹಾಡಿನಿಂದ ಶುರುವಾಗುತ್ತದೆ. ಮೊದಲ ದೃಶ್ಯದಲ್ಲಿ ಭೂದೇವಿಯ ಹಾಡು ಮುಗಿದ ನಂತರ ಜಲಗಾರ:

ಮೂಡಿ ಬಾ. ಮೂಡಿ ಬಾ
ಬೇಗ ಬಾ. ಬಾ ಬಾ
ತೊಳಗಿ ಬಾ ಬೆಳಗಿ ಬಾ
ಜಗದ ಕಣ್ಣೆ ಬಾ ಬಾ
ಮಲೆಯ ಹತ್ತಿ ಮುಸುಗನೆತ್ತಿ
ಹಸುರ ಮೇಲೆ ಮುತ್ತ ಬಿತ್ತಿ
. . . . . .
ಜಗದ ಕಣ್ಣೆ ಬಾ ಬಾ
ಮುಗಿಲಿನಲಿ ಕೆಂಪ ಹೊಯ್ದು
ದಿನಮಣಿಯೆ ಬಾ ಬಾ
. . . . . .
ಬಾನ ಹೆಣ್ಣನೊಲಿಯುತೊಮ್ಮೆ
ನೆಲದ ಹೆಣ್ಣನೊಲಿಯುತೊಮ್ಮೆ
ಒಮ್ಮೆ ಬನದ ದೇವಿಯ
ಒಮ್ಮೆ ಜಲದ ದೇವಿಯ
. . . . . .
ತೊಳಗಿ ಬಾ ಬೆಳಗಿ ಬಾ
ಜಗದ ಕಣ್ಣೆ ಬಾ ಬಾ

ಹೀಗೆ ಜಲಗಾರ ದಿನಮಣಿಯನ್ನು (ಸೂರ್ಯನನ್ನು) ಕರೆಯುವ ಪ್ರಕ್ರಿಯೆ ಕ್ರಿಯಾಶೀಲವಾಗಿದೆ. ಎರಡನೇ ದೃಶ್ಯದ ಆರಂಭದಲ್ಲಿ ಭೂದೇವಿಯ ಹಾಡು ಮುಗಿದ ನಂತರ;

ಜಲಗಾರ:

. . . . . .

ಮೂಡಿ ಬಾ ಚಂದಿರನೆ, ಬಾಳು ಸವಿಯೆಂಬುದನು
ಜಗಕ್ಕೆಲ್ಲ ಸಾರುತ. ಮೂಡಿ ತಾರಕೆಗಳಿರ,
ಜೀವದಾನಂದವನು ತಿರೆಗೆಲ್ಲ ತೋರುತ
ಬೀಸು ಬೀಸೆಲೆ ಮಂದಮಾರುತನೆ, ಜೀವನದ
ಬೇಗೆಯನು ತೂರುತ! ಬಾಳು ಚಿರವಲ್ಲದಿರೆ,
ಭೂಮಿ ಚಿರವಲ್ಲದಿರೆ, ಜೀವದಾನಂದವದು
ಚಿರವಲ್ಲವೇನು? ತೊಳಗುತಿಹ ಚುಕ್ಕಿಗಳೆ,
ಬಾಳ ಕಿರುಗೆಲಸವಿದು, ಜಲಗಾರನೆಸಗುವೀ
ಕಿರುಗೆಲಸವಿದು ನಿಮ್ಮ ಕಾಂತಿಗಿಂತಲೂ ಚಿರ.

ಒಂದು ಧರ್ಮದ ಕಿರಿಯ ಕಾರ್ಯ ಶತಕೋಟಿ
ಸೂರ್ಯರಿಗೆ ಬೆಳಕು; ಲೋಕ ಲಕ್ಷಕೆ ಜೀವ!
ನಮ್ಮ ಬಾಳಿದು ಬರಿಯ ಮಾಯೆಯಲ್ಲ!
ನಮ್ಮ ಕರ್ಮವು ಬರಿಯ ಕನಸಲ್ಲ!

ಎಂಬ ಮಾತು ಬಂದಿದೆ. ಮೊದಲನೆಯ ಮತ್ತು ಕೊನೆಯ ದೃಶ್ಯಗಳ ಆರಂಭದಲ್ಲಿ ನಾಟಕವು ತಾನು ಸೃಷ್ಟಿಸಲಿರುವ ದರ್ಶನದ ಚೌಕಟ್ಟನ್ನು ಮೇಲಿನ ಸಂಭಾಷಣೆಯಲ್ಲಿ ನಿರೂಪಿಸಿದೆ. ಬಾಳು ಮಾಯೆ ಎಂಬುದನ್ನು ಮಾಯೆ ಅಲ್ಲ ಎಂದು ಪ್ರತಿಪಾದನೆ ಮಾಡುವುದು, ಒಂದು ಧರ್ಮದ ಕಿರಿಯ ಕಾರ್ಯವು ಶತಕೋಟಿ ಸೂರ್ಯರಿಗೆ ಬೆಳಕು ನೀಡುವಂತಹದ್ದು ಎಂಬುದು; ಈ ಕಿರುಗೆಲಸವನ್ನು ಜಲಗಾರನಿಂದ ಮಾಡಿಸುತ್ತಿದೆ. ಜಲಗಾರನ ಈ ಕಿರುಗೆಲಸ ಹೊಳೆಯುವ ಚುಕ್ಕಿಗಳ ಕಾಂತಿಗಿಂತಲೂ ಚಿರ ಎಂಬುದು ಇಲ್ಲಿಯ ನಿಲುವು. ಇದೊಂದು ದಾರ್ಶನಿಕ ಕೆಲಸ ಹಾಗೂ ದಾರ್ಶನಿಕ ಪರಿವರ್ತನೆಯ ಕೆಲಸ. ಈ ಪರಿವರ್ತನೆಯ ಕೆಲಸಕ್ಕೆ ಸೂರ್ಯ, ಚಂದ್ರ ಹಾಗೂ ಹೆಣ್ಣು ಇವನ್ನು ಸಾಂಕೇತಿಕವಾಗಿ ಬಳಸಿಕೊಂಡಿದೆ. ಸೃಷ್ಟಿಸಲು ಹಾಗೂ ಪರಿವರ್ತಿಸಲು ಪ್ರಾಕೃತಿಕವಾದ ಹಾಗೂ ಜೈವಿಕವಾದ ವಿಶಿಷ್ಟ ಶಕ್ತಿ ಬೇಕಾಗುತ್ತದೆ. ಈ ಶಕ್ತಿಗಳನ್ನು ಮೇಲಿನ ರೂಪಕಗಳಲ್ಲಿ ಕಂಡುಕೊಳ್ಳಲು ಇಲ್ಲಿಯ ಸೃಜನಶೀಲತೆ ಕ್ರಿಯಾಶೀಲವಾಗಿದೆ.

ಇಡೀ ನಾಟಕದಲ್ಲಿ ಸಂಭಾಷಣೆಗಳು ದಟ್ಟವಾಗಿವೆ. ಇಡೀ ನಾಟಕ ಸಂಭಾಷಣೆಗಳ ದಟ್ಟಣೆಯಿಂದಲೆ ಕೂಡಿದೆ. ಕ್ರಿಯೆಗಳು ಕಡಿಮೆ. ನಾಟಕದಲ್ಲಿ ಎರಡು ರೀತಿಯ ಸಂಭಾಷಣೆಗಳು ಕಾಣಿಸುತ್ತವೆ. ಒಂದು ರೀತಿಯ ಸಂಭಾಷಣೆ ಪರಸ್ಪರ ಸಂಬಂಧ ಇರುವಂತಹದ್ದು. ಅಂದರೆ ಒಬ್ಬರ ಮಾತಿಗೆ ಮತ್ತೊಬ್ಬರು ಓಗೊಡುವ, ಪ್ರತಿಕ್ರಿಯಿಸುವ, ಪ್ರತಿಸ್ಪಂದನೆ ಕೊಡುವ ಮಾದರಿಯ ಸಂಭಾಷಣೆಗಳು. ಮತ್ತೊಂದು ಬಗೆಯ ಸಂಭಾಷಣೆ: ಪರಸ್ಪರ ಪ್ರತಿಕ್ರಿಯೆನೆ ಇಲ್ಲ. ಒಂದು ಪಾತ್ರ ಮಾತನಾಡಿ



ಹೋಗುತ್ತದೆ. ಅಂತಹ ಒಂದು ಪಾತ್ರ ತನ್ನಷ್ಟಕ್ಕೆ ತಾನು ಹಾಡಿ ರಂಗದಿಂದ ಹೋಗುತ್ತಿರುತ್ತದೆ. ಹಾಗೆ ಹಾಡಿರುವ ಒಂದು ಪಾತ್ರಕ್ಕೆ ಅಥವಾ ಮಾತನಾಡಿರುವ ಒಂದು ಪಾತ್ರದ ಸಂಭಾಷಣೆಗೆ ನೇರವಾಗಿ ಪ್ರತಿಕ್ರಿಯೆ ಮಾಡುವಂತಹ ಮತ್ತೊಂದು ಪಾತ್ರ ಬರುವುದಿಲ್ಲ. ಪರಸ್ಪರ ಸಂಬಂಧವಿದ್ದು ಪರಸ್ಪರ ಮಾತನಾಡಿಕೊಳ್ಳುವ ಬಗೆ ಒಂದು ರೀತಿ ಇದ್ದರೆ; ಮಾತಾಡಿದ ಸಂಭಾಷಣೆಗೆ ಅಥವಾ ಹಾಡಿದ ಹಾಡಿಗೆ ಪ್ರತಿಕ್ರಿಯೆ ಇಲ್ಲದ ಸಂಭಾಷಣೆಯೂ ಇದೆ. ಪರಸ್ಪರ ಸಂಬಂಧದ ಸಂಭಾಷಣೆಗಳು ಜಲಗಾರ ಮತ್ತು ರೈತನ ನಡುವೆ, ಮೊದಲನೆಯ ಪಾರ್ವ ಎರಡನೆಯ ಪಾರ್ವ ಮತ್ತು ಜಲಗಾರನ ನಡುವೆ, ಯುವಕ ಮತ್ತು ಜಲಗಾರನ ನಡುವೆ, ತಿರುಕ ಮತ್ತು ಭಟ್ಟನ ನಡುವೆ, ಮೊದಲನೆ ತುರುಣ ಎರಡನೆ ತರುಣ ಮತ್ತು ತಿರುಕನ ನಡುವೆ, ತಿರುಕ ಮತ್ತು ಜಲಗಾರನ ನಡುವೆ, ಜಲಗಾರ ಮತ್ತು ಶಿವನ ನಡುವೆ ನಡೆಯುತ್ತವೆ. ಪರಸ್ಪರ ನೇರವಾಗಿ ಪ್ರತಿಕ್ರಿಯೆ ಇಲ್ಲದೆ ಸ್ವತಂತ್ರವಾದ ಹಾಡನ್ನು ಹಾಡುವಂತಹ ಮೂರು ಪಾತ್ರಗಳು ಇವೆ. ಅದು ಹುಡುಗಿ, ಕಬ್ಬಿಗ ಮತ್ತು ಬಾಲಕರು. ಈ ಮೂವರ ಸಂಭಾಷಣೆಗಳು ಸ್ವತಂತ್ರವಾದವು. ಇವು ಎರಡನೆ ದೃಶ್ಯದಲ್ಲಿ ಬರುತ್ತವೆ. ಈ ಸಂಭಾಷಣೆಗಳನ್ನು ನಾಟಕದ ಒಟ್ಟಾರೆ ರಚನೆಯಿಂದ ಬೇರ್ಪಡಿಸಿ ಸ್ವತಂತ್ರವಾಗಿ ಓದಬಹುದು. ಹುಡುಗಿ ಮತ್ತು ಕವಿ ಹೇಳುವ ಮಾತುಗಳು ತಾತ್ತ್ವಿಕವಾಗಿವೆ. ಬಾಲಕರು ತಮ್ಮೊಳಗೆ ತಾವು ಆಡಿಕೊಳ್ಳುವ ಮಾತುಗಳು ತಾತ್ವಿಕವಾಗಿಲ್ಲ. ಈ ಮೂರು ಪಾತ್ರಗಳ ಸಂಭಾಷಣೆಗಳಿಗೆ ನಾಟಕದ ಆಚೆಗೂ ಸ್ವತಂತ್ರವಾದ ಅಸ್ತಿತ್ವ ಇದೆ. ನಾಟಕದಲ್ಲಿ ಕ್ರಿಯೆ ಎಷ್ಟು ಕಡಿಮೆ ಅಂದರೆ ಮೂರೆ ಮೂರು ಪ್ರಸಂಗದಲ್ಲಿ ಮಾತ್ರ ಕ್ರಿಯೆ ನಡೆಯುತ್ತದೆ. ಮೊದಲನೆ ತರುಣ ಬರುತ್ತಾನೆ. ಮೊದಲನೆ ತರುಣ ಭಿಕ್ಷುಕನನ್ನು ಅಥವಾ ತಿರುಕನನ್ನು ನಾನು ಕುರುಡ ನನಗೆ ಭಿಕ್ಷೆ ಕೊಡಿ ಎಂದು ಕೇಳುತ್ತಿರುತ್ತಾನೆ. ಆಗ ಮೊದಲನೆ ತರುಣ "ನೀನು ಕುರುಡನಲ್ಲ ಠಕ್ಕ. ನೀನು ಮೋಸ ಮಾಡುತ್ತಿಯಾ" ಅಂತ ಹೇಳಿ ಅವನ ಕಣ್ಣಿನ ರೆಪ್ಪೆಯನ್ನು ಹಿಡಿದು ಎಳೆಯುತ್ತಾನೆ. ಮೊದಲನೆ ತರುಣ ಭಿಕ್ಷೆ ಬೇಡುತ್ತಿರುವ ಕುರುಡನಾಗಿರುವ ತಿರುಕನ ಕಣ್ಣು ರೆಪ್ಪೆಯನ್ನು ಎಳೆಯುವಾಗ ಜಲಗಾರ ಮಧ್ಯ ಪ್ರವೇಶಮಾಡಿ ಬಿಡಿಸಿಕೊಳ್ಳಲು ಹೋಗುತ್ತಾನೆ. ಆಗ ಮೊದಲನೆ ತರುಣ ಜಲಗಾರನಿಗೆ ಒದ್ದು ಪೀಡಿಸಿ ಹೋಗುತ್ತಾನೆ. ಇದು ಎರಡನೆ ಕ್ರಿಯೆ. ಮೂರನೆಯದು ನಾಟಕದ ಕೊನೆಯಲ್ಲಿ ಬರುವಂತಹದ್ದು. ಅದು ಶಿವ ಮತ್ತು ಜಲಗಾರ; ಜಲಗಾರ ಮತ್ತು ಶಿವ ಇವರು ಪರಸ್ಪರ ತಬ್ಬಿಕೊಳ್ಳುವ ಕ್ರಿಯೆ. ಇವು ಮೂರು ಕ್ರಿಯೆಗಳನ್ನು ಬಿಟ್ಟರೆ ಇಡೀ ನಾಟಕದಲ್ಲಿ ಕ್ರಿಯೆ ಗೌಣ ಎನ್ನುವಷ್ಟು ಮಟ್ಟಿಗೆ ಕಡಿಮೆಯಿದ್ದು ಸಂಭಾಷಣೆಗಳಿಂದ ನಾಟಕ ಬೆಳೆದಿದೆ ಮತ್ತು ವಿಸ್ತಾರವಾಗಿದೆ. ನಾಟಕವನ್ನು ಕೇವಲ ಜಲಗಾರನ ಕಣ್ಣಿನಿಂದ ನೋಡಬೇಕಾಗಿಲ್ಲ. ಅಥವಾ ಶಿವನ ಕಣ್ಣಿನಿಂದ ಮಾತ್ರನೇ ಓದಬೇಕಾಗಿಲ್ಲ. ಇದನ್ನು ಏಳೆಂಟು ಕೋನಗಳಿಂದ, ಏಳೆಂಟು ಆಯಾಮಗಳಿಂದ, ಏಳೆಂಟು ಪಾತ್ರಗಳಿಂದ ಓದಬಹುದು. ಯಾರ್ಯಾರ ದೃಷ್ಟಿಯಲ್ಲಿ ನಾಟಕವನ್ನು ಓದಬಹುದು ಅಂದರೆ ಜಲಗಾರನ ಮೂಲಕ, ರೈತನ ಮೂಲಕ, ಮೊದಲನೆ ಪಾರ್ವ, ಎರಡನೆ ಪಾರ್ವರ ಮೂಲಕ, ಯುವಕನ ಮೂಲಕ, ತಿರುಕನ ಮೂಲಕ, ಭಟ್ಟನ ಮೂಲಕ, ಮೊದಲನೆ ತರುಣ ಮತ್ತು ಎರಡನೆ ತರುಣನ ಮೂಲಕ, ಹುಡುಗಿಯ ಮೂಲಕ, ಕವಿಯ ಮೂಲಕ ಮತ್ತು ಶಿವನ ಮೂಲಕ. ಹೀಗೆ ನಾನಾ ಕೋನಗಳಿಂದ ನಾಟಕವನ್ನು ಓದಲು ಸಾಧ್ಯವಿದೆ. ಇದರಲ್ಲಿ ಬಂದಿರುವ ಸ್ವತಂತ್ರ ಸಂಭಾಷಣೆಗಳನ್ನು ಕುರಿತು ಚರ್ಚೆಮಾಡಬಹುದು.

ಹುಡುಗಿ, ಕಬ್ಬಿಗ, ಬಾಲಕರು ಇವರ ಸಂಭಾಷಣೆಗಳು ಸ್ವತಂತ್ರವಾಗಿವೆ. ಇವು ಮೂರನ್ನು ಒಂದು ಕಡೆ ಸಂಗ್ರಹಿಸಿಕೊಂಡರೆ ನಾಟಕದ ಬಗೆಗೆ ವಿಶೇಷ ಒಳನೋಟಗಳು ಸಿಗುತ್ತವೆ. ದೃಶ್ಯ ಎರಡರಲ್ಲಿ ಹುಡುಗಿ ಮಾತನಾಡುತ್ತಾಳೆ. 'ಕೈಯಲ್ಲಿ ತಿರುಳಿಲ್ಲ, ಮೈಯಲ್ಲಿ ಹುರುಳಿಲ್ಲ, ಮನೆಯಲ್ಲಿ ಕಾಳಿಲ್ಲ, ಕೂಳಿಲ್ಲ! ಅಪ್ಪ ನೋಡಲು ಜೋಗಿ, ಅವ್ವ ನೋಡಲು ರೋಗಿ, ನನಗಂತು ಕಣ್ಣೀರು ಬಿಡುವಿಲ್ಲ! ಕಾಳಿಲ್ಲ, ಕೂಳಿಲ್ಲ, ಕಣ್ಣೀರು ಬಿಡುವಿಲ್ಲ, ಕಾಯಬಾರದೆ ಬಂದು ಕಾವೆನೆಂದಿಹ ಗೊಲ್ಲ! ಕಂಡ ಕಂಡ ಕಲ್ಲಿಗೆ ಕೈಮುಗಿದು ಸೋತೆ, ನನಗಿನ್ನು ತಪ್ಪದು ಈ ರೋತೆ, ಕಾಯಬಾರದೆ ಬಂದು ಕಾವೆನೆಂದಿಹ ಗೊಲ್ಲ!' ಹೀಗೆ 'ಕಾಯಬಾರದೆ ಬಂದು



ಕಾವೆನೆಂದಿಹ ಗೊಲ್ಲ' ಎನ್ನುವ ಸಾಲು ನಾಲ್ಕು ಬಾರಿ ಬರುತ್ತದೆ ಹುಡುಗಿಯ ಸಂಭಾಷಣೆಯಲ್ಲಿ. ಹುಡುಗಿಯ ಸಂಭಾಷಣೆ ನಾಟಕದ ಒಳಗೆ ಅಸ್ತಿತ್ವವನ್ನು ಪಡೆದಿದ್ದರೂ; ಇದಕ್ಕೆ ಪ್ರತ್ಯೇಕವಾದ, ಸ್ವತಂತ್ರವಾದ ಅಸ್ತಿತ್ವವಿದೆ. ಹುಡುಗಿಯ ಮಾತುಗಳು ಅವಳ ಕುಟುಂಬದ ಆರ್ಥಿಕ ಇಕ್ಕಟ್ಟನ್ನು ಮತ್ತು ಹುಡುಗಿಯ ಮೇಲೆ ಕುಟುಂಬದ ಹೊಣೆಗಾರಿಕೆ, ಜವಾಬ್ದಾರಿ ಬಿದ್ದಿರುವ ಸೂಕ್ಷ್ಮವಾದ ಸಮಸ್ಯೆಯನ್ನು ನಿವೇದಿಸಿದೆ. ಆದರೆ ಸಂಭಾಷಣೆ ಅಥವಾ ಅದರ ಅಭಿವ್ಯಕ್ತಿ ಭಾವುಕವಾಗಿಲ್ಲ. ಜೊತೆಗೆ ದೈನ್ಯವಾದ ಧ್ವನಿಯೂ ಅದರಲ್ಲಿ ಇಲ್ಲ. ಸಾವಧಾನದಿಂದ ಕೌಟುಂಬಿಕ ನೆಲೆಯ ಕಷ್ಟ ಹುಡುಗಿಯ ಮಾತಿನಲ್ಲಿ ಅಭಿವ್ಯಕ್ತಿಯಾಗಿದೆ. ಇನ್ನು ಎರಡನೇಯ ಸ್ವತಂತ್ರ ಸಂಭಾಷಣೆ ಬಾಲಕರದ್ದು. ಅವರು ಹೇಳ್ತಾರೆ. 'ನಾವು ಮರುಳರು, ನಾವು ಕುಡುಕರು, ಮರುಳತನವೆಮ್ಮಾಟವು, ಕಾರ್ಯವಿಲ್ಲದೆ ಬರಿದೆ ಸಂಚರಿಪಲಸಗಾರರ ಕೂಟವು. ಕರ್ಮ ಲೀಲೆಯು, ಲೀಲೆ ಕರ್ಮವು ಎಂಬುದೆಮ್ಮೆಯ ಧರ್ಮವು; ಪಡೆವುದೆಮಗೇನಿಲ್ಲವು, ಕಳೆವುದೆಮಗೇನಿಲ್ಲವು, ಲಾಭನಷ್ಟಗಳೊಂದುಮಿಲ್ಲವು ಎಂಬುದೇ ವರಮರ್ಮವು; ಅಮೃತಪುತ್ರರು ನಾವು' ಎಂದು ಬಾಲಕರು ಹೇಳುತ್ತಾರೆ. ಹುಡುಗಿಯ ಮಾತಿನಲ್ಲಿ ಕೌಟುಂಬಿಕ ಹೊಣೆಗಾರಿಕೆ, ಜವಾಬ್ದಾರಿಯ ಸಂಗತಿ ಬಂದಿದೆ. ಬಾಲಕರು ಹೇಳುವ ಮಾತುಗಳು ಇದಕ್ಕೆ ವಿರುದ್ಧವಾಗಿದೆ. ಇವರಿಗೆ ಯಾವುದೆ ಸಮಸ್ಯೆಯಿಲ್ಲ, ಕುಟುಂಬದ ಹೊಣೆಯೂ ಇವರ ಮೇಲಿಲ್ಲ. ಹಾಗಾಗಿ ಹೊಣೆಗಾರಿಕೆ ಕೂಡ ಇವರಿಗಿಲ್ಲ. ಇನ್ನು ಕಬ್ಬಿಗ ಹೇಳುವ ಮಾತು ಈ ಎರಡು ಮಾದರಿಗಿಂತ ಭಿನ್ನವಾದದ್ದು. ಕಬ್ಬಿಗ ಹೇಳುತ್ತಾನೆ. 'ಕೊರಗಲೇಕೆ? ಮರುಗಲೇಕೆ? ಹುಟ್ಟಿ ಬಂದಿಹೆ, ಹಳಿಯಲೇಕೆ? ಕೊರಗಲೇಕೆ? ಮರುಗಲೇಕೆ? ಹುಟ್ಟಿದಿಳೆಯನು ಹಳಿಯಲೇಕೆ? ಕೊರಗಲೇಕೆ? ಮರುಗಲೇಕೆ? ಬಂದುದಾಯಿತು ಹಳಿವುದೇಕೆ? ಕೊರಗಲೇಕೆ? ಮರುಗಲೇಕೆ? ಬಂದ ಬದುಕನು ಬೈಯ್ಯಲೇಕೆ? ಕೊರಗಲೇಕೆ? ಮರುಗಲೇಕೆ? ಬರಿದೆ ಬಾಳನು ಜರೆವುದೇಕೆ?' ಅಂದರೆ ಬಾಳನ್ನು ಯಾಕೆ ಜರಿಯಬೇಕು, ಬಾಳನ್ನು ಯಾಕೆ ಹಳಿಯಬೇಕು, ಬಾಳಿನಲ್ಲಿ ಯಾಕೆ ಕೊರಗಬೇಕು ಎಂಬ ಸಾಲು ಆರು ಸಲ ಬರುತ್ತದೆ. ಇದು ಬಹಳ ಮುಖ್ಯವಾದ ಒಂದು ಆಯಾಮ. ಇದು ನಿರಂತರವಾಗಿ ಬರುತ್ತದೆ. ಬಾಳನ್ನು ಹಳಿಯಬಾರದು, ಜರಿಯಬಾರದು, ಬಯ್ಯಬಾರದು. ಕೊನೆಯಲ್ಲಿ ಬರುತ್ತದೆ. 'ನಮ್ಮ ಬಾಳು ಸವಿಯ ಬಾಳು: ಯಾವುದಿಲ್ಲಿ ಕಡಿಮೆ ಹೇಳು? ಯಾವುದೆಮಗೆ ಕಡಿಮೆ ಇಲ್ಲಿ?'

ಹುಡುಗಿಯಿಂದ ಬಂದದ್ದು ಕಷ್ಟವನ್ನು ಕುರಿತ ಮಾತು. ಬಾಲಕರಿಂದ ಬಂದದ್ದು ಯಾವುದೇ ಸಮಸ್ಯೆಯಿಲ್ಲದ ಮಾತುಗಳು. ಕಬ್ಬಿಗ ಹೇಳುತ್ತಿರುವುದು ಅತ್ಯಂತ ಭರವಸೆಯ ಹಾಗೂ ಆಶಾಭಾವನೆಯ ಮಾತುಗಳು. ಆದರೆ ನಾಟಕದಲ್ಲಿ ವಿಶೇಷ ಏನು ಎಂದರೆ ಈ ಮೂರು ಬಗೆ-ಯ ಸಂಭಾಷಣೆಗಳನ್ನು ನಾಟಕದ ಒಳಗಡೆ ಕೇಳಿಸಿಕೊಳ್ಳುವ ಮತ್ತೊಂದು ಪಾತ್ರವಿಲ್ಲ. ಹುಡುಗಿ ತನ್ನ ಕಷ್ಟಗಳನ್ನು ಹೇಳಿಕೊಂಡಾಗ ಅದನ್ನು ಕೇಳಿಸಿಕೊಂಡು ಪ್ರತಿಕ್ರಿಯೆ ಮಾಡುವ ಮತ್ತೊಂದು ಪಾತ್ರ ಇಲ್ಲಿ ಬರಲ್ಲ. ಬಾಲಕರು ತಮಗೆ ಏನು ಸಮಸ್ಯೆಯಿಲ್ಲ ಅಂದಾಗ ಅದನ್ನು ಕೇಳಿಸಿಕೊಂಡು ಪ್ರತಿಕ್ರಿಯೆ ಮಾಡುವ ಪಾತ್ರ ಇಲ್ಲ. ಕಬ್ಬಿಗ ಬಾಳಿಗೆ, ಬದುಕಿಗೆ ಹೆದರಬಾರದು. ಬಂದಿದ್ದೆಲ್ಲವನ್ನು ಜಯಿಸಬೇಕು ಅಂತ ಹೇಳುವಾಗ ಅದನ್ನು ಆಲಿಸಿಕೊಂಡು ಪ್ರತಿಕ್ರಿಯೆ ಮಾಡುವ ಪಾತ್ರ ಇಲ್ಲ. ಹಾಗಾದರೆ ಈ ಮೂರಕ್ಕೂ ಪ್ರತಿಸ್ಪಂದನೆ ಮಾಡುವ ಒಂದು ಸಾಧ್ಯತೆ ಯಾರಿಗೆ ಇರಬಹುದು ಅಂ-ದರೆ, ನಾಟಕ ಪ್ರಯೋಗವಾದಾಗ ಅದನ್ನು ನೋಡುವ ಪ್ರೇಕ್ಷಕರಿಗೆ ಬಿಟ್ಟರಲು ಸಾಕು. ಅಥವಾ ಇದನ್ನು ಓದುವ ನಮಗೂ ಬಿಟ್ಟರಲಿಕ್ಕೂ ಸಾಕು. ಇಲ್ಲಿ ಕಬ್ಬಿಗನ ಮಾತು ಬಹಳ ಮುಖ್ಯವಾದದ್ದು. 'ಕೊರಗಲೇಕೆ? ಮರುಗಲೇಕೆ? ಹುಟ್ಟಿ ಬಂದಿಹೆ, ಹಳಿಯಲೇಕೆ? ಕೊರಗಲೇಕೆ? ಮರುಗಲೇಕೆ? ಬರಿದೆ ಬಾಳನು ಜರೆವುದೇಕೆ?' ಈ ಬಗೆಯ ತಾತ್ವಿಕತೆ, ದರ್ಶನ ಬದುಕಿಗಾಗಿ ಹೆದರಿ ಅದ-ಕ್ಕೆ ಬೆನ್ನುಕೊಟ್ಟು ಹೋಗುವ ಅಧೈರ್ಯದ ಅಥವಾ ಪಲಾಯನವಾದಿ ವಸ್ತುಸ್ಥಿತಿಯಲ್ಲ. ಧೈರ್ಯವನ್ನು ತಂದುಕೊಳ್ಳಬೇಕು. ಹುಟ್ಟಿದ್ದಾಗಿದೆ, ಅನಿವಾರ್ಯ. ಸಾಯುವತನಕ ಧೈರ್ಯವಾಗಿ ಬದುಕಬೇಕು ಅನ್ನುವುದು ಮುಖ್ಯವಾದಂತಿದೆ. ಈ ಬಗೆಯ ಒಂದು ಒಳಛಲಗಾರಿಕೆಯ ಮಾತು ಕಬ್ಬಿಗನಲ್ಲಿ



ಬರುತ್ತದೆ.

ಕಬ್ಬಿಗನ ಸಂಭಾಷಣೆಯನ್ನು ಓದುತ್ತಾ ಹೋದರೆ 'ಮಂಕುತಿಮ್ಮನ ಕಗ್ಗ'ದ ಕೆಲವು ಪದ್ಯಗಳು ನೆನಪಿಗೆ ಬರುತ್ತವೆ. ಅಂತಹ ಒಂದು ಪದ್ಯವನ್ನು ಉಲ್ಲೇಖಿಸುತ್ತೇನೆ. 'ಬಾಳ ಹಳಿಯುವುದದೇಕೆ? ಗೋಳ ಕರೆವುದದೇಕೆ? ಬಾಳಿದಲ್ಲದೆ ತಪ್ಪದೇನ ಮಾಡಿದೊಡಂ. ಕೇಳಿಯದು ಬೊಮ್ಮನಾಡಿಪನು ನೀನದರೊಳಗೆ ಪಾಲುಗೊಳಲುಳಬೇಡ– ಮಂಕುತಿಮ್ಮ.' 'ಮಂಕುತಿಮ್ಮನ ಕಗ್ಗ'ದ ಹಿಂದಿರುವ ತತ್ವಜ್ಞಾನವನ್ನು ಅರ್ಥಮಾಡಿಕೊಂಡರೆ, ಈ ನಾಟಕದಲ್ಲಿ ಬಂದಿರುವ ಕಬ್ಬಿಗನ ಸಂಭಾಷಣೆಯ ಹಿಂದಿರುವ ತತ್ವಜಿಜ್ಞಾಸೆಗೂ 'ಮಂಕುತಿಮ್ಮನ ಕಗ್ಗ'ದ ಹಿಂದಿರುವ ತತ್ವಜಿಜ್ಞಾಸೆಗೂ ಸಾಮ್ಯತೆಯಿರುವುದು ತಿಳಿಯುತ್ತದೆ. ಇದು ಸ್ವತಂತ್ರವಾದ ಸಂಭಾಷಣೆ ಅಂತ ಹೇಳಿದೆ. ಇದರ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸುತೇನೆ.

ಇನ್ನು ನಾಟಕದಲ್ಲಿ ಗಮನ ಸೆಳೆಯುವ ಶಕ್ತಿಶಾಲಿ ಆಯಾಮ ನಡೆ ಮತ್ತು ನುಡಿಯ ವಿಚಾರ. ನಡೆ ನುಡಿಯ ಚರ್ಚೆ ಬಂದಾಗಲೆಲ್ಲ ವಚನಕಾರರ ವಚನಗಳು ಗಮನ ಸೆಳೆಯುತ್ತವೆ. ಆದರೆ 'ಜಲಗಾರ'ದಲ್ಲಿ ಈ ಆಯಾಮವಿದೆ. ಇದನ್ನು ಚರ್ಚೆಮಾಡಲಿಕ್ಕೆ ಇದೊರಳಗಿನ ತಿರುಳು ನಮಗೆ ಗ್ರಾಸವಾಗಿದೆ. ನಡೆ ನುಡಿಗೆ ಸಂಬಂಧಿಸಿದ ಚರ್ಚೆ ಈ ನಾಟಕಕ್ಕೆ ತಾತ್ವಿಕ ತಳಹದಿ. ಇಲ್ಲಿ ಮೊದಲನೆ ತರುಣ ಮತ್ತು ಎರಡನೆ ತರುಣ ಇವರಿಬ್ಬರು ಪರಸ್ಪರ ಮಾತಾಡಿಕೊಳ್ಳುತ್ತಾರೆ. ಜೊತೆಗೆ ಇವರಿಬ್ಬರು ಜಲಗಾರನ ಜೊತೆ ಮತ್ತು ಭಿಕ್ಷುಕನ ಜೊತೆ ಮಾತನಾಡುತ್ತಾರೆ. ಇವರಿಬ್ಬರ ಮಾತುಗಳು ಹಿತಾಸಕ್ತಿ ಮತ್ತು ದೃಷ್ಟಿಕೋನದ ಸ್ವರೂಪದಲ್ಲಿ ಒಂದೇ ಆಗಿರುವುದರಿಂದ ಪ್ರತ್ಯೇಕ ಪ್ರತ್ಯೇಕವಾಗಿ ಉಲ್ಲೇಖ ಮಾಡುವುದಿಲ್ಲ. ಇವರಿಬ್ಬರ ಮಾತುಗಳನ್ನು ಒಟ್ಟಾರೆ ಸಂಗ್ರಹಿಸಿ ಎರಡು ಮೂರು ಸಾಲುಗಳನ್ನು ಉಲ್ಲೇಖ ಮಾಡ್ತಿನಿ. ಮೊದಲನೆ ತರುಣ ಮತ್ತು ಎರಡನೆ ತರುಣ ಆಡುವ ಮಾತುಗಳು. 'ಮೊದಲ ಠಕ್ಕನು ಮೊದಲ ಬೆಪ್ಪನಂ ಸಂಧಿಸಲು, ಸಂಭವಿಸಿತೆಂಬರೀ ಮತ ಎಂಬ ಮತಿವಿಕಾರಂ'. ಮತವೆಂಬುದು ಒಂದು ಮತಿವಿಕಾರ, ಅದು ಹೇಗೆ ಹುಟ್ಟಿತು ಅಂದರೆ ಮೊದಲನೆ ತರುಣನ ಪ್ರಕಾರ ಮೊದಲ ಠಕ್ಕನು ಮೊದಲ ಬೆಪ್ಪನಂ ಸಂಧಿಸಲು, ಸಂಭವಿಸಿತೆಂಬರೀ ಮತ ಎಂಬ ಮತಿವಿಕಾರಂ. ಮುಂದುವರೆದು ಇವನು ಹೇಳುತ್ತಾನೆ. 'ಪೂರ್ವಿಕರ ಮೂಢತನಕಾದಿಯೆಂಬುವುದೆಲ್ಲಿ? ಹೇಳುವುದು ಒಂದು, ಮಾಡುವುದು ಮತ್ತೊಂದು! ನುಡಿಗೂ ನೆಗಳ್ತೆಗೂ ಸಂಬಂಧವೇ ಇಲ್ಲ! ಇದೆ ನಮ್ಮ ಭಾರತಾಂಬೆಯ ದುರ್ಗತಿಗೆ ಕಾರಣ'. ಇದು ಮುಖ್ಯವಾದ ಸಾಲು. ಇದರ ಚರ್ಚೆ ಬರುತ್ತದೆ. ಇದೇ ನಮ್ಮ ದುರ್ಗತಿಗೆ ಕಾರಣ. ನಡೆಗೂ ನುಡಿಗೂ ಸಂಬಂಧವಿಲ್ಲದೆ ಇರುವುದು ಭಾರತಾಂಬೆಯ ದುರ್ಗತಿಗೆ ಕಾರಣ ಎಂದು ಹೇಳುತ್ತಿದ್ದಾನೆ. ಮುಂದುವರೆದು ಹೇಳುತ್ತಾನೆ. 'ಹಸಿದ ಜನಗಳಿಗೆ ಕೊಡರೊಂದು ಕಾಸ', ಹಸಿದಂತಹ ಜನ ಭಿಕ್ಷೆ ಬೇಡಲು ಬಂದರೆ ಯಾರು ಒಂದು ಕಾಸು ಕೊಡುವುದಿಲ್ಲ. ಮತ್ತೆ ಮುಂದುವರೆದು ಹೇಳುತ್ತಾನೆ. 'ತಣ್ಣಗಿಹ ಕಲ್ಲುಗಳ ಮೇಲೆ ಎಣ್ಣೆಯನು ಬೆಣ್ಣೆಯನು ಸುರಿಯುವರು' ಹಸಿದ ಜನಗಳಿಗೆ ಒಂದು ಕಾಸನ್ನು ಕೊಡಲ್ಲ. ಆದರೆ ತಣ್ಣಗಿಹ ಕಲ್ಲುಗಳ ಮೇಲೆ ಎಣ್ಣೆಯನು ಬೆಣ್ಣೆಯನು ಸುರಿಯುವರು. ಇದನ್ನು ಈ ಪಠ್ಯದಿಂದ ಸ್ವತಂತ್ರಗೊಳಿಸಿ 'ನಮ್ಮ ವಿಚಾರಗಳನ್ನೆ ಹೇಳುತ್ತಿದ್ದಾನೆ' ಅಂತ ಸರಳೀಕರಿಸಬಾರದು. ಇಬ್ಬರು ತರುಣರು ಕ್ರಾಂತಿಕಾರಿಗಳು ಎಂದು ತಕ್ಷಣಕ್ಕೆ ತೀರ್ಮಾನಕ್ಕೆ ಬರಬಾರದು. ಹೀಗೆ ತಕ್ಷಣಕ್ಕೆ ತೀರ್ಮಾನ ಮಾಡದೆ ಇದರ ಸೂಕ್ಷ್ಮ ಬೆಳವಣಿಗೆಯನ್ನು ಸಾವಧಾನವಾಗಿ ಗಮನಿಸಿದರೆ ನಾಟಕದಲ್ಲಿ ನಮ್ಮ ನಿರೀಕ್ಷೆಯನ್ನು ಮೀರಿರುವ ವ್ಯತಿರಿಕ್ತವಾದ ಬೆಳವಣಿಗೆ ಕಾಣಿಸುತ್ತದೆ; ಇದು ಬಹಳ ಮುಖ್ಯ. ನ್ಯಾರೋ ಅಂಡರ್ ಸ್ಟ್ಯಾಂಡಿಂಗ್‌ನಲ್ಲಿ ನಾಟಕವನ್ನು ಓದಲಿಕ್ಕೆ ಹೋಗಬಾರದು. ಅಂದರೆ ನೇರ ಬೆಳವಣಿಗೆಯಲ್ಲಿ ನಾಟಕವನ್ನ ಓದಬಾರದು. ಈ ನಾಟಕಕ್ಕೆ ನೇರ ಬೆಳವಣಿಗೆ ಇಲ್ಲ. ಹಸಿದ ಜನರಿಗೆ ಕೊಡರು ಒಂದು ಕಾಸ, ಮಾತಿಗೂ ನೆಗಳ್ತೆಗೂ ಸಂಬಂಧವೆ ಇಲ್ಲದಿರುವುದರಿಂದ ಭಾರತಾಂಬೆಗೆ ದುರ್ಗತಿ ಬಂದಿದೆ. ಹಸಿದ ಜನರಿಗೆ ಒಂದು ಕಾಸನ್ನು ಕೊಡುತ್ತಿಲ್ಲ ಅನ್ನುವುದು ಇಲ್ಲಿ ಉಪದೇಶವಾಗಿದೆ.

ನಾಟಕದ ಮುಂದಿನ ಬೆಳವಣಿಗೆಯಲ್ಲಿ ಮೊದಲನೆ ತರುಣನ ಕ್ರಾಂತಿಕಾರಿ ವಿಚಾರವೆ



ಅಗ್ನಿಪರೀಕ್ಷೆಗೆ ಒಳಗಾಗುತ್ತದೆ. ಇದೇ ದೃಶ್ಯದಲ್ಲಿ ಕಣ್ಣಿಲ್ಲದ ತಿರುಕ ಬರುತ್ತಾನೆ. 'ನನಗೆ ಹೊಟ್ಟೆಗೇನು ಇಲ್ಲ. ತಿನ್ನಕೇನಾದರೂ ಕೊಡಿ, ಭಿಕ್ಷೆ ಕೊಡಿ' ಅಂತ ಕೇಳ್ತಾ ಬರುತ್ತಾನೆ. ಆಗ ಅವನನ್ನು ನೋಡಿ–ದ ಮೊದಲನೆ ತರುಣ ಮೊದಲು ಬಾಯಿಯಲ್ಲಿ ಕ್ರಾಂತಿಕಾರಿ ವಿಚಾರವನ್ನು ಹೇಳಿದವನು; ಅವನನ್ನು ನೋಡಿ 'ನೀನು ಭಿಕ್ಷುಕನಲ್ಲ, ನಿನಗೆ ದೇಹ ಚೆನ್ನಾಗಿದೆ, ಏಕೆ ಭಿಕ್ಷೆ ಬೇಡುತ್ತಿಯಾ, ನೀನು ಕುರುಡ ಅಂತ ಸುಳ್ಳು ಹೇಳುತ್ತ ಇದಿಯಾ", ಅಂತ ಹೇಳಿ ಅವನ ಕಣ್ಣನ್ನು ಚಿವುಟುತ್ತಾನೆ, ಕಣ್ಣು ರೆಪ್ಪೆಯನ್ನು ಹಿಡಿದು ಎಳೆಯುತ್ತಾನೆ. ಅಷ್ಟುಮಾತ್ರವಲ್ಲದೆ ಇನ್ನೊಂದು ಮಾತು ಹೇಳುತ್ತಾನೆ. 'ಭಿಕ್ಷುಕರ ದೆಸೆಯಿಂದ ದೇಶವೆ ಹಾಳಾಯ್ತು' ಎಂದು. ಈ ಹಿಂದೆ ಹೇಳಿದ್ದು ನಡೆಗೂ ನುಡಿಗೂ ಸಂಬಂಧವಿಲ್ಲದ ಕಾರಣ–ಕ್ಕಾಗಿ ದೇಶ ಹಾಳಾಗಿದೆ ಎಂದು. ಭಿಕ್ಷೆ ಬೇಡಲು ಬಂದವರಿಗೆ ಒಂದು ಕಾಸನ್ನು ಕೊಡುತ್ತಿಲ್ಲ. ಸುಮ್ ಸುಮ್ಮೆ ಕಲ್ಲುಗಳ ಮೇಲೆ ಎಣ್ಣೆ ಬೆಣ್ಣೆ ಸು–ರಿಯುತ್ತೀರಾ ಎಂದು ಹೇಳಿದ ಈ ಮನುಷ್ಯನೆ ಅಲ್ಲಿ ವೈಚಾರಿಕವಾಗಿ ಮಾತಿನಲ್ಲಿ, ನುಡಿಯಲ್ಲಿ ಹೇಳಿದ. ಆದರೆ ನುಡಿಯಲ್ಲಿ ಯಾವುದನ್ನು ಉಪದೇಶವಾಗಿ ಹೇಳಿದ್ದನೊ ಅದನ್ನೆ ತನ್ನ ನಡೆಯಲ್ಲಿ ಉಲ್ಲಂಘನೆ ಮಾಡುತ್ತಿದ್ದಾನೆ. ಅವನೆ ಭಿಕ್ಷುಕರ ದೆಸೆಯಿಂದ ದೇಶವೆ ಹಾಳಾಯ್ತು ಅಂತ ಹೇಳುತ್ತಿದ್ದಾನೆ. ತನ್ನ ನುಡಿಯನ್ನು ತನ್ನ ನಡೆಯಲ್ಲಿ ತಾನೆ ಪಾಲಿಸಲಾಗದೆ ಉಲ್ಲಂಘನೆ ಮಾಡಿದ್ದಾನೆ. ಇಂತಹ ಕುತೂಹಲಕಾರಿ ಪ್ರಸಂಗ ನಾಟಕದಲ್ಲಿ ಸೃಜನಶೀಲವಾಗಿದೆ. ತರುಣ ತನ್ನ ನುಡಿಯನ್ನು ನಡೆಯಲ್ಲಿ ಉಲ್ಲಂಘಿಸಿದ್ದಾನೆ. ಮೊದಲನೆ ತರುಣ ಹೀಗೆ ತಪ್ಪಾಗಿ ನಡೆದುಕೊಂಡದ್ದನ್ನು ಸಮರ್ಥಿಸಿಕೊಳ್ಳಬೇಕು. ಆಗ ಜಲಗಾರ ನಾಟಕ 'ಕುಮಾರವ್ಯಾಸ ಭಾರತ'ದಿಂದ ಒಂದು ಷಟ್ಪದಿಯನ್ನು ತಂದಿದೆ. ಮೊದಲನೆ ತರುಣ ಭಿಕ್ಷುಕನಿಗೆ ದುಡ್ಡು ಕೊಡಲಿಲ್ಲ. ನೀನು ದುಡಿಯಬೇಕು, ಭಿಕ್ಷೆ ಬೇಡಬೇಡ, ನಿನಗೆ ಕಣ್ಣಿಲ್ಲ ಅಂತ ಸುಳ್ಳು ಹೇಳ್ತಾ ಇದಿಯಾ ಅಂತ ಅವನ ಕಣ್ಣು ರೆಪ್ಪೆಯನ್ನು ಎಳೆದು ದಬ್ಬಿದ್ದ. ಅವನ ಆ ಸ್ವಭಾವದ ಅವನ ಸಮರ್ಥನೆಗಾಗಿ 'ಕುಮಾರವ್ಯಾಸ ಭಾರತ'ದ ಒಂದು ಷಟ್ಪದಿ ಇಲ್ಲಿ ಬಂದಿದೆ. ಕೊಡುವುದನ್ನು ನೋಡಿ ಕೊಡ್ಬೇಕು ಅಂತ ಹೇಳಿದ್ದಾನೆ ಅವನು. ದುಡ್ಡನ್ನು ಕುರುಡನಿಗೆ ಸುಮ್ ಸುಮ್ನೆ ಕೊಡ್ಬಾರ್ದು. ಇದನ್ನು ಮೊದಲನೆ ತರುಣ ಮತ್ತು ಎರಡನೆ ತರುಣ ಮಾತಾಡಿಕೊಳ್ಳುತ್ತಾರೆ. ಆಚರಣೆಯಲ್ಲಿ ಕೊಟ್ಟಿಲ್ಲ, ಮಾತಿನಲ್ಲಿ ಕೊಡ್ಬೇಕು ಅಂತ ಉಪದೇಶ ಮಾಡುತ್ತಾರೆ. ಆ ಷಟ್ಪದಿ ಕೆಳಗಿನಂತಿದೆ.

"ನರಜನುಮವತ್ಯಧಿಕವದರೊಳು
ಗುರುಹಿರಿಯರಿವರೆಂದು ದಾನ
ಕ್ಕರುಹರಿವರಲ್ಲೆಂದು ನೋಡದೆ ಮೂಢ
ಮಾರ್ಗದಲಿ
ಕರೆದಪಾತ್ರಂಗಿತ್ತು ಪಾತ್ರನ
ಪರಿಹರಿಸಲೀಯೆರಡರಿಂ ಸಂ
ಹರಣವೈದುವುದಾರ್ಜಿಸಿದ ಧನವರಸ ಕೇಳಿಂದ!"

ಈ ಪದ್ಯದ ಮೂಲಕ ತಾನು ತಪ್ಪಿದ ನಡೆಯನ್ನು ಸಮರ್ಥಿಸಿಕೊಂಡ. ಅಂದರೆ ಈ ತರುಣ–ರು ಕ್ರಾಂತಿಕಾರಕವಾಗಿ ಮಾತನಾಡಿ ನಡೆಯಲ್ಲಿ ಉಲ್ಲಂಘನೆ ಮಾಡಿ ತಮ್ಮನ್ನು ಸಮರ್ಥನೆ ಮಾಡಿಕೊಳ್ಳುವುದಿದೆ. ಇದು ನಾಟಕ–ಕ್ಕೆ ಮುಖ್ಯವಾದ ಚಾಲಕ ಶಕ್ತಿ. ಈ ಆಯಾಮದಲ್ಲಿ ಈ ನಾಟಕವನ್ನು ಇದುವರೆಗೆ ಏಕೆ ಓದಿಲ್ಲ ಎಂದು ಆಶ್ಚರ್ಯವಾಗುತ್ತದೆ. 'ಜಲಗಾರ'ದಲ್ಲಿ ಕುಮಾರವ್ಯಾಸನ ಷಟ್ಪದಿ ಬಂದಿದೆ ಅಂತ ಚರ್ಚೆ ಮಾಡಿರುವುದು ನನ್ನ ಗಮನಕ್ಕೆ ಬಂದಿಲ್ಲ. ಒಂದು ಕೃತಿಯ ಒಳಗಡೆ ಮತ್ತೊಂದು ಕೃತಿಯ ಬಿಡಿಭಾಗದ ಉಲ್ಲೇಖ ಬರುವುದು ಕನ್ನಡ ಸಾಹಿತ್ಯದ ವಿಶಿಷ್ಟ ಪರಂಪರೆ. ಇದರ ಬಗ್ಗೆ ಯಾರಾದರೂ ಅಧ್ಯಯನ ಮಾಡುವಷ್ಟು ಸಾಮಗ್ರಿಯಿದೆ. ಲಂಕೇಶ್ ಅವರ 'ಸಂಕ್ರಾಂತಿ' ನಾಟಕದಲ್ಲಿ 'ವಡ್ಡಾರಾಧನೆ'ಯ 'ಅಗ್ನಿರಾಜನ ಕತೆ'ಯ ಒಂದು ಬಿಡಿ ಪ್ರಸಂಗ ಬರುತ್ತದೆ. ಬಸವಣ್ಣ ತನ್ನ ಸಮರ್ಥನೆಗಾಗಿ ಅಗ್ನಿರಾಜನ ಕತೆಯನ್ನು ಹೇಳಿಕೊಳ್ಳುತ್ತಾನೆ. ಅದೇ ರೀತಿ ಬಿಜ್ಜಳ ತನ್ನ ಸಮರ್ಥನೆಗಾಗಿ ಅಗ್ನಿರಾಜನ ಕತೆಯನ್ನು ಹೇಳಿಕೊಳ್ಳುತ್ತಾನೆ. ಒಂದು ಕಡೆ ಬಸವಣ್ಣ ಮತ್ತೊಂದು ಕಡೆ ಬಿಜ್ಜಳ ಅವರ ಸಮರ್ಥನೆಗಾಗಿ 'ವಡ್ಡಾರಾಧನೆ'ಯ ಅಗ್ನಿರಾಜನ ಕತೆಯನ್ನು ಸಂಕ್ರಾಂತಿ ನಾಟಕದಲ್ಲಿ ತರಲಾಗಿದೆ. 'ಜಲಗಾರ'ದಲ್ಲಿ ತಾವು ಆಡಿದ ಮಾತನ್ನು ನಡೆಯಲ್ಲಿ ಉಲ್ಲಂಘನೆ ಮಾಡಿದ ಕಾರಣಕ್ಕಾಗಿ ತಮ್ಮನ್ನು ತಾವು ಸಮರ್ಥನೆ



ಮಾಡಿಕೊಳ್ಳಲು ವಿಧುರ ನೀತಿಯ ಕುಮಾರವ್ಯಾಸನ ಪ್ರಸಿದ್ಧ ಷಟ್ಪದಿಯನ್ನು ತರುತ್ತಿದ್ದಾರೆ. ಇದು ನಮಗೆ ಯಾಕೆ ಕಂಡಿಲ್ಲ ಅಂದ್ರೆ, ಬಹುಶಃ ಒಂದು ಕೃತಿಯನ್ನು ಹೊರಗಿನ ಪೂರ್ವತೀರ್ಮಾನದಿಂದ ಓದಲಿಕ್ಕೆ ಹೊರಟುಬಿಡ್ತೀವಿ. "ಜಲಗಾರ ನಾಟಕದಲ್ಲಿ ದೇವರ ನಂಬಿಕೆಯ ವಿರೋಧವಿದೆ; ಜಲಗಾರನ ಪರವಾಗಿದೆ, ದೇವರ ಮೇಲಿನ ಟೀಕೆಯಿದೆ, ಪುರೋಹಿತಶಾಹಿಯ ವಿರೋಧವಿದೆ' ಎಂದು ಓದಲಾಗಿದೆ. ಈ ಓದು ನಾಟಕದ ಒಳಗಿನ ವಿನ್ಯಾಸವನ್ನು ಆಧರಿಸಿದ್ದೊ ಅಥವಾ ಸಮಾಜದ ಬಗೆಗೆ ನಮಗಿರುವ ಪೂರ್ವತೀರ್ಮಾನವನ್ನು ಅವಲಂಬಿಸಿದ್ದೋ? ಸಮಾಜದ ಬಗೆಗೆ ಸಿದ್ಧಮಾದರಿಯ ತೀರ್ಮಾನಗಳ ಕಾರಣಕ್ಕಾಗಿ ಸಾಹಿತ್ಯ ಕೃತಿಯನ್ನು ಓದಬೇಕಾಗಿಲ್ಲ. "ಪುರೋಹಿತಶಾಹಿ ಮೂಢನಂಬಿಕೆಯನ್ನು ಹುಟ್ಟಿಸಿದೆ. ಅದು ಕಲ್ಲನ್ನು ಪೂಜೆ ಮಾಡಿದೆ" ಅಂತ ಹೇಳುವುದಾದರೆ ನಮಲ್ಲಿ ಈಗಾಗಲೇ ಆ ತೀರ್ಮಾನವಿದೆ. ಆ ತೀರ್ಮಾನವನ್ನು ಉಳಿಸಿಕೊಂಡು ಜಲಗಾರ ನಾಟಕವನ್ನು ಓದುವ ಅಗತ್ಯವಿಲ್ಲ. ಜಲಗಾರ ನಾಟಕದಿಂದ ಕಲಿಯಬೇಕೆನಿಸಿದರೆ ಕಲಿಯಬಹುದು. ಇಲ್ಲ ಅಂದ್ರೆ ತೋಟಿಗಳ ಪರವಾದ ನಮ್ಮ ಹಿತಾಸಕ್ತಿ ಮತ್ತು ಪುರೋಹಿತಶಾಹಿಯ ವಿರೋಧದ ಕಾರಣಕ್ಕೆ 'ಜಲಗಾರ' ನಾಟಕವನ್ನು ಓದಬೇಕಾಗುತ್ತದೆ. ಆ ಕಾರಣಕ್ಕೆ ಜಲಗಾರ ನಾಟಕವನ್ನು ಓದುವ ಅವಶ್ಯಕತೆ ಇಲ್ಲ. ಸಾಮಾಜಿಕ ನೆಲೆಯ ತೀರ್ಮಾನವನ್ನು ಇಟ್ಟುಕೊಂಡು ಅದಕ್ಕೆ ಸಾಹಿತ್ಯ ಕೃತಿಯನ್ನು ದಾಳವಾಗಿ ಬಳಸಿಕೊಳ್ಳಬೇಕಾಗಿಲ್ಲ. "ನೋಡಿ ನನ್ನ ತೀರ್ಮಾನ ಹೀಗಿದೆ, ಕುವೆಂಪು ನಾಟಕವು ನನ್ನ ತೀರ್ಮಾನವನ್ನು ಸಮರ್ಥನೆ ಮಾಡಿದೆ" ಎಂದು ಹೇಳಿ ಒಂದು ಪುರಾವೆಯಾಗಿ, ಸಾಕ್ಷಿ ರೀತಿಯಲ್ಲಿ ಒಂದು ಸಾಹಿತ್ಯ ಕೃತಿಯನ್ನು ಓದುವ ವಿಧಾನವು ಸಾಹಿತ್ಯ ಸಂಸ್ಕೃತಿಯ ಸೂಕ್ಷ್ಮ ಓದು ಆಗಲಾರದು.



ISSN: 2348-7666
ISSN: 2348-7666; Volume 10, Issue 3(1), July-September, 2023
IMPACT FACTOR: 6.023

International Journal of Academic Research

Quarterly

VOICE OF INTELLECTUALS

PEER REVIEWED JOURNAL

Editors:
Dr. Haniyuru Chandre Gowda
Associate Professor in Kannada, National Tribals & Folkloric Researcher
Director & Head, Birsa Munda Tribals Community Development & Research Center (BMTC-DRC), Bengaluru
Dr. Mallappa Bandi
Manjula T. Badami
Dr. Rahiman Gorajanal



Multidisciplinary, Multiple Languages
Refereed and Indexed Journal

Editor-in-Chief
Dr. T.V. Ramana

Content

Volume 10 Issue 3(1) July-September, 2023

Sl.No	ARTICLE TITLE	Pg No.
1	ಕನ್ನಡ ಕಾವ್ಯಗಳಲ್ಲಿ ಶಾಂತಿ ಮತ್ತು ಸಾಮರಸ್ಯತೆ – **ಪ್ರೊ. ಶ್ರೀಮತಿ. ಜೀನತಅಮಾನ ಎ. ಹಟ್ಟಿಹೊಳಿ**	1
2	ಗುಳೇದಗುಡ್ಡದ ಮಠಗಳ ಸಾಮಾಜಿಕ ಹಾಗೂ ಶೈಕ್ಷಣಿಕ ಬೆಳವಣಿಗೆಗಳ ಚಟುವಟಿಕೆಗಳು – **ಡಾ. ವಿದ್ಯಾ ಎಸ್. ಹಡಗಲಿ**	7
3	ಕನ್ನಡ ಮಹಿಳಾ ಸಾಹಿತ್ಯದ ಸಂವೇದನೆ ಮತ್ತು ಸ್ವರೂಪ – **ಡಾ. ರೆಹಮಾನ ಆಯ್. ಗೊರಜನಾಳ**	14
4	ತೀ.ನಂ.ಶ್ರೀ ಅವರ 'ಒಲುಮೆ'– ಒಂದು ನೋಟ – **ಡಾ. ಜಯಲಲಿತಾ**	21
5	ಪ್ರವಾಸ ಕಥನದಲ್ಲಿ ಐತಿಹಾಸಿಕ ಒಳನೋಟಗಳು – **ಶಶಿಕಲಾಮ್ಮ. ಯು**	28
6	"ಡಾ. ಚಂದ್ರಶೇಖರ ಕಂಬಾರರ ಸಾಹಿತ್ಯ ಅವಲೋಕನ" – **ಡಾ: ರಮೇಶ ಹಲುವಾಗಲು**	33
7	ನಮಗೆ ಬೇಕಾಗಿರುವ ಶಿಕ್ಷಣ ನೀತಿ – ನಿಯಮಗಳು ಮತ್ತು ರೂಪುರೇಷೆಗಳು – **ಡಾ. ನಾರಾಯಣ ಮೂರ್ತಿ ಕೆ**	37
8	ವಚನಗಳಲ್ಲಿ ವೈಜ್ಞಾನಿಕ ಬೆಳಕು – ಶ್ರೀಮತಿ. ಶ್ರೀದೇವಿ ಪ. ದೊಡ್ಡಮನಿ	43
9	ಶೃಂಖಲಾ ಸ್ತ್ರೀ ಸಂವೇದನ ಸಾಮಾಜಿಕ ಕಾದಂಬರಿ – **ಡಾ. ವೀರಪ್ಪ ಪೂಜಾರ**	48
10	ವಚನ ಸಾಹಿತ್ಯದ ಪರಂಪರೆ – **ಶ್ರೀಮತಿ. ನಿರ್ಮಲಾ ಶೀಲವಂತರ**	52
11	'ಜಲಗಾರ' ನಾಟಕ ಎತ್ತಿರುವ ಪ್ರಶ್ನೆಗಳು ಮತ್ತು ರೂಪಿಸುತ್ತಿರುವ ಜ್ಞಾನದ ಸ್ವರೂಪ – **ಡಾ. ಬಿ.ಎಂ. ಪುಟ್ಟಯ್ಯ**	60
12	ಅನುಭವದ ಗಣಿಯಾಗಿ ಗಾದೆಗಳು – **ಪ್ರತಿಕಾ ತಳವಾರ**	67
13	ಸಂಸ್ಕಾರ ಕಾದಂಬರಿಯಲ್ಲಿ ಅನಾಥಪ್ರಜ್ಞೆ – **ಶರಣಬಸಪ್ಪ ಯತ್ನಳ್ಳಿ**	71
14	ಮಾನವಿಕ ಸಂಶೋಧನೆಯ ದ್ವಂದ್ವಗಳನ್ನು ದಾಟುವುದು ಹೇಗೆ – **ಡಾ.ಮಲ್ಲಪ್ಪ ಎನ್. ಬಂಡಿ**	76
15	"The Effect Of The Plyometric Training Program On Taek-wondo Player" - **Shri. Rajasab B. Sonekhan**	80
16	ಸಮಾಜದ ಓರೆ–ಕೋರೆಗಳನ್ನು ವಿಡಂಬನೆಗೆ ಒಳಗು ಮಾಡಿದ ಮಹಾಶರಣ ಅಂಬಿಗರ ಚೌಡಯ್ಯ – **ವಿಶ್ವನಾಥ ಜಿ**	86
17	ಸುಭದ್ರ ರಾಷ್ಟ್ರ ನಿರ್ಮಾಣಕ್ಕೆ ಗೌತಮ ಬುದ್ಧರ ವಿಚಾರಗಳ ಪ್ರಸ್ತುತತೆ – **ಡಾ. ನಳಿನ.ಎನ್**	90
18	The Agri-Tourism In India As A Means Of Sustainable Development: A Reflection - **Kavya M.B.**	95
19	ChatGPT: The Novel Revolutionary Chatbot - **Shri R. C. Umarani**	103
20	ಡಾ. ಸಿದ್ಧಲಿಂಗಯ್ಯನವರ ಊರುಕೇರಿ : ಜೀವಪರ ಸಂಸ್ಕೃತಿ – **ಡಾ. ಅಸೂಯ ಕಾಂಬಳೆ**	108
21	Green Marketing - Opportunities and Challenges - **Dr. Smt. S. D. Soraganvi**	116

International Journal of Academic Research
ISSN: 2348-7666; Vol.10, Issue 3(1), July-September, 2023
Impact Factor: 6.023; Email: drtribe79@gmail.com

'JALAGARA' NATAKA HETTIRUVA PRASHNEGALU MATTU RUPISUTTIRUVA JANANADA SWAROOPA

'ಜಲಗಾರ' ನಾಟಕ ಎತ್ತಿರುವ ಪ್ರಶ್ನೆಗಳು ಮತ್ತು ರೂಪಿಸುತ್ತಿರುವ ಜ್ಞಾನದ ಸ್ವರೂಪ

– ಡಾ. ಬಿ.ಎಂ. ಪುಟ್ಟಯ್ಯ
ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ,
ಹಂಪಿ.



ಕುವೆಂಪು ಅವರ 'ಜಲಗಾರ' ನಾಟಕವು ತಾತ್ವಿಕವಾದ ಕೆಲವು ಪ್ರಶ್ನೆಗಳನ್ನು ಎತ್ತಿದೆ. ಆ ಮೂಲಕ ಇಂದಿಗೆ ಅಗತ್ಯವಾಗಿರುವ ಆಚರಣಾತ್ಮಕ ಜ್ಞಾನಮೀಮಾಂಸೆಯನ್ನು ರೂಪಿಸುತ್ತಿದೆ. ಬದುಕು ಅಂದರೆ ಏನು? ಬಾಳು ಅಂದರೆ ಏನು? ಅದನ್ನು ಅರ್ಥಮಾಡಿಕೊಳ್ಳುವುದು ಹೇಗೆ? ಅದನ್ನು ಅರ್ಥಮಾಡಿಕೊಳ್ಳಲು ಎಂತಹ ಜ್ಞಾನ ಬೇಕು? ಎಂತಹ ಅರಿವು ಬೇಕು? ಅದು ಯಾವ ಮೂಲದಿಂದ ಸಿಗುತ್ತದೆ? ಇದರ ಹುಡುಕಾಟ, ಇದರ ಸೃಜನಶೀಲತೆಯ ರಚನೆ ನಾಟಕದ ಮತ್ತೊಂದು ಮುಖ್ಯವಾಗಿರುವ ಭಿತ್ತಿ. ಈ ವಿಚಾರಗಳು ಜನರನ್ನು ಕುರಿತ ಪಿಚಾರಗಳು, ಬಾಳನ್ನು ಕುರಿತ ವಿಚಾರಗಳು ಜಲಗಾರನ, ರೈತನ ಮತ್ತು ಶಿವನ ಸಂಭಾಷಣೆಯಲ್ಲಿ ಬರುತ್ತವೆ. ನಮಗೆ ಗೊತ್ತಿರುವುದು ಬಹುತೇಕ ಇವು ಮೂರೆ. 'ಜಲಗಾರ' ನಾಟಕದಲ್ಲಿ ರೈತ, ಜಲಗಾರ ಮತ್ತು ಶಿವ ಏನು ಮಾತನಾಡಿದ ಅಂತ. ಆದರೆ ಈ ಒಂದೆ ಚರ್ಚೆ ಮಾಡಿದಂತೆ ಹುಡುಗಿ, ಕಬ್ಬಿಗ ಮತ್ತು ಬಾಲಕರು ಮಾತಾಡಿದ್ದನ್ನು 'ಜಲಗಾರ' ನಾಟಕವನ್ನು ಕುರಿತ ವಿಮರ್ಶೆಗಳು ಪರಿಶೀಲನೆ ಮಾಡಿದಂತೆ ಕಾಣುವುದಿಲ್ಲ. ಜಲಗಾರ, ರೈತ, ಶಿವ– ಈ ಮೂರು ಪಾತ್ರಗಳ ಸಂಭಾಷಣೆಗಳನ್ನೇ ಕೇಂದ್ರಮಾಡಿಕೊಂಡು ನಾಟಕವನ್ನು ಓದಲಾಗಿದೆ; ಚರ್ಚೆ ಮಾಡಲಾಗಿದೆ. ಈ ಮೂರು ಪಾತ್ರಗಳ ಸಂಭಾಷಣೆಗಳನ್ನು ವಿವರಗಳಿಂದ ಮಾತ್ರ ಗ್ರಹಿಸದೆ ಅವುಗಳ ಹಿಂದೆ ಇರುವ ಮೂಲಭೂತವಾದ ಸಂವೇದನೆಯ ಕಡೆಗೆ ಆಲೋಚಿಸುವ ಅಗತ್ಯವಿದೆ. ಅಲ್ಲಿ ಒಂದು ಜ್ಞಾನಮೀಮಾಂಸೆಯಿದೆ. ಅದರ ಸ್ವರೂಪವನ್ನು ಅರಿಯುವ ಕುತೂಹಲ ಮೂಡಿದರೆ 'ಜಲಗಾರ' ನಾಟಕದ ಓದಿಗೆ ಶಕ್ತಿಶಾಲಿಯಾದ ಒಳನೋಟ ಸಿಗುತ್ತದೆ. ವಿಶೇಷವೆಂದರೆ ಜಲಗಾರ, ರೈತ, ಶಿವನಾಡುವ ಅಷ್ಟು ಸಂಭಾಷಣೆಗಳು ತೀರ್ಮಾನದಿಂದ ಕೂಡಿವೆ. ತೀರ್ಮಾನದಿಂದ ಕೂಡಿರುವ ಈ ಹೇಳಿಕೆಗಳು, ಸಂಭಾಷಣೆಗಳು ಓದುಗರಿಗೆ ಇಷ್ಟವಾಗುತ್ತವೆ. ಏಕೆಂದರೆ ನಾವು ನಮ್ಮ ತೀರ್ಮಾನಗಳಿಗೆ ನಮ್ಮ ಗ್ರಹಿಕೆಯನ್ನು ಬದ್ಧಗೊಳಿಸಿಕೊಂಡುಬಿಟ್ಟಿದ್ದೀವಿ. ಇದರಿಂದ ಗ್ರಹಿಕೆ ಹರಿತವಾಗುತ್ತಿಲ್ಲ, ಸೂಕ್ಷ್ಮವಾಗುತ್ತಿಲ್ಲ. "ಹುಡುಕಾಟ, ಕುತೂಹಲ, ತೀಕ್ಷ್ಣಮತಿಗಳನ್ನು ಬದಿಗಿಟ್ಟು ತೀರ್ಮಾನ ಹೇಳು' ಎಂಬ ಪರಿಸ್ಥಿತಿಯಲ್ಲಿ ನಾವಿದ್ದೀವಿ. ತೀರ್ಮಾನಗಳೆ ರಾರಾಜಿಸುತ್ತಿರುವುದರಿಂದ ಜಲಗಾರ, ರೈತ, ಶಿವನ ಮಾತುಗಳು ಹೇಳಿಕೆ ರೂಪದಲ್ಲಿ ಬಂದಿರುವುದರಿಂದ ನಾಟಕ ಹೆಚ್ಚು



ಆಕರ್ಷಣೀಯವಾಗಿದೆ.

ಜ್ಞಾನಮೀಮಾಂಸೆಯ ಸ್ವರೂಪವನ್ನು ಅರಿಯಲು ಎರಡು ಮೂರು ಭಾಗಗಳನ್ನು ಉಲ್ಲೇಖ ಮಾಡುತ್ತೇನೆ. ಜಲಗಾರನ ಮಾತುಗಳು ಒಂದು ಕಡೆ ಹೀಗೆ ಬರುತ್ತವೆ. 'ಸುಮಮಾಲೆ ಅಲರುಗಳ ಚೆಲ್ಲುತಿರುವಡವಿಗಳು.' ಇವನ್ನು ಸ್ಪಷ್ಟವಾಗಿ ಕೇಳಿಸಿಕೊಂಡರೆ ಮತ್ತೆ ಇದು ಚರ್ಚೆಗೆ ಬರುತ್ತದೆ. 'ಸುಮಮಾಲೆ ಅಲರುಗಳ ಚೆಲ್ಲುತಿರುವಡವಿಗಳು. ಮುನ್ನೀರು ತೊರೆ ಕೆರೆಗಳೇ ಪಂಚಪಾತ್ರೆ, ಬಿತ್ತರದ ಬಾಂದಳವೆ ಗೋಪುರಂ! ಹೊಳೆಗಳಲಿ, ಹರಿವ ಸಲಿಲವೆ ತೀರ್ಥ: ಸುಮಗಂಧವೇ ಧೂಪ. ಹಕ್ಕಿಯುಂಚರವೆ ಸುಸ್ವರಮೇಳ! ಎದೆಯೊಲವೆ ವರಧರ್ಮಶಾಸ್ತ್ರ. ಭಕ್ತಿಯೆ ದಿವ್ಯಾತ್ಮ ಯಜ್ಞ, ಎದೆಯ ಮಾನಿಯೇ ಯಜ್ಞಶಾಲೆ! ನಲ್ವಾತುಗಳೆ ಮಂತ್ರಘೋಷ: ನೀತಿಯೆ ಪರಮ ವೇದ. ತಿರೆ–ಗಿಂತ ದೇಗುಲವದೊಳದೇನ್?' ಈ ಎಲ್ಲಾ ವಿವರಗಳು ಹಾಗೂ ಹೇಳಿಕೆಗಳು ಭೂಮಿಯನ್ನು ಕುರಿತವು. ಮಣ್ಣನ್ನು ಆರಾಧಿಸುತ್ತೀನಿ, ಮಣ್ಣನ್ನು ಭೋಗಿಸುತ್ತೀನಿ ಅನ್ನುವ ರೈತನ ಮಾತುಗಳನ್ನು ಇಲ್ಲಿ ಸೇರಿಸಿಕೊಳ್ಳಬಹುದು. ಇಲ್ಲಿ ಜಲಗಾರ ಕೇಳುತ್ತಾನೆ, ತಿರೆಗಿಂತ ದೇಗುಲದಲ್ಲಿ ಏನಿದೆ? ಇಲ್ಲಿ ತಿರೆ ಬಹಳ ಮುಖ್ಯವಾಗಿದ್ದು ದೇಗುಲ ಎರಡನೆ ಆಯ್ಕೆಯಾಗಿದೆ. ಇವರ ಚರ್ಚೆಗೆ ಪೂರಕವಾಗಿ ನಾಟಕದ ಕೊನೆಯ ಸಾಲುಗಳನ್ನು ಗಮನಿಸಬೇಕು. ಮೇಲೆ ಉಲ್ಲೇಖಿಸಿದ ಸಾಲುಗಳನ್ನು ನಾಟಕದ ಕೊನೆಯ ಸಾಲುಗಳ ಜೊತೆಗಿಟ್ಟು ನೋಡಿದಾಗ ಈ ಮಾತುಗಳ ಹಿಂದೆ ಕ್ರಿಯಾಶೀಲವಾಗುವ ಜ್ಞಾನಮೀಮಾಂಸೆ ಯಾವುದು ಎಂಬುದನ್ನು ಶೋಧಿಸಲು ಸಾಧ್ಯವಾಗುತ್ತದೆ. ನಾಟಕದ ಕೊನೆಯಲ್ಲಿ ಶಿವ ಬರುತ್ತಾನೆ. ಶಿವನಿಗೆ ವೇಷ ತೊಡಿಸಿದ್ದಾರೆ. ಏನ್ ವೇಷ ತೊಡಿಸಿದ್ದಾರೆ ಅಂದರೆ ತಲೆಯಲ್ಲಿ ಗಂಗೆಯಿದೆ, ಕೊರಳಲ್ಲಿ ಉರಗಗಳಿದ್ದಾವೆ. ಅವನು ಹೇಳುತ್ತಾನೆ. 'ಇವ್ಯಾವು ಇಲ್ಲದೆ, ಜಸಿವಾರ ಬೂದಿಗಳು ಇಲ್ಲದೆ ಶಿವಗುಡಿಗೆ ನನ್ನನ್ನು ಸೇರಿಸುವುದೆ ಇಲ್ಲ'. ನಿಜವಾದ ಶಿವನಿದ್ದಾನಲ್ಲ; ಅವನು ಬೇರೆಯಿದ್ದಾನೆ. ಆದರೆ ನಾವು ಕಲ್ಪಿಸಿಕೊಂಡಿರುವ ಶಿವನಿದ್ದಾನಲ್ಲ, ಇವನು ಕಲ್ಪನೆಯ ಮೂಲಕ ರೂಪ ಪಡೆದುಕೊಂಡಿರುವ ಶಿವ. ಸುರುಳಿ ಸುತ್ತಿದ ಜಡೆ ಇರುವಂತಹದ್ದು, ಗಂಗೆ ಇರುವಂತಹದ್ದು, ಕೊರಳಲ್ಲಿ ಉರಗ ಇರುವಂತಹದ್ದು ಮತ್ತು ಬೂದಿ ಇರುವಂತಹದ್ದು. ಇದು ಕಲ್ಪನೆಯ ಶಿವ. ಈ ಕಲ್ಪನೆಯ ಶಿವನನ್ನು ನಿಜ ಶಿವನೆಂದು ಭಾವಿಸಿರುವುದೆ ದೊಡ್ಡ ಸಮಸ್ಯೆಂಬ ಗಂಭೀರವಾದ ತಾತ್ವಿಕ ಸಮಸ್ಯೆಯನ್ನು, ಪ್ರಶ್ನೆಯನ್ನು 'ಜಲಗಾರ' ನಾಟಕ ಎತ್ತುತ್ತಿದೆ. ಅಂದರೆ ಇರುವಕೆಯ ಶಿವ ಬೇರೆ. ಏನೇನೆಲ್ಲ ವೇಷತೊಡಿಸಿ, ತೋರುವಕೆಯ ಶಿವನಾಗಿಸಿರುವ ಶಿವ ಬೇರೆ. ವೇಷ ತೊಡಿಸಿರುವ ಶಿವನನ್ನೇ ನಿಜವಾದ ಶಿವನೆಂದು ನಂಬಿಸಲಾಗಿದೆ ಮತ್ತು ನಂಬಲಾಗಿದೆ. ಹೀಗೆ ವೇಷ ತೊಡಿಸಿರುವುದು ಶಿವನೆಂಬ ದೈವಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಶಿವನೆಂಬ ಚಿತ್ರಕ್ಕೂ, ಶಿವನೆಂಬ ಪ್ರತಿಮೆಗೂ ಮಾತ್ರ ಸಂಬಂಧಿಸಿದ್ದಲ್ಲ. ಬದುಕಿಗೆ, ಬಾಳಿಗೆ, ಅನುಭವಕ್ಕೆ, ಗ್ರಹಿಕೆಗೆ, ಮೌಲ್ಯಗಳಿಗೆ, ಸಂವೇದನೆಗಳಿಗೂ ಸಂಬಂಧಪಟ್ಟದ್ದು. ಮುಂದುವರಿದು ಅರಿವಿಗೆ, ತಿಳುವಳಿಕೆಗೆ ಸಂಬಂಧಪಟ್ಟದ್ದು. ವೇಷ ತೊಡಿಸಿರುವ ತಿಳುವಳಿಕೆ ಮತ್ತು ವೇಷ ತೊಡಿಸದಿರುವ ತಿಳುವಳಿಕೆ. ವೇಷ ತೊಡಿಸಿರುವ ಅನುಭವ ಮತ್ತು ವೇಷ ತೊಡಿಸದಿರುವ ಅನುಭವ. ವೇಷ ತೊಡಿಸಿರುವ ಪ್ರತಿಮೆ ಮತ್ತು ವೇಷ ತೊಡಿಸದಿರುವ ಪ್ರತಿಮೆ. ಇದನ್ನು ಬಹಳ ದೊಡ್ಡ ತಾತ್ವಿಕ ಪ್ರಶ್ನೆಯಾಗಿ, ಒಂದು ತತ್ತ್ವಜಿಜ್ಞಾಸೆಯ ಪ್ರಶ್ನೆಯಾಗಿ ನಾಟಕ ಎತ್ತುತ್ತಿದೆ. ಒಂದು ಕಡೆ ಜಲಗಾರನ ಮೂಲಕ, ಮತ್ತೊಂದು ಕಡೆ ಶಿವನ ಮೂಲಕ ಈ ಪ್ರಶ್ನೆಯನ್ನು ಎತ್ತುತ್ತಿದೆ. ಕೊನೆಯಲ್ಲಿ ಶಿವ ಹೇಳುತ್ತಾನೆ. ನಾನೀಗ ಹಾವುಗಳನ್ನು ಪಾತಳಕ್ಕೆ ಕಟ್ಟಿಹಾಕಿ ಬಿಟ್ಟಿದ್ದೀನಿ. ಗಂಗೆಯನ್ನು ಹಿಮಗಿರಿಗೆ ಎಸೆದು ಬಿಟ್ಟಿದ್ದೀನಿ. ಹಣೆಗಣ್ಣನ್ನು ಹಂಚಿಬಿಟ್ಟಿದ್ದೀನಿ. ಭಯಂಕರವಾಗಿ ಮಸಣದಲ್ಲಿ ಬಿದ್ದು ಬಿಟ್ಟಿದ್ದಾವೆ ಹಚ್ಚಿದಂತಹ ಬೂದಿ. ಅದಕ್ಕೆ ಚಟ್ಟಗಳನ್ನು ಕಟ್ಟುತ್ತಿದೆ. ಅವರು ಎನಗೆ ತೊಡಿಸಿದ ಯಜ್ಞೋಪವಿತ. ಅವರಿತ್ತ ಪೊರಕೆಯಂದವ ಶೂಲ ಗುಡಿಸುತಿದೆ ಬ್ರಹ್ಮಗಳ ಬೀದಿಯನು, ಶಾಸ್ತ್ರಿಗಳು ಶಿವಗಿತ್ತ ದಾನಗಳು ತೊಲಗೆ, ಉಳಿಯುವನು ಜಲಗಾರ, ಊರ ತೋಟಿಯು ನೀನು, ಜಗದ ತೋಟಿಯು ನಾನು. ಇದು ನಾಟಕದ ಕೊನೆಯಲ್ಲಿ ಬರುವ ಭಾಗ. ಈಗ ನಾಟಕ ಯಾವ ಬಗೆಯ ದರ್ಶನವನ್ನು ಹೇಳಲು ಪ್ರಯತ್ನ ಪಡುತ್ತಿದೆ ಅಂದರೆ ಇದು ಶಿವನಿಗೆ ಮಾತ್ರ



ವೇಷ ತೊಡಿಸಿರುವುದಲ್ಲ. ನಿಜ ಶಿವ ಗೊತ್ತಿಲ್ಲ. ನಿಜ ಶಿವನಿಗೆ ವೇಷವನ್ನು ತೊಡಿಸಿ ಅವನ ಅಂಗಾಂಗಗಳಿಗೆ ನಮಗೆ ಬೇಕಾಗಿರುವ ವೇಷವನ್ನು ತೊಡಿಸಿ; ವೇಷ ರೂಪದ ಶಿವನನ್ನೆ ನಿಜಶಿವನೆಂದು ಭ್ರಮಿಸುವಂತೆ ಮಾಡಲಾಗಿದೆ. ಇದನ್ನು ಸಾಮಾಜಿಕ ನೆಲೆಯಲ್ಲಿ, ಜ್ಞಾನದ ನೆಲೆಯಲ್ಲಿ, ಎಲ್ಲಾ ವಲಯದಲ್ಲೂ ವಿಸ್ತರಿಸಿಕೊಳ್ಳಬಹುದು. ಇದು ನಮ್ಮ ನಮ್ಮ ಆಸಕ್ತಿ ಹಾಗೂ ಆಯ್ಕೆಯನ್ನು ಅವಲಂಬಿಸಿದೆ. ಯಾವುದು ನಕಲಿ ಮತ್ತು ಯಾವುದು ಅಸಲಿ ಎಂಬುದನ್ನು ಇದು ಹೇಳುತ್ತಿದೆ.

ಈ ಮೊದಲು ಉಲ್ಲೇಖಿಸಿದ ಜಲಗಾರನ ಮಾತಿಗೆ ಬರುತ್ತೇನೆ. 'ಸುಮಮಾಲೆ ಅಲರುಗಳ ಚೆಲ್ಲುತಿರುವಡವಿಗಳು' ಎಂಬ ಮಾತು ಅದು. ಹೂಮಾಲೆಗಳನ್ನು ಚೆಲ್ಲುವ ಅಡವಿಗಳು ನಮಗೆ ಬೇಕು. ಆದರೆ ನಿಜವಾಗಲೂ ಇವತ್ತು ಅವನ್ನು ಇಲ್ಲದಂತೆ ಮಾಡಿದ್ದೇವೆ. ಏಕೆಂದರೆ ಅಡವಿಗಳಿಗೆ ಆಧುನಿಕತೆಯ ಹೆಸರಿನಲ್ಲಿ ವೇಷ ತೊಡಿಸಿದ್ದೀವಿ. ಅಡವಿ ಇಲ್ಲ, ಸುಮಮಾಲೆ ಇಲ್ಲ, ಅಲರುಗಳು ಇಲ್ಲ. ಅವು ಇರಬೇಕಾದ ಅಡವಿಗಳಿಗೆ ಪಾರ್ಕ್‌ಗಳು ಎನ್ನುವ ವೇಷ ತೊಡಿಸಿದ್ದೀವಿ. ನಿಜವಾದ ಕಾಡುಗಳಿಲ್ಲ. ಮಲೆನಾಡಿನಲ್ಲಿ ನಿಜವಾದ ಕಾಡುಗಳಿಲ್ಲ. ಅಲ್ಲಿ ಕೃತಕವಾದ ನೆಡತೋಪುಗಳನ್ನು ಬೆಳೆಸಿದ್ದಾರೆ. ಇದು ಎಲ್ಲ ಕಡೆಗೂ ನಿಜ. 'ಮುನ್ನೀರು ತೊರೆ ಕೆರೆಗಳೇ ಪಂಚಪಾತ್ರೆ'. ಅದು ಬೇಕು ಅಂತ ಹೇಳುತ್ತಾನೆ ಜಲಗಾರ. ಆದರೆ ಪ್ರಕೃತಿಸಹಜವಾದ ನಿಜವಾದ ನೀರು ಇದೆಯಾ ನಮಗೆ? ನೀರಿನ ಅನೇಕ ಕೃತಕ ರೂಪಗಳು ಬಂದಿದ್ದಾವೆ. ನೀರಿಗೂ ಕೂಡ ಶಿವನಿಗೆ ವೇಷ ತೊಡಿಸಿರುವ ಹಾಗೆ ನಿಸರ್ಗಸಹಜವಾಗಿರುವ ಕೆರೆ, ತೊರೆಗಳಿಗೆ, ಪಂಚಪಾತ್ರೆ ಆಗಬೇಕಾಗಿದ್ದಕ್ಕೂ ಕೂಡ ವೇಷ ತೊಡಿಸಿದ್ದೀವಿ. 'ಬಿತ್ತರದ ಬಾಂದಳವೆ ಗೋಪುರಂ'. ಗೋಪುರವನ್ನು ಸಿಮೆಂಟಿನಲ್ಲಿ ಕಟ್ಟಬೇಕಾಗಿಲ್ಲ. ನಮಗೆ ಕಲ್ಪನೆಯ ಶಕ್ತಿ ಇದ್ದರೆ ನಮ್ಮ ಅನುಭವದಿಂದ ಕಲ್ಪಿಸಿಕೊಂಡು ಆಕಾಶವನ್ನು ನೋಡಿದರೆ ಮುಗಿಲಿನ ಮೋಡದ ಮೂಲಕ ಕಾಣಿಸುತ್ತವೆ. ಆದರೆ ಇಲ್ಲಿ ಸಿಮೆಂಟಿನ ಕಾಂಕ್ರೀಟನ್ನು ಬಳಸಿ ಗೋಪುರಗಳನ್ನು ಕಟ್ಟುತ್ತಿದ್ದೇವೆ. 'ಹೊಳೆಗಳಲಿ ಹರಿವ ಸಲಿಲವೆ ತೀರ್ಥ'. ಇದು ನಿಸರ್ಗಸಹಜವಾದದ್ದು. ಇಲ್ಲೂ ಕೂಡ ಕೃತಕವಾದುದನ್ನು ತಂದಿದ್ದೀವಿ. ಅದಕ್ಕೂ ಕೂಡ ವೇಷವನ್ನು ತೊಡಿಸಿದ್ದೀವಿ. 'ಸುಮಗಂಧವೆ ಧೂಪ'. ಹೂವುಗಳಿಂದ ಬರುವಂತಹ ಗಂಧವಿದೆ; ಅದರ ಪರಿಮಳ ನಮಗೆ ಬೇಕು. ಇವತ್ತು ಅದು ಇಲ್ಲ. ಪರ್‌ಫ್ಯೂಮ್‌ಗಳು ಬಂದಿವೆ. ಪರ್‌ಫ್ಯೂಮ್ ಬಳಸುವುದರ ಮೂಲಕ ಸೋಶಿಯಲ್ ಸ್ಟೇಟಸ್‌ಅನ್ನು ಕಾಯ್ದುಕೊಳ್ಳುವ ದುಃಸ್ಥಿತಿಯಲ್ಲಿ ನಾವಿದ್ದೀವಿ. ಇದು ವೇಷ. ಬದುಕಿಗೆ, ಬಾಳಿಗೆ ತೊಡಿಸಿರುವ ವೇಷ ಅಂತ ನಾಟಕ ಹೇಳುತ್ತಿದೆ. ಸುಗಂಧವೆ ಧೂಪವಾಗಿರಬೇಕಿತ್ತು; ಆದರೆ ಹಾಗಾಗಿಲ್ಲ. 'ಹಕ್ಕಿಯಿಂಚರವೆ ಸುಸ್ವರಮೇಳ'; ನಾವು ಹಕ್ಕಿಯಿಂಚರವನ್ನು ಕಳೆದುಕೊಂಡಿದ್ದೇವೆ. ಇದಕ್ಕೆ ಕಾರಣವನ್ನು ವಿವರಿಸಬೇಕಾಗಿಲ್ಲ. ನಿಸರ್ಗಸಹಜ ಹಕ್ಕಿಯಿಂಚರದ ಬದಲು ಬದಲು ಎಲೆಕ್ಟ್ರಾನಿಕ್ ಮಿಡಿಯಾ ಬಂದಿದೆ. ಇದು ಹಕ್ಕಿಯಿಂಚರಕ್ಕೆ ತೊಡಿಸಿರುವ ವೇಷ. 'ಎದೆಯೊಲವೆ ವರಧರ್ಮಶಾಸ್ತ್ರ'. ನಮಗೆ ಎದೆಯಲ್ಲಿ ಒಲವು ಇಲ್ಲ. ಎಲ್ಲಾ ಸರಕಾಗಿ ಬಿಟ್ಟಿದೆ. 'ಭಕ್ತಿಯೆ ದಿವ್ಯಾತ್ಮ ಯಜ್ಞ'. ಭಕ್ತಿನು ಇಲ್ಲ, ಯಜ್ಞನು ಇಲ್ಲ. ಬೇರೆ ತರದ ಮೌಲ್ಯಗಳು ನಮ್ಮ ಜೀವನದಲ್ಲಿ ವೇಷಗಳಾಗಿ ಬಂದಿವೆ. 'ಎದೆಯ ಮಣಿಯೇ ಯಜ್ಞಶಾಲೆ, ನಲ್ನಾತುಗಳೆ ಮಂತ್ರಘೋಷ'. ನಮಗೆ ಒಳ್ಳೆಯ ಮಾತುಗಳೆ ಇಲ್ಲವಾಗಿವೆ. ಕೆಟ್ಟ ಮಾತುಗಳು, ಹೇಳಿಕೊಟ್ಟ ಮಾತುಗಳು, ನಕಲಿ ಮಾತುಗಳು, ತೋರಿಕೆಯ ಮಾತುಗಳು, ವೇಷದ ಮಾತುಗಳು ಬದುಕಿನ ಭಾಗವಾಗಿವೆ. ನಿಜವಾದ ನಲ್ನಾತುಗಳಿಗೆ ವೇಷವನ್ನು ತೊಡಿಸಲಾಗಿದೆ. 'ತಿರೆಗಿಂತ ದೇಗುಲದಲ್ಲಿ ಏನಿದೆ', ನಿಜವಾದ ಜೀವನ, ನಿಜವಾದ ಬದುಕು ಎಲ್ಲಿದೆ ಎಂದರೆ ಅದು ಪ್ರಕೃತಿಗೆ ಸಮೀಪವಾಗಿ ಬದುಕುವುದರಲ್ಲಿದೆ. ಅದು ನೇಗಿಲನ್ನು ಬಳಸಿ ಅನ್ನವನ್ನು ಸೃಷ್ಟಿಮಾಡಿ ಕೂಡಿ ಉಣ್ಣುವುದರಲ್ಲಿದೆ. ಹಾಗಾಗಿ ಮಣ್ಣನ್ನು ಭೋಗಿಸಬೇಕು. ನಾನು ಮಣ್ಣನ್ನು ಭೋಗಿಸುತ್ತೇನೆ ಅಂತ ರೈತ ಪದೇ ಪದೇ ಹೇಳುತ್ತಾನೆ. ಏಕೆಂದರೆ ಮಣ್ಣು ಪ್ರಕೃತಿಸಹಜವಾದುದು; ನಿಸರ್ಗದತ್ತವಾದುದು; ಸಹಜವಾದದ್ದು ಮತ್ತು ಪವಿತ್ರವಾದದ್ದು. ಮಣ್ಣು ಎನ್ನುವ ಒಂದೇ ಒಂದು ನುಡಿಗಟ್ಟು ಸಂಸ್ಕೃತಿ ಒಳಗಡೆ ಬಹು ಆಯಾಮಗಳಲ್ಲಿ ನಮ್ಮ ನಂಬಿಕೆ,

ಮೌಲ್ಯ, ಸಂವೇದನೆಯನ್ನು ಸೃಷ್ಟಿಸುತ್ತಾ, ವಿಸ್ತರಿಸುತ್ತಾ, ವ್ಯಾಖ್ಯಾನಿಸುತ್ತ ಹೋಗುತ್ತದೆ. ಅನ್ನ ಬರುವುದು ಮಣ್ಣಿನಿಂದಲೆ; ಕೊನೆಗೆ ಹೋಗುವುದು ಮಣ್ಣಿಗೆ. ಹಾಗಾಗಿ ನಾಟಕದಲ್ಲಿ ರೈತ ಮಣ್ಣನ್ನು ಭೋಗಿಸಬೇಕು ಎನ್ನುತ್ತಾನೆ. ಮಣ್ಣಿಗೆ ತಾನು ಮಾಲೀಕನಾಗಬೇಕು ಎನ್ನುವುದಿಲ್ಲ. ಅದನ್ನು ಮಾರಾಟ ಮಾಡಬೇಕು ಎನ್ನುವುದಿಲ್ಲ. ಇದು ನಿಸರ್ಗಕ್ಕೆ, ಪ್ರಕೃತಿಗೆ ಹತ್ತಿರವಾಗಿ ಬದುಕಬೇಕು ಅಂತ. ಇನ್ನೂ ವಿಸ್ತರಿಸುವುದಾದರೆ ನಿಸರ್ಗ ಹಾಗೂ ಪ್ರಕೃತಿಯ ಭಾಗವಾಗಿ ಬದುಕಬೇಕು ಅಂತ.

'ಜಲಗಾರ' ನಾಟಕ ರಚನೆಯ ನಂತರದ ಕುವೆಂಪು ಅವರ ಮುಂದಿನ ಕಥನವು ಇಡೀ ಜೀವಜಗತ್ತನ್ನು, ನಿಸರ್ಗವನ್ನು ಕೇಂದ್ರ ಮಾಡಿಕೊಂಡಿದೆ. 'ನೀರೆಲ್ಲವೂ ತೀರ್ಥ' ಎಂಬ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಸಾಲು ಇರಬಹುದು, 'ಆನಂದಮಯ ಈ ಜಗ ಹೃದಯ' ಎಂಬ ಕವಿತೆಯ ಸಾಲು ಇರಬಹುದು; ಇಂತಹವು ಇನ್ನೂ ಹಲವು. ಇವೆಲ್ಲ 'ಆಸ್ತಿಕತೆ' ನಂಜಿಕೆಯ ವ್ಯಾಪ್ತಿಯವಲ್ಲ; ಬದಲಾಗಿ ಮನುಷ್ಯರೂ ಸೇರಿದಂತೆ ಸಕಲ ಜೀವಿಗಳಿಗೆ ಬದುಕು ಕೊಟ್ಟಿರುವ ನಿಸರ್ಗದೊಂದಿಗೆ ನಮಗೆ ಎಂತಹ ಸಂಬಂಧವಿರಬೇಕು ಎಂಬುದಕ್ಕೆ ಸಂಬಂಧಿಸಿದುದು.

ಬಂಡವಾಳಶಾಹಿಯ ಮಾರುಕಟ್ಟೆಯ ಉತ್ಪಾದನಾ ವಿಧಾನಗಳು ಬಂದು ಸುಖವೆಂಬುದು ಪ್ರಕೃತಿಯಲ್ಲೂ ಕಾಣೆಯಾಗಿದೆ. ಆನಂದವೆಂಬುದು ಕೃಷಿಯಲ್ಲೂ ಕಾಣೆಯಾಗಿದೆ. ಆನಂದದ ಮಾತು ಇಲ್ಲಿ ಬಹಳ ಸಲ ಬರುತ್ತದೆ. ಇಂತಹ ಸ್ಥಿತಿಯಲ್ಲಿ ಇರುವ ನಮಗೆ 'ಜಲಗಾರ' ನಾಟಕ ಎತ್ತಿರುವ ಬಹಳ ದೊಡ್ಡ ಒಳನೋಟ ಬಾಳನ್ನು, ಬದುಕನ್ನು ಅರ್ಥಮಾಡಿಕೊಳ್ಳುವುದು ಹೇಗೆ, ಯಾವ ಜ್ಞಾನದಿಂದ ಅರ್ಥಮಾಡಿಕೊಳ್ಳಬೇಕು ಮತ್ತು ಬಾಳನ್ನು, ಬದುಕನ್ನು ಪ್ರಕೃತಿಗೆ ಸಮೀಪವಾಗಿ ನಾವು ಕಟ್ಟಿಕೊಳ್ಳುವುದು ಹೇಗೆ, ಈ ಬಗೆಯ ಒಂದು ತಾತ್ವಿಕ ವಿನ್ಯಾಸ ಅತ್ಯಂತ ಶಕ್ತಿಶಾಲಿಯಾಗಿ ಈ ನಾಟಕದಲ್ಲಿ ಕ್ರಿಯಾಶೀಲವಾಗಿದೆ. ಇದರ ಒಂದೆ ಇರುವ ಮೂಲಸೆಲೆ ಉಪನಿಷತ್ತುಗಳಿಗೆ ಸಹೋದರಾದದ್ದು. ಅದಕ್ಕಾಗಿಯೆ ಈ ಮೊದಲು 'ಮಂಕುತಿಮ್ಮನ ಕಗ್ಗ'ವನ್ನು ಉಲ್ಲೇಖ ಮಾಡಿದ್ದು.

ಯಾವುದಕ್ಕೂ ನಮ್ಮ ಅಪೇಕ್ಷೆಯ ವೇಷವನ್ನು ತೊಡಿಸದೆ ಪ್ರಕೃತಿ ಸಹಜವಾಗಿ ಬದುಕಿದರೆ ನಮ್ಮ ಬಾಳು ಹಸನಾಗಬಹುದು. ಆಗ ಮನುಷ್ಯ ದೇವರಾಗುವ ಅವಶ್ಯಕತೆ ಬರುವುದಿಲ್ಲ. ಸಾಂಸ್ಥಿಕ ಧರ್ಮಗಳು ಮನುಷ್ಯ ಸತ್ತ ಮೇಲೆ ಸ್ವರ್ಗಕ್ಕೆ ಹೋಗಬೇಕು ಅಂತ ಹೇಳುತ್ತವೆ. ಆದರೆ ಈ ಚರ್ಚೆಯಲ್ಲಿ ಅದು ಬಹಳ ಮಹತ್ವದ ಅಂಶ ಅಲ್ಲ. ಆದರೆ ಒಂದು ವಿಚಾರಧಾರೆ ಏನು ಹೇಳುತ್ತದೆ ಎಂದರೆ ಅದು ಮನುಷ್ಯನನ್ನು ದೈವೀಕರಿಸುತ್ತದೆ. ಅದು ಜನಪದ ನೆಲೆಯಲ್ಲಿರಬಹುದು, ಜನಪದ ನೆಲೆಯಲ್ಲಲ್ಲದ ಸಂಸ್ಕೃತಿಗಳಲ್ಲಿರಬಹುದು. ಅಂದ್ರೆ ಮನುಷ್ಯರನ್ನು ದೈವೀಕರಿಸಲಾಗುತ್ತೆ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಇದನ್ನು ಅತಿಮಾನುಷ ವ್ಯಕ್ತಿತ್ವ ಅಂತ ಕರೆಯುತ್ತಾರೆ. ಅಂದರೆ ಒಬ್ಬ ಇತಿಹಾಸದ ಮನುಷ್ಯನನ್ನು ದೈವೀಕರಿಸಿ ಮನುಷ್ಯರ 'ಎಲ್ಲಾ ಒಳ್ಳೆಯ ಮೌಲ್ಯಗಳನ್ನು' ಅವನಿಗೆ ಆರೋಪಿಸಿ, ಅವನನ್ನು 'ಆದರ್ಶ ವ್ಯಕ್ತಿ' ಅಂತ ಕರೆಯುವುದು ಅಥವಾ 'ಪೂಜನೀಯ ವ್ಯಕ್ತಿ' ಅಂತ ಕರೆಯುವುದು, ಗೌರವಿಸುವುದು. ಇದು ಡಾ. ಬಾಬಾಸಾಹೇಬ್ ಅವರ ಪ್ರಕಾರ ಅತಿಮಾನುಷ ವ್ಯಕ್ತಿತ್ವ. ಆ ರೀತಿಯ ಕೆಲವು ಮಾದರಿ ಪಾತ್ರಗಳನ್ನು ಸೃಷ್ಟಿಸಲಾಗಿದೆ. ಇದನ್ನು ಇಲ್ಲಿ ಪ್ರಸ್ತಾಪ ಮಾಡಲು ಕಾರಣವೆಂದರೆ, 'ಜಲಗಾರ' ನಾಟಕದಲ್ಲಿ ಇದಕ್ಕೆ ವಿರುದ್ಧವಾದ ಸೆಳೆತವಿದೆ. ಜಲಗಾರ ನಾಟಕ ಮನುಷ್ಯರನ್ನು ದೈವೀಕರಿಸುತ್ತಿಲ್ಲ. ಬದಲಾಗಿ ದೈವವೆ ಮನುಷ್ಯನಾಗಬೇಕು. ಎಂತಹ ಮನುಷ್ಯನಾಗಬೇಕು? ಬ್ರಾಹ್ಮಣ, ಶೂದ್ರ ಸ್ತರದ ಮನುಷ್ಯ ಅಲ್ಲ. ಸಾಮಾಜಿಕ ಶ್ರೇಣೀಕರಣದಲ್ಲಿ ಶೂದ್ರರಿಗಿಂತ ಕೆಳಗಿಡಲಾಗಿರುವ ಪಂಚಮ ಸ್ತರದ, ಅಸ್ಪೃಶ್ಯ ಸ್ತರದ ತೋಟಿ, ಜಲಗಾರನಾಗಬೇಕು. ಶಿವ ಜಲಗಾರನಾಗಬೇಕು. ಶಿವ ಜಲಗಾರನಾಗಬೇಕಾದರೆ ಶಿವನಿಗೆ ತೊಡಿಸಿರುವ ಎಲ್ಲ ವೇಷಗಳನ್ನು ಶಿವನೆ ಸ್ವತಂತ್ರವಾಗಿ ಕಳಚಬೇಕು. ಅವನಿಗೆ ತೊಡಿಸಲಾಗಿರುವುದು ವೇಷ ಸ್ವತಃ ಅವನ ಅರಿವಿಗೇ ಬರಬೇಕು. ಇದು ಹೊರಗಿನ ಒತ್ತಡದಿಂದ ಬರಬಾರದು.

ಜಲಗಾರನಿಗೆ ಯಾವುದೇ ವೇಷವನ್ನು ತೊಡಿಸಿಲ್ಲ. ಆದರೆ ಶಿವನಿಗೆ, ದೈವಕ್ಕೆ ವೇಷ ತೊಡಿಸಲಾಗಿದೆ. ದೈವ ಅಲ್ಲದ ಜಲಗಾರನಿಗೆ ವೇಷ



ತೊಡಿಸಿಲ್ಲ. ಜಲಗಾರನ ಕೆಲಸಕ್ಕೆ ವೇಷ ತೊಡಿಸಲು ಆಗಿಲ್ಲ. ಅವನ ಶ್ರಮಕ್ಕೆ ವೇಷವನ್ನು ತೊಡಿಸಿಲ್ಲ. ಅಸಮಾನತೆ. ಅಸಮಾನತೆಯ ಶ್ರೇಣೀಕರಣ. ಅಪಮಾನ ಇವುಗಳಿಗೆ ವೇಷ ತೊಡಿಸಲಾಗಲ್ಲ. ಅಸಹಾಯಕತೆಗೆ ವೇಷ ತೊಡಿಸಲಾಗಲ್ಲ. ದುಃಖಿ–ಕ್ಕೆ ವೇಷ ತೊಡಿಸಲಾಗಲ್ಲ. ಆದರೆ ಯಜಮಾನಿಕೆಗೆ, ದಬ್ಬಾಳಿಕೆಗೆ, ತುಳಿಯುವ, ಹತ್ತಿಕ್ಕುವ, ಅಪಮಾನಿಸುವ, ಅನುಮಾನಿಸುವ, ದಮನ ಮಾಡುವ ಶಕ್ತಿಗಳಿಗೆ ವೇಷ ತೊಡಿಸಬಹುದು. ದಯೆ, ಕರುಣೆ, ಅನುಕಂಪ, ಸಹಾನುಭೂತಿ ಮುಂತಾದ ಹಲವಾರು ವೇಷಗಳನ್ನು ಇವುಗಳಿಗೆ ತೊಡಿಸಬಹುದು: ತೊಡಿಸಲಾಗಿದೆ ಕೂಡ. ನಾಟಕದಲ್ಲಿ ಇರುವ ಶಕ್ತಿಶಾಲಿಯಾದ ಜಿಜ್ಞಾಸೆ ಅಂದರೆ ಇದು ಮನುಷ್ಯನನ್ನು ದೈವೀಕರಿಸುವುದಿಲ್ಲ. ಬದಲಾಗಿ ಶಿವನನ್ನು ಮನುಷ್ಯೀಕರಿಸುತ್ತದೆ ಮತ್ತು ಜಲಗಾರನನ್ನಾಗಿಸುತ್ತದೆ. ಇದು ಜಲಗಾರ ನಾಟಕದ ದರ್ಶನ.

ಈ ನಾಟಕವನ್ನು 1928ರ ಸುಮಾರಿನಲ್ಲಿ ಬರೆದಿದ್ದರೂ ಕೂಡ ಇವತ್ತಿಗೂ ಈ ನಾಟಕ ಸಲ್ಲುತ್ತದೆ ಮತ್ತು ಮುಂದೆಯೂ ಸಲ್ಲುತ್ತದೆ. ಏಕೆ–ಂದರೆ ನಡೆ ನುಡಿಯಲ್ಲಿ ಸಂಭವಿಸುವ ಅಂತರ್ ವಿರೋಧಗಳನ್ನು ಇದು ಚರ್ಚೆಮಾಡಿದೆ. ಕುವೆಂಪು ಅವರು ತತ್ವಶಾಸ್ತ್ರದ ವಿದ್ಯಾರ್ಥಿ. ಎಂ. ಹಿರಿಯಣ್ಣ ಕುವೆಂಪು ಅವರಿಗೆ ವಿದ್ಯಾ ಗುರುಗಳು. ಬಿ.ಎ. ಓದುವಾಗ ತತ್ವಶಾಸ್ತ್ರವನ್ನು ಅಭ್ಯಾಸ ಮಾಡಿದವರು. ಈ ನಾಟಕವನ್ನು ಬರೆದಾಗ ಕುವೆಂಪು ಅವರಿಗೆ ಇನ್ನೂ 24 ವರ್ಷ. ಕುವೆಂಪು ಅವರು ಈ ನಾಟಕವನ್ನು ಬರೆಯುವುದರ ಮೂಲಕ ತಮಗೆ ಬೇಕಾದ ಸಾಹಿತ್ಯಕ ದರ್ಶನವನ್ನು ಮತ್ತು ಸಾಹಿತ್ಯಕ ಮೀಮಾಂಸೆಯನ್ನು ರೂಪಿಸಿಕೊಂಡರು ಮತ್ತು ಸೃಷ್ಟಿಸಿಕೊಂಡರು ಎಂದು ಆಲೋಚಿಸಲು ಸಾಧ್ಯವಿದೆ. ಒಂದು ಕಡೆಗೆ ಆಧುನಿಕ ವೈಚಾರಿಕ ನೆಲೆಯನ್ನು; ಇನ್ನೊಂದು ಕಡೆಗೆ ಭಾರತೀಯ ಪ್ರಾಚೀನ ಪರಂಪರೆಯ ಉಪನಿಷತ್ತುಗಳ ತಿರುಳು ಮತ್ತು ಸಾರವನ್ನು ಜಲಗಾರ ನಾಟಕಕ್ಕೆ ಕೇಂದ್ರ ಮಾಡಿಕೊಂಡಂತಿದೆ. ಈ ಮೂಲಕ ಪಾಶ್ಚಾತ್ಯ ಬಂಡವಾಳಶಾಹಿ ಅರಿವು ಹಾಗೂ ಅನುಭವದ ನೆಲೆಗಳನ್ನು ಅತ್ಯಂತ ತೀಕ್ಷ್ಣವಾಗಿ ವಿಮರ್ಶೆಗೆ ಒಡ್ಡಿರುವಂತೆ ಕಾಣುತ್ತಿದೆ.

ಮೇಲಿನ ಚರ್ಚೆಯನ್ನು ನಾಟಕದ ಮುಂದಿನ ಕೆಲವು ಆಯ್ದ ಭಾಗಗಳು ಸಮರ್ಥಿಸುವಂತಿವೆ.

ಜಲಗಾರ:
ಮೆಲುನಡೆಯನಿಡುತ ಅರುಣೋದಯವು
ಮೂಡಣದ
ಬಾನೆಡೆಯೊಳೋಕುಳಿಯ ಚೆಲ್ಲುತ್ತ ಮೂಡುತಿದೆ,
ಹಸುರಿನಲಿ ಮುತ್ತುಗಳ ಹೊಂಬೆಳಗ ಸೂಸಿ.
. . . . . .
. . . ನುಣ್ದನಿಯ ಬೀರುತಿಹ ಹಕ್ಕಿಗಳ
ಗೇಯದಿಂಚರದಿಂ; ನಲವಿಂದ ಸುಳಿಸುಳಿದು
ತಳಿರ ಕಾವಣಗಳಲಿ ಒಯ್ಯೊಯ್ಯನಾಡುತಿಹ
ಕುಳಿರೆಲರಿನಿಂಪಿನಿಂ; ಎಲರಿನ ತಲೆದೊಗೆ
ನರುಗಂಪನೀಡಾಡಿ ಬಿರಿಯುತಿಹ ಪೂಗಳಿಂ
ಪೂಗಳಲಿ ಬಂಡುಣಲು ಹಾರೈಸಿ, ಸುತ್ತಿ
ಮೊರೆಯುತಿಹ ಸೊಕ್ಕಿದಳಿ ನಿಕರದಿಂ; ಬಿತ್ತರದ
ಬಾನಿನಿಂ; ಬಾನಿನಲಿ ತೇಲುತಿಹ ಮುಗಿಲಿನಿಂ;
ರಮ್ಯಾರುಣೋದಯವದೆಂತು ಚೆಲ್ವಾದುದು!
ಸೃಷ್ಟಿಕರ್ತನೆಮಗೆ ಸಾಧಿಸಲು ತೋರಿಸಲು,
ಸೃಷ್ಟಿಯಿದು ಸಾಲದೇ? ಸೃಷ್ಟಿಸೌಂದರ್ಯಮಿದು
ಸಾಲದೇ? ಪಳವಾತದೇಕೆ? ಬಿಜ್ಜಿಯೇಂ
ತೋರ್ಕುಮೇ ಎದೆಯರಿವು ತೋರದಾ
ಪರಮನಂ?

ವಿದ್ಯೆಯು ಎದೆಯ ಅರಿವನ್ನು ತೋರುವಂತಿರಬೇಕು; ಕೊಡುವಂತೆ ಹಾಗೂ ಕಲಿಸುವಂತೆ ಇರಬಾರದು. ತೋರುವುದಕ್ಕೂ, ಕೊಡುವುದಕ್ಕೂ ಹಾಗೂ ಕಲಿಸುವುದಕ್ಕೂ ಮೂಲಭೂತವಾದ ವ್ಯತ್ಯಾಸವಿದೆ. ತೋರುವುದು ಎಂದರೆ ತೋರಿಸುವುದು ಅಷ್ಟೆ. ಇಲ್ಲಿ ಸಿದ್ಧಮಾದರಿ ಇಲ್ಲ. ಅರಿವು ಬೇಕಾದವರು ಅದನ್ನು ತಮ್ಮ ಅಗತ್ಯಗಳಿಗೆ ಅನುಗುಣವಾಗಿ ಸೃಷ್ಟಿಸಿಕೊಳ್ಳಬಹುದು; ಸೃಷ್ಟಿಸಿಕೊಳ್ಳಬೇಕು. ಆದರೆ ವಿದ್ಯೆಯನ್ನು ಕೊಡುವುದು ಎಂದರೆ ಸಿದ್ಧಮಾದರಿಯಲ್ಲಿ ಕೊಡುವುದು ಎಂದು ಅರ್ಥ. ಅಲ್ಲಿ ಏನನ್ನು ಕೊಡಲಾಗುತ್ತದೆಯೋ ಅದನ್ನು ಮಾತ್ರವೇ ಪಡೆದುಕೊಳ್ಳಬೇಕಾಗುತ್ತದೆ. ಕಲಿಸುವುದೂ



ಕೂಡಾ ಹಾಗೆಯೇ. ಏನನ್ನು ಕಲಿಸಲಾಗುತ್ತದೆಯೋ ಅದನ್ನು ಮಾತ್ರವೇ ಕಲಿಯಬೇಕಾಗುತ್ತದೆ. ಇಲ್ಲಿ ಬಹು ಆಯ್ಕೆಗೆ ಹಾಗೂ ಸ್ವಂತ ಸೃಷ್ಟಿಗೆ ಅವಕಾಶವೇ ಇರುವುದಿಲ್ಲ. ವಸಾಹತುಶಾಹಿ ಕಾಲದಲ್ಲಿ ಬ್ರಿಟೀಶರು ಜಾರಿಗೊಳಿಸಿದ ವಿದ್ಯೆಯು ಎದೆಯ ಅರಿವನ್ನು ಕೊಡುವುದಾಗಿರಲಿಲ್ಲ. ಅದರ ಸ್ವರೂಪವನ್ನು ಇದು ಗಂಭೀರವಾಗಿ ಪರಿಗಣಿಸಿದೆ. 1970ರ ದಶಕದ ನಂತರ ಭಾರತದ ಅನೇಕ ಸಮುದಾಯಗಳು ಎದೆ–ಯ ಅರಿವು ತೋರದ ವಿದ್ಯೆಯಿಂದಲೇ ಎದೆಯ ಅರಿವನ್ನು ಕಂಡುಕೊಂಡದ್ದು ದೊಡ್ಡ ಇತಿಹಾಸ. ಆದರೆ ಮೇಲಿನ ಸಾಲಿನಲ್ಲಿ 'ಎದೆಯ ಅರಿವನ್ನು ತೋರದ ವಿದ್ಯೆ' ಎಂಬ ಸೂಕ್ಷ್ಮವಾದ ಒಳವಿಮರ್ಶೆ ಕಾಣಿಸುತ್ತಿದೆ. ಈ ಕಾರಣದಿಂದಲೇ ಜಲಗಾರ ನಾಟಕವು ರೈತನ ಕೃಷಿ ವಿದ್ಯೆ ಮುಖ್ಯವೆಂದು, ಜಲಗಾರನ ಸ್ವಚ್ಛತೆಯ ವಿದ್ಯೆಯು ಶ್ರೇಷ್ಠವೆಂದು ಭಾವಿಸಬೇಕೆಂದು ಭಾವಿಸುತ್ತಿದೆ.

ರೈತ ಆಡುವ ಕೆಳಗಿನ ಮಾತುಗಳನ್ನು ಗಮನಿಸಬೇಕು:

ನೇಗಿಲ ಯೋಗಿಯು ನಾನು
ಮಣ್ಣಿನ ಭೋಗಿಯು ನಾನು
. . . . . .
ನೇಗಿಲ ಗೆರೆಯೇ ತೋರುವುದೆನಗೆ
ಮುಕ್ತಿಯ ಹಾದಿಯನು
ವೇದಗಳೆಲ್ಲ ನೆಗೆನೆಗೆದರಿಯದ
ಅಂತ್ಯದ ಆದಿಯನು
ನನ್ನಿಯನರಿಯುವೆ ಕರ್ಮದಲಿ

'ಕರ್ಮದಲ್ಲಿ ನನ್ನಿಯನ್ನು ಅರಿಯುವೆ' ಎಂಬ ಸಾಲಿನ ಶಿರುಳು ಒಂದು ಕಡೆ ಉಪನಿಷತ್ತುಗಳ ದರ್ಶನವನ್ನು ತೋರಿದರೆ ಮತ್ತೊಂದು ಕಡೆ ವಚನಕಾರರ ಆಶಯವೂ ಇದೇ ಆಗಿತ್ತು ಎಂದೂ ವಿಸ್ತರಿಸಲು ಸಾಧ್ಯವಿದೆ. ಮುಂದುವರಿದು ಕೃಷಿ ಮತ್ತು ಕೃಷಿ ವಿದ್ಯೆಯ ಕೊಡುಗೆ ಏನು ಎಂಬುದನ್ನು ರೈತನ ಬಾಯಲ್ಲಿ ಅಭಿವ್ಯಕ್ತಿ ಮಾಡುತ್ತಿದೆ. ಕೆಳಗಿನ ಸಾಲುಗಳನ್ನು ಗಮನಿಸಬಹುದು:

ಶಿರಿಯ ಪೊರೆದವರೆನ್ನ ಸಹಕರ್ಮಿಗಳು, ಧರ್ಮಿಗಳು
ನನ್ನವರ ಬಲದಿಂದಲೇ ದೊರೆಗಳಾಳಿದರು
ಬಾಳಿದರು, ರಣವೀರರಿಗಳನು ಹೂಳಿದರು
ಕಬ್ಬಿಗರು ನಲ್ಗಬ್ಬಗಳ ಬರೆದು ಹಾಡಿದರು
ಶಿಲ್ಪಿಗಳು ಕತೆಗಳನು ಕೆತ್ತಿದರು
ಮಣ್ಣಾದ ನೇಗಿಲಾಶ್ರಯದಿ ಬೆಳೆದಿಹುದು
ಉಳಿದಿಹುದು, ನಮ್ಮ ನಾಗರಿಕತೆ. ರೈತರೇ
ಭೂಮಿಗಿಳಿದಿಹ ಕಾಮಧೇನುಗಳು; ರೈತರೇ
ಧರೆಯೊಳಿಹ ಜಂಗಮ ಕಲ್ಪವೃಕ್ಷಗಳು.

ಇದೇ ವಿಚಾಧಾರೆಯು ಜಲಗಾರನ ಮೂಲಕ ಮುಂದುವರಿದಿರುವುದನ್ನು ಅವಲೋಕಿಸಬೇಕು.

ಕರ್ಮವಾರಾಧನೆ, ಸೇವೆಯೇ ಪೂಜೆ.
ನನ್ನ ಭಾಗಕೆ ಪೊರಕೆ ಆರತಿ. ಗುಡಿಸುವುದೆ
ನನ್ನ ದೇವರ ಪೂಜೆ! ನಿನ್ನೆ ದೇಗುಲದೆಡೆಗೆ
ಹೋದೆನ್ನ ಕಂದನಂ ಬೈದಿರಿದು ನೂಕಿದರು.

ಉಪನಿಷತ್ತುಗಳು ಪ್ರತಿಪಾದನೆ ಮಾಡುವ ಕರ್ಮದ ಆಶಯದ ಸ್ವರೂಪವನ್ನು ರೈತ ಹಾಗೂ ಜಲಗಾರನ ಮೂಲಕ ಈ ನಾಟಕವು ಅಧೋಲೋಕಕ್ಕೆ ಕೊಂಡೊಯ್ಯುತ್ತಿದೆ; ಅದನ್ನು ಸಮಕಾಲೀನಗೊಳಿಸುತ್ತಿದೆ. ಜೊತೆಗೆ ಪರ್ಯಾಯವಾದ ಲೋಕವನ್ನು ತರೆದು ತೋರಿಸುತ್ತಿದೆ. ಇದು ಜಲಗಾರ ನಾಟಕದ ಹೆಚ್ಚುಗಾರಿಕೆ.

ಜಲಗಾರ ನಾಟಕದ ರಚನೆಯ ನಂತರ ಕುವೆಂಪು ಅವರು, 'ಸರ್ವ ಜನಾಂಗದ ಶಾಂತಿಯ ತೋಟ . . . . ' ಎಂಬ ಪ್ರಜಾಪ್ರಭುತ್ವ ಜೀವನಕ್ರಮದ ಆಶಯವನ್ನು ಏನು ರಚನೆ ಮಾಡಿದರೋ ಅದರ ಅತಿ ಸೂಕ್ಷ್ಮವಾದ ಮೊಳಕೆಯು ಈ ನಾಟಕದಲ್ಲೆ ಇದೆ ಎಂಬುದನ್ನು ಮನಗಾಣಬಹುದು.

ಜಲಗಾರನ ಮೂಲಕ ಬರುವ ಕೆಳಗಿನ ಸಾಲುಗಳು ಇದನ್ನು ತೋರಿಸುತ್ತವೆ.

. . . . . .
ಮೂಡಣದೊಳಿರಲು ಹರಿ;
ಪಡುವಲೊಳಿಹನು ಅಲ್ಲಾ!
ಹೃದಯದೊಳು ನೀ ನೋಡೆ
ಸಲೆ ವಿಚಾರವ ಮಾಡೆ
ಅಲ್ಲಿರುವನು ಕರೀಮ
ಅಲ್ಲೆ ತೋರ್ಪನು ರಾಮ!

ಜಗದ ಮನುಜರಿಗೆಲ್ಲಾ
ಬ್ರಹ್ಮನಾಗಿಹನಲ್ಲಾ!
ಅಲ್ಲ ರಾಮರ ಕಂದನ್
ಆಗಿರುವನು ಕಬೀರ!
ಅತನೇ ಎನಗೆ ಗುರು

ಅಲ್ಲ ಹಾಗೂ ರಾಮರ ಕಂದನಾಗಿರುವ ಕಬೀರನು ನನ್ನ ಗುರು ಎಂದು ಜಲಗಾರನ ಮೂಲಕ ತೋರುತ್ತಿರುವ ರೂಪಕ ಇಂದು ಬಹಳ ಮುಖ್ಯವಾದುದು. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಕುಟುಂಬವು ಕಬೀರನನ್ನು ಗುರುವೆಂದು ನಂಬಿದ್ದ ಕುಟುಂಬ. ಹರಿ, ಅಲ್ಲಾ, ಶಿವ, ರಾಮ, ಕರೀಮ, ಕಬೀರ ಇವರ ಪರಸ್ಪರ ಸಂಬಂಧದಲ್ಲಿ ಶತೃತ್ವದ ಭಾವನೆಯನ್ನು ಸೃಷ್ಟಿಮಾಡಿರುವ ಇಂದು 'ಜಲಗಾರ' ನಾಟಕ ತೋರುತ್ತಿರುವುದೇನು ಎಂಬುದು ನಮಗೆ ಮತ್ತೆ ಮತ್ತೆ ಮುಖ್ಯವಾಗುತ್ತಾ, ಸಮಕಾಲೀನವಾಗುತ್ತಾ ನಮ್ಮ ಜೊತೆಯೇ ಬರುತ್ತದೆ. 'ಜಲಗಾರ' ನಾಟಕವು ಕುವೆಂಪು ಅವರ ಮುಂದಿನ ಸೃಜನಶೀಲತೆಗೆ ತಾತ್ವಿಕವಾದ ಮೊಳಕೆ ಆಗಿರಬಹುದೆ ಎಂದು ಆಲೋಚಿಸಲು ಸಾಧ್ಯವಿದೆ.

ISSN: 2582-4856

ಸಾಮಾಜಿಕ ಪರಿವರ್ತನೆಗಾಗಿ

ಭೀಮವಾದ

Bheemavaadha

Kannada Monthly

ಮಾಸಪತ್ರಿಕೆ

January- 2024 | Rs 30/- Vol-14 | Issue-5



ಭೀಮ ಕೋರೆಗಾಂವ್
ವೀರರ ಸ್ಮರಣೆ ಹಾಗೂ ವಿಜಯೋತ್ಸವ

5 ದಲಿತರನ್ನೇ ಟಾರ್ಗೆಟ್ ಮಾಡುತ್ತಿರುವುದು ಯಾಕೆ?

10 ಶೋಷಿತ ಸಮುದಾಯಗಳ ಚಾರಿತ್ರಿಕ ಅಸ್ಮಿತೆ: ಭೀಮಾ ಕೊರೆಗಾಂವ್ ಕದನ ಮತ್ತು ಏಚಾರವಾದಿಗಳ ಬಂಧನ

13 ಅಂಬೇಡ್ಕರ್ ಹಾದಿಯಲ್ಲಿ ಬಿ.ಬಸವಲಿಂಗಪ್ಪನವರ ಹೋರಾಟ ಕಥನ

20 ಮಡಿಮೈಲಿಗೆಯ ನಡುವೆ ಬೆಳೆದ ಆಲದ ವೃಕ್ಷ : ಬಿ.ಬಸವಲಿಂಗಪ್ಪ

22 ಮಾನವ ಜಗತ್ತಿಗೆ ಬುದ್ಧಗುರು ನೀಡಿದ 'ಧ್ಯಾನಮಾರ್ಗ'

28 ವಿದೇಶಿ ಕಂಗಳಲ್ಲಿ ಗಾಂಧೀಜಿ

ಡಾ. ಎಚ್. ಟಿ. ಪೋತೆ

32 ಕೃತಿ ಸರಣಿಯ ಭಾಗ – 53

ಚಂದಾ ವಿವರ
ಬಿಡಿ ಪ್ರತಿ : ರೂ. 30/-
ವಾರ್ಷಿಕ : ರೂ. 300/-
3 ವರ್ಷದ ಪ್ರೋತ್ಸಾಹ ಧನ : ರೂ. 1.500/-
ಆಜೀವ ಚಂದಾ : ರೂ. 5.000

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಅಯಾ ಲೇಖಕರಿಗೆ ಸೇರಿದವು)

ಮುಖಪುಟ ವಿನ್ಯಾಸ: ಅರಳಿ

ಪ್ರಧಾನ ಸಂಪಾದಕರು
ಡಾ.ಆರ್.ಮೋಹನ್‌ರಾಜ್

ಸಹ ಸಂಪಾದಕರು
ಡಾ.ಕೆ.ಎ.ಓಬಳೇಶ್
ಎಸ್.ಡಿ.ರಾಯಮಾನೆ

ಸಂಪಾದಕೀಯ ಮಂಡಳಿ
ರಾಜು ಎಂ. ತಳವಾರ್
ಡಾ. ಜಯದೇವಿ ಗಾಯಕವಾಡ

ಚಂದಾದಾರರ ಗಮನಕ್ಕೆ : 'ಭೀಮವಾದ' ಮಾಸ ಪತ್ರಿಕೆಗೆ ಚಂದಾದಾರರಾಗುವವರು/ ನವೀಕರಿಸುವವರು ಹಾಗೂ ಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ಪತ್ರಿಕೆಯ ವಿಳಾಸಕ್ಕೆ ಸಂಪರ್ಕಿಸಬೇಕಾಗಿ ವಿನಂತಿ.
ವಿ.ಸೂ: ಚೆಕ್ಕುಗಳನ್ನು ಸ್ವೀಕರಿಸುವುದಿಲ್ಲ. ಎಂ.ಒ/ ಡಿ.ಡಿ ಮಾತ್ರ ಕಳುಹಿಸಬೇಕು. ಡಿಡಿಗಳು 'ಭೀಮವಾದ' ಹೆಸರಿನಲ್ಲಿರಲಿ. ಬ್ಯಾಂಕಿಗೆ ನೇರವಾಗಿ ಹಣ ಸಂದಾಯ ಮಾಡುವವರು ಈ ಕೆಳಗಿನ ಖಾತೆಗೆ ಕಳುಹಿಸುವುದು :
A/c Name : BHEEMAVAADHA, Bank Name : Union Bank of India, Branch : Gandhi Nagar, 14, 1st Main Road, Gandhinagar, Bangalore-9
A/c No : 353101010036315 IFS Code : UBIN0535311

ದಲಿತರನ್ನೇ ಟಾರ್ಗೆಟ್ ಮಾಡುತ್ತಿರುವುದು ಯಾಕೆ ?



• ಡಾ. ಬಿ.ಎಂ. ಪುಟ್ಟಯ್ಯ

ದಲಿತರನ್ನೇ ಟಾರ್ಗೆಟ್ ಮಾಡುತ್ತಿರುವುದು ಯಾಕೆ? ಈ ಪ್ರಶ್ನೆ ಈಚಿನ ಕೆಲವು ವರ್ಷಗಳಲ್ಲಿ ಸಾರ್ವಜನಿಕ ಚರ್ಚೆ, ಮಾಧ್ಯಮಗಳ ಚರ್ಚೆ, ಉಪನ್ಯಾಸ, ಸಾರ್ವಜನಿಕ ಭಾಷಣ ಮುಂತಾದವುಗಳಲ್ಲಿ ಮುಂಚೂಣಿಗೆ ಬರುತ್ತಿದೆ. ಅಂತಹ ಕೆಲವು ಪ್ರಶ್ನೆ ರೂಪದ ಹೇಳಿಕೆಗಳನ್ನು ಒಂದು ಕಡೆ ಸಂಗ್ರಹಿಸಿಕೊಳ್ಳೋಣ.

ಹೇಳಿಕೆಗಳು ಅಥವಾ ಆರೋಪಗಳು:

1. **'ದಲಿತರು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಏಪ್ರಿಲ್ 14 ಮತ್ತು ಡಿಸೆಂಬರ್ 6ರಂದು ಮಾತ್ರ ನೆನಪಿಸಿಕೊಳ್ಳುತ್ತಾರೆ. ಉಳಿದ ದಿನಗಳಲ್ಲಿ ಅವರನ್ನು ಮರೆಯುತ್ತಾರೆ.'**

2. **'ದಲಿತರು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಪ್ರತಿಮೆಗಳಿಗೆ ಮತ್ತು ಫೋಟೋಗಳಿಗೆ ಹಾರ ಹಾಕಿ ಪೂಜೆ ಮಾಡುತ್ತಾರೆ. ಉಳಿದ ದಿನಗಳಲ್ಲಿ ಅವರ ವಿಚಾರಗಳ ಬಗೆಗೆ ಕಾಳಜಿ ವಹಿಸುವುದಿಲ್ಲ.'**

3. **ದಲಿತರು ನಗರ ಹಾಗೂ ಪಟ್ಟಣಗಳಲ್ಲಿ ರಸ್ತೆಗಳು, ಬೀದಿಗಳು, ಓಣಿಗಳು ಮತ್ತು ಸರ್ಕಲ್‌ಗಳಿಗೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹೆಸರಿಡಬೇಕೆಂದು ಒತ್ತಾಯಿಸುತ್ತಾರೆ. ಆದರೆ ಡಾ. ಬಾಬಾಸಾಹೇಬ್ ಅಂಬೇಡ್ಕರರ ಆಶಯಗಳನ್ನು ಅವರು ಅನುಸರಿಸುವುದಿಲ್ಲ.'**

4. **ದಲಿತರು ತಮ್ಮ ಸಂಘಟನೆ ಮತ್ತು ಹೋರಾಟಗಳಲ್ಲಿ ಡಾ. ಬಾಬಾಸಾಹೇಬರ ಹೆಸರು ಹೇಳುತ್ತಾರೆ. ಹಾಗೆ ಹೆಸರು ಹೇಳಿಕೊಂಡು ತಮ್ಮ ಹೊಟ್ಟೆಪಾಡಿಗಾಗಿ ಸಂಘಟನೆ ಹೋರಾಟ ಮಾಡುತ್ತಾ ಡಾ. ಬಾಬಾಸಾಹೇಬರ ಹೆಸರನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.'**

5. **ಅಲ್ಲೊಂದು ಕಡೆ ದಲಿತರ ಕಗ್ಗೊಲೆ ನಡೆಸಿದ್ದಾರೆ. ಮತ್ತೊಂದು ಕಡೆ ದಲಿತರಿಗೆ ಬಹಿಷ್ಕಾರ ಹಾಕಿದ್ದಾರೆ. ಮಗದೊಂದು ಕಡೆ ಸಂವಿಧಾನವನ್ನು ಬದಲಾವಣೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಇಂತಹ ಸಮಯದಲ್ಲಿ ಮೀಸಲಾತಿ ಕ್ಷೇತ್ರದಿಂದ ಗೆದ್ದು ಹೋಗಿರುವ ದಲಿತ ಶಾಸಕರು, ಮಂತ್ರಿಗಳು ಏನು ಮಾಡುತ್ತಿದ್ದಾರೆ? ಅವರು ತಮ್ಮ ಶಾಸಕ ಸ್ಥಾನಗಳಿಗೆ, ಸಚಿವ ಸ್ಥಾನಗಳಿಗೆ ರಾಜೀನಾಮೆ ಕೊಡಬೇಕು. ಅವರು ಮೀಸಲು ಕ್ಷೇತ್ರದಲ್ಲಿ ಗೆದ್ದು ಹೋಗಲು ಯಾವ ಅರ್ಹತೆ ಇದೆ?**

ಮೇಲಿನ ಅಷ್ಟೂ ಹೇಳಿಕೆಗಳು ದಲಿತರ ಮೇಲೆ ಮಾಡಲಾಗಿರುವ ಮತ್ತು ಮಾಡುತ್ತಿರುವ ಆರೋಪಗಳು. ಆರೋಪ ಮಾಡುವ ಧೋರಣೆಯ ಹಿತಾಸಕ್ತಿ ಯಾವುದು?

ಇಂತಹ ಟೀಕೆಗಳು ದಿನಬೆಳಗಾದರೆ ಬರುತ್ತಿರುತ್ತವೆ. ಇವನ್ನು ಕೇಳುವವರ ದೃಷ್ಟಿಯಿಂದ ನೋಡಿದರೆ ಸಾಮಾಜಿಕ ನ್ಯಾಯೋಚಿತವಾದ ಹಕ್ಕೊತ್ತಾಯಗಳು ಎಂಬಂತೆ ಕಾಣುತ್ತವೆ. ಇವನ್ನು ದಲಿತ ದೃಷ್ಟಿಯಿಂದ ನೋಡಿದರೆ ಆರೋಪಗಳಾಗಿ ಕಾಣುತ್ತವೆ. ಇವನ್ನು ಅತ್ಯಂತ ಸಾವಧಾನವಾಗಿ ಪರಿಶೀಲನೆ ಮಾಡುವ ಅಗತ್ಯವಿದೆ. ಮೂಲಭೂತ ಪ್ರಶ್ನೆ ಇರುವುದು ಇಂತಹ ಕಡೆ ದಲಿತರನ್ನೇ ಕೇಂದ್ರ ಮಾಡಿಕೊಂಡು, ಗುರಿ ಮಾಡಿಕೊಂಡು ಆರೋಪಿಸುವ, ದಲಿತರ ಮೇಲೆ ಗೂಬೆಕೂರಿಸುವ, ದಲಿತರನ್ನು ಕಟಕಟೆಯ ಮೇಲೆ ನಿಲ್ಲಿಸುವ ಪ್ರಜ್ಞೆಯ ಸ್ವರೂಪ ಯಾವುದು ಎಂಬುದನ್ನು ಚರ್ಚೆ ಮಾಡುವ ಅಗತ್ಯವಿದೆ.

ಈ ಪ್ರಜ್ಞೆಯ ಹಿಂದೆ ಖಚಿತವಾದ ಧೋರಣೆ ಇದೆ. ಆರ್ಥಿಕ ಮತ್ತು ಸಾಮಾಜಿಕ ಹಿತಾಸಕ್ತಿ ಇದೆ. ಇದು ಯಾಕಾಗಿ ಬರುತ್ತದೆ? ಎಲ್ಲಿಂದ ಬರುತ್ತದೆ? ಇದರ ಹಿಂದೆ ಕೆಲಸ ಮಾಡಿರುವ ಹಿತಾಸಕ್ತಿ ಯಾವುದು? ಇದರ ವರ್ಗಪ್ರಜ್ಞೆ ಮತ್ತು ಜಾತಿ ಪ್ರಜ್ಞೆ ಯಾವುದು? ಎಂಬುದನ್ನು ಪರಿಶೀಲನೆ ಮಾಡಬೇಕಾದ ಅಗತ್ಯ ಮತ್ತು ಅನುವಾರ್ಯತೆಗಳು ಇವೆ.

ದೌರ್ಜನ್ಯ, ಹಿಂಸೆ, ಅಪಮಾನ ನಡೆಸುವ ವರ್ಗ ಯಾವುದು?

ದೌರ್ಜನ್ಯ ಎಂದರೆ ಪ್ರಾಣ ಹಾನಿ ಮಾಡುವುದು, ಇದಕ್ಕೆ

ಪ್ರಯತ್ನ ಮಾಡುವುದು, ಹಲ್ಲೆ ಮಾಡುವುದು, ದಬ್ಬಾಳಿಕೆ ಮಾಡುವುದು ಎಂದು ವಿವರಿಸಿಕೊಳ್ಳಬಹುದು. ಅಪಮಾನ ಎಂದರೆ, ಜಾತಿ, ಒಳಜಾತಿ, ವೃತ್ತಿ, ಲಿಂಗ, ಆರ್ಥಿಕ ತರತಮ ಇವುಗಳ ಆಧಾರದ ಮೇಲೆ ಕೀಳಾಗಿ, ನಿಕೃಷ್ಟವಾಗಿ, ತಿರಸ್ಕಾರ ಭಾವದಿಂದ ಕಾಣುವುದು ಎಂದಿಟ್ಟುಕೊಳ್ಳಬಹುದು.

ದೌರ್ಜನ್ಯಗಳನ್ನು ಯಾಕೆ ನಡೆಸಲಾಗುತ್ತದೆ? ಎಂದು ಅತ್ಯಂತ ಖಚಿತವಾಗಿ ಮತ್ತು ಸ್ಪಷ್ಟವಾಗಿ ಪ್ರಶ್ನೆಯನ್ನು ರೂಪಿಸಿಕೊಳ್ಳಬೇಕು. ದೌರ್ಜನ್ಯಗಳು ಯಾಕೆ ನಡೆಯುತ್ತವೆ? ಎಂದು ಪ್ರಶ್ನೆಯನ್ನು ರೂಪಿಸಬಾರದು. ಯಾಕೆಂದರೆ ನಡೆಸುವುದಕ್ಕೂ ಮತ್ತು ನಡೆಯುವುದಕ್ಕೂ ಮೂಲಭೂತವಾದ ವ್ಯತ್ಯಾಸವಿದೆ. ನಡೆಯುವುದು ಎಂದರೆ ಪ್ರಾಕೃತಿಕವಾದುದು. ನಡೆಸುವುದು ಎಂದರೆ ಮನುಷ್ಯರು ನಡೆಸುವುದು.

'ದಲಿತರು ಪ್ರತಿಭಟಿಸುತ್ತಿಲ್ಲ, ದಲಿತ ರಾಜಕಾರಣಿಗಳು ರಾಜೀನಾಮೆ ಕೊಡಬೇಕು' ಇಂತಹ ಹೇಳಿಕೆಗಳು ಬಹಳ ಆಕರ್ಷಕವಾಗಿ ಕೇಳಿಸುತ್ತವೆ. ಇವನ್ನು ಅತ್ಯಂತ ಜನಪ್ರಿಯಗೊಳಿಸಲಾಗಿದೆ. ಇವು ಸಾಮಾಜಿಕ ಒಪ್ಪಿಗೆ, ಸಾಮಾಜಿಕ ಸಮ್ಮತಿ, ಸಾಮಾಜಿಕ ಅಂಗೀಕಾರ ಪಡೆದಿವೆ. ಇವುಗಳ ಬಗ್ಗೆ ಮರುಮಾತಾಡಲು ಅವಕಾಶ ಇಲ್ಲದಂತಹ ಸ್ಥಿತಿಯನ್ನು ನಿರ್ಮಾಣ ಮಾಡಲಾಗಿದೆ. ಮುಂದುವರಿದು ಇಂತಹ ಅಭಿಪ್ರಾಯಗಳನ್ನು ದಲಿತ ಸಾಮಾಜಿಕ ಸ್ತರದವರಿಂದ ಹೇಳಿಸಲಾಗುತ್ತಿದೆ. ಆಗ ಅವುಗಳಿಗೆ ಶಕ್ತಿ ಹೆಚ್ಚಾಗುತ್ತದೆ ಮತ್ತು ಸಾಮಾಜಿಕ ಮನ್ನಣೆ ಜಾಸ್ತಿಯಾಗುತ್ತದೆ.

ದೌರ್ಜನ್ಯ, ಹಿಂಸೆ, ಅಪಮಾನಗಳನ್ನು ದಲಿತರ ಮೇಲೆ ನಡೆಸಲಾಗುತ್ತಿದೆ. ಇವನ್ನು ನಡೆಸುವವರು ಭೂಮಾಲೀಕ ವರ್ಗ ಮತ್ತು ಜಾತಿ ಶ್ರೇಣೀಕರಣದ ಮೇಲಿನವರು. ಇವನ್ನು ನಡೆಸುವವರು ದಲಿತರಲ್ಲ; ಇವುಗಳ ಹಿಂಸೆ ಮತ್ತು ಕಹಿಯನ್ನು ಅನುಭವಿಸುವವರು ದಲಿತರು. ದೌರ್ಜನ್ಯ, ಹಿಂಸೆ ಮುಂತಾದವುಗಳನ್ನು ನಡೆಸುತ್ತಿರುವವರನ್ನು ಅತ್ಯಂತ ನಯವಾಗಿ ಮುಚ್ಚಿಡಲಾಗುತ್ತಿದೆ. ಅಂದರೆ ಜಾತಿ ವೈರುಧ್ಯ ಮತ್ತು ವರ್ಗ ವೈರುಧ್ಯವನ್ನು ನಯವಾಗಿ ಮುಚ್ಚಿಡಲಾಗುತ್ತಿದೆ. ಬಹುಮಾಲೀಕರು ಮತ್ತು ದಲಿತರ ನಡುವಿನ ಆರ್ಥಿಕ ಸಂಬಂಧ ಸಾಮಾಜಿಕ ಸಂಬಂಧ ಇವುಗಳನ್ನು ನಯವಾಗಿ ಮುಚ್ಚಿಡಲಾಗುತ್ತಿದೆ. ದಲಿತರ ಗುಡಿಸಲುಗಳಿಗೆ ಬೆಂಕಿ ಹಚ್ಚಿದವರ ಕ್ರೌರ್ಯವನ್ನು, ಆ ಕ್ರೂರಿಗಳನ್ನು ಗುರಿ ಮಾಡದೆ ದಲಿತರು ಪ್ರತಿಭಟಿಸಬೇಕಾಗಿತ್ತು, ಹೋರಾಟ ಮಾಡಬೇಕಾಗಿತ್ತು ಎಂದು ದಲಿತ ಹೋರಾಟಗಾರರನ್ನು ಟೀಕೆ ಮಾಡಲಾಗುತ್ತಿದೆ.

ಯಾರು ಕಾರಣರೋ ಅವರನ್ನು ಪ್ರಶ್ನೆ ಮಾಡಬೇಕು

ನಿಜವಾಗಿ ಪ್ರಶ್ನೆ ಕೇಳಬೇಕಾದದ್ದು ದೌರ್ಜನ್ಯ ಮಾಡಿದವರನ್ನು ಮತ್ತು ಮಾಡುವವರನ್ನು. ನಿಜವಾಗಿ ಧಿಕ್ಕಾರ ಹೇಳಬೇಕಾದುದು, ಬಹಿಷ್ಕಾರ ಹಾಕಬೇಕಾಗಿದ್ದು ದಲಿತರ ಮೇಲೆ ದೌರ್ಜನ್ಯ



ನಡೆಸಿದವರಿಗೆ. ಇದನ್ನು ಮಾಡದೆ ದೌರ್ಜನ್ಯ ಅನುಭವಿಸಿದವರು ಸರಿಯಾಗಿ ಪ್ರತಿಭಟನೆ, ಹೋರಾಟ ಮಾಡ್ತಾ ಇಲ್ಲ ಎಂದು ಹೇಳುವುದು ಎಷ್ಟು ಸರಿ? 'ದೌರ್ಜನ್ಯಗಳು ಅವುಗಳ ಪಾಡಿಗೆ ಅವು ನಡೆಯುತ್ತಿರಲಿ; ಅದು ನಿಸರ್ಗದತ್ತವಾದದ್ದು; ಅದು ಸಾಮಾಜಿಕ ನಡಿಗೆಯಲ್ಲಿ ಸಹಜವಾದದ್ದು. ಆದರೆ ಅಂತಹ ಅನ್ಯಾಯಗಳನ್ನು ಖಂಡಿಸಬೇಕಾದವರು, ಪ್ರತಿಭಟಿಸಬೇಕಾದವರು, ನ್ಯಾಯಕ್ಕಾಗಿ ಹೋರಾಡಬೇಕಾದವರು ಮಾತ್ರ ದಲಿತರು. ಅವರು ಎಲ್ಲಿ ಹೋದರು?' ಎಂದು ದಲಿತ ಹೋರಾಟಗಾರರನ್ನು ಪ್ರಶ್ನೆ ಮಾಡುವುದು ವಿಷಾದದ ಸಂಗತಿ ಮಾತ್ರವಲ್ಲ; ವೈಚಾರಿಕವಾಗಿ ದ್ರೋಹದ ಸಂಗತಿ ಕೂಡಾ ಹೌದು.

ಇಂತಹ ಪ್ರಕರಣಗಳಲ್ಲಿ ದಲಿತ ಹೋರಾಟಗಾರರನ್ನು ಗುರಿ ಮಾಡುವುದು ಅತ್ಯಂತ ಸ್ಪಷ್ಟವಾಗಿ ಒಂದು ವರ್ಗಪ್ರಜ್ಞೆ ಮತ್ತು ಸಾಮಾಜಿಕ ಪ್ರಜ್ಞೆ. ಈ ವರ್ಗಪ್ರಜ್ಞೆ ಮತ್ತು ಈ ಸಾಮಾಜಿಕ ಪ್ರಜ್ಞೆಯ ಮುಖ್ಯ ಸ್ವರೂಪ ಯಾವುದು? ಅದರ ಹಿಂದಿರುವ ಧೋರಣೆ ಯಾವುದು ಎಂಬುದನ್ನು ವಿವರಿಸಿಕೊಳ್ಳುವ ಅಗತ್ಯವಿದೆ. ಭಾರತೀಯ ಸಮಾಜವು ಜಾತಿ ಅಸಮಾನತೆ ಮತ್ತು ವರ್ಗ ಅಸಮಾನತೆಗಳಿಂದ ರಚನೆಯಾಗಿದೆ. ವರ್ಗ ಅಸಮಾನತೆಯ ಕಾರಣದಿಂದ

ಆರ್ಥಿಕ ಶೋಷಣೆಯು, ಸಾಮಾಜಿಕ ಅಸಮಾನತೆಯಿಂದ ಅಪಮಾನ ಮತ್ತು ದಮನಗಳನ್ನು ನಡೆಸಲಾಗುತ್ತಿದೆ. ದಲಿತರ ಮೇಲೆ ನಡೆಸಲಾಗುತ್ತಿರುವ ಕ್ರೌರ್ಯವನ್ನು ನಡೆಸುವ ವರ್ಗದ ಬಗೆಗೆ ಏನೆಂದೂ ಮಾತನಾಡದೆ ಮೌನ ವಹಿಸುವುದು ಮತ್ತು ಅದೇ ಕಾಲಕ್ಕೆ ದಲಿತ ಹೋರಾಟ ಮತ್ತು ದಲಿತ ಹೋರಾಟಗಾರರು ನ್ಯಾಯಕ್ಕಾಗಿ ಒಗ್ಗಟ್ಟಾಗಿ ಹೋರಾಡಬೇಕು ಎಂದು ಉಪದೇಶ ಮಾಡುವುದು ಏನನ್ನು ಸೂಚಿಸುತ್ತದೆ? ಅನ್ಯಾಯ ಮಾಡಿರುವವರನ್ನು ಪ್ರಶ್ನೆ ಮಾಡದೆ, ನ್ಯಾಯ ಕೇಳುವ ಹೊಣೆಗಾರಿಕೆಯನ್ನು ದಲಿತರ ಮೇಲೆ ಹೊರಿಸುವುದು ನಾಚಿಕೆಗೇಡು ಮತ್ತು ದೊಡ್ಡ ಅಪರಾಧ. ಇದು ಅನ್ಯಾಯ ಮಾಡುವವರನ್ನು ನೇರವಾಗಿ ರಕ್ಷಿಸುವ ವಿಧಾನ.

'ದಲಿತರು ನ್ಯಾಯಕ್ಕಾಗಿ ಹೋರಾಟ ನಡೆಸಬೇಕು' ಎಂದು ದಲಿತೇತರರು ಹೇಳಿದಾಗ ಅದು 'ಪ್ರಗತಿಪರ' ಅಭಿಪ್ರಾಯದಂತೆ, ಅವರು 'ಪ್ರಗತಿಪರ'ರಂತೆ ಗೋಚರಿಸುತ್ತಾರೆ. ಆದರೆ ಇದು ಸತ್ಯವಲ್ಲ. ಅನ್ಯಾಯ, ದೌರ್ಜನ್ಯ ನಡೆಸಿದವರನ್ನು ಕುರಿತು 'ನೀವು ಹೀಗೆ ಮಾಡಿದ್ದು ದೊಡ್ಡ ಅಪರಾಧ' ಎಂದು ಅವರಿಗೆ ಹೇಳಬೇಕಾಗಿತ್ತು. ಅವರಿಗೆ ಸಾಮಾಜಿಕ ಅರಿವನ್ನು, ಸಾಮಾಜಿಕ ವಿವೇಕವನ್ನು ಮೂಡಿಸಬೇಕಿತ್ತು. ದುರಂತವೆಂದರೆ, ಕರ್ನಾಟಕದಲ್ಲಿ ಅಥವಾ ಇಂಡಿಯಾದಲ್ಲಿ ಈ ಕೆಲಸ ಮಾಡಿರುವ ಒಂದೇ ಒಂದು ಉದಾಹರಣೆ ಸಿಗುವುದಿಲ್ಲ. ಆದರೆ ಕೆಲವು ಪ್ರಕರಣಗಳಲ್ಲಿ ದಲಿತ ಹೋರಾಟ ಪ್ರತಿಭಟನೆಗಳನ್ನು ನಡೆಸಿದಾಗ, ದಲಿತೇತರ ವಲಯದ ಕೆಲವರು ಇದನ್ನು ಬೆಂಬಲಿಸಿದ್ದಾರೆ; ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಇದು ಸರಿ; ಆದರೆ ದೌರ್ಜನ್ಯ ನಡೆಸಿದವರಿಗೆ ಜಾಗೃತಿ ಮೂಡಿಸುವ, ಎಚ್ಚರಿಕೆ ಕೊಡುವ ಕೆಲಸವನ್ನು ಅದೇ ವಲಯದ ಬುದ್ದಿಜೀವಿಗಳು, ಚಿಂತಕರು ಮಾಡಬೇಕಿತ್ತು; ಇನ್ನಾದರೂ ಮಾಡಬೇಕು.

'ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಕೇವಲ ದಲಿತ ನಾಯಕರಲ್ಲ. ಅವರು ಎಲ್ಲರ ನಾಯಕರು. ಅವರು ದೇಶದ ನಾಯಕರು'. ದಲಿತರು ಡಾ. ಬಾಬಾಸಾಹೇಬ್ ಅಂಬೇಡ್ಕರರನ್ನು ದಲಿತರಿಗೆ ಮಾತ್ರ, ಕೇರಿಗಳಿಗೆ ಮಾತ್ರ ಸೀಮಿತ ಮಾಡಬಾರದು' ಎಂದು ಬಹಳ ಸರಳವಾಗಿ ದಲಿತೇತರ ವಲಯದವರು ಉಪದೇಶ ಮಾಡುತ್ತಾರೆ. ಡಾ. ಬಾಬಾಸಾಹೇಬರನ್ನು ದಲಿತ ವಲಯಕ್ಕೆ ಮಾತ್ರ, ದಲಿತ ಕೇರಿಗಳಿಗೆ ಮಾತ್ರ ಸೀಮಿತ ಮಾಡಿರುವವರ ಯಾರು? ಈ ಪ್ರಶ್ನೆ ಮುಖ್ಯವಾದುದು. ಹೀಗೆ ಪ್ರಶ್ನಿಸುವವರ ಜಾತಿ ಸಮುದಾಯಗಳಲ್ಲಿ ಡಾ. ಬಾಬಾಸಾಹೇಬರ ಜನ್ಮದಿನಾಚರಣೆಯನ್ನೋ, ಡಾ. ಬಾಬಾಸಾಹೇಬರನ್ನು ಕುರಿತು ವಿಚಾರ ಸಂಕಿರಣ ಇತ್ಯಾದಿ ಕಾರ್ಯಕ್ರಮ ನಡೆಸಿದ್ದಾರೆಯೆ? ಪ್ರಶ್ನೆ ಮಾಡುವವರು ಇಂತಹ ಕಾರ್ಯಕ್ರಮ ಮಾಡದೆ, 'ದಲಿತರೇ ನೀವು ಡಾ. ಬಾಬಾಸಾಹೇಬರನ್ನು ನಿಮ್ಮ ಕೇರಿಗಳಿಗೆ ಸೀಮಿತ ಮಾಡಬೇಡಿ' ಎಂದು ಪ್ರಶ್ನೆ ಕೇಳುವುದು ತಪ್ಪಾಗುತ್ತದೆ. ಹಾಗಾಗಿ ದಲಿತರಿಗೆ ಉಪದೇಶ ಮಾಡುವುದನ್ನು ಬಿಟ್ಟು ತಮಗೆ ತಾವೇ ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಆತ್ಮವಿಮರ್ಶೆ ಇಲ್ಲದ, ಸಂವೇದನಾಶೀಲತೆ ಇಲ್ಲದ ಯಾಂತ್ರಿಕ ಮಾನವರು ಮಾತ್ರ ಈ ರೀತಿ ಉಪದೇಶ ಮಾಡುತ್ತಾರೆ.

ಸಂದರ್ಶನವೊಂದರಲ್ಲಿ ನನಗೆ ಸಂದರ್ಶಕರು ಹೀಗೆ ಕೇಳಿದರು. 'ದಲಿತರ ಮನೆಗಳಲ್ಲಿ ಕೆಲವರು ಡಾ. ಬಾಬಾಸಾಹೇಬರ ಫೋಟೊ ಇಟ್ಕೊಂಡಿರ್ತಾರೆ. ಅದು ದೂಳು ಹಿಡಿದುಹೋಗಿರುತ್ತೆ. ಡಾ. ಅಂಬೇಡ್ಕರ್ ಜಯಂತಿ ದಿನ ಮಾತ್ರ ದೂಳು ಹೊಡೆಯುತ್ತಾರೆ. ಇದಕ್ಕೆ ನೀವೇನಂತೀರಿ?' ನಾನು ತಕ್ಷಣ ಹೇಳಿದೆ. 'ದಲಿತರ ಮನೆಯೊಳಗಿರುವ ಬಾಬಾಸಾಹೇಬರ ಫೋಟೊಗೆ ದೂಳಾದರೂ ಹಿಡಿರುತ್ತೆ. ಆದರೆ ನಿಮ್ಮ ಸಮುದಾಯದವರ ಎಷ್ಟು ಮನೆಗಳಲ್ಲಿ ಡಾ. ಬಾಬಾಸಾಹೇಬರ ಫೋಟೊ ಇದೆ ಹೇಳಿ' ಎಂದೆ. ಅವರು ಮರುಮಾತಾಡಲಿಲ್ಲ.

ಯಾವುದಾದರೂ ಊರಿನಲ್ಲಿ, ಯಾವುದಾದರೂ ಗ್ರಾಮಗಳಲ್ಲಿ ದಲಿತೇತರರು (ಇದರಲ್ಲಿ ಮುಸ್ಲಿಂ ಸಮುದಾಯ, ಕ್ರಿಶ್ಚಿಯನ್ ಸಮುದಾಯ ಇವೆಲ್ಲ ಸೇರುತ್ತವೆ.) ಡಾ. ಬಾಬಾಸಾಹೇಬ್ ಅಂಬೇಡ್ಕರರ ಜಯಂತಿಯನ್ನೊ, ಪರಿನಿರ್ವಾಣ ದಿನವನ್ನೊ ಆಚರಣೆ ಮಾಡಿದ್ದಾರಾ? ಡಾ. ಬಾಬಾಸಾಹೇಬರ ಪ್ರತಿಮೆಗೆ ಅಪಮಾನ ಮಾಡಿದಾಗ, ಅದು ತಮಗೂ ಆದ ಅಪಮಾನವೆಂದು ಫೀಲ್ ಮಾಡಿ, ದಲಿತೇತರ ಸಮುದಾಯದವರು ಪ್ರತಿಭಟನೆ ಮಾಡಿದ್ದಾರ? 'ಡಾ. ಅಂಬೇಡ್ಕರರು ದಲಿತರಿಗೆ ಮಾತ್ರ ಸೀಮಿತ ಅಲ್ಲ' ಎಂದು ಹೇಳುವವರು ಇವನ್ನೆಲ್ಲ ಯಾಕೆ ಮಾಡುವುದಿಲ್ಲ? ತಾವು ಮಾಡಬೇಕಿದ್ದ ಕರ್ತವ್ಯವನ್ನು ಮುಚ್ಚಿಟ್ಟುಕೊಂಡು, ನಾವಿರುವುದೇ ದಲಿತರಿಗೆ ಉಪದೇಶ ಮಾಡಲು ಮತ್ತು ಆದೇಶ ಮಾಡಲು ಎಂಬುದು ಅವರ ಪ್ರಜ್ಞೆಯಾಗಿದೆ. ಹೀಗೆ ಮಾಡಲು ತಮಗೆ ಪರಂಪರೆಯಿಂದ ಅಧಿಕಾರವಿದೆ ಎಂಬುದು ಅವರ ಅಂತಃಪ್ರಜ್ಞೆಯಾಗಿದೆ. ಇವರಿಗೆ ಡಾ. ಬಾಬಾಸಾಹೇಬರು ಮತ್ತು ಇಂಡಿಯನ್ ಕಾನ್‌ಸ್ಟಿಟ್ಯೂಶನ್ ಕಾಣುವುದು ಎನ್.ಆರ್.ಸಿ. ಮತ್ತು ಸಿ.ಎ.ಎ. ಕಾಯಿದೆಗಳ ಜಾರಿಯ ಸಂದರ್ಭದಲ್ಲಿ ಮಾತ್ರ. ಅಂದರೆ ಅವರ ಬುಡಕ್ಕೇ ನೀರು ಬಂದಾಗ ಮಾತ್ರ. ಅನಂತರ ಮರೆತುಹೋಗುತ್ತದೆ.

ದಲಿತರಿಗೆ ಉಪದೇಶ/ ಆದೇಶ ಮಾಡುವ ಪ್ರಜ್ಞೆಯ ಸ್ವರೂಪವನ್ನು ಹೇಗೆ ಅರ್ಥಮಾಡಿಕೊಳ್ಳುವುದು?

ಬಹುಸಂಖ್ಯಾತ ದಲಿತರು ಮುಖ್ಯವಾಗಿ ಭೂಹೀನ ಕೃಷಿಕೂಲಿಗಳು. ಜಮೀನ್ದಾರರ ಹೊಲಗದ್ದೆ ತೋಟಗಳಲ್ಲಿ ಕೆಲಸ ಮಾಡುವಾಗ ಜಮೀನ್ದಾರರ ಅಪೇಕ್ಷೆ ಮತ್ತು ಉದ್ದೇಶಕ್ಕೆ ಅನುಗುಣವಾಗಿ ಕೆಲಸ ಮಾಡದಿದ್ದರೆ, 'ಹಾಗೆ ಮಾಡು, ಹೀಗೆ ಮಾಡು' ಎಂದು ಇವರಿಗೆ ಆಜ್ಞೆ ಮಾಡುತ್ತಾರೆ. ಆ ಪ್ರಜ್ಞೆ ಅವರಲ್ಲಿ ಅಂತಸ್ಥಗುಣವಾಗಿರುತ್ತದೆ. ಅದು ಆಜ್ಞೆ ಮಾಡುತ್ತದೆ ಮತ್ತು ಆದೇಶಿಸುತ್ತದೆ. 'ಇದು ನಮ್ಮ ಹಕ್ಕು' ಎಂಬ ಅಧಿಕಾರದ ಪ್ರಜ್ಞೆಯಾಗಿರುತ್ತದೆ. 'ಸರಿಯಾಗಿ ಕೆಲಸ ಮಾಡು' ಎಂದು ಆದೇಶಿಸುವುದು ಎಷ್ಟೋ ಸಲ ಅಭ್ಯಾಸಬಲವೂ

ಆಗಿರುತ್ತದೆ. ಹೀಗೆ ಆದೇಶಿಸದಿದ್ದರೆ ತಮ್ಮ ಅಸ್ತಿತ್ವಕ್ಕೆ, ಘನತೆಗೆ ಕುಂದು ಎಂದು ಆ ಪ್ರಜ್ಞೆ ತನಗೆ ತಾನೇ ಭಾವಿಸಿಕೊಂಡು ಕ್ರಿಯಾಶೀಲವಾಗುತ್ತದೆ. ಈ ಕ್ರಿಯಾಶೀಲತೆಯು 'ನನಗಿಂತ ಕೆಲಸ ಮಾಡುವವರು ಕೇಳು ಎಂದೂ, ಕೆಲಸ ಮಾಡುವವರಿಗಿಂತ ನಾವು ಮೇಲು' ಎಂಬ ಅಂತಃಪ್ರಜ್ಞೆಯಾಗಿದೆ. ಇದು ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ಮತ್ತಷ್ಟು ಗಟ್ಟಿಗೊಳಿಸಿ ಮುಂದುವರಿಸುವ ಪ್ರಜ್ಞೆಯಾಗಿದೆ. ಈ ಪ್ರಜ್ಞೆಯೊಳಗೆ ಸ್ವವಿಮರ್ಶೆ ಮತ್ತು ಅಂತಃಸಾಕ್ಷಿಯ ವಿವೇಕ ಹುಟ್ಟೇ ಇಲ್ಲ ಎಂದೂ



ಹೇಳಬಹುದು. ಹಾಗಾಗಿ ಈ ಮನೋಧರ್ಮಕ್ಕೆ ದಮನ, ದೌರ್ಜನ್ಯ ನಡೆಸುವವರು ಮುಖ್ಯವಾಗುವುದೇ ಇಲ್ಲ. ದೌರ್ಜನ್ಯ ನಡೆಸುತ್ತಿರುವವರು ಅಪರಾಧಿಗಳು ಎಂಬ ಅರಿವು ಮತ್ತು ವಿವೇಕ ಈ ಪ್ರಜ್ಞೆಗೆ ಇನ್ನೂ ಬಂದಿಲ್ಲ. ಹಾಗಾಗಿ ದೌರ್ಜನ್ಯ ನಡೆಸಿದವರನ್ನು ಬಿಟ್ಟು, 'ದೌರ್ಜನ್ಯದ ವಿರುದ್ಧ ಹೋರಾಟ ಮಾಡಬೇಕು, ನಿಮ್ಮಲ್ಲೇ ಒಗ್ಗಟ್ಟಿಲ್ಲ ನೋಡಿ' ಎಂದು ಹೇಳುತ್ತಾರೆ. ಈ ಮೂಲಕ ದೌರ್ಜನ್ಯ ನಡೆಸಿದವರನ್ನು ರಕ್ಷಣೆ ಮಾಡುತ್ತಾರೆ. ಅವರು ತಪ್ಪಿತಸ್ಥರು ಎಂದು ಹೇಳುವುದೇ ಇಲ್ಲ.

ಅನ್ಯಾಯ, ಅಪಮಾನ, ಶೋಷಣೆ, ದೌರ್ಜನ್ಯ ಅನುಭವಿಸಿದವರು ಇವನ್ನು ವಿರೋಧಿಸಲು, ಪ್ರತಿಭಟಿಸಲು ಸಂವಿಧಾನಾತ್ಮಕ ಕಾನೂನುಗಳಿವೆ, ಹಕ್ಕುಗಳಿವೆ ನಿಜ. ಆದರೆ, ಅನ್ಯಾಯ, ಅಪಮಾನ, ಶೋಷಣೆ, ದೌರ್ಜನ್ಯ ನಡೆಸಲು ಸಂವಿಧಾನಾತ್ಮಕ ಕಾನೂನುಗಳು, ಹಕ್ಕುಗಳು ಇವೆಯೇ? ಇದು ಅತ್ಯಂತ ಮೂಲಭೂತ ಪ್ರಶ್ನೆ. ದೌರ್ಜನ್ಯ ನಡೆಸುವ ಶೋಷಕ ವರ್ಗವು ತಾನು ಹೊಂದಿರುವ ಆಸ್ತಿ, ಸಂಪತ್ತಿನ ಕಾರಣಕ್ಕೆ ಊಳಿಗಮಾನ್ಯಶಾಹಿ ಅಧಿಕಾರವನ್ನು ರೂಪಿಸಿಕೊಂಡಿದೆ. ಆ ಅಧಿಕಾರಪ್ರಜ್ಞೆಗೆ ಅಹಂಕಾರ ಮತ್ತು ಧಿಮಾಕುಗಳು ಪ್ರಧಾನಶಕ್ತಿಗಳು. ಆ ಅಧಿಕಾರದ ಶಕ್ತಿಯನ್ನು ಬಳಸಿ, ಅವರು ದಲಿತರ ಬಾಯಿಗೆ ಮಲ ತುರುಕಬಲ್ಲರು. ದಲಿತರನ್ನು ಗುಡಿಸಲುಗಳಲ್ಲಿ ಕೂಡಿಹಾಕಿ ಜೀವಂತ ಸುಡಬಲ್ಲರು. ಇದನ್ನು ನೆನಪಿಸಿಕೊಂಡರೆ ಇದಕ್ಕೆ ಕಿಂಚಿತ್ ಮನುಷ್ಯಪ್ರಜ್ಞೆಯೇ ಇಲ್ಲ. ಮನುಷ್ಯಪ್ರಜ್ಞೆಯೇ ಇಲ್ಲದ ಇದು ತನ್ನ ಅಧಿಕಾರದ ಬಲದಿಂದ ದಲಿತರಿಗೆ ಆಜ್ಞೆ ಮಾಡಲು ಹೇಸುವುದಿಲ್ಲ. ಇದಕ್ಕೆ ಇಂಡಿಯನ್ ಕಾನ್‌ಸ್ಟಿಟ್ಯೂಶನ್ ಬಗ್ಗೆ ಲವಲೇಶವೂ ಅರಿವೂ ಇಲ್ಲ; ಗೌರವವೂ ಇಲ್ಲ.

ದಲಿತರು
ಅಕ್ಷರಸ್ಥರಾದರೆ,
ನೌಕರಿ ಪಡೆದರೆ,
ಬದುಕನ್ನು ಆಂಶಿಕವಾಗಿ
ಬದಲಾಯಿಸಿಕೊಂಡರೆ,
ಗ್ರಾಮಾಂತರ ಪ್ರದೇಶದ
ಪಾರಂಪರಿಕ ಜೀತ
ಮುಂತಾದುವನ್ನು ಮಾಡದೇ
ಹೋದರೆ, ದಲಿತೇರರ ಗುಡಿ
ದೇವಸ್ಥಾನಗಳಿಗೆ ಹೋದರೆ,
ದಲಿತೇತರ ಹೆಣ್ಣು ಮಕ್ಕಳನ್ನು ಪ್ರೀತಿಸಿದರೆ ಕಥೆ ಮುಗಿಯಿತು. ದೇವನೂರ ಮಹಾದೇವ ಅವರ 'ಕುಸುಮಬಾಲೆ'ಯಲ್ಲಿ ಕುಸುಮಾಳನ್ನು ಪ್ರೀತಿಸಿದ ಚೆನ್ನನ್ನು ಕೊಲೆ ಮಾಡಿದಂತೆ ಕೊಲೆ ಮಾಡುತ್ತಾರೆ. ಜಾಗೃತಿ, ಸ್ವಾಭಿಮಾನಗಳು ಮೂಡಿದರೆ ಈ ಪ್ರಜ್ಞೆಯುಳ್ಳವರ ಹೊಟ್ಟೆಗೆ ಬೆಂಕಿಬಿದ್ದಂತಾಗುತ್ತದೆ.

ಇದು ಮೂಲಭೂತವಾಗಿ ಮತ್ತೆ ಮತ್ತೆ ಗಟ್ಟಿಗೊಳ್ಳುತ್ತಿರುವ ಊಳಿಗಮಾನ್ಯಶಾಹಿ ಪ್ರಜ್ಞೆ. ಮೇಲು ಕೀಳು, ಶ್ರೇಷ್ಠ ಕನಿಷ್ಠ ಎಂಬ ಮೌಲ್ಯಪ್ರಜ್ಞೆ. ಇದರ ಆಂತರಿಕ ಸಾಮರ್ಥ್ಯ ಮತ್ತು ಆಂತರಿಕ ಪ್ರತಿಭೆ. ತಳಸಮುದಾಯಗಳ ಚಲನೆಯನ್ನು ಈ ಪ್ರಜ್ಞೆ ಇನ್ನು ಮುಂದೆಯಾದರೂ ಸಹಿಸಿಕೊಳ್ಳಬೇಕು. ದಲಿತರಿಗೆ ಉಪದೇಶ ಮಾಡುವುದನ್ನು ಬಿಡಬೇಕು. ದೌರ್ಜನ್ಯ ನಡೆಸುವ ತಮ್ಮ ಸಮುದಾಯದವರಿಗೆ ಅರಿವು, ವಿವೇಕ ಮೂಡಿಸಬೇಕು.

ISSN: 2582-4856

ಸಾಮಾಜಿಕ ಪರಿವರ್ತನೆಗಾಗಿ

ಭೀಮವಾದ

Bheemavaadha

Kannada Monthly

ಮಾಸಪತ್ರಿಕೆ

April - 2023 | Rs 30/- Vol-13 | Issue-8



ಅಂಬೇಡ್ಕರ್ ಮತ್ತು
ಸಾಮಾಜಿಕ ಚಿಂತನೆಗಳು

ಭಾರತದ ಕ್ರಾಂತಿಯ ಕಿಡಿ

ಒಳಪುಟಗಳಲ್ಲಿ

6 ಭಾರತದ ಕ್ರಾಂತಿಯ ಕಿಡಿ ಬಾಬಾಸಾಹೇಬ್ ಅಂಬೇಡ್ಕರ್

11 ಅಂಬೇಡ್ಕರ್ ಮತ್ತು ಸಾಮಾಜಿಕ ಚಿಂತನೆಗಳು

14 ಅಂಬೇಡ್ಕರವರ ಜೀವನ ಸಿದ್ಧಿ

17 ಹೇಗಿದ್ದೀಯಾ ರಮಾ!

19 ಡಾ. ಬಾಬಾಸಾಹೇಬರು ಎಲ್ಲ ಕಾಲದ ಬೆಳಕು

24 ಮತದಾರರೆ ಎಚ್ಚರ! ಮುಂದಿನ ದಿನಗಳು ಭಯಂಕರ!!

29 ಜಾತಿ ಸುರುಳಿಗಳ ಸೂತ್ರಗಳನ್ನು ಬಿಡಿಸುವ 'ಕ್ಯಾಸ್ಟ್ ಕೆಮಿಸ್ಟ್ರಿ'

31 ವಿದ್ಯಾವಂತ ರಾಜಕಾರಣಿ ಸಿದ್ಧಾರ್ಥ ಅರಕೇರಿ
ಡಾ. ಎಚ್. ಟಿ. ಪೋತೆ

ಚಂದಾ ವಿವರ
ಬಿಡಿ ಪ್ರತಿ : ರೂ. 30/-
ವಾರ್ಷಿಕ : ರೂ. 300/-
3 ವರ್ಷದ ಪ್ರೋತ್ಸಾಹ ಧನ : ರೂ. 1.500/-
ಆಜೀವ ಚಂದಾ : ರೂ. 5.000
ಪೋಷಕ ಚಂದಾ : ರೂ. 10.000/-

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಮುಖಪುಟ ವಿನ್ಯಾಸ: ಅರಳಿ ಮಲ್ಟಿಮೀಡಿಯಾ

ಪ್ರಧಾನ ಸಂಪಾದಕರು
ಡಾ.ಆರ್.ಮೋಹನ್‌ರಾಜ್

ಸಹ ಸಂಪಾದಕರು
ಡಾ.ಕೆ.ಎ.ಓಬಳೇಶ್
ಎಸ್.ಡಿ.ರಾಯಮಾನೆ

ಸಂಪಾದಕೀಯ ಮಂಡಳಿ
ರಾಜು ಎಂ. ತಳವಾರ್
ಡಾ. ಜಯದೇವಿ ಗಾಯಕವಾಡ

ಚಂದಾದಾರರ ಗಮನಕ್ಕೆ : 'ಭೀಮವಾದ' ಮಾಸ ಪತ್ರಿಕೆಗೆ ಚಂದಾದಾರರಾಗುವವರು/ ನವೀಕರಿಸುವವರು ಹಾಗೂ ಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ಪತ್ರಿಕೆಯ ವಿಳಾಸಕ್ಕೆ ಸಂಪರ್ಕಿಸಬೇಕಾಗಿ ವಿನಂತಿ.
ವಿ.ಸೂ: ಚೆಕ್ಕುಗಳನ್ನು ಸ್ವೀಕರಿಸುವುದಿಲ್ಲ. ಎಂ.ಒ/ ಡಿ.ಡಿ ಮಾತ್ರ ಕಳುಹಿಸಬೇಕು. ಡಿಡಿಗಳು 'ಭೀಮವಾದ' ಹೆಸರಿನಲ್ಲಿರಲಿ. ಬ್ಯಾಂಕಿಗೆ ನೇರವಾಗಿ ಹಣ ಸಂದಾಯ ಮಾಡುವವರು ಈ ಕೆಳಗಿನ ಖಾತೆಗೆ ಕಳುಹಿಸುವುದು :
A/c Name : BHEEMAVAADHA, Bank Name : Union Bank of India, Branch : Gandhi Nagar, 14, 1st Main Road, Gandhinagar, Bangalore-9
A/c No : 353101010036315 IFS Code : UBIN0535311

ಡಾ. ಬಾಬಾಸಾಹೇಬರು ಎಲ್ಲ ಕಾಲದ ಬೆಳಕು

• ಡಾ. ಬಿ.ಎಂ. ಪುಟ್ಟಯ್ಯ

ಜಗತ್ತಿನಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಮತ್ತೊಂದು ಹೆಸರು ಜಾಗತಿಕ ಮೇಧಾವಿ ಮತ್ತು ಜಾಗತಿಕ ತತ್ವಜ್ಞಾನಿ. ಅಸಮಾನತೆ, ಅನ್ಯಾಯ ಮತ್ತು ಶೋಷಣೆಯ ವ್ಯವಸ್ಥೆಯನ್ನು ರಕ್ತರಹಿತ ವಿಧಾನದಲ್ಲಿ ಪರಿವರ್ತನೆ ಮಾಡುವ ಮಹಾನ್ ಶಕ್ತಿ ಇವರು ಸೃಷ್ಟಿ ಮಾಡಿರುವ ತತ್ವಜ್ಞಾನದಲ್ಲಿದೆ. ಇದರಲ್ಲಿ ಪುರಾತನ ಹಾಗೂ ಆಧುನಿಕ ಕಾಲದ ಎಲ್ಲಾ ಜ್ಞಾನಶಾಖೆಗಳ ಕೇಂದ್ರ ಸಾರವಿದೆ. ಮಾನವರು ಮಾತ್ರವಲ್ಲ; ಇಡೀ ಜೀವಕೋಟಿಯೊಂದಿಗೆ, ಪ್ರಕೃತಿ ಹಾಗೂ ನಿಸರ್ಗದೊಂದಿಗೆ ಮನುಷ್ಯ ಪ್ರಾಮಾಣಿಕವಾಗಿ ಬೆರೆತು ಸಹಜೀವನ ನಡೆಸಬೇಕು ಎಂಬ ಆಶಯವಿದೆ. ಡಾ. ಬಾಬಾಸಾಹೇಬರು ಪ್ರಪಂಚದ ಎಲ್ಲಾ ಜ್ಞಾನಗಳನ್ನು ಅತ್ಯಂತ ಆಳವಾಗಿ ಹಾಗೂ ಸಮಗ್ರವಾಗಿ ಅಧ್ಯಯನ ಮಾಡಿದ್ದಾರೆ. ಈ ವಿಷಯದಲ್ಲಿ ಡಾ. ಬಾಬಾಸಾಹೇಬರ ಜೊತೆ ನಿಲ್ಲುವ ಮತ್ತೊಬ್ಬ ವಿದ್ವಾಂಸ ಇಡೀ ಜಗತ್ತಿನಲ್ಲಿ ಇಲ್ಲ. ಹಾಗಾಗಿಯೇ ಇವರು ವಿಶ್ವಮಟ್ಟದ ಏಕೈಕ ಅಗ್ರಗಣ್ಯ ವಿದ್ವಾಂಸರು, ಮಹಾ ಮೇಧಾವಿ ಮತ್ತು ಸಂಶೋಧಕರು. ಇವರು ಸೃಷ್ಟಿ ಮಾಡಿರುವ ಜ್ಞಾನವು ಇಡೀ ಮಾನವ ಕುಲದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳಿಂದ ಬದುಕಲು ದಿವ್ಯ ಔಷಧಿ. ಡಾ. ಬಾಬಾ ಸಾಹೇಬರನ್ನು ಗೌರವಿಸುವವರು ಇವರ ಅಗಾಧವಾದ ಜ್ಞಾನಭಂಡಾರವನ್ನು ಗೌರವಿಸುತ್ತಾರೆ ಮತ್ತು ಪ್ರೀತಿಸುತ್ತಾರೆ. ಡಾ. ಬಾಬಾ ಸಾಹೇಬರನ್ನು ಗೌರವಿಸುವವರು ಇವರ ಜ್ಞಾನಭಂಡಾರವನ್ನು ನಂಬುತ್ತಾರೆ ಮತ್ತು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುತ್ತಾರೆ. ಡಾ. ಬಾಬಾ ಸಾಹೇಬರನ್ನು ಕೇವಲ ವ್ಯಕ್ತಿ ಎಂದು ಪರಿಗಣಿಸಲು ಬರುವುದಿಲ್ಲ; ಇವರು ಮಾನವ ಸಮಾಜಕ್ಕೆ ಎಂದೆಂದೂ ಬೆಳಕಾಗಿರುವ ಅತ್ಯದ್ಭುತ ಸಮಾನತೆಯ, ಸಹಬಾಳ್ವೆಯ ಸಾಮಾಜಿಕ ಶಕ್ತಿ. ಇವರ ಒಂದೊಂದು ಮಾತೂ, ಒಂದೊಂದು ಬರವಣಿಗೆಯೂ ಅಪಾರ ಪ್ರಮಾಣದ ಜ್ಞಾನ ಹಾಗೂ ತಿಳಿವಳಿಕೆಯ ಗಣಿ. ಮೊಗೆದಷ್ಟೂ ಮತ್ತೆ ಮತ್ತೆ ಸಿಗುವ ಸಂಪತ್ತು.

ಸಕಲ ಜೀವಕೋಟಿಯೇ ಬಾಬಾ ಸಾಹೇಬರ ಅಧ್ಯಯನದ ಮುಖ್ಯ ಸಜೀವ ವಸ್ತು. ಇವರು ತಮ್ಮ ಅಧ್ಯಯನದ ಯಾವುದೇ ಕ್ಷೇತ್ರವನ್ನು ಅಧ್ಯಯನದ ಸರಕು ಹಾಗೂ ಸಾಮಗ್ರಿ ಎಂದು ಭಾವಿಸಲೇ ಇಲ್ಲ. ಅದನ್ನು ಎಂದೆಂದೂ ಯಾಂತ್ರಿಕವಾಗಿ ನೋಡಲೇ ಇಲ್ಲ. ಅಧ್ಯಯನಕ್ಕೆ ಆಯ್ಕೆ



ಮಾಡಿಕೊಂಡ ವಿಷಯವು ಮಾನವರ ಬದುಕಿಗೆ ಮಾರಕವಾಗಿದೆಯೋ ಅಥವಾ ಪೂರಕವಾಗಿದೆಯೋ ಎಂಬುದನ್ನು ಪರಿಶೀಲಿಸಿದರು. ಮಾರಕವಾಗಿರುವುದನ್ನು ಪೂರಕವಾಗಿ ಮಾರ್ಪಡಿಸುವ ವಿಧಾನವನ್ನು ಸೂಚಿಸಿದರು. ತಾವು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕ್ಷೇತ್ರದ ಕೇಂದ್ರ ಸಮಸ್ಯೆಯನ್ನು ಆಳವಾಗಿ ಪರಿಶೀಲಿಸಿ ಅದರ ಒಂದೊಂದು ಸಮಸ್ಯೆಯ ಮಗ್ಗುಲನ್ನು ಸೂಕ್ಷ್ಮವಾಗಿ ಬಿಡಿಸಿಟ್ಟರು. ಜೊತೆಗೆ ಅವುಗಳಿಗೆ ಪರಿಹಾರದ ಮಾರ್ಗಗಳನ್ನು ನೀಡಿದರು. ಡಾ. ಬಾಬಾ ಸಾಹೇಬರ ಪ್ರಕಾರ ಮಾನವರ ಎಲ್ಲಾ ಸಮಸ್ಯೆಗಳಿಗೆ ಮಾನವರ ಮಲಿನಗೊಂಡ ಮನಸ್ಸೇ ಮೂಲಭೂತ ಕಾರಣ.

ಮಾನವರ ಆಚೆಗೆ ಇದೆ ಎಂದು ನಂಬಿರುವ ಯಾವುದೇ ಶಕ್ತಿ ಕಾರಣವಲ್ಲ.

ಕಳೆದ ಶತಮಾನದಲ್ಲಿ ಯೂರೋಪಿನಲ್ಲಿ ಬೈಬಲ್ ಇಡೀ ಜ್ಞಾನವನ್ನು ನಿಯಂತ್ರಿಸುತ್ತಿತ್ತು ಮತ್ತು ಆಳ್ವಿಕೆ ಮಾಡುತ್ತಿತ್ತು. ಅದು ಜಗತ್ತಿನ ಸಮಸ್ಯೆಗೆ ದೇವರನ್ನು (ಏಸುವನ್ನು) ನಂಬದಿರುವುದೇ ಕಾರಣವೆಂದೂ, ದೇವರನ್ನು (ಏಸುವನ್ನು) ನಂಬಿದರೆ ಮಾತ್ರ ಎಲ್ಲಾ ಸಮಸ್ಯೆಗಳು ಪರಿಹಾರವಾಗುತ್ತವೆ ಎಂದೂ ಪ್ರತಿವಾದಿಸಿತ್ತು ಮತ್ತು ನಂಬಿಸಿತ್ತು. ಮುಖ್ಯವಾಗಿ ಭೂಮಿಯೇ ಇಡೀ ಬ್ರಹ್ಮಾಂಡದ ಕೇಂದ್ರವೆಂದು, ಅದರ ಸುತ್ತ ಉಳಿದ ನಕ್ಷತ್ರಗಳು ಮತ್ತು ಗ್ರಹಗಳು ಸುತ್ತುತ್ತವೆ ಎಂದು ನಂಬಿಸಿತ್ತು. ಮುಂದೆ ಭೌತವಿಜ್ಞಾನದಲ್ಲಿ ನಡೆದ ಅದ್ಭುತ ಸಂಶೋಧನೆಗಳು ಈ ನಂಬಿಕೆ ಮತ್ತು ತಿಳಿವಳಿಕೆಯನ್ನು ತಲೆಕೆಳಗೆ ಮಾಡಿದವು. ಜ್ಞಾನವನ್ನು ಧರ್ಮದ ಹಿಡಿತದಿಂದ ಬಿಡುಗಡೆಗೊಳಿಸಿದವು. ಜ್ಞಾನಕ್ಕೆ ಸ್ವತಂತ್ರ ಅಸ್ತಿತ್ವವನ್ನು ತಂದುಕೊಟ್ಟವು. ಇದು ವಿಜ್ಞಾನದ ತಿಳಿವಳಿಕೆಯಾಯಿತು. ಇದರ ಪರಿಣಾಮವಾಗಿ ಧರ್ಮವನ್ನು ಈ ಜ್ಞಾನ ಪ್ರಶ್ನಿಸಿತು. ಸುತ್ತಲ ಪರಿಸರ ಹಾಗೂ ಬದುಕಿನ ಬಗೆಗೆ ತೀವ್ರವಾದ ಕುತೂಹಲ, ಪ್ರಶ್ನೆ, ತರ್ಕ ಮತ್ತು ಜ್ಞಾನದಾಹಗಳು ಹೊಸ ಜ್ಞಾನವನ್ನು ಸೃಷ್ಟಿ ಮಾಡುತ್ತವೆ. ಆದರೆ, ಧರ್ಮ ಗ್ರಂಥಗಳು ಮತ್ತು ಧರ್ಮದ ಮೇಲಿನ ನಂಬಿಕೆಗಳು ತಿಳಿವಳಿಕೆಯನ್ನು ನಂಬಿಕೆಯಾಗಿಸುತ್ತವೆ ಮತ್ತು ನಂಬಿಕೆಯನ್ನು ತಿಳಿವಳಿಕೆಯಾಗಿಸುತ್ತವೆ.

ಭಾರತದಲ್ಲಿ ಸಾಂಪ್ರದಾಯಿಕ ಧರ್ಮಗಳೂ ಇದೇ ಕೆಲಸ ಮಾಡಿದ್ದವು. ಸಮಾಜವನ್ನು ವರ್ಣ ಮತ್ತು ಜಾತಿಗಳ ಹೆಸರಿನಲ್ಲಿ ವಿಭಜಿಸಿ, ಆ ವಿಭಜನೆಗಳನ್ನು ಶ್ರೇಣೀಕರಣ ಮಾಡಿ, ಅವುಗಳ ನಡುವೆ ಅಸಮಾನತೆಯನ್ನು ನಿರ್ಮಾಣ ಮಾಡಿದ್ದವು. ಮೇಲಿನವರು ಶ್ರೇಷ್ಠ, ಶುದ್ಧ ಮತ್ತು ಪವಿತ್ರರು ಎಂದು; ಇದಕ್ಕೆ ವಿರುದ್ಧವಾಗಿ ಕೆಳಗಿನವರು ಕನಿಷ್ಠ, ಅಶುದ್ಧ ಮತ್ತು ಅಪವಿತ್ರರು ಎಂದು ನಂಬಿಸಿದ್ದವು. ಈ ತಾರತಮ್ಯ ದೈವನಿರ್ಮಿತವೆಂದು ನಂಬಿಸಿದ್ದವು. ಡಾ. ಬಾಬಾ ಸಾಹೇಬರು ಇಂಡಿಯಾದಲ್ಲಿ ಧರ್ಮಕೇಂದ್ರಿತವಾದ ಈ ನಂಬಿಕೆ ಮತ್ತು ತಿಳಿವಳಿಕೆ ಹೇಗೆ ಸೃಷ್ಟಿಯಾಗಿದೆ, ಇದರ ರಚನೆ ಹಾಗೂ ಪ್ರಸಾರ ಹೇಗೆ ನಡೆದಿದೆ ಎಂಬುದನ್ನು ಕುರಿತು ಅತ್ಯಂತ ಆಳವಾಗಿ ಅಧ್ಯಯನ ಮಾಡಿದರು. ಭಾರತೀಯ ಸಮಾಜ ಮಾತ್ರವಲ್ಲ; ಇಡೀ ಪ್ರಪಂಚದ ವಿವಿಧ ಸಮುದಾಯಗಳು ತಮ್ಮ ಆಚರಣೆಯ ಧರ್ಮಗಳನ್ನು ನಂಬುತ್ತವೆ. ಅವರಿಗೆ ಆ ನಂಬಿಕೆ ಅತ್ಯಂತ ಪವಿತ್ರವಾದುದು. ಧರ್ಮಗಳು ಮತ್ತು ಧರ್ಮ ಗ್ರಂಥಗಳೇ ಈ ನಂಬಿಕೆಯನ್ನು ಪವಿತ್ರಗೊಳಿಸಿವೆ. ಹಾಗಾಗಿ ಪ್ರಪಂಚದ ಯಾವುದೇ ಸಮುದಾಯಗಳು ತಮ್ಮ ನಂಬಿಕೆಯ ಧರ್ಮದ ಬಗೆಗೆ ಒಂದು ಸಣ್ಣಪುಟ್ಟ ಅವಹೇಳನದ ಅಭಿಪ್ರಾಯವನ್ನೂ ಸಹಿಸಿಕೊಳ್ಳದೆ ಅದರ ವಿರುದ್ಧ ತಿರುಗಿ ಬೀಳುತ್ತವೆ. ಈಚಿನ ವರ್ಷಗಳಲ್ಲಿ ಸಿನಿಮಾ



ಮತ್ತು ಪುಸ್ತಕಗಳ ಬಗೆಗೆ ಬಂದಿರುವ ವಿರೋಧಗಳನ್ನು ಈ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ಗ್ರಹಿಸಬಹುದು.

ಡಾ. ಬಾಬಾಸಾಹೇಬರು ಭಾರತೀಯ ಸಮಾಜದ ಅಸಮಾನತೆ, ಅಸಮಾನತೆಯ ಶ್ರೇಣೀಕರಣ ಮತ್ತು ಅದರ ಪರಿಣಾಮಗಳ ಮರ್ಮವನ್ನು ಧರ್ಮದ ಅಂತರಂಗದಲ್ಲಿ ಶೋಧಿಸಿದರು. ಧರ್ಮದ ಮಡಿ ಮೈಲಿಗೆಯ ಕಾರಣ ಮತ್ತು ಪರಿಣಾಮಗಳ ಮರ್ಮವನ್ನು ಜಾತಿಯ ಅಂತರಂಗದಲ್ಲಿ ಶೋಧಿಸಿದರು. ಭಾರತದಲ್ಲಿ ಜಾತಿ ಮತ್ತು ಧರ್ಮಗಳು ಒಂದರೊಳಗೊಂದು ಪರಸ್ಪರ ಬೆರೆತಿವೆ. ಅವೆರಡೂ ಮಲಿನಗೊಂಡ ಮೌಲ್ಯಗಳನ್ನು ಹೊಂದಿವೆ. ಹಾಗಾಗಿ ಒಂದು ಇನ್ನೊಂದನ್ನು ಪ್ರಚೋದಿಸುತ್ತಾ, ಪ್ರಭಾವಿಸುತ್ತಾ ಮತ್ತು ನಿಯಂತ್ರಿಸುತ್ತಾ ಸಾಗಿವೆ. ಪಾಶ್ಚಾತ್ಯ ವಿದ್ವಾಂಸರು ಇವೆರಡನ್ನೂ ಪ್ರತ್ಯೇಕ ಪ್ರತ್ಯೇಕವೆಂದು ಗ್ರಹಿಸಿದ್ದರು. ಅವರಿಗೂ ಮತ್ತು ಡಾ. ಬಾಬಾ ಸಾಹೇಬರಿಗೂ ಅತ್ಯಂತ ಮೂಲಭೂತವಾದ ವ್ಯತ್ಯಾಸ ಇರುವುದೇ ಇಲ್ಲಿ.

ಜಾತಿ ಅಸಮಾನತೆ ಮತ್ತು ಅಸ್ಪೃಶ್ಯತೆಯ ಹುಟ್ಟು, ಅದರ ವಿಸ್ತರಣೆ ಹಾಗೂ ಅವುಗಳ ವಿನಾಶದ ಬಗೆಗೆ ಡಾ. ಬಾಬಾ ಸಾಹೇಬರು ಅತ್ಯಂತ ಆಳವಾಗಿ ಸಂಶೋಧನೆ ನಡೆಸಿ

ತಮ್ಮ ಸಿದ್ಧಾಂತವನ್ನು ಮಂಡಿಸಿದ್ದಾರೆ. ಅದರ ಮುಖ್ಯ ತಿರುಳನ್ನು ಮುಂದಿನಂತೆ ಸಂಗ್ರಹಿಸಬಹುದು. ಸ್ವಕುಲದಲ್ಲಿ ಮದುವೆಯಾಗುವುದು ಮತ್ತು ಅಂತರ್‌ಜಾತಿಯ ಮದುವೆ ಆಗದಿರುವುದು ಜಾತಿಯ ಏಕೈಕ ಸಾರವಾಗಿದೆ. ಇದರಿಂದ ಸಮುದಾಯಗಳಲ್ಲಿ ಒಂದು ಗುಂಪು ಇನ್ನೊಂದು ಗುಂಪಿನೊಂದಿಗೆ ಬೆರೆಯದಂತೆ ಮಾಡಲಾಗಿದೆ. ಜನರನ್ನು ನಿರ್ದಿಷ್ಟ ಘಟಕಗಳಾಗಿ ಕತ್ತರಿಸಿ ಪ್ರತ್ಯೇಕಿಸಲಾಗಿದೆ. ಸ್ವಜಾತಿ ಮದುವೆಯನ್ನು ಹೇಗೆ ಕಾಪಾಡಲಾಗಿದೆ ಎಂಬುದನ್ನು ಅರಿಯುವಲ್ಲಿ ಯಶಸ್ವಿಯಾದರೆ ಅಲ್ಲಿಗೆ ಜಾತಿಯ ಉತ್ಪತ್ತಿ ಮತ್ತು ರಚನಾ ಕ್ರಮ ತಿಳಿಯುತ್ತದೆ.

ಭಾರತದಲ್ಲಿ ಸತಿಪದ್ಧತಿ ಮತ್ತು ಬಾಲ್ಯ ವಿವಾಹಗಳು ಯಾಕೆ ಹುಟ್ಟಿದವು? ಇದನ್ನು ಆಳವಾಗಿ ಪರಿಶೀಲಿಸಿದರೆ ಮುಂದಿನ ಸತ್ಯಾಂಶ ತಿಳಿಯುತ್ತದೆ. ಗಂಡ ಹೆಂಡತಿಯರಲ್ಲಿ ಮೊದಲು ಗಂಡ ಸತ್ತು ಹೆಂಡತಿ ಬದುಕಿದರೆ, ಬದುಕಿರುವ ಹೆಂಡತಿ ಅಥವಾ ಒಂದು ಹೆಣ್ಣು ಆ ಸಮುದಾಯಕ್ಕೆ ಹೆಚ್ಚುವರಿಯಾಗಿ ಭಾರವಾಗುತ್ತಾಳೆ. ಇದನ್ನು ತಡೆಯಬೇಕೆಂದರೆ ಸತ್ತ ಗಂಡನ ಶವದೊಂದಿಗೆ ಆಕೆಯನ್ನೂ ಸುಡಬೇಕು. ಇದು ಆಕೆ ತನ್ನ ಗಂಡನಿಗೆ ಸಮಾಧಿಯ ಆಚೆಗೂ ಆತ್ಮವನ್ನು ಪರಿಪೂರ್ಣವಾಗಿ ಮಿಲನಗೊಳಿಸುವ ವಿಧಾನ ಮತ್ತು ಗಂಡನಿಗೆ ತನ್ನ ಆತ್ಮವನ್ನು ಅರ್ಪಿಸುವ ಪರಿಶುದ್ಧ ಭಕ್ತಿ. ಇದು ಸತಿಪದ್ಧತಿಗೆ ಮೂಲಭೂತ ಕಾರಣ.

ಇದು ಆಗದೇ ಹೋದರೆ ಬೇರೆಯವರು ಆಕೆಯ ಶೀಲವನ್ನು ಶಂಕಿಸಿ ಅಕ್ರಮ ಸಂಬಂಧ ಹೊಂದಬಾರದು. ಇಷ್ಟು ಮಾತ್ರವಲ್ಲ; ಆಕೆ ಜೀವನ ಪರ್ಯಂತ ಬೇರೆಯ ಗಂಡಸರನ್ನು ಆಕರ್ಷಿಸಬಾರದು. ಇದಕ್ಕಾಗಿ ಆಕೆ ಯಾವುದೇ ಒಡವೆಗಳನ್ನು ಧರಿಸಬಾರದು. ಆಕೆ ತಲೆಕೂದಲನ್ನು ಬಿಡಬಾರದು. ಅದಕ್ಕಾಗಿ ಆಕೆಗೆ ಕೇಶಮುಂಡನ ಮಾಡಬೇಕು. ಮುಂದೆ ಅವಳು ಶಾಶ್ವತ ವೈಧವ್ಯ ಪಾಲಿಸಬೇಕು. ಆಕೆಗೆ ಕಡ್ಡಾಯವಾಗಿ ಮರು ಮದುವೆಗೆ ಅವಕಾಶವಿಲ್ಲ.

ಬಾಲ್ಯವಿವಾಹ: ಮದುವೆಗೂ ಮೊದಲೇ ಅಥವಾ ಪ್ರಾಯಕ್ಕೆ ಬರುವ ಮೊದಲೇ, ಅವರಲ್ಲಿ ಲೈಂಗಿಕ ಪ್ರಜ್ಞೆ ಬೆಳೆಯುವ ಮೊದಲೇ ಮುಂದೆ ಯಾರು ಯಾರನ್ನು ಪ್ರೀತಿಸಬೇಕು, ಯಾರನ್ನು ಮದುವೆಯಾಗಬೇಕು ಎಂಬುದು ನಿರ್ಣಯವಾಗಬೇಕು. ಇದಕ್ಕಾಗಿ ಹುಡುಗ ಹುಡುಗಿಯರು ಪ್ರಾಯಕ್ಕೆ ಬರುವ ಮೊದಲೇ ಮದುವೆ ಮಾಡಿಸಲಾಗುತ್ತಿತ್ತು. ಇದು ಶೀಲವನ್ನು ಶಂಕಿಸುವ ಮನೋವೃತ್ತಿಗೆ ಸಂಬಂಧಿಸಿದುದು.

ಅಸ್ಪೃಶ್ಯತೆ: ಅಸ್ಪೃಶ್ಯತೆ ಹುಟ್ಟುವ ಮೊದಲು ಹಿಂದೂಗಳು ಮತ್ತು ಅಸ್ಪೃಶ್ಯರ ನಡುವೆ ಭಿನ್ನತೆ ಇತ್ತು. ಮೂಲದಲ್ಲಿ ಬುಡಕಟ್ಟು ಜನರು ಮತ್ತು ಬುಡಕಟ್ಟುಗಳಿಂದ ಸಿಡಿದುಬಂದ ಪರಕೀಯ ಬಿಡಿಜನರ ನಡುವೆ ಭಿನ್ನತೆ ಉಂಟಾಯಿತು. ಪರಕೀಯ ಪಂಗಡಗಳಿಂದ ಸಿಡಿದ ಬಿಡಿ ಜನರೇ ಮುಂದೆ ಅಸ್ಪೃಶ್ಯರಾದರು. ಪರಕೀಯ ಪಂಗಡಗಳಿಂದ ಸಿಡಿದವರ ಬಗ್ಗೆ ತಿರಸ್ಕಾರ ಮತ್ತು ದ್ವೇಷ ಹುಟ್ಟಿದೆ. ಈ ಎರಡು ಮೂಲಗಳಿಂದ ಅಸ್ಪೃಶ್ಯತೆ ಹುಟ್ಟಿದೆ. ಪಾಶ್ಚಾತ್ಯ ವಿದ್ವಾಂಸರು ಅಸ್ಪೃಶ್ಯತೆಯ ಹುಟ್ಟಿಗೆ ಜನಾಂಗೀಯ ಭಿನ್ನತೆ ಮತ್ತು ವೃತ್ತಿ ಭಿನ್ನತೆಗಳು ಕಾರಣ ಎಂದು ಹೇಳಿದ್ದಾರೆ. ಜಾತಿಯ ಹುಟ್ಟು ಮತ್ತು ಬೆಳವಣಿಗೆಯನ್ನು ಕುರಿತು ಮಾರ್ಕ್ಸ್‌ವಾದಿಗಳ ಆಲೋಚನೆ ಇದೇ ಆಗಿದೆ. ಶ್ರಮವಿಭಜನೆಯನ್ನು ಆಧರಿಸಿ ವಿವಿಧ ವೃತ್ತಿಗಳು ಸೃಷ್ಟಿಯಾದವು. ಮುಂದೆ ಯಾರು ಯಾವ ವೃತ್ತಿ ಮಾಡುತ್ತಿದ್ದರೋ ಅದಕ್ಕೆ ಅನುಗುಣವಾಗಿ ಆಯಾ ವೃತ್ತಿ ಆಧಾರಿತ ಜಾತಿಗಳು ಹುಟ್ಟಿದವು ಎಂಬುದು ಮಾರ್ಕ್ಸ್‌ವಾದಿಗಳ ಗ್ರಹಿಕೆ. ಡಾ. ಬಾಬಾ ಸಾಹೇಬರು ಈ ವಿಧಾನ ತಪ್ಪು ಎಂದು ಮತ್ತು ಭಾರತದ ಸಾಮಾಜಿಕ ಅಸಮಾನತೆಯ ಬೆಳವಣಿಗೆಯಲ್ಲಿ ಇದಕ್ಕೆ ಯಾವುದೇ ಆಧಾರಗಳು ಇಲ್ಲ ಎಂದು ಪ್ರತಿಪಾದನೆ ಮಾಡಿದ್ದಾರೆ.

ಡಾ. ಬಾಬಾ ಸಾಹೇಬರ ಪ್ರಕಾರ, ಅಸ್ಪೃಶ್ಯರು ಮೂಲತಃ ಬೌದ್ಧರಾಗಿದ್ದರು. ಬ್ರಾಹ್ಮಣರಿಗೆ ಬೌದ್ಧರ ಮೇಲಿದ್ದ ಆಕ್ರೋಶವೇ ಅಸ್ಪೃಶ್ಯರ ಮೇಲೂ ಹರಿಯಿತು. ಇದೂ ಕೂಡಾ ಅಸ್ಪೃಶ್ಯತೆಯ ಹುಟ್ಟಿನಲ್ಲಿ ಪ್ರಬಲ ಪಾತ್ರ ವಹಿಸಿದೆ ಎಂಬುದು ಡಾ. ಬಾಬಾ ಸಾಹೇಬರ ಗ್ರಹಿಕೆ. ಭಾರತದಲ್ಲಿ ಜಾತಿ ಜಾತಿಗಳ ನಡುವೆ ಅಸಮಾನತೆ ಇದೆ; ಈ ಅಸಮಾನತೆಗಳ ನಡುವೆ ಶ್ರೇಣೀಕರಣವಿದೆ. ಈ ಶ್ರೇಣೀಕರಣದಲ್ಲಿ ಮೇಲಿನ ಶ್ರೇಣಿಯವರಿಗೆ ಕೆಳಗಿನ ಶ್ರೇಣಿಯವರ ಬಗೆಗೆ ದ್ವೇಷ, ಅಪನಂಬಿಕೆ, ಅಗೌರವ, ತಿರಸ್ಕಾರವಿದೆ. ಇದಕ್ಕೆ ವಿರುದ್ಧವಾಗಿ ಕೆಳಗಿನ ಶ್ರೇಣಿಯವರಿಗೆ ಮೇಲಿನ ಶ್ರೇಣಿಯವರ ಬಗೆಗೆ ಗೌರವ, ನಂಬಿಕೆ, ಪುರಸ್ಕಾರದ ಭಾವವಿದೆ. ಕೆಳಜಾತಿಗಳನ್ನು ಅಪಮಾನಿಸಲು, ದಮನಿಸಲು ಮತ್ತು ಹತ್ತಿಕ್ಕಲು ಮೇಲುಜಾತಿಗಳಲ್ಲಿ ಅವರವರಲ್ಲೇ ಪರಸ್ಪರ ಪೈಪೋಟಿಯೇ ಇದೆ ಎಂಬುದು ಡಾ. ಬಾಬಾಸಾಹೇಬರ ಗ್ರಹಿಕೆ.

ಡಾ. ಬಾಬಾ ಸಾಹೇಬರು ಮಾರ್ಕ್ಸ್‌ವಾದವನ್ನು ಸಂಪೂರ್ಣ ಜೀರ್ಣಿಸಿಕೊಂಡಿದ್ದರು. ಕಾರ್ಲ್ ಮಾರ್ಕ್ಸ್ ಕ್ರಾಂತಿಗೆ ಶ್ರಮಜೀವಿಗಳನ್ನು ಹುರಿದುಂಬಿಸುವಾಗ ಒಂದು ಮಾತು ಹೇಳಿದ್ದರು. ಇದು ಜಗತ್ತಿನಾದ್ಯಂತ ಚಿರಪರಿಚಿತ. 'ವರ್ಗ ಶೋಷಣೆಯನ್ನು ನಾಶ ಮಾಡಿ, ವರ್ಗ ರಹಿತ ಸಮಾಜ ನಿರ್ಮಾಣಕ್ಕೆ ಕ್ರಾಂತಿಕಾರಿ ಶ್ರಮಜೀವಿಗಳ ನೇತೃತ್ವದಲ್ಲಿ ಕ್ರಾಂತಿ ನಡೆಸಬೇಕು. ಹೀಗೆ ಕ್ರಾಂತಿ ಮಾಡಲು ತೊಡಗಿದರೆ, ಶ್ರಮಜೀವಿಗಳು ತಮ್ಮ ಶೋಷಣೆಯ ಸಂಕೋಲೆಗಳನ್ನು ಮಾತ್ರ ಕಳೆದುಕೊಳ್ಳಬೇಕಾಗುತ್ತದೆ. ಇದನ್ನು ಬಿಟ್ಟರೆ ಅವರು ಬೇರೇನನ್ನೂ ಕಳೆದುಕೊಳ್ಳಬೇಕಾಗಿಲ್ಲ'. ಈ ಮಾತು ಜಾತಿ ಅಸಮಾನತೆ ಮತ್ತು ಜಾತಿ ಶೋಷಣೆ ಇಲ್ಲದ ವರ್ಗ ಸಮಾಜದಲ್ಲಿ ನಿಜ. ಆದರೆ, ಭಾರತದ ಜಾತಿ ಸಮಾಜದಲ್ಲಿ ವರ್ಗ ಹೋರಾಟ ನಡೆಸಲು ಆಗುತ್ತದೆಯೋ ಇಲ್ಲವೊ ಗೊತ್ತಿಲ್ಲ. ಆದರೆ, ಇಲ್ಲಿ ಜಾತಿ ವಿನಾಶಕ್ಕೆ ಜಾತಿ ವಿನಾಶದ

ಹೋರಾಟ ಮಾಡಿದರೆ, ಜಾತಿ ಶೋಷಣೆ ಮಾಡುತ್ತಿರುವ ಮತ್ತು ಅದು ತಮ್ಮ ಹಕ್ಕು ಎಂದು, ಅದು ತಮ್ಮ ಪ್ರತಿಷ್ಠೆಯ ಅಧಿಕಾರ ಎಂದು ಬೀಗುತ್ತಿರುವ ಮೇಲುಜಾತಿಗಳು ತಮ್ಮ ಪ್ರತಿಷ್ಠೆಯ ಅಧಿಕಾರವನ್ನು ಕಳೆದುಕೊಳ್ಳಬೇಕಾಗುತ್ತದೆ. ಇದು ಸಾಧ್ಯವಾ? ಎಂದು ಡಾ. ಬಾಬಾ ಸಾಹೇಬರು ಪ್ರಶ್ನಿಸಿದ್ದಾರೆ.

ಡಾ. ಬಾಬಾ ಸಾಹೇಬರ ಪ್ರಕಾರ ಇಂಡಿಯಾದಲ್ಲಿ ಜಾತಿ ಮತ್ತು ವರ್ಗಗಳು ಒಂದೇ ನಾಣ್ಯದ ಎರಡು ಮುಖಗಳು. ವರ್ಗ ಮತ್ತು ಜಾತಿಗಳು ನಮ್ಮ ಪಕ್ಕದ ಬಾಗಿಲಿನ ನೆರೆಹೊರೆಗಳು. ಇವೆರಡನ್ನೂ ಬೇರೆಯಾಗಿಸಿರುವುದು ಒಂದು ಗೇಣು ಮಾತ್ರ. ಜಾತಿಯು ತನ್ನ ಸುತ್ತಲೂ ಗೋಡೆ ನಿರ್ಮಿಸಿಕೊಂಡಿರುವ ಒಂದು ವರ್ಗ. ಜಾತಿ ಮತ್ತು ವರ್ಗಗಳು ಒಂದೇ ನಾಣ್ಯದ ಎರಡು ಮುಖಗಳು ಎಂಬುದಕ್ಕೆ ಡಾ. ಬಾಬಾ ಸಾಹೇಬರು ಸರಿಯಾದ ಉದಾಹರಣೆ ಕೊಟ್ಟಿದ್ದಾರೆ. ಆಧುನಿಕ ವೃತ್ತಿಗಳಲ್ಲಿ ವೈದ್ಯರು, ಎಂಜಿನಿಯರ್‌ಗಳು, ಪ್ರೊಫೆಸರ್‌ಗಳು ತಮ್ಮ ವೃತ್ತಿಗಳ ಆರ್ಥಿಕ ಸಂವಾದನೆಗೆ ಸಂಬಂಧಿಸಿದಂತೆ ವರ್ಗಗಳು. ಅದೇ ಕಾಲಕ್ಕೆ ಇದೇ ವೈದ್ಯರಲ್ಲಿ, ಎಂಜಿಯರ್‌ಗಳಲ್ಲಿ ಮತ್ತು ಪ್ರೊಫೆಸರ್‌ಗಳಲ್ಲಿ ಎವಿಧ ಜಾತಿ ಶ್ರೇಣೀಕರಣಗಳಿವೆ. ಹಾಗಾಗಿ ವರ್ಗದೊಳಗೆ ಜಾತಿ; ಜಾತಿಯೊಳಗೆ ವರ್ಗ ಕ್ರಿಯಾಶೀಲವಾಗಿದೆ ಎಂಬುದು ಡಾ. ಬಾಬಾ ಸಾಹೇಬರ ಸಿದ್ಧಾಂತ.

ಜಾತಿ ವಿನಾಶ ಕುರಿತು: ಭಾರತದ ಸಮಾಜವಾದಿಗಳು ಮತ್ತು ಕಮ್ಯೂನಿಸ್ಟರು ಎಲ್ಲಾ ಸಮಸ್ಯೆಗಳ ಮೂಲ ಮತ್ತು ಪರಿಹಾರವನ್ನು ಆರ್ಥಿಕ ಮೂಲದಲ್ಲಿ ಗ್ರಹಿಸುತ್ತಾರೆ. ಇಲ್ಲಿ ಆರ್ಥಿಕ ಸಮಾನತೆ ಬಂದರೆ ಉಳಿದೆಲ್ಲ ಸಮಾನತೆಗಳು ತಾವಾಗಿಯೇ ಬರುತ್ತವೆ ಎಂಬುದು ಅವರ ಗ್ರಹಿಕೆ. ಡಾ. ಬಾಬಾ ಸಾಹೇಬರ ಪ್ರಕಾರ ಮೂಲಭೂತವಾಗಿ ಈ ಗ್ರಹಿಕೆಯೇ ತಪ್ಪು. ಭಾರತದಲ್ಲಿ ಧರ್ಮವು ಶಕ್ತಿಯ ಮೂಲವಾಗಿದೆ. ಹಾಗಾಗಿ ಲಕ್ಷಾಧೀಶರು ಎಂದೋ ನಿಧನರಾದ ಸಾಧು ಫಕೀರರಿಗೆ ವಿಧೇಯರಾಗಿದ್ದಾರೆ. ಬಡವರು ತಮ್ಮ ವಸ್ತು ಒಡವೆಗಳನ್ನು ಅಡವಿಟ್ಟು ಕಾಶಿಗೊ, ರಾಮೇಶ್ವರಕ್ಕೊ, ಮೆಕ್ಕಾಕ್ಕೊ ಯಾತ್ರೆ ಹೋಗುತ್ತಾರೆ. ಒಬ್ಬ ನ್ಯಾಯಧೀಶನಿಗಿಂತಲೂ ಒಬ್ಬ ಧರ್ಮ ಗುರು ಜನರ ಮೇಲೆ ಪ್ರಭಾವ ಬೀರುತ್ತಾನೆ. ಇದನ್ನು ಚರ್ಚೆ ಮಾಡಿ ಡಾ. ಬಾಬಾ ಸಾಹೇಬರು 'ಒಬ್ಬ ಮನುಷ್ಯ ಮತ್ತೊಬ್ಬನ ಸ್ವಾತಂತ್ರ್ಯವನ್ನು ನಿಯಂತ್ರಿಸುವ ಅಧಿಕಾರ ಧರ್ಮದಿಂದ ಒದಗುತ್ತದೆ' ಎಂದಿದ್ದಾರೆ. ಇದು ಬಹಳ ಮುಖ್ಯವಾದ ಸಂಗತಿ.

ಜಾತಿ ವಿನಾಶವಾಗಬೇಕಾದರೆ ಬಹಳ ದೊಡ್ಡ ಪ್ರಮಾಣದಲ್ಲಿ ಅಂತರ್‌ಜಾತಿ ವಿವಾಹಗಳು ನಡೆಯಬೇಕು. ಆದರೆ, ಭಾರತದಲ್ಲಿ ಅಂತರ್‌ಜಾತಿಯ ವಿವಾಹಗಳು ನಡೆಯದಂತೆ ಧರ್ಮ ಮತ್ತು ಧರ್ಮದ ಮೇಲೆ ಜನರು ಇಟ್ಟಿರುವ ನಂಬಿಕೆ ಅಡ್ಡಿಯಾಗಿದೆ. ಅಂತರ್‌ಜಾತಿಯ ವಿವಾಹ ಆಗಬಾರದು ಎಂಬುದು ಧರ್ಮದ ಒಳಗೆ ಅವಿತಿರುವ ಕ್ರೂರ ಕಾನೂನುಗಳ ಆಜ್ಞೆ ಮತ್ತು ಆದೇಶ. ಈ ಕ್ರೂರ ಕಾನೂನುಗಳೇ ಧರ್ಮದ ವೇಷ ಧರಿಸಿವೆ. ಜನರು ಧರ್ಮಕ್ಕೆ ಬೆಲೆ ಕೊಡುತ್ತಿದ್ದೇವೆ, ಧರ್ಮದ ಮೇಲಿನ ನಂಬಿಕೆಗೆ ಗೌರವ ಕೊಡುತ್ತಿದ್ದೇವೆ ಎಂಬ ಭ್ರಮೆಯಲ್ಲಿ, ಧರ್ಮದೊಳಗಿರುವ ಅಸಮಾನತೆಯನ್ನು ಪ್ರತಿಪಾದನೆ ಮಾಡುವ ಕ್ರೂರ ಕಾನೂನುಗಳಿಗೆ ಗೌರವ ಕೊಡುತ್ತಿದ್ದಾರೆ. ಇದರಿಂದಲೇ ಸಾಮಾಜಿಕ ಅಸಮಾನತೆಯನ್ನು ಮುಂದುವರಿಸಲಾಗುತ್ತಿದೆ. ಅಸಮಾನತೆಯನ್ನು ಪ್ರತಿಪಾದನೆ ಮಾಡುವ ಯಾವುದೇ ಧರ್ಮವು ಸಂಪೂರ್ಣ ಕೊಳೆತು ಹೋಗಿರುತ್ತದೆ ಮತ್ತು ಅದು ಸಂಪೂರ್ಣ ಕಲುಷಿತಗೊಂಡಿರುತ್ತದೆ; ಮಲಿನವಾಗಿರುತ್ತದೆ. ಅಂತಹ ಧರ್ಮ ಜನರ ಮನಸ್ಸನ್ನು ಸಂಪೂರ್ಣ ಮಲಿನಗೊಳಿಸಿರುತ್ತದೆ. ಸಮಾನತೆ, ಸಹಬಾಳ್ವೆಯ ಸಮಾಜವನ್ನು ನಿರ್ಮಾಣ ಮಾಡಬೇಕಾದವರು ಕಲುಷಿತಗೊಂಡು ಕೊಳೆತು ಹೋಗಿರುವ ಧರ್ಮವನ್ನು ಬಿಡಬೇಕಾಗುತ್ತದೆ. ಆ ಮೂಲಕ ತಮ್ಮ ಮನಸ್ಸು ಮತ್ತು ಹೃದಯದಲ್ಲಿ ಧರ್ಮವು ತುಂಬಿರುವ ಮಲಿನತೆಯನ್ನು ತೊಳೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಬದಲಿಯಾಗಿ ಸಮಾನತೆಯನ್ನು ಪ್ರತಿಪಾದನೆ ಮಾಡುವ ಧರ್ಮವನ್ನು ಸ್ವೀಕರಿಸಬೇಕಾಗುತ್ತದೆ ಮತ್ತು ನಂಬಬೇಕಾಗುತ್ತದೆ. ಈ ದೃಷ್ಟಿಯಿಂದಲೆ ಡಾ. ಬಾಬಾ ಸಾಹೇಬರು ಇಡೀ ಜಗತ್ತಿನಲ್ಲಿ ಸಮಾನತೆಯನ್ನು ಪ್ರತಿಪಾದನೆ ಮಾಡುವ ಏಕೈಕ ಧರ್ಮವಾಗಿರುವ ಅರ್ಥಾತ್ ದಮ್ಮವಾಗಿರುವ ಬೌದ್ಧ ಧರ್ಮವನ್ನು ಸ್ವೀಕರಿಸಬೇಕೆಂದು ಪ್ರತಿಪಾದನೆ ಮಾಡಿದರು. ಲಕ್ಷಾಂತರ ಜನರೊಂದಿಗೆ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಈ ದೃಷ್ಟಿಯಲ್ಲಿ ಜಾತಿ ವಿನಾಶಕ್ಕೂ ಮತ್ತು ಬೌದ್ಧ ಧರ್ಮ ನಂಬಿಕೆಗೂ ನೇರವಾದ ಸಂಬಂಧವಿದೆ.

ಡಾ. ಬಾಬಾ ಸಾಹೇಬರು ಬೌದ್ಧ ಧರ್ಮವನ್ನು ಸ್ವೀಕರಿಸುವುದಕ್ಕೆ ಮೊದಲು ಇಡೀ ಪ್ರಪಂಚದ ವಿವಿಧ ಧರ್ಮಗಳನ್ನು ಮತ್ತು ವಿವಿಧ ಧರ್ಮಗ್ರಂಥಗಳನ್ನು ಅತ್ಯಂತ ಆಳವಾಗಿ ಅಧ್ಯಯನ ಮಾಡಿದರು. ಪ್ರಪಂಚದ ಎಲ್ಲ ಧರ್ಮಗಳ ಮುಖ್ಯ ಸಾರವನ್ನು ಅರಿತುಕೊಂಡರು. ಇದರ ಪ್ರಕಾರ, ಪ್ರಪಂಚದ ಪ್ರತಿಯೊಂದು ಧರ್ಮವೂ ಕೂಡ "ಬ್ರಹ್ಮಾಂಡ ಹೇಗೆ ಸೃಷ್ಟಿಯಾಗಿದೆ, ಇದು ಹೇಗೆ ನಾಶವಾಗುತ್ತದೆ? ವಿಶ್ವದ ಸೃಷ್ಟಿ ಹೇಗೆ? ಅದರ ನಾಶ ಹೇಗೆ?" ಎಂಬುದನ್ನು ಕುರಿತು ಪ್ರತಿಪಾದನೆ ಮಾಡಿವೆ. ಆಯಾ ಧರ್ಮಗಳ ಸಂಸ್ಥಾಪಕರು ತಮ್ಮನ್ನು ಪ್ರತ್ಯಕ್ಷ ದೇವರು ಅಥವಾ ದೇವರ ಸ್ವರೂಪಿ ಎಂದು ಕರೆದುಕೊಂಡಿದ್ದಾರೆ. ಆದರೆ, ಇಡೀ ಪ್ರಪಂಚದಲ್ಲಿ ಮನುಷ್ಯರ ಬಗೆಗೆ ಆಲೋಚನೆ ಮಾಡಿರುವ ಏಕೈಕ ಧರ್ಮ ಬೌದ್ಧ ಧರ್ಮ. ಬೌದ್ಧ ಧರ್ಮ ಮಾನವರ ಜಗತ್ತಿನಲ್ಲಿ ದುಃಖವಿದೆ; ಈ ದುಃಖಕ್ಕೆ ಮೂಲಭೂತವಾದ ಕಾರಣವಿದೆ; ಈ ಕಾರಣದ ವಿನಾಶಕ್ಕೆ ಮಾರ್ಗವಿದೆ ಎಂದು ಪ್ರತಿಪಾದನೆ ಮಾಡಿದೆ. ಬುದ್ಧ ಎಲ್ಲೆಲ್ಲೂ ತನ್ನನ್ನು ಧರ್ಮ ಸಂಸ್ಥಾಪಕನೆಂದು ಮತ್ತು ತಾನೇ ಪ್ರತ್ಯಕ್ಷ ದೇವರು ಎಂದು ಹೇಳಿಕೊಂಡಿಲ್ಲ. ಬೌದ್ಧ ಧರ್ಮವು ದುಃಖದಿಂದ ಕೂಡಿರುವ

ಅಸಮಾನತೆಯ ವ್ಯವಸ್ಥೆಯನ್ನು ಬದಲಾಯಿಸಬಹುದೆಂದು ಪ್ರತಿಪಾದನೆ ಮಾಡಿದೆ. ಕಾರ್ಲ್ ಮಾರ್ಕ್ಸ್ ಯಾವುದನ್ನು ಖಾಸಗಿ ಆಸ್ತಿಯೇ ಮಾನವ ಸಮಾಜದ ಎಲ್ಲಾ ಸಮಸ್ಯೆಗೆ ಮೂಲ ಕಾರಣ ಎಂದು ಪ್ರತಿಪಾದನೆ ಮಾಡಿದ್ದಾನೆಯೋ ಅದನ್ನು ಬುದ್ಧ ಅಸಮಾನತೆಯ ಕಾರಣದಿಂದ ಹುಟ್ಟಿರುವ ಆಸೆಯೇ ಮಾನವ ಸಮಾಜದ ಎಲ್ಲಾ ಸಮಸ್ಯೆಗೆ ಮೂಲ ಕಾರಣ ಎಂದು ಎರಡೂವರೆ ಸಾವಿರ ವರ್ಷಗಳ ಹಿಂದೆಯೇ ಪ್ರತಿಪಾದನೆ ಮಾಡಿದ್ದಾನೆ.

ಡಾ. ಬಾಬಾ ಸಾಹೇಬರು ಬೌದ್ಧ ಧರ್ಮವನ್ನು ಕುರಿತು ಹೀಗೆ ವ್ಯಾಖ್ಯಾನಿಸಿದ್ದಾರೆ: ಧರ್ಮವು ದೇವರ ಅಸ್ತಿತ್ವದ ಬಗೆಗೆ ಆಲೋಚಿಸುತ್ತದೆ; ದಮ್ಮವು ಮನುಷ್ಯ ಸಮಾಜದ ಬಗೆಗೆ ಆಲೋಚಿಸುತ್ತದೆ. ಧರ್ಮಕ್ಕೂ ಮತ್ತು ದಮ್ಮಕ್ಕೂ ಈ ಕಾರಣದಿಂದ ಅತ್ಯಂತ ಮೂಲಭೂತವಾದ ವ್ಯತ್ಯಾಸವಿದೆ.

ಬುದ್ಧ ದಮ್ಮದ ಕೇಂದ್ರ ತಿರುಳನ್ನು ಡಾ. ಬಾಬಾ ಸಾಹೇಬರು ಮುಖ್ಯವಾದ ಆರು ಪರಿಕಲ್ಪನೆಗಳಲ್ಲಿ ವ್ಯಾಖ್ಯಾನಿಸಿದ್ದಾರೆ. ಅವು ಹೀಗಿವೆ. (1) ಅಸಮಾನ –> (2) ಉದ್ದೀಪನ –> (3) ಮಲಿನ –> (4) ಉಪಶಮನ –> (5) ಶಮನ –> (6) ಸಮಾನ.

ಸಂಪತ್ತು, ಅಧಿಕಾರ, ಹಕ್ಕು ಮುಂತಾದುವುಗಳ ಅಸಮಾನತೆಯಿಂದ ಮಾನವರಲ್ಲಿ ದುಃಖ, ಅಶಾಂತಿ ಸೃಷ್ಟಿಯಾಗುತ್ತದೆ. ತಾನು ಅವುಗಳನ್ನು ಪಡೆಯಬೇಕೆಂಬ ಆಸೆ ಹುಟ್ಟಿ ಅದು ಇಂದ್ರಿಯಗಳನ್ನು ಉದ್ದೀಪನಗೊಳಿಸುತ್ತದೆ. ಈ ಉದ್ದೀಪನದಿಂದ ಮಾನವರ ಇಂದ್ರಿಯಗಳು ಮಲಿನವಾಗುತ್ತವೆ. ಮಾನವರ ಇಂದ್ರಿಯಗಳು ಮಲಿನವಾಗಿರುವುದೇ ಮಾನವರ ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣ. ಹಾಗಿದ್ದರೆ ಮುಂದಿನ ದಾರಿ ಯಾವುದು? ಒಂದೋ ಇಂದ್ರಿಯಗಳ ಮಲಿನತೆಯನ್ನು ಉಪಶಮನಗೊಳಿಸಬೇಕು; ಇಲ್ಲವೆ ಇಂದ್ರಿಯಗಳ ಮಲಿನತೆಯನ್ನು ಶಮನಗೊಳಿಸಬೇಕು; ನಾಶ ಮಾಡಬೇಕು. ಇಂದ್ರಿಯಗಳ ಮಲಿನತೆಯನ್ನು ಉಪಶಮನಗೊಳಿಸುವುದು ತಾತ್ಕಾಲಿಕ ಪರಿಹಾರವಷ್ಟೆ. ಅದು ಶಾಶ್ವತ ಪರಿಹಾರವಲ್ಲ. ಆದರೆ ಇಂದ್ರಿಯಗಳ ಮಲಿನತೆಯನ್ನು ಸಂಪೂರ್ಣ ನಾಶ ಮಾಡಿದರೆ ಅದರ ಪರಿಣಾಮವಾಗಿ ಆಸೆ ಹುಟ್ಟುವುದಿಲ್ಲ, ಅದು ದುರಾಸೆಯಾಗುವುದಿಲ್ಲ, ದುಃಖ ಹುಟ್ಟುವುದಿಲ್ಲ. ಎಲ್ಲವೂ ತನಗೇ ಬೇಕು ಎಂಬ ಖಾಸಗಿ ಆಸ್ತಿಯ ಪ್ರಜ್ಞೆ ಹುಟ್ಟುವುದಿಲ್ಲ. ಈ ಮೂಲಕ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪನೆ ಮಾಡಬಹುದು. ಇದು ಡಾ. ಬಾಬಾ ಸಾಹೇಬರು ಬುದ್ಧ ದಮ್ಮವನ್ನು ಕುರಿತು ಮಾಡಿರುವ ವ್ಯಾಖ್ಯಾನದ ಕೇಂದ್ರ ತಿರುಳು.

ಈಗ ನಾವು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿದ್ದೇವೆ. ಎಲ್ಲ ಬಗೆಯ ಅಪಮಾನ ಹಾಗೂ ಅಸಮಾನತೆಗಳನ್ನು ವಿರೋಧಿಸುವ ಪ್ರಜ್ಞೆ ಬಂದಿದೆ. ಅಸಮಾನತೆಯು ಅಭಿಮಾನದ ಮತ್ತು ಗೌರವದ ಬದುಕನ್ನು ಕಿತ್ತುಕೊಳ್ಳುತ್ತದೆ. ಸ್ವಾಭಿಮಾನ ಮತ್ತು ಗೌರವದ ಬದುಕು ಬೇಕೆನ್ನುವವರು ಸಹಜವಾಗಿ ಸಮಾನತೆಗೆ ಹೋರಾಡುತ್ತಾರೆ. ಮಹಿಳೆಯರು, ದಮನಿತರು ಮತ್ತು ಶೋಷಿತರು ಇದಕ್ಕಾಗಿ ಹೋರಾಡುತ್ತಾರೆ. ಇವರು ಸಮಾನತೆಗಾಗಿ ಹೋರಾಡುವುದು ಅಪಮಾನ ಮಾಡುವ ಮತ್ತು ಶೋಷಣೆ ಮಾಡುವ ಜನರ ಎದೆಗೆ ಬೆಂಕಿ ಬಿದ್ದಂತೆ ಮಾಡುತ್ತದೆ. ಶೋಷಣೆ ಮತ್ತು ಅಪಮಾನ ಮಾಡುವ ತಮ್ಮ ಪ್ರತಿಷ್ಠೆಯ ಅಧಿಕಾರವನ್ನು ಕಿತ್ತುಕೊಂಡಂತೆ ಆಗುತ್ತದೆ. ಇದನ್ನು ತಡೆದುಕೊಳ್ಳಲಾಗದೆ ಮಹಿಳೆಯರು, ದಮನಿತರು ಮತ್ತು ಶೋಷಿತರ ಮೇಲೆ ಸಂಚಿನಿಂದ ದೌರ್ಜನ್ಯ ಮಾಡುತ್ತಾರೆ. ಇದನ್ನು ಡಾ. ಬಾಬಾ ಸಾಹೇಬರು ಭಾರತದ ಸೋಷಿಯಲ್ ಸೈಕಾಲಜಿ ಎಂದಿದ್ದಾರೆ. ಈ ಕಾರಣದಿಂದಲೇ ಈಚಿನ ದಿನಗಳಲ್ಲಿ ದೌರ್ಜನ್ಯಗಳು ಜಾಸ್ತಿಯಾಗಿವೆ.

ಭಾರತದ ಸಂವಿಧಾನ: ಭಾರತದ ಸಂವಿಧಾನವನ್ನು ಭಾರತದ ನ್ಯಾಯಾಂಗ ವ್ಯವಸ್ಥೆಯಲ್ಲಿ ಬಳಕೆ ಮಾಡಲಾಗುತ್ತಿದೆ. ಅದನ್ನು ಬಿಟ್ಟರೆ ಬೌದ್ಧಿಕ ವಲಯದಲ್ಲಿ ಭಾರತದ ಸಂವಿಧಾನದ ಬಗೆಗೆ ಹಲವು ಚರ್ಚೆ, ಸಂವಾದ, ವ್ಯಾಖ್ಯಾನಗಳು ನಡೆದಿವೆ; ನಡೆಯುತ್ತಿವೆ. ಭಾರತದ ಸಂವಿಧಾನದ ಕೇಂದ್ರಶಕ್ತಿಯ ಮುಖ್ಯ ನೆಲೆಯನ್ನು ಕಣ್ತುಂಬಿಕೊಂಡು ನೋಡುವ ಅಗತ್ಯವಿದೆ. ಭಾರತದ ಸಂವಿಧಾನದಲ್ಲಿ ಹಕ್ಕುಗಳು ಇವೆ, ಅದರಲ್ಲಿ ಸಾಮಾಜಿಕ ನ್ಯಾಯದ ತಳಹದಿ ಇದೆ, ಹೀಗೆಲ್ಲ ವ್ಯಾಖ್ಯಾನಗಳು ನಡೆದಿವೆ. ಇವೆಲ್ಲವೂ ಸರಿ. ಆದರೆ, ಈ ಎಲ್ಲಕ್ಕಿಂತ ಮುಖ್ಯವಾದ ಒಂದು ಮಹತ್ವದ ನೆಲೆ ಇದೆ. ಭಾರತದ ಸಂವಿಧಾನ ಜನರ ಬದುಕನ್ನು ಮಾತ್ರ ಕುರಿತ ಕಾನೂನುಗಳನ್ನು ಒಳಗೊಂಡಿಲ್ಲ. ಇದು ಪ್ರಾಣಿ, ಪಕ್ಷಿ, ನದಿ, ಹೊಳೆ, ಹಳ್ಳ, ಮರಳು, ಖನಿಜ ಸಂಪತ್ತು, ಪ್ರಾಕೃತಿಕ ಸಂಪತ್ತು ಇವೆಲ್ಲದರ ಬಗೆಗೂ ಕಾಳಜಿಯ ಕಾನೂನುಗಳನ್ನು ಹೊಂದಿದೆ. ಇಲ್ಲಿ ಮನುಷ್ಯರು ಮಾತ್ರ ಹಕ್ಕು ಹಾಗೂ ಕರ್ತವ್ಯಗಳನ್ನು ಪಾಲಿಸುತ್ತಾ ಬದುಕಬೇಕು ಎಂದು ಹೇಳುವುದಕ್ಕೆ ಮಾತ್ರ ತನ್ನನ್ನು ಸೀಮಿತ ಮಾಡಿಕೊಂಡಿಲ್ಲ. ನಿಸರ್ಗವನ್ನು ಅನಗತ್ಯವಾಗಿ ಮತ್ತು ಅನವಶ್ಯಕವಾಗಿ ಸ್ವಾರ್ಥ ಮತ್ತು ಭೋಗ ಜೀವನಕ್ಕಾಗಿ ನಾಶ ಮಾಡದೆ ಅದರೊಂದಿಗೆ ಒಟ್ಟಾಗಿ ಬಾಳಬೇಕು ಎಂಬುದನ್ನು ಪ್ರತಿಪಾದನೆ ಮಾಡಿದೆ. ನಿಸರ್ಗ ಸಂಪತ್ತು, ಪ್ರಾಣಿ ಪಕ್ಷಿಗಳು, ಮರ ಗಿಡ ಇವುಗಳನ್ನು ನಾಶ ಮಾಡುವುದು ಶಿಕ್ಷಾರ್ಹ ಅಪರಾಧವೆಂದು ಭಾರತದ ಸಂವಿಧಾನ ಪ್ರತಿಪಾದನೆ ಮಾಡಿದೆ. ನಿರ್ದಿಷ್ಟ ಪ್ರಕರಣಗಳಲ್ಲಿ ಗಲ್ಲಿಗೇರಿಸಬಹುದಾದವರಿಗೂ ಅದರಿಂದ ರಿಯಾಯಿತಿ ಕೊಡುವ ಅವಕಾಶವನ್ನು ಭಾರತದ ಸಂವಿಧಾನ ಕೊಟ್ಟಿದೆ. ಈ ದೃಷ್ಟಿಯಿಂದ ಭಾರತದ ಸಂವಿಧಾನವು ದಯೆ ಮತ್ತು ಕರುಣೆಯನ್ನು ಪ್ರತಿಪಾದನೆ ಮಾಡಿದೆ. ಇದನ್ನು ಡಾ. ಬಾಬಾ ಸಾಹೇಬರು ಬುದ್ಧ ಗುರುವಿನ ಬೆಳಕಿನಲ್ಲಿ ರೂಪಿಸಿದ್ದಾರೆ. ಇದು ಭಾರತ ಸಂವಿಧಾನದ ಹೃದಯ ಭಾಗ. ಹಾಗಾಗಿಯೇ ಡಾ ಬಾಬಾ ಸಾಹೇಬರು ಎಲ್ಲ ಕಾಲದ ಬೆಳಕು.●

ISBN: 2582-4856

ಸಾಮಾಜಿಕ ಪರಿವರ್ತನೆಗಾಗಿ

ಭೀಮವಾದ

Bheemavaadha

Kannada Monthly

ಮಾಸಪತ್ರಿಕೆ

December- 2023 | Rs 30/- Vol-14 | Issue-4



ನವೆಂಬರ್ 26 ಸಂವಿಧಾನದ ದಿನದ ಮಹತ್ವ

ಒಳಪುಟಗಳಲ್ಲಿ

12 ಭಾರತದ ಸಂವಿಧಾನ ಮತ್ತು ಡಾ. ಬಾಬಾಸಾಹೇಬ್ ಅಂಬೇಡ್ಕರರ ಆಶಯಗಳು

5 ತಥಾಗತ ಬುದ್ಧತೋರಿದ ಧಮ್ಮಪದ

9 ನವೆಂಬರ್ 26 ಸಂವಿಧಾನದ ದಿನದ ಮಹತ್ವ

26 ನನ್ನದಲ್ಲದ ನೆಲದಲ್ಲಿ ನನ್ನವರ ನೆನೆದು
ಡಾ. ಎಚ್. ಟಿ. ಪೋತೆ

32 ಕಸ್ತೂರಬಾ ಮತ್ತು ರಮಾಬಾಯಿ ನೆಲದ ಋಣ ತೀರಿಸಿದವರು

ಚಂದಾ ವಿವರ
ಬಿಡಿ ಪ್ರತಿ : ರೂ. 30/-
ವಾರ್ಷಿಕ : ರೂ. 300/-
3 ವರ್ಷದ ಪ್ರೋತ್ಸಾಹ ಧನ : ರೂ. 1.500/-
ಆಜೀವ ಚಂದಾ : ರೂ. 5.000
ಪೋಷಕ ಚಂದಾ : ರೂ. 10.000/-

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಮುಖಪುಟ ವಿನ್ಯಾಸ: ಅರಳಿ

ಪ್ರಧಾನ ಸಂಪಾದಕರು
ಡಾ.ಆರ್.ಮೋಹನ್‌ರಾಜ್

ಸಹ ಸಂಪಾದಕರು
ಡಾ.ಕೆ.ಎ.ಓಬಳೇಶ್
ಸದಾನಂದ ಗಂಗನಬೀಡು
ಎಸ್.ಡಿ.ರಾಯಮಾನೆ
ರಾಜು ಎಂ. ತಳವಾರ್
ಡಾ. ಜಯದೇವಿ ಗಾಯಕವಾಡ

ಚಂದಾದಾರರ ಗಮನಕ್ಕೆ : 'ಭೀಮವಾದ' ಮಾಸ ಪತ್ರಿಕೆಗೆ ಚಂದಾದಾರರಾಗುವವರು/ ನವೀಕರಿಸುವವರು ಹಾಗೂ ಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ಪತ್ರಿಕೆಯ ವ್ಯವಸ್ಥಾಪಕರ ಸಂಪರ್ಕಿಸಬೇಕಾಗಿ ವಿನಂತಿ.
ವಿ.ಸೂ: ಚೆಕ್ಕುಗಳನ್ನು ಸ್ವೀಕರಿಸುವುದಿಲ್ಲ. ಎಂ.ಓ/ ಡಿ.ಡಿ ಮಾತ್ರ ಕಳುಹಿಸಬೇಕು. ಡಿಡಿಗಳು 'ಭೀಮವಾದ' ಹೆಸರಿನಲ್ಲಿರಲಿ. ಬ್ಯಾಂಕಿಗೆ ನೇರವಾಗಿ ಹಣ ಸಂದಾಯ ಮಾಡುವವರು ಈ ಕೆಳಗಿನ ಖಾತೆಗೆ ಕಳುಹಿಸುವುದು :
A/c Name : BHEEMAVAADHA, Bank Name : Union Bank of India, Branch : Gandhi Nagar, 14, 1st Main Road, Gandhinagar, Bangalore-9
A/c No : 353101010036315 IFS Code : UBIN0535311

ಭಾರತದ ಸಂವಿಧಾನ ಮತ್ತು ಡಾ. ಬಾಬಾಸಾಹೇಬ್ ಅಂಬೇಡ್ಕರರ ಆಶಯಗಳು



• ಡಾ. ಬಿ.ಎಂ. ಪುಟ್ಟಯ್ಯ

ಭಾರತದೊಳಗಿನ ವರ್ಗ, ಜಾತಿ, ಧರ್ಮ, ಸಂಸ್ಕೃತಿ, ಭಾಷೆ, ಲಿಂಗ ಇವುಗಳ ಶ್ರೇಣೀಕೃತ ಅಸಮಾನತೆ ಕುದಿಯುವುದಕ್ಕೆ ಶುರುವಾಗಿತ್ತು. ಬಲಾಢ್ಯರು ಇವುಗಳ ಉಪಯೋಗ ಪಡೆಯಲು ಮುಂದಾಗಿದ್ದರು. ಅಸಹಾಯಕರನ್ನು ಅಂಚಿಗೆ ತಳ್ಳುವ ಸಂಚು ಮುಂದುವರೆದಿತ್ತು. ಹೀಗಾಗಿ ಭಾರತದೊಳಗಿನ ಹಲವು ಆತಂಕಗಳು ತೀವ್ರವಾಗಿದ್ದವು. ಅಂದರೆ ಭಾರತದಲ್ಲಿ ಸಂವಿಧಾನವನ್ನು ರಚನೆ ಮಾಡುವಾಗ ಭಾರತದ ಸಾಮಾಜಿಕ ಪರಿಸ್ಥಿತಿ ಮತ್ತು ಜಾಗತಿಕ ಮಟ್ಟದ ರಾಜಕೀಯ ಪರಿಸ್ಥಿತಿ ತಿಳಿಯಾಗಿ ಇರಲಿಲ್ಲ. ಅವು ಅತ್ಯಂತ ಏರಿಳಿತಗಳಿಂದ, ತೀವ್ರವಾದ ಬಿಕ್ಕಟ್ಟುಗಳಿಂದ ಹಾಗೂ ಆತಂಕಗಳಿಂದ ಕೂಡಿದ್ದವು. ಪರಿಸ್ಥಿತಿಯು ಸಮಾಧಾನವಾಗಿದ್ದಾಗ ಸಂವಿಧಾನ ರಚನೆ ಮಾಡುವುದಕ್ಕೂ ಮತ್ತು ಪರಿಸ್ಥಿತಿಯು ತೀವ್ರವಾದ ಬಿಕ್ಕಟ್ಟಿನಲ್ಲಿದ್ದಾಗ ಸಂವಿಧಾನ ರಚನೆ ಮಾಡುವುದಕ್ಕೂ ಬಹಳ ವ್ಯತ್ಯಾಸ ಇರುತ್ತದೆ. ಇದನ್ನು ಬಹಳ ಸೂಕ್ಷ್ಮವಾಗಿ ಮತ್ತು ಅಷ್ಟೇ ಗಂಭೀರವಾಗಿ ಪರಿಗಣಿಸಬೇಕು.

ಭಾರತದ ಸಂವಿಧಾನವನ್ನು ಯಾಕೆ ಓದಬೇಕು ಮತ್ತು ಅದನ್ನು ಕುರಿತು ಯಾಕೆ ಚರ್ಚೆ ಮಾಡಬೇಕು ಎಂಬುದು ಮೊದಲನೆಯ ಮುಖ್ಯ ಪ್ರಶ್ನೆ. ಅನೇಕರು ಹೇಳುತ್ತಾರೆ: ಇದು ಜನರನ್ನು ಜಾಗೃತಗೊಳಿಸಲು, ಅವರಿಗೆ ಸಂವಿಧಾನದ ಬಗೆಗೆ ಹಾಗೂ ಕಾನೂನುಗಳ ಬಗೆಗೆ ಅರಿವು ಮೂಡಿಸಲು ಎಂದು. ನನಗೆ ಯಾಕೋ ಈ ಉತ್ತರ ತೃಪ್ತಿಕರ ಎನಿಸುತ್ತಿಲ್ಲ. ಹಾಗಾಗಿ ಈ ಬಗೆಗೆ ನನಗೆ ಏನು ಅನಿಸುತ್ತದೆ ಅಂದರೆ ಸಂವಿಧಾನವನ್ನು ಓದುವುದು ಮತ್ತು ಅದರ ಬಗೆಗೆ ಚರ್ಚೆ ಸಂವಾದ ಮಾಡುವುದು ನಮ್ಮನ್ನು ನಾವೇ ಆತ್ಮ ವಿಮರ್ಶೆ ಮಾಡಿಕೊಳ್ಳಲು, ಸ್ವ ವಿಮರ್ಶೆ ಮಾಡಿಕೊಳ್ಳಲು, ನಮ್ಮ ಅಂತರಂಗವನ್ನು ಸರಿಯಾಗಿಟ್ಟುಕೊಳ್ಳಲು ಮತ್ತು ಇನ್ನೂ ಮುಖ್ಯವಾಗಿ ದೇಶವನ್ನು ಕಟ್ಟುವ ಕೆಲಸದಲ್ಲಿ ನಮ್ಮನ್ನು ಪ್ರಾಮಾಣಿಕವಾಗಿ ತೊಡಗಿಸಿಕೊಳ್ಳಲು ಭಾರತದ ಸಂವಿಧಾನವನ್ನು ಓದಬೇಕು ಹಾಗೂ ಮಾತನಾಡಬೇಕು ಅಂತ ನನಗೆ ಅನಿಸಿದೆ.

ಭಾರತದ ಸಂವಿಧಾನದ ರಚನೆಯ ಕಾಲವನ್ನು ಸೂಕ್ಷ್ಮವಾಗಿ ಅವಲೋಕನ ಮಾಡಬೇಕು. ಈ ಅವಲೋಕನವು ಭಾರತದ ಪರಿಸ್ಥಿತಿ ಹಾಗೂ ಜಾಗತಿಕ ಪರಿಸ್ಥಿತಿಗಳನ್ನು ಆಧರಿಸಿರಬೇಕು. ನನ್ನ ಆಲೋಚನೆಯ ಪ್ರಕಾರ ಅದು ರಾಷ್ಟ್ರ ಮಟ್ಟದಲ್ಲಿ ಮತ್ತು ಜಾಗತಿಕ ಮಟ್ಟದಲ್ಲಿ ಒಂದು ತೀವ್ರವಾದ ಆತಂಕದ ಕಾಲವಾಗಿತ್ತು. ಅದನ್ನು ಅರ್ಥಮಾಡಿಕೊಳ್ಳುತ್ತಲೇ ಅಂತಹ ಆತಂಕಗಳಿಂದ ಮುಕ್ತರಾಗುವುದು ಹೇಗೆ ಎಂಬ ದೊಡ್ಡ ಸವಾಲುಗಳು ಸಂವಿಧಾನದ ರಚನೆಯ ಮುಂದಿದ್ದವು.

ಆಗ ಎರಡನೇ ಪ್ರಪಂಚ ಯುದ್ಧ ಮುಗಿಯುತ್ತಿದ್ದ ಕಾಲ. ಜಾಗತಿಕ ಮಟ್ಟದಲ್ಲಿ ಸಾಮ್ರಾಜ್ಯಶಾಹಿ ತನ್ನ ಸುಲಿಗೆಯ ವಿಧಾನ ಮತ್ತು ತಂತ್ರಗಳನ್ನು ಬದಲಾಯಿಸಿಕೊಳ್ಳಲು ಕುತಂತ್ರ ಹುಡುಕುತ್ತಿದ್ದ ಕಾಲ. ಎರಡನೇ ಪ್ರಪಂಚ ಯುದ್ಧದಲ್ಲಿ ಅಮೇರಿಕ ನೇತೃತ್ವದ ರಾಷ್ಟ್ರಗಳಿಗೆ ಬಂದೊದಗಿದ ಬಿಕ್ಕಟ್ಟುಗಳನ್ನು ಎದುರಿಸುವ ಸಲುವಾಗಿ ತನ್ನ ಸುಲಿಗೆಯ ನೀತಿಗಳನ್ನು ಬದಲಾಯಿಸಿಕೊಂಡಿತು. ಇದರ ಪರಿಣಾಮದಿಂದಾಗಿ ಪ್ರಪಂಚದ ಬೇರೆ ಬೇರೆ ಭಾಗದಲ್ಲಿ ರಾಷ್ಟ್ರ ವೀಮೋಚನೆಗಾಗಿ ಹೋರಾಟ ಮಾಡುತ್ತಿದ್ದ ರಾಷ್ಟ್ರಗಳಿಗೆ ಅಧಿಕಾರವನ್ನು ಹಸ್ತಾಂತರಿಸುವುದು ಅನಿವಾರ್ಯವಾಯಿತು. ಈ ಉದ್ದೇಶದಿಂದ ಚರ್ಚಿಲ್ ಒಪ್ಪಂದವನ್ನು ರೂಪಿಸಲಾಯಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಇದು ಅತ್ಯಂತ ಗುರುತರವಾದ ಆತಂಕದ ಪರಿಸ್ಥಿತಿಯನ್ನು ಸೂಚಿಸುತ್ತದೆ. ಇನ್ನು ನಿರ್ದಿಷ್ಟವಾಗಿ ಭಾರತದಲ್ಲಿ ಏನಾಗುತ್ತಿತ್ತು ಎಂಬುದರತ್ತ ಗಮನ ಹರಿಸೋಣ.

ಭಾರತದಲ್ಲಿ ಬ್ರಿಟೀಶರ ವಿರುದ್ಧ ಹೋರಾಟ ನಡೆದಿತ್ತು. ಆ ಹೋರಾಟ ಹಲವು ರೂಪಗಳಲ್ಲಿ ಕವಲೊಡೆದಿತ್ತು. ಭಾರತದಲ್ಲಿ ಮುಸ್ಲಿಂ ಲೀಗ್ ಮುಸ್ಲಿಮರ ಬಗೆಗೆ ಕೆಲವು ಹಕ್ಕೊತ್ತಾಯವನ್ನು ಮಂಡಿಸಿತ್ತು. ಹಿಂದೂ ಮಹಾಸಭಾ ಹಿಂದೂ ಸಂಸ್ಕೃತಿಯ ಪುನರುತ್ಥಾನಕ್ಕೆ ಇಳಿದಿತ್ತು. ಕೆಲವು ಪಾಶ್ಚಾತ್ಯರು ಭಾರತದಲ್ಲಿ ಸಾಮಾಜಿಕ ಸುಧಾರಣಾ ಚಳುವಳಿಗಳನ್ನು ಮಾಡುತ್ತಿದ್ದರು. ಭಾರತ ರಾಷ್ಟ್ರೀಯ ಕಾಂಗ್ರೆಸ್ ರಾಜಕೀಯ ಅಧಿಕಾರದ ಸ್ವಾತಂತ್ರ್ಯ ಪಡೆಯಲು ಹೋರಾಟ ಮಾಡುತ್ತಿತ್ತು. ಇದರ ಅಡಿಯಲ್ಲಿ ಭಾರೀ ಭೂಮಾಲೀಕರ ಮತ್ತು ಭಾರೀ ಬಂಡವಾಳಶಾಹಿಗಳ ವರ್ಗಹಿತಾಸಕ್ತಿಗಳು ಮೇಲುಗೈ ಸಾಧಿಸಿದ್ದವು. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಭಾರತದ ದಮನಿತ, ಅಪಮಾನಿತ, ಶೋಷಿತ ಹಾಗೂ ಮಹಿಳೆಯರ ಬದುಕಿನ ಸಮಗ್ರ ಬದಲಾವಣೆ ಹೇಗೆ ಎಂಬುದರ ಬಗೆಗೆ ಅಧ್ಯಯನ, ಸಂಘಟನೆ ಮತ್ತು ಹೋರಾಟದಲ್ಲಿ ತೊಡಗಿದ್ದರು. ಭಾರತದ ಮೂಲೆ ಮೂಲೆಯಲ್ಲಿ ಇದ್ದ ಆದಿವಾಸಿಗಳು, ಅಲೆಮಾರಿಗಳು, ಬುಡಕಟ್ಟು ಜನರು, ಅಸ್ಪೃಶ್ಯರು, ಮಹಿಳೆಯರು ಬಿಟ್ಟಿ ದುಡಿಮೆಗಾರರು ಮತ್ತು ಕಾರ್ಮಿಕರು ಅನ್ನ ಮತ್ತು ವಸತಿಗಾಗಿ ಪರಿತಪಿಸುತ್ತಿದ್ದರು. ಅವರು ಒಂದು ಕಡೆ ಸ್ಥಳೀಯ ಭೂಮಾಲೀಕರ ವಿರುದ್ಧವೂ; ಮತ್ತೊಂದು ಕಡೆ ಬ್ರಿಟೀಶರ ವಿರುದ್ಧವೂ ರಾಜಿರಹಿತವಾದ ಸಮರ ಸಾರಿದ್ದರು. 540ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಇದ್ದ ಸಂಸ್ಥಾನಗಳು ಮತ್ತು ಮಹಾಸಂಸ್ಥಾನಗಳು ಬ್ರಿಟೀಷರ ಪರವಾಗಿ ಇದ್ದುಕೊಂಡು ಸ್ವಾತಂತ್ರ್ಯವನ್ನು ಘೋಷಣೆ ಮಾಡುವ ರೀತಿಯಲ್ಲಿ ಇರಲಿಲ್ಲ. ಅಂದರೆ, ಅತ್ಯಂತ ತೀವ್ರವಾದ ಆತಂಕವು ಇಡೀ ಭಾರತವನ್ನು ಆವರಿಸಿಕೊಂಡಿತ್ತು.

ಭಾರತದೊಳಗಿನ ವರ್ಗ, ಜಾತಿ, ಧರ್ಮ, ಸಂಸ್ಕೃತಿ, ಭಾಷೆ, ಲಿಂಗ ಇವುಗಳ ಶ್ರೇಣೀಕೃತ ಅಸಮಾನತೆ ಕುದಿಯುವುದಕ್ಕೆ ಶುರುವಾಗಿತ್ತು. ಬಲಾಢ್ಯರು ಇವುಗಳ ಉಪಯೋಗ ಪಡೆಯಲು ಮುಂದಾಗಿದ್ದರು. ಅಸಹಾಯಕರನ್ನು ಅಂಚಿಗೆ ತಳ್ಳುವ ಸಂಚು ಮುಂದುವರೆದಿತ್ತು. ಹೀಗಾಗಿ ಭಾರತದೊಳಗಿನ ಹಲವು ಆತಂಕಗಳು ತೀವ್ರವಾಗಿದ್ದವು. ಅಂದರೆ ಭಾರತದಲ್ಲಿ ಸಂವಿಧಾನವನ್ನು ರಚನೆ ಮಾಡುವಾಗ ಭಾರತದ ಸಾಮಾಜಿಕ ಪರಿಸ್ಥಿತಿ ಮತ್ತು ಜಾಗತಿಕ ಮಟ್ಟದ ರಾಜಕೀಯ ಪರಿಸ್ಥಿತಿ ತಿಳಿಯಾಗಿ ಇರಲಿಲ್ಲ. ಅವು ಅತ್ಯಂತ ಏರಿಳಿತಗಳಿಂದ, ತೀವ್ರವಾದ ಬಿಕ್ಕಟ್ಟುಗಳಿಂದ ಹಾಗೂ ಆತಂಕಗಳಿಂದ ಕೂಡಿದ್ದವು. ಪರಿಸ್ಥಿತಿಯು ಸಮಾಧಾನವಾಗಿದ್ದಾಗ ಸಂವಿಧಾನ ರಚನೆ ಮಾಡುವುದಕ್ಕೂ ಮತ್ತು ಪರಿಸ್ಥಿತಿಯು ತೀವ್ರವಾದ ಬಿಕ್ಕಟ್ಟಿನಲ್ಲಿದ್ದಾಗ ಸಂವಿಧಾನ ರಚನೆ ಮಾಡುವುದಕ್ಕೂ ಬಹಳ ವ್ಯತ್ಯಾಸ ಇರುತ್ತದೆ. ಇದನ್ನು ಬಹಳ ಸೂಕ್ಷ್ಮವಾಗಿ ಮತ್ತು ಅಷ್ಟೇ ಗಂಭೀರವಾಗಿ ಪರಿಗಣಿಸಬೇಕು.

ಇಂತಹ ಚಾರಿತ್ರಿಕ ಸಂದರ್ಭದಲ್ಲಿ, ಭಾರತ ದೇಶವು ಆದಿ ಕಾಲದಿಂದ ವಿವಿಧ ರಾಜ್ಯಭಾರಗಳು, ವಿವಿಧ ಆಡಳಿತಗಳು, ವಿವಿಧ ಸಂಸ್ಕೃತಿಗಳು, ವಿವಿಧ ಧರ್ಮಗಳು, ವಿವಿಧ ಪರಂಪರೆಗಳಿಂದ ಸಾಗಿ ಬಂದಿದ್ದ ಅನುಭವ ಮತ್ತು ಅರಿವು ಸಂವಿಧಾನ ರಚನೆಕಾರರ ಮುಂದಿದ್ದವು. ಭಾರತ ರಾಷ್ಟ್ರವನ್ನು ಬ್ರಿಟೀಶರ ಆಳ್ವಿಕೆಯಿಂದ ಮುಕ್ತಗೊಳಿಸಿದ ನಂತರದಲ್ಲಿ, ಮತ್ತೆ ಅಂತಹ ಪರಿಸ್ಥಿತಿಗಳಿಗೆ ಅವಕಾಶ ಕೊಡದಂತೆ ಹೊಸದಾಗಿ ಕಟ್ಟುವುದು ಹೇಗೆ, ತುಳಿಯುವ ಮತ್ತು ತುಳಿತವನ್ನು ಅನುಭವಿಸುತ್ತಿರುವ ಎಲ್ಲ ಪ್ರಜೆಗಳ ಭೌತಿಕ ಪರಿಸ್ಥಿತಿಯನ್ನು ಬದಲಾಯಿಸುವುದು ಹೇಗೆ? ಈ ಎರಡೂ ವರ್ಗಗಳ ಅಂತರಂಗವನ್ನು, ಗುಣಸ್ವಭಾವಗಳನ್ನು ಪರಿವರ್ತನೆ ಮಾಡುವುದು ಹೇಗೆ, ವಿವಿಧ ಸಂಸ್ಕೃತಿಗಳು, ಪರಂಪರೆಗಳು, ಧರ್ಮಗಳು, ಭಾಷೆಗಳು ಇವನ್ನು ಶೋಷಣಾಮುಕ್ತ ಮಾಡುವುದು ಹೇಗೆ ಎಂಬ ಬಹಳ ದೊಡ್ಡ ಸವಾಲುಗಳು ಸಂವಿಧಾನ ರಚನೆಕಾರರ ಮುಂದಿದ್ದವು. ಆಧುನಿಕ ಕಾಲದಲ್ಲಿ ರಾಷ್ಟ್ರಗಳು ಹಾಗೂ ಅದರ ಪ್ರಜೆಗಳು ಎಂತಹ ಬಿಕ್ಕಟ್ಟುಗಳನ್ನು ಎದುರಿಸಬೇಕಾಗಬಹುದು, ಆಗ ರಾಷ್ಟ್ರ ಜೀವನವನ್ನೂ ಹಾಗೂ ಪ್ರಜೆಗಳ ಬದುಕನ್ನೂ ಹೇಗೆ ಸಮತೋಲನದಿಂದ ಪರಿವರ್ತನೆ ಮಾಡಬೇಕಾಗುತ್ತದೆ ಎಂಬಂತಹ ಅತ್ಯಂತ ದೂರಗಾಮಿ ಸವಾಲುಗಳು ಇವರ ಮುಂದೆ ಇದ್ದವು. ಆಸ್ತಿ, ಸಂಪತ್ತು, ಅಧಿಕಾರಗಳ ಖಾಸಗೀ ಒಡೆತನವನ್ನು ಬದಲಾಯಿಸುವುದು ಹೇಗೆ, ಇವುಗಳ ಅಸಮಾನತೆಯ ಹಂಚಿಕೆಯ ಕಾರಣದಿಂದ ಉಂಟಾಗಿರುವ ಆರ್ಥಿಕ–ಸಾಮಾಜಿಕ ಅಸಮಾನತೆಯನ್ನು ಸಮಾನತೆಯ ಸ್ಥಿತಿಗೆ ಪರಿವರ್ತಿಸುವುದು ಹೇಗೆ, ಭಾರತದ ಪರಂಪರೆಯಲ್ಲಿ ಮಹಿಳೆಯರನ್ನು, ಅಸ್ಪೃಶ್ಯರನ್ನು ಹೀನಾಯವಾಗಿ ಕಾಣುತ್ತಿರುವ ಭೌತಿಕ ಮತ್ತು ಅಂತರಂಗದ ಪರಿಸ್ಥಿತಿಯನ್ನು ಬದಲಾಯಿಸುವುದು ಹೇಗೆ, ಎಂಬ ನೂರಾರು ಸವಾಲುಗಳು ಇವರ ಮುಂದೆ ಇದ್ದವು. ಸಂವಿಧಾನದ ರಚನೆಯ ಒಂದೊಂದು ಪದ ಸಂಯೋಜನೆಯಲ್ಲೂ ಇವು ಮತ್ತೆ ಮತ್ತೆ ಇವರನ್ನು ಕಾಡುತ್ತಿದ್ದವು.

1946 ಜುಲೈ ತಿಂಗಳಲ್ಲಿ ಚುನಾವಣೆಯ ಮೂಲಕ ಸಂವಿಧಾನ ರಚನೆಯ ಸಮಿತಿಗೆ 296 ಸದಸ್ಯರನ್ನು ನೇಮಕ ಮಾಡಲಾಯಿತು. ಮುಸ್ಲಿಂ ಲೀಗ್‌ನ ಸದಸ್ಯರು ಸಂವಿಧಾನ ರಚನೆಯ ಸಭೆಗಳಲ್ಲಿ ಭಾಗವಹಿಸಲಿಲ್ಲ. ಉಳಿದ 272 ಸದಸ್ಯರು 1946ರ ಡಿಸೆಂಬರ್ 9ರಂದು ಸಂವಿಧಾನ ರಚನೆಯ ಕೆಲಸವನ್ನು ಪ್ರಾರಂಭಿಸಿದರು. ಒಂದು ವರ್ಷ, 2 ತಿಂಗಳ ಅವಧಿಯಲ್ಲಿ ಸಂವಿಧಾನದ ಕರಡನ್ನು ಪೂರ್ಣಗೊಳಿಸಿದರು. 1948ರ ಫೆಬ್ರವರಿ 21ರಂದು ಇದನ್ನು ಪ್ರಜೆಗಳ ಮುಂದೆ ಪ್ರತಿಕ್ರಿಯೆಗೆ ಇಡಲಾಯಿತು. ಪ್ರಜೆಗಳು ಇದಕ್ಕೆ ಒಟ್ಟು 7,635 ತಿದ್ದುಪಡಿಗಳನ್ನು ಸೂಚಿಸಿದರು. ಈ ತಿದ್ದುಪಡಿಗಳನ್ನು ಪರಿಶೀಲಿಸಿ ಸೂಕ್ತವಾದವುಗಳನ್ನು ಕರಡಿಗೆ ಸೇರಿಸಿ, 1949 ನವೆಂಬರ್ 26ರಂದು ಅಂತಿಮ ಕರಡನ್ನು ಭಾರತದ ಪಾರ್ಲಿಮೆಂಟಿನಲ್ಲಿ ಮಂಡಿಸಲಾಯಿತು. ಭಾರತ ಸಂವಿಧಾನದ ಕರಡು ತಯಾರು ಮಾಡಲು ಒಟ್ಟು 2 ವರ್ಷ, 11 ತಿಂಗಳು, 17 ದಿನಗಳ ಕಾಲ ಎಡಬಿಡದೆ ಕೆಲಸ ಮಾಡಲಾಯಿತು.

ಭಾರತದ ಸಂವಿಧಾನದ ಬಗೆಗೆ ಮಾತನಾಡುವುದು, ಚರ್ಚೆ ಮಾಡುವುದು ನನ್ನ ಪ್ರಕಾರ ಎರಡು ರೀತಿಯಲ್ಲಿ ನಡೆಯುತ್ತದೆ. ಒಂದು: ದೇಶವನ್ನು ಆಳ್ವಿಕೆ ಮಾಡಲು ಸಂವಿಧಾನವನ್ನು ಹೇಗೆ ಜಾರಿಗೊಳಿಸಬೇಕು ಎಂಬ ನೆಲೆ. ಎರಡು: ರಾಷ್ಟ್ರವನ್ನು ಕಟ್ಟಲು ಸಂವಿಧಾನದಿಂದ ಹೇಗೆ ಸ್ಫೂರ್ತಿ ಪಡೆಯಬೇಕು ಎಂಬ ನೆಲೆ ಅಥವಾ ಸಂವಿಧಾನದ ಆಶಯವನ್ನು ಅನುಸರಿಸಿ ದೇಶವನ್ನು ಹೇಗೆ ಕಟ್ಟಬೇಕು ಎಂಬ ನೆಲೆ.

ಭಾರತದ ಸಂವಿಧಾನವು ಪ್ರಪಂಚದ ಯಾವ ಯಾವ ಸಂವಿಧಾನಗಳಿಂದ, ಯಾವ ಯಾವ ಅಂಶಗಳನ್ನು ಪಡೆದಿದೆ, ಅದರ ಅಗತ್ಯ ಎಷ್ಟು ಇತ್ತು, ಯಾಕೆ ಇತ್ತು ಎಂಬುದರ ಬಗೆಗೆ ಕೆಲವು ಮಾಹಿತಿಗಳನ್ನು ಆಧರಿಸಿ ಮಾತನಾಡುವ ಒಂದು ಕ್ರಮ ಇದೆ. ಇದರ ಮುಂದುವರೆದ ಭಾಗವಾಗಿ ಭಾರತದ ಸಂವಿಧಾನದಲ್ಲಿ ಅಧ್ಯಾಯಗಳಿವೆ, ಎಷ್ಟು ಭಾಗಗಳಿವೆ, ಎಷ್ಟು ಅನುಚ್ಛೇದಗಳಿವೆ, ಒಂದೊಂದು ಅನುಚ್ಛೇದವು ಏನನ್ನು ಹೇಳುತ್ತದೆ ಎಂದು ಪರಿಚಯಾತ್ಮಕವಾಗಿ ಮಾತನಾಡುವ ಇನ್ನೊಂದು ಕ್ರಮ ಇದೆ. ಇಲ್ಲಿಯ ಚರ್ಚೆಯ ಸ್ವರೂಪ ಈ ಎರಡೂ ಅಲ್ಲ. ಈ ಆಯಾಮ ನನಗೆ ಮುಖ್ಯವಲ್ಲ. ಇದಕ್ಕಿಂತ ಮುಖ್ಯವಾದ ಇನ್ನೊಂದು ಆಯಾಮ ನನಗೆ ಅತ್ಯಂತ ಮಹತ್ವದ್ದು. ಅದು ಯಾವುದು ಎಂದರೆ, ಅದನ್ನು ಕನ್ನಡದ ಸ್ಥಳೀಯ ನುಡಿಗಟ್ಟನ್ನು ಬಳಸಿ ಹೇಳುವುದಾದರೆ ಅದನ್ನು ನಾನು ಹದ ಎಂದು ಕರೆಯುತ್ತೇನೆ. ಹದ ಎಂದರೆ ಏನು? ಉದಾಹರಣೆಗೆ, ಕಾಫಿ ಮಾಡುವ ವಿಧಾನ ಪರಿಚಿತ. ಅದಕ್ಕೆ ಬೇಕಾಗುವ ವಸ್ತುಗಳು ಪರಿಚಿತ. ಆದರೆ ಒಬ್ಬರು ಮಾಡುವ ಕಾಫಿಯ ರುಚಿ, ಸ್ವಾದ ಮತ್ತೊಬ್ಬರು ಮಾಡಿದಂತೆ ಇರುವುದಿಲ್ಲ. ಯಾಕೆಂದರೆ ಕಾಫಿಯನ್ನು ತಯಾರು ಮಾಡುವ ವಿಧಾನದಲ್ಲಿ ಒಬ್ಬೊಬ್ಬರಿಗೆ ಒಂದೊಂದು ಹದವಿರುತ್ತದೆ. ಆ ಹದವನ್ನು ಅವಲಂಬಿಸಿ ಕಾಫಿಯ ರುಚಿ, ಸ್ವಾದ ಬದಲಾಗುತ್ತಾ ಹೋಗುತ್ತದೆ. ಇದು ಯಾಕೆ? ಇದು ನನಗೆ ಮುಖ್ಯವಾದ ಪ್ರಶ್ನೆ. ಇದು ಪಾಕಶಾಸ್ತ್ರದ ಪ್ರಾವೀಣ್ಯತೆಯ ಪ್ರಶ್ನೆಯಲ್ಲ. ಈ ಮಾತನ್ನು ಮತ್ತೆ ನಾನು ವಿವರಿಸಲು ಹೋಗುವುದಿಲ್ಲ.

ಭಾರತದ ಸಂವಿಧಾನವನ್ನು ಒಕ್ಕೊರಲಿನಿಂದ "ಕಾನೂನುಗಳ ಗ್ರಂಥ" ಎಂದು ಕರೆಯಲಾಗಿದೆ. ಈ ಕಾರಣದಿಂದ ಭಾರತದ ಸಂವಿಧಾನವನ್ನು ರಾಜ್ಯಶಾಸ್ತ್ರದ ಪಂಡಿತರು, ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಸಂಶೋಧಕರು ಓದಬೇಕು ಎಂಬ ಅಭಿಪ್ರಾಯವನ್ನು



"ಕಾನೂನುಗಳ ಮುಂದೆ ಎಲ್ಲರೂ ಸಮಾನರು" ಎಂಬ ಅಭಿಪ್ರಾಯದ ಬಗೆಗೆ ಸ್ವತಃ ಅಂಬೇಡ್ಕರ್ ಅವರಿಗೆ ಯಾವ ನಂಬಿಕೆಯೂ ಇರಲಿಲ್ಲ. ಇದು ಅತ್ಯಂತ ಕುತೂಹಲದ ಅಂಶ ಎಂದು ನಾನು ಭಾವಿಸಿದ್ದೇನೆ. ಧರ್ಮಗ್ರಂಥಗಳ ಪ್ರಕಾರ, "ದೇವರ ಮುಂದೆ ಎಲ್ಲರೂ ಸಮಾನರು'. ಸಂವಿಧಾನದ ಪ್ರಕಾರ, "ಕಾನೂನುಗಳ ಮುಂದೆ ಎಲ್ಲರೂ ಸಮಾನರು". ಈ ಎರಡೂ ಹೇಳಿಕೆಗಳು ಒಂದೇ ರೀತಿ ಇದ್ದು, ಒಂದೇ ರೀತಿಯ ಸಂದೇಶವನ್ನು ನಮಗೆ ಒಪ್ಪಿಸುತ್ತಿರುವಂತೆ ಕಾಣಿಸುತ್ತಿದೆ. ಧರ್ಮ ಗ್ರಂಥಗಳನ್ನು ಅಂಬೇಡ್ಕರರಂತೆ ಆಧಾರಸಹಿತವಾಗಿ ಅತ್ಯಂತ ಆಳವಾಗಿ ವಿಮರ್ಶೆ ಮಾಡಿದವರು ಬಹುಶಃ ಇಡೀ ಜಗತ್ತಿನಲ್ಲಿ ಮತ್ತೊಬ್ಬರು ಇರಲಾರರು

ರೂಪಿಸಲಾಗಿದೆ. ಜೊತೆಗೆ ಸಂವಿಧಾನವನ್ನು ವಕೀಲರು ಮತ್ತು ನ್ಯಾಯಾಧೀಶರು ಓದಬೇಕು ಹಾಗೂ ಅದನ್ನು ಕೋರ್ಟುಗಳ ವ್ಯಾಜ್ಯಗಳಿಗೆ, ತೀರ್ಪುಗಳಿಗೆ ಆಧಾರವಾಗಿ ಬಳಸಬೇಕು ಎಂಬ ಬದಲಾಗದ ನಿಯಮವನ್ನು ಸೃಷ್ಟಿಸಲಾಗಿದೆ. ವಸ್ತುಸ್ಥಿತಿಯು ಕೂಡ ಅದೇ ರೀತಿಯಲ್ಲಿ ಮುಂದುವರಿದಿದೆ. ಈ ಕಾರಣದಿಂದ ರಾಜ್ಯಶಾಸ್ತ್ರದ ಔಪಚಾರಿಕ ವಲಯದವರು ಹಾಗೂ ನ್ಯಾಯಾಂಗ ವ್ಯವಸ್ಥೆಯ ವೃತ್ತಿಪರ ಕೆಲಸಗಾರರು ಮಾತ್ರ ಭಾರತದ ಸಂವಿಧಾನವನ್ನು ಪರಿಚಯಿಸಿಕೊಂಡಿದ್ದಾರೆ. ಅಗತ್ಯವಿದ್ದಷ್ಟು ಅದರ ಅನುಚ್ಛೇದಗಳನ್ನು ಮಾತ್ರ ಬಳಸಿಕೊಳ್ಳುತ್ತಿದ್ದಾರೆ. ಈ ಎರಡು ನಿರ್ದಿಷ್ಟ ವಲಯದವರನ್ನು ಬಿಟ್ಟರೆ ಉಳಿದ ವಲಯದವರು ಭಾರತದ ಸಂವಿಧಾನ ಎಂಬ ಪುಸ್ತಕದ ಮುಖ ಪುಟವನ್ನು ಸಹ ನೋಡುವ ಗೋಜಿಗೆ ಹೋದಂತೆ ಕಾಣುವುದಿಲ್ಲ. ಯಾಕೆಂದರೆ ಅವರಿಗೆ ಅದರ ಅಗತ್ಯ ಇಲ್ಲ ಎಂಬ ಅಭಿಪ್ರಾಯವನ್ನು ರೂಪಿಸಲಾಗಿದೆ. ಈ ಮೂಲಕ ಸಂವಿಧಾನವನ್ನು ಓದಬಹುದಾಗಿದ್ದ ದಾರಿಗಳನ್ನು ಸಂಪೂರ್ಣ ಬಂದ್ ಮಾಡಲಾಗಿದೆ. ಹೀಗೆ ಬಂದ್ ಮಾಡಿರುವ ಬಾಗಿಲುಗಳನ್ನು ತೆರೆಯಬೇಕಾಗಿದೆ.

ಇತ್ತೀಚಿನ ದಿನಗಳಲ್ಲಿ ಎನ್.ಆರ್.ಸಿ. ಮತ್ತು ಸಿ.ಎ.ಎ.ಗಳ ಬಗ್ಗೆ ಒಂದು ಮಟ್ಟದ ಚರ್ಚೆಯಾಗುತ್ತಿದೆ. ಭಾರತದ ಯಾವ ಸಮುದಾಯಗಳು ಇದುವರೆಗೆ ಸಂವಿಧಾನದ ಹೆಸರನ್ನು ಮತ್ತು ಡಾ. ಬಾಬಾಸಾಹೇಬ್ ಅಂಬೇಡ್ಕರರ ಹೆಸರನ್ನು ಹೇಳಿರಲಿಲ್ಲವೋ, ಆ ಸಮುದಾಯಗಳ ಕೆಲವು ನಾಯಕರು ಇವತ್ತು ಭಾರತದ ಸಂವಿಧಾನ ಮತ್ತು ಡಾ. ಬಾಬಾಸಾಹೇಬ್ ಎಂಬ ಎರಡು ಪದಗಳನ್ನಾದರೂ ಹೇಳುತ್ತಿದ್ದಾರೆ. ನನ್ನ ದೃಷ್ಟಿಯಲ್ಲಿ ಭಾರತದಲ್ಲಿ ಇದು ಬಹಳ ದೊಡ್ಡ ಬೆಳವಣಿಗೆ.

ಭಾರತದ ಸಂವಿಧಾನವನ್ನು ಕೇವಲ ಕಾನೂನುಗಳ ಗ್ರಂಥವೆಂದು ಪರಿಗಣಿಸಿದಾಗ, ಸಂವಿಧಾನದ ಪ್ರತಿಯೊಂದು ಅನುಚ್ಛೇದದಲ್ಲಿ ಏನು ಇದೆ ಎಂಬುದು ಮುಖ್ಯವಾಗುತ್ತದೆ. ಹಾಗಾಗಿ ಅದನ್ನು In the Article, by the Aricle, through the Aricle, ಕ್ರಮದಲ್ಲಿ ಓದುವುದು ಮತ್ತು ಚರ್ಚಿಸುವುದು ಮುಖ್ಯವಾಗುತ್ತದೆ. ಈ ಏಕಮಾದರಿಯ ಓದು ನಮ್ಮನ್ನು ಸ್ವಲ್ಪವೂ ಆ ಕಡೆ ಈ ಕಡೆ ನೋಡಲು ಬಿಡುವುದಿಲ್ಲ; ಬಿಟ್ಟಿಲ್ಲ. ಹಾಗಾಗಿ ಕಾನೂನುಗಳಲ್ಲಿ ಏನಿದೆ ಎಂಬುದು ಮುಖ್ಯವಾಗಿ; ಕಾನೂನುಗಳ ಹಿಂದಿರುವ ಒಂದು ಹದ, ಒಂದು ಮಾನವೀಯತೆ ಏನಿದೆ ಅದನ್ನು ಗ್ರಹಿಸಲಾರದಂತೆ ಆಗಿದೆ. ಆದ್ದರಿಂದ ನಾವೀಗ Beyond the Aricle ಎಂಬ ನೆಲೆಯಲ್ಲಿ

ಭಾರತದ ಸಂವಿಧಾನವನ್ನು ಗ್ರಹಿಸಬೇಕಾದ ಅಗತ್ಯವಿದೆ ಎಂದು ನಾನು ಭಾವಿಸಿದ್ದೇನೆ. ಅಂದರೆ ಸಂವಿಧಾನವನ್ನು ಕಾನೂನುಗಳ ಒಂದು ಕಟ್ಟು ಎಂದು ಪರಿಭಾವಿಸಿ ಅದನ್ನು ಮಾಹಿತಿ ಪ್ರಧಾನವಾಗಿ ಓದಲಾಗಿದೆ. ಆದರೆ ಭಾರತದ ಸಂವಿಧಾನಕ್ಕೆ ಬಹಳ ದೊಡ್ಡ ಒಂದು ದರ್ಶನ ಇದೆ. ಅದಕ್ಕೆ ಪ್ರಜೆಗಳ ಅಂತರಂಗ ಮತ್ತು ಬಹಿರಂಗವನ್ನು ಶುದ್ಧೀಕರಿಸುವ, ಪವಿತ್ರೀಕರಿಸುವ, ಕಟ್ಟುವ, ಸೃಷ್ಟಿಸುವ, ನಿರ್ಮಿಸುವ ಆ ಮೂಲಕ ಇಡೀ ದೇಶವನ್ನು ಕಟ್ಟುವ, ಹೊಸ ರಾಷ್ಟ್ರವನ್ನು ಸೃಷ್ಟಿಸುವ ಬಹಳ ದೊಡ್ಡ ದರ್ಶನ ಇದೆ. ಈ ದೃಷ್ಟಿಯಲ್ಲಿ ನಾವೀಗ ಭಾರತದ ಸಂವಿಧಾನವನ್ನು ಓದಬೇಕಾಗಿದೆ; ಗ್ರಹಿಸಬೇಕಾಗಿದೆ. ಇದುವರೆಗೆ ಸಂವಿಧಾನವನ್ನು ಓದಿರುವ ಮತ್ತು ಅದನ್ನು ಬಳಸಿರುವ ಕ್ರಮದ ಬಗೆಗೆ ನನಗೆ ಬಹಳ ದೊಡ್ಡ ತಕರಾರು ಇದೆ. ನನ್ನ ಈ ಮಾತುಗಳಿಗೆ ಒಂದು ಖಚಿತವಾದ ವ್ಯಾಖ್ಯಾನವನ್ನು ಮಾಡುವುದಾದರೆ, ಆಳುವವರು ಸಂವಿಧಾನವನ್ನು ಓದುವ ಬಗೆ ಮತ್ತು ಪ್ರಜೆಗಳು ಸಂವಿಧಾನವನ್ನು ಓದುವ ಬಗೆ ಎಂದು ಎರಡು ನೆಲೆಗಳನ್ನಾಗಿ ನಾನು ವಿಂಗಡಿಸುತ್ತೇನೆ. ಇದನ್ನು ಬೇರೆ ಮಾತುಗಳಲ್ಲಿ ಹೇಳುವುದಾದರೆ ಆಳುವ ವರ್ಗದ ಸಂವಿಧಾನದ ಓದು ಮತ್ತು ಪ್ರಜೆಗಳ ಸಂವಿಧಾನದ ಓದು ಎಂದು ನಾನು ಹೇಳುತ್ತೇನೆ. ಆಳುವವರು ರಾಷ್ಟ್ರವನ್ನು ಆಳುವುದಕ್ಕಾಗಿ; ಪ್ರಜೆಗಳನ್ನು ಆಳುವುದಕ್ಕಾಗಿ ಸಂವಿಧಾನವನ್ನು ಓದುತ್ತಾರೆ; ಗ್ರಹಿಸುತ್ತಾರೆ ಮತ್ತು ಬಳಸುತ್ತಾರೆ. ಆದರೆ ಆಳುವ ಜನ ಅಲ್ಲದ ನಾವು; ಭಾರತದ ಪ್ರಜೆಗಳಾದ ನಾವು ಹೊಸ ಪ್ರಜೆಗಳನ್ನು ರೂಪಿಸುವುದಕ್ಕಾಗಿ, ನಾವೇ ಹೊಸ ಪ್ರಜೆಗಳಾಗಿ ರೂಪುಗೊಳ್ಳುವುದಕ್ಕಾಗಿ, ಹೊಸ ರಾಷ್ಟ್ರವನ್ನು ಕಟ್ಟುವುದಕ್ಕಾಗಿ ಸಂವಿಧಾನವನ್ನು ಓದಬೇಕು; ಗ್ರಹಿಸಬೇಕು; ಚರ್ಚೆ ಮಾಡಬೇಕು. "ಸಂವಿಧಾನದ ಓದು", "ಸಂವಿಧಾನ ಕುರಿತ ವಿಚಾರ ಸಂಕಿರಣ" ಈ ಮುಂತಾದ ಸಂದರ್ಭಗಳಲ್ಲಿ ನಾವು ಮೂಲಭೂತವಾಗಿ ಕೇಳಿಕೊಳ್ಳಬೇಕಾದ ಪ್ರಶ್ನೆ ಎಂದರೆ; ದೇಶವನ್ನು ಆಳುವುದಕ್ಕಾಗಿ ಸಂವಿಧಾನದ ಚರ್ಚೆಯೊ ಅಥವಾ ಹೊಸ ರಾಷ್ಟ್ರವನ್ನು ಕಟ್ಟುವುದಕ್ಕಾಗಿ ಸಂವಿಧಾನದ ಚರ್ಚೆಯೊ ಎಂಬ ಮುಖ್ಯ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು.

ಸಂವಿಧಾನವನ್ನು ಇದುವರೆಗೆ ಎಲ್ಲಿ ಓದಲಾಗಿದೆ ಮತ್ತು ಹೇಗೆ ಓದಲಾಗಿದೆ ಎಂಬುದು ನಮಗೆಲ್ಲ ಚಿರಪರಿಚಿತ. ನಾನು ಆಗಲೆ ಹೇಳಿದಂತೆ ಕೋರ್ಟುಗಳು ಮತ್ತು ಸಾಂಪ್ರದಾಯಿಕ ರಾಜ್ಯಶಾಸ್ತ್ರದ ಅಧ್ಯಾಪಕರು ಅದರ ಬಳಕೆದಾರರಾಗಿದ್ದಾರೆ. ಅವರೆಲ್ಲರೂ ಅದನ್ನು ಕಾನೂನುಗಳ ಗ್ರಂಥ ಮತ್ತು ಕೇವಲ ಕಾನೂನುಗಳ ಗ್ರಂಥ ಎಂದು ಓದಿದ್ದಾರೆ. ಇದರ ಪರಿಣಾಮವಾಗಿ ಭಾರತದ ಸಂವಿಧಾನವನ್ನು ಹೀಗೆ ಆಳುವವರ ಕೈಪಿಡಿಯಾಗಿ ಮತ್ತು ಅವರ ಮಾರ್ಗದರ್ಶಿ ಸೂತ್ರವಾಗಿ ಸಂಕುಚಿತಗೊಳಿಸಲಾಗಿದೆ. ಇದು ಸರಿಯಲ್ಲ. ಭಾರತದ ಸಂವಿಧಾನವನ್ನು ಇಡೀ ಭಾರತದ ಅಧೋಲೋಕದ ಪರಿಸ್ಥಿತಿಯು ಬದಲಾಗಿರುವ ಮತ್ತು ಬದಲಾಗುತ್ತಿರುವ ಸಂಕೀರ್ಣವಾದ ಒಡಲಿನಲ್ಲಿ ಇಟ್ಟು ಓದಬೇಕು ಮತ್ತು ಅದರಿಂದ ನಾವು ಕಲಿಯಬೇಕು. ಭಾರತೀಯ ಸಮಾಜವನ್ನು ಪ್ರಭಾವಿಸುತ್ತಿರುವ ಮತ್ತು ನಿಯಂತ್ರಿಸುತ್ತಿರುವ ಧರ್ಮ ಗ್ರಂಥಗಳ ಜೊತೆಗೆ ಭಾರತದ ಸಂವಿಧಾನವನ್ನು ಇಟ್ಟು ಓದಬೇಕು. ಅಂಬೇಡ್ಕರ್ ಅವರು ಬುದ್ಧನನ್ನು ಕಾರ್ಲ್‌ಮಾರ್ಕ್ಸ್‌ನ ಜೊತೆಗೆ ಇಟ್ಟು ಓದಿದರು. ಇಡೀ ಪ್ರಪಂಚದ ಬೌದ್ಧಿಕ ವಿದ್ವತ್ತಿನಲ್ಲಿ ಇದು ಅತ್ಯುನ್ನತ ಸಾಧನೆ ಎಂಬುದು ನನ್ನ ತಿಳುವಳಿಕೆ. ಅಂಬೇಡ್ಕರ್ ಅವರು ಅಂತಹ ಒಂದು ದೊಡ್ಡ ಮಾದರಿಯನ್ನು ನಮ್ಮ ಮುಂದೆ ಸೃಷ್ಟಿಸಿದ್ದಾರೆ.

ಹಾಗಿದ್ದರೆ ಈಗ ನಾವು ಅಂತಹ ಒಂದು ಪ್ರಯತ್ನವನ್ನು

ಇಂದು ನಾವು 21ನೇ ಶತಮಾನದ 2ನೇ ದಶಕದ ಕೊನೆಯಲ್ಲಿ ಇದ್ದೇವೆ. ಮನುಷ್ಯ ಕುಲ ಹಲವಾರು ಅವಸ್ಥಾಂತರಗಳನ್ನು ದಾಟಿಕೊಂಡು ಬಂದಿದೆ. ಈಗಿನ ಪರಿಸ್ಥಿತಿ ಕ್ರಿಸ್ತ ಪೂರ್ವದ ಪರಿಸ್ಥಿತಿ ಅಲ್ಲ. ನಮ್ಮ ಸಾಮಾಜಿಕ ಬದಲಾವಣೆ, ಬೆಳವಣಿಗೆ, ಆದ್ಯತೆ ಮತ್ತು ಅಗತ್ಯಗಳಿಗೆ ಅನುಗುಣವಾಗಿ ನಮಗೆ ಮಾರ್ಗದರ್ಶನ ಮಾಡುವ ಗ್ರಂಥಗಳೂ ಕೂಡ ಬದಲಾಗಬೇಕಾಗುತ್ತದೆ. ಭಾರತದಲ್ಲಿ ಸಂವಿಧಾನ ಜಾರಿಗೆ ಬಂದು 70 ವರ್ಷಗಳಾಗಿವೆ. ಈ 70 ವರ್ಷಗಳ ಅವಧಿಯಲ್ಲಿ ಭಾರತದ ಸಂವಿಧಾನವು 103 ತಿದ್ದುಪಡಿಗಳನ್ನು ಕಂಡಿದೆ. 70 ವರ್ಷಗಳಿಗೆ 103 ತಿದ್ದುಪಡಿಗಳನ್ನು ನಮ್ಮ ಸಂವಿಧಾನ ಕಂಡಿದೆ ಎನ್ನುವುದಾದರೆ, ಕ್ರಿಸ್ತ ಪೂರ್ವದಲ್ಲಿ ರಚನೆಯಾಗಿರುವ ಧರ್ಮಗ್ರಂಥಗಳು ಇನ್ನೆಷ್ಟು ಸಂಖ್ಯೆಯ ತಿದ್ದುಪಡಿಗಳನ್ನು ಕಾಣಬೇಕಿತ್ತು?

ಮಾಡಬೇಕು. ಭಾರತದ ಮಟ್ಟಿಗೆ ಭವದ್ಗೀತೆಯನ್ನು ಒಂದು ಪೂಜ್ಯ ಗ್ರಂಥವೆಂದು ಪರಿಗಣಿಸಲಾಗಿದೆ ಮತ್ತು ಹಾಗೆಂದು ನಂಬಲಾಗಿದೆ. ಪ್ರಪಂಚದಲ್ಲಿ ಬೈಬಲ್ ಮತ್ತು ಖುರಾನ್ ಗ್ರಂಥಗಳಿಗೆ ಇದೇ ರೀತಿಯ ಪೂಜನೀಯ ಸ್ಥಾನವನ್ನು ಕೊಡಲಾಗಿದೆ. ಇದರ ಪರಿಣಾಮವಾಗಿ ಆ ಗ್ರಂಥಗಳಿಗೆ ಪಾವಿತ್ರ್ಯತೆಯನ್ನು ಹಚ್ಚಿ ಅವುಗಳಿಗೆ ಗೌರವ ಕೊಡುವ ಪರಂಪರೆಯನ್ನು ಬೆಳೆಸಲಾಗಿದೆ. ಆ ಗ್ರಂಥಗಳ ಬಗೆಗೆ ನಂಬಿಕೆ ಇರುವವರು "ದೇವರ ಮುಂದೆ ಎಲ್ಲರೂ ಸಮಾನರು" ಎಂಬ ನೈತಿಕತೆಯನ್ನು ಪ್ರತಿಪಾದನೆ

ಮಾಡಿದರು. ಇದು ಪ್ರಾಪಂಚಿಕ ನುಡಿ. ಭಾರತದಲ್ಲಿ ಈ ನುಡಿಯನ್ನು ಎತ್ತಿ ಹಿಡಿದು ಅತ್ಯಂತ ವ್ಯಾಪಕವಾಗಿ ಪ್ರಚಾರ ಮಾಡಿದವರು ಗಾಂಧಿಜೀಯವರು. ಈ ದಾರಿಯಲ್ಲಿ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಭಾರತದ ಅಸ್ಪೃಶ್ಯರನ್ನು "ಹರಿಜನ" ಎಂದು ಕರೆದರು.

"ದೇವರ ಮುಂದೆ ಎಲ್ಲರೂ ಸಮಾನರು" ಎಂಬ ತತ್ವದ ಆದರ್ಶದಲ್ಲಿ ಸಂವಿಧಾನವನ್ನು ಓದಿದವರು "ಕಾನೂನಗಳ ಮುಂದೆ ಎಲ್ಲರೂ ಸಮಾನರು" ಎಂಬ ತತ್ವವನ್ನು ರೂಪಿಸಿದರು ಮತ್ತು ಅದನ್ನು ಪಟ್ಟುಹಿಡಿದು ಒಂದು ಪ್ರಶ್ನಾತೀತ ಸಾಮಾಜಿಕ ಅಭಿಪ್ರಾಯವನ್ನಾಗಿ ರೂಪಿಸಿದರು. ಈ ಹೊತ್ತು "ಕಾನೂನುಗಳ ಮುಂದೆ ಎಲ್ಲರೂ ಸಮಾನರು" ಎಂಬ ಅಭಿಪ್ರಾಯ ಸರ್ವೇಸಾಮಾನ್ಯವಾಗಿದೆ. ಹಾಗಾಗಿ "ಕಾನೂನುಗಳೆ ನಮಗೆ ರಕ್ಷಣೆ ಕೊಡುತ್ತವೆ; ಕಾನೂನುಗಳೇ



ನಮಗೆ ನ್ಯಾಯ ಕೊಡುತ್ತವೆ" ಎಂಬ ನಂಬಿಕೆಗಳನ್ನು ಸೃಷ್ಟಿಸಲಾಗಿದೆ. ಒಂದು ಆಯಾಮದಲ್ಲಿ ಭಾರತದ ಅಸಮಾನತೆಯ ಪರಿಸ್ಥಿತಿಗೆ ಇದು ಅಗತ್ಯವಾಗಿದೆ; ಆದರೆ ಇದು ಸರಿಯಾಗಿದೆ ಎಂದು ಒಪ್ಪಲು ಸಾಧ್ಯವಿಲ್ಲ. ಯಾಕೆಂದರೆ ಅಗತ್ಯವಾಗಿರುವುದೆಲ್ಲ ಸರಿಯಾಗಿ ಇರಬೇಕಾಗಿಲ್ಲ. ಅದೇ ರೀತಿ ಸರಿಯಾಗಿ ಇರುವುದೆಲ್ಲ ಅಗತ್ಯವಾಗಿ ಇರಬೇಕಾಗಿಲ್ಲ. ಅನೇಕ ಸಲ ಇವೆರಡಕ್ಕೂ ವಿರುದ್ಧ ಸಂಬಂಧವೂ ಕೂಡ ಇರಬಹುದು.

"ಕಾನೂನುಗಳ ಮುಂದೆ ಎಲ್ಲರೂ ಸಮಾನರು" ಎಂಬ ಅಭಿಪ್ರಾಯದ ಬಗೆಗೆ ಸ್ವತಃ ಅಂಬೇಡ್ಕರ್ ಅವರಿಗೆ ಯಾವ ನಂಬಿಕೆಯೂ ಇರಲಿಲ್ಲ. ಇದು ಅತ್ಯಂತ ಕುತೂಹಲದ ಅಂಶ ಎಂದು ನಾನು ಭಾವಿಸಿದ್ದೇನೆ. ಧರ್ಮಗ್ರಂಥಗಳ ಪ್ರಕಾರ, "ದೇವರ ಮುಂದೆ ಎಲ್ಲರೂ ಸಮಾನರು'. ಸಂವಿಧಾನದ ಪ್ರಕಾರ, "ಕಾನೂನುಗಳ ಮುಂದೆ ಎಲ್ಲರೂ ಸಮಾನರು". ಈ ಎರಡೂ ಹೇಳಿಕೆಗಳು ಒಂದೇ ರೀತಿ ಇದ್ದು, ಒಂದೇ ರೀತಿಯ ಸಂದೇಶವನ್ನು ನಮಗೆ ಒಪ್ಪಿಸುತ್ತಿರುವಂತೆ ಕಾಣಿಸುತ್ತಿದೆ. ಧರ್ಮ ಗ್ರಂಥಗಳನ್ನು ಅಂಬೇಡ್ಕರರಂತೆ ಆಧಾರಸಹಿತವಾಗಿ ಅತ್ಯಂತ ಆಳವಾಗಿ ವಿಮರ್ಶೆ ಮಾಡಿದವರು ಬಹುಶಃ ಇಡೀ ಜಗತ್ತಿನಲ್ಲಿ ಮತ್ತೊಬ್ಬರು ಇರಲಾರರು. "ಕಾನೂನುಗಳ ಮುಂದೆ ಎಲ್ಲರೂ ಸಮಾನರು" ಎಂದು ಹೇಳುವುದಕ್ಕೂ, "ದೇವರ ಮುಂದೆ ಎಲ್ಲರೂ ಸಮಾನರು" ಎಂದು ಹೇಳುವುದಕ್ಕೂ ಅಂಬೇಡ್ಕರ್ ಅವರ ಪ್ರಕಾರ ಯಾವ ವ್ಯತ್ಯಾಸವು ಕೂಡ ಇಲ್ಲ. ಹಾಗಾಗಿ ಅಂಬೇಡ್ಕರ್ ಅವರಿಗೆ ಸಂವಿಧಾನವನ್ನು ರಚಿಸುವಾಗ ಇದರಲ್ಲಿ ಇರುವ ಕಾನೂನುಗಳು ಮಾತ್ರವೆ ಭಾರತವನ್ನು ಒಂದು ಕರುಣೆಯ ಭಾರತವನ್ನಾಗಿ, ಪರಸ್ಪರ ಸಹೋದರತೆಯ, ಸಮಾನತೆಯ ಹಾಗೂ ಸ್ವಾತಂತ್ರ್ಯದ ಭಾರತವನ್ನಾಗಿ ರೂಪಿಸಬಲ್ಲವೇ ಎಂಬುದರ ಬಗೆಗೆ ಅತ್ಯಂತ ಆಳವಾದ ಮತ್ತು ಬಲವಾದ ಸಂದೇಹಗಳು ಇದ್ದವು. ಹಾಗಿದ್ದರೆ ಭಾರತ ಸಂವಿಧಾನವನ್ನು ರಚನೆ ಮಾಡಿರುವ ಹದ ಯಾವುದು ಎಂಬುದನ್ನು ತಾಳ್ಮೆಯಿಂದ ನಾವು ಅರಿಯಬೇಕಾಗಿದೆ. ಈ ಹದದ ಪ್ರಕಾರ, "ದೇವರ ಮುಂದೆ ಎಲ್ಲರೂ ಸಮಾನರು" ಎಂದು ಹೇಳಿದರೆ, ಒಬ್ಬ ಶ್ರೀಮಂತನು – ಒಬ್ಬ ಬಡವನು, ಒಬ್ಬ ದುಷ್ಟನು – ಒಬ್ಬ ಸಭ್ಯನು, ದೇವರ ಮುಂದೆ ಸಮಾನರು ಎಂದು ಒಪ್ಪಿಕೊಂಡಂತೆ ಆಗುತ್ತದೆ. ಅದೇ ರೀತಿ "ಕಾನೂನುಗಳ ಮುಂದೆ ಎಲ್ಲರೂ ಸಮಾನರು" ಎಂದಾಗ ಒಬ್ಬ ಶೋಷಕನು – ಒಬ್ಬ ಶೋಷಿತನು, ಅಪಮಾನಿತನು ಎಲ್ಲರೂ ಒಂದೆ ಎಂದು ಆಗುತ್ತದೆ. ಇಂತಹ ಗ್ರಹಿಕೆಯ ಧೋರಣೆಯ ಬಗೆಗೆ ಅಂಬೇಡ್ಕರ್ ಅವರಿಗೆ ಬಲವಾದ ತಕರಾರು ಇತ್ತು. ಹಾಗಾಗಿ ಸಂವಿಧಾನದ ಹದವನ್ನು ಬಳಸಿ ಹೇಳುವುದಾದರೆ, ಪ್ರಜೆಗಳ ಮುಂದೆ ಪ್ರಜೆಗಳು ಸಮಾನರು, ಜನಗಳ ಮುಂದೆ ಜನಗಳು ಸಮಾನರು, ನಾಗರಿಕರ ಮುಂದೆ ನಾಗರಿಕರು ಸಮಾನರು. ಇದನ್ನು ಇನ್ನೂ ವಿಸ್ತರಿಸುವುದಾದರೆ ಒಂದು ಧರ್ಮದ ಜನರ ಮುಂದೆ ಮತ್ತೊಂದು ಧರ್ಮದ ಜನರು ಸಮಾನರು. ಒಂದು ಜಾತಿಯ ಜನರ ಮುಂದೆ ಮತ್ತೊಂದು ಜಾತಿಯ ಜನರು ಸಮಾನರು. ಒಂದು ಲಿಂಗದ ಮುಂದೆ ಮತ್ತೊಂದು ಲಿಂಗದವರು ಸಮಾನರು. ಇದು ರಾಷ್ಟ್ರದಲ್ಲಿ ಈಗಾಗಲೆ ಸಾಧಿಸಿರುವ ವಸ್ತುಸ್ಥಿತಿ ಅಲ್ಲ. ಬದಲಾಗಿ ಸಾಧಿಸಬೇಕಾದ ಗುರಿ ಮತ್ತು ನಿರ್ಮಾಣ ಮಾಡಬೇಕಾದ ಗುರಿ. ಇದಕ್ಕೆ ಸಂವಿಧಾನ ಒಂದು ದಾರಿ, ಒಂದು ಶಕ್ತಿಶಾಲಿಯಾದ ಸ್ಫೂರ್ತಿ ಎಂಬುದು ಸಂವಿಧಾನ ರಚನೆಯ ಒಳಗಿನ ಒಂದು ಹದ. ಈ ನಿಟ್ಟಿನಲ್ಲಿ ಸಂವಿಧಾನದ ಮೂಲಕ ಮಾನವೀಯತೆ ಎಲ್ಲರಲ್ಲೂ ಅರಳಬೇಕು. ಈ ಹದವನ್ನು ನಾವು ಅರಿತುಕೊಳ್ಳದಿದ್ದರೆ ಸಂವಿಧಾನವು ಕೇವಲ ಕಾನೂನುಗಳ ಗ್ರಂಥವಾಗಿ, ಆಳುವವರ

ಕೈಪಿಡಿಯಾಗಿ ಮಾತ್ರ ಕಾಣಿಸುತ್ತದೆ.

ಈ ಮಾತುಗಳನ್ನು ನಾನು ಆಧಾರ ಸಮೇತವಾಗಿ ಹೇಳುತ್ತಿದ್ದೇನೆ. 1949 ನವೆಂಬರ್ 26, ಸಂವಿಧಾನ ಸಮರ್ಪಣಾ ದಿನ. ಅಂದು ಭಾರತದ ಪಾರ್ಲಿಮೆಂಟಿನಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚನೆಯ ಬಗೆಗೆ ಸಂಕ್ಷಿಪ್ತವಾದ ವಿವರಣೆಯನ್ನು ನೀಡಿದರು. ಕೊನೆಗೆ ಬಹಳ ಮುಖ್ಯವಾದ ಒಂದು ಮಾತನ್ನು ಅವರು ಹೇಳಿದರು. ಅದು ಏನೆಂದರೆ, "1950 ಜನವರಿ 26ರಂದು ಭಾರತವು ಒಂದು ವಿರೋಧಾಭಾಸದ ದಿನಕ್ಕೆ ಕಾಲಿಡುತ್ತಿದೆ. ಒಬ್ಬರಿಗೆ ಒಂದು ಓಟು, ಒಂದು ಓಟಿಗೆ ಒಂದು ಬೆಲೆ ಎಂಬುದು ರಾಜಕೀಯದಲ್ಲಿ ಸಮಾನತೆ. ಆದರೆ ಈ ಸಮಾನತೆಯೇ ಸಾಮಾಜಿಕ ಆರ್ಥಿಕ ನೆಲೆಯ ಅಸಮಾನತೆಯನ್ನು ಮುಂದುವರೆಸುತ್ತದೆ. ಆದ್ದರಿಂದ ಸಾಮಾಜಿಕ ಆರ್ಥಿಕ ನೆಲೆಯ ಅಸಮಾನತೆಯನ್ನು ಅದಷ್ಟು ಬೇಗ ತೊಡೆದು ಹಾಕಬೇಕು. ಇಲ್ಲದಿದ್ದರೆ ಈ ಅಸಮಾನತೆಯಿಂದ ರೋಸಿಹೋದ ಜನರು ಈ ಸಂಸದೀಯ ಪ್ರಜಾಪ್ರಭುತ್ವವನ್ನು ಕುಟ್ಟಿ ಮಡಿ ಮಾಡುತ್ತಾರೆ" ಎಂದು ಹೇಳಿದ್ದರು. ಬಾಬಾಸಾಹೇಬರ ಈ ಮಾತುಗಳಲ್ಲಿ ಸಂವಿಧಾನ ಮತ್ತು ಅದರಲ್ಲಿರುವ ಕಾನೂನುಗಳು ಮುಖ್ಯವಾಗಿ ಮಾಡಬೇಕಿರುವ ಕೆಲಸ ಎಂದರೆ ಅದು ಸಾಮಾಜಿಕ ಆರ್ಥಿಕ ನೆಲೆಯ ಅಸಮಾನತೆಯನ್ನು ಕಡಿಮೆ ಮಾಡುವುದು. ಈ ಕಾರಣಕ್ಕಾಗಿಯೇ, ಈ ಗುರಿಗಾಗಿಯೇ ಸಂವಿಧಾನವನ್ನು ಮಡಿಸಬೇಕು ಎಂಬುದು ಬಾಬಾಸಾಹೇಬರ ಇಂಗಿತವಾಗಿತ್ತು; ಇದು ಸಂವಿಧಾನ ರಚನೆಯ ಹಿಂದಿನ ಹದವಾಗಿತ್ತು.





ಧರ್ಮಗ್ರಂಥಗಳ ಜೊತೆಯಲ್ಲಿ ಸಂವಿಧಾನವನ್ನು ಓದಬೇಕಾದ ಅಗತ್ಯದ ಬಗೆಗೆ ಒಂದು ವಿವರಣೆಯ ಅಗತ್ಯವಿದೆ. ಪ್ರಸಿದ್ಧ ಧರ್ಮಗ್ರಂಥಗಳಾಗಿರುವ ಬೈಬಲ್, ಖುರಾನ್ ಮತ್ತು ಭಗವದ್ಗೀತೆಗಳು ಕ್ರಿಸ್ತ ಪೂರ್ವದಲ್ಲಿ ರಚನೆಯಾದವು. ಇಂದು ನಾವು 21ನೇ ಶತಮಾನದ 2ನೇ ದಶಕದ ಕೊನೆಯಲ್ಲಿ ಇದ್ದೇವೆ. ಮನುಷ್ಯ ಕುಲ ಹಲವಾರು ಅವಸ್ಥಾಂತರಗಳನ್ನು ದಾಟಿಕೊಂಡು ಬಂದಿದೆ. ಈಗಿನ ಪರಿಸ್ಥಿತಿ ಕ್ರಿಸ್ತ ಪೂರ್ವದ ಪರಿಸ್ಥಿತಿ ಅಲ್ಲ. ನಮ್ಮ ಸಾಮಾಜಿಕ ಬದಲಾವಣೆ, ಬೆಳವಣಿಗೆ, ಆದ್ಯತೆ ಮತ್ತು ಅಗತ್ಯಗಳಿಗೆ ಅನುಗುಣವಾಗಿ ನಮಗೆ ಮಾರ್ಗದರ್ಶನ ಮಾಡುವ ಗ್ರಂಥಗಳೂ ಕೂಡ ಬದಲಾಗಬೇಕಾಗುತ್ತದೆ. ಭಾರತದಲ್ಲಿ ಸಂವಿಧಾನ ಜಾರಿಗೆ ಬಂದು 70 ವರ್ಷಗಳಾಗಿವೆ. ಈ 70 ವರ್ಷಗಳ ಅವಧಿಯಲ್ಲಿ ಭಾರತದ ಸಂವಿಧಾನವು 103 ತಿದ್ದುಪಡಿಗಳನ್ನು ಕಂಡಿದೆ. 70 ವರ್ಷಗಳಿಗೆ 103 ತಿದ್ದುಪಡಿಗಳನ್ನು ನಮ್ಮ ಸಂವಿಧಾನ ಕಂಡಿದೆ ಎನ್ನುವುದಾದರೆ, ಕ್ರಿಸ್ತ ಪೂರ್ವದಲ್ಲಿ ರಚನೆಯಾಗಿರುವ ಧರ್ಮಗ್ರಂಥಗಳು ಇನ್ನೆಷ್ಟು ಸಂಖ್ಯೆಯ ತಿದ್ದುಪಡಿಗಳನ್ನು ಕಾಣಬೇಕಿತ್ತು? ಅವುಗಳ ದೊಡ್ಡ ದೌರ್ಭಾಗ್ಯವೆಂದರೆ ಅವು ಇದುವರೆಗೂ ಒಂದೇ ಒಂದು ತಿದ್ದುಪಡಿಯನ್ನೂ ಕಂಡಿಲ್ಲ. ಇನ್ನು ಅವು ಹೇಗೆ ವರ್ತಮಾನಕ್ಕೆ ಸ್ಪಂದಿಸಬಲ್ಲವು ಎಂಬುದು ನಮಗೆ ತಿಳಿಯುತ್ತದೆ. ಬದಲಾಗಿರುವ ಮತ್ತು ಬದಲಾಗುತ್ತಿರುವ ಆದ್ಯತೆ ಹಾಗೂ ಅಗತ್ಯಗಳನ್ನು ಇವು ಪೂರೈಸುವುದಿಲ್ಲ ಎಂಬುದು ಖಚಿತ. ಹಾಗಿದ್ದರೆ ಅವು ನಮ್ಮನ್ನು ಹೇಗೆ ನಿರ್ದೇಶನ ಮಾಡಬಲ್ಲವು? ಈ ಆಧುನಿಕ ಯುಗದಲ್ಲೂ ಅವು ನಮಗೆ ಹೇಗೆ ಮಾರ್ಗದರ್ಶನ ಮಾಡಬಲ್ಲವು? ಈ ಪ್ರಶ್ನೆಗಳನ್ನು ನಾವು ಇವತ್ತು ಕೇಳಿಕೊಳ್ಳಬೇಕಾಗಿದೆ.

ಸಂವಿಧಾನದ ರಚನೆಯ ವಿನ್ಯಾಸ ಹೇಗಿದೆ ಎಂಬುದನ್ನು ನಾವು ಸರಿಯಾಗಿ ಆಲೋಚನೆ ಮಾಡಬೇಕು. ರಾಷ್ಟ್ರಪತಿಯವರನ್ನು ಈ ರಾಷ್ಟ್ರದ ಪ್ರಥಮ ಪ್ರಜೆ ಎಂದು ಕರೆಯುತ್ತೇವೆ. ಅವರಿಗೆ ಭಾರತದ ಸಂಸತ್ತು ಮತ್ತು ಭಾರತದ ಸಂವಿಧಾನವು ಅತ್ಯುನ್ನತವಾದ ಅಧಿಕಾರವನ್ನು ಕೊಟ್ಟಿದೆ. ಅದರ ನಂತರ ಪ್ರಧಾನ ಮಂತ್ರಿಗಳು. ಲೋಕಸಭೆ, ರಾಜ್ಯಸಭೆ,

ವಿಧಾನಸಭೆ, ವಿಧಾನ ಪರಿಷತ್ತು, ಜಿಲ್ಲಾ ಪಂಚಾಯತ್, ತಾಲ್ಲೂಕ್ ಪಂಚಾಯತ್, ಹೀಗೆ ಶಾಸಕಾಂಗದ ವಿನ್ಯಾಸವಿದೆ. ಇನ್ನು ನ್ಯಾಯಾಂಗದ ವಿಷಯಕ್ಕೆ ಬಂದರೆ, ಭಾರತದಲ್ಲಿ ಅತ್ಯುನ್ನತವಾದ ಅಧಿಕಾರ ಇರುವುದು ಭಾರತದ ಸುಪ್ರೀಂ ಕೋರ್ಟಿಗೆ. ಆ ನಂತರ ಹೈಕೋರ್ಟ್, ಆ ನಂತರ ಜಿಲ್ಲಾ ಕೋರ್ಟ್. ಹೀಗೆ ಇದರ ವಿನ್ಯಾಸವಿದೆ. ಭಾರತದ ಸಂವಿಧಾನ ಆರಂಭವಾಗುವುದು ಮುಂದಿನ ಈ ಮುಖ್ಯವಾದ ಪದಗಳ ಮೂಲಕ. "ಭಾರತದ ಪ್ರಜೆಗಳಾದ ನಾವು.....". ಇದು ನಮಗೆ ಏನನ್ನು ಸೂಚಿಸುತ್ತಿದೆ ಎಂದರೆ, ಭಾರತದಲ್ಲಿ ಪ್ರಜೆಗಳು ಬಹಳ ಮುಖ್ಯ ಎಂಬ ಒಂದು ಮೌಲ್ಯವನ್ನು ಪ್ರತಿಪಾದನೆ ಮಾಡುತ್ತಿದೆ. ಮುಂದುವರೆದು ಭಾರತದ ಸಂವಿಧಾನವು ಭಾರತದ ಪ್ರಜೆಗಳನ್ನು ಭಾರತದ ನಾಗರಿಕರು ಎಂದು ಕರೆಯುತ್ತಿದೆ. ಸಂವಿಧಾನದ ಪ್ರಸ್ತಾವನೆಯ ನಂತರ ನಾಗರಿಕತ್ವವನ್ನು ಕುರಿತು ಅದು ವಿವರಿಸಿದೆ. ಅನಂತರದ ಭಾಗದಲ್ಲಿ ಅದು ಭಾರತದ ನಾಗರಿಕರಿಗೆ ಇರಬೇಕಾಗಿರುವ ಮೂಲಭೂತ ಹಕ್ಕುಗಳನ್ನು ವಿವರಿಸಿದೆ. ತದನಂತರ ಅದು ಭಾರತದ ನಾಗರಿಕರಿಗೆ ಇರಬೇಕಾದ ಕರ್ತವ್ಯಗಳನ್ನು ವಿವರಿಸಿದೆ. ಅಧಿಕಾರ ನಡೆಸುವವರಿಗೆ ಇರಬೇಕಾಗಿರುವ ಅಧಿಕಾರ ವ್ಯಾಪ್ತಿಯನ್ನು ಸಂವಿಧಾನದ ಮೊದಲ ಭಾಗದಲ್ಲಿ ಪ್ರಸ್ತಾಪ ಮಾಡಿಲ್ಲ. ಪ್ರಜೆಗಳಿಗೆ ಇರಬೇಕಾಗಿರುವ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಮೊದಲು ಪ್ರಸ್ತಾಪ ಮಾಡಿದೆ. ಇದು ಸಂವಿಧಾನದ ರಚನೆಯ ಹಿಂದೆ ಅಡಗಿರುವ ಒಂದು ಹದ ಎಂದು ನಾನು ಭಾವಿಸಿದ್ದೇನೆ. ಈ ಹದವನ್ನು ನಾನು ಮಾನವೀಯತೆಯ ಹದ ಎಂದು ಕರೆಯುತ್ತೇನೆ. ಇದು ನಮಗೆ ಗೊತ್ತಾಗದಿದ್ದರೆ ಇಡೀ ಸಂವಿಧಾನದ ಆಶಯ ಮತ್ತು ಅದರ ದರ್ಶನ ಅರ್ಥವಾಗುವುದಿಲ್ಲ.

ಸಂವಿಧಾನವನ್ನು ಬಿಡಿ ಬಿಡಿಯಾಗಿ ಓದುವುದು ಒಂದು ಬಗೆ. ಸಂವಿಧಾನವನ್ನು ಇಡಿಯಾಗಿ ಓದುವುದು ಮತ್ತೊಂದು ಬಗೆ. ಇದಲ್ಲದೆ ಬಿಡಿಯಾಗಿ ಓದುತ್ತಾ ಇಡಿಯ ಕಡೆಗೆ ಸಾಗುವುದು; ಇಡಿಯಾಗಿ ಓದುತ್ತಾ ಬಿಡಿಯನ್ನು ಅರ್ಥಮಾಡಿಕೊಳ್ಳುವುದು. ಈ ಕ್ರಮದಲ್ಲಿ ಸಂವಿಧಾನವನ್ನು ಓದದೆ ಇದ್ದರೆ ಯಾವ ಪ್ರಯೋಜನವು ಇಲ್ಲ. ಈ ದೃಷ್ಟಿಯಲ್ಲಿ ಭಾರತದ ಸಂವಿಧಾನವನ್ನು ಆಳುವವರು, ರಾಜಕಾರಣಿಗಳು, ಅಧಿಕಾರಿಗಳು ಓದುವುದಕ್ಕೂ, ಪ್ರಜೆಗಳು ಓದುವುದಕ್ಕೂ ಅತ್ಯಂತ ಮೂಲಭೂತವಾದ ವ್ಯತ್ಯಾಸವಿದೆ. ವ್ಯತ್ಯಾಸ ಇರಲೇ ಬೇಕು. ಈ ವ್ಯತ್ಯಾಸದ ಸ್ವರೂಪವನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕು.

ನಾನು ಈ ವ್ಯತ್ಯಾಸದ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ನಮಗೆಲ್ಲಾ ಪರಿಚಿತವಾಗಿರುವ ಸಂಗತಿಯೊಂದನ್ನು ನಿಮ್ಮ ಮುಂದೆ ವಿವರಿಸುತ್ತೇನೆ. ನಾವು ಈಗ ಕಬಡ್ಡಿ ಆಡಬೇಕು ಎಂದಿಟ್ಟುಕೊಳ್ಳೋಣ. ಅದಕ್ಕೆ ತರಬೇತುಗೊಂಡಿರುವ ಆಟಗಾರರು ಬೇಕು. ಅದಕ್ಕೆ ಸೂಕ್ತವಾದ ಮೈದಾನ ಬೇಕು. ಅದಕ್ಕೆ ನಿಯಮಗಳು ಬೇಕು. ಅದಕ್ಕೆ ಅಂಪೈರ್ ಬೇಕು. ಇವೆಲ್ಲವೂ ಸಿದ್ಧವಾಗಿರಬೇಕು. ಹಾಗಿದ್ದರೆ ಮಾತ್ರ ನಾವು ಈ ಕ್ಷಣದಲ್ಲಿ ಕಬಡ್ಡಿ ಆಟವನ್ನು ಶುರುಮಾಡಬಹುದು. ಒಂದು ವೇಳೆ ಸೂಕ್ತವಾದ ಮೈದಾನವೆ ಇಲ್ಲದಿದ್ದರೆ? ತರಬೇತುಗೊಂಡಿರುವ ಆಟಗಾರರು ಇಲ್ಲದಿದ್ದರೆ? ಅಂಪೈರ್ ಇಲ್ಲದಿದ್ದರೆ? ಆಟ ಆಡಲು ಆಗುವುದಿಲ್ಲ. ಆಗ ಏನು ಮಾಡಬೇಕು. ಇವೆಲ್ಲವನ್ನೂ ನಾವು ಸೃಷ್ಟಿಮಾಡಿಕೊಳ್ಳಬೇಕು, ನಿರ್ಮಾಣ ಮಾಡಿಕೊಳ್ಳಬೇಕು, ನಮ್ಮನ್ನೇ ನಾವು ತರಬೇತುಗೊಳಿಸಿಕೊಳ್ಳಬೇಕು. ಇದೆಲ್ಲವೂ ನಮಗೆ ಸಾಧ್ಯವಿದೆ. ಆದರೆ ಇವೆಲ್ಲವನ್ನೂ ನಾವು ಸೃಷ್ಟಿಮಾಡಿಕೊಳ್ಳದೆ ಮೈದಾನವಿಲ್ಲದ ತಗ್ಗುದಿಣ್ಣೆಗಳಿಂದ ಕೂಡಿರುವ ಜಾಗದಲ್ಲಿ, ತರಬೇತಿ ಪಡೆಯದ ಆಟಗಾರರಿಂದ ಕಬಡ್ಡಿ ಆಡಿಸುತ್ತಿದ್ದೇವೆ. ಇದು ನಮ್ಮ ನಡುವಿನ ಅತ್ಯಂತ ನಗೆಪಾಟಲಿನ ಆಟವಾಗಿದೆ. ಇದು ಭಾರತದ ರಾಜಕಾರಣ; ಇದು ಭಾರತದ ರಾಜಕಾರಣದ ದುಃಸ್ಥಿತಿ. ಇದು ಭಾರತದ ಆಳುವ ವರ್ಗ ಕಳೆದ 70 ವರ್ಷಗಳಲ್ಲಿ ಸಂವಿಧಾನವನ್ನು ಬಳಸಿರುವ ಕ್ರಮ. ಇದು ದುರಂತವಾಗಿದ್ದರೂ ದುರಂತವೆಂದು ನಮಗೆ ಅನಿಸುತ್ತಿಲ್ಲ. ನಾನು ಈ ಮಾತನ್ನು ಯಾಕೆ ಹೇಳುತ್ತಿದ್ದೇನೆ ಎಂದರೆ, ಆಳುವವರಿಗೆ ಆಟ ಆಡಿಸುವುದು ಮಾತ್ರ ಗೊತ್ತು. ಪ್ರಜೆಗಳನ್ನು ತಮಗೆ ಬೇಕಾದ ಹಾಗೆ ಆಟ ಆಡಿಸುವುದು ಗೊತ್ತು. ತಗ್ಗುದಿಣ್ಣೆಗಳಿಂದ ಕೂಡಿರುವ ಜಾಗವನ್ನು ಮೈದಾನವನ್ನಾಗಿ ಮಾರ್ಪಡಿಸಿ, ಅದನ್ನು ಬಳಸಲು ಯೋಗ್ಯವನ್ನಾಗಿ ಪರಿವರ್ತಿಸಲು ಗೊತ್ತಿಲ್ಲ. ಆಟಗಾರರನ್ನು ಸೃಷ್ಟಿಸಲು ಗೊತ್ತಿಲ್ಲ. ನಿಯಮಗಳನ್ನು ರೂಪುಗೊಳಿಸಲು ಗೊತ್ತಿಲ್ಲ. ಜನರನ್ನು ಪ್ರಜೆಗಳನ್ನಾಗಿ, ಪ್ರಜೆಗಳನ್ನು ನಾಗರಿಕರನ್ನಾಗಿ ಪರಿವರ್ತಿಸಲು ಗೊತ್ತಿಲ್ಲ. ಅವರ ಹೃದಯ ಮತ್ತು ಮನಸ್ಸುಗಳಿಗೆ ಸೋದರತೆ, ಸ್ವಾತಂತ್ರ್ಯ ಮತ್ತು ಸಮಾನತೆಯ ಭಾವಗಳನ್ನು ಹುಟ್ಟಿಸಲು ಗೊತ್ತಿಲ್ಲ. ಆರ್ಥಿಕ ಸಾಮಾಜಿಕ ಅಸಮಾನತೆಯನ್ನು ಪರಿವರ್ತಿಸಲು ಗೊತ್ತಿಲ್ಲ; ಆ ಕೆಲಸವನ್ನು ಕೈಗೊಂಡಿಲ್ಲ. ಎಲ್ಲಾ ರೀತಿಯ ಅಸಮಾನತೆ–ಅನ್ಯಾಯ–ದಬ್ಬಾಳಿಕೆಗಳ ಬೆಂಕಿಯ ಮುಂದೆ ಅಂತೂ ಆಟ ಆಡಿಸುತ್ತಲೇ ಇದ್ದಾರೆ; ಆಳ್ವಿಕೆ ಮಾಡುತ್ತಲೇ ಇದ್ದಾರೆ. ಯಾಕೆಂದರೆ ಸ್ವತಃ ಅವರೇ ಭಾರತದ ಸಂವಿಧಾನದ ಮೌಲ್ಯಗಳನ್ನು ಅಂತರ್ಗತ ಮಾಡಿಕೊಂಡಿಲ್ಲ. ಅವರು ತಮ್ಮ ಹೃದಯ ಮತ್ತು ಮನಸ್ಸುಗಳನ್ನು ಪರಿವರ್ತನೆ ಮಾಡಿಕೊಳ್ಳಲು ಸಿದ್ಧರಿಲ್ಲ.

ಸಂವಿಧಾನದ ಓದು ಮತ್ತು ಚರ್ಚೆ, ಮುಖ್ಯವಾಗಿ ದೇಶವನ್ನು ಕಟ್ಟುವುದಕ್ಕಾಗಿ ಬಳಕೆಯಾಗಬೇಕು. ಆದರೆ ಆಳುವ ಜನರು ಸಂವಿಧಾನವನ್ನು ಹಿಡಿದುಕೊಂಡು ದೇಶವನ್ನು ಆಳ್ವಿಕೆ ಮಾಡುತ್ತಿದ್ದಾರೆ. ಅವರು ದೇಶವನ್ನು ಕಟ್ಟುತ್ತಿಲ್ಲ; ದೇಶವನ್ನು ನಿರ್ಮಾಣ ಮಾಡುತ್ತಿಲ್ಲ. ಅವರ ದೃಷ್ಟಿಕೋನವೇ ಆ ತರದ್ದು. ಅವರ ಹಿತಾಸಕ್ತಿಯೇ ಆ ತರದ್ದು. ಇದರ ಪರಿಣಾಮದಿಂದ ಸಂವಿಧಾನವನ್ನು ಕುರಿತ ಚರ್ಚೆ ಸಂವಾದಗಳು ದೇಶವನ್ನು ಆಳ್ವಿಕೆ ಮಾಡುವ ದೃಷ್ಟಿಯಲ್ಲಿ ನಡೆಯುತ್ತಿವೆ. ಇದು ತಪ್ಪು ಎಂಬುದು ನನ್ನ ತಿಳುವಳಿಕೆ.

ಭಾರತವನ್ನು ಲೂಟಿಮಾಡುತ್ತಿದ್ದ ಬ್ರಿಟೀಶರು ಈ ದೇಶವನ್ನು ಆಳುವುದು ಬೇಡ. ಭಾರತೀಯರೇ ಈ ದೇಶವನ್ನು ಆಳ್ವಿಕೆ ಮಾಡಬೇಕು ಎಂಬ ಉದ್ದೇಶ ಸ್ವಾತಂತ್ರ್ಯ ಹೋರಾಟಕ್ಕೆ ಇತ್ತು. ಆದರೆ ಬಾಬಾಸಾಹೇಬರಿಗೆ ಇದರ ದೊಡ್ಡ ಅಪಾಯ ಸ್ಪಷ್ಟವಾಗಿ ಗೊತ್ತಿತ್ತು. ಆದ್ದರಿಂದ ಬಾಬಾಸಾಹೇಬರು ಬ್ರಿಟೀಶರ ವಿರುದ್ಧದ ಹೋರಾಟವನ್ನು "ಸ್ವಾತಂತ್ರ್ಯ ಹೋರಾಟ" ಎಂದು ಕರೆಯಲಿಲ್ಲ. ಅದನ್ನು ಅವರು, ಭಾರತದ ಭೂಮಾಲೀಕ ವರ್ಗ ಮತ್ತು ಶ್ರೀಮಂತ ವರ್ಗ ಭಾರತವನ್ನು ತಾನು ಆಳ್ವಿಕೆ ಮಾಡಲು ನಡೆಸುತ್ತಿರುವ ಹೋರಾಟ" ಎಂದು ವ್ಯಾಖ್ಯಾನಿಸಿದರು. ಅದು ಇವತ್ತಿಗೂ ಕೂಡಾ ಸತ್ಯವಾಗಿದೆ. ಒಂದು ಕುತೂಹಲದ ಸಂಗತಿ ಎಂದರೆ ಗಾಂಧೀಜಿ ಮತ್ತು ಡಾ. ಅಂಬೇಡ್ಕರ್ ಅವರು ಈ ಉದ್ದೇಶಕ್ಕೆ ಸಂಪೂರ್ಣ ವಿರುದ್ಧವಾಗಿದ್ದರು. ಅಂದರೆ ಇದುವರೆಗೆ ಭಾರತವನ್ನು ಬ್ರಿಟೀಶರು ಆಳಿದ್ದಾರೆ; ಇನ್ನು ಮುಂದೆ ಭಾರತದವರೇ



ಆಳ್ವಿಕೆ ನಡೆಸಲಿ ಎಂಬುದರ ಬಗೆಗೆ ಇಬ್ಬರಿಗೂ ವಿರೋಧ ಇತ್ತು. ಆದರೆ ಇವರಿಬ್ಬರ ವಿರೋಧದಲ್ಲಿ ಬಹಳ ಸ್ಪಷ್ಟವಾದ ವ್ಯತ್ಯಾಸವಿತ್ತು. ಏನದು ವ್ಯತ್ಯಾಸ ಎಂದರೆ, ಗಾಂಧೀಜಿಯವರ ಪ್ರಕಾರ "ಬ್ರಿಟೀಶರು ಭಾರತಕ್ಕೆ ಬರುವ ಮೊದಲು ಭಾರತವು ಎಲ್ಲ ರೀತಿಯಲ್ಲೂ ಒಂದು ಸ್ವಾವಲಂಬನೆಯ ಮತ್ತು ಸಭ್ಯ ದೇಶವಾಗಿತ್ತು. ಬ್ರಿಟೀಷರನ್ನು ಭಾರತದಿಂದ ಹೊರಗೆ ಅಟ್ಟಿದ ನಂತರ, ಈ ಸ್ವಾವಲಂಬನೆ ಮತ್ತು ಸಭ್ಯತೆಯನ್ನು ಅದು ಇರುವ ಹಾಗೆಯೇ ಸ್ವಲ್ಪವೂ ಮುಕ್ಕಾಗದಂತೆ ಮುಂದುವರೆಸಬೇಕು" ಎಂಬುದಾಗಿತ್ತು. ಅಂಬೇಡ್ಕರ್ ಅವರ ಪ್ರಕಾರ, "ಬ್ರಿಟೀಶರು ಭಾರತಕ್ಕೆ ಬರುವ ಮೊದಲು ಭಾರತದಲ್ಲಿ ಅಸ್ಪೃಶ್ಯತೆ, ಜಾತೀಯತೆ, ವರ್ಗ ಅಸಮಾನತೆ, ಸ್ತ್ರೀ-ಪುರುಷರ ನಡುವಿನ ಅಸಮಾನತೆಗಳು ಇದ್ದವು. ಹಾಗಾಗಿ ಇದು ಸಭ್ಯ ದೇಶವಾಗಿರಲಿಲ್ಲ. ಬ್ರಿಟೀಶರನ್ನು ಭಾರತದಿಂದ ಹೊರಗೆ ಕಳಿಸಿದ ನಂತರ ಎಲ್ಲಾ ರೀತಿಯಲ್ಲೂ ಸಮಾನತೆಯ ಭಾರತವನ್ನು ಕಟ್ಟಬೇಕು" ಎಂಬುದಾಗಿತ್ತು. ಭಾರತದ ನಿಮ್ನ ವರ್ಗದವರು, ಮಹಿಳೆಯರು, ಆದಿವಾಸಿ, ಬುಡಕಟ್ಟು ಜನರು ರಾಷ್ಟ್ರವನ್ನು ಕಟ್ಟುವ ಕೆಲಸದಲ್ಲಿ ತೊಡಗುವಂತೆ ಮಾಡಬೇಕು. ಇದನ್ನು ಮೀಸಲಾತಿಯ ನೆರವಿನಿಂದ ಮಾಡಬಹುದು" ಎಂಬುದಾಗಿತ್ತು. ಹಾಗಾಗಿ ಅಂಬೇಡ್ಕರ್ ಅವರ ಪ್ರಕಾರ ಸ್ವಾತಂತ್ರ್ಯದ ನಂತರ ಮತ್ತು ಸಂವಿಧಾನ ಜಾರಿಗೆ ಬಂದ ನಂತರ ಭಾರತದಲ್ಲಿ ಹೊಸ ಮನುಷ್ಯರನ್ನು, ಹೊಸ ಮನುಷ್ಯತ್ವವನ್ನು ನಿರ್ಮಾಣ ಮಾಡಬೇಕು ಎಂಬುದಾಗಿತ್ತು. ಆದ್ದರಿಂದ ಅಂಬೇಡ್ಕರರು "ಕಾನೂನುಗಳ ಮುಂದೆ ಎಲ್ಲರೂ ಸಮಾನರು" ಎಂಬ ತತ್ವದ ಪರವಾಗಿ ಇರಲಿಲ್ಲ. ಮನುಷ್ಯರ ಮುಂದೆ ಮನುಷ್ಯರು ಸಮಾನರು ಎಂಬ ತತ್ವ ಮತ್ತು ಅದರ ಆಚರಣೆ ಅಂಬೇಡ್ಕರ್ ಅವರಿಗೆ ಮುಖ್ಯವಾಗಿತ್ತು. ಆದರೆ ಗಾಂಧೀಜಿಯವರಿಗೆ ದೇವರ ಮುಂದೆ ಎಲ್ಲರೂ ಸಮಾನರು ಎಂಬ ತತ್ವದಲ್ಲಿ ಅತ್ಯಂತ ಗಾಢವಾದ ನಂಬಿಕೆ ಇತ್ತು. ಹಾಗಾಗಿ ಅವರು ಅಸ್ಪೃಶ್ಯರನ್ನು "ಹರಿಜನ" ಎಂದು ಕರೆದರು. ಮನುಷ್ಯ ಮನುಷ್ಯರ ನಡುವೆ ಸೃಷ್ಟಿ ಮಾಡಿರುವ ಅಸಮಾನತೆ, ಶೋಷಣೆ ಮತ್ತು ಅಪಮಾನಗಳನ್ನು ಮನುಷ್ಯರ ಪ್ರಜ್ಞೆಗೆ ತಂದುಕೊಳ್ಳಬಾರದು ಎಂಬುದು ಗಾಂಧೀಜಿ ಅವರ ಗಾಢವಾದ ನಂಬಿಕೆಯಾಗಿತ್ತು. ಅಸಮಾನತೆ ಹಾಗೂ ಶೋಷಣೆಯ ಬಗೆಗೆ ಸಾಮಾಜಿಕವಾಗಿ ಅರಿವನ್ನು ರೂಪಿಸಬಾರದು ಎನ್ನುತ್ತಿದ್ದರು. ಪಾಶ್ಚಾತ್ಯ ಶಿಕ್ಷಣವು ಅನುಭವವನ್ನು ಅರಿವನ್ನಾಗಿ, ತಿಳುವಳಿಕೆಯನ್ನಾಗಿ ಮತ್ತು ಪ್ರಜ್ಞೆಯನ್ನಾಗಿ ರೂಪಿಸುತ್ತಿತ್ತು. ಗಾಂಧೀಜಿಯವರು ಈ ಶಿಕ್ಷಣವನ್ನು ಬಲವಾಗಿ ವಿರೋಧಿಸಿದರು. ಮುಂದವರೆದು ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ಕೊಡಬಾರದು ಎಂದರು. ಅವರು ಮನೆಯ ಹೊರಗೆ ಬರಬಾರದು ಎಂದರು. ಅವರು ತಮ್ಮ ಹಕ್ಕುಗಳಿಗೆ ಹೋರಾಟ ಮಾಡಬಾರದು ಎಂದರು. ಗಾಂಧೀಜಿಯವರು ಬರೆದಿರುವ "ಹಿಂದ್ ಸ್ವರಾಜ್ಯ" ಪುಸ್ತಕದಲ್ಲಿ ಇದಕ್ಕೆ ಆಧಾರಗಳಿವೆ.

ನನ್ನ ಮಾತುಗಳ ಕೇಂದ್ರ ತಿರುಳು ಸಂವಿಧಾನದ ಬಿಂದಿರುವ ಹದ. ಈಗ ಸಂವಿಧಾನದ ಅನುಚ್ಛೇದಗಳನ್ನು ಆಧರಿಸಿ ಇದನ್ನು ಚರ್ಚೆ ಮಾಡೋಣ. ಆಸ್ತಿ, ಸಂಪತ್ತು ಮತ್ತು ಅಧಿಕಾರಗಳು ಭಾರತದಲ್ಲಿ ಅಸಮಾನವಾಗಿ ಹಂಚಿಕೆಯಾಗಿದೆ. ಈ ಮೂಲಭೂತ ಕಾರಣದಿಂದಲೆ ಬಡವ ಶ್ರೀಮಂತ ವರ್ಗಗಳು ನಿರ್ಮಾಣವಾಗಿವೆ. ಈ ಎರಡು ವರ್ಗಗಳನ್ನು ತೊಡೆದು ಹಾಕಬೇಕು ಎಂಬುದು ಅಂಬೇಡ್ಕರರ ಅಚಲವಾದ ನಿಲುವಾಗಿತ್ತು. ಕೆಲವರ ಪ್ರಕಾರ ಬಡತನ ಮತ್ತು ಬಡವರು ಮಾತ್ರವೇ ಬದಲಾಗಬೇಕು. ಇದರಿಂದ ಸಮಾನತೆ ಬರುತ್ತದೆ. ಆದರೆ ಅಂಬೇಡ್ಕರ್ ಅವರ ಪ್ರಕಾರ ಶೋಷಿತರು ಮಾತ್ರ ಬದಲಾಗುವುದಲ್ಲ; ಶೋಷಕರೂ ಕೂಡ ಬದಲಾಗಬೇಕು. ಹಾಗಾದಾಗ ಮಾತ್ರ ಸಮಾನತೆಯನ್ನು ನಿರ್ಮಿಸಲು ಸಾಧ್ಯವಾಗುತ್ತದೆ.



ಅಂಬೇಡ್ಕರರ ಈ ಆಶಯಗಳು ಸಂವಿಧಾನದ ವಿವಿಧ ಅನುಚ್ಛೇದಗಳಲ್ಲಿ ಜಾಗ ಪಡೆದಿವೆ. ಕೃಷಿಯಲ್ಲಿ ಸಾಮೂಹಿಕ ಒಡೆತನ ಬೇಕು ಎಂದು ಅಂಬೇಡ್ಕರ್ ಅವರು ಪ್ರತಿಪಾದನೆ ಮಾಡಿದ್ದರು. ಇದನ್ನು ಆಧರಿಸಿ ಸಂಪತ್ತು ಮತ್ತು ಉತ್ಪಾದನಾ ಸಾಧನಗಳು ಒಂದು ಕಡೆ ಕೇಂದ್ರೀಕೃತವಾಗಬಾರದು ಎಂಬುದನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ. ಸಂವಿಧಾನದ ಅನುಚ್ಛೇದ 38 ಮತ್ತು 39ನ್ನು ನೋಡಬಹುದು.

ಇನ್ನು ನಾನು ಬಹಳ ಮುಖ್ಯವಾಗಿ ಚರ್ಚೆ ಮಾಡುವ ಒಂದು ಅನುಚ್ಛೇದ ಸಂವಿಧಾನದ 72ನೇ ಅನುಚ್ಛೇದ. ಇದರಲ್ಲಿ ಭಾರತದ ಸಂವಿಧಾನವು ರಾಷ್ಟ್ರಪತಿಗಳಿಗೆ ಕೊಟ್ಟಿರುವ ಪರಮೋಚ್ಚ ಅಧಿಕಾರದ ಸ್ವರೂಪ ಮತ್ತು ವ್ಯಾಪ್ತಿ ಇದೆ. ಇದು ಕಾನೂನುಗಳ ಪ್ರಕಾರ ಒಂದು ಪ್ರಕರಣದಲ್ಲಿ ಕೋರ್ಟು ಆರೋಪಿ ಎಂದು ಸಾಬೀತು ಮಾಡಿದವನನ್ನು, ಕೊನೆಗೆ ಅಪರಾಧಿ ಎಂದು ತೀರ್ಮಾನಿಸುತ್ತದೆ ಎಂದು ಇಟ್ಟುಕೊಳ್ಳೋಣ. ಈ ಅನುಚ್ಛೇದ ಅಂತಹ ಅಪರಾಧಿಗೆ ಮರಣದಂಡನೆ ನೀಡುವ ವಿಷಯಕ್ಕೆ ಸಂಬಂಧಿಸಿದುದು. ನ್ಯಾಯಾಲಯದ ಎಲ್ಲ ಹಂತಗಳ ಪ್ರಕ್ರಿಯೆಗಳು ಮುಗಿದ ನಂತರ, ಸುಪ್ರೀಂ ಕೋರ್ಟು ಅಪರಾಧಿಗೆ ಮರಣದಂಡನೆಯನ್ನು ವಿಧಿಸುತ್ತದೆ. ಆದರೆ ಕೊನೆಯಲ್ಲಿ ಇದಕ್ಕೆ ರಾಷ್ಟ್ರಪತಿಯವರ ಅನುಮೋದನೆ ಹಾಗೂ ಅವರ ಸಹಿಯ ಅಗತ್ಯವಿರುತ್ತದೆ. ಇದು ಮರಣದಂಡನೆಯ ಕೊನೆಯ ಹಂತ. ಈ ಕೊನೆಯ ಹಂತದಲ್ಲಿ ಮಾನ್ಯ ರಾಷ್ಟ್ರಪತಿಯವರು ಇಡೀ ಪ್ರಕ್ರಿಯೆಯ ಸಾಧಕ ಭಾದಕಗಳನ್ನು ಅವಲೋಕನ ಮಾಡಿ; ಈ ಕೆಳಗಿನ ತಮ್ಮ ಅಧಿಕಾರವನ್ನು ಪ್ರಯೋಗಿಸಬಹುದು.

ಸಂವಿಧಾನದ ಅನುಚ್ಛೇದ: 72 (1) ರಾಷ್ಟ್ರಪತಿಯವರಿಗೆ;

(ಸಿ) ಶಿಕ್ಷೆಯು ಮರಣದಂಡನೆಯಾಗಿರುವ ಎಲ್ಲಾ ಪ್ರಕರಣಗಳಲ್ಲಿ;

ಯಾವುದೇ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾದ ಯಾವನೇ ವ್ಯಕ್ತಿಯ ಮೇಲೆ ವಿಧಿಸಿರುವ ದಂಡನೆಯ ಬಗ್ಗೆ ಕ್ಷಮಾದಾನ, ಪ್ರವಿಲಂಬನ, ಮುಂದೂಡುವಿಕೆ ಅಥವಾ ಮಾಫಿಯನ್ನು ಮಂಜೂರು ಮಾಡುವ ಅಥವಾ ಶಿಕ್ಷೆಯನ್ನು ಅಮಾನತ್ತುಗೊಳಿಸುವ ಮಾಫಿ, ಅಥವಾ ಪರಿವರ್ತನೆ ಮಾಡುವ ಅಧಿಕಾರ ಇರತಕ್ಕದ್ದು.

(1) ನೆಯ ಖಂಡದ (ಕ) ಉಪಖಂಡದಲ್ಲಿ ಇರುವ ಯಾವುದೇ ಯಾವುದೂ ಸೇನಾನ್ಯಾಯಾಲಯವು ಕೊಟ್ಟಿರುವ ಶಿಕ್ಷೆಯನ್ನು ಅಮಾನತ್ತುಗೊಳಿಸುವುದಕ್ಕೆ, ಮಾಫಿ ಮಾಡುವುದಕ್ಕೆ ಅಥವಾ ಪರಿವರ್ತಿಸುವುದಕ್ಕೆ ಸಂಘದ ಸಶಸ್ತ್ರ ಬಲಗಳ ಯಾವನೇ ಅಧಿಕಾರಿಗೆ ಕಾನೂನು ಮೂಲಕ ಪ್ರದಾನ ಮಾಡಲಾಗಿರುವ ಅಧಿಕಾರವನ್ನು ಬಾಧಕಗೊಳಿಸತಕ್ಕದ್ದಲ್ಲ.

(1) ನೆಯ ಖಂಡದ (ಗ) ಉಪಖಂಡದಲ್ಲಿ ಇರುವುದು ಯಾವುದು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಾಜ್ಯದ ರಾಜ್ಯಪಾಲನು ಮರಣದಂಡನೆಯನ್ನು ಅಮಾನತ್ತುಗೊಳಿಸುವುದಕ್ಕೆ, ಮಾಫಿ ಮಾಡುವುದಕ್ಕೆ, ಅಥವಾ ಪರಿವರ್ತಿಸುವುದಕ್ಕೆ ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು ಬಾಧಕಗೊಳಿಸತಕ್ಕದ್ದಲ್ಲ.

ಇದೆಲ್ಲಕ್ಕೂ ಮಿಗಿಲಾಗಿ ಭಾರತದ ಸಂವಿಧಾನದ ಪ್ರಸ್ತಾವನೆಯಿಂದ ಹಿಡಿದು, ಅಧ್ಯಾಯ 1ರಿಂದ 4ರವರೆಗಿನ, 1ರಿಂದ 51ರವರೆಗಿನ ಅನುಚ್ಛೇದಗಳಲ್ಲಿ ಬುದ್ಧನ ಆಶಯಗಳ ಸೂಕ್ಷ್ಮ ಛಾಯೆ ಇರುವುದನ್ನು ಗುರುತಿಸಬಹುದು.

ಮೂಲ ಇಂಗ್ಲಿಶ್‌ನಲ್ಲಿ ರಚನೆ ಮಾಡಿರುವ ಭಾರತದ ಸಂವಿಧಾನವನ್ನು ಮೇಲಿನಂತೆ ಕನ್ನಡಕ್ಕೆ ಅನುವಾದ ಮಾಡಲಾಗಿದೆ. ಇದು ಏನನ್ನು ಹೇಳುತ್ತಿದೆಯೆಂದರೆ, ಯಾವುದೇ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಒಬ್ಬ ಅಪರಾಧಿಗೆ ಮರಣಂಡನೆ ವಿಧಿಸಿದಾಗ, ಅದನ್ನು ತಮ್ಮ ಸಹಿಯ ಮೂಲಕ ಸಿಂಧುಗೊಳಿಸುವ ಪರಮಾಧಿಕಾರ ರಾಷ್ಟ್ರಪತಿಯವರಿಗೆ ಇರುತ್ತದೆ. ಆದರೆ ಎಲ್ಲಾ ಪ್ರಕರಣಗಳಲ್ಲೂ



ಅವರು ಮರಣದಂಡನೆಯನ್ನು ಎತ್ತಿಹಿಡಿಯಬೇಕಿಲ್ಲ. ಅದನ್ನು ಮುಂದೂಡಬಹುದು; ಮಾಫಿ ಮಾಡಬಹುದು. ಅಂದರೆ, ಕೋರ್ಟು ಹಾಗೂ ಕಾನೂನುಗಳ ದೃಷ್ಟಿಯಲ್ಲಿ ಆರೋಪಿ ಹಾಗೂ ಅಪರಾಧಿಯಾದವನನ್ನು ಮನುಷ್ಯ ಎಂದು ನೋಡಬಹುದಾದ ಅಧಿಕಾರವನ್ನು ರಾಷ್ಟ್ರದ ರಾಷ್ಟ್ರಪತಿಯವರಿಗೂ ಹಾಗೂ ರಾಜ್ಯದ ರಾಜ್ಯಪಾಲರಿಗೂ ಕೊಟ್ಟಿದೆ. ಇದು ಬಹಳ ಮುಖ್ಯವಾದ ಕ್ಷಮಾದಾನ. ಒಂದು ಪ್ರಕರಣದಲ್ಲಿ ಕೊಲೆ ಮಾಡಿದವನು ಅವನ ಬದುಕಿನುದ್ದಕ್ಕೂ ಕೊಲೆ ಮಾಡುತ್ತಲೇ ಇರುತ್ತಾನೆ ಎಂದು ಹೇಳಲು ಬರುವುದಿಲ್ಲ. ಅವನು ತನ್ನ ಮನಸ್ಸನ್ನು, ತನ್ನ ಹೃದಯವನ್ನು ಪರಿವರ್ತನೆ ಮಾಡಿಕೊಳ್ಳಬಹುದು. ಈ ಅಂತರಂಗದ ಪರಿವರ್ತನೆಗೆ ಸಂವಿಧಾನವು ರಾಷ್ಟ್ರಪತಿಯವರಿಗೆ ಅಧಿಕಾರ ಕೊಟ್ಟಿದೆ. ರಾಷ್ಟ್ರಪತಿಯವರು ಇದನ್ನು ಕಾನೂನಿನ ವ್ಯಾಪ್ತಿಲ್ಲಿ ಮಾಡುತ್ತಾರೆ ನಿಜ. ಆದರೆ ಈ ಕಾನೂನಿನ ಗ್ರಹಿಕೆ ಇಷ್ಟಕ್ಕೇ ಸೀಮಿತವಾಗಬಾರದು. ಒಂದು ಪ್ರಕರಣದಲ್ಲಿ ತಪ್ಪು ಮಾಡಿದವನನ್ನು ಕ್ಷಮಿಸುವ, ಅವನಿಗೆ ದಯೆ ತೋರುವ ಗುಣ ಪ್ರತಿಯೊಬ್ಬರಿಗೂ ಇರಬೇಕು ಎಂಬುದನ್ನು ಇದು ಪ್ರತಿಪಾದನೆ ಮಾಡುತ್ತಿದೆ. ಅಪರಾಧಿಯೊಬ್ಬನನ್ನು ಕಾನೂನಿನ ಅಸ್ತ್ರ ಹಿಡಿದು ಗಲ್ಲಿಗೇರಿಸಬಹುದು. ಇಲ್ಲವೆ ಅವನು ತನ್ನ ಅಪರಾಧಿತನವನ್ನು ತಿದ್ದಿಕೊಂಡು, ಅವನು ಪರಿವರ್ತನೆ ಆಗಬಹುದು ಎಂಬ ದೊಡ್ಡ ಆಶಯದ ಮೂಲಕ ಅವನಿಗೆ ದಯೆ ತೋರಬಹುದು; ಅವನಿಗೆ ಕ್ಷಮೆ ತೋರಿಸಬಹುದು. ಅಪರಾಧಿಗಳ ಅಂತರಂಗ ಬದಲಾಗಬಹುದು; ಪರಿವರ್ತನೆಯಾಗಬಹುದು, ಇದಕ್ಕೆ ಅವಕಾಶ ಕೊಡಿ ಎಂಬುದು ಸಂವಿಧಾನದ ದೊಡ್ಡ ಮೌಲ್ಯ ಎಂದು ನಾನು ಭಾವಿಸಿದ್ದೇನೆ. ಜೊತೆಗೆ ಇದೇ ರೀತಿಯ ಕ್ಷಮಾ ಗುಣವನ್ನು ಹಾಗೂ ದಯಾ ಗುಣವನ್ನು ಪ್ರಯೊಬ್ಬರೂ ಹೊಂದಬೇಕು ಎಂಬುದನ್ನು ಇದು ಹೇಳುತ್ತಿದೆ ಎಂದು ಇದನ್ನು ಗ್ರಹಿಸಬೇಕು. ಹಾಗಾಗಿಯೇ ನಾನು ಪದೇ ಪದೇ ಹೇಳುತ್ತಿರುವುದು; ಸಂವಿಧಾನವನ್ನು ಕೇವಲ ಕಾನೂನುಗಳ ಗ್ರಂಥ ಎಂದು ಓದಬಾರದು ಎಂದು.

ಇಲ್ಲಿ ಅಧಿಕಾರವು ಮಾನವೀಯತೆಯಾಗಿ, ಕರುಣೆಯಾಗಿ, ಕ್ಷಮಾಗುಣವಾಗಿ, ದಯೆಯಾಗಿ ಪರಿವರ್ತನೆಯಾಗುತ್ತಿದೆ. ಯಾಕೆಂದರೆ ಸಂವಿಧಾನದ ರಚನೆಕಾರರು ಈ ಕಾನೂನಿನ ಅಧಿಕಾರದ ವ್ಯಾಪ್ತಿ ಹಾಗೂ ಸ್ವರೂಪವನ್ನು ಮಾನವೀಯತೆಯಿಂದ ರೂಪಿಸಿದ್ದಾರೆ. ಅಧಿಕಾರದ ನೆಲೆಯಿಂದ, ಅಧಿಕಾರದ ದೃಷ್ಟಿಯಿಂದ ಈ ಕಾನೂನು ರಚನೆಯಾಗಿಲ್ಲ. ಹಾಗಿದ್ದರೆ ಕಾನೂನುಗಳ ಒಳಗೇ ಕರುಣೆಯಿದೆ; ಕರುಣೆಯಿಂದಲೇ ಕಾನೂನು ಸೃಷ್ಟಿಯಾಗಿದೆ. ಇಲ್ಲೇ ನಮಗೆ ಬುದ್ಧ ನೆನಪಾಗುವುದು; ಇಲ್ಲೇ ನಮಗೆ ಬಾಬಾಸಾಹೇಬ್ ಅಂಬೇಡ್ಕರ್ ನೆನಪಾಗುವುದು.

ಹಿಂದೂಗಳ ಪಾಲಿಗೆ ಸಂವಿಧಾನವಾಗಿರುವ ಮನುಧರ್ಮಶಾಸ್ತ್ರವು, ಮನುಷ್ಯರನ್ನು ಧರ್ಮ, ವರ್ಣ ಮತ್ತು ಜಾತಿಗಳ ಹೆಸರಿನಲ್ಲಿ ವರ್ಗೀಕರಿಸುತ್ತದೆ. ಒಂದೊಂದು ಧರ್ಮದ ಜನರಿಗೆ, ಒಂದೊಂದು ವರ್ಣದ ಜನರಿಗೆ, ಒಂದೊಂದು ಜಾತಿಯ ಜನರಿಗೆ ಬೇರೆ ಬೇರೆ ಶಿಕ್ಷೆ ಕೊಡಬೇಕೆಂದು ಹೇಳುತ್ತದೆ. ಅಥವಾ ಮೇಲುಜಾತಿಯವರಿಗೆ ಶಿಕ್ಷೆಯೇ ಇಲ್ಲ ಎಂದು ಹೇಳುತ್ತದೆ; ಅವರಿಗೆ ಎಲ್ಲದಕ್ಕೂ ಮಾಫಿ ಎಂದು ಹೇಳುತ್ತದೆ. ಇದರ ಪ್ರಕಾರ ಮನುಷ್ಯರ ಗುಣಸ್ವಭಾವಗಳು ಹುಟ್ಟಿನಿಂದ ಬರುತ್ತವೆ; ಅನಂತರ ಅವು ಬದಲಾಗುವುದಿಲ್ಲ. ಅವು ಬದಲಾಗುವುದಿಲ್ಲ ಎಂದರೆ ಸಮಾಜವೂ ಬದಲಾಗುವುದಿಲ್ಲ ಎಂದು ಅರ್ಥ. ಆದರೆ ಭಾರತದ ಸಂವಿಧಾನ ತಪ್ಪಿತಸ್ಥನೊಬ್ಬನಿಗೆ ದಯೆ ತೋರಿಸುವಾಗ, ಅವನನ್ನು ಕ್ಷಮಿಸುವಾಗ ಧರ್ಮ, ವರ್ಣ, ಜಾತಿ ಇವನ್ನು ಮುಖ್ಯವೆಂದು ಪರಿಗಣಿಸುತ್ತಿಲ್ಲ. ಯಾಕೆಂದರೆ ಸಂವಿಧಾನವು ತನ್ನ ಅಂತರಂಗದೊಳಗೆ ಧರ್ಮ-ವರ್ಣ-ಜಾತಿಗಳ ಅಸಮಾನತೆಯನ್ನು ಮೀರಿದ ಮನುಷ್ಯ ಗುಣವನ್ನು ಹೊಂದಿದೆ; ಮನುಷ್ಯ ಕರುಳನ್ನು ಹೊಂದಿದೆ. ಆದ್ದರಿಂದ ಸಂವಿಧಾನವನ್ನು ಮಾನವೀಯ ಕರುಣೆ ಇರುವ ಗ್ರಂಥವೆಂದು ತಿಳಿಯಬೇಕು.

ಮೇಲೆ ಚರ್ಚೆ ಮಾಡಿದ ಅನುಚ್ಛೇದದಲ್ಲಿ ಕ್ಷಮಾಗುಣವನ್ನು, ದಯಾಗುಣವನ್ನು ಸೇರಿಸಲಾಗಿದೆ. ಸಂವಿಧಾನ ರಚನೆಕಾರರಿಗೆ ಇದು ಹೇಗೆ ಸಾಧ್ಯವಾಯಿತು ಎಂಬುದು ಇಲ್ಲಿ ಮುಖ್ಯವಾದ ಪ್ರಶ್ನೆ. ಮನುಷ್ಯನ ಸ್ವಭಾವ ಹುಟ್ಟಿನಿಂದ ಬರುವುದಿಲ್ಲ; ಅದನ್ನು ಪರಿವರ್ತನೆ ಮಾಡಬಹುದು ಎಂದು ಬೌದ್ಧ ಧರ್ಮ ಹೇಳುತ್ತದೆ. ಮತ್ತು ಇದನ್ನು ಅದು ಪ್ರಯೋಗದಿಂದ ಕಂಡುಕೊಂಡಿತ್ತು. ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರು ಇದನ್ನು ಬೌದ್ಧ ಧರ್ಮದ ಸ್ಫೂರ್ತಿಯಿಂದ ಪಡೆದಿದ್ದಾರೆ. ಇದನ್ನು ಸಂವಿಧಾನದಲ್ಲಿ ಸೇರಿಸಿದ್ದಾರೆ. ಮನುಷ್ಯರ ಗುಣಸ್ವಭಾವ ಬದಲಾಗುತ್ತಾ, ಪರಿವರ್ತನೆ ಆಗುತ್ತಾ ಇರುತ್ತದೆ; ಇದನ್ನು ಬದಲಾಯಿಸಬಹುದು; ಪರಿವರ್ತನೆ ಮಾಡಬಹುದು. ಯಾಕೆಂದರೆ ಮನುಷ್ಯರ ಯಾವುದೇ ಗುಣಸ್ವಭಾವ ಅವರ ಹುಟ್ಟಿನಿಂದ ಬರುವುದಿಲ್ಲ ಎಂಬುದು ಬೌದ್ಧ ಧರ್ಮದ ಮೂಲ ತಿಳುವಳಿಕೆ. ಮನುಷ್ಯರ ಗುಣಸ್ವಭಾವ ಪರಿವರ್ತನೆ ಆಗುವುದಕ್ಕೆ ಕಾರಣ ಬದುಕು ಪರಿವರ್ತನಾಶೀಲ; ಸಮಾಜ ಪರಿವರ್ತನಾಶೀಲ. ಇದನ್ನು ಪರಿವರ್ತನೆ ಮಾಡಬಹುದು ಎಂಬುದು ಬೌದ್ಧ ಧರ್ಮದ ಅರಿವು. ಈ ಅರಿವು ಭಾರತದ ಸಂವಿಧಾನದಲ್ಲಿ ಅಡಕವಾಗಿದೆ ಎಂಬುದು ಹೆಮ್ಮೆಯ ಸಂಗತಿ.

ಭಾರತದ ಸಂವಿಧಾನದ ಪ್ರಸ್ತಾವನೆ ಈ ರೀತಿ ಇದೆ. "ಭಾರತದ ಪ್ರಜೆಗಳಾದ ನಾವು, ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ, ಗಣರಾಜ್ಯವನ್ನಾಗಿ ರೂಪಿಸುವುದಕ್ಕಾಗಿ; ಭಾರತದ ಎಲ್ಲಾ ನಾಗರೀಕರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು; ವಿಚಾರ, ಅಭಿವ್ಯಕ್ತಿ, ನಂಬಿಕೆ, ಶ್ರದ್ಧೆ ಮತ್ತು ಉಪಾಸನೆಯ ಸ್ವಾತಂತ್ರ್ಯವನ್ನು; ಸ್ಥಾನಮಾನ ಮತ್ತು ಅವಕಾಶಗಳ ಸಮತೆಯನ್ನು ದೊರೆಯುವಂತೆ ಮಾಡುವುದಕ್ಕಾಗಿ; ವ್ಯಕ್ತಿ ಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ ಸಹೋದರ ಭಾವನೆಯನ್ನು ಮೂಡಿಸುವುದಕ್ಕೆ ದೃಢ ಸಂಕಲ್ಪ ಮಾಡಿ, ನಮ್ಮ ಸಂವಿಧಾನ ಸಭೆಯಲ್ಲಿ 1949ನೆಯ, ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು, ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ".

ಭಾರತದಲ್ಲಿ ಬದುಕಿರುವವರನ್ನು ಧರ್ಮ, ವರ್ಣ ಮತ್ತು ಜಾತಿಯ ಹೆಸರಿನಲ್ಲಿ ಕರೆಯಲಾಗುತ್ತದೆ. ಅವರೊಳಗೆ ಶ್ರೇಷ್ಠ-ಕನಿಷ್ಠ ಎಂದು ತಾರತಮ್ಯ ಮಾಡಲಾಗಿದೆ. ಕೆಲವರನ್ನು ಗೌರವಿಸುವ ಮತ್ತು ಅನೇಕರನ್ನು ತಿರಸ್ಕರಿಸುವ ಪದ್ಧತಿ ಇದೆ. ಈ ಬಗೆಗೆ ಬಾಬಾಸಾಹೇಬ್ ಅಂಬೇಡ್ಕರರ ವ್ಯಾಖ್ಯಾನ ಹೀಗಿದೆ. "ಕಾರಣವೇ ಇಲ್ಲದೆ ಎಲ್ಲಾ ಕೆಳಜಾತಿಗಳು ಹಾಗೂ ಮಹಿಳೆಯರು; ಮೇಲುಜಾತಿಗಳವರನ್ನು ಹಾಗೂ ಪುರುಷರನ್ನು ಗೌರವಿಸಬೇಕು. ಇದಕ್ಕೆ ತದ್ವಿರುದ್ಧವಾಗಿ ಎಲ್ಲಾ ಮೇಲುಜಾತಿಗಳು ಹಾಗೂ ಪುರುಷರು; ಕೆಳಜಾತಿಗಳವರನ್ನು ಹಾಗೂ ಮಹಿಳೆಯರನ್ನು ತಿರಸ್ಕರಿಸುತ್ತಾರೆ." ಇದು ಏಕಮುಖವಾಗಿದೆ. ಈ ಅಸಮಾನತೆಯನ್ನು ಬದಲಾಯಿಸಬೇಕು, ಪರಿವರ್ತನೆ ಮಾಡಬೇಕು ಎಂಬುದು ಸಂವಿಧಾನದ ಆಶಯ. ಹಾಗಾಗಿ ಭಾರತದಲ್ಲಿ ಬದುಕಿರುವವರನ್ನು ಇದು ಭಾರತದ ಪ್ರಜೆಗಳು ಎಂದು ಕರೆಯುತ್ತಿದೆ. ಈ ಮೂಲಕ ಎಲ್ಲರನ್ನೂ ಒಂದೇ ಪದದಲ್ಲಿ ಕರೆಯುವ ಮೂಲಕ ಎಲ್ಲರನ್ನೂ ಸಮಾನವಾಗಿ ಕಾಣುವಂತಹ ಮನಸ್ಸನ್ನು, ಹೃದಯವನ್ನು ಹೊಂದಬೇಕು ಎಂದು ಹೇಳುತ್ತಿದೆ. ಇದು ಕಟ್ಟುವ ವಿಧಾನ, ಇದು ಸೃಷ್ಟಿಸುವ ವಿಧಾನ. ಇದು ಪರಿವರ್ತಿಸುವ ವಿಧಾನ. ಕಟ್ಟುವ, ಸೃಷ್ಟಿಸುವ ಮತ್ತು ಪರಿವರ್ತಿಸುವ ಆಶಯ ಸಂವಿಧಾನಕ್ಕಿದೆ. ಜಾತಿ-ಮತ-ಧರ್ಮಗಳಿಂದ ಕಲುಷಿತಗೊಂಡಿರುವ ನಮ್ಮ ಹೃದಯ ಹಾಗೂ ಮನಸ್ಸುಗಳನ್ನು ಪರಿವರ್ತನೆ ಮಾಡಿಕೊಂಡು, ಶುದ್ಧೀಕರಿಸಿಕೊಳ್ಳಲು ಸಂವಿಧಾನದ ಪ್ರಸ್ತಾವನೆ ಕರೆ ಕೊಡುತ್ತಿದೆ. ಇದು ಮೂಲಭೂತವಾಗಿ ಮನುಷ್ಯರ ಬಾಹ್ಯ ವರ್ತನೆಗಳಿಗೆ ಸಂಬಂಧಿಸಿದ ಕರೆ ಅಲ್ಲ; ಇದು ಮನುಷ್ಯರ, ಪ್ರಜೆಗಳ ಅಂತರಂಗದ ಪರಿವರ್ತನೆಗೆ ಸಂಬಂಧಿಸಿದ ಮೌಲ್ಯ.

ಭಾರತದ ಸಂವಿಧಾನವು ಭಾರತವನ್ನು ಒಂದು ರಾಷ್ಟ್ರ ಎಂದು ಕರೆಯುವುದಿಲ್ಲ. ಇದನ್ನು ರಾಜ್ಯಗಳ ಒಕ್ಕೂಟ ಎಂದು ಕರೆದಿದೆ. ಇದನ್ನು ಸಂಘ ಎಂದು ಕರೆದಿದೆ. ಇದು ಭಾರತದ ಸಂವಿಧಾನದ ಗುಂಡಿಗೆ ಎಂದು ನಾನು ಕರೆಯುತ್ತೇನೆ. ಒಕ್ಕೂಟದ ಕಲ್ಪನೆ ಹಾಗೂ ಸಂಘದ ಕಲ್ಪನೆ ಕೂಡಾ ಕೂಡಿ ದುಡಿಯೋಣ; ಕೂಡಿ ಉಣ್ಣೋಣ ಎಂಬ ಸಮುದಾಯ ಕಲ್ಪನೆಯದು. ಬುದ್ಧನ ಚಿಂತನೆಗಳಿಗೂ ಇದಕ್ಕೂ ಬಹಳ

ಹತ್ತಿರದ ಸಂಬಂಧವಿದೆ. ರಾಜ್ಯ ರಾಜ್ಯಗಳ ನಡುವೆ ವ್ಯಾಜ್ಯಗಳು ಬಂದಾಗ ಸಂವಿಧಾನದ ಈ ಗುಂಡಿಗೆ ಒಂದು ಗ್ರೌಂಡ್ ಆಗಿ ಕೆಲಸ ಮಾಡುತ್ತದೆ. ಇದೆಲ್ಲಕ್ಕೂ ಮಿಗಿಲಾಗಿ ಭಾರತದ ಸಂವಿಧಾನದ ಪ್ರಸ್ತಾವನೆಯಿಂದ ಹಿಡಿದು, ಅಧ್ಯಾಯ 1ರಿಂದ 4ರವರೆಗಿನ, 1ರಿಂದ 51ರವರೆಗಿನ ಅನುಚ್ಛೇದಗಳಲ್ಲಿ ಬುದ್ಧನ ಆಶಯಗಳ ಸೂಕ್ಷ್ಮ ಛಾಯೆ ಇರುವುದನ್ನು ಗುರುತಿಸಬಹುದು. ಇದು ಸ್ವತಂತ್ರವಾದ ಒಂದು ಅಧ್ಯಯನವನ್ನೆ ಬೇಡುತ್ತದೆ.

ಕಳೆದ 70 ವರ್ಷಗಳಲ್ಲಿ ಭಾರತದ ಬೌದ್ಧಿಕ ಹಾಗೂ ಅಕಾಡೆಮಿಕ್ ವಲಯದಲ್ಲಿ ಗಮನ ಸೆಳೆಯುವ ಅಧ್ಯಯನಗಳು ನಡೆದಿವೆ. ಭಾಷೆ, ರಾಷ್ಟ್ರ, ಸಂಸ್ಕೃತಿ, ಪ್ರಭುತ್ವ ಇವೇ ಮುಂತಾದ ವಲಯಗಳಲ್ಲಿ ಅವು ನಡೆದಿವೆ. ಕಳೆದ ಶತಮಾನದ 90ರ ದಶಕದ ನಂತರ, ಮುಖ್ಯವಾಗಿ ಅವೈದಿಕ ಸಂಸ್ಕೃತಿಯ ಬಗೆಗೆ ಅಧ್ಯಯನಗಳು ನಡೆದವು. ಅವು ಜಾತಿಮೂಲ, ಕುಲಮೂಲ, ಕುಲಪುರಾಣ, ಅನುಭಾವ, ತತ್ವಪದಗಳು, ಸೂಫಿ, ಸ್ಥಳೀಯತೆ, ಸ್ಥಳೀಯ ಜ್ಞಾನ, ದಲಿತ, ಮಹಿಳೆ, ಶ್ರಮ ಸಂಸ್ಕೃತಿ ಇವೇ ಮುಂತಾದ ಹೆಸರುಗಳಲ್ಲಿ ನಡೆದಿವೆ. ಅವುಗಳ ಬಗೆಗೆ ಪ್ರಚೋದನಕಾರಿ ಆಸಕ್ತಿ ಹುಟ್ಟಿಸುತ್ತಾ, ಅವುಗಳ ವಿವರಗಳನ್ನು, ಮಾಹಿತಿಗಳನ್ನು ಕೊಡುತ್ತಾ ಹೋದವು. ಅವುಗಳ ಕಡೆಗೆ ಹೋದ ಬುದ್ಧಿಜೀವಿಗಳು ಮತ್ತೆ ತಿರುಗಿ ಬರಲೇ ಇಲ್ಲ; ಅನೇಕರು ಈಗಲೂ ಅಲ್ಲೆ ಗಿರಕಿ ಹೊಡೆಯುತ್ತಿದ್ದಾರೆ. "ಜಾಗತೀಕರಣ ನೀತಿಗಳ ದಾಳಿಯನ್ನು, ಅದರ ಪರಿಣಾಮದ ಮಗ್ಗುಲುಗಳನ್ನು ಅರ್ಥಮಾಡಿಕೊಂಡು, ಅದಕ್ಕೆ ಪರ್ಯಾಯ ತೋರಿಸುತ್ತೇವೆ" ಎಂಬ ಘೋಷಣೆಯಡಿ ಆ ಕಡೆ ಹೊರಟರು. ಸರಿ, ಅವೈದಿಕ ಚಿಂತನೆಗಳ ಬಗೆಗೆ ಚರ್ಚೆ ಮಾಡುವ ಬುದ್ಧಿಜೀವಿಗಳು, ತಮ್ಮ ಅವೈದಿಕ ಚಿಂತನೆಗಳ ಮೂಲಕ ಭಾರತದ ಸಂವಿಧಾನವನ್ನು ಓದಲಿಲ್ಲ ಎಂಬುದು ದುರಂತದ ಸಂಗತಿ. ಡಿ.ಆರ್. ನಾಗರಾಜ್ ಅವರನ್ನು ಅವೈದಿಕ ಚಿಂತನೆಗಳ ಪ್ರವರ್ತಕ ಎಂಬಂತೆ ಕೊಂಡಾಡಲಾಯಿತು. ಅವರು ಯಾಕೆ ಭಾರತದ ಸಂವಿಧಾನದ ಚರ್ಚೆಯ ಕಡೆಗೆ ಮುಖ ಮಾಡಲಿಲ್ಲ?

ಸಂಸದೀಯ ಪ್ರಜಾಪ್ರಭುತ್ವ ಮತ್ತು ಭಾರತದ ಸಂವಿಧಾನದ ಬಗೆಗೆ ಗಾಂಧೀಜಿಯವರ ನಿಲುವು ಏನಾಗಿತ್ತು ಎಂಬುದನ್ನು ಚರ್ಚೆ ಮಾಡುವ ಅಗತ್ಯವಿದೆ. ಗಾಂಧೀಜಿಯವರಿಗೆ ಸಂಸದೀಯ ಪ್ರಜಾಪ್ರಭುತ್ವದ ಬಗೆಗೆ ಕವಡೆಕಾಸಿನ ಆಸಕ್ತಿಯೂ ಇರಲಿಲ್ಲ. ಇದನ್ನು ಅವರು ಇಂಗ್ಲೆಂಡಿನ ಪಾರ್ಲಿಮೆಂಟು ಎಂದು ತಿರಸ್ಕರಿಸಿದರು. ಆ ಪಾರ್ಲಿಮೆಂಟನ್ನು ಅವರು ವೇಶ್ಯೆ ಮತ್ತು ಬಂಜೆ ಎಂದು ಅತ್ಯಂತ ಕ್ರೂರವಾಗಿ ಖಂಡಿಸಿದರು. ವೇಶ್ಯೆ ಯಾಕೆಂದರೆ ಅದಕ್ಕೆ ಒಬ್ಬ ಅಧ್ಯಕ್ಷ ಇರುವುದಿಲ್ಲ; ಅವನು ನಿತಂರವಾಗಿ ಬದಲಾಗುತ್ತಾ ಹೋಗುತ್ತಾನೆ ಎನ್ನುವುದು. ಬಂಜೆ ಯಾಕೆಂದರೆ ಅದು ಹೊಸದಾಗಿ ಏನನ್ನೂ ಸೃಷ್ಟಿ ಮಾಡುವುದಿಲ್ಲ ಎನ್ನುವುದು. ಈ ದೃಷ್ಟಿಯಲ್ಲಿ ಅಂಬೇಡ್ಕರರಿಗೂ, ಗಾಂಧಿಗೂ ಹೋಲಿಕೆಯೇ ಬರುವುದಿಲ್ಲ. ಅವರಿಬ್ಬರು ಪರಸ್ಪರ ತದ್ವಿರುದ್ಧ. ಗಾಂಧೀಜಿಯವರಿಗೆ ಅವರು ಬರೆದಿರುವ "ಹಿಂದ್ ಸ್ವರಾಜ್ಯ" ಗ್ರಂಥವೇ ಪರಮ ಮತ್ತು ಸರ್ವಸ್ವ. ಅವರ ಪ್ರಕಾರ ಅದೇ ಭಾರತಕ್ಕೆ ಸಂವಿಧಾನ. "ಬ್ರಿಟೀಶರು ಭಾರತಕ್ಕೆ ಬರುವುದಕ್ಕಿಂತ ಮೊದಲು ಭಾರತವು ಎಲ್ಲಾ ರೀತಿಯಲ್ಲೂ ಚೆನ್ನಾಗಿತ್ತು; ಜನರು ತಮಗೆ ಬೇಕಾದ ಕೆಲಸಗಳನ್ನು ಮಾಡಿಕೊಂಡು, ತಮಗೆ ಅಗತ್ಯವಾಗಿದ್ದುದನ್ನು ಸಂಪಾದನೆ ಮಾಡಿಕೊಂಡು ಬದುಕುತ್ತಿದ್ದರು. ಬ್ರಿಟೀಶರು ಬಂದ ನಂತರ ಇದೆಲ್ಲ ಹಾಳಾಯಿತು" ಎಂಬುದು ಗಾಂಧೀಜಿಯವರ ಹಳಹಳಿಕೆ.

ಗಾಂಧೀಜಿಯವರ ಪ್ರಕಾರ, ಸಮಾಜದಲ್ಲಿರುವ ಮೇಲು-ಕೀಳು, ಶೋಷಕ-ಶೋಷಿತ, ಬಂಡವಾಳಶಾಹಿ-ಕಾರ್ಮಿಕ ಇವುಗಳನ್ನು ಬದಲಾಯಿಸಬೇಕಾಗಿಲ್ಲ. ಅವುಗಳ ಪಾಡಿಗೆ ಅವನ್ನು ಬಿಟ್ಟುಬಿಡಿ ಎಂಬುದು ಅವರ ಸಲಹೆ. ಅವರಿಗೆ ವರ್ಣಾಶ್ರಮದ ಬಗೆಗೆ ಗಟ್ಟಿಯಾದ ನಂಬಿಕೆಯಿತ್ತು. ಭಾರತದ ಹಳ್ಳಿಗಳು ಬ್ರಿಟೀಶರು ಬರುವುದಕ್ಕಿಂತ ಮೊದಲು ಹೇಗಿದ್ದವೋ ಹಾಗೆಯೇ ಮುಂದುವರಿಯಲಿ ಎಂಬುದು ಅವರ ಮುಖ್ಯವಾದ ಸಲಹೆ. ಅಂದರೆ ಊರ ಗೌಡ ಗೌಡಿಕೆ ಮಾಡುತ್ತಿರಲಿ, ದಬ್ಬಾಳಿಕೆ, ದೌರ್ಜನ್ಯ ಮಾಡುತ್ತಿರಲಿ; ಅದನ್ನು ಸಹಿಸಿಕೊಂಡು ಕೇರಿಯ ಜನರು ಅವನಿಗೆ ಗುಲಾಮರಾಗಿ, ಜೀತದ ಆಳುಗಳಾಗಿ, ಬಿಟ್ಟಿ ಕೆಲಸ ಮಾಡಿಕೊಂಡಿರಲಿ ಎಂಬುದು ಅದರ ಪರೋಕ್ಷ ಇಂಗಿತ. ಇದನ್ನೇ ಅವರು ಅತ್ಯಂತ ನಯವಾಗಿ "ಗ್ರಾಮ ಸ್ವರಾಜ್ಯ" ಎಂದು ಕರೆದರು. ಅಸ್ಪೃಶ್ಯರು ಹಾಗೂ ಮಹಿಳೆಯರು ವಿದ್ಯಾಭ್ಯಾಸ ಮಾಡುವುದನ್ನು ಅವರು ವಿರೋಧಿಸಿದರು. ಇಂತಹ ಗಾಂಧೀಜಿಗೆ ಅಸ್ಪೃಶ್ಯರು ಮತ್ತು ಮಹಿಳೆಯರು ಪ್ರಜಾಪ್ರಭುತ್ವದ ಸರಕಾರದಲ್ಲಿ, ಭಾರತದ ಸಂವಿಧಾನದ ಹಕ್ಕುಗಳ ಮೂಲಕ ಪಾರ್ಲಿಮೆಂಟಿನಲ್ಲೊ, ಅಸೆಂಬ್ಲಿಯಲ್ಲೊ, ಇನ್ನೆಲ್ಲೊ ಸದಸ್ಯರಾಗುವುದು, ಮಂತ್ರಿಯಾಗುವುದು ಇಷ್ಟವಿರಲಿಲ್ಲ. ಇದು ಮನುಧರ್ಮಶಾಸ್ತ್ರಕ್ಕಿಂತ ಅತ್ಯಂತ ಘೋರವಾದುದು. ಗಾಂಧೀಜಿಯವರನ್ನು ಕುರಿತ ನನ್ನ ಮಾತುಗಳಿಗೆ ಅವರು ಬರೆದಿರುವ "ಹಿಂದ್ ಸ್ವರಾಜ್ಯ' ಕೃತಿಯಲ್ಲಿ ಆಧಾರಗಳಿವೆ.

ಭಾರತದ ಸಂವಿಧಾನವನ್ನು ಪ್ರಜೆಗಳ ನೆಲೆಯಲ್ಲಿ ಓದಬೇಕು; ಅರ್ಥಮಾಡಿಕೊಳ್ಳಬೇಕು. ಸಮಾನತೆ ಹಾಗೂ ಸೋದರತೆಯ ಭಾವದ ಪ್ರಜೆಗಳನ್ನು ರೂಪಿಸಲು, ಎಲ್ಲಾ ರೀತಿಯಲ್ಲೂ ಸಮಾನತೆಯ ದೇಶವನ್ನು ನಿರ್ಮಿಸಲು ಭಾರತದ ಸಂವಿಧಾನದೊಂದಿಗೆ ತೊಡಗಬೇಕು. ಇದು ಮನುಷ್ಯರ ಬಾಹ್ಯ ವರ್ತನೆಗಳನ್ನು ನಿಯಂತ್ರಿಸುವ, ನಿರ್ದೇಶಿಸುವ ಕಾನೂನುಗಳ ಗ್ರಂಥ ಅಲ್ಲ. ಇದು ಮನುಷ್ಯರ ಅಂತರಂಗದ ಪರಿವರ್ತನೆಗಳಿಗೆ ಸ್ಫೂರ್ತಿ ಹಾಗೂ ಮಾರ್ಗದರ್ಶನ ಕೊಡುತ್ತಿದೆ. ಇದನ್ನು ಓದಿ ಅರ್ಥಮಾಡಿಕೊಳ್ಳುವಾಗ, ಧರ್ಮಗ್ರಂಥಗಳು, ಗಾಂಧೀಜಿಯ ಹಿತಾಸಕ್ತಿಗಳು, ಬಾಬಾಸಾಹೇಬ್ ಅಂಬೇಡ್ಕರರ ಆಶಯಗಳು, ಬುದ್ಧನ ಚಿಂತನೆಗಳು ಅಗತ್ಯವಾಗಿ ಬರುತ್ತವೆ. ಈ ದೃಷ್ಟಿಯಲ್ಲಿ ಮತ್ತು ಈ ಉದ್ದೇಶಗಳಿಗಾಗಿ ಭಾರತದ ಸಂವಿಧಾನದೊಂದಿಗೆ ನಾವು ತೊಡಗಬೇಕಾಗಿದೆ; ಅದರೊಂದಿಗೆ ಬೆರೆಯಬೇಕಾಗಿದೆ.

ISSN 2249-0396

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು (ಸ್ವಾಯತ್ತ), ಉಜಿರೆ
ಡಾ. ಹಾಮಾನಾ ಸಂಶೋಧನ ಕೇಂದ್ರ

ಶೋಧ
SHODHA

ಸಂಪುಟ -೧೩, ಸಂಚಿಕೆ -೧ Volume -13 No -1 ಜುಲೈ - 2023 July-2023

Published By
SHRI DHARMASTHALA MANJUNATHESHWARA COLLEGE
(AUTONOMOUS)
UJIRE-574 240, D. K.
Dr. HaMaNa Research Centre

Scanned with OKEN Scanner

ಶೋಧ
SHODHA

ಡಾ. ಹಾಮಾನಾ ಸಂಶೋಧನ ಕೇಂದ್ರದಿಂದ ಪ್ರಕಟವಾಗುವ
ಸಂಶೋಧನ ನಿಯತಕಾಲಿಕ

ಡಾ. ಎಸ್. ಡಿ. ಶೆಟ್ಟಿ
ಸಂಪಾದಕರು

ಜುಲೈ ೨೦೨೩

ಡಾ. ಹಾಮಾನಾ ಸಂಶೋಧನ ಕೇಂದ್ರ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು (ಸ್ವಾಯತ್ತ)
ಉಜಿರೆ-೫೭೪೨೪೦, ದ. ಕ.

Scanned with OKEN Scanner

SHODHA Biannual Bilingual Research Periodical

Published by : Dr. HaMaNa Research Center, Sri D. M. College, Ujire, D. K.
© Rights : Reserved
Price : Rs. 100-00 Pages : 164
Issue : July 2023 Printed at : Manjushri Printers, Ujire

ಸಲಹಾ ಮಂಡಳಿ

ಡಾ. ಬಿ. ಎ. ವಿವೇಕ ರೈ
ನಿವೃತ್ತ ಕುಲಪತಿಗಳು
"ಸುಯಿಲ್", ಜೆಪ್ಪು, ಕುಡ್ವಾಡಿ ರಸ್ತೆ
ಮಂಗಳೂರು – 575002

ಡಾ. ಹಂಪ ನಾಗರಾಜಯ್ಯ
ನಂ. 1079 ಸ್ವಾಮಿ 18ನೇ ಮೇನ್
5ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು

ಡಾ. ಜ್ಯೋತಿ ಎಸ್. ಹಳ್ಳದ
ನಿರ್ದೇಶಕರು
ಜನಸಂಖ್ಯಾ ಸಂಶೋಧನ ಕೇಂದ್ರ
ಜಿ. ಎಸ್. ಎಸ್. ಇನ್‌ಸ್ಟಿಟ್ಯೂಟ್
ಆಫ್ ಎಕನಾಮಿಕ್ ರಿಸರ್ಚ್
ಕೌಲ್ಯ ಬಡಿಂಗ್, ಜಿ. ಎಸ್. ಎಸ್. ಶ್ಯಾಂಪುರ
ವಿದ್ಯಾಗಿರಿ, ಧಾರವಾಡ–580 004

ಸಂಪಾದಕ ಮಂಡಳಿ

ಕಾರ್ಯನಿರ್ವಾಹಕ ಸಂಪಾದಕ
ಡಾ. ಎಸ್. ಡಿ. ಶೆಟ್ಟಿ
ನಿರ್ದೇಶಕರು
ಡಾ. ಹಾಮಾನಾ ಸಂಶೋಧನ ಕೇಂದ್ರ
ಉಜಿರೆ – 574 240, ದ. ಕ.

ಸಹ ಕಾರ್ಯನಿರ್ವಾಹಕ ಸಂಪಾದಕ
ಡಾ. ದಿವಾಕರ ಕೆ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಶ್ರೀ ಧ. ಮಂ. ಕಾಲೇಜು
ಉಜಿರೆ – 574 240, ದ. ಕ.

ಸಹ ಸಂಪಾದಕರು

ಡಾ. ಶಂಕರ ನಾರಾಯಣ ಕೆ.
ನಿವೃತ್ತ ಆಂಗ್ಲಭಾಷಾ ಪ್ರಾಧ್ಯಾಪಕರು
ಉಜಿರೆ – 574 240, ದ. ಕ.

ಡಾ. ವಂದನಾ ಜೈನ್
ಮುಖ್ಯಸ್ಥರು, ಮನಃಶಾಸ್ತ್ರ ವಿಭಾಗ
ಶ್ರೀ ಧ. ಮಂ. ಕಾಲೇಜು
ಉಜಿರೆ – 574 240, ದ. ಕ.

ಡಾ. ಗಣರಾಜ ಕೆ.
ಸಹಾಯಕ ಪ್ರಾಧ್ಯಾಪಕರು
ಅರ್ಥಶಾಸ್ತ್ರ ವಿಭಾಗ
ಶ್ರೀ ಧ. ಮಂ. ಕಾಲೇಜು
ಉಜಿರೆ – 574 240, ದ. ಕ.

ಡಾ. ಸೌಮ್ಯ ಬಿ. ಪಿ.
ಸಹಾಯಕ ಪ್ರಾಧ್ಯಾಪಕರು
ರಸಾಯನಶಾಸ್ತ್ರ ವಿಭಾಗ
ಶ್ರೀ ಧ. ಮಂ. ಕಾಲೇಜು
ಉಜಿರೆ – 574 240, ದ. ಕ.

ವಿಷಯ ಪರಿಣಿತರು

ಡಾ. ಶಿವರಾಮ ಹೊಳ್ಳ
ನಿವೃತ್ತ ರಸಾಯನ ಶಾಸ್ತ್ರ
ಪ್ರಾಧ್ಯಾಪಕರು, ಮಂಗಳೂರು

ಪ್ರೊ. ಪ್ರಕಾಶ್ ಪ್ರಭು
ನಿವೃತ್ತ ಗಣಿತಶಾಸ್ತ್ರ ಪ್ರಾಧ್ಯಾಪಕರು
ಉಜಿರೆ – 574 240, ದ. ಕ.

ಡಾ. ಹೆಚ್. ಮಾಧವ ಭಟ್
ನಿವೃತ್ತ ಆಂಗ್ಲಭಾಷಾ ಪ್ರಾಧ್ಯಾಪಕರು
ಪುತ್ತೂರು

ಪ್ರೊ. ಸಂತೋಷ ಅಲ್ವರ್ಟ್ ಸಲ್ದನ್ನ
ಪ್ರಭಾರ ಪ್ರಾಂಶುಪಾಲರು
ಶ್ರೀ ಧ. ಮಂ. ಪಿಕ್ಕಕ ಪಿಕ್ಕಣ ಮಹಾವಿದ್ಯಾಲಯ
ಉಜಿರೆ – 574 240, ದ. ಕ.

ಡಾ. ಶಶಿಕಾಂತ ಎಸ್. ಹುರೋಡಿ
ಆಂಗ್ಲ ಭಾಷಾ ಪ್ರಾಧ್ಯಾಪಕರು
ಧಾರವಾಡ–580002

ಡಾ. ಅಶೋಕ್ ಕುಮಾರ್ ಟಿ.
ಪ್ರಾಂಶುಪಾಲರು
ಶ್ರೀ ಧ. ಮಂ. ತಾಂತ್ರಿಕ ಮಹಾವಿದ್ಯಾಲಯ
ಉಜಿರೆ – 574 240, ದ. ಕ.

ಡಾ. ಧನಂಜಯ ಕುಂಬ್ಳೆ
ಕನ್ನಡ ಪ್ರಾಧ್ಯಾಪಕರು
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳೂರು–574199

ಡಾ. ರಾಕೇಶ್ ಟಿ. ಎಸ್.
ಪ್ರಾಂಶುಪಾಲರು
ಜಿ. ಎಸ್. ಎಸ್. ಎಸ್.,
ಎಸ್. ಎಸ್. ಎಫ್. ಜಿ., ಕಾಲೇಜು
ಪೇಟಿಗಳ್ಳಿ, ಮೈಸೂರು–570016

ಚಂದಾ ವಿವರ : ರೂ. 1,000/– ಮಾತ್ರ. ಐದು ವರ್ಷಗಳಿಗೆ (10 ಸಂಚಿಕೆಗಳು)
ಚಂದಾ ಹಣವನ್ನು – ನಿರ್ದೇಶಕರು, ಡಾ. ಹಾಮಾನಾ ಸಂಶೋಧನ ಕೇಂದ್ರ
ಶ್ರೀ ಧ. ಮಂ. ಕಾಲೇಜು, ಉಜಿರೆ – 574 240 ದ. ಕ.
ಈ ವಿಳಾಸಕ್ಕೆ ಡಿ. ಡಿ. ತೆಗೆದು ಪೂರ್ಣ ವಿಳಾಸದೊಂದಿಗೆ ಕಳುಹಿಸುವುದು.

Scanned with OKEN Scanner

ಅನುಕ್ರಮಣಿಕೆ

1. ಕರ್ನಾಟಕ ಬಂದೂಕು ವೀರಗಲ್ಲುಗಳು / ಗೀತಾ ಪಾಟೀಲ / 5
2. ತತ್ಸಮದಗಳಲ್ಲಿ ಸ್ಥಳೀಯ ಪ್ರಜ್ಞೆಯ ವಿಕಾಸ ಕ್ರಮ / ಅಪ್ಪಗೆರೆ ಸೋಮಶೇಖರ / 20
3. ಆಹಾರ ಪೂರೈಕೆಯ ಸರಪಳಿಯ ಮೇಲೆ ಕೋವಿಡ್-19 ಉಂಟುಮಾಡಿರುವ ಬಿಕ್ಕಟ್ಟುಗಳು/ ಎಚ್. ಡಿ. ಪ್ರಶಾಂತ್/ 34
4. ಅಲ್ಲಮನ ವಚನಗಳ ಸಂಪಾದನಾನುಸಂಧಾನ / ವೀರೇಶ ಬಡಿಗೇರ/ 56
5. ಉಜಿರೆ ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನ–ಒಂದು ಅಧ್ಯಯನ / ಶ್ರೀಧರ ಎನ್. ಭಟ್ಟ / 67
6. ಭಾರತೀಸುತರ ಐತಿಹಾಸಿಕ ಕಾದಂಬರಿಗಳು : ಚಾರಿತ್ರಿಕ ಸತ್ಯ ದರ್ಶನ / ಆನಂದ ಎಂ. / 78
7. COVID-18 and Elderly in India : A Study from Gerontological Perspective / Gangadhar B. Sonar / 87
8. Relevance of Meditation in Current Scenario / Mayank Bhardwaj, Rajendra Kashinath Nikumbha / 97
9. Relocating History in Non-Historical texts -A Study of Timeless Patriotidc Poems of India in English Translation / Jyothi K. B. / 105
10. Delineating Female Subjectivity in the Digital Space : A Reading of the Maaya Series/ Rafseena M. / 115
11. Dilemma of Common Property Resources and Role of Community Management in India / Rajni Bata / 120
12. Use of areca-nut husk ash (AHA) in brick preparation and its impact analysis / Subrahmanya R. Sharma, Sanjay S. S. / 134
13. Impact of Macroeconomic Factors on the Indian stock market returns / Rakesh T. S. / 146
14. Transforming Rural India Through Women Empowement : A Study on the Empowerement Initiatives of SKDRDP / Shetty Mahesh Kumar H., Shetty Harish / 155

Scanned with OKEN Scanner

 ISSN No. - 2249 - 0396

೩. ಆಹಾರ ಪೂರೈಕೆಯ ಸರಪಳಿಯ ಮೇಲೆ ಕೋವಿಡ್-19 ಉಂಟುಮಾಡಿರುವ ಬಿಕ್ಕಟ್ಟುಗಳು

* ಎಚ್. ಡಿ. ಪ್ರಶಾಂತ್

ಕೋವಿಡ್-19 ಭಾರತದಲ್ಲಿ ಆಹಾರ ಪೂರೈಕೆಯ ಸರಪಳಿಗಳ (Food Supply Chains [FSCs]) ಮೇಲೆ ಯಾವ ರೀತಿಯ ಪರಿಣಾಮ ಬೀರಿದೆ? ಎನ್ನುವುದನ್ನು ವಿಶ್ಲೇಷಿಸುವುದು ಈ ಲೇಖನದ ಆಶಯವಾಗಿದೆ. ಕೋವಿಡ್-19 ಸಾಂಕ್ರಾಮಿಕವು ಗಂಭೀರವಾಗಿ ಹರಡುವ ಮೊದಲೇ, ಇದರ ತಡೆಗೆ ಭಾರತ ಸರ್ಕಾರವು ಕಠಿಣ ಲಾಕ್‌ಡೌನ್ ನಿಯಮಗಳನ್ನು ಜಾರಿಗೆ ತಂದಿತು. ಇದು ಬಹುತೇಕ ಎಲ್ಲಾ ಆರ್ಥಿಕ ಚಟುವಟಿಕೆಯು ಅವಲಂಬಿಸಿರುವ ಎಲ್ಲಾ ಚಲಕಗಳ ಮೇಲೆ ಗಂಭೀರವಾದ ಪರಿಣಾಮವನ್ನು ಉಂಟುಮಾಡಿತು.

ಪ್ರಸ್ತಾವನೆ: ಕಳೆದ ಎರಡು ದಶಕಗಳಲ್ಲಿ ಭಾರತವು ಜಗತ್ತಿನಲ್ಲಿ ಅತ್ಯಂತ ವೇಗವಾಗಿ ಬೆಳವಣಿಗೆಯನ್ನು ಸಾಧಿಸಿ ಆರ್ಥಿಕ ಸ್ಥಿತ್ಯಂತರಕ್ಕೆ ಒಳಗಾಗಿದೆ. ಇದರ ಪರಿಣಾಮವಾಗಿ ಸಾಂಪ್ರದಾಯಿಕ ಆಹಾರ ಪೂರೈಕೆಯ ಸರಪಳಿಯಲ್ಲಿ ಆಳವಾದ ಮತ್ತು ತ್ವರಿತವಾದ ರೂಪಾಂತರಗಳು ಉಂಟಾಗಿವೆ. ಒಂದು ರೀತಿಯಲ್ಲಿ ಸಾಂಪ್ರದಾಯಿಕ ಆಹಾರ ಪೂರೈಕೆಯ ಸರಪಳಿಯನ್ನು ಬದಲಾಯಿಸಿದೆ. ಇದರ ಮುಖ್ಯ ಉದ್ದೇಶ ಭಾರತವನ್ನು ಜಗತ್ತಿನ ಅತ್ಯಂತ ಪ್ರಮುಖ 'ಅಗ್ರಿಫುಡ್', ಆರ್ಥಿಕತೆಯಾಗಿ ಬದಲಾಯಿಸುವುದು. ಈಗ ಭಾರತದ ಆಹಾರ ಆರ್ಥಿಕತೆಯು ಮುಖ್ಯವಾಗಿ ನಗರ ಕೇಂದ್ರಿತವಾಗಿದೆ. ಇದು ವಿಸ್ತಾರವಾಗಿ ಗ್ರಾಮೀಣ-ನಗರ ಪೂರೈಕೆಯ ಸರಪಳಿಯನ್ನು ಹೊಂದಿರುತ್ತದೆ. ಆಹಾರ ಪೂರೈಕೆ ಸರಪಳಿಯಲ್ಲಿ ಇರುವ ಆಹಾರಗಳಲ್ಲಿ ಶೇಕಡ 80ರಷ್ಟು ಆಹಾರಧಾನ್ಯಗಳಲ್ಲ. ಆಹಾರ ಪೂರೈಕೆಯ ಸರಪಳಿಯಲ್ಲಿ ಬೇಗನೆ ಕೊಳೆತು ಹೋಗುವ (Perishable) ಗುಂಪಿಗೆ ಸೇರುವ ಶೇಕಡ 80 ಆಹಾರ ಪದಾರ್ಥಗಳಿವೆ. ಇವುಗಳಲ್ಲಿ ಶೇಕಡ 60ರಷ್ಟು ಕೃಷಿ ಭೂಮಿಯ ನಂತರದ ಮೌಲ್ಯವರ್ಧನಾ ಪ್ರಕ್ರಿಯೆಗಳಿಗೆ ಒಳಪಟ್ಟಿರುತ್ತವೆ. ಮೌಲ್ಯವರ್ಧನಾ ಪ್ರಕ್ರಿಯೆಗಳು ಹತ್ತಿರದ ಪಟ್ಟಣಗಳಲ್ಲಿ ಇರುವ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳ (ಎಸ್‌ಎಂಇ) ಮೇಲೆ ಅವಲಂಬಿತವಾಗಿವೆ. ಆಹಾರ ಪೂರೈಕೆ ಸರಪಳಿಯಲ್ಲಿ ಶೇಕಡ 96ರಷ್ಟು ಪ್ರಮಾಣದ ಆಹಾರ ಪದಾರ್ಥಗಳು

* ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - 583 276

ಖಾಸಗಿ ವಲಯದಿಂದ ಪೂರೈಕೆಯಾಗುತ್ತಿದ್ದರೆ, ಕೇವಲ ಶೇಕಡ 4ರಷ್ಟು ಆಹಾರ ಪದಾರ್ಥಗಳು ಮಾತ್ರ ಸಾರ್ವಜನಿಕ ವಲಯದಿಂದ ಪೂರೈಕೆಯಾಗುತ್ತಿದೆ. ವಿಶೇಷವಾಗಿ ಕೃಷಿ ಭೂಮಿಯ ನಂತರದಲ್ಲಿ ಗುಣಮಟ್ಟ ಅಥವಾ ಮೌಲ್ಯವರ್ಧನಾ ಪ್ರಕ್ರಿಯೆಗಳು ಸಮಗ್ರ ಗ್ರಾಮೀಣ ಒಳನಾಡುಗಳು, ಅರೆ-ನಗರ ಮತ್ತು ನಗರ ಪ್ರದೇಶಗಳ ನಡುವೆ ವ್ಯವಹರಿಸುವ ಲಕ್ಷಣಗಳನ್ನು ಹೊಂದಿರುತ್ತವೆ.

ಮೊದಲಿಗೆ ಆಗ್ರೋ ಎಕಾನಮಿ ಕುರಿತ ಪ್ರಮುಖ ಸಂಗತಿಗಳನ್ನು ಪರಿಗಣಿಸಿ, ನಂತರ ಕೋವಿಡ್-19 ಭಾರತ ಆಹಾರ ಪೂರೈಕೆಯ ಸರಪಳಿಗಳ ಮೇಲೆ ಉಂಟುಮಾಡಿರುವ ಪರಿಣಾಮಗಳನ್ನು ಸಾಂದರ್ಭೀಕರಿಸಲಾಗಿದೆ. ಆಹಾರ ಪೂರೈಕೆಯ ಸರಪಳಿಗಳಲ್ಲಿ ಉಂಟಾಗುವ ಸಂಭಾವ್ಯ ಅಡಚಣೆಗಳನ್ನು ಕಡಿಮೆ ಮಾಡುವ ನೆಲೆಯಿಂದ ಕೆಲವು ಕಾರ್ಯತಂತ್ರ ವಿಷಯಗಳನ್ನು ಚರ್ಚಿಸಲಾಗಿದೆ.

ಆಹಾರ ಪೂರೈಕೆಯ ಸರಪಳಿಗಳ ಪ್ರಮುಖ ಸಂಗತಿಗಳು: ಅಭಿವೃದ್ಧಿ ವಿಷಯದಲ್ಲಿ ರಾಜ್ಯಗಳ ನಡುವೆ ಹಾಗೂ ರಾಜ್ಯಗಳ ಒಳಗೆ ಇರುವ ಪ್ರದೇಶಗಳ ನಡುವೆ ಹಲವು ವೈವಿಧ್ಯತೆಗಳಿವೆ. ಅಭಿವೃದ್ಧಿಯ ಮಾನದಂಡದಲ್ಲಿ ಭಾರತದ ಕೆಲವು ಭಾಗಗಳು ಆಗ್ನೇಯ ಏಷ್ಯಾವನ್ನು ಹೋಲುತ್ತಿದ್ದರೆ, ಕೆಲವು ಭಾಗಗಳ ಅಭಿವೃದ್ಧಿ ಮಟ್ಟವು ಆಫ್ರಿಕಾದಂತೆ ಇವೆ (ಪಿಂಗಲಿ ಮತ್ತು ಇತರರು 2019). ನಾವು ಬಹುತೇಕ ಸಮಯದಲ್ಲಿ ಅಭಿವೃದ್ಧಿಯ ಗುಣಲಕ್ಷಣಗಳನ್ನು ಪರಿಗಣಿಸುವುದು ಸರಾಸರಿಯ ನೆಲೆಯಲ್ಲಿ. ಈ ಸರಾಸರಿಗಳ ನಡುವೆ ಅಂತರ ಮತ್ತು ವ್ಯತ್ಯಾಸಗಳಿವೆ.

ಆಹಾರ ಖರೀದಿಯ ಸ್ವರೂಪ: ನಾವು ಸೇವಿಸುವ ಬಹುತೇಕ ಆಹಾರಗಳಲ್ಲಿ ಶೇಕಡ 92 ರಷ್ಟು ಆಹಾರವನ್ನು ಆಹಾರ ಮಾರುಕಟ್ಟೆಯಿಂದ ಖರೀದಿಸಲಾಗುತ್ತದೆ. ಇದು ಭಾರತದ ಆಹಾರ ಭದ್ರತೆಯಲ್ಲಿ ಆಹಾರ ಪೂರೈಕೆಯ ಸರಪಳಿಯ ಮಹತ್ವವನ್ನು ಪ್ರತಿಬಿಂಬಿಸುತ್ತದೆ. ಅದರ ಪ್ರತಿಬಿಂಬಗಳು ಈ ಕೆಳಗಿನಂತೆ:

(i) ಭಾರತದಲ್ಲಿ ಸೇವಿಸುವ ಆಹಾರಗಳಲ್ಲಿ ಶೇಕಡ 60ರಷ್ಟು ಆಹಾರವನ್ನು ನಗರ ಪ್ರದೇಶದ ಗ್ರಾಹಕರು ಅನುಭೋಗಿಸುತ್ತಾರೆ. ಇದನ್ನು 2011-12ರ ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಘಟನೆಯ (NSSO) ಮಾಹಿತಿಯ ಆಧಾರದಲ್ಲಿ, ನಗರ ಮತ್ತು ಗ್ರಾಮೀಣ ಪ್ರದೇಶಗಳ ತಲಾವಾರು ಆಹಾರ ಸೇವನೆ ಕುರಿತ ಅಂಕಿ ಸಂಖ್ಯೆಯಿಂದ ಲೆಕ್ಕ ಹಾಕಲಾಗುತ್ತದೆ. ನಗರ ಪ್ರದೇಶದ ಜನರು ತಾವು ಸೇವಿಸುವ ಬಹುತೇಕ ಎಲ್ಲಾ ಅತ್ಯಗತ್ಯ ಆಹಾರಗಳನ್ನು ಖರೀದಿಸುತ್ತಾರೆ. ಈ ನೆಲೆಯಲ್ಲಿ ನಗರ ಪ್ರದೇಶದ ಬಹುತೇಕ ಎಲ್ಲಾ ಮನೆಮಂದಿ ಆಹಾರದ ನಿವ್ವಳ ಖರೀದಿದಾರರು. ಗ್ರಾಮೀಣ ಪ್ರದೇಶಗಳಿಗಿಂತ ನಗರ ಪ್ರದೇಶದಲ್ಲಿ ಆಹಾರದ ತಲಾ ವೆಚ್ಚವು ಅಧಿಕವಾಗಿದೆ ಎನ್ನುವುದನ್ನು ನಾವು ಗಮನಿಸಬೇಕು. ಭಾರತದ ನಗರ ಪ್ರದೇಶಗಳ ಜನಸಂಖ್ಯೆಯ ಪಾಲನ್ನು ವಿವಿಧ ನೆಲೆಯಲ್ಲಿ ಅಂದಾಜು ಮಾಡಲಾಗುತ್ತದೆ. ಇವುಗಳಲ್ಲಿ 2021ರ ಜನಗಣತಿ ಇನ್ನೂ ನಡೆಯದೇ ಇರುವುದರಿಂದ ಅಧಿಕೃತವಾದದ್ದು 2011ರ ಜನಗಣತಿಯಾಗಿದೆ. 2011ರ ಜನಗಣತಿಯ ಆಧಾರದಲ್ಲಿ ನಗರ ಪ್ರದೇಶಗಳ

ಜನಸಂಖ್ಯೆಯ ಪಾಲು ಶೇಕಡ 31ರಷ್ಟು 2019ರ ಒಂದು ಅಂದಾಜಿನ ಪ್ರಕಾರ ನಗರ ಪ್ರದೇಶಗಳ ಜನಸಂಖ್ಯೆಯ ಪಾಲು ಶೇಕಡ 35.39 ಎಂದು ತಿಳಿಯಲಾಗಿದೆ. ಈ ಅಂದಾಜು ಪ್ರಮುಖ ಬ್ಯಾಂಕ್ ಆಧಾರಿತ ಸೂಚ್ಯಂಕದ ಮೇಲೆ ಸಂಗ್ರಹಿಸಿದ ಮಾಹಿತಿಯಿಂದ ಲೆಕ್ಕಹಾಕಲಾಗಿದೆ. ಇದನ್ನು ಕ್ಲಸ್ಟರ್ ಹಂತದಲ್ಲಿ ಸಮುದಾಯ-ಪತ್ತೆಹಚ್ಚುವಿಕೆಯ ಅಭ್ಯಾಸದಿಂದ ಬಳಸಿ ಸಂಗ್ರಹಿಸಲಾದ ಮಾಹಿತಿಯಿಂದ ಅಂದಾಜಿಸಲಾಗಿದೆ.

(ii) ಭಾರತದ ಒಟ್ಟು ಆಹಾರ ಸೇವನೆಯಲ್ಲಿ ಶೇಕಡ 40ರಷ್ಟು ಆಹಾರವನ್ನು ಗ್ರಾಮೀಣ ಪ್ರದೇಶಗಳ ಜನರು ಉಪಭೋಗಿಸುತ್ತಾರೆ. ಇದರಲ್ಲಿ ಶೇಕಡ 80 ಆಹಾರಧಾನ್ಯಗಳನ್ನು ಬೇರೆ ಬೇರೆ ರೂಪದಲ್ಲಿ ಖರೀದಿಸಿದ್ದರೆ, ಉಳಿದ ಶೇಕಡ 20 ರಷ್ಟು ಆಹಾರವನ್ನು ತಮ್ಮ ಸ್ವಂತ ಜಮೀನು ಮತ್ತು ಮನೆಯಲ್ಲಿ ಉತ್ಪಾದಿಸಿಕೊಳ್ಳುತ್ತಾರೆ. ಈ ಶೇಕಡ 80 ಎನ್ನುವುದು ಒಂದು ಸಾಂಪ್ರದಾಯಿಕ ಅಂದಾಜು. ಇದು ಎರಡು ಅಂದಾಜುಗಳ ಸರಳ ಸರಾಸರಿ. ಮೊದಲನೆಯದು 2011–12ರಲ್ಲಿ ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಘಟನೆ ನಡೆಸಿದ ಅಧ್ಯಯನವು ಗ್ರಾಮೀಣ ಪ್ರದೇಶಗಳಲ್ಲಿ ಶೇಡಕ 84ರಷ್ಟು ಆಹಾರಧಾನ್ಯಗಳನ್ನು ಬೇರೆ ಬೇರೆ ರೂಪದಲ್ಲಿ ಖರೀದಿಸುತ್ತಾರೆ ಎಂದು ಅಂದಾಜಿಸಿದೆ (ಭಾರತ ಸರ್ಕಾರ, 2013). ಎರಡನೆಯದು ಅಂತಾರಾಷ್ಟ್ರೀಯ ಬೆಳೆ ಸಂಶೋಧನಾ ಸಂಸ್ಥೆ (International Crop Research Institute) ನಡೆಸಿರುವ ಸಮೀಕ್ಷೆಯು ಶೇಕಡ 75ರಷ್ಟು ಎಂದು ಅಂದಾಜಿಸಿದೆ. ಈ ಅಂದಾಜು ಅರೆ–ಶುಷ್ಕ ಉಷ್ಣವಲಯಗಳಲ್ಲಿ ಮತ್ತು ಅರೆ–ಶುಷ್ಕ ವಲಯಗಳ ಗ್ರಾಮೀಣ ಪ್ರದೇಶಗಳ ಹಳ್ಳಿಗಳ ಸರಾಸರಿ ಕಳವಳಯಾಗಿರುತ್ತದೆ (ಕುಮಾರ್ ಮತ್ತು ಇತರರು 2019). ಆಹಾರ ಬಳಕೆಯ ಸಾಮಗ್ರಿಗಳ ಖರೀದಿಗೆ ಒಳನಾಡಿನ ಬಹುಪಾಲು ಹಳ್ಳಿಗಳು ಸಹ ಆಹಾರ ಮಾರುಕಟ್ಟೆಯನ್ನು ಅವಲಂಬಿಸಿವೆ.

ಹೀಗಾಗಿ, ಭಾರತದ ಆಹಾರ ಪೂರೈಕೆ ಸರಪಳಿಯಲ್ಲಿ (ಎಫ್‌ಎಸ್‌ಸಿ) ಆಹಾರ ಮಾರುಕಟ್ಟೆಯಿಂದ ಖರೀದಿಸುವ ಪ್ರಮಾಣವು ಅಗಾಧವಾಗಿದೆ. ಆಹಾರ ಮತ್ತು ಕೃಷಿ ಕಾರ್ಪೊರೇಟ್ ಅಂಕಿ ಅಂಶಗಳ ಡೇಟಾಬೇಸ್ (FAOSTAT) ಆಧಾರದಲ್ಲಿ ತಯಾರಿಸಿರುವ 'ಫುಡ್‌ಬ್ಯಾಲೆನ್ಸ್ ಶೀಟ್'ನ ಒಂದು ಸರಳ ಅಂದಾಜಿನಂತೆ ಭಾರತವು 2017 ರಲ್ಲಿ 1.224 ಬಿಲಿಯನ್ ಟನ್ ಆಹಾರ ಉತ್ಪಾದಿಸಿದೆ. ಇದರಲ್ಲಿ 35 ಮಿಲಿಯನ್ ಟನ್ ಅಥವಾ ಒಟ್ಟು ಉತ್ಪಾದನೆಯಾದ ಶೇಕಡ 2.8 ರಷ್ಟು ಆಹಾರವನ್ನು ರಫ್ತು ಮಾಡಿದೆ. ಇದೇ ಸಮಯದಲ್ಲಿ 29 ಮಿಲಿಯನ್‌ನಷ್ಟು ಅಥವಾ ಶೇಕಡ 2.4 ರಷ್ಟು ಆಹಾರವನ್ನು ಆಮದು ಮಾಡಿಕೊಳ್ಳಲಾಗಿದೆ. ಆಹಾರ ಮಾರುಕಟ್ಟೆಯಿಂದ 1.224 ಬಿಲಿಯನ್ ಟನ್‌ಗಳಲ್ಲಿ ಶೇಕಡ 92ರಷ್ಟು ಆಹಾರ ಧಾನ್ಯಗಳನ್ನು ಅಂದರೆ, 1.12 ಬಿಲಿಯನ್ ಟನ್ ಆಹಾರವು, ಖರೀದಿಸಿರುವುದನ್ನು ಒಳಗೊಂಡಿದೆ.

ಆಹಾರ ಮಾರುಕಟ್ಟೆಯಲ್ಲಿ ಖಾಸಗಿ ಪಲಯಿಗಳ ಖರೀದಿ ಸ್ವಾಟಲ್ಟು: ಖಾಸಗಿ ಪಲಯಿವು ಶೇಕಡ 95 ರಷ್ಟು ಆಹಾರ ಪದಾರ್ಥಗಳನ್ನು ಖರೀದಿಸಿ ಮಾರಾಟ ಮಾಡುತ್ತದೆ. ಉಳಿದ ಶೇಕಡ 5ರಷ್ಟು ಆಹಾರ ಪದಾರ್ಥಗಳು ಸರ್ಕಾರಗಳ

(ಕೇಂದ್ರ ಮತ್ತು ರಾಷ್ಟ್ರ) ಸಾರ್ವಜನಿಕ ವಿತರಣಾ ವ್ಯವಸ್ಥೆಯ (ಪಿಡಿಎಸ್) ಮೂಲಕ ಪೂರೈಸಲಾಗುತ್ತದೆ. ರಾಷ್ಟ್ರೀಯ ಆಹಾರ ಭದ್ರತೆಯಲ್ಲಿ ಅಂದರೆ ಆಹಾರ ವಿತರಣಾ ಪರಿಭಾಷೆಯಲ್ಲಿ ಕರ್ನಾಟಕವು ಒಂದು ಸಣ್ಣ ಪಾತ್ರವನ್ನು ಮಾತ್ರ ನೇರವಾಗಿ ನಿರ್ವಹಿಸುತ್ತಿದೆ. ಈ ಅಂತರವು ಭಾರತದಲ್ಲಿ ನಾಗರಿಕರಿಗೆ ಆಹಾರ ಪೂರೈಕೆ ಮಾಡುವಲ್ಲಿ ಪ್ರಾಬಲ್ಯತೆ ಸಾಧಿಸಿರುವ ಖಾಸಗಿ ವಲಯದ ಸಾಮರ್ಥ್ಯವನ್ನು, ಸಾರ್ವಜನಿಕ ವಲಯದ ಸಾಮರ್ಥ್ಯವು ಸೀಮಿತವಾಗಿರುವುದನ್ನು ಸೂಚಿಸುತ್ತದೆ.

ಈ ಕೆಳಗಿನ ಅಂಶಗಳ ಆಧಾರದಲ್ಲಿ ಸರ್ಕಾರದ ಪಾಲು ಶೇಕಡ 5ರಷ್ಟು ಎಂದು ಅಂದಾಜು ಮಾಡಬಹುದು: (i) 2017–18 ರಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ (ಪಿಡಿಎಸ್) ಮೂಲಕ ಶೇಕಡ 27.6 ರಷ್ಟು ಅಕ್ಕಿ ಮತ್ತು ಗೋಧಿ ವಿತರಿಸಲಾಗುತ್ತಿದೆ (ಮಾನ್, 2018). (ii) ಅಕ್ಕಿ ಮತ್ತು ಗೋಧಿಯು ಎಲ್ಲಾ ಆಹಾರಧಾನ್ಯಗಳಲ್ಲಿ ಶೇಕಡ 74ರಷ್ಟು ಪ್ರಮಾಣದಲ್ಲಿದೆ (ತಿವಾರಿ, 2020). (iii) 2011–12ರ ಎನ್ಎಸ್ಎಸ್ಓ ಸಮೀಕ್ಷೆಯ ಪ್ರಕಾರ ಆಹಾರ ಧಾನ್ಯಗಳು ಎಲ್ಲಾ ಆಹಾರ ಸೇವನೆಯ ಪ್ರಮಾಣ ಶೇಕಡ 21.5 ರಷ್ಟಿದೆ. ಮತ್ತು (iv) ಭಾರತದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ (ಪಿಡಿಎಸ್) ಮೂಲಕ ಪೂರೈಕೆಯಾಗುವ ಶೇಕಡ 4.8ರಷ್ಟು ಆಹಾರವನ್ನು ಸೇವಿಸಲಾಗುತ್ತದೆ.

ಆಹಾರ ಪೂರೈಕೆ ಸರಪಳಿಯಲ್ಲಿ ಕೃಷಿಭೂಮಿ ನಂತರದ ಚಟುವಟಿಕೆಗಳ ಪ್ರಾಬಲ್ಯ: ಆಹಾರ ಪೂರೈಕೆ ಸರಪಳಿಯ ಚಟುವಟಿಕೆಗಳಲ್ಲಿ ಶೇಕಡ 60 ರಷ್ಟು ಕೃಷಿಭೂಮಿ ನಂತರದ ಚಟುವಟಿಕೆಗಳಾಗಿರುತ್ತವೆ. ಇದನ್ನು ಕೃಷಿ ಉತ್ಪಾದನೆಯ ದರ ಮತ್ತು ಅಂತಿಮ ಚಿಲ್ಲರೆ ಬೆಲೆಗಳ ಆಧಾರದಲ್ಲಿ ಲೆಕ್ಕ ಮಾಡಲಾಗುತ್ತದೆ. ಈ ಮಾಹಿತಿಯನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವೆ ಆಹಾರ ಪೂರೈಕೆ ಸರಪಳಿಗೆ ಸಂಬಂಧಿಸಿದಂತೆ ನಡೆದಿರುವ ಅಧ್ಯಯನಗಳಿಂದ ಪಡೆಯಲಾಗಿದೆ. ಒಟ್ಟು ಬಳಕೆಯಾಗುವ ಆಹಾರ ಪದಾರ್ಥಗಳಲ್ಲಿ ನಿರ್ದಿಷ್ಟ ಧಾನ್ಯಗಳು ಮತ್ತು ಧಾನ್ಯೇತರ ಪಾಲಿನ ಪ್ರಮಾಣವನ್ನು ಲೆಕ್ಕಮಾಡಲಾಗಿದೆ. ಉದಾಹರಣೆಗೆ, ರಿಯರ್ಡನ್ ಅವರು 2012ರಲ್ಲಿ ನಡೆಸಿದ ಅಧ್ಯಯನದಲ್ಲಿ ತೋರಿಸಿರುವಂತೆ, ಕೃಷಿ ಭೂಮಿ ನಂತರದ ಪ್ರಕ್ರಿಯೆಯ ಮೂಲಕ ಆಹಾರ ಪೂರೈಕೆ ಸರಪಳಿಯಲ್ಲಿ ದೆಹಲಿಗೆ ಪೂರೈಕೆಯಾಗುವ ಅಕ್ಕಿಯ ಪಾಲು ಶೇಕಡ 35 ಮತ್ತು ಆಲೂಗಡ್ಡೆಗೆ ಪಾಲು ಶೇಕಡ 70 ರಷ್ಟು ಆಗಿರುತ್ತದೆ.

ಆಹಾರ ಪೂರೈಕೆ ಸರಪಳಿಯ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳ (ಎಸ್ಎಂಇ) ಪ್ರಾಬಲ್ಯ: ಭಾರತದಲ್ಲಿ ಸೇವಿಸುವ ಆಹಾರಗಳಲ್ಲಿ ಶೇಕಡ 72 ರಿಂದ ಶೇಕಡ 83ರಷ್ಟು ಪಾಲು ಖಾಸಗಿ ಎಸ್ಎಂಇಗಳಿಂದ ನಿರ್ವಹಿಸಲ್ಪಡುತ್ತದೆ. ಎಸ್ಎಂಇಗಳು ಸಗಟು ವ್ಯಾಪಾರ (ಕೆಲವು ಕೃಷಿ ಉತ್ಪನ್ನಗಳನ್ನು ನೇರವಾಗಿ ಮಾರುಕಟ್ಟೆಯಿಂದ ಕೊಂಡುಕೊಂಡರೆ, ಕೆಲವರು ಮಾರುಕಟ್ಟೆಯಿಂದ ಹೊರಗಿನ ಮೂಲಗಳಿಂದ ಖರೀದಿಸುತ್ತಾರೆ), ಕೃಷಿ ಉತ್ಪನ್ನಗಳ ಸಂಸ್ಕರಣೆ, ಸಾರಿಗೆ/ಲಾಜಿಸ್ಟಿಕ್ಸ್, ಚಿಲ್ಲರೆ ವ್ಯಾಪಾರ ಮತ್ತು ಆಹಾರ ಸೇವೆಯಲ್ಲಿ (ಉದಾಹರಣೆಗೆ ಸಣ್ಣ ರೆಸ್ಟೋರೆಂಟ್‌ಗಳು ಮತ್ತು ಬೀದಿ ಬದಿಯ ತಿಂಡಿ-ಊಟ ಮಾರಾಟಗಾರರು, ಡಾಬಾಗಳು), ಎಸ್ಎಂಇಗಳು ಬಹಳ ವೇಗವಾಗಿ ಬೆಳೆಯುತ್ತಿವೆ. ಇವು ಆಗಾಗ್ಗೆ

ಸ್ವಯಂಪ್ರೇರಿತವಾಗಿ ನಗರಗಳಿಗೆ ಆಹಾರ ಪೂರೈಕೆ ಸರಪಳಿಯ ಕ್ಲಸ್ಟರ್‌ಗಳ ಭಾಗವಾಗಿವೆ. ಉದಾಹರಣೆಗೆ ಆಗ್ರಾದಲ್ಲಿನ ಆಲೂಗಡ್ಡೆಯ ಡೈನಾಮಿಕ್ ಕ್ಲಸ್ಟರ್‌ಗಳು ಮತ್ತು ಕೋಲ್ಡ್ ಸ್ಟೋರೇಜ್‌ಗಳು ದೆಹಲಿ ಮಾರುಕಟ್ಟೆಗೆ ಆಹಾರ ಸೇವೆ ಪೂರೈಸುತ್ತಿವೆ (ದಾಸ್ ಗುಪ್ತಾ ಮತ್ತು ಇತರರು 2010). ಬಹಾರದಲ್ಲಿ ಇರುವ ಹಲವಾರು ವಲಯಗಳು ನಾಟ್ಸಾ ಮಾರುಕಟ್ಟೆಗೆ ಆಹಾರ ಸೇವೆ ಪೂರೈಸುತ್ತಿವೆ (ಮಿಂಟಿಸ್ ಮತ್ತು ಇತರರು 2014). ಹಾಗೆಯೇ ತುಮಕೂರು, ಮಂಡ್ಯ, ಹೊಸೂರು, ಕೋಲಾರ ಸೇರಿದಂತೆ ಇನ್ನೂ ಹಲವು ವಲಯಗಳಲ್ಲಿ ಇರುವ ಆಹಾರ ಸಂಸ್ಕರಣಾ ಘಟಕಗಳು ಮತ್ತು ಕೋಲ್ಡ್ ಸ್ಟೋರೇಜ್‌ಗಳು ಬೆಂಗಳೂರಿನ ಮಾರುಕಟ್ಟೆಗೆ ಆಹಾರ ಸೇವೆ ಪೂರೈಸುತ್ತಿವೆ. ಹಾಗೆಯೇ ಹಾವೇರಿ, ಬಾಗಲಕೋಟೆ, ಗದಗ, ವಿಜಯಪುರ, ಚಿಕ್ಕೋಡಿ, ಗೋಕಾಕ, ನರಗುಂದ ಸೇರಿದಂತೆ ಇನ್ನೂ ಮುಂತಾದ ಪಟ್ಟಣಗಳಲ್ಲಿ ಇರುವ ಆಹಾರ ಸಂಸ್ಕರಣಾ ಘಟಕಗಳು ಮತ್ತು ಕೋಲ್ಡ್ ಸ್ಟೋರೇಜ್‌ಗಳು ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿಯ ಆಹಾರ ಸೇವಾ ಮಾರುಕಟ್ಟೆಗೆ ಅಗತ್ಯ ಆಹಾರ ಪದಾರ್ಥಗಳನ್ನು ಪೂರೈಸುತ್ತಿವೆ. ಆಹಾರ ಪೂರೈಕೆ ಸರಪಳಿಯ ವ್ಯವಸ್ಥೆಗೆ ಸಂಬಂಧಿಸಿದ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ (ಎಸ್‌ಎಂಇ) ವಲಯವು ವಿಶೇಷವಾಗಿ ಟೈಯರ್–2 (Tier-2) ಮತ್ತು ಟೈಯರ್–3 (Tier-3) ಶ್ರೇಣಿ ನಗರಗಳಲ್ಲಿ ಮುಖ್ಯವಾಗಿದೆ. ಎಸ್‌ಎಂಇಗಳಿಗೆ ಸಂಬಂಧಿಸಿದ ಆಹಾರ ಪೂರೈಕೆ ಸರಪಳಿಯ ವಲಯಗಳು ಟೈಯರ್–2 (Tier-2) ಮತ್ತು ಟೈಯರ್–3 (Tier-3), ಶ್ರೇಣಿಯ ನಗರಗಳಲ್ಲಿ ಇರುವುದು ಅರೆ–ನಗರಗಳಿಗೆ ಬಹಳ ಮುಖ್ಯ. ಏಕೆಂದರೆ ಇತ್ತೀಚಿನ ಜನಸಂಖ್ಯಾ ಅಂದಾಜುಗಳ ಪ್ರಕಾರ ನಗರಗಳು ಮತ್ತು ಅರೆ–ನಗರಗಳಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 35.39 ಕ್ಕಿಂತಲೂ ಹೆಚ್ಚಿನ ಜನರು ವಾಸಿಸುತ್ತಿದ್ದಾರೆ.

ಇದಲ್ಲದೆ, ಎಸ್‌ಎಂಇಗಳು ಆಹಾರ ಪೂರೈಕೆ ಸರಪಳಿ (ಎಫ್‌ಎಸ್‌ಸಿ)ಯಲ್ಲಿ ಹೆಚ್ಚಿನ ಜನರಿಗೆ ಸ್ವಯಂ ಉದ್ಯೋಗವನ್ನು ಮತ್ತು ಸಾಂದರ್ಭಿಕ ಉದ್ಯೋಗ ಅವಕಾಶಗಳನ್ನು ವಿಸ್ತಾರವಾದ ನೆಲೆಯಲ್ಲಿ ಒದಗಿಸುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಮಂಡಿಗಳಲ್ಲಿ ಕೃಷಿ ಉತ್ಪನ್ನಗಳನ್ನು ಬಂಡಿಗಳಿಂದ ಅಥವಾ ಟ್ರಕ್‌ಗಳಿಂದ ~~ಇಳಿಸುವ ಮತ್ತು ತುಂಬುವ/ಲೋಡ್ ಮಾಡುವ ಕೆಲಸಗಳು ದಿನಗೂಲಿಗಳಿಗೆ ಹೆಚ್ಚಿನ~~ ಪ್ರಮಾಣದಲ್ಲಿ ಒದಗಿಸುತ್ತದೆ. ಸಣ್ಣ ಗಿರಣಿಗಳು ಮತ್ತು ಗೋದಾಮುಗಳಲ್ಲಿ ಹಲವರಿಗೆ ಕೆಲಸಗಳು ದೊರಕುತ್ತವೆ. ಇದಕ್ಕಿಂತಲೂ ಹೆಚ್ಚಾಗಿ ಎಸ್‌ಎಂಇಗಳು ಹೆಚ್ಚಿನ ಕಾರ್ಮಿಕ ಅವಲಂಬಿತ ಉತ್ಪಾದನೆಯನ್ನು ಮಾಡುತ್ತವೆ. ದೊಡ್ಡ ಮೊತ್ತದ ಬಂಡವಾಳವನ್ನು ಬೇಡುವ ಸಂಸ್ಥೆಗಳ ಜೊತೆ ಎಸ್‌ಎಂಇಗಳ ಕಾರ್ಮಿಕ/ಬಂಡವಾಳ ಅನುಪಾತವನ್ನು ಹೋಲಿಸಿದರೆ ಎಸ್‌ಎಂಇಗಳಲ್ಲಿ ಕಾರ್ಮಿಕರ ಅನುಪಾತ ಹೆಚ್ಚಾಗಿದೆ. ಸ್ಥಳೀಯರಿಗೆ ಹೆಚ್ಚಿನ ಉದ್ಯೋಗ ಅವಕಾಶಗಳನ್ನು ಮತ್ತು ಗೌರವದಿಂದ ದುಡಿಯುವ ಪರಿಸರವನ್ನು ಸಹ ಎಸ್‌ಎಂಇಗಳು ಒದಗಿಸುತ್ತವೆ. ನಗರ ಪ್ರದೇಶಗಳಿಗೆ ಹಿಂದುಳಿದ ಪ್ರದೇಶ ಅಥವಾ ಜಿಲ್ಲೆಗಳಿಂದ ಬರುವ ದುಡಿಯುವ ಜನರನ್ನು ಅಪಾರ ಪ್ರಮಾಣದಲ್ಲಿ ಲಕ್ಷಾಂತರ ಜನರು ಮನೆ ಕೆಲಸಗಾರರಾಗಿ, ಶಾಪಿಂಗ್ ಮತ್ತು ಅಡುಗೆ ಮಾಡುವ ಬಹು ಆಯಾಮದ ಕೆಲಸಗಳಿಗೆ ನೇಮಿಸಿಕೊಳ್ಳಲಾಗಿದೆ(ಜೈನ್ ಮತ್ತು ಮಿಶ್ರಾ 2018).

ಇತ್ತೀಚೆಗೆ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳವಣಿಗೆ ಕಾಣುತ್ತಿರುವ ಉದಯೋನ್ಮುಖ ವಲಯಗಳಿಂದರೆ, ಸೂಪರ್ ಮಾರುಕಟ್ಟೆಗಳು, ಫಾಸ್ಟ್ ಫುಡ್ ಪೂರೈಕೆ ಸರಪಳಿಗಳು ಮತ್ತು ದೊಡ್ಡ ಪ್ರಮಾಣದ ಆಹಾರ ಸಂಸ್ಕರಣಾ ಘಟಕಗಳು ಸಂಸ್ಥೆಗಳು (ರಿಯರ್ಡನ್ ಮತ್ತು ಮಿಂಟಿನ್ 2011; ನೂತಲಪತಿ ಮತ್ತು ಇತರರು 2018; ಸೂತ್ರಧರ್ ಮತ್ತು ಇತರರು 2019). ಭಾರತವು ಫಾಸ್ಟ್ ಫುಡ್ ಮಾರುಕಟ್ಟೆ ಕ್ಷೇತ್ರದಲ್ಲಿ ಏಷ್ಯಾದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿದೆ (ರಿಯರ್ಡನ್ ಮತ್ತು ಇತರರು 2012b). ಒಟ್ಟಾರೆ ಇದು ಆಹಾರ ಆರ್ಥಿಕತೆಯಲ್ಲಿ ಹೆಚ್ಚು ಕಡಿಮೆ ತುಲನಾತ್ಮಕವಾಗಿ ನೋಡಿದರೆ, ಭಾರತದ ಆಹಾರ ಪೂರೈಕೆ ಸರಪಳಿಯಲ್ಲಿ ಸಣ್ಣ ಪ್ರಮಾಣದಲ್ಲಿ ಅಂದರೆ ಶೇಕಡ 10 ರಿಂದ ಶೇಕಡ 20ರಷ್ಟು ಪಾಲನ್ನು ಹೊಂದಿದೆ. ದೊಡ್ಡ ಉದ್ಯಮಗಳು ಅಥವಾ ಸಂಸ್ಥೆಗಳು ಅನೇಕ ವೇತನದಾರರನ್ನು ಮತ್ತು ದಿನಗೂಲಿ ನೌಕರರನ್ನು ನೇಮಿಸಿಕೊಳ್ಳುತ್ತವೆ. ಆದರೆ ಈ ಸಂಸ್ಥೆಗಳು ಕಡಿಮೆ ಕಾರ್ಮಿಕ-ಬಂಡವಾಳ ಅನುಪಾತವನ್ನು ಹೊಂದಿರುತ್ತವೆ. ಎಸ್ಎಂಇಗಳಿಗಿಂತ ದೊಡ್ಡ ಉದ್ಯಮಗಳಲ್ಲಿ ಕಾರ್ಮಿಕರ ಮೇಲೆ ಅವಲಂಬಿತವಾದ ಔಟ್‌ಪುಟ್ ಅನುಪಾತವು ಕಡಿಮೆ. ಅಲ್ಲದೆ, ಉದ್ಯೋಗ ಪರಿಣಾಮದಲ್ಲಿಯೂ ಪ್ರತಿ ಟನ್ ಆಹಾರ ಉತ್ಪಾದನೆಯ ಕಾರ್ಯಾಚರಣೆಗಳಲ್ಲಿ ಎಸ್ಎಂಇಗಳಿಗಿಂತ ತುಂಬಾ ಕಡಿಮೆ ಪ್ರಮಾಣದ ಉತ್ಪಾದನೆಯನ್ನು ದೊಡ್ಡ ಉದ್ಯಮಗಳು ಅಥವಾ ಸಂಸ್ಥೆಗಳು ಮಾಡುತ್ತಿವೆ.

ಆಹಾರ ಪೂರೈಕೆ ಸರಪಳಿ (ಎಫ್ಎಸ್ಸಿ)ಗಳಲ್ಲಿ ಬೇಗ ಕೊಳೆತುಹೋಗುವ ಪದಾರ್ಥಗಳ ಪಾಲು ಹೆಚ್ಚು: 2011–12ರ ಎನ್ಎಸ್ಎಸ್ಒ ಅಂಕಿ ಸಂಖ್ಯೆ ಪ್ರಕಾರ ಭಾರತದಲ್ಲಿ ಸೇವಿಸುವ ಎಲ್ಲಾ ರೀತಿಯ ಆಹಾರದಲ್ಲಿ ಶೇಕಡ 21.5 ರಷ್ಟು ಮಾತ್ರ ಆಹಾರ ಧಾನ್ಯಗಳಾಗಿವೆ. ಈ ಪ್ರಮಾಣವು ಗ್ರಾಮೀಣ ಪ್ರದೇಶಗಳಲ್ಲಿ ಶೇಕಡ 25 ರಷ್ಟು ಇದ್ದರೆ, ನಗರ ಪ್ರದೇಶಗಳಲ್ಲಿ ಶೇಕಡ 19.2ರಷ್ಟು ಇದೆ. ಹೀಗಾಗಿ, ಭಾರತದ ಆಹಾರ ಸೇವನೆಯಲ್ಲಿ ಶೇಕಡ 78.5ರಷ್ಟು ಧಾನ್ಯವಲ್ಲದ, ಹೆಚ್ಚಾಗಿ ಬೇಗ ಕೊಳೆತುಹೋಗುವ ಉತ್ಪನ್ನಗಳಾದ ತರಕಾರಿಗಳು, ಹಾಲು, ಮೀನು, ಕೋಳಿ ಮಾಂಸ, ಮಾಂಸ, ಖಾದ್ಯ ತೈಲಗಳು ಮತ್ತು ಹಣ್ಣುಗಳಾಗಿವೆ. ಇದರ ತಾತ್ಪರ್ಯವೇನೆಂದರೆ ಸುಮಾರು ಶೇಕಡ 80ರಷ್ಟು ಆಹಾರ ಪೂರೈಕೆಯು ಕಡಿಮೆ ಅವಧಿ ಜೀವಕೋಶವನ್ನು ಹೊಂದಿರುವ ಆಹಾರ ಪೂರೈಕೆಯ ಸರಪಳಿಯಾಗಿದೆ. ಆದರೆ ಲಾಕ್‌ಡೌನ್ ಪರಿಣಾಮವಾಗಿ ಬೇಗ ಕೊಳೆತುಹೋಗುವ ಆಹಾರ ಪದಾರ್ಥಗಳ ಉತ್ಪಾದಕರು ಬಹಳ ದೊಡ್ಡ ಪ್ರಮಾಣದಲ್ಲಿ ಸಪ್ಪಕ್ಕೆ ಒಳಗಾದರು. ಇದರ ಜೊತೆಗೆ ಈ ಆಹಾರ ಪೂರೈಕೆ ಸರಪಳಿ (ಎಫ್ಎಸ್ಸಿ)ಯಲ್ಲಿ ಕೆಲಸಮಾಡುವ ದೊಡ್ಡ ಪ್ರಮಾಣದ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ (ಎಸ್ಎಂಇ)ಗಳು ಬಿಕ್ಕಟ್ಟುಗಳಿಗೆ ಒಳಗಾಗಿದ್ದಾರೆ. ಲಾಕ್‌ಡೌನ್ ಪರಿಣಾಮವಾಗಿ ಬೇಗನೆ ಕೊಳೆತುಹೋಗುವ ಆಹಾರ ಪೂರೈಕೆಯಲ್ಲಿ ಉಂಟಾದ ವ್ಯತ್ಯಯಗಳಿಂದ ಉಂಟಾದ ಬೆಲೆಯ ಹೆಚ್ಚಳವು ಬಳಕೆದಾರರು, ಅದರಲ್ಲಿಯೂ ಬಡವರ ಮೇಲೆ ಗಂಭೀರವಾದ ಪರಿಣಾಮವನ್ನು ಉಂಟುಮಾಡಿದೆ.

ಗ್ರಾಮೀಣ-ನಗರ ಪ್ರದೇಶದಲ್ಲಿ ಆಹಾರ ಪೂರೈಕೆ ಸರಪಳಿಗಳ(ಎಫ್ಎಸ್ಸಿ) ಕ್ರೋಡೀಕರಣ: ಗ್ರಾಮೀಣ ಕುಟುಂಬಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಆಹಾರ ಪೂರೈಕೆ ಸರಪಳಿಯ ಜೊತೆ ನಿಕಟ ಸಂಬಂಧ ಹೊಂದಿದೆ. ಅದೇ ಸಮಯದಲ್ಲಿ,

ಗ್ರಾಮೀಣ ಪ್ರದೇಶದ ಫಾರ್ಮ್‌ಗಳು ಮತ್ತು ಕಾರ್ಮಿಕರ ಮಾರುಕಟ್ಟೆಯನ್ನು ಪಟ್ಟಣಗಳು, ಟೈಯರ್–1 (Tier-1) ಮತ್ತು ಟೈಯರ್–2 (Tier-2) ಶ್ರೇಣಿ ನಗರಗಳನ್ನು ಸಮಗ್ರವಾಗಿ ಅವಲಂಬಿಸಿವೆ. ಗ್ರಾಮೀಣ ಉದ್ಯೋಗವು ಸೇರಿದಂತೆ ಹಲವಾರು ಅಂಶಗಳು ಪ್ರಮುಖವಾದ ಅಂಶವಾಗಿ ಎದ್ದು ಕಾಣುತ್ತವೆ.

ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಜನಸಂಖ್ಯೆಯ ಪಾಲು ಹೊಂದಿ ಜನನಿಬಿಡವಾಗಿವೆ. ಇವು ಹತ್ತಿರದ ಅರೆ–ನಗರಗಳು ಹಾಗೂ ನಗರ ಪರಿಧಿಗಳ 'ಕಾರಿಡಾರ್ ವಲಯ'ಗಳೊಂದಿಗೆ ಸಂಪರ್ಕ ಹೊಂದಿವೆ. ಗ್ರಾಮೀಣ ಪ್ರದೇಶಗಳನ್ನು ಸೀಳಿಕೊಂಡು ದಾಟುವಂತೆ ದೊಡ್ಡ ಹೆದ್ದಾರಿಗಳನ್ನು ರಚಿಸಲಾಗಿದೆ. ಇದರ ಜೊತೆಗೆ ಹೆಚ್ಚಿದ ಸಂಪರ್ಕ ಕ್ರಾಂತಿಗಳು ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳನ್ನು ಬಲವಾಗಿ ಪ್ರಭಾವಿಸಿವೆ (ಭಲ್ಲಾ 1997). ಭಾರತ ಗ್ರಾಮೀಣ ಪ್ರದೇಶಗಳಲ್ಲಿ ಜನಸಾಂದ್ರತೆ ಗಮನಾರ್ಹವಾಗಿದೆ. ಇಂಟರ್ ನ್ಯಾಷನಲ್ ಫಂಡ್ ಫಾರ್ ಅಗ್ರಿಕಲ್ಚರ್ ಡೆವಲಪ್‌ಮೆಂಟ್ (2019) ಅವರು ಉದ್ಯೋಗದ ಮೇಲೆ ನಡೆಸಿರುವ ಅಧ್ಯಯನವು, ಭಾರತ ಗ್ರಾಮೀಣ ಪ್ರದೇಶವನ್ನು ತುಲನೆ ಮಾಡಬಹುದಾದ ಪುರಾವೆಗಳಿಲ್ಲ ಎಂದು ತಿಳಿಸುತ್ತದೆ. ಅರೆ–ನಗರ ಪ್ರದೇಶಗಳ ಮೇಲೆ 'ನಗರ ಪ್ರದೇಶದ ನೆರಳು' ದಟ್ಟವಾಗಿರುವ ಕುರಿತು ಸಾಕಷ್ಟು ಪುರಾವೆಗಳಿವೆ ಎಂದು ಶರ್ಮಾ ಮತ್ತು ಚಂದ್ರಶೇಖರ್ ಅವರ 2014 ಅಧ್ಯಯನವು ಗುರುತಿಸಿದೆ. ಇದರ ಪರಿಣಾಮವಾಗಿ ಗ್ರಾಮೀಣ ಪ್ರದೇಶವು ಪ್ರಮುಖ ಪಾಲನ್ನು ಒಳಗೊಂಡಿದೆ. 2011 ಜನಗಣತಿಯು ಶೇಕಡ 37 ರಷ್ಟು ಹೊಸ ಪಟ್ಟಣಗಳನ್ನು ಘೋಷಿಸಿತು. ಇವುಗಳಲ್ಲಿ ಬಹುತೇಕ ಪಟ್ಟಣಗಳು ಪ್ರಮುಖ ಮಹಾನಗರಗಳ ಸುತ್ತ ಮುತ್ತ ಕೇಂದ್ರೀಕೃತವಾಗಿವೆ (ಐಜಾಜ್ 2019).

ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಘಟನೆಯು 2011–12ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಶೇಕಡ 61ರಷ್ಟು ಗ್ರಾಮೀಣ ಕುಟುಂಬಗಳು ತಮ್ಮ ದುಡಿಮೆ ಮತ್ತು ಆದಾಯಕ್ಕೆ ಗ್ರಾಮೀಣ ಕೃಷಿಯೇತರ ಉದ್ಯೋಗ (ಆರ್‌ಎನ್‌ಎಫ್‌ಇ) ವನ್ನು ಬದುಕಿಗೆ ಅವಲಂಬಿಸಿದ್ದರೆ, ಕೃಷಿಯನ್ನು ಶೇಕಡ 39ರಷ್ಟು ಕುಟುಂಬಗಳು ಬದುಕಿನ ಆದಾಯಕ್ಕೆ ಅವಲಂಬಿಸಿವೆ. ಕಳೆದ ನಾಲ್ಕು ದಶಕಗಳಲ್ಲಿ, ಗ್ರಾಮೀಣ ಆದಾಯದಲ್ಲಿ ಕೃಷಿಯ ಪಾಲು ಶೇಕಡ 72 ರಿಂದ ಶೇಕಡ 39ಕ್ಕೆ ಇಳಿದಿದೆ. ಆದರೆ ಗ್ರಾಮೀಣ ಕೃಷಿಯೇತರ ಉದ್ಯೋಗಗಳ ಮೇಲಿನ ಸಹ ಸಂಬಂಧವು ಶೇಕಡ 28 ರಿಂದ ಶೇಡಕ 61ಕ್ಕೆ ಏರಿದೆ (ಚಾಂದ್ ಮತ್ತು ಇತರರು 2017). ಸುಮಾರು ಶೇಕಡ 88 ರಷ್ಟು ಕೃಷಿ ಕುಟುಂಬಗಳು ಬದುಕಿಗೆ ಗ್ರಾಮೀಣ ಕೃಷಿಯೇತರ ಉದ್ಯೋಗ (ಆರ್‌ಎನ್‌ಎಫ್‌ಇ) ಗಳನ್ನು ಅವಲಂಬಿಸಿವೆ (ಚಂದ್ರಶೇಖರ್ ಮತ್ತು ಮೆಹ್ರೋತ್ರಾ 2016).

ಗ್ರಾಮೀಣ ಕೃಷಿಯೇತರ ಉದ್ಯೋಗ (ಆರ್‌ಎನ್‌ಎಫ್‌ಇ) ಗಳು ನೇರವಾಗಿ ಅಗ್ರಿಫುಡ್ ಸಗಟು ವ್ಯವಹಾರ, ಸಂಸ್ಕರಣೆ, ಸಾರಿಗೆ, ಚಿಲ್ಲರೆ ವ್ಯಾಪಾರ ಮತ್ತು ಆಹಾರ ಸೇವೆಗಳು ಆಹಾರ ಪೂರೈಕೆ ಸರಪಳಿ (ಎಫ್‌ಎಸ್‌ಸಿ)ಯ ಜೊತೆ ಗಣನೀಯ ಪ್ರಮಾಣದ ಸಹ ಸಂಬಂಧವನ್ನು ಹೊಂದಿದೆ ಅಥವಾ ಆಹಾರ ಪೂರೈಕೆ ಸರಪಳಿ

Scanned with OKEN Scanner

(ಎಫ್‌ಎಸ್‌ಸಿ)ಯ ಜೊತೆ ಪರೋಕ್ಷವಾಗಿ ಸಾರಿಗೆ ಸೇರಿದಂತೆ ಇತರ ಆಹಾರ ಸೇವೆಗಳು ಸಹ ಸಂಬಂಧ ಹೊಂದಿದೆ ಎಂದು ನಾವು ಪ್ರತಿಪಾದಿಸಬಹುದು. ಈ ಉಪ-ವಲಯಗಳು ಆಹಾರ ಪೂರೈಕೆ ಸರಪಳಿ (ಎಫ್‌ಎಸ್‌ಸಿ)ಯ ಜೊತೆ ಹೊಂದಿರುವ ಷೇರಿನ ಪ್ರಮಾಣವನ್ನು ನಿರ್ದಿಷ್ಟವಾಗಿ ಅಧ್ಯಯನ ಮಾಡಲು ನಮಗೆ ಸಾಧ್ಯವಾಗುವುದಿಲ್ಲ. ಆದರೆ ಗ್ರಾಮೀಣ ಪ್ರದೇಶಗಳು ಮತ್ತು ಪಟ್ಟಣಗಳಲ್ಲಿನ ಆಹಾರ ಆರ್ಥಿಕತೆಯ ಪ್ರಾಮುಖ್ಯತೆಯು ಗ್ರಾಮೀಣ ಕೃಷಿಯೇತರ ಉದ್ಯೋಗ (ಆರ್‌ಎನ್‌ಎಫ್‌ಇ) ಮತ್ತು ಆಹಾರ ಪೂರೈಕೆ ಸರಪಳಿ (ಎಫ್‌ಎಸ್‌ಸಿ)ಯ ಜೊತೆಗಿನ ಸಹ ಸಂಬಂಧವನ್ನು ಸೂಚಿಸುತ್ತದೆ. ಆದಾಗ್ಯೂ, ಇದನ್ನು ನಾವು 2009ರಲ್ಲಿ ಲಾಂಜೌವ್ ಮತ್ತು ಮುರ್ಗೈ ಅವರುಗಳು ನಡೆಸಿರುವ ಸಂಶೋಧನೆಗಳಿಂದ ಗ್ರಾಮೀಣ ಕೃಷಿಯೇತರ ಉದ್ಯೋಗವು (ಆರ್‌ಎನ್‌ಎಫ್‌ಇ) ಕೃಷಿ ಇಳುವರಿಯ ಜೊತೆ ಅಂಕಿ-ಅಂಶಗಳ ನೆಲೆಯಲ್ಲಿ ಪರಸ್ಪರ ಸಂಬಂಧ ಹೊಂದಿಲ್ಲ. ಆದರೆ ಇದು ಬಹುತೇಕ ಸಮಯದಲ್ಲಿ ಅಂದಾಜಿನ ಆಧಾರಗಳನ್ನು ಅವಲಂಬಿಸಿದೆ.

ಗ್ರಾಮೀಣ ಕೃಷಿಯೇತರ ಉದ್ಯೋಗದ (ಆರ್‌ಎನ್‌ಎಫ್‌ಇ) ದೊಡ್ಡ ಪಾಲು ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವೆ ದುಡಿಯುವ ಜನರ ವಿನಿಮಯದ (ಜನರು ಹೋಗಿಬರುವ ಮೂಲಕ) ಮೂಲಕ ಬರುತ್ತದೆ (ಚಂದ್ರಶೇಖರ್ 2011). ಕೋವಿಡ್-19 ತಡೆಗಟ್ಟಲು ತೆಗೆದುಕೊಂಡ ಕಟ್ಟುನಿಟ್ಟಿನ ಲಾಕ್‌ಡೌನ್ ಕ್ರಮಗಳು ಗ್ರಾಮೀಣ ಮತ್ತು ಪಟ್ಟಣಗಳ ನಡುವಿನ ಕಾರ್ಮಿಕರ ಪೂರೈಕೆ ಸರಪಳಿಗೆ ತಡೆಒಡ್ಡಿತು. ಇದರ ಪರಿಣಾಮಗಳು ಪಟ್ಟಣಗಳ ಆಹಾರ ಪೂರೈಕೆ ಸರಪಳಿಯ (ಎಫ್‌ಎಸ್‌ಸಿ) ಮೇಲೆ ಹಾಗೂ ಬಹುಸಂಖ್ಯೆಯ ಗ್ರಾಮೀಣ ಕುಟುಂಬಗಳ ಜೀವನೋಪಾಯ ಮೇಲೆ ಗಂಭೀರವಾದ ಬಿಕ್ಕಟ್ಟುಗಳನ್ನು ಉಂಟುಮಾಡಿದೆ (ಡಿಸೋಜಾ ಮತ್ತು ಇತರರು 2020). ಅದರಲ್ಲಿಯೂ ಕಾರ್ಮಿಕ ಪೂರೈಕೆಯು ನೇರವಾಗಿ ಆಹಾರ ಪೂರೈಕೆ ಸರಪಳಿಯ ಮೇಲೆ ಅಘಾತವನ್ನು ಉಂಟುಮಾಡಿದೆ. ಮೂರನೇ ಒಂದು ಭಾಗದಷ್ಟು ರೈತರು ಕೃಷಿ ಕೂಲಿ ಕಾರ್ಮಿಕರನ್ನು (ಹೆಚ್ಚಾಗಿ ಭೂರಹಿತ ಕೃಷಿ ಕಾರ್ಮಿಕರನ್ನು) ತಮ್ಮ ಜಮೀನಿನ ಕೃಷಿ ಚಟುವಟಿಕೆಗೆ ಅವಲಂಬಿಸಿರುತ್ತಾರೆ. ಇವರುಗಳಲ್ಲಿ ಕೆಲವರು ಕಾರ್ಮಿಕರು ಹತ್ತಿರದ ಪಟ್ಟಣಗಳಿಂದ ಗ್ರಾಮೀಣ ಪ್ರದೇಶಕ್ಕೆ ಪ್ರಯಾಣಿಸುತ್ತಾರೆ. ಆದರೆ ಗ್ರಾಮೀಣ ಭೂರಹಿತ ಕೂಲಿ ಕಾರ್ಮಿಕರು ಕೃಷಿಯನ್ನು ಭಾಗಶಃ ಅವಲಂಬಿಸಿರುತ್ತಾರೆ. 2016-17ರಲ್ಲಿ ನಬಾರ್ಡ್ ಮಾಡಿರುವ ಅಂದಾಜಿನ ಪ್ರಕಾರ, ಗ್ರಾಮೀಣ ಆದಾಯದಲ್ಲಿ ಕೃಷಿ ಕೂಲಿ ಕಾರ್ಮಿಕರು ಶೇಕಡ 32 ರಷ್ಟು ಪಾಲನ್ನು ಹೊಂದಿದ್ದಾರೆ.

ಆಹಾರ ಪೂರೈಕೆ ಸರಪಳಿಗಳ ಮೇಲೆ ಕೋವಿಡ್-19ನ ಪರಿಣಾಮಗಳು: ಭಾರತದ ಆಹಾರ ಪೂರೈಕೆ ಸರಪಳಿ ಕುರಿತು ಮೇಲೆ ತಿಳಿಸಲಾದ ಲಕ್ಷಣಗಳ ಆಧಾರದಲ್ಲಿ, ನಾವು ಕೋವಿಡ್-19 ಕೇವಲ ಆಹಾರ ಪೂರೈಕೆ ಸರಪಳಿ ಮೇಲೆ ಮಾತ್ರ ಪರಿಣಾಮ ಬೀರದೆ, ವಿವಿಧ ವಲಯಗಳ ಮೇಲೆ ವಿಭಿನ್ನ ರೀತಿಯ ವಿಶಿಷ್ಟ ಪರಿಣಾಮಗಳನ್ನು ಉಂಟುಮಾಡಿದೆ ಎಂಬುದನ್ನು ನಾವು ಗಮನಿಸಬಹುದು.

Scanned with OKEN Scanner

ಆಹಾರ ಭದ್ರತೆಯ ಮೇಲೆ ಉಂಟಾದ ಪರಿಣಾಮಗಳು: ಕೋವಿಡ್-19 ಆಹಾರ ಪೂರೈಕೆ ಸರಪಳಿಗಳ ಮೇಲೆ ಗಂಭೀರವಾದ ಪರಿಣಾಮವನ್ನು ಉಂಟುಮಾಡುವ ಮೂಲಕ ರಾಷ್ಟ್ರೀಯ ಆಹಾರ ಭದ್ರತೆಯ ಮೇಲೆ ಅಘಾತವನ್ನು ಉಂಟುಮಾಡಿದೆ. ಭಾರತದಲ್ಲಿ ಸೇವಿಸುವ ಶೇಕಡ 92 ರಷ್ಟು ಆಹಾರವು ಆಹಾರ ಪೂರೈಕೆ ಸರಪಳಿ(ಎಫ್.ಎಸ್.ಸಿ)ಗಳಿಂದ ಖರೀದಿಸಲ್ಪಟ್ಟಿದೆ. ಇದು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಜೀವನಾಧಾರವನ್ನು ಹುಡುಕುವುದು ಮಾರುಕಟ್ಟೆಯ ಆಶ್ರಯ ಹಾಗೂ ಪರಿಣಾಮಗಳಿಂದ ಹೊರಗಿದೆ. ಇದು ಹಲವು ವ್ಯವಸ್ಥೆಯ ಉದ್ದ-ಅಗಲದ ಒಳಗಿನ ಪರಿಣಾಮಗಳನ್ನು ಹೊಂದಿರುತ್ತದೆ. ಅಪೆಂದರೆ ಹಣದುಬ್ಬರ, ಆಹಾರದ ಬೆಲೆ ಹೆಚ್ಚಳ, ಸಾಮಾಜಿಕ ಕ್ಷೋಭೆಗಳು, ಭರ, ಅತಿವೃಷ್ಟಿ, ಕಾಳಸಂತೆ, ಇತ್ಯಾದಿಗಳು ಆಹಾರ ಪೂರೈಕೆಯ ಸರಪಳಿಗಳನ್ನು ದುರ್ಬಲಗೊಳಿಸುತ್ತವೆ. ಇವುಗಳು ಅತ್ಯಂತ ಕಡಿಮೆ ಅವಧಿಯಲ್ಲಿ ಆಹಾರ ಭದ್ರತೆಯಲ್ಲಿನ ಉತ್ಪಾದಕತೆ ಮತ್ತು ಹೂಡಿಕೆಗಳ ಮೇಲೆ ಮಧ್ಯಮ ಅವಧಿಯ ಮತ್ತು ದೀರ್ಘಾವಧಿಯ ಪರಿಣಾಮವನ್ನು ಉಂಟುಮಾಡಿವೆ. ಆಹಾರ ಬೆಲೆಗಳ ಹೆಚ್ಚಳವು ಕಡಿಮೆ ಅವಧಿಯ ಪರಿಣಾಮ ಬೀರುವ ಸಾಧ್ಯತೆಯಿದೆ. ಈ ಪರಿಣಾಮಗಳು ಸಂಯೋಜಿತವಾಗಿ ಇತರ ಅಂಶಗಳ ಜೊತೆ ಸೇರಿ ಒಂದು ವಿಷಚಕ್ರ/ವೃತ್ತವಾಗುವ ಸಾಧ್ಯತೆಯಿದೆ. ಇದರ ಪರಿಣಾಮಗಳು ಸಾಮಾಜಿಕ ಅಶಾಂತಿಯನ್ನು ಉಂಟುಮಾಡುತ್ತವೆ (ಬೆಲ್ಲೆಮರೆ 2015).

ಕೃಷಿಭೂಮಿಯ ನಂತರದ ಪರಿಣಾಮಗಳು: ಆಹಾರ ಉತ್ಪನ್ನಗಳು ಕೃಷಿಭೂಮಿಯಿಂದ ಹೊರಬಂದ ನಂತರ ಆಹಾರ ಪೂರೈಕೆ ಸರಪಳಿಯ ಮೇಲೆ ಹೆಚ್ಚಿನ ಪರಿಣಾಮಗಳನ್ನು ಉಂಟುಮಾಡುತ್ತದೆ. ಮುಖ್ಯವಾಗಿ ಕೃಷಿ ಉತ್ಪನ್ನ ವ್ಯವಹಾರ ಸಂಸ್ಥೆಗಳು ಮತ್ತು ಕಾರ್ಮಿಕರು, ಮಧ್ಯಹಂತದಲ್ಲಿ ಇರುವ ಸಗಟು ವ್ಯಾಪಾರದಾರರು, ಸಂಸ್ಕರಣಾ ಘಟಕಗಳು, ಸಾರಿಗೆ ಮತ್ತು ಸರಬರಾಜುದಾರರು, ತಳಹಂತದಲ್ಲಿನ ಚಿಲ್ಲರೆ ವ್ಯಾಪಾರದಲ್ಲಿ ಮತ್ತು ಆಹಾರ ಸೇವೆಗಳ ಮೇಲೆ ಗಂಭೀರವಾದ ಪರಿಣಾಮಗಳನ್ನು ಉಂಟುಮಾಡಿದ್ದರೆ, ಕೃಷಿಕರು ಮತ್ತು ಕೃಷಿ ಕೆಲಸಗಾರರ ಮೇಲೆ ಕಡಿಮೆ ಪ್ರಮಾಣದ ಪರಿಣಾಮಗಳನ್ನು ಉಂಟುಮಾಡಿದೆ. ಈ ಕಾರಣಗಳಿಂದಾಗಿ ಉಲ್ಲೇಖಿಸಿದ ಆಹಾರ ಪೂರೈಕೆ ಸರಪಳಿಯ ಸತ್ಯಗಳಲ್ಲಿ ಬೇರೂರಿರುವ ಆಯಾಮಗಳನ್ನು ಮುಂದೆ ತಿಳಿಸಲಾಗಿದೆ. (i) ಆಹಾರ ಪೂರೈಕೆ ಸರಪಳಿಯ ಶೇಕಡ 60 ರಷ್ಟು ಆಹಾರದ ಬೆಲೆಗಳು ನಿಗದಿಯಾಗುವುದು ಕೃಷಿಭೂಮಿಯ ನಂತರದ ಮೌಲ್ಯವರ್ಧನಾ ಪ್ರಕ್ರಿಯೆಗಳಿಂದ; (ii) ಕೃಷಿಭೂಮಿ ನಂತರದ ಬಹುತೇಕ ಚಟುವಟಿಕೆಗಳು ಅರೆ-ಪಟ್ಟಣಗಳು, ಅರೆ ನಗರ-ಪ್ರದೇಶಗಳಿಗೆ ಹತ್ತಿರ ಇರುವ ಗ್ರಾಮೀಣ ಪ್ರದೇಶಗಳಲ್ಲಿ ಕೇಂದ್ರಿತವಾಗಿವೆ. ಇವು ಒಂದು ರೀತಿಯಲ್ಲಿ ದ್ವಿತೀಯ ಶ್ರೇಣಿ (ಟೈಯರ್-2) ನಗರಗಳು. ಇಂತಹ ನಗರಗಳು ಕೃಷಿ ಚಟುವಟಿಕೆ ಗುಣಲಕ್ಷಣಗಳನ್ನು ಹೊಂದಿರುವ ಪ್ರದೇಶಗಳಿಗೆ ಹತ್ತಿರದಲ್ಲಿವೆ. ಈ ಪ್ರದೇಶಗಳಲ್ಲಿ ಹೆಚ್ಚಿನ ಜನ-ಸಾಂದ್ರತೆಯಿಂದ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಲಾಗದಷ್ಟು ಮಾನವ ಸಂಪರ್ಕ ಒತ್ತಡಗಳು ಕೋವಿಡ್-19 ಸಾಂಕ್ರಾಮಿಕವು ಹೆಚ್ಚು ವೇಗವಾಗಿ ಮತ್ತು ಸುಲಭವಾಗಿ ಹರಡಲು ಹೇಳಿ ಮಾಡಿಸಿದ ವಾತಾವರಣವನ್ನು ಸೃಷ್ಟಿಸಿತ್ತು. (iii) ಕೃಷಿಭೂಮಿ ನಂತರದ ಬಹುತೇಕ ಚಟುವಟಿಕೆಗಳಲ್ಲಿ ಸಣ್ಣ ಮತ್ತು

Scanned with OKEN Scanner

ಮಧ್ಯಮ ಗಾತ್ರದ ಉದ್ಯಮ (ಎಸ್‌ಎಂಇ)ಗಳು ಪ್ರಾಬಲ್ಯ ಹೊಂದಿವೆ. ಇವು ಸಹಜವಾಗಿಯೇ ದಟ್ಟವಾದ ಕೃಷಿ ಚಟುವಟಿಕೆಗಳಿಂದ ಸುತ್ತುವರಿದ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಉದಾಹರಣೆಗೆ ಕೃಷಿ ಉತ್ಪನ್ನಗಳು ಹೊಲಗಳಲ್ಲಿ ಹರಡಿಕೊಂಡಿವೆ. ಆದರೆ ಇವು ಹೋಲಿಕೆಯಲ್ಲಿ ಹೊರಗಿವೆ.

ತಳಹಂತದ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ (ಎಸ್‌ಎಂಇ)ಗಳ ಮೇಲೆ ಕೋವಿಡ್-19 ಪರಿಣಾಮಗಳು: ಕೋವಿಡ್-19 ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ (ಎಸ್‌ಎಂಇ) ಗಳ ಮೇಲೆ ಹೆಚ್ಚು ಗಂಭೀರವಾದ ಪರಿಣಾಮವನ್ನು ಬೀರಿದೆ. ಅದರಲ್ಲಿಯೂ ಚಿಲ್ಲರೆ ವ್ಯಾಪಾರ ಹಾಗೂ ಅದಕ್ಕಿಂತಲೂ ತಳಗಿನ ಹಂತಗಳ ಆಹಾರ ಸೇವೆಗಳು (ಬೀದಿ ಬದಿಯಲ್ಲಿ ತಳ್ಳುವ ಗಾಡಿಯ ಆಹಾರ ವ್ಯಾಪಾರ, ಹಣ್ಣು, ತರಕಾರಿ ವ್ಯಾಪಾರ, ಇತ್ಯಾದಿ). ಭಾರತದಲ್ಲಿ ಶೇಕಡ 92ಕ್ಕಿಂತಲೂ ಹೆಚ್ಚಿನ ಪ್ರಮಾಣದ ಆಹಾರ ಸೇವನೆ ಮತ್ತು ಖರೀದಿ ಈ ವಲಯದಲ್ಲಿ ನಡೆಯುತ್ತದೆ ಎನ್ನುವುದನ್ನು ನಾವು ಇಲ್ಲಿ ನೆನಪಿಸಿಕೊಳ್ಳಬೇಕು. ಹಾಗೆಯೇ ಶೇಕಡ 80 ರಿಂದ ಶೇಕಡ 90ರಷ್ಟು ಖರೀದಿಗಳು ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ (ಎಸ್‌ಎಂಇ)ಗಳಿಂದಲೇ ನಡೆಯುತ್ತಿದೆ. ಮಾರುಕಟ್ಟೆ ಮತ್ತು ನಿರ್ವಹಣೆಯ ದೃಷ್ಟಿಕೋನದಿಂದ, ತಳಹಂತದ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ (ಎಸ್‌ಎಂಇ)ಗಳು ಸಣ್ಣ ಜಾಗಗಳಲ್ಲಿ ಹೆಚ್ಚಿನ ಕೆಲಸಗಾರರನ್ನು ಹಾಗೂ ಕಾರ್ಮಿಕ ಸಾಂದ್ರತೆಯಲ್ಲಿ ತೀವ್ರತೆಯನ್ನು ಹೊಂದಿರುತ್ತವೆ. ಇಲ್ಲಿ ಸ್ಥಳ ಅವಕಾಶದ ಕೊರತೆಯಿಂದ ಉತ್ಪಾದನೆ, ಪೂರೈಕೆದಾರರು ಅಥವಾ ಗ್ರಾಹಕರಲ್ಲಿ ನೈರ್ಮಲ್ಯ ಅಭ್ಯಾಸಗಳ ಮೇಲೆ ಸ್ವಲ್ಪ ನಿಯಂತ್ರಣಗಳು ಕಡಿಮೆ ಇರುತ್ತವೆ. ಇದಕ್ಕೆ ವಿರುದ್ಧವಾಗಿ, ದೊಡ್ಡ ಪ್ರಮಾಣದ ವ್ಯಾವಹಾರಿಕ ಸಂಸ್ಥೆಗಳಲ್ಲಿ ಗ್ರಾಹಕರು ಮತ್ತು ನೌಕರರು ರೋಗಕ್ಕೆ ತುತ್ತಾಗುವ ಅಪಾಯವು ಕಡಿಮೆ ಇರುತ್ತದೆ. ಇಲ್ಲಿ ನೈರ್ಮಲ್ಯ ಅಭ್ಯಾಸಗಳನ್ನು ಜಾರಿಗೊಳಿಸಬಹುದು. ಸಾಮಾಜಿಕ ಅಂತರ ಕ್ರಮಗಳನ್ನು ಜಾರಿಗೊಳಿಸುವ ದಿಕ್ಕಿನಲ್ಲಿ ಗ್ರಾಹಕರಿಗೆ ಅರಿವನ್ನು ಮೂಡಿಸುವ ಸಾಧ್ಯತೆ ಇದೆ.

ಆದರೆ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ (ಎಸ್‌ಎಂಇ)ಗಳು, ಸಾರ್ವಜನಿಕ ಮಾರುಕಟ್ಟೆಗಳು ಮತ್ತು ಫಾಸ್ಟ್ ಫುಡ್ ಸರಪಳಿಗಳು ಹೊಂದಿರುವ ಲಗತ್ತ ವ್ಯವಹಾರಿಕ ಸಾಧನಗಳನ್ನು ಹೊಂದಿರುವುದಿಲ್ಲ. ಉತ್ಪನ್ನಗಳ ನಿರಂತರ ಪೂರೈಕೆದಾರರ ಮೇಲೆ ನೈರ್ಮಲ್ಯ ಮತ್ತು ಶುಚಿತ್ವ ಪ್ರಕ್ರಿಯೆಯನ್ನು ಜಾರಿಗೊಳಿಸುವ ಸಾಮರ್ಥ್ಯವು ಎರಡೂ ಕಡೆಗಳಲ್ಲಿ ಇರುವುದಿಲ್ಲ. ಬೃಹತ್ ವ್ಯಾವಹಾರಿಕ ಸಂಸ್ಥೆಗಳು ನೇರ ಮತ್ತು ಸಗಟು ಖರೀದಿ ವ್ಯವಸ್ಥೆಗಳನ್ನು ಬಳಸಿ (ಮಧ್ಯವರ್ತಿ ವ್ಯವಹಾರಗಳನ್ನು ತಪ್ಪಿಸಿ), ನಿರಂತರ ಪೂರೈಕೆಯ ಭರವಸೆಯಲ್ಲಿ ಒಪ್ಪಂದಗಳನ್ನು ಮಾಡಿಕೊಳ್ಳುತ್ತವೆ. ಈ ಒಪ್ಪಂದಗಳನ್ನು ವಿತರಣಾ ಕೇಂದ್ರಗಳು, ಗುತ್ತಿಗೆದಾರರು, ವಿಶೇಷ ಸಗಟು ವ್ಯಾಪಾರದಾರರು ಅಥವಾ ಏಜೆಂಟ್‌ಗಳ ಜೊತೆ ನೈರ್ಮಲ್ಯ ಶುಚಿತ್ವದ ಮಾನದಂಡಗಳ ಆಧಾರದಲ್ಲಿ ಮಾಡಿಕೊಳ್ಳುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ (ಎಸ್‌ಎಂಇ)ಗಳು ಮಂಡಿಗಳಿಗೆ ಹೋಗಬೇಕು. ಅಲ್ಲಿ ಅನೇಕ ನೂಕುನುಗ್ಗಲು ನಡುವೆ ಸ್ಪಾಟ್/ಆ ಸ್ಥಳದಲ್ಲಿಯೇ ವ್ಯಾಪಾರ ಮಾಡಬೇಕು.

Scanned with OKEN Scanner

ಕೋವಿಡ್–19 ಸೇರಿದಂತೆ, ಸಾಂಕ್ರಾಮಿಕದ ಅಘಾತಗಳ ನಂತರ ಅಂತಾರಾಷ್ಟ್ರೀಯವಾಗಿ ಆಹಾರ ಸುರಕ್ಷತೆ ಕ್ರಮಗಳೊಂದಿಗೆ ಆಹಾರ ಪೂರೈಕೆ ಸರಪಳಿ (ಎಫ್ಎಸ್ಸಿ)ಯ ಬಲವರ್ಧನೆ ಕುರಿತ ಚರ್ಚೆಗಳು ಹುಟ್ಟಿಕೊಂಡವು. ಉದಾಹರಣೆಗೆ ಈಜಿಪ್ಟ್‌ನಲ್ಲಿರುವ ಏವಿಯನ್ ಫ್ಲೂ ಯು (ಡಿಕ್ಸನ್ 2015) ಮತ್ತು ಬ್ರೆಜಿಲ್‌ನಲ್ಲಿ ಡೈರಿ ಆಹಾರ ಸುರಕ್ಷತೆ (ಫರೀನಾ ಮತ್ತು ಇತರರು 2005). ಬಂಡವಾಳ ಮತ್ತು ಉತ್ಪಾದನಾ ತಾಂತ್ರಿಕತೆಯಲ್ಲಿ ಕಡಿಮೆ ಸ್ಪರ್ಧಾತ್ಮಕ ಸಾಮರ್ಥ್ಯ ಇರುವ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ (ಎಸ್ಎಂಇ)ಗಳು ಆರಂಭಿಕ ಆದಾಯದ ಆಘಾತಗಳಿಂದ ಮಾರುಕಟ್ಟೆಯಿಂದ ಹೊರತಳ್ಳಲ್ಪಡುತ್ತವೆ. ಮಾರುಕಟ್ಟೆಗೆ ಮರು–ಪ್ರವೇಶಿಸಲು ಹೆಚ್ಚು ತಂತ್ರಜ್ಞಾನ ಮತ್ತು ಬಂಡವಾಳವನ್ನು ಬೇಡುವ, ಕಟ್ಟುನಿಟ್ಟಾದ ಆಹಾರ ಸುರಕ್ಷತಾ ಕ್ರಮಗಳನ್ನು ಅನುಸರಿಸಬೇಕಾಗಿದೆ. ಆಹಾರ ಭದ್ರತೆ ಕುರಿತ ಜೈವಿಕ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಇದರ ಭಾಗವಾಗಿ ಚಿಲ್ಲರೆ ವ್ಯಾಪಾರ ಸೇರಿದಂತೆ ಎಲ್ಲಾ ಕ್ಷೇತ್ರದಲ್ಲಿ ಇ–ಕಾಮರ್ಸ್ ವ್ಯವಹಾರದ ಹೆಚ್ಚಳವಾಗುತ್ತಿದೆ. ಹೊಟೆಲ್‌ಗಳು ಆಹಾರ ಮಾರಾಟ ಮತ್ತು ವಿತರಣೆಗಾಗಿ ಅತ್ಯಂತ ಆಧುನಿಕ ತಂತ್ರಜ್ಞಾನವನ್ನು ಬಳಸುವುದು ವೇಗವಾಗಿ ಹೆಚ್ಚಳವಾಗುತ್ತಿದೆ. ಭಾರತದ ಆಹಾರ ಪೂರೈಕೆ ಸರಪಳಿಯಲ್ಲಿ ಈ ಎಲ್ಲಾ ಲಕ್ಷಣಗಳು ಅತ್ಯಂತ ವೇಗವಾಗಿ ಬದಲಾವಣೆಯಾಗುತ್ತಿರುವುದನ್ನು ನಾವು ಕಾಣುತ್ತಿದೇವೆ (ಮುಖರ್ಜಿ ಮತ್ತು ಮಾಲ್ವಿಯಾ 2020). ಇದರ ವೇಗವನ್ನು ಲಾಕ್‌ಡೌನ್ ಪರಿಣಾಮವಾಗಿ ಒಂದು ವರ್ಷಕ್ಕೂ ಹೆಚ್ಚಿನ ಕಾಲ ಮನೆಯಲ್ಲಿಯೇ ಇರಬೇಕು ಎನ್ನುವ ನಿಯಮಗಳು ಜಾರಿಯಲ್ಲಿ ಇದ್ದುದರಿಂದ ಇ–ಕಾಮರ್ಸ್‌ನ ವ್ಯವಹಾರವು ಹಲವು ಪಟ್ಟು ವಿಸ್ತರಣೆಗೊಂಡಿತು.

ಜಾಗತಿಕವಾಗಿ ಇ–ಕಾಮರ್ಸ್ ಮಾರಾಟವು 2010ರಲ್ಲಿ ಅಮೇರಿಕಾ ಡಾಲರ್‌ನಲ್ಲಿ (US$) 572 ಬಿಲಿಯನ್‌ಯಿಂದ 2020 ರಲ್ಲಿ $ 4.2 ಟ್ರಿಲಿಯನ್‌ಗೆ ಏರಿದೆ. ಇಂದು, ಎರಡು ಬಿಲಿಯನ್ ಜನರು 20 ಮಿಲಿಯನ್ ಇ–ಕಾಮರ್ಸ್ ವೆಬ್‌ಸೈಟ್‌ಗಳಿಂದ ಸರಕು ಮತ್ತು ಸೇವೆಗಳನ್ನು ಖರೀದಿಸುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಭಾರತವು ಇಂಟರ್ನೆಟ್ ಮತ್ತು ಸ್ಮಾರ್ಟ್‌ಫೋನ್ ವಿಸ್ತರಣೆಯಲ್ಲಿ ಉಚ್ಛ್ರಾಯಸ್ಥಿತಿ ಅನುಭವಿಸುತ್ತಿದೆ. 'ಡಿಜಿಟಲ್ ಇಂಡಿಯಾ' ಕಾರ್ಯಕ್ರಮದ ಮೂಲಕ ಇಂಟರ್ನೆಟ್ ಸಂಪರ್ಕಗಳ ಸಂಖ್ಯೆಯು ಗಮನಾರ್ಹವಾಗಿ ಏರಿಕೆಯಾಗಿದೆ. ಒಟ್ಟು ಇಂಟರ್ನೆಟ್ ಸಂಪರ್ಕಗಳಲ್ಲಿ, ಶೇಕಡ 55ರಷ್ಟು ಸಂಪರ್ಕಗಳು ನಗರ ಪ್ರದೇಶಗಳಲ್ಲಿವೆ. ಅದರಲ್ಲಿ ಶೇಕಡ 97 ಸಂಪರ್ಕಗಳು ವೈರ್‌ಲೆಸ್ ಆಗಿರುತ್ತವೆ. 2026ರ ವೇಳೆಗೆ ಸ್ಮಾರ್ಟ್‌ಫೋನ್ ಬೇಸ್ ನೆಟ್‌ವರ್ಕ್‌ವು 1 ಬಿಲಿಯನ್ ತಲುಪುವ ನಿರೀಕ್ಷೆಯಿದೆ. ಇದು 2030ರ ವೇಳೆಗೆ ಡಿಜಿಟಲ್ ಆರ್ಥಿಕತೆಯು ಅಮೇರಿಕಾ ಡಾಲರ್‌ನಲ್ಲಿ (US$) 1 ಟ್ರಿಲಿಯನ್ ತಲುಪುವ ನಿರೀಕ್ಷೆಯಿದೆ. ಇಂಟರ್ನೆಟ್ ಬಳಕೆದಾರರ ಸಂಖ್ಯೆಯಲ್ಲಿನ ತ್ವರಿತ ಏರಿಕೆ ಮತ್ತು ಸ್ಮಾರ್ಟ್‌ಫೋನ್ ಬಳಕೆಯ ಹೆಚ್ಚಳವು ಭಾರತದ ಇ–ಕಾಮರ್ಸ್ ಕ್ಷೇತ್ರದ ಬೆಳವಣಿಗೆಗೆ ನೆರವಾಗುವುದರ ಜೊತೆಗೆ ಆರ್ಥಿಕ ಬೆಳವಣಿಗೆ ಕಾರಣವಾಗಿದೆ. ಇ–ಕಾಮರ್ಸ್ ವಲಯವು ಭಾರತದಲ್ಲಿ ವ್ಯಾಪಾರ ಮತ್ತು ವ್ಯವಹಾರ ಸ್ವರೂಪ ಮತ್ತು ವಿಧಾನವನ್ನು ಬದಲಾಯಿಸಿದೆ. ವ್ಯಾಪಾರದಿಂದ–ವ್ಯಾಪಾರಕ್ಕೆ (business-to-business [B2B]), ನೇರ–ಗ್ರಾಹಕರಿಗೆ

(direct-to-consumer [D2C]), ಗ್ರಾಹಕರಿಂದ ಗ್ರಾಹಕನಿಗೆ (consumer-to-consumer [C2C]) ಮತ್ತು ಗ್ರಾಹಕರಿಂದ ವ್ಯಾಪಾರಕ್ಕೆ (consumer-to-business [C2B]) ವಿವಿಧ ಸ್ವರೂಪದ ವಾಣಿಜ್ಯ ವ್ಯವಹಾರ ವಿಭಾಗಗಳು ತೆರೆದುಕೊಂಡಿವೆ. D2C ಮತ್ತು B2B ಯಂತಹ ಪ್ರಮುಖ ವಿಭಾಗಗಳು ಇತ್ತೀಚಿನ ವರ್ಷಗಳಲ್ಲಿ ಅಪಾರ ಬೆಳವಣಿಗೆಯನ್ನು ಕಂಡಿವೆ. ಭಾರತದ D2C ವ್ಯವಹಾರ ಮಾರುಕಟ್ಟೆಯು ಹಣಕಾಸು ವರ್ಷ 2027ರ ವೇಳೆಗೆ ಅಮೇರಿಕಾ ಡಾಲರ್‌ನಲ್ಲಿ (US$) 60 ಬಿಲಿಯನ್ ತಲುಪುವ ನಿರೀಕ್ಷೆಯಿದೆ. ಒಟ್ಟಾರೆ ಇ-ಕಾಮರ್ಸ್ ಮಾರುಕಟ್ಟೆಯು 2030ರ ವೇಳೆಗೆ ಅಮೇರಿಕಾ ಡಾಲರ್‌ನಲ್ಲಿ (US$) 350 ಬಿಲಿಯನ್ ತಲುಪುವ ನಿರೀಕ್ಷೆಯಿದೆ. ಈ ವಲಯವು 2022ರಲ್ಲಿ ಶೇಕಡ 21.5ರ ಬೆಳವಣಿಗೆಯನ್ನು ಸಾಧಿಸಿ, ಅಮೇರಿಕಾ ಡಾಲರ್‌ನಲ್ಲಿ (US$) ಸುಮಾರು 74.8 ಬಿಲಿಯನ್ ವ್ಯವಹಾರವನ್ನು ನಡೆಸಿರುತ್ತದೆ.

ಭಾರತದ ಆನ್‌ಲೈನ್ ದಿನಸಿ ಮಾರುಕಟ್ಟೆಯು ಹಣಕಾಸು ವರ್ಷ 2021 ರಲ್ಲಿ ಅಮೇರಿಕಾ ಡಾಲರ್‌ನಲ್ಲಿ (US$) 3.95 ಬಿಲಿಯನ್‌ಯಿಂದ 2027ರ ವೇಳೆಗೆ ಅಮೇರಿಕಾ ಡಾಲರ್‌ನಲ್ಲಿ (US$) 26.93 ಬಿಲಿಯನ್ ತಲುಪಬಹುದು ಎಂದು ಅಂದಾಜಿಸಲಾಗಿದೆ. ಸಂಯುಕ್ತ ವಾರ್ಷಿಕ ಬೆಳವಣಿಗೆ ದರ ಶೇಕಡ 33 ಪ್ರಮಾಣದಲ್ಲಿ ವಿಸ್ತರಣೆಯಾಗಿದೆ. ಭಾರತದ ಗ್ರಾಹಕ ಡಿಜಿಟಲ್ ಆರ್ಥಿಕತೆಯು 2030ರ ವೇಳೆಗೆ ಸಂಯುಕ್ತ ವಾರ್ಷಿಕ ಬೆಳವಣಿಗೆ ದರದಲ್ಲಿ (ಸಿಎಜಿಆರ್) ಶೇಕಡ 33ರ ದರವನ್ನು ಸಾಧಿಸಿ, ಅಮೇರಿಕಾ ಡಾಲರ್‌ನಲ್ಲಿ (US$) 1 ಟ್ರಿಲಿಯನ್ ಮಾರುಕಟ್ಟೆಯಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಇದು 2020ರಲ್ಲಿ ಅಮೇರಿಕಾ ಡಾಲರ್‌ನಲ್ಲಿ (US$) 537.5 ಬಿಲಿಯನ್ ಆಗಿದೆ. ಈ ಸಾಧನೆಗೆ ದೇಶದಲ್ಲಿ ತಂತ್ರಜ್ಞಾನ ಶಿಕ್ಷಣದಲ್ಲಿ ಉಂಟಾದ ಬೆಳವಣಿಗೆಗಳು ಮತ್ತು ಇ-ಕಾಮರ್ಸ್ ಸೇರಿದಂತೆ ಆನ್‌ಲೈನ್ ಸೇವೆಗಳ ಅಳವಡಿಕೆಯಿಂದ ಉಂಟಾಗಿರುತ್ತದೆ.

ಗ್ರಾಂಟ್ ಥಾರ್ನ್‌ಟನ್ ಪ್ರಕಾರ, ಭಾರತದಲ್ಲಿ ಇ-ಕಾಮರ್ಸ್ 2025ರ ವೇಳೆಗೆ ಅಮೇರಿಕಾ ಡಾಲರ್‌ನಲ್ಲಿ (US$) 188 ಬಿಲಿಯನ್ ಮೌಲ್ಯದ ವ್ಯವಹಾರ ಮಾಡುವ ನಿರೀಕ್ಷೆಯಿದೆ. 2020ರಲ್ಲಿ 50 ಬಿಲಿಯನ್ ವಹಿವಾಟು ನಡೆಸುವುದರೊಂದಿಗೆ, ಭಾರತವು ಇ-ಕಾಮರ್ಸ್‌ನಲ್ಲಿ ಎಂಟನೇ ಅತಿದೊಡ್ಡ ಮಾರುಕಟ್ಟೆಯಾಗಿದೆ. ಫ್ರಾನ್ಸ್ ಮತ್ತು ಕೆನಡಾಕ್ಕಿಂತ ಮುಂದಿದೆ. 2021ನೇ ಹಣಕಾಸು ವರ್ಷದಲ್ಲಿ ಚೀನಾ ಮತ್ತು ಯುಎಸ್ ನಂತರ, ಭಾರತವು 150 ಮಿಲಿಯನ್ ವ್ಯವಹಾರದ ಮೂಲಕ ಮೂರನೇ ಅತಿದೊಡ್ಡ ಆನ್‌ಲೈನ್ ಶಾಪರ್ ಬೇಸ್ ಅನ್ನು ಹೊಂದಿದೆ. ಇದು ಹಣಕಾಸು ವರ್ಷ 2026 ರ ವೇಳೆಗೆ 350 ಮಿಲಿಯನ್ ಆಗುವ ನಿರೀಕ್ಷೆಯಿದೆ.

ಭಾರತದಲ್ಲಿ ಮುಂದಿನ ಪೀಳಿಗೆ (next-gen) ಮೊಬೈಲ್ ಬ್ರಾಡ್‌ಬ್ಯಾಂಡ್ ತಂತ್ರಜ್ಞಾನದ ರೋಲ್‌ಔಟ್‌ಗೆ ಮುಂಚೆಯೇ ಭಾರತದ ಗ್ರಾಹಕರು 5G ಸ್ಮಾರ್ಟ್‌ಫೋನ್‌ಗಳನ್ನು ಹೆಚ್ಚಾಗಿ ಉಪಯೋಗಿಸಲು ಪ್ರಾರಂಭಿಸಿದ್ದಾರೆ. 2021ರಲ್ಲಿ 5G ಬಳಸುವ ಸ್ಮಾರ್ಟ್‌ಫೋನ್ ಪೂರೈಕೆಯ ಸಂಖ್ಯೆಯು 169 ಮಿಲಿಯನ್ ತಲುಪಿದೆ. ಇದು 2021 ರಿಂದ ವರ್ಷದಿಂದ ವರ್ಷಕ್ಕೆ ಶೇಕಡ 555 ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ. ಅದರಲ್ಲಿಯೂ ಕೋವಿಡ್-19ನ ನಡೆಗೆ ಜಾರಿಗೆತಂದ ಕಟ್ಟುನಿಟ್ಟಿನ

Scanned with OKEN Scanner

ಲಾಕ್‌ಡೌನ್ ನಂತರದ ಹೆಚ್ಚಿನ ಗ್ರಾಹಕರು ಬೇಡಿಕೆಯಿಂದಾಗಿ ಸ್ಮಾರ್ಟ್‌ಫೋನ್ ಬಳಸುವುದು ವೇಗವಾಗಿ ವಿಸ್ತಾರವಾಗುತ್ತಿದೆ. ಇಂಟರ್ನೆಟ್ ಮತ್ತು ಮೊಬೈಲ್ ಅಸೋಸಿಯೇಷನ್ ಆಫ್ ಇಂಡಿಯಾ (ಐಎಎಂಎಐ/IAMAI) ಇವರು ಪ್ರಕಟಿಸಿದ ವರದಿಯ ಪ್ರಕಾರ, ಭಾರತದಲ್ಲಿ ಇಂಟರ್ನೆಟ್ ಬಳಕೆದಾರ ಸಂಖ್ಯೆಯು 2020ರಲ್ಲಿ 622 ಮಿಲಿಯನ್ ನಿಂದ 2025ರ ವೇಳೆಗೆ 900 ಮಿಲಿಯನ್ ತಲುಪುವ ನಿರೀಕ್ಷೆಯಿದೆ. ಇದು 2025ರ ವೇಳೆಗೆ ಶೇಕಡ 45 ಸಂಯುಕ್ತ ವಾರ್ಷಿಕ ಬೆಳವಣಿಗೆ ದರದಲ್ಲಿ ಹೆಚ್ಚಾಗುತ್ತದೆ.

ಇದರ ಪರಿಣಾಮವನ್ನು ಅನುಭವಿಸಿದ ಬಹುತೇಕ ಗ್ರಾಹಕರು ಸಂಪೂರ್ಣವಾಗಿ ಹಿಂದಿನ ಖರೀದಿ ವ್ಯವಹಾರಗಳಿಗೆ ಹಿಂತಿರುಗದಿರುವುದು ಖಾತರಿಯಾಗುತ್ತಿದೆ. ಇ-ಕಾಮರ್ಸ್ ವ್ಯವಹಾರಗಳು, ಸೂಪರ್ ಮಾರ್ಕೆಟ್ ಮತ್ತು ತ್ವರಿತ ಆಹಾರ ಪೂರೈಕೆ ಸರಪಳಿಗಳು ಮತ್ತು ಆಹಾರ ವಿತರಣಾ ಸೇವೆಗಳಲ್ಲಿ ಗಮನಾರ್ಹವಾಗಿ ಹೆಚ್ಚಳವಾಗಿರುವುದನ್ನು ನಾವು ನೋಡಬಹುದು. ಇದು ಪ್ರಮುಖವಾಗಿ ಕಿರಾಣಿ ಅಂಗಡಿಗಳ ವ್ಯವಹಾರ ಮತ್ತು ಡಾಬಾಗಳ ವ್ಯವಹಾರಗಳಿಗೆ ಪರ್ಯಾಯವಾಗಿ ಶರವೇಗದಲ್ಲಿ ಬೆಳೆಯುತ್ತಿದೆ. ಇದರ ಪರಿಣಾಮವಾಗಿ ಸ್ಥಳೀಯ ವ್ಯಾಪಾರಸ್ಥರು ತಮ್ಮ ವ್ಯವಹಾರದಲ್ಲಿ ದೊಡ್ಡ ಪ್ರಮಾಣದ ನಷ್ಟವನ್ನು ಅನುಭವಿಸುತ್ತಿದ್ದಾರೆ. ಮತ್ತೊಂದು ಕಡೆ ಚಿಲ್ಲರೆ ವ್ಯಾಪಾರದಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಬೃಹತ್ ಪ್ರಮಾಣದಲ್ಲಿ ತೊಡಗಿಕೊಳ್ಳುತ್ತಿವೆ.

ಮಧ್ಯಮ ಹಂತದ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ (ಎಸ್‌ಎಂಇ)ಗಳ ಮೇಲೆ ಪರಿಣಾಮಗಳು: ಕೋವಿಡ್-19 ಸಗಟು ವ್ಯಾಪಾರ, ಸಾರಿಗೆ ಮತ್ತು ಪೂರೈಕೆ, ಸಂಸ್ಕರಣೆ ಕ್ಷೇತ್ರದಲ್ಲಿನ ಮಧ್ಯಮ ಹಂತದಲ್ಲಿ ಇರುವ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ(ಎಸ್‌ಎಂಇ)ಗಳ ಮೇಲೆ ಆಘಾತಕಾರಿ ಪರಿಣಾಮವನ್ನು ಬೀರಿದ್ದರೆ, ಕನಿಷ್ಠ ಪ್ರಮಾಣದ ಪರಿಣಾಮವನ್ನು ದೊಡ್ಡ ಪ್ರಮಾಣದ ಸಂಸ್ಕರಣಾ ಘಟಕಗಳ ಮೇಲೆ ಬೀರಿರುತ್ತದೆ.

ಸಗಟು ವ್ಯಾಪಾರ ಮತ್ತು ಸರಕು ಸಾಗಾಣಿಕೆ ಕುರಿತಂತೆ ಇರುವ ವಾದಗಳೇ ಸ್ವಲ್ಪ ಹೆಚ್ಚು ಕಡಿಮೆ ಚಿಲ್ಲರೆ ವ್ಯಾಪಾರಕ್ಕೂ ಸಂಬಂಧಿಸಿದ ಅಂಶಗಳನ್ನು ಹೋಲುತ್ತವೆ. ಮಂಡಿಗಳು ಹೆಚ್ಚು ಪ್ರಬಲವಾದ ನಿರ್ಬಂಧಗಳಿಗೆ ಒಳಪಟಿರುತ್ತವೆ. ನಿರ್ದಿಷ್ಟವಾಗಿ ಲಾರಿಗಳು ಅಥವಾ ಟ್ರಕ್‌ಗಳ ಮಾಲೀಕರು ಗ್ರಾಮೀಣ ಕ್ಷೇತ್ರದ ದೆಲ್ಲಾಳಿಗಳು ಸರಕು ಸಾರಿಗೆ ನಿಯಂತ್ರಣಗಳನ್ನು ಜಾರಿಗೊಳಿಸುತ್ತಾರೆ (ಬಿಸ್ವಾಸ್ 2020). ಈ ನಿರ್ಬಂಧಗಳ ಅನುಷ್ಠಾನವು ಬಹುಶಃ ಟೈಯರ್-1 ಮತ್ತು ಟೈಯರ್-2 ನಗರದ ಮಂಡಿಗಳಲ್ಲಿ ಮತ್ತು ಮುಖ್ಯ ಹೆದ್ದಾರಿ ಮಾರ್ಗಗಳಲ್ಲಿ ಹೆಚ್ಚು ಕಠಿಣವಾಗಿರುತ್ತದೆ. ಆದಾಗ್ಯೂ, ಬೃಹತ್ ಮಂಡಿಗಳಾದ ದೆಹಲಿಯ ಆಜಾದ್‌ಪುರ ಮಂಡಿ, ಮುಂಬೈನ ವಾಶಿ ಮಂಡಿ, ಬೆಂಗಳೂರಿನ ಯಶವಂತಪುರ ಮಂಡಿಗೆ ದಿನಕ್ಕೆ ಸಾವಿರಾರು ಟ್ರಕ್‌ಗಳು ಮತ್ತು ಇತರ ವಾಹನಗಳಲ್ಲಿ ಕೃಷಿ ಉತ್ಪನ್ನಗಳು ಹಾಗೂ ಆಹಾರ ಪದಾರ್ಥಗಳು ಸರಬರಾಜು ಆಗುತ್ತವೆ. ಬಂದುಹೋಗುತ್ತವೆ. ಲಾಕ್‌ಡೌನ್ ಪರಿಣಾಮವಾಗಿ ಇಂತಹ ಮಂಡಿಗಳ ಪೂರ್ಣ ನಿಲುಗಡೆ ಅಪ್ರಾಯೋಗಿಕ. ಗ್ರಾಮೀಣ ಪ್ರದೇಶದ ಹಳ್ಳಿಗಳಲ್ಲಿ ಮತ್ತು ಸಣ್ಣ ಗ್ರಾಮೀಣ ಪಟ್ಟಣಗಳಲ್ಲಿ ಇವುಗಳ ಚಲನೆಯ ನಿಯಂತ್ರಣ ಸಾಧ್ಯತೆ ಕೂಡ ಅತ್ಯಂತ ಕಡಿಮೆ.

Scanned with OKEN Scanner

ಆಹಾರ ಸಂಸ್ಕರಣಾ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ (ಎಸ್‌ಎಂಇ) ಗಳು, ಉದಾಹರಣೆಗೆ ಸಾವಿರಾರು ಹಿಟ್ಟಿನ ಗಿರಣಿಗಳು, ಕಿರಾಣಿ ವ್ಯಾಪಾರದವರು ಮತ್ತು ಡಾಬಾಗಳು ಎದುರಿಸಿದ ಸವಾಲುಗಳನ್ನು ಎದುರಿಸಬೇಕಾಯಿತು. ಈ ಕ್ಲಸ್ಟರ್‌ಗಳು ದಟ್ಟವಾದ ಜನಸಾಂದ್ರತೆಯನ್ನು ಹೊಂದಿರುತ್ತವೆ. ಈ ಉದ್ಯಮಗಳ ಉದ್ಯೋಗಿಗಳ ಆರೋಗ್ಯ ದುಸ್ಥಿತಿಯಲ್ಲಿರುತ್ತದೆ. ಇವರಿಗೆ ಸಾಮಾನ್ಯವಾಗಿ ಕಿರಾಣಿ ಅಂಗಡಿಗಳೆ ಮಾರುಕಟ್ಟೆಯಾಗಿರುತ್ತವೆ. ಕೃಷಿ ಉತ್ಪನ್ನಗಳ ಕೆಲವು ದವಸ ಧಾನ್ಯಗಳ ಪೂರೈಕೆಯ ಸರಪಳಿಯಲ್ಲಿ ಕೊರತೆ ಉಂಟಾದಾಗ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ (ಎಸ್‌ಎಂಇ)ಗಳು, ಅನಿಶ್ಚಿತತೆಯನ್ನು ಎದುರಿಸಬೇಕಾಗುತ್ತದೆ. ದೊಡ್ಡ ಸಂಸ್ಕರಣಾ ಘಟಕಗಳು ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಉತ್ತಮವಾದ ಸ್ಥಿತಿಯಲ್ಲಿ ಇರುವುದರಿಂದ, ಸ್ವಂತ ಸರಕು ಸಾಗಾಣಿಕೆ ಕಾರ್ಯಾಚರಣೆಗಳ ಮೂಲಕ ದವಸ-ಧಾನ್ಯಗಳನ್ನು ತಮ್ಮ ಶೀತಲ ಗೋದಾಮುಗಳಲ್ಲಿ ದಾಸ್ತಾನು ಮಾಡಿಕೊಂಡು ಉತ್ತಮವಾದ ಬೆಲೆ ಬಂದಾಗ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತವೆ. ಈ ಸಂಸ್ಥೆಗಳು ಪ್ಯಾಕೇಜ್ ಆಹಾರವನ್ನು ಉತ್ಪಾದಿಸುತ್ತವೆ. ಇದು ಹೆಚ್ಚು ನೈರ್ಮಲ್ಯ ಎಂದು ಗ್ರಾಹಕರು ಗ್ರಹಿಸುವ ಸಾಧ್ಯತೆ ಹೆಚ್ಚಾಗಿರುತ್ತವೆ.

ಕೃಷಿ ವಲಯದ ಮೇಲೆ ಪರಿಣಾಮಗಳು: ಕೋವಿಡ್-19 ಪರಿಣಾಮವು ನೇರವಾಗಿ ಕೃಷಿ ಭೂಮಿಯ ಮೇಲೆ ಆಗುವ ಸಾಧ್ಯತೆಗಳಿಗೆ ಮಿತಿಗಳಿವೆ. ಏಕೆಂದರೆ ಕೃಷಿ ಚಟುವಟಿಕೆ ನಡೆಯುವ ಭೂಮಿಯು ತುಲನಾತ್ಮಕವಾಗಿ ವಿಸ್ತಾರವಾಗಿವೆ. ಇಂತಹ ಸ್ಥಳಗಳಲ್ಲಿ ಕೋವಿಡ್-19 ಸಾಂಕ್ರಾಮಿಕದ ಹರಡುವಿಕೆಗೆ ಜನಸಾಂದ್ರತೆಯ ಪ್ರಮಾಣವು ನಗರಗಳಿಗಿಂತ ಕಡಿಮೆ ಪ್ರಮಾಣದಲ್ಲಿ ಇರುತ್ತದೆ. ಆದಾಗ್ಯೂ, ಮೇಲೆ ತಿಳಿಸಿದಂತೆ, ಭಾರತದ ಗ್ರಾಮೀಣ ಪ್ರದೇಶಗಳು ಇತರ ದೇಶಗಳಿಗೆ ಹೊಲಿಸಿದರೆ, ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ. ಕೋವಿಡ್-19 ನಿಂದ ಬಳಲುತ್ತಿರುವ ಹೆಚ್ಚಿನ ಗ್ರಾಮೀಣ ಪ್ರದೇಶಗಳು ವಾಸ್ತವವಾಗಿ ಅರೆ-ನಗರ ಪ್ರದೇಶಗಳ ಜನದಟ್ಟಣೆಯ ಪ್ರದೇಶವಾಗಿವೆ (ಪಿಂಗಲಿ ಮತ್ತು ಇತರರು 2019). ಆದ್ದರಿಂದ ಕೋವಿಡ್-19 ಹರಡುವಿಕೆಯೂ ಕೃಷಿ ಪ್ರದೇಶಗಳಲ್ಲಿ ಇನ್ನೂ ಹೆಚ್ಚಿನ ರೀತಿ ವಿಭಿನ್ನ ರೂಪದಲ್ಲಿ ಸಂಭವಿಸಬಹುದು. ಕೃಷಿಭೂಮಿಯ ಮೇಲೆ ಕೋವಿಡ್-19ರ ಪರೋಕ್ಷ ಪರಿಣಾಮವು ಹಲವಾರು ಮಾರ್ಗಗಳಲ್ಲಿ ಇನ್ನೂ ಗಣನೀಯವಾಗಿದೆ. ಅವುಗಳಲ್ಲಿ-

ಮೊದಲನೆಯದು, ಕೋವಿಡ್-19 ಸಾಂಕ್ರಾಮಿಕದ ಮುಖ್ಯ ಪರಿಣಾಮವು ರೈತರ ಮೇಲೆ ಉಂಟಾಗಿರುತ್ತದೆ. ಲಾಕ್‌ಡೌನ್ ಬಿಕ್ಕಟ್ಟಿನಿಂದ ಮಧ್ಯಮಹಂತದ ಮತ್ತು ಕೆಳಹಂತದ ಗ್ರಾಹಕರ ನೈಜ ಆದಾಯದಲ್ಲಿನ ಕುಸಿತವು ಆಹಾರ ಪೂರೈಕೆ ಸರಪಳಿ (ಎಫ್‌ಎಸ್‌ಸಿ) ಮತ್ತು ಕೃಷಿ ಉತ್ಪನ್ನಗಳ ಪರಿಣಾಮಕಾರಿ ಬೇಡಿಕೆಯನ್ನು ನಿರ್ಬಂಧಿಸಿತು. ಇದರ ಪರಿಣಾಮವು ಬೇಗನೆ ಹಾಳಾಗುವ ಕೃಷಿ ಉತ್ಪನ್ನಗಳ ಮೇಲೆ ಪ್ರಬಲವಾಗಿರುತ್ತದೆ. ಉದಾಹರಣೆಗೆ ಹಾಲು, ಹಣ್ಣುಗಳು ಮತ್ತು ತರಕಾರಿಗಳು, ಮೊಟ್ಟೆ, ಮೀನು ಮತ್ತು ಕೋಳಿ ಮಾಂಸ. ಇವುಗಳು ಹೆಚ್ಚು ನಿರ್ವಹಣಾ ವೆಚ್ಚವನ್ನು ಬೇಡುತ್ತವೆ. ಇವುಗಳ ಬೇಡಿಕೆ ಮತ್ತು ಆದಾಯ-ಸ್ಥಿತಿಸ್ಥಾಪಕವಾಗಿರುತ್ತದೆ.

ಎರಡನೆಯದು, ಮಧ್ಯಮ ಹಂತದಲ್ಲಿ ಕೃಷಿ ಇನ್‌ಪುಟ್ ಪೂರೈಕೆ ಸರಪಳಿಗಳಾದ ರಸಗೊಬ್ಬರ ಮತ್ತು ಬೀಜ, ಇತ್ಯಾದಿಗಳ ಮೇಲೆ ಉಂಟಾದ ಪರಿಣಾಮಗಳಿಂದ ರೈತರಿಗೆ ಗಂಭೀರವಾದ ತೊಂದರೆಗಳಾಗಿದೆ.

Scanned with OKEN Scanner

ಮೂರನೆಯದು, ಕೋವಿಡ್–19 ರೈತರಿಗೆ ಕಾರ್ಮಿಕರ ಪೂರೈಕೆಯ ಮೇಲೆ ಪರಿಣಾಮ ಬೀರಿದೆ. ಕೃಷಿ ಕಾರ್ಮಿಕರಲ್ಲಿ ಶೇಕಡ 70ಕ್ಕಿಂತಲೂ ಹೆಚ್ಚಿನವರು ತಮ್ಮ ಸ್ವಂತ ಕೃಷಿ ಭೂಮಿಯಲ್ಲಿ ದುಡಿಮೆ ಮಾಡಿದ್ದರೆ, ಶೇಕಡ 30 ರಷ್ಟು ಕೃಷಿಕರು ಮಾತ್ರ ಕೃಷಿ ಚಟುವಟಿಕೆಗೆ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತಾರೆ. ಕೃಷಿ ಕಾರ್ಮಿಕರ ಹರಿವು ಮತ್ತು ಚಲನೆ ಪಟ್ಟಣಗಳಿಂದ ಹಳ್ಳಿಗಳಿಗೆ ಅಥವಾ ಹಳ್ಳಿಗಳಲ್ಲಿ ನಿರ್ಬಂಧಗಳಿಂದಾಗಿ ತೊಡಕುಗಳು ಉಂಟಾದವು. ಕಾರ್ಮಿಕರು ಚಲನಶೀಲತೆಯಿಂದ ಹಳ್ಳಿಗಳು ನಿರ್ಬಂಧಿತವಾದವು. ಇದು ಒಂದು ಕಡೆ ದೀರ್ಘಾವಧಿಯಲ್ಲಿ ಕೃಷಿ ಕೂಲಿ ಹೆಚ್ಚಳದ ಪ್ರವೃತ್ತಿಗೆ ಒಂದಿಷ್ಟು ವೇಗವರ್ಧನೆಗೆ ಕಾರಣವಾಗಿದ್ದರೆ, ಮತ್ತೊಂದು ಕಡೆಯಲ್ಲಿ ಕೃಷಿ ಯಾಂತ್ರೀಕರಣದ ವೇಗವನ್ನು ಪ್ರೇರೇಪಿಸಿತು. ಇದು ಭೂರಹಿತರ ಮೇಲೆ ಗಂಭೀರ ಪರಿಣಾಮಕ್ಕೆ ಕಾರಣವಾಯಿತು.

ಕೋವಿಡ್–19 ಬಿಕ್ಕಟ್ಟುಗಳಿಂದ ನಗರ ಆರ್ಥಿಕ ಪರಿಸ್ಥಿತಿಗಳು ವೇಗವಾಗಿ ಹದಗೆಟ್ಟರೆ, ನಗರ ಕಾರ್ಮಿಕರು ತಮ್ಮ ತಮ್ಮ ಸ್ವಗ್ರಾಮಗಳಿಗೆ ಮತ್ತು ಕುಟುಂಬಗಳಿಗೆ ಮರಳಿ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡು ಕಾರ್ಮಿಕರ ಬೇಡಿಕೆಯ ಪರಿಸ್ಥಿತಿಯನ್ನು ಸುಧಾರಿಸಿದೆ. ಆದರೆ ಇದು ಕೃಷಿ ಕೂಲಿಯನ್ನು ಸ್ವಲ್ಪಮಟ್ಟಿಗೆ ಕುಗ್ಗಿಸಿದೆ. ಅದರಲ್ಲಿಯೂ ಭೂರಹಿತರ ಆದಾಯವನ್ನು ಗಣನೀಯ ಪ್ರಮಾಣದಲ್ಲಿ ಕುಗ್ಗಿಸಿರುವ ಪರಿಣಾಮಗಳು ಹೆಚ್ಚು ಸ್ಪಷ್ಟವಾಗಿ ಕಾಣಿಸುತ್ತವೆ. ಇದನ್ನು ಗ್ರಾಮೀಣ ಪ್ರದೇಶದಲ್ಲಿ ಸಾಂದರ್ಭಿಕ ಕೃಷಿಯೇತರ ಉದ್ಯೋಗಗಳಲ್ಲಿ ಶೇಕಡ 39ರಷ್ಟು ಮಹಿಳೆಯರು ತೊಡಗಿಕೊಂಡಿರುವುದು ಇನ್ನಷ್ಟು ಸ್ಪಷ್ಟಪಡಿಸುತ್ತದೆ (ಡಿಸೋಜಾ ಮತ್ತು ಇತರರು 2020).

ನಾಲ್ಕನೆಯದು, ಕೋವಿಡ್–19 ಸಾಂಕ್ರಾಮಿಕವು ಸೃಷ್ಟಿಸಿದ ಬಿಕ್ಕಟ್ಟುಗಳ ಪರಿಣಾಮವಾಗಿ ಕೃಷಿ ಮತ್ತು ಭೂರಹಿತ ಕುಟುಂಬಗಳಲ್ಲಿ ಗ್ರಾಮೀಣ ಕೃಷಿಯೇತರ ಉದ್ಯೋಗ (ಆರ್ಎನ್ಎಫ್ಇ) ಕಡಿಮೆಯಾಗಿರಬಹುದು. 2011–12ರ ರಾಷ್ಟ್ರೀಯ ಮಾದರಿ ಸಮೀಕ್ಷೆಯ ಅಂಕಿಅಂಶಗಳನ್ನು ಇಲ್ಲಿ ಉಲ್ಲೇಖಿಸುವುದಾದರೆ, ಭಾರತದ ಗ್ರಾಮೀಣ ಪ್ರದೇಶದ ಆದಾಯದಲ್ಲಿ ಶೇಕಡ 61ರಷ್ಟು ಆದಾಯವು ಗ್ರಾಮೀಣ ಕೃಷಿಯೇತರ ಉದ್ಯೋಗ (ಆರ್ಎನ್ಎಫ್ಇ) ಗಳಿಂದ ಬರುತ್ತದೆ. ಗ್ರಾಮೀಣ ಕೃಷಿಯೇತರ ಉದ್ಯೋಗ (ಆರ್ಎನ್ಎಫ್ಇ)ವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಆಹಾರ ಪೂರೈಕೆ ಸರಪಳಿಯ ಮೇಲೆ ಗಂಭೀರವಾಗಿ ಪ್ರಭಾವವನ್ನು ಉಂಟುಮಾಡುತ್ತದೆ. ಗ್ರಾಮೀಣ ಕೃಷಿಯೇತರ ಉದ್ಯೋಗ (ಆರ್ಎನ್ಎಫ್ಇ)ಗಳು ಆಹಾರ ಖರೀದಿಗೆ ಹಣ ಒದಗಿಸುವಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಜೊತೆಗೆ ಕೃಷಿ ಒಳಸುರಿಗಳ ಅಥವಾ ಇನ್ಪುಟ್ಗಳ ಖರೀದಿ ಮಹತ್ವದ ಬೆಂಬಲ ನೀಡುತ್ತದೆ. ಹೀಗಾಗಿ ಮಧ್ಯಮ ಹಂತದ ಕೃಷಿ ಉತ್ಪಾದಕತೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಇದು ಆಹಾರ ಭದ್ರತೆಯ ಮೇಲೆ ಬಹಳ ಗಂಭೀರವಾದ ಬಿಕ್ಕಟ್ಟುಗಳನ್ನು ಉಂಟುಮಾಡುತ್ತದೆ.

ಅನೌಪಚಾರಿಕ ವಲಯದ ಮೇಲೆ ಪರಿಣಾಮಗಳು: ಕೋವಿಡ್–19 ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಅನೌಪಚಾರಿಕ ಆರ್ಥಿಕ ವಲಯದಲ್ಲಿ ಇರುವ ಲಕ್ಷಾಂತರ ಉದ್ಯೋಗ ಮತ್ತು ಉದ್ಯೋಗಿಗಳ ಮೇಲೆ ಆಘಾತಕಾರಿ ಗಂಡಾಂತರಗಳನ್ನು

Scanned with OKEN Scanner



Scanned with OKEN Scanner

ಕೋವಿಡ್-19 ಅನ್ನು ಸಂಚಾರ ನಿರ್ಬಂಧಗಳಂತಹ ಆರೋಗ್ಯ ಕ್ರಮಗಳೊಂದಿಗೆ ಕಡಿಮೆ ಮಾಡುವುದು ಮತ್ತು ನೈರ್ಮಲ್ಯ ವ್ಯವಸ್ಥೆಯ ಮೇಲೆ ಹೆಚ್ಚಿನ ಹೂಡಿಕೆ ಮಾಡುವುದು; (ii) ಆಹಾರ ಪೂರೈಕೆಗಳ ಉತ್ಪಾದನೆಯನ್ನು ಬೆಂಬಲಿಸುವುದು ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಕ್ರಮಗಳ ಮುಖಾಂತರ ಉದ್ಯೋಗ ಚಲನೆಯ ನಿರ್ಬಂಧಗಳು ಮತ್ತು (iii) ಮೊದಲ ಎರಡು ಸಾಧ್ಯತೆಗಳನ್ನು ವೇಗವಾಗಿ ಅನುಷ್ಠಾನಕ್ಕೆ ತರಲು. ಅಷ್ಟಂತ ವೇಗವಾಗಿ ವಿಸ್ತರಿಸುವ ಸಾಮಾಜಿಕ ಮತ್ತು ರಾಜಕೀಯ ಒತ್ತಡಗಳು ಆಹಾರದ ಬೆಲೆ ಹೆಚ್ಚಳಕ್ಕೆ, ಉದ್ಯೋಗ ನಷ್ಟ ಮತ್ತು ರೋಗ ನಿಯಂತ್ರಣಕ್ಕೆ ಸರ್ಕಾರದ ಸಂಪನ್ಮೂಲಗಳು ವಿರಳವಾಗಿವೆ.

ಭಾರತ ಸರ್ಕಾರ ಮಿನಿ-ಮಿಸ್ ಪೂರೈಕೆ ಸರಪಳಿ ಅಡೆತಡೆಗಳಿಗೆ ಹೇಗೆ ಪ್ರತಿಕ್ರಿಯಿಸುತ್ತದೆ ಮತ್ತು ಲಾಕ್‌ಡೌನ್‌ಗಳು ಮತ್ತು ಇತರ ನಿರ್ಬಂಧಗಳಿಂದ ಹೊರಬರುತ್ತದೆ? ಸಾಮಾನ್ಯ ಕಾರ್ಯಕಂತ್ರವು ದ್ವಿಮುಖವಾಗಿ ಇರಬೇಕು: (i) ಸಾರ್ವಜನಿಕ ಆರೋಗ್ಯ ಕ್ರಮಗಳನ್ನು ದೃಢವಾಗಿ ಅನುಷ್ಠಾನಗೊಳಿಸಿ ರೋಗದ ಹರಡುವಿಕೆ ನಿಧಾನಗೊಳಿಸುವುದು; ಮತ್ತು (ii) ಆಹಾರ ಭದ್ರತೆಯ ಪರಿಣಾಮಗಳ ಕಡೆಗೆ ಹೆಚ್ಚಿನ ಗಮನ ನೀಡುವುದು. ನಿರ್ದಿಷ್ಟವಾಗಿ ಆದಾಯ ಮತ್ತು ಉದ್ಯೋಗದ ಮೇಲೆ ಗಂಭೀರ ಪರಿಣಾಮ ಬೀರುವ ಅಂಶಗಳ ಕಡೆಗೆ ಹೆಚ್ಚಿನ ಆದ್ಯತೆಗಳನ್ನು ನೀಡುವುದು. ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರವು ನೇರವಾಗಿ ಶೇಕಡ 4ರಷ್ಟು ಅನ್ನು ಮಾತ್ರ ಪೂರೈಸುತ್ತದೆ. ಒಂದು ಪಕ್ಷ ಭಾರತ ಸರ್ಕಾರವು ಈ ಪ್ರಮಾಣವನ್ನು ಪಡಿತರದ ಮೂಲಕ ಆಹಾರ ಮಾರಾಟ ಅಥವಾ ವರ್ಗಾವಣೆಯನ್ನು ದ್ವಿಗುಣಗೊಳಿಸಿದರೂ ಅದು ಶೇಕಡ 8ರಷ್ಟು ಮಾತ್ರ ಆಗಬಹುದು. ಇದು ಆಹಾರ ಮಾರುಕಟ್ಟೆಯಲ್ಲಿ ಕೇವಲ ಒಂದು ತಿಂಗಳು ಮಾತ್ರ ಕವರ್ ಮಾಡುವ ಸಾಮರ್ಥ್ಯವನ್ನು ಹೊಂದಿದೆ. ಇದು ಕೋವಿಡ್-19 ಹುಟ್ಟುಹಾಕಿದ ಸಂಭವನೀಯ ದರವು ಒಂದು ತಿಂಗಳಿಗೂ ಹೆಚ್ಚು ಕಾಲದ ಆಹಾರದ ಆರ್ಥಿಕತೆಯ ಮೇಲೆ ಅಡ್ಡಿ ಮಾಡಿರುತ್ತದೆ.

ಇಂತಹ ಸಾಮಾಜಿಕ ತುರ್ತು ಪರಿಸ್ಥಿತಿಯಲ್ಲಿ ಸರ್ಕಾರವು ತುರ್ತು ಆಹಾರ ಸರಬರಾಜು ವ್ಯವಸ್ಥೆಯನ್ನು ರೂಪಿಸುವ ಮೂಲಕ ಮಾರುಕಟ್ಟೆಗೆ ಪರ್ಯಾಯವನ್ನು ನೀಡುವುದಲ್ಲ. ಬದಲಿಗೆ ಆರೋಗ್ಯ ಕಾರ್ಯತಂತ್ರಗಳನ್ನು ಹೇಗೆ ಸಂಯೋಜಿಸುವುದು ಎಂಬುದರ ಮೇಲೆ ಕೇಂದ್ರೀಕರಿಸಿ, ಮಾರುಕಟ್ಟೆ ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡುವಂತೆ ಮಾಡಿದ್ದರೆ, ಆಹಾರ ಪೂರೈಕೆ ಸರಪಳಿ (ಎಫ್‌ಎಸ್‌ಸಿ) ಸರಿಪಡಿಸಲು ಸಹಾಯವಾಗುತ್ತದೆ. ಆಹಾರ ಪೂರೈಕೆ ಸರಪಳಿ (ಎಫ್‌ಎಸ್‌ಸಿ) ಸಮಸ್ಯೆಗಳನ್ನು ಪರಿಹರಿಸುವ ದಿಕ್ಕಿನಲ್ಲಿ ಮೂರು ಪೂರಕ ನೀತಿ ಮಾರ್ಗಗಳ ಅಗತ್ಯವಿದೆ. ಆಹಾರ ಪೂರೈಕೆ ಸರಪಳಿ (ಎಫ್‌ಎಸ್‌ಸಿ)ಯನ್ನು ಬಲಪಡಿಸುವ ಮಧ್ಯಮ ಹಾಗೂ ತಳಹಂತದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ (ಎಸ್‌ಎಂಇ)ಗಳಲ್ಲಿ ದುಡಿಯುವ ಜನರ/ ಕಾರ್ಮಿಕರಿಗೆ ಉದ್ಯೋಗದ ಬಿಕ್ಕಟ್ಟಿನ ಸಂದರ್ಭದಲ್ಲಿ ಆಹಾರ ಭದ್ರತೆ ಸೇರಿದಂತೆ ವಿಶಾಲ ಸಾಮಾಜಿಕ ಭದ್ರತಾ ಜಾಲಗಳನ್ನು ಜಾರಿಗೆ ತರಬೇಕಾಗಿದೆ. (i) ವಿಶೇಷವಾಗಿ ಮಧ್ಯಮ ಮತ್ತು ಕೆಳಹಂತದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ(ಎಸ್‌ಎಂಇ)ಗಳ ಬಾಡಿಗೆಗಳನ್ನು ಪೂರೈಸಲು,

ವಿದ್ಯುತ್, ನೀರು ಸೇರಿದಂತೆ ಹಲವು 'ಸಾಮಾಜಿಕ ಪ್ರಾಥಮಿಕ' ಅಗತ್ಯತೆಗಳು ಮತ್ತು ಕಾರ್ಮಿಕರ ಬಿಲ್ಲುಗಳಿಗೆ ಸರ್ಕಾರವು ತಕ್ಷಣದ ಬೆಂಬಲವನ್ನು ನೀಡುವುದು. (ii) ಅಗತ್ಯವಿರುವವರಿಗೆ, ಸರ್ಕಾರವು ನೇರ ಧನಸಹಾಯ ನೀಡಬಹುದು. ಬಾಡಿಗೆ ಕಟ್ಟಲು, ಆಹಾರ ಮತ್ತು ವಿದ್ಯುತ್, ಗ್ಯಾಸ್ ಅನ್ನು ಖರೀದಿಸಲು ಬೆಂಬಲ ನೀಡಬೇಕು. ಪರೋಕ್ಷವಾಗಿ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ (ಎಸ್ಎಂಇ)ಗಳಿಗೆ ಸಹಾಯ ಮಾಡಬೇಕು. ಏಕೆಂದರೆ ಇದು ಹಲವು ವಲಯಗಳ ಬೇಡಿಕೆಯನ್ನು ಹೆಚ್ಚಿಸುತ್ತದೆ. (iii) ಅನೌಪಚಾರಿಕ ವಲಯದಲ್ಲಿ ದುಡಿಯುತ್ತಿರುವ ದುಡಿಮೆಗಾರರಿಗೆ, ಸರ್ಕಾರವು ಕೆಲಸ-ನಗದು ಯೋಜನೆಗಳನ್ನು ಸಹ ರೂಪಿಸಬಹುದು. ತುರ್ತು ಪರಿಸ್ಥಿತಿಯಲ್ಲಿ ಕಾರ್ಮಿಕರಿಗೆ ಆಹಾರ ಪಡಿತರವನ್ನು ವಿತರಿಸಬಹುದು. ಶುಚಿತ್ವ ಮತ್ತು ನೈರ್ಮಲ್ಯವನ್ನು ಹೆಚ್ಚಿಸುವುದು. ಸ್ವಂತ ಉದ್ಯಮಗಳನ್ನು ನಡೆಸುತ್ತಿರುವವರಿಗೆ ಬಿಕ್ಕಟ್ಟುಗಳನ್ನು ನಿರ್ವಹಿಸಲು ಎಲ್ಲಾ ರೀತಿ ಸಹಾಯ ಮಾಡಿದ್ದರೆ ಬಿಕ್ಕಟ್ಟುಗಳನ್ನು ಹಾದು ಹೋಗಬಹುದು.

ಅಂತಿಮವಾಗಿ, ಸರ್ಕಾರವು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಅಗತ್ಯವಿದೆ. ಈ ವಲಯದ ಮೇಲೆ ದೀರ್ಘಾವಧಿಯ ಹೂಡಿಕೆಗಳನ್ನು ಮಾಡಿ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ (ಎಸ್ಎಂಇ)ಗಳಲ್ಲಿ ನೈರ್ಮಲ್ಯ ಅಭ್ಯಾಸಗಳನ್ನು ಬದಲಾಯಿಸುವ ಕಾರ್ಯತಂತ್ರಗಳನ್ನು ರೂಪಿಸಬೇಕು. ಕೃಷಿ ಮಂಡಿಗಳಿಗೆ ಉತ್ತಮ ನಿವೇಶನ ವಿನ್ಯಾಸ ಮಾಡಿ ಒದಗಿಸಬೇಕು. ವಿಕೇಂದ್ರೀಕೃತ ಮಾದರಿಯಲ್ಲಿ ಸಣ್ಣ ಸಣ್ಣ ವ್ಯಾಪಾರ ಸ್ಥಳಗಳನ್ನು ಅಭಿವೃದ್ಧಿಪಡಿಸುವ ಮೂಲಕ ಸಾರ್ವಜನಿಕ ಆರೋಗ್ಯವನ್ನು ಕಾಪಾಡುವ ಮಾರ್ಗಗಳನ್ನು ಸ್ಪರ್ಧಾತ್ಮಕವಾಗಿ ಬೆಳಸಬೇಕು.

ಆಕರಗಳು:

ಅಜೀಜ್, ಆರ್ (2019), ಇಂಡಿಯಾಸ್ ಪೆರಿ-ಅರ್ಬನ್ ರೀಜನ್ಸ್: ಫಾರ್ ಪಾಲಿಸಿ ಅಂಡ್, 'ದ ನೀಡ್ ಚಾಲೆಂಜಸ್ರ್ ಆಫ್ ಗವರ್ನೆನ್ಸ್', ಒಆರ್ಎಫ್/ ORF ಇಶ್ಯೂ ಬ್ರೀಫ್ ನಂಬರ್-285, ಮಾರ್ಚ್ 2019, ಅಬ್ಸರ್ವರ್ ರಿಸರ್ಚ್ ಫೌಂಡೇಶನ್.

ಇಂಡಿಯಾ- ನ್ಯಾಷನಲ್ ಸ್ಯಾಂಪಲ್ ಸರ್ವೆ 2011-2012 (68th ರೌಂಡ್)- ಶೆಡ್ಯೂಲ್ 1.0(ಟೈಪ್ 1) - ಕನ್ಸೂಮರ್ ಎಕ್ಸ್ಪೆಂಡಿಚರ್.

ಐಎಫ್ಎಡಿ/**IFAD (2019),** ಕ್ರಿಯೇಟಿಂಗ್ ಅಪರ್ಚುನಿಟಿ ಫಾರ್ ರೂರಲ್ ಯೂತ್. ರೂರಲ್ ಡೆವಲಪ್ಮೆಂಟ್ ರಿಪೋರ್ಟ್. ರೋಮ್: ಐಎಫ್ಎಡಿ/ IFAD.

ಒಂಡಾ, ಕೆ, ಪಿ ಜಿನ್ಹಾ, ಎ ಇ ಗೌಘನ್, ಎಫ್ ಆರ್ ಟ್ಟೀವನ್ಸ್ ಮತ್ತು ಎನ್ ಕಾಜಾ (2019): 'ಮಿಸ್ಸಿಂಗ್ ಮಿಲಿಯನ್ಸ್: ಅಂಡರ್ಕೌಂಟಿಂಗ್ ಅರ್ಬನೈಸೇಷನ್ ಇನ್ ಇಂಡಿಯಾ', ಪಾಪುಲೇಷನ್ ಅಂಡ್ ಎನ್ವಿರಾನ್ಮೆಂಟ್, ವಾಲ್ಯೂಮ್ 41.

ಕುಮಾರ್, ಎಸ್, ಎಲ್ ಲಿಮ್-ಕಾಮಾಚೊ, ಚೆ ಆರ್ ಬೊಗಾರ್ಡ್, ಆರ್ ಪದ್ಮಜಾ, ಬಿ ಜಿ ರಿಡೌಟ್, ಇ ಖಾನ್, ಎಸ್ ಪ್ರಮಾಣಿಕ್ ಅಂಡ್ ಎಸ್ ನೆಡುಮಾರನ್ (2019), 'ಮ್ಯಾಪಿಂಗ್ ರೂರಲ್ ಫುಡ್ ಎನ್ವಿರಾನ್ಮೆಂಟ್

Scanned with OKEN Scanner

ಅಂಡ್ ಇವ್ಯಾಲ್ಯೂವೇಟಂಗ್ ನ್ಯೂಟ್ರಿಷನ್ ಓರಿಯೆಂಟೆಡ್ ವ್ಯಾಲ್ಯೂ ಚೈನ್ ಇಂಟರ್‌ನ್‌ಶನ್', ಪೇಪರ್ ಪ್ರೆಸೆಂಟೇಶನ್ ಅಟ್ ದಿ 27th ಕಾನ್ಫರೆನ್ಸ್ ಆಫ್ ಅಗ್ರಿಕಲ್ಚರಲ್ ಎಕನಾಮಿಕ್ಸ್ ರಿಸರ್ಚ್ ಅಸೋಸಿಯೇಷನ್ (ಎಇಆರ್‌ಎ/AERA), ಲುಧಿಯಾನ, 17–19 ಡಿಸೆಂಬರ್.

ಗವರ್ನಮೆಂಟ್ ಆಫ್ ಇಂಡಿಯಾ, ಮಿನಿಸ್ಟ್ರಿ ಆಫ್ ಸ್ಟಾಟಿಸ್ಟಿಕ್ಸ್ ಅಂಡ್ ಪ್ರೋಗ್ರಾಮ್ ಇಂಪ್ಲಿಮೆಂಟೇಶನ ನ್ಯಾಷನಲ್ ಸ್ಯಾಂಪಲ್ ಸರ್ವೆ ಆಫೀಸ್(2013). 'ಕೀ ಇಂಡಿಕೇಟರ್ ಆಫ್ ಹೌಸ್‌ಹೋಲ್ಡ್ ಕನ್ಸೂಮರ್ ಎಕ್ಸ್‌ಪೆಂಡಿಚರ್ ಇನ್ ಇಂಡಿಯಾ', ಎನ್‌ಎಸ್‌ಎಸ್‌ಓ/NSSO, 68th ರೌಂಡ್, 2011–12, ನ್ಯೂ ಡೆಲ್ಲಿ, ಇಂಡಿಯಾ.

ಚಂದ್ರಶೇಖರ್, ಎಸ್ (2011), 'ವರ್ಕರ್ಸ್ ಕಂಪ್ಯೂಟಿಂಗ್ ಬಿಟ್ವೀನ್ ರೂರಲ್ ಅಂಡ್ ಅರ್ಬನ್: ಎಸ್ಟಿಮೇಟ್ ಫ್ರಮ್ ಎನ್‌ಎಸ್‌ಎಸ್‌ಒ ಡೇಟಾ, ಎಕನಾಮಿಕ್ & ಪೊಲಿಟಿಕಲ್ ವೀಕ್ಲಿ, ವಾಲ್ಯೂಮ್–46, ನಂಬರ್–46.

ಚಂದ್ರಶೇಖರ್, ಎಸ್ ಅಂಡ್ ಎನ್ ಮೆಹ್ರೋಟಾ (2016), 'ಡಬ್ಲಿಂಗ್ ಫಾರ್ಮರ್ಸ್ ಇನ್ಕಮ್ ಬೈ 2022', ಎಕನಾಮಿಕ್ & ಪೊಲಿಟಿಕಲ್ ವೀಕ್ಲಿ, ವಾಲ್ಯೂಮ್–51, ನಂಬರ್–18.

ಚಾಂದ್, ಆರ್, ಎಸ್ ಕೆ ಶ್ರೀವಾಸ್ತವ ಅಂಡ್ ಜೆ ಸಿಂಗ್ (2017), 'ಚೇಂಜಸ್ ಇನ್ ರೂರಲ್ ಎಕಾನಮಿ ಆಫ್ ಇಂಡಿಯಾ, 1971 ರಿಂದ 2012: ಲೆಸನ್ಸ್ ಫಾರ್ ಜಾಬ್–ಲೆಡ್ ಗ್ರೋಥ್', ಎಕನಾಮಿಕ್ & ಪೊಲಿಟಿಕಲ್ ವೀಕ್ಲಿ, ವಾಲ್ಯೂಮ್–52, ನಂಬರ್–52.

ಜೈನ್, ಎಸ್ ಅಂಡ್ ಯು ಎಸ್ ಮಿಶ್ರಾ (2018), ಡಿಮಾಂಡ್ ಫಾರ್ ಡೊಮೆಸ್ಟಿಕ್ ವರ್ಕರ್ಸ್ ಇನ್ ಇಂಡಿಯಾ: ಇಟ್ಸ್ ಕ್ಯಾರೆಕ್ಟರ್‌ಸ್ಟಿಕ್ಸ್ ಅಂಡ್ ಕೋ–ರಿಲೇಟ್', ದಿ ಇಂಡಿಯನ್ ಜರ್ನಲ್ ಆಫ್ ಲೇಬರ್ ಎಕನಾಮಿಕ್ಸ್, ವಾಲ್ಯೂಮ್–61.

ಡಿಕ್ಷನ್, ಎಂ ಡಬ್ಲ್ಯೂ (2015), 'ಬಯೋಸೆಕ್ಯೂರಿಟಿ ಅಂಡ್ ಮಲ್ಟಿಪ್ಲಿಕೇಶನ್ ಆಫ್ ಕ್ರೈಸಸ್ ಇನ್ ದಿ ಈಜಿಪ್ಸಿಯನ್ ಅಗ್ರೋ ಫುಡ್ ಇಂಡಸ್ಟ್ರಿ', ಜಿಯೋಪೋರಮ್, ವಾಲ್ಯೂಮ್–61.

ಡಿಸೋಜಾ, ಎ, ಮಿಶ್ರಾ ಎ ಕೆ ಮತ್ತು ಹಿರ್ಪ್ ಎಸ್ (2020), 'ಎನ್‌ಹ್ಯಾನ್ಸಿಂಗ್ ಫುಡ್ ಸೆಕ್ಯೂರಿಟಿ ಥ್ರೂ ಡಯಟ್ ಕ್ವಾಲಿಟಿ: ದಿ ರೋಲ್ ಆಫ್ ನಾನ್–ಫಾರ್ಮ್ ವರ್ಕ್ ಇನ್ ರೂರಲ್ ಇಂಡಿಯಾ', ಅಗ್ರಿಕಲ್ಚರಲ್ ಎಕಾನಾಮಿಕ್ಸ್, ವಾಲ್ಯೂಮ್–51, ನಂಬರ್–1.

ತಿವಾರಿ ಆರ್, (2020): "ಇಂಡಿಯಾ ಕ್ಲಾಕ್ಸ್ ರೆಕಾರ್ಡ್ ಫುಡ್‌ಗ್ರೇನ್ ಪ್ರೊಡಕ್ಷನ್ ಇನ್ 2018–19," ಎಕನಾಮಿಕ್ ಟೈಮ್ಸ್, https://economictimes.indiatimes.com/news/economy/agriculture/final-production-estimate2018-19-india-clocks-record-foodgrainproduction/articleshow/74102786.cms.

ತ್ರಿಪಾಠಿ ಎಸ್, (2013): "ಡು ಲಾರ್ಜ್ ಅಗ್ಲೊಮರೇಷನ್ಸ್ ಲೀಡ್ ಟು ಎಕನಾಮಿಕ್ ಗ್ರೋಥ್? ಎವಿಡೆನ್ಸ್ ಫ್ರಂ ಅರ್ಬನ್ ಇಂಡಿಯಾ," ರಿವ್ಯೂ ಆಫ್ ಅರ್ಬನ್ ಅಂಡ್ ರೀಜನಲ್ ಡೆವಲಪ್‌ಮೆಂಟ್ ಸ್ಟಡೀಸ್, ವ್ಯಾಲ್ಯೂಂ 25, ನಂ 2.

Scanned with OKEN Scanner

ದಾಸ್‌ಗುಪ್ತಾ, ಎಸ್., ಟಿ ರಿಯರ್ಡನ್, ಬಿ ಮಿಂಟೆನ್ ಅಂಡ್ ಎಸ್ ಸಿಂಗ್ (2010): 'ದಿ ಟ್ರಾನ್ಸ್‌ಫಾರ್ಮಿಂಗ್ ಪೊಟಾಟೊ ವ್ಯಾಲ್ಯೂ ಚೈನ್ ಇನ್ ಇಂಡಿಯಾ: ಪೊಟಾಟೋ ಪಾತ್‌ವೇಯ್ಸ್ ಫ್ರಮ್ ಎ ಕಮರ್ಷಿಯಲ್ ಅಗ್ರಿಕಲ್ಚರಲ್ ಜೋನ್ (ಆಗ್ರಾ) ಟು ಡೆಲ್ಲಿ', ಐಎಫ್‌ಪಿಆರ್‌ಐ-ಎಡಿಬಿ ರಿಪೋರ್ಟ್.

ನಬಾರ್ಡ್ (2018), ಎನ್‌ಎಎಫ್‌ಐಎಸ್/NAFIS: ಆಲ್ ಇಂಡಿಯಾ ರೂರಲ್ ಫೈನಾನ್ಷಿಯಲ್ ಇನ್‌ಕ್ಲೂಷನ್ ಸರ್ವೆ 2016-17, ಮುಂಬೈ: ನ್ಯಾಷನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರಲ್ ಅಂಡ್ ರೂರಲ್ ಡೆವಲಪ್‌ಮೆಂಟ್.

ನೂತಲಪತಿ, ಪಿ ಎಸ್ ಆರ್, ಆರ್ ಸೂತ್ರಧರ್ ಅಂಡ್ ಟಿ ರಿಯರ್ಡನ್ (2018). 'ಇನ್‌ಕ್ಲೂಸಿವ್‌ನೆಸ್, ಟೆಕ್ನಾಲಜಿ ಮತ್ತು ಪ್ರಾಫಿಟಬಿಲಿಟಿ ಇನ್ ಸೂಪರ್‌ಮಾರ್ಕೆಟ್: SUR ಮಾಡೆಲ್ ರಿಸಲ್ಟ್ಸ ಫ್ರಮ್ ಸೆಮಿ-ಎರಿಡ್ ರೀಜನ್', ಇಂಡಿಯನ್ ಜರ್ನಲ್ ಆಫ್ ಅಗ್ರಿಕಲ್ಚರಲ್ ಎಕನಾಮಿಕ್ಸ್, ವಾಲ್ಯೂಮ್ 43, ನಂಬರ್ 3, ಜುಲೈ-ಸೆಪ್ಟೆಂಬರ್.

ಪಿಂಗಲಿ, ಪಿ, ಎ ಅಯ್ಯರ್, ಎಂ ಅಬ್ರಹಾಂ ಅಂಡ್ ಎ ರೆಹಮಾನ್ (2019), ಟ್ರಾನ್ಸ್‌ಫಾರ್ಮಿಂಗ್ ಫುಡ್ ಸಿಸ್ಟಮ್ ರೈಸಿಂಗ್ ಇಂಡಿಯಾ ಪಾಲ್‌ಗ್ರೇವ್ ಸ್ಟಡೀಸ್ ಇನ್ ಅಗ್ರಿಕಲ್ಚರಲ್ ಎಕನಾಮಿಕ್ಸ್ ಅಂಡ್ ಪಾಲಿಸಿ, ಪಾಲ್‌ಗ್ರೇವ್: ಮ್ಯಾಕ್‌ಮಿಲನ್.

ಫರೀನಾ, ಎಲಿಜಬೆತ್ ಎಮ್ ಎಮ್ ಕ್ಯೂ ಜಿ ಇ ಗುಟ್ಮನ್, ಪಿ ಜೆ ಲಾವರೆಲ್ಲೊ, ಆರ್ ನ್ಯೂನ್ಸ್ ಮತ್ತು ಟಿ ರಿಯರ್ಡನ್ (2005), 'ಪ್ರೈವೇಟ್ ಅಂಡ್ ಪಬ್ಲಿಕ್ ಮಿಲ್ಕ್ ಸ್ಟಾಂಡರ್ಡ್ ಇನ್ ಅರ್ಜೆಂಟೈನಾ ಅಂಡ್ ಬ್ರೆಜಿಲ್', ಫುಡ್ ಪಾಲಿಸಿ, ವಾಲ್ಯೂಮ್-30, ನಂಬರ್-3, ಜೂನ್.

ಬಿಸ್ವಾಸ್, ಎಸ್ (2020), 'ಏಲ್ ಕೊರೊನಾ ವೈರಸ್ ಲಾಕ್‌ಡೌನ್ ಕಾಸ್ ಫುಡ್ ಶಾರ್ಟೇಜ್ ಇನ್ ಇಂಡಿಯಾ', ಬಿಬಿಸಿ ನ್ಯೂಸ್, 7 ಏಪ್ರಿಲ್, https://www.bbc.com/news/worldasia-india-52176564.

ಬೆಲ್ಲಮರೆ, ಎಂ ಎಫ್ (2015), 'ರಿಸ್ಕಿಂಗ್ ಫುಡ್ ಪ್ರೈಸಸ್, ಫುಡ್ ಪ್ಲೈಸ್ ವಲ್ನರೆಬಿಲಿಟಿ ಅಂಡ್ ಸೋಶಿಯಲ್ ಅನ್‌ರೆಸ್ಟ್', ಅಮೇರಿಕನ್ ಜರ್ನಲ್ ಆಫ್ ಅಗ್ರಿಕಲ್ಚರಲ್ ಎಕನಾಮಿಕ್ಸ್, ವಾಲ್ಯೂಮ್-97, ನಂಬರ್-1, ಜನವರಿ.

ಭಲ್ಲಾ, ಎಸ್. (1997), 'ದಿ ರೈಸ್ ಅಂಡ್ ಫಾಲ್ ಆಫ್ ವರ್ಕ್‌ಫೋರ್ಸ್ ಡೈವರ್ಸಿಫ್ಲೀಕೇಶನ್ ಪ್ರೊಸೆಸಸ್ ಇನ್ ರೂರಲ್ ಇಂಡಿಯಾ: ಎ ರೀಜನಲ್ ಅಂಡ್ ಸೆಕ್ಟೋರಿಯಲ್ ಅನಾಲಿಸಿಸ್', ಸೆಂಟರ್ ಫಾರ್ ಎಕನಾಮಿಕ್ ಸ್ಟಡೀಸ್ ಅಂಡ್ ಪ್ಲಾನಿಂಗ್, ನ್ಯೂ ಡೆಲ್ಲಿ: ಡಿಎಸ್‌ಎ/DSA ವರ್ಕಿಂಗ್ ಪೇಪರ್, ಜವಾಹರಲಾಲ್ ನೆಹರು ಯುನಿವರ್ಸಿಟಿ.

ಮಾನ್ ಜಿ., (2018), 'ಡಿಮ್ಯಾಂಡ್ ಫಾರ್ ಗ್ರಾಂಟ್ಸ್ 2018-19 ಅನಾಲಿಸಿಸ್: ಫುಡ್ ಅಂಡ್ ಪಬ್ಲಿಕ್ ಡಿಸ್ಟ್ರಿಬ್ಯೂಷನ್,' ಪಿಆರ್‌ಎಸ್/PRS ಲೆಜಿಸ್ಲೇಟಿವ್ ರಿಸರ್ಚ್, ಇನ್‌ಸ್ಟಿಟ್ಯೂಟ್ ಫಾರ್ ಪಾಲಿಸಿ ರಿಸರ್ಚ್ ಸ್ಟಡೀಸ್, ನ್ಯೂ ಡೆಲ್ಲಿ.

ಮಿಂಟೆನ್, ಬಿ, ಟಿ ರಿಯರ್ಡನ್, ಕೆ ಎಂ ಸಿಂಗ್ ಅಂಡ್ ಆರ್ ಸೂತ್ರಧರ್ (2014), 'ದಿ ನ್ಯೂ ಅಂಡ್ ಚೇಂಜಿಂಗ್ ರೋಲ್ಸ್ ಆಫ್ ಕೋಲ್ಡ್ ಸ್ಟೋರೇಜ್ ಇನ್ ದ ಪೊಟಾಟೋ ಸಪ್ಲೈ ಚೈನ್ ಇನ್ ಬಿಹಾರ್', ಎಕನಾಮಿಕ್ & ಪೊಲಿಟಿಕಲ್ ವೀಕ್ಲಿ, ವಾಲ್ಯೂಮ್-49, ನಂಬರ್-52.

ಮುಖರ್ಜಿ, ಡಟ್ಟೂ ಅಂಡ್ ಎಸ್ ಮಾಲ್ಯಾದ್ರಿ (2020), 'ಕಂಪಲ್ಸರಿ ಅಕ್ವಿಸಿಷನ್ ಆಫ್ ಟೆಲಿವರ್ ಗ್ಲಾಸರಿ ಕನ್ಸೂಮರ್ ಡೋರ್ಸ್', ಎಕನಾಮಿಕ್ ಟೈಮ್ಸ್, 14 ಏಪ್ರಿಲ್.

ರಿಯರ್ಡನ್, ಟಿ ಅಂಡ್ ಬಿ ಮಿಂಟೆನ್ (2011), 'ಸರ್‌ಪ್ರೈಸ್ಡ್ ಬೈ ಸೂಪರ್‌ಮಾರ್ಕೆಟ್: ರಿವ್ಯೂಷನ್ ಆಫ್ ಮಾಡರ್ನ್ ಫುಡ್ ರಿಟೇಲ್ ಇನ್ ಇಂಡಿಯಾ', ಜರ್ನಲ್ ಆಫ್ ಅಗ್ರಿಬಿಸಿನೆಸ್ ಇನ್ ಡೆವಲಪಿಂಗ್ ಮತ್ತು ಎಮರ್ಜಿಂಗ್ ಎಕಾನಮಿಸ್, ವಾಲ್ಯೂಮ್-1, ನಂಬರ್-2, ಅಕ್ಟೋಬರ್.

ರಿಯರ್ಡನ್, ಟಿ, ಕೆ ಝುಡ್ ಟೀನ್, ಬಿ ಮಿಂಟೆನ್ ಮತ್ತು ಎಲ್ ಅಡ್ರಿಯಾನೊ (2012 ಎ), ದಿ ಕ್ವಿಸ್ ರೆವಲ್ಯೂಷನ್ ಇನ್ ಸ್ಟೇಪಲ್ ಫುಡ್ ವ್ಯಾಲ್ಯೂ ಚೈನ್ ಇನ್ ಏಷ್ಯಾ: ಎಂಬರ್ ದಿ ಡ್ರ್ಯಾಗನ್, ದಿ ಎಲಿಫೆಂಟ್ ಅಂಡ್ ದಿ ಟೈಗರ್, ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ಅಂಡ್ ಐಎಫ್‌ಪಿಆರ್‌ಐ/IFPRI, ಡಿಸೆಂಬರ್.

ರಿಯರ್ಡನ್, ಟಿ, ಸಿ ಪಿ ಟಿಮ್ಮರ್ ಅಂಡ್ ಬಿ ಮಿಂಟೆನ್ (2012), 'ದ ಸೂಪರ್ ಮಾರ್ಕೆಟ್ ರೆವಲ್ಯೂಷನ್ ಇನ್ ಏಷ್ಯಾ ಅಂಡ್ ಏಮರ್ಜಿಂಗ್ ಡೆವಲಪ್‌ಮೆಂಟ್ ಸ್ಟಾಟರ್ಜಿ ಟು ಇನ್‌ಕ್ಲೂಡ್ ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್', PNAS: ಪ್ರೊಸೀಡಿಂಗ್ಸ್ ಆಫ್ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸ್ ಆಫ್ ದಿ ಯುಎಸ್‌ಎ, ವಾಲ್ಯೂಮ್ 109, ನಂಬರ್ 31, ಜುಲೈ.

ಲಾಂಚೌವ್, ಪಿ ಅಂಡ್ ಆರ್ ಮುರ್ಗೈ (2009), 'ಪಾವರ್ಟಿ ಡಿಕ್ಲೈನ್ ಅಗ್ರಿಕಲ್ಚರಲ್ ವೇಜಸ್ ಅಂಡ್ ನಾನ್ ಫಾರ್ಮ್ ಎಂಪ್ಲಾಯ್ಮೆಂಟ್ ಇನ್ ಇಂಡಿಯಾ 1983-2004,' ಅಗ್ರಿಕಲ್ಚರಲ್ ಎಕನಾಮಿಕ್ಸ್, ವಾಲ್ಯೂಮ್-40.

ಸೂತ್ರಂಧರ್, ಆರ್, ಸಿ ಎಸ್ ಆರ್ ನೂತಲಪತಿ ಅಂಡ್ ಎಂ ಎಫ್ ಬೆಲ್ಲಾಮರೆ (2019), 'ವಿಚಲ್ ಪ ಪಿನ್ ಫ್ಯಾಕ್ಟರ್ಸ್ ಮಾಡರ್ನ್ ಫುಡ್ ಸಪ್ಲೈ ಚೈನ್ಸ್ ಅಂಡ್ ಸ್ಪೆಶಲೈಸೇಷನ್ ಇನ್ ಇಂಡಿಯಾ', ಅಗ್ರಿಕಲ್ಚರಲ್ ಎಕಾನಾಮಿಕ್ಸ್, ವ್ಯಾಲ್ಯೂಂ 50, ನಂ 4.

ತರ್ಮಾ, ಎ ಅಂಡ್ ಎಸ್ ಚಂದ್ರಶೇಖರ್ (2014), 'ಗ್ರೋಥ್ ಆಫ್ ದಿ ಅರ್ಬನ್ ಶಾಡೋ ಸ್ಪೇಶಿಯಲ್ ಡಿಸ್ಟ್ರಿಬ್ಯೂಷನ್ ಆಫ್ ಎಕನಾಮಿಕ್ ಆಕ್ಟಿವಿಟೀಸ್ ಅಂಡ್ ಕಮ್ಯೂಟಿಂಗ್ ಬೈ ವರ್ಕರ್ಸ್ ಇನ್ ರೂರಲ್ ಅಂಡ್ ಅರ್ಬನ್ ಇಂಡಿಯಾ', ವರ್ಲ್ಡ್ ಡೆವಲಪ್‌ಮೆಂಟ್, ವಾಲ್ಯೂಮ್-61. https://catalog.ihsn.org/index.php/catalog/3281

https://www.census2011.co.in

https://tradingeconomics.com/india/urban-population-percent-of-total-wb-data.html

ಅಡಿಟಿಪ್ಪಣಿ

ವೈದ್ಯಕೀಯ ವಿಜ್ಞಾನವು ನೊವೆಲ್ ಕೊರೋನಾ ವೈರಾಣು, ಕೊರೋನಾ ಮತ್ತು ಕೋವಿಡ್-19 ಎಂಬ ಹೆಸರುಗಳಲ್ಲಿ ಗುರುತಿಸಿದೆ. ಪ್ರಪಂಚ ಆರೋಗ್ಯ ಸಂಘಟನೆಯು(ಡಬ್ಲ್ಯೂಎಚ್.ಓ) ಅಧಿಕೃತವಾಗಿ ಕೋವಿಡ್-19 ಎನ್ನುವ ಪರಿಭಾಷೆಯನ್ನು ತನ್ನ ಎಲ್ಲಾ ಕಾರ್ಯಸೂಚಿಗಳಲ್ಲಿ ಬಳಸಿದೆ. ಹೀಗಾಗಿ ಈ ಲೇಖನದಲ್ಲಿ ಕೋವಿಡ್-19 ಪರಿಭಾಷೆಯನ್ನು ಬಳಕೆ ಮಾಡಲಾಗಿದೆ.

Scanned with OKEN Scanner

ಆಹಾರ ಪೂರೈಕೆ ಸರಪಳಿಯು ಉತ್ಪಾದನೆಯಿಂದ ಬಳಕೆಗೆ ಆಹಾರ ಉತ್ಪನ್ನಗಳು ಹಾದುಹೋಗುವ ಎಲ್ಲಾ ಹಂತಗಳನ್ನು ಒಳಗೊಂಡಿದೆ. ಇತ್ತೀಚಿನ ದಿನಗಳಲ್ಲಿ, ಆಹಾರವನ್ನು ಹೆಚ್ಚು ದೂರದವರೆಗೆ, ಅಂದರೆ ಪ್ರಪಂಚದಾದ್ಯಂತ ಸಾಗಿಸಿ ಮಾರಾಟ ಮಾಡಲಾಗುತ್ತಿದೆ. ಆಹಾರ ಸರಪಳಿಯು ಕೃಷಿ ಉತ್ಪನ್ನಗಳ ಉತ್ಪಾದಕರಿಂದ ಪ್ರಾರಂಭವಾಗುತ್ತದೆ. ಇದನ್ನು ಪ್ರಾಥಮಿಕ ಗ್ರಾಹಕರು ಅನುಭೋಗಿಸುತ್ತಾರೆ. ಆಹಾರ ಪೂರೈಕೆ ಸರಪಳಿಯು ಅತ್ಯಂತ ಮಹತ್ವದ ಸಂಗತಿಯಾಗಿದೆ. ಈ ಸರಪಳಿಯು ಪಾರದರ್ಶಕತೆ, ದಕ್ಷತೆ, ಸ್ಥಿರತೆ ಮತ್ತು ಸಮಯೋಚಿತತೆಯನ್ನು ಕಾಪಾಡಿಕೊಳ್ಳುವುದರ ಪ್ರಕ್ರಿಯೆಗಳ ಜೊತೆಗೆ, ವಿತರಣೆ, ಹಂಚಿಕೆ, ಮಾರುಕಟ್ಟೆ, ಹಣಕಾಸು ಮತ್ತು ಗ್ರಾಹಕ ಸೇವೆಗಳು ಕ್ರಮಬದ್ಧವಾಗಿ ಕಾರ್ಯನಿರ್ವಹಿಸಬೇಕು.

ನಮ್ಮ ಸರಕಾರ ರಚನೆ ಮಾಡಿದ್ದ 'ರಾಷ್ಟ್ರೀಯ ಕಾರ್ಯಪಡೆ'ಯ ಮೊದಲ ಸಭೆ ಸೇರುವ ಮೊದಲೇ, ಮಾರ್ಚ್ 24, 2020ರ ಮಧ್ಯರಾತ್ರಿ ಲಾಕ್‌ಡೌನ್ ಘೋಷಣೆ ಮಾಡಲಾಯಿತು. ಕೇವಲ ನಾಲ್ಕು ಗಂಟೆಗಳ ಮುನ್ಸೂಚನೆಯಲ್ಲಿ ಲಾಕ್‌ಡೌನ್ ಜಾರಿಯಾಯಿತು (No.40-3/2020-DM-I(A) Government of India Ministry of Home Affairs, North Block, New Delhi-01, Dated 24th March, 2020).

■ ■

Scanned with OKEN Scanner

3.4.5

22ನೇ ವರ್ಷ

ISSN 2454-6054

ಸಂವಾದ

ನವೆಂಬರ್ 2023 ರೂ. 40

ನೆನಪು:



ಕೆ.ಸಿ. ರಘು



ದಲಿತ ಚಳವಳಿಯ ತಾತ್ವಿಕ ವಿನ್ಯಾಸ

Scanned with CamScanner

Scanned with OKEN Scanner



ಡಾ. ಎಚ್ ಡಿ ಪ್ರಶಾಂತ್
Email: gajaasya@gmail.com

ಪ್ರಸ್ತಾವನೆ

ಕಾನೂನು ಪದವಿ ಪಡೆದ ಒಬ್ಬ ವಿದ್ಯಾರ್ಥಿಯು ನ್ಯಾಯಾಲಯದಲ್ಲಿ ವಕೀಲ ವೃತ್ತಿಯನ್ನು ಪ್ರಾರಂಭಿಸಲು ಉತ್ಸುಕನಾಗಿದ್ದ. ಆ ವಿದ್ಯಾರ್ಥಿಯು ನಂತರ ತನ್ನ ನಿರ್ಧಾರವನ್ನು ಬದಲಿಸಿ, ಸ್ನಾತಕೋತ್ತರ ಪದವಿಯನ್ನು ಮಾಡಿ, ಈಗ ನಮ್ಮ ವಿಭಾಗದಲ್ಲಿ ಪಿಎಚ್.ಡಿ ಅಧ್ಯಯನ ಮಾಡುತ್ತಿದ್ದಾನೆ. ಏಕೆ ನೀವು ವಕೀಲ ವೃತ್ತಿಯನ್ನು ಪ್ರಾರಂಭಿಸಲ್ಲಿಲ್ಲ? ಎಂದು ಕೇಳಿದಾಗ, ಎಲ್‌ಎಲ್‌ಬಿ ಪದವಿಯು ನನಗೆ ಮೂಲಭೂತ ವಿಷಯದ ಮೇಲೆ ನನಗೆ ಸಾಕಷ್ಟು ಹಿಡಿತವನ್ನು ನೀಡಲಿಲ್ಲ. ನಾನು ಮಾಸ್ಟರ್ಸ್/ಸ್ನಾತಕ್ಕೋತರ ಕೋರ್ಸ್‌ನಿಂದ ಹೆಚ್ಚಿನದನ್ನು ಗಳಿಸುತ್ತೇನೆ ಎಂದು ಭಾವಿಸಿ, ಇನ್ನೊಂದು ಉನ್ನತ ಪದವಿಯನ್ನು ಪಡೆಯಲು ನಿರ್ಧಾರ ಮಾಡಿದೆ. ಸ್ನಾತಕೋತ್ತರ ಪದವಿಯು ನನಗೆ ಉದ್ಯೋಗವನ್ನು ನೀಡುತ್ತದೆ ಎಂದು ಭಾವಿಸಿದ್ದೆ. ಅಲ್ಲಿನ ಸ್ಪರ್ಧಾತ್ಮಕತೆ, ಅಲ್ಲಿ ಉದ್ಯೋಗಕ್ಕಾಗಿ ನಡೆಯುತ್ತಿರುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಗಮನಿಸಿದೆ. ಅದರಲ್ಲಿಯೂ ಗುಣಾತ್ಮಕ ಉದ್ಯೋಗ ದೊರಕುವುದು ಕಷ್ಟ ಎಂದು ತಿಳಿದು, ಪಿಎಚ್.ಡಿ. ಅಧ್ಯಯನಕ್ಕೆ ನೋಂದಾಯಿಸಿದೆ ಎಂದು ಆ ವಿದ್ಯಾರ್ಥಿ ಹೇಳಿದರು.

ಆ ವಿದ್ಯಾರ್ಥಿಗೆ ಪದವಿ ಮತ್ತು ಸ್ನಾತಕೋತ್ತರ, ಈ ಎರಡು ಪದವಿಗಳಲ್ಲಿ ಪಡೆದ ಜ್ಞಾನ ಉದ್ಯೋಗಕ್ಕೆ ಸೇರಲು ಅಥವಾ ಉದ್ಯೋಗ ಕೌಶಲ್ಯ ನೀಡುವಲ್ಲಿ ಬೆಂಬಲವಾಗಲಿಲ್ಲ. ಅಂದರೆ ಅವನಿಗೆ ದುಡಿಯುವ ಕೌಶಲ್ಯವನ್ನು ದೂರಕಿಸಿಕೊಡುವಲ್ಲಿ, ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳು ಮೌಲ್ಯವನ್ನು ಹೊಂದಿಲ್ಲ ಎಂದು ಆ ವಿದ್ಯಾರ್ಥಿಗೆ ತಿಳಿದಿದೆ. ಇನ್ನು ಪಿಎಚ್.ಡಿ ಸಂಶೋಧನೆ ಅವರಿಗೆ ಉದ್ಯೋಗದ ಕೌಶಲ್ಯವನ್ನು ನೀಡುತ್ತದೆ ಎನ್ನುವ ಭರವಸೆ ಅವರಲ್ಲಿ ಕಾಣಿಸುತ್ತಿಲ್ಲ. ಹೀಗೆ ವಿವಿಧ ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ, ಬಿ.ಇಡಿ, ಎಂ.ಇಡಿ. ಪದವಿಗಳನ್ನು (ದಿನನಿತ್ಯ ತರಗತಿಗಳ ಮೂಲಕ/ದೂರಶಿಕ್ಷಣದ ಮೂಲಕ/ ಆನ್‌ಲೈನ್ ಮೂಲಕ) ಪಡೆದು, ಶಿಕ್ಷಕ ಹುದ್ದೆಗೆ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅರ್ಹತೆಯನ್ನು ಪಡೆಯದೆ, ಮತ್ತೆ ಎಂ.ಎ. ಪದವಿಗೆ, ಪಿಎಚ್.ಡಿ ಅಧ್ಯಯನಕ್ಕೆ ನೋಂದಾಯಿಸಿಕೊಂಡವರ ಸಂಖ್ಯೆ ಕಡಿಮೆ ಇಲ್ಲ.

ಇತ್ತೀಚೆಗೆ ಹೆಚ್ಚು ಹೆಚ್ಚು ಪದವಿಗಳನ್ನು ಪಡೆಯುವ ಯುವಕರ ಸಂಖ್ಯೆ ಅಸಂಖ್ಯಾತವಾಗಿದೆ. ಈ ರೀತಿ ಯುವ ಜನರಲ್ಲಿ ಪದವಿಗಳನ್ನು ಪಡೆಯುವ ನಿರ್ಧಾರದಲ್ಲಿನ ಬದಲಾವಣೆಗಳು ನನಗೆ, 'ಡಿಪ್ಲೊಮಾ ಡಿಸೀಸ್' ಪುಸ್ತಕವನ್ನು ನೆನಪಿಸುತ್ತದೆ. ಈ ಪುಸ್ತಕವನ್ನು ಪ್ರಿಟಿಷ್ ಅರ್ಥಶಾಸ್ತ್ರಜ್ಞ ರೊನಾಲ್ಡ್ ಡೋರ್ ಬರೆದಿದ್ದಾರೆ. ಮೊದಲ ಬಾರಿಗೆ ಈ ಪುಸ್ತಕವನ್ನು 1976ರಲ್ಲಿ ಪ್ರಕಟಿಸಲಾಯಿತು. ಈ ವಿಷಯದಲ್ಲಿ ಹೆಚ್ಚಿನ ಶೋಧಗಳನ್ನು ನಡೆಸಿ ಮತ್ತೆ 2001ರಲ್ಲಿ ವಿಶೇಷ



ಕಲಿಕೆ ಮೌಲ್ಯವನ್ನು ಕಳೆದುಕೊಂಡಾಗ ರಾಜ್ಯ ಶಿಕ್ಷಣ ಸಮಿತಿ ಏನನ್ನು ಮಾಡಬಹುದು?

'ರಾಜ್ಯ ಶಿಕ್ಷಣ ಸಮಿತಿ'ಯು ರಾಜ್ಯದ ಶೈಕ್ಷಣಿಕ ಜಗತ್ತಿನ ರಚನಾತ್ಮಕ ಬದಲಾವಣೆಗೆ ಪ್ರಯತ್ನಿಸಬೇಕಾಗಿದೆ. ಅದರಲ್ಲಿಯೂ ಸಾರ್ವಜನಿಕ, ಶೈಕ್ಷಣಿಕ ವ್ಯವಸ್ಥೆಯ ಕರಗುವಿಕೆಯನ್ನು ತಡೆಯುವ ಮತ್ತು ಸಮಸಮಾಜವನ್ನು ರೂಪಿಸುವ ದೃಷ್ಟಿಕೋನದಲ್ಲಿ ಸಮಾನ ಶಿಕ್ಷಣ ವ್ಯವಸ್ಥೆಯನ್ನು ಕಟ್ಟುವ ದಿಕ್ಕಿನಲ್ಲಿ ಗಂಭೀರವಾಗಿ ಚರ್ಚೆ ಮಾಡಬೇಕಾಗಿದೆ. ಶಿಕ್ಷಣದ ಖಾಸಗೀಕರಣದ ಭರಾಟೆ, ವಿದೇಶಿ ವಿಶ್ವವಿದ್ಯಾಲಯಗಳ ಪ್ರವೇಶ, ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಆರ್ಥಿಕ ಅಸಮಾನತೆ, ಪ್ರಾದೇಶಿಕ ಅಸಮಾನತೆ, ಲಿಂಗ ಅಸಮಾನತೆ, ಹಸಿವು ಇವುಗಳು ದಲಿತರು, ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಮೇಲೆ ಹೆಚ್ಚುತ್ತಿರುವ ದೌಜನ್ಯ, ಪರಿಸರಾತ್ಮಕ ಬಿಕಟ್ಟುಗಳು, ಜಾಗತಿಕ ತಾಪಮಾನದಿಂದ ಉಂಟಾಗುತ್ತಿರುವ ಸಾಮಾಜಿಕ ಬಿಕ್ಕಟ್ಟುಗಳು ತಡೆಯುವ ದಿಕ್ಕಿನಲ್ಲಿ ರಾಜ್ಯ ಶಿಕ್ಷಣ ನೀತಿಯು ಗಂಭೀರವಾಗಿ ಯೋಚಿಸಬೇಕಾಗಿದೆ.

Scanned with CamScanner
Scanned with OKEN Scanner



ಸಂಪುಟವನ್ನು ರೊನಾಲ್ಡ್ ಡೋರ್ ಪ್ರಕಟಿಸಿದ್ದಾರೆ. 20 ವರ್ಷಗಳ ನಂತರ ಡೋರ್ ಅವರ ಪುಸ್ತಕದ ಪ್ರಸ್ತುತತೆ, ಇದು ನೀಡುವ ಅವರೂಪದ ರಚನಾತ್ಮಕ ವಿವರಣೆಗಳು ಪ್ರಚಲಿತ ಸಮಯದಲ್ಲಿ ಹೆಚ್ಚು ಹೆಚ್ಚು ಪದವಿಗಳನ್ನು ಸಂಗ್ರಹಿಸಲು ಪ್ರೇರೇಪಿಸುವ ಶೈಕ್ಷಣಿಕ ವಿದ್ಯಮಾನದ ಪ್ರತಿಬಿಂಬವಾಗಿದೆ.

ಈ ರೀತಿ ಹೆಚ್ಚು ಹೆಚ್ಚು ಪದವಿಗಳನ್ನು ಪಡೆಯಬೇಕು ಎನ್ನುವ ವಿದ್ಯಾರ್ಥಿಗಳ ವರ್ತನೆಯಲ್ಲಿ ಉಂಟಾಗಿರುವ ಬದಲಾವಣೆಯನ್ನು 'ಡೋರ್ ಪ್ರಮೇಯ' ಎಂದು ಕರೆಯಲಾಗುತ್ತದೆ. ಇಲ್ಲಿ ಡೋರ್ ಗಮನಿಸಿರುವುದು ಅರ್ಹತೆಗಳು ಅಥವಾ ಪದವಿಗಳು ಅಪಮೌಲ್ಯೀಕರಣ ಎನ್ನುವ ಅಂಶವನ್ನು ಹೆಚ್ಚು ಹೆಚ್ಚು ಪದವಿಗಳನ್ನು ಸಂಗ್ರಹಿಸಲು ಮತ್ತು ಡಿಪ್ಲೊಮಾಗಳನ್ನು ವೇಗವಾಗಿ ಪಡೆಯುವ ಪ್ರವೃತ್ತಿಯು ಅನೇಕ ದೇಶಗಳಲ್ಲಿ ಜನಪ್ರಿಯವಾಗಿದೆ. ಆದರೂ ಭಾರತವು ಅವರ ಮಾದರಿಯ ಭಾಗವಾಗಿರಲಿಲ್ಲ. 'ಡೋರ್ ಪ್ರಮೇಯ'ವು ತಿಳಿಸುವ ಒಳನೋಟಗಳು, ಆದರ ಅನ್ವಯಿಕತೆಯು ವೇಗವಾಗಿ ಬೆಳೆಯುತ್ತಿರುವ ನಮ್ಮ ದೇಶಕ್ಕೂ ಸಂಬಂಧಿಸಿದೆ. ಇತ್ತೀಚಿನ ವರ್ಷಗಳಲ್ಲಿ ಪ್ರಮಾಣಪತ್ರಗಳು, ಡಿಪ್ಲೊಮಾಗಳು ಮತ್ತು ಪದವಿಗಳಿಗೆ ಹೆಚ್ಚಿನ ಬೇಡಿಕೆಯಿದೆ.



'ದೇವ್ ಲಾಹಿರಿ' ಅವರು ತಮ್ಮ ಅನುಭವ ಕಥನವನ್ನು ವಿವರಿಸುವ ಪುಸ್ತಕಕ್ಕೆ 'ದಿ ಗ್ರೇಟ್ ಇಂಡಿಯನ್ ಸ್ಕೂಲ್ ಬಜಾರ್' ಎನ್ನುವ ಶೀರ್ಷಿಕೆಯನ್ನು ನೀಡಿದ್ದಾರೆ. ಈ ಶೀರ್ಷಿಕೆಯು ಉನ್ನತ ಶಿಕ್ಷಣಕ್ಕೆ ಪ್ರಸ್ತುತವಾಗಿದೆ. ಉನ್ನತ ಶಿಕ್ಷಣದಲ್ಲಿ 1990ರ ದಶಕದ ಮಧ್ಯಭಾಗದಿಂದ ವಿಶಾಲವಾದ ಮತ್ತು ವೈವಿಧ್ಯಮಯವಾದ ಮಾರುಕಟ್ಟೆಯು ಬೆಳೆದಿದೆ. ಆದರ ಬೆಳವಣಿಗೆ ಹೆಚ್ಚಿನ ವೈವಿಧ್ಯತೆಯ ಅರ್ಹತೆಗಳು ಎಂಬ ಅರ್ಥದ ಜಾಹೀರಾತುಗಳು ಮತ್ತು ಕೋರ್ಸ್‌ಗಳಿಗೆ ನೀಡುತ್ತಿರುವ ಆಫರ್‌ನಲ್ಲಿ ಆದರ ಬೇಡಿಕೆ ವೇಗವಾಗಿ ಬೆಳೆಯುತ್ತದೆ. ಯುವಕರು ಒಂದು ಕೋರ್ಸ್‌ಗೆ ನೋಂದಾಯಿಸಿ, ಮತ್ತೊಂದು ಕೋರ್ಸ್‌ಗೆ ದಾಖಲಾಗಲು ಬಯಸುತ್ತಾರೆ. ಇತ್ತೀಚಿಗೆ ಒಂದೇ ಸಮಯದಲ್ಲಿ ಉಭಯ ಪದವಿಗಳನ್ನು ಅಧ್ಯಯನ ಮಾಡಬಹುದು ಎನ್ನುವ ಯುಜಿಸಿಯ ಅಧಿಕೃತ ಅನುಮತಿಯು ಪದವಿ ಪಡೆಯುವ ಉತ್ಸಾಹವನ್ನು ಮತ್ತಷ್ಟು ಹೆಚ್ಚಿಸಿದೆ. ಈ ಪ್ರಚೋದನೆಯ ಪ್ರೇರಕ ಶಕ್ತಿಯು ಶಿಕ್ಷಣ ವ್ಯವಸ್ಥೆಯ ಒಳಗೆ ಮತ್ತು ಹೊರಗೆ ಎರಡೂ ಕಡೆ ಇದೆ. ಆಂತರಿಕವಾಗಿ ಶಿಕ್ಷಣ ವ್ಯವಸ್ಥೆಯು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತದೆ. ಹೇಗೆಂದರೆ ಕೋರ್ಸ್‌ನ ವಿಷಯ ಮತ್ತು ಆದರ ಗುರಿಗಳನ್ನು ವ್ಯಾಖ್ಯಾನಿಸುವ ಮೂಲಕ ಹೆಚ್ಚುವರಿ ಅರ್ಹತೆಗಳನ್ನು ಪಡೆಯಬೇಕು ಎನ್ನುವ ಪ್ರವೃತ್ತಿಗೆ, ವಿಶೇಷ ಪರಿಣಿತಿ ಎಂದು ಕರೆಯಲ್ಪಡುವುದು ಸಮಕಾಲೀನ ವಿದ್ಯಮಾನವಾಗಿದೆ. ಇಂತಹ ಕೋರ್ಸ್‌ನ ಜ್ಞಾನದಿಂದ ಭಿನ್ನವಾದ ನಿಗೂಢ ಕೌಶಲ್ಯಗಳು ಲಭಿಸುತ್ತದೆ. ಇಲ್ಲಿ ಕಲಿತರೆ 'ಉದ್ಯೋಗ ಖಚಿತ/ಪ್ಲೇಸ್‌ಪೆಂಟ್ ಖಚಿತ' ಎನ್ನುವ ಭರವಸೆ ಹುಟ್ಟಿಸುವ ಜಾಹೀರಾತು ನುಡಿಗಟ್ಟುಗಳು ಕೋರ್ಸ್‌ಗಳ ಆಕರ್ಷಣೆಯನ್ನು ಹೆಚ್ಚಿಸುವ ಮೂಲಕ ವಿದ್ಯಾರ್ಥಿಗಳನ್ನು ಸೆರೆಹಿಡಿಯುತ್ತಿವೆ.

ಈ ಪ್ರವೃತ್ತಿಯನ್ನು ಪ್ರಭಾವಿಸುವ ಜಾಲನಾ ಶಕ್ತಿಯು ಆರ್ಥಿಕತೆಯಲ್ಲಿ ನಿಗೂಢವಾಗಿ ನೆಲೆಗೊಂಡಿದೆ. ಆರ್ಥಿಕ ಬೆಳವಣಿಗೆಯು ಅನೇಕ ದೇಶಗಳಲ್ಲಿ ಸೃಷ್ಟಿಕರ ಉದ್ಯೋಗ ಅವಕಾಶಗಳ ಸೃಷ್ಟಿಗೆ ಅಥವಾ ವಿಸ್ತರಣೆಗೆ ಕಾರಣವಾಗಿಲ್ಲ. ನಮ್ಮಲ್ಲಿ, ಉತ್ತಮ ಆದಾಯವನ್ನು ನೀಡುವ ಅಥವಾ ಉದ್ಯೋಗಗಳ ಕೊರತೆ ಅನೇಕ ಪ್ರದೇಶಗಳಲ್ಲಿದೆ. ಇದನ್ನು ನಗರಗಳಲ್ಲಿ ಅಥವಾ ಹಳ್ಳಿಗಳಲ್ಲಿ ಎಂದು ಉಲ್ಲೇಖಿಸಲು ಬರುವುದಿಲ್ಲ. ನಿರುದ್ಯೋಗದ ಭಯ ಮತ್ತು ಮನೋಭಾವನೆಯು ಯುವಕರನ್ನು ಹೊಸ ಅರ್ಹತೆಗಳನ್ನು ಪಡೆದುಕೊಳ್ಳುವಂತೆ ಪ್ರಚೋದಿಸಿ, ಉತ್ತೇಜಿಸುತ್ತಿದೆ. ಈ ಪ್ರವೃತ್ತಿಯು ಸಮಕಾಲೀನ ಮಾರುಕಟ್ಟೆಯ ರಾಜಕೀಯವು ಆಗಿದೆ. ಇದು ಜನರು ಉದ್ಯೋಗಗಳಿಗಾಗಿ ತಮಗೆ ಹೆಚ್ಚು ಸಂಬಂಧಿಸಿದ ಕ್ಷೇತ್ರ/ವಲಯ/ಜೊಮೇನ್ ಅನ್ನು ಹೆಚ್ಚಾಗಿ ಆಯ್ಕೆ ಮಾಡಿಕೊಳ್ಳುವಂತೆ ಒತ್ತಾಯಿಸುತ್ತಿದೆ. ಹೀಗೆ ಆಯ್ಕೆ ಮಾಡಿಕೊಳ್ಳುವಾಗ ತನ್ನನ್ನು ತಾನು ಈ ಕೆಲಸಕ್ಕೆ ಸೂಕ್ತವೆಂದು/ಅರ್ಹ ಎಂದು ಪ್ರತಿನಿಧಿಸುವ ಅಥವಾ ಪ್ರತಿಪಾದಿಸಿಕೊಳ್ಳುವುದಕ್ಕೆ ಬದಲಾಗಿ, ತಾವು ಪಡೆದಿರುವ ಪ್ರಮಾಣಪತ್ರಗಳನ್ನು (Certificates) ಹೆಚ್ಚಾಗಿ ಅವಲಂಬಿಸುತ್ತಿದ್ದಾರೆ. ಉದ್ಯೋಗ ಮಾರುಕಟ್ಟೆಯಲ್ಲಿನ ಅಸ್ಥಿರತೆಗಳು ಯಾವುದೇ ಉದ್ಯೋಗವು ಕೊನೆಯವರೆಗೆ ಉಳಿಯುವುದಿಲ್ಲ ಎನ್ನುವುದನ್ನು ಇತ್ತೀಚಿನ ಉದ್ಯೋಗ ಮಾರುಕಟ್ಟೆಯ ಪ್ರವೃತ್ತಿಗಳು ಸೂಚಿಸುತ್ತಿವೆ. ಇದು ವಿಭಿನ್ನ ಮತ್ತು ಹಲವು ರೀತಿಯ ಉದ್ಯೋಗಗಳನ್ನು ಮಾಡಲು ಅರ್ಹರಾಗಬೇಕು ಎನ್ನುವ ಆತಂಕದ ಮನೋಭಾವನೆಯನ್ನು ರೂಪಿಸಿ, ಜನರನ್ನು ಕಲಿಕೆಯ ನೆಲೆಯಲ್ಲಿ ಅತಂತ್ರ ಸ್ಥಿತಿಯಲ್ಲಿ ಇಡುತ್ತಿದೆ.

1980ರ ದಶಕದಲ್ಲಿ ನಡೆದ ಶೈಕ್ಷಣಿಕ ಚರ್ಚೆಗಳು ಮತ್ತು ಅಧ್ಯಯನಗಳು ಉದ್ಯೋಗಗಳಿಂದ ಪದವಿಗಳನ್ನು ಬೇರ್ಪಡಿಸಬಹುದು ಎಂದು ನಂಬಲಾಗಿತ್ತು. ಔಪಚಾರಿಕ ವಿದ್ಯಾರ್ಹತೆಯಿಂದ ಉದ್ಯೋಗಗಳನ್ನು ಬೇರ್ಪಡಿಸಿ, ಉನ್ನತ ಶಿಕ್ಷಣ ಸಂಸ್ಥೆಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುವುದು ಒಳ್ಳೆಯದು ಎಂಬುದು 1980ರ ದಶಕದ ವಾದವಾಗಿತ್ತು. ಈ ವಾದವು ಪದವಿಗಳು ಮತ್ತು ಪ್ರಮಾಣಪತ್ರಗಳನ್ನು ಸಂಗ್ರಹಿಸುವುದರಿಂದ ಯುವಕರು ನಿರುತ್ಸಾಹಗೊಳ್ಳುತ್ತಾರೆ. ವಿದ್ಯಾವಂತ ಉದ್ಯೋಗಾಕಾಂಕ್ಷಿ ಯುವಕರಲ್ಲಿ ದುಡಿಯುವ ವಿಶ್ವಾಸಾರ್ಹ ಗುಣಲಕ್ಷಣಗಳು ಬರುವಂತೆ ಮಾಡದಿದ್ದರೆ, ಯಾವುದೇ ಸಂದರ್ಭದಲ್ಲಿ ಒಂದಲ್ಲ, ಮತ್ತೊಂದು ಕೋರ್ಸ್‌ಗೆ ಸೇರುವ ಒತ್ತಡ ಹೆಚ್ಚುತ್ತದೆ. ವಿದ್ಯಾರ್ಥಿಗಳಲ್ಲಿ ದುಡಿಮೆಯ ಕೌಶಲ್ಯ ಬಾರದಿದ್ದಾಗ, ಅವರ ಪೋಷಕರು ಸಹ ಮತ್ತಷ್ಟು ಪದವಿಗಳನ್ನು ಓದಿದರೆ/ಪಡೆದರೆ ತನ್ನ ಮಗಳು/ಮಗನಿಗೆ ಉದ್ಯೋಗ ಸಿಗಬಹುದು ಎಂದು ಭಾವಿಸಿ ಮಕ್ಕಳು ಹೆಚ್ಚಿನ ಪದವಿ ಮತ್ತು ಸರ್ಟಿಪಿಕೇಟ್ ಪಡೆಯಲು ಉತ್ಸುಕರಾಗಿರುತ್ತಾರೆ. ಅವರ ಮಕ್ಕಳು ಸಮಯವನ್ನು ವ್ಯರ್ಥ ಮಾಡುವ ಬದಲು ದೂರಶಿಕ್ಷಣ/ಕರೆಸ್ಪಾಂಡೆನ್ಸ್ ಕೋರ್ಸ್‌ಗಳಿಗೆ ದಾಖಲಾಗಲು ಬೆಂಬಲಿಸುತ್ತಾರೆ.

ಈಗ ದೂರಶಿಕ್ಷಣ/ಕರೆಸ್ಪಾಂಡೆನ್ಸ್ 'ಮುಕ್ತ ಕಲಿಕೆ' ಎಂದು ಕರೆಯಲ್ಪಟ್ಟು ಹೆಚ್ಚು ಪ್ರಚಾರಗೊಂಡಿದೆ. ಇದನ್ನು ಬೃಹತ್ ಮುಕ್ತ ಆನ್‌ಲೈನ್ ಕೋರ್ಸ್‌ಗಳು (ಎಂಒಒಸಿ) ಅಥವಾ Massive Open Online Courses (MOOC)ಗಳು ಎಂದು ಕರೆಯಲಾಗುತ್ತಿದೆ. ಇಲ್ಲಿ ಯಾರಾದರೂ ಉಚಿತ ಆನ್‌ಲೈನ್ ಕೋರ್ಸ್‌ಗಳಿಗೆ ದಾಖಲಾಗಬಹುದು. ಈ ಪ್ರಕ್ರಿಯೆಗಳನ್ನು ಇಂಟರ್ನೆಟ್ ಮತ್ತು ಡಿಜಿಟಲ್ ವ್ಯವಸ್ಥೆಯು 'ಸ್ವಯಂ ಕಲಿಕೆಯ ಮಾರುಕಟ್ಟೆ'ಯನ್ನು ಹೆಚ್ಚು ಸಕ್ರಿಯಗೊಳಿಸಿತು. ಇದು ಕೆಲವರ ಮಟ್ಟಿಗೆ, ಸ್ವಯಂ ಉದ್ಯೋಗವನ್ನು ಹೆಚ್ಚಿಸಿದೆ. ಆದರೆ ಔಪಚಾರಿಕ ಉದ್ಯೋಗಗಳನ್ನು ಹೊಂದುವ ಆಸೆಯನ್ನು ಕಡಿಮೆ ಮಾಡಿದೆ. ಇದು ಗಮನಾರ್ಹವಾದ ಸ್ಥಿತ್ಯಂತರವನ್ನು ಕಂಡಿದೆ. ಈಗ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನಡೆಯುತ್ತಿರುವ ತರಬೇತಿ ಮಾರುಕಟ್ಟೆಯು ಅಸಂಖ್ಯಾತ ಯುವಕರನ್ನು ಆಕರ್ಷಿಸುತ್ತಿದೆ. ಕ್ರೇಗ್ ಜೆಫ್ರಿ ಅವರು ಭಾರತದಲ್ಲಿ ನಡೆಸಿದ ಅಧ್ಯಯನದ ಆಧಾರದ ಮೇಲೆ ಈ ಪ್ರವೃತ್ತಿಯನ್ನು 'ಕಾಯಿಸುವ ರಾಜಕೀಯ' (politics of waiting) ಎಂದು ಕರೆದಿದ್ದಾರೆ.

ಡೋರ್ ಪ್ರಮೇಯವು ಪದವಿಗಳ ಅಪಮೌಲ್ಯೀಕರಣದ ಗುಣಮಟ್ಟವನ್ನು ಮಾಪನ ಮಾಡುವ ಮಾನದಂಡಗಳನ್ನು ಕಡಿಮೆ ಮಾಡುವುದರ ಜೊತೆಗೆ ಪ್ರಬಲವಾದ ಸಂಬಂಧವನ್ನು ಹೊಂದಿದೆ ಎಂದು ಸಾಬೀತು ಮಾಡಿದೆ. ನೀವು ಒಂದು ಕೋರ್ಸ್‌ನಿಂದ ಏನನ್ನು ಕಲಿಯಬೇಕೆಂದು ನಿರೀಕ್ಷಿಸುತ್ತೀರೋ ಅದನ್ನು ಆ ಕೋರ್ಸ್ ನೀಡದಿದ್ದಾಗ, ನೀವು ಉನ್ನತ ಮಟ್ಟಕ್ಕೆ ಮತ್ತೊಂದು ಕೋರ್ಸ್‌ಗೆ ಹೋಗುತ್ತೀರಿ. ಆದೇ ಕೋರ್ಸ್‌ಗಳು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ (ನಿರ್ದಿಷ್ಟವಾಗಿ ಸಾರ್ವಜನಿಕ ಉತ್ನತ ಶಿಕ್ಷಣ ಸಂಸ್ಥೆಗಳಲ್ಲಿ) ದೀರ್ಘಕಾಲದ ಹಣಕಾಸಿನ ಮುಗ್ಗಟ್ಟು ಹಾಗೂ ಖಾಲಿ ಹುದ್ದೆಗಳ ಹೆಚ್ಚಳಕ್ಕೆ ಕಾರಣವಾಗಿದೆ. ಹೀಗಾಗಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಬೆಂಬಲಗಳು ಕ್ಷೀಣಿಸಿ ಅಲ್ಲಿನ ಕಲಿಕಾ ಪರಿಸರವು ಕಳಪೆಯಾಗಲು

37ನೇ ಪುಟಕ್ಕೆ

Scanned with CamScanner
Scanned with OKEN Scanner

ರಾಜ್ಯ ಶಿಕ್ಷಣ ಸಮಿತಿ ಏನನ್ನು ಮಾಡಬಹುದು?

17ನೇ ಪುಟದಿಂದ

ಕಾರಣವಾಗಿದೆ. ಇದರ ಪರಿಣಾಮವಾಗಿ ಇರುವುದರಲ್ಲಿಯೇ ಕಲಿಕೆಯನ್ನು ಸುರುಳಿ ವಿಧಾನದಲ್ಲಿ (Spiral method) ವ್ಯವಸ್ಥಿತವಾಗಿ ವಿಸ್ತರಿಸಿರುವ ಪ್ರಕ್ರಿಯೆಗೆ ಮಹತ್ವ ನೀಡಲಾಗುತ್ತಿದೆ. ಸಾರ್ವಜನಿಕ ಉನ್ನತ ಶಿಕ್ಷಣ ಸಂಸ್ಥೆಗಳು ಕಳೆದ ಮೂರು ದಶಕದಲ್ಲಿ (ಅನುದಾನ ಕೊರತೆಯ ಬಿಕ್ಕಟ್ಟು ಸೇರಿದಂತೆ) ನಿರಂತರವಾಗಿ ಟೊಳ್ಳು ಹಾಲಿಯನ್ನು ಅನುಭವಿಸುತ್ತಿದೆ. ಗುಣಮಟ್ಟವನ್ನು ಕಾಪಾಡಿಕೊಳ್ಳದಿದ್ದರೂ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ ಒತ್ತಡಗಳು, ವಿದೇಶಿ ವ್ಯವಸ್ಥೆಗಳು ಮತ್ತು ಮಾಲಿ ಖಾಸಗಿ ಸಂಸ್ಥೆಗಳ ವಿಸ್ತರಣೆಯು ಹೆಚ್ಚಾಗುತ್ತಿದೆ. ಈ ವ್ಯವಸ್ಥೆಯಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದುಸ್ಥಿತಿಯಲ್ಲಿರುವ ವಿದ್ಯಾರ್ಥಿಗಳು



ಆಯ್ಕೆಗಳನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಈಗ ಅವಕಾಶ ವಂಚಿತ ಸಮುದಾಯಗಳಿಂದ ಬಂದ ವಿದ್ಯಾರ್ಥಿಗಳು ಉನ್ನತ ಶಿಕ್ಷಣದ ಬಾಗಿಲುಗಳನ್ನು ಬಡಿಯಲು ಪ್ರಾರಂಭಿಸುತ್ತಿರುವಾಗಲೇ, ಉನ್ನತ ಶಿಕ್ಷಣ ಸಂಸ್ಥೆಗಳು ಅವರೋಹಣ ಚಲನೆಗೆ ದಿಕ್ಕು ಮಾಡಿರುವುದು ನಮ್ಮ ದುರಂತ. ಕಲಿಕೆ ಮತ್ತು ಬೋಧನಾ ಪ್ರಕ್ರಿಯೆಯಲ್ಲಿ ನಿರೀಕ್ಷಿತ ಗುರಿ ಸಾಧನೆಗೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳಲ್ಲಿ ಕಾರ್ಯಶಕ್ತರತೆ ಕಡಿಮೆಯಾಗಿದೆ. ಇದರ ಪರಿಣಾಮವಾಗಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಸಮುದಾಯಗಳು ಹಾಗೂ ಕುಟುಂಬಗಳಿಂದ ಬಂದ ಮಕ್ಕಳು ಉನ್ನತ ಶಿಕ್ಷಣವನ್ನು ಪ್ರವೇಶಿಸದಂತೆ ಮಾಡಲಾಗುತ್ತಿದೆ.

ಉನ್ನತ ಶಿಕ್ಷಣದ ಗುಣಮಟ್ಟದ ಮಾನದಂಡಗಳ ಕುಸಿತವನ್ನು ವಿವರಿಸಲು ಇನ್ನೂ ಹಲವು ಮಾರ್ಗಗಳಿವೆ. ಡಿಜಿಟಲ್ ತಂತ್ರಜ್ಞಾನವು ವಿದ್ಯಾರ್ಥಿ ವರ್ತನೆಯಲ್ಲಿ ಗಮನಾರ್ಹವಾದ ಬದಲಾವಣೆ ಉಂಟಾಗಲು ತನ್ನದೇ ಆದ ಕೊಡುಗೆಯನ್ನು ನೀಡಿದೆ. ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯವು ವಾರದ ಸಮಾಲೋಚನೆಯ ಪ್ರಸಾರದಲ್ಲಿ ಕಲಿಕೆಗೆ ಸಂಬಂಧಿಸಿದಂತೆ, ನಾನು ಒಂದು ದಿನ ಹೇಳಿಕೆಯನ್ನು ಕೇಳಿದೆ. ಅದು ಏನು ಎಂದರೆ, 'ದಯವಿಟ್ಟು ಪ್ರೋಗ್ರಾಂ ಮಾರ್ಗಸೂಚಿಯನ್ನು ಎಚ್ಚರಿಕೆಯಿಂದ ಓದಿ, ಓದುವುದು ನಿಮಗೆ ಉತ್ತಮ ಚಟುವಟಿಕೆಯಾಗಿದೆ' ಎನ್ನುವ ಪ್ರಚಾರಕ್ಕೆ ಇಂದಿರಾ ಗಾಂಧಿ ಮುಕ್ತ ವಿಶ್ವವಿದ್ಯಾನಿಲಯವು ಒತ್ತು ನೀಡುತ್ತಿದೆ. ಇತ್ತೀಚೆಗೆ 'ಗಟ್ಟಿ ಓದು' ಶಿಕ್ಷಕರ ತರಬೇತಿಗಳಲ್ಲಿ ಹೆಚ್ಚು ಅದ್ಯತೆ ಪಡೆಯುತ್ತಿರುವುದನ್ನು ನಾವು ಕಾಣಬಹುದು. ಇದು ಓದುವ ಮೌಲ್ಯದಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಅವರಿಸಿರುವ ಬಿಕ್ಕಟ್ಟನ್ನು ಅತ್ಯಂತ ಸೂಕ್ಷ್ಮವಾಗಿ ಸೂಚಿಸುತ್ತದೆ. ಅನೇಕ ಹೊಸ ಹೊಸ ಸುಧಾರಣೆಗಳನ್ನು ಪರಿಚಯಿಸಿದ್ದಾಗಿಯೂ ಸಾಂಕ್ರಾಮಿಕ ರೋಗದಿಂದಾಗಿ ದಿನಚರಿಗಳು ದುರ್ಬಲಗೊಂಡು ಯಶಸ್ವಿಯಾಗಲಿಲ್ಲ. ಡೋರ್ ಪ್ರಮೇಯವು ಎವತ್ತು ವರ್ಷಗಳ ಹಿಂದೆ ಒತ್ತು ನೀಡಿದ/ಅಂಡರ್ಲೈನ್ ಮಾಡಿದ ಹೇಳಿರುವ ಮೂಲಭೂತ ಸಮಸ್ಯೆಗಳು ಮತ್ತು ಪ್ರವೃತ್ತಿಗಳನ್ನು ಪರಿಹರಿಸಲು ಸಾಧ್ಯವಾಗಿಲ್ಲ.

ನಮ್ಮ ಶಿಕ್ಷಣ ಸುಧಾರಣೆ ಕುರಿತ ಚರ್ಚೆಗಳು, ಸುಧಾರಣಾ ಕ್ರಮಗಳು ಮತ್ತು ವ್ಯವಸ್ಥೆಯಲ್ಲಿ ಇರುವ ವಾಸ್ತವಗಳ ನಡುವೆ ಸಾಕಷ್ಟು ಅಂತರವಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಹಳೆಯ ಸಮಸ್ಯೆಗಳ ನಿರಂತರತೆಯನ್ನು ಒಲ್ಲಿಕೊಳ್ಳಲು ಇಷ್ಟವಿಲ್ಲದಿರುವುದು ಸಮಸ್ಯೆಗಳ ಮೂಲಗಳು ಮತ್ತಷ್ಟು ಬಿಗಡಾಯಿಸಲು ಕಾರಣವಾಗಿದೆ. ನಾವು ಹಿಂದಿನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು, ಶಿಕ್ಷಣದ ಖಾಸಗೀಕರಣವು ಉಂಟುಮಾಡಿರುವ ಬಿಕ್ಕಟ್ಟುಗಳನ್ನು ಮತ್ತು ತೊಂದರೆಗಳನ್ನು ಸರಿಪಡಿಸಿಕೊಳ್ಳಲು ಸುಧಾರಣೆಗಳ ಸ್ವರೂಪ ಮತ್ತು ಅನುಷ್ಠಾನದ ಆಯ್ಕೆಗಳನ್ನು ಖಂಡಿತವಾಗಿ ಸುಧಾರಿಸಬೇಕಾಗಿದೆ.

ಈ ದಿಕ್ಕಿನಲ್ಲಿ ಪ್ರೊ. ಸುಖದೇವ್ ಥೋರಟ್ ಅವರ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ 'ರಾಜ್ಯ ಶಿಕ್ಷಣ ಸಮಿತಿ'ಯು ರಾಜ್ಯದ ಶೈಕ್ಷಣಿಕ ಜಗತ್ತಿನ ರಚನಾತ್ಮಕ ಬದಲಾವಣೆಗೆ ಪ್ರಯತ್ನಿಸಬೇಕಾಗಿದೆ. ಅದರಲ್ಲಿಯೂ ಸಾರ್ವಜನಿಕ, ಶೈಕ್ಷಣಿಕ ವ್ಯವಸ್ಥೆಯ ಕರಗುವಿಕೆಯನ್ನು ತಡೆಯುವ ಮತ್ತು ಸಮಸಮಾಜವನ್ನು ರೂಪಿಸುವ ದೃಷ್ಟಿಕೋನದಲ್ಲಿ ಸಮಾನ ಶಿಕ್ಷಣ ವ್ಯವಸ್ಥೆಯನ್ನು ಕಟ್ಟುವ ದಿಕ್ಕಿನಲ್ಲಿ ಗಂಭೀರವಾಗಿ ಚರ್ಚೆ ಮಾಡಬೇಕಾಗಿದೆ. ಶಿಕ್ಷಣದ ಖಾಸಗೀಕರಣದ ಭರಾಟೆ, ವಿದೇಶಿ ವಿಶ್ವವಿದ್ಯಾಲಯಗಳ ಪ್ರವೇಶ, ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಆರ್ಥಿಕ ಅಸಮಾನತೆ, ಪ್ರಾದೇಶಿಕ ಅಸಮಾನತೆ, ಲಿಂಗ ಅಸಮಾನತೆ, ಹಸಿವು ಇವುಗಳು ದಲಿತರು, ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಮೇಲೆ ಹೆಚ್ಚುತ್ತಿರುವ ದೌಜನ್ಯ, ಪರಿಸರಾತ್ಮಕ ಬಿಕಟ್ಟುಗಳು, ಜಾಗತಿಕ ತಾಪಮಾನದಿಂದ ಉಂಟಾಗುತ್ತಿರುವ ಸಾಮಾಜಿಕ ಬಿಕ್ಕಟ್ಟುಗಳು ತಡೆಯುವ ದಿಕ್ಕಿನಲ್ಲಿ ರಾಜ್ಯ ಶಿಕ್ಷಣ ನೀತಿಯು ಗಂಭೀರವಾಗಿ ಯೋಚಿಸಬೇಕಾಗಿದೆ.

ಹಾಗೆಯೇ ಖಾಸಗಿ ಶಿಕ್ಷಣ ವ್ಯವಸ್ಥೆಯನ್ನು ನಿಯಂತ್ರಿಸುವ ಜೊತೆ ಜೊತೆಗೆ, ಸಾರ್ವಜನಿಕ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಕೋರ್ಸ್‌ಗಳು ಹೆಚ್ಚು ಗುಣಮಟ್ಟವನ್ನು ಹೊಂದುವಂತೆ ಮಾಡಬೇಕಾಗಿದೆ. ಏಕೆಂದರೆ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಕುಗ್ಗುವಿಕೆಯು ಬಹುತ್ವದ ಭಾರತವನ್ನು ಇಲ್ಲವಾಗಿಸುವ ಸಾಧ್ಯತೆಯಿದೆ. ಅದರಲ್ಲಿಯೂ ಪ್ರಜಾಪ್ರಭುತ್ವದ ಮೌಲ್ಯಗಳಾದ ಸಮತೆ, ಸಹೋದರತೆ, ಸಮಾನ ಅವಕಾಶ, ಜಾತ್ಯಾತೀತ ನೆಲೆಗಳನ್ನು ಇಲ್ಲವಾಗಿಸುವ ಪ್ರಯತ್ನದಂತೆ ಖಾಸಗಿ ಶಿಕ್ಷಣದ ಪಠ್ಯಗಳು ಹಾಗೂ ವಿಶ್ವವಿದ್ಯಾಲಯಗಳ ಚರ್ಚೆಗಳು ನಡೆಯುತ್ತಿರುವುದು ಅತ್ಯಂತ ಅಪಾಯಕಾರಿಯಾಗಿದೆ. ಇತ್ತೀಚೆಗೆ ಜಾತಿಗೊಂದು, ಮಠಕ್ಕೊಂದು ಡಿಮ್ಡ್ ವಿಶ್ವವಿದ್ಯಾಲಯಗಳು ನಾಯಿಕೊಡೆಗಳಂತೆ ಹುಟ್ಟಿಕೊಳ್ಳುತ್ತಿರುವುದು ಒಂದುಕಡೆಯಾದರೆ, ಕಾರ್ಪೊರೇಟ್ ಶಾಲೆಗಳು ಮತ್ತು ವಿಶ್ವವಿದ್ಯಾಲಯಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಅಪಹಾಸ್ಯ ಮಾಡಿದಂತಾಗಿದೆ. ಅಂದರೆ ಸಮಕಾಲೀನ ಸಂದರ್ಭದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಲಯಗಳ ನಡುವಿನ ಸಂಬಂಧಗಳನ್ನು ಬಹಳ ಎಚ್ಚರಿಕೆಯಿಂದ ಸೂಕ್ಷ್ಮವಾಗಿ ಪರಿಶೀಲಿಸಿ ಶೈಕ್ಷಣಿಕ ವ್ಯವಸ್ಥೆಯು ಉತ್ಪಾದಿಸುತ್ತಿರುವ ಅಸಮಾನತೆಯನ್ನು ನಿಯಂತ್ರಿಸುವ ಕ್ರಮಗಳನ್ನು ರಾಜ್ಯ ಶಿಕ್ಷಣ ಸಮಿತಿಯು ಮಾಡಬೇಕಾಗಿದೆ. ಆಗಷ್ಟೇ ಶೈಕ್ಷಣಿಕ ವ್ಯವಸ್ಥೆಯು ಸುಧಾರಿಸಲು ಸಾಧ್ಯ. ಈ ದಿಕ್ಕಿನಲ್ಲಿ ರಾಜ್ಯ ಶೈಕ್ಷಣಿಕ ವ್ಯವಸ್ಥೆಯಲ್ಲಿ ರಾಚನಿಕವಾಗಿ ಬದಲಾವಣೆ ತರುವ ಜವಾಬ್ದಾರಿಯು ಪ್ರೊ. ಸುಖದೇವ್ ಥೋರಟ್ ಅವರ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ರಾಜ್ಯ ಶಿಕ್ಷಣ ಸಮಿತಿಯ ಮುಂದಿದೆ. ಈ ಕುರಿತು ಇನ್ನಷ್ಟು ಚರ್ಚೆ, ಸಂವಾದಗಳು ನಡೆಯುವ ಅಗತ್ಯವಿದೆ. □

Scanned with CamScanner

Scanned with OKEN Scanner

3.4.5

ISSN 2454-6054

ಸಂವಾದ

ಡಿಸೆಂಬರ್ 2023 ರೂ. 40



ಕನಕ ಕವಿಯ
ಎದುರುಗೊಳ್ಳುವ
ಬಗೆಗಳು...

ಅಭಿವೃದ್ಧಿ ನಿರೂಪಣೆಗಳು

ಜನಪ್ರಿಯವಾದಾಗ ಇರುವ ಅಪಾಯಗಳು

Scanned with OKEN Scanner

ಸಂವಾದ

ಮಾಸ ಪತ್ರಿಕೆ
ಸಂಪುಟ 22 ಸಂಚಿಕೆ 02
ಡಿಸೆಂಬರ್ 2023

ಸಂಪಾದಕ:
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ:
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ
ಬಿ. ಶ್ರೀಪಾದ್ ಭಟ್
ಡಾ॥ ಅರುಣ್ ಜೋಳದಕೂಡ್ಲಗಿ
ವಿ.ಎಲ್. ನರಸಿಂಹಮೂರ್ತಿ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು ೫೬೦ ೦೯೧

EDITOR:
INDUDHARA HONNAPURA

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE 560 091
✆ Circulation: 9108830437
9945264687
✆ Editorial: 9448048306

email Editorial
samvaadapatrike@gmail.com
samvaada@hotmail.com

Circulation :
samvaadacirculation@gmail.com

ಒಳ್ಳಪ್ರಟಿಗಳ್ಳಿ

- ಪತ್ರಗಳು ೦೪
- ಸಂಪಾದಕರೊಂದಿಗೆ ಸಂವಾದ ೦೪
  - ಎನ್ ಸಿ ಮುನಿಯಪ್ಪ ೦೬
  - ಡಾ. ಜ್ಯೋತಿ ಎಸ್ ೦೭
- ದೇಶ ನಿರ್ಮಾಣದಲ್ಲಿ ಮಕ್ಕಳ ಪಾತ್ರ
  - ಡಾ. ಸಿದ್ದಯ್ಯ ರೆಡ್ಡಿಹಳ್ಳಿ ೦೮
- ಕನಕಕವಿಯ ಎದುರುಗೊಳ್ಳುವ ಬಗೆಗಳು... ಒಳ ಬಂಡಾಯಗಾರನ ಜಾತಿ ಭಂಜನ ಕ್ರಿಯೆ ಮತ್ತು ಪ್ರತಿಕ್ರಿಯೆ.
  - ಅರುಣ್ ಜೋಳದಕೂಡ್ಲಿಗಿ ೧೦
- ಹೀಗೊಂದು ಸನಾತನಿಗಳ ಚಾಣಕ್ಯ ತಂತ್ರ
  - ಜಿ ವಿ ಸುಂದರ್ ೧೨
- ಉತ್ಪಾದಿತ ಭಿನ್ನಮತದ ಸುಳಿಯಲ್ಲಿ ವಿಜಯೇಂದ್ರ!
  - ಗಿರೀಶ್ ತಾಳಿಕಟ್ಟೆ ೧೬
- ಕೃಷಿ ತ್ಯಾಜ್ಯ ದಹನ ಅನಿವಾರ್ಯವೇ?
  - ಆರ್ ಬಿ ಗುರುಬಸವರಾಜ ೨೦
- ಕ್ರಿಕೆಟ್– ಮೌಢ್ಯ ಮತ್ತು ಬಂಡವಾಳಶಾಹಿ ಮಾರುಕಟ್ಟೆ
  - ನಾ ದಿವಾಕರ ೨೪
- ಸಿದ್ಧಾರ್ಥ ಗೌತಮ ಬುದ್ಧ ಗುರುವಾದ ಬಗೆ
  - ವಿಕಾಸ ಆರ್ ಮೌರ್ಯ ೨೬













- ದುಂಡಾ ಗ್ರಾಮದ ಜಾತಿ ದೌರ್ಜನ್ಯ ಸಂತ್ರಸ್ತರ ಹೋರಾಟಕ್ಕೆ ಉಚ್ಚ ನ್ಯಾಯಾಲಯದಿಂದ ಸಿಕ್ಕ ನ್ಯಾಯ!
  - ರಘುಪತಿ ಎಸ್ ೩೦
- ಹಾತ್ರಸ್ ಪ್ರಕರಣ–ಮುಗಿದ ಮೂರೂ ವರ್ಷ ದೊರಕದ ನ್ಯಾಯ, ಘನತೆ
  - ವಿನಯ್ ಕೂರಗಾಯಲ ಶ್ರೀನಿವಾಸ ೩೨
- ಅಭಿವೃದ್ಧಿ ನಿರೂಪಣೆಗಳು ಜನಪ್ರಿಯವಾದಾಗ ಇರುವ ಅಪಾಯಗಳು
  - ಡಾ. ಎಚ್ ಡಿ ಪ್ರಶಾಂತ್ ೩೬
- ಕಥೆ: ನಂ ಮ್ಯೋಹೋ ರೆಂಗೇ ಕ್ಯೋಂ...
  - ನಾಗರಾಜ ವಸ್ತಾರೆ ೪೦
- ಪುಸ್ತಕ ಅವಲೋಕನ: 'ಕಣ್ಕಟ್ಟು'– ಎನ್.ಇ.ಪಿ.ಯ ಕರಾಳ ಮುಖ ಗಳನ್ನು ಅನಾವರಣಗೊಳಿಸುವ ಕೃತಿ
  - ಡಾ. ಹೆಚ್ ಡಿ ಉಮಾಶಂಕರ್ ೪೬
- ಹೊಸ ಪುಸ್ತಕ ೪೮
- ಲೋಕಾವಲೋಕನ–31
  - ನ್ಯಾ॥ ನಾಗಮೋಹನ ದಾಸ್ ೫೦
- ನೆಲದ ಕಣ್ಣು
  - ಮಲ್ಲಿಗೆ ಸಿರಿಮನೆ ೫೨
- Just Asking
  - ಶಿವಸುಂದರ್ ೫೪
- ಕಾವ್ಯ: ಕಾಯದೊಳಗಣ ಕುದಿ ೦೫

ಮುಖಪುಟ ವಿನ್ಯಾಸ: ಮುರಳೀಧರ ರಾಥೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)



ಡಾ. ಎಚ್. ಡಿ ಪ್ರಶಾಂತ್
Email: gajaasya@gmail.com

ಮೂರದೃಷ್ಟಿಯಿಂದ ಉತ್ತಮ ಗುಣಮಟ್ಟದ ಅಭಿವೃದ್ಧಿಯನ್ನು ಸಾಧಿಸಬೇಕು ಎನ್ನುವುದರಲ್ಲಿ ಎರಡು ವಾದಗಳಿಲ್ಲ. ಆದಾಗ್ಯೂ, ಜನರ ಜೀವನದ ಗುಣಮಟ್ಟ ಮತ್ತು ಪರಿಸರದ ಸುಸ್ಥಿರತೆಯ ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವುದು ಅವಶ್ಯ. ವೇಗವರ್ಧಿತ ಅಭಿವೃದ್ಧಿಯ ಅಗತ್ಯವನ್ನು ಚುನಾವಣಾ ಭರವಸೆಯಂತೆ ಸುಲಭವಾಗಿ ಮಾರಾಟ ಮಾಡಲಾಗದಿದ್ದರೂ ಅಭಿವೃದ್ಧಿ ಕಾರ್ಯಕ್ರಮ ಮೂಲಕ ರೂಪುಗೊಳ್ಳುತ್ತಿರುವ ಅಸಮಾನತೆಯನ್ನು ಮೌಲ್ಯಮಾಪನ ಮಾಡಬೇಕು. ಅಸಮಾನತೆಯನ್ನು ಸರಿಪಡಿಸುವ ದಿಕ್ಕಿನಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಆದರೆ, ಚುನಾವಣೆಯ ನಂತರದ ಅವಧಿಯಲ್ಲಿ ಅಸಮಾನತೆಯನ್ನು ಉಲ್ಲೇಖಿಸಲಾಗುವುದಿಲ್ಲ. ಉದಾಹರಣೆಗೆ ಭ್ರಷ್ಟಾಚಾರದ ಬಗೆಗೆ ಚುನಾವಣಾ ಪ್ರಚಾರದಲ್ಲಿ ಎಲ್ಲಾ ಪಕ್ಷದವರು, ಅದರಲ್ಲಿಯೂ ವಿರೋಧ ಪಕ್ಷದವರು ಆಡಳಿತ ಪಕ್ಷದವರ ಭ್ರಷ್ಟಾಚಾರಗಳನ್ನು ವಿರೋಧಿಸುತ್ತಾರೆ. ಚುನಾವಣೆ ನಂತರ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಭ್ರಷ್ಟಾಚಾರಗಳ ಬಗ್ಗೆ ಆರೋಪಗಳನ್ನು ಮಾಡುತ್ತಾರೆಯೇ ಹೊರತು, ಭ್ರಷ್ಟಾಚಾರ ತಡೆಗೆ ಯಾವುದೇ ಕಠಿಣ ಕ್ರಮಗಳನ್ನು ಜಾರಿಗೆ ತರುವ ರಚನಾತ್ಮಕ ಕ್ರಮಗಳನ್ನು ಮಾಡುವುದಿಲ್ಲ. ಆದರೆ ಭ್ರಷ್ಟಾಚಾರಕ್ಕೆ ಎಲ್ಲಾ ರಾಜಕೀಯ ಪಕ್ಷಗಳ ನಾಯಕರು ಸಾಕ್ಷಿ ಮತ್ತು ದಾಖಲೆಗಳನ್ನು ಕೇಳುತ್ತಾರೆ!

ಅಭಿವೃದ್ಧಿಯನ್ನು ಜನರಿಗೆ ಆದರಲ್ಲಿಯೂ ಮತದಾರರಿಗೆ ಆಕರ್ಷಕವಾಗುವಂತೆ ತೋರಿಸಲು ಇರುವ ಸುಲಭವಾದ ಮಾರ್ಗವೆಂದರೆ, ಅಭಿವೃದ್ಧಿಯನ್ನು ಹೆಚ್ಚು ಗೋಚರವಾಗುವ ಭೌತಿಕ ಮೂಲಸೌಕರ್ಯಗಳ ದೃಷ್ಟಿಕೋನದಲ್ಲಿ ವ್ಯಾಖ್ಯಾನಿಸುವುದು. ಈ ರೀತಿಯ ವ್ಯಾಖ್ಯಾನಗಳು ಸಾರ್ವಜನಿಕ ಚುನಾವಣೆಗಳಲ್ಲಿ ಮುನ್ನೆಲೆಗೆ ಬರುತ್ತವೆ. ಕರ್ನಾಟಕದಲ್ಲಿ ನಡೆದ 2023 ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷ 'ಸರ್ವ ಜನಾಂಗದ ಶಾಂತಿಯ ತೋಟ' ಎಂಬ ಹೆಸರಿನಲ್ಲಿ 25 ಪುಟಗಳ, ಭಾರತೀಯ ಜನತಾ ಪಕ್ಷ 'ಪ್ರಜಾ ಪ್ರಣಾಳಿಕೆ' ಎಂಬ ಹೆಸರಿನಲ್ಲಿ 48 ಪುಟಗಳ ಮತ್ತು ಜನತಾದಳ(ಜಾತ್ಯಾತೀತ) 'ಜನತಾ ಪ್ರಣಾಳಿಕೆ' ಎಂಬ ಹೆಸರಿನಲ್ಲಿ 36 ಪುಟಗಳ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿವೆ. ಈ ಪ್ರಣಾಳಿಕೆಗಳಲ್ಲಿ ಮತದಾರರನ್ನು ಸೆಳೆಯುವ ಜನಪ್ರಿಯತೆಯ ತಾತ್ಕಾಲಿಕ ದೃಷ್ಟಿಕೋನದಲ್ಲಿ ಕಾಣುತ್ತೇವೆ. ಮೂರು ಪಕ್ಷಗಳ ಪ್ರಣಾಳಿಕೆಗಳು ನಮ್ಮನ್ನು ಕಾಡುತ್ತಿರುವ ಅಸಮಾನತೆ, ಹಸಿವು, ಗುಣಮಟ್ಟದ ಸಾರ್ವಜನಿಕ ಶಿಕ್ಷಣ ಮತ್ತು ಸಾರ್ವಜನಿಕ ಆರೋಗ್ಯ, ಹವಾಮಾನ ವೈಪರಿತ್ಯ, ತಾಪಮಾನದಲ್ಲಿ ಹೆಚ್ಚಳ, ಕೃಷಿ, ಒಣಬೇಸಾಯ ಇನ್ನೂ ಮುಂತಾದ ಬಿಕ್ಕಟ್ಟುಗಳನ್ನು ರಚನಾತ್ಮಕವಾಗಿ ಹೇಗೆ ಬದಲಿಸಬಹುದು ಎನ್ನುವುದಕ್ಕಿಂತಲೂ, ಔದ್ಯಮಿಕ ಮತ್ತು ನಗರ ಕೇಂದ್ರಿತ ಆರ್ಥಿಕತೆಗೆ, ಬೃಹತ್ ನೀರಾವರಿ ಯೋಜನೆಗಳಿಗೆ, ಬೃಹತ್ ರಸ್ತೆಗಳ ಅಭಿವೃದ್ಧಿ ಮತ್ತು ಅಗಲೀಕರಣಕ್ಕೆ ಹೆಚ್ಚಿನ ಮಹತ್ವ ನೀಡಿವೆ. ಕರ್ನಾಟಕದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಪ್ರಾದೇಶಿಕ ವಲಯಗಳ ನಡುವಿನ ಸಂಬಂಧ ಮತ್ತು ಅಸಮಾನತೆಯನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಅಸಮಾನತೆಯನ್ನು ಕಡಿಮೆ ಮಾಡುವ ದೂರದೃಷ್ಟಿ ಅಭಿವೃದ್ಧಿ ನೀತಿಗೆ ದೊರಕಬೇಕಾದ ಮಹತ್ವ ಮತ್ತು



ಅಭಿವೃದ್ಧಿ ನಿರೂಪಣೆಗಳು

ಜನಪ್ರಿಯವಾದಾಗ ಇರುವ ಅಪಾಯಗಳು

Scanned with OKEN Scanner

ಅದೃತೆಯು ಮೂಗು ಪಕ್ಷಗಳ ಪ್ರಣಾಳಿಕೆಗಳಲ್ಲಿ ದೊರೆತಿಲ್ಲ. ಆದರೆ ಮೂಗು ಪಕ್ಷಗಳ ಪ್ರಣಾಳಿಕೆಗಳು ಜನಪ್ರಿಯ ಕಾರ್ಯಕ್ರಮಗಳನ್ನು ಪ್ರಕಟಿಸುವಲ್ಲಿ ಒಂದೆ ಬಿದ್ದಿಲ್ಲ.

ಇತ್ತೀಚೆಗೆ (ಸೆಪ್ಟೆಂಬರ್ 14, 2023) ಚುನಾವಣೆಗೆ ಒಳಪಟ್ಟಿರುವ ರಾಜ್ಯದಲ್ಲಿ ರೂ. 50,700 ಕೋಟಿಗೂ ಹೆಚ್ಚು ಮೊತ್ತದ ಯೋಜನೆಗಳಿಗೆ ಪ್ರಧಾನಿ ಸಂಕುಸ್ಥಾಪನೆ ಮಾಡಿದರು. ಇದು ವಿಟ್ರೋಕೆಮಿಕಲ್ ಸಂಕೀರ್ಣ, ಹತ್ತು ಹೊಸ ಕೈಗಾರಿಕಾ ಯೋಜನೆಗಳನ್ನು ಒಳಗೊಂಡಿದೆ. ಈ ಘೋಷಣೆಯು ಅಭಿವೃದ್ಧಿಗೆ ಉತ್ತೇಜನ

ಸೆಪ್ಟೆಂಬರ್ 18 ರಂದು, ತೆಲಂಗಾಣ ವಿಧಾನಸಭೆ ಚುನಾವಣೆಗೆ ಮುಂಚಿತವಾಗಿ 'ಮಹಾಲಕ್ಷ್ಮಿ'ಗಳನ್ನು ಘೋಷಿಸಿತು. ಮಹಿಳೆಯರಿಗೆ ಮಾಸಿಕ ರೂ. 2,500 ಆರ್ಥಿಕ ನೆರವು, ರೂ. 500 ದರದಲ್ಲಿ ಗ್ಯಾಸ್ ಸಿಲಿಂಡರ್, ರಾಜ್ಯ ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ, ರೈತರಿಗೆ ವಾರ್ಷಿಕ ರೂ. 15,000 ಆರ್ಥಿಕ ನೆರವು ಭರವಸೆ ನೀಡುವ ಯೋಜನೆಗಳು ತುಂಡು ಭೂಮಿಯೊಂದಿಗೆ ವಸತಿ ಯೋಜನೆ ಸೇರಿವೆ. ವಸತಿ ರಹಿತ ಬಡ ಕುಟುಂಬಗಳಿಗೆ ಮನೆ ನಿರ್ಮಾಣಕ್ಕೆ, ಪ್ರತಿ ಬಡ ಕುಟುಂಬಕ್ಕೆ ಎರಡು ನೂರು ಯೂನಿಟ್ ಉಚಿತ ವಿದ್ಯುತ್, ಹತ್ತು ಲಕ್ಷದವರೆಗೆ ಆರೋಗ್ಯ ವಿಮೆ ಮತ್ತು ಬಡತನದ ಹಿನ್ನೆಲೆಯಿಂದ ಬರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಲು ಐದು ಲಕ್ಷಗಳ ಆರ್ಥಿಕ ನೆರವು. ಈ ಎಲ್ಲಾ ಪ್ರಕಟಣೆಗಳು ಸಂಯೋಜಿತವಾಗಿ ಚುನಾವಣೆಗೆ ಮುನ್ನ ವ್ಯಾಪಕ ಪ್ರಚಾರವನ್ನು 'ಅಭಿವೃದ್ಧಿ ಮತ್ತು ಜನಪ್ರಿಯತೆ'ಯ ನೆಲೆಯಲ್ಲಿ ಪಡೆಯುತ್ತವೆ. ಈ ಪ್ರಚಾರವು ಅಲ್ಪಾವಧಿಯ ಮತ್ತು ದೀರ್ಘಾವಧಿಯ ಪ್ರಯೋಜನಗಳಿಗೆ ಸಂಬಂಧಿಸಿದಂತೆ ಹೊರಹೊಮ್ಮುತ್ತವೆ. ಸಾಮಾನ್ಯವಾಗಿ ಅಧಿಕಾರದಲ್ಲಿ ಇರುವ ರಾಜಕೀಯ ಪಕ್ಷಗಳ ಅಭಿವೃದ್ಧಿಯನ್ನು ಮೌಲ್ಯಮಾಪನ ಮಾಡುವುದು ಚುನಾವಣಾ



ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ

ಭರವಸೆಗಳಾಗಿ ನಮಗೆ ಕಾಣುತ್ತವೆ. ಇಲ್ಲಿ ಚುನಾವಣೆಗಳಲ್ಲಿ ತಮ್ಮ ತಮ್ಮ ಪಕ್ಷಗಳನ್ನು ಹೇಗಾದರೂ ಮಾಡಿ ಅಧಿಕಾರಕ್ಕೆ ತರಬೇಕು ಎನ್ನುವುದು ಸುಳ್ಳು ಅಭಿವೃದ್ಧಿಯನ್ನು ಒಮ್ಮೆಟ್ಟಿಸುತ್ತಿರೆ. ಜನಪ್ರಿಯತೆಯು ಚುನಾವಣೆಯಲ್ಲಿ ಅಭಿವೃದ್ಧಿ ದೀರ್ಘಾವಧಿಯ ಆದರ್ಶವಾಗಿದೆ.

ದಂಗಗ್ಸ್ಪರ್ಧಿಯ ಉತ್ತಮ ಅಭಿವೃದ್ಧಿಯನ್ನು ಸಾಧಿಸಬೇಕು ಎನ್ನುವುದರಲ್ಲಿ ಎರಡು ಪಾದಗಳಿವೆ. ಆರ್ಥಿಕ ಜನರ ಜೀವನದ ಗುಣಮಟ್ಟ ಮತ್ತು ಪರಿಸರದ ಸ್ಥಿರತೆಯ ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವುದು ಅವಶ್ಯ ವೇಗವರ್ಧಿತ ಅಭಿವೃದ್ಧಿಯ ಅವಶ್ಯಕತೆಯನ್ನು ಚುನಾವಣಾ ಭರವಸೆಯಂತೆ ಸುಲಭವಾಗಿ ಮಾರಾಟ ಮಾಡಬಾಗದಿದ್ದರೂ ಅಭಿವೃದ್ಧಿ ಕಾರ್ಯಕ್ರಮ ಮೂಲಕ ರೂಪಗೊಳ್ಳುತ್ತಿರುವ ಅಸಮಾನತೆಯನ್ನು ಮೌಲ್ಯಮಾಪನ ಮಾಡಬೇಕು. ಅಸಮಾನತೆಯನ್ನು ನುಜ್ಜುಗುಜ್ಜು ಮಾಡುವ ದಿಕ್ಕಿನಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಆದರೆ, ಚುನಾವಣೆಯ ಸಂತರದ ಅವಧಿಯಲ್ಲಿ ಅಸಮಾನತೆಗಳನ್ನು ಉಲ್ಬಣಿಸುವುದನ್ನು ನಿಯಂತ್ರಣಕ್ಕೆ ತರಲು ಚುನಾವಣೆಗೆ ಧ್ವನಿವರ್ಧಕದ ಬಗೆಗೆ ಚುನಾವಣಾ ಪ್ರಚಾರದಲ್ಲಿ ಎಲ್ಲಾ ಪಕ್ಷದವರು, ಅದರಲ್ಲಿಯೂ ವಿರೋಧ ಪಕ್ಷದವರು ಆಡಳಿತ [illegible] ಪಕ್ಷ ಮತ್ತು ವಿರೋಧ ಪಕ್ಷಗಳು ಭ್ರಷ್ಟಾಚಾರಗಳ ಬಗ್ಗೆ ಆರೋಪಗಳನ್ನು ಮಾಡುತ್ತಾರೆಯೇ ಹೊರತು, ಭ್ರಷ್ಟಾಚಾರ ತಡೆಗೆ ಯಾವುದೇ ಕಠಿಣ ಕ್ರಮಗಳನ್ನು ಜಾರಿಗೆ ತರುವ ರಚನಾತ್ಮಕ ಕ್ರಮಗಳನ್ನು ಮಾಡುವುದಿಲ್ಲ. ಆದರೆ ಭ್ರಷ್ಟಾಚಾರಕ್ಕೆ ಎಲ್ಲಾ ರಾಜಕೀಯ ಪಕ್ಷಗಳ ನಾಯಕರು ಸಾಕ್ಷಿ ಮತ್ತು ದಾಖಲೆಗಳನ್ನು ಕೇಳುತ್ತಾರೆ!

ಅಭಿವೃದ್ಧಿ ಮತ್ತು ಮೆಗಾ ಪ್ರಾಜೆಕ್ಟ್‌ಗಳು

ಅಭಿವೃದ್ಧಿಯನ್ನು ಮತದಾರರಿಗೆ ಆಕರ್ಷಕವಾಗುವಂತೆ ಮಾಡಲು ಇರುವ ಸುಲಭವಾದ ಮಾರ್ಗವೆಂದರೆ, ಅದನ್ನು ಗೋಚರಿಸುವ ಭೌತಿಕ ಮೂಲಸೌಕರ್ಯಗಳ ನೆಲೆಯಲ್ಲಿ ಸಂಕುಚಿತವಾಗಿ ವ್ಯಾಖ್ಯಾನಿಸುವುದು. ಅಂತಹ ಕಿರಿದಾದ ವ್ಯಾಖ್ಯಾನದ ಪ್ರಯೋಜನವೆಂದರೆ ಅವುಗಳನ್ನು ಸುಲಭವಾಗಿ ಪ್ರದರ್ಶಿಸಬಹುದು ಮತ್ತು ಅವುಗಳ ಸಾಧನೆಗಳನ್ನು ಪ್ರಮಾಣೀಕರಿಸಬಹುದು. ಭೌತಿಕ ಮೂಲಸೌಕರ್ಯ ಸೃಷ್ಟಿಯ ಪ್ರಮಾಣವು ಅಧಿಕವಾಗಿದ್ದರೆ ಅದು ಅಧಿಕಾರದಲ್ಲಿರುವ ಸರ್ಕಾರಗಳಿಗೆ ಪ್ರಯೋಜನವನ್ನು ಕರುತ್ತದೆ. ಜೊತೆಗೆ ಅಧಿಕಾರದಲ್ಲಿ ಇರುವವರಿಗೆ ಕಿಕ್‌ಬ್ಯಾಕ್ ಪಡೆಯಲು ಅನುಕೂಲವೂ ಆಗಿದೆ. ಈ ಪ್ರಕ್ರಿಯೆಗಳು ರಾಜಕೀಯ ಪಕ್ಷಗಳ ಮುಂದೆ ಮೂರು ಆಯ್ಕೆಗಳು ಇಡುತ್ತವೆ. ಅಧಿಕಾರಕ್ಕೆ ಬಂದರೆ ಇನ್ನೂ ಹೆಚ್ಚಿನ ಪ್ರಮಾಣದ ಮೆಗಾ ಪ್ರಾಜೆಕ್ಟ್‌ಗಳ ಸೃಷ್ಟಿಯ ಭರವಸೆ ನೀಡಲು; ಈಗಾಗಲೇ ರಚಿಸಲಾದ ಮೂಲಸೌಕರ್ಯದ ಅಸಮರ್ಪಕತೆಯನ್ನು ಎತ್ತಿ ತೋರಿಸುವುದು; ಅಭಿವೃದ್ಧಿಯಿಂದ ಹೊರಗುಳಿದ ಜನರನ್ನು ಒಳಗೊಳ್ಳಲು ದೊಡ್ಡ ಪ್ರಮಾಣದಲ್ಲಿ ಮೂಲಸೌಲಭ್ಯಗಳ ನವೀಕರಣವನ್ನು ಜನಪ್ರಿಯತೆಯ ನೆಲೆಯಲ್ಲಿ ಹೆಚ್ಚಿಸಿಕೊಳ್ಳುವುದು.

ಈ ರೀತಿ ಗೋಚರಿಸುವ ದೊಡ್ಡ ಪ್ರಮಾಣದ(ಮೆಗಾ ಪ್ರಾಜೆಕ್ಟ್) ಮೂಲಸೌಕರ್ಯಕ್ಕೆ ಅಭಿವೃದ್ಧಿಯನ್ನು ಸಮೀಕರಿಸುವುದು, ಕಾಲಾನಂತರದಲ್ಲಿ ಎರಡು ಕಾರಣಗಳಿಂದ ಅಪಾಯಕಾರಿಯಾಗಬಹುದು. ಮೊದಲನೆಯದಾಗಿ, ಮೆಗಾ ಪ್ರಾಜೆಕ್ಟ್‌ಗಳು ವಾಸ್ತವಿಕವಾಗಿ ನಿರ್ದಿಷ್ಟವಾದ ಭೌಗೋಳಿಕ ಪರಿಸರದ ಮೇಲೆ ಟೀರ್ಘಕಾಲೀನ ಪರಿಸರಾತ್ಮಕ ಬಿಕ್ಕಟ್ಟುಗಳನ್ನು ಉಂಟುಮಾಡುತ್ತವೆ. ದೊಡ್ಡ ಯೋಜನೆಗಳ ಪರಿಣಾಮಗಳು ಸಮಕಾಲೀನ ಜನ ಸಮುದಾಯ ಮತ್ತು ಮುಂದಿನ ತಲೆಮಾರಿನ/ಪೀಳಿಗೆಯ ಜೀವನೋಪಾಯ ಮೇಲೆ ಉಂಟುಮಾಡುವ ಗಂಭೀರವಾದ ಪರಿಣಾಮಗಳನ್ನು ಮೌಲೀಕರಿಸದೇ ಯೋಜನೆಯ ಮಹತ್ವವನ್ನು ಜನಪ್ರಿಯತೆಯ ನೆಲೆಯಲ್ಲಿ ನೋಡುವುದು. ಎರಡನೆಯದಾಗಿ, ಮೆಗಾ–ಮೂಲಸೌಕರ್ಯ ಯೋಜನೆಗಳಿಗೆ ಹಣಕಾಸು ಒದಗಿಸುವ ಕಾರ್ಯವಿಧಾನಗಳು ಸಾಮಾನ್ಯವಾಗಿ ಗುಣಾಕಾರ ಪರಿಣಾಮಗಳಿಂದ ಉತ್ಪ್ರೇಕ್ಷಿತ ಆದಾಯದ ಊಹೆಯ ಮೇಲೆ ಪ್ರತಿಪಾದಿಸಲಾಗುತ್ತದೆ. ಇವುಗಳ ಮೆಚ್ಚ ಪೂರ್ಣ ಪ್ರಮಾಣದ ಅನುಷ್ಠಾನದ ನೇರಗೆ ಯಾವುದೇ ಸಲಯಿಂದ ನೋಡಿದರೂ ಮಿತಿಮೀರಿದ ವೆಚ್ಚಗಳಾಗಿರುತ್ತವೆ. ಇಂತಹ ಹಣಕಾಸು ನೀತಿಗಳಿಂದ ಹಣಕಾಸಿನ ಹೊರೆಯು ಮಧ್ಯಮ ಅವಧಿಯಲ್ಲಿ ಹೊರಹೊಮ್ಮಲು ಪ್ರಾರಂಭಿಸುತ್ತವೆ. ಇಂತಹ ಪರಿಸ್ಥಿತಿಯನ್ನು ಪರಿಹರಿಸಲು ಹೆಚ್ಚುವರಿ ವೆಚ್ಚಗಳನ್ನು ವಿಧಿಸಲಾಗುತ್ತದೆ.

ಮೂರು ಉದಾಹರಣೆಗಳ ಮೂಲಕ ಮೇಲಿನದನ್ನು ಸ್ಪಷ್ಟಪಡಿಸಲು ಪ್ರಯತ್ನ ಮಾಡಲಾಗಿದೆ. ಮೊದಲನೆಯದಾಗಿ, ಜೂನ್ 24 ರಿಂದ ಜುಲೈ 10, 2023ರ ಅವಧಿಯಲ್ಲಿ ನಿರಂತರ ಮಳೆಯ ಹಿಮಾಚಲ ಪ್ರದೇಶದಲ್ಲಿ 41 ಭೂಕುಸಿತಗಳು, 29 ಹಠಾತ್ ಪ್ರವಾಹಗಳು ಸೇರಿ ಒಟ್ಟು ಮೊದಲ ಸ್ಫೋಟವು ಸಂಭವಿಸಿದೆ. ಕೊಡಿಸಿನಲ್ಲಿ ಭೂಕುಸಿತ, ಪಿಯಾಚಲ ಪ್ರದೇಶದ ಮಂಡಿಯಲ್ಲಿ ಭಾರಿ ಮಳೆ. ಮಡಿಕೇರಿಯಲ್ಲಿ ಭೂರಿ ಮಳೆ ಭೂಕುಸಿತ, ಬಿಯಾಸ್ ನದಿಯಲ್ಲಿ ಪ್ರವಾಹ. ಇವುಗಳನ್ನು ಪರಿಸರಾತ್ಮಕ ಬಿಕ್ಕಟ್ಟುಗಳು ಎಂದು ಕರೆಯಲಾಯಿತು. ಇಂದು ಹಿಮಾಚಲ ಪ್ರದೇಶವು ವಿವಿಧ ಪ್ರವಾಸಿ ಸ್ಥಳಗಳನ್ನು ಸಂಪರ್ಕಿಸುವ ಹಲವಾರು ಹೆದ್ದಾರಿ ರಸ್ತೆಗಳ ನಿರ್ಮಾಣದ ಮೂಲಕ 'ಅಭಿವೃದ್ಧಿ'ಯ ಓಟದಲ್ಲಿ ಸರ್ಕಾರಗಳು ಸಕ್ರಿಯವಾಗಿರುವುದು. ಇದರಿಂದಾಗಿ ಪರ್ವತ ಪ್ರದೇಶಗಳ ಭೌಗೋಳಿಕತೆಯು

Scanned with OKEN Scanner

ದುರ್ಬಲಗೊಳ್ಳುವುದು ಮತ್ತು ಯೋಜನೆಯಲ್ಲಿರುವ ಪರಿಸರೀಯ ಸಮಸ್ಯೆಗಳು ಗೋಚರಿಸಲಾರಂಭಿಸಿವೆ. ಎರಡನೆಯದು, ಉತ್ತರಾಖಂಡವು 2013ರಲ್ಲಿ ದೊಡ್ಡ ವಿಪತ್ತನ್ನು ಎದುರಿಸಿತು. ಕರ್ನಾಟಕವು ಅದರಿಂದ ಕಲಿಯಬೇಕಾದ ಪಾಠಗಳು 'ಪೂರ್ಣ ವಿರಾಮ' ಬಾಕಿವೆ. ಇಲ್ಲಿನ ಅನೇಕ ಹೆದ್ದಾರಿ ಯೋಜನೆಗಳಿಂದಾಗಿ ಅರಣ್ಯವನ್ನು ಮರುಸಾಮರ್ಥ್ಯ ಮಾಡಿಕೊಳ್ಳಲು ಕಾಲ ಧಾವಿಸುತ್ತಿದೆ. ಮೂರನೆಯದು, ಕರ್ನಾಟಕದಲ್ಲಿ 2022ರ ಆಗಸ್ಟ್ ತಿಂಗಳಿನಲ್ಲಿ ಬಿದ್ದ ಮಳೆಯ ಪರಿಣಾಮ ಪ್ರವಾಹವನ್ನು ಎದುರಿಸಲಾಯಿತು. ಆ ಸಮಯದಲ್ಲಿ ಬೆಂಗಳೂರಿನಲ್ಲಿ ಉಂಟಾದ ಪ್ರವಾಹದ ಪರಿಹಾರ ನಿರ್ವಹಣೆಗೆ ಒಂದೇ ಕಂತಿನಲ್ಲಿ ರೂ.300 ಕೋಟಿ ಹಣವನ್ನು ಕರ್ನಾಟಕ ಸರ್ಕಾರ ಬಿಡುಗಡೆ ಮಾಡಿತು. ಬೆಂಗಳೂರಿನಲ್ಲಿ ಮೇ 20 ಮತ್ತು 21, 2023 ರಂದು ಸುರಿದ ಮಳೆಯ ಪರಿಣಾಮವಾಗಿ ಬಹುತೇಕ ಅಂಡರ್‌ಪಾಸ್ ರಸ್ತೆಗಳಲ್ಲಿ, ಕೆಲವು ರಸ್ತೆಗಳಲ್ಲಿ ಗಂಟಾಗಟ್ಟಲೆ ನಿಂತ ನೀರಿನಿಂದ, ಕೆಲವು ವಸತಿ ಬಡಾವಣೆಗಳಲ್ಲಿ ಮನೆಗಳಿಗೆ ನೀರು ನುಗ್ಗಿದ್ದು ವರದಿಯಾಯಿತು. ಈ ಕುರಿತು 2022ರಲ್ಲಿ ಆಡಳಿತ ಪಕ್ಷವಾಗಿರುವವರು ಮತ್ತು ವಿರೋಧ ಪಕ್ಷದಲ್ಲಿ ಇದ್ದವರು, 2023ರಲ್ಲಿ ಅಧಿಕಾರ ಪಡೆದು ಆಡಳಿತ ಪಕ್ಷವಾಗಿರುವವರು ಮತ್ತು ವಿರೋಧ ಪಕ್ಷದಲ್ಲಿ ಇರುವವರು ಎಲ್ಲರೂ ಮಾತನಾಡುತ್ತಿದ್ದಾರೆ. ಆದರೆ ಸಮಸ್ಯೆ ಮಾತ್ರ ಹಾಗೆಯೇ ಉಳಿದುಬರುತ್ತಿದೆ. ಇದಕ್ಕೆ ಸಾರ್ವಜನಿಕ ಹಣ ಮಾತ್ರ ಪ್ರವಾಹಕ್ಕಿಂತಲೂ ಹೆಚ್ಚಿನ ವೇಗದಲ್ಲಿ ವೆಚ್ಚವಾಗುತ್ತಿದೆ. ಇವು ಇತ್ತೀಚಿನ ಮೆಗಾ ಅಭಿವೃದ್ಧಿ ಪ್ರಾಜೆಕ್ಟ್‌ಗಳ ಪರಿಣಾಮಗಳನ್ನು ಸೂಚಿಸುವ ಕೆಲವು ಉದಾಹರಣೆಗಳಲ್ಲಿ ಕೆಲವಷ್ಟೆ.

ಮೆಗಾ ಪ್ರಾಜೆಕ್ಟ್‌ಗಳ ಅಭಿವೃದ್ಧಿಯು ಪರಿಸರ ವಿಪತ್ತುಗಳಿಗೆ ಕಾರಣವಾಗುತ್ತದೆ. ಇಂತಹ ವಿಪತ್ತುಗಳು ಒಂದೇ ಬಾರಿ ಹೆಚ್ಚಳವಾದುಗಳಲ್ಲ. ಒಂದು ಕಡೆ ಈಚೆ ಕೆಲವು ದಶಕಗಳಿಂದ ರಾಜ್ಯ ವ್ಯವಸ್ಥೆಯು ಉಬ್ಬಿ ಬೆಳೆದ ಅಭಿವೃದ್ಧಿ ನೀತಿಯ ಅವಿರತ ಉತ್ಪ್ರೇಕ್ಷಿತ ಮತ್ತು ಅತಿಯಾದ ಅನುಸರಣೆಯ ಮಾರ್ಗವು ಎಲ್ಲಾ ರೀತಿಯ ವಿಪತ್ತುಗಳ ಸುರುಳಿಯನ್ನು ಸುತ್ತುತ್ತಿದೆ. ಮತ್ತೊಂದು ಕಡೆ ಹಣಕಾಸಿನ ಹೊರೆಯನ್ನು ನಿರಂತರವಾಗಿ ಹೆಚ್ಚಳವಾಗುತ್ತಿದೆ. ಹಣಕಾಸಿನ ಹೊರೆಯನ್ನು ನಿರ್ವಹಿಸುವಲ್ಲಿ, ದೇಶದ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಯ ಉನ್ನತ ಸಂಸ್ಥೆಯಾದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇಂಡಿಯಾ (ಎನ್.ಎಚ್.ಎ.ಐ/ಓ.ಆ.ಂ.ಸ) ಕಛೇರಿಗಳು, ನಿರ್ವಹಿಸುತ್ತಿರುವ ಪ್ರಾಜೆಕ್ಟ್‌ಗಳು ಹೇಗೆ ಆರ್ಥಿಕ ಹೊರೆಯಾಗುತ್ತಿವೆ ಎನ್ನುವುದನ್ನು ಬಹಿರಂಗಪಡಿಸುತ್ತವೆ. ಇತ್ತೀಚೆಗೆ ಕರ್ನಾಟಕದಲ್ಲಿ ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ಹೈವೇಯನ್ನು ನಿರ್ಮಾಣ ಮಾಡಲಾಗಿದೆ. ಆ ಎಕ್ಸ್‌ಪ್ರೆಸ್ ಹೈವೇಯ ನಿರ್ಮಾಣಕ್ಕೆ ತಗುಲಿರುವ ಅಂದಾಜು ವೆಚ್ಚ ಸುಮಾರು ರೂ.8480 ಕೋಟಿಗಳು. ಇದರಿಂದ 118 ಕಿಲೋ ಮೀಟರ್ ಕ್ರಮಿಸಲು ಹರುಲುತ್ತಿದ್ದ 3 ಗಂಟೆಗಳನ್ನು 90 ನಿಮಿಷಗಳಿಗೆ ಇಳಿಯುತ್ತವೆ ಎಂದು ಯೋಜನೆ ಪ್ರಸ್ತಾವನೆಯಲ್ಲಿ ಹೇಳಲಾಗಿದೆ/ಗುತ್ತಿದೆ. ಈ ಎಕ್ಸ್‌ಪ್ರೆಸ್ ಹೈವೇಯನ್ನು ಸಾರ್ವಜನಿಕ ಪ್ರಯಾಣಕ್ಕೆ ಮಾರ್ಚ್ 2023ರಲ್ಲಿ ಉದ್ಘಾಟಿಸಲಾಯಿತು. ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ರಸ್ತೆ ಪ್ರಯಾಣಕ್ಕೆ ಹೆಚ್ಚು ಸುರಕ್ಷಿತವಾಗಿಲ್ಲ. ಅಪಘಾತಗಳು ಹೆಚ್ಚಳವಾಗುತ್ತಿವೆ ಎನ್ನುವ ಆರೋಪಗಳು ಮತ್ತು ವಸ್ತುನಿಷ್ಠ ವರದಿಗಳು ಹೆಚ್ಚಾದವು.

ಈ ಹಿನ್ನೆಲೆಯಲ್ಲಿ ಎನ್.ಎಚ್.ಎ.ಐ.ಯು ಈ ಪದ್ಧತಿಯನ್ನು ಅತ್ಯಾಧುನಿಕ ತಂತ್ರಜ್ಞಾನದಲ್ಲಿ ನಿರ್ಮಿಸಲಾದ ಇದು ಹಾಲಿನ್ಯ ಚುಚುಮಟಿಕೆಗಳನ್ನು ಉತ್ತೇಜಿಸುವ ಮೂಲಕ, ಈ ಪ್ರದೇಶದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ವೇಗವರ್ಧಕವಾಗಿ ಕಾರ್ಯನಿರ್ವಹಿಸುತ್ತದೆ. ವೇಗವಾಗಿ ರೂಪಾಂತರಗೊಳ್ಳುತ್ತಿರುವ ರಸ್ತೆ ಮೂಲಸೌಲಭ್ಯಗಳು ವಿಶ್ವದರ್ಜೆಯ ರಾಷ್ಟ್ರೀಯ ಹೆದ್ದಾರಿ ಜಾಲವನ್ನು ರಚಿಸುವ ಎನ್.ಎಚ್.ಎ.ಐ.ಯ ಬದ್ಧತೆಗೆ ಈ ಎಕ್ಸ್‌ಪ್ರೆಸ್ ಹೈವೇ ಸಾಕ್ಷಿಯಾಗಿದೆ' ಎಂದು ರಸ್ತೆ ಮತ್ತು ಸಾರಿಗೆ ಸಚಿವಾಲಯವು ಮಾರ್ಚ್ 18, 2023ರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿತ್ತು. ಮಾರ್ಗ ಸುರಕ್ಷಿತ ಪ್ರಯಾಣವನ್ನು ಖಚಿತಪಡಿಸಿಕೊಳ್ಳಲು ಬೆಂಗಳೂರು - ಮೈಸೂರು ಹೆದ್ದಾರಿಯ ಸುರಕ್ಷತಾ ತಪಾಸಣೆಯನ್ನು

ಕೈಗೊಳ್ಳಲು ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್.ಎಚ್.ಎ.ಐ) ರಸ್ತೆ ಸುರಕ್ಷತಾ ಸಲಹಾ ಸಮಿತಿಯನ್ನು ರಚಿಸಿತು. ಆ ಸಮಿತಿಯು ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ಹೈವೇಯನ್ನು ಪರಿಶೀಲಿಸಿ, ಕೆಲವು ಅವ್ಯವಸ್ಥೆಗಳನ್ನು ಮುಚ್ಚಿಹೋಗಿದೆ ಕಾರಣಗಳಿಂದ ನಿರ್ದಿಷ್ಟ ಸ್ಥಳಗಳಲ್ಲಿ ಪರಿಹಾರವನ್ನು ಕಲ್ಪಿಸಿತು. ಈ ರಸ್ತೆಯಲ್ಲಿ ಉಂಟಾಗುತ್ತಿರುವ ಈ 10 ಅಪಘಾತಕಾರಿ ದ್ವಿಚಕ್ರವಾಹನಗಳು, ಆಟೋ ಮತ್ತು ಟ್ರಕ್ಕರ್‌ಗಳು ಕಾರಣವಾಗಿವೆ ಎನ್ನುವ ಕಾರಣ ನೀಡಿತು. ಜುಲೈ 31, 2023 ರಂದು ಕರ್ನಾಟಕ ಸಂಸ್ಥೆಗಳಿಗೆ ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ಹೈವೇಯಲ್ಲಿ ಸುರಕ್ಷತೆಯನ್ನು ಇನ್ನಷ್ಟು ಉತ್ತಮಗೊಳಿಸಲು ಮತ್ತು ಇಲ್ಲಿ ನಡೆಯುತ್ತಿರುವ ಅಪಘಾತಗಳನ್ನು ತಡೆಯುವ ದೃಷ್ಟಿಯಿಂದ ರೂ.118.81 ಕೋಟಿಗಳನ್ನು ಬೆಳ್ಳ ಮಾಡಲಾಗುವುದು ಎಂದು ತಿಳಿಸಿದ್ದರು. ಅಪಘಾತಗಳಿಗೆ ಕಾರಣವಾಗಿವೆ ಎಂದು ದ್ವಿಚಕ್ರವಾಹನಗಳು, ಆಟೋ ಮತ್ತು ಟ್ರಕ್ಕರ್‌ಗಳ ಪ್ರವೇಶವನ್ನು ಆಗಸ್ಟ್ 1, 2023 ರಿಂದ ನಿಷೇಧಿಸಲಾಗಿದೆ. ಇದ್ದಿ ನಮಗೆ ಎಲ್ಲಿಂದಲೂ ಪ್ರಶ್ನೆ ಇಷ್ಟು ದೊಡ್ಡಮಟ್ಟದ ಮೆಗಾ-ಪ್ರಾಜೆಕ್ಟ್/ಯೋಜನೆಯನ್ನು ಅಮಾಯಕ್ಕೆ ಕರುಣಾಗಿ ಬಿಡಿ ಇರುತ್ತದೆಯನ್ನು ವೈಜ್ಞಾನಿಕ ನೀತಿಗಳಲ್ಲಿ ಗಮನಕ್ಕೆ ತರಲು ಸಾಧ್ಯವಾಗಲಿಲ್ಲ? ಸ್ಥಳೀಯ ಮಟ್ಟದಲ್ಲಿ ಜನರು, ಆದರೆಲ್ಲಿಯೂ ಅಧಿಕೃತ ಸಲಹೆಗಳಲ್ಲಿ ಮತ್ತಿತರ ಪ್ರಾಣಿಗಳಿಗೆ ಕಟ್ಟು ಓಡಾಟಕ್ಕೆ ಬಳಸುವ ದ್ವಿಚಕ್ರವಾಹನಗಳು, ಆಟೋ ಮತ್ತು ಟ್ರಕ್ಕರ್‌ಗಳ ಪ್ರವೇಶವನ್ನು ನಿಷೇಧಿಸುವುದರಿಂದ. ಈ ರಸ್ತೆ ಬಡ ಮತ್ತಿಮೊತ್ತರ ಸಾಮಾಜಿಕ ಆರ್ಥಿಕ ಬದುಕಿಗೆ ದೆಂಬಲವಾಗಲು ಹೇಗೆ ಸಾಧ್ಯ? ಸ್ಥಳೀಯ ಜನರಿಗೆ ಈ ರಸ್ತೆಯನ್ನು ಮುಕ್ತವಾಗಿ ಪ್ರವೇಶ ಮಾಡುವ ಮತ್ತು ಬಳಸುವ ಅವಕಾಶವನ್ನೊದಗಿಸುವುದು ಸ್ಥಳೀಯ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ದೆಂಬಲವಾಗಲು ಸಾಧ್ಯವೇ? ಹೀಗಾಗಿ ಅಭಿವೃದ್ಧಿ ಎನ್ನುವುದು ಎಲ್ಲರನ್ನೂ ಒಳಗೊಳ್ಳದ ಜನಪ್ರಿಯ ರೂಪಕವಾಗಿ ಮಾತ್ರ ಉಳಿದಿದೆ.

ಇಂತಹ ಮೆಗಾ ಯೋಜನೆಗಳನ್ನು ನಿರ್ವಹಿಸುವ ಎನ್.ಎಚ್.ಎ.ಐ.ಯ ಹಣಕಾಸಿನ ಪರಿಸ್ಥಿತಿಯನ್ನು ಸ್ವಲ್ಪ ನೋಡುವುದಾದರೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಒಟ್ಟು ಸಾಲವು 2014ರಲ್ಲಿ ರೂ. 23,797 ಕೋಟಿಗಳಷ್ಟಿದ್ದು, ಎನ್.ಎಚ್.ಎ.ಐ.ಯ ಒಟ್ಟು ಸಾಲವು ಮಾರ್ಚ್, 2023ರ ಹೊತ್ತಿಗೆ ರೂ. 5,42,800 ಕೋಟಿಗಳಷ್ಟಾಗಿದೆ. ಸಾಲದ ಬಹುಪಾಲು 2014-18 ಮತ್ತು 2021-22ರ ನಡುವೆ ಮಾಡಿಕೊಂಡ ಯೋಜನೆಗಳ ಒಪ್ಪಂದಗಳದ್ದಾಗಿದೆ. ಬಾಂಡ್‌ಗಳ ಮೂಲಕ 112 ಭಾಗಗಳಲ್ಲಿ ಹಣವನ್ನು ಸಂಗ್ರಹಿಸಿದ್ದರಿಂದ ಎನ್.ಎಚ್.ಎ.ಐ.ಯ ಸಾಲ ಸೇವಾ ವೆಚ್ಚವು ನಿರಂತರವಾಗಿ ಹೆಚ್ಚುತ್ತಿದೆ. ಸಾಲದ ಹೊರತಾಗಿ, ಎನ್.ಎಚ್.ಎ.ಐ. ಅನಿಶ್ಚಿತ ಪೊತೆಗಾರಿಕೆಗಳನ್ನು ಸಹ ಹೊಂದಿದೆ. ಈ ಇತರ ಕಾರಣಗಳು ಪರಿಣಾಮಗಳು ಅಭಿವೃದ್ಧಿಯ ವ್ಯವಸ್ಥೆಯಲ್ಲಿ. ದೀರ್ಘಾವಧಿಯ ನಿರ್ಮಾಣಗಳನ್ನು ಹೇರುತ್ತವೆ. ಈ ಉದಾಹರಣೆಗಳು ಮೆಗಾ-ಮೂಲಸೌಕರ್ಯವನ್ನು ಅಭಿವೃದ್ಧಿಯ ಏಕಾನ್‌ಗಳಾಗಿ ಸಂಕೇತಿಸುವ ಗೀಳಿನ ಅಪಾಯಗಳನ್ನು ಎತ್ತಿ ತೋರಿಸುತ್ತವೆ.

ಜನಪರವಾದಕ್ಕೆ ಜಾಗವಿಲ್ಲ

ಜನಪ್ರಿಯತೆ ಎರಡು ಆಯಾಮಗಳನ್ನು ಹೊಂದಿದೆ. ಒಂದು ರಾಜಕೀಯ ಆಯಾಮ, ಮತ್ತೊಂದು ಆರ್ಥಿಕ ಆಯಾಮ. ಕಾರ್ಲಾರ್ಡ್ ವಿಶ್ವವಿದ್ಯಾನಿಲಯದ ಹಿರಿಯಾಂತ ರಾಜಕೀಯ ಅರ್ಥಶಾಸ್ತ್ರಜ್ಞ ಡ್ಯಾನಿ ರೋಡ್ರಿಕ್ ಪ್ರಕಾರ, ಜನಪ್ರಿಯತೆಯ "ವಿಶಿಷ್ಟ ಲಕ್ಷಣವೆಂದರೆ ಅದು 'ಜನರನ್ನು' ಪ್ರತಿನಿಧಿಸುತ್ತದೆ. ಜನಪ್ರಿಯತೆ



ಕೊಡಗಿನ ಭೂ ಕುಸಿತ



ಮಳೆಯಲ್ಲಿ ಮುಳುಗಿದ ಬೆಂಗಳೂರು

ಮಾತನಾಡುತ್ತದೆ ಎಂದು ಹೇಳಿಕೊಳ್ಳುತ್ತದೆ. ಇದು ಸಾಮಾನ್ಯ ಹಿತಾಸಕ್ತಿಯಿಂದ ವಿಕೀಕರಿಸಲ್ಪಟ್ಟಿದೆ. ಈ ಸಾಮಾನ್ಯ ಹಿತಾಸಕ್ತಿ, ಜನಪ್ರಿಯ ಇಚ್ಛೆಗೆ ಬದಲಾಗಿ ಜನರ ಶತ್ರುಗಳಾಗಿ ನಿರೂಪಿಸಲಾಗಿದೆ. ಅಲ್ಪಸಂಖ್ಯಾತರು ಮತ್ತು ವಿದೇಶಿಯರು (ಬಲಪಂಥೀಯ ಜನಪ್ರಿಯತೆಯ ಸಂದರ್ಭದಲ್ಲಿ) ಅಥವಾ ಆರ್ಥಿಕ ಗಣ್ಯರು (ಎಡಪಂಥೀಯ ಜನಪರವಾದಿಗಳ ಸಂದರ್ಭದಲ್ಲಿ) ವಿರುದ್ಧ ಹೊಂದಿಸಲಾಗಿದೆ. 'ಜನರನ್ನು' ಪ್ರತಿನಿಧಿಸುವುದಾಗಿ [illegible] ರಾಜಕೀಯ ಕಾರ್ಯಾಂಗದ ಮೇಲೆ ಇಟ್ಟಿರುವ ನಂಬಿಕೆಗಳನ್ನು ಅಪಹಾಸ್ಯ ಮಾಡಲಾಗುತ್ತಿದೆ. ಆಡಳಿತ ನಡೆಸುವವರು ತಮ್ಮ ಅಧಿಕಾರವನ್ನು ಚಲಾಯಿಸುವಾಗ ಜನಪ್ರಿಯ ಇಚ್ಛೆಯನ್ನು ಹಾಳುಮಾಡುವಂತೆ ಬಳಸುತ್ತಾರೆ. ಮುಂದುವರಿದು ಬಹುಸಂಖ್ಯಾತರಿಗೆ ಅಲ್ಪಸಂಖ್ಯಾತರ ಹಕ್ಕುಗಳ ಮೇಲೆ ಸವಾರಿ ಮಾಡಲು ಅನುವು ಮಾಡಿಕೊಡುವ ರಾಜಕೀಯ ಜನಪ್ರಿಯತೆಯ ವಿಶಿಷ್ಟ ಲಕ್ಷಣವಾಗಿದೆ. ಆರ್ಥಿಕ ನೀತಿಯ ನಡವಳಿಕೆಯ ಮೇಲಿನ ನಿರ್ಬಂಧಗಳಲ್ಲಿ ಸಾಮಾನ್ಯವಾಗಿ ಅಭಿವೃದ್ಧಿ ನೀತಿ ಆಯ್ಕೆಗಳನ್ನು ಜನಪ್ರಿಯವಾಗಿಸಿ ಸಂಕುಚಿತಗೊಳಿಸುತ್ತವೆ. ಆದಾಗ್ಯೂ, ಆರ್ಥಿಕ ನೀತಿಯ ಪರಿಸರ ನಿಯಮಗಳು ಮತ್ತು ನಿರ್ಬಂಧಗಳಿಗೆ ಆದ್ಯತೆ ನೀಡುತ್ತದೆ. ಏಕೆಂದರೆ ಆರ್ಥಿಕ ನೀತಿಗಳು ಹೆಚ್ಚಾಗಿ ರಾಜಕೀಯ ಪರಿಗಣನೆಗಳಿಂದ ರೂಪುಗೊಂಡಾಗ ಅಲ್ಪಾವಧಿಯ ಹಿತಾಸಕ್ತಿಗಳು ಮೇಲುಗೈ ಸಾಧಿಸುತ್ತವೆ. ಆರ್ಥಿಕ ನಿಯಮಗಳು ಮತ್ತು ನಿರ್ಬಂಧಗಳು ಅಧಿಕಾರದಲ್ಲಿರುವವರನ್ನು ದೂರದೃಷ್ಟಿಯ ನೀತಿಗಳನ್ನು ಅನುಸರಿಸದಂತೆ ತಡೆಯುವ ಸಾಧ್ಯತೆಗಳು ಇವೆ. ಆದರೆ, ಕೆಲವೊಮ್ಮೆ ನಿಯಮಗಳು ಮತ್ತು ನಿರ್ಬಂಧಗಳಿಗೆ ಅಚಲವಾದ ಬದ್ಧತೆಯು ಸಣ್ಣ ಗುಂಪುಗಳ ಹಿತಾಸಕ್ತಿಗಳನ್ನು ಮುನ್ನಡೆಸಲು ಸಹಾಯ ಮಾಡುವ ಜೊತೆಗೆ, ದೀರ್ಘಾವಧಿಯ ಪ್ರಯೋಜನಗಳನ್ನು ಪಡೆದುಕೊಳ್ಳಲು ತಾತ್ಕಾಲಿಕ ಪ್ರಯೋಜನವನ್ನು ಭದ್ರಪಡಿಸಲು ಅನುವು ಮಾಡಿಕೊಡುತ್ತದೆ. ಹೀಗಾಗಿ, ರಾಜಕೀಯ ಜನಪ್ರಿಯತೆಯ ಅನಿಯಂತ್ರಿತ ಬೆಳವಣಿಗೆಯನ್ನು ಪರಿಶೀಲಿಸುವಲ್ಲಿ ನಿಯಮಗಳು ಮತ್ತು ನಿರ್ಬಂಧಗಳು ಪ್ರಮುಖವಾಗಿದ್ದರೂ, ಆರ್ಥಿಕ ಜನಪ್ರಿಯತೆಯ ವಿಸ್ತರಣೆಯನ್ನು ಮೊಟಕುಗೊಳಿಸಲು ದೂರದೃಷ್ಟಿಯ ವಿವೇಚನೆಯೊಂದಿಗೆ ಕಠಿಣ ನಿಯಮಗಳ ಮಿಶ್ರಣದ ರಾಜಕೀಯ ಇಚ್ಛಾಶಕ್ತಿಯ ಅಗತ್ಯವಿದೆ.

ಆರ್ಥಿಕ ಬೆಳವಣಿಗೆಯ ಸಾಂಪ್ರದಾಯಿಕ ಮಾದರಿಗಳು ವಿತರಣೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಿಲ್ಲ. ಏಕೆಂದರೆ ಇದು ಬೆಳವಣಿಗೆಯ ಅಂತರ್ಗತ ಪರಿಣಾಮವಾಗಿದೆ ಎಂದು ಸಂಪ್ರದಾಯ ಅಭಿವೃದ್ಧಿ ಮಾದರಿಯಲ್ಲಿ ಹೇಳಲಾಗಿದೆ. ಬೆಳವಣಿಗೆಯ ಪ್ರಯೋಜನಗಳು 'ಟ್ರಿಕಲ್-ಡೌನ್ ಎಫೆಕ್ಟ್' ಮೂಲಕ ಎಲ್ಲರಿಗೂ ಜಿನುಗುತ್ತದೆ ಎಂದು ಈ ಮಾದರಿಗಳು ಊಹಿಸಿವೆ. ಅಂದರೆ, ಬೆಳವಣಿಗೆಯು 'ಎಲ್ಲ ದೋಣಿಗಳನ್ನು ಎತ್ತುವ ಎತ್ತರದ ಅಲೆ' ಎಂದು ಸಾಂಪ್ರದಾಯಿಕ ಮಾದರಿಯಲ್ಲಿ ನಿರೂಪಿಸಲಾಗಿದೆ. ಈ ವಿಷಯಗಳ ಯೋಜನೆಯಲ್ಲಿ, ಜನಪ್ರಿಯ ಮರು-ಹಂಚಿಕೆ ನೀತಿಗಳು ಸ್ಥಾನ ಪಡೆಯುವುದಿಲ್ಲ. ಆದಾಗ್ಯೂ, ಆರ್ಥಿಕ ಬೆಳವಣಿಗೆಯ ಅನುಭವವು ಬೆಳವಣಿಗೆಯ ಪ್ರಯೋಜನಗಳ ಜನಪ್ರಿಯತೆ ಅಷ್ಟು ಸುಲಭವಾಗಿ ಕಡಿಮೆಯಾಗುವುದಿಲ್ಲ. ಆರ್ಥಿಕ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಒಟ್ಟು ಜನಸಂಖ್ಯೆಯ ಕೆಲವು ಜನರು 'ಹೊರಗಿನವರು' ಆಗುತ್ತಾರೆ. ಕೆಲವೇ ಕೆಲವರು ಅತಿ ಹೆಚ್ಚು ಆಸ್ತಿ, ಸಂಪತ್ತು ಮತ್ತು ಭೂಮಿಯನ್ನು ಗಳಿಸಿದರೆ, ಹೆಚ್ಚಿನವರು ಭೂಮಿಯಿಂದ ಮತ್ತು ಅಗತ್ಯ ಜೀವನೋಪಾಯಗಳಿಂದ ವಂಚಿತರಾಗುತ್ತಿದ್ದಾರೆ.

ಜಾಗತಿಕ ಜನಸಂಖ್ಯೆಯ ಅರ್ಧದಷ್ಟು ಜನರು ಜಗತ್ತಿನ ಸಂಪತ್ತಿನಲ್ಲಿ ಕೇವಲ ಶೇ.2ರಷ್ಟು ಅನ್ನು ಹೊಂದಿದ್ದಾರೆ. ಆದರೆ ಜಾಗತಿಕ ಜನಸಂಖ್ಯೆಯ ಶೇ.10ರಷ್ಟು ಶ್ರೀಮಂತರು ಎಲ್ಲಾ ರೀತಿಯ ಸಂಪತ್ತಿನಲ್ಲಿ ಶೇ.76ರಷ್ಟನ್ನು ಹೊಂದಿದ್ದಾರೆ. ಭಾರತದ ಜನಸಂಖ್ಯೆಯ ಮೇಲ್ ಪದರದಲ್ಲಿ ಇರುವ ಶೇ.10ರಷ್ಟು ಜನರು ರಾಷ್ಟ್ರದ ಸಂಪತ್ತಿನಲ್ಲಿ ಶೇ.77ರಷ್ಟನ್ನು ಹೊಂದಿದ್ದಾರೆ. 2017 ರಲ್ಲಿ ಉತ್ಪತ್ತಿಯಾದ ಶೇ.73 ರಷ್ಟು ಸಂಪತ್ತು ಶೇ.1 ರಷ್ಟು ಶ್ರೀಮಂತರ ಪಾಲಾಗಿದೆ. ಆದರೆ ಭಾರತದಲ್ಲಿ ಸುಮಾರು 67 ಕೋಟಿ ಜನರ ಸಂಪತ್ತಿನಲ್ಲಿ ಶೇ.1ಕ್ಕಿಂತಲೂ ಕಡಿಮೆ ಹೆಚ್ಚಳವನ್ನು ಕಂಡಿದ್ದಾರೆ. ಅಂದರೆ ಹಣಕಾಸು ಬಂಡವಾಳ ನಿರ್ದೇಶಿತ ಮಾರುಕಟ್ಟೆ ಪ್ರಪಂಚದಲ್ಲಿ ಹಣ ಇರುವ ಜನರು, ಅದರಲ್ಲೂ ನಿಯಮಿತ ಸಂಪನ್ಮೂಲಗಳು ಅಗತ್ಯವಿದ್ದಾಗ ನಿರ್ದಿಷ್ಟವಾಗಿ ಬೆಲೆಯ ಪರಿಣಾಮಕ್ಕಿಂತಲೂ ಅದರ ಮೌಲ್ಯದ ಬಗ್ಗೆ ದೃಢವಾಗಿರುತ್ತಾರೆ. ರೈತರಿಗೆ ತಮ್ಮ ಭೂಮಿಯ ಹಕ್ಕುಗಳನ್ನು ಉಳಿಸಿಕೊಳ್ಳಲು ಅಗತ್ಯವಾದ ಹಣಕಾಸು ಸಂಪನ್ಮೂಲ ಇಲ್ಲವಾಗಿದೆ. ಜನಸಾಮಾನ್ಯರು, ಬಹುತೇಕ ದುಡಿಯುವ ವರ್ಗ ಹಾಗೂ ಅನೌಪಚಾರಿಕ ವಲಯದಲ್ಲಿ ದುಡಿಯುತ್ತಿರುವವರು ಹಾಗೂ ಶ್ರೇಣೀಕೃತ ಸಮಾಜದಲ್ಲಿ ತಳಮಟ್ಟದಲ್ಲಿ ಇರುವ ಜನರು ಆಧುನಿಕ ಪರಿಭಾವನೆಯಾದ ಖಾಸಗಿ ಸಂಪತ್ತಿನಿಂದ ದೂರವಿದ್ದಾರೆ. ಮತ್ತೊಂದು ಕಡೆಯಲ್ಲಿ ಅನಿಯಮಿತ ಹಣ ಹೊಂದಿರುವ ಕೆಲವರು ತಮ್ಮ ಇಚ್ಛೆಗೆ ಪೂರಕವಾದ ನಿರ್ದಿಷ್ಟ ಪ್ರದೇಶ/ವಲಯಗಳಲ್ಲಿ ಭೂಮಿಯನ್ನು ಪಡೆದುಕೊಳ್ಳುತ್ತಿದ್ದಾರೆ. ಇದರ ಜೊತೆಗೆ ಸರ್ಕಾರಗಳು ಕೂಡ ಭೂಮಿ ಹೊಂದುವ ಬಂಡವಾಳಶಾಹಿಗಳ ಆಕಾಂಕ್ಷೆಯನ್ನು ಸರಳ ಮಾಡಿವೆ. ಅಂತಹ ಹೊರಗಿನವರ ಗಾತ್ರವನ್ನು ಕಡಿಮೆ ಮಾಡಲು ಮತ್ತು ಬೆಳವಣಿಗೆಯ ಪ್ರಯೋಜನಗಳನ್ನು ಹೆಚ್ಚು ಸಾಮಾಜಿಕ ನ್ಯಾಯದ ನೆಲೆಯಲ್ಲಿ ಹಂಚಲು ಸರ್ಕಾರದ ನೇತೃತ್ವದ ಕಾನೂನಾತ್ಮಕ ಪುನರ್ ಹಂಚಿಕೆಯ ಅಗತ್ಯವಿದೆ. ಈ ಸಂದರ್ಭದಲ್ಲಿ ಆರ್ಥಿಕ ಜನಪ್ರಿಯತೆಯ ತಾರ್ಕಿಕತೆಯು ಉದ್ಭವಿಸುತ್ತದೆ.

ಜನಪ್ರಿಯ ಭೌತಿಕ ಮೂಲಸೌಕರ್ಯಗಳ ಅಭಿವೃದ್ಧಿಯು, ಹಣಕಾಸಿನ ವೆಚ್ಚಗಳನ್ನು ಹೆಚ್ಚಿಸುತ್ತಿದೆ. ಇದರಿಂದ ನಿರ್ದಿಷ್ಟವಾಗಿ ಪರಿಸರಾತ್ಮಕ ವೆಚ್ಚಗಳು ಹೇರುತ್ತಿವೆ. ಈ ವೆಚ್ಚಗಳು ಭವಿಷ್ಯದಲ್ಲಿ ಬಹುಜನರ ಅಭಿವೃದ್ಧಿಯನ್ನು ಬಂಧಿಸುವ ಕೆಲಸ ಮಾಡಬಹುದು. ಹೀಗಾಗಿ ಪರಿಸರಾತ್ಮಕ ಸೂಕ್ಷ್ಮತೆಗಳನ್ನು ಒಳಗೊಂಡ ಮೂಲಸೌಲಭ್ಯ ಅಭಿವೃದ್ಧಿ ದೀರ್ಘಾವಧಿ ವ್ಯವಸ್ಥೆಯಲ್ಲಿ ಉಳಿಯುತ್ತವೆ. ಸಂಕುಚಿತವಾಗಿ ವ್ಯಾಖ್ಯಾನಿಸಲಾದ ಬೃಹತ್ ಆಕಾರದಲ್ಲಿ ಗೋಚರಿಸುವ ಮೆಗಾಪ್ರಾಜೆಕ್ಟ್ ಸುಸ್ಥಿರ ಅಭಿವೃದ್ಧಿಗೆ ವ್ಯತಿರಿಕ್ತವಾಗಿದೆ. ಬೃಹತ್ ಗಾತ್ರದ ಭೌತಿಕ ಮೂಲಸೌಕರ್ಯ ಅಭಿವೃದ್ಧಿಯ ಅಪಾಯಕಾರಿ ಗೀಳನ್ನು ತಡೆಯದಿದ್ದರೆ, ಭೌತಿಕ ಸಂಪತ್ತಿನಲ್ಲಿ ಉಂಟಾಗುವ ಗುಣಾಕಾರ ಮಾದರಿಯ ಹೆಚ್ಚಳವು ಮಾತ್ರ 'ಉಳ್ಳವರು' ಮತ್ತು 'ಇಲ್ಲದವರ' ನಡುವಿನ ಅಸಮಾನತೆಯನ್ನು ತೀವ್ರಗತಿಯಲ್ಲಿ ಹಿಗ್ಗಿಸುತ್ತಲೇ ಇರುತ್ತದೆ. ಇದರಿಂದ ಇಡೀ ಸಾಮಾಜಿಕ ವ್ಯವಸ್ಥೆಯು ತೀವ್ರತರವಾದ ಘಾಸಿಗೆ ಮತ್ತು ಆಳವಾದ ಗಾಯಗಳಿಗೆ ಒಳಗಾಗುತ್ತೆ. ಹೀಗೆ ಉಂಟಾಗುವ ಸಾಮಾಜಿಕ ಗಾಯಗಳ ತೀವ್ರತೆಯಿಂದ ರಕ್ತಸ್ರಾವ ಹೆಚ್ಚುದಾಗ ಅಂತಿಮವಾಗಿ ಇಡೀ ಸಾಮಾಜಿಕ ವ್ಯವಸ್ಥೆ ಸಾಯುವ ಅಪಾಯವಿದೆ.

ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರು. ಅಭಿವೃದ್ಧಿ ಸಮಾಜಶಾಸ್ತ್ರ, ಪರ್ಯಾಯ ಅಭಿವೃದ್ಧಿ ದೃಷ್ಟಿಕೋನಗಳಲ್ಲಿ ವಿಶೇಷ ಆಸಕ್ತಿ ಇಪ್ಪತ್ತೆರಡು ಸಂಶೋಧನಾ ಯೋಜನೆಗಳನ್ನು ಪೂರ್ಣಗೊಳಿಸಿ, ಸ್ವತಂತ್ರವಾಗಿ ಹದಿಮೂರು ಪುಸ್ತಕಗಳನ್ನು, ಎವತ್ತಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಇತ್ತೀಚೆಗೆ ಕೋವಿಡ್-19: ಬಿಕ್ಕಟ್ಟಿನ ಒಳ-ಹೊರಗು, ಪುಸ್ತಕವನ್ನು, ಸುಸ್ಥಿರ ಅಭಿವೃದ್ಧಿ ಗುರಿಗಳ ಮುನ್ನೋಟ -2030: ಕರ್ನಾಟಕದ ಕಾರ್ಯತಂತ್ರಗಳು ಮತ್ತು ಕ್ರಿಯಾ ಯೋಜನೆ, ಪ್ರಕಟಿಸಿದ್ದಾರೆ. ಇವರು ವೈವಿಧ್ಯಮಯ ಸಂಶೋಧನಾ ಅಧ್ಯಯನ ಕ್ಷೇತ್ರಗಳಲ್ಲಿ ಹೊಂದಿರುವ ಬಹುಶಿಸ್ತೀಯ ಜ್ಞಾನವು ಸಮಾಜದ ಬಗ್ಗೆ ಕಾಳಜಿಯನ್ನು ತೋರಿಸುತ್ತವೆ.

ISSN 2454-6054

ಸಂವಾದ

ಜನವರಿ 2024 ರೂ. 40

ಮಹಿಳಾ
ಮೀಸಲಾತಿಯ
ಬೂಟಾಟಿಕೆ



[illegible] ರಸ್ತೆಗೆ ಸುಕ್ಷೀಂ ಕೋರ್ಟ್ ಸಮ್ಮತಿ:

ರಾಜ್ಯಗಳ ಹಕ್ಕುಗಳಿಗೆ ಅಮರಿದ ಗಂಡಾಂತರ

ಸಂವಾದ

ಮಾಸಿಕ ಪತ್ರಿಕೆ

ಸಂಪುಟ 22 ಸಂಚಿಕೆ 03

ಜನವರಿ 2024

ಸಂಪಾದಕ:
ಇಂದುಧರ ಹೊನ್ನಾಪುರ

ಸಂಪಾದಕೀಯ ಬಳಗ:
ಡಾ ನಿಜಾಮ್ ಮೈಯಾರ್
ಮೊಗ ರಹಮತ್ ತರೀಕೆರೆ
ಡಾ ಕೆ. ಮುಬ್ಬಾಸಿ
ಡಾ ಬಿ. ಶ್ರೀನಿವಾಸ್
ಡಾ ಬಿ.ಯು. ಸುಮಾ
ಬಿ. ಶ್ರೀಪಾದ್ ಭಟ್
ಡಾ ಅರುಣ್ ಜೋಳದಕೂಡ್ಲಿಗಿ
ಪಿ.ಎಲ್. ಡಾವಣಗೆರೆ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು ೫೬೦ ೦೯೧

EDITOR:
INDUDHARA HONNAPURA

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE 560 091

✆ Circulation: 9108830437
9945264687

✆ Editorial: 9448048306

email Editorial
samvaadapatrike@gmail.com
samvaada@hotmail.com

Circulation :
samvaadacirculation@gmail.com

ಒಳಪುಟಗಳಲ್ಲಿ

- ಪತ್ರಗಳು — ೦೪
- ಸಂಪಾದಕೀಯಕ್ಕೆ ಸಂವಾದ
  - ನಾ. ದಿವಾಕರ — ೦೬
  - ಆರ್. ಜಯಕುಮಾರ — ೦೭
- ಸ್ವಾಮಿ ಸಂಕಲ್ಪಾನಂದ ಮೇಲೆ 'ಭೂತ' ಆರೋಪಿಸಿದ ಕ್ರೌರ್ಯದ ಬಳಲಿಕೆಗಾತ್ಮಿಯ ಸ್ವಾಮಿಜಿ ನಿರಪರಾಧಿ ಆಗಬೇಕು
  - ಆರ್. ಬಿ ಗುರುಬಸವರಾಜ — ೦೮
- ಬೆಳ್ಳಾಗಾಗಿರುವುದು ಮಹಿಳೆಯಲ್ಲ ನಾಗರಿಕ ಸಮಾಜ...
  - [illegible] — ೧೦
- ಕಾಮಿಡಿಯಾಯ ಘಟನೆಯಲ್ಲಿ ಕಂಡಂತೆ ಮೀಲು ಬಮಿಕೆ ಸಾಧನೆಯ ಓರಿಮೆ
  - ಆಶ್ವಿನಿ ಮದನಕರ — ೧೨
- ಭಾರತೀಯರಾದ ನಾವೂ... ನಮ್ಮೊಳಗಿರುವ ಬಂಧಿಸಿದವರೂ...
  - ಡಾ. ಡಿ ಆರ್ ದೇವರಾಜ್ — ೧೪
- ಜಾತಿವಸ್ತುತಿಯು ದೇಶದ್ರೋಹಿ ಜಾತಿಗಣತಿಯು ದೇಶಪ್ರೇಮಿ
  - ಸಾಕ್ಷಿ ಸಮಾಚಾರ — ೧೬
- ಮೋದಿ ಆದೇಶದ ಅವಧಿಯಲ್ಲಿ ನಿತ್ಯ 30 ರೈತರ ಆತ್ಮಹತ್ಯೆ
  - ಅನಿರ್ಬನ್ ಭಟ್ಟಾಚಾರ್ಯ, ಪ್ರಸಾದ್ ರಾಜ್, ಸ್ವಾಮಿ ಪಾಠಕ್ — ೨೦
- ಪಂಚ ರಾಜ್ಯಗಳ ಚುನಾವಣಾ ಫಲಿತಾಂಶ: ಸೋತ ಪ್ರಬುದ್ಧಭಾರತ
  - ಬಿ ಶ್ರೀಪಾದ ಭಟ್ — ೨೨
- ಮಹಿಳಾ ಮೀಸಲಾತಿ ಬಜೆಟಿಯ ಮತ್ತೊಂದು ಬೂಟಾಟಿಕೆ
  - ಕ್ರಿಷ್ಣನ್ ಖ' ರೋಜಾರಿಯೋ — ೨೪











- ಅಪರಾಧಗಳ ಪ್ರಪಂಚವೂ ಲಿಂಗ ಸೂಕ್ಷ್ಮತೆಯ ಕೊರತೆಯೂ
  - ನಾ ದಿವಾಕರ — ೩೦
- 370ನೆಯ ಅನುಚ್ಛೇದ ರದ್ದಿಗೆ ಸುಪ್ರೀಂ ಸಮ್ಮತಿ: ರಾಜ್ಯಗಳ ಹಕ್ಕುಗಳಿಗೆ ಅಮರಿದ ಗಂಡಾಂತರ
  - ಬಿ ಉಮಾಪತಿ — ೩೪
- ಆರ್ಥಿಕ ವಿಜ್ಞಾನದ ನೀತಿಗಳಲ್ಲಿ ನೈತಿಕ, ಪಾರಿಸರಿಕ ಪರಿಗಣನೆಗಳು
  - ಡಾ. ಎಚ್ ಬಿ ಪ್ರಭಾಕರ್ — ೩೮
- ಅಂಬೇಡ್ಕರ್ ಅಮಮ-ಇಂದು
  - ಪವಿತ್ರಾ ರಾಜೇಂದ್ರನ್ — ೪೪
- ಲೋಕಾವಲೋಕನ-32
  - ಸ್ವಾ ಸಾಮಮೋಹನ ದಾಸ್ — ೪೬
- ಸೆಲಬ ಕಣ್ಣು-41
  - ಮಲ್ಲಿಗೆ ಬಮಾಪತಿ — ೫೦
- Just Asking
  - ವಿಮಸಾಂಬರ್ — ೫೪
- ಹೊಸ ಪುಸ್ತಕ — ೫೮
- ಇನ್ನು ಸಿಂಗಂಬಿ — ೦೫

ಮುಖಪುಟ ವಿನ್ಯಾಸ: ಮುರಳೀಧರ ರಾಘೋಟ್
(ಆಧ್ಯಕ್ಷ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

Scanned with OKEN Scanner

ಆರ್ಥಿಕ ವಿಜ್ಞಾನದ ನೀತಿಗಳಲ್ಲಿ ನೈತಿಕ, ಬೌದ್ಧಿಕ ಬಿಕ್ಕಟ್ಟುಗಳು



ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಹಿರಿಯ ಪ್ರಾಧ್ಯಾಪಕರು. ಅಭಿವೃದ್ಧಿ ಸಮಾಜಶಾಸ್ತ್ರ, ಪರ್ಯಾಯ ಅಭಿವೃದ್ಧಿ ದೃಷ್ಟಿಕೋನಗಳಲ್ಲಿ ವಿಶೇಷ ಆಸಕ್ತಿ ಇಪ್ಪತ್ತೆರಡು ಸಂಶೋಧನಾ ಯೋಜನೆಗಳನ್ನು ಪೂರ್ಣಗೊಳಿಸಿ, ಸ್ವತಂತ್ರವಾಗಿ 13 ಪುಸ್ತಕಗಳನ್ನು ಮತ್ತು ಹಲವು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಇತ್ತೀಚೆಗೆ ಕೋವಿಡ್-19: ಬಿಕ್ಕಟ್ಟಿನ ಒಳನೋಟ, ಪುಸ್ತಕವನ್ನು ಸ್ಮಿತೆ ಅಭಿವೃದ್ಧಿ ಸುವರ್ಣ ಮುನ್ನೋಟ-2030: ಕರ್ನಾಟಕದ ಕಾರ್ಯತಂತ್ರಗಳು ಮತ್ತು ಕ್ರಿಯಾ ಯೋಜನೆ ಪ್ರಕಟಿಸಿದ್ದಾರೆ.

ಡಾ. ಎಚ್ ಡಿ ಪ್ರಶಾಂತ್
Email: gajaasya@gmail.com

ನಮ್ಮ ಸಂವಿಧಾನದ ಆಶಯ, ಭಾರತದಲ್ಲಿ ಎಲ್ಲರೂ ಘನತೆಯಿಂದ ಸಮಾನವಾಗಿ ಕಲಿಯುವ ಮತ್ತು ಗಳಿಸುವ ಅವಕಾಶವಿರುವ ಆರ್ಥಿಕ ಬೆಳವಣಿಗೆಯನ್ನು ಸೃಷ್ಟಿಸಬೇಕು ಎನ್ನುವುದು. ಆದರೆ ಅಭಿವೃದ್ಧಿ ಮತ್ತು ಆರ್ಥಿಕ ಬೆಳವಣಿಗೆ ಕುರಿತು ನಾವು ಗಮನಿಸುತ್ತಿರುವ ನಿದರ್ಶನಗಳು ಭಾರತದ ಆರ್ಥಿಕ ನೀತಿಗಳು ನೈತಿಕ ಮತ್ತು ಬೌದ್ಧಿಕ ಬಿಕ್ಕಟ್ಟುಗಳಿಂದ ಕೂಡಿರುವುದನ್ನು ತಿಳಿಸುತ್ತವೆ. ಇದನ್ನು ಮೂರು ಪ್ರಮುಖ ನಿದರ್ಶನಗಳ ಮೂಲಕ ವಿಶ್ಲೇಷಣೆ ಮಾಡಲು ಈ ಲೇಖನದಲ್ಲಿ ಪ್ರಯತ್ನ ಮಾಡಲಾಗಿದೆ. ಮೊದಲ ನಿದರ್ಶನವೆಂದರೆ ದಾವೋಸ್‌ನಲ್ಲಿ 2023 ಜನವರಿ ಮೂರನೇ ವಾರದಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆಯ ಚರ್ಚೆಗಳು. ಎರಡನೇ ನಿದರ್ಶನ ಹಂಪಿಯಲ್ಲಿ ಜುಲೈ 9 ರಿಂದ 12, 2023ರ ವರೆಗೆ ನಡೆದ ಜಿ-20 ಸಾಂಸ್ಕೃತಿಕ ವರ್ಕಿಂಗ್ ಗ್ರುಪ್ (Cultural Working Group)ನ ಸಮಾವೇಶದ ಸ್ವರೂಪ. ಮೂರನೇ ನಿದರ್ಶನ ದೆಹಲಿಯ ಭಾರತ ಮಂಟಪದಲ್ಲಿ ಸೆಪ್ಟೆಂಬರ್ 9 ಮತ್ತು 10, 2023 ನಡೆದ ಜಿ-20 ಶೃಂಗಸಭೆ ಸುದ್ದಿಗಳು.

ಬೆಳವಣಿಗೆ ಉದ್ಯೋಗವನ್ನು ಸೃಷ್ಟಿಸುವುದೇ:

ದಾವೋಸ್‌ನಲ್ಲಿ 2023 ಜನವರಿ ಮೂರನೇ ವಾರದಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆಯು ಚರ್ಚೆಯಲ್ಲಿ ಭಾರತವು 10 ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನು ಸಾಧಿಸುವ ಮಾರ್ಗಗಳು ಎನ್ನುವ ಅಧಿವೇಶನದಲ್ಲಿ ಟಾಟಾ ಸನ್ಸ್ ಅಧ್ಯಕ್ಷರು, ಮಾತನಾಡಿ 'ನನಗೆ, ಬೆಳವಣಿಗೆ, ಬೆಳವಣಿಗೆ ಮತ್ತು ಬೆಳವಣಿಗೆ ಮೂರು ವಿಷಯಗಳು ಪ್ರಮುಖವಾಗಿವೆ' (For me, the three things most important are growth, growth, and growth) ಎಂದು ಹೇಳಿದರು. ಭಾರತದ ಜಿಡಿಪಿ ಬೆಳವಣಿಗೆಯ ಸರಾಸರಿ ದರವು 2006 ರಿಂದ 2023ರವರೆಗೆ ಶೇ.6.21 ರಷ್ಟು ಇದೆ. 2020ರಲ್ಲಿ ಕೋವಿಡ್-19 ಲಾಕ್‌ಡೌನ್‌ನಿಂದ ಜಿಡಿಪಿ ಬೆಳವಣಿಗೆಯ ದರವು ಶೇ.-5.80 ಸಾರ್ವಕಾಲಿಕ ಕುಸಿತವನ್ನು ಕಂಡಿತು. ತದನಂತರ 2021ರಲ್ಲಿ ಸಾರ್ವಕಾಲಿಕ ಗರಿಷ್ಠ ಶೇ.9.10 ದಾಖಲೆಯ ಬೆಳವಣಿಗೆಯ ದರವನ್ನು ತಲುಪಿದೆ. 2022ರಲ್ಲಿ ಶೇ 7 ದರದಲ್ಲಿ, 2023ರ ಶೇ.6.5 ದರದಲ್ಲಿ ಆರ್ಥಿಕ ಬೆಳವಣಿಗೆ ಇದೆ. ಈ ಬೆಳವಣಿಗೆ ದರವು ಆರ್‌ಬಿಐನ ನಿರೀಕ್ಷೆಗಳನ್ನು ಮೀರಿದೆ. ಈ ರೀತಿಯಲ್ಲಿ ಭಾರತ ಆರ್ಥಿಕ ಬೆಳವಣಿಗೆಯ ದರವು ನಿರಂತರವಾಗಿ ಏರುಮುಖದ ಬೆಳವಣಿಗೆಯನ್ನು ಕಂಡಿದ್ದರೂ ಸಹ ಉದ್ಯೋಗವನ್ನು ಸೃಷ್ಟಿಸುವಲ್ಲಿ ನಾವು ನಿರೀಕ್ಷಿತ ಸಾಧನೆಯನ್ನು ಮಾಡಲಾಗಿಲ್ಲ.

ಅದರಲ್ಲಿ ದುಡಿಯುವ ಸಾಮರ್ಥ್ಯ/ವಯೋಮಾನದ ಯುವಕರಿಗೆ ಉದ್ಯೋಗವನ್ನು ನೀಡಲು ಸಾಧ್ಯವಾಗಿಲ್ಲ. ಕಳೆದ ಎರಡು ದಶಕಗಳಲ್ಲಿ ನಿರುದ್ಯೋಗ ಬೆಳವಣಿಗೆಯ ದರವು ಸತತವಾಗಿ ಹೆಚ್ಚಾಗಿದೆ. 2010ರಲ್ಲಿ ಶೇ.2 ರಷ್ಟು ಇದ್ದ ನಿರುದ್ಯೋಗ ಬೆಳವಣಿಗೆಯ ದರವು 2015ಕ್ಕೆ ಶೇ.5 ಮತ್ತು 2018ರ ವೇಳೆಗೆ ಶೇ.6.1ಕ್ಕೆ ಹೆಚ್ಚಳವಾಗಿದೆ. ಸೆಂಟರ್ ಫಾರ್ ಮೋನಿಟರಿಂಗ್ ಇಂಡಿಯನ್ ಎಕಾನಮಿ ಪ್ರಕಾರ ಅಕ್ಟೋಬರ್ 2023ರ ವೇಳೆಗೆ ಭಾರತದ ನಿರುದ್ಯೋಗ ಬೆಳವಣಿಗೆಯ ದರವು ಶೇಕಡ 10.05 ರಷ್ಟು ಇದೆ. ಈ ದರವು ಸಾರ್ವಕಾಲಿಕ ಗರಿಷ್ಠ ನಿರುದ್ಯೋಗ ಬೆಳವಣಿಗೆಯ ದರವಾಗಿದೆ. ದುಡಿಯುವ ಸಾಮರ್ಥ್ಯವಿರುವ ಜನರು ಉದ್ಯೋಗವನ್ನು ಪಡೆದುಕೊಳ್ಳುವ ಪರಿಸ್ಥಿತಿಯು ಅತ್ಯಂತ ಭೀಕರವಾಗಿದೆ/ವಾಗುತ್ತಿದೆ. ನಿರುದ್ಯೋಗ ಬೆಳವಣಿಗೆಯ ದರದಲ್ಲಿ ನಿರಂತರ ಹೆಚ್ಚಳವು ಭಾರತದ ನಿರುದ್ಯೋಗ ಬಿಕ್ಕಟ್ಟಿಗೆ ಮತ್ತಷ್ಟು ಇಂಧನವನ್ನು ಸುರಿದು ದಿಗ್ಭ್ರಮೆಗೊಳಿಸುತ್ತಿದೆ. ನೇಪಗಲ್ಲಿ ಶೇ.40ಕ್ಕೂ ಹೆಚ್ಚಿನ ಪ್ರಮಾಣದ ವಿದ್ಯಾವಂತ ಯುವಕರು ಉದ್ಯೋಗ ಅವಕಾಶವಿಲ್ಲದೆ ಹೊರಗುಳಿದಿರುತ್ತಾರೆ. ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಮತ್ತು ಅತಿ ವೇಗವಾದ ಆರ್ಥಿಕ ಬೆಳವಣಿಗೆಯನ್ನು ಸಾಧಿಸುತ್ತಿರುವ ದೇಶಗಳಲ್ಲಿ ಐದನೇ ಸ್ಥಾನದಲ್ಲಿ ಇರುವ ರಾಷ್ಟ್ರವು ಅತ್ಯಂತ ಗಂಭೀರವಾದ ಆರ್ಥಿಕ ಸವಾಲುಗಳನ್ನು ಎದುರಿಸುತ್ತಿದೆ. ಇದನ್ನು ಕೆಲವು ಸಮಾಜವಿಜ್ಞಾನಿಗಳು 'ಜಾಬ್ಲೇಸ್ ಗ್ರೋಥ್' (jobless growth) ಎಂದು ಕರೆದಿದ್ದಾರೆ. ಇತ್ತೀಚೆಗೆ ದೇಶದಾದ್ಯಂತ ಎದುರಿಸುತ್ತಿರುವ ಹವಾಮಾನ ಬದಲಾವಣೆ ಮತ್ತು ಜಾಗತಿಕ ತಾಪಮಾನದ ಬಿಕ್ಕಟ್ಟುಗಳು ಗಮನಾರ್ಹ ಆರ್ಥಿಕ ಬದಲಾವಣೆಗಳನ್ನು ಉಂಟುಮಾಡಿದೆ/ಡಲಿದೆ. ಕಡಿಮೆ ಸಮಯದಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ಸುರಿಯುತ್ತಿರುವ ಮಳೆಯು ಭಾರತದ ಅರ್ಧದಷ್ಟು ಕೃಷಿ ಭೂಮಿ ಮತ್ತು ಕೃಷಿ ಚಟುವಟಿಕೆಯ ಮೇಲೆ ಗಂಭೀರ ಪರಿಣಾಮವನ್ನು ಉಂಟುಮಾಡಿದೆ. ಈ ಪರಿಣಾಮವನ್ನು ಪರಿಸರ ವಿಜ್ಞಾನಿಗಳು ಆರ್ಥಿಕ ಬೆಳವಣಿಗೆ ಮತ್ತು ಆತಿಯಾದ ಅನುಭೋಗವಾದದ ಪರಿಣಾಮ



Scanned with OKEN Scanner

**ಭಾರತದ ಹೊಳೆಯುತ್ತಿರುವ ಆರ್ಥಿಕತೆಯ ಬೆಳವಣಿಗೆಯಲ್ಲಿ ಕ್ಷೀಣಿಸುತ್ತಿರುವ ಉದ್ಯೋಗ ಅವಕಾಶಗಳ ಬಿಕ್ಕಟ್ಟನ್ನು, ಪರಿಸರಾತ್ಮಕ ಗಂಡಾಂತರಗಳನ್ನು ಮುಚ್ಚಿಡುವ ನಮ್ಮ ಪ್ರಯತ್ನ ನೈತಿಕ ಅಧಃಪತನದ ಕರುಣಾಜನಕ ಸ್ಥಿತಿಯಾಗಿದೆ. ಉದ್ಯೋಗಗಳ ಬೇಡಿಕೆಗೆ ತಕ್ಕಂತೆ ಉದ್ಯೋಗ ಸೃಷ್ಟಿಯಾಗಿಲ್ಲ. ಇದಲ್ಲದೆ, ಹೆಚ್ಚಿನ ಉದ್ಯೋಗಗಳು ಸಾಕಷ್ಟು ಆದಾಯವನ್ನು ನೀಡುವಂತೆ ಇಲ್ಲ. ಇತ್ತೀಚೆಗೆ ಸೃಷ್ಟಿಯಾಗುತ್ತಿರುವ ಉದ್ಯೋಗಗಳು ಯಾವುದೇ ರೀತಿಯ ಸಾಮಾಜಿಕ ಭದ್ರತೆಯನ್ನು ಸಹ ಹೊಂದಿಲ್ಲ. ಪ್ರಸ್ತುತ ನ್ಯಾಷನಲ್ ಡೆಮಾಕ್ರಟಿಕ್ ಅಲಯನ್ಸ್(ಎನ್‌ಡಿಎ) ಅಥವಾ ಹಿಂದಿನ ಯುನೈಟೆಡ್ ಪ್ರೋಗ್ರೆಸಿವ್ ಅಲೈಯನ್ಸ್(ಯುಪಿಎ) ಸರ್ಕಾರಗಳು ನಿರುದ್ಯೋಗ ಸಮಸ್ಯೆಯನ್ನು ಚರ್ಚೆಮಾಡಲು, ಉದ್ಯೋಗ ಅವಕಾಶಗಳ ಸೃಷ್ಟಿಯ ಸಂಖ್ಯೆಗಳ ಅಂಕಿ-ಅಂಶಗಳ ನೆಲೆಯ ಚರ್ಚೆಗೆ ಮುಂದಾಗುತ್ತಿವೆ. ಆದರೆ, ಭಾರತದ ಆರ್ಥಿಕತೆಯು ಸಾಕಷ್ಟು ಉತ್ತಮ ಉದ್ಯೋಗಗಳನ್ನು ಸೃಷ್ಟಿಸುತ್ತಿಲ್ಲ ಎಂಬುದನ್ನು ಒಪ್ಪಿಕೊಂಡಿಲ್ಲ. ಇದಕ್ಕೆ ನಾವು ಅನುಸರಿಸುತ್ತಿರುವ ಆರ್ಥಿಕ ಬೆಳವಣಿಗೆ ಮಾದರಿಯ ಜಾಗತೀಕರಣ ದೃಷ್ಟಿಕೋನ ಚಿಂತನೆಗಳು ಕಾರಣವಾಗಿದೆ ಎನ್ನುವುದನ್ನು ನಮ್ಮ ರಾಜಕೀಯ ನಾಯಕರು ಒಪ್ಪಿಕೊಂಡಿಲ್ಲ. ಅಂದರೆ, ಮಾನೋಸ್ ಸಮಾವೇಶದ ಮಾನಾಪೋಸ್ ಆಗಿರುವ ಆರ್ಥಿಕ ಬೆಳವಣಿಗೆಯ ದೃಷ್ಟಿಕೋನಗಳನ್ನೇ ನಮ್ಮ ಸರ್ಕಾರಗಳು ಅನುಸರಿಸುತ್ತಿರುವುದು. ಈ ಸಮಸ್ಯೆಗೆ ಕಾರಣವಾಗಿದೆ ಎಂದು ಮುಕ್ತವಾಗಿ ಒಪ್ಪಿಕೊಳ್ಳದಿರುವುದು ನಮ್ಮ ಬೌದ್ಧಿಕತೆಯ ಅಧಃಪತನವಾಗಿದೆ.



ಸಾಂಪ್ರದಾಯಿಕ ಅರ್ಥಶಾಸ್ತ್ರವು ಹೆಚ್ಚು ಬಂಡವಾಳ ಆಧಾರಿತ ಮತ್ತು ಹೆಚ್ಚು ತಂತ್ರಜ್ಞಾನ ಆಧಾರಿತ ವಿಧಾನಗಳನ್ನು ಬಳಸಿಕೊಂಡು ಕೃಷಿ ಕ್ಷೇತ್ರದ ಉತ್ಪಾದಕತೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಸುಧಾರಿಸಬೇಕು. ಆ ಮೂಲಕ ಜನರು ಕೃಷಿ ಚಟುವಟಿಕೆಯಿಂದ ಮತ್ತು ಗ್ರಾಮೀಣ ಪ್ರದೇಶಗಳಿಂದ ಹೊರಬಂದು, ನಗರ ಪ್ರದೇಶಗಳ ಉತ್ಪಾದನಾ ವಲಯಗಳಲ್ಲಿ ಮತ್ತು ಆಧುನಿಕ ಸೇವೆಗಳಲ್ಲಿ (ಮಾಹಿತಿ ತಂತ್ರಜ್ಞಾನದಂತಹ ಇತರ ಸೇವಾ ವಲಯಗಳಲ್ಲಿ) ತೊಡಗಿಸಿಕೊಳ್ಳಬೇಕು ಎಂದು ಹೇಳುತ್ತದೆ. ಸಂಘಟಿತ ಉತ್ಪಾದನ ಮತ್ತು ಸೇವಾ ವಲಯಗಳು ತಮ್ಮ ಸ್ವಂತ ಕಾರ್ಮಿಕ ಉತ್ಪಾದಕತೆಯನ್ನು ಸುಧಾರಿಸುವ ಸಲುವಾಗಿ ಪ್ರತಿ ಬಂಡವಾಳದ ಯೂನಿಟ್‌ಗೆ ಅತ್ಯಂತ ಕಡಿಮೆ ಪ್ರಮಾಣದ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತಿರುವುದು ಸಹ ಗಣನೀಯ ಪ್ರಮಾಣದಲ್ಲಿ ಉದ್ಯೋಗ ಅವಕಾಶಗಳು ಕುಂಠಿತವಾಗಲು ಕಾರಣವಾಗಿದೆ. ಅನೇಕ ಅರ್ಥಶಾಸ್ತ್ರಜ್ಞರು ಹೇಳುತ್ತಿರುವಂತೆ ಭಾರತ ಆರ್ಥಿಕತೆಯ ಸಮಸ್ಯೆಗೆ, ಅದರ ದೊಡ್ಡ ಗಾತ್ರ/ಪ್ರಮಾಣದ 'ಅನೌಪಚಾರಿಕ' ವಲಯ ಮತ್ತು ಅತ್ಯಂತ ಸಣ್ಣ ಪ್ರಮಾಣದ ಉದ್ಯಮಶೀಲತೆಗಳು. ಆದರೆ, ಪ್ರಪಂಚದಾದ್ಯಂತ ಹಾಗೂ ಭಾರತದಲ್ಲಿಯೂ ನಡೆಯುತ್ತಿರುವಂತೆ ವ್ಯಾವಾರ ಮಾದರಿಗಳಲ್ಲಿ ಹೊಸ ನಾವೀನ್ಯತೆಗಳ ಅವಿಷ್ಕಾರಗಳು ದೊಡ್ಡ ಉದ್ಯಮಗಳ ಸ್ವರೂಪಗಳನ್ನು ಬದಲಾಯಿಸುತ್ತಿವೆ. ಈ ಬದಲಾವಣೆಯು ಉದ್ಯೋಗದಲ್ಲಿ ಹೆಚ್ಚಿನ ಅನೌಪಚಾರಿಕತೆಯನ್ನು ಸೃಷ್ಟಿಸುತ್ತಿದೆ. ಔಪಚಾರಿಕ ವಲಯದಲ್ಲಿನ ಉದ್ಯೋಗಗಳು ಸಹ ಹೊರಗುತ್ತಿಗೆ, ಗುತ್ತಿಗೆ ಉದ್ಯೋಗ, ಒಪ್ಪಂದ ಕೆಲಸ, ಇನ್ನೂ ಮುಂತಾದ ರೂಪದಲ್ಲಿ ದೈನ್ಯಾಕಾರದಲ್ಲಿ ಅನೌಪಚಾರಿಕವಾಗುತ್ತಿವೆ. ಆರ್ಥಿಕ ಮಾಪನದ ಪರಿಕಲ್ಪನೆಗಳು ಮತ್ತು ಆರ್ಥಿಕ ಸ್ವರೂಪಗಳು ಸ್ಥಿತ್ಯಂತರಕ್ಕೆ ಒಳಗಾಗಿವೆ. ಕೇಂದ್ರೀಕೃತ ಉದ್ಯಮಶೀಲತೆಯ ಘಟಕಗಳು ತುಂದು ಗುತ್ತಿಗೆ ಆಧಾರದಲ್ಲಿ ಸ್ಥಿತ್ಯಂತರಕ್ಕೆ ಒಳಗಾಗಿವೆ. ಇದನ್ನು ಒಪ್ಪಿಕೊಳ್ಳದೆ ನಗರ ಕೇಂದ್ರಿತ ಹಾಗೂ ಹೆಚ್ಚು ಯಾಂತ್ರೀಕೃತ, ಅದರಲ್ಲಿಯೂ ಕೃತಕ ಬುದ್ಧಿಮತ್ತೆ (Artificial intelligence) ಆಧಾರಿತ ಆರ್ಥಿಕ ಅಭಿವೃದ್ಧಿಯನ್ನು ಪ್ರತಿಪಾದಿಸುತ್ತಿರುವ ನಮ್ಮ ಅಭಿವೃದ್ಧಿ ಚಿಂತನೆಯನ್ನು ಏನೆಂದು ಕರಯಬೇಕು ತಿಳಿಯದು.

ಜಿ-20 ಸಾಂಸ್ಕೃತಿಕ ವರ್ಕಿಂಗ್ ಗ್ರೂಪ್‌ನ ಸಮಾವೇಶ:

ಎರಡನೇ ನಿದರ್ಶನದಲ್ಲಿ ಹಂಪಿಯಲ್ಲಿ ಜುಲೈ 9 ರಿಂದ 12, 2023ರ ವರೆಗೆ ನಡೆದ ಜಿ-20 ಸಾಂಸ್ಕೃತಿಕ ವರ್ಕಿಂಗ್ ಗ್ರೂಪ್ (Cultural Working Group)ನ ಸಮಾವೇಶದ ಸ್ವರೂಪವನ್ನು ಸ್ವಲ್ಪ ಗಮನಿಸೋಣ. ಈ ಸಮಾವೇಶಕ್ಕೆ ಸುಮಾರು 50 ಕೋಟಿ ರೂಪಾಯಿಗಳನ್ನು ವೆಚ್ಚಮಾಡಲಾಗಿದೆ. ಈ ಸಭೆಯಲ್ಲಿ ನಾಲ್ಕು ವಿಷಯಗಳು ಆದ್ಯತೆಯಾಗಿದ್ದವು. ಅವೆಂದರೆ- ಒಂದು, ಸಾಂಸ್ಕೃತಿಕ ಆಸ್ತಿಗಳ ರಕ್ಷಣೆ ಮತ್ತು ಪುನರುತ್ಥಾನ. ಎರಡು, ಸುಸ್ಥಿರ ಭವಿಷ್ಯವನ್ನು ರೂಪಿಸಲು ಅಸ್ತಿತ್ವದಲ್ಲಿರುವ ಪಾರಂಪರಿಕ ತಾಣ(ಹೆರಿಟೇಜ್)ಗಳನ್ನು ಬಳಸಿಕೊಳ್ಳುವುದು. ಮೂರು, ಸೃಜನಾತ್ಮಕ ಸಂಸ್ಕೃತಿಯ ಮೂಲಕ ಪರ್ಯಾಯ ಆರ್ಥಿಕತೆಯನ್ನು ಪ್ರಚಾರಪಡಿಸುವುದು. ನಾಲ್ಕು, ಸಾಂಸ್ಕೃತಿಕ ಹೆರಿಟೇಜ್‌ಗಳನ್ನು ಸಂರಕ್ಷಿಸಲು ಹಾಗೂ ಅವುಗಳ ಮಹತ್ವವನ್ನು ಪ್ರಚುರಪಡಿಸಲು ಡಿಜಿಟಲ್ ತಂತ್ರಜ್ಞಾನವನ್ನು ಬಳಸುವುದು.

ಸಾಂಸ್ಕೃತಿಕ ಆಸ್ತಿಗಳ ರಕ್ಷಣೆ ಮತ್ತು ಪುನರುತ್ಥಾನ ವಿಷಯದಲ್ಲಿ ವಸಾಹತುಶಾಹಿ ಕಾಲಘಟ್ಟದ ವಿವಿಧ ಆಡಳಿತ ವ್ಯವಸ್ಥೆಯಲ್ಲಿ ಭಾರತದಿಂದ ರವಾನೆಯಾದ 150ಕ್ಕೂ ಹೆಚ್ಚು ಕಲಾಕೃತಿಗಳನ್ನು ಹಿಂಪಡೆಯಲು ಜಿ-20 ಸಾಂಸ್ಕೃತಿಕ ವರ್ಕಿಂಗ್ ಗ್ರೂಪ್ ಸಭೆಯಲ್ಲಿ ಚರ್ಚಿಸಲು ಉದ್ದೇಶಿಸಲಾಗಿತ್ತು. ಇದನ್ನು ಇಲ್ಲಿ ಹೆಚ್ಚು ವಿಸ್ತರಿಸುವುದಿಲ್ಲ. ಸುಸ್ಥಿರ ಭವಿಷ್ಯವನ್ನು ರೂಪಿಸಲು ಅಸ್ತಿತ್ವದಲ್ಲಿರುವ ಪಾರಂಪರಿಕ ತಾಣ(ಹೆರಿಟೇಜ್)ಗಳನ್ನು ಬಳಸಿಕೊಳ್ಳುವುದು ಎನ್ನುವ ಎರಡನೇ ಆದ್ಯತೆಯ ವಿಷಯವು ಸ್ಥಳೀಯ ಜನರ ಹಕ್ಕುಗಳನ್ನು ರಕ್ಷಿಸುವ, ಸುಧಾರಿಸುವ ಗುರಿಯನ್ನು ಹೊಂದಿದೆ. ಇಲ್ಲಿ ಸ್ಥಳೀಯ ಹೆರಿಟೇಜ್‌ಗಳನ್ನು ಸಂರಕ್ಷಿಸಲು ಸ್ಥಳೀಯರನ್ನು ಹೆಚ್ಚು ಸಬಲೀಕರಿಸುವುದಕ್ಕೆ ಆದ್ಯತೆ ನೀಡುವುದು. ಸೃಜನಾತ್ಮಕ ಸಂಸ್ಕೃತಿಯ ಮೂಲಕ ಪರ್ಯಾಯ ಆರ್ಥಿಕತೆಯನ್ನು ಪ್ರಚಾರಪಡಿಸುವುದು

ಮೂರನೇ ಆದ್ಯತೆಯ ವಿಷಯವಾಗಿತ್ತು. ಅಂದರೆ ಸ್ಥಳೀಯ ಆರ್ಥಿಕತೆ ಚಟುವಟಿಕೆಗಳನ್ನು ವೃದ್ಧಿಸುವ ದೃಷ್ಟಿಕೋನದಲ್ಲಿ ಸ್ಥಳೀಯ ಸಾಂಸ್ಕೃತಿಕ-ಪಾರಂಪರಿಕ ಸ್ಮಾರಕ ತಾಣಗಳು ಯಾವ ರೀತಿಯ ಚಾರಿತ್ರಿಕ ಹೆಚ್ಚೆಗುರುತುಗಳನ್ನು ಹೊಂದಿವೆ, ಇವು ಭವಿಷ್ಯದಲ್ಲಿ ಯಾವ ನೆಲೆಯಲ್ಲಿ ರೂಪಾಂತರವಾಗುತ್ತಿವೆ ಎನ್ನುವುದನ್ನು ಗುರುತಿಸುವುದು. ಆ ಮೂಲಕ ಸುಸ್ಥಿರ ಆರ್ಥಿಕ ಚಟುವಟಿಕೆಯನ್ನು ರೂಪಿಸಲು ಆದ್ಯತೆ ನೀಡುವುದು. ನಾಲ್ಕನೇ ಆದ್ಯತೆಯ ವಿಷಯವಾದ ಸಾಂಸ್ಕೃತಿಕ ಹೆರಿಟೇಜ್‌ಗಳನ್ನು ಡಿಜಿಟಲ್ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸುವ ಮೂಲಕ ಜಗತ್ತಿಗೆ ಪ್ರಚುರಪಡಿಸಲು, ಅಂದರೆ ಆಗಮೆಂಟೆಡ್ ರಿಯಾಲಿಟಿ (Augmented Reality) ಮೂಲಕ ಪಾರಂಪರಿಕ ಹೆರಿಟೇಜ್ ಸ್ಥಳಗಳನ್ನು ಕಂಪ್ಯೂಟರ್-ರಚಿತ ಗ್ರಹಿಕೆಯ ಮಾಹಿತಿಯೊಂದಿಗೆ ಅವುಗಳ ನೈಜತೆಯನ್ನು ಹೆಚ್ಚಿಸುವುದು. ಆಗಮೆಂಟೆಡ್ ರಿಯಾಲಿಟಿ ಎಂದರೆ ನೈಜ ಸಮಯದಲ್ಲಿ ಬಳಕೆದಾರರು ಪರಿಸರದೊಂದಿಗೆ ಡಿಜಿಟಲ್ ಮಾಹಿತಿಯ ಮೂಲಕ ಏಕೀಕರಣವಾಗಿದೆ. ಆಗಮೆಂಟೆಡ್ ರಿಯಾಲಿಟಿಯು, ವರ್ಚುವಲ್ ರಿಯಾಲಿಟಿಗಿಂತಲೂ ಸಂಪೂರ್ಣ ಭಿನ್ನವಾಗಿ ಕೃತಕ ಪರಿಸರವನ್ನು ಸಹಜ ಎನ್ನುವ ನೆಲೆಯಲ್ಲಿ ಸೃಷ್ಟಿಸಿ ಬಳಕೆದಾರರು ನೈಜ ಪರಿಸರವನ್ನು ಅನುಭವಿಸುವಂತೆ ಮಾಡುವುದಾಗಿದೆ. ಸಾಂಸ್ಕೃತಿಕ ಜಗತ್ತನ್ನು ಡಿಜಿಟಲ್ ತಂತ್ರಜ್ಞಾನದ ಮೂಲಕ ಪ್ರಪಂಚದ ಮೂಲೆ ಮೂಲೆಗಳಿಗೆ ತಲುಪಿಸುವುದಾಗಿದೆ.

ಇಲ್ಲಿ ತಿಳಿಸಿದ ನಾಲ್ಕು ಆದ್ಯತಾ ವಿಷಯಗಳಲ್ಲಿ, ಸ್ಥಳೀಯರನ್ನು ಅದರಲ್ಲಿಯೂ ಸ್ಥಳೀಯ ಜ್ಞಾನ, ಇಲ್ಲಿನ ಮೌಖಿಕ ಚರಿತ್ರೆ, ಜನಪದೀಯ ಪರಂಪರೆಗಳ ಬಗೆಗಾಗಲಿ, ಸ್ಥಳೀಯ ಜನರು ನಾಸಿಸುತ್ತಿರುವ ಪ್ರದೇಶದಲ್ಲಿ ಇರುವ ಹೆರಿಟೇಜ್‌ಗಳ ಬಗೆಗೆ ಹೊಂದಿರುವ ಸಾಂಸ್ಕೃತಿಕ ನಂಬಿಕೆಗಳ ಬಗೆಗಾಗಲಿ, ಪ್ರವಾಸೋದ್ಯಮದ ನೆಲೆಯಲ್ಲಿ ಸ್ಥಳೀಯ ಜನರ ಸಬಲೀಕರಣವಾಗಲಿ, ಸ್ಥಳೀಯ ಸಣ್ಣ-ಮಟ್ಟ ನ್ಯಾಪಾರಿಗಳ ಬಗೆಗಾಗಲಿ, ಹಂಪಿಯಲ್ಲಿ ನಡೆದ ಜಿ-20 ಸಾಂಸ್ಕೃತಿಕ ವರ್ಕಿಂಗ್ ಗ್ರೂಪ್ ಸಭೆಯಲ್ಲಿ ಮಹತ್ವದ ಚರ್ಚೆ ನಡೆದಂತೆ ಕಾಣಲಿಲ್ಲ. ನಮ್ಮ ದೇಶದಲ್ಲಿ ಸ್ಥಳೀಯ ಸಮುದಾಯಗಳು ಇಂದಿಗೂ ಆಯಾ ಪರಿಸರ ಜೊತೆ ಬದುಕಿ ಅದನ್ನು ಪೋಷಿಸುವ ಸಾಮೂಹಿಕ ಸ್ಥಿತಿಯನ್ನು ಹೊಂದಿದ್ದಾರೆ. ಸ್ಥಳೀಯ ಜ್ಞಾನ ಮತ್ತು ಜನಪದೀಯ ಪರಂಪರೆಗಳಲ್ಲಿ ಅಭಿವೃದ್ಧಿ ತರ್ಕಗಳು ನಾಶಮಾಡುತ್ತಿರುವ ಜಗದ ನಾಶ ತಡೆಯುವ ಸೂತ್ರಗಳಿವೆ. ಅದರೆ, ನಾವು ಕಲಿಸುವುದನ್ನು ಅವರು ಕಲಿಯಬೇಕು ಎನ್ನುವ ನಮ್ಮ ಬೌದ್ಧಿಕ ಮನಃಸ್ಥಿತಿಯಿಂದ ದೊಡ್ಡ ಸಾಧನೆ ಸಾಧ್ಯವಿಲ್ಲ. ಸ್ಥಳೀಯ ಕರಕುಶಲತೆ ಹಾಗೂ ಸಂಸ್ಕೃತಿಯನ್ನು ಒಳಗೊಳ್ಳುತ್ತಿದ್ದೇವೆ ಎನ್ನುವುದನ್ನು ಪ್ರತಿಬಿಂಬಿಸಲು ಸಂಡೂರು ಕುಶಲ ಕಲಾ ಕೇಂದ್ರದ ಸದಯೋಗದಲ್ಲಿ ರೂಪುಗೊಂಡ 1300ಕ್ಕೂ ಹೆಚ್ಚು ಲಂಬಾಣಿ ಕಸೂತಿ ಕೌಶಲ್ಯದಲ್ಲಿ ತಯಾರಿಸಿದ ವಿವಿಧ ಕಸೂತಿ ವಸ್ತುಗಳನ್ನು ಪ್ರದರ್ಶಿಸಲಾಗಿತ್ತು. ಹಾಗೆಯೇ ಅಂತರಾಷ್ಟ್ರೀಯ ಪ್ರತಿನಿಧಿಗಳನ್ನು ಸ್ವಾಗತಿಸಲು ಲಂಬಾಣಿ ಸೃಷ್ಟಿಸುವ ಪ್ರದರ್ಶಿಸಲಾಯಿತು. ಅದರ ಮೂಲಕ ಪ್ರವಾಸೋದ್ಯಮ ಅಭಿವೃದ್ಧಿಗೆ ಸ್ಥಳೀಯ ಜನಪದೀಯ ನೆಲೆಗಳನ್ನು ಹೊರಗಿಟ್ಟವರನ್ನು ಒಳಗೊಳ್ಳುತ್ತಿದ್ದೇವೆ ಎಂದು ದೊಡ್ಡಮಟ್ಟದಲ್ಲಿ ನಾವು ಬಿಂಬಿಸಿ ಬೀಗುತ್ತಿರುವುದು ರಾಜಕೀಯವಾಗಿ. ಇದು ನಮ್ಮ ಅರೆಮನಸ್ಸಿನ ಮನಃಸ್ಥಿತಿ. ಇದು ವೈದಿಧ್ಯಮಯ ಪರಂಪರೆಯ ಉಳಿವಿನ ಮಾದರಿಯಲ್ಲ.

ಈಗಾಗಲೇ ತಿಳಿಸಿದಂತೆ ನಾಲ್ಕು ವಿಷಯಗಳನ್ನು ಚರ್ಚೆ ಮಾಡಲು ನಾಲ್ಕು ದಿನಗಳು ಅಂತರಾಷ್ಟ್ರೀಯ ಸಮಾವೇಶವನ್ನು ನಡೆಸಲಾಯಿತು. ಇದಕ್ಕೆ 47 ಕೋಟಿ ರೂಪಾಯಿಗಳು ವೆಚ್ಚ ಮಾಡಲಾಗಿದೆ. ಈ ಹಣವನ್ನು ರಾಷ್ಟ್ರೀಯ ಹೆದ್ದಾರಿಗಳಿಂದ ಹಂಪಿಯನ್ನು ಸಂಪರ್ಕಿಸುವ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು, 11 ಕೆವಿ ವಿದ್ಯುಚ್ಛಕ್ತಿ ಸಂಪರ್ಕ ಲೇನ್ ಹಾಕುವುದು ಇತ್ಯಾದಿ. ಉಪಠಾಣೆಗಳನ್ನು ಸ್ಥಾಪಿಸುವುದು, ಅಂತರಾಷ್ಟ್ರೀಯ ಮಟ್ಟದ ಭದ್ರತಾ ವ್ಯವಸ್ಥೆ ಮಾಡಲು ಗೃಹ ಇಲಾಖೆ ಅಗತ್ಯವಾದ ಹೊಸ ವಾಹನಗಳ ಖರೀದಿ, ರಕ್ಷಣಾ ಉಪಕರಣಗಳ ಖರೀದಿ, ಸಿಸಿಕ್ಯಾಮರಾಗಳನ್ನು ಅಳವಡಿಸುವುದು ಇತ್ಯಾದಿ. ಈ ಕೆಲಸಕ್ಕೆ ಒಟ್ಟು ವೆಚ್ಚದಲ್ಲಿ(47 ಕೋಟಿ) ಗೃಹ ಇಲಾಖೆಯು ಮಾಡಿದ ವೆಚ್ಚ 13.5 ಕೋಟಿಗಳಿಗೂ ಹೆಚ್ಚು. ಹೀಗೆ ವೆಚ್ಚ ಮಾಡಿರುವ 47 ಕೋಟಿ ರೂಪಾಯಿಗಳು ಕೇವಲ ಜಿ-20 ಸಾಂಸ್ಕೃತಿಕ ವರ್ಕಿಂಗ್ ಗ್ರೂಪ್‌ನ ಸಮಾವೇಶಕ್ಕೆ ಮಾತ್ರವಲ್ಲ, ಹಂಪಿ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಯೂ ಆಗಿದೆ ಎಂದು ನಮ್ಮ ರಾಜಕೀಯ ನಾಯಕರು ಮತ್ತು ಅಧಿಕಾರಿಗಳು ಹೇಳುತ್ತಾರೆ. ಹಾಗಾದರೆ ಜನರ ನೆಲೆಯಲ್ಲಿ ಅಭಿವೃದ್ಧಿ ಹೇಗೆ ನಡೆದಿದೆ ಎನ್ನುವುದನ್ನು ಸ್ವಲ್ಪ ನೋಡೋಣ.

ಜಿ-20 ಸಾಂಸ್ಕೃತಿಕ ವರ್ಕಿಂಗ್ ಗ್ರೂಪ್‌ನ ಸಮಾವೇಶಕ್ಕೆ ಹಂಪಿಯನ್ನು



ಸಂಪರ್ಕಿಸುವ ಎಲ್ಲಾ ರಸ್ತೆಗಳ ಅಗಲೀಕರಣ, ರಸ್ತೆಗಳ ಎರಡು ಬದಿಯ ಸ್ವಚ್ಛತೆ, ಶೃಂಗಾರ ಮಾಡಲಾಯಿತು. ರಸ್ತೆಗಳ ಅಗಲೀಕರಣ ಮತ್ತು ಡಾಂಬರ್ ಹಾಕಲು ಗುತ್ತಿಗೆ ನೀಡಲಾಯಿತು. ಈ ಗುತ್ತಿಗೆಯಲ್ಲಿ ನಾವು ಈಗಾಗಲೇ ಕೇಳುತ್ತಿರುವ ಪರ್ಸೆಂಟೇಜ್ ವ್ಯವಹಾರ ಹಂಪಿ ವಿರುಪಾಕ್ಷನಿಗೂ ಅರ್ಥವಾಗುವುದೂ ಇಲ್ಲ. ಹಂಪಿಯನ್ನು ಸಂಪರ್ಕಿಸುವ ರಸ್ತೆಗಳ ಸ್ವಚ್ಛತೆಗೆ ಕಂಪ್ಲಿ, ಕೂಡ್ಲಿಗಿ, ಕೊಟ್ಟೂರು, ಹಗರಿಬೊಮ್ಮನಹಳ್ಳಿ, ಸಿರಗುಪ್ಪ, ತೋರಣಗಲ್ಲು ಇನ್ನೂ ಮುಂತಾದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ದುಡಿಯುತ್ತಿದ್ದ ಪೌರಕಾರ್ಮಿಕರನ್ನು ನಿಯೋಜಿಸಲಾಗಿತ್ತು. ಅಂತರಾಷ್ಟ್ರೀಯ ಪ್ರತಿನಿಧಿಗಳು ಓಡಾಡುತ್ತಿದ್ದ ರಸ್ತೆಗಳ ಸ್ವಚ್ಛತೆಯ ಜೊತೆ, ರಸ್ತೆಗಳಲ್ಲಿ ಅಡ್ಡಾಡುವ ಅಥವಾ ರಸ್ತೆಗೆ ಬರುವ ಹಂದಿ, ನಾಯಿ, ಎಮ್ಮೆ, ದನಕರು, ಕುರಿ, ಕೋಳಿ, ಇತ್ಯಾದಿ ಪ್ರಾಣಿಪಕ್ಷಿಗಳು ರಸ್ತೆಗೆ ಬರದಂತೆ ನೋಡಿಕೊಳ್ಳಲು ನಮ್ಮ ಪೌರಕಾರ್ಮಿಕರನ್ನು ನಿಯೋಜಿಸಲಾಗಿತ್ತು. ಈ ರಸ್ತೆಗಳಲ್ಲಿ ಯಾರು ಹೆಚ್ಚು ಹೊತ್ತು ನಿಲ್ಲುವಂತಿರಲಿಲ್ಲ, ಕೂರುವಂತಿರಲಿಲ್ಲ. ಪೌರಕಾರ್ಮಿಕರಿಗೆ ನಿಯೋಜಿಸಿದ ಕೆಲಸಗಳು ಮತ್ತು ಅವರು ಮಾಡುತ್ತಿದ್ದ ಕೆಲಸಗಳು ತುಂಬ ಅಮಾನವೀಯವಾಗಿದ್ದವು. ಪೌರಕಾರ್ಮಿಕರಿಗೆ ಕಲ್ಪಿಸಿದ ಊಟ, ವಸತಿ ಸೌಲಭ್ಯಗಳು ತುಂಬ ಕಳಪೆಯಾಗಿತ್ತು. ಹೊರಗಿನಿಂದ ನಿಯೋಜನೆಯಾಗಿದ್ದ ಪೌರಕಾರ್ಮಿಕರನ್ನು 'ಹಂಪಿ ಪವರ್ ಕ್ಯಾಂಪಿ'ನಲ್ಲಿ ವಸತಿ ಇರಿಸಲಾಯಿತು. ಕೆಲಸಕ್ಕೆ ನಿಯೋಜಿಸಿದ ಸ್ಥಳ ಮತ್ತು ವಸತಿ ಸ್ಥಳಕ್ಕೆ ಹೋಗಲು ಮತ್ತು ಬರಲು ಯಾವುದೇ ರೀತಿಯ ವಾಹನ

ವನ್ಯತೆಯನ್ನು ಕಲ್ಪಿಸಿರಲಿಲ್ಲ. ಪೌರಕಾರ್ಮಿಕರಿಗೆ ಚಿಕ್ಕಾಸು ಕೈಚಾಚಿ, ಅಟ್ಟಿಸಿಕೊಂಡಾ, ಅವ್ವ-ಪಾಪು ಸೊಂಟಕ್ಕೆ ಇವುಗಳಲ್ಲಿ ಒಂದು ಪಾಲಿಗೆ ಬಗೆಯ ಆಹಾರವನ್ನು ಮಾತ್ರ ಸ್ಯಾಫ್ ಬ್ಯಾಗ್‌ಗಳಲ್ಲಿ ನೀಡಲಾಗುತ್ತಿತ್ತು. ಅದರ ಅಂತರಾಷ್ಟ್ರೀಯ ಪ್ರತಿನಿಧಿಗಳಿಗೆ ಒಂದು ಸಮಯಕ್ಕೆ ವಿವಿಧ ರೀತಿಯ ಹಲವು ಧ್ಯೋಗಾಲಯಗಳನ್ನು ಪ್ರವಾಸಕ್ಕೆ ಮಾತ್ರವಾಗಿತ್ತು. ಈ ರೀತಿಯ ಆಹಾರ ಪಾಧ್ಯಗಳನ್ನು ಕಡಿಮೆಯೆಂದು ವಿಶೇಷ ಕಾಳಜಿಯೆಂದಾಗಿತ್ತು. ಈ ರೀತಿಯ ಆಹಾರ ಕಾಮಗಾರಿಯಲ್ಲಿ ಕೆಲಸ ಮಾಡುವ ಯಾರಿಗೂ ಇಲ್ಲ. ಎಲ್ಲಾ ರೀತಿಯ ಭದ್ರತೆಯನ್ನು ಒದಗಿಸಿದ ಮೊಲೀಸರಿಗೂ ವ್ಯಾಫ್‌ಗಳಲ್ಲಿ ಪಾರ್ಸಲ್ ಊಟ. ಇದು ನಮ್ಮ ಜನಪದ ಮಾತ್ರ ಹೇಳುವಂತೆ 'ದೊಡ್ಡೋರ ಮಕ್ಕಳಿಗೆ ಬೆಲ್ಲ ಬಾಳಿಯ ಹಣ್ಣು ಏನೂ ಇಲ್ಲದ ಬಡಮೆಯ ಮಕ್ಕಳಿಗೆ ಹೆತ್ತವ್ವೆಯ ಒಕ್ಕ ಮೊಲೆ ಹಾಲು. ಕಣ್ಣು ಬೆಳದ ಮನೆ ಆಗಾಕ ಕೂಲಿಲ್ಲ, ಬೀಸಾಕ ಕವಗೆ ಬಲವಿಲ್ಲ. ಕೂಲ್ಯವರ ಸುಡಬೇಕ ಜಮಿನು ಸುವಿನಿಲ್ಲ' ಎನ್ನುವಂತೆ. ಹಾಗೆಯೇ ನನ್ನ ಜನಗಳು ಎಂಬ ಪದ್ಯದಲ್ಲಿ ಸಿದ್ಧಲಿಂಗಯ್ಯ ಅವರು ಒರೆಯುವಂತೆ 'ಚಿನ್ನವನ್ನು ತೆಗೆಯೋರು ಅನ್ನವನ್ನು ಕಾಣೋರು, ಬಟ್ಟೆಯನ್ನು ನೇಯ್ದೋರು ನನ್ನ ಜನಗಳು, ಗಾಳಿಯಲ್ಲೇ ಬಾಳುತ್ತಾರೆ ನನ್ನ ಜನಗಳು, ಎನವರ ದೇವರ ಗುಡಿ' ಎನ್ನುವ ರೀತಿ ನಡೆಯಿತು ಜ-20 ಸಾಂಸ್ಕೃತಿಕ ವರ್ಕಿಂಗ್ ಗ್ರೂಪ್‌ನ ಸಮಾವೇಶ ಹಂಪಿಯಲ್ಲಿ.

ಬೀದಿ ಬದಿಯ ವ್ಯಾಪಾರಿಗಳು ಮತ್ತು ಕಳ್ಳುವ ಗಾಡಿ ವ್ಯಾಪಾರಿಗಳು ರಸ್ತೆ ಅಗಲೀಕರಣ, ಸ್ವಚ್ಛತೆ ಮತ್ತು ಭದ್ರತೆಯ ಕಾರಣದಿಂದ 15 ದಿನಗಳಗೂ ಹೆಚ್ಚು ಕಾಲ ಹಂಪಿ ಮತ್ತು ಕಮಲಾಪುರದ ಸುತ್ತಮುತ್ತಲ ಪ್ರದೇಶದಲ್ಲಿ ವ್ಯವಹಾರ ಮಾಡಲು ಸಾಧ್ಯವಾಗಲಿಲ್ಲ. ಇನ್ನೂ ರಸ್ತೆ ಅಗಲೀಕರಣದಲ್ಲಿ ಹಲವು ಜನರ ಮನೆ ಮತ್ತು ಅಂಗಡಿಗಳ ಪ್ರವೇಶದ್ವಾರಗಳು ಜೆಸಿಬಿ ಬಾಯಿಗೆ ಆಹಾರವಾದವು. ಹಾಗೆಯೇ ರಸ್ತೆ ಅಗಲೀಕರಣದಿಂದ ಹಲವು ಅಂಗಡಿಗಳು ಮುಚ್ಚಲ್ಪಟ್ಟವು. ಇದಕ್ಕೆ ಸಂಬಂಧಿಸಿದ ಒಂದು ಪ್ರಕರಣವನ್ನು ನಾನು ಇಲ್ಲಿ ದಾಖಲಿಸಲು ಪ್ರಯತ್ನ ಮಾಡುತ್ತೇನೆ. ಇತ್ತೀಚೆಗೆ ಕಮಲಾಪುರದಿಂದ ಕನ್ನಡ ವಿಶ್ವವಿದ್ಯಾಲಯಕ್ಕೆ ಹೋಗುವ ಮುಖ್ಯ ರಸ್ತೆಯಲ್ಲಿ ಮಲಾಕ್ಷ ಇಲಾಚಿಯ ಮ್ಯೂಸಿಯಂ ಎದುರುಗಡೆ ಸಂಧ್ಯಾ ಎನ್ನುವ ಹೋಟೆಲ್ ಅನ್ನು ಶರಣ್ ರಾಜ್‌ಕುಮಾರ್ ಎನ್ನುವವರು ತನ್ನ ಇಬ್ಬರೂ ಸಹೋದರರ ಜೊತೆ ಸೇರಿ ಪ್ರಾರಂಭಿಸಿದ್ದರು. 'ಎದು ಲಕ್ಷ ರೂಪಾಯಿಯನ್ನು ಬಡ್ಡಿಸಾಲ ತಂದು ಈ ಹೋಟೆಲ್ ಪ್ರಾರಂಭಿಸಿದೆವು. ನಮಗೆ ಪ್ರಾರಂಭದ ಮೂರು ಎಲ್ಲು ತಿಂಗಳು ವ್ಯಾಪಾರ ಚೆನ್ನಾಗಿ ನಡೆಯುತ್ತಿತ್ತು. ಅಂಗಡಿಯ ಬಾಡಿಗೆ ಸೇರಿ ಎಲ್ಲ ಖರ್ಚು ಕಳೆದು ತಿಂಗಳಿಗೆ ಐವತ್ತು ಅರವತ್ತು ಸಾವಿರವರೆಗೆ ಉಳಿತಾಯವಾಗುತ್ತಿತ್ತು. ನಮ್ಮ ಹೋಟೆಲ್ ಕಿಚನ್ ಸೆಕ್ಷನ್ ಅನ್ನು ಪ್ರಚಾರದ ದೃಷ್ಟಿಯಿಂದ ನಮ್ಮ ಅಂಗಡಿಯ ಜಾಗಕ್ಕಿಂತ ಸ್ವಲ್ಪ ಮುಂದೆ ಹಾಕಿದ್ದೆವು. ಬಲ್ಲ ತಿಂಗಳಲ್ಲಿ ಜಿ20ಸಭೆಯು ಹಂಪಿಯಲ್ಲಿ ನಡೆಯಿತು. ಈ ಸಭೆಯಲ್ಲಿ ಭಾಗವಹಿಸಲು ಬಂದಿದ್ದ ವಿದೇಶಿ ಗಣ್ಯ ಅತಿಥಿಗಳು ತಂಗಿದ್ದು ಸ್ಟಾರ್ ಹೋಟೆಲ್ ಇವೊಲ್ವ್ ಬ್ಲಾಕ್‌ನಲ್ಲಿ. ಈ ಹೋಟೆಲ್‌ಗೆ ನಮ್ಮ ಹೋಟೆಲ್‌ನ ಮುಂಬೆಯೇ ಹಾದು ಹೋಗಬೇಕಾಗಿತ್ತು. ಗಣ್ಯ ಅತಿಥಿಗಳ ವಾಹನ ಸಂಚಾರಕ್ಕೆ ತೊಂದರೆ ಆಗುತ್ತದೆ ಎಂಬ ಕಾರಣ ನೀತಿ ಮುಖ್ಯ ರಸ್ತೆಯ ಅಗಲೀಕರಣವನ್ನು ಜಿಲ್ಲಾಡಳಿತ ಮಾಡಿತು. ಮುನ್ಸಿಪಾಲಿಟಿಯ ಜೆಇ ಆಫೀಸರ್ ನೀಡಿದ ನೋಟೀಸ್ ಅನ್ವಯ ನಮ್ಮ ಅಂಗಡಿಯ ಕಿಚನ್ ಕೌಂಟರ್ ಮತ್ತು ಕೆಡ ತೆಗೆದು ಹಾಕಿದರು. ಇದನ್ನು ಸರಿಪಡಿಸಲು ಮತ್ತೆ ಎರಡು ಲಕ್ಷ ಸಾಲಮಾಡಿದೆ. ಮತ್ತೆ ಮುಖ್ಯ ರಸ್ತೆಯಲ್ಲಿ ಪ್ರಯಾಣಿಸುವ ಪ್ರವಾಸಿಗರಿಗೆ ಮತ್ತು ಜನರಿಗೆ ನಮ್ಮ ಹೋಟೆಲ್ ಇದೆ ಇದೆ ಎಂಬುದೇ ಯಾರಿಗೂ ಗೊತ್ತಾಗುವುದಿಲ್ಲ. ಇದರಿಂದ ಕಳೆದ ಐದು ತಿಂಗಳಿಂದ ಪ್ರತಿದಿನ ತೀವಲ ಒಂದು ಸಾವಿರ ರೂಪಾಯಿಯಿಂದ ಎರಡು ಸಾವಿರದವರೆಗೆ ಮಾತ್ರ ವ್ಯಾಪಾರವಾಗುತ್ತಿದೆ. ವ್ಯಾಪಾರದಲ್ಲಿ ಆಗಿರುವ ಇಳಿಕೆಯಿಂದ ನಾನು ಸಹ ಹೋಟೆಲ್ ಸರಿಯಾಗಿ ತೆರೆಯುತ್ತಿಲ್ಲ. ವೀಕೆಂಡ್‌ನಲ್ಲಿ ಐದು ಸಾವಿರದಿಂದ ಹತ್ತು ಸಾವಿರದವ್ಪು ಆಗುತ್ತಿದ್ದ ವ್ಯಾಪಾರ ಮೂರು ಸಾವಿರಕ್ಕೆ ಬಂದಿದೆ. ಇದರಿಂದ ನನ್ನ ಇಬ್ಬರು ಅಣ್ಣಂದಿರು ಸಹ ವ್ಯಾಪಾರದಲ್ಲಿ ಮೊದಲಿನ ಉತ್ಸಾಹ ಹೊಂದಲ್ಲ. ಪ್ರತಿ ತಿಂಗಳು ಐವತ್ತು ಸಾವಿರ ರೂಪಾಯಿ ಲಾಭ ತೆಗೆಯುತ್ತಿದ್ದ ನಾನು ಈಗ ನನ್ನ ಕೈಯಿಂದಲೆ ಪ್ರತಿ ತಿಂಗಳು ಮೂವತ್ತು ಸಾವಿರದಷ್ಟು ಹಣವನ್ನು ಬಡ್ಡಿಗೆ ಕಟ್ಟುತ್ತಿದ್ದೇನೆ. ಮತ್ತೆ ಇಂದಲ್ಲ ನಾಳೆ ನನ್ನ ವ್ಯಾಪಾರ ಮೊದಲಿನ ಲಯಕ್ಕೆ ಮರಳಬಹುದೆಂಬ ನಿರೀಕ್ಷೆಯಿಂದಲೆ ಇಂದಿಗೂ ದಿನ ಹೋಟೆಲ್ ಪ್ರಾರಂಭಿಸುತ್ತೇನೆ. ಏನಾಗುವುದೂ ಗೊತ್ತಿಲ್ಲ. ನಮ್ಮ ಪರಿಸ್ಥಿತಿ ದಿನದಿಂದ ದಿನಕ್ಕೆ ಕೆಡುತ್ತಿದೆ' ಎಂದು ರವಿ ಉಜ್ ಹೊಲಿ ಹೇಳುತ್ತಾರೆ. ತರಕ್ ಅವರ ರೀತಿಯಲ್ಲಿಯೇ ಹಲವು ಸಣ್ಣ ಮಟ್ಟ ವ್ಯಾಪಾರಿಗಳ ಬದುಕನ್ನು ಹಂಪಿಯಲ್ಲಿ ನಡೆದ ಜಿ-20 ಸಮಾವೇಶ ಕಿತ್ತುಕೊಂಡಿದೆ. ಇದೇ ಸಮಯದಲ್ಲಿ ಇವೊಲ್ವ್ ಬ್ಲಾಕ್‌ನಂತ ಬಂಡವಾಳಶಾಹಿಗಳ ಹೋಟೆಲ್ ಸೇರಿದಂತೆ ದೊಡ್ಡ ದೊಡ್ಡ ಹೋಟೆಲ್‌ಗಳಿಗೆ ಹೆಚ್ಚಿನ ವ್ಯಾಪಾರ ನಡೆಯಿತು. ಹಾಗಾಗಿ ಇಂತಹ ಸಮಾವೇಶಗಳು ಸಹ ಆರ್ಥಿಕ ಬೆಳವಣಿಗೆ ಮಾದರಿಯ ವಿಸ್ತರಣೆಯೇ ಹಾಗಿವೆ.

ಈ ಮೇಲಿನ ವಿಷಯಗಳು ನಮ್ಮ ಸರ್ಕಾರಗಳು ಪ್ರತಿಪಾದಿಸುವಂತೆ ಜಿ-20 ಸಾಂಸ್ಕೃತಿಕ ವರ್ಕಿಂಗ್ ಗ್ರೂಪ್‌ನ ಸಮಾವೇಶಕ್ಕೆ ಹಂಪಿಯನ್ನು ಸಂಪರ್ಕಿಸುವ ಎಲ್ಲಾ ರಸ್ತೆಗಳ ಅಗಲೀಕರಣ, ರಸ್ತೆಗಳ ಎರಡು ಬದಿಯ ಸ್ವಚ್ಛತೆ, ಶೃಂಗಾರ ಮಾಡಲಾಯಿತು. ರಸ್ತೆಗಳ ಅಗಲೀಕರಣ ಮತ್ತು ಡಾಂಬರ್ ಹಾಕಲು ಗುತ್ತಿಗೆ ನೀಡಲಾಯಿತು. ಈ ಗುತ್ತಿಗೆಯಲ್ಲಿ ನಾವು ಈಗಾಗಲೇ ಕೇಳುತ್ತಿರುವ ಪರ್ಸೆಂಟೇಜ್ ವ್ಯವಹಾರ ಹಂಪಿ ವಿರುಪಾಕ್ಷನಿಗೂ ಅರ್ಥವಾಗುವುದೂ ಇಲ್ಲ. ಹಂಪಿಯನ್ನು ಸಂಪರ್ಕಿಸುವ ರಸ್ತೆಗಳ ಸ್ವಚ್ಛತೆಗೆ ಕಂಪ್ಲಿ, ಕೂಡ್ಲಿಗಿ, ಕೊಟ್ಟೂರು, ಹಗರಿಬೊಮ್ಮನಹಳ್ಳಿ, ಬಿದರುಪ್ಪ, ತೋರಣಗಲ್ಲು ಇನ್ನೂ ಮುಂತಾದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಡಿಯುತ್ತಿದ್ದ ಪೌರಕಾರ್ಮಿಕರನ್ನು ನಿಯೋಜಿಸಲಾಗಿತ್ತು. ಅಂತರಾಷ್ಟ್ರೀಯ ಪ್ರತಿನಿಧಿಗಳು ಓಡಾಡುತ್ತಿದ್ದ ರಸ್ತೆಗಳ ಸ್ವಚ್ಛತೆಯ ಜೊತೆ, ರಸ್ತೆಗಳಲ್ಲಿ ಅಡ್ಡಾಡುವ ಅಥವಾ ರಸ್ತೆಗೆ ಬರುವ ಹಂದಿ, ನಾಯಿ, ಎಮ್ಮೆ, ದನಕರು, ಕುರಿ, ಕೋಳಿ, ಇತ್ಯಾದಿ ಪ್ರಾಣಿಪಕ್ಷಿಗಳು ರಸ್ತೆಗೆ ಬರದಂತೆ ನೋಡಿಕೊಳ್ಳಲು ನಮ್ಮ ಪೌರಕಾರ್ಮಿಕರನ್ನು ನಿಯೋಜಿಸಲಾಗಿತ್ತು. ಈ ರಸ್ತೆಗಳಲ್ಲಿ ಯಾರು ಹೆಚ್ಚು ಹೊತ್ತು ನಿಲ್ಲುವಂತಿರಲಿಲ್ಲ, ಕೂರುವಂತಿರಲಿಲ್ಲ. ಪೌರಕಾರ್ಮಿಕರಿಗೆ ನಿಯೋಜಿಸಿದ ಕೆಲಸಗಳು ಮತ್ತು ಅವರು ಮಾಡುತ್ತಿದ್ದ ಕೆಲಸಗಳು ತುಂಬ ಅಮಾನವೀಯವಾಗಿದ್ದವು. ಪೌರಕಾರ್ಮಿಕರಿಗೆ ಕಲ್ಪಿಸಿದ ಊಟ, ವಸತಿ ಸೌಲಭ್ಯಗಳು ತುಂಬ ಕಳಪೆಯಾಗಿತ್ತು. ಹೊರಗಿನಿಂದ ನಿಯೋಜನೆಯಾಗಿದ್ದ ಪೌರಕಾರ್ಮಿಕರನ್ನು 'ಹಂಪಿ ಪವರ್ ಕ್ಯಾಂಪಿ'ನಲ್ಲಿ ವಸತಿ ಇರಿಸಲಾಯಿತು. ಕೆಲಸಕ್ಕೆ ನಿಯೋಜಿಸಿದ ಸ್ಥಳ ಮತ್ತು ವಸತಿ ಸ್ಥಳಕ್ಕೆ ಹೋಗಲು ಮತ್ತು ಬರಲು ಯಾವುದೇ ರೀತಿಯ ವಾಹನ ವ್ಯವಸ್ಥೆಯನ್ನು ಕಲ್ಪಿಸಲಿಲ್ಲ.



ಸಾಂಸ್ಕೃತಿಕ ವರ್ಷಂಗಳ ಗ್ರೂಪ್ ಸಮ್ಮೇಳನದಿಂದ ಹಂಪಿಯ ಪ್ರವಾಸೋದ್ಯಮ ವಿಸ್ತರಿಸುತ್ತದೆ. ಸೃಜನಾತ್ಮಕ ಉದ್ಯೋಗಾವಕಾಶಗಳ ಸೃಷ್ಟಿಗೆ, ಸ್ಥಳೀಯ ಯುವಜನರ ಸಬಲೀಕರಣಕ್ಕೆ ಹಾಗೂ ಸೃಜನಾತ್ಮಕ ಆರ್ಥಿಕ ಚಟುವಟಿಕೆಗಳ ವಿಸ್ತರಣೆಗೆ ಎಷ್ಟರ ಮಟ್ಟಿಗೆ ಪೂರಕವಾಗಿದೆ? ಒಂದು ವೇಳೆ ಪೂರಕವಾಗಿದ್ದರೆ ಯಾರಿಗೆ ಹೆಚ್ಚು ಪೂರಕವಾಗಿದೆ? ಮತ್ತು ಯಾರ ನೆಲೆಯಲ್ಲಿ ಎನ್ನುವುದು ಬಗೆಹರಿಯಬೇಕಾದ ಯಕ್ಷಪ್ರಶ್ನೆಯಾಗಿದೆ. ನಮ್ಮ ಅಭಿವೃದ್ಧಿ ಪ್ರತಿಪಾದಕರು ರಸ್ತೆಗಳನ್ನು ಸ್ವಚ್ಛವಾಗಿ, ಸೌಂದಾರವಾಗಿಡು, ಹಂದಿ, ನಾಯಿ, ಎಮ್ಮೆ ಮತ್ತು ದನಕರುಗಳು ಗಲೀಜೆ ಗಾಳಗಂತೆ ಕಾಣದಂತೆ, ಅಂತರಾಷ್ಟ್ರೀಯ ಮಟ್ಟದ ಪ್ರತಿನಿಧಿಗಳು ಮತ್ತು ಮಾಧ್ಯಮದ ಮುಂದೆ ನಮ್ಮ ಅಭಿವೃದ್ಧಿ ವಾಸ್ತವವನ್ನು ಬಿಚ್ಚಿವರು. ಅಸಹಾಯಕರು ಬೇವಸೋಪಾಯಕ್ಕೆ ನಡೆಸುತ್ತಿರುವ ಪರಿವಾಟಲನ್ನು ಮರೆಮಾಚಲು ಎನ್ನುವುದು ರಿಟ. ಇಂತಹ ಮನಸ್ಥಿತಿಯ ಅಶೋಕ ಕೆಟ್ಟರ್ ಅವರ ನನ್ನ ನೆಲದ ಸಾವುಗಳು ಎನ್ನುವ ಕವಿತೆ ನೆನೆಪಾಗುತ್ತದೆ 'ಸದ್ದಿಲ್ಲದೇ ಸುದ್ದಿಯಾಗದೇ ನೆಗೆದು ಬೀಳುವ ಸಾವುಗಳವು. ಕಣ್ಣೀರ ಕುರಿಕುರಿದು ಹುತಿಗೂಡಿ ಹೋಗುವ ಈ ಸಾವುಗಳಿಗೆ ಕಣ್ಣೀರು ಎಲ್ಲಿಯೂ ಹರಿಯುವುದಿಲ್ಲ, ಚರಮಗೀತೆ ಕೇಲುವುದಿಲ್ಲ ದಹಿಸಲು ಕಟ್ಟಗೆಯೂ ಕೂಡಲಿಕ್ಕಿಲ್ಲ' 'ತಲೆ ಒಡೆಯದೇ ಗುಂಡಿಕ್ಕದೇ, ರಕ್ತ ಹರಿಸದೆ ಸತ್ತು ಹೋಗುವ ವಿಚಿತ್ರ ಸಾವು ಎಲ್ಲದರ ಸಮ್ಮಿಶ್ರಿತ ಅದ್ಭುತ ಮೂರ್ಖಕೆ ಈ ಸಾವು. ಇಂಥಿಯಾದ ಹಸಿವಿನ ಸಾವು' ಸಾಲುಗಳು ನೆನಪಾಗುತ್ತದೆ.

ವಸುಧೈವ ಕುಟುಂಬಕಂ ಮತ್ತು ಜಿ-20 ಶೃಂಗಸಭೆ:

ಮೂರನೇ ನಿದರ್ಶನವೆಂದರೆ, ಭಾರತ ಮಂಟಪದಲ್ಲಿ ಜಿ-20 ಶೃಂಗಸಭೆಯು ಸೆಪ್ಟೆಂಬರ್ 9, 2023 ರಂದ ಸೆಪ್ಟೆಂಬರ್ 10, 2023ರವರೆಗೆ ನವದಹಲಿಯಲ್ಲಿ ನಡೆಯಿತು. ಈ ಒಂದು ದರದಿಯ ಪ್ರಕಾರ ದೆಹಲಿಯ ಫ್ಲೈಓವರ್‌ನ ಕೆಳಗೆ ಎಂಸುಮಾರುತ್ತಿದ್ದ 150 ನಿರಾಶ್ರಿತ ಭಿಕ್ಷುಕರನ್ನು, ಆ ಸ್ಥಳದಿಂದ ಜಿ-20 ನಭೆಯ ವಿವಿಧ ಕಾರ್ಯಕ್ರಮಗಳು ನಡೆಯುವ ಮೊದಲು ತೆರವುಗೊಳಿಸುವಂತೆ ಪೊಲೀಸರಿಗೆ ಸೂಚಿಸಿದು. 'ವಸುಧೈವ ಕುಟುಂಬಕಂ' ಅಥವಾ 'ವಸುಧೈವ ಕುಟುಂಬಕಂ' ಎನ್ನುವುದನ್ನು ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ, ಎಂದು ಸೂಲಾಗುತ್ತಿದೆ. ಭಾರತ ಮಂಟಪವನ್ನು ಅಂತರಾಷ್ಟ್ರೀಯ ಪ್ರದರ್ಶನ ಮತ್ತು ಸಮಾವೇಶ ಕೇಂದ್ರ(ಐಟಿಪಿಒ) ಎಂದು ಕರೆಯಲಾಗುತ್ತಿದೆ. ಜಿ-20 ಸಮಾವೇಶದ ಭದ್ರತೆಯ ದೃಷ್ಟಿಯಿಂದ ಇಲ್ಲಿ 'ಭಿಕ್ಷುಕರು' ಒಳಗೊಂಡಂತೆ, ಆ ಪ್ರದೇಶದ ಸುತ್ತಮುತ್ತಲಿನ ವಿವಿಧ ಸಂಸ್ಥೆಗಳಲ್ಲಿ ಹಲವು ರೀತಿಯ ಸಣ್ಣ ಪುಟ್ಟ ಕೆಲಸಮಾಡುವ ದುಡಿಮೆಗಾರರನ್ನು ಹಾಗೆಯೇ ಅನೇಕ ಕಾರ್ಮಿಕರನ್ನು ದೂರದ ಸ್ಥಳಗಳಿಗೆ ಸ್ಥಳಾಂತರಿಸಲಾಯಿತು ಅಥವಾ ತಾತ್ಕಾಲಿಕವಾಗಿ ಬೇರೆ ಸ್ಥಳಗಳಿಗೆ ಕರೆದೊಯ್ಯಲಾಯಿತು. ವಸಂತಕುಂಜ್ ಮತ್ತು ವಸಂತವಿಹಾರ್ ಹತ್ತಿರವಿರುವ ಕೂಲಿಕ್ಯಾಂಪ್ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ಹಸಿರು ಪರದೆಯಿಂದ ಮುಚ್ಚಲಾಯಿತು. ಕೂಲಿಕ್ಯಾಂಪಿನ ವ್ಯಕ್ತಿಯೊಬ್ಬರು 'ಬೇರೆ ದೇಶಗಳಲ್ಲಿಯೂ ಬಡತನವಿದೆ. ಪರದೆಯನ್ನು ಯಾಕೆ ಬಿಡಬೇಕಾಗಿತ್ತು? ಮೂರು ದಿನಗಳು ನೀವು ಯಾರೂ ಹೊರಗೆ ಬರಬಾರದು ಎಂದು ಹೇಳಿದ್ದರೆ ಸಾಕಿತ್ತು. ನಾವು ಮನೆಯಿಂದ ಹೊರಗೆ ಬರುತ್ತಿರಲಿಲ್ಲ. ಕೋವಿಡ್-19 ಲಾಕ್‌ಡೌನ್‌ನಲ್ಲಿ ತಿಂಗಳುಗಟ್ಟಲೆ ಮನೆಯ ಒಳಗೆ ಇದ್ದೆವಲ್ಲವೇ' ಎಂದು ಹೇಳಿರುತ್ತಾರೆ. ಈ ಕುರಿತು ರಣಜಿತ್ ಎನ್ನುವ ವ್ಯಕ್ತಿ 'ನಾನು ಈ ಪ್ರದೇಶದಲ್ಲಿ ಕೂಲಿ ಕೆಲಸ ಮಾಡುತ್ತೇನೆ, ನನ್ನನ್ನು ಇಲ್ಲಿಂದ ದೂರಕ್ಕೆ ಸ್ಥಳಾಂತರಿಸಿದರೆ ನಾನು ಬೇವಸೋಪಾಯಕ್ಕೆ ದಿನನಿತ್ಯದರೂ ಗಳಿಸಲು ಹೇಗೆ ಸಾಧ್ಯವಾಗುತ್ತದೆ' ಎಂದು ಪ್ರಶ್ನೆ ಮಾಡಿದ್ದಾರೆ. ಇವು ಸುಶ್ಮಿ ಮಾಳ್ಮಮಗಳಾಗಲಿ, ಅಥವಾ ರಾಜಕೀಯದವರಿಗೆ ಮುಖ್ಯವಾಗಲಿ, ಬಡವರು ವಾಸಿಸುವ ಪ್ರದೇಶಗಳು, ಅವರ ಮನೆಗಳು ಕಾಣುವಂತೆ, ಬಹುಮಟ್ಟಿಕೆಗಾಗಿ ಹೆಸರಿನಲ್ಲಿ ಕಣ್ಣಿಗೆ ಬಟ್ಟೆಯನ್ನು ಕಟ್ಟಿ ಸ್ಥಳೀಯರು ಮೂಲ ಸೌಕರ್ಯದ ಅಭಿವೃದ್ಧಿಯ ಹೆಸರಿನಲ್ಲಿ ಅವರ ಬದುಕಿನ ಮೇಲೆ ಬೀರುವ ದುಷ್ಪರಿಣಾಮಗಳನ್ನು ಮುಚ್ಚಿಡುವ ಯತ್ನ ಮಾಡಲಾಗಿದೆ.

ಅಂದರೆ ದಾವೋಸ್‌ನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದರೆ, ಬೆಳವಣಿಗೆ ನಗರಗಳ ಮೂಲಕ ಮಾಡಿದ ಮಾಲಿನ್ಯ ಮತ್ತು ಬಡತನ ಮರೆಮಾಚಲು ಎಂಬ ಬೆಳಿಯು ಆರ್ಥಿಕ ಸಮೀಕ್ಷೆಯಲ್ಲಿ ಅಡಗಿಕೊಂಡಿದೆ. ಇದೇ ರೀತಿ ಆರ್ಥಿಕ ಚಟುವಟಿಕೆಗಳ ಮೇಲೆ ಜಿ-20 ಶೃಂಗಸಭೆಯ ಪರಿಣಾಮಗಳನ್ನು ಅಧ್ಯಯನ ಮಾಡಿದ ಸಂಶೋಧಕರು ಕಂಡುಕೊಂಡಿರುವ ಅಂಶಗಳು ಆಘಾತಕಾರಿಯಾಗಿವೆ. ಜಿ-20 ಶೃಂಗಸಭೆಯ ಸಂದರ್ಭದಲ್ಲಿ ಸಾರ್ವಜನಿಕ ಸಾರಿಗೆಗಾಗಿ ಸಮಯದೇಶವನ್ನು ಹಂಚಿಯಲ್ಲಿ ಸಡಿಸುವುದರಿಂದ ಸಾಮಾನ್ಯವಾಗಿ ಮತ್ತು ಅಗತ್ಯವಸ್ತುಗಳಿಗಾಗಿ ಬೆಳೆಯುವುದಿಲ್ಲ ಎಂದು ಪ್ರತಿಪಾದಿಸುವುದಲ್ಲ. ಬದಲಾಗಿ ಮತ್ತೆ ಮತ್ತೆ ಬೆಳವಣಿಗೆ ಆಧಾರಿತ ಜಾಗತಿಕ ಅಭಿವೃದ್ಧಿ ಮಾದರಿಗಳನ್ನು ಮುಚ್ಚಿಲಿಗೆ ತರಲು ನಡೆಯುವ ಅಂತರಾಷ್ಟ್ರೀಯ ಸಮಾವೇಶಗಳ ಚರ್ಚೆಗಳು ಸ್ಥಳೀಯ ಜನರನ್ನು ಹೇಗೆ ಒಳಗೊಳ್ಳುತ್ತಿದೆ ಎನ್ನುವುದು ವಿಶ್ಲೇಷಿಸುವುದು. ಆ ಮೂಲಕ ಆರ್ಥಿಕ ಬೆಳವಣಿಗೆ ಆಧಾರಿತ ಅಭಿವೃದ್ಧಿ ಚರ್ಚೆಗಳ ಮಾನದಂಡಗಳನ್ನು ಮರುಪರಿಶೀಲಿಸುವ ದಿಕ್ಕಿನಲ್ಲಿ ಚರ್ಚೆಗಳನ್ನು ಹುಟ್ಟು ಹಾಕುವಲ್ಲಿ ನಮ್ಮ ಬುದ್ಧಿಜೀವಿಗಳು ಏಕೆ ಮತ್ತೆ ಮತ್ತೆ ಸೋಲುತ್ತಿದ್ದಾರೆ ಎನ್ನುವುದು ಬಹುದೊಡ್ಡ ಬೌದ್ಧಿಕ ಬಿಕ್ಕಟ್ಟಾಗಿದೆ.

ಉದ್ಯೋಗ ನೀತಿಗಳಲ್ಲಿ ಗೊಂದಲ

ಕಳೆದ ಎರಡು ದಶಕಗಳಿಂದ ಭಾರತದ ಔಪಚಾರಿಕ ವಲಯಕ್ಕೆ ಸಾಕಷ್ಟು ಉತ್ತಮವಾದ ಉದ್ಯೋಗಗಳನ್ನು ಸೃಷ್ಟಿಸಲು ಸಾಧ್ಯವಾಗುತ್ತಿಲ್ಲ. ಭಾರತದ ಆರ್ಥಿಕತೆಯ ಸ್ವರೂಪ ಬದಲಾಗಬೇಕು. ಭಾರತದ ಉದ್ಯೋಗ ನೀತಿಗಳಲ್ಲಿ ಇರುವ ಗೊಂದಲಗಳು, ಉದ್ಯೋಗಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗಬೇಕು



ಎನ್ನುವ ಕಾಳಜಿಯನ್ನು ಅಭಿವೃದ್ಧಿ ಅರ್ಥಶಾಸ್ತಜ್ಞರು ಆಗಾಗ ಸ್ಪಷ್ಟಪಡಿಸುತ್ತಿದ್ದಾರೆ. ಉದ್ಯೋಗದಲ್ಲಿ ಹೆಚ್ಚಿನ ಮಹಿಳೆಯರು ಭಾಗವಹಿಸಿದ್ದರೆ ಆರ್ಥಿಕ ಬೆಳವಣಿಗೆಯ ವೇಗವು ಹೆಚ್ಚಾಗುತ್ತದೆ ಎಂದು ಆರ್ಥಿಕ ತಜ್ಞರು ಹೇಳುತ್ತಾರೆ. ಕೆಲವು ಅಧಿಕೃತ ದಾಖಲೆಗಳ ಸಿರೂಪಣೆಗಳು ಕೆಲವೇ ಮಹಿಳೆಯರು ಹಣ ಸಂಪಾದಿಸಲು ತಮ್ಮ ಮನೆಯಿಂದ ಹೊರಬರುತ್ತಾರೆ ಎನ್ನುವುದನ್ನು ತಿಳಿಸುತ್ತವೆ. ಆದರೆ, ಆರ್ಥಿಕ ಯೋಜನೆಗಳು ಮತ್ತು ಅಭಿವೃದ್ಧಿ ಅಂದಾಜುಗಳು ಈ ಅಂಶಗಳನ್ನು ಮತ್ತು ವಾಸ್ತವವನ್ನು ನಿರ್ಲಕ್ಷಿಸಿ, ಭಾರತದಲ್ಲಿ ಇತರ ದೇಶಗಳಿಗಿಂತ ಬಹುಪಾಲು ಮಹಿಳೆಯರು ತಮ್ಮ ಮನೆಯ ಹೊರಗೆ ಹಣ ಸಂಪಾದಿಸಲು ದುಡಿಯುತ್ತಿದ್ದಾರೆ ಎಂದು ಹೇಳುತ್ತವೆ. ಶತಮಾನಗಳಿಂದಲೂ, ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಕೃಷಿ ಚಟುವಟಿಕೆಗಳಲ್ಲಿ, ಮನೆಆಧಾರಿತರಾಗಿ, ಇತರರ ಮನೆಗಳಲ್ಲಿ ಚಲ್ಕರಿ ಮಾಡುವವರಾಗಿ, ಪುರುಳಿಗಳಲ್ಲಿ ಕಸ ಗುಡಿಸುವವರಾಗಿ, ಸಣ್ಣ ಉದ್ಯಮಿಗಳಾಗಿ ನೇಕಾರರಾಗಿ ಮತ್ತು ಕರಕುಶಲ ಕಾರ್ಮಿಕರಾಗಿ ಉತ್ಪಾದಕ ಕೆಲಸಗಳನ್ನು ಮಾಡುತ್ತಿದ್ದಾರೆ. ಮಹಿಳೆಯರ ಶಿಕ್ಷಕರಾಗಿ, ಅಂಗನವಾಡಿ ಮತ್ತು 'ಆಶಾ' ಕಾರ್ಯಕರ್ತರಾಗಿ (ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತರು) ಸಮುದಾಯಗಳಿಗೆ ಅಗತ್ಯ ಸೇವೆಗಳನ್ನು ಒದಗಿಸುತ್ತಿದ್ದಾರೆ.

ಆದರೆ ಸಮಯುಲ್ಲಿ ಮಹಿಳೆಯರು ಸಮುದಾಯಕ್ಕೆ ಒದಗಿಸುವ ಬಗ್ಗೆ ಸೇವೆಗಳನ್ನು (ಕಾಯ ಮತ್ತು ಕುಟುಂಬದ ಆರೈಕೆ ಸೇರಿದಂತೆ) ಉತ್ಪಾದಕ ಕೆಲಸವೆಂದು ಪರಿಗಣಿಸಲಾಗುವುದಿಲ್ಲ. ಅವರ ಕೆಲಸಕ್ಕೆ ಹೆಚ್ಚಿನ ಮೌಲ್ಯವಾಗಲಿ,

ಒಟ್ಟಾರೆ ಜಿಡಿಪಿಯ ಬೆಳವಣಿಗೆ ಒಂದು ರೋಗವಿದ್ದಂತೆ. ಇದು ಆರ್ಥಿಕತೆಯ ಸ್ವಾಭಾವಿಕತೆಯನ್ನು ಮತ್ತು ಸಾಮಾಜಿಕ ಕಾಳಜಿಗಳನ್ನು ಕೊಲ್ಲುತ್ತದೆ. ಉತ್ಪಾದನೆಯನ್ನು ಹೆಚ್ಚಿಸುವ ಆರ್ಥಿಕ ಯಂತ್ರಗಳನ್ನು ಪೋಷಿಸಲು ಸಹಜ ಸ್ವಾಭಾವಿಕ/ನೈಸರ್ಗಿಕ ಸಂಪನ್ಮೂಲಗಳನ್ನು ಸರಕುಗಳಾಗಿ ಪರಿವರ್ತಿಸಲಾಗುತ್ತದೆ. ಹೆಚ್ಚಿನ ಜಿಡಿಪಿ ಬೆಳವಣಿಗೆಗಾಗಿ ಪ್ರಕೃತಿಯನ್ನು ಮರುವಿನ್ಯಾಸಗೊಳಿಸಲಾಗಿದೆ. ಹೆಚ್ಚಿನ ಅಣೆಕಟ್ಟುಗಳು, ವಿಸ್ತೃತ ರಸ್ತೆಗಳು, ಹಿಮಾಲಯ ಸೇರಿದಂತೆ ಪ್ರಾಕೃತಿಕ ಪರಿಸರಗಳಿಗೆ ಹೆಚ್ಚಿನ ಪ್ರವಾಸಿಗರ ಬೇಟಿಗೆ ಹೆಚ್ಚುತ್ತಿರುವ ಮೂಲಸೌಲಭ್ಯಗಳು ಇನ್ನೂ ಮುಂತಾದ ಪ್ರಾಕೃತಿಕ ಸಂಪನ್ಮೂಲಗಳ ಶೋಷಣೆಗೆ ಪ್ರಕೃತಿ ಪ್ರತಿಕ್ರಿಯಿಸುತ್ತಿದೆ. 'ನನ್ನನ್ನು ತುಂಬಾ ಶೋಷಿಸಬೇಡಿ' ಎಂದು ಅದು ಹೇಳುತ್ತಿದೆ. 'ನನ್ನನ್ನು ಇನ್ನಷ್ಟು ಶೋಷಿಸಿದರೆ ನೀವು ಕೆಟ್ಟ ಪರಿಣಾಮವನ್ನು ಅನುಭವಿಸಬೇಕಾಗುತ್ತೆ.' ಇದನ್ನು ಹವಾಮಾನ ವೈಪರೀತ್ಯಗಳ ಮೂಲಕ, ಭೂಮಿ ಕಂಪಿಸುವ ಮೂಲಕ, ಕಡಿಮೆ ಸಮಯದಲ್ಲಿ ಹೆಚ್ಚು ಮಳೆ ಸುರಿಯುವ ಮೂಲಕ, ಪ್ರವಾಹಗಳು ಹೆಚ್ಚಾಗುವ ಮೂಲಕ ಸೂಚನೆಗಳನ್ನು ನೀಡುತ್ತಿದೆ. ಇತ್ತೀಚೆಗೆ ಜೋಶಿಮಠದಲ್ಲಿ ಉಂಟಾಗಿರುವ ಬಿಕ್ಕಟ್ಟುಗಳು, ಚೆನ್ನೈನಲ್ಲಿ ಸುರಿದ ಮಳೆ ಇದನ್ನು ಸ್ಪಷ್ಟಪಡಿಸುತ್ತವೆ.



ಬೆಲೆಯಾಗಲಿ ಇಲ್ಲ. ಮಹಿಳೆಯರ ಕೆಲಸ ಅನುತ್ಪಾದಕ ಕೆಲಸ ಎಂದು ಹೇಳಿ ಮಹಿಳೆಯರಿಗೆ ಕಡಿಮೆ ಸಂಬಳ ನೀಡಲಾಗುತ್ತದೆ. ಈ ಕುರಿತು ಯಾವುದೇ ಕಠಿಣ ಕ್ರಮಗಳನ್ನು ಜಾರಿಮಾಡುವುದಿಲ್ಲ. ಆದರೆ ಇದಕ್ಕೆ ಬದಲಾಗಿ, ಜಿಡಿಪಿಯನ್ನು ಹೆಚ್ಚಿಸಲು ಔಪಚಾರಿಕ ಆರ್ಥಿಕತೆಯು ನೀಡುವ ಸೀಮಿತ ಉದ್ಯೋಗಗಳಿಗೆ ಮಹಿಳೆಯರನ್ನು ಎಳೆದು ತರಲಾಗುತ್ತಿದೆ. ಔಪಚಾರಿಕ ಆರ್ಥಿಕತೆಗೆ ಹೆಚ್ಚಿನ ಮಹಿಳೆಯರನ್ನು ತಳ್ಳುವುದು ಔಪಚಾರಿಕ ಆರ್ಥಿಕತೆಯಲ್ಲಿ 'ಮಹಿಳೆಯರ ಭಾಗವಹಿಸುವಿಕೆಯ ದರ' (female participation rate)ವನ್ನು ಸುಧಾರಿಸುತ್ತದೆ. ಇದು ಜಿಡಿಪಿಗೆ ಮಹತ್ವದ ಕೊಡುಗೆಯನ್ನು ನೀಡುತ್ತದೆ. ಆದರೆ ಆರ್ಥಿಕ ಬೆಳವಣಿಗೆಯ ಮೂಲಭೂತ ಸಮಸ್ಯೆಯನ್ನು ಪರಿಹರಿಸುವುದಿಲ್ಲ. ಅಂದರೆ ಭಾರತದ ಔಪಚಾರಿಕ ಆರ್ಥಿಕ ವಲಯಗಳು ಸಾಕಷ್ಟು ಉತ್ತಮ ಉದ್ಯೋಗಗಳನ್ನು ಭಾರತದಲ್ಲಿ ಇರುವ 1.4 ಶತಕೋಟಿ ಜನಸಂಖ್ಯೆಯ ಅಗತ್ಯಕ್ಕೆ ಅನುಗುಣವಾಗಿ ಸೃಷ್ಟಿಸಲು ಮತ್ತು ಪೂರೈಸಲು ಸಾಧ್ಯವಿಲ್ಲ. ಈಗ ಇದು ವಿಶ್ವದಲ್ಲೇ ಅತಿ ದೊಡ್ಡ ಸಂಖ್ಯೆಯಾಗಿದೆ. ಗೌರವಯುತವಾಗಿ ಮನೆಯ ಆರೈಕೆಯಲ್ಲಿ ಘನತೆಯಿಂದ ತೊಡಗಿರುವ ಮಹಿಳೆಯರಿಗೆ ಉತ್ತಮ ಉದ್ಯೋಗ ಅವಕಾಶದ ಜೊತೆಗೆ ಹೆಚ್ಚಿನ ಪ್ರಮಾಣದ ಯುವಕರಿಗೂ ಉದ್ಯೋಗ ಬೇಕಾಗಿದೆ. ಅತ್ಯಂತ ವೇಗವಾಗಿ ಹೆಚ್ಚುತ್ತಿರುವ ಯುವ ನಿರುದ್ಯೋಗಿ ಪುರುಷರ ಸಂಖ್ಯೆಯು, ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯಗಳಿಗೆ, ಅಪರಾಧ, ಹಿಂಸಾಚಾರ, ಇನ್ನೂ ಮುಂತಾದ ಸಮಾಜಘಾತುಕ ಚಟುವಟಿಕೆಗೆ ಕಾರಣವಾಗುತ್ತಿದೆ. ಹೀಗಾಗಿ ನಮ್ಮ ಅಭಿವೃದ್ಧಿ ನೀತಿಗಳು ಕೆಲವೇ ಕೆಲವು ಮಂದಿಗೆ ಹೆಚ್ಚಿನ ಲಾಭ ಮಾಡುವ ಅವಕಾಶವನ್ನು ಕಲ್ಪಿಸುತ್ತಿರುವ ಆರ್ಥಿಕ ಬೆಳವಣಿಗೆ ಪರ್ಯಾಯವಾಗಿ ಬಹುಜನರನ್ನು ಒಳಮಾಡಿಕೊಳ್ಳುವ ಸುಸ್ಥಿರ ಅಭಿವೃದ್ಧಿ ಪ್ರಕ್ರಿಯೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ.

ಆರ್ಥಿಕ ಬೆಳವಣಿಗೆ ಒಂದು ರೋಗವಿದ್ದಂತೆ

ಒಟ್ಟಾರೆ ಜಿಡಿಪಿಯ ಬೆಳವಣಿಗೆ ಒಂದು ರೋಗವಿದ್ದಂತೆ. ಇದು ಆರ್ಥಿಕತೆಯ ಸ್ವಾಭಾವಿಕತೆಯನ್ನು ಮತ್ತು ಸಾಮಾಜಿಕ ಕಾಳಜಿಗಳನ್ನು ಕೊಲ್ಲುತ್ತದೆ. ಉತ್ಪಾದನೆಯನ್ನು ಹೆಚ್ಚಿಸುವ ಆರ್ಥಿಕ ಯಂತ್ರಗಳನ್ನು ಪೋಷಿಸಲು ಸಹಜ ಸ್ವಾಭಾವಿಕ/ನೈಸರ್ಗಿಕ ಸಂಪನ್ಮೂಲಗಳನ್ನು ಸರಕುಗಳಾಗಿ ಪರಿವರ್ತಿಸಲಾಗುತ್ತದೆ. ಹೆಚ್ಚಿನ ಜಿಡಿಪಿ ಬೆಳವಣಿಗೆಗಾಗಿ ಪ್ರಕೃತಿಯನ್ನು ಮರುವಿನ್ಯಾಸಗೊಳಿಸಲಾಗಿದೆ. ಹೆಚ್ಚಿನ ಅಣೆಕಟ್ಟುಗಳು, ವಿಸ್ತೃತ ರಸ್ತೆಗಳು, ಹಿಮಾಲಯ ಸೇರಿದಂತೆ ಪ್ರಾಕೃತಿಕ ಪರಿಸರಗಳಿಗೆ ಹೆಚ್ಚಿನ ಪ್ರವಾಸಿಗರ ಬೇಟಿಗೆ ಹೆಚ್ಚುತ್ತಿರುವ ಮೂಲಸೌಲಭ್ಯಗಳು ಇನ್ನೂ ಮುಂತಾದ ಪ್ರಾಕೃತಿಕ ಸಂಪನ್ಮೂಲಗಳ ಶೋಷಣೆಗೆ ಪ್ರಕೃತಿ ಪ್ರತಿಕ್ರಿಯಿಸುತ್ತಿದೆ. 'ನನ್ನನ್ನು ತುಂಬಾ ಶೋಷಿಸಬೇಡಿ' ಎಂದು ಅದು ಹೇಳುತ್ತಿದೆ. 'ನನ್ನನ್ನು ಇನ್ನಷ್ಟು ಶೋಷಿಸಿದರೆ ನೀವು ಕೆಟ್ಟ ಪರಿಣಾಮವನ್ನು ಅನುಭವಿಸಬೇಕಾಗುತ್ತೆ.' ಇದನ್ನು ಹವಾಮಾನ ವೈಪರೀತ್ಯಗಳ ಮೂಲಕ, ಭೂಮಿ ಕಂಪಿಸುವ ಮೂಲಕ, ಕಡಿಮೆ ಸಮಯದಲ್ಲಿ ಹೆಚ್ಚು ಮಳೆ ಸುರಿಯುವ ಮೂಲಕ, ಪ್ರವಾಹಗಳು ಹೆಚ್ಚಾಗುವ ಮೂಲಕ ಸೂಚನೆಗಳನ್ನು ನೀಡುತ್ತಿದೆ. ಇತ್ತೀಚೆಗೆ ಜೋಶಿಮಠದಲ್ಲಿ ಉಂಟಾಗಿರುವ ಬಿಕ್ಕಟ್ಟುಗಳು, ಚೆನ್ನೈನಲ್ಲಿ ಸುರಿದ ಮಳೆ ಇದನ್ನು ಸ್ಪಷ್ಟಪಡಿಸುತ್ತವೆ.

ಆರ್ಥಿಕ ಬೆಳವಣಿಗೆಯ ಪ್ಯಾರಡೈಮ್ ಅಥವಾ ಮಾದರಿಯು 'ಬೆಳವಣಿಗೆ, ಬೆಳವಣಿಗೆ, ಬೆಳವಣಿಗೆ' ಯನ್ನು ಹೆಚ್ಚು ಪ್ರಚುರಪಡಿಸಿದೆ. ಈ ಪ್ಯಾರಡೈಮ್ ಅಥವಾ ಮಾದರಿಯು ಹೂಡಿಕೆದಾರರಿಗೆ ಮಾನವ ಸಮಾಜದಲ್ಲಿ ಪ್ರಕೃತಿಯು ಹೆಚ್ಚು ಸಂಪತ್ತನ್ನು ಮತ್ತು ಹೆಚ್ಚಿನ ಜಿಡಿಪಿಯನ್ನು ಉತ್ಪಾದಿಸುವ ಸಾಧನವಾಗಿದೆ. ಬಂಡವಾಳಶಾಹಿ ಉದ್ಯಮಶೀಲತೆಯಲ್ಲಿ ಹೂಡಿಕೆದಾರರಿಗೆ ಮಾನವ ದುಡಿಮೆ ಮತ್ತು ಬುದ್ಧಿವಂತಿಕೆಯು ಮೌಲ್ಯವನ್ನು ಉತ್ಪಾದಿಸುವ ಸರಕುಗಳಾಗಿವೆ. ಸಮಯಕ್ಕೆ ಸರಿಯಾಗಿ ಸರಕು ಸಾಮಗ್ರಿಗಳ ಪ್ಯಾಕೇಟ್‌ಗಳನ್ನು ಗ್ರಾಹಕರಿಗೆ ತಲುಪಿಸಲು ಮೋಟಾರ್‌ಸೈಕಲ್ ಸವಾರರನ್ನು ನೇಮಿಸಿಕೊಳ್ಳುವ ಪ್ಲಾಟ್‌ಫಾರ್ಮ್ ಸೇವೆಯು ಕೆಲಸದ ದಕ್ಷತೆಯ ಬಗ್ಗೆ ಮಾತ್ರ ಕಾಳಜಿ ವಹಿಸುತ್ತದೆ. ಸವಾರರು ತಮ್ಮ ಮೋಟಾರ್‌ಸೈಕಲ್‌ಗಳಲ್ಲಿ ಸರಿಯಾದ ಸಮಯಕ್ಕೆ ಸರಕು ಸಾಮಗ್ರಿಗಳನ್ನು ಗ್ರಾಹಕರಿಗೆ ವಿತರಣೆಗಾಗಿ ಮಾತ್ರ ಪಾವತಿಸುತ್ತದೆ. ಅವರ ಮಾನವೀಯ ಅಗತ್ಯಗಳು (ಅವರ ಸುರಕ್ಷತೆ, ಆರೋಗ್ಯ ಮತ್ತು ಸಾಕಷ್ಟು ಆದಾಯ, ಇತ್ಯಾದಿ) ವ್ಯಾಪಾರ ಮಾಡುವವರ ಮೇಲೆ ನಿರ್ಧರಿತವಾಗುತ್ತದೆ. ದುಡಿಯುವ ಜನರಿಗೆ ಸಾಮಾಜಿಕ ಭದ್ರತೆಯನ್ನು ನೀಡುವುದು ಮಾಲೀಕರ ಕಾಳಜಿಯಲ್ಲ. ಇವರನ್ನು ರಾಜ್ಯ ವ್ಯವಸ್ಥೆಯು ಕಾಳಜಿ ವಹಿಸಬೇಕು ಎಂದು ಬೆಳವಣಿಗೆ ಆಧಾರಿತ ಮಾದರಿಯು ಹೇಳುತ್ತದೆ.

ಮಾನವ ನಾಗರಿಕತೆಯ ಉದ್ದೇಶ ಕೇವಲ ಜಿಡಿಪಿಯ ಬೆಳವಣಿಗೆ ಮಾತ್ರವಲ್ಲ. ನಮ್ಮ ನಾಯಕರು ಎಲ್ಲಾ ಭಾರತೀಯರಿಗೆ 'ಪೂರ್ಣ ಸ್ವರಾಜ್' ತಲುಪಿಸುವ ಮಾರ್ಗಗಳನ್ನು ಕಂಡುಕೊಳ್ಳಬೇಕು. ಅಂದರೆ ಎಲ್ಲರಿಗೂ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯಗಳನ್ನು ತಲುಪುವ ಮಾರ್ಗಗಳನ್ನು ನಮ್ಮ ನಾಯಕರು ಕಂಡುಕೊಳ್ಳಬೇಕು. ಆರ್ಥಿಕ ಬೆಳವಣಿಗೆಯು ಎಲ್ಲರಿಗೂ ಕಲಿಯಲು ಮತ್ತು ಘನತೆಯಿಂದ ದುಡಿಯುವ ಸಮಾನ ಅವಕಾಶಗಳನ್ನು ಸೃಷ್ಟಿಸಬೇಕು. ಅಭಿವೃದ್ಧಿ ಪ್ರಕ್ರಿಯೆಗಳು ಎಲ್ಲಾ ಜೀವ ಜಗತ್ತನ್ನು ಪೋಷಿಸುವಂತೆ ಮತ್ತು ಯಾವುದೇ ರೀತಿಯಿಂದಲೂ ನೈಸರ್ಗಿಕ ಪರಿಸರಕ್ಕೆ ಹಾನಿ ಉಂಟಾಗದಂತೆ ನಡೆಯಬೇಕು. ಹೆಚ್ಚಿನ ಪ್ರಮಾಣದ ಬಂಡವಾಳದ ಹೂಡಿಕೆಗಳೊಂದಿಗೆ ಜಿಡಿಪಿಯನ್ನು ಹೆಚ್ಚಿಸುವುದು ಆರ್ಥಿಕತೆಯ ಆಕಾರವನ್ನು ಬದಲಾಯಿಸುವುದಕ್ಕಿಂತಲೂ ಸುಲಭ. ಆರ್ಥಿಕತೆ ತನ್ನ ಉತ್ಪಾದನೆಯ ಆಕಾರದ ಗಾತ್ರವನ್ನು ಹೆಚ್ಚಿಸುವಾಗ ಅದು ಹೆಚ್ಚು ಜನರನ್ನು ಒಳಗೊಳ್ಳುವಂತೆ ಇರಬೇಕು. ಆರ್ಥಿಕ ವಿಜ್ಞಾನ ಮತ್ತು ನೀತಿಗೆ ಹೊಸ ಪ್ಯಾರಾಡೈಮ್ ಅಥವಾ ಮಾದರಿಯ ಅಗತ್ಯವಿದೆ. ಏಕೆಂದರೆ 21ನೇ ಶತಮಾನದಲ್ಲಿ ಮಾನವಕುಲದ ಉಳಿವಿಗಾಗಿ ಹೊಸ ಅಭಿವೃದ್ಧಿ ಪ್ಯಾರಾಡೈಮ್‌ನ ಚಿಂತನೆ ಅತ್ಯಗತ್ಯವಾಗಿದೆ. ಭಾರತ ಜಿ-20ಯನ್ನು ಮುನ್ನಡೆಸುವುದರಾಚೆಗೂ ಮನುಕುಲದ ಉಳಿವಿಗೆ ಮಹತ್ವದ ಗುರಿಗಳನ್ನು ಸಾಧಿಸಬೇಕು. ಬುದ್ಧ ಗುರು ಹೇಳುವಂತೆ, ನಮ್ಮ ಬುದ್ಧಿ ಕರುಣೆಯ ಮೂಲ ದಾಟಿದಾಗಲೇ ವಿವೇಕವಾಗುವುದು. ಹೀಗೆಯೇ ಆರ್ಥಿಕ ಬೆಳವಣಿಗೆ ಸಾಧಿಸಬೇಕು ಎನ್ನುವ ನಮ್ಮ ಅಭಿವೃದ್ಧಿ ಚಿಂತಕರ ಬುದ್ಧಿಗೆ ಹಿಡಿದಿರುವ ಹುಚ್ಚನ್ನು ಬುದ್ಧನ ಕರುಣೆ ಮೂಲಕ ದಾಟಿಸಬೇಕಾಗಿದೆ. ಆಗ ಮಾತ್ರ ಸೃಜನಾತ್ಮಕ ಸಂಸ್ಕೃತಿಯ ಮೂಲಕ ಪರ್ಯಾಯ ಆರ್ಥಿಕತೆಯನ್ನು ಮತ್ತು ಸುಸ್ಥಿರ ಭವಿಷ್ಯವನ್ನು ಸಮತೆಯ ನೆಲೆಯಲ್ಲಿ ರೂಪಿಸಲು ಸಾಧ್ಯ. ಹೀಗಾಗಿ ಆರ್ಥಿಕ ಬೆಳವಣಿಗೆ ಆಧಾರಿತ ಅಭಿವೃದ್ಧಿ ದೃಷ್ಟಿಕೋನಗಳನ್ನು ಮರುಶೋಧಿಸಬೇಕಾಗಿದೆ. □

15

3.4.5

ISSN 2454-6054

ಸಂವಾದ

ಮಾರ್ಚ್ 2024 ರೂ. 40



'ರಾಮ್ ಭರೋಸೆ' ಬಜೆಟ್

ಸುಂದರ ಆರಂಭದ ಅಂತ್ಯ

ಕೆಟ್ಟ ಅಂತ್ಯದ ಆರಂಭ

Scanned with OKEN Scanner

ಸಂವಾದ

ಮಾಸಿಕ ಪತ್ರಿಕೆ

ಸಂಪುಟ 22 ಸಂಚಿಕೆ 05

ಮಾರ್ಚ್ 2024

ಸಂಪಾದಕರು:
ಇಂದುಧರ ಹೊನ್ನಾಪುರ

ಸಂಪಾದಕೀಯ ಬಳಗ

ಡಾ. ಎಸ್.ಜಿ. ಸಿದ್ಧರಾಮಯ್ಯ
ಪ್ರೊ. ರಹಮತ್ ತರೀಕೆರೆ
ಡಾ. ಕೆ. ಸುಜ್ಞಾನಿ
ಡಾ. ಬಿ. ಜಯಮ್ಮ
ಡಾ. ಬಿ.ಎಂ. ಸುಮಾ
ಬಿ. ಶ್ರೀಪಾದ ಭಟ್
ಡಾ. ಎಂ.ಜಿ. ವೆಂಕಟೇಶಮೂರ್ತಿ
ಎ.ಎಸ್. ಪದ್ಮನಾಭಮೂರ್ತಿ

ವಿಳಾಸ: ಸೂರ್ಯಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು ೫೬೦ ೦೯೧

EDITOR:
INDUDHARA HONNAPURA

PRINTED AND PUBLISHED BY
S.R. GOVINDU
ON BEHALF OF SAMVAADA
ANJANA NAGAR, MAGADI ROAD
VISHVANEEDAM POST
BANGALORE 560 091

Circulation: 9108830437
9945264687

Editorial: 9448048806

email Editorial
samvaadapatrike@gmail.com
samvaada@hotmail.com

Circulation :
samvaadacirculation@gmail.com

ಒಳಪುಟಗಳಲ್ಲಿ

- ಪತ್ರಗಳು — ೦೪
- ಸಂಪಾದಕರಿಂದ ಸಂವಾದ
  - ಡಾ. ಕೆ ಸುಜ್ಞಾನಿ — ೦೬
  - ಅನಂತ ಹಳೆ ಬೆಳ್ಳಾವಿ — ೦೬
  - ಅಮೃತ ಸೋಸವಕಟ್ಟಿಗಿ — ೦೮
- "ರಾಮ್ ಭರೋಸೆ" ಬಜೆಟ್
  - ಬಿ ಪಿ ಸಂದೇಶ — ೧೦
- ಒಂದು ಸುಂದರ ಆರಂಭದ ಅಂತ್ಯ
  ಒಂದು ಕೆಟ್ಟ ಅಂತ್ಯದ ಆರಂಭ?
  - ವಿ ನಾಗಾಯಣ — ೧೪
- ಮಾಸ್ತಿಯವರ ಸಂಕ್ಷಿಪ್ತ ಬೈಪಸ ಬತ್ತನೆಯ ಕಥಾನಕದ ಒಳ ಹೊರಗು
  - ಸಿ ಜಿ ಮಂಜುಳಾ — ೧೬
- ಅಭಿವೃದ್ಧಿಯ ಹೆಸರಲ್ಲಿ ನಡೆಯುತ್ತಿರುವ ಅನ್ಯಾಯ
  - ಎಸ್ ಗಾಯತ್ರಿ — ೧೮
- ಸಂಸದೀಯ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತಿರುವ ಭಾರತ ಕರ್ನಾಟಕದ ವಿದ್ಯಮಾನಗಳ ಅವಲೋಕನ
  - ವಿನಯ್ ಶ್ರೀನಿವಾಸ್ — ೨೦
- ಅಣಾಯಿಪಲ್ಲಿನ 'ಲೂಸಿಯ' ಸ್ವಾತಂತ್ರ್ಯೋತ್ಸವ
  - ಆರ್ ಬಿ ಗುರುಬಸವರಾಜ — ೨೪
- ಡಾ. ಎಂ.ಎಸ್. ಸ್ವಾಮಿನಾಥನ್ ಪದವಿಯ ಶಿಫಾರಸ್ಸು ರೈತ ಸಮುದಾಯಕ್ಕೆ ಪೂರಕವಾಗಲಿದೆ
  - ಎಚ್ ಆರ್ ನವೀನ್ ಕುಮಾರ್ — ೨೮
- ಸ್ವಾಮಿಕಲ್ಲಿನ ಕಾಲು ಹೋಳು ನಮ್ಮ ಸಂವಿಧಾನವೂ
  - ಸೈಯ್ಯದ್ ಯಯಪ್ರಕಾಶ್ ಕಿಚ್ಚು ಮಾ — ೩೦
- ಆಧುನಿಕತೆಯ ದಾಂಗುಡಿಯಲ್ಲಿ ಸ್ತ್ರೀ ಪಂಕಟದ ಪಬಲೀಕರಣ?
  - ಮಂಜುನಾಥ ಉಲವತ್ತಿ ಶೆಟ್ಟರ್ — ೩೨
- 'ಶಿಕ್ಷಣದ ನಾತವೇ ದೇಶದ ವಿನಾಶ'ವೆಂಬ ವಿಚ್ಛಿದ್ರ ಪ್ರಜ್ಞೆ, ಪ್ರಭುತ್ವ, ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗಿರಲಿ...
  - ಡಾ. ಪ್ರವೀಣ್ ಎನ್ ವಿ — ೩೪
- ನಿತ್ಯ ಬದುಕಿಗೆ ಹತ್ತಿರವಾಗುವ ಕವಿ: ಗುಲ್ಜಾರ್
  - ನಾ ದಿವಾಕರ — ೩೮
- ಕಾಲದ ಕುಲುಮೆಯಲ್ಲಿ ಬಾಳು ರೂಪುಗೊಂಡ ಬಗೆ: 'ಕುಲುಮೆ'
  - ಡಾ. ಎಚ್ ಎಸ್ ಅನುಪಮಾ — ೪೦
- ಪಲ್ಲಿ ಬದುಕಿನ ವೈಚಿತ್ರ್ಯಗಳು ಮತ್ತು ಬೆಳ್ಳಿಗಳು
  - ಡಾ. [illegible] — ೪೨
- ಕೆಲವು ಕಬ್ಬಿಗ-44
  - ಮಲ್ಲಿಗೆ ಸಿರಿಮನೆ — ೪೮
- ಲೋಕವಲೋಕ 34
  - ಜ್ಯಾ ನಾಗಮೋಹನ ದಾಸ್ — ೫೨
- Just Asking
  - ಶಿವಸುಂದರ್ — ೫೪















ಡಾ. ಎಚ್ ಡಿ ಪ್ರಶಾಂತ್
Email: gajaasya@gmail.com

ಹಳ್ಳಿ ಬದುಕಿನ ಸ್ಥಿತ್ಯಂತರಗಳು ಮತ್ತು ಬಿಕಟ್ಟುಗಳು

ಯುವ ರೈತರಿಗೆ ಬೇಕು ಸಂಗಾತಿ, ಹಳ್ಳಿವಾಸಿಗಳಿಗೆ ಹೆಣ್ಣು ಕೊಡುವವರಿಲ್ಲ ಎನ್ನುವ ಶೀರ್ಷಿಕೆಯಲ್ಲಿ ಜನವರಿ 14, 2024ರಂದು ಪ್ರಜಾವಾಣಿ ದಿನಪತ್ರಿಕೆಯಲ್ಲಿ (ಒಳನೋಟ) ವರದಿಯೊಂದು ಪ್ರಕಟಗೊಂಡಿತ್ತು. ಈ ವಿಷಯದ ಮೇಲೆ ಸಂವಾದ ಮತ್ತು ಚರ್ಚೆಗಳನ್ನು ಪ್ರಾದೇಶಿಕ ಪತ್ರಿಕೆಗಳೂ ಸೇರಿದಂತೆ ಕೆಲವು ಮಾಧ್ಯಮಗಳು ಪ್ರಾರಂಭಿಸಿವೆ. ಹೀಗೆ ಹುಟ್ಟಿಕೊಂಡಿರುವ ಚರ್ಚೆಗಳು ರೈತ ಕುಟುಂಬದ ಯುವಕರಿಗೆ ಎದುರಾಗಿರುವ ವಧುಗಳ ಕೊರತೆಯೂ ಹಳ್ಳಿಗಾಡಿನಲ್ಲಿ ಸಾಮಾಜಿಕ ಸಮಸ್ಯೆಯಾಗಿದೆ ಎನ್ನುವ ಚರ್ಚೆಯನ್ನು ಮುನ್ನೆಲೆಗೆ ತಂದಿವೆ. ಇದು ಸಮಕಾಲೀನ ಸಂದರ್ಭದಲ್ಲಿ [illegible] ಸಂಗಾತಿ ಸಮಾಜ ಎದುರಿಸುತ್ತಿರುವ ಸಂಗಾತಿಯ ಸಂಗಾತಿ ಈ ಕುರಿತು ಪ್ರತಿಕ್ರಿಯೆ ನೀಡಿರುವ ತಜ್ಞರು ಕೃಷಿಯನ್ನು ಘನತೆಯಿಂದ ನೋಡಬೇಕು; ಲಿಂಗಾನುಪಾತದಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ನಿರಂತರವಾಗಿ ಕಡಿಮೆಯಾಗಿರುವುದು, ಜಾತಿ–ಉಪಜಾತಿಗಳು ಮತ್ತು ಎರ್ಗಿಗಳ ನಡುವೆ ನೈಸಾಹಿತ ಸಂಬಂಧಗಳಿಗೆ ನಾನು ಹೆಚ್ಚಿನ ಪ್ರಮಾಣದಲ್ಲಿ ತೆರೆದುಕೊಂಡಿಲ್ಲದಿರುವುದು ಇದಕ್ಕೆ ಕಾರಣ ಎಂದಿದ್ದಾರೆ. ಇದು ಮೇಲುನೋಟಕ್ಕೆ ಸರಿ ಎನ್ನಿಸಿದರೂ ಹೆಚ್ಚು ಸರಳೀಕೃತ ದೃಷ್ಟಿಕೋನವಾಗಿದೆ. ಏಕೆಂದರೆ, ಹಳ್ಳಿಯ ಯುವಕರನ್ನು ಮದುವೆಯಾಗಲು ಹೆಣ್ಣು ಮಕ್ಕಳು ಮುಂದೆ ಬರುತ್ತಿಲ್ಲ ಎನ್ನುವ ವಿದ್ಯಮಾನವು ಹೆಚ್ಚು ಸಂಕೀರ್ಣವಾಗಿದ್ದು, ಬಹು ಆಯಾಮಗಳ ಸ್ವರೂಪವನ್ನು ಹೊಂದಿದೆ. ಈ ವಿದ್ಯಮಾನವನ್ನು ಬಹು ಆಯಾಮಗಳ ಅನುಸಂಧಾನಗಳ (ಮಲ್ಟಿಪಲ್ ಅಪ್ರೋಚ್) ಮೂಲಕವೇ ಅರ್ಥಮಾಡಿಕೊಳ್ಳಬೇಕಾಗಿದೆ.

[illegible]

ರಚನೆಯಿಂದ ರೂಪುಗೊಳ್ಳುವ ಪ್ರಶ್ನೆಯನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಹಳ್ಳಿಯ ಯುವಕರನ್ನು ಮದುವೆಯಾಗಲು ಹೆಣ್ಣು ಮಕ್ಕಳು ಏಕೆ ಮುಂದೆ ಬರುತ್ತಿಲ್ಲ? ಇದಕ್ಕೆ ಕೃಷಿಯಲ್ಲಿ ಉಂಟಾಗಿರುವ ಸ್ಥಿತ್ಯಂತರಗಳು ಎಷ್ಟರಮಟ್ಟಿಗೆ ಕಾರಣವಾಗಿವೆ? ಉದ್ಯೋಗ ಮಾರುಕಟ್ಟೆಯಲ್ಲಿನ ಉಂಟಾಗುತ್ತಿರುವ ಸ್ಥಿತ್ಯಂತರಗಳು ಎಷ್ಟರಮಟ್ಟಿಗೆ ಕಾರಣವಾಗಿವೆ? ಅಭಿವೃದ್ಧಿ ನೀತಿಗಳು ಎಷ್ಟರಮಟ್ಟಿಗೆ ಕಾರಣವಾಗಿವೆ? ಇದಕ್ಕೆ ರಚನೆಯಲ್ಲಿ ಇರುವ ಲಸಮಾನತೆಗಳು ಹೇಗೆ ಕಾರಣವಾಗಿವೆ? ಇನ್ನು ಮುಂತಾದ ಪ್ರಶ್ನೆಗಳ ಮೂಲಕ ಹಳ್ಳಿವಾಸಿಗಳಿಗೆ ಹೆಣ್ಣು ಕೊಡುವವರಿಲ್ಲ ಎನ್ನುವ ವಿದ್ಯಮಾನವನ್ನು ಕೃಷಿಸಮಾಜದ ದುಡಿಮೆ ಮತ್ತು ಆರ್ಥಿಕ ಸ್ವರೂಪದಲ್ಲಿ ಉಂಟಾಗಿರುವ ಸ್ಥಿತ್ಯಂತರಗಳ ನೆಲೆಯಲ್ಲಿ ಅರ್ಥಮಾಡಿಕೊಳ್ಳುವುದು ಈ ಲೇಖನದ ಆಕಯವಾಗಿದೆ.

ಮೊದಲಿಗೆ ಕೃಷಿಸಮಾಜದ ದುಡಿಮೆಯ ಸ್ವರೂಪದಲ್ಲಿನ ಉಂಟಾಗಿರುವ ಸ್ಥಿತ್ಯಂತರಗಳನ್ನು ನೋಡೋಣ. ಡಿಜಿಟಲ್ ತಂತ್ರಜ್ಞಾನವು ನಮ್ಮ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಬದುಕಿನ ಬಹು ಆಯಾಮಗಳನ್ನು ಮರುರೂಪಿಸುವ, ನಿಯಂತ್ರಿಸುವ, ನಿರ್ದೇಶಿಸುವ ಕೆಲಸ ಮಾಡುತ್ತಿದೆ. ಡಿಜಿಟಲ್ ತಂತ್ರಜ್ಞಾನವು ನಮ್ಮನ್ನು ಹಿಂದಿಗಿಂತಲೂ ಹೆಚ್ಚು ಬುದ್ಧಿವಂತರನ್ನಾಗಿ.



ಸಣ್ಣ ಬೈಕ್ ರಿಪೇರಿಯಿಂದ ಹಿಡಿದು ಬೃಹತ್ ಗಾತ್ರದ ಯಂತ್ರಗಳ ರಿಪೇರಿಯೂ ಸ್ಥಳೀಯ ಮೆಕ್ಯಾನಿಕ್‌ಗಳಿಗೆ ಬದಲಾಗಿ, ಬಂಡವಾಳಶಾಹಿಗಳ ಕಂಪನಿ ವಾಹನ ಶೋರೂಂಗಳನ್ನು ಅವಲಂಬಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ವಾಹನಗಳು ಮತ್ತು ಬೈಕ್ ರಿಪೇರಿ ಮಾಡುವವರು ಸಹ ಹೊಸ ತಂತ್ರಜ್ಞಾನಗಳನ್ನು ಪಡೆದುಕೊಳ್ಳುವುದು ಅವಶ್ಯಕವಾಗಿದೆ. ಈ ವಾಹನಗಳ ರಿಪೇರಿಗೆ ಅಗತ್ಯವಾಗಿ ಎಲೆಕ್ಟ್ರಾನಿಕ್ ಡಿವೈಸ್‌ಗಳನ್ನು ಮತ್ತು ಲ್ಯಾಪ್‌ಟಾಪ್‌ಗಳನ್ನು ಬಳಸಲೇಬೇಕಾದ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ತಂತ್ರಜ್ಞಾನದಲ್ಲಿ ಉಂಟಾಗುತ್ತಿರುವ ಹೊಸ ಹೊಸ ಆವಿಷ್ಕಾರಗಳ ಜ್ಞಾನವನ್ನು ಮತ್ತು ಅವುಗಳನ್ನು ಬಳಸುವ ಕೌಶಲ್ಯವನ್ನು ಪಡೆದುಕೊಳ್ಳಲೇಬೇಕಾಗಿದೆ. ಇಲ್ಲದೇ ಇದ್ದರೇ ವಾಹನ ರಿಪೇರಿ ಮಾಡುವ ವೃತ್ತಿಯನ್ನು ಅವಲಂಬಿಸಿದವರು ದುಡಿಯುವ ಅವಕಾಶವನ್ನು ಕಳೆದುಕೊಳ್ಳಬೇಕು. ಇಂತಹ ಪರಿಸ್ಥಿತಿಯಲ್ಲಿ ದುಡಿಯುವ ಅವಕಾಶಗಳನ್ನು ಸೃಷ್ಟಿಕೊಳ್ಳಬೇಕೆಂದರೆ, ನಮ್ಮ ಕಲಿಕೆ ಮತ್ತು ಕೌಶಲ್ಯವನ್ನು ಹೊಸ ತಂತ್ರಜ್ಞಾನ ಮತ್ತು ವಿಜ್ಞಾನಕ್ಕೆ ಪೂರಕವಾಗಿ ಹೆಚ್ಚಿಸಿಕೊಳ್ಳಬೇಕಾಗಿದೆ.

ತೀರವರನ್ನಾಗಿ, ಶ್ರೀಮಂತರನ್ನಾಗಿ ಮತ್ತು ಸಂತೋಷಿಗಳನ್ನಾಗಿ ಮಾಡಿದೆ. ಇದಕ್ಕೆ ನಾವು ಸಾಕ್ಷಿಯಾಗುತ್ತಿದ್ದೇವೆ. ಮನುಷ್ಯನ ಸಾಧ್ಯತೆಗಳನ್ನು ಎಲ್ಲಾ ಬಗೆಯ ತಂತ್ರಜ್ಞಾನಗಳು ವಿಸ್ತರಿಸಿವೆ. ಜೊತೆಗೆ, ಹೊಸ ಹೊಸ ಅವಕಾಶಗಳನ್ನು, ಹೊಸ ಸಾಮಾನ್ಯ ಮತ್ತು ಅಸಾಮಾನ್ಯ ಸಾಧ್ಯತೆಗಳನ್ನು ಸಹ ಸೃಷ್ಟಿಸುತ್ತಿದೆ. ಡಿಜಿಟಲ್ ತಂತ್ರಜ್ಞಾನ ನೀಡಿದ ಅವಕಾಶವನ್ನು ಬಳಸಿಕೊಂಡು ಗಳಿಸಿಕೊಂಡಿರುವ ನಾವು ವೈಯಕ್ತಿಕ ಸ್ವಾತಂತ್ರ್ಯ ಸೇರಿ ಮತ್ತಿತರ ಸೌಲಭ್ಯಗಳನ್ನು ಉಳಿಸಿಕೊಳ್ಳುವ ಸಲುವಾಗಿ ಹೋರಾಡುತ್ತಿದ್ದೇವೆ. ಹಾಗೆಯೇ ಜೀವನದ ಕೆಲವು ಮೂಲಭೂತ ಜವಾಬ್ದಾರಿಗಳನ್ನೇ ಕೈಬಿಡುವ ಸ್ಥಿತಿಗೆ ತಲುಪಿಬಿಟ್ಟಿದ್ದೇವೆ. ಅದರಲ್ಲಿಯೂ ಕೃತಕ ಬುದ್ಧಿವಂತಿಕೆ (Artificial Intelligence) ತಂತ್ರಜ್ಞಾನಗಳ ವರ್ತಮಾನವಾಗಿ ಉದ್ಯೋಗ ಮಾರುಕಟ್ಟೆಯಲ್ಲಿ ವಿಸ್ತೃತವಾದ ಬದಲಾವಣೆಗಳು ಮತ್ತು ಸ್ಥಿತ್ಯಂತರಗಳು ಉಂಟಾಗುತ್ತಿವೆ. ಒಂದು ಕಡೆ ಉದ್ಯೋಗ ಅವಕಾಶಗಳು ಕುಗ್ಗುತ್ತಿವೆ. ಮತ್ತೊಂದು ಕಡೆ ಕೌಶಲ್ಯ ಆಧಾರಿತ ಉದ್ಯೋಗಗಳು ವಿಸ್ತರಣೆಯಾಗುತ್ತಿವೆ ಎಂದು ಹೇಳುತ್ತಿದ್ದೇವೆ. ಇದಕ್ಕೆ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನದಲ್ಲಿ ಉಂಟಾಗುತ್ತಿರುವ ದೊಡ್ಡಮಟ್ಟದ ಆವಿಷ್ಕಾರಗಳು ಕಾರಣವಾಗಿವೆ. ಇದನ್ನು ಒಂದು ನಿದರ್ಶನದ ಮೂಲಕ ನೋಡಬಹುದು.

ಈ ಮೊದಲು ನಮ್ಮ ಹಳ್ಳಿಗಳಲ್ಲಿ ಕೃಷಿ ಚಟುವಟಿಕೆಗಳು ಅತ್ಯಂತ ಶ್ರಮ ಆಧಾರಿತವಾಗಿತ್ತು. ನಾಟಿಮಾಡುವುದು, ಕಳೆಕೀಳುವುದು, ಬೆಳೆಯ ಕಟಾವು, ಒಕ್ಕಣೆ ಮತ್ತು ಸುಗ್ಗಿ ಕೂಲಿದರಲ್ಲಿ ಮಾನವ ಶ್ರಮ ಹೆಚ್ಚು ಬಳಕೆಯಾಗುತ್ತಿತ್ತು. ಈ ರೀತಿಯ ಶ್ರಮದಾಯಕ ಕೆಲಸಗಳಿಂದ ಕೃಷಿ ಸಮಾಜದಲ್ಲಿಯೇ ಇರುವ ಸಣ್ಣ ಮತ್ತು ಅತಿಸಣ್ಣ ರೈತರ ಕುಟುಂಬಗಳಿಗೆ ಹಾಗೂ ಭೂರಹಿತ ಕೃಷಿ ಕಾರ್ಮಿಕರಿಗೆ ಸ್ಥಳೀಯವಾಗಿ ದುಡಿಯುವ ಅವಕಾಶಗಳು ದೊರಕುತ್ತಿದ್ದವು. ಈಗ ನಾಟಿ, ಕಟಾವು, ಒಕ್ಕಣೆ, ಬೆಳೆಗಳಿಗೆ ಕ್ರಿಮಿನಾಶಕ ಸಿಂಪಡಣೆ ಸೇರಿ ಬಹುತೇಕ ಎಲ್ಲಾ ಕೃಷಿ ಚಟುವಟಿಕೆಗಳು ಯಾಂತ್ರೀಕೃತವಾಗಿವೆ. ಕೃಷಿ ಚಟುವಟಿಕೆಗೆ ಬಳಸಲಾಗುತ್ತಿದ್ದ ಎತ್ತಿನ ಗಾಡಿ, ಮರದ ನೇಗಿಲು, ಕುಂಟೆ, ಕೂರಿಗೆ, ಹಲಾರ, ಇನ್ನೂ ಮುಂತಾದ ಪಾರಂಪರಿಕ ಕೃಷಿ ಉಪಕರಣಗಳು ಮತ್ತು ಪರಿಕರಗಳು ಕಾಣದಾಗಿವೆ. ಗ್ರಾಮೀಣ ಸಾರ್ವಜನಿಕರಿಗೆ/ ಕೌಶಲಗಳಿಗೆ ಕೆಲಸವಿಲ್ಲದಂತಾಗಿವೆ. ಮರದ ಕೃಷಿ ಸಲಕರಣೆಗೆ ಬದಲಾಗಿ ಕಬ್ಬಿಣದ ಕೃಷಿ ಸಲಕರಣೆಗಳು ಮತ್ತು ಉಪಕರಣಗಳು ಬಂದಿವೆ. ಆಧುನಿಕ ತಂತ್ರಜ್ಞಾನವನ್ನು ಸ್ವೀಕರಿಸಿದವರು ಮತ್ತು ಕಾಲಕ್ಕೆ ತಕ್ಕಂತೆ ಬದಲಿಸಿಕೊಂಡವರು ವೇಗವಾಗಿ ಶ್ರೀಮಂತರಾದರು. ಹಳೆಯ ಸಾಂಪ್ರದಾಯಿಕ ಕೃಷಿ ಸಲಕರಣೆಗಳನ್ನು ಬಳಸುತ್ತಿದ್ದವರು ಸಣ್ಣ ಮತ್ತು ಅತಿಸಣ್ಣ ಕೃಷಿ ಕುಟುಂಬಗಳಾಗಿ ಬದಲಾದರು. ಇವುಗಳ ಬಾಳಿಕೆ ಹೆಚ್ಚು ದೀರ್ಘಕಾಲಿಕ. ಈ ಉಪಕರಣಗಳಿಗಾಗಿ ಬಹುತೇಕರು ಕಬ್ಬಿಣದ ಕೃಷಿ ಸಲಕರಣೆಗಳನ್ನು ಬಳಸುತ್ತಿದ್ದಾರೆ. ಈ ದೃಷ್ಟಿಕೋನದಿಂದ ಕೃಷಿ ಸಮಾಜದ ಪಾರಂಪರಿಕ ಜ್ಞಾನ ಮತ್ತು ವೃತ್ತಿ ಆಧಾರಿತ ಕೌಶಲ್ಯಗಳು ನಿರ್ಜೀವವಾಗಿ ಬಿದ್ದಿವೆ. ಕಳೆದುಕೊಳ್ಳುತ್ತಿವೆ.

ಇದೇ ರೀತಿಯಲ್ಲಿಯೇ ಸಣ್ಣ ಮಟ್ಟದಲ್ಲಿ ಆಟೋಮೊಬೈಲ್ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಟ್ರಾಕ್ಟರ್, ಟಿಲ್ಲರ್, ಬೈಕ್, ಆಟೋಗಳು, ಹಳ್ಳಿ ಭಾಗದಲ್ಲಿ ಚಿಕ್ಕಪುಟ್ಟ ವಾಹನಗಳು ಅಕ್ಷರಶಃ ಮಾಡಿವೆ. ಇವುಗಳ ರಿಪೇರಿಯನ್ನು ತಾಂತ್ರಿಕ ಶಿಕ್ಷಣವಿಲ್ಲದೇ ಮಾಡಲು ಸಾಧ್ಯವಾಗುತ್ತಿದ್ದ ಈ ಮೊದಲು ಸ್ಥಳೀಯ ವರ್ಕ್‌ಶಾಪ್‌ಗಳಲ್ಲಿಯೇ ವಾಹನಗಳ ರಿಪೇರಿ ಮಾಡಲಾಗುತ್ತಿತ್ತು. ಆದರೆ ಆಟೋಮೊಬೈಲ್ ಇಂಡಸ್ಟ್ರಿಯಲ್ಲಿ ತಂತ್ರಜ್ಞಾನದಲ್ಲಿ ಉಂಟಾಗಿರುವ ಬಹುದೊಡ್ಡ ಬದಲಾವಣೆ ಸ್ಥಳೀಯವಾಗಿ ಹೊಸ ವಾಹನಗಳನ್ನು ರಿಪೇರಿ ಮಾಡಲಾಗದಂತೆ ರೂಪಿಸಲಾಗಿದೆ. ಇದು ಬೃಹತ್ ಬಂಡವಾಳಶಾಹಿ ವ್ಯವಸ್ಥೆಯು ಹೊಸ ವಾಹನಕ್ಕೆ ನೀಡುವ ವಾರಂಟಿ ರಾಜಕಾರಣದ ಕಾರ್ಯತಂತ್ರವಾಗಿದೆ. ಇದನ್ನು ಇಲ್ಲಿ ಹೆಚ್ಚು ಚರ್ಚೆ ಮಾಡುವುದಿಲ್ಲ. ಅಷ್ಟು ಮಾತ್ರವಲ್ಲ ಈಗ ಸಾಮಾನ್ಯ ವೃತ್ತಿಯಾಗಿ ಟ್ರಾಕ್ಟರ್ ಪಂಚರ್ ಹಾಕುವ ಕೆಲಸವು ಇಲ್ಲವಾಗಿದೆ. ಸೈಕಲ್ ರಿಪೇರಿ ಇಲ್ಲವಾಗಿದೆ. ಒಬ್ಬ ಸ್ಥಳೀಯ ಮೆಕ್ಯಾನಿಕ್ ತನ್ನ ಅನುಭವದ ಹಿನ್ನೆಲೆಯಲ್ಲಿ ರಿಪೇರಿಗೆ ನೀಡುವ ಸಲಹೆಗಳಿಗಿಂತಲೂ ಒಂದು ಎಲೆಕ್ಟ್ರಾನಿಕ್ ಡಿವೈಸ್ ನೀಡುವ ಸಲಹೆ ಮುಖ್ಯವಾಗಿದೆ. ಸಮಕಾಲೀನ ಹೊಸ ಡಿಜಿಟಲ್ ಆಟೋಮೊಬೈಲ್ ತಂತ್ರಜ್ಞಾನದಲ್ಲಿ ರಿಪೇರಿಗಿಂತ ರಿಪ್ಲೇಸ್‌ಮೆಂಟ್ ಆದ್ಯತೆ ನೀಡುತ್ತಿದೆ. ಇದು ಸ್ಥಳೀಯ ಸಣ್ಣಮಟ್ಟ ವರ್ಕ್‌ಶಾಪ್‌ಗಳು ಕೆಲಸವಿಲ್ಲದೆ ನಶಿಸುವಂತೆ ಮಾಡುತ್ತಿದೆ. ಜೊತೆಗೆ ವಾಹನಗಳನ್ನು ದಬ್ಬುವ ಮತ್ತು ಜೋಡಿಸುವ ಕೆಲಸವು ಬಹುತೇಕ ಯಾಂತ್ರೀಕೃತವಾಗಿದೆ. ಇದು ಸಮಯದ ಉಳಿತಾಯವನ್ನು ಮಾಡುತ್ತದೆ. ಗುಣಮಟ್ಟದ ಖಾತರಿಯನ್ನು ನೀಡುತ್ತದೆ ಎಂದು ಆಟೋಮೊಬೈಲ್ ಮಾರುಕಟ್ಟೆ ಪ್ರತಿಪಾದಿಸುತ್ತದೆ.

ಹೀಗಾಗಿ ಸಣ್ಣ ಬೈಕ್ ರಿಪೇರಿಯಿಂದ ಹಿಡಿದು ಬೃಹತ್ ಗಾತ್ರದ ಯಂತ್ರಗಳ ರಿಪೇರಿಯೂ ಸ್ಥಳೀಯ ಮೆಕ್ಯಾನಿಕ್‌ಗಳಿಗೆ ಬದಲಾಗಿ, ಬಂಡವಾಳಶಾಹಿಗಳ ಕಂಪನಿ ವಾಹನ ಶೋರೂಂಗಳನ್ನು ಅವಲಂಬಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಎಲೆಕ್ಟ್ರಿಕ್ ವಾಹನಗಳು ಮತ್ತು ಬೈಕ್ ರಿಪೇರಿ ಮಾಡುವವರು ಸಹ ಹೊಸ ತಂತ್ರಜ್ಞಾನಗಳನ್ನು ಪಡೆದುಕೊಳ್ಳುವುದು ಅವಶ್ಯಕವಾಗಿದೆ. ಈ ವಾಹನಗಳ ರಿಪೇರಿಗೆ ಅಗತ್ಯವಾಗಿ ಎಲೆಕ್ಟ್ರಿಕ್ ಡಿವೈಸ್‌ಗಳನ್ನು ಮತ್ತು ಲ್ಯಾಪ್‌ಟಾಪ್‌ಗಳನ್ನು ಬಳಸಲೇಬೇಕಾದ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ತಂತ್ರಜ್ಞಾನದಲ್ಲಿ ಉಂಟಾಗುತ್ತಿರುವ ಹೊಸ ಹೊಸ ಆವಿಷ್ಕಾರಗಳ ಜ್ಞಾನವನ್ನು ಮತ್ತು ಅವುಗಳನ್ನು ಬಳಸುವ ಕೌಶಲ್ಯವನ್ನು ಪಡೆದುಕೊಳ್ಳಲೇಬೇಕಾಗಿದೆ. ಇಲ್ಲದೇ ಇದ್ದರೇ ವಾಹನ ರಿಪೇರಿ ಮಾಡುವ ವೃತ್ತಿಯನ್ನು ಅವಲಂಬಿಸಿದವರು ದುಡಿಯುವ ಅವಕಾಶವನ್ನು ಕಳೆದುಕೊಳ್ಳಬೇಕು. ಇಂತಹ ಪರಿಸ್ಥಿತಿಯಲ್ಲಿ ದುಡಿಯುವ ಅವಕಾಶಗಳನ್ನು ಸೃಷ್ಟಿಕೊಳ್ಳಬೇಕೆಂದರೆ, ನಮ್ಮ ಕಲಿಕೆ ಮತ್ತು ಕೌಶಲ್ಯವನ್ನು ಹೊಸ ತಂತ್ರಜ್ಞಾನ ಮತ್ತು ವಿಜ್ಞಾನಕ್ಕೆ ಪೂರಕವಾಗಿ ಹೆಚ್ಚಿಸಿಕೊಳ್ಳಬೇಕಾಗಿದೆ. ಇದರೆ ನಮ್ಮ ಕೃಷಿ ಸಮಾಜದಲ್ಲಿ ರಿಪೇರಿ ಕೆಲಸಗಳನ್ನು ಮಾಡುತ್ತಿರುವವರು ಕಾಲಗರ್ಭದಲ್ಲಿಯೇ ಬಿದ್ದುಹೋಗುವರು. ಚಿಕ್ಕ ವಯಸ್ಸಿನಲ್ಲಿ ಮೆಷ್ಟ್ರಾಂಡಿಗೆ ಈ ಕೆಲಸ ಮಾಡಲು ಪ್ರಾರಂಭಿಸಿದವರು. ಈ ಕೌಶಲವು ಅನುಭವದಿಂದ ಬಂದಿದ್ದು, ಡಿಜಿಟಲ್ ತಂತ್ರಜ್ಞಾನವು ಇಂತಹವರ ಉದ್ಯೋಗಾವಕಾಶಗಳನ್ನು ಹಿಗ್ಗಿಸುವುದಕ್ಕಿಂತ ಕುಗ್ಗಿಸುವ ಕಾರ್ಯತಂತ್ರವನ್ನು ಕನ್ಸೆಪ್ಟಗಳಿಗೆ ಹೊಂದಿಸಿ ಇದೇ ಬಂಡವಾಳಶಾಹಿ ಆಟೋಮೊಬೈಲ್ ಇಂಡಸ್ಟ್ರಿಗಳ ರಾಜಕೀಯ ಆರ್ಥಿಕತೆಯಾಗಿದೆ. ಅಂದರೆ ಎಷ್ಟು ಸಾಧ್ಯವೋ ಅಷ್ಟು ಮಾನವ ಶ್ರಮವನ್ನು ಕಡಿಮೆ ಮಾಡುವುದು ಲಾಭವನ್ನು ಮತ್ತಷ್ಟು ಹೆಚ್ಚಿಸುವ ದೃಷ್ಟಿಕೋನದಲ್ಲಿ ಕೃತಕ ಬುದ್ಧಿವಂತಿಕೆಯನ್ನು ಬಳಸುವುದು.

ಇಷ್ಟೂ ಇ-ಆಡಳಿತ ವ್ಯವಸ್ಥೆ ಜಾರಿಗೆ ಒಂದು ನಂತರ ಪ್ರತಿಯೊಬ್ಬ ಅಧಿಕಾರಿಯೂ ತನ್ನ ರಿಜಿಸ್ಟರ್ ಕಾರ್ಯಚಟುವಟಿಕೆಗಳನ್ನು ಆನ್‌ಲೈನ್ ಮೂಲಕ ತೆರೆಯಲು ಪ್ರಾರಂಭಿಸಿದರು. ಇತಿಹಾಸವನ್ನು ಅವಲೋಕಿಸಿ, ಅವುಗಳನ್ನು ಮೇಲಾಧಿಕಾರಿಗಳಿಗೆ ಕಳುಹಿಸಿ, ಅವರಿಂದ ಬಂದ ಆಡಳಿತಾತ್ಮಕ ನಿರ್ದೇಶನದ ಹಿನ್ನೆಲೆಯಲ್ಲಿ ಮರುಮಾಡಿಸುವ ಮತ್ತು ಆದೇಶಗಳನ್ನು ತಯಾರು ಮಾಡಲಾಗುತ್ತಿತ್ತು. ಒಮ್ಮತೀಕ ಎಲ್ಲಾ ಆಡಳಿತಾತ್ಮಕ ಪ್ರಕ್ರಿಯೆಗಳು ಇ-ಆಡಳಿತ ವ್ಯವಸ್ಥೆಗಳು ಡಿಜಿಟಲೀಕರಣ ಸ್ವರೂಪ ಪಡೆದುಕೊಂಡಿದೆ. ಇದುವರೆಗೆ ಒಂದು ಹಂತದ ಶಿಕ್ಷಣದ ನಂತರ ಅಧಿಮ ಪದವಿಗಳನ್ನು ಪಡೆದ ನಂತರ ಕಚೇರಿ

Scanned with OKEN Scanner

ನಮ್ಮ ಒಟ್ಟು ಕೃಷಿ ಭೂಮಿಯಲ್ಲಿ ಶೇ.17ರಷ್ಟು ಕೃಷಿಭೂಮಿಯನ್ನು ಶೇ.80ರಷ್ಟು ಕೃಷಿಕರು ಹೊಂದಿದ್ದಾರೆ. ಇದರ ಅರ್ಥವೆಷ್ಟೆ, ನಮ್ಮ ಅಭಿವೃದ್ಧಿ ಯೋಜನೆಗಳು ನಮ್ಮ ರೈತರನ್ನು ಸ್ವಲ್ಪ-ಹೆಚ್ಚು ಕಡಿಮೆ ಭೂ-ರಹಿತ ಕೃಷಿಕರನ್ನಾಗಿಸುತ್ತಿವೆ. ಇವರು ಅತಿ ಸಣ್ಣ ಪ್ರಮಾಣದಲ್ಲಿ ಭೂಮಿಯೊಂದಿರುವ ಕೃಷಿಕರಾಗಿದ್ದು ಯಾವುದೇ ಕೃಷಿ ಮಾಡಲಾಗದ ಸ್ಥಿತಿ ನಿರ್ಮಾಣವಾಗಿದೆ. ಆದರೂ ಎರಡು ಹೆಕ್ಟೇರ್‌ಗಿಂತ ಕಡಿಮೆ ಭೂಮಿಯನ್ನು ಹೊಂದಿರುವ ಸಣ್ಣ ಮತ್ತು ಅತಿಸಣ್ಣ ರೈತರ ಸಂಖ್ಯೆ 10ನೇ ಕೃಷಿ ಗಣತಿಯ ಮಾಹಿತಿ ಪ್ರಕಾರ ಶೇ.84 ರಷ್ಟು. 2010-11 ಮತ್ತು 2014-15ರ ನಡುವೆ ಎರಡು ಹೆಕ್ಟೇರ್‌ಗಿಂತ ಕಡಿಮೆ ಭೂಮಿಯಲ್ಲಿ ಬತ್ತನೆ ಮಾಡುತ್ತಿರುವ ಕೃಷಿ ಕುಟುಂಬಗಳ ಸಂಖ್ಯೆ 90 ಲಕ್ಷ ಹೆಚ್ಚಾಗಿದೆ. ಆಹಾರ ಉತ್ಪಾದನೆಯಲ್ಲಿ ಮಧ್ಯಮ, ಸಣ್ಣ ಮತ್ತು ಅತಿಸಣ್ಣ ರೈತರ ಪಾಲು ದೊಡ್ಡದು. ಆಹಾರ ಧಾನ್ಯಗಳ ಒಟ್ಟು ಉತ್ಪಾದನೆಯಲ್ಲಿ ಇವರ ಕೊಡುಗೆ ಶೇ.89.4 ಇದ್ದದ್ದು 2010-11 ಮತ್ತು 2014-15ರ ನಡುವೆ ಶೇ.60ಕ್ಕೆ ಇಳಿದಿದೆ.

ಸಾಮಾನ್ಯರ ಹುದ್ದೆಗಳನ್ನು ಪಡೆಯಿಕೊಳ್ಳಲಾಗುತ್ತಿತ್ತು. ಇನ್ನು ಮುಂದೆ ಗುಮಾಸ್ತ ಅಥವಾ ಕ್ಲರ್ಕಲ್ ಮೋಲ್ಡ್ ಸಹ ಇಲ್ಲದಂತೆ ಇ-ಆಡಳಿತ ಮಾಡುತ್ತಿದೆ.

ಈ ರೀತಿಯ ದುಡಿಮೆಯ ಸ್ವರೂಪದಲ್ಲಿನ ಸ್ಥಿತ್ಯಂತರ ಕೃಷಿ ಚಟುವಟಿಕೆಗಳು, ಮಾನವ ರಿಸೋರ್ಸ್, ಕ್ಲೆರಿಕಲ್ ಮೋಲ್ಡ್‌ಗಳಲ್ಲಿ ಮಾತ್ರ ಉಂಟಾಗಿಲ್ಲ. ಮಾರುಕಟ್ಟೆಗಳು ಆನ್‌ಲೈನ್ ಮಾರುಕಟ್ಟೆಗಳಾಗಿ ರೂಪಾಂತರವಾದರೆ, ಬ್ಯಾಂಕ್‌ಗಳ ಕಾರ್ಯಚಟುವಟಿಕೆಗಳು ಆನ್‌ಲೈನ್ ಮತ್ತು ಇ-ಕಾಮರ್ಸ್ ಸ್ವರೂಪ ಪಡೆದುಕೊಂಡಿವೆ. ಇನ್ನೂ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು, ಆರೋಗ್ಯ ಸೇವೆಗಳು, ಪಡಿತರ ಸೇವೆಗಳು, ಸಮಾಜ ಕಲ್ಯಾಣ ಇಲಾಖೆಯ ವಿವಿಧ ಕಾರ್ಯಕ್ರಮಗಳು, ವಾತಿ ಯೋಜನೆಗಳು, ಬೆಳೆ ಸಮೀಕ್ಷೆ, ಗ್ರಾಮ ಸಮೀಕ್ಷೆ, ಬರ ಸಮೀಕ್ಷೆ, ಪ್ರವಾಹ ಸಮೀಕ್ಷೆ, ಸ್ವಾಭಾವಿಕ ಸಂಪನ್ಮೂಲಗಳ ಸಮೀಕ್ಷೆ, ಪ್ರಕೃತಿ ವಿಕೋಪಗಳ ಮುನ್ಸೂಚನೆಗಳಿಗೆ ಕೃತಕ ಬುದ್ಧಿಮತ್ತೆಯನ್ನು ಬಳಸಲಾಗುತ್ತಿದೆ.



ಹೀಗೆ ಬಹುತೇಕ ಯೋಜನೆಗಳು ಇ-ಆಡಳಿತ ಪ್ರಕ್ರಿಯೆಗೆ ಒಳಪಟ್ಟಿದೆ. ಇದರಿಂದ ಅನೇಕ ಹಂತದ ಆಡಳಿತ ಪ್ರಕ್ರಿಯೆಗಳನ್ನು ನಿರ್ವಹಿಸುತ್ತಿದ್ದ ವ್ಯಕ್ತಿಗಳು ಮತ್ತು ಅಧಿಕಾರಿಗಳಿಗೆ ಉದ್ಯೋಗಗಳು ಮತ್ತು ಹುದ್ದೆ ಇದ್ದವಾಗಿದೆ. ಗ್ರಾಮಪಂಚಾಯಿತಿ ಮಟ್ಟದ ಸರ್ಕಾರಿ ಅಧಿಕಾರಿಗಳು ಮಾಡುತ್ತಿದ್ದ ಕೆಲಸಗಳು ಇವತ್ತು ಕಾಮಗಾರಿ, ಜಾಬ್ ಕಾರ್ಡ್, ಎಂಬತ್ತಕ್ಕೂ ಹೆಚ್ಚು ಕಾಮಗಾರಿಗಳ ಪ್ರತಿ ಹಂತದ ಪ್ರಗತಿಯನ್ನು ವಿಡಿಯೋ (ಫೋಟೋ) ಮೂಲಕ ಕೂಡಲೇ ಅಪ್‌ಲೋಡ್ ಮಾಡಬೇಕು. ಇದರಿಂದ ಕಾಮಗಾರಿಗಳ ಗುಣಮಟ್ಟ, ಸ್ಥಳೀಯರಿಂದ ದೂರು ಅಥವಾ ಹಂತಕ್ಕೆ ತಕ್ಕಂತೆ ಬರುವ ಪೇಮೆಂಟ್ ರದ್ದಾಗುವ ಸಾಧ್ಯತೆಯಿದ್ದರಿಂದ ಹಾಗೂ ಅಧಿಕಾರಿಗಳ ದಿನಚರಿಯಲ್ಲಿ ಆಡಳಿತ ವ್ಯವಸ್ಥೆಯ ಮೂಲಕ ನಿರ್ವಹಿಸಲಾಗುತ್ತದೆ. ಮತ್ತೆ ಪಡಿತರ ಯೋಜನೆಯ ಫಲಾನುಭವಿಗಳು ತಮ್ಮ ನಿರ್ದಿಷ್ಟವಾದ ಸಂಖ್ಯೆಯಲ್ಲಿ ಬರುವ ಧಾನ್ಯ ಪಡೆಯಲು ಮೂಲಕ ಫೇಸ್‌ರೀಡರ್ ಕೆಲಸಗಳು ಕಳುಹಿಸಿದಾಗ ಸಾಧ್ಯವಾಗುತ್ತದೆ. ಇನ್ನು ಕೃಷಿ ಸಂಬಂಧಿತ ಯೋಜನೆಗಳಿಗೆ ಸಂಬಂಧಪಟ್ಟಂತೆ ಸಾಲ ಪಡೆಯಲು ಅಥವಾ ಸಬ್ಸಿಡಿ ಪಡೆಯಲು ಸಾಲ ಮಂಜೂರಾತಿ ಪತ್ರ, ಸಬ್ಸಿಡಿ ಮಂಜೂರಾತಿ ಪತ್ರ ಇತ್ಯಾದಿಗಳನ್ನು ಬಹುತೇಕ ಕಡೆಗಳಲ್ಲಿ ಇ-ಆಡಳಿತ ಮೂಲಕವೇ ನೀಡಲಾಗುತ್ತಿದೆ.

ಮುಂತಾದ ವಿಷಯಗಳ ದೃಷ್ಟಿಯಿಂದ ಸ್ಥಿತಗತಿಯಲ್ಲಿ ಜಾರಿಗೆ ತಂದು ಮಾನವ ಶ್ರಮವನ್ನು ಸಂಪೂರ್ಣವಾಗಿ ಕುಗ್ಗಿಸಲಾಯಿತು. ಇದರ ಪರಿಣಾಮವಾಗಿ ಕೃಷಿ ಚಟುವಟಿಕೆಗಳು ಕೈಗಾರಿಕಾ ಸ್ವರೂಪ ಪಡೆಯಿತು. ಯಾಂತ್ರೀಕರಣ ಹೆಚ್ಚಾಯಿತು. ಕೃಷಿ ಸಮಾಜದ ದುಡಿಮೆಯ ಸ್ವರೂಪ ಬದಲಾಯಿತು. ಕೃಷಿ ಸಮಾಜದಲ್ಲಿ ಬದುಕಿದ ಮಧ್ಯಮ, ಸಣ್ಣ, ಅತಿ ಸಣ್ಣ ರೈತರು ಹಾಗೂ ಭೂರಹಿತ ದುಡಿಮೆಗಾರರು, ಕೃಷಿ ಚಟುವಟಿಕೆಯ ಜೊತೆಗೆ ಇತರ ಶ್ರಮ ಆಧಾರಿತ ದುಡಿಮೆಯ ಮೂಲಕ ತಮ್ಮ ಜೀವನ ಮತ್ತು ಜೀವನೋಪಾಯವನ್ನು ಕಟ್ಟಿಕೊಂಡವರು ದೊಡ್ಡ ಮಟ್ಟದ ಗಂಡಾಂತರಗಳಿಗೆ ಒಳಗಾದರು.

ಗ್ರಾಮೀಣ ಪ್ರದೇಶದಲ್ಲಿ ಸಣ್ಣ, ಅತಿ ಸಣ್ಣ ರೈತ ಕುಟುಂಬಗಳ ಸದಸ್ಯರು, ಭೂರಹಿತ ಬಡಜನರು ಜೀವವನ್ನು ಉಳಿಸಿಕೊಳ್ಳಲು ದುಡಿಮೆಯನ್ನು ಅರಸಿ ನಗರ ಪ್ರದೇಶಗಳಿಗೆ ವಲಸೆಬಂದು ದುಡಿಮೆಯನ್ನು ಬೇಟೆಯಾಡಲು ಪ್ರಾರಂಭಿಸಿದರು. ಬಹುತೇಕ ಜೀವನೋಪಾಯಕ್ಕೆ ದುಡಿಮೆಯನ್ನು ಅರಸಿ, ಊರಿಂದ ಊರಿಗೆ ವಲಸೆ ಹೋಗಿಕೊಡಗಿದ್ದರು. ಇದನ್ನು ಜಾನ್ ಬ್ರೆಮನ್ ಅವರು 'ವೃತ್ತಾಕಾರದ ವಲಸೆ' (circular migration) ಎಂದು ಗುರುತಿಸಿದರು. ವಲಸೆಹೋಗಿ ಅನೌಪಚಾರಿಕ ಕಾರ್ಮಿಕ ವಲಯದಲ್ಲಿ ದುಡಿಯುತ್ತಿರುವವರಿಗೆ ತಮ್ಮ ದುಡಿಮೆಯ ವಲಯ ಸ್ಥಗಿತಗೊಂಡಾಗ 'ಮನೆಗೆ' ಹಿಂತಿರುಗುವುದನ್ನು ಬಿಟ್ಟು ಬೇರೆ ಪರ್ಯಾಯವಿಲ್ಲ. ಏಕೆಂದರೆ ಯಾವುದೇ ಗಳಿಕೆ ಇಲ್ಲದೆ ನಗರದಲ್ಲಿ ಉಳಿಯುವುದು/ಬದುಕುವುದು ಅಸಾಧ್ಯ. ಆದರೆ ಹುಟ್ಟಿ ಬೆಳೆದ ಊರಿಗೆ ಹಿಂತಿರುಗುವುದು ಅವರ ಪಾಮಾನಿಕವಾದ ಆಯ್ಕೆಯಾಗಿರಲಿಲ್ಲ. ಆದಕ್ಕೆ ಕಾರಣ ಗ್ರಾಮೀಣ ಅರ್ಥಕತೆಯಲ್ಲಿ ದುಡಿಯುವ ಅವಕಾಶಗಳ ಕೊರತೆ ಇರುವುದು. ತಲಮಟ್ಟದ ದುಡಿಯುವ ವರ್ಗಗಳ ದೃಷ್ಟಿಕೋನದಿಂದ ನೋಡುವುದಾದರೆ, ಈ ಸಂಯೋಜಕ ಬಿಕ್ಕಟ್ಟು ದಾತ್ತವವಾಗಿ ರಚನಾತ್ಮಕವಾಗಿದೆ. ನಿಯಮಿತ ಮತ್ತು ಖಚಿತತೆಯಿಂದ ದುಡಿಯುವ ಉದ್ಯೋಗದ ಕೊರತೆ ಹೆಚ್ಚುತ್ತಿರುವುದು ಎದ್ದುಕಾಣುತ್ತಿದೆ. ಅನೌಪಚಾರಿಕ ಆರ್ಥಿಕತೆಯ ಕೆಳಭಾಗದಲ್ಲಿರುವ ಬೃಹತ್ ಕಾರ್ಮಿಕರ ಪಡೆ ಶಾಶ್ವತವಾಗಿ ಬಿಕ್ಕಟ್ಟಿಗೆ ಸಿಲುಕಿಕೊಂಡಿದ್ದಾರೆ. ಇದು ಅಸಮಾನತೆಯ ತತ್ವ ಮತ್ತು ಅಭ್ಯಾಸಗಳು ಅತ್ಯಂತ ಗಟ್ಟಿಯಾಗಿದ್ದ ಹತ್ತೊಂಬತ್ತನೇ ಶತಮಾನದ ನಂಬಿಕೆಗಳಿಗೆ ಮರಳುವುದನ್ನು ಸೂಚಿಸುತ್ತದೆ ಎಂದು ಬ್ರೆಮನ್ ಹೇಳುತ್ತಾರೆ.

ವೃತ್ತಾಕಾರದ ವಲಸೆ ಎಷ್ಟು ಗಂಭೀರವಾಗಿದೆ ಎನ್ನುವುದು ಹೆಚ್ಚು ಬೆಳಕಿಗೆ ಬಂದಿದ್ದು ಕೋವಿಡ್-19 ಲಾಕ್‌ಡೌನ್ ಘೋಷಣೆಯ ಈ ಕುರಿತು ನಡೆದಿರುವ ಅಧ್ಯಯನಗಳು ಏಪ್ರಿಲ್ 2020 ರಲ್ಲಿ ಶೇಕಡಾ ಕಳೆದುಕೊಂಡ ವಲಸೆ ಕಾರ್ಮಿಕರ ಸಂಖ್ಯೆ 12 ಕೋಟಿಗೂ ಹೆಚ್ಚು ಎಂದು ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ಅಂದಾಜಿಸಿದೆ. ಕೋವಿಡ್-19 ಲಾಕ್‌ಡೌನ್ 'ವೃತ್ತಾಕಾರದ ವಲಸೆ'ಯ ವಾಪ್ತವ ಮತ್ತು ಗಂಭೀರತೆಯನ್ನು ಗೋಚರಿಸುವಂತೆ ಮಾಡಿತು. ಸ್ವಿಸ್ ಮಾಧ್ಯಮ ಸಂಸ್ಥೆ ಭಾರತದಲ್ಲಿ ಕೋವಿಡ್-19 ಬಿಕ್ಕಟ್ಟಿನ ಸಮಯದಲ್ಲಿ ಭಾರತದಲ್ಲಿ 5,733ಕ್ಕೂ ಹೆಚ್ಚು ಜನರು ರೈಲ್ವೆ ಹಳಿಯಲ್ಲಿ ಕಾಲ್ನಡಿಗೆಗೆ ರೈಲಿಗೆ ಸಿಲುಕಿ ಸಾವನ್ನಪ್ಪಿದ್ದಾರೆ ಎಂದು ವರದಿ ಮಾಡಿದೆ. ಸ್ವತಂತ್ರ ಸಮಿತಿ 2020 ಮಾರ್ಚ್ ಮತ್ತು ಡಿಸೆಂಬರ್ 2020ರ ನಡುವೆ 1198ಕ್ಕೂ ಹೆಚ್ಚು ಜನರು ಮೃತ ಜನರು ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. 1198ಕ್ಕೂ ಹೆಚ್ಚು ಜನರು ರಸ್ತೆ ಅಪಘಾತದಲ್ಲಿ

ಅಥವಾ ರಫ್ತಾಗಲಿ ಸಾಮರ್ಥ್ಯವಿದ್ದಾಗ ಎಂದು ತಿಳಿಸಿದೆ. ಈ ಸಂಸ್ಥೆ ಇನ್ನೂ ಸೇರಿ ಎಲ್ಲರು ಕೆಲವು ಸೂಚನೆ ಎಚ್ಚರಿಕೆಗಳನ್ನು ಹೇಳಿರುತ್ತಾರೆ.

2011-12 ಮತ್ತು 2017-18ರ ನಡುವೆ ಗ್ರಾಮೀಣ ಬಡತನವು ಸುಮಾರು ಶೇ.4ರಷ್ಟು ಏರಿಕೆಯಾಗಿದೆ. ಗ್ರಾಮೀಣ ಪ್ರದೇಶದಲ್ಲಿರುವ ಶೇ.40ರಷ್ಟು ಕುಟುಂಬಗಳು ಬಡತನದಲ್ಲಿವೆ. ಶೇ.51ರಷ್ಟು ಕುಟುಂಬಗಳು ಬಡತನಕ್ಕೆ ಪ್ರತಿದಿನವೂ ಕೂಲಿ ಕೆಲಸವನ್ನು ಅವಲಂಬಿಸಿವೆ. ಗ್ರಾಮೀಣ ಪ್ರದೇಶದಲ್ಲಿ ಇರುವ ಶೇ.30 ಕುಟುಂಬಗಳು ಭೂಮಾಲೀಕತ್ವವನ್ನು ಹೊಂದಿಲ್ಲ. ಇಂತಹ ಅಧಾತಕಾರಿ ಮಾಹಿತಿಗಳನ್ನು ಸಾಮಾಜಿಕ-ಆರ್ಥಿಕ ಜಾತಿ ಗಣತಿ (ಎಸ್ ಐ.ಸಿ)ಯು ನಮ್ಮ ನೆರೆಯಿಂದ ಇರಿಗಾಣಾದಲ್ಲಿ 2001 ಮತ್ತು 2011ರ ಅವಧಿಯಲ್ಲಿ ಕಾಗುಳಿಯಾಗಿ ಸುಮಾರು 127.3 ಮಿಲಿಯನ್‌ನಿಂದ 118.6 ಮಿಲಿಯನ್‌ಗೆ ಇಳಿದಿದೆ. ಗ್ರಾಮೀಣ ಪ್ರದೇಶದಲ್ಲಿ ಶೇ.59ರಷ್ಟು ಮಹಿಳೆಯರು ಮನೆಯಲ್ಲಿ ಮತ್ತು ಶೇ.75ರಷ್ಟು ಮಹಿಳೆಯರು ಜೀವನೋಪಾಯಕ್ಕೆ ಕೃಷಿಯನ್ನು ಸೇರವಾಗಿ ಅವಲಂಬಿಸಿದ್ದಾರೆ. ಈದರ ಮೂರು ಜನಗಣತಿ ಅವಧಿಯಲ್ಲಿ ಕೃಷಿ ಕೂಲಿ ಕಾರ್ಮಿಕರ ಸಂಖ್ಯೆ 74.6 ಮಿಲಿಯನ್ (1991)ನಿಂದ 106.8 ಮಿಲಿಯನ್‌ಗೆ (2001) ಮತ್ತು 144 ಮಿಲಿಯನ್‌ಗೆ (2011) ಹೆಚ್ಚಳವಾಗಿದೆ. ಇದರ ಪರಿಣಾಮವಾಗಿ ಕೃಷಿ ಕೂಲಿ ಕಾರ್ಮಿಕರ ಸಂಖ್ಯೆ ಶೇ.26ರಿಂದ ಶೇ.30ಕ್ಕೆ ಹೆಚ್ಚಳವಾಗಿದೆ. ಹಳ್ಳಿಗಳಲ್ಲಿ ಇರುವ ಶೇ.77ರಷ್ಟು ಕುಟುಂಬಗಳು ಪ್ರತಿದಿನ ದುಡಿಮೆಗಾಗಿ ಕನಿಷ್ಠ ಐದು ಕಿ.ಮೀ. ಪ್ರಯಾಣ ಮಾಡಲೇಬೇಕಾದ ಪರಿಸ್ಥಿತಿಯಲ್ಲಿ ಗ್ರಾಮೀಣ ಜನರು ಬದುಕುತ್ತಿದ್ದಾರೆ. ಇದಕ್ಕೆ ನಾವು 2011ರ ಜನಗಣತಿಯನ್ನು ಆಧರಿಸಿದ್ದೇವೆ. ಒಂದು ವಕ್ಷ 2021ರ ಜನಗಣತಿ ನಡೆದಿದ್ದರೆ ಈ ಪ್ರಮಾಣ ಯಾವ ಪ್ರಮಾಣದಲ್ಲಿ ಹೆಚ್ಚಳವಾಗಿದೆ ಅಥವಾ ಕಡಿಮೆಯಾಗಿದೆ ಎನ್ನುವುದು ಸ್ಪಷ್ಟವಾಗುತ್ತಿತ್ತು.

ನಮ್ಮ ಒಟ್ಟು ಕೃಷಿ ಭೂಮಿಯಲ್ಲಿ ಶೇ.17ರಷ್ಟು ಕೃಷಿಭೂಮಿಯನ್ನು ಶೇ.80ರಷ್ಟು ಕೃಷಿಕರು ಹೊಂದಿದ್ದಾರೆ. ಇದರ ಅರ್ಥವನ್ನೆ ನಮ್ಮ ಆರ್ಥಿಕ ನೀತಿಗಳು ನಮ್ಮ ಕೃಷಿಕರನ್ನು ಸಣ್ಣ-ಹಿಡುವಳಿ ಕಡಿಮೆ ಭೂ-ರಹಿತ ಕೃಷಿಕರನ್ನಾಗಿಸುತ್ತಿವೆ. ಇವರು ಅತಿ ಸಣ್ಣ ಪ್ರಮಾಣದಲ್ಲಿ ಭೂಮಿಯೊಂದಿರುವ ಕೃಷಿಕರಾಗಿದ್ದು ಯಾವುದೇ ಕೃಷಿ ಮಾಡಲಾಗದ ಕೃಷಿ ನಿರ್ಮಾಣವಾಗಿದೆ. ಆದರೂ ಎರಡು ಹೆಕ್ಟೇರ್‌ಗಿಂತ ಕಡಿಮೆ ಭೂಮಿಯಲ್ಲಿ ಹೊಂದಿರುವ ಸಣ್ಣ ಮತ್ತು ಅತಿಸಣ್ಣ ರೈತರ ಸಂಖ್ಯೆ 10ನೇ ಕೃಷಿ ಗಣತಿಯ ಮಾಹಿತಿ ಪ್ರಕಾರ ಶೇ.84 ರಷ್ಟು 2010-11 ಮತ್ತು 2014-15ರ ನಡುವೆ ಎರಡು ಹೆಕ್ಟೇರ್‌ಗಿಂತ ಕಡಿಮೆ ಭೂಮಿಯಲ್ಲಿ ಬಿತ್ತನ ಮಾಡುತ್ತಿರುವ ಕೃಷಿ ಕುಟುಂಬಗಳ ಸಂಖ್ಯೆ 90 ಲಕ್ಷ ಹೆಚ್ಚಾಗಿದೆ. ಆಹಾರ ಉತ್ಪಾದನೆಯಲ್ಲಿ ಮಧ್ಯಮ, ಸಣ್ಣ ಮತ್ತು ಅತಿಸಣ್ಣ ರೈತರ ಪಾಲು ದೊಡ್ಡದು. ಆಹಾರ ಧಾನ್ಯಗಳ ಒಟ್ಟು ಉತ್ಪಾದನೆಯಲ್ಲಿ ಇವರ ಕೊಡುಗೆ ಶೇ.89.4 ಇದ್ದು 2010-11 ಮತ್ತು 2014-15ರ ನಡುವೆ ಶೇ.60ಕ್ಕೆ ಇಳಿದಿದೆ. ಇದನ್ನು ಆಹಾರ ಧಾನ್ಯವಾರು ವಿಂಗಡಿಸಿದ್ದರೆ, ಶೇ.40ರಷ್ಟು ಭತ್ತ, ಶೇ.40ರಷ್ಟು ಗೋಧಿ, ಶೇ.27ರಷ್ಟು ಏಕದಳ ಧಾನ್ಯಗಳು, ಶೇ.27 ರಷ್ಟು ದ್ವಿದಳ ಧಾನ್ಯಗಳ ಹೊಂದಿ ಗಣನೀಯ ಅರ್ಥಶಾಸ್ತ್ರಜ್ಞರು ಹೆಚ್ಚು ಸರಕಾರಿಗಳು ಮತ್ತು ಕುಟುಂಬ ಉತ್ಪಾದನೆಯಲ್ಲಿ ಮಧ್ಯಮ, ಸಣ್ಣ ಮತ್ತು ಅತಿಸಣ್ಣ ರೈತರ ಕೊಡುಗೆ ಬಹಳ ದೊಡ್ಡದು(ಕೃಷಿ ಜನಗಣತಿ, 2014)

[illegible]

ಸೂಚಿಸುತ್ತದೆ

ಇಂತಹ ಹಲವು ಕಾರಣಗಳಿಂದ [illegible] ಸರಾಸರಿ ಪ್ರತಿದಿನ 2035 ಪ್ರಮುಖ ಕೃಷಿ ಕುಟುಂಬಗಳು (Main cultivator) ವ್ಯವಸಾಯದಿಂದ ಮುಕ್ತಿ ಪಡೆಯುತ್ತಿದ್ದಾರೆ /ತೊರೆಯುತ್ತಿದ್ದಾರೆ. ಆರ್ಥಿಕ ಸಮೀಕ್ಷೆಯ ಪ್ರಕಾರ ಕೃಷಿಯಲ್ಲಿ ಉಳಿಯಲು ಬಯಸುವ ಮತ್ತು ಗ್ರಾಮೀಣ ಪ್ರದೇಶದಲ್ಲಿ ಕೃಷಿ ಕೂಲಿಯನ್ನು 1980ರಲ್ಲಿ ಶೇ.5 ಹೆಚ್ಚಳವಾಗಿದ್ದ ಉತ್ಪಾದನೆಯು 1990ರಲ್ಲಿ ಅದು ಶೇ.2ರಷ್ಟು ಬೆಳವಣಿಗೆ ಕಂಡರೆ 2000ರ ಮೊದಲ ಅರ್ಧದಲ್ಲಿ ಕೊನೆಯಾಗಿದೆ. ಇದರ ಪರಿಣಾಮವಾಗಿ ಕೃಷಿ ಆಧಾರಿತ ಉದ್ಯೋಗಗಳಿಂದ ಕೃಷಿಯೇತರ ಉದ್ಯೋಗಗಳಿಗೆ ಗ್ರಾಮೀಣ ಜನರು ಬದಲಾಗುತ್ತಿದ್ದಾರೆ. ಎಂಜಿಎನ್‌ಆರ್‌ಇಜಿಎ, ಗ್ರಾಮೀಣ ಕೂಲಿಯ ಹೆಚ್ಚಳಕ್ಕೆ ಪೂರಕವಾಗಿದ್ದರೂ, ಹೊಸ ಉದ್ಯೋಗ ಸೃಷ್ಟಿಗೆ ಸಂಬಂಧಿಸಿದಂತೆ ಅದರ ಪ್ರಭಾವವು ಹೆಚ್ಚು ಸೀಮಿತವಾಗಿದೆ. ಈ ಸಂದರ್ಭ ಕೇಂದ್ರ ಸರ್ಕಾರವು ಉದ್ಯೋಗ ಖಾತರಿ ಯೋಜನೆಯ ಕೂಲಿಯನ್ನು ಕೋವಿಡ್-19 ಸಮಯದಲ್ಲಿ ರೂ.20ಗಳನ್ನು ಹೆಚ್ಚು ಮಾಡಿದೆ. ಆದರೆ ಈ ಯೋಜನೆಯ ಅನುಷ್ಠಾನವು ಬಹುತೇಕ ಪ್ರಕರಣಗಳಲ್ಲಿ ಪ್ರಾಮಾಣಿಕತ್ವ ಮತ್ತು ಪಾರದರ್ಶಕ ಮೌಲ್ಯವನ್ನು ಒಳಗೊಳ್ಳದಿರುವುದು ನಮ್ಮ-ನಿಮ್ಮ ಅನುಭವವಾಗಿದೆ. ಸಾಂಕ್ರಾಮಿಕ ಅವಧಿಯಲ್ಲಿ (ಮಾರ್ಚ್ 2020 ರಿಂದ ನವೆಂಬರ್ 30, 2021 ರವರೆಗೆ) ಭಾರತದಲ್ಲಿ, ಬಿಲಿಯನೇರ್‌ಗಳ ಸಂಪತ್ತು ಭಾರತದ ರೂಪಾಯಿ ಮೌಲ್ಯದಲ್ಲಿ ರೂ. 23.14 ಲಕ್ಷ ಕೋಟಿಯಿಂದ (USD 313 ಶತಕೋಟಿ) ಭಾರತದ ರೂಪಾಯಿ ಮೌಲ್ಯದಲ್ಲಿ ರೂ. 53.16 ಲಕ್ಷ ಕೋಟಿಗೆ (ಅಮೆರಿಕಾ ಸಂಯುಕ್ತ ಸ್ಥಾನ ಡಾಲರ್‌ನಲ್ಲಿ (ಯುಎಸ್‌ಡಿ) 719 ಶತಕೋಟಿ) ಹೆಚ್ಚಾಗಿದೆ. ಇದೇ ಸಮಯದಲ್ಲಿ ಅಂದರೆ 2020ರಲ್ಲಿ 4.6 ಕೋಟಿಗೂ ಹೆಚ್ಚು ಭಾರತೀಯರು ತೀವ್ರ ಬಡತನಕ್ಕೆ ತಳ್ಳಲ್ಪಟ್ಟಿದ್ದಾರೆ. ಈ ಪ್ರಮಾಣವು ವಿಶ್ವಸಂಸ್ಥೆಯ ಅಂದಾಜಿನ ಪ್ರಕಾರ ಜಾಗತಿಕ ಹೊಸ ಬಡವರಲ್ಲಿ ಸುಮಾರು ಅರ್ಧದಷ್ಟು. ಭಾರತದಲ್ಲಿನ ಸಂಪೂರ್ಣ ಸಂಪತ್ತಿನ ಅಸಮಾನತೆಯು ಬಡವರು ಮತ್ತು ಅಂಚಿನಲ್ಲಿರುವವರ ವಿರುದ್ಧವಾಗಿ, ಅತಿ ಶ್ರೀಮಂತರ ಅಥವಾ ಸೂಪರ್ ರಿಚ್ (Super-rich) ಪರವಾಗಿ ಸಜ್ಜುಗೊಂಡಿರುವ ಆರ್ಥಿಕ ನೀತಿಗಳ ರೂಪುರೇಷೆಗಳ ಪರಿಣಾಮವಾಗಿದೆ. ಅಂದರೆ ದೇಶದ ಆರ್ಥಿಕ ಬೆಳವಣಿಗೆಯ ರೀತಿಯಾಗಲಿ, ದೇಶದ ಅತಿ ಶ್ರೀಮಂತರ ಸಂಪತ್ತಿನಲ್ಲಿ ಉಂಟಾದ ಹೆಚ್ಚಳದಂತೆ ಬಡವರು, ದುಡಿಯುವ ಜನರ ಆದಾಯದಲ್ಲಿ ಮಹತ್ತರ ಪ್ರಚ್ಛಲ ಉಂಟಾಗಿಲ್ಲ. ಇಂತಹ ಅಭಿವೃದ್ಧಿ ವಿಕೃತ್ಯಗಳನ್ನು ಮಾರ್ಕ್ಸಿಸ್ಟ್ ಭೂಗೋಳಶಾಸ್ತ್ರಜ್ಞ ಡೆವಿಡ್ ಹಾರ್ವೆ 'ಅಕ್ಯುಮ್ಯುಲೇಷನ್ ಬೈ ಡಿಸ್ಪೋಸೆಷನ್'

STATEMENT ABOUT OWNERSHIP AND OTHER PARTICULARS ABOUT NEWSPAPER

FORM IV

1.	Place of Publication:	Bangalore
2.	Periodicity of its publication:	Monthly
3.	Printer's Name : Nationality Address Vishwaneedam Post, Bangalore - 560 091	**S.R. Govindu** Indian 63,Anjananagar,
4.	Publisher's Name: Nationality Address	**S.R. Govindu** Indian 63,Anjananagar, Vishwaneedam Post, Bangalore - 560 091
5.	Editor's Name : Nationality Address	Indudhara Honnapura Indian 402, 1st Main, 2nd Block, HBR Layout, Bangalore - 560 043
6.	Name and address of individuals who own the newspaper and partners and share holders holding more than one percent of the total capital	Spandhana, 63, Anjanenagar, Vishwaneedam Post, Bangalore-560 091 (Sole proprietor.)

I, **S.R. Govindu**, hereby declare that the particulars given above are true to the best of my knowledge and belief.

Sd/-

Date: 01-03-2024 **S.R. Govindu,** Publisher

Scanned with OKEN Scanner

ದೇಶದಾದ್ಯಂತ ಆಗ್ಗಿಷ್ಟಗಳ ಕಟ್ಟಿ ನಾವು
ಬೆಳೆದಿದ್ದೇವು ಬಲಿ ಹುಬೆ?
ಹೂಬಾಗಿದ್ದಗಳ ಹೊಲ ತೆರೆಯಿಸ್ತಿ ತೊಗುವುದೇನು?
ಹುಲಿ ಅಥವಾ ನಟ್ಟುಲಿ?
ದೋಜನೆಯಿಂದ ದೋಚಲಿಗಳವು
ಕಳದ ಕೆಲವರ್ಷ ಹೂತು ಹೋಗಿವೆ ಬಾವ್ಗಿ
ಇದ್ದಂತ ಕಾಲು ಕಾಮಿಲ್ಲ
ಕೈಗ್ರಾಲ್ಲಿ ತಾಪ್ಪ
ಒಪ್ಪಿ-ಚಿಪ್ಪದ ಕಣಾ
ತೆರೆದ ಅಂಗಡಿಯೆದರು ಬೆಳಗಿಂದ ಸಂಜೆಯ ತನಕ
ಒಂದು ಕಾಲಿನ ದ್ಯಾವ
ಹಮ್ಮುಗಳನ ಕೆಳಗೆ ಎರಿಳದ ಕಣ್ಣಿರಿಯ ನೆರೆಳಗ ಕೆಳಗೆ
ಹುಟ ಮೌಳ
ಬಂತೆ ವೀಣಾವಾಣಿ ಇಷ್ಟೊಂದು ಹಣಾತೆಗಳಲ್ಲಿ
ಎಣ್ಣೆಯಿಲ್ಲ
ಬಲೀ ಮಾತುಗಳ ಕಟ್ಟಿ ಗೀಚುವೆಯಲ್ಲ
ನಿನಗ ನಾಚಿಕೆಯಿಲ್ಲ?

ಉದ್ಯೋಗ ಅವಕಾಶದ ಸೃಷ್ಟಿಯಲ್ಲಿ ನೆಲಕಚ್ಚಿರುವ ನಮ್ಮ ಅಭಿವೃದ್ಧಿ ಮಾದರಿಯೂ, ಕೃಷಿಯಿಂದ ವಿಮುಕ್ತಿ ಪಡೆದವರು ಜೀವನ ನಿರ್ವಹಣೆಗೆ ಪಟ್ಟಣ ಹಾಗೂ ಗ್ರಾಮ ಪ್ರದೇಶಗಳಲ್ಲಿ ಅಕ್ಷರಂತ ಕನಿಷ್ಠ ವೇತನಕ್ಕೆ, ಹೆಚ್ಚು ಸಮಯ ಮತ್ತು ಶ್ರಮ ಆಧಾರಿತ ದುಡಿಮೆಯನ್ನು ಅನಿವಾರ್ಯತೆಗೆ ವಲಯಗಳಲ್ಲಿ ಮಾಡುತ್ತಿದ್ದಾರೆ. ಅವುಗಳಲ್ಲಿ ಪ್ರಮುಖವಾದವು ಡ್ರೈವರ್, ಹೋಟೆಲ್, ಆಸ್ಪತ್ರೆಗಳಲ್ಲಿ ಸ್ವಚ್ಛತಾ ಕೆಲಸ, ವಾಚ್‌ಮನ್, ಮಾರುಕಟ್ಟೆಗಳಲ್ಲಿ ಹೂಲಿ, ಕಬ್ಬಿಣ ಕೆಲಸ, ಇಟ್ಟಿಗೆ ಭಟ್ಟಗಳಲ್ಲಿ ಗಾರೆಕೆಲಸ, ಸಾರ್ವಜನಿಕ ಕೆಲಸ, ಕಟ್ಟಡ ಕೆಲಸ, ರಸ್ತೆ ನಿರ್ವಾಣ, ಇಟ್ಟಿಗೆ ಗೂಡುಗಳು, ಕಲಿನ ಕಾರ್ಖಾನೆಗಳು, ರೈಲ್ವೇ ಗ್ಯಾಂಗ್‌ಮನ್ ಕೆಲಸ, ಬಂದರುಗಳಲ್ಲಿ ಹಮಾಲಿ ಕೆಲಸ, ಗಾರ್ಮೆಂಟ್ಸ್ ಕೆಲಸ ಮುಂತಾದ ದುಡಿಮೆಗಳು. ಇನ್ನು ಮುಂತಾದ ದುಡಿಮೆಗೆ ಪಕ್ಕಿರ ಪಟ್ಟಣ, ಮೂರನ ನಗರಗಳನ್ನು ಅವಲಂಬಿಸಿವೆಂತಾಗಿದೆ. ಇಂತಹ ಯುಡಿಮೆಯನ್ನು ಅವಲಂಬಿಸಿರುವ ಬಹುತೇಕರು ಸ್ಥಳ ಮತ್ತು ಅಲೆ ಸ್ಥಳ ಹೂಡುವುದಕ್ಕೆ ಕುಟುಂಬಗಳಿಗೆ, ಅದರಲ್ಲಿಯೂ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ, ಎಂದೂಳಿದ ಜಾತಿ-ವರ್ಗ ಹಾಗೂ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದವರು.

ಇವರು ಪದ್ಯಮಿಂದ ದುಡಿಮೆಯ ಬೇಟೆಯ ಮೇಲೆ ಊರಿಂದ ಊರಿಗೆ ಅಲೆಯುತ್ತಿದ್ದಾರೆ. ದುಡಿಯುವ ಸ್ಥಳದಲ್ಲಿ ಇವರಿಗೆ ಯಾವುದೇ ಕಾರ್ಮಿಕ ಕಾನೂನುಗಳಾಗಲಿ, ಕನಿಷ್ಠ ವೇತನವಾಗಲಿ, ಸಾಮಾಜಿಕ ಭದ್ರತೆಗಳು ಇರುವುದಿಲ್ಲ. ಗ್ರಾಮ ಸಾಮಾನ್ಯ ಬಡವರು ಒದುಕಿಗೆ ಅತ್ಯಂತ ಅಪಾಯಕಾರಿ ಪರಿಸರದಲ್ಲಿ ದುಡಿಯಬೇಕಾದ ವಿವರ್ತಾಲಕ್ಕೆ ತಳ್ಳಲ್ಪಡುತ್ತಿದ್ದಾರೆ. ಇದಾಗ್ಗೆ ಹಿಂದುಳಿದ ಪ್ರದೇಶಗಳಿಂದ ಹಿಂದುಳಿದ ಸಮುದಾಯಗಳ ಅದರಲ್ಲಿಯೂ ಅಭಿವೃದ್ಧಿಯಲ್ಲಿ ಹಿಪ್ಪ ದುಸ್ಥಿತಿಯಲ್ಲಿ ಇರುವ ಕುಟುಂಬಗಳ ಒಡ ಹೆಣ್ಣು ಮಕ್ಕಳು ದುಡಿಮೆಯನ್ನು ಅರಸಿ ಇದೇ ಪ್ರದೇಶಗಳಿಗೆ ಪ್ರತಿದಿನ ಬಂದುಹೋಗುತ್ತಿದ್ದಾರೆ. ಇವರಿಗೆ ಮೊರಕುವ ವೇತನ ಮತ್ತು ದುಡಿಮೆಯ ಪರಿಸ್ಥಿತಿಗಳು ಅತ್ಯಂತ ಕಳಪೆಯಿಂದಿರುತ್ತವೆ. ಇವರ ಮೇಲೆ ನಡೆಯುವ ಮಾನಸಿಕ ಮತ್ತು ದೈಹಿಕ ದೌರ್ಜನ್ಯಗಳಿಗೆ ಲೆಕ್ಕವಿಲ್ಲ. ಈ ಎಲ್ಲಾ ಅಂಶಗಳು ಮಹಿಳಾ ಉದ್ಯೋಗದ ಪ್ರಮಾಣ ಕುಸಿಯಲು ಮುಖ್ಯ ಕಾರಣವಾಗಿವೆ. ಯಾವುದೇ ರೀತಿಯ ಕೌಶಲ್ಯ ಇಲ್ಲದ ಮಹಿಳೆಯರು ಹಳ್ಳಿಯಿಂದ ನಗರಕ್ಕೆ ಸೇರಿಕೊಂಡ ಕಾರಣ ಇವರು ಕೃಷಿಯಿಂದ ಉದ್ಯೋಗಾವಕಾಶದ ಸೃಷ್ಟಿಯಲ್ಲಿ ಆದರು ಇರುವುದು ಉದ್ಯೋಗರಹಿತ ಬೆಳವಣಿಗೆ (Jobless Growth) ಯ ಲಕ್ಷಣ. ಕಷ್ಟ ದುಡಿಮೆಯಲ್ಲಿ ಶ್ರಮವನ್ನು ಮಾಡುವ ಇತರರು ಹೆಚ್ಚು ಹೆಚ್ಚು ಮಾಡುವ ಮಕ್ಕಳು, ಕಡಿಮೆ ಧನ ಮತ್ತು ಮಹಿಳೆಯ ಬೇಕಾದ ಕಡೆ-ಒಂದೂಡಿಸಿ, ಸಿಲ್ಲಿ ಅಸಂಘಟಿತರು ಅಭಿವೃದ್ಧಿ ನೀತಿಗಳು ಮತ್ತು ಅವರ ಅಯ ಕಳ್ಳಿಗಳು. ಕೃಷಿಯ

ಈ ಪರಿಸ್ಥಿತಿಯು ಉದ್ಯೋಗ ನೀಡುವಲ್ಲಿ ಮತ್ತು ದುಡಿಮೆಯಲ್ಲಿ ನಡೆಯುವ ಸಂಬಂಧವು ಹೆಚ್ಚು ಅನಿಶ್ಚಿತವು. ಅಲ್ಪಾವಧಿಯ ದುಡಿಮೆಗಳಲ್ಲಿ ಒಪ್ಪಂದಗಳ ಪರಿಸ್ಥಿತಿಯ ಬಡಪೆಗಳಿಂದ ಸೃಷ್ಟಿಯಾದ ಇಂತಹ ಪರಿಸ್ಥಿತಿಯಲ್ಲಿ ಮಾಲೀಕರು ಬಯಸಿದಾಗಲೆಲ್ಲಾ ಯಾವುದೇ ಪರಿಹಾರವಿಲ್ಲದೆ ಕೆಲಸದಿಂದ ಹೊರಹಾಕಲ್ಪಡುವ ಭಯ ಇರುತ್ತದೆ. ಇದರಿಂದ ಸಂಘಟಿತರಾಗಿ ಹೋರಾಡಲು ಕಷ್ಟ.



ಭೂರಹಿತ ಬಡವರು ಮತ್ತು ದುಡಿಯುವ ಜನರು ನಿಂತ ನೆಲವೇ ಕುಸಿಯುತ್ತಿದೆ. ಬಡವರ ದುಃಖ ಆಳದಲ್ಲಿ ನಿರಂತರವಾಗಿ ಮಡುಗಟ್ಟುತ್ತಿರುತ್ತದೆ. ಬಡತನವು ಅವರ ಸ್ಥಿತಿಯನ್ನು ಪ್ರದರ್ಶನಕ್ಕೆ ಇಡುತ್ತದೆ. ಅವರು ವಾಸಿಸುವ ಮಣ್ಣಿನ ಗುಡಿಸಲುಗಳಿಗೆ, ಹುಲ್ಲಿನ ಛಾವಣಿಗಳಿಗೆ, ಜೋಪಡಿ, ಟೆಂಟುಗಳಿಗೆ ದಾಗಿಲುಗಳಿಲ್ಲ ಮತ್ತು ಕಟಕಿಗಳಿಲ್ಲ. ಇನ್ನೂ ಕೆಲವರು ಪ್ಲಾಸ್ಟಿಕ್ ಟೆಂಟ್‌ಗಳಲ್ಲಿ ವಾಸಮಾಡುತ್ತಿದ್ದಾರೆ. ಅವುಗಳ ಒಳಗೆ ಚಳಿಗಾಳಿ, ಬಿಸಿಗಾಳಿ ನುಗ್ಗಿದಾಗ, ಮಳೆ ಸುರಿದಾಗ, ನೀರು ನುಗ್ಗಿದಾಗ ಅವರ ನಿಟ್ಟುಸಿರಿನಲ್ಲಿ 'ಮೇರಾ ಭಾರತ ಮಹಾನ್' ಎಂಬ ಉದ್ಗಾರ ಕೇಳುತ್ತದೆ. ಈ ಕುಂತಿ ಐಡಂಬಾಂ ಅವರು ಬರೆದ 'ಮೇರಾ ಭಾರತ ಮಹಾನ್' ಮತ್ತು 'ಹಸಿವೆ' ಕವಿತೆಗಳು ಇನ್ನಷ್ಟು ಸ್ಪಷ್ಟತೆಯನ್ನು ನೀಡುತ್ತವೆ.

ಮೇರಾ ಭಾರತ ಮಹಾನ್
ಚಳಿ ಮಳೆಗೆ ತಾಪಕ್ಕೆ ವರ್ಷವೂ ಮತ್ತೆ
ಅಸಂಖ್ಯ ಮಂದಿಗಳು ಸಾಯುವರು ಗೊತ್ತೆ
ಯಾರೆಂದು ಬಲ್ಲಿರಾ ಸಾಯುತಿಹ ಜನರು
ಒದಲಿರದ ಸೂರಿರದ ಕೂಳಿಲ್ಲದವರು ಹಸಿವೆ

ಕಪ್ಪು ಹಣ ಕೂಡಿಡುವ ಲೋಭಿಗಳ ಜಾಲ
ಬಲ್ಲಿರಾ ಈ ಹಸಿವೆ ಎಂಬುದಕೆ ಮೂಲ
ದೇಶಕ್ಕೆ ಮನುಷ್ಯತ್ವ ಉಳ್ಳವನು ಒಬ್ಬ
ಅಧಿಪತಿಯು ಅದಾಗ ಆ ಜನವ ಹಬ್ಬ

ಈ ಎಲ್ಲಾ ವಿದ್ಯಮಾನಗಳು ಕೃಷಿ ಸಮಾಜದ ಬಡತನ ಜೀವಿಸುವಾಗಿದೆ. ಕೃಷಿಯಲ್ಲಿ ಉದ್ಯೋಗಕ್ಕೆ ಯೋಜನೆಯಲ್ಲಿ ಇರುವ ಅವಕಾಶಗಳನ್ನು ವಿಶ್ಲೇಷಿಸಲಾಗಿದೆ. ಆದರೆ ಇತ್ತೀಚಿನ 30 ವರ್ಷಗಳಿಂದ ಅನುಸರಿಸುತ್ತಿರುವ ಅಭಿವೃದ್ಧಿ ನೀತಿಗಳು ಮತ್ತು ಅದರ ಕಾರ್ಯ ಕಂಡಿಗಳು ಒಂದು ಕಡೆಯಾದರೆ, ಮತ್ತೊಂದು ಕಡೆ ಜಾಗತಿಕ ಮಟ್ಟದಲ್ಲಿ ನೀತಿಗಳಿಗೆ ಪರ್ಯಾಯವಾಗಿ ಸ್ಥಳೀಯ ಅಭಿವೃದ್ಧಿ ಮಾದರಿಗಳನ್ನು ರೂಪಿಸಲು ಸಾಧ್ಯವಾಗದಿರುವುದು ಕಾರಣವಾಗಿದೆ. ಅಂದರೆ ವಸಾಹತುಶಾಹಿ ಪೂರ್ವ ಮತ್ತು ವಸಾಹತುಶಾಹಿ ನಂತರದಲ್ಲಿ(ಸ್ವಾತಂತ್ರ್ಯ ನಂತರ) ಅವಧಿಯಲ್ಲಿ ಗ್ರಾಮೀಣ ಕೃಷಿ ಸಮಾಜದಲ್ಲಿ ಇದ್ದ ಗುಲಾಮಗಿರಿಯ ಅಭ್ಯಾಸಗಳು ದೂರ ಹೋಗದ ಪರಿಣಾಮ, ಬಂಡವಾಳಶಾಹಿ ಘೂರಿತ ಅಸಮಾನ ಸ್ಥಿತಿಯು ನಮ್ಮಮೇಲಕ್ಕೆ



ಮಾತ್ರ ಬೇಕಿಂದ ಮುಕ್ತಗಾಗಿದ್ದಾಗ ಹೊಸ ಗುಂಪಿನ ಅಭಿವೃದ್ಧಿ ಕಾರ್ಯಕರ್ತರುಗಳು ದುಡಿಯುವ ಜನಗಳನ್ನು 'ನವ-ಬಂಧನ'ಕ್ಕೆ ತಳ್ಳುತ್ತಿದೆ. ಹೇಗೆ ದುಡಿಯುವ ಜನರು ತೋಷಣೆಗೆ, ಅಸುರಕ್ಷಿತ ಕೆಲಸದಲ್ಲಿ ಸಿಕ್ಕಿಬಿದ್ದಿದ್ದಾರೆ ಎಂಬುದನ್ನು ಜಯಂತಿ ಘೋಷ್, ವಾಸವಿ, ಬ್ರೆಮನ್, ಹರ್ಷಮಂದರ್, ಅಭಿಜಿತ್ ಬ್ಯಾನರ್ಜಿ, ರಾಷ್ಟ್ರ ಮತ್ತು ರಾಜ್ಯ ಮಟ್ಟದ ವರದಿಗಳು, ಜನಸಂಘಟನೆಗಳ ವರದಿಗಳು ಹಾಗೂ ಕನ್ನಡ ವಿಶ್ವವಿದ್ಯಾಲಯ ನಡೆಸಿದ ಹಲವು ಅಧ್ಯಯನಗಳಿಂದ ತಿಳಿದುಬಂದಿದೆ.

ಒಟ್ಟಾರೆ ಭೂಸುಧಾರಣೆಗಳು ಸೇರಿದಂತೆ 'ಅಭಿವೃದ್ಧಿ'ಯ ಜೊತೆ ಉಲ್ಬಣಿಸಲಾಗುವ ಮತ್ತು ಹೆಚ್ಚು ಬಳಸಲಾಗುವ ಪರಿಕಲ್ಪನೆಗಳು ಭೂರಹಿತ ಬಡವರ ಬದುಕಿನಲ್ಲಿ ಮಹತ್ತರ ಬದಲಾವಣೆಗಳು ತಂದಿಲ್ಲ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ನಿಮ್ನವರ್ಗಕ್ಕೆ ಸೇರಿದವರು, ಅದರಲ್ಲಿಯೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಜನರನ್ನು ಜೀವನೋಪಾಯಕ್ಕೆ ಯಾವುದೇ ಕೆಲಸವನ್ನು ಮಾಡುವಂತೆ ಒತ್ತಾಯಿಸುತ್ತಿದೆ. ಇದನ್ನು ಅನೌಪಚಾರಿಕ ವಲಯದಲ್ಲಿ ಅತ್ಯಂತ ದುಸ್ಥಿತಿಯಲ್ಲಿ ದುಡಿಯುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಗಣನೀಯವಾಗಿ ಹೆಚ್ಚುತ್ತಿರುವುದು ಎತ್ತಿತೋರಿಸುತ್ತದೆ. ಇಲ್ಲಿ ದುಡಿಯುವವರು ಪಡೆಯುವ ಯಾವುದೇ ರೀತಿಯ ಕೂಲಿ/ವೇತನ/ಸಂಭಾವನೆ ಅತ್ಯಂತ ಸಣ್ಣದಾಗಿದ್ದು, ಸುದೀರ್ಘವಾಗಿ ದುಡಿಯುವ ಜನರು ಸಂಘಟಿತ ಕಾರ್ಮಿಕರಲ್ಲಿ ಉದ್ಯೋಗ ನೀಡುವವರು ಅಥವಾ ಮಧ್ಯವರ್ತಿ ಮೇಸ್ತ್ರಿಯಿಂದ ಸಾಲವಾಗಿ ಪಡೆಯುವ ಮುಂಗಡ ಹಣದಿಂದ ಅವರ ಶ್ರಮದ ಶೋಷಣೆ ಪ್ರಾರಂಭವಾಗುತ್ತದೆ. ಮುಂಗಡವನ್ನು ತೆಗೆದುಕೊಂಡ ತದನಂತರ, ಕಾರ್ಮಿಕರು 'ಉದ್ಯೋಗಿ'ಯ(ಕೆಲಸ ನೀಡಿದವರ) ಆದೇಶದ ಮೇರೆಗೆ ಎಲ್ಲಾ ಕೆಲಸಗಳನ್ನು ಮಾಡುವ ಮೂಲಕ ಅನಿಯಮಿತ ದುಡಿಮೆಗೆ ಒಳಪಡುತ್ತಾರೆ. ಕಡಿಮೆ ಅವಧಿಯಲ್ಲಿ ಹೆಚ್ಚು ಕೆಲಸ ಮಾಡಲು ಗುತ್ತಿಗೆ ಪದ್ಧತಿಯಿರುತ್ತಾರೆ. ಈ ಒಳಗೆ ಅಲ್ಲಿ ಮಧ್ಯಮಿಗಳು ಯಾವುದೇ ಇತರ ಕೆಲಸವನ್ನು ತೆಗೆದುಕೊಳ್ಳಲು ಮುಕ್ತನಾಗಿರುತ್ತಾರೆ. ಅದರೆ ದುಡಿಮೆಗಾರರ ಶ್ರಮದ ಶೋಷಣೆಯು ತುಂಡು ಗುತ್ತಿಗೆ, ಪೀಸ್-ವರ್ಕ್, ಕೂಲಿಯ ನಿಧಾನ ಪಾವತಿ, ಅನಿರೀಕ್ಷಿತ ಸಮಯಗಳಲ್ಲಿ ಅನಿಶ್ಚಿತತೆ, ಇನ್ನೂ ಮುಂತಾದ ದುಡಿಮೆಯ ಸ್ವರೂಪಕ್ಕೆ ಗ್ರಾಮೀಣ ಜನರು ಒಳಪಟ್ಟಿದ್ದಾರೆ.

ಇದಕ್ಕೆ ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ರಚನೆಯಲ್ಲಿಯೇ ಇರುವ ವ್ಯತ್ಯಾಸಗಳು ಸಮತೆ, ಸ್ವಾತಂತ್ರ್ಯ ಮತ್ತು ಸಹೋದರತ್ವವನ್ನು ಪ್ರತಿಪಾದಿಸುವುದಕ್ಕೆ ಬದಲಾಗಿ ಇನ್ನಷ್ಟು ಬೇರ್ಪಡಿಸುತ್ತಿರುವುದು ಕಾರಣವಾಗಿದೆ. ಹೀಗಾಗಿ ಗ್ರಾಮೀಣ ಪ್ರದೇಶ ಎನ್ನುವುದು ಕಂದಾಯ ಜಮೀನು ಆಡಳಿತಾತ್ಮಕ ದೃಷ್ಟಿಯಿಂದ ನೆಟ್ಟಿರುವ ಬಾಂಧುಗಲ್ಲುಗಳ ರೀತಿಯಲ್ಲಿ ಇಲ್ಲ. ಇದು ಜಾತಿಕ ಮುಕ್ತ ಮಾರುಕಟ್ಟೆಯ ಆಶಯ ಉದ್ದೇಶಗಳಿಗೆ ಪೂರಕವಾಗಿ, ಮಾನವ ಸಂಪನ್ಮೂಲಗಳು ಅಂದರೆ ಹಾಲು-ಮೊಸರು ಕೋಳಿ-ಮಾಂಸ ಹಾಗೂ ಆಹಾರ ಪದಾರ್ಥಗಳನ್ನು ಉತ್ಪಾದಿಸುವ ಮತ್ತು ಮೂಲ್ಯವನ್ನು ಕೇಂದ್ರ ಮಾತ್ರವಾಗಿಲ್ಲ. ರಾಷ್ಟ್ರೀಯತೆಯ ರಾಜಕಾರಣ ವಿದ್ಯಮಾನಗಳಿಗೆ ಒಕ್ಕಲಿಸುವ ಇಂದಿ ಜಾಗತಿಕ ಆರ್ಥಿಕ ಮಧ್ಯಮವರ್ಗಗಳಿಗೆ ಮತ್ತು ಇವರ ಬೆಂಬಲಕ್ಕೆ ಬಲಪಡಿಸಿರುತ್ತದೆ. ಹೀಗಾಗಿ ಅಲ್ಲಿ ಪ್ರಗತಿಯ ಬದುಕು ಎನ್ನುವುದು ಇಲ್ಲವಾಗಿದೆ. ಆರ್ಥಿಕವಾಗಿ ಸ್ವಲ್ಪಮಟ್ಟಿಗೆ ಮೇಲಮೆಯ ಬೆಲನೆಯನ್ನು ಸಾಧಿಸಿದ್ದರೂ ಜಾತಿ ಮತ್ತು ಧರ್ಮ ಆಧಾರಿತ ಶೋಷಣೆಗಳು ಇನ್ನೂ ಸ್ಥಳಾಂತರಗೊಂಡಿಲ್ಲ. ಇದಕ್ಕೆ ಈ ಸೆಯಲ್ಲಿ ಸ್ವಯಂಕೃತ ಬದುಕು ಬಾಳಿ ಕೊಂಡ ಸಂಘಟನೆಗಳು ಸಂಘಟಿತ ಕಾರ್ಮಿಕ ಸಂಘಟನೆಗಳು ಸಂಘಟಿತ ಕಾರ್ಮಿಕರ

6

3.4.5

ISSN 2319-7307

ನಮ್ಮದಿಯ ನಾಳೆ ನಮ್ಮದು

ಹೊನಲು

ಏಪ್ರಿಲ್ ೨೦೨೪
ಬೆಲೆ : ₹ ೩೦

ಜನಪರ ಹೆಜ್ಜೆಗೆ ಇಪ್ಪತ್ತೈದು ವರ್ಷ

೧೯೯೯-೨೦೨೪

ಭಾರತ ಸಂವಿಧಾನ



Scanned with OKEN Scanner

ಹೊಸತು

ಒಳಗೆನಿದೆ?

ಸಂಪಾದಕೀಯ ಹಾಳೆ ನುಚ್ಚು ಮೆ

ಅಯೋಧ್ಯೆಯ ರಾಮ ಇಂದಿನ ಮಕ್ಕಳ ಹೀರೋ ಕೆ. ಬಾಲಕೃಷ್ಣ ... ೨

ಚುನಾವಣಾ ಬಾಂಡ್ ಮೋದಿ – ಎಲೆಕ್ಟೋರಲ್ ಬಾಂಡ್ ಸ್ಕ್ಯಾಮ್
ಮುರಳೀಧರ ಬೆಳಮಗಲಿ ... ೧೦

ಚುನಾವಣಾ ಸಿದ್ಧಾಂತವೆಂಬ ಬಾಧಕವಾದ ಕೋಟಾ
ಸಂಕಲನ: ಕೆ. ಬಾಲಕೃ ... ೬

ಸಂದರ್ಶನ

ಪ್ರಸ್ತುತ ಧೋರಣೆ ಮತ್ತು ಸಂವಿಧಾನ ಉಳಿಸಿ
ಸಂದರ್ಶನ: ಡಾ. ಬಿ. ಶ್ರೀ. ಮಂಜುನಾಥ್, ಡಾ. ಬದ್ರಿನಾಥ್ ಪಾಟೀಲ ... ೨೮

ಬಿಳಿ
ಬಿಳಿಯ ಸಮಯ ... ೧೮

ಇತ್ಯಾದಿ
ಎಸ್. ಸಿ. ಇರ್. ಎಸ್. ಐ. ನಡುವೆ ... ೨೦

ಅಂತರಂಗ

ಕೊಲ್ಲುತ್ತ ಬದುಕುವ ವಿಶ್ವದ ದೇಶ
ಡಾ. ಎನ್. ಜಗದೀಶ್ ಕೊಪ್ಪ ... ೧೫

ಎಐನಿಂದ ಭೂಮಿ ವಿಕ್ಷಿಪ್ತಗೆ ಒಂದು ಬಾಧಕವಾಗಬಹುದಾ?
ಟಿ. ಎಸ್. ವೇಣುಗೋಪಾಲ್ ... ೨೩

ನಾಟಕ – ಪಾರಿ ಕಟ್ಟಿ ಅಧಿವಾಸಾ
ಡಾ. ಎನಯ ಒಕ್ಕುಂದ ... ೩೭

ಇವಿಎಂ ಮಾಲಾರಿಗೆ ಇದ್ದರೆ ಏಯರೆ ಸಂಬುತ್ತೀರಾ?
ಪ್ರೊ. ಮುಜಫ್ಫರ್ ಅಸ್ಸದಿ ... ೩೯

ದ್ವಿಭಾಷಿ ಅಳವಡಿಸಿ ಅರಿಯುತ್ತಾ ಕರ್ನಾಟಕ ದಲಿತ ಚಳುವಳಿಯ
ಲಗಾವನ್ನು ಅರಿಯುವ ಕಡೆಗೆ
ಡಾ. ಬಿ. ಎಂ. ಪುಟ್ಟಯ್ಯ ... ೪೬

ಸಾಂಸ್ಕೃತಿಕ ರಾಜಕೀಯ
ಎಂ. ಚಂದ್ರ ಪೂಜಾರಿ ... ೫೮

ಮ್ಯಾಲೆಟ್ಸನ್ ಶ್ಯಾಮ್ಯನ ಕಮು ಬಣ್ಣಗಳನ್ನು ದಾಟುವ 'ದಿ ಟೀಚರ್'
ಮ. ಶ್ರೀ. ಮುರಳಿ ಕೃಷ್ಣ ... ೬೧

ಕಾಯಿಯಾಗಿ ಕಾಡುವ ದರ್ಶನ
ಈರಪ್ಪ ಎಂ. ಕಂಬಳಿ ... ೭೨

ಮೌನ ಸಮಾಜದ ಗುಪ್ತ ಧಾನಿ : ಆಲ್ಫ್ರೆಡ್ ಬ್ರೇಹ್
ಡಾ. ಉದಯರವಿ ಶಾಸ್ತ್ರೀ ... ೪೧

ಬಡವ ಸಾಹಿತ್ಯ ದುಷ್ಟ ಮಾನವೀಯ ಮೌಲ್ಯಗಳಾಡಾ: ಬುದ್ಧಿಜೀರ್ಮನ ಮೈತ್ರಿ ... ೪೫

[redacted]

ಸಹಾವಲೋಕನ : ಯುಗಾದಿಯ ಬಳಿಕ ಭೂಮಿಕೆತು – ಎಲ್ಲರಿಗೂ ಕಾಣುವುದೇ?
ಡಾ. ಬಿ. ಎಸ್. ಶೈಲಜಾ ... ೫೫

ಹೊಸ ಓದು
ಇಂದಿರಾ ಕುಮಾರಿ ... ೪೪

ಚಿತ್ರಗಳು : ಅಮೀರ್ ಹಿರೇಮಠ

ಮುಖಪುಟ : ಆಂಜರ್ಣಾಲ

ವಿನ್ಯಾಸ : ಸಂವರ್ಣಾಬಲ ಪ್ರಿಂಟ್ಸ್

ಕಚೇರಿ ಸಹಕಾರ : ಸುಲೋಚನಾ ಆರ್., ಆನಂದ ಕೆ.

ಪ್ರಸ್ತಾವನೆ...

೨೦೨೪ರ ಲೋಕಸಭಾ ಚುನಾವಣೆಯು ಅತ್ಯಂತ ಕುಟಿಲತೆ, ಕುತಂತ್ರ, ಹಿಂಸಾಚಾರ, ಹಣದ ಬೆಲ್ಲಾಟಗಳಿಗೆ ಬಹಳ ಕೆಟ್ಟದಾದ ಮಾದರಿಯಾಗಬಹುದು ಎಂಬ ಸೂಚನೆಗಳಿವೆ. ಪಂಗತಿ ಇಷ್ಟು ಹದಗೆಡಲು ದೇಶವನ್ನು ಕೇಂದ್ರದಲ್ಲಿಯೂ ಅನೇಕ ರಾಜ್ಯಗಳಲ್ಲಿಯೂ ಆಳುತ್ತಿರುವ ಬಿಜೆಪಿ ಪಕ್ಷವು ಮುಖ್ಯ ಕಾರಣವಾಗಲಿದೆ. ಚುನಾವಣೆಯನ್ನು ಗೆಲ್ಲಲು ಯಾವ ಅಪಮಾರ್ಗವನ್ನೂ ಈ ಪಾರಿ ಬಿಜೆಪಿ ಮತ್ತು ಸಂಘ ಪರಿವಾರ ಬಿಟ್ಟುಕೊಡಲಾರವು.

ಇದಕ್ಕಾಗಿಯೇ ಪೂರ್ಣಗೊಳ್ಳಲು ಇನ್ನೂ ಎರಡು ವರ್ಷ ಆಗತ್ಯವಿರುವ ಅಯೋಧ್ಯೆಯ ರಾಮಮಂದಿರವನ್ನು ಚುನಾವಣೆ ಹತ್ತಿರವಾಗುತ್ತಿರುವಂತೆ ಉದ್ಘಾಟಿಸಲಾಯಿತು. ಆದರೆ ಕೇವಲ ರಾಮನ ಹೆಸರಿನಿಂದ ಚುನಾವಣೆಯನ್ನು ಗೆಲ್ಲುವುದು ಸಾಧ್ಯವಿಲ್ಲ ಎಂಬುದು ಅರ್ಥವಾದ ಕೂಡಲೇ ಅವರು ಸಾಲ್ಕೂವರೆ ವರ್ಷಗಳಿಂದಲೂ ಶೈಕ್ಷಣಿಕಾರದಲ್ಲಿದ್ದ ಸಿಎಎ ಎಂಬ ಅತ್ಯಂತ ವಿವಾದಾತ್ಮಕ ಕಾನೂನನ್ನು ಜಾರಿಗೊಳಿಸಲು ಹೊರಟಿದ್ದಾಗಿ. ಇದರ ಹಿಂದಿರುವ ಉದ್ದೇಶ ಸ್ಪಷ್ಟ ಮುಸಲ್ಮಾನರನ್ನು ದ್ವೇಷಕ್ಕೆ ಗುರಿಮಾಡಿ ಹಿಂದೂಗಳ ಮತಪಮನ್ನು ಬಾಚಿಕೊಳ್ಳುವುದು. ಆದರೆ ಅದೂ ಸಹ ಸಾಲದೆನಿಸಿ ವಿರೋಧ ಪಕ್ಷಗಳ ಒಗ್ಗಟ್ಟನ್ನು ಮುರಿಯಲು ಪ್ರಯತ್ನಿಸಲಾಗುತ್ತಿದೆ.

ಉತ್ತರ ಪ್ರದೇಶದಲ್ಲಿ ಮಾಯಾವತಿಯವರು ಮಿತ್ರಪಕ್ಷಗಳೊಂದಿಗೆ ಚುನಾವಣೆಯಲ್ಲಿ ಸ್ಪರ್ಧಿಸಬಾರದೆಂದು, ಜಾರಿ ನಿರ್ದೇಶನಾಲಯ (ಇಡಿ.) ಸಿಬಿಐ ಮುಂತಾದವುಗಳ ಮೂಲಕ, ಆಕೆ ಒಂಟಿಯಾಗಿಯೇ ಸ್ಪರ್ಧಿಸಬೇಕು, ತನ್ಮೂಲಕ ವಿರೋಧ ಪಕ್ಷಗಳ ಮತಗಳನ್ನು ವಿಭಜಿಸಬೇಕು ಎಂದು ಒತ್ತಾಯಿಸಲಾಗುತ್ತಿದೆಯಂತೆ. ಇಂಡಿಯಾ ಒಕ್ಕೂಟವು ಬಲಿಷ್ಠವಾಗುತ್ತದೆ ಎಂಬ ಭಯದಲ್ಲಿ ಅವರು ಬಿಹಾರದಲ್ಲಿ ನೆಪ್ಪೆ–ಮೊನ್ನೆಯವರೆಗೂ ತಾವೇ ಟೀಕಿಸುತ್ತಿದ್ದ ನಿತೀಶ್ ಕುಮಾರ್‌ರನ್ನು ಬಲವಂತವಾಗಿ ತಮ್ಮ ಕಡೆಗೆ ಎಳೆದುಕೊಂಡು ಹೋಗಿದ್ದಾರೆ. ಬಂಗಾಳದ ಮಮತಾ ಬ್ಯಾನರ್ಜಿಯವರ ಮೇಲೆಯೂ ಒತ್ತಡ ಹಾಕಿ ಇಂಡಿಯಾ ಮೈತ್ರಿಕೂಟದೊಂದಿಗೆ ಯಾವುದೇ ರೀತಿಯ ಹೊಂದಾಣಿಕೆಗೆ ಬರಲಾಗದಂತೆ ಮಾಡಲಾಗುತ್ತಿದೆ. ಮಹಾರಾಷ್ಟ್ರದಲ್ಲಂತೂ ಶಿವಸೇನೆ ಮತ್ತು ಎನ್‌ಸಿಪಿ ಪಕ್ಷಗಳನ್ನು ಒಡೆದಾಗಿದೆ. ಗುಜರಾತ್ ಮುಂತಾದ ರಾಜ್ಯಗಳಲ್ಲಿ ವಿರೋಧ ಪಕ್ಷಗಳೇ ಇರಬಾರದು ಎನ್ನುವಂತೆ ವಿವಿಧ ನಾಯಕರುಗಳನ್ನು ಖರೀದಿ ಮಾಡಲಾಗುತ್ತಿದೆ. ತಮಿಳುನಾಡು, ಕೇರಳ, ಬಂಗಾಳ ಮುಂತಾದ ರಾಜ್ಯಗಳಲ್ಲಿ ಸತತವಾಗಿ ರಾಜ್ಯಪಾಲರನ್ನು ರಾಜ್ಯ ಸರ್ಕಾರಗಳ ವಿರುದ್ಧ ಛೂ ಬಿಡಲಾಗುತ್ತಿದೆ. ಅರವಿಂದ್ ಕೇಜ್ರಿವಾಲ್ ಅವರನ್ನು ಹಾಗೂ ತಮಿಳುನಾಡಿನಲ್ಲಿ ಡಿಎಂಕೆ ನಾಯಕರನ್ನು, ಇದೀಗ ತೆಲಂಗಾಣದಲ್ಲಿ ಬಿಆರ್‌ಎಸ್ ಪಕ್ಷದ ನಾಯಕಿ ಕವಿತಾ ಅವರನ್ನು ವಿವಿಧ ಸಂಸ್ಥೆಗಳ ಮೂಲಕ ಹಣಿಯುವ ಪ್ರಯತ್ನ ನಡೆಯುತ್ತಿದೆ. ಜಾರ್ಖಂಡದ ಮುಖ್ಯಮಂತ್ರಿಯನ್ನು ಆಗಲೇ ಜೈಲಿಗೆ ತಳ್ಳಲಾಗಿದೆ. ಮುಖ್ಯವಾಹಿನಿ ಮಾಧ್ಯಮಗಳನ್ನು ಸಂಪೂರ್ಣವಾಗಿ ಕೊಂಡುಕೊಳ್ಳಲಾಗಿದೆ.

ಇಷ್ಟಾಗಿ ಬಿಜೆಪಿ ಗೆದ್ದೇ ಗೆಲ್ಲುವುದು ಎಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಅವರು ಬರುವ ದಿನಗಳಲ್ಲಿ ಹಲವಾರು ಹೊಸ ವಿವಾದಗಳನ್ನು, ಹಿಂಸಾಚಾರಗಳನ್ನು ಹುಟ್ಟುಹಾಕುವ ಎಲ್ಲ ಸೂಚನೆಗಳು ಕಾಣಿಸಿ ಕೊಳ್ಳುತ್ತಿವೆ. ಹೇಗಾದರೂ ಗಣರಾಜ್ಯವನ್ನು ಬುಡಮೇಲು ಮಾಡಬೇಕು ಎಂದು ಪ್ರಯತ್ನಿಸುತ್ತಿರುವ ಶಕ್ತಿಯೊಂದು ವಾಮಮಾರ್ಗದಿಂದ ಅಧಿಕಾರ ಹಿಡಿಯದಂತೆ ನೋಡಿಕೊಳ್ಳಬೇಕಾದದ್ದು ಎಲ್ಲ ಪ್ರಜ್ಞಾವಂತರ ಕರ್ತವ್ಯವಾಗಿದೆ.

ಹವಾಮಾನ ಬದಲಾವಣೆಯ ಒತ್ತಡ ಬರ ಮತ್ತು ಬಡತನ ಹೆಚ್ಚಿಲ

(ಗತದ ಸಂಚಿಕೆಯಿಂದ ಮುಂದುವರಿದ ಭಾಗ)

ಹವಾಮಾನ ವೈಪರೀತ್ಯಗಳು ಸೃಷ್ಟಿಸುವ ಗಂಡಾಂತರಗಳು ಅತ್ಯಂತ ಹಿಂದುಳಿದ ಪ್ರದೇಶಗಳು ಮತ್ತು ಜನರ ಮೇಲೆ ಗಂಭೀರವಾದ ಪರಿಣಾಮ ಬೀರುತ್ತವೆ. ಕರ್ನಾಟಕವು ಭಾರತದ ಇತರೆ ರಾಜ್ಯಗಳಿಗಿಂತ ಹವಾಮಾನ ಬದಲಾವಣೆಯ ಗಂಡಾಂತರಗಳಿಗೆ ಹೆಚ್ಚು ತುತ್ತಾಗುವ ಸಾಧ್ಯತೆ ಇದೆ. ಇದರಿಂದ ಕರ್ನಾಟಕಕ್ಕೆ ಭಾರಿ ನಷ್ಟವಾಗಲಿದೆ ಎಂಬ ಹವಾಮಾನ ತಜ್ಞರು ಎಚ್ಚರಿಸಿದ್ದಾರೆ. ರಾಜ್ಯದ ಒಟ್ಟು ಕೃಷಿಭೂಮಿಯಲ್ಲಿ ಶೇಕಡಾ ೬೮ರಷ್ಟು ಭೂಮಿಯು ಕೃಷಿಗೆ ಮಳೆಯನ್ನೇ ಅವಲಂಬಿಸಿದೆ. ರಾಜ್ಯದ ಕೆಲವು ಪ್ರದೇಶಗಳು ತೀವ್ರ ಮತ್ತು ದೀರ್ಘಕಾಲಿಕ ನೀರಿನ ಕೊರತೆಯನ್ನು ಎದುರಿಸುತ್ತಿವೆ. ಕರ್ನಾಟಕವು ಬರಪೀಡಿತ ಪ್ರದೇಶಗಳ ವಿಷಯದಲ್ಲಿ, ರಾಜಸ್ಥಾನದ ನಂತರದ ಸ್ಥಾನದಲ್ಲಿದೆ. ರಾಜ್ಯದಲ್ಲಿ ಇರುವ ೩೧ ಜಿಲ್ಲೆಗಳಲ್ಲಿ ಒಟ್ಟು ೨೪೦ ತಾಲ್ಲೂಕುಗಳಿವೆ. ಈ ವರ್ಷ ಎನ್‌ಡಿಆರ್‌ಎಫ್ (ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ) ಮತ್ತು ಎಸ್‌ಡಿಆರ್‌ಎಫ್ (ರಾಜ್ಯ ವಿಪತ್ತು ಪರಿಹಾರ ನಿಧಿ) ನಿಯಮಗಳ ಪ್ರಕಾರ ೧೯೫ ತಾಲ್ಲೂಕುಗಳು ಬರಪೀಡಿತ ಎಂದು ಘೋಷಿಸಲಾಗಿದೆ. ರಾಜ್ಯದಲ್ಲಿ ಇರುವ ಒಟ್ಟು ತಾಲ್ಲೂಕುಗಳಲ್ಲಿ ಶೇಕಡ ೧೩ರಷ್ಟು ತಾಲ್ಲೂಕುಗಳು ಬರಪೀಡಿತ ತಾಲ್ಲೂಕುಗಳಾಗಿವೆ. ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ನಡೆಸಿದ ಸಮೀಕ್ಷೆಯು, ರಾಜ್ಯದ ೧೬೧ ತಾಲ್ಲೂಕುಗಳಲ್ಲಿ ತೀವ್ರ ಬರವಿದೆ, ೩೮ ತಾಲ್ಲೂಕುಗಳಲ್ಲಿ ಮಧ್ಯಮ ಪ್ರಮಾಣದ ಬರವಿದೆ ಎಂದು ಘೋಷಿಸಿದೆ. ಇದನ್ನು ಕಂದಾಯ ವಿಭಾಗವಾರು ನೋಡುವುದಾದರೆ ಬೆಳಗಾವಿ ವಿಭಾಗದಲ್ಲಿ ಶೇಕಡ ೧೩ರಷ್ಟು ತಾಲ್ಲೂಕುಗಳು, ಕಲಬುರಗಿ ವಿಭಾಗದಲ್ಲಿ ಶೇಕಡ ೮೬.೨ರಷ್ಟು ತಾಲ್ಲೂಕುಗಳು, ಬೆಂಗಳೂರು ವಿಭಾಗದಲ್ಲಿ ಶೇಕಡ ೯೨.೩೦ರಷ್ಟು ತಾಲ್ಲೂಕುಗಳು, ಮೈಸೂರು ವಿಭಾಗದಲ್ಲಿ ಶೇಕಡ ೬೬.೬೬ರಷ್ಟು ತಾಲ್ಲೂಕುಗಳು ಬರಪೀಡಿತ ಎಂದು ಸರ್ಕಾರವು ಘೋಷಣೆ ಮಾಡಿದೆ. ಇನ್ನುಳಿದ ತಾಲ್ಲೂಕುಗಳು ಮಳೆ ಕೊರತೆ ಎದುರಿಸುತ್ತಿದ್ದು, ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಮಾರ್ಗಸೂಚಿಗಳ ಪ್ರಕಾರ ಬರಪೀಡಿತ ಎಂದು ಘೋಷಿಸಲು ಸರಕಾರಕ್ಕೆ ಸಾಧ್ಯವಾಗುತ್ತಿಲ್ಲ ಎನ್ನುವುದು ವಾಸ್ತವ.

ಡಾ. ಹೆಚ್. ಡಿ. ಪ್ರಶಾಂತ್

ಇಲ್ಲಿ ನಾವು ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಈ ವರ್ಷವೂ ಎಂದಿನಂತೆ ಕಲಬುರಗಿ ವಿಭಾಗವು ಬೆಂಗಳೂರು ವಿಭಾಗದ ನಂತರ ಹೆಚ್ಚು ಬರಕ್ಕೆ ತುತ್ತಾಗಿದೆ. ಕರ್ನಾಟಕ ಮಾನವ ಅಭಿವೃದ್ಧಿ ವರದಿ-೨೦೨೨ರ ಪ್ರಕಾರ ಮಾನವ ಅಭಿವೃದ್ಧಿ ಸೂಚ್ಯಂಕದ ರ‍್ಯಾಂಕ್‌ನಲ್ಲಿ ಟಾಪ್‌ಟೆನ್ (Top Ten) ಐದು ಜಿಲ್ಲೆಗಳು ಬೆಂಗಳೂರು ವಿಭಾಗಕ್ಕೆ ಸೇರಿವೆ. ಅವೆಂದರೆ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ ಮತ್ತು ಶಿವಮೊಗ್ಗ. ಈ ಜಿಲ್ಲೆಗಳಲ್ಲಿ ಪರ್ಯಾಯ ದುಡಿಮೆಯ ಮಾರ್ಗಗಳು ಮತ್ತು ಉದ್ಯೋಗ ಅವಕಾಶಗಳು ಹೆಚ್ಚು. ಆದರೆ ಮಾನವ ಅಭಿವೃದ್ಧಿ ಸೂಚ್ಯಾಂಕದ ರ‍್ಯಾಂಕ್‌ನಲ್ಲಿ ಬಾಟಮ್ ಟೆನ್ (Bottom Ten) ಜಿಲ್ಲೆಗಳಲ್ಲಿ ಐದು ಜಿಲ್ಲೆಗಳು ಕಲಬುರಗಿ ವಿಭಾಗಕ್ಕೆ ಸೇರಿವೆ. ಅವೆಂದರೆ ಯಾದಗಿರಿ, ಕಲಬುರಗಿ, ರಾಯಚೂರು, ಕೊಪ್ಪಳ ಮತ್ತು ಬೀದರ್. ಈ ಜಿಲ್ಲೆಗಳಲ್ಲಿ ಕೃಷಿ ಅವಲಂಬನೆಯ ಪ್ರಮಾಣವೂ ಹೆಚ್ಚು. ಯಾದಗಿರಿ ಶೇಕಡಾ ೭೧.೯೩; ರಾಯಚೂರು ಶೇಕಡ ೬೯.೬೦; ಕಲಬುರಗಿ ಶೇಕಡ ೬೭.೨೯; ಕೊಪ್ಪಳ ಶೇಕಡ ೬೬.೬೬; ಬೀದರ್ ಶೇಕಡ ೫೯.೯೭ ಮತ್ತು ಬಳ್ಳಾರಿ ಶೇಕಡಾ ೫೯.೯೭ ಅಂದರೆ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸರಾಸರಿ ೬೫.೮೨ರಷ್ಟು ಜನರು ಬದುಕಿಗೆ ಕೃಷಿಯನ್ನು ನೇರವಾಗಿ ಅವಲಂಬಿಸಿರುತ್ತಾರೆ. ಇಲ್ಲಿ ದುಡಿಮೆಯ ಪರ್ಯಾಯ ಮಾರ್ಗಗಳು ಮತ್ತು ಉದ್ಯೋಗ ಅವಕಾಶಗಳು ತೀರಾ ಕಡಿಮೆ.

ಕರ್ನಾಟಕದಲ್ಲಿ ಶೇಕಡ ೨೫.೬೭ ಕೃಷಿ ದಿನಗೂಲಿ ದುಡಿಮೆಗಾರರಿದ್ದರೆ, ಹೈದ್ರಾಬಾದ್ ಕರ್ನಾಟಕದಲ್ಲಿ ಭೂರಹಿತ ಕೃಷಿ ದಿನಗೂಲಿ ದುಡಿಮೆಗಾರರ ಪ್ರಮಾಣ ಹೆಚ್ಚು. ಯಾದಗಿರಿ ಜಿಲ್ಲೆಯಲ್ಲಿ ಶೇಕಡಾ ೪೨.೬೪; ರಾಯಚೂರು ಶೇಕಡಾ ೪೨.೪೫; ಗುಲಬರ್ಗಾ ಶೇಕಡಾ ೩೮.೨೦; ಕೊಪ್ಪಳ ಶೇಕಡಾ ೪೧.೭೦; ಬೀದರ್ ಶೇಕಡಾ ೩೯.೮೬ ಮತ್ತು ಬಳ್ಳಾರಿ ಶೇಕಡಾ ೩೬.೩೬ ಸ್ವಲ್ಪ ಹೆಚ್ಚು ಕಡಿಮೆ ಬಳ್ಳಾರಿ ಜಿಲ್ಲೆಯನ್ನು ಹೊರತುಪಡಿಸಿ ಇನ್ನು ಉಳಿದ ಐದು ಜಿಲ್ಲೆಗಳಲ್ಲಿ ಕೃಷಿ ದಿನಗೂಲಿ ದುಡಿಮೆಗಾರರ ಪ್ರಮಾಣ ಸ್ವಲ್ಪ ಹೆಚ್ಚು ಕಡಿಮೆ ಶೇಕಡಾ ೪೦ರಷ್ಟಿದೆ. ೨೦೧೯-೨೦೨೦ರಲ್ಲಿ ಹೈದ್ರಾಬಾದ್ ಕರ್ನಾಟಕದಲ್ಲಿ ಕೃಷಿ ಮತ್ತು ಕೃಷಿ ಸಂಬಂಧಿ ಅವಲಂಬಿತರ ಪ್ರಮಾಣ ಶೇಕಡ ೬೯.೫ರಷ್ಟು ಇದ್ದರೆ, ಕರ್ನಾಟಕದಲ್ಲಿ ಈ



ಪ್ರಮಾಣ ಶೇಕಡ ೪೬.೬ ಇದ್ದಿ ಇಯವ ಅಂಂ ..... ಪ್ರಿಂಸ್ಟಾ ಇದೇ ಸಮಯದಲ್ಲಿ ಸೈದ್ಧಾಂತಿಕ ಕರ್ನಾಟಕ ಪ್ರದೇಶದಲ್ಲಿ ಸಾಕ್ಷರತಾ ವಲಯದ ಪಾಲು ಶೇಕಡ ೫೬.೬೩ ಇದ್ದರೆ, ಉತ್ಪಾದನೇತರ ಹಾಗೂ ಸೇವಾ ವಲಯದ ಪಾಲು ಕ್ರಮವಾಗಿ ಶೇಕಡ ೬೯೮ ಮತ್ತು ಶೇಕಡ ೧೮.೧೫ರಷ್ಟು ಒಟ್ಟು ಕರ್ನಾಟಕದಲ್ಲಿ ಉತ್ಪಾದನೆ ವಲಯದ ಪಾಲು ಶೇಕಡ ೧೨.೩ ಇದ್ದರೆ, ಉತ್ಪಾದನೇತರ ಹಾಗೂ ಸೇವಾ ವಲಯದ ಪಾಲು ಕ್ರಮವಾಗಿ ಶೇಕಡ ೭೫ ಮತ್ತು ಶೇಕಡ ೧೨.೬ರಷ್ಟು (ಕರ್ನಾಟಕ ಮಾನವ ಅಭಿವೃದ್ಧಿ-೨೦೦೫). ಇದರಿಂದ ನಮಗೆ ತಿಳಿಯುವ ಪ್ರಮುಖ ಅಂಶವೆಂದರೆ ಸೈ ಪ್ರದೇಶದಲ್ಲಿ ಕೃಷಿಯೇತರ ದುಡಿಮೆಯ ವರ್ಯಾಯ ಮಾರ್ಗಗಳು ಮತ್ತು ವರ್ಯಾಯ ಉದ್ಯೋಗ ಅವಕಾಶಗಳು ಇಲ್ಲ ಎನ್ನುವುದು.

ಈ ಪರಿಸ್ಥಿತಿಯಲ್ಲಿ ಕೆಲಬರಿಗಿ ವಿಭಾಗದ ಸಣ್ಣ, ಅತಿ ಸಣ್ಣ ರೈತ ಕುಟುಂಬಗಳ ಸದಸ್ಯರು, ದೊರಹಿತ ಬಡಜನರು ಜೀವನವನ್ನು ಉಳಿಸಿಕೊಳ್ಳಲು ದುಡಿಮೆಯನ್ನು ಅರಸಿ ನಗರ ಪ್ರದೇಶಗಳಿಗೆ ವಲಸೆಬಂದು ದುಡಿಮೆಯನ್ನು ಬೇಟೆಯಾಡುತ್ತಾರೆ. ಬಡವರು ಜೀವನೋಪಾಯಕ್ಕೆ ದುಡಿಮೆಯನ್ನು ಅರಸಿ ಊರಿಂದ ಊರಿಗೆ ವಲಸೆ ಹೋಗುತ್ತಾರೆ. ಉದ್ಯೋಗ ಅವಕಾಶದ ಸೃಷ್ಟಿಯಲ್ಲಿ ನೆಲಕಚ್ಚಿರುವ ನಮ್ಮ ಅಭಿವೃದ್ಧಿ ಮಾದರಿಯೂ ಹಾಗಿದೆ: ಕೃಷಿಯಿಂದ ವಿಮುಕ್ತಿ ಪಡೆದವರು ಜೀವನ ನಿರ್ವಹಣೆಗೆ ಪಟ್ಟಣ ಹಾಗೂ ನಗರ ಪ್ರದೇಶಗಳಲ್ಲಿ ಅತ್ಯಂತ ಕನಿಷ್ಠ ವೇತನಕ್ಕೆ, ಹೆಚ್ಚು ಸಮಯ ಮತ್ತು ಶ್ರಮ ಆಧಾರಿತ ದುಡಿಮೆಯನ್ನು ಅಸಂಘಟಿತ ವಲಯದಲ್ಲಿ ಮಾಡುತ್ತಿದ್ದಾರೆ. ಅವುಗಳಲ್ಲಿ ಪ್ರಮುಖವಾದವು ಡ್ರೈವರ್, ಹೋಟೆಲ್, ಆಸ್ಪತ್ರೆಗಳಲ್ಲಿ ಸ್ವಚ್ಛತಾ ಕೆಲಸ, ವಾಚ್‌ಮನ್, ಮಾರುಕಟ್ಟೆಗಳಲ್ಲಿ ಕೂಲಿ, ಕಟ್ಟಡ ಕೆಲಸ, ಇಟ್ಟಿಗೆ ಭಟ್ಟಗಳಲ್ಲಿ ದುಡಿಮೆ, ಗಾರ್ಮೆಂಟ್ಸ್ ಕೆಲಸ, ಕಬ್ಬು ಕಟಾವು, ರಸ್ತೆ ನಿರ್ಮಾಣ, ಇಟ್ಟಿಗೆ ಗೂಡುಗಳು, ಕಲ್ಲಿನ ಕ್ವಾರಿಗಳು, ರೈಲ್ವೇ ಗ್ಯಾಂಗ್‌ಮನ್ ಕೆಲಸ, ಬಂದರುಗಳಲ್ಲಿ ಹಮಾಲಿ ಕೆಲಸ, ಯಾಂತ್ರೀಕೃತ ಮೀನುಗಾರಿಕೆಯಲ್ಲಿ ಶ್ರಮ ಆಧಾರಿತ ದುಡಿಮೆ, ಮನೆಗೆಲಸ, ಇನ್ನೂ ಮುಂತಾದ ದುಡಿಮೆಗೆ ಹತ್ತಿರ ಪಟ್ಟಣ, ದೂರದ ನಗರಗಳನ್ನು ಅವಲಂಬಿಸುವಂತಾಗಿದೆ. ಇಂತಹ ದುಡಿಮೆಯನ್ನು ಅವಲಂಬಿಸಿರುವ ಬಹುತೇಕರು ಸಣ್ಣ ಮತ್ತು ಅತಿ ಸಣ್ಣ ಭೂಹಿಡುವಳಿ ಕುಟುಂಬಗಳಿಗೆ, ಅದರಲ್ಲಿಯೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಜಾತಿ-ವರ್ಗ ಹಾಗೂ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದವರು.

ಇವರಿಗೆ ದುಡಿಯುವ ಸ್ಥಳದಲ್ಲಿ ಯಾವುದೇ ಕಾರ್ಮಿಕ ಕಾನೂನುಗಳಾಗಲಿ, ಕನಿಷ್ಠ ವೇತನವಾಗಲಿ, ಸಾಮಾಜಿಕ ಭದ್ರತೆಗಳು ಇರುವುದಿಲ್ಲ. ಬಡವರು ಬದುಕಿಗೆ ಅತ್ಯಂತ ಅಪಾಯಕಾರಿ ಪರಿಸರದಲ್ಲಿ ದುಡಿಯಲೇಬೇಕಾದ ವಿಷವರ್ತುಲಕ್ಕೆ ಕಳ್ಳಲ್ಪಡುತ್ತಿದ್ದಾರೆ. ಆಗಾಗ್ಗೆ ಹಿಂದುಳಿದ ಪ್ರದೇಶಗಳಿಂದ ಹಿಂದುಳಿದ ಸಮುದಾಯಗಳ, ಅದರಲ್ಲಿಯೂ ಅಭಿವೃದ್ಧಿಯಲ್ಲಿ ಹೆಚ್ಚು ದುಸ್ಥಿತಿಯಲ್ಲಿ ಇರುವ, ಕುಟುಂಬಗಳ ಬಡ ಹೆಣ್ಣು ಮಕ್ಕಳು ದುಡಿಮೆಯನ್ನು ಅರಸಿ ನಗರ ಪ್ರದೇಶಗಳಿಗೆ ಪ್ರತಿದಿನ ಬಂದು ಹೋಗುತ್ತಿದ್ದಾರೆ. ಇವರಿಗೆ ದೊರಕುವ ವೇತನ ಮತ್ತು ದುಡಿಮೆಯ ಪರಿಸ್ಥಿತಿಗಳು ಅತ್ಯಂತ ಕಳವಳಕಾರಿಯಾಗಿರುತ್ತವೆ. ಈ ಕುರಿತು ಒಂದು ಪ್ರಕರಣ ಅಧ್ಯಯನವನ್ನು ನಾವು ಗಮನಿಸೋಣ:

ಹೆಸರು ಅನುಸೂಯಾ. ಊರು ಕಡ್ಲಿರಾಂಪುರ. ಈ ಊರು ವಿಶ್ವ ಪಾರಂಪರಿಕ ತಾಣವಾದ ಹಂಪಿಗೆ ಹೊಂದಿಕೊಂಡಂತೆ ಇದೆ. ಈ ಊರಿನಿಂದ ಹತ್ತಕ್ಕೂ ಹೆಚ್ಚು ಹೆಣ್ಣುಮಕ್ಕಳು ಹೊಸಪೇಟೆಯಲ್ಲಿ ವಿವಿಧ ಅಂಗಡಿಗಳಲ್ಲಿ ಸಹಾಯಕರಾಗಿ ಕೆಲಸ ಮಾಡಲು ಪ್ರತಿದಿನ ಬಂದುಹೋಗುತ್ತಾರೆ. ಕೆಲವರು ಕೊಲ್ಲಾಪೇಟೆಯಲ್ಲಿರುವ ಬಟ್ಟೆಯ ಅಂಗಡಿಗಳಲ್ಲಿ, ಕೆಲವರು ಹೊಸಪೇಟೆಯ ರೈಲು ನಿಲ್ದಾಣದ ರಸ್ತೆಯಲ್ಲಿರುವ ಕೆಲವು ಅಂಗಡಿಗಳಲ್ಲಿ, ಪುಣ್ಯಮೂರ್ತಿ ಸರ್ಕಲ್‌ನ ಆಜುಬಾಜಿನಲ್ಲಿರುವ ಅಂಗಡಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರುಗಳಲ್ಲಿ ಅನುಸೂಯಾ ಎನ್ನುವ ಹೆಣ್ಣುಮಗಳು ಸಿದ್ಧಉಡುಪು (ಮಕ್ಕಳು ಮತ್ತು ಹೆಣ್ಣುಮಕ್ಕಳ ಬಟ್ಟೆ) ಅಂಗಡಿಯಲ್ಲಿ ಅಂಗಡಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾರೆ.

ಅನುಸೂಯಾ ಅವರು ಶಿಶುವಿನ ಓದಿರುವುದರ ಇವರ ಜೊತೆ ಮುತುವರ್ಜಿಯಲ್ಲಿ ಪ್ರಾರಂಭಿಸಿದೆವು. ಏಕೆ ಓದನ್ನು ಮುಂದುವರಿಸಲ್ಲಿ? ಎಂದು ಅವರನ್ನು ಕೇಳಿದೆವು. ಅವರ ಮಾತುಗಳು ಹೀಗಿವೆ: 'ಬಡತನ ಕಾರಣದಿಂದ ಮುಂದೆ ಓದಲು ಸಾಧ್ಯವಾಗಿಲ್ಲ. ಭೂಮಿ ಇಲ್ಲ. ತಂದೆ ತಾಯಿ ಇಬ್ಬರೂ ಭೂರಹಿತ ಕೃಷಿ

ಅಭಿನಂದನೆಗಳು...

ಕರ್ನಾಟಕ ಸರ್ಕಾರವು ಡಾ. ಪುರುಷೋತ್ತಮ ಬಿಳಿಮಲೆ ಅವರನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿದೆ. 'ಸಪಕರ್ನಾಟಕ' ಹಾಗೂ 'ಹೊಸತು' ಲೇಖಕರೂ ಆಗಿರುವ ಪುರುಷೋತ್ತಮ ಬಿಳಿಮಲೆ ಅವರಿಗೆ ಅಭಿನಂದನೆಗಳು.

ಕಾರ್ಮಿಕರು. ತಂದೆಗೆ ಪ್ರತಿದಿನಕ್ಕೆ ೨೫೦ ರೂಪಾಯಿ ಕೂಲಿ ಸಿಗುತ್ತೆ, ತಾಯಿಗೆ ೧೨೦-೨೦೦ ರೂಪಾಯಿ ಕೂಲಿ ಸಿಗುತ್ತೆ. ಮನೆಯಲ್ಲಿ ನಾವು ಮೂರು ಜನ ಮಾತ್ರ ಇರುವುದು. ಕೋವಿಡ್-೧೯ ಸಮಯದಲ್ಲಿ ದುಡಿಮೆಗೆ ಅವಕಾಶ ಇಲ್ಲದೇ ಇದ್ದದ್ದರಿಂದ ಮನೆಯಲ್ಲಿ ಬಹಳ ಕಷ್ಟ ಆಯಿತು. ಹೀಗಾಗಿ ಓದನ್ನು ಮುಂದುವರಿಸಲಾಗಲಿಲ್ಲ. ಜೀವನ ನಿರ್ವಹಣೆಗೆ ಅಪ್ಪ ಅಮ್ಮ ಸಂಘದಲ್ಲಿ ಮತ್ತಿತರ ಕಡೆ ಸಾಲ ಮಾಡಿದ್ದರು. ಸಾಲ ತೀರಿಸಲು ನಾನು ಕೆಲಸ ಮಾಡಲೇಬೇಕಾಯಿತು. ಅದಕ್ಕೆ ನಾನು ಓದು ಮುಂದುವರಿಸಲು ಆಗಲಿಲ್ಲ. ಕೆಲಸ ಮಾಡೋಕೆ ಬಿರು ಮಾಡಿದೆ. ಪ್ರತಿದಿನ ನಾನು ಊರಿಗೆ ಹೋಗಿಬರ್ತೀನಿ. ಕಡ್ಡಿರಾಂಪುರದಿಂದ ಹೊಸಪೇಟೆಗೆ ಒಂದು ಕಡೆ ಬಸ್ ಚಾರ್ಜ್ ಹದಿನೈದು ರೂಪಾಯಿ. ಆಟೋದಲ್ಲಿ ಇಪ್ಪತ್ತು ರೂಪಾಯಿ. ಮೊದಲು ಆಟೋದಲ್ಲಿ ಓಡಾಡ್ತಾ ಇದ್ದೆ, ಆಗ ತಿಂಗಳಿಗೆ ಹನ್ನೆರಡು ನೂರು ಆಗುತ್ತಿತ್ತು. ಈಗ ನಾವು ಬಸ್‌ನಲ್ಲಿ ದುಡ್ಡು ಕೊಡಂಗಿಲ್ಲವಲ್ಲ, ಆದ್ದ ಬಸ್‌ನಲ್ಲಿ ಓಡಾಡ್ತೀನಿ. ಈ ಬಸ್ ಚಾರ್ಜ್ ನನಗೆ ಉಳಿತೈತೆ. ನನಗೆ ತಿಂಗಳಿಗೆ ಐದು ಸಾವಿರ ರೂಪಾಯಿ ಸಂಬಳ. ಊಟ ತಿಂಡಿ ಎಲ್ಲಾ ಮನೆಯಿಂದಲೇ ತರ್ತೀವಿ. ಅಂಗಡಿನಲ್ಲಿ ಟೀ ತರಿಸಿದ್ರೆ ಕುಡಿತೀನಿ ಇಲ್ಲಾಂದ್ರೆ ಇಲ್ಲ. ಸಂಜೆ ಆರು ಗಂಟೆಗೆ ಅಥವಾ ಅಂಗಡಿಯಲ್ಲಿ ಗಿರಾಕಿ ಜಾಸ್ತಿ ಇದ್ರೆ ಸ್ವಲ್ಪ ಲೇಟಾಗಿ ಮನೆಗೆ ಹೋಗ್ತೀನಿ. ನಮ್ಮ ಸಾಲ ಬೇಗ ಮುಟ್ಟಿಸಿ, ನಂತರ ಒಂದಿಷ್ಟು ಕಷ್ಟ ಸುಖಕ್ಕೆ ಕೂಡಿಡಬೇಕು ಎಂಬುಕೊಂಡಿದ್ದೇನೆ. ಜೊತೆ ಮುಂದೆ ಪದವಿ ಅಥವಾ ಡಿಪ್ಲೋಮಾ ಆನ್‌ಲೈನ್ ಕೋರ್ಸ್‌ಗಳನ್ನು ಮಾಡಲು ಸ್ವಲ್ಪ ಹಣ ಉಳಿತಾಯ ಮಾಡುತ್ತಿರುವೆ.'

ಅನುಸೂಯಾನಂತೆ ಅಸಂಖ್ಯಾತ ಹೆಣ್ಣು ಮಕ್ಕಳು ಹಾಗೂ ಮಹಿಳಾ ಕಾರ್ಮಿಕರು ಚೌಕಾಸಿ ಮಾಡದಂತೆ, ಯಾವುದೇ ರೀತಿಯ ಕೆಲಸವನ್ನು ಮಾಡುವ ಬಂಧನಕ್ಕೆ ಸಿಲುಕಿದ್ದಾರೆ. ಇಂತಹ ಹೆಣ್ಣು ಮಕ್ಕಳ ಮೇಲೆ ನಡೆಯುವ ಮಾನಸಿಕ ಮತ್ತು ದೈಹಿಕ ದೌರ್ಜನ್ಯಗಳಿಗೆ ಲೆಕ್ಕವಿಲ್ಲ. ಇವರ ಮೇಲೆ ನಡೆಯುವ ಬಹುತೇಕ ದೌರ್ಜನ್ಯಗಳು ವರದಿಯಾಗುವುದೇ ಇಲ್ಲ. ಇದಕ್ಕೆ ಬಹುಮುಖ್ಯ ಕಾರಣ ಸಾಲದ ಸ್ಥಿತಿಯಿಂದ ಶಾಶ್ವತವಾಗಿ ಹೊರಬರಲಾಗದ ಸ್ಥಿತಿಯಲ್ಲಿ ಇರುವುದು. 'ಉದ್ಯೋಗವಿಲ್ಲದ-ಬೆಳವಣಿಗೆ' (Jobless Growth)ಯು ಬಡವರು ತಮ್ಮ ಶ್ರಮವನ್ನು ಯಾವುದೇ ರೀತಿಯ ಚೌಕಾಸಿ ಮಾಡದೆ ಮುಕ್ತವಾಗಿ ಕಡಿಮೆ ಬೆಲೆಗೆ ಮಾರಾಟ ಮಾಡಲೇ ಬೇಕಾದ ನವ-ಬಂಧನವನ್ನು ಎದುರಿಸಬೇಕಾಗಿದೆ. ಇದಕ್ಕೆ ಪ್ರಮುಖ ಕಾರಣ ಅನುಸರಿಸುತ್ತಿರುವ ಅಭಿವೃದ್ಧಿ ನೀತಿಗಳು ಮತ್ತು ಅದರ ಕಾರ್ಯತಂತ್ರಗಳು. ಇವು ಉದ್ಯೋಗ ನೀಡುವವರು ಮತ್ತು ದುಡಿಯುವವರ ನಡುವಿನ ಸಂಬಂಧವನ್ನು ಹೆಚ್ಚು ಅನಿಶ್ಚಿತವು, ಅಲ್ಪಾವಧಿಯು, ನಿರಾಕರಣೆಯು ಮತ್ತು ಕಡಿಮೆ ಕೂಲಿಯ ಒಪ್ಪಂದಗಳ ಪರಿಸ್ಥಿತಿಯ ವಿಷವರ್ತುಲವನ್ನು ಸೃಷ್ಟಿಸಿದೆ.

ಇಂತಹ ಪರಿಸ್ಥಿತಿಯಲ್ಲಿ ಯಾವಾಗಲೂ ಬಂಡವಾಳಶಾಹಿಗಳು ಹಾಗೂ ದುಡಿಸಿಕೊಳ್ಳುವವರ ಸಂಪತ್ತು ಮತ್ತು ಆಸ್ತಿ ನಿರಂತರವಾಗಿ ಹೆಚ್ಚಳವಾಗುತ್ತಿರುತ್ತದೆ. ಆದರೆ, ಆಹಾರ, ಆರೋಗ್ಯ, ಶಿಕ್ಷಣದ ಮೇಲೆ ವೆಚ್ಚ ಮಾಡುವ ಬಡ ಜನರು ತಮ್ಮ ಜೇಬಿನಿಂದ ಮಾಡುತ್ತಿರುವ ವೆಚ್ಚ(out of pocket expenditure) ನಿರಂತರವಾಗಿ ಹೆಚ್ಚುತ್ತಿದೆ. ತಮ್ಮ ಮಕ್ಕಳ ಶಿಕ್ಷಣದ ಮೇಲೆ ಜನರು ತಮ್ಮ ಜೇಬಿನಿಂದ ಮಾಡುವ ವೆಚ್ಚದ ಪ್ರಮಾಣ ಶೇಕಡ ೧೭.೬ರಷ್ಟು ಹೆಚ್ಚಳವಾಗಿರುವುದು ಶಿಕ್ಷಣ ಮೂಲಭೂತ ಹಕ್ಕಲ್ಲ ಎನ್ನುವುದನ್ನು ತಿಳಿಸುತ್ತಿದೆ. ಪಡಿತರ ವ್ಯವಸ್ಥೆಯ ಮೂಲಕ ಆಹಾರವನ್ನು ಎಲ್ಲಾ ಜನರಿಗೂ ತಲುಪಿಸುತ್ತಿದ್ದೇವೆ ಎಂದು ಪುಟಗಟ್ಟಲೇ, ದಿನವಿಡೀ

ಮೇರಾ ಭಾರತ ಮಹಾನ್

ಚಳಿ ಮಳೆಗೆ ತಾವಕ್ಕೆ ವರ್ಷವೂ ಮತ್ತೆ
ಅಸಂಖ್ಯ ಮಂದಿಗಳು ಸಾಯುವರು ಗೊತ್ತೆ
ಯಾರೆಂದು ಬಲ್ಲಿರಾ ಸಾಯುತಿಹ ಜನರು
ಜನರೆಂದ ಸುಂದಿರದ ಕೂಳ್ಳಲುವರು.

ಹಸಿವೆ

ಕಪ್ಪು ಹಣ ಕೂಡಿಡುವ ಲೋಭಿಗಳ ಜಾಲ
ಬಲ್ಲಿರಾ ಈ ಹಸಿವೆ ಎಂಬುದಕೆ ಮೂಲ
ದೇಶಕ್ಕೆ ಮನುಷ್ಯತ್ವ ಉಳ್ಳವನು ಒಬ್ಬ
ಅಧಿಪತಿಯು ಆದಾಗ ಆ ದಿನವೆ ಹಬ್ಬ.

ಹಾಗೆಯೇ ಯಾತಕ್ಕೆ ಮಳೆ ಹೋದವೂ ಶಿವ ಶಿವ ಶಿವ... ಲೋಕಾ ತಲ್ಲಣಿಸುತಾವೋ ಎಂಬ ಜಾನಪದ ಗೀತೆಯಲ್ಲಿ ಜಾನಪದೀಯರು ಬರ ಉಂಟುಮಾಡುವ ಪರಿಣಾಮಗಳನ್ನು ಕಣ್ಣಿಗೆ ಕಾಣುವಂತೆ ಕಟ್ಟಿಕೊಟ್ಟಿದ್ದಾರೆ. ಈ ಗೀತೆಯ ಕೊನೆಯ ಸಾಲುಗಳು ಹೀಗಿವೆ–

'ಹಸುಗೂಸು ಹಸುವಿಗೆ ತಾಳವೆಲೆ
ಅಳುತಾವೆ ರೊಟ್ಟೀ ಕೇಳುತಲೇ
ಹಡೆದ ಬಾಣಂತಿಗೆ ಅನ್ನಾವು ಇಲ್ಲದಲೆ
ಏರುತಾವೆ ಮೊಳಕೈಗೆ ಬಳೆ

ಒಕ್ಕಲು ಮಕ್ಕಳಂತೆ
ಅವರಿನ್ನು ಮಕ್ಕಳನು ಮಾರುಂಡರು
ಮಕ್ಕಳನು ಮಾರುಂಡು ನುಕ್ಕವನ್ನು ಮದುತಾರೆ
ಮುಕ್ಕಣ್ಣ ಮಳೆ ಕರುಣಿಸೂ'

ಈ ಕವಿತೆಗಳು ಬರದ ಭೀಕರ ಪರಿಣಾಮಗಳನ್ನು ನಮಗೆ ತಿಳಿಸುತ್ತವೆ. ಬರದಿಂದ ಬಾಯ್ಬಿಟ್ಟ ನೆಲದಿಂದ ಜೀವ ಉಳಿಸಿಕೊಳ್ಳಲು ಮತ್ತು ಬದುಕು ಕಟ್ಟಿಕೊಳ್ಳಲು ದುಡಿಮೆಯನ್ನು ಹುಡುಕಲು ವಲಸೆ ಹೋಗುತ್ತಾರೆ. ವಲಸೆ ಎಂದರೆ ಪರಿಚಿತವಾದದ್ದನ್ನು ಬಿಟ್ಟು ಅಪರಿಚಿತವಾದ ಸನ್ನಿವೇಶಕ್ಕೆ ಕಾಲಿಡುವುದು. ಅಪರಿಚಿತ ಸನ್ನಿವೇಶ ಎನ್ನುವುದು ಅರ್ಥಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ವಿವರಿಸುವಂತೆ ಏನೇನೂ ಆಗಬಹುದು. ಇಲ್ಲಿ ಒಳ್ಳೆಯದು ಕೆಟ್ಟದು ಎಷ್ಟು ಪ್ರಮಾಣ ಅನ್ನುವ ನಿಖರ ಪಟ್ಟಿಯಿಲ್ಲ. ಇದು ಒಂದು ರೀತಿ ಶೇಕಡ ೫೦ ಹೀಗಾಗುತ್ತದೆ ಮತ್ತು ಶೇಕಡ ೫೦ ಹಾಗಾಗುತ್ತೆ ಎನ್ನುವುದು. ಇದನ್ನು ಅಪರಿಚಿತದಲ್ಲಿ ಅಪರಿಚಿತ (Unknown unknowns) ಎಂದು ಡೋನಾಲ್ಡ್ ರಮ್ಸ್‌ಫೀಲ್ಡ್ ಕರೆದರೆ, ನಂತರದಲ್ಲಿ ಇದನ್ನು ಅನಿಶ್ಚಿತತೆ ಎನ್ನುವ ಪರಿಭಾಷೆಯಲ್ಲಿ ಸಮಾಜವಿಜ್ಞಾನಿಗಳು ಕರೆದಿರುತ್ತಾರೆ. ವಲಸೆ ಹೋಗಬೇಕು ಅಂದುಕೊಂಡ ಗ್ರಾಮೀಣ ಜನರಿಗೆ ದೂರದ ನಗರ ಅನ್ನುವುದು ಅನಿಶ್ಚಿತತೆಗಳ ಗೂಡು. ಏಕೆಂದರೆ ಅವರಿಗೆ ಅಲ್ಲಿ ಯಾವ ಕೆಲಸ ಸಿಗುತ್ತದೆ? ಎಷ್ಟು ಕೂಲಿ ಸಿಗುತ್ತದೆ? ಯಾರು ಕೆಲಸಕ್ಕೆ ತೆಗೆದುಕೊಳ್ಳಬಹುದು? ನಾವು ಎದುರಿಸಬೇಕಾದ ಶೋಷಣೆಗಳು ಯಾವುವು? ಕೆಲಸ ದೊರಕುವುದಕ್ಕೆ ಎಷ್ಟು ದಿನಗಳಾಗಬಹುದು? ಎಲ್ಲಿ ವಾಸ ಮಾಡುವುದು? ಹೇಗೆ ವಾಸ ಮಾಡುವುದು? ಹೀಗೆ ಹಲವು ಪ್ರಶ್ನೆಗಳು ವಲಸೆ ಹೋಗಬೇಕು ಎಂದುಕೊಂಡವರನ್ನು ಕಾಡುತ್ತಿರುತ್ತವೆ. ಉತ್ತರ ಕಂಡುಕೊಳ್ಳಲು ಜನರಿಗೆ ವಲಸೆ ಹೋಗುವ ಸ್ಥಳ/ಪ್ರದೇಶದ ಬಗ್ಗೆ ಯಾವುದೇ ಅನುಭವವಿಲ್ಲ. ಎಲ್ಲಾ ಸಾಧ್ಯಾಸಾಧ್ಯತೆಗಳು ಅರ್ಥಶಾಸ್ತ್ರ ಪಸ್ಟೇ (ಪಿಪ್ಟೀ ಪಿಪ್ಟೀ). ಆದರೂ ಬಡವರು ವಲಸೆ ಹೋಗುವುದು ಹುಟ್ಟಿದ ಪಲೆ ಬರದಿಂದ ಬಾಯ್ಬಿಟ್ಟಾಗ. ಅವರು ಹೋಗುವುದು ಮನೆ ಬಿಟ್ಟು, ಊರು ಬಿಟ್ಟು ಅದು ಅವರನ್ನು ಅಲ್ಲಿ ಬದುಕಲು ಅಡಿದಿದ್ದಾಗಲಷ್ಟೆ.

ಬರ, ಪ್ರವಾಹ ಅಥವಾ ಕೋವಿಡ್-೧೯ ನಂತಹ ಆರೋಗ್ಯದಂತಹ ಗಂಡಾಂತರಕ್ಕೆ ಒಳಗಾದಾಗ, ಆಡಳಿತ ವ್ಯವಸ್ಥೆಯಲ್ಲಿ ಹೆಚ್ಚು ಗೆಟ್ಟ ಮುಟ್ಟುವವರು ಪ್ರಯೋಜನ ಪಡೆಯುತ್ತಾರೆ. ಅವರಲ್ಲಿ ಪ್ರಮುಖವಾದವರು ಆಡಳಿತ ವ್ಯವಸ್ಥೆಯ ಪಾಲುದಾರ ಗಣ್ಯರು, ದೊಡ್ಡ ದೊಡ್ಡ ಬಂಡವಾಳಸ್ಥರು, ಮಾಲೀಕರು-ಕಮ್-ಮ್ಯಾನೇಜರ್‌ಗಳು ಹಾಗೂ ಆಡಳಿತಶಾಹಿಯ ಜೊತೆ ವ್ಯವಹರಿಸುವ ಮಧ್ಯಸ್ಥಗಾರರು. ಇಂತಹ ಸಂದರ್ಭದಲ್ಲಿ ದುಡಿಯುವ ವರ್ಗ ತನ್ನ ನೆಲೆಯನ್ನು ಕಳೆದುಕೊಳ್ಳುತ್ತದೆ. ಆಗ ದುಡಿಯುವ ಜನರು ಅದರಲ್ಲಿಯೂ ವೃತ್ತಾಕಾರದ ವಲಸೆಯ ಮೂಲಕ ದುಡಿಮೆ ಬೇಟೆಗಾರರು(ಬೇಟೆಗಾರರು ಮತ್ತು ಕೆಲಸದ ಸಂಗ್ರಹಕಾರರು) ದೀದಿಗೆ ಅಥವಾ ರಸ್ತೆಗೆ ಬೀಳುತ್ತಾರೆ. ಇದು ಸಹಜ ಎಂದು, ಸಾಂಪ್ರದಾಯಿಕ ಅರ್ಥಶಾಸ್ತ್ರದಲ್ಲಿ ಹೇಳಲಾಗುತ್ತದೆ. ಏಕೆಂದರೆ ನಮ್ಮ ಸುತ್ತಮುತ್ತಲಿನ ಆರ್ಥಿಕ ಹಿಂಜರಿತದ ದೃಷ್ಟಿ ಮತ್ತು ಅದರ ಪರಿಣಾಮಗಳು ಸಹಜವೆಂದು ನಂಬಲಾಗುತ್ತದೆ.

ಸ್ಥಳೀಯವಾಗಿ ಇರುವ ಬಡತನ, ಬರ, ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಕುರಿತು ಚರ್ಚೆ, ಸಂವಾದ ಮತ್ತು ಸಂಶೋಧನೆಗಳನ್ನು ಮಾಡಬೇಕಾದ ಸರ್ಕಾರಗಳು, ಅಭಿವೃದ್ಧಿ ಚಿಂತಕರು, ರಾಜಕಾರಣಿಗಳು, ನಾಗರಿಕ ಸಂಘಟನೆಗಳು, ಶೈಕ್ಷಣಿಕ ಸಂಸ್ಥೆಗಳು ಮತ್ತು ಮಾಧ್ಯಮಗಳಿಗೆ ಪ್ರಾದೇಶಿಕ ಅಸಮಾನತೆಯನ್ನು ಸರಿಪಡಿಸುವ ದಿಕ್ಕಿನಲ್ಲಿ ಎಷ್ಟು ಅನುದಾನವನ್ನು ನೀಡಲಾಗಿದೆ? ಎಷ್ಟು ಬಳಕೆಯಾಗಿದೆ? ಎಷ್ಟು ಅನುದಾನ ನೀಡಬೇಕಾಗಿದೆ? ಅಂದರೆ ಮೂಲಭೂತ ಸೌಲಭ್ಯಗಳು ಕೇವಲ ರಸ್ತೆ ಕಟ್ಟಡ, ಸೇತುವೆಗಳ ನಿರ್ಮಾಣಕ್ಕೆ ಹೆಚ್ಚಿನ ಮಹತ್ವ ನೀಡುತ್ತಿವೆ. ಇದಕ್ಕೆ ಹೊರತಾಗಿ ಉತ್ಪಾದನಾ ಸಾಮರ್ಥ್ಯ ಮತ್ತು ಕುಶಲತೆಯ ಹೆಚ್ಚಳಕ್ಕೆ ಅವಶ್ಯಕ ಯೋಜನೆಗಳನ್ನು ಬೇರೆ ಬೇರೆ ಇಲಾಖೆಗಳ ಜೊತೆ ಸಮಗ್ರವಾಗಿ ಅನುಷ್ಠಾನಕ್ಕೆ ಬರುವಂತೆ ಚರ್ಚಿಸಬೇಕಾಗಿದೆ. ಅದರಲ್ಲಿ ವಿಶೇಷವಾಗಿ ಒಣಬೇಸಾಯ ಉತ್ತೇಜಿಸುವ, ವೃತ್ತಿ ಕಸುಬು ಉತ್ತೇಜಿಸುವ ಯೋಜನೆಗಳನ್ನು ರೂಪಿಸಬೇಕಾಗಿದೆ. ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹೆಚ್ಚಿನ ಜನರು ತಮ್ಮ ಬದುಕಿಗೆ ಅನೌಪಚಾರಿಕ ಆರ್ಥಿಕ ವಲಯವನ್ನು ಹೆಚ್ಚಾಗಿ ಅವಲಂಬಿಸಿರುವುದರಿಂದ ಔಪಚಾರಿಕ ವಲಯದಲ್ಲಿ ಉದ್ಯೋಗ ಮೀಸಲಾತಿ ಪಡೆಯುವುದಕ್ಕಿಂತಲೂ ಮುಖ್ಯವಾಗಿ ಅನೌಪಚಾರಿಕ ಆರ್ಥಿಕ ವಲಯಗಳಲ್ಲಿ, ಅದರಲ್ಲಿಯೂ ಕೃಷಿ ಮತ್ತು ಕೃಷಿ ಪೂರಕ ವಲಯದಲ್ಲಿ ಹೆಚ್ಚು ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವ ದಿಕ್ಕಿನಲ್ಲಿ ಹೆಚ್ಚಿನ ಸಂಶೋಧನೆಗಳನ್ನು ಸಂಪನಿಗಳ ಮಟ್ಟದಲ್ಲಿ ಮುತ್ರ ಮಾಡದೆ, ಸ್ಥಳೀಯ ನೆಲೆಯಲ್ಲಿ ಮಾಡುವ ಕೆಲಸವನ್ನು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ತಕ್ಷಣವೇ ಮಾಡಬೇಕು.

ಕೃಷಿಗೆ ಉತ್ತೇಜನ ನೀಡಲು ಬೆಂಬಲ ಬೆಲೆ, ಕೃಷಿ ಉಪಕರಣಗಳ ಉಚಿತ ವಿತರಣೆ, ಧನ ಸಹಾಯ, ಕೃಷಿ ವಿಜ್ಞಾನಿಗಳನ್ನು ಇಲ್ಲಿಯ ಬೆಳೆಗಳ ಹೆಚ್ಚು ಇಳುವರಿಗಾಗಿ ತೊಡಗಿಸುವ ದಿಕ್ಕಿನಲ್ಲಿ ಕ್ರಮ ಕೈಗೊಳ್ಳುವ ಜೊತೆಗೆ, ತರಕಾರಿ, ಹಣ್ಣು ಸಂಸ್ಕರಣೆಗಾಗಿ ಕೋಲ್ಡ್ ಸ್ಟೋರೆಜ್ ಸ್ಥಾಪಿಸಿ ನಿರ್ವಹಿಸಬೇಕು. ಆ ಮೂಲಕ ಹೆಚ್ಚು ಉದ್ಯೋಗ ಸೃಷ್ಟಿಸುವ ಕೃಷಿ ಕ್ಷೇತ್ರವನ್ನು ಅಭಿವೃದ್ಧಿಗೊಳಿಸುವಲ್ಲಿ ಮಂಡಳಿ ಕ್ರಮ ಕೈಗೊಳ್ಳಬೇಕು. ಹತ್ತಿ, ಭತ್ತ, ಎಣ್ಣೆಕಾಳುಗಳು, ಇನ್ನೂ ಮುಂತಾದ ಆಹಾರ ಪದಾರ್ಥಗಳ ಸಂಸ್ಕರಣೆಗೆ ವಿಶೇಷ ಆದ್ಯತೆಯನ್ನು ನೀಡಬೇಕು. ಆ ಮೂಲಕ ಭೂರಹಿತ ಜನರು ಅದರಲ್ಲಿಯೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತರ ಸಮಗ್ರವಾದ ಅಭಿವೃದ್ಧಿಗೆ ಎಲ್ಲರನ್ನೂ ಒಳಮಾಡಿಕೊಳ್ಳುವ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕು. ಆ ಮೂಲಕ ಸಮಾಜದಲ್ಲಿ ಆಂಚಿನ ಆಚೆಗಿರುವ ಜನ-ವರ್ಗಗಳನ್ನು ಅಭಿವೃದ್ಧಿ ಪರಿಧಿಯಿಂದ ಕೇಂದ್ರಕ್ಕೆ ಬರುವಂತೆ ಕ್ರಿಯಾ ಯೋಜನೆಗಳನ್ನು ರೂಪಿಸುವಂತೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಗಮನಹರಿಸಬೇಕು.

ತೇವಾಂಶ ವನ್ಯಜೀವಿಗಳು ಮತ್ತು ಮಾನವ ಸಂಘರ್ಷ

ಇನ್ನು ಹವಾಮಾನ ವೈಪರೀತ್ಯಗಳನ್ನು ಅಳೆಯುವ ಮಾನದಂಡಗಳಲ್ಲಿ ತೇವಾಂಶದ ಸಮರ್ಪಕತೆಯ ಅನುಪಾತವೂ ಒಂದು. ಕರ್ನಾಟಕದ ಶೇಕಡ ೧೩ ರಷ್ಟು ಭೂಪ್ರದೇಶವು ತೇವಾಂಶದ 'ತೀವ್ರ ಒತ್ತಡ'ದಲ್ಲಿರುವುದನ್ನು ಭೂಗರ್ಭ ಶಾಸ್ತ್ರಜ್ಞರು ಗುರುತಿಸಿದ್ದಾರೆ. ರಾಜ್ಯದಲ್ಲಿನ ಬರ ಪರಿಸ್ಥಿತಿಯನ್ನು ನಿರ್ಣಯಿಸಲು ರಾಜ್ಯ ಸರ್ಕಾರವು ಬೆಳೆ ಸಮೀಕ್ಷೆಯನ್ನು ಕೈಗೊಳ್ಳುತ್ತಿರುವಾಗ ದೊರೆತ ದತ್ತಾಂಶವು ರಾಜ್ಯದ ಭೌಗೋಳಿಕ ಪ್ರದೇಶದಲ್ಲಿ ಶೇಕಡ ೧೩ ರಷ್ಟು ಭೂಪ್ರದೇಶವು ತೇವಾಂಶದ ಸಮರ್ಪಕತೆ ಸೂಚ್ಯಂಕದಲ್ಲಿ ತೀವ್ರ ಒತ್ತಡದಲ್ಲಿದೆ ಎಂದು ಗುರುತಿಸಿದೆ. ವಾಯುಮಂಡಲದ ಗಾಳಿಯು ಶುಷ್ಕವಾಗಿದ್ದರೆ, ಅದು ಆವಾಪೋ ಟ್ರಾನ್ಸ್‌ಪರೇಷನ್ ಬೇಡಿಕೆಯನ್ನು ಹೆಚ್ಚಿಸುತ್ತದೆ. ಅಂತಹ ಪರಿಸ್ಥಿತಿಗಳಲ್ಲಿ, ನೀರು ಮಣ್ಣಿನ ಮೇಲ್ಮೈಯಿಂದ ನೇರವಾಗಿ ಆವಿಯಾಗುತ್ತದೆ. ಸಸ್ಯವರ್ಗದ ಎಲೆಗಳ ಮೇಲ್ಮೈಯಿಂದ, ಟ್ರಾನ್ಸ್‌ಪರೇಷನ್ ಎಂಬ ಪ್ರಕ್ರಿಯೆಯ ಮೂಲಕ ಗಣನೀಯವಾಗಿ ಆವಿಯಾಗುತ್ತದೆ. ಇದರಿಂದ ಉಂಟಾಗುವ ಕೃಷಿಯ ಮೇಲಿನ ಪರಿಣಾಮವೆಂದರೆ ತೇವಾಂಶವು ಕಡಿಮೆಯಿದ್ದರೆ ಆವಿಯಾಗುವಿಕೆ ಹೆಚ್ಚುತ್ತದೆ. ಆಗ

ಸಸ್ಯಗಳು ಮಣ್ಣಿನಿಂದ ಹೆಚ್ಚು ನೀರನ್ನು ಹೀರಿಕೊಳ್ಳುತ್ತವೆ. ಮಣ್ಣಿನಲ್ಲಿ ಇರುವ ತೇವಾಂಶ ಮತ್ತು ನೀರು ಆವಿಯಾಗುತ್ತದೆ. ಅಂದರೆ ಹತ್ತು ದಿನಗಳಲ್ಲಿ ಕ್ಷೀಣಿಸಬಹುದಾದ ಮಣ್ಣಿನಲ್ಲಿನ ತೇವಾಂಶವು ಮೂರು ದಿನಗಳಲ್ಲಿ ಕಡಿಮೆಯಾಗುತ್ತದೆ. ಇದರ ಪರಿಣಾಮವಾಗಿ ಬೆಳೆಗಳು/ಸಸ್ಯಗಳು ಬರ-ಒತ್ತಡದ ಪರಿಸ್ಥಿತಿಗೆ ಒಳಪಡುತ್ತವೆ. ಇದರಿಂದ ನೀರಿನ ಬರ ಹೆಚ್ಚುತ್ತದೆ.

ಈ ನಡುವೆ ಮಾನವ ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಹಳ್ಳಿಗಳಿಗೆ ಚಿರತೆಗಳು ನುಗ್ಗಿ ದಾಳಿ ನಡೆಸುವುದು ನಿರಂತರವಾಗಿ ಹೆಚ್ಚುತ್ತಿದೆ. ಚಿರತೆಗಳ ದಾಳಿಯ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗುವ ಸಂಖ್ಯೆಗಿಂತಲೂ ವಾಸ್ತವ ಸಂಖ್ಯೆ ಹೆಚ್ಚು ಎಂದು ಅರಣ್ಯ ಇಲಾಖೆ ಹೇಳಿದೆ. ಆನೆ ದಾಳಿಯು ಬೆಳೆಹಾನಿಯ ಜೊತೆಗೆ ಮಾನವ ಜೀವಗಳನ್ನೂ ಬಲಿ ತೆಗೆದುಕೊಂಡಿದೆ. ರಾಜ್ಯ ಅರಣ್ಯ ಇಲಾಖೆಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪಿಸಿಸಿಎಫ್) ನೀಡಿರುವ ಅಂಕಿಅಂಶಗಳ ಪ್ರಕಾರ, ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯದಲ್ಲಿ ಕನಿಷ್ಠ ೧೬೦ ಜನರು ಆನೆಗಳ ದಾಳಿಯಿಂದ ಪ್ರಾಣ ಕಳೆದುಕೊಂಡಿದ್ದಾರೆ. ೨೦೨೦-೨೧ರಲ್ಲಿ ಕನಿಷ್ಠ ೨೬ ಜನರು ಆನೆಗಳಿಂದ ಸಾವನ್ನಪ್ಪಿದ್ದಾರೆ; ೨೦೨೧-೨೨ರಲ್ಲಿ ಸಂಖ್ಯೆ ೨೮ಕ್ಕೆ ಏರಿತ್ತು ಮತ್ತು ೨೦೨೨-೨೩ರಲ್ಲಿ ಸಂಖ್ಯೆ ೩೧ಕ್ಕೆ ಏರಿತ್ತು. ಡಿಸೆಂಬರ್ ೨೦ರವರೆಗೆ, ಸಂಖ್ಯೆ ೩೨ಕ್ಕೆ ಏರಿದೆ. ಆರ್ಥಿಕ ವರ್ಷಾಂತ್ಯಕ್ಕೆ ಇನ್ನೂ ಮೂರು ತಿಂಗಳು ಬಾಕಿ ಇರುವ ಕಾರಣ ಸಾವು – ನೋವುಗಳ ಸಂಖ್ಯೆ ಇನ್ನೂ ಹೆಚ್ಚಾಗಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕರ್ನಾಟಕದಲ್ಲಿ, ೨೦೩೦ರ ವೇಳೆಗೆ ಅರಣ್ಯ ಮತ್ತು ಜೀವಿವೈವಿಧ್ಯತೆಯ ಪ್ರಕಾರಗಳು ಸ್ಥಿತ್ಯಂತರವನ್ನು ಅನುಭವಿಸುತ್ತವೆ. ಇದರಿಂದ ಭವಿಷ್ಯದ ಹವಾಮಾನವು ಅಸ್ತಿತ್ವದಲ್ಲಿರುವ ಅರಣ್ಯ ಪ್ರಕಾರಗಳು ಮತ್ತು ಜೀವಿವೈವಿಧ್ಯಕ್ಕೆ ಸೂಕ್ತವಲ್ಲ, ಅದು ಅರಣ್ಯ ನಾಶಕ್ಕೆ ಕಾರಣವಾಗಬಹುದು ಎಂಬುದನ್ನು ಸೂಚ್ಯವಾಗಿ ತಿಳಿಸುತ್ತದೆ. ಅಂದರೆ ತೇವಾಂಶ ಮತ್ತು ನೀರಿನ ಕೊರತೆಯಿಂದ ಅರಣ್ಯ ನಾಶದ ಜೊತೆಗೆ ಮಾನವ ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷ ಹೆಚ್ಚುತ್ತದೆ. ಕೃಷಿ ಬೆಳೆಗಳು, ಆಸ್ತಿ, ಜೀವನೋಪಾಯ ಮತ್ತು ಪ್ರಾಣ ಹಾನಿಗೆ ಕಾರಣವಾಗಿವೆ.

ಈ ಎಲ್ಲಾ ಅಂಶಗಳು ಹವಾಮಾನ ಬದಲಾವಣೆಯ ವೈಪರೀತ್ಯಗಳ ನಿರ್ದಿಷ್ಟ ಪರಿಣಾಮಗಳ ಮುನ್ಸೂಚನಾ ವಿಷಯವಾಗಿವೆ. ಕರ್ನಾಟಕದ ಹೆಚ್ಚಿನ ಭಾಗಗಳು ೨೦೩೦ರ ದಶಕದ ವೇಳೆಗೆ, ಕೈಗಾರಿಕಾ ಪೂರ್ವದ ಅವಧಿಯಲ್ಲಿ ಅಂದರೆ ೧೮೮೦ರಲ್ಲಿ ಇದ್ದ ತಾಪಮಾನಕ್ಕೆ ಹೋಲಿಸಿದರೆ ೧.೫ ನಿಂದ ೨ಡಿಗ್ರಿ ಸೆಲ್ಸಿಯಸ್ ಹೆಚ್ಚಿನ ತಾಪಮಾನವನ್ನು ಅನುಭವಿಸಬಹುದು. ಜಲವಿಜ್ಞಾನ ಸಮೀಕ್ಷೆ ಪ್ರಕಾರ ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಿನ ಇಳುವರಿಯು ಸುಮಾರು ಶೇಕಡಾ ೩೫ರಷ್ಟು ಹೆಚ್ಚಾಗುವ ನಿರೀಕ್ಷೆಯಿದೆ. ಈ ಶತಮಾನದ ಮಧ್ಯಭಾಗದ ವೇಳೆಗೆ ಅನೇಕ ಜಲಾಶಯಗಳ ಮೇಲಿನ ಅವಲಂಬಿತ ಹರಿವು ಶೇಕಡಾ ೭೫ ರಿಂದ ಶೇಕಡಾ ೯೦ರಷ್ಟು ಇರುತ್ತದೆ. ಅಲ್ಲದೆ, ಕಾವೇರಿ ಜಲಾನಯನ ಪ್ರದೇಶದ ಕೆಲವು ಭಾಗಗಳು (ಹಾಸನ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ) ಅದೇ ಸಮಯದಲ್ಲಿ ತೀವ್ರ ನೀರಿನ ಒತ್ತಡವನ್ನು ಅನುಭವಿಸುತ್ತದೆ. ಮೇಲ್ಮೈ ನೀರಿನ ಲಭ್ಯತೆ ಕಡಿಮೆಯಾಗಿ, ಬೆಳೆಗಳಿಗೆ ಹೆಚ್ಚಿನ ನೀರಿನ ಬೇಡಿಕೆ ಹೆಚ್ಚಳವು, ಪ್ರವಾಹ ಮತ್ತು ಬರಗಾಲ ಪೀಡಿತ ಜಿಲ್ಲೆಗಳನ್ನು ವಿಶೇಷವಾಗಿ ಹವಾಮಾನ ಬದಲಾವಣೆಗೆ ಗುರಿಯಾಗಿಸುತ್ತದೆ.

ಹವಾಮಾನ ಬದಲಾವಣೆಯ ದುಸ್ಥಿತಿಯ ಮಾಪನ ಸೂಚ್ಯಂಕವು ಏಳು ಚಲಕಗಳಿಂದ ಕೂಡಿದೆ. ಅವುಗಳಲ್ಲಿ ಮಳೆ ಮತ್ತು ತಾಪಮಾನ ಪ್ರಮುಖವಾಗಿವೆ. ಇದರ ಪ್ರಕಾರ ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಹವಾಮಾನ ಹೆಚ್ಚಿನ ವೈಪರೀತ್ಯಗಳಿಗೆ ರಾಯಚೂರು, ಯಾದಗಿರಿ, ಬಳ್ಳಾರಿ, ಕಲಬುರಗಿ ಜಿಲ್ಲೆಗಳು ಒಳಗಾಗಿದ್ದರೆ, ಬೀದರ್ ಮತ್ತು ಕೊಪ್ಪಳ ಜಿಲ್ಲೆಗಳು ಕಡಿಮೆ ಹವಾಮಾನ ವೈಪರೀತ್ಯಗಳಿಗೆ ಒಡ್ಡಿಕೊಂಡಿವೆ. ಯಾದಗಿರಿ ಹವಾಮಾನ ಬದಲಾವಣೆಯ ಅತ್ಯಂತ ಹೆಚ್ಚಿನ ಪ್ರಮಾಣದ ದುಸ್ಥಿತಿಗೆ ಸೇರಿದ್ದರೆ, ಬಳ್ಳಾರಿ ಮತ್ತು ಬೀದರ್ ಜಿಲ್ಲೆಗಳು ಹೆಚ್ಚಿನ ಮತ್ತು ಮಧ್ಯಮ ಮಟ್ಟದ ದುಸ್ಥಿತಿಗೆ ಸೇರಿವೆ. ಇದು ಕಲಬುರಗಿ, ಕೊಪ್ಪಳ ಮತ್ತು ರಾಯಚೂರು ಕಡಿಮೆ ದುಸ್ಥಿತಿಯ ವರ್ಗಕ್ಕೆ ಸೇರಿದೆ ಎಂದು ತಿಳಿಯುತ್ತದೆ. ಇದರಿಂದ ಕಲಬುರಗಿ, ರಾಯಚೂರು ಮತ್ತು ಯಾದಗಿರಿ ಹೆಚ್ಚು ಹಾನಿಗೊಳಗಾಗುವ ಸಾಧ್ಯತೆ ಇದೆ. ಪ್ರದೇಶ ಮತ್ತು ಜಿಲ್ಲೆಗಳ ನಡುವೆ ಇರುವ ದುಸ್ಥಿತಿಯಲ್ಲಿನ ದೊಡ್ಡಮಟ್ಟದ ವ್ಯತ್ಯಾಸಗಳನ್ನು ಸರಿಪಡಿಸುವ ದಿಕ್ಕಿನಲ್ಲಿ ನೀತಿ ನಿರೂಪಕರು ಜಿಲ್ಲೆಗೆ-ನಿರ್ದಿಷ್ಟ ಹವಾಮಾನ ನೀತಿಗಳನ್ನು ರೂಪಿಸಬೇಕು.

ಜನರು ಸ್ವಲ್ಪಮಟ್ಟಿನ ಹವಾಮಾನ ಗಂಡಾಂತರಗಳನ್ನು ಎದುರಿಸುವಂತೆ ಸ್ಥಳೀಯ ಮಟ್ಟದಲ್ಲಿ ಹವಾಮಾನ ಬದಲಾವಣೆ ಸಮಸ್ಯೆಗಳನ್ನು ಪರಿಹರಿಸಬೇಕು. ಹವಾಮಾನ ಬದಲಾವಣೆಯಿಂದ ಹೆಚ್ಚುತ್ತಿರುವ ಅಪಾಯದ ದುಸ್ಥಿತಿಯನ್ನು ಕಡಿಮೆ ಮಾಡಲು ಆಯಾ ಜಿಲ್ಲೆಗಳನ್ನು ಆದ್ಯತೆಯ ಪ್ರದೇಶಗಳಾಗಿ ಪರಿಗಣಿಸಬೇಕು. ಕಡಿಮೆ ಮಳೆ, ಅನಾವೃಷ್ಟಿ ಮತ್ತು ತೀವ್ರ ನೀರಿನ ಅಭಾವ ರೂಪದಲ್ಲಿ ಆಗಾಗ ಕಂಡುಬರುವ ಹವಾಮಾನ ವೈಪರೀತ್ಯಗಳ ಹಿನ್ನೆಲೆಯಲ್ಲಿ ಕೃಷಿ ಮತ್ತು ಜೀವನೋಪಾಯವನ್ನು ಉಳಿಸಿಕೊಳ್ಳುವ ಕಾರ್ಯತಂತ್ರಗಳನ್ನು ಸ್ಥಳೀಯವಾಗಿ ರೂಪಿಸಬೇಕು. ಪರಿಸರ ಮಾಲಿನ್ಯವನ್ನು ತಗ್ಗಿಸುವುದು, ಹವಾಮಾನ ಬದಲಾವಣೆಗೆ ಹೊಂದಾಣಿಕೆಯ ಸಾಮರ್ಥ್ಯವನ್ನು ಹಾಗೂ ಸೂಕ್ಷ್ಮತೆಯನ್ನು ಹೆಚ್ಚಿಸುವ ಸಮಗ್ರ ಹವಾಮಾನ ನಿರ್ವಹಣಾ ವಿಧಾನವನ್ನು ಜಾರಿಗೆ ತರುವುದು, ದೇವರು, ದೇವಸ್ಥಾನ, ಮಂದಿರ, ಮಸೀದಿ, ಚರ್ಚ್, ಬಸದಿಗಳಿಗಿಂತಲೂ ಅವಶ್ಯಕ.

ಆದರೆ ಭಾರತದಲ್ಲಿ ಇಂದು ಅತಿಯಾದ-ಅನಿಶ್ಚಿತತೆ ಬಡತನದ ರೂಪವು ಯುರೋಪಿನಲ್ಲಿ ಹೇಗೆ ಹತ್ತೊಂಬತ್ತನೇ ಶತಮಾನದಲ್ಲಿ ಉಂಟಾದ ಸ್ಥಿತ್ಯಂತರವು ಕೃಷಿ-ಕುಶಲಕರ್ಮಿಗಳಿಂದ ಒಂದು ಔದ್ಯಮಿಕ-ನಗರ, ಕೈಗಾರಿಕೆ ಮತ್ತು ವ್ಯಾವಹಾರಿಕ ಆರ್ಥಿಕತೆಯ ಸಮಾಜವನ್ನು ರೂಪಿಸುವ ಅಭಿವೃದ್ಧಿ ನೀತಿಗಳು, ದುಡಿಯುವ ಬಡವರನ್ನು ಹೊರತಳ್ಳುವ ಹಾಗೂ ಒಂದು ಬಗೆಯಲ್ಲಿ ಅವರನ್ನು 'ಅರ್ಹರಲ್ಲದವರು' ಎಂದು ಲೇಬಲ್ ಮಾಡಿತೋ ಹಾಗೆಯೇ ತಂತ್ರಜ್ಞಾನದ ವಿಸ್ತರಣೆಯು ದುಡಿಯುವ ಜನರು ಜೀವನೋಪಾಯದ ಹತಾಶೆಯಿಂದ ಮತ್ತಷ್ಟು ಹುಡುಕಾಟಕ್ಕೆ ಅಲೆದಾಡುವಂತೆ ಮಾಡಿತು. ಅತಿ-ಅನಿಶ್ಚಿತತೆಯನ್ನು ಎದುರಿಸುತ್ತಿರುವ ಬಡವರು ಸಮಾಜದಲ್ಲಿ ಉದಾಸೀನತೆ ಮತ್ತು ಅಲೆಮಾರಿತನದ ಆರೋಪವನ್ನು ಎದುರಿಸ ಬೇಕಾಯಿತು. ಬಡವರನ್ನು ಅಪಾಯಕಾರಿ ವರ್ಗವೆಂದು ಪರಿಗಣಿಸಿ, ಕಾನೂನಿನ ಮೂಲಕ ಹೆಚ್ಚು ನಿರ್ಬಂಧಿಸಲ್ಪಟ್ಟು, ಕಾನೂನಿನ ಕಣ್ಗಾವಲಿನಲ್ಲಿ ಇಡಲಾಗಿದೆ. ಇಂದು ಸಮಾಜದ ಮುಖ್ಯವಾಹಿನಿಯಿಂದ ಹೆಚ್ಚು ಶ್ರಮದಾಯಕವಾಗಿ ದುಡಿಯುವ ತಳವರ್ಗವನ್ನು ದೇರ್ಪಡಿಸಲು, ಜಾತಿ, ಧರ್ಮ, ಜನಾಂಗೀಯ ಬಹಿಷ್ಕಾರದ ಸಿದ್ಧಾಂತವನ್ನು ಕೆಲವು ಸಂದರ್ಭಗಳಲ್ಲಿ ನೇರವಾಗಿ ಮತ್ತು ಕೆಲವು ಸಂದರ್ಭಗಳಲ್ಲಿ ಪರೋಕ್ಷವಾಗಿ ಅನುಸರಿಸಲಾಗುತ್ತಿದೆ. ಇದು ಒಂದು ರೀತಿಯಲ್ಲಿ ಬಡವರು ಮತ್ತು ದುಡಿಯುವ ಜನರ ಮೇಲಿನ ಆಂತರಿಕ ವಸಾಹತುಶಾಹಿಯಾಗಿದೆ. ಈ ಲಕ್ಷಣಗಳು ಪ್ರಭುತ್ವಕ್ಕೆ ಬಡವರು ಮತ್ತು ದುಡಿಯುವ ಜನರ ಮೇಲಿನ ಇರುವ ಅಸಹನಯನ್ನು ಬಹಿರಂಗಪಡಿಸುತ್ತವೆ. ಆದರೂ ಇಂದು ಭಾರತದಲ್ಲಿ ಸುತ್ತಮುತ್ತ ನೋಡಿದರೆ ಪ್ರತಿಯೊಬ್ಬ ದಗಾಕೋರನೂ ಕ್ರಾಂತಿಯ(ಅಭಿವೃದ್ಧಿ) ಕುರಿತು ಮಾತನಾಡುತ್ತಿದ್ದಾನೆ. ಹಿಂದಿನಿಂದ ನವ ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯವರೆಗಿನ ಅಭಿವೃದ್ಧಿ ನೀತಿಗಳಲ್ಲಿ ಬಡತನ ಮತ್ತು ಸಮಾನತೆಯ ವಿರೋಧಿ ನಿರೂಪಣೆಗಳಿವೆ. ಮಹಿಳೆಯರನ್ನು, ದಲಿತರನ್ನು, ಅಲ್ಪಸಂಖ್ಯಾತರನ್ನು, ದುಡಿಯುವ ಜನರನ್ನು ಮತ್ತು ಬಡವರನ್ನು ನಾಗರಿಕತೆಯ ಪ್ರವೇಶದ್ವಾರದಿಂದ ದೂರವಿಟ್ಟು ಆಧುನಿಕತೆಯ ಯಾವುದೇ ಹಕ್ಕುಗಳಿಗೆ ತೆರೆದುಕೊಳ್ಳದಂತೆ ತಡೆಯಲಾಗಿದೆ. ಬಹುಜನರನ್ನು ಹಕ್ಕುಗಳ ಆಚೆಗಿಟ್ಟು, ಜನರ ಸಂಕಟಗಳು ಮತ್ತು ಅವರು ಎದುರಿಸುತ್ತಿರುವ ಬಿಕ್ಕಟ್ಟುಗಳನ್ನು ದೂರವಿಟ್ಟು ಅಸಮಾನತೆಯನ್ನು ಇನ್ನಷ್ಟು ಹೆಚ್ಚಿಸುವ ದುಷ್ಟ ಅಭಿವೃದ್ಧಿ ನೀತಿಗಳಿಗೆ ಮಹತ್ವ ನೀಡಲಾಗಿದೆ. ಬರ ಸೇರಿದಂತೆ ಹೆಚ್ಚುತ್ತಿರುವ ಹವಾಮಾನ ವೈಪರೀತ್ಯಗಳ ಸಂದರ್ಭದಲ್ಲಿ ಅಸಮಾನತೆ ಮತ್ತಷ್ಟು ಮುನ್ನೆಲೆಗೆ ಬಂದಿದೆ. ಇದನ್ನು ಸಮತೆ, ಸ್ವಾತಂತ್ರ್ಯ ಮತ್ತು ಸಹೋದರತ್ವದ ನೆಲೆಯಲ್ಲಿ ಮಾತನಾಡೋಣ. ಬಡತನ ಮತ್ತು ಅಸಮಾನತೆಯ ಅನಾರೋಗ್ಯವನ್ನು ಕಾನೂನಿನಿಂದಲೇ ಗುಣಪಡಿಸುವ ಸಾಮರ್ಥ್ಯ ಇರುವ ಸಂವಿಧಾನದ ಮಹತ್ವವನ್ನು ಎತ್ತಿ ಹಿಡಿಯೋಣ.

ಡಾ. ಹೆಚ್. ಡಿ. ಪ್ರಶಾಂತ್
ಹಿರಿಯ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ, ವಿದ್ಯಾರಣ್ಯ - ೫೮೩ ೨೭೬
Email : gajaasya@gmail.com

Scanned with OKEN Scanner

(6)

3.4.5

ISSN 2278-5043

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚರಿತ್ರೆ ಅಧ್ಯಯನ

ಸಂಪುಟ - ೧೪ ಸಂಚಿಕೆ - ೧ ಜುಲೈ - ಡಿಸೆಂಬರ್ ೨೦೨೨



Scanned with OKEN Scanner

ಚರಿತ್ರೆ ವಿಭಾಗದ ಪ್ರಕಟಣೆ

ಚರಿತ್ರೆ ಅಧ್ಯಯನ

ಸಂಪುಟ - ೧೪ ಸಂಚಿಕೆ - ೧
ಜುಲೈ - ಡಿಸೆಂಬರ್ ೨೦೨೨

ಸಂಪಾದಕರು
ಪ್ರೊ. ಎನ್. ಚಿನ್ನಸ್ವಾಮಿ ಸೋಸಲೆ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

Scanned with OKEN Scanner

Publication of Department of History

CHARITRE ADHYAYANA

Bi-Annual Vol-14 Issue-1, July-December-2022

Edited by
Dr. N. Chinnaswamy Sosale
Professor
Department of History
Kannada University, Hampi
Vidyaranya 583 276

Published by
Dr. Shailaja I. Hiremath
Director, Prasaranga
Kannada University, Hampi
Vidyaranya 583 276

Pages: x + ೧೪೨

www.kannadauniversity.org

First Impression: 2023

ISSN 2278-5043

ಚರಿತ್ರೆ ಅಧ್ಯಯನ ಅರ್ಧವಾರ್ಷಿಕ ಪತ್ರಿಕೆ

ಸಂಪುಟ - ೧೪ ಸಂಚಿಕೆ - ೧, ಜುಲೈ - ಡಿಸೆಂಬರ್ ೨೦೨೨

(ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳ ಅಭಿಪ್ರಾಯಗಳಿಗೆ ಲೇಖಕರೇ ಜವಾಬ್ದಾರರು)

© ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೨೩

ಪ್ರಧಾನ ಸಂಪಾದಕರು: **ಡಾ. ಡಿ.ವಿ. ಪರಮಶಿವಮೂರ್ತಿ**
ಸಂಪಾದಕರು: **ಡಾ. ಎನ್. ಚಿನ್ನಸ್ವಾಮಿ ಸೋಸಲೆ**

ಸಂಪಾದಕ ಸಲಹಾ ಮಂಡಲಿ
ಡಾ. ವಿಜಯ್ ಪೂಣಚ್ಚ ತಂಬಂಡ, ಡಾ. ಕೆ. ಮೋಹನ್‌ಕೃಷ್ಣ ರೈ
ಡಾ. ವಿರೂಪಾಕ್ಷಿ ಪೂಜಾರಪಳ್ಳಿ

ಬಿಡಿ ಪ್ರತಿ: ರೂ. ೧೦೦/- ವಾರ್ಷಿಕ ಚಂದಾ: ವ್ಯಕ್ತಿಗಳಿಗೆ ರೂ. ೧೫೦/-
ಸಂಸ್ಥೆಗಳಿಗೆ ರೂ. ೨೦೦/-

ಅಕ್ಷರ ಸಂಯೋಜನೆ: **ಸುರೇಖಾ ಕಂಪ್ಯೂಟರ್ಸ್, ಕಮಲಾಪುರ**

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
ಮೊ: ೯೪೮೦೧ ೨೯೨೬೦

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ಮೈಸೂರು ಬ್ಯಾಂಕ್ ವೃತ್ತ, ಸಂ. ೧, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂ.: ೦೮೦-೨೨೩೭೨೫೮೮

ಮುದ್ರಣ
ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

ಸಂಪಾದಕರ ಮಾತು

ಪ್ರಪಂಚದ ಇತಿಹಾಸ ಹಾಗೂ ಚರಿತ್ರೆಯ ಭೂಪಟದಲ್ಲಿ ಭಾರತ ಮತ್ತು ಭಾರತೀಯರಿಗೆ ವಿಶಿಷ್ಟವಾದ ಸ್ಥಾನವಿದೆ. ಏಕೆಂದರೆ ಕ್ರಿಸ್ತಪೂರ್ವದಲ್ಲಿಯೇ ಭಾರತದ ನೆಲದಲ್ಲಿ ಉದಯಿಸಿದ ಗೌತಮಬುದ್ಧರ ಬೌದ್ಧಧರ್ಮ ಶ್ರಮಸಂಸ್ಕೃತಿಯನ್ನು ಪ್ರತಿಪಾದನೆ ಮಾಡಿದ್ದು ಎಂಬ ಕಾರಣಕ್ಕಾಗಿ. ಬುದ್ಧನ ವಾರಸುದಾರರಾಗಿ ೧೨ನೇ ಶತಮಾನದಲ್ಲಿ ಬಸವಣ್ಣ ಇಂದಿನ ಪ್ರಜಾಪ್ರಭುತ್ವ ಮಾದರಿಯ ಸಾಂಸ್ಕೃತಿಕ ಸಂದರ್ಭವನ್ನೇ ಮಾತನಾಡಿದ್ದು ಎಂಬ ಕಾರಣಕ್ಕಾಗಿ. ಇವರಿಬ್ಬರ ವಾರಸುದಾರಿಕೆಯ ಬಹುದೊಡ್ಡ ಪ್ರತಿನಿಧಿಯಾಗಿ ಆಧುನಿಕ ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಕಾನೂನಾತ್ಮಕವಾಗಿ ಜಾರಿಗೆ ತಂದು ಭಾರತ ಹಾಗೂ ಭಾರತೀಯರನ್ನು ರಕ್ಷಣೆ ಮಾಡಲು ಪ್ರಬುದ್ಧತೆಯ ಹಿನ್ನೆಲೆಯ ಶಾಂತಿಯ ಹಾದಿಯಲ್ಲಿ ಮುನ್ನಡೆದು ಭಾರತ ಹಾಗೂ ಭಾರತೀಯರನ್ನು ಪ್ರಜ್ಞಾವಂತರಾಗಿ ಮುನ್ನಡೆಸಲು ಆದರ್ಶಪ್ರಾಯವಾಗಿ ಶ್ರಮಿಸಿದವರು ಡಾ.ಬಿ.ಆರ್.ಅಂಬೇಡ್ಕರ್ ರವರು ಜೀವಿಸಿ ಬದುಕಿದ ನೆಲ ಎಂಬುದಕ್ಕಾಗಿ.

'ಆಸೆಯೇ ದುಃಖಕ್ಕೆ ಮೂಲ' ಎಂಬುದು ಬುದ್ಧನ ಜನಮುಖಿ ವಾಣಿ. ಈ ವಾಕ್ಯದ ತತ್ವ ಸಿದ್ಧಾಂತವೇ ನಾನು–ನಮ್ಮಿಂದ–ನನಗಾಗಿಯೇ ಎಂಬ ಸ್ವಾರ್ಥಪರವನ್ನು ಧಿಕ್ಕರಿಸುವುದು ಹಾಗೂ ನಾವು–ನಮ್ಮಿಂದ–ನಮಗಾಗಿ ಎನ್ನುವ ಜನಪದ ತತ್ವವನ್ನು ಪಾಲಿಸುವುದೇ ಆಗಿದೆ.ನಾವು–ನಮ್ಮಿಂದ–ನಮಗಾಗಿ ಎನ್ನುವುದೇ ಪ್ರಜಾಪ್ರಭುತ್ವದ ಮೂಲ ಆಶಯವೂ ಆಗಿದೆ. ಇದನ್ನು ಅನುಸರಿಸಿದ ೧೨ನೇ ಶತಮಾನದಲ್ಲಿ ಜೀವಿಸಿದ ಕನ್ನಡ ನೆಲದ ಬಸವಣ್ಣ ಎಲ್ಲಾ ಜನವರ್ಗವನ್ನು ನಮ್ಮವರೆಂದು ಬಣ್ಣಿಸಿ, ನಾನು ನಿಮ್ಮೊಳಗಿನೊಬ್ಬ ಎಂದು ಹೇಳಿಕೊಂಡು, ಮಾನವ–ಮಾನವತ್ವದ ಹಿನ್ನೆಲೆಯಿಂದ ಬದುಕಲು 'ದಯವೇ ಧರ್ಮದ ಮೂಲವಯ್ಯ' ಎಂದು ಹೇಳುವುದರ ಜೊತೆಗೆ ಪ್ರತಿಯೊಬ್ಬ ಪ್ರಜೆಯೂ ಕಾಯಕ ಸಿದ್ಧಾಂತವನ್ನು ಮೈಗೂಡಿಸಿಕೊಂಡು ಸಂಪತ್ತನ್ನು ಸದೃಢವಾಗಿ ಉತ್ಪತ್ತಿ ಮಾಡಿ ತಮ್ಮ ಸದೃಢತೆಯೊಂದಿಗೆ ತನ್ನ ದೇಶವನ್ನು ಸದೃಢಗೊಳಿಸಬೇಕು ಎಂದು ಹೇಳುವ ಮಾತೇ ಕಾಯಕವೇ ಕೈಲಾಸವೆಂಬುದು. ಈ ಕಾಯಕ ತತ್ವದ ಆಧಾರದ ಮೇಲೆ ದಾಸೋಹದಂತಹ ಬಹುದೊಡ್ಡ ಪರಿಕಲ್ಪನೆಯನ್ನು ಅಂದು ಬಸವಣ್ಣ ಹಾಗೂ ಬಸವಾದಿ ಶರಣರು ಪ್ರತಿಪಾದನೆ ಮಾಡಿದ್ದು, ಬುದ್ಧನ

Scanned with OKEN Scanner

ಪರಿವಿಡಿ

ಸಂಪಾದಕರ ಮಾತು / iii

೧. ಭಾರತದ ಚರಿತ್ರೆ ಬರವಣಿಗೆಯ ಸ್ವರೂಪ–ಕೆಲವು ಟಿಪ್ಪಣಿಗಳು / ೧
ಕೆ. ಮೋಹನ್‌ಕೃಷ್ಣ ರೈ

೨. ಮಾತನಾಡಲೇಬೇಕಾದವರ ಚರಿತ್ರೆ : ಚಾರಿತ್ರಿಕ ವಸ್ತುನಿಷ್ಠ ವಿಶ್ಲೇಷಣೆ / ೧೮
ಎನ್. ಚಿನ್ನಸ್ವಾಮಿ ಸೋಸಲೆ

೩. ವಿಜಯನಗರ ರಾಜಧಾನಿ ನಿರ್ಮಾಣದಲ್ಲಿ ವಿದ್ಯಾರಣ್ಯರು :
ದಾಖಲೆಗಳ ಪುನರಾವಲೋಕನ / ೩೨
ಡಿ.ಎನ್. ಯೋಗೀಶ್ವರಪ್ಪ

೪. ಸೊಂಡೂರು ಪರಿಸರದಲ್ಲಿ ಆಳ್ವಿಕೆ ನಡೆಸಿದ ಪಾಳೆಯಗಾರರು ಮತ್ತು
ಘೋರ್ಪಡೆಗಳ ರಾಜಕೀಯ ಚರಿತ್ರೆ / ೬೦
ವಿರೂಪಾಕ್ಷಿ ಪೂಜಾರಹಳ್ಳಿ

೫. ಕನ್ನಡ ನಾಡಲ್ಲಿ ಅಳಿಸಲಾಗದ ಹೆಜ್ಜೆ ಮೂಡಿಸಿದ ಬುಕಾನನ್
ಹಾಗೂ ಇತರೆ ವಿದೇಶಿ ಮಹನೀಯರು / ೭೭
ಎಂ.ಜಿ. ರಂಗಸ್ವಾಮಿ

೬. ಮೈಸೂರು ರಾಜ್ಯ ಮತ್ತು ಮೊಘಲರ ನಡುವಿನ ರಾಜತಾಂತ್ರಿಕ
ಸಂಬಂಧಗಳು : ಒಂದು ವಿಶ್ಲೇಷಣೆ / ೯೪
ಎನ್. ಮಹದೇವಸ್ವಾಮಿ

೭. ಟಿಪ್ಪುವಿನ ಮತಾಂತರ ರಾಜಕಾರಣ ಮತ್ತು ರಾಜೇಂದ್ರನಾಮೆ / ೧೦೧
ವಿಜಯ್ ಪೂಣಚ್ಚ ತಂಬಂಡ

೮. ತುರ್ತುಪರಿಸ್ಥಿತಿ ಸಂದರ್ಭದಲ್ಲಿ ದಲಿತರ ಸ್ಥಿತಿಗತಿ : ಚಾರಿತ್ರಿಕ ವಿಶ್ಲೇಷಣೆ / ೧೨೫
ಎಚ್.ಸಿ. ನರಸಿಂಹರಾಜು

Scanned with OKEN Scanner

೯. ಪ್ರೊ. ಬಿ. ಷೇಕ್ ಅಲಿ ಅವರ ಜೀವನ–ಸಾಧನೆಗಳ ವಸ್ತುನಿಷ್ಠ ನೋಟ / ೧೩೧
ನರೇಂದ್ರ ಪ್ರಸಾದ್

೧೦. ಕನ್ನಡ ನೆಲೆದ ಚರಿತ್ರೆ ರಚನೆ, ಬೋಧನೆ ಹಾಗೂ ಮಾನವೀಯತೆಯ ನೆಲೆಯ ಶಿಬಿರ : ಪ್ರೊ. ಬಿ. ಷೇಕ್ ಅಲಿ / ೧೩೭
ಎನ್. ಚಿನ್ನಸ್ವಾಮಿ ಸೋಸಲೆ

ಲೇಖಕರ ವಿಳಾಸ / ೧೪೨

Scanned with OKEN Scanner

೭

ಟಿಪ್ಪುವಿನ ಮತಾಂತರ ರಾಜಕಾರಣ ಮತ್ತು ರಾಜೇಂದ್ರನಾಮೆ*

ವಿಜಯ್ ಪೂಣಚ್ಚ ತಂಬಂಡ

ರಾಜೇಂದ್ರನಾಮೆಯನ್ನು ಬರೆಯಿಸಿದವನು ಹಾಲೇರಿ ಸಂಸ್ಥಾನದ ಲಿಂಗಾಯತ ಅರಸನಾಗಿದ್ದ ವೀರರಾಜೇಂದ್ರ ಒಡೆಯ. ೧೭೯೭ರಿಂದ ಅದನ್ನು ಬರೆಯಿಸಲಾರಂಭಿಸಿ ೧೮೦೭ಕ್ಕೆ ಅದರ ಅಂತಿಮ ಹಸ್ತಪ್ರತಿಯು ತಯಾರಾಗುವಂತೆ ಮುತುವರ್ಜಿ ವಹಿಸಿದವನು ವೀರರಾಜೇಂದ್ರನು. ಇಂಗ್ಲಿಶ್ ಅಧಿಕಾರಿ ರಾಬರ್ಟ್ ಅಬರ್‌ಕ್ರಾಂಬಿಯು ಈ ಕೃತಿಯನ್ನು ೧೮೦೮ರಲ್ಲಿ ಇಂಗ್ಲಿಶ್‌ಗೆ ಭಾಷಾಂತರಿಸಿದನು. ರೆವರೆಂಡ್ ಮೋಗ್ಲಿಂಗನು ಇದನ್ನು ೧೮೫೭ರಲ್ಲಿ ಮಂಗಳೂರಿನ ಜರ್ಮನ್ ಮಿಶನ್ ಪ್ರೆಸ್‌ನಲ್ಲಿ ಪ್ರಕಟಿಸಿದನು. ಮದ್ರಾಸಿನ ಬಿ. ರಾಮರಾವ್ ಎಂಬವರು ಈ ಕೃತಿಯನ್ನು ೧೯೪೩ರಲ್ಲಿ ಸರಳಗನ್ನಡದಲ್ಲಿ ಆಂಶಿಕವಾಗಿ ಪ್ರಕಟಿಸಿದರು. ಈ ಕೃತಿಯ ಪೂರ್ಣಪ್ರಮಾಣದ ಸರಳಗನ್ನಡ ಆವೃತ್ತಿಯನ್ನು ಡಿ.ಎನ್. ಕೃಷ್ಣಯ್ಯ ಮತ್ತು ಎಂ.ಎಸ್. ಸುಬ್ಬರಾಯ ಅವರು ೧೯೫೭ರಲ್ಲಿ ಪ್ರಕಟಿಸಿದರು. ೨೦೧೪ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಇವರಿಬ್ಬರು ಸಂಪಾದಿಸಿದ ರಾಜೇಂದ್ರನಾಮೆಯ ಆವೃತ್ತಿಯನ್ನು ಮರುಮುದ್ರಣವನ್ನು ಮಾಡಿದೆ. ೨೦೧೮ರಲ್ಲಿ ವಿಜಯ್ ಪೂಣಚ್ಚ ತಂಬಂಡ ಅವರು ರಾಜೇಂದ್ರನಾಮೆಗೆ ೫೫ ಪುಟಗಳ ಪ್ರಸ್ತಾವನೆಯನ್ನು ಬರೆದು, ಸಮಕಾಲೀನ ಕೃತಿಗಳೊಂದಿಗೆ ಅದನ್ನು ತುಲನಾತ್ಮಕ ಅಧ್ಯಯನಕ್ಕೆ ಒಳಪಡಿಸಿ, ರಾಜೇಂದ್ರನಾಮೆಯ ಮೂಲ ಆವೃತ್ತಿಯನ್ನು ಸಂಪಾದಿಸಿ ಅಡಿಟಿಪ್ಪಣಿಗಳ ಜೊತೆ ಪ್ರಕಟಿಸಿದ್ದಾರೆ. ಇವರು ೨೦೨೨ ರಲ್ಲಿ ಪ್ರಕಟಿಸಿದ ಅಮರಸುಳ್ಯ ಸಂಗ್ರಾಮ ೧೮೩೭: ಕೊಡಗು ಪಶ್ಚಿಮಘಟ್ಟಗಳ ಚರಿತ್ರೆಯ ಸ್ಥಿತ್ಯಂತರಗಳ ಅಧ್ಯಯನ ಮತ್ತು ವಿಮರ್ಶೆ

---

* ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗವು ಪ್ರಕಟಿಸಿದ ಪ್ರಬುದ್ಧ ಕರ್ನಾಟಕ – ೧೦೦ ಎನ್ನುವ ಶತಮಾನೋತ್ಸವ ಸಂಚಿಕೆ–೨ ರಲ್ಲಿ ಪ್ರಕಟಗೊಂಡ "ರಾಜೇಂದ್ರನಾಮೆ ಕಂಡ ಟಿಪ್ಪುವಿನ ಮತಾಂತರ ರಾಜಕಾರಣ: ೧೮ನೆಯ ಶತಮಾನದ ಹಿಂದು–ಮುಸ್ಲಿಂ ಸಂಬಂಧಗಳ ಆಯಾಮಗಳು" ಎನ್ನುವ ಲೇಖನದ ಪರಿಷ್ಕೃತ ಬರಹ ಇದಾಗಿದೆ.

ಎನ್ನುವ ಕೃತಿಯಲ್ಲಿ ರಾಜೇಂದ್ರನಾಮೆ ಕುರಿತಾದ ಅಧ್ಯಯನವು ಪ್ರಕಟವಾಗಿದೆ. ರಾಜೇಂದ್ರನಾಮೆಯಲ್ಲಿ ತನ್ನ ಮತ್ತು ಕುಟುಂಬ ವರ್ಗದ ವೈಯಕ್ತಿಕ ಜೀವನದ ವಿವರಗಳನ್ನು ದಾಖಲಿಸಲು ವೀರರಾಜೇಂದ್ರನು ಪ್ರಯತ್ನಿಸಿದ್ದಾನೆ. ಈ ಕೃತಿಯು ಸುಮಾರು ಒಂದುವರೆ ಶತಮಾನಗಳ ಕೊಡಗು ಮತ್ತು ಅದರ ನೆರೆಯ ರಾಜ್ಯಗಳಾಗಿದ್ದ ಪಿರಿಯಾಪಟ್ಟಣ, ಮೈಸೂರು, ಕೆಳದಿ, ಸೋದೆ, ಕೇರಳದ ಕೋಟೆ ಮತ್ತು ಚೆರಕಲ್‌ಗಳೊಡನೆ ಹೊಂದಿದ್ದ ರಾಜಕೀಯ ಸಂಬಂಧಗಳನ್ನು ವಿವರಿಸಿದೆ. ಹೈದರನು ಕೊಡಗಿನ ರಾಜವಂಶದ ಭಿನ್ನಮತೀಯನೊಬ್ಬನ ಆಹ್ವಾನದ ಮೇಲೆ ಕೊಡಗನ್ನು ವಶಪಡಿಸಿಕೊಂಡನು. ನಂತರ ಅಲ್ಲಿದ್ದ ರಾಜವಂಶಜರನ್ನು ಟಿಪ್ಪುವು ಪಿರಿಯಾಪಟ್ಟಣ ಕೋಟೆಯೊಳಗೆ ಬಂಧಿಗಳನ್ನಾಗಿಟ್ಟಿದ್ದನು. ಅವರಲ್ಲಿ ವೀರರಾಜೇಂದ್ರನೂ ಒಬ್ಬನು. ಅಲ್ಲಿಂದ ಅವನು ತನ್ನ ಕೆಲವು ಬಂಧುಗಳೊಂದಿಗೆ ತಪ್ಪಿಸಿಕೊಂಡು ಕೊಡಗಿನ ಕುರ್ಚಿ ಎಂಬ ಹಳ್ಳಿಯಲ್ಲಿದ್ದು ಕೊಡಗಿನ ರಾಜಧಾನಿ ಮಡಿಕೇರಿಯನ್ನು ತನ್ನದಾಗಿಸಿಕೊಂಡ ಕಥನದ ವಿವರಗಳನ್ನು ಇಲ್ಲಿ ನೋಡಬಹುದಾಗಿದೆ. ಇವನು ಮಡಿಕೇರಿಗೆ ಬಂದು ರಾಜನಾಗುವ ಪ್ರಕ್ರಿಯೆಯಲ್ಲಿಯೇ ಕೊಡಗು ಜನರನ್ನು ಟಿಪ್ಪುವು ಮತಾಂತರಿಸುವನು. ಅದರ ಬಗ್ಗೆಯೂ ಇಲ್ಲಿ ವಿವರಗಳಿವೆ. ರಾಜೇಂದ್ರನಾಮೆಯುದ್ದಕ್ಕೂ ತನ್ನ ಆಜನ್ಮ ಶತ್ರು ಟಿಪ್ಪುವನ್ನು ಮಣಿಸಲು ವೀರರಾಜನು ಇಂಗ್ಲಿಶರೊಡನೆ ಸಂಧಾನ ಮಾಡಿಕೊಂಡಿದ್ದನ್ನು ಇಲ್ಲಿ ಗಮನಿಸಬಹುದು. ಈ ಕೃತಿಯಲ್ಲಿ ಇಂಗ್ಲಿಶ್, ಫ್ರೆಂಚ್, ಈಜಿಪ್ತ್ ಜೊತೆಗಿನ ರಾಜಕಾರಣದೊಂದಿಗೆ ಮರಾಠ, ನಿಜಾಮ ಮುಂತಾದ ಭಾರತೀಯ ಅರಸೊತ್ತಿಗೆಗಳ ನಡುವಿನ ಸಂಬಂಧಗಳನ್ನು ನೋಡಬಹುದು.

ಪ್ರಸ್ತುತ ಸಂಶೋಧನಾ ಲೇಖನದಲ್ಲಿ ಕೊಡಗಿನೊಳಗೆ ಟಿಪ್ಪುಸುಲ್ತಾನನು ಮಾಡಿದ ಮತಾಂತರದ ವಿವಿಧ ಆಯಾಮಗಳನ್ನು ರಾಜೇಂದ್ರನಾಮೆಯಲ್ಲಿ ಉಲ್ಲೇಖಿಸಲಾದ ಅಂಶಗಳನ್ನು ಕೇಂದ್ರೀಕರಿಸಿ ಚರ್ಚಿಸುವ ಉದ್ದೇಶವನ್ನಿಟ್ಟುಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ವೀರರಾಜೇಂದ್ರನೇ ಬರೆದುದೆನ್ನಲಾದ ಪತ್ರವನ್ನು ಹಾಗೂ ಅವನ ಸಮಕಾಲೀನರಾಗಿದ್ದ ಮಾರ್ಕ್ ವಿಲ್ಕ್ಸ್(೧೮೧೦), ಕಿರ್ಮಾನಿ(೧೮೬೪), ಬುಕಾನನ್ (೧೮೦೭) ಇವರು ಈ ಕುರಿತು ತಾಳಿದ ಅಭಿಪ್ರಾಯಗಳನ್ನು ಬಳಸಿಕೊಳ್ಳಲಾಗಿದೆ. ೧೮೧೭ರಲ್ಲಿ "ಕೊಡಗು ಸರ್ವೆ" ಮಾಡಿದ ಕಾನರನು ಮತಾಂತರದ ಕುರಿತು ಮಾಡಿದ ವಿಶ್ಲೇಷಣೆಯನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಇದು ಕೊಡಗಿನ ಕುರಿತಾಗಿ ಇಂಗ್ಲಿಶನೊಬ್ಬನಿಂದ ಬಂದ ಮೊದಲ ಇಂಗ್ಲಿಶ್ ಕೃತಿ. ಈ ಲೇಖನದ ಎರಡನೆಯ ಭಾಗದಲ್ಲಿ ವೀರರಾಜೇಂದ್ರ ಒಡೆಯನು ಟಿಪ್ಪುವಿನೊಂದಿಗೆ, ಟಿಪ್ಪುವಿನ ದಂಡನಾಯಕರೊಂದಿಗೆ, ಉಳಿದ ಮುಸ್ಲಿಂ ರಾಜ/ರಾಣಿಯರೊಂದಿಗೆ ಹೊಂದಿದ್ದ ಸಂಕೀರ್ಣ ಸಂಬಂಧಗಳನ್ನು ಚರ್ಚಿಸಲು ಯತ್ನಿಸಲಾಗಿದೆ. ಈ ಕೃತಿಯ ಕೆಲವೆಡೆ ವೀರರಾಜೇಂದ್ರನು ವೈಯಕ್ತಿಕವಾಗಿ ಅನುಭವಿಸಿದ ನೋವುಗಳು ಅಭಿವ್ಯಕ್ತಗೊಂಡಿವೆ. ಇನ್ನೂ ಕೆಲವೆಡೆ

ತನ್ನ "ದೇಶದ" ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಮಾಡಿದ ವಿಶ್ಲೇಷಣೆಯನ್ನು ಈ ಬರಹದಲ್ಲಿ ಚರ್ಚಿಸಲಾಗಿದೆ.



ದೊಡ್ಡ ವೀರರಾಜೇಂದ್ರ ಒಡೆಯರ್
ಚಿತ್ರಕೃಪೆ: ಇಂಗ್ಲಿಶ್ ಮೀನಿಯೇಚರ್ ಆರ್ಟಿಸ್ಟ್ ಓಜಿಯಾಸ್ ಹಂಫ್ರಿಯ ಚಿತ್ರ
ಕೃಪೆ: artsandculture.google.com

ಮೂಲ ರಾಜೇಂದ್ರನಾಮೆಯಲ್ಲಿ ಮತಾಂತರದ ಘಟನೆಯನ್ನು ವಿವರಿಸುವ ಸಂದರ್ಭದಲ್ಲಿ ಮತಾಂತರಗೊಂಡವರ ಸಂಖ್ಯೆಯನ್ನು ಉಲ್ಲೇಖಿಸಿರುವುದಿಲ್ಲ. ಆದರೆ ಇಸ್ಲಾಂಗೆ ಮತಾಂತರಗೊಂಡ ೫೦೦೦ ಜನರು ಅವರ ಕುಟುಂಬದೊಂದಿಗೆ ಒಟ್ಟು ೧೨೦೦೦ ಸಂಖ್ಯೆಯಲ್ಲಿ ವಾಪಾಸ್ಸಾದ ವಿವರವನ್ನು ಈ ಕೃತಿಯು ತಿಳಿಸಿದೆ. ತಿ.ತಾ.ಶರ್ಮ ಅವರು ಸಂಪಾದಿಸಿದ "ಕೊಡಗು ವೀರರಾಜೇಂದ್ರರ ಪತ್ರ" ಈ ಕುರಿತಂತೆ ಕುತೂಹಲಕರವಾದ ಮಾಹಿತಿಯನ್ನು ನೀಡಿದೆ. ಅದರ ಪ್ರಕಾರ,

ಕುಟುಂಬ ಮಕ್ಕಳು ಸಮೇತ ಅರವತ್ತು ನಾಲ್ಕು ಸಾವಿರ ಜನ ಕೊಡಗರು ಯಿದಲ್ಲದೆ ಯಿನ್ನು ಕೆಲುಉ ಜಾತಿ ಜನರ ಸಹಾ ಹಿಡುಕೊಂಡು ಹೋಗಿ ಪಟ್ಟಣದಲ್ಲಿ ಸೆರೆ ಹಾಕಿಕ್ಕೊಂ[ಡ]... ನಂಮ್ಮ ಹೆಂಗಸರು ಮಕ್ಕಳಂನ್ನು ಟೀಪು ಸುಲುತಾನನ್ನು ತಂನ್ನ ಕಡೆ ಜನಕ್ಕೆ ಕೊಟ್ಟುಬಿಟ್ಟು ಬಹಳ ಜನ ಕೊಂದು ಬಿಟ್ಟು ಉಳಿದ ಸಂಣ ಮಕ್ಕಳನೆಲ್ಲ ಕೊಜಾ ಮಾಡಿಬಿಟ್ಟ... (ಶರ್ಮ ೧೯೯೯[೧೯೭೧]: ೧೩೪–೧೩೫).

Scanned with OKEN Scanner

ಶಿ.ಶಾ. ಶರ್ಮ ಅವರು ಸಂಪಾದಿಸಿರುವ ಪತ್ರದ ಪ್ರತಿಯು ಅವರ ಕೃತಿಯಲ್ಲಲ್ಲದೆ ಬೇರೆ ಕಡೆ ಲಭ್ಯವಿರುವುದಿಲ್ಲ.೧೯ನೆಯ ಶತಮಾನದ ಯುರೋಪಿಯನ್ ಬರಹಗಳಲ್ಲಿಯೂ ಈ ಪತ್ರದ ಉಲ್ಲೇಖವು ಕಂಡುಬರುವುದಿಲ್ಲ.

ಲಿಂಗರಾಜೇಂದ್ರನ ಕಾಲಾವಧಿಯಲ್ಲಿ ಕೊಡಗನ್ನು ಸಂದರ್ಶಿಸಿದ ಇಂಗ್ಲಿಶ್ ಅಧಿಕಾರಿ ಲೆಫ್ಟಿನೆಂಟ್ ಕಾನರನು ರಾಜೇಂದ್ರನಾಮೆಯಾಧಾರಿತ ವಿವರಗಳನ್ನು ತನ್ನ ವ್ಯಾಖ್ಯಾನ ಮತ್ತು ಅಂದುಕೊಳ್ಳುವಿಕೆಯ ಮುಖಾಂತರ ಗ್ರಹಿಸಲು ಯತ್ನಿಸಿರುವುದು ಕಂಡುಬರುತ್ತದೆ. ಟಿಪ್ಪುವು ೫೦೦೦ ಜನ ಕೊಡಗರನ್ನು ಅವರ ಕುಟುಂಬ ಸಮೇತ ಬರ್ಬರವಾಗಿ "ಅವರ ಮನೆಗಳಿಂದ ಎಳೆದು ತಂದು" ಇಸ್ಲಾಂಗೆ ಮತಾಂತರ ಮಾಡಿದನೆಂದು ಕಾನರನು ೧೮೧೭ರಲ್ಲಿ ಬರೆದಿದ್ದಾನೆ. ರಾಜೇಂದ್ರನಾಮೆಯಲ್ಲಿ ಮತಾಂತರದ ಬಗ್ಗೆ ಉಲ್ಲೇಖವಿದ್ದರೂ ಕೊಡಗರನ್ನು "ಮನೆಗಳಿಂದ ಎಳೆದು ತಂದಿದ್ದರ ಬಗ್ಗೆ" ಉಲ್ಲೇಖಗಳಿಲ್ಲ. ಸುಮಾರು ೨೫ ವರ್ಷಗಳ ಹಿಂದೆ ನಡೆದ ಮತಾಂತರ ಘಟನೆಯ ಕುರಿತಾದ ಕಾನರನ ಬರವಣಿಗೆಯು ಈ ನಿಟ್ಟಿನಲ್ಲಿ ಆಸಕ್ತಿದಾಯಕವಾಗಿದೆ. ಮತಾಂತರದ ಘಟನೆಯು "೧೭೯೧ ಡಿಸೆಂಬರ್ ತಿಂಗಳಲ್ಲಿ" ನಡೆಯಿತು ಎಂದು ಅವನು ಉಲ್ಲೇಖಿಸಿರುವುದನ್ನು ನೋಡಬಹುದು. ಕಾನರನ ನಂತರ ಕಂಡುಬಂದ ದಾಖಲೆಗಳಲ್ಲಿ, ಮಿಶನರಿಗಳ ಗ್ರಂಥಗಳಲ್ಲಿ, ದೇಸಿ ವಿದ್ವಾಂಸರ ಕೃತಿಗಳಲ್ಲಿ ಭಾಗಮಂಡಲದ ಸಮೀಪ ೭೦,೦೦೦ದಿಂದ ೧೦೦,೦೦೦ ದಷ್ಟು ಜನರನ್ನು ಟಿಪ್ಪು ಮತಾಂತರಿಸಿದ ಎನ್ನುವ ವಿವರಗಳಿವೆ. ಆದರೆ ೧೮೧೭ರಲ್ಲಿ ಹೊರಬಂದ ಕಾನರನ ಈ ಕೃತಿಯಲ್ಲಿ "ಇತಿಹಾಸಕಾರನೊಬ್ಬನ ಪ್ರಕಾರ ಮತಾಂತರಕ್ಕೊಳಗಾದವರ ಸಂಖ್ಯೆ ೧೨,೦೦೦" ಎಂದು ಉಲ್ಲೇಖವಾಗಿರುವುದು ಗಮನಾರ್ಹವಾಗಿದೆ(ಕಾನರ್ ೧೮೭೦, II: ೯೧, ೧೧೦).

ಹಾಗೆ ನೋಡಿದರೆ ಕಾನರ್‌ನಿಗಿಂತ ಮೊದಲು ರಾಜೇಂದ್ರನಾಮೆಯ ಹಾಗೂ ವೀರರಾಜೇಂದ್ರ ಒಡೆಯನ ಬಗ್ಗೆ ಪ್ರಸ್ತಾಪಿಸಿದವನು ಕರ್ನಲ್ ಮಾರ್ಕ್ ವಿಲ್ಕ್ಸ್. ೧೮೧೦ ಮತ್ತು ೧೮೧೭ರಲ್ಲಿ ಪ್ರಕಟಿಸಿದ ತನ್ನ ಹಿಸ್ಟರಿ ಆಫ್ ಮೈಸೂರ್ ಎನ್ನುವ ಮೂರು ಸಂಪುಟಗಳ ಕೃತಿಗಳಲ್ಲಿ ರಾಜೇಂದ್ರನಾಮೆಯ ಕುರಿತಾದ ವಿದ್ಯಮಾನಗಳನ್ನು ನೋಡಬಹುದಾಗಿದೆ. ಮಾರ್ಕ್ ವಿಲ್ಕ್ಸನು ೧೭೮೧ರಲ್ಲಿ ಇಂಗ್ಲಿಶ್ ಈಸ್ಟ್ ಇಂಡಿಯಾ ಕಂಪನಿ ಸೇವೆಗೆ ಸೇರಿ, ಗವರ್ನರ್ ಜನರಲ್ ಲಾರ್ಡ್ ಕಾರ್ನ್‌ವಾಲಿಸನ ಬಹು ನಂಬಿಕಸ್ಥ ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ್ದನು. ಇವನು ೧೮೦೩ರಿಂದ ೧೮೦೮ರವರೆಗೆ ಮೈಸೂರು ಸಂಸ್ಥಾನದ ರೆಸಿಡೆಂಟನಾಗಿ ತನ್ನ ಜವಾಬ್ದಾರಿಯನ್ನು ನಿರ್ವಹಿಸಿದ್ದನು. ೧೭೯೪ರಿಂದ ೧೭೯೯ರ ಅವಧಿಯಲ್ಲಿ ಇವನು ಅನಾರೋಗ್ಯದಿಂದ ಯುರೋಪ್‌ನಲ್ಲಿದ್ದದ್ದು ಬಿಟ್ಟರೆ ಉಳಿದ ಕಾಲಾವಧಿಯುದ್ಧಕ್ಕೂ ಮಿಲಿಟರಿ ಸೇವೆಯನ್ನು ಮಾಡಿದ್ದನು. ವೀರರಾಜನದ್ದು ಬಹಳ "ರೊಮ್ಯಾಂಟಿಕ್ ಕ್ಯಾರೆಕ್ಟರ್" ಮತ್ತು ವೀರರಾಜನು

ಮಹತ್ವಾಕಾಂಕ್ಷಿ ಎನ್ನುವ ಈತ ಆ ಕಾರಣಗಳಿಂದಾಗಿ ಇಂಡಿಯಾದುದ್ದಕ್ಕೂ ವೀರರಾಜನು ಪ್ರಸಿದ್ಧನಾಗಿದ್ದಾನೆ ಎಂದು ವರ್ಣಿಸಿದ್ದಾನೆ. ರಾಜೇಂದ್ರನಾಮೆಯ ಬಗ್ಗೆ ಪರೋಕ್ಷವಾಗಿ ಹೇಳುತ್ತಾ, ವೀರರಾಜನ ರಾಜೇಂದ್ರನಾಮೆಯಲ್ಲಿ "ಐತಿಹಾಸಿಕ ಸಂಶೋಧನೆ" ಬಹಳ ವಿಸ್ತಾರವಾಗಿಲ್ಲದಿದ್ದರೂ ಅವನು ಆಳಿದ ಭೂಭಾಗದ ಪರ್ವತಗಾಹಿಗಳ (Mountaneers) ಕುರಿತ ಲಕ್ಷಣಗಳನ್ನು ಅದು ಆಸಕ್ತಿಯುತವಾಗಿ ವಿವರಿಸಿದೆ ಎಂದು ಬಣ್ಣಿಸಿದ್ದಾನೆ(ವಿಲ್ಕ್ಸ್ I ೧೮೧೦: xxix). ರಾಜೇಂದ್ರನಾಮೆಯ ಕನ್ನಡ ಆವೃತ್ತಿಯ ಹಸ್ತಪ್ರತಿ ಸಿದ್ಧವಾಗಿದ್ದ ಹೊತ್ತಿನಲ್ಲಿ ಅಂದರೆ ೧೮೦೭ರಲ್ಲಿಯೇ ಹೈದರ್-ಟಿಪ್ಪು-ವೀರರಾಜನ ಬಗ್ಗೆ ವಿವರಗಳನ್ನು ಫ್ರಾನ್ಸಿಸ್ ಬುಕಾನನ್ ತನ್ನ "ಜರ್ನಿ ಫ್ರಂ ಮದ್ರಾಸ್"ನಲ್ಲಿ ನೀಡಿದ್ದನು. ೧೭೮೧ರಿಂದ ೧೮೦೨ರವರೆಗೆ ಕ್ರಿಯಾಶೀಲನಾಗಿದ್ದ ಇರಾನಿ ಮೂಲದ ಮಿರ್ ಹುಸೇನ್ ಅಲಿಖಾನ್ ಕಿರ್ಮಾನಿಯು ಟಿಪ್ಪುಸುಲ್ತಾನನ ಬಗ್ಗೆ ಪರ್ಷಿಯನ್ ಭಾಷೆಯಲ್ಲಿ ಕೃತಿಯೊಂದನ್ನು ಬರೆದಿದ್ದನು. ೧೮೦೫ರಲ್ಲಿ ರಚಿಸಿದ ಇವನ ಕೃತಿಯನ್ನು ಎಚ್.ಎಸ್.ರೀಡ್ ಎಂಬುವನು ೧೮೩೪ರಲ್ಲಿ ಓರಿಯಂಟಲ್ ಟ್ರಾನ್ಸ್‌ಲೇಶನ್ ಫಂಡ್‌ಗಾಗಿ ಭಾಷಾಂತರಿಸುವನು. ಆದರೆ ಈ ಕೃತಿಯನ್ನು ಎರಡನೆಯ ಬಾರಿಗೆ ಭಾಷಾಂತರಿಸಿದವನು ಕರ್ನಲ್ ಡಬ್ಲ್ಯು ಮೈಲ್ಸ್ ಎಂಬುವನು.ಈ ಕೃತಿಯನ್ನು ಲಂಡನ್‌ನ ಓರಿಯಂಟಲ್ ಟ್ರಾನ್ಸ್‌ಲೇಶನ್ ಫಂಡ್ ಅವರು ೧೮೬೪ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯ ಒಂದು ಅಧ್ಯಾಯದಲ್ಲಿ ಹೈದರ್-ಟಿಪ್ಪು ಮತ್ತು ವೀರರಾಜನ ಸಂಬಂಧಗಳನ್ನು ಬಹುಮುಖ್ಯವಾಗಿ ಆ ಕಾಲದಲ್ಲಾದ ಮತಾಂತರದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಈಗಾಗಲೆ ತಿಳಿಸಿದಂತೆ ೧೮೦೭ರಲ್ಲಿ ಪ್ರಕಟಿಸಲಾದ ಬುಕಾನನ್‌ನ ಕೃತಿಯಲ್ಲಿ ರಾಜೇಂದ್ರನಾಮೆಯ ವಿವರಗಳಿಲ್ಲದಿದ್ದರೂ ೧೮೧೦ರಲ್ಲಿ ಪ್ರಕಟವಾದ ಮಾರ್ಕ್ ವಿಲ್ಕ್ಸ್‌ನ ಕೃತಿಯಲ್ಲಿ ರಾಜೇಂದ್ರನಾಮೆಯ ವಿವರವಿರುವುದನ್ನು ಗಮನಿಸಬಹುದು. ಕೊಡಗನ್ನು ಸ್ವತಃ ಸಂದರ್ಶಿಸಿ ಅಲ್ಲಿನ ವಿದ್ಯಮಾನವನ್ನು ಅಭ್ಯಾಸ ಮಾಡಿ ಕೃತಿ ರಚಿಸಿದ ಕಾನರನು ಮತಾಂತರಕ್ಕೊಳಗಾದವರ ಸಂಖ್ಯೆ ೧೨,೦೦೦ ಎಂದಿದ್ದನ್ನು ಈಗಾಗಲೆ ಉಲ್ಲೇಖಿಸಲಾಗಿದೆ. ಕಿರ್ಮಾನಿಯ ಅನುವಾದಿತ ಕೃತಿಯಲ್ಲಿ ಮತಾಂತರಗೊಂಡವರ ಸಂಖ್ಯೆ ೮೦,೦೦೦ ಎಂದಿದೆ. ಆ ಕೃತಿಯ ಒಂದು ಕಡೆ ೮೦೦೦ ಜನರನ್ನು ಮತಾಂತರಗೊಳಿಸಲಾಯಿತುಎನ್ನುವ ವಿವರವೂ ಇದೆ.ಮತಾಂತರಗೊಂಡ ಇವರೊಂದಿಗೆ ಮತ್ತಷ್ಟು ಜನರೂ ಸೇರಿಕೊಂಡಿದ್ದರು ಎನ್ನುವ ಅಂಶವಿದೆ. ಆದರೂ ಮತ್ತಷ್ಟು ಎಂಬ ಸಂಖ್ಯೆ ಮುಂದಿನ ಪುಟದಲ್ಲಿ ೮೦,೦೦೦ ಆಗಿದ್ದನ್ನು ಗಮನಿಸಬಹುದು. ಅಧ್ಯಾಯದ ಆರಂಭದಲ್ಲಿ ಮತಾಂತರಗೊಂಡವರ ಸಂಖ್ಯೆ ೮೦,೦೦೦ ಎಂದು ಬರೆದಿರುವುದನ್ನು ನೋಡಬಹುದಾಗಿದೆ(ಕಿರ್ಮಾನಿ ೧೮೬೪: ೬೮-೮೪). ೧೮೧೦ರಲ್ಲಿ ಮಾರ್ಕ್ ವಿಲ್ಕ್ಸ್‌ನು ಮತಾಂತರಕ್ಕೊಳಗಾದವರ ಸಂಖ್ಯೆ ೭೦,೦೦೦ ಎಂದು ನಮೂದಿಸಿದ್ದಾನೆ. ಈತ ಇನ್ನೊಂದು ಕಡೆ ಟಿಪ್ಪುವಿನ ಅವನತಿಯ ನಂತರ ಮತಾಂತರ

Scanned with OKEN Scanner

ಹೊಂದಿದ "೧೦,೦೦೦ ಮಂದಿ" ಕೊಡಗಿಗೆ ತಪ್ಪಿಸಿಕೊಂಡು ಬಂದ ಬಗ್ಗೆ ವಿವರಿಸಿದ್ದಾನೆ(ವಿಲ್ಕ್ಸ್ II ೧೮೧೦: ೨೮೩, ೫೩೭).

೧೭೯೯ರಿಂದ ೧೮೦೧ರವರೆಗೆ ತಾನು ಪ್ರಯಾಣ ಮಾಡಿದ ಪ್ರದೇಶಗಳ ವಿವರಗಳನ್ನು ದಿನಾಂಕಗಳೊಂದಿಗೆ ದಾಖಲಿಸಲು ಯತ್ನಿಸಿದವನು ಫ್ರಾನ್ಸಿಸ್ ಬುಕಾನನ್. ಮತಾಂತರವು ಮೇಲ್ಕಂಡ ವರ್ಷಗಳಿಗಿಂತ ಪೂರ್ವದಲ್ಲಿ ಸಂಭವಿಸಿದ್ದರಿಂದಲೋ ಏನೋ ಅದರ ಬಗ್ಗೆ ಉಲ್ಲೇಖವು ಅವನ ಕೃತಿಯಲ್ಲಿ ಸರಿಯಾಗಿ ಕಾಣಿಸಿಗುವುದಿಲ್ಲ. ೧೮೦೧ ಜನವರಿ ೨೦ರಂದು ಬುಕಾನನ್ ದಾಖಲಿಸಿರುವ ಪ್ರಕಾರ, ಟಿಪ್ಪುವಿನ ಮರಣಾನಂತರ ವೀರರಾಜನು ಇಂಗ್ಲಿಶರಿಗೆ ಸಹಾಯ ಮಾಡುವ ನೆಪದಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ತನ್ನ ರಾಜ್ಯದ ಜನರನ್ನು ಉಪಾಯದಿಂದ ಕೊಡಗಿಗೆ ಕರೆತಂದು ಅವರಿಗೆ ನೆಲೆ ನೀಡಿದ. "ಆನಂತರ ಅವರನ್ನು ಗೌರವದಿಂದ ವೀರರಾಜನು ನೋಡಿಕೊಂಡನೋ ಎಂಬುದು ತಿಳಿದಿಲ್ಲ" ಎಂದು ಬುಕಾನನ್ ಸಂಶಯ ವ್ಯಕ್ತಪಡಿಸಿದ್ದನ್ನು ಕಾಣಬಹುದು (ಬುಕಾನನ್ III ೧೮೦೭:೧೮೮). ತಾನು ಕಷ್ಟಪಟ್ಟು ಕರೆತಂದ ಮತಾಂತರ ಹೊಂದಿದ ತನ್ನ ರಾಜ್ಯದವರನ್ನು ಕೊಡಗಿನಲ್ಲಿದ್ದ ಅವರ ಬಂಧುಗಳು ಬಹಿಷ್ಕಾರ ಹಾಕಿ ಅವರನ್ನು ನಡುನೀರಿನಲ್ಲಿ ಕೈಬಿಟ್ಟಾಗ ಅವರಿಗೆಲ್ಲ ಆಸರೆಯಾದವನು ವೀರರಾಜ. ಅವರಿಗೆಲ್ಲ ಜಮ್ಮ ಭೂಮಿ ನೀಡಿ, ಸ್ಥಳೀಯ ಸಹಾಯವನ್ನು ನೀಡಿ ಅವರೆಲ್ಲ ಗೌರವದಿಂದ, ಸ್ವಾಭಿಮಾನದಿಂದ ಬದುಕುವ ದಾರಿ ತೋರಿಸಿದ್ದು ವೀರರಾಜೇಂದ್ರ ಒಡೆಯರ್ ಎಂದರೆ ಉತ್ಪ್ರೇಕ್ಷೆಯಾಗಲಾರದು. ಈ ರೀತಿಯಲ್ಲಿ ಕೊಡಗಿನಲ್ಲಿ ಮತ್ತೊಮ್ಮೆ ನೆಲೆ ಕಂಡುಕೊಂಡ ಅವರನ್ನು "ಜಮ್ಮ ಮಾಪಿಳ್ಳೆ" ಎಂದು ಕರೆಯುತ್ತಾರೆ. ಅವರು ತಮ್ಮನ್ನು "ಕೊಡವ ಮಾಪಿಳ್ಳೆ" ಎಂದು ಗುರುತಿಸಿಕೊಳ್ಳುವುದೂ ಉಂಟು.

೧೭೮೫ರಲ್ಲಿ ಭಾಗಮಂಡಲದ ಸಮೀಪವಿರುವ ದೇವಟ್ಟುಪರಂಬು ಎನ್ನುವ ಸ್ಥಳದಲ್ಲಿ ಟಿಪ್ಪುವು ಉಳಿದುಕೊಂಡು ಕೊಡಗರಿಗೆ ನಂಬಿಕೆ ಕೊಟ್ಟು "ಕೊಡಗು ಜನ, ಇವಂದಿರ ಕುಟುಂಬ, ಮಕ್ಕಳ" ಹಿಡಿದು "ಪಹರೆ ಹಾಕಿ... ಕೊಡಗು ಜನರನ್ನೆಲ್ಲ ಮುಂಜಿ ಮಾಡಿ, ಕುಲಗೆಡಿಸಿ, ಚೇಲೆಯರ ಮಾಡಿ" ಅವರೆಲ್ಲರನ್ನು ಸೇಕ್, ಸೈದ್, ಮೊಗಲ್, ಪಠಾಣ ಎಂಬ ತಮ್ಮ "ಜಾತಿಗೆ" ಸೇರಿಸಿದ ವಿವರಗಳನ್ನು ರಾಜೇಂದ್ರನಾಮೆ ನೀಡಿದೆ. ಸಾಗುವಳಿ ಮಾಡುತ್ತಿದ್ದ ಇವರ ಭೂಮಿಯನ್ನು ಹಾಗೂ "ಕೊಡಗರಿಗೆ ಬದುಕು ಮಾಡುತ್ತ ಇದ್ದ ಹೊಲೆಯರನ್ನು" ಮುಸಲ್ಮಾನರಿಗೆ ನೀಡಿದ, ಸಾಗುವಳಿ ಮಾಡದಿದ್ದ ಭೂಮಿಯನ್ನು ತಾನು "ಹಿಡಿದು ತಂದ" ಅದವಾನಿ ಸೀಮೆ ರೈತರಿಗೆ ನೀಡಿರುವ ವಿವರವೂ ಇಲ್ಲಿದೆ. ಮೂಲ ರಾಜೇಂದ್ರನಾಮೆಯಲ್ಲಿ "ಕೊಡಗು ಜನರನ್ನು ಮುಂಜಿ ಮಾಡಿಸಿದ" ಎಂದರೆ ಕೃಷ್ಣಯ್ಯ ಮತ್ತು ಸುಬ್ಬರಾಯ ಅವರು "ಕೊಡಗರನ್ನು" ಎಂದು ಪದಾಂತರಿಸಿದ್ದನ್ನು ನೋಡಬಹುದು. ಕೊಡಗಿನ ಉಸ್ತುವಾರಿಯನ್ನು ಟಿಪ್ಪುವಿನ ಪರವಾಗಿ

ನಾಗಪ್ಪಯ್ಯ ಎಂಬ ಬ್ರಾಹ್ಮಣನು ನೋಡಿಕೊಳ್ಳುತ್ತಿದ್ದನು. ಟಿಪ್ಪುವು ಸುಮಾರು ಒಂದು ಲಕ್ಷದ ಹನ್ನೊಂದು ಸಾವಿರ ರೈತರನ್ನು ಹಿಡಿದುಕೊಂಡು ಹೋಗಿ 'ಶರಾರತ್ತು'(ತುಂಬತನ) ನಡೆಸಿದರ ಬಗ್ಗೆ ರಾಜೇಂದ್ರನಾಮೆಯಲ್ಲಿ ಉಲ್ಲೇಖವಿದೆ. ಇದರೊಂದಿಗೆ ಟಿಪ್ಪುವಿನ ಲಷ್ಕರ ಕಚೇರಿಯವರು ಸೇಖ, ಸೈದ, ಮೊಗಲ್, ಪಠಾಣ ಈ 'ನಾಲ್ಕು ಜಾತಿ' ಮುಸ್ಲಿಮರನ್ನು ಕೊಡಗಿನ ಸೀಮೆಯಲ್ಲಿಟ್ಟರು ಎನ್ನುತ್ತದೆ ಈ ಗ್ರಂಥ. ಇದರ ಪ್ರಕಾರ ಈ ಮೇಲ್ಕಂಡ ಮುಸಲ್ಮಾನ ಜಾತಿಗಳ ಜನರನ್ನೂ, ಅದವಾನಿ ರೈತರನ್ನು ಕೊಡಗಿನಲ್ಲಿಡಲಾಗಿತ್ತು. ಟಿಪ್ಪುವು ಕೊಡಗಿನ ಸೀಮೆ ಜನರ ಬೇರು ಕಿತ್ತು ಬಿಸಾಡಿದ್ದೇವೆ ಎಂದು "ಹೇಳಲಾದ" ವಿಚಾರವನ್ನು ಇದು ದಾಖಲಿಸಿದೆ. ಒಂದು ವೇಳೆ ಯಾವನಾದರು ಕೊಡಗ "ಡಿತುಕೊಂಡು ಇದ್ದರೆ" ಅವನನ್ನು "ಕಡುದು ಹಾಕುವುದು;" ಅವರ ಹೆಂಗಸರನ್ನು ನೀವು ಮಡಗಿಕೊಳ್ಳುವುದು; ಆ ಹೆಂಗಸರ ಹೊಟ್ಟೆಯಲ್ಲಿ ಮಕ್ಕಳು ಹುಟ್ಟಿದರೆ ಆ ಮಕ್ಕಳು ಈ ಸೀಮೆಯಲ್ಲಿ ಕಾಯಂ ಇರಬೇಕು ಎಂದಿದೆ. ಟಿಪ್ಪುವು "ಹಿಂದು ದೊರೆಗಳ ದೌಲತ್ತು ತೆಗೆದುಕೊಂಡು" ಮಡಿಕೇರಿ ಎಂಬ ಹೆಸರಿಗೆ "ಜಹೀರಾಬಾದು" ಎಂದೂ, ತಲಕಾವೇರಿಗೆ "ಅಬ್ಬಲಾಬಾದು" ಹಾಗೂ ಮುಳ್ಳುಸೋಗೆ ಗ್ರಾಮದಲ್ಲೊಂದು ಕೋಟೆ ಕಟ್ಟಿಸಿ ಅದನ್ನು "ಖಿಷಾಬಿನಗರ" ಎಂದದ್ದನ್ನು ವೀರರಾಜನ ರಾಜೇಂದ್ರನಾಮೆ ತಿಳಿಸುತ್ತದೆ. "ಖಿಷಾಬಿನಗರವನ್ನು" ಈಗ ಕುಶಾಲನಗರ ಎಂದು ಕರೆಯುತ್ತಾರೆ. ಈ ಸೀಮೆಯಲ್ಲಿ ಯಾವಾಗಲು "ಮುಸಲ್ಮಾನ ದೀನ್ ಇಸ್ಲಾಮಿಕ್ ಜಾಂಡ ಹಾರಬೇಕು" ಎಂದು ಟಿಪ್ಪುವು ಮುಸಲ್ಮಾನರಿಗೆ ಹುಕುಂ ನೀಡಿದ್ದನ್ನು ರಾಜೇಂದ್ರನಾಮೆ ವರ್ಣಿಸಿದೆ. ರಾಜೇಂದ್ರನಾಮೆಯಲ್ಲಿ ಉಲ್ಲೇಖವಾಗಿರುವ ಇಂತಹ ಘಟನೆಗಳನ್ನು ಉಲ್ಲೇಖಿಸಿದ್ದು ಸರಿಯಷ್ಟೆ. ಇದನ್ನು ರಾಜೇಂದ್ರನಾಮೆಯಲ್ಲಿ ವೀರರಾಜನು ಮೈಸೂರಿನ ಸೈನಿಕರನ್ನು ಸಾವಿರಾರು ಸಂಖ್ಯೆಯಲ್ಲಿ "ಕಡಿದು ಹಾಕಿದ" ರೀತಿಯಲ್ಲಿ ಉತ್ಪ್ರೇಕ್ಷಿತವಾಗಿ ದಾಖಲಿಸಿರುವುದನ್ನು ನಿರಾಕರಿಸಲಿಕ್ಕಾಗುವುದಿಲ್ಲ. ವೈಯಕ್ತಿಕವಾಗಿ ತನಗಾದ ನೋವು, ಅವಮಾನಗಳನ್ನು ವೀರರಾಜನು ಈ ರೀತಿ ಅತಿರೇಕವಾಗಿ ದಾಖಲಿಸಿರುವುದು ಕೂಡ ಅಷ್ಟೇ ಸಹಜವಾದ ವಿಚಾರವಾಗಿದೆ. ಧರ್ಮ/ಜಾತಿಗೆ ಸಂಬಂಧಿಸಿದ ಟಿಪ್ಪುವಿನ ಘೋಷಣೆಯನ್ನು ವೀರರಾಜನು ದಾಖಲಿಸುವಾಗ ಉತ್ಪ್ರೇಕ್ಷೆ ಮಾಡಿದ್ದನೆಂದುಕೊಂಡರೂ ಕೊಡಗು ಜನರ ಸಮಾಜದ, ಕುಟುಂಬದ ಸಂಬಂಧಗಳನ್ನು, ಅವರ ಸಂವೇದನೆಗಳನ್ನು ಟಿಪ್ಪುವು ಘಾಸಿಗೊಳಿಸಿದ ಎಂದರೆ ಉತ್ಪ್ರೇಕ್ಷೆಯಲ್ಲ. ಇದೆಲ್ಲಕ್ಕಿಂತಲು ಹೆಚ್ಚಾಗಿ ಟಿಪ್ಪುವು ವೀರರಾಜೇಂದ್ರನನ್ನೇ ಮುಸ್ಲಿಂನನ್ನಾಗಿ ಮತಾಂತರಗೊಳಿಸಿದ್ದರಿಂದ ವೈಯಕ್ತಿಕವಾಗಿ ವೀರರಾಜನು ಆಘಾತಗೊಂಡಿದ್ದನು. ಮತ್ತು ಟಿಪ್ಪುವಿನ ವಿರುದ್ಧ ಸೇಡಿಗೆ ಹಾತೊರೆದಿದ್ದನು ಎನ್ನಬಹುದು. ಡಿ.ಎನ್. ಕೃಷ್ಣಯ್ಯ ಅವರ "ಕೊಡಗಿನ ಇತಿಹಾಸ"ದಲ್ಲಿ ಟಿಪ್ಪುವು "ವೀರರಾಜೇಂದ್ರನನ್ನು ಮುಸಲ್ಮಾನ[ನನ್ನಾಗಿ] ಮತಾಂತರಗೊಳಿಸಿದ್ದನ್ನು" ವಿವರಿಸಿದ್ದಾರೆ (ಕಾನರ್ ೧೮೭೦ II: ೪೫೫) (ಕೃಷ್ಣಯ್ಯ ೧೯೪೫ [೧೯೭೫]: ೧೬೪).

Scanned with OKEN Scanner

ಬರೆದಿದ್ದಾನೆ(ವಿಲ್ಕ್ಸ್ ೧೮೧೦ I: ೫೩೭). ೧೮೦೧ರ ಜನವರಿ ೭ರಂದು ಬುಕಾನನ್ ತನ್ನ ಡೈರಿಯಲ್ಲಿ ಟಿಪ್ಪುವಿನ ಮರಣಾನಂತರ ವೀರರಾಜನು ಇಂಗ್ಲಿಷರಿಗೆ ಸಹಾಯ ಮಾಡುವ ನೆಪದಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ತನ್ನ ರಾಜ್ಯದ ಜನರನ್ನು ಉಪಾಯದಿಂದ ಕೊಡಗಿಗೆ ಕರೆತಂದನು ಎನ್ನುತ್ತಾನೆ(ಬುಕಾನನ್ ೧೮೦೭ III: ೧೮೮). ವಿವಿಧ ಆಕರಗಳಲ್ಲಿ ನೀಡುವ ಮಾಹಿತಿಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿದ್ದರೂ ವಸ್ತುಸ್ಥಿತಿ ರೂಪಿಸುವ ಮತಾಂತರ ಘಟನೆಯ ಸ್ವರೂಪದಲ್ಲಿ ವ್ಯತ್ಯಾಸ ಕಂಡುಬರುವುದಿಲ್ಲ. ಅಂತಿಮವಾಗಿ ಮತಾಂತರಗೊಂಡ ಕೊಡಗು ಜನರಿಗೆಲ್ಲ ಆಶ್ರಯ ನೀಡುವ ಜವಾಬ್ದಾರಿ ವೀರರಾಜನ ಹೆಗಲಮೇಲಿತ್ತು.

ಟಿಪ್ಪುವಿನಿಂದ ಕೊಡಗನ್ನು ವಶಪಡಿಸಿಕೊಂಡ ಮೇಲೆ ಸಹಜವಾಗಿ ಕೊಡಗಿನಲ್ಲಿಯೂ ರಾಜಕೀಯ ಮತ್ತು ಆರ್ಥಿಕವಾದ ಪರಿಣಾಮಗಳುಂಟಾಗುತ್ತವೆ. ಟಿಪ್ಪು ಆಕ್ರಮಿಸಿದ್ದ ಆದವಾನಿ ರೈತರನ್ನು ವೀರರಾಜನು ಓಡಿಸಿ, ಕಾಡು ಸೇರಿಕೊಂಡಿದ್ದ "ಕೊಡಗು ಜನರನ್ನು" ಕರೆಸಿ, ಅವರವರ ಭೂಮಿ ಮನೆ ಅವರವರಿಗೆ ಕೊಡಿಸಿ, ಆ ಭೂಮಿಯಿಂದ ಮುಸಲ್ಮಾನರು ಬೆಳೆದು ಕೂಡಿಸಿಟ್ಟಿದ್ದ ನವಧಾನ್ಯ, ದನ, ಕರು, ಪಂಚಲೋಹ ಇತ್ಯಾದಿಗಳನ್ನು "ಜಮ್ಮಗಾರರಿಗೆ" ಕೊಡಿಸಿದನು.ಈ ಮೂಲಕ ನಿರ್ಧಯದಿಂದ ಒಕ್ಕಲಾಗಿ ಬದುಕಿ ಎಂದು ವೀರರಾಜನು ಕೊಡಗು ಜನರನ್ನು ಸಂತೈಸಿದ ಸಂಗತಿ ತಿಳಿಯುತ್ತದೆ. ಈ ವಿಚಾರ ಗೊತ್ತಾದಾಗ ಟಿಪ್ಪುವು ಕೊಡಗನ್ನು ಮರುವಶಮಾಡಿಕೊಳ್ಳಲು ತನ್ನ ಸೈನಿಕರನ್ನು ಕಳಿಸಿದರೂ ಅದು ಫಲಪ್ರದವಾಗುವುದಿಲ್ಲ.

ಬಹಳ ವಿಶೇಷವೆಂದರೆ ರಾಜೇಂದ್ರನಾಮೆ ಎಲ್ಲಿಯೂ ಹಿಂದು "ಧರ್ಮ" ಅಥವಾ ಮುಸ್ಲಿಂ "ಧರ್ಮ" ಎಂದು ಉಲ್ಲೇಖಿಸುವುದಿಲ್ಲ. ಎಲ್ಲ ಕಡೆ ಹಿಂದು, ಮುಸ್ಲಿಂ "ಜಾತಿಗಳು" ಎಂದು ಅದು ಉಲ್ಲೇಖಿಸಿರುವುದು ಗಮನಾರ್ಹವಾದುದು. ಕೊಡಗಿನ ಮಟ್ಟಿಗೆ "ಧರ್ಮದ" ಎಂಟ್ರಿ ಮಿಶನರಿಗಳಿಂದಾಯಿತು. ನಂತರ ಭಾರತ ಉಪಖಂಡದಲ್ಲಾದ ರಾಜಕೀಯ ಧಾರ್ಮಿಕ ಸಂಘರ್ಷಗಳಿಂದಾಗಿ ಕೊಡಗಿನ ಮಟ್ಟಿಗೆ ಹಿಂದು–ಮುಸ್ಲಿಂ "ಜಾತಿಗಳು" ಹೋಗಿ "ಧರ್ಮಗಳಾದದ್ದನ್ನು" ಕೂಡ ನಾವು ಕಾಣಬಹುದು. ಟಿಪ್ಪುವಿನ ನಿಗ್ರಹಕ್ಕಾಗಿ ಇಂಗ್ಲಿಶರು ವೀರರಾಜನನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದರು. ಇದರಿಂದಾಗಿ ವೀರರಾಜನು ಅತ್ಯಂತ ಸಂತೋಷಪಟ್ಟಿದ್ದನು. ಟಿಪ್ಪುವು ಸತ್ತ ವಿಷಯ ಕೇಳಿ ಅವನು ಹರ್ಷಪಟ್ಟಿದ್ದರ ವಿವರವು ಈ ಗ್ರಂಥದಲ್ಲಿದೆ. ಕೊಡಗಿನವರಿಗೆ ದೊಡ್ಡ "ದುಷ್ಮನ್" ಆಗಿದ್ದ ಟಿಪ್ಪುವು "ಹಿಂದೂ ಜಾತಿ ಧರ್ಮವೆಲ್ಲಾ" ಕೆಡಿಸಿ, "ಧರ್ಮ" ನಡೆಯದಂತೆ ಮಾಡಿದ್ದನು. ಇಂತಹವನನ್ನು ಇಂಗ್ಲಿಶರು ನಿಗ್ರಹಿಸಿದ್ದರಿಂದ "ಹಿಂದು ಜಾತಿಗೆಲ್ಲ" ಸಂತೋಷವಾಗಿದ್ದು ಹಾಗೂ ಇದರಿಂದಾಗಿ ಇಂಗ್ಲಿಶ್ ಸರ್ಕಾರಕ್ಕೆ ಬಹಳ "ಪುಣ್ಯ ಧರ್ಮ," "ಕೀರ್ತಿ" ಬಂದಿದೆ ಎನ್ನುತ್ತಾನೆ ವೀರರಾಜ. "ತಮ್ಮ ಭುಜಬಲ ಪರಾಕ್ರಮದಿಂದ[ಟಿಪ್ಪುವನ್ನು] ನಿಗ್ರಹಿಸಿ ಹಿಂದೂ

ರಾಜಕಾರಣದ ನಿಮಿತ್ತ ಈ ಬಗೆಯ ಧಾರ್ಮಿಕ ದೌರ್ಜನ್ಯವನ್ನು ಟಿಪ್ಪುವು ಎಸಗಿರುವುದನ್ನು ಕೊಡಗು ಜನರು ಈಗಲೂ ನೆನೆಸಿ ಆಕ್ರೋಶ ವ್ಯಕ್ತಪಡಿಸುವುದನ್ನು ನೋಡಬಹುದು. ಪರಂಪರೆಯಿಂದ ಪರಂಪರೆಗೆ ಮೌಖಿಕವಾಗಿ ಹರಿದಾಡಿದ ಮತಾಂತರ ಘಟನೆಯ ನೆನಪುಗಳು ಈ ಜನರ ನೋವಿನ ಧ್ವನಿಗಳಾಗಿರುವುದು ಕೂಡ ವಾಸ್ತವ. ವೀರರಾಜನು ಈ ಹಿನ್ನೆಲೆಯಲ್ಲಿ ತನ್ನ ರಾಜೇಂದ್ರನಾಮೆಯಲ್ಲಿ ಟಿಪ್ಪುವಿನ ಬಗ್ಗೆ ಅತ್ಯಂತ ವ್ಯಗ್ರನಾಗಿ ತನ್ನ ಅನಿಸಿಕೆಗಳನ್ನು ಮತ್ತು ಆ ಕಾಲದ ವೃತ್ತಾಂತಗಳನ್ನು ದಾಖಲಿಸಿರುವುದು ಕೂಡ ಆ ಕಾಲಘಟ್ಟದ ವಾಸ್ತವಕ್ಕೆ ಹತ್ತಿರವಾದುದ್ದೇ. ಈ ಕಾರಣಕ್ಕಾಗಿಯೇ ಖಡ್ಗಕ್ಕೆ ಬಲಿಯಾಗದಿಂದ ತಪ್ಪಿಸಿಕೊಂಡು ಬಂದಿದ್ದ ವೀರರಾಜನು ತನ್ನ "ಕುಟುಂಬ ಮಿತ್ರಳನ್ನು" ಸಿದ್ದೇಶ್ವರನ ಬೆಟ್ಟದಲ್ಲಿ ಮೂರು ವರ್ಷಗಳ ಕಾಲವಿರಿಸಿದ್ದರ ಬಗ್ಗೆ ಬರೆದಿದ್ದಾನೆ. ರಾತ್ರಿಯಿಡೀ ಟಿಪ್ಪುವಿನ ರಾಜ್ಯಕ್ಕೆ ಹೋಗಿ ದುಡಿದು, ರಾಗಿ ಮುಂತಾದ ಆಹಾರ ತಿಂದು ಜೀವನ ಮಾಡಿದ ವಿವರವನ್ನು ತಿಳಿಸಿದ್ದಾನೆ. ಇದರೊಂದಿಗೆ ಹಗಲು ಗ್ರಾಮ ಗ್ರಾಮಗಳಲ್ಲಿದ್ದ ಮುಸಲ್ಮಾನರನ್ನು ಓಡಿಸಿ ಅವರ ಬದಲಿಗೆ "ಕದೀಂ ರೈತರನ್ನು" "ಮಾಡಿದ್ದನ್ನು" ರಾಜೇಂದ್ರನಾಮೆಯು ವಿವರಿಸಿದೆ. ಮುಸಲ್ಮಾನರನ್ನು ಅಲ್ಲಿಂದ ಓಡಿಸಲು ೬ ತಿಂಗಳು ಬೇಕಾಯಿತು ಎಂದು ವೀರರಾಜನು ಉಲ್ಲೇಖಿಸಿದ್ದಾನೆ.

ರಾಜೇಂದ್ರನಾಮೆಯ ಇನ್ನೊಂದು ಕಡೆ, ಟಿಪ್ಪುವು ಮತಾಂತರಿಸಿದ ಕೊಡಗರಲ್ಲಿ ಸುಮಾರು ಏಮ ಸಾವಿರ ಜನರು ತಮ್ಮ ಕುಟುಂಬ ಸಮೇತರಾಗಿ ಸುಮಾರು ಹನ್ನೆರಡು ಸಾವಿರ ಸಂಖ್ಯೆಯಲ್ಲಿ ಕೊಡಗಿಗೆ ಆಗಮಿಸಿದ್ದರ ಬಗ್ಗೆ ಉಲ್ಲೇಖಿಸುತ್ತದೆ. ಅಂತಹವರಿಗೆ ಅಯಾಯಿ ನಾಡುಗಳಲ್ಲಿ ಮನೆಗಳನ್ನು ಕಟ್ಟಿಕೊಟ್ಟು, ಆರೈಕೆ ಮಾಡಿ, ದನಕರು ಇತ್ಯಾದಿಗಳನ್ನು ನೀಡಿ ಅವರಿಗೆಲ್ಲ ಬದುಕು ಮಾಡಿಕೊಟ್ಟ ವಿವರವನ್ನು ಇಲ್ಲಿ ನೋಡಬಹುದು. ಶ್ರೀರಂಗಪಟ್ಟಣದಿಂದ ವಾಪಸ್ಸು ಬಂದ ಕೊಡಗರು ತಮ್ಮವರನ್ನು ಸೇರಲು ಪ್ರಯತ್ನಿಸಿದ್ದರು. ಆದರೆ ಅವರು ಇಸ್ಲಾಂಗೆ ಮತಾಂತರಗೊಂಡಿದ್ದರಿಂದ ಉಳಿದ ಕೊಡಗು ಜನರು ಅವರನ್ನು ಮನೆಯೊಳಗೆ ಸೇರಿಸಲಿಲ್ಲ. ಅತಂತ್ರರಾದ ಅವರಿಗೆ ವೀರರಾಜನು ಬದುಕು ನೀಡಿದನು. ಅವರನ್ನು ಮನೆಗೆ ಸೇರಿಸಿಕೊಳ್ಳದಿರುವ ವಿಚಾರ ರಾಜೇಂದ್ರನಾಮೆಯಲ್ಲಿ ಪ್ರಸ್ತಾಪಿಸಿಲ್ಲವಾದರೂ ಆ ಕಾಲಘಟ್ಟಕ್ಕೆ ಸಂಬಂಧಿಸಿದ ಪತ್ರಾಗಾರ ದಾಖಲೆಗಳಿಂದ ಈ ವಿವರವನ್ನು ಪಡೆಯಲಾಗಿದೆ(ತಂಬಂಡ ೧೯೯೦). ರಾಜೇಂದ್ರನಾಮೆಯು ೫೦೦೦ ಕೊಡಗು ಜನರು ತಮ್ಮ ಕುಟುಂಬಸ್ಥರೊಂದಿಗೆ ಒಟ್ಟು ೧೨೦೦೦ ಸಂಖ್ಯೆಯಲ್ಲಿ ಕೊಡಗಿಗೆ ವಾಪಸ್ಸು ಬಂದರು ಎಂದು ಉಲ್ಲೇಖಿಸಿದೆ. ಮಾರ್ಕ್ ವಿಲ್ಕ್ಸ್‌ನು ೧೦,೦೦೦ ಸಂಖ್ಯೆಯಲ್ಲಿ "ಅಹಮದಿ ಚೇಲಾಗಳು"(ಕೊಡಗಿನಿಂದ ಮತಾಂತರವಾದವರು) ಮೈಸೂರು ಸೇತುವೆಯನ್ನು ದಾಟಿ ತಮ್ಮ ಹೆಂಡರು ಮಕ್ಕಳೊಂದಿಗೆ ಕೊಡಗಿಗೆ ವಾಪಸ್ಸಾಗುವರು ಎಂದು ದಾಖಲಿಸಿದೆ. ಹಾಗೆಯೇ ಅನೇಕ "ವಿದೇಶಿಯರು" ಶ್ರೀರಂಗಪಟ್ಟಣದಿಂದ ತಪ್ಪಿಸಿಕೊಂಡರು ಎಂದು ವಿಲ್ಕ್ಸ್

Scanned with OKEN Scanner

ಜಾತಿ ಧರ್ಮ ಉಳಿಸಿದ ಪುಣ್ಯ ಸೂರ್ಯ-ಚಂದ್ರ" ಇರುವವರೆಗೆ ಶಾಶ್ವತವಾಗಿರುತ್ತದೆ ಎಂದು ಅತ್ಯಂತ ಭಾವುಕನಾಗಿ ವೀರರಾಜನು ರಾಜೇಂದ್ರನಾಮೆಯಲ್ಲಿ ತನ್ನ ಅಭಿಪ್ರಾಯವನ್ನು ದಾಖಲಿಸಿದ್ದಾನೆ. ಈ ಸಂದರ್ಭದಲ್ಲಿ ರಾಜೇಂದ್ರನಾಮೆಯು "ಜಾತಿ ಧರ್ಮವನ್ನು" ಒಟ್ಟಿಗೆ ಕಂಡಿದ್ದನ್ನು ಗಮನಿಸಬಹುದು. ರಾಜೇಂದ್ರನಾಮೆಯಲ್ಲಿ ಕಲವೆಡೆ ಉಲ್ಲೇಖಿಸಿದ "ಧರ್ಮವು" ಸತ್ಯ, ನಿಷ್ಠೆ, ಪ್ರಾಮಾಣಿಕತೆಗೆ ಸಂವಾದಿಯಾಗಿದ್ದುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ. ಆದರೆ ರಾಜೇಂದ್ರನಾಮೆಯಲ್ಲಿ "ಹಿಂದೂ ರಾಜ್ಯ," "ಹಿಂದೂ ಸೀಮೆ," "ಹಿಂದೂಸ್ಥಾನದಲ್ಲಿರುವ ಇಂಗ್ಲಿಶ್ ವಂಶ," "ಹಿಂದೂಸ್ಥಾನ" ಎನ್ನುವ ಉಲ್ಲೇಖಗಳನ್ನು ನೋಡಬಹುದು. ಬಹುಶಃ "ಹಿಂದೂರಾಜ್ಯ" ಅಥವಾ "ಹಿಂದೂಸ್ಥಾನ" ಎನ್ನುವುದನ್ನು "ಭಾರತ ಉಪಖಂಡ" ಎನ್ನುವ ಪದಕ್ಕೆ ಸಂವಾದಿಯಾಗಿ ವೀರರಾಜೇಂದ್ರನು ಬಳಸಿರುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗುವುದಿಲ್ಲ. ಈ ಕುರಿತಂತೆ ಮನಾನ್ ಅಹಮ್ಮದ್ ಆಸಿಫ್ ಎನ್ನುವ ಚರಿತ್ರೆಕಾರರು ಹೇಳುವಂತೆ ಬ್ರಿಟಿಶ್ ಪೂರ್ವ ಕಾಲಘಟ್ಟದಲ್ಲಿ ಉಪಖಂಡವನ್ನು "ಹಿಂದೂಸ್ಥಾನ" ಎಂದು ಕರೆಯುತ್ತಿದ್ದರು. ಬ್ರಿಟಿಶರ ಆಳ್ವಿಕೆಯಲ್ಲಿ ಆಳರಸರು "ಹಿಂದೂಸ್ಥಾನ" ಎನ್ನುವ ಧಾರ್ಮಿಕೋಳಿಕ/ಭಾವನಾತ್ಮಕ ನೆಲೆಗಳನ್ನು ಉದ್ದೇಶಪೂರ್ವಕವಾಗಿ ನಾಶಮಾಡಿ, ಇಂತಹ ನೆಲೆಗಳನ್ನು/ಐಡೆಂಟಿಟಿಯನ್ನು "ಇಂಡಿಯಾ" ಎಂದು ಸೀಮಿತಗೊಳಿಸಿದ್ದರ ಬಗ್ಗೆ ಆಸಿಫ್ ಅವರು ಮಾಡಿರುವ ವಿಶ್ಲೇಷಣೆಯು ಗಮನಸೆಳೆಯುತ್ತದೆ(ಆಸಿಫ್ ೨೦೨೦: ೧–೨೭).

ರಾಜೇಂದ್ರನಾಮೆಯಲ್ಲಿ ವೀರರಾಜನು ಬಹುತೇಕ ಕಡೆ ತನ್ನ ಶತ್ರು ಟಿಪ್ಪುವನ್ನು ಟೀಕಿಸುವ, ಹಂಗಿಸುವ, ವಿಮರ್ಶಿಸುವ, ಅವನ "ನೇತ್ಯಾತ್ಮಕ" ನಡೆಗಳನ್ನು ಉತ್ಪ್ರೇಕ್ಷಿಸುವ, ಅವನ ಸೈನಿಕರ ವಿರುದ್ಧ ನಡೆದ ಎಲ್ಲ ಕದನಗಳಲ್ಲಿಯೂ ಟಿಪ್ಪುವಿನ ಸೈನಿಕರು ಮಾತ್ರ ಸತ್ತಿರುವ ಮುಂತಾದ ವಿಷಯಗಳನ್ನು ಅತಿರಂಜಿತವಾಗಿ ಹೇಳಲು ಯತ್ನಿಸಿದನು.ಟಿಪ್ಪುವಿನ ಮೇಲಿನ ಶತ್ರುತ್ವದಿಂದಾಗಿ ಹುಟ್ಟಿಕೊಂಡಈ ಬಗೆಯ ದ್ವೇಷವು ಅವನ "ಜಾತಿ" ಮೇಲೆ ಕೂಡ ತಿರುಗಿದ್ದನ್ನು ನಾವು ನೋಡಬಹುದಾಗಿದೆ. ಹೀಗಾಗಿ ವೀರರಾಜನಿಗೆ ಟಿಪ್ಪು ಮತ್ತು ಅವನ ಜಾತಿಗಳೆರಡೂ ಶತ್ರುಗಳಂತೆ ಕಂಡಿವೆ. ಮೇಲ್ನೋಟಕ್ಕೆ ಅವನಿಗೆ ಟಿಪ್ಪು ಮತ್ತು ಮುಸ್ಲಿಮ ಎನ್ನುವ ಎರಡು ಅಂಶಗಳ ಬಗ್ಗೆ ದ್ವೇಷವಿದೆ ಎಂದೆನ್ನಿಸಿದರೂ ರಾಜೇಂದ್ರನಾಮೆಯಲ್ಲಿಯೇ ದೊರಕುವ ಕೆಲವು ಘಟನೆಗಳು ಅವನ ದ್ವೇಷದ ಕುರಿತಾಗಿರುವ ಪೂರ್ವಗ್ರಹಕ್ಕೆ ವ್ಯತಿರಿಕ್ತವಾಗಿರುವುದು ಕಂಡುಬರುತ್ತದೆ. ಮಡಿಕೇರಿಯಲ್ಲಿ ವೀರರಾಜನ ಸೈನ್ಯದ ಕೈಯಲ್ಲಿ ಸಿಕ್ಕಿಹಾಕಿಕೊಂಡ ಟಿಪ್ಪುವಿನ ದಂಡನಾಯಕ ಖಾದರ್ ಖಾನ್ ಕೈಸಗಿಯನ್ನು ವೀರರಾಜನು ಕ್ಷಮಿಸಿ, ಮರ್ಯಾದೆಯಿಂದ ವಾಪಸ್ಸು ಕಳುಹಿಸಿದ ಘಟನೆಯನ್ನು ಇಲ್ಲಿ ಹೆಸರಿಸಬಹುದಾಗಿದೆ. ತನ್ನ ಸಹೋದರಿಯರು ಟಿಪ್ಪುವಿನ ಬಳ ಕ್ಷೇಮವಾಗಿರಲಿ ಎನ್ನುವ ಕಾರಣಕ್ಕಾಗಿ ವೀರರಾಜನು ಹೀಗೆ

ನಡೆದುಕೊಂಡ ಎನ್ನುತ್ತಾರೆ ಏಕನಂ ಮತ್ತು ಯೂರೋಪಿಯನ್ ಬರಹಗಾರರು. ಈ ವಿಷಯಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ದಾಖಲೆಗಳ ಮೂಲಕ ಕಂಡುಕೊಂಡ ಕೆಲವು ಅಂಶಗಳನ್ನು ಪ್ರಬಂಧದ ಈ ಭಾಗದಲ್ಲಿ ಚರ್ಚಿಸುವ ಯತ್ನವನ್ನು ಮಾಡಲಾಗಿದೆ.

ವೀರರಾಜನು ಪಿರಿಯಾಪಟ್ಟಣದಲ್ಲಿ ಬಂಧಿಯಾಗಿದ್ದ ಸಂದರ್ಭದಲ್ಲಿ ಖಾದರ್‌ಖಾನ್ ಕೈಸಗಿಯು ವೀರರಾಜನನ್ನು ಪ್ರೀತಿಯಿಂದ ನೋಡಿಕೊಂಡಿದ್ದಕ್ಕೆ ಮತ್ತು ಪರೋಕ್ಷವಾಗಿ ಟಿಪ್ಪುವಿನ ಸೆರೆಯಿಂದ ತಪ್ಪಿಸಿಕೊಳ್ಳಲುಸಹಾಯ ಮಾಡಿದಕ್ಕೆ ಕೈಸಗಿಗೆ ವೀರರಾಜನು ಆಭಾರಿಯಾದ ಪ್ರಸಂಗವಿದೆ. ರಾಜೇಂದ್ರನಾಮೆಯಲ್ಲಿ ಉಲ್ಲೇಖಿಸಿದಂತೆ ಕೈಸಗಿಯು ಟಿಪ್ಪುವಿನ "ಸರದಾರನಾಗಿದ್ದು" ಮಡಿಕೇರಿಯಲ್ಲಿ ಟಿಪ್ಪುವಿನ ಸೈನ್ಯವನ್ನು ನೋಡಿಕೊಂಡಿದ್ದನು. ತನ್ನೆಲ್ಲ ದಾಸ್ತಾನು ಮುಗಿದುಹೋದ ಮೇಲೆ ಕೈಸಗಿಯು ಅಸಹಾಯಕನಾಗುತ್ತಾನೆ. ಈ ಸಂದರ್ಭದಲ್ಲಿ ಅವನು ಮಡಿಕೇರಿಯನ್ನು ಮತ್ತೆ ಪಡೆಯಲು ಹೊಂಚುಹಾಕುತ್ತಿದ್ದ ವೀರರಾಜನಿಗೆ ಶರಣಾಗುವನು. ಆಗ ವೀರರಾಜನು ಕೈಸಗಿಯನ್ನು ಗೌರವಯುತವಾಗಿ ಕ್ಷಮಿಸಿದ ವಿವರಗಳು ರಾಜೇಂದ್ರನಾಮೆಯಲ್ಲಿವೆ. ಈ ಘಟನೆಯಾದ ಅನೇಕ ದಶಕಗಳ ನಂತರ ಬರೆದ ರೆವರೆಂಡ್ ಮೋಗ್ಲಿಂಗನಿಗೆ ಅನೇಕ ಸಂದೇಹಗಳಿದ್ದವು. ರಾಜೇಂದ್ರನಾಮೆಯಲ್ಲಿ ದಾಖಲಿಸಿದಂತೆ ಕೈಸಗಿಯು ವೀರರಾಜನು ಪಿರಿಯಾಪಟ್ಟಣದಲ್ಲಿ ಕೈದಿಯಾಗಿದ್ದಾಗ ಜೈನ್ನಾಗಿ ನೋಡಿಕೊಳ್ಳುತ್ತಿದ್ದುದರಿಂದ ವೀರರಾಜನು ಕೈಸಗಿಯನ್ನು ಕ್ಷಮಿಸಿ ಟಿಪ್ಪುವಿನ ಬಳಿಗೆ ಕಳುಹಿಸಿಕೊಟ್ಟ ಎನ್ನುವ ಅಂಶವನ್ನು ಮೋಗ್ಲಿಂಗನು ಒಪ್ಪುವುದಿಲ್ಲ. ಅವನ ಪ್ರಕಾರ, ಟಿಪ್ಪುವಿನ ಕೈಯಿಂದ ವೀರರಾಜ ಮತ್ತು ಲಿಂಗರಾಜರಿಬ್ಬರು ತಮ್ಮ ತಮ್ಮ ಕುಟುಂಬಗಳೊಂದಿಗೆ ತಪ್ಪಿಸಿಕೊಂಡರೂ ವೀರರಾಜನ ಸೋದರಿಯರು ಅಲ್ಲಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಹೀಗಾಗಿ ಅವರು ಪಿರಿಯಾಪಟ್ಟಣದಲ್ಲಿ ಟಿಪ್ಪುವಿನ ಬಂಧಿಯಾಗಿದ್ದರು. ಅವರನ್ನು ಬಿಡಿಸಿಕೊಳ್ಳಲು ವೀರರಾಜನಿಗೆ ಸಾಧ್ಯವಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ವೀರರಾಜನು ತನ್ನ ಸಹೋದರಿಯರ "ಗೌರವ" ಮತ್ತು "ಮಾನವನ್ನು" ಕಾಪಾಡುವ ದೂರದೃಷ್ಟಿಯಿಂದ ಕೈಸಗಿಯನ್ನು ಕ್ಷಮಿಸಿದನೇ ಹೊರತು ಇನ್ಯಾವುದೇ ಉದ್ದೇಶದಿಂದಲ್ಲ ಎಂದು ಮೋಗ್ಲಿಂಗ್ ಸಾಂದರ್ಭಿಕ ಸಾಕ್ಷಿಗಳ ಮೂಲಕ ವಿಶ್ಲೇಷಿಸಿದ್ದಾನೆ(ಮೋಗ್ಲಿಂಗ್ ೧೮೫೫: ೧೦೬–೧೦೯). ಖಾದರ್‌ಖಾನ್ ಕೈಸಗಿಯನ್ನು ವೀರರಾಜನು ಗೌರವದಿಂದ ವಾಪಸ್ಸು ಕಳುಹಿಸುತ್ತಿದ್ದ ಹೊತ್ತಿನಲ್ಲಿ ಟಿಪ್ಪುವು ಕೊಡಗಿನ ಬೆಟ್ಟಕೋಟೆಯನ್ನು "ಪುಡಿಗುಟ್ಟಿ; ಅಗೆದು ನೆಲಸಮ ಮಾಡಿದನು." ನಂತರ ಅವರ ಸೀಮೆಯನ್ನು "ಸೂರೆ ಮಾಡಿ, ಹೇರಳ ಹೆಣ್ಣು ಗಂಡು ಸೆರೆಹಿಡಿದು ಮನೆ ಮಾಡಿಗೆ ಅಗ್ನಿ ಪ್ರವೇಶ ಮಾಡಿಸಿ, ಫೌಜು ಸಮೇತ ಪಟ್ಟಣದ ಕಡೆಗೆ ಹೋದರು" ಎಂದು ರಾಜೇಂದ್ರನಾಮೆಯು ವರ್ಣಿಸಿದೆ. ಒಂದು ಕಡೆಯಿಂದ ಟಿಪ್ಪುವಿನ ದಂಡನಾಯಕನು ವೀರರಾಜನ ನಡತೆಗೆ ಕೃತಜ್ಞನಾಗಿರುವುದು ಮತ್ತು ಅದೇ ಹೊತ್ತಿಗೆ ಟಿಪ್ಪುವಿನ ಇನ್ನೊಂದು

Scanned with OKEN Scanner

ಸೈನ್ಯವು ಕೊಡಗಿನ ಮತ್ತೊಂದು ಭಾಗವನ್ನು ದೋಚುವುದು ಕಂಡುಬರುತ್ತದೆ. ಆ ಕಾಲಘಟ್ಟದ ಸಂವಹನದ ಮಿತಿಯು ಇದಕ್ಕೆ ಕಾರಣವಾಗಿರುವುದಾದರೂ ಈ ಘಟನೆಗಳು ಚರಿತ್ರೆಯ ಸಂಕೀರ್ಣತೆಗೆ ಸಾಕ್ಷಿಯಾಗಿದೆ.

೧೯ನೆಯ ಶತಮಾನದ ಬ್ರಿಟಿಶ್ ಬರಹಗಳಲ್ಲಿ ಮತ್ತು ದಾಖಲೆಗಳಲ್ಲಿ ವೀರರಾಜನ ಸೋದರಿಯನ್ನು ಟಿಪ್ಪುವು ವಿವಾಹವಾಗಿರುವ ವಿವರವು ಸಿಗುತ್ತದೆ. ಟಿಪ್ಪುವು ತನ್ನ "ಜನಾನ"ಕ್ಕೆ ಸೇರಿಸಿಕೊಂಡ ವೀರರಾಜನ ಸೋದರಿಯರ ಹೆಸರು ದೇವಮ್ಮಾಜಿ ಮತ್ತು ನೀಲಮ್ಮಾಜಿ. ದೇವಮ್ಮಾಜಿಗೆ ಟಿಪ್ಪುವು ಮೆಹ್ತಾಬ್(ಚಂದ್ರ) ಎಂದು ಹೆಸರಿಟ್ಟರೆ ನೀಲಮ್ಮಾಜಿಗೆ ಅಫ್ತಾಬ್(ಸೂರ್ಯ) ಎಂದು ಹೆಸರಿಟ್ಟನು. ಟಿಪ್ಪುವಿನ ಮರಣಾನಂತರ ವೀರರಾಜನು ಅವರಿಬ್ಬರನ್ನು ನಾಲ್ಕುನಾಡು ಅರಮನೆಯಲ್ಲಿರಿಸಿದನು. ೧೮೩೪ರಲ್ಲಿ ಹಾವೇರಿ ವಂಶದ ಆಡಳಿತ ಕೊನೆಯಾದ ನಂತರ ಅವರಿಗೆ ಜೀವನಪೂರ್ತಿ ಬ್ರಿಟಿಶ್ ಸರ್ಕಾರದಿಂದ ರಾಜಕೀಯ ನಿವೃತ್ತಿವೇತನ ಸಿಕ್ಕಿರುವುದು ಕಂಡುಬರುತ್ತದೆ. ದೇವಮ್ಮಾಜಿಯು ೧೮೫೨ರಲ್ಲಿ ಮರಣ ಹೊಂದಿದರೆ ನೀಲಮ್ಮಾಜಿಯು ೧೮೬೫ರಲ್ಲಿ ತೀರಿಹೋದಳು. ನಾಲ್ಕುನಾಡು ಅರಮನೆಯ ಹಿಂದಿನ ತೋಟದಲ್ಲಿ ಇವರಿಬ್ಬರ ಶವಗಳನ್ನು ಇಸ್ಲಾಂ ಧರ್ಮದ ನಿಯಮದಂತೆ ಹೂತಿಡಲಾಯಿತು(ಕೃಷ್ಣಯ್ಯ ೧೯೯೫: ೨೦೭-೨೦೮). ವೀರರಾಜನ ಸೋದರಿಯರು ಟಿಪ್ಪುವಿನ ಅರಮನೆಗೆ ಸೇರಿಹೋಗಿದ್ದು, ಮತಾಂತರವಾಗಿದ್ದು ಮುಂತಾದ ವಿಚಾರಗಳು ರಾಜೇಂದ್ರನಾಮೆಯಲ್ಲಿರುವುದಿಲ್ಲ(ಕೃಷ್ಣಯ್ಯ ಮತ್ತು ಸುಬ್ಬರಾಯ ೧೯೫೭[೨೦೦೪]: xvii). ತನ್ನ ಸೋದರಿಯರು ಟಿಪ್ಪುವನ್ನು ಮದುವೆಯಾದ ವಿಚಾರ ವೀರರಾಜನಿಗೆ ಗೊತ್ತಿದ್ದರೂ ಅದು ಕೊಡಗು ರಾಜರ ಮರ್ಯಾದೆಗೆ ಕೇಡಾಗಬಹುದೆಂದು ಭಾವಿಸಿ, ರಾಜೇಂದ್ರನಾಮೆಯಲ್ಲಿ ಇಂತಹ "ಸೂಕ್ಷ್ಮ ವಿಷಯಗಳನ್ನು" ಸೇರಿಸದಿರುವ ವಿಷಯವನ್ನು ಕಾಣಬಹುದಾಗಿದೆ ಎಂದು ಮೋಗ್ಲಿಂಗನು ಅಭಿಪ್ರಾಯಪಟ್ಟಿದ್ದಾನೆ. ಮೋಗ್ಲಿಂಗನ ಅಭಿಪ್ರಾಯವು ಮೇಲ್ನೋಟಕ್ಕೆ ಒಪ್ಪಿತವಾದುದು ಎಂದೆನ್ನಿಸಿಕೊಂಡರೂ ೧೮೧೦ರಲ್ಲಿ ಮಾರ್ಕ್ ವಿಲ್ಕ್ಸ್‌ನು ಈ ಕುರಿತಾಗಿ ಮಾಡಿರುವ ವಿಶ್ಲೇಷಣೆಯುಕುತೂಹಲಕಾರಿಯಾಗಿದೆ. ವಿಲ್ಕ್ಸ್‌ನ ಪ್ರಕಾರ ೧೭೮೮ರಲ್ಲಿ ವೀರರಾಜನು ಪಿರಿಯಾಪಟ್ಟಣ ಜೈಲಿನಿಂದ ತಪ್ಪಿಸಿಕೊಂಡರೂ ಅವನ ಸೋದರಿಯರು ತಪ್ಪಿಸಿಕೊಳ್ಳಲಾಗಲಿಲ್ಲ. ಈಗಾಗಲೆ ಬರೆದಂತೆ ವೀರರಾಜನ ಇಬ್ಬರು ಸೋದರಿಯರನ್ನು ಟಿಪ್ಪುವು ತನ್ನ ಜನಾನಕ್ಕೆ ಸೇರಿಸಿಕೊಂಡನು. ಈ ಇಬ್ಬರು ಸೋದರಿಯರ ಜೊತೆ ಇನ್ನೊಬ್ಬ ಸೋದರಿಯೂ ಇದ್ದಳು. ಆ ಇನ್ನೊಬ್ಬ ಸೋದರಿ ಎಂದರೆ ವೀರರಾಜನ ಮೂರನೆಯ ಸೋದರಿಯು ಅರಮನೆಯ ಜನಾನಕ್ಕೆ ಸೇರಿಕೊಳ್ಳುವಷ್ಟು "ಯೋಗ್ಯತೆಯನ್ನು" ಪಡೆದಿರಲಿಲ್ಲವಾದ್ದರಿಂದ(unworthy) ಅವಳಿಗೆ ಜನಾನಕ್ಕೆ ಸೇರುವ "ಗೌರವ" ಸಿಗಲಿಲ್ಲವೆಂದು ವಿಲ್ಕ್ಸ್‌ನು ಬರೆದಿದ್ದಾನೆ. ಈ ಸಂದರ್ಭದಲ್ಲಿ ಖಾದರ್‌ಖಾನ್ ಕೈಸಗಿಯು ಟಿಪ್ಪುವಿನಿಂದ "ತಿರಸ್ಕೃತಳಾದ" ಈ

ಮಹಿಳೆಯನ್ನು ತನ್ನ ಮನೆಗೆ ಕರೆದೊಯ್ದು, ಅವಳ ಜಾತಿಯವರನ್ನೇ ಅವಳ ಯೋಗಕ್ಷೇಮವನ್ನು ನೋಡಿಕೊಳ್ಳಲು ನೇಮಿಸಿ, ಅವಳಿಗೆ ಪ್ರತ್ಯೇಕ ವಾಸಸ್ಥಳವನ್ನು ನಿರ್ಮಿಸಿ, ಅವಳು ಗೌರವದಿಂದ ಬದುಕು ಮಾಡಲು ಔದಾರ್ಯವನ್ನು ತೋರಿದನು. ಇಷ್ಟೆಲ್ಲದರ ನಡುವೆಯೂ ಕೈಸಗಿಯು ಯಾವುದೇ ಸಂದರ್ಭದಲ್ಲಿಯೂ ಅವಳನ್ನು ವೈಯಕ್ತಿಕವಾಗಿ ಭೇಟಿಯಾಗದೆ ಇದ್ದನು. ನಂತರ ಅವಳನ್ನು ರಹಸ್ಯವಾಗಿ ತನ್ನ ಅಣ್ಣನ ಬಳಿ ಕಳುಹಿಸಿಕೊಟ್ಟನು (ವಿಲ್ಕ್ಸ್ ೧೮೧೭ II: ೪೭೩, ೪೭೯-೪೮೦). ವಿಲ್ಕ್ಸನಿಗಿಂತ ಹಿಂದೆ ಅಂದರೆ ೧೮೦೭ರಲ್ಲಿ ಪ್ರಕಟವಾದ ಬುಕಾನನ್ ಬರೆದ ಮಾತುಗಳು ಇನ್ನೂ ಕುತೂಹಲಕಾರಿಯಾಗಿವೆ. ೧೭೯೯ರ ಸೆಪ್ಟೆಂಬರ್ ೧೦ರಂದು ಬರೆದ ತನ್ನ ಡೈರಿಯಲ್ಲಿ ವೀರರಾಜನ ಸೋದರಿಯರನ್ನು ಟಿಪ್ಪುವು ತನ್ನ "ಜನಾನದಲ್ಲಿ" ಇರಿಸಿಕೊಂಡಿದ್ದರಿಂದ ವೀರರಾಜನು ಟಿಪ್ಪುವಿನ ಜೊತೆಗೆ ಋಣದ ಸಂಬಂಧವನ್ನಿಟ್ಟುಕೊಳ್ಳಬೇಕಾಯಿತು(ಬುಕಾನನ್ ೧೮೦೭ II: ೯೫). ಈ ವಿಚಾರವನ್ನು ಮೋಗ್ಲಿಂಗನಾದಿಯಾಗಿ ಬಹುತೇಕ ಬರಹಗಾರರು ಗಮನಿಸಿರುವುದು ಕಂಡುಬರುವುದಿಲ್ಲ. ಈ ಹಿನ್ನೆಲೆಯಲ್ಲಿ ವೀರರಾಜನ ಸಮಕಾಲೀನ ಬರಹಗಾರನಾದ ಮಾರ್ಕ್ ವಿಲ್ಕ್ಸ್‌ನ ಅಭಿಪ್ರಾಯವು ಸಮಂಜಸವಾಗಿದೆ ಎನ್ನಲು ಅಡ್ಡಿಯಿಲ್ಲ. ವಿಲ್ಕ್ಸ್‌ನು ರಾಜೇಂದ್ರನಾಮೆಯ "ಹಸ್ತಪ್ರತಿಯನ್ನು" ಓದಿದ್ದಾನೆ ಎನ್ನುವ ಉಲ್ಲೇಖವಿರುವುದು ಕೌತುಕದ ವಿಚಾರ. ಅವನು ಬಹಳಷ್ಟು ಸಂಗತಿಗಳನ್ನು ಅಲ್ಲಿಂದ ಪಡೆದಿರುವುದನ್ನು ತಳ್ಳಿ ಹಾಕುವಂತಿಲ್ಲ(ವಿಲ್ಕ್ಸ್ ೧೮೧೦ I: ೧೪೯).

ವೀರರಾಜನು ಕೈಸಗಿಯನ್ನು ಕ್ಷಮಿಸುವ ಸಂದರ್ಭದಲ್ಲಿಯೇ ಕೈಸಗಿಯ ಬಳಿಯಿದ್ದ ೭೦೦ ಮಂದಿ ಸೈನಿಕರು ಕೊಡಗಿನ ಅರಮನೆಗೆ ಸೇರಿಕೊಂಡರು ಎನ್ನುತ್ತಾನೆ ವಿಲ್ಕ್ಸ್. ಕೈಸಗಿಯನ್ನು ರಾಜೋಪಚಾರದಿಂದ ಶ್ರೀರಂಗಪಟ್ಟಣಕ್ಕೆ ಕಳುಹಿಸಿಕೊಟ್ಟಿದ್ದು ಇಂಗ್ಲಿಶರಿಗೆ ಇಷ್ಟವಾಗಲಿಲ್ಲ. ಕೈಸಗಿಯು ಮಡಿಕೇರಿ ಕೋಟೆಯಲ್ಲಿದ್ದಾಗ ಇಂಗ್ಲಿಶ್ ಜನರಲ್ ರಾಬರ್ಟ್ ಅಬರ್‌ಕ್ರಾಂಬಿಯು ತನ್ನ ಸೈನ್ಯವನ್ನು ಕೊಡಗಿನ ಸಹಾಯಕ್ಕೆ ಕಳುಹಿಸಿಕೊಡುವ ಪ್ರಸ್ತಾಪವನ್ನು ಕಳುಹಿಸಿದ್ದನು. ಅದನ್ನು ವೀರರಾಜನು ತಿರಸ್ಕರಿಸಿದ್ದು ಕೂಡ ಇಂಗ್ಲಿಶರಿಗೆ ಅಪಥ್ಯವಾಗಿತ್ತು. ಇವ್ಯಾವ ವಿವರವು ರಾಜೇಂದ್ರನಾಮೆಯಲ್ಲಿಲ್ಲ. ಟಿಪ್ಪುವಿನ ಮರಣಾನಂತರ ವೀರರಾಜನು ತನ್ನ ಸ್ನೇಹಿತ ಕೈಸಗಿಯನ್ನು ಕೊಡಗಿಗೆ ಕರೆದು ತಂದು ತನ್ನ ಸೋದರನಂತೆ ನೋಡಿಕೊಂಡನು. ವೀರರಾಜನು ಅವನಿಗೆ ದೊಡ್ಡ ಎಸ್ಟೇಟುಗಳನ್ನು, ದನಕರುಗಳನ್ನು, ಆಳುಕಾಳುಗಳನ್ನು ನೀಡಿ ಗೌರವಿಸಿದನು. ಕೈಸಗಿಯು ೧೮೦೬ರಲ್ಲಿ ಮೃತನಾಗುವನು(ವಿಲ್ಕ್ಸ್ ೧೮೧೦ I: ೪೮೦). ಅವನ ವಂಶಸ್ಥರು ಈಗಲೂ ಕೊಡಗಿನಲ್ಲಿ ಜಮೀನ್ದಾರರಾಗಿದ್ದಾರೆ.

ಕೈಸಗಿಯ ಕಥನಕ್ಕಿಂತ ಭಿನ್ನವಾದ ಇನ್ನೊಂದು ಘಟನೆಯಿದೆ. ಖಾದರ್‌ಖಾನ್ ಕೈಸಗಿಯನ್ನು ಕುಶಾಲನಗರದ ಕಾವೇರಿ ಹೊಳೆಯಿಂದ ಶ್ರೀರಂಗಪಟ್ಟಣದ ಕಡೆಗೆ

Scanned with OKEN Scanner

ಹೊಂದಿದ್ದರಂತಹ ಪ್ರಸಂಗವೊಂದಿದೆ. ಈ ಕಾಲಘಟ್ಟದಲ್ಲಿ ಇಂಗ್ಲಿಶರು ಟಿಪ್ಪುವಿನ ಸೈನಿಕರನ್ನು ಸಿಕ್ಕ ಸಿಕ್ಕ ಕಡೆ ಹೊಡೆದೋಡಿಸಲು ಯತ್ನಿಸುತ್ತಿದ್ದರು. ಆ ಸಂದರ್ಭದಲ್ಲಿ ಟಿಪ್ಪುವಿನ ಕಡೆಯ ಫಾಸಲ್‌ಖಾನನ ನೇತೃತ್ವದ ೬ ಸಾವಿರ ಜನ ಸೈನಿಕರು ಮತ್ತು ಬಲಿಯಾ ಬೇಬಿಯ ಕಡೆಯ ೪ ಸಾವಿರ ಮಾಪಿಳ್ಳೆ ಸೈನಿಕರು ಕಣ್ಣಾನೂರಿನಲ್ಲಿ ಬೀಡುಬಿಟ್ಟಿದ್ದರು. ರಾಜೇಂದ್ರನಾಮೆಯು ವರ್ಣಿಸುವಂತೆ, ಆ ಸಂದರ್ಭದಲ್ಲಿ ತಲಚೇರಿ ಕೋಟೆ ಮುಖ್ಯಸ್ಥ ರಾಬರ್ಟ್ ಟೇಲರನು ಬೇಬಿಯ ಜೊತೆ ಸಂಧಾನ ನಡೆಸಿ ಅವಳ ಕೋಟೆಯಲ್ಲಿದ್ದ ಟಿಪ್ಪುವಿನ ಸೈನಿಕರನ್ನು ಒಪ್ಪಿಸಲು ಕೋರಿದನು. ಅವಳು ಅದಕ್ಕೆ ಸಮ್ಮತಿಸಿದರೂ, ಟಿಪ್ಪುವಿನ ಸೈನ್ಯಾಧಿಕಾರಿಗಳಿಗೆ ಖಾಸಗಿಯಾಗಿ ಇಂಗ್ಲಿಶರು ಬರುವ ವಿಚಾರವನ್ನು ತಿಳಿಸಿ ಇಂಗ್ಲಿಶರ ಸೈನ್ಯದ ಮೇಲೆಯೇ ಎಲ್ಲರೂ ತಿರುಗಿಬೀಳುವ ವ್ಯವಸ್ಥೆ ಮಾಡಿದಳು. ಇದರ ದೀರ್ಘ ವಿವರಗಳು ಈ ಗ್ರಂಥದಲ್ಲಿದೆ. ಆ ಸಂದರ್ಭದಲ್ಲಿ ವೀರರಾಜನು ಇಂಗ್ಲಿಶರ ಸ್ನೇಹದಿಂದಾಗಿ ತಾನು ತಲಚೇರಿಯಲ್ಲಿ ಪಡೆದಿದ್ದ ಮನೆಗೆ ಯಾವುದೋ ವ್ಯಾಪಾರ ನಿಮಿತ್ತ ಸಂದರ್ಶಿಸಿದ್ದನು. ಎಲ್ಲವೂ ಅಂದುಕೊಂಡಂತೆ ಆಗದ್ದರಿಂದ ಆರಂಭದಲ್ಲಿ ಹಿಮ್ಮೆಟ್ಟಿದ ಇಂಗ್ಲಿಶ್ ಸೈನ್ಯವು ನಂತರ ಕಣ್ಣಾನೂರು ಕೋಟೆಯನ್ನು ವಶಪಡಿಸಿಕೊಳ್ಳುವಲ್ಲಿ ಸಫಲವಾಯಿತು. ಆ ಸಂದರ್ಭದಲ್ಲಿ ವೀರರಾಜನನ್ನು ಭೇಟಿಯಾದ ಬಲಿಯಾ ಬೇಬಿ ರಾಣಿಯು ತನ್ನ ಗಂಡು ಕೂಸನ್ನು ಅವನ ಕೈಗೊಪ್ಪಿಸಿ, ಮಗುವನ್ನು ರಕ್ಷಿಸುವಂತೆ ಮೊರೆಯಿಟ್ಟಳು. ಅವಳ ಪೂರ್ವಜರು ಯಾವುದೋ ಸಂದರ್ಭದಲ್ಲಿ ವೀರರಾಜನ ಪೂರ್ವಜರಿಗೆ ಮಾಡಿದ ಉಪಕಾರವನ್ನು ಅವಳು ನೆನಪಿಸುವಳು. ಭಾವನಾತ್ಮಕವಾಗಿ ಮಾಡಿದ ಅವಳ ಮನವಿಗೆ ತಕ್ಷಣವೇ ವೀರರಾಜನು ಸ್ಪಂದಿಸುವನು. ಇಂಗ್ಲಿಶರೊಂದಿಗೆ ಅನ್ಯೋನ್ಯತೆ, ಆತ್ಮೀಯತೆ ಮತ್ತು ಭಾವನಾತ್ಮಕ ಸಂಬಂಧ ಹೊಂದಿದ್ದ ವೀರರಾಜನು ಇಂತಹ ಸಂಕಟಕರವಾದ ಪರಿಸ್ಥಿತಿಯನ್ನು ಜಾಣ್ಮೆಯಿಂದ ಪರಿಹರಿಸಿದನು. ಅಲ್ಲೇ ಸಮೀಪ ಉಳಿದುಕೊಂಡಿದ್ದ ಮೇಜರ್ ಜನರಲ್ ರಾಬರ್ಟ್ ಅಬರ್‌ಕ್ರಾಂಬಿಯ(ಇವನು ಮುರದೆ ರಾಜೇಂದ್ರನಾಮೆಯನ್ನು ಇಂಗ್ಲಿಶ್‌ಗೆ ತರ್ಜುಮೆ ಮಾಡುತ್ತಾನೆ) ಬಳಿಗೆ ಹೋಗಿ ಮಗುವನ್ನು ಅವನ ಕೈಗಿತ್ತು ತನ್ನ ಮೇಲೆ "ಮೆಹರ್ಬಾನಿಗಿ ದೃಷ್ಟಿ ಇಟ್ಟು ಈ ಮಗುವಿನ ಮಾನ ಪ್ರಾಣ ಉಳಿಸಿ ರಕ್ಷಣೆ ಮಾಡಬೇಕು" ಎಂದನು. ಅದಕ್ಕೆ "ಆದೀತು" ಎಂದನು ಇಂಗ್ಲಿಶ್ ಅಧಿಕಾರಿ. ನಂತರ ವಿಷಯ ತಿಳಿದು ಕೋಪೋದ್ರಿಕ್ತನಾದ ಅಬರ್‌ಕ್ರಾಂಬಿಯನ್ನು ವೀರರಾಜನು ಪರಿಪರಿಯಾಗಿ ಒಪ್ಪಿಸುವಲ್ಲಿ ಸಫಲನಾಗುತ್ತಾನೆ. ಇವನ ಪ್ರಯತ್ನದಿಂದಾಗಿ ಆ ಮಗುವು ಬಲಿಯಾ ಬೇಬಿಯ ಕೈಗೆ ಮತ್ತೆ ಸೇರುತ್ತದೆ. ಇನ್ನು ಮುಂದೆ ಇಂತಹ "ದ್ರೋಹವನ್ನು" ಮಾಡಬಾರದೆಂಬ ಶರತ್ತಿನೊಂದಿಗೆ ಅವಳಿಗೆ ರಾಜ್ಯವೂ ವಾಪಸ್ಸಾಗುತ್ತದೆ. ಮುಸ್ಲಿಮನಾದ ಟಿಪ್ಪುವಿನ ಮೇಲಿದ್ದ ಆಕ್ರೋಶ, ಇಸ್ಲಾಂನ ಮೇಲಿನ ದ್ವೇಷಪೂರಿತ ಮಾತುಗಳು ಕಣ್ಣಾನೂರಿನ ಮುಸ್ಲಿಂ ರಾಣಿ ಮತ್ತು ಅವಳ

ಮರ್ಯಾದೆಯಿಂದ ಕಳುಹಿಸಿದುದು ಸರಿಯಷ್ಟೆ. ಕೈಸಗಿಯ ಜೊತೆಗೆ ಮಡಿಕೇರಿಯಲ್ಲಿದ್ದ ಟಿಪ್ಪುವಿನ ಕೋಟೆಯಲ್ಲಿ ಸಿಕ್ಕಿಹಾಕಿಕೊಂಡು ಅತಂತ್ರನಾಗಿದ್ದ ಕಿಲ್ಲೇದಾರ ಜಾಫರ್ ಕುಲೀಬೇಗ್ ಟಿಪ್ಪುವಿನ ದಂಡಿನಲ್ಲಿದ್ದ ಖಜಾನೆ, ಫಿರಂಗಿ, ಮದ್ದುಗುಂಡು, ಮುಂತಾದವುಗಳನ್ನು ವೀರರಾಜನಿಗೆ ಒಪ್ಪಿಸಿದನು. ಇದರೊಂದಿಗೆ ವೀರರಾಜನ ಕಡೆಯ ೫೦೦ ಕೊಡಗರನ್ನು ಅಲ್ಲಿ ಪಹರೆಗೂ ಬಿಟ್ಟನು. ಕೊನೆಗೆ "ಟಿಪ್ಪುವಿನ ಕೋಟೆಯ" ಮೇಲೆ ವೀರರಾಜನ ಬಾವುಟವನ್ನು ಹಾಕಲು ಅನುವು ಮಾಡಿಕೊಟ್ಟನು. ಲಿಂಗಾಯತ ಹಾಲೇರಿ ಅರಸರು ಕಟ್ಟಿದ ಮೂಲ ಕೋಟೆ ಮಡಿಕೇರಿಯ ದೇಚೂರಿನ ಬಳಿ ಇರಬಹುದೆಂಬ ಸೂಚನೆಯನ್ನು ಕೃಷ್ಣಯ್ಯ ನೀಡಿರುವುದನ್ನು ಇಲ್ಲಿ ಗಮನಿಸಬೇಕು(ಕೃಷ್ಣಯ್ಯ ೧೯೯೫: ೨೧೦). ಮೂಲ ಮಡಿಕೇರಿ ಕೋಟೆಯು ಮಡಿಕೇರಿಯ ಇನ್ನೊಂದು ಮೂಲೆಯಲ್ಲಿ ಅಂದರೆ ಹಾಲೇರಿ ಅರಮನೆಗೆ ಹೋಗುವ ಹಾದಿಯಲ್ಲಿತ್ತು. ರಾಜೇಂದ್ರನಾಮೆಯು ಉಲ್ಲೇಖಿಸುವಂತೆ, ಎಲ್ಲವನ್ನು ಕಳೆದುಕೊಂಡ ಜಾಫರ್ ಕುಲೀಬೇಗ್ ಮತ್ತು ಅವನ ಸೈನಿಕರು "ದೈನ್ಯೋಕ್ತಿಯಿಂದ" ಕಳೆದ ಮೂರು ತಿಂಗಳಿಂದ ಟಿಪ್ಪುವಿನ ಸರ್ಕಾರದಿಂದ ಸಂಬಳ ಬರದ್ದರಿಂದ ಕಂಗಾಲಾಗಿರುವ ವಿಚಾರ ತಿಳಿಸಿದರು. ಅವರ "ಕುಟುಂಬ ಮಕ್ಕಳು ಯಾವತ್ತೂ ವಿರ್ಚಿಗೆ ಇಲ್ಲದೆ ಹೈರಾನು ಆಗುತ್ತದೆ" ಎಂದು ವೀರರಾಜನಿಗೆ ಬೇಡುವ ಘಟನೆಯಿದೆ. ಆ ಸಂದರ್ಭದಲ್ಲಿ ವೀರರಾಜನು ಟಿಪ್ಪುವಿನ ಸೈನಿಕರ ವಿರ್ಚಿಗೆ ಒಂದು ಸಾವಿರ ವರಾಹವನ್ನು ಇನಾಮಾಗಿ ನೀಡಿ, ಅವರ ಸೈನಿಕರಿಗೆ ಎಲ್ಲ ರೀತಿಯ ರಕ್ಷಣೆಯೊಂದಿಗೆ ಕೊಡಗಿನ ಗಡಿ ಕುಶಾಲನಗರದ ಬಳಿ ಬಿಟ್ಟುಬರುವ ವಿವರವಿದೆ. ಈಗಾಗಲೇ ದೀರ್ಘವಾಗಿ ಚರ್ಚಿಸಿದಂತೆ ಹಾದರ್‌ಖಾನನಿಗೆ ಔದಾರ್ಯತೋರಲಿಕ್ಕೆ ವೀರರಾಜನ "ಸಹೋದರಿಯರ ಸಂಬಂಧವಿರಬಹುದು" ಎಂದು ಬಲವಾಗಿ ಊಹಿಸುವಂತೆ ಕಿಲ್ಲೇದಾರ ಜಾಫರ್ ಕುಲೀಬೇಗನಿಗೆ ಮತ್ತು ಅವನ ಸೈನಿಕರಿಗೆ ಮಾಡಿದ ಉಪಕಾರವನ್ನು ಯಾವ ರೀತಿಯಲ್ಲಿಯೂ ಐರೋಪ್ಯ ಬರಹಗಾರರಿಗೆ ಊಹಿಸಲು ಆಗದಿರುವ ಅಥವಾ ವಿಶ್ಲೇಷಿಸಲು ಸಾಧ್ಯವಾಗದ ವಿಷಯವನ್ನು ಇಲ್ಲಿ ಗಮನಿಸಬಹುದು. ಈ ವಿಷಯದಲ್ಲಿ ಅವರು ಮೌನ ವಹಿಸಿದರೋ ಅಥವಾ ಅವರಿಗೆ ಇಂತಹ ವಿವರಣೆ ತಿಳಿಯಲಿಲ್ಲವೋ ಎನ್ನುವುದು ಚರ್ಚೆಗೆ ಬಿಟ್ಟ ವಿಚಾರ. ಇಲ್ಲಿ ವೀರರಾಜನು ಮುಸ್ಲಿಂ ವಿರೋಧಿ ಪೂರ್ವಗ್ರಹವನ್ನು ಪ್ರದರ್ಶಿಸದಿರುವುದು ಕಂಡುಬರುತ್ತದೆ. ಧರ್ಮಪ್ರಭುವಿನಂತೆ ಒಬ್ಬ ಉತ್ತಮ ರಾಜತಾಂತ್ರಿಕನ ರೀತಿ ಅವನು ನಡೆದುಕೊಂಡಿರುವುದನ್ನು ನೋಡಿದರೆ ಟಿಪ್ಪುವಿನ ಕುರಿತಾದ ಉಗ್ರ ಟೀಕೆಗಳು ಅವನ ಮತ್ತು ಟಿಪ್ಪುವಿನ ನಡುವಿನ ವೈಯಕ್ತಿಕ ಸಂಬಂಧಗಳಿಗೆ ಮಾತ್ರ ಸೀಮಿತ ಎಂದೆನ್ನಿಸುತ್ತದೆ.

ಇದೇ ಸಾಲಿಗೆ ಸೇರುವ ಇನ್ನೊಂದು ಘಟನೆ ಕಣ್ಣಾನೂರಿನ ಬಲಿಯಾ ಬೇಬಿಯ ಕುರಿತಾದುದು. ಇವಳು ಕಣ್ಣಾನೂರಿನ ರಾಣಿಯಾಗಿದ್ದು ಇಂಗ್ಲಿಶರೊಂದಿಗೆ ಮೈತ್ರಿಯನ್ನು

Scanned with OKEN Scanner

ಬಳಗದ ಬಗ್ಗೆ ಬರೆಯುವಾಗ ಕಂಡುಬರುವುದಿಲ್ಲ. ಈ ಸಂದರ್ಭದಲ್ಲಿ ಅವನು ಹಿಂದು-ಮುಸ್ಲಿಂ "ಜಾತಿಗಳನ್ನು" ಮೀರಿ ಮಾನವೀಯತೆಯನ್ನು ಮೆರೆದದ್ದು ಕಾಣಸಿಗುತ್ತದೆ.

ವೀರರಾಜನು ಹುಟ್ಟಾ ಮುಸ್ಲಿಂ ವಿರೋಧಿಯೇನೂ ಆಗಿರಲಿಲ್ಲ. ಖಾದರ್‌ಖಾನ್ ಕೈಸಗಿ, ಬಲಿಯಾಬಾನು ಬೇಬಿ ಮುಂತಾದವರ ಘಟನೆಗಳು ವೀರರಾಜನು ಮುಸ್ಲಿಂ ವಿರೋಧಿಯಲ್ಲ ಎನ್ನುವ ಅಂಶವನ್ನು ಬಿಂಬಿಸಿವೆ. ಈಗಾಗಲೆ ಚರ್ಚಿಸಿದಂತೆ ಟಿಪ್ಪುವಿನ ಆಕ್ರಮಣಶಾಲಿ ಹಾಗೂ ಯುದ್ಧತಂತ್ರಗಳಿಂದ ಅವನು ಜರ್ಜರಿತನಾಗಿದ್ದನು. ಟಿಪ್ಪುವಿನ ಫ್ರೆಂಚ್ ಮಿತ್ರರು ಸೋಲುವಾಗಲೆಲ್ಲ ಅತ್ಯಂತ ಸಂತೋಷಪಟ್ಟವನು ವೀರರಾಜನು. ಫ್ರೆಂಚರು ಈಜಿಪ್ತ್‌ನ ಮುಸ್ಲಿಂ ದೊರೆಯ ಆಳ್ವಿಕೆಯಲ್ಲಿದ್ದ ಮಿಸರಿ ಎನ್ನುವ ಪಟ್ಟಣವನ್ನು ವಶಪಡಿಸಿಕೊಂಡಿದ್ದನು. ಫ್ರೆಂಚರ ಕೈಯಿಂದ ಮಿಸರಿ ಪಟ್ಟಣವನ್ನು ಇಂಗ್ಲಿಶರು ಬಿಡಿಸಿ ಮತ್ತೆ ಅದನ್ನು ಮುಸ್ಲಿಂ ಅರಸನಿಗೆ ಕೊಟ್ಟ ಘಟನೆಯೊಂದು ರಾಜೇಂದ್ರನಾಮೆಯಲ್ಲಿದೆ. ಈ ಸಂತೋಷವನ್ನು ಹಂಚಿಕೊಳ್ಳಲು "ಅಲ್ಲಾ ಹಜರತ್ ಕದರೆ ಕುದರತ್ತು ಕುರಶೆದರಾಯತ್ ದಾರಾದಿ ರಾಯತ್ ಸುಲ್ತಾನೆ ರೂಂ ಕಲದಲ್ಲಾ ಹೊಮುಲ್‌ಕುಹೂ" ಎನ್ನುವ ಈ ಮುಸ್ಲಿಂ ರಾಜನು ಇಂಗ್ಲಿಶರಿಗೆ ಆಕರ್ಷಕವಾದ ಉಡುಗೊರೆಯೊಂದನ್ನು ನೀಡಿದ್ದನು. "ಅರ್ಧಚಂದ್ರನೋಪಾದಿ ಚಿನ್ನದ ಹೂವು ಹೊಳೆಯುವಂತಹ ಕೆತ್ತಿದ ವಜ್ರವನ್ನು" ಕೊಡುಗೆಯಾಗಿ ಮುಸ್ಲಿಂ ಅರಸನಿಂದ ಇಂಗ್ಲಿಶರು ಪಡೆದಿದ್ದರು. ಅದನ್ನು "ಮಹರ್ಬಾನಿಗೆಯಿಂದಾ ದಯವಿಟ್ಟು ಕಳಿಸಿದ್ದಾರೆ" ಎಂದು ವೀರರಾಜೇಂದ್ರನು ತಿಳಿಸುತ್ತಾನೆ. "ಆ ಬಾದಶಾಹರವರ [ಇಂಗ್ಲಿಶರ] ಸರಕಾರ ಯಾವತ್ತೂ ಮುಸಲ್ಮಾನರದು ಇದೆ" ಎಂದು ವೀರರಾಜನು ಹೆಮ್ಮೆ ಪಟ್ಟಿದ್ದನ್ನು ಕಾಣಬಹುದು. "ನಮ್ಮ ಇಂಗ್ರೆಜ ಸರಕಾರಕ್ಕೂ ಅವರಿಗೂ ಭೇದವಿಲ್ಲದೆ ಏಕೀಕರಣವಾಗಿ ದೋಸ್ತಿ ಆದ್ದರಿಂದ ಬಹಳ ಸಂತೋಷ ಬಹುಮಾನ ನಮಗೆ ಉಂಟಾಯಿತು" ಎಂದು ವೀರರಾಜನು ಬೀಗಿದ್ದನ್ನು ಗಮನಿಸಬಹುದು. ಇಂಗ್ಲಿಶ್, ಮುಸ್ಲಿಂ ಹಾಗೂ ಹಿಂದೂ(ಲಿಂಗಾಯತ) ಅರಸೊತ್ತಿಗೆಗಳ "ಗೆಳೆತನದ" ಬಗ್ಗೆ ವೀರರಾಜನು ಗೌರವ ಹಾಗೂ ಹೆಮ್ಮೆ ಪಟ್ಟುಕೊಂಡ ಸಂದರ್ಭವನ್ನು ರಾಜೇಂದ್ರನಾಮೆಯಲ್ಲಿ ನೋಡಬಹುದು. ಈಜಿಪ್ತಿನ ಅರಸನು ಮುಸ್ಲಿಂ ಆಗಿದ್ದರೂ ಅವನು ಇಂಗ್ಲೀಶರ ಸ್ನೇಹಿತನಾಗಿದ್ದರಿಂದ ಅವನ ಸಂಬಂಧ ವೀರರಾಜನಿಗೆ ಇಷ್ಟವಾಗಿತ್ತು. ಅದೇ ರೀತಿ ಹೈದರಾಬಾದಿನ ನಿಜಾಮ ಕೂಡ ಇಂಗ್ಲಿಶರ ಮಿತ್ರನಾಗಿದ್ದರಿಂದ ಅವನ ಬಗ್ಗೆ ಅವಹೇಳನ ಬರಹವೇನು ರಾಜೇಂದ್ರನಾಮೆಯಲ್ಲಿ ಕಾಣಸಿಗುವುದಿಲ್ಲ. ನಿಜಾಮನ ಪ್ರಸ್ತಾಪ ರಾಜೇಂದ್ರನಾಮೆಯಲ್ಲಿ ಕೆಲವೆಡೆ ಬಂದರೂ ಅವುಗಳಲ್ಲಿ ವೀರರಾಜೇಂದ್ರನ "ಧಾರ್ಮಿಕ" ಅಭಿಪ್ರಾಯವು ಕಾಣುವುದಿಲ್ಲ.

ಹಾಗೆ ನೋಡಿದರೆ ವೀರರಾಜೇಂದ್ರನಿಗೆ ಹೈದರಾಲಿಯ ಬಗ್ಗೆ ಗೌರವವಿದ್ದದ್ದನ್ನು ರಾಜೇಂದ್ರನಾಮೆಯಲ್ಲಿ ಗಮನಿಸಬಹುದು. ಅವನ ಮಾತಿನಲ್ಲೇ ಅದನ್ನು

ಹೇಳುವುದಾದರೆ "ವಿಕೃತು ಸಂವತ್ಸರದ ಆರಭ್ಯ ನವಾಬ ಹೈದರಲ್ಲಿಖಾನ್ ಬಹಾದ್ದರವರಿಗೂ ನಮ್ಮ ತಂದೆಯವರಾದ ಲಿಂಗರಾಜೇಂದ್ರ ಒಡೆಯವರಿಗೂ ತಮ್ಮ ಒಳಗೆ ದೋಸ್ತಿ ಪ್ರಾರಂಭವಾಗಿ, ಕೀಲಕ ಸಂವತ್ಸರದವರೆಗೆ ಹತ್ತೊಂಭತ್ತು ವರ್ಷ ದೋಸ್ತಿ ಕಾಯಂ ಆಗಿತ್ತು" ಎಂದು ರಾಜೇಂದ್ರನಾಮೆಯಲ್ಲಿ ವೀರರಾಜನು ದಾಖಲಿಸಿದ್ದಾನೆ. ಐಗೂರು ಸೀಮೆಯಲ್ಲಿ ಹೈದರಾಲಿ ಜೊತೆಗೆ ಮಾಡಿದ ರಾಜಕಾರಣದ ಸಭೆಯಲ್ಲಿ ವೀರರಾಜನೂ ಭಾಗಿಯಾಗಿದ್ದನು.

ಈ ೧೯ ವರ್ಷಗಳ ಕಾಲದ ಸ್ನೇಹಕ್ಕಿರುವ ಚಾರಿತ್ರಿಕ ಹಿನ್ನೆಲೆಯು ಕುತೂಹಲಕರವಾಗಿದೆ. ಕೊಡಗನ್ನು ವಶಪಡಿಸಿಕೊಳ್ಳಲು ಹೈದರಾಲಿಗೆ ಆಹ್ವಾನವಿತ್ತವನೇ ವೀರರಾಜೇಂದ್ರನ ಅಪ್ಪ ಲಿಂಗರಾಜನು. ಹಾಲೇರಿ ವಂಶದ ಬಲಾಢ್ಯ ರಾಜನಾಗಿದ್ದ ದೊಡ್ಡವೀರಪ್ಪನ ಕೊನೆಯ ಕೊಂಡಿಯಾಗಿದ್ದ ಚಿಕ್ಕವೀರಪ್ಪನು ಮೃತನಾಗುವನು. ಅವನಿಗೆ ಮಕ್ಕಳಿರಲಿಲ್ಲ. ಈ ಸಂದರ್ಭದಲ್ಲಿ ದೊಡ್ಡವೀರಪ್ಪನಿಗೆ ಇಬ್ಬರು ಕಿರಿಯ ಸಹೋದರರಿದ್ದರು. ಅವರಲ್ಲಿ ಒಬ್ಬನ ಹೆಸರು ಮುದ್ದುರಾಜ. ಇನ್ನೊಬ್ಬನ ಹೆಸರು ನಂಜರಾಜ. ಮುದ್ದುರಾಜನು ಹಾಲೇರಿಯಿಂದ ಹಾಗು ನಂಜರಾಜನ ಮಗ ಮುದ್ದಯ್ಯ ಹೊರಮಲೆಯಿಂದ ರಾಜ್ಯವಾಳುತ್ತಾರೆ. ಇವರ ಜಂಟಿ ನಾಯಕತ್ವದಲ್ಲಿ ಕೊಡಗಿನ ರಾಜ್ಯಭಾರ ಚೆನ್ನಾಗಿಯೇ ನಡೆಯಿತು. ಆದರೆ ಇವರಿಬ್ಬರೂ ೧೭೭೦ರಲ್ಲಿ ಸಾವನ್ನಪ್ಪುತ್ತಾರೆ. ಈ ಸಂದರ್ಭದಲ್ಲಿ ಕೊಡಗಿನ ಗಾದಿಗಾಗಿ ಸಂಘರ್ಷ ನಡೆಯುತ್ತದೆ. ಹಾಲೇರಿಯ ಮುದ್ದುರಾಜನ ತಮ್ಮ ಲಿಂಗರಾಜೇಂದ್ರನು ತನ್ನ ಅಣ್ಣ ಮುದ್ದುರಾಜನ ಮಗ ಅಪ್ಪಾಜಿರಾಜನು ಕೊಡಗಿನ ಅರಸನಾಗಬೇಕೆಂದು ಹಠಮಾಡಿದನು. ಹೊರಮಲೆಯ ಮುದ್ದಯ್ಯನ ಮಗ ದೇವಪ್ಪರಾಜನು ನಾನು ರಾಜನಾಗಬೇಕೆಂಬ ಇಚ್ಛೆ ವ್ಯಕ್ತಪಡಿಸಿ, "ಜನಬೆಂಬಲದೊಂದಿಗೆ" ಕೊನೆಗೂ ತಾನೇ ರಾಜನಾದ. ಅವಮಾನಿತನಾದ ಲಿಂಗರಾಜನು ತನ್ನ ಮಗ ವೀರರಾಜ ಮತ್ತು ಅಪ್ಪಾಜಿರಾಜನೊಡನೆ ದೇಶಬಿಟ್ಟು ಪರಾರಿಯಾಗುತ್ತಾನೆ. ನಂತರ ಹೈದರಾಲಿಯ ಜೊತೆಗೆ ಸಂಧಾನ ಮಾಡಿಕೊಳ್ಳುತ್ತಾನೆ. ಕೊಡಗನ್ನು ತನ್ನ ವಶಕ್ಕೆ ಪಡೆಯಲು ಕೊಡಗನ್ನು ವಶಪಡಿಸಿಕೊಳ್ಳಲು ಲಿಂಗರಾಜನು ಹೈದರಾಲಿಗೆ ಒತ್ತಾಯ ಮಾಡುತ್ತಾನೆ. ಈ ಎಲ್ಲ ಸಂದರ್ಭಗಳಲ್ಲಿ ವೀರರಾಜನು ತನ್ನ ತಂದೆ ಲಿಂಗರಾಜನೊಂದಿಗಿದ್ದನು(ರಿಕ್ತರ್ ೧೯೮೪: ೨೪೨-೨೪೪)(ಕೃಷ್ಣಯ್ಯ ೧೯೯೫: ೧೩೭). ನಂತರದ ಬೆಳವಣಿಗೆಯಲ್ಲಿ ಹೈದರಾಲಿಯ ಸಹಾಯದಿಂದ ಕೊಡಗನ್ನು ದಕ್ಕಿಸಿಕೊಂಡ ಲಿಂಗರಾಜನು ತನ್ನ ಅಣ್ಣನ ಮಗ ಅಪ್ಪಾಜಿರಾಜನನ್ನು ೧೭೭೦ರಲ್ಲಿ ಕೊಡಗಿನ ರಾಜನನ್ನಾಗಿ ಕೂರಿಸಿದ. ಇದೇ ಸಂದರ್ಭದಲ್ಲಿ ಹೈದರಾಲಿಯ ಸೈನಿಕರು ಕೊಡಗಿನ ರಾಜನಾಗಿದ್ದ ದೇವಪ್ಪರಾಜನನ್ನು ಅಟ್ಟಿಸಿಕೊಂಡು ಹೋಗಿ, ಕೊನೆಗೆ ಹರಿಹರದ ಬಳಿ ಹತ್ಯೆ ಮಾಡುವರು. ಕೊಡಗಿನ ಸಿಂಹಾಸನದಲ್ಲಿ ಕುಳಿತ ಅಪ್ಪಾಜಿರಾಜನು ೧೭೭೫ರಲ್ಲಿ ಮೃತನಾಗುತ್ತಾನೆ. ನಂತರ "ಸಹಜವಾಗಿಯೇ"

Scanned with OKEN Scanner

ಟಿಪ್ಪುವಿನ ಮತಾಂತರ ರಾಜಕಾರಣ... / ೧೧೯

ಲಿಂಗರಾಜನು ಕೊಡಗಿನ ರಾಜನಾಗುತ್ತಾನೆ. ಇವನು ಹೈದರಾಲಿಯ ಸಹಾಯದಿಂದ ಒಂದು ಕಾಲದಲ್ಲಿ ಕೊಡಗಿನ ಭೂಭಾಗವಾಗಿದ್ದ ವೈನಾಡಿನ ಕಲ್ಪಾತಿ ಪ್ರದೇಶವನ್ನು ಆಕ್ರಮಿಸುತ್ತಾನೆ. ಈ ರೀತಿಯಲ್ಲಿ ಕಲ್ಪಾತಿ ಪ್ರದೇಶವು ೧೭೭೫ ರಿಂದ ೧೭೯೦ರವರೆಗೆ ಮತ್ತೊಮ್ಮೆ ಕೊಡಗಿನ ಅಧೀನಕ್ಕೆ ಬರುತ್ತದೆ. ಈ ಪ್ರದೇಶವನ್ನು ಕಳೆದುಕೊಂಡ ಮಲೆಯಾಳದ ಕೋಟಿರಾಜನು ಸುಮ್ಮನಿರಲಿಲ್ಲ. ೧೭೯೦ರಲ್ಲಿ ಅವನು ಈ ಪ್ರದೇಶವನ್ನು ವಶಪಡಿಸಿಕೊಳ್ಳಲು ಮಾಡಿದ ಯುದ್ಧದಲ್ಲಿ ಅಪ್ಪಾಜಿರಾಜನ ಇಬ್ಬರು ಮಕ್ಕಳು ಹತ್ಯೆಯಾಗುತ್ತಾರೆ. ಸ್ವಲ್ಪ ಕಾಲದಲ್ಲಿಯೇ ಅಂದರೆ ೧೭೯೦ರಲ್ಲಿ ಲಿಂಗರಾಜನೂ ಸಾವಿಗೀಡಾಗುತ್ತಾನೆ. ಸಹಜವಾಗಿಯೇ ಲಿಂಗರಾಜನ ನಂತರ ವೀರರಾಜನು ರಾಜನಾಗುವುದನ್ನು ಹೈದರಾಲಿಯು ಒಪ್ಪುವುದಿಲ್ಲ. ವೀರರಾಜ ಮತ್ತು ಅವನ ಸಹೋದರರೆಲ್ಲ ಅಪ್ರಾಪ್ತ ವಯಸ್ಸಿನವರು ಎಂದು ಕಾರಣ ನೀಡಿ ಹೈದರಾಲಿಯು ತಾನೇ ಕೊಡಗನ್ನು ನೇರವಾಗಿ ವಶಪಡಿಸಿಕೊಂಡು, ಕೊಡಗಿನ ಉಸ್ತುವಾರಿಗಾಗಿ ಕರಣಿಕ ಸುಬ್ಬರಾಯ ಎನ್ನುವ ಬ್ರಾಹ್ಮಣನನ್ನು ನೇಮಿಸಿದನು. ಈ ಮಕ್ಕಳಿಲ್ಲ ದೊಡ್ಡವರಾದ ಬಳಿಕ ಅವರಿಗೆ ರಾಜ್ಯ ನೀಡುವುದಾಗಿ ಅವರನ್ನೆಲ್ಲ ಹಾಸನದ ಬಳಿಯ ಗೊರೂರಿಗೆ ಕಾಗಿಸಿದ. ಹೈದರಾಲಿಯ ಮರಣದ ನಂತರ ಟಿಪ್ಪುವು ಅವರೆಲ್ಲರನ್ನು ಪರಿಯಪಟ್ಟಣ ಕೋಟೆಯಲ್ಲಿ ಬಂಧಿಯಾಗಿರಿಸಿದನು(ರಿಕ್ತರ್ ೧೯೮೪: ೨೪೨–೨೫೨)(ಕೃಷ್ಣಯ್ಯ ೧೯೯೫: ೧೩೩–೧೬೧). ನಂತರದ ಕಾಲಘಟ್ಟದಲ್ಲಿ ವೀರರಾಜನು ಕೈಸಗಿ ಮಿತ್ತಿತರರ ಸಹಾಯದಿಂದ ಪರಿಯಪಟ್ಟಣ ಕೋಟೆಯಿಂದ ತಪ್ಪಿಸಿಕೊಂಡು ಕೊಡಗಿಗೆ ಬಂದ ವಿವರವನ್ನು ಈಗಾಗಲೆ ಚರ್ಚಿಸಿದ್ದನ್ನು ಗಮನಿಸಬಹುದಾಗಿದೆ.

ಹೈದರಾಲಿಯನ್ನು ಕೊಡಗಿಗೆ ಕರೆತಂದು ದೇವಪ್ಪರಾಜನ ಹತ್ಯೆಗೆ, ಹೊರಮಲೆನಾಡು ಅರಮನೆಯ ನಾಶಕ್ಕೆ ಮತ್ತು ಹೊರಮಲೆನಾಡು ಹಾಲೇರಿ ವಂಶದ ನಾಶಕ್ಕೆ ವೀರರಾಜನೂ ಕಾರಣನಾಗಿದ್ದನು. ಆ ಸಂದರ್ಭದಲ್ಲಿ ಅವನ ಅಪ್ಪ ಲಿಂಗರಾಜನಿಗೆ ಮತ್ತು ಅವನಿಗೆ ಹೈದರಾಲಿಯ ಸಹವಾಸ ಬಹಳ ಅಪ್ತವಾಗಿದ್ದದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ೧೮ನೆಯ ಶತಮಾನದಲ್ಲಿದ್ದ ಈ ಲಿಂಗರಾಜನನ್ನು ಮೊದಲನೆಯ ಲಿಂಗರಾಜನೆಂದು ಕರೆಯುತ್ತಾರೆ. ಹೈದರಾಲಿಯ ಜೊತೆ ೧೯ ವರ್ಷಗಳ ಕಾಲ ಕೊಡಗು ಸಂಸ್ಥಾನ ಅರ್ಥಾತ್ ಹಾಲೇರಿ ಅರಸರು ಅನ್ಯೋನ್ಯವಾಗಿದ್ದದ್ದನ್ನು ರಾಜೇಂದ್ರನಾಮೆಯು ಸ್ಪಷ್ಟವಾಗಿ ವಿವರಿಸಿದೆ. ಟಿಪ್ಪುವು ಅವನಪ್ಪನ ರೀತಿ ಕೊಡಗಿನೊಂದಿಗೆ ಹಾರ್ದಿಕ ಸಂಬಂಧವನ್ನು ಹೊಂದಿಲ್ಲದ್ದರಿಂದ ಮಿತ್ರತ್ವ ಹೋಗಿ ಶಾಶ್ವತ ಮನೆ ಮಾಡಿತು. ರಾಜತಾಂತ್ರಿಕವಾಗಿ ಹಾಲೇರಿ ಅರಸರು ಹೈದರನಿಗೆ ಸಂಬಂಧಿಸಿದ ಬಗ್ಗೆ ಬಹಳಷ್ಟು ಹೆಮ್ಮೆ ಪಟ್ಟಿದ್ದರೂ ಅವನ ನಡುವಿನ ಎಲ್ಲ ಸಂಬಂಧಗಳು ಅಪ್ತವಾಗಿರಲಿಲ್ಲ. ಹೈದರಾಲಿಯು ಮೈಸೂರು–ಕೆನರಾ–ಕೊಯಮತ್ತೂರುಗಳನ್ನು ಬೆಸೆಯುವ ರಸ್ತೆಯ ಯೋಜನೆಗಾಗಿ ಆಯಕಟ್ಟಿನಲ್ಲಿದ್ದ ಕೊಡಗನ್ನು ವಶಪಡಿಸಿಕೊಳ್ಳಲು

ಹವಣಿಸಿದ್ದ ಎಂದು ವಿಲ್ಕ್ಸ್ ಬರೆದಿದ್ದಾನೆ. ರಾಜೇಂದ್ರನಾಮೆಯಲ್ಲಿ ವೀರರಾಜೇಂದ್ರನು ಹೇಳುವಂತೆ ಹೈದರನ ಕಾಲಾವಧಿಯಲ್ಲಿ ಹೈದರ್ ಮತ್ತು ಕೊಡಗಿನ ಜನರ ಸಂಬಂಧವು ಅನ್ಯೋನ್ಯವಾಗಿರಲಿಲ್ಲ ಎನ್ನುವುದಕ್ಕೆ ವಿಲ್ಕ್ಸ್‌ನು ನೀಡುವ ಮತ್ತೊಂದು ವಿವರಣೆ ಆಸಕ್ತಿದಾಯಕವಾಗಿದೆ. ಅವನ ಪ್ರಕಾರ ಕೊಡಗು ಮತ್ತು ತಿರುವನಂತಪುರ ಬಿಟ್ಟರೆ ಭಾರತ ಉಪಖಂಡದ ಉಳಿದೆಡೆಗಳಲ್ಲಿ ೧/೬ ರಷ್ಟು ಕಂದಾಯವನ್ನು ಆಯಾ ರಾಜ್ಯಗಳು ವಿಧಿಸಿದ್ದವು. ತಿರುವನಂತಪುರ ಮತ್ತು ಕೊಡಗಿನಲ್ಲಿದ್ದ ರೈತರಿಗೆ "ಗುಲಾಮರನ್ನು" ಕೃಷಿಯ ಕೆಲಸಗಳಿಗಾಗಿ ನೀಡಿದ್ದರಿಂದ ಅವರಿಗೆ ಕೇವಲ ೧/೧೦ರಷ್ಟು ಕಂದಾಯವನ್ನು ವಿಧಿಸಲಾಗಿತ್ತು. ಹೈದರ್ ಕೊಡಗನ್ನು ವಶಪಡಿಸಿಕೊಂಡ ಮೇಲೆ ಭಾರತ ಉಪಖಂಡದ ಉಳಿದೆಡೆಗಳಲ್ಲಿದ್ದಂತೆ ೧/೬ರಷ್ಟು "ಹಿಂದೂ" ಕಂದಾಯವನ್ನು ಕೊಡಗಿನ ರೈತರಿಂದ ವಸೂಲು ಮಾಡಲು ಆರಂಭಿಸಿದ. ಹೈದರನು ತನ್ನ ನಂಬಿಗಸ್ಥ ಮುಸ್ಲಿಮ್ ಮತ್ತು ಬ್ರಾಹ್ಮಣ ಅಧಿಕಾರಿಗಳ ಮೂಲಕ ಕೊಡಗನ್ನು ತನ್ನ ಹತೋಟಿಗೆ ತರಲು ಯತ್ನಿಸಿದ. ಅದರ ಭಾಗವಾಗಿಯೇ ಕೊಡಗಿನಲ್ಲಿ ಕಂದಾಯವನ್ನು ವಸೂಲು ಮಾಡುತ್ತಿದ್ದ ಸಣ್ಣ ಪ್ರಮಾಣದ ಅಧಿಕಾರ ವರ್ಗವನ್ನೇ ಇವರು ನಾಶ ಮಾಡಿಬಿಟ್ಟರು. ಹೀಗಾಗಿ ಕೊಡಗಿನ ರೈತರು ಹೈದರನ ವಿರುದ್ಧ ದಂಗೆ ಎದ್ದರು. ಆದರೆ ಹೈದರನು ಕೊಡಗಿನ ರಾಜಧಾನಿ ಮಡಿಕೇರಿಯಲ್ಲಿ ತನ್ನ ಮಿಲಿಟರಿ ಪಡೆಯನ್ನಿಟ್ಟು ಒಂದೇ ಏಟಿಗೆ ಕೊಡಗು ರೈತರ ದಂಗೆಯನ್ನು ಹತ್ತಿಕ್ಕಿದನು. ಈ ದಂಗೆಯು ಸಾರ್ವತ್ರಿಕವಾಗಿದ್ದರೂ ದಂಗೆಯು ಅವಧಿ ಬಹಳ ಕಡಿಮೆಯಾಗಿತ್ತು(ವಿಲ್ಕ್ಸ್ ೧೮೦೬ I: ೧೬೧, ೧೭೬, ೭೧೫–೭೧೬). ಹೀಗಾಗಿ ರಾಜೇಂದ್ರನಾಮೆ ಹೇಳುವ ಹೈದರ್–ಕೊಡಗು ಅರಸರ ಸಂಬಂಧ ಅನ್ಯೋನ್ಯವಾಗಿತ್ತು ಎನ್ನುವುದು ಸರಿಯಲ್ಲ ಅಥವಾ ಅವನೆನ್ನುವಂತೆ ಕೊಡಗಿನ ಅರಸನ ಸಂಬಂಧ ಅನ್ಯೋನ್ಯವಾಗಿತ್ತು ಎಂದುಕೊಂಡರೂ ಅವನ ಪ್ರಜೆಗಳು ಹೈದರನ ವಿರುದ್ಧ ಹೋರಾಡಿದರು ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ.

ಮಾರ್ಕ್ ವಿಲ್ಕ್ಸ್‌ನ ಪ್ರಕಾರ ತನ್ನ ತಂದೆ ಹೈದರ್ ಸತ್ತ ನಂತರ ಕೊಡಗಿನವರು ಕಂದಾಯವನ್ನು ಪಾವತಿಸಲು ನಿರಾಕರಿಸಿದ್ದರಿಂದ, ತಾನು ಕಳುಹಿಸಿದ ಮೈಸೂರಿನ ಅಧಿಕಾರಿಗಳಿಗೆ ಕೊಡಗಿನವರು ಅವಮಾನ ಮಾಡಿ ವಾಪಸ್ಸು ಕಳುಹಿಸಿದ್ದರಿಂದ, ಮತ್ತೆ ಮತ್ತೆ ಕಂದಾಯ ಪಾವತಿಸಲು ಕೊಡಗು ಜನರಿಗೆ ವಿನಮ್ರವಾಗಿ ಕೋರಿಕೊಂಡಾಗ ಅಂತಹ ಮನವಿಗಳ ಕೂಡ ತಿರಸ್ಕರಿಸಿದ್ದರಿಂದ ಕೊಡಗು ಜನರನ್ನು ಟಿಪ್ಪುವು ಮತಾಂತರ ಮಾಡಬೇಕಾದ ತಂತ್ರ ಹೂಡಿದ. ಈ ಮೂಲಕ ಕೊಡಗು ಜನರನ್ನು ತತ್ತರಿಸುವಂತೆ ಮಾಡಿದ ಎನ್ನುವ ವಿಚಾರ ತಿಳಿದುಬರುತ್ತದೆ. "ಧರ್ಮವಿಲ್ಲದ"(infedels)ಅನೇಕರನ್ನು ಈ ಕಾರಣಕ್ಕಾಗಿಯೇ ಸತ್ಯವಾಗಿರುವ ನಂಬುಗೆ(true faith) ಅರ್ಥಾತ್ ಇಸ್ಲಾಂಗೆ ಅನೇಕರನ್ನು ಮತಾಂತರಿಸಲಾಯಿತು ಎನ್ನುವ ಅಂಶವು ಇವನ ಬರವಣಿಗೆಯಲ್ಲಿದೆ

Scanned with OKEN Scanner

ಜನರಲ್ ಅಬರ್‌ಕ್ರಾಂಬಿಯ ಇಂಗ್ಲಿಷ್ ಸರ್ಕಾರಕ್ಕೆ ಪತ್ರ ಬರೆದಿದ್ದನು. ಏರರಾಜನು ಕಾಣೆ "ಎರಡು ಗಾಲಿಗಳಲ್ಲಿ" ಎಂಬ ವಿಚಾರವನ್ನು ಟಿಪ್ಪುವಿಗೆ ತಿಳಿದ್ದನ್ನು ಜನರಲ್ ಅಬರ್‌ಕ್ರಾಂಬಿಯ ಇಂಗ್ಲಿಷ್ ಸರ್ಕಾರಕ್ಕೆ ಪತ್ರ ಬರೆದು ಸರ್ಕಾರದ ಮನವೊಲಿಸಲು ಯತ್ನಿಸಿದ್ದನು. ನಂತರದ ರಾಜಕೀಯ ಬೆಳವಣಿಗೆಯಲ್ಲಿ ಇಂಗ್ಲಿಷರ ವಿರುದ್ಧ ಸೆಣಸುವ ಕಾರಣದಿಂದ ಫ್ರೆಂಚರೊಂದಿಗೆ ಮೈತ್ರಿಯಾಗಲು ಮುಂದಾದ ಟಿಪ್ಪುವಿನ ವಿರುದ್ಧ ಇಂಗ್ಲಿಷರು ತಿರುಗಿಬಿದ್ದರು. ಆ ಬಳಿಕ ಏರರಾಜನು ಇಂಗ್ಲಿಷರೊಂದಿಗೆ ಮುಕ್ತಮನಸ್ಸಿನಿಂದ ಮತ್ತೆ ಕೈಜೋಡಿಸಿದ್ದು ಕಂಡುಬರುತ್ತದೆ.

ಟಿಪ್ಪು ಮತ್ತು ಏರರಾಜನ ನಾಮಿನಲ್ ಧರ್ಮ ಸೂಕ್ಷ್ಮ ಪ್ರಶ್ನೆಗಳು ಒಂದಾದರೆ ಕೊಡಗು ಸೈನಿಕರು ಮತ್ತು ಕೇರಳದ ನಾಯರ್ ಸೈನಿಕರ ಧರ್ಮಸೂಕ್ಷ್ಮಗಳೇ ಬೇರೆಯಾಗಿತ್ತು. ಮೂಲತಃ ಕೊಡಗು ಮತ್ತು ನಾಯರ್ ಜನರು ಹಿಂದೂ ದೇವಾಲಯಗಳನ್ನು ನಂಬುವ ಶ್ರದ್ಧೆಯುಳ್ಳವರು. ಚೆರಕಲ್ ರಾಜನ ಸೈನಿಕರು ತಮ್ಮ ದಾಳಿಯ ಭಾಗವಾಗಿ ಕೊಡಗಿನ ಜನರ ಧಾರ್ಮಿಕ ಶ್ರದ್ಧಾ ಕೇಂದ್ರವಾದ ಪಾಡಿನಾಲ್ಕುನಾಡು ದೇವಸ್ಥಾನವನ್ನು ಆಕ್ರಮಣ ಮಾಡುವರು. ಆಗ ಅದನ್ನು ತಡೆದ ಕೊಡಗಿನ ಜನರಿಂದ "ಬೆಟ್ಟು ತಡೆಯಲಾರದೆ" ನಾಯರ್ ಸೈನಿಕರು ಓಡಿಹೋದರು. ಆ ಸಂದರ್ಭದಲ್ಲಿ ಇಗ್ಗುತ್ತಪ್ಪ ದೇವಸ್ಥಾನಕ್ಕೆ ಬೆಂಕಿಯಿಟ್ಟು ನಾಯರರು ಮಲೆಯಾಳಕ್ಕೆ ಓಡಿಹೋದ ವಿವರ ರಾಜೇಂದ್ರನಾಮೆಯಲ್ಲಿದೆ. ಈಗಿರುವ ಪಾಡಿನಾಲ್ಕುನಾಡು ದೇವಸ್ಥಾನವು ನಂತರ ಜೀರ್ಣೋದ್ಧಾರವಾಗಿರುವ ದೇವಾಲಯವಾಗಿದೆ. ಟಿಪ್ಪುವಿನ ದಂಡನಾಯಕ ಗುಲಾಮಲ್ಲಿಖಾನನು ಇದೇ ಕಾಲಘಟ್ಟದಲ್ಲಿ ಪಯ್ಯನೂರು ದೇವಸ್ಥಾನಕ್ಕೆ ಬೆಂಕಿ ಹಾಕಿದ ಘಟನೆಯನ್ನು ರಾಜೇಂದ್ರನಾಮೆಯಲ್ಲಿ ಕಾಣಬಹುದು. ಹಾಗೆಯೇ ಟಿಪ್ಪುವಿನ ವಶದಲ್ಲಿದ್ದ ಕರಾವಳಿಯ ಉದ್ಯಾವರವನ್ನು ವಶಪಡಿಸಿಕೊಂಡಿದ್ದ ಕೊಡಗು ಜನರು ತಮ್ಮ ವೈರಿಗಳು ಅಡಗಿದ್ದ ಮೀದಿಗೆ ಬೆಂಕಿ ಇಟ್ಟು, ಆ ಊರನ್ನೇ ಲೂಟಿ ಮಾಡಿದ ವಿವರವೂ ರಾಜೇಂದ್ರನಾಮೆಯಲ್ಲಿದೆ. "ಕೊಡಗು ಜನರು ಕಾವೇರಿ ಹೊಳೆ ಒಳಗೆ ಮುನ್ನೂರು ಜನರನ್ನು ಕಡಿದು.. ಬೆಟ್ಟದಪುರ ಸಮೀಪ... ಇನ್ನೂರು ಜನ, ದನಕರು ಕಡಿದು ಹಾಕಿ, ಆ ಕುಶಾಲನಗರದ ಕಿಲ್ಲೇದಾರನ ತಲೆಯನ್ನು ಕುಲ್ಲಟ್ಟಿ ಪೊನ್ನಣ್ಣ ಕಡಿದುಕಂದು ಮಹಾರಾಜರ ಮುಂದೆ ನಿವಾಳಿಸಿದ" ಎನ್ನುವ ಉಲ್ಲೇಖವೂ ರಾಜೇಂದ್ರನಾಮೆಯಲ್ಲಿದೆ. ಈ ಎಲ್ಲ ಘಟನೆಗಳಲ್ಲಿ ಶತ್ರುನಾಶವನ್ನು ಮಾಡುವ ಸಂದರ್ಭದಲ್ಲಿ ದೇವಸ್ಥಾನ, ಮೀದಿಗಳು ನಾಶವಾದದ್ದು, ಬೆಂಕಿಗೆ ಆಹುತಿಯಾದದ್ದು ಆ ಕಾಲಘಟ್ಟದಲ್ಲಾದ ರಾಜಕಾರಣಗಳಿಂದಲೇ. ನಾಯರ್‌ಗಳು ಕೊಡಗಿನ ಪಾಡಿನಾಲ್ಕುನಾಡು ದೇವಸ್ಥಾನವನ್ನು, ಗುಲಾಮಲ್ಲಿಯು ಪಯ್ಯನೂರು ದೇವಸ್ಥಾನವನ್ನು ಹಾಗೂ ಕೊಡಗು ಜನರು ಉದ್ಯಾವರದ ಮೀದಿಯನ್ನು ನಾಶ ಮಾಡಿರುವುದು, ದನಕರುಗಳನ್ನು "ಕಡಿದುಹಾಕಿರುವುದು" ಯುದ್ಧ ರಾಜಕಾರಣದಿಂದ ಉಂಟಾದ

ಹಿಂಸಾತ್ಮಕ ಸನ್ನಿವೇಶದಿಂದ ಎನ್ನುವುದು ಉಚಿತವಾಗಿದೆ. ೧೮ನೆಯ ಶತಮಾನದ ವಿದ್ಯಮಾನಗಳನ್ನು, ಘಟನೆಗಳನ್ನು ಆ ಕಾಲಘಟ್ಟದ ಭೌಗೋಳಿಕ ಮತ್ತು ವಾಸ್ತವಿಕತೆಗಳನ್ನು ಗಮನದಲ್ಲಿಟ್ಟುಕೊಂಡು ಅರ್ಥೈಸುವುದು ಚರಿತ್ರೆಕಾರರಿಗೆ ಕಷ್ಟಕರವಾದ ಪಾಠ. ಆದರೆ ಇಂತಹ ಕಷ್ಟಕರವಾದ ಸಂದರ್ಭವನ್ನು ಎದುರಿಸುವುದು ವೃತ್ತಿಪರ ಚರಿತ್ರೆಕಾರರಿಗೆ ಯಾವತ್ತೂ ಸವಾಲೇ.

ಪರಾಮರ್ಶನ ಗ್ರಂಥಗಳು

೧. ಕಾನರ್ ಲೆಫ್ಟಿನೆಂಟ್. ೧೮೭೦.**ಮೆಮ್ಸ್ ಆಫ್ ಕೂರ್ಗ್ ಸರ್ವೆ ಕಾಮನ್ಲಿ ರಿಟರ್ನ್ಡ್ ಕೂರ್ಗ್, ಕೊಡಗು ಸರ್ವೆ**, ಸಂಪುಟ-೧ ಮತ್ತು ೨. ಬೆಂಗಳೂರು.

೨. ಕೃಷ್ಣಯ್ಯ ಡಿ.ಎನ್. ಮತ್ತು ಸುಬ್ಬರಾಯ ಎಂ.ಎಸ್. ೧೯೫೫(೧೯೫೭).**ಕೊಡಗು ಸಂಸ್ಥಾನದ ರಾಜೇಂದ್ರನಾಮೆ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩. ಕೃಷ್ಣಯ್ಯ ಡಿ.ಎನ್. ೧೯೫೫(೧೯೭೪).**ಕೊಡಗಿನ ಇತಿಹಾಸ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪. ಮನಾನ್ ಅಹಮ್ಮದ್ ಆಸಿಫ್. ೨೦೨೦. **ದಿ ಲಾಸ್ ಆಫ್ ಹಿಂದೂಸ್ತಾನ್ ದಿ ಇನ್ವೆನ್ಷನ್ ಆಫ್ ಇಂಡಿಯ**, ಹಾರ್ವರ್ಡ್ ಯೂನಿವರ್ಸಿಟಿ ಪ್ರೆಸ್, ಲಂಡನ್.

೫. ಫ್ರಾನ್ಸಿಸ್ ಬುಕಾನನ್. ೧೮೦೭.**ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್, ಕೆನರಾ, ಆ್ಯಂಡ್ ಮಲಬಾರ್**, ೩ ಸಂಪುಟಗಳು. ಡೈರೆಕ್ಟರ್ಸ್ ಆಫ್ ದಿ ಈಸ್ಟ್ ಇಂಡಿಯಾ ಕಂಪನಿ ಪ್ರಕಟಣೆ, ಲಂಡನ್.

೬. ಮಾರ್ಕ್ ವಿಲ್ಕ್ಸ್ ಲೆಫ್ಟಿನೆಂಟ್ ಕರ್ನಲ್. ೧೮೧೦. ಸಂಪುಟ-೧. **ಹಿಸ್ಟಾರಿಕಲ್ ಸ್ಕೆಚಸ್ ಆಫ್ ದಿ ಸೌತ್ ಆಫ್ ಇಂಡಿಯಾ ಇನ್ ಪನ್ ಅಟೆಂಪ್ಟ್ ಟು ಟ್ರೇಸ್ ದಿ ಹಿಸ್ಟರಿ ಆಫ್ ಮೈಸೂರ್ ಫ್ರಂ ದಿ ಆರಿಜಿನ್ ಆಫ್ ದಿ ಹಿಂದೂ ಗವರ್ನಮೆಂಟ್ ಆಫ್ ದೆಟ್ ಸ್ಟೇಟ್ ಟು ದಿ ಎಕ್ಸ್ ಪ್ಲಂಕ್ಷನ್ ಆಫ್ ದಿ ಮಹಮ್ಮದನ್ ದೈನಾಸ್ಟಿ ಇನ್ ೧೭೯೯, ಫೌಂಡೆಡ್ ಚೀಫ್ಲೀ ಆನ್ ಇಂಡಿಯನ್ ಅಥಾರಿಟೀಸ್**. ಲಾಂಗ್‌ಮನ್ ಪಬ್ಲಿಷರ್ಸ್, ಲಂಡನ್.

೭. ಮಾರ್ಕ್ ವಿಲ್ಕ್ಸ್ ಕರ್ನಲ್. ೧೮೧೭. ಸಂಪುಟ-೨ ಮತ್ತು ೩. **ಹಿಸ್ಟಾರಿಕಲ್ ಸ್ಕೆಚಸ್ ಆಫ್ ದಿ ಸೌತ್ ಆಫ್ ಇಂಡಿಯಾ ಇನ್ ಪನ್ ಅಟೆಂಪ್ಟ್ ಟು ಟ್ರೇಸ್ ದಿ ಹಿಸ್ಟರಿ ಆಫ್ ಮೈಸೂರ್ ಫ್ರಂ ದಿ ಆರಿಜಿನ್ ಆಫ್ ದಿ ಹಿಂದೂ ಗವರ್ನಮೆಂಟ್ ಆಫ್ ದೆಟ್ ಸ್ಟೇಟ್ ಟು ದಿ ಎಕ್ಸ್ ಪ್ಲಂಕ್ಷನ್ ಆಫ್ ದಿ ಮಹಮ್ಮದನ್ ದೈನಾಸ್ಟಿ ಇನ್ ೧೭೯೯, ಫೌಂಡೆಡ್ ಚೀಫ್ಲೀ ಆನ್ ಇಂಡಿಯನ್ ಅಥಾರಿಟೀಸ್**. ಲಾಂಗ್‌ಮನ್ ಪಬ್ಲಿಷರ್ಸ್, ಲಂಡನ್.

೮. ಮೀರ್ ಹುಸೇನ್ ಕೀರ್ಮಾನಿ. ೧೮೬೪. ಕರ್ನಲ್ ಡಬ್ಲ್ಯು ಮೈಲ್ಸ್(ಪರ್ಶಿಯನ್ ಭಾಷೆಯಿಂದ ಇಂಗ್ಲಿಷ್‌ಗೆ ಅನುವಾದ), **ದಿ ಹಿಸ್ಟರಿ ಆಫ್ ರೀನ್ ಆಫ್ ಟಿಪ್ಪು**

Scanned with OKEN Scanner

ಸುಲ್ತಾನ್ ಬೀಯಿಂಗ್ ಎ ಕಂಟಿನ್ಯುಯೇಶನ್ ಆಫ್ ದಿ ನಿಶಾನಿ ಹೈದರ್, ಓರಿಯಂಟಲ್ ಟ್ರಾನ್ಸ್‌ಲೇಶನ್ ಫಂಡ್, ಲಂಡನ್.

೯. ಮೋಗ್ಲಿಂಗ್ ಎಚ್. ೧೮೫೫.**ಕೂರ್ಗ್ ಮೆಮ್ಸಾ–ಎನ್ ಎಕೌಂಟ್ ಆಫ್ ಕೂರ್ಗ್ ಆ್ಯಂಡ್ ಆಫ್ ದಿ ಕೂರ್ಗ್ ಮಿಷನ್,** ಬ್ಯಾಸೆಲ್ ಮಿಶನ್ ಪ್ರೆಸ್, ಮಂಗಳೂರು.

೧೦. ರಾಮರಾಯ ಬಿ. ಮತ್ತು ಫ.ಗು. ಹಳಕಟ್ಟಿ, ೧೯೪೩.**ಕೊಡಗು ಸಂಸ್ಥಾನದ ರಾಜೇಂದ್ರನಾಮೆ,** ಶಿವಾನುಭವ ಗ್ರಂಥಮಾಲಾ ಸಂಪುಟಗಳು. ಹಿತಚಿಂತಕ ಪ್ರಿಂಟಿಂಗ್ ಪ್ರೆಸ್, ವಿಜಾಪುರ.

೧೧. ರಿಕ್ತರ್ ಜಿ. ೧೯೪೪(೧೮೭೦).**ಗೆಜೆಟಿಯರ್ ಆಫ್ ಕೂರ್ಗ್,** ಬಿ.ಆರ್. ಪಬ್ಲಿಶಿಂಗ್ ಕಾರ್ಪೊರೇಶನ್, ದೆಹಲಿ

೧೨. ವಿಜಯ್ ಪೂಣಚ್ಚ ತಂಬಂಡ. "ಇನ್ನರ್ ಟೆನ್ಸೆನ್ಸ್ ಇನ್ ಜಮ್ಮ ಟೆನ್ಯೂರ್ ಆ್ಯಂಡ್ ದೇರ್ ಇಂಪ್ಯಾಕ್ಟ್ ಆನ್ ದಿ ಸೋಶಿಯಲ್ ಸ್ಟ್ರಕ್ಚರ್ ಆಫ್ ಕೂರ್ಗ್ಸ್(೧೮೦೦ – ೧೯೫೬)," ರಾಮಚಂದ್ರ ಸಿ.ಎನ್.(ಸಂ). ೧೯೯೦. **ಪರ್ಸ್‌ಪೆಕ್ಟಿವ್ಸ್ ಆನ್ ದಕ್ಷಿಣ ಕನ್ನಡ ಆ್ಯಂಡ್ ಕೊಡಗು,** ಮಂಗಳೂರು ವಿಶ್ವವಿದ್ಯಾಲಯ ದಶಮಾನೋತ್ಸವ ಸಂಪುಟ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಕೊಣಾಜೆ.

೧೩. ವಿಜಯ್ ಪೂಣಚ್ಚ ತಂಬಂಡ. ೨೦೧೮.**ಹಾಲೇರಿ ಅರಸ ವೀರರಾಜೇಂದ್ರ ಒಡೆಯರ್ ಅವರು ಬರೆಯಿಸಿದ ರಾಜೇಂದ್ರನಾಮೆ: ಮರು ಓದು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪. ವಿಜಯ್ ಪೂಣಚ್ಚ ತಂಬಂಡ. ೨೦೨೨.**ಅಮರಸುಳ್ಯ ಸಂಗ್ರಾಮ ೧೮೩೭: ಕೊಡಗು ಪಶ್ಚಿಮಘಟ್ಟಗಳ ಚರಿತ್ರೆಯ ಸ್ಥಿತ್ಯಂತರಗಳ ಅಧ್ಯಯನ ಮತ್ತು ವಿಮರ್ಶೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ವಿದ್ಯಾಧರ ಕುಡೆಕಲ್ಲು, "ಕೊಡಗಿನ ಸಾಮರಸ್ಯ–ಸಂಘರ್ಷದ ಕಥನಗಳು," **ವಾರ್ತಾಭಾರತಿ ವಿಶೇಷ ಸಂಚಿಕೆ, ಮಂಗಳೂರು,** ಜನವರಿ ೨೦೨೩.

೧೬. ಶರ್ಮ ತಿ.ತಾ. ೧೯೯(೧೯೭೧).**ಚಾರಿತ್ರಿಕ ದಾಖಲೆಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕಕ

Scanned with OKEN Scanner

ISSN 2278-5043

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚರಿತ್ರೆ ಅಧ್ಯಯನ

ಸಂಪುಟ - ೧೪ ಸಂಚಿಕೆ - ೧ ಜುಲೈ - ಡಿಸೆಂಬರ್ ೨೦೨೨



Scanned with OKEN Scanner

Scanned with OKEN Scanner

ಪ್ರೊ. ಕೆ. ವಿರೂಪಾಕ್ಷಪ್ಪ ಇವರಿಗೆ
ಅರ್ಪಣೆ

18.12.23

ಚರಿತ್ರೆ ವಿಭಾಗದ ಪ್ರಕಟಣೆ

ಚರಿತ್ರೆ ಅಧ್ಯಯನ

ಸಂಪುಟ - ೧೪ ಸಂಚಿಕೆ - ೧
ಜುಲೈ - ಡಿಸೆಂಬರ್ ೨೦೨೨

ಸಂಪಾದಕರು
ಪ್ರೊ. ಎನ್. ಚಿನ್ನಸ್ವಾಮಿ ಸೋಸಲೆ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

Scanned with OKEN Scanner

Publication of Department of History

CHARITRE ADHYAYANA

Bi-Annual Vol-14 Issue-1, July-December-2022

Edited by
Dr. N. Chinnaswamy Sosale
Professor
Department of History
Kannada University, Hampi
Vidyaranya 583 276

Published by
Dr. Shailaja I. Hiremath
Director, Prasaranga
Kannada University, Hampi
Vidyaranya 583 276

Pages: x + ೧೪೨

www.kannadauniversity.org

First Impression: 2023

ISSN 2278-5043

ಚರಿತ್ರೆ ಅಧ್ಯಯನ ಅರ್ಧವಾರ್ಷಿಕ ಪತ್ರಿಕೆ

ಸಂಪುಟ - ೧೪ ಸಂಚಿಕೆ - ೧, ಜುಲೈ - ಡಿಸೆಂಬರ್ ೨೦೨೨

(ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳ ಅಭಿಪ್ರಾಯಗಳಿಗೆ ಲೇಖಕರೇ ಜವಾಬ್ದಾರರು)

© ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೨೩

ಪ್ರಧಾನ ಸಂಪಾದಕರು: **ಡಾ. ಡಿ.ವಿ. ಪರಮಶಿವಮೂರ್ತಿ**

ಸಂಪಾದಕರು: **ಡಾ. ಎನ್. ಚಿನ್ನಸ್ವಾಮಿ ಸೋಸಲೆ**

ಸಂಪಾದಕ ಸಲಹಾ ಮಂಡಲಿ

ಡಾ. ವಿಜಯ್ ಪೂಣಚ್ಚ ತಂಬಂಡ, ಡಾ. ಕೆ. ಮೋಹನ್‌ಕೃಷ್ಣ ರೈ
ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಬಿಡಿ ಪ್ರತಿ: ರೂ. ೧೦೦/- ವಾರ್ಷಿಕ ಚಂದಾ: ವ್ಯಕ್ತಿಗಳಿಗೆ ರೂ. ೧೫೦/-
ಸಂಸ್ಥೆಗಳಿಗೆ ರೂ. ೨೦೦/-

ಅಕ್ಷರ ಸಂಯೋಜನೆ: **ಸುರೇಖಾ ಕಂಪ್ಯೂಟರ್ಸ್, ಕಮಲಾಪುರ**

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
ಮೊ: ೯೪೮೦೧ ೮೯೮೭೦

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ಮೈಸೂರು ಬ್ಯಾಂಕ್ ವೃತ್ತ, ನಂ. ೧, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂ.: ೦೮೦-೨೨೩೭೨೩೫೮

ಮುದ್ರಣ
ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

Scanned with OKEN Scanner

Scanned with OKEN Scanner

ಪರಿವಿಡಿ

ಸಂಪಾದಕರ ಮಾತು / iii

೧. ಭಾರತದ ಚರಿತ್ರೆ ಬರವಣಿಗೆಯ ಸ್ವರೂಪ–ಕೆಲವು ಟಿಪ್ಪಣಿಗಳು / ೧
ಕೆ. ಮೋಹನ್‌ಕೃಷ್ಣ ರೈ

೨. ಮಾತನಾಡಲೇಬೇಕಾದವರ ಚರಿತ್ರೆ : ಚಾರಿತ್ರಿಕ ವಸ್ತುನಿಷ್ಠ ವಿಶ್ಲೇಷಣೆ / ೧೮
ಎನ್. ಚಿನ್ನಸ್ವಾಮಿ ಸೋಸಲೆ

೩. ವಿಜಯನಗರ ರಾಜಧಾನಿ ನಿರ್ಮಾಣದಲ್ಲಿ ವಿದ್ಯಾರಣ್ಯರು :
ದಾಖಲೆಗಳ ಪುನರಾವಲೋಕನ / ೩೨
ಡಿ.ಎನ್. ಯೋಗೀಶ್ವರಪ್ಪ

೪. ಸೊಂಡೂರು ಪರಿಸರದಲ್ಲಿ ಆಳ್ವಿಕೆ ನಡೆಸಿದ ಪಾಳೆಯಗಾರರು ಮತ್ತು
ಘೋರ್ಪಡೆಗಳ ರಾಜಕೀಯ ಚರಿತ್ರೆ / ೬೦
ವಿರೂಪಾಕ್ಷಿ ಪೂಜಾರಹಳ್ಳಿ

೫. ಕನ್ನಡ ನಾಡಲ್ಲಿ ಅಳಿಸಲಾಗದ ಹೆಜ್ಜೆ ಮೂಡಿಸಿದ ಬುಕಾನನ್
ಹಾಗೂ ಇತರೆ ವಿದೇಶಿ ಮಹನೀಯರು / ೭೭
ಎಂ.ಜಿ. ರಂಗಸ್ವಾಮಿ

೬. ಮೈಸೂರು ರಾಜ್ಯ ಮತ್ತು ಮೊಘಲರ ನಡುವಿನ ರಾಜತಾಂತ್ರಿಕ
ಸಂಬಂಧಗಳು : ಒಂದು ವಿಶ್ಲೇಷಣೆ / ೯೪
ಎನ್. ಮಹದೇವಸ್ವಾಮಿ

೭. ಟಿಪ್ಪುವಿನ ಮತಾಂತರ ರಾಜಕಾರಣ ಮತ್ತು ರಾಜೇಂದ್ರನಾಮೆ / ೧೦೧
ವಿಜಯ್ ಪೂಣಚ್ಚ ತಂಬಂಡ

೮. ತುರ್ತುಪರಿಸ್ಥಿತಿ ಸಂದರ್ಭದಲ್ಲಿ ದಲಿತರ ಸ್ಥಿತಿಗತಿ : ಚಾರಿತ್ರಿಕ ವಿಶ್ಲೇಷಣೆ / ೧೨೫
ಎಚ್.ಸಿ. ನರಸಿಂಹರಾಜು

Scanned with OKEN Scanner

೧

ಭಾರತದ ಚರಿತ್ರೆ ಬರವಣಿಗೆಯ ಸ್ವರೂಪ–ಕೆಲವು ಟಿಪ್ಪಣಿಗಳು

ಕೆ. ಮೋಹನ್‌ಕೃಷ್ಣ ರೈ

ಭಾರತ ಎನ್ನುವ ಭೌಗೋಳಿಕ ಅಸ್ಮಿತೆ ಹಲವಾರು ಬಗೆಯ ಸ್ಥಿತ್ಯಂತರಗಳನ್ನು ಕಂಡಿರುವಂಥದ್ದು. ಇದನ್ನು ಭರತಖಂಡ, ಜಂಬೂದ್ವೀಪ, ಹಿಂದೂಸ್ತಾನ್, ಇಂಡಿಯಾ, ಭಾರತ ಮುಂತಾದ ಹೆಸರುಗಳೇ ಸೂಚಿಸುತ್ತವೆ. ಇವೆಲ್ಲವೂ ಕೇವಲ ಹೆಸರುಗಳಾಗಿರದೆ ಅವುಗಳ ಹಿಂದೆ ಅವುಗಳನ್ನು ಸಮರ್ಥಿಸುವ ವ್ಯವಸ್ಥೆಗಳು ಅತ್ಯಂತ ಬಲಿಷ್ಠವಾಗಿಯೇ ಇದ್ದವು. ವರ್ತಮಾನದಲ್ಲೂ ಅವು ಸದ್ದು ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಈ ಕಾರಣದಿಂದಾಗಿ ಭಾರತದ ಚರಿತ್ರೆ ಬರವಣಿಗೆಯು ಆಯಾ ವ್ಯವಸ್ಥೆಯನ್ನು ಸಮರ್ಥಿಸುವ ಹಾಗೂ ಪ್ರತಿಷ್ಠಾಪಿಸುವ ಪ್ರತಿಪಾದನೆಯಾಗಿ ರೂಪುಗೊಳ್ಳಲಾರಂಭಿಸಿತು. ಇದಕ್ಕೆ ಆಯಾ ಚಾರಿತ್ರಿಕ ಸಂದರ್ಭದ ಪ್ರಭುತ್ವಗಳು ಚೌಕಟ್ಟುಗಳನ್ನು ಒದಗಿಸಿದವು. ಈ ಚೌಕಟ್ಟುಗಳು ಪ್ರಭುತ್ವಕೇಂದ್ರಿತ ಚೌಕಟ್ಟುಗಳಾಗಿದ್ದುದರಿಂದ ಬಹುಸಂಖ್ಯಾತ ಪ್ರಜಾವರ್ಗದ ಚರಿತ್ರೆ ಹೊರಗಡೆಗೇ ಉಳಿಯಬೇಕಾಗಿ ಬಂತು. ಬಹುಸಂಖ್ಯಾತ ಪ್ರಜಾವರ್ಗವನ್ನು ಒಳಗೊಳ್ಳದ ಚರಿತ್ರೆ ಬರವಣಿಗೆಗಳು ಸಾಮ್ರಾಜ್ಯದ ಚರಿತ್ರೆಯಾಗಲು ಹೇಗೆ ಸಾಧ್ಯ ಎನ್ನುವ ಪ್ರಶ್ನೆ ಹುಟ್ಟಿಕೊಂಡ ಬಳಿಕ ಚರಿತ್ರೆ ಬರವಣಿಗೆಯ ದಿಕ್ಕು ಬದಲಾಗತೊಡಗಿತು. ರಾಜ್ಯ, ಸಾಮ್ರಾಜ್ಯ ಹಾಗೂ ದೇಶ ಎನ್ನುವುದು ಆಳ್ವಿಕೆ ನಡೆಸುವವರ ಖಾಸಗಿ ಸೊತ್ತು ಎನ್ನುವ ಅಭಿಪ್ರಾಯ ಚರಿತ್ರೆ ಬರವಣಿಗೆಯಲ್ಲಿ ಇತ್ತೀಚಿನವರೆಗೂ ಇತ್ತು.

ಅರಸೊತ್ತಿಗೆಯ ವೈಭವವನ್ನು ಕಣ್ಣು–ಬಾಯಿ ಬಿಟ್ಟು ಆಶ್ಚರ್ಯದಿಂದ ನೋಡುವ ಹಂತ ಒಂದಾದರೆ, ಅದನ್ನೇ ಓದಿ, ಬರೆದು ಸಂಭ್ರಮಿಸುವ ಹಂತ ಇನ್ನೊಂದು. ಇದು ಒಂದಕ್ಕೊಂದು ಪೂರಕವಾಗಿರುವಂಥದ್ದು. ಪ್ರಭುತ್ವ ಬಯಸುವುದು ಕೂಡ ಇದನ್ನೇ. ಪ್ರಶ್ನಿಸುವ ಮನೋಧರ್ಮ ತಪ್ಪು ಹಾಗೂ ಅದು ಅಕ್ಷಮ್ಯ ಅಪರಾಧ ಎನ್ನುವುದು ಪ್ರಭುತ್ವದ ಎಚ್ಚರಿಕೆಯಾಗಿತ್ತು. ಪ್ರಶ್ನಿಸುವುದೆಂದರೆ ಅದು ಹೊಸ ಜ್ಞಾನ

Scanned with OKEN Scanner

ವ್ಯವಸ್ಥೆಯ ಹುಟ್ಟು. ಆದರೆ ಅದಕ್ಕೆ ಅವಕಾಶಗಳಿರಲಿಲ್ಲ. ಆವಾಗಲೇ ಅಸ್ತಿತ್ವದಲ್ಲಿರುವ ಹಾಗೂ ಸಾಮಾಜಿಕ ಒಪ್ಪಿಗೆಯನ್ನು ಪಡೆದಿರುವ ಜ್ಞಾನ ವ್ಯವಸ್ಥೆಯ ವಿಸ್ತರಣೆಗೆ ಮಾತ್ರ ಅವಕಾಶವಿತ್ತು. ಇದೊಂದು ಜ್ಞಾನದ ಮೂಲಕ ಯಜಮಾನಿಕೆಯನ್ನು ಸ್ಥಾಪಿಸುವ ಹಾಗೂ ವಿಸ್ತರಿಸುವ ಪ್ರಭುತ್ವದ ತಂತ್ರವಾಗಿತ್ತು. ಜ್ಞಾನದ ಮೂಲಕ ಗೆಲ್ಲುವ ತಂತ್ರಗಾರಿಕೆ ಯಶಸ್ಸನ್ನು ಕಂಡಿತು. ವಸಾಹತುಶಾಹಿ ಆಳ್ವಿಕೆಯಲ್ಲೂ ಇದೇ ತಂತ್ರಗಾರಿಕೆಯನ್ನು ಅನುಸರಿಸಲಾಯಿತು. ಸಾಮಾಜಿಕ ಹಾಗೂ ಆರ್ಥಿಕ ಅಂತರಗಳನ್ನು ಯಥಾಪ್ರಕಾರ ಕಾಯ್ದುಕೊಂಡು ಹೋಗಲು ಹಾಗೂ ಅಧಿಕಾರ ಸ್ಥಾಪಿಸಲು ಜ್ಞಾನದ ಯಜಮಾನಿಕೆಯ ಸ್ಥಾಪನೆ ಅತ್ಯಾವಶ್ಯಕವಾಗಿತ್ತು.

ಸಾರ್ವಭೌಮ ಎನ್ನುವುದೇ ಯಜಮಾನಿಕೆಯ ಇನ್ನೊಂದು ರೂಪ. ಚರಿತ್ರೆಯಲ್ಲಿ ಸಾರ್ವಭೌಮರಿಗೇನೂ ಕೊರತೆಯಿಲ್ಲ. ಸಾರ್ವಭೌಮರಾಗಲು ನಡೆಸಿದ ಯುದ್ಧಗಳಿಗೆ ಲೆಕ್ಕವೇ ಇಲ್ಲ. ಇದಕ್ಕೆ ಚರಿತ್ರೆಯ ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಎನ್ನುವ ಯಾವುದೇ ಗಡಿಗಳಿಲ್ಲ. ಸಾರ್ವಭೌಮ ಎಂದರೆ ಸರ್ವ ಅಧಿಕಾರವೂ ಕೇಂದ್ರೀಕೃತವಾಗಿರುವ ಸರ್ವಾಧಿಕಾರಿ ಸ್ಥಿತಿ. ಅದು ದರ್ಪಿಷ್ಟವೂ ಆಗಿರಬಹುದು ಅಥವಾ ನಿರಂಕುಶವೂ ಆಗಿರಬಹುದು. ರಾಜಕೀಯ ಸನ್ನಿವೇಶಗಳು ಏರುಪೇರಾದಾಗ ಅದೇ ದರ್ಪಿಷ್ಟತೆ ಉದಾರವಾದಿಯಾಗಿಯೂ ಪರಿವರ್ತನೆ ಹೊಂದಬಹುದು. ಏಕೆಂದರೆ ಅದು ಸೌರ್ವಭೌಮತ್ವದ ಅಸ್ತಿತ್ವದ ಪ್ರಶ್ನೆಯಾಗಿರುತ್ತದೆ. ಸಾಮ್ರಾಜ್ಯಗಳ ಚರಿತ್ರೆಯಲ್ಲಿ ಸಾರ್ವಭೌಮರದ್ದೇ ಅಗ್ರಪಾಲು. ಆಸ್ಥಾನ ಪಂಡಿತರ ಬರವಣಿಗೆಗಳು ಹಾಗೂ ಬಿರುದಾವಳಿಗಳು ಅವರನ್ನು ದೈವತ್ವಕ್ಕೇರಿಸಿರುತ್ತವೆ. ಸಾರ್ವಭೌಮರನ್ನು ಪುರಾಣದ ವ್ಯಕ್ತಿಗಳಿಗೆ ಹೋಲಿಸುವ ಹಾಗೂ ಆ ಮೂಲಕ ಪುರಾಣೀಕರಿಸುವ ಪ್ರಯತ್ನಗಳೂ ನಡೆದವು. ಚರಿತ್ರೆಯ ಪುರಾಣೀಕರಣ ಹಾಗೂ ಪುರಾಣದ ಚರಿತ್ರೀಕರಣ ಪ್ರಕ್ರಿಯೆಗಳು ನಿರಂತರವಾಗಿ ನಡೆದವು. ಈ ಎಲ್ಲ ಪ್ರಯತ್ನಗಳ ಹಾಗೂ ಹೊಸ ಪ್ರಯೋಗಗಳ ಮೂಲಕ ಆಳುವವರ್ಗ ಹಾಗೂ ಅದಕ್ಕೆ ಪೂರಕವಾಗಿದ್ದ ಧಾರ್ಮಿಕ ಪ್ರಭುತ್ವ ಗಟ್ಟಿ ನೆಲೆಯನ್ನು ಕಂಡುಕೊಂಡಿದ್ದೇ ಅಲ್ಲದೆ ತನ್ನ ಪ್ರಭಾವವನ್ನು ವಿಸ್ತರಿಸುತ್ತಾ ಮುಂದುವರಿಯಿತು.

ಪ್ರತಿಯೊಂದು ಅರಸುಮನೆತನದಲ್ಲೂ ದೈವಾಂಶಸಂಭೂತ ರಾಜನೊಬ್ಬನನ್ನು ಕಾಣುವ ಅಥವಾ ಹುಡುಕುವ ಪ್ರಯತ್ನ ಸಾಂಪ್ರದಾಯಿಕ ಚರಿತ್ರೆ ಬರವಣಿಗೆಯಲ್ಲಿ ಸರ್ವೇಸಾಮಾನ್ಯವಾಗಿರುವಂಥದ್ದು. ಅಪರೂಪಕ್ಕೆ ಕೆಲವು ರಾಣಿಯರಿಗೂ ಆ ಪಟ್ಟ ಸಿಕ್ಕಿದೆ. ಅರಸುಮನೆತನಗಳ ಮೂಲವನ್ನು ಅಥವಾ ಹುಟ್ಟನ್ನು ಪೌರಾಣಿಕವಾಗಿಯೇ ಚಿತ್ರಿಸುವುದು ವಾಡಿಕೆಯಾಗಿ ಬಂದಿದೆ. ಇದರ ಹಿಂದೆ ಸಮಾಜದಲ್ಲಿ ಭಿನ್ನವಾಗಿ ಗುರುತಿಸಿಕೊಳ್ಳುವ ಹಾಗೂ ಶ್ರೇಷ್ಠತೆಯನ್ನು ಪ್ರತಿಪಾದಿಸುವ ಅಜೆಂಡಾಗಳು ಸಕ್ರಿಯವಾಗಿರುತ್ತದೆ. ಇದು ಅಖಿಲ ಭಾರತ ಮಟ್ಟದಲ್ಲಿ ಕಂಡುಬರುವ ವಿದ್ಯಮಾನವಾಗಿರುವುದರಿಂದಾಗಿ

Scanned with OKEN Scanner

ಸಾರ್ವಭೌಮರಷ್ಟೇ ಅಲ್ಲದೆ ಸಾಮಂತರು ಕೂಡ ಇದೇ ಮಾದರಿಯನ್ನು ಅನುಸರಿಸುವಂತಾಯಿತು. ರಾಷ್ಟ್ರೀಯ ಮಾದರಿಯ ಸಣ್ಣ ರೂಪವೇ ಪ್ರಾದೇಶಿಕ ಮಾದರಿ ಎಂಬರ್ಥದಲ್ಲಿ 'ಪ್ರದೇಶ'ವನ್ನು ಪರಿಭಾವಿಸಿರುವುದು ಕೂಡ ಇದಕ್ಕೆ ಕಾರಣವಾಯಿತು. ವಿವಿಧ ಜಾತಿಗಳು ಕೂಡ ಐಡೆಂಟಿಟಿಯ ಹೆಸರಿನಲ್ಲಿ ತಮ್ಮ ನಾಯಕರುಗಳನ್ನು ಚರಿತ್ರೆಯಲ್ಲಿ ಹುಡುಕುವ ಹಾಗೂ ಅವರನ್ನು ದೈವತ್ವಕ್ಕೇರಿಸುವ, ವೈಭವೀಕರಿಸುವ ಹಾಗೂ ವರ್ತಮಾನದ ಬದುಕಿಗೆ ಬೆಸೆಯುವ ಕಾರ್ಯದಲ್ಲಿ ತೊಡಗಿದವು. ಈ ಎಲ್ಲ ಪ್ರಯತ್ನಗಳು ಮೇಲ್ನೋಟಕ್ಕೆ ಪರ್ಯಾಯ ಮಾದರಿಗಳಾಗಿ ಕಂಡುಬಂದರೂ, ಸೂಕ್ಷ್ಮವಾಗಿ ಗಮನಿಸುವಾಗ ಸಿದ್ಧಮಾದರಿಗಳ ಮುಂದುವರಿಕೆಯೇ ಆಗಿದೆ. ಅಷ್ಟೇ ಅಲ್ಲದೆ ಅವುಗಳಲ್ಲಿ ರಾಜಕೀಯ ಉದ್ದೇಶಗಳೇ ಪ್ರಧಾನವಾಗಿ ಕಂಡುಬರುತ್ತವೆ.

ಭಾರತದ ಚರಿತ್ರೆ ಬರವಣಿಗೆಯನ್ನು ಸೂಕ್ಷ್ಮವಾಗಿ ಅವಲೋಕಿಸುವಾಗ ಅದು ಕೇವಲ ಭಾರತದ ಚರಿತ್ರೆ ರಚನೆಯ ಉದ್ದೇಶವನ್ನಷ್ಟೇ ಹೊಂದಿರದೆ ಆಯಾ ಸಂದರ್ಭದ ರಾಜಕಾರಣ ಹಾಗೂ ಜ್ಞಾನ ವ್ಯವಸ್ಥೆಯು ಹೊಂದಿದ್ದ ಅಜೆಂಡಾಗಳು ಹಾಗೂ ಹಿತಾಸಕ್ತಿಗಳ ಪ್ರತಿಪಾದನೆಯ ಉದ್ದೇಶವನ್ನೂ ಹೊಂದಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಹಾಗಾಗಿಯೇ ಭಾರತದ ಚರಿತ್ರೆ ವಿವಿಧ ಪಂಥಗಳ ಸೈದ್ಧಾಂತಿಕತೆಗೆ ಅನುಗುಣವಾಗಿ ರಚನೆಗೊಳ್ಳುತ್ತಾ ಹೋಯಿತು. ಈ ಸಂಗತಿಯನ್ನು ಕೇವಲ ರಾಷ್ಟ್ರೀಯ ಚರಿತ್ರೆಯಲ್ಲಷ್ಟೇ ಅಲ್ಲದೆ ಸ್ಥಳೀಯ ಚರಿತ್ರೆಯಲ್ಲೂ ಸಮಾನವಾಗಿಯೇ ಕಾಣಬಹುದಾಗಿದೆ. ಚರಿತ್ರೆಯ ಪ್ರತಿಯೊಂದು ಯುಗವೂ ವರ್ತಮಾನದ ತುರ್ತು ಹಾಗೂ ಅನಿವಾರ್ಯತೆಗಳಿಗೆ ತಕ್ಕಂತೆ ನಿರ್ವಚನೆಗೊಳ್ಳುತ್ತಾ ಹೋಯಿತು. ರಾಷ್ಟ್ರೀಯ–ಸ್ಥಳೀಯ, ಆಧುನಿಕ–ಸಾಂಪ್ರದಾಯಿಕ, ನಾಗರಿಕ–ಅನಾಗರಿಕ, ಆರ್ಯ–ದ್ರಾವಿಡ, ಶಿಷ್ಟ–ಪರಿಶಿಷ್ಟ ಮುಂತಾದ ವಿಂಗಡಣೆಗಳ ಹಿಂದೆ ವ್ಯವಸ್ಥಿತವಾದ ಅಜೆಂಡಾಗಳು ಅಡಕವಾಗಿದ್ದವು. ಉತ್ತರ ಭಾರತ ಹಾಗೂ ದಕ್ಷಿಣ ಭಾರತ ಎನ್ನುವುದು ಕೂಡ ಕೇವಲ ಭೌಗೋಳಿಕ ವಿಂಗಡಣೆಯಾಗಿರದೆ, ಸಾಂಸ್ಕೃತಿಕ ವಿಂಗಡಣೆಯಾಗಿಯೂ ಕಂಡುಬಂತು. ಭೌತಿಕವಾಗಿ ಹಾಗೂ ಬೌದ್ಧಿಕವಾಗಿ ನಡೆದ ಈ ವಿಂಗಡಣೆಯ ಪರಿಣಾಮಗಳನ್ನು ಸಮಕಾಲೀನ ಸಂದರ್ಭದಲ್ಲಿಯೂ ಕಾಣಬಹುದಾಗಿದೆ. ಭಾರತದ ಚರಿತ್ರೆ ಬರವಣಿಗೆಯೂ ಆರಂಭಿಕ ಹಂತದಲ್ಲಿ ಉತ್ತರ ಭಾರತ ಕೇಂದ್ರಿತವಾಗಿಯೇ ಕಂಡುಬಂತು. ದಕ್ಷಿಣ ಭಾರತದ ಚರಿತ್ರೆಯ ಕೆಲವು ಆಯ್ದ ವಿಷಯಗಳಷ್ಟೆ ದಾಖಲುಗೊಂಡವು. ಇನ್ನು ಸ್ಥಳೀಯ ಸಣ್ಣಪುಟ್ಟ ಸಂಸ್ಥಾನಗಳ ಚರಿತ್ರೆ ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೆ ಒಳಗಾಯಿತು. ದಕ್ಷಿಣ ಭಾರತಕ್ಕೇನು ಚರಿತ್ರೆಯಿದೆ ಎನ್ನುವ ಧೋರಣೆ ತೀರ ಇತ್ತೀಚಿನವರೆಗೂ ಇತ್ತು. ಆದರೆ ಭಾರತದ ಆರ್ಥಿಕ ಚರಿತ್ರೆ ಅಧ್ಯಯನ ಪ್ರಾಮುಖ್ಯತೆಯನ್ನು ಪಡೆದುಕೊಳ್ಳಲಾರಂಭಿಸಿದ ಮೇಲೆ ದಕ್ಷಿಣ ಭಾರತದ ಮಹತ್ವ ತಿಳಿದು ಬರಲಾರಂಭಿಸಿತು.

Scanned with OKEN Scanner

ಪೂರ್ವಗ್ರಹಪೀಡಿತ ಚರಿತ್ರೆ ಬರವಣಿಗೆಗಳು ತಪ್ಪು ವ್ಯಾಖ್ಯಾನಗಳಿಗೆ ಹಾಗೂ ಅಚಾರಿತ್ರಿಕ ವಾದಗಳಿಗೆ ಎಡೆಮಾಡಿ ಕೊಡುವುದರ ಮೂಲಕ ಚರಿತ್ರೆಯ ವ್ಯಾಖ್ಯಾನ ಹಾಗೂ ಮಹತ್ವವನ್ನು ಕುಗ್ಗಿಸುತ್ತಿರುತ್ತವೆ. ಅವು ತಮ್ಮ ಮೂಗಿನ ನೇರಕ್ಕೇ ಚರಿತ್ರೆಯನ್ನು ವ್ಯಾಖ್ಯಾನಿಸಿ ಅದನ್ನೇ ಅಂತಿಮ ಸತ್ಯ ಎಂಬುದಾಗಿ ಪ್ರತಿಪಾದಿಸುತ್ತಿರುತ್ತವೆ. ಅಷ್ಟೇ ಅಲ್ಲದೆ ತಮ್ಮ ವರ್ತಮಾನದ ತುರ್ತಗಳಿಗೆ ಪರಿಹಾರವೆಂಬಂತೆ ಚರಿತ್ರೆಯ ಆಯ್ದ ಕಾಲಘಟ್ಟಗಳನ್ನು ಇಲ್ಲವೇ ಘಟನೆಗಳನ್ನು ವೇದಿಕೆಗಳನ್ನಾಗಿ ಬಳಕೆ ಮಾಡುತ್ತಿರುತ್ತವೆ. ಇದಕ್ಕೆ ಭಾರತದ ಶ್ರೇಣೀಕೃತ ಸಾಮಾಜಿಕ ರಚನೆ ಹಾಗೂ ವಿದೇಶಿ ಶಕ್ತಿಗಳ ಪ್ರಭಾವ ಪ್ರಮುಖ ಕಾರಣವಾಗಿ ಕಂಡುಬರುತ್ತದೆ. ಸಮಾಜ ಯಾವ ರೀತಿಯಲ್ಲಿ ರೂಪುಗೊಂಡಿದೆ ಹಾಗೂ ಸಾಮಾಜಿಕ ಸಂಬಂಧಗಳು ಯಾವ ರೀತಿ ಏರ್ಪಟ್ಟಿವೆ ಎನ್ನುವುದರ ಮೇಲೆ ಸಾಮಾಜಿಕ ವ್ಯವಸ್ಥೆ ನಿರ್ಧರಿತವಾಗಿರುತ್ತದೆ. ಮಾನವ ಮಾತ್ರ ಪ್ರಕೃತಿಯ ಸೃಷ್ಟಿ ಸಾಮಾಜಿಕ ರಚನೆ ಮಾನವ ಸೃಷ್ಟಿ ಎಂಬುದಂತೂ ವಾಸ್ತವ ಸಂಗತಿ. ಹಾಗಾಗಿ ವರ್ಣ ವ್ಯವಸ್ಥೆ, ಜಾತಿ ವ್ಯವಸ್ಥೆ, ಧಾರ್ಮಿಕ ರಚನೆಗಳು ಹಾಗೂ ದಾಸ್ಯರೂಪಿ ಸಂಬಂಧಗಳೆಲ್ಲವೂ ಮಾನವ ವಿಕಾಸದಲ್ಲಿ ಉದ್ದೇಶಪೂರ್ವಕವಾಗಿ ಹಾಗೂ ಪ್ರಜ್ಞಾಪೂರ್ವಕವಾಗಿ ಹುಟ್ಟುಹಾಕಿದ ವ್ಯವಸ್ಥೆಗಳೇ ಆಗಿವೆ. ಈ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂತರಗಳು, ಅಸಮಾನ ಸಾಮಾಜಿಕ ರಚನೆಗಳು, ಅರಸು ಆರಾಧನೆ ಹಾಗೂ ದಾಸ್ಯರೂಪಿ ಸಂಬಂಧಗಳು ಚರಿತ್ರೆಯ ಪ್ರತಿಯೊಂದು ಅವಧಿಯಲ್ಲಿಯೂ ನಿರ್ಣಾಯಕವಾಗಿ ಕಾಣಿಸಿಕೊಂಡು ಹಲವಾರು ಬಗೆಯ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ವಿಂಗಡಣೆಗಳಿಗೆ ಕಾರಣವಾದವು. ಈ ವಿಂಗಡಣೆಗಳೆಲ್ಲವನ್ನೂ ಅಧಿಕೃತಗೊಳಿಸುವ, ಶಾಸನಬದ್ಧಗೊಳಿಸುವ ಹಾಗೂ ಸಾಮಾಜಿಕ ಒಪ್ಪಿಗೆಯನ್ನು ಪಡೆಯುವ ಕಾರ್ಯಗಳು ಜೊತೆಜೊತೆಗೇ ನಡೆದವು. ಈ ಕಾರಣಕ್ಕಾಗಿಯೇ 'ದೇವಲೋಕ' ಅಥವಾ 'ದೇವತಾಲೋಕ'ವನ್ನು ಸೃಷ್ಟಿಸಿ, ಅದಕ್ಕೆ ಪೂರಕವಾದ ಪುರಾಣಗಳನ್ನು ರಚಿಸಿ ಹಾಗೂ ಆ ಮೂಲಕ ಲೌಕಿಕ ಬದುಕನ್ನು ನಿಯಂತ್ರಿಸುವ ಬಲಿಷ್ಠವಾದ ಅಲೌಕಿಕ ಜಗತ್ತನ್ನು ಸೃಷ್ಟಿಸಲಾಯಿತು.

ಭಾರತದ ಚರಿತ್ರೆ ಬರವಣಿಗೆಯಲ್ಲಿ 'ಅಲೌಕಿಕ ಜಗತ್ತು' ಆರಂಭದಿಂದಲೂ ಸೃಷ್ಟಿಗೊಳ್ಳುತ್ತಲೇ ಬಂದಿದೆ. ಸಿಂಧೂ ನದಿ ನಾಗರಿಕತೆಯಿಂದ ಸ್ವಾತಂತ್ರ್ಯ ಹೋರಾಟದವರೆಗೂ ಪೌರಾಣಿಕ ಪಾತ್ರಗಳು ಪ್ರತಿಮೆಗಳಾಗಿ ಹಾಗೂ ರೂಪಕಗಳಾಗಿ ಚರಿತ್ರೆ ನಿರ್ಮಾಣದ ವಸ್ತುಸಂಗತಿಗಳಾಗಿಯೇ ಗುರುತಿಸಿಕೊಂಡವು. ಅಲೌಕಿಕ ಜಗತ್ತು ಲೌಕಿಕ ಜಗತ್ತಿನ ವಿಸ್ತರಣೆಯೇ ಹೊರತು ಅದು ಪ್ರತ್ಯೇಕ ವ್ಯವಸ್ಥೆಯಲ್ಲ. ಮಾನವ ಲೋಕದ ರೀತಿಯಲ್ಲಿಯೇ ದೇವಲೋಕವು ಚಿತ್ರಿತವಾಗಿದೆ. ಆದರೆ ಲೌಕಿಕ ರಾಜಕಾರಣಕ್ಕಾಗಿ ಅಲೌಕಿಕ ಜಗತ್ತನ್ನು ತೀರ್ಪು ನೀಡುವ ನ್ಯಾಯಾಲಯದಂತೆ ಚಿತ್ರಿಸಲಾಯಿತು. ಸಾಮಾಜಿಕ ಕಟ್ಟುಪಾಡುಗಳನ್ನು ಹಾಗೂ ಸಂಪ್ರದಾಯಗಳನ್ನು

Scanned with OKEN Scanner

ಮೀರಿದರೆ ಲೌಕಿಕಕ್ಕಿಂತಲೂ ಘೋರವಾದ ಶಿಕ್ಷೆ ಅಲೌಕಿಕದಲ್ಲಿದೆ ಎನ್ನುವ ಭಯವನ್ನು ಮೂಡಿಸಲಾಯಿತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಭಯವನ್ನು ಮೂಡಿಸಿರುವುದು ಸಮಾಜದ ಕೆಳಸ್ತರದ ಜನತೆಯ ಮೇಲೆ ಎನ್ನುವುದನ್ನು ಒಟ್ಟಾರೆ ಪ್ರಜಾವರ್ಗವೇ ಈ ತಂತ್ರದೊಳಗೆ ಸಿಕ್ಕಿ ಹಾಕಿಕೊಂಡಿತು. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಮಧ್ಯಕಾಲೀನ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡುಬರುವ ವಿವಿಧ ಸ್ವರೂಪದ ಮರಣ ಪದ್ಧತಿಗಳು. ಪ್ರಭುತ್ವವು ತನ್ನ ರಕ್ಷಣೆಗಾಗಿ ಹಾಗೂ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕಾಗಿ ನಿಷ್ಠಾವಂತ ಯೋಧ ಪಡೆಯೊಂದನ್ನು ಹೊಂದಿರುತ್ತಿತ್ತು. ಆ ಯೋಧರನ್ನು ವೀರರೆಂಬುದಾಗಿ ಕರೆದು ವೀರಪರಂಪರೆಯೊಂದನ್ನು ಹುಟ್ಟು ಹಾಕಲಾಯಿತು. ಹೀಗೆ ವೀರಮರಣ ಎನ್ನುವ ಸ್ವಾಮಿನಿಷ್ಠೆಯ ಅಲೌಕಿಕ ಪ್ರಪಂಚವೊಂದನ್ನು ಸೃಷ್ಟಿಸಲಾಯಿತು. ಗರುಡರು, ಲೆಂಕರು, ಜೋಳವಾಲಿ, ವೇಳೆವಾಳಿ, ಕೀಳ್ಗುಂಟೆ ಮುಂತಾದ ಈ ಕುರಿತಾದ ಉಲ್ಲೇಖಗಳು ಸಾಕಷ್ಟು ಕಂಡುಬರುತ್ತವೆ. ತಮ್ಮ ಒಡೆಯ ಸತ್ತಾಗ ತಾವೂ ಸಾವಿಗೆ ಶರಣಾಗುವ ಮಾನಸಿಕ ಸ್ಥಿತಿಯನ್ನು ಹುಟ್ಟು ಹಾಕಲಾಗಿತ್ತು. ಇನ್ನು ಇದೇ ಸ್ವರೂಪದ ಇನ್ನೊಂದು ಮರಣ ಪದ್ಧತಿಯಾದ ಸತಿ ಸಹಗಮನವೂ ಪುರುಷಪ್ರಧಾನ ಸಮಾಜದ ಸೃಷ್ಟಿ. ಇಲ್ಲೂ ಗಂಡು ಅಥವಾ ಗಂಡ ಎಂದರೆ ಒಡೆಯ ಎಂಬರ್ಥದಲ್ಲಿಯೇ ನೋಡಲಾಗಿದೆ. ಗಂಡ ಸತ್ತಾಗ ಹೆಣ್ಣನ್ನು ಜೀವಂತ ಸುಡುವ ಹಾಗೂ ಸತ್ತ ಮೇಲೆ ಮಹಾಸತಿಯಾಗಿ ಆರಾಧಿಸುವ ಪರಂಪರೆಯೂ ಹುಟ್ಟಿಕೊಂಡಿತು. ಹೆಣ್ಣನ್ನು ಒಂದೋ ದೇವರಾಗಿ, ಇಲ್ಲವೇ ದಾಸಿಯಾಗಿ ನೋಡುವ ಪರಂಪರೆ ಮಾತ್ರ ಬೆಳೆದುಬಂತು. ಮಾಸ್ತಿ ಮರಣ ಅಥವಾ ಸತಿಪದ್ಧತಿಯನ್ನು ಅಧಿಕಾರಕೇಂದ್ರಿತ ಎಲ್ಲ ವ್ಯವಸ್ಥೆಗಳೂ ಪೋಷಿಸಿಕೊಂಡು ಬಂದವು. ಈ ಎಲ್ಲ ಬಗೆಯ ಮರಣ ಪದ್ಧತಿಗಳನ್ನು ಅಧಿಕೃತಗೊಳಿಸುವ ಧಾರ್ಮಿಕ ಹಾಗೂ ಸಾಮಾಜಿಕ ಚೌಕಟ್ಟನ್ನು ನಿರ್ಮಾಣಗೊಳಿಸಲಾಗಿತ್ತು. ಪ್ರಜೆಗಳು ಈ ಚೌಕಟ್ಟನ್ನು ಮೀರುವ ಹಾಗಿರಲಿಲ್ಲ, ಹಾಗೆಯೇ ತಮ್ಮ ಕರ್ತವ್ಯ ಎನ್ನುವ ರೀತಿಯಲ್ಲಿ ಪಾಲಿಸಬೇಕಾಗಿತ್ತು. ಈ ಸಾಂಸ್ಕೃತಿಕ ರಾಜಕಾರಣದ ಹಿಂದೆ ಸಾಂಸ್ಕೃತಿಕ ಯಜಮಾನಿಕೆ ಸ್ಥಾಪನೆಯ ಉದ್ದೇಶ ಅಡಕವಾಗಿತ್ತು. ಈ ಉದ್ದೇಶಕ್ಕಾಗಿ ಅಲೌಕಿಕತೆ, ಪುರಾಣ, ಅಧಿಕಾರ, ಲಿಂಗತ್ವ, ಭಾಷೆ, ಶಿಕ್ಷಣ, ಲಿಖಿತತೆ ಮುಂತಾದವೆಲ್ಲವೂ ವೇದಿಕೆಗಳಾಗಿ ಬಳಕೆಯಾದವು. ಅಷ್ಟೇ ಅಲ್ಲದೆ ಅವು ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸುವ ಮಾನದಂಡಗಳಾಗಿಯೂ ಗುರುತಿಸಿಕೊಂಡವು. ದೇವರನ್ನು ಪೂಜಿಸುವ, ಸಾಹಿತ್ಯ ರಚಿಸುವ, ಭೂಮಿಯನ್ನು ಹೊಂದುವ, ಅಧಿಕಾರ ಹಾಗೂ ಸವಲತ್ತುಗಳನ್ನು ಪಡೆಯುವ, ಶಿಕ್ಷಣ ಪಡೆಯುವ, ಕ್ಷತ್ರಿಯರಾಗುವ ಹಾಗೂ ಅರಸೊತ್ತಿಗೆಯನ್ನೇರುವ ಅರ್ಹತೆಗಳು ಮೊದಲೇ ನಿಗದಿಯಾಗಿದ್ದವು. ಅದಕ್ಕೆ ಪೂರಕವೆಂಬಂತೆ ಪಾಪ–ಪುಣ್ಯ, ಮಡಿ–ಮೈಲಿಗೆ, ಸ್ವರ್ಗ–ನರಕ ಹಾಗೂ ಮೋಕ್ಷದ ಕಲ್ಪನೆಗಳೂ ಹುಟ್ಟಿಕೊಂಡವು. ಹಾಗಾಗಿ ಇವೆಲ್ಲವೂ ಸಾಮಾಜಿಕ ನಿಯಂತ್ರಣ, ಅಧಿಕಾರ

Scanned with OKEN Scanner

ಸ್ಥಾಪನೆ ಹಾಗೂ ಭೂಮಿಯ ಒಡೆತನದಂಥ ಖಚಿತವಾದ ಉದ್ದೇಶಗಳನ್ನು ಇಟ್ಟುಕೊಂಡೇ ಹುಟ್ಟಿರುವಂಥವು ಎನ್ನುವುದಂತು ಸ್ಪಷ್ಟ.

ಪ್ರಭುತ್ವವು ಯಾವ ಸ್ವರೂಪದ್ದೇ ಆಗಿದ್ದರೂ ಅದು ಪ್ರಜೆಗಳನ್ನು ಅಧಿಕಾರ ಹಾಗೂ ಧರ್ಮದ ಮೂಲಕ ಹಿಡಿದಿಟ್ಟುಕೊಳ್ಳುವ ಪ್ರಯತ್ನವನ್ನು ನಡೆಸುತ್ತಲೇ ಇರುತ್ತದೆ. ಪ್ರಭುತ್ವದ ಅಸ್ತಿತ್ವ ಹಾಗೂ ಅದರ ಮುಂದುವರಿಕೆಗೆ ಈ ಪ್ರಯತ್ನ ಅನಿವಾರ್ಯವೂ ಆಗಿತ್ತು. ಯುದ್ಧದಿಂದ ವೈರಿಗಳನ್ನು ಗೆಲ್ಲಬಹುದೇ ಹೊರತು ಪ್ರಜೆಗಳನ್ನಲ್ಲ. ಪ್ರಜೆಗಳನ್ನು ಗೆಲ್ಲುವ ತಂತ್ರಗಳು ಬೇರೆಯೇ ಇದ್ದವು. 'ರಾಜಾ ಪ್ರತ್ಯಕ್ಷ ದೇವತೆ' ಎನ್ನುವ ಮಾತು ಈ ಕಾರಣಕ್ಕಾಗಿಯೇ ಹುಟ್ಟಿಕೊಂಡಿರಬೇಕು. ಧಾರ್ಮಿಕ ಸಾಮರಸ್ಯ, ಧಾರ್ಮಿಕ ಸಹಿಷ್ಣುತೆ ಮುಂತಾದ ವಿವಿಧ ಜಾತಿ ಹಾಗೂ ಧರ್ಮಗಳ ಜನರನ್ನು ಗೆಲ್ಲುವ ತಂತ್ರಗಳು ಕೂಡ ಪ್ರಭುತ್ವಕ್ಕೆ ಅನಿವಾರ್ಯವಾಗಿತ್ತು. ಯುದ್ಧದಿಂದ ಗೆಲ್ಲಲು ಸಾಧ್ಯವಾಗದ್ದೇ ಇರುವುದನ್ನು ಧರ್ಮದ ಮೂಲಕ ಗೆಲ್ಲಬಹುದು ಎನ್ನುವುದಕ್ಕೆ ಸಾಕಷ್ಟು ನಿದರ್ಶನಗಳು ಚರಿತ್ರೆಯಲ್ಲಿ ಸಿಗುತ್ತವೆ. ಯುದ್ಧದಿಂದ ಸ್ಥಾಪನೆಗೊಳ್ಳುವ ಸರ್ವಾಧಿಕಾರಕ್ಕಿಂತ ಧರ್ಮದ ಮೂಲಕ ಸ್ಥಾಪನೆಗೊಳ್ಳುವ ಸರ್ವಾಧಿಕಾರವೇ ಹೆಚ್ಚು ಬಲಿಷ್ಠವಾದದ್ದು ಎನ್ನುವ ಕುರಿತು ಚರಿತ್ರೆಯಲ್ಲಿ ಸಾಕಷ್ಟು ಅಧ್ಯಯನಗಳೂ ನಡೆದಿವೆ. ಆದರೆ ಧರ್ಮದ ಮೂಲಕ ಜನರನ್ನು ಹಿಡಿದಿಟ್ಟುಕೊಳ್ಳುವ ಪ್ರಯತ್ನ ಎಷ್ಟೊಂದು ಅಪಾಯಕಾರಿ ಎನ್ನುವುದರ ಕಡೆಗೆ ಆಲೋಚನೆ ನಡೆಸಿದಾಗ ಧಾರ್ಮಿಕ ಗುಲಾಮಗಿರಿ ಎದ್ದು ಕಾಣಿಸುತ್ತದೆ. ಆದರೆ ಪ್ರಭುತ್ವ ಹಾಗೂ ಧರ್ಮದ ವೈಭವೀಕರಣವೇ ಅಂತಿಮ ಉದ್ದೇಶವಾಗಿದ್ದಾಗ ಅದರ ಇನ್ನೊಂದು ಮುಖದ ಅಧ್ಯಯನ ಸಾಧ್ಯವಿಲ್ಲ. ದೈಹಿಕವಾಗಿ ಹಾಗೂ ಮಾನಸಿಕವಾಗಿ ಪ್ರಜೆಗಳನ್ನು ಪ್ರಭುತ್ವಕ್ಕೆ ಪೂರಕವಾಗಿ ವರ್ತಿಸುವಂತೆ ಮಾಡುವುದೇ ಮೊದಲ ಆದ್ಯತೆಯಾಗಿತ್ತು. ಸಾಹಿತ್ಯ ರಚನೆಗಳು ಕೂಡ ಅದಕ್ಕೆ ಪೂರಕವಾಗಿಯೇ ನಡೆದವು. ಇದಕ್ಕೆ ವಿರೋಧಗಳು ಇರಲಿಲ್ಲ ಅಥವಾ ಇದನ್ನು ಎಲ್ಲರೂ ಒಪ್ಪಿಕೊಂಡಿದ್ದರು ಎಂದಲ್ಲ. ವಿರೋಧಗಳು ಬಹುತೇಕ ಮೌನ ವಿರೋಧಗಳೇ ಆಗಿರುತ್ತಿದ್ದವು. ಶಿಕ್ಷೆಯ ವಿಚಾರದಲ್ಲಿ ಇನ್ನಷ್ಟು ದರ್ಪಿಷ್ಟವಾಗಿರುತ್ತಿದ್ದ ಪ್ರಭುತ್ವ ವಿರೋಧವನ್ನು ಸಹಿಸುತ್ತಿರಲಿಲ್ಲ. ಮೋಕ್ಷ ಸಾಧನೆ ಅಥವಾ ಮೋಕ್ಷ ಪ್ರಾಪ್ತಿಯ ಕುರಿತಾಗಿಯೇ ಬೋಧಿಸುತ್ತಿದ್ದ ಧಾರ್ಮಿಕ ಸಿದ್ಧಾಂತಗಳು ರಾಜಪ್ರಭುತ್ವವನ್ನು ಇನ್ನಷ್ಟು ಗಟ್ಟಿಗೊಳಿಸಿದವು. ಪ್ರಭುತ್ವಕೇಂದ್ರಿತ ಅಧ್ಯಯನಗಳು ಈ ವಸ್ತುಸಂಗತಿಗಳಿಗೇ ಜೋತುಬಿದ್ದವು.

ಚರಿತ್ರೆ ಪ್ರಭುತ್ವಕೇಂದ್ರಿತವಾಗಿಯೇ ರಚನೆಗೊಳ್ಳುವುದಕ್ಕೆ ಹಾಗೂ ಅಖಂಡ ನಿರೂಪಣೆಗಳ ಮೂಲಕವೇ ಪ್ರಕಟಗೊಳ್ಳುವುದಕ್ಕೆ ಸ್ಥಳೀಯ ಸಾಮಾಜಿಕ ರಚನೆ ಹಾಗೂ ಸಾಂಸ್ಕೃತಿಕ ರಾಜಕಾರಣ ಒಂದು ಕಾರಣವಾಗಿ ಕಂಡುಬಂದರೆ, ಅಷ್ಟೇ ಪ್ರಬಲವಾದ ಇನ್ನೊಂದು ಕಾರಣವೆಂದರೆ ಪಾಶ್ಚಿಮಾತ್ಯ ಪ್ರಭಾವ. ಭಾರತಕ್ಕೆ ಪಾಶ್ಚಿಮಾತ್ಯ ಪ್ರಭಾವ ಹೊಸದೇನಲ್ಲ. ಪ್ರಾಚೀನದಿಂದ ಆಧುನಿಕ ಸಂದರ್ಭದವರೆಗೂ ಭಾರತ

Scanned with OKEN Scanner

ವಿದೇಶಿ ವ್ಯಾಪಾರ ಶಕ್ತಿಗಳೊಂದಿಗೆ ಮುಖಾಮುಖಿಯಾಗುತ್ತಲೇ ಬಂದಿದೆ. ಈ ಮುಖಾಮುಖಿಯು ಭಾರತದ ರಾಜಕಾರಣ, ಸಮಾಜ, ಆರ್ಥಿಕತೆ ಹಾಗೂ ಸಾಂಸ್ಕೃತಿಕ ಬದುಕಿನ ಮೇಲೆ ಗಾಢವಾದ ಪ್ರಭಾವವನ್ನು ಬೀರಿದ್ದಂತೂ ನಿಜ. ಮೊದಲೇ ವರ್ಣ, ವೃತ್ತಿ, ಜಾತಿ, ಮತ/ಪಂಥಗಳ ಆಧಾರದ ಮೇಲೆ ಒಡೆದುಹೋಗಿದ್ದ ಭಾರತೀಯ ಸಮಾಜವು ವಿದೇಶಿ ಮುಖಾಮುಖಿಯ ಪರಿಣಾಮವಾಗಿ ಇನ್ನಷ್ಟು ಗೊಂದಲಗಳನ್ನು ಹಾಗೂ ಸಾಮಾಜಿಕ ವಿಂಗಡಣೆಗಳನ್ನು ಕಾಣಬೇಕಾಗಿ ಬಂತು. ಎಲೀಟ್ ಹಾಗೂ ಸಬಾಲ್ಟರ್ನ್ ಸಮುದಾಯಗಳು ಈ ಎರಡೂ ಅವಸ್ಥೆಗಳಲ್ಲಿ ಪ್ರಮುಖವಾಗಿ ಕಂಡುಬರುವಂಥವು. ಸಮಾಜದ ಎಲೀಟ್ ಹಾಗೂ ಲಿಖಿತ ನೆಲೆ ಬದಲಾಗುತ್ತಿರುವ ಸಂದರ್ಭಕ್ಕೆ ತಕ್ಕಂತೆ ತನ್ನನ್ನು ತಾನು ಸಜ್ಜುಗೊಳಿಸುವಲ್ಲಿ ಯಶಸ್ವಿಯಾದರೆ, ಕೆಳಸಮುದಾಯಗಳು ಅತಂತ್ರ ಸ್ಥಿತಿಯನ್ನು ಎದುರಿಸಬೇಕಾಯಿತು. ಇವುಗಳ ಆಧಾರದ ಮೇಲೆಯೇ ಚರಿತ್ರೆಯೂ ರಚನೆಗೊಳ್ಳುತ್ತಾ ಹೋಯಿತು. ಹಾಗಾಗಿಯೇ ಚರಿತ್ರೆ ಬರವಣಿಗೆಯಲ್ಲಿಯೂ ಸಮಾಜದ ಎಲೀಟ್ ನೆಲೆಗಳು ಪ್ರಧಾನವಾಗಿ ಗುರುತಿಸಿಕೊಳ್ಳುವಂತಾಯಿತು. ಬರವಣಿಗೆಯ ಹಿಂದೆ ಶ್ರೇಷ್ಠತೆಯ ಪ್ರತಿಪಾದನೆ ಮುಖ್ಯವಾಗಿರುವಾಗ ಬರವಣಿಗೆಗೆ ಆಯ್ಕೆಗೊಳ್ಳುವ ವಸ್ತುಸಂಗತಿಗಳೂ ಶ್ರೇಷ್ಠತೆಯಿಂದ ಕೂಡಿರುವಂಥವೇ ಆಗಿರುತ್ತವೆ. ಪುರೋಹಿತಶಾಹಿಕೇಂದ್ರಿತ ಹಾಗೂ ಯುರೋಪ್‌ಕೇಂದ್ರಿತ ಚಿಂತನಾ ಕ್ರಮಗಳು ಈ ಬಗೆಯ ಅಧ್ಯಯನ ವಿಧಾನ ಹಾಗೂ ಸಿದ್ಧಾಂತಗಳನ್ನು ಹುಟ್ಟು ಹಾಕಿದವು. ಪಶ್ಚಿಮ ಶ್ರೇಷ್ಠ ಎನ್ನುವ ಆಲೋಚನೆ ಒಂದಾದರೆ, ಪೂರ್ವದಲ್ಲಿ ಪುರೋಹಿತಶಾಹಿ ಹಾಗೂ ವೈದಿಕ ಸಾಹಿತ್ಯ ಶ್ರೇಷ್ಠ ಎನ್ನುವ ಆಲೋಚನೆ ಇನ್ನೊಂದು. ಆರಂಭದಲ್ಲಿ ಸಂಸ್ಕೃತ ಹಾಗೂ ನಂತರದ ಅವಧಿಯಲ್ಲಿ ಇಂಗ್ಲಿಶ್ ಈ ಎರಡೂ ಭಾಷೆಗಳ ಭಾಷಿಕ ಯಜಮಾನಿಕೆಯನ್ನು ಕೂಡ ಈ ಹಿನ್ನೆಲೆಯಿಂದಲೇ ನೋಡಬಹುದಾಗಿದೆ. ಇಲ್ಲಿ ಭಾಷೆ ಎನ್ನುವುದಕ್ಕಿಂತ ಹೆಚ್ಚಾಗಿ ಭಾಷೆಯನ್ನು ವೇದಿಕೆಯನ್ನಾಗಿಸಿಕೊಂಡ ವ್ಯವಸ್ಥೆಗಳು ಸ್ಥಾಪಿಸಿಕೊಂಡ ಯಜಮಾನಿಕೆ ಮುಖ್ಯವಾಗಬೇಕಾಗುತ್ತದೆ. ಯಜಮಾನಿಕೆಯ ಸ್ಥಾಪನೆಗೆ ಭಾಷೆ ಪ್ರಮುಖ ಅಸ್ತ್ರವಾಗಿ ಬಳಕೆಗೊಳ್ಳುತ್ತಾ ಹೋಯಿತು.

ಯುರೋಪ್‌ಕೇಂದ್ರಿತ ಅಥವಾ ಪಾಶ್ಚಿಮಾತ್ಯ ಸಿದ್ಧಾಂತಗಳು ವಿಶ್ವಾತ್ಮಕವಾಗಿದ್ದು, ಆ ಮೂಲಕವೇ ಜಗತ್ತನ್ನು ಅರ್ಥೈಸಿಕೊಳ್ಳುವ ಹಾಗೂ ವಿಸ್ತರಿಸುವ ಪ್ರಯತ್ನವನ್ನು ನಿರಂತರವಾಗಿ ಮಾಡಿದವು. ಓರಿಯಂಟಲಿಸ್ಟ್ ಹಾಗೂ ನಂತರದ ವಸಾಹತುಶಾಹಿ ಬರವಣಿಗೆಗಳು ಈ ಮಾದರಿಯಲ್ಲಿಯೇ ಮುಂದುವರಿದವು. ಈ ಪ್ರಯತ್ನಕ್ಕೆ ಪ್ರಮುಖವಾಗಿ ಬಳಕೆ ಮಾಡಿಕೊಂಡಿದ್ದು ಧರ್ಮ, ಭಾಷೆ, ವ್ಯಾಪಾರ ಹಾಗೂ ಸಾಹಿತ್ಯವನ್ನು. ಇವುಗಳ ಮೂಲಕ ಯುರೋಪ್ ಜಗತ್ತಿನಾದ್ಯಂತ ವಿಸ್ತರಣೆಗೊಂಡಿತು. ಇದನ್ನು ವಸಾಹತುಗಳ ಸ್ಥಾಪನೆಯ ಮೂಲಕ ನೋಡಬಹುದಾಗಿದೆ. ವ್ಯಾಪಾರದ

Scanned with OKEN Scanner

ವಿಸ್ತರಣೆಯು ಕೇವಲ ವ್ಯಾಪಾರದ ವಿಸ್ತರಣೆಯಷ್ಟೇ ಆಗಿರದೆ, ಅದರ ಮೂಲಕ ಸಾಮ್ರಾಜ್ಯ ವಿಸ್ತರಣೆಯೂ ವ್ಯವಸ್ಥಿತವಾಗಿ ನಡೆಯಿತು. ಪೋರ್ಚುಗೀಸರು, ಡಚ್ಚರು, ಬ್ರಿಟಿಶರು ಹಾಗೂ ಫ್ರೆಂಚರು ಭಾರತದಲ್ಲಿ ವ್ಯಾಪಾರದ ಏಕಸ್ವಾಮ್ಯಕ್ಕಾಗಿ ಪರಸ್ಪರ ಪೈಪೋಟಿ ನಡೆಸಿ, ತಮ್ಮದೇ ಅದ ವಸಾಹತು ನೆಲೆಗಳನ್ನು ಸ್ಥಾಪಿಸಿಕೊಂಡರು. ಇದು ಭಾರತ ದೇಶಕ್ಕಾದ ಹೊಸ ಅನುಭವ. ಅದಕ್ಕಿಂತ ಪೂರ್ವದಲ್ಲಿ ಅರೇಬಿಯನ್ ಹಾಗೂ ಪರ್ಶಿಯನ್ ಪ್ರಭಾವವನ್ನು ಗುರುತಿಸಬಹುದಾದರೂ, ಅದರ ಸ್ವರೂಪ ಬೇರೆಯೇ ಬಗೆಯದ್ದು. ಯುರೋಪಿಯನ್ನರಂತೆ ಸಂಪೂರ್ಣವಾಗಿ ಭಾರತವನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವುದಕ್ಕೆ ಅರೇಬಿಯನ್ ಅಥವಾ ಪರ್ಶಿಯನ್ನರಿಗೆ ಸಾಧ್ಯವಾಗಲಿಲ್ಲ. ಆದರೂ ಉತ್ತರ ಭಾರತದಲ್ಲಿ ಹಾಗೂ ದಕ್ಷಿಣ ಭಾರತದ ಕೆಲವೊಂದು ಪ್ರದೇಶಗಳಲ್ಲಿ ಬಲಿಷ್ಠವಾಗಿಯೇ ಕಂಡುಬಂತು. ಇದನ್ನು 'ಪರ್ಶಿಯನೀಕರಣ' ಎಂಬುದಾಗಿಯೂ ಕರೆಯಲಾಗಿದೆ. ಭಾರತದ ವಸಾಹತುಶಾಹಿ ಅನುಭವವನ್ನು ಭಾಷೆ, ಜ್ಞಾನ, ಅಧಿಕಾರ, ಬಂಡವಾಳ, ಕೈಗಾರಿಕೆ, ನಗರ, ಆಧುನಿಕತೆ ಮುಂತಾದವುಗಳ ಮೂಲಕವೇ ಅರ್ಥೈಸಿಕೊಳ್ಳಬೇಕಾಗುತ್ತದೆ. ಯುರೋಪಿನ ವಿಸ್ತರಣೆಯನ್ನು ಭೌತಿಕವಾಗಿ ಹಾಗೂ ಬೌದ್ಧಿಕವಾಗಿ ನೋಡಿದಾಗ ಮಾತ್ರ ಅದು ಬೀರಿದ ಪರಿಣಾಮಗಳನ್ನು ಅರ್ಥೈಸಿಕೊಳ್ಳಲು ಸಾಧ್ಯ. ಪೋರ್ಚುಗೀಸರ ಆಗಮನವಾದ ಬಳಿಕ ಯುರೋಪಿನ ವ್ಯಾಪಾರಿ ಕಂಪನಿಗಳು ಭಾರತದಲ್ಲಿ ನಿರಂತರ ಯುದ್ಧಗಳಲ್ಲಿ ತೊಡಗಿದವು. ಕ್ರಿ.ಶ. ೧೬ನೇ ಶತಮಾನದಿಂದ ಆರಂಭಗೊಂಡ ಈ ಯುದ್ಧಗಳು ಕ್ರಿ.ಶ. ೨೦ನೇ ಶತಮಾನದವರೆಗೂ ಮುಂದುವರಿದವು. ಹತ್ತೊಂಬತ್ತನೆಯ ಶತಮಾನದ ದ್ವಿತೀಯಾರ್ಧ ಹಾಗೂ ಇಪ್ಪತ್ತನೆಯ ಶತಮಾನದ ಮೊದಲಾರ್ಧದಲ್ಲಿ ಅದು ಸ್ವಾತಂತ್ರ್ಯ ಹೋರಾಟದ ಸ್ವರೂಪವನ್ನು ಪಡೆದುಕೊಂಡಿತು.

ಭಾರತದ ರಾಜಕೀಯ ಚರಿತ್ರೆಯನ್ನೊಮ್ಮೆ ಅವಲೋಕಿಸುವುದಾದರೆ ಇಲ್ಲಿನ ಅರಸುಮನೆತನಗಳು ಪರಸ್ಪರ ದ್ವೇಷ ಹಾಗೂ ಅಸೂಯೆಯಿಂದ ಕೂಡಿ ನಿರಂತರ ಯುದ್ಧಗಳಲ್ಲಿ ತೊಡಗಿರುತ್ತಿದ್ದ ಅಂಶ ಸ್ಪಷ್ಟವಾಗಿ ಗೋಚರಿಸುತ್ತದೆ. ಯುರೋಪಿನ ಚರಿತ್ರೆಯೂ ಇದರಿಂದ ಹೊರತಾಗಿಲ್ಲ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಯುರೋಪಿನ ರಾಷ್ಟ್ರಗಳು ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ತಮ್ಮತಮ್ಮ ವಸಾಹತುಗಳನ್ನು ಸ್ಥಾಪಿಸಲು ಪರಸ್ಪರ ಹೋರಾಟ ನಡೆಸಿರುವುದು. ಯುರೋಪಿನ ರಾಷ್ಟ್ರಗಳ ಮಧ್ಯೆ ಇದ್ದ ವೈರತ್ವ ಅವರ ವಸಾಹತುಗಳಲ್ಲಿಯೂ ಹಾಗೆಯೇ ಮುಂದುವರಿಯಿತು. ಹಾಗಾಗಿ ಯುರೋಪಿನಲ್ಲಿ ಈ ರಾಷ್ಟ್ರಗಳ ಮಧ್ಯೆ ನಡೆದ ಯುದ್ಧ ಹಾಗೂ ಒಪ್ಪಂದಗಳ ಪರಿಣಾಮಗಳನ್ನು ವಸಾಹತುಗಳು ಎದುರಿಸುವಂತಾಯಿತು. ಈ ಬೆಳವಣಿಗೆಗಳು ಸ್ಥಳೀಯ ಅರಸುಮನೆತನಗಳಿಗೆ ಆಘಾತಕಾರಿಯಾಗಿ ಪರಿಣಮಿಸಿ ಗೊಂದಲಗಳನ್ನು ಸೃಷ್ಟಿಸುತ್ತಿದ್ದವು. ಯುರೋಪಿನಲ್ಲಿ ಏರ್ಪಡುತ್ತಿದ್ದ ಒಪ್ಪಂದಗಳು ವಸಾಹತುಗಳಿಗೂ

Scanned with OKEN Scanner

ಅನ್ವಯವಾಗುತ್ತಿದ್ದವು. ಇದು ಸ್ಥಳೀಯ ಅರಸರನ್ನು ಇಕ್ಕಟ್ಟಿಗೆ ಸಿಲುಕುವಂತೆ ಮಾಡುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಯುರೋಪಿನ ರಾಷ್ಟ್ರಗಳು ಕೂಡ ಈ ಬಗೆಯ ಗೊಂದಲಗಳಿಗೆ ಒಳಗಾಗುತ್ತಿದ್ದವು. ಯುರೋಪಿನ ರಾಷ್ಟ್ರಗಳು ಹೆಣೆದ ಬಲೆಯಿಂದ ಹಾಗೂ ಸೃಷ್ಟಿಸಿದ ಸುಳಿಯಿಂದ ಹೊರಬರುವುದು ಅಷ್ಟು ಸುಲಭವಿರಲಿಲ್ಲ. ಒಂದು ಬಾರಿ ನೆರವಾಗುವ ಹಾಗೂ ಅದರ ಜೊತೆಗೇ ಆಕ್ರಮಣ ನಡೆಸುವ ಎರಡೂ ಬಗೆಯ ಧೋರಣೆಗಳನ್ನು ಈಸ್ಟ್ ಇಂಡಿಯಾ ಕಂಪನಿಗಳು ಹೊಂದಿದ್ದವು. ತಮ್ಮ ರಾಜಕಾರಣಕ್ಕೆ ಪೂರಕವಾಗುವ ರೀತಿಯಲ್ಲಿ ಸ್ಥಳೀಯರೊಂದಿಗೆ ಮಿತ್ರತ್ವ ಹಾಗೂ ವೈರತ್ವದ ನಾಟಕವನ್ನಾಡಿದವು. ಅಷ್ಟೇ ಅಲ್ಲದೆ ಸ್ಥಳೀಯ ಅರಸುಮನೆತನಗಳ ಮಧ್ಯೆ ಇದ್ದ ವೈರತ್ವದ ಸಂಪೂರ್ಣ ಲಾಭವನ್ನು ಪಡೆದುಕೊಂಡವು. ಇದು ಸ್ಥಳೀಯವಾಗಿ ರಾಜಕೀಯ ಬಿಕ್ಕಟ್ಟು ತಲೆದೋರುವುದಕ್ಕೂ ಕಾರಣವಾಯಿತು. ಸ್ಥಳೀಯವಾಗಿ ರೂಪುಗೊಂಡಿದ್ದ ರಾಜ್ಯ ವ್ಯವಸ್ಥೆಯಲ್ಲಿ ಬಿರುಕುಗಳು ಕಾಣಿಸಿಕೊಂಡು ಅದು ಹಂತಹಂತವಾಗಿ ಕುಸಿಯಲಾರಂಭಿಸಿದರೆ, ಇನ್ನೊಂದು ಕಡೆ ಈಸ್ಟ್ ಇಂಡಿಯಾ ಕಂಪನಿಗಳು ವ್ಯಾಪಾರದ ಮೂಲಕ ಹೊಸ ರಾಜ್ಯ ನಿರ್ಮಾಣ ಪ್ರಕ್ರಿಯೆಯಲ್ಲಿ ತೊಡಗಿಕೊಂಡವು. ಈ ಪ್ರಕ್ರಿಯೆಯಲ್ಲಿ ಮಿತ್ರರು ಶತ್ರುಗಳಾದರೆ, ಶತ್ರುಗಳು ಮಿತ್ರರಾದರು. ಆದರೆ ಈ ಎಲ್ಲ ಬದಲಾವಣೆಗಳು ತಾತ್ಕಾಲಿಕ ಸ್ವರೂಪದ್ದಾಗಿದ್ದವು. ಈಸ್ಟ್ ಇಂಡಿಯಾ ಕಂಪನಿಗಳ ಲಾಭ-ನಷ್ಟದ ಲೆಕ್ಕಾಚಾರದ ಮೇಲೆ ರಾಜಕೀಯ ಸನ್ನಿವೇಶಗಳು ನಿರ್ಮಾಣಗೊಳ್ಳುತ್ತಿದ್ದವು. ಇನ್ನು ಈ ಅವಧಿಯ ಚರಿತ್ರೆ ಬರವಣಿಗೆ ಯುದ್ಧ ಹಾಗೂ ವ್ಯಾಪಾರ ಕೇಂದ್ರಿತವಾಗಿ ನಡೆದು ರಾಜಕೀಯಾರ್ಥಿಕತೆಯ ಹೊಸ ವ್ಯಾಖ್ಯಾನಗಳು ಹುಟ್ಟಿಕೊಂಡವು.

ಮೇಲ್ನೋಟಕ್ಕೆ ರಾಜಕೀಯ ಘಟನೆಗಳಾಗಿ ಕಂಡುಬರುವ ಯುದ್ಧಗಳು ರಾಜಕೀಯಕ್ಕಷ್ಟೇ ಸೀಮಿತವಾಗಿರಲಿಲ್ಲ ಎನ್ನುವುದು ವಾಸ್ತವ ಸಂಗತಿ. ಆದರೆ ಪ್ರಭುತ್ವಕೇಂದ್ರಿತ ಅಧ್ಯಯನಗಳು ಯುದ್ಧಗಳನ್ನು ರಾಜಕೀಯ ಘಟನೆಗಳಾಗಿಯೇ ಚಿತ್ರಿಸಿದವು. ಅಷ್ಟೇ ಅಲ್ಲದೆ ಯುದ್ಧಗಳನ್ನು ವೈಭವೀಕರಿಸುವ ಪ್ರಯತ್ನಗಳೂ ನಡೆದವು. ರಾಷ್ಟ್ರೀಯವಾದಿ ಹಾಗೂ ಸಾಮ್ರಾಜ್ಯಶಾಹಿ ಚರಿತ್ರೆ ಬರವಣಿಗೆಗಳು ಯುದ್ಧ ಹಾಗೂ ಒಪ್ಪಂದಗಳ ರಾಜಕೀಯ ವಿವರಣೆಗಳಿಗೆ ಕೊಟ್ಟಷ್ಟು ಮಹತ್ವವನ್ನು ಅವುಗಳ ಸಾಮಾಜಿಕ ಹಾಗೂ ಆರ್ಥಿಕ ಪರಿಣಾಮಗಳ ಅಧ್ಯಯನಕ್ಕೆ ಕೊಡಲಿಲ್ಲ. ಯುದ್ಧವನ್ನು ಆರ್ಥಿಕ ಚಟುವಟಿಕೆಯನ್ನಾಗಿ ನೋಡುವ ಕ್ರಮ ಹುಟ್ಟಿಕೊಂಡ ಮೇಲೆ ಯುದ್ಧದ ಸಾಮಾಜಿಕ ಹಾಗೂ ಆರ್ಥಿಕ ಆಯಾಮಗಳು ಚರ್ಚೆಗೊಳ್ಳಲಾರಂಭಿಸಿದವು. ಈಸ್ಟ್ ಇಂಡಿಯಾ ಕಂಪನಿಗಳು ಭಾರತದಲ್ಲಿ ನಡೆಸಿದ ಯುದ್ಧಗಳನ್ನು 'ವ್ಯಾಪಾರ ಕಲಹ' ಅಥವಾ 'ವ್ಯಾಪಾರ ಸಂಘರ್ಷ' ಎಂಬುದಾಗಿಯೂ ಕರೆಯಲಾಗಿದೆ. ಸಮಾಜವನ್ನು ವಿಭಜಿಸುವ ಹಾಗೂ ರಾಜ್ಯವನ್ನು ಆರ್ಥಿಕವಾಗಿ ಕ್ಷೀಣಿಸುವ ಉದ್ದೇಶಗಳು ಯುದ್ಧಗಳಲ್ಲಿ ಪ್ರಮುಖವಾಗಿದ್ದವು. ಕೋಮುವಾದಿ ಹಿನ್ನೆಲೆಯಿಂದ ಯುದ್ಧಗಳನ್ನು ನೋಡುವ

Scanned with OKEN Scanner

ಕ್ರಮವೂ ಬೆಳೆದು ಬಂತು. ಮುಸ್ಲಿಂ ಅರಸರ ವಿರುದ್ಧ ಹೋರಾಡಿದ ಸ್ಥಳೀಯ ಅರಸರನ್ನು 'ರಾಷ್ಟ್ರೀಯ ವೀರರು' ಎಂಬುದಾಗಿ ಚಿತ್ರಿಸುವ ವಿಧಾನ ಅತ್ಯಂತ ಜನಪ್ರಿಯ ವಿಧಾನವಾಗಿಯೇ ಕಾಣಿಸಿಕೊಂಡಿತು. ಸಾಮ್ರಾಜ್ಯಶಾಹಿ ಬರಹಗಾರರ ಈ ವಿಧಾನವು ಬ್ರಿಟಿಶ್ ಅಳ್ವಿಕೆಯ 'ವಿಭಜಿಸಿ ಆಳುವ' ತಂತ್ರಕ್ಕೆ ಪೂರಕವಾಗಿತ್ತು. ಸಾಮ್ರಾಜ್ಯಶಾಹಿ ಬರವಣಿಗೆಗಳನ್ನು ವಿರೋಧಿಸುವ ರಾಷ್ಟ್ರೀಯವಾದಿಗಳ ಬರವಣಿಗೆಗಳಲ್ಲಿ ಕೂಡ ರಾಷ್ಟ್ರೀಯ ವೀರರ ಆಯ್ಕೆ ಅದೇ ರೀತಿಯಲ್ಲಿ ನಡೆಯಿತು. ಆದರೆ ಅಷ್ಟಕ್ಕೇ ಸೀಮಿತವಾಗದೆ ಯುರೋಪಿಯನ್ನರ ವಿರುದ್ಧ ಹೋರಾಡಿದ ಸ್ಥಳೀಯ ರಾಜ ಅಥವಾ ರಾಣಿಯರನ್ನು ಸ್ವಾತಂತ್ರ್ಯ ಹೋರಾಟಗಾರರು ಎಂಬುದಾಗಿ ಕರೆಯುವ ಪ್ರಯತ್ನಗಳೂ ನಡೆದವು. ಸಾಮ್ರಾಜ್ಯಶಾಹಿ ಬರಹಗಾರರು ಯುರೋಪಿಯನ್ನರ ವಿರುದ್ಧ ಹೋರಾಡಿದ ಸ್ಥಳೀಯರನ್ನು ರಾಷ್ಟ್ರೀಯ ವೀರರು ಎಂಬುದಾಗಿ ಕರೆಯಲಿಲ್ಲ ಎನ್ನುವ ಅಂಶವನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಈ ಎರಡೂ ಅಧ್ಯಯನ ಮಾದರಿಗಳಲ್ಲಿ ಕಂಡುಬರುವ ರಾಷ್ಟ್ರೀಯ ವೀರರು, ದೇಶಪ್ರೇಮಿಗಳು, ದೇಶದ್ರೋಹಿಗಳು, ಸ್ವಾತಂತ್ರ್ಯ ಹೋರಾಟಗಾರರು ಮುಂತಾದ ವಿಶೇಷಣಗಳು ಪೂರ್ವಗ್ರಹಪೀಡಿತ ಹಾಗೂ ಅತಿರೇಕದ ನಿಲುವುಗಳ ಪರಿಣಾಮ ಎನ್ನುವ ನಿಜಾಂಶವನ್ನು ತಿಳಿದುಕೊಳ್ಳಬೇಕಾಗುತ್ತದೆ. ವಿವಿಧ ಪಂಥಗಳ ಸೈದ್ಧಾಂತಿಕ ನಿಲುವುಗಳಿಗೆ ಅನುಗುಣವಾಗಿ ಚರಿತ್ರೆಯ ಘಟನೆಗಳ ಆಯ್ಕೆ ಹಾಗೂ ನಿರೂಪಣೆಗಳು ನಡೆದವು.

ವೀರ, ವೀರಮರಣ, ವೀರಸ್ವರ್ಗ, ವೀರ ಆರಾಧನೆ, ವೀರಸಿದ್ಧಾಂತ ಮುಂತಾದ ವೀರರನ್ನು ಸೃಷ್ಟಿಸುವ ಪರಂಪರೆ ಭಾರತಕ್ಕೆ ಹೊಸದೇನಲ್ಲ. ಈ ವೀರತ್ವದ ಪರಿಕಲ್ಪನೆಗೆ ರಾಜಕೀಯ ಹಾಗೂ ಧಾರ್ಮಿಕ ಚೌಕಟ್ಟನ್ನು ನಿರ್ಮಿಸಲಾಗಿತ್ತು. ಈ ಚೌಕಟ್ಟನ್ನು ಮೀರುವುದು ಅಸಾಧ್ಯವಾಗಿತ್ತು. ಅಷ್ಟೇ ಅಲ್ಲದೆ ಅದು ದೇಶದ್ರೋಹದ ಕಾರ್ಯವೂ ಆಗುತ್ತಿತ್ತು. ಹಾಗಾಗಿ ಈ ಪರಂಪರೆಗೆ ಸಾಮಾಜಿಕ ಒಪ್ಪಿಗೆಯನ್ನು ಪಡೆಯುವುದು ಕಷ್ಟದ ವಿಚಾರವಾಗಿ ಪರಿಣಮಿಸಲಿಲ್ಲ. ರಾಜಪ್ರಭುತ್ವದ ಸಂದರ್ಭದಲ್ಲಿ ಪ್ರಭುತ್ವದ ಅಸ್ತಿತ್ವದ ಹಿನ್ನೆಲೆಯಿಂದ ವೀರಪಡೆಯೊಂದನ್ನು ಹೊಂದುವುದು ಪ್ರಭುತ್ವಕ್ಕೆ ಅತ್ಯಂತ ತುರ್ತಿನ ವಿಚಾರವಾಗಿತ್ತು. ಇದನ್ನು ಅಧಿಕೃತಗೊಳಿಸುವ ಸಾಹಿತ್ಯ ರಚನೆಯೂ ನಡೆಯಿತು. ಇದು ಚರಿತ್ರೆಯಲ್ಲಿ ಕಂಡುಬರುವ ಒಂದು ಸ್ವರೂಪದ ವೀರತ್ವದ ಪ್ರತಿಪಾದನೆ. ಇನ್ನು ಮೌಖಿಕ ಪರಂಪರೆಯಲ್ಲೂ ಸಾಂಸ್ಕೃತಿಕ ವೀರರು ಸಾಕಷ್ಟು ಕಂಡುಬರುತ್ತಾರೆ. ಜನಪದ ಸಂಸ್ಕೃತಿಯಲ್ಲಿ ಸಾಂಸ್ಕೃತಿಕ ವೀರರ ಆರಾಧನೆ ಅತ್ಯಂತ ಪ್ರಮುಖವಾದದ್ದು. ಹೀಗೆ ವೀರತ್ವದ ಕುರಿತಾದ ಉಲ್ಲೇಖಗಳು ಸಾಕಷ್ಟು ಸಿಗುತ್ತವೆ. ಕೆಲವು ಲೌಕಿಕ ಬದುಕಿಗೆ ಸಂಬಂಧಪಟ್ಟಿದ್ದರೆ, ಇನ್ನು ಕೆಲವು ಅಲೌಕಿಕ ಪ್ರಪಂಚವನ್ನು ಪ್ರತಿನಿಧಿಸುತ್ತಿರುತ್ತವೆ. ಪ್ರಭುತ್ವದ ಉದ್ದೇಶಗಳು ಹಾಗೂ ಜನಪದರ ಉದ್ದೇಶಗಳು ಏಕಸ್ವರೂಪದ್ದಲ್ಲ. ಎಲ್ಲವನ್ನೂ ಸಾಮಾನ್ಯೀಕರಿಸಿ ತೀರ್ಮಾನಗಳನ್ನು ನೀಡಲು ಸಾಧ್ಯವಾಗುವುದಿಲ್ಲ.

Scanned with OKEN Scanner

ಆದರೆ ವೀರರನ್ನು ಸೃಷ್ಟಿಸುವ ಪ್ರಯತ್ನಗಳು ಚರಿತ್ರೆಯ ಎಲ್ಲ ಅವಧಿಯಲ್ಲಿಯೂ ನಡೆದಿವೆ ಎಂದಷ್ಟೇ ಹೇಳಬಹುದು. ಇಲ್ಲಿ ಸಮಸ್ಯೆ ಎದುರಾಗುವುದು ವರ್ತಮಾನದ ತುರ್ತಿಗೆ ಅನುಗುಣವಾಗಿ ಚರಿತ್ರೆಯ ವಸ್ತುಸಂಗತಿಗಳು ವಿಶ್ಲೇಷಣೆಗೆ ಒಳಗಾಗುವಾಗ.

ಬ್ರಿಟಿಶ್ ಆಳ್ವಿಕೆಯ ಸಂದರ್ಭದಲ್ಲಿ ರಾಷ್ಟ್ರೀಯ ವೀರರನ್ನು ಆಯ್ಕೆ ಮಾಡುವ ಹಾಗೂ ಘೋಷಣೆ ಮಾಡುವ ಅವಶ್ಯಕತೆ ಏನಿತ್ತು ಎನ್ನುವ ಪ್ರಶ್ನೆ ಸಹಜವಾಗಿಯೇ ಹುಟ್ಟಿಕೊಳ್ಳುತ್ತದೆ. ಆದರೆ ಬ್ರಿಟಿಶ್ ಆಳ್ವಿಕೆಗೆ ರಾಷ್ಟ್ರೀಯ ವೀರರನ್ನು ಆಯ್ಕೆ–ಮಾಡುವ ಅನಿವಾರ್ಯತೆ ಸೃಷ್ಟಿಯಾಗಿತ್ತು. ಈ ಬಗೆಯ ಅನಿವಾರ್ಯತೆಗಳೇ ದೇವಲೋಕ, ಅಲೌಕಿಕ ಜಗತ್ತು, ಪುರಾಣಗಳು, ವೀರ ಪರಂಪರೆ ಮುಂತಾದವುಗಳ ಸೃಷ್ಟಿಗೂ ಕಾರಣವಾಗಿರುವುದು. ಆದರೆ ಸಾಮಾಜಿಕ ಸಂದರ್ಭಗಳು ಹಾಗೂ ಉದ್ದೇಶಗಳು ಮಾತ್ರ ಭಿನ್ನವಾಗಿದ್ದವು. ಅಧಿಕಾರ ಸ್ಥಾಪನೆ ಹಾಗೂ ಸಾಮಾಜಿಕ ನಿಯಂತ್ರಣ ಸಮಾನವಾದ ಉದ್ದೇಶವಾಗಿತ್ತು. ಬ್ರಿಟಿಶ್ ಆಳ್ವಿಕೆಯ ಸಂದರ್ಭದಲ್ಲಿ ಸ್ಥಳೀಯ ಸಾಹಿತ್ಯ, ಭಾಷೆ ಹಾಗೂ ಚರಿತ್ರೆ ವ್ಯಾಪಕವಾಗಿ ಬಳಕೆಯಾಯಿತು. ಭಾರತೀಯ ಸಮಾಜವನ್ನು ಪಾಶ್ಚಿಮಾತ್ಯ ಆಳ್ವಿಕೆ, ಸಂಸ್ಕೃತಿ, ಭಾಷೆ ಹಾಗೂ ಅಭಿವೃದ್ಧಿ ಮಾದರಿಗಳಿಗೆ ತಕ್ಕಂತೆ ಪರಿವರ್ತಿಸುವುದು ಹಾಗೂ ಸಜ್ಜುಗೊಳಿಸುವುದು ಬಹಳ ಪ್ರಮುಖವಾದ ಉದ್ದೇಶ–ವಾಗಿತ್ತು. ಈ ಕಾರಣಕ್ಕಾಗಿಯೇ ಸ್ಥಳೀಯ ಎಲೀಟ್ ಸಮುದಾಯಗಳೊಂದಿಗೆ ಸಹಭಾಗಿತ್ವ ಧೋರಣೆಯನ್ನು ಹೊಂದುವ ಪ್ರಯತ್ನವನ್ನು ಮಾಡಲಾಯಿತು. ಸ್ಥಳೀಯ ಶ್ರೀಮಂತ ಸಮುದಾಯಗಳು ಅದಕ್ಕೆ ಸಿದ್ಧವಾಗಿದ್ದವು. ಅಷ್ಟೇ ಅಲ್ಲದೆ ಸ್ಥಳೀಯವಾಗಿ ಅಧಿಕಾರ ವಲಯಗಳಲ್ಲಿ ಗುರುತಿಸಿಕೊಂಡಿದ್ದ ಅಧಿಕಾರಿಗಳು ಬ್ರಿಟಿಶ್ ಆಳ್ವಿಕೆಯ ವಿಸ್ತರಣೆಗೆ ಹಾಗೂ ಅದರ ಆದೇಶಗಳ ಅನುಷ್ಠಾನಕ್ಕೆ ನೇರವಾಗಿ ಸಹಕರಿಸಿ ಅದರಲ್ಲಿ ಭಾಗಿಯಾದರು. ಹೀಗೆ ಭಾರತೀಯರಿಂದಲೇ ಭಾರತೀಯರನ್ನು ಸೋಲಿಸುವ ತಂತ್ರ–ವನ್ನು ಬ್ರಿಟಿಶ್ ಸರ್ಕಾರ ಅನುಸರಿಸಿತು. ಬ್ರಿಟಿಶ್ ಆಳ್ವಿಕೆಯನ್ನು ವಿರೋಧಿಸುವವರನ್ನು ಸ್ಥಳೀಯರ ನೆರವಿನಿಂದಲೇ ಮಣಿಸುವ ಹಾಗೂ ಬ್ರಿಟಿಶ್ ಆಳ್ವಿಕೆಯನ್ನು ಒಪ್ಪಿ ಅವರ ದಾಸರಾಗುವವರಿಗೆ ಷರತ್ತುಬದ್ಧ ಜಾಮೀನು ನೀಡಿದಂತೆ ಬದುಕಲು ಅವಕಾಶ ಮಾಡಿಕೊಡುವ ನೀತಿಯನ್ನು ಬ್ರಿಟಿಶ್ ಸರ್ಕಾರ ಅನುಸರಿಸಿತು. ಮುಸ್ಲಿಂ ದೊರೆಗಳ ವಿರುದ್ಧ ಹೋರಾಡಿದ ಸ್ಥಳೀಯ ಅರಸರ ಪಟ್ಟಿಯನ್ನು ಸಿದ್ಧಗೊಳಿಸಿ ಅವರಿಗೆ ರಾಷ್ಟ್ರೀಯ ವೀರರ ಪಟ್ಟನ್ನು ಕಟ್ಟುವುದರ ಹಿಂದೆ ಸಮಾಜವನ್ನು ಒಡೆಯುವ, ಧರ್ಮದ ಆಧಾರದಲ್ಲಿ ಸಮಾಜವನ್ನು ವಿಭಜಿಸುವ ಹಾಗೂ ಕಮ್ಯೂನಲ್ ಭಾವನೆಗಳನ್ನು ಬಿತ್ತುವ ಉದ್ದೇಶ ಪ್ರಬಲವಾಗಿತ್ತು.

ಪ್ರಾಚೀನ ಹಾಗೂ ಮಧ್ಯಕಾಲೀನ ಭಾರತವನ್ನು ಧರ್ಮದ ಆಧಾರದಲ್ಲಿ ವಿಭಜಿಸುವ ಪ್ರಯತ್ನಕ್ಕೆ ಮುಂದಾದ ಬ್ರಿಟಿಶ್ ಆಳ್ವಿಕೆ ಹಾಗೂ ಅದರ ವಕ್ತಾರರು ಆಧುನಿಕ ಸಂದರ್ಭವನ್ನು ಮಾತ್ರ ಆಧುನಿಕತೆಯ ಹೆಸರಿನಲ್ಲಿ ಅಥವಾ ಪಾಶ್ಚಿಮಾತ್ಯ ಆಳ್ವಿಕೆಯ

Scanned with OKEN Scanner

ಹೆಸರಿನಲ್ಲಿ ಗುರುತಿಸಿ ಅದೊಂದು ಪ್ರಗತಿಯ ಅವಧಿ ಎಂಬುದಾಗಿ ಕರೆದರು. ಈ ಕಾಲಾವಧಿ ಎಂಗಡಣೆ ಭಾರತದ ಚರಿತ್ರೆ ಬರವಣಿಗೆಯನ್ನು ಬಹಳಷ್ಟು ಕಾಡಿದ್ದಷ್ಟೇ ಅಲ್ಲದೆ, ಚರಿತ್ರೆ ಬರವಣಿಗೆಯ ಗತಿಯನ್ನೇ ಬದಲಾಯಿಸಿತು. ಪ್ರಾಚೀನ ಸಂದರ್ಭದ ಸನಾತನ ಹಾಗೂ ಹಿಂದೂ ಸಂಸ್ಕೃತಿಯನ್ನು ಮಧ್ಯಕಾಲೀನ ಮುಸ್ಲಿಂ ಆಳ್ವಿಕೆ ನಾಶ ಮಾಡಿತು ಎನ್ನುವ ಅಂತಿಮ ತೀರ್ಮಾನದ ರೀತಿಯಲ್ಲಿ ಪ್ರಕಟಗೊಂಡ ಅಭಿಪ್ರಾಯಗಳು ಹಾಗೂ ವಾದಗಳು ಹುಟ್ಟುಹಾಕಿದ ಕಮ್ಯೂನಲ್ ಮನಸ್ಸು ಸ್ವಾತಂತ್ರ್ಯೋತ್ತರ ಭಾರತದ ಸಂದರ್ಭದಲ್ಲೂ ಮರೆಯಾಗದೆ ಜೀವಂತವಾಗಿ ಹಾಗೂ ನಿರ್ಣಾಯಕವಾಗಿ ತನ್ನ ಅಜೆಂಡಾಗಳಿಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಲೇ ಇದೆ. ಚರಿತ್ರೆ ಬರವಣಿಗೆಯಲ್ಲಿ ಕಂಡುಬರುವ ಎಲ್ಲ ಅತಿರೇಕಗಳಿಗೂ ಇದೇ ಮಾದರಿ ಕಾರಣವಾಯಿತು. ರಾಷ್ಟ್ರೀಯವಾದಿ ಬರವಣಿಗೆಗಳು, ಅದು ವಿಶಾಲ ರಾಷ್ಟ್ರೀಯ ಚೌಕಟ್ಟು ಇರಬಹುದು ಅಥವಾ ಪ್ರಾದೇಶಿಕ ರಾಷ್ಟ್ರೀಯ ಮಾದರಿ ಇರಬಹುದು, ವಸಾಹತುಶಾಹಿ ಬರವಣಿಗೆಗಳನ್ನು ನಿರಚಿಸುವ ಪ್ರಯತ್ನಕ್ಕೆ ಮುಂದಾದರೂ ಅವರಿಂದ ಹೊಸ ರಚನೆಗಳು ಬರಲಿಲ್ಲ. ವಸಾಹತುಶಾಹಿ ಬರವಣಿಗೆ ಸೃಷ್ಟಿಸಿದ ಸುಳಿಯಲ್ಲಿ ಸಿಲುಕಿದ ರಾಷ್ಟ್ರೀಯವಾದಿಗಳು ಒಮ್ಮೊಮ್ಮೆ ಅದರಿಂದ ಹೊರಬರುವ ಪ್ರಯತ್ನವನ್ನು ಮಾಡಿದರೂ ಮತ್ತೆ ಅದೇ ಸುಳಿಯೊಳಗೆ ಸಿಕ್ಕಿಹಾಕಿಕೊಂಡರು.

ವಸಾಹತುಶಾಹಿ ಬರವಣಿಗೆಯಲ್ಲಿ ಕಂಡುಬರುವ ಶ್ರೇಷ್ಠತೆಯ ಪ್ರತಿಪಾದನೆ, ಕಮ್ಯೂನಲ್ ಧೋರಣೆಗಳು, ದೇಶದ ಪರಿಕಲ್ಪನೆ, ಅಖಂಡ ನಿರೂಪಣೆ ಇವುಗಳೆಲ್ಲವೂ ಯಥಾಪ್ರಕಾರ ರಾಷ್ಟ್ರೀಯವಾದಿ ಬರವಣಿಗೆಯಲ್ಲಿ ಮುಂದುವರಿದವು. ಹಾಗಾಗಿ 'ಆಧುನಿಕ' ಎನ್ನುವ ಅವಧಿ ಹೆಚ್ಚು ವಿರೋಧವನ್ನು ಎದುರಿಸಲಿಲ್ಲ. ಆದರೆ ಮಾರ್ಕ್ಸ್‌ವಾದಿ ಸಿದ್ಧಾಂತ ಹಾಗೂ ಬರವಣಿಗೆಗಳು ಕಾಣಿಸಿಕೊಂಡ ಮೇಲೆ ಬ್ರಿಟಿಶ್ ಆಳ್ವಿಕೆಯ ಉದ್ದೇಶಗಳು, ತಂತ್ರಗಾರಿಕೆ ಹಾಗೂ ವಿಸ್ತರಣೆಯ ಸ್ವರೂಪ ತೀವ್ರ ವಿರೋಧವನ್ನು ಎದುರಿಸಬೇಕಾಗಿ ಬಂತು. ಬ್ರಿಟಿಶ್ ಮಾದರಿಯ ಆಧುನೀಕರಣದ ಹಿಂದಿರುವ ಅಜೆಂಡಾಗಳನ್ನು ಬಯಲಿಗೆಳೆಯುವ ಪ್ರಯತ್ನವೂ ನಡೆಯಿತು. ಆದರೆ ಈ ಮಾದರಿಯು ಕೂಡ ಅಖಂಡ ಭಾರತವನ್ನು ಗ್ರಹಿಸಿ ಅದರ ಸಾಮಾಜಿಕ ಹಾಗೂ ಆರ್ಥಿಕ ಚರಿತ್ರೆ ರಚನೆಗೆ ಮುಂದಾಯಿತು ಎನ್ನುವ ವಾದವನ್ನು ಆಧುನಿಕೋತ್ತರವಾದವು ಮುಂದಿಟ್ಟಿತು. ಆಧುನಿಕೋತ್ತರವಾದಿಗಳ ಪ್ರಕಾರ ಮಾರ್ಕ್ಸ್‌ವಾದವು ಕೂಡ ಒಂದು ಅಖಂಡ ನಿರೂಪಣೆಯೇ ಆಗಿದೆ. ಏಕೆಂದರೆ ಅದು 'ವರ್ಗ'ದ ಮೂಲಕ ಭಾರತದ ಜಾತಿ ಹಾಗೂ ಸಮುದಾಯಗಳನ್ನು ನೋಡುತ್ತದೆ. ಹಾಗಾಗಿ ಭಾರತದ ವಾಸ್ತವ ಎಂಬರ್ಥದಲ್ಲಿ ಗುರುತಿಸಿಕೊಂಡಿರುವ ಜಾತಿಯಾಧಾರಿತ ಸಾಮಾಜಿಕ ಶ್ರೇಣೀಕರಣ, ಅಧಿಕಾರ ವ್ಯವಸ್ಥೆ ಹಾಗೂ ಅದರ ಅನುಭವಗಳು ತಿಳಿದುಬರಲು ಸಾಧ್ಯವಿಲ್ಲ. ಆಧುನಿಕೋತ್ತರವಾದಿಗಳ ಪ್ರಕಾರ ಸಂಸ್ಕೃತಿ ಎನ್ನುವುದು ಅಖಂಡವಲ್ಲ, ಅದು ಬಿಡಿಬಿಡಿಯಾಗಿರುವ, ವಿರೋಧಾ-

Scanned with OKEN Scanner

ಭಾಸಗಳಿಂದ ಕೂಡಿರುವ, ಪ್ರಾದೇಶಿಕವಾಗಿರುವ ಹಾಗೂ ಬಹುತ್ವದಿಂದ ಕೂಡಿರುವ ಒಂದು ವ್ಯವಸ್ಥೆ.

ಜಗತ್ತಿನಲ್ಲಿ ಯುವುದೂ ಶಾಶ್ವತವಲ್ಲ ಹಾಗೂ ಅಖಂಡವಲ್ಲ ಎನ್ನುವ ಆಧುನಿಕೋತ್ತರವಾದಿಗಳ ನಿಲುವುಗಳನ್ನು ತೀವ್ರ ತರಾಟೆಗೆ ತೆಗೆದುಕೊಳ್ಳುವ ಮಾರ್ಕ್ಸ್‌ವಾದಿಗಳು ಈ ರೀತಿಯ ಧೋರಣೆಗಳು ಒಗ್ಗೂಡುವಿಕೆಗೆ ವಿರುದ್ಧವಾಗಿದ್ದು, ಪ್ರಗತಿ ವಿರೋಧಿಯಾಗಿವೆ ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಅದೇ ರೀತಿ ಆಧುನಿಕೋತ್ತರವಾದಿಗಳು ನವಸಂಪ್ರದಾಯಿಗಳಾಗಿದ್ದು, ಇವರ ಚಿಂತನೆಗಳು ಸ್ಥಳೀಯ ಅಥವಾ ದೇಶಿ ಎನ್ನುವ ಹೆಸರಿನಲ್ಲಿ ಆಧುನಿಕತೆಯನ್ನು ವಿರೋಧಿಸುತ್ತಾ ಹಳೆಯ ಸಂಪ್ರದಾಯಗಳ ಮರುನಿರೂಪಣೆಯಾಗಿದೆ ಎಂಬುದಾಗಿಯೂ ಟೀಕಿಸಲಾಗಿದೆ. ಆಧುನಿಕೋತ್ತರವಾದಿಗಳ ಪ್ರಕಾರ ಆಧುನಿಕೋತ್ತರವಾದವು ಆಧುನಿಕತೆಯನ್ನಾಗಲಿ ಅಥವಾ ವಿಜ್ಞಾನವನ್ನಾಗಲಿ ವಿರೋಧಿಸುತ್ತಿಲ್ಲ, ಬದಲಾಗಿ ಆಧುನಿಕತೆಯ ಹಾಗೂ ವಿಜ್ಞಾನದ ಯಜಮಾನಿಕೆಯನ್ನು ಹಾಗೂ ಅದರ ಅಹಂಕಾರದ ನಿಲುವುಗಳನ್ನು ವಿರೋಧಿಸುತ್ತದೆ. ಜಗತ್ತಿನ ವಿವಿಧ ಸಂಸ್ಕೃತಿಗಳನ್ನು ಅದು ತನಗಿಂತ ಭಿನ್ನ ಅಥವಾ ಅನ್ಯ ಎಂಬುದಾಗಿ ಪರಿಗಣಿಸದೆ ತನಗಿಂತ ಕೀಳು ಅಥವಾ ಸಾಂಪ್ರದಾಯಿಕವಾದದ್ದು ಎಂಬುದಾಗಿ ಪರಿಗಣಿಸಿ ಜಗತ್ತನ್ನೇ ಆಧುನಿಕ ಹಾಗೂ ಸಾಂಪ್ರದಾಯಿಕ ಎಂಬುದಾಗಿ ವಿಂಗಡಿಸುತ್ತದೆ ಎನ್ನುವ ಆರೋಪವನ್ನು ಆಧುನಿಕೋತ್ತರವಾದವು ಆಧುನಿಕವಾದದ ಮೇಲೆ ಮಾಡುತ್ತದೆ. ಈ ವಾದ-ಪ್ರತಿವಾದಗಳು ನಿರಂತರವಾಗಿ ನಡೆಯುತ್ತಲೇ ಬಂದಿವೆ. ಸಬಾಲ್ಟರ್ನ್ ಚಿಂತನೆಯು ಕೂಡ ಆಧುನಿಕೋತ್ತರವಾದದ ಸಂಸ್ಕೃತಿಕೇಂದ್ರಿತ ಚಿಂತನೆಗಳ ದಾರಿಯಲ್ಲಿಯೇ ನಡೆಯಲಾರಂಭಿಸಿತು. ಆದರೆ ಸಬಾಲ್ಟರ್ನ್ ಚಿಂತನೆಯು ಆರಂಭಿಕ ಹಂತದಲ್ಲಿ ಸಂಸ್ಕೃತಿಕೇಂದ್ರಿತವಾಗಿರಲಿಲ್ಲ ಎನ್ನುವ ಅಂಶವನ್ನೂ ಇಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಸಬಾಲ್ಟರ್ನ್ ಚಿಂತನೆಗಳು ಅಖಂಡ ಹಾಗೂ ರಾಷ್ಟ್ರೀಯ ಕಥನಗಳನ್ನು ನಿರಚಿಸುವ, ರಾಷ್ಟ್ರದ ಪರಿಕಲ್ಪನೆಯನ್ನು ಒಡೆಯುವ, ಅಧಿಕಾರದ ನೆಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅವು ಸ್ಥಾಪಿಸಿದ ಯಜಮಾನಿಕೆಯನ್ನು ಪ್ರಶ್ನಿಸುವ, ಎಲೀಟ್ ಹಾಗೂ ಸಬಾಲ್ಟರ್ನ್ ಪ್ರಭಾವ ವಲಯಗಳನ್ನು ಗುರುತಿಸುವ ಹಾಗೂ ಅವುಗಳೊಳಗಿನ ಸಂಬಂಧಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಪ್ರಯತ್ನವನ್ನು ಮಾಡಿವೆ. ಈ ಬಗೆಯ ವಾದ-ಪ್ರತಿವಾದಗಳು ಹಾಗೂ ಅವು ರೂಪಿಸಿದ ಅಧ್ಯಯನ ಮಾದರಿಗಳು ಹಾಗೂ ಚಿಂತನಾ ಕ್ರಮಗಳು ಚರಿತ್ರೆ ಬರವಣಿಗೆಯ ಮೇಲೆ ಗಾಢವಾದ ಪರಿಣಾಮಗಳನ್ನು ಬೀರಿದ್ದೇ ಅಲ್ಲದೆ, ವಿವಿಧ ಪಂಥಗಳ ಬಿಗಿ ಸಂಕೋಲೆಯಲ್ಲಿ ಬಂದಿಯಾಗುವಂತೆಯೂ ಮಾಡಿದವು.

ಭಾರತದ ಚರಿತ್ರೆಯು ಚರಿತ್ರೆಯನ್ನು ಅಧ್ಯಯನ ನಡೆಸುವ ಎಲ್ಲ ಪಂಥಗಳಿಗೂ ಪ್ರಯೋಗಶಾಲೆಯಾಯಿತು. ಆಯಾ ಪಂಥದ ಚರಿತ್ರೆಕಾರರು ತಮ್ಮ ಸಿದ್ಧಾಂತಗಳಿಗೆ

Scanned with OKEN Scanner

ಅನುಗುಣವಾಗಿ ಭಾರತದ ಚರಿತ್ರೆಯ ಅಯ್ದ ವಿಷಯಗಳನ್ನು ಅಧ್ಯಯನ ನಡೆಸಿದರು. ರಾಜಕೀಯಕೇಂದ್ರಿತವಾಗಿಯೇ ನಡೆಯುತ್ತಿದ್ದ ಅಧ್ಯಯನಗಳು ಮಾರ್ಕ್ಸ್‌ವಾದ, ಆಧುನಿಕೋತ್ತರವಾದ, ಸಬಾಲ್ಟರ್ನ್‌ವಾದ, ನವಚಾರಿತ್ರಿಕವಾದ ಮುಂತಾದ ಪಂಥಗಳು ಹೊಸ ದೃಷ್ಟಿಕೋನದಿಂದ ಚರಿತ್ರೆ ಸಂಶೋಧನೆ ನಡೆಸಲಾರಂಭಿಸಿವಾಗ ಬದಲಾಗ-ತೊಡಗಿದವು. ಆರ್ಥಿಕ ಚರಿತ್ರೆ, ಸಮುದಾಯಗಳ ಚರಿತ್ರೆ, ಅಲಕ್ಷಿತ ವರ್ಗಗಳ ಚರಿತ್ರೆ, ಸಾಂಸ್ಕೃತಿಕ ಚರಿತ್ರೆ, ಲಿಂಗತ್ವ ಚರಿತ್ರೆ, ದಲಿತ ಚರಿತ್ರೆ, ಮೌಖಿಕ ಚರಿತ್ರೆ, ಸ್ಥಳೀಯ ಚರಿತ್ರೆ ಮುಂತಾದ ಚರಿತ್ರೆ ಬರವಣಿಗೆಯ ಹೊಸ ಒಲವುಗಳು ಕಾಣಿಸಿಕೊಳ್ಳಲಾರಂಭಿಸಿದ ಮೇಲೆ ಸರಳರೇಖಾತ್ಮಕವಾಗಿ ಹಾಗೂ ಏಕಮುಖಿಯಾಗಿ ಸಾಗುತ್ತಿದ್ದ ಚರಿತ್ರೆ ಬರವಣಿಗೆ ಸ್ವಲ್ಪ ಮಂಕಾಗಿ. ಚರಿತ್ರೆಯ ವಿಭಿನ್ನ ಆಯಾಮಗಳನ್ನು ಪ್ರತಿನಿಧಿಸುವ ಹಾಗೂ ಚರಿತ್ರೆಯನ್ನು 'ಚರಿತ್ರೆಗಳು' ಎಂಬುದಾಗಿ ಅರ್ಥೈಸಿಕೊಳ್ಳುವ ಪ್ರಯತ್ನಗಳು ಹೆಚ್ಚು ಆಕರ್ಷಕವಾಗಿ ಕಂಡುಬರಲಾರಂಭಿಸಿದವು. ಇದು ಸ್ವತಂತ್ರ ಭಾರತದ ಚರಿತ್ರೆಯನ್ನು ಪ್ರಜಾಸತ್ತಾತ್ಮಕವಾಗಿ ಹಾಗೂ ಸಂವಿಧಾನಬದ್ಧವಾಗಿ ನೋಡುವ ಅಧ್ಯಯನ ವಿಧಾನ. ಚರಿತ್ರೆಗಳು ಎನ್ನುವ ಪದವೇ ಬಹುತ್ವವನ್ನು ಸೂಚಿಸುವಂಥದ್ದು. ಇನ್ನು ಸಾರ್ವಭೌಮರ ಚರಿತ್ರೆಗಷ್ಟೇ ಸೀಮಿತವಾಗಿದ್ದ ಹಾಗೂ ಅದೇ ಮಾದರಿಯಲ್ಲಿ ಸಾಮಂತರನ್ನು ನೋಡುತ್ತಿದ್ದ ಅಧ್ಯಯನ ವಿಧಾನದಲ್ಲೂ ಬದಲಾವಣೆಗಳು ಕಾಣಿಸಿಕೊಳ್ಳಲಾರಂಭಿಸಿದವು.

ರಾಜ್ಯ ನಿರ್ಮಾಣ ಪ್ರಕ್ರಿಯೆಯು ಭಾರತದ ಚರಿತ್ರೆಯಲ್ಲಿ ಅತ್ಯಂತ ಹೆಚ್ಚು ಅಧ್ಯಯನ-ಕ್ಕೊಳಗಾದ ಹಾಗೂ ಚರ್ಚಿತವಾದ ವಿಚಾರ. ಸಾಮ್ರಾಜ್ಯಗಳಿಗೆ ಹಾಗೂ ಸಾಮ್ರಾಟರಿಗಷ್ಟೆ ಸೀಮಿತವಾಗಿದ್ದ ಈ ಚರ್ಚೆ ಚರಿತ್ರೆಯ ಬದಲಾದ ಅಧ್ಯಯನ ವಿಧಾನದಿಂದಾಗಿ ಸ್ಥಳೀಯ ಸಣ್ಣಪುಟ್ಟ ಪಾಳೆಯಪಟ್ಟುಗಳು ಹಾಗೂ ಸಂಸ್ಥಾನಗಳವರೆಗೂ ವಿಸ್ತರಿಸು-ವಂತಾಯಿತು. ಭಾರತದ ಚರಿತ್ರೆ ಬರವಣಿಗೆಯಲ್ಲಿ ಸ್ಥಾನವನ್ನೇ ಪಡೆಯದೆ ಅಲಕ್ಷಿತ-ವಾಗಿದ್ದ ಅದೆಷ್ಟೋ ಅರಸುಮನೆತನಗಳ ಚರಿತ್ರೆಯನ್ನು ರಚಿಸುವ ಪ್ರಯತ್ನಗಳು ಆರಂಭಗೊಳ್ಳುವಂತಾಯಿತು. ಆರಂಭದಲ್ಲಿ ಈ ಅಧ್ಯಯನಗಳಿಗೂ ಸಿದ್ಧಮಾದರಿಯನ್ನು ಮೀರಲು ಸಾಧ್ಯವಾಗಿರಲಿಲ್ಲ. ಸಾಮ್ರಾಜ್ಯಗಳ ಅಧ್ಯಯನದ ಸಂದರ್ಭದಲ್ಲಿ ಪ್ರಧಾನವಾಗಿ ನೋಡುವ ಸ್ಮಾರಕಗಳು, ಶಾಸನಗಳು, ಆಸ್ಥಾನ ಪಂಡಿತರ ಬರವಣಿಗೆಗಳು ಮುಂತಾದ ಪ್ರಧಾನ್ಯ ಕೇಂದ್ರಿತವಾಗಿಯೇ ಗುರುತಿಸಲ್ಪಟ್ಟಿದ್ದ ಆಕರಗಳನ್ನೇ ಸ್ಥಳೀಯ ಚರಿತ್ರೆ ಅಧ್ಯಯನದ ಸಂದರ್ಭದಲ್ಲೂ ಪುಡುಕುವ ಪ್ರಯತ್ನಗಳು ನಡೆದವು. ಹಾಗಾಗಿ ಈ ಅಧ್ಯಯನಗಳಲ್ಲಿ ಅರಸುಮನೆತನಗಳ ಹೆಸರು, ಅವುಗಳ ರಾಜಧಾನಿ ಕೇಂದ್ರಗಳ ಹೆಸರು ಹಾಗೂ ಅರಸರುಗಳ ಹೆಸರುಗಳು ಬೇರೆಯಾಗಿರುತ್ತಿದ್ದವೇ ಹೊರತು ಅಧ್ಯಯನ ವಿಧಾನ, ನೋಡುವ ದೃಷ್ಟಿಕೋನ, ತಳೆಯುವ ತೀರ್ಮಾನಗಳು ಸಾಮ್ರಾಜ್ಯಗಳದ್ದೇ ಆಗಿರುತ್ತಿದ್ದವು. ಅವುಗಳಲ್ಲಿ 'ಸ್ಥಳೀಯತೆ'ಯೇ ಮರೆಯಾಗಿರುತ್ತಿತ್ತು. ವಿಶ್ವಾತ್ಮಕ ಹಾಗೂ ರಾಷ್ಟ್ರೀಯ ಮಾದರಿಗಳು ಸ್ಥಳೀಯ ಚರಿತ್ರೆಯನ್ನು ಸಂಪೂರ್ಣವಾಗಿ ಆವರಿಸಿ ಬರವಣಿಗೆಯಲ್ಲೂ

ಅಧೀನ ಸ್ಥಿತಿಯಲ್ಲಿಟ್ಟವು. ಚರಿತ್ರೆ ಬರವಣಿಗೆಯೊಳಗಿನ ಶ್ರೇಣೀಕರಣ ಈ ಹಿನ್ನೆಲೆ-ಯಿಂದಲೇ ಹುಟ್ಟಿಕೊಂಡಿರುವಂಥದ್ದು.

ಸ್ಥಳೀಯ ಚರಿತ್ರೆಗೆ ಅದರದ್ದೇ ಆದ ಅಧ್ಯಯನ ವಿಧಾನ, ಚಿಂತನಾಕ್ರಮ ಹಾಗೂ ಬರವಣಿಗೆ ಕ್ರಮ ಇರದೇ ಹೋದರೆ ಅದು ಹೆಸರಿಗಷ್ಟೇ ಸ್ಥಳೀಯ ಚರಿತ್ರೆಯಾಗಲು ಸಾಧ್ಯ. ಇರುವ ಆಕರಗಳನ್ನು ಹೊಸ ದೃಷ್ಟಿಕೋನದಿಂದ ನೋಡುವುದು, ಹೊಸ ಆಕರಗಳ ಹುಡುಕಾಟ ನಡೆಸುವುದು, ಎಲ್ಲದಕ್ಕಿಂತ ಮುಖ್ಯವಾಗಿ ಸ್ಥಳೀಯತೆಯನ್ನು ಗ್ರಹಿಸುವುದು ಹಾಗೂ ಗುರುತಿಸುವುದು ಸ್ಥಳೀಯ ಚರಿತ್ರೆ ಅಧ್ಯಯನದಲ್ಲಿ ಮೊದಲ ಆದ್ಯತೆಯಾಗಿ ಕಂಡು ಬರಬೇಕಾಗುತ್ತದೆ. ಅದೇ ರೀತಿ ಭೌಗೋಳಿಕ ಪರಿಸರ ಹಾಗೂ ಚಾರಿತ್ರಿಕ ಸಂದರ್ಭ ಅತ್ಯಂತ ನಿರ್ಣಾಯಕವಾದದ್ದೇ ಆಗಿದೆ. ಮೇಲ್ನೋಟಕ್ಕೆ ಪ್ರಕಟ-ವಾಗುವ ಸ್ಥಳೀಯತೆಯು ವಿಶ್ವಾತ್ಮಕವಾದ ಹಲವಾರು ಸಂಗತಿಗಳನ್ನು ಮೈಗೂಡಿಸಿ-ಕೊಂಡಿರುವುದರಿಂದಾಗಿ ಅದು ಸ್ಥಳೀಯವಾಗಿದ್ದರೂ ಸ್ಥಳೀಯತೆಯನ್ನು ಪ್ರತಿನಿಧಿಸುತ್ತಿ-ರುವುದಿಲ್ಲ. ಸ್ಥಳೀಯತೆಯನ್ನು ಪ್ರಭಾವಿಸಿರುವ ಹಾಗೂ ಆವರಿಸಿರುವ ಸಾಂಸ್ಕೃತಿಕ ಜಗತ್ತು ಅಲ್ಲಿ ನಿರ್ಣಾಯಕವಾಗಿರುತ್ತದೆ. ಹಾಗಾಗಿಯೇ ಸ್ಥಳೀಯ ಸಣ್ಣಪುಟ್ಟ ಸಂಸ್ಥಾನಗಳು ಕೂಡ ತಮ್ಮ ಮೂಲವನ್ನು ಪುರಾಣಗಳ ಮೂಲಕ ಹಾಗೂ ತಮ್ಮ ವೈಭವವನ್ನು ಸಾಮ್ರಾಟರ ರೀತಿಯ ಬಿರುದಾವಳಿಗಳ ಮೂಲಕ ತೋರ್ಪಡಿಸುವ ಹಾಗೂ ಕಂಡುಕೊಳ್ಳುವ ಪ್ರಯತ್ನವನ್ನು ಮಾಡಿದವು. ಅವರ ಆಸ್ಥಾನ ಪಂಡಿತರುಗಳು ಕೂಡ ಸ್ಥಳೀಯ ವಸ್ತುಸಂಗತಿಗಳನ್ನು ಕೈಬಿಟ್ಟು ಅಲೌಕಿಕ ವಿಚಾರಗಳಿಗೆ ಹಾಗೂ ಪ್ರಭುತ್ವದ ವೈಭವಕ್ಕೆ ಒತ್ತು ಕೊಟ್ಟು ಸಾಹಿತ್ಯ ರಚಿಸಿದರು. ಇದರಿಂದಾಗಿ ಸ್ಥಳೀಯ ಭಾಷೆ, ಸಾಹಿತ್ಯ, ಸಂಸ್ಕೃತಿ ಹಾಗೂ ಭೌಗೋಳಿಕತೆ ಸಾಹಿತ್ಯದ ವಸ್ತುವಾಗಲು ಸಾಧ್ಯ-ವಾಗಲಿಲ್ಲ. ಸ್ಥಳೀಯವಲ್ಲದ ವಿಚಾರಗಳು ಚರಿತ್ರೆಯಲ್ಲಿ ದಾಖಲುಗೊಂಡು ಅಧಿಕೃತ-ಗೊಳ್ಳುತ್ತಾ ಸಾಗಿದವು. ಆದರೆ ಅವು ಆಯಾ ಪ್ರದೇಶದ ಚರಿತ್ರೆಯ ನೈಜ ಚಿತ್ರಣವಾಗಲು ಸಾಧ್ಯವಿಲ್ಲ. ಆಯಾ ಭೌಗೋಳಿಕ ಪರಿಸರದ ಹಿನ್ನೆಲೆಯಿಂದಲೇ ಅಧ್ಯಯನ ನಡೆಸಬೇಕು ಎನ್ನುವುದು ಕೇವಲ ಆಶಯವಾಗಿ ಉಳಿದಿದೆಯೇ ಹೊರತು ಕಾರ್ಯರೂಪಕ್ಕೆ ಬರಲಿಲ್ಲ. ಇದರರ್ಥ ಪ್ರಭಾವಿಸುವ ಶಕ್ತಿಗಳು ಅಷ್ಟರಮಟ್ಟಿಗೆ ಬಲಿಷ್ಠವಾಗಿರುತ್ತವೆ ಎನ್ನುವುದೇ ಆಗಿದೆ. ಅಧ್ಯಯನದ ಸಿದ್ಧ ಮಾದರಿಗಳು ಒಂದು ಕಾರಣವಾದರೆ, ಸಮಾಜದಲ್ಲಿ ನಿರ್ಮಾಣಗೊಂಡಿರುವ ಸಾಂಸ್ಕೃತಿಕ ಯಜಮಾನಿಕೆ ಈ ಬಗೆಯ ವಿರೋಧಾಭಾಸಗಳಿಗೆ ಇನ್ನೊಂದು ಕಾರಣವಾಗಿದೆ.

ಭೌಗೋಳಿಕ ಲಕ್ಷಣಗಳು ವಿಭಿನ್ನ ಸ್ವರೂಪದ ಜನಸಂಸ್ಕೃತಿ ರೂಪುಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತಿರುತ್ತವೆ. ಅದೇ ರೀತಿ ಸ್ಥಳೀಯ ರಾಜ್ಯ ನಿರ್ಮಾಣ ಪ್ರಕ್ರಿಯೆ-ಯಲ್ಲೂ ನಿರ್ಣಾಯಕವಾಗಿರುತ್ತವೆ. ಇದನ್ನೇ 'ರಾಜಕೀಯ ಭೌಗೋಳಿಕತೆ' ಎಂಬುದಾಗಿ ಕರೆದಿರುವುದು. ಇದರಲ್ಲಿ ರಾಜ್ಯ, ರಾಜ್ಯದ ಭೌಗೋಳಿಕತೆ ಹಾಗೂ ರಾಜ್ಯದ ಜನತೆ

Scanned with OKEN Scanner

ಪ್ರಧಾನವಾಗಿರುತ್ತದೆ. ಇದು ಪ್ರಕೃತಿ ಹಾಗೂ ಮಾನವ ಬದುಕಿನ ನಡುವಿನ ಸಂಬಂಧವನ್ನು ಅರ್ಥೈಸಿಕೊಳ್ಳುವ ವಿಧಾನವೂ ಆಗಿದೆ. ಆದರೆ ಪರಿಸರ ಚರಿತ್ರೆ ಎನ್ನುವ ಜ್ಞಾನವಿಸ್ತು ಇತ್ತೀಚಿನವರೆಗೂ ಚರಿತ್ರೆಕಾರರಿಗೆ ಮುಖ್ಯವಾಗಿ ಕಂಡುಬರಲೇ ಇಲ್ಲ. ಯುರೋಪ್‌ಕೇಂದ್ರಿತ ಅಧ್ಯಯನ ಕ್ರಮವಾಗಲಿ ಅಥವಾ ಸ್ಥಳೀಯ ಪುರೋಹಿತಶಾಹಿ ಅಧ್ಯಯನ ಕ್ರಮವಾಗಲಿ ಈ ಸ್ವರೂಪದ ಅಧ್ಯಯನಕ್ಕೆ ಒತ್ತು ನೀಡದೆ ಪ್ರಕೃತಿಯಿಂದ ಅಥವಾ ಸ್ಥಳೀಯತೆಯಿಂದ ಬೇರ್ಪಟ್ಟ ಅಧ್ಯಯನಗಳಿಗೇ ಹೆಚ್ಚಿನ ಒತ್ತನ್ನು ನೀಡುತ್ತಾ ಹೋದವು. ಯುರೋಪ್‌ಕೇಂದ್ರಿತ ಚಿಂತನೆಗಳು ಸ್ಥಳೀಯ ಜ್ಞಾನ ವ್ಯವಸ್ಥೆಯನ್ನು ಅಜ್ಞಾನ ಅಥವಾ ಸಾಂಪ್ರದಾಯಿಕ ಎಂಬುದಾಗಿ ಕರೆದು ಅಂಚಿಗೆ ತಳ್ಳಿದರೆ, ಪುರೋಹಿತಶಾಹಿ ವ್ಯವಸ್ಥೆಯ ಕೇವಲ ಲಿಖಿತ ಸಂಸ್ಕೃತಿ ಹಾಗೂ ಅದರ ಮೂಲಕ ಅಲೌಕಿಕ ಜಗತ್ತನ್ನು ಸೃಷ್ಟಿಸಿ ಸ್ಥಳೀಯತೆಯನ್ನು ಗುಲಾಮ ಸ್ಥಿತಿಗೆ ತಂದು ನಿಲ್ಲಿಸಿತು. ಹಾಗಾಗಿ ಸ್ಥಳೀಯತೆ ಸ್ಥಳೀಯರಿಂದಲೇ ನಿರ್ಲಕ್ಷ್ಯಕ್ಕೆ ಒಳಗಾಗುವಂತಾಯಿತು.

ಭಾರತದ ಸಂದರ್ಭದಲ್ಲಿ ನೋಡುವಾಗ ಉತ್ತರದ ಹಿಮಾಲಯ ಪರ್ವತ ಶ್ರೇಣಿ, ಮಧ್ಯದ ವಿಂಧ್ಯಾ ಪರ್ವತ ಶ್ರೇಣಿ ಹಾಗೂ ದಕ್ಷಿಣದ ಸಹ್ಯಾದ್ರಿ ಪರ್ವತ ಶ್ರೇಣಿ ಕೇವಲ ಭೌಗೋಳಿಕ ಲಕ್ಷಣಗಳಾಗಿರದೆ ಜನಜೀವನವನ್ನು ರೂಪಿಸಿದ ಹಾಗೂ ಅಭಿವೃದ್ಧಿಯನ್ನು ಸಾಧ್ಯವಾಗಿಸಿದ ಸಾಧನಗಳೂ ಆಗಿವೆ. ಆದರೆ ಯುರೋಪಿನ ಈಸ್ಟ್ ಇಂಡಿಯಾ ಕಂಪನಿಗಳಿಗೆ ಈ ಪರ್ವತ ಶ್ರೇಣಿಗಳು ಹಾಗೂ ದಟ್ಟವಾದ ಅರಣ್ಯಗಳು ವ್ಯಾಪಾರದ ಸರಕುಗಳಾಗಿ ಕಂಡುಬಂದವು. ಕರ್ನಾಟಕದ ಸಂದರ್ಭವನ್ನು ಗಮನಿಸುವಾಗ ಕರ್ನಾಟಕವು ಏಕರೂಪದಲ್ಲಿ ಕಂಡುಬರುವುದಿಲ್ಲ. ಕರ್ನಾಟಕವು ಉತ್ತರದ ಬಯಲು, ದಕ್ಷಿಣದ ಬಯಲು, ಮಲೆನಾಡು, ಅರೆಮಲೆನಾಡು, ಕರಾವಳಿ ಹೀಗೆ ವಿವಿಧ ಭೌಗೋಳಿಕ ಲಕ್ಷಣಗಳಿಗೆ ಅನುಗುಣವಾಗಿ ವಿಂಗಡಣೆಗೊಂಡಿದೆ. ಆಯಾ ಭೌಗೋಳಿಕ ಲಕ್ಷಣಗಳಿಗೆ ಅನುಗುಣವಾಗಿಯೇ ಅಲ್ಲಿನ ರಾಜಕಾರಣ, ಸಮಾಜ, ಆರ್ಥಿಕತೆ ಹಾಗೂ ಆರಾಧನಾ ಸಂಪ್ರದಾಯಗಳು ರೂಪಿತವಾಗಿವೆ. ಆಡಳಿತ, ಭಾಷೆ, ಸಾಹಿತ್ಯ, ವಾಸ್ತುಶೈಲಿ, ಆರಾಧನೆ, ಸಿದ್ಧಾಂತ ಈ ಮುಂತಾದವು ಸ್ಥಳೀಯ ವೈಶಿಷ್ಟ್ಯಗಳಿಗೆ ಅನುಗುಣವಾಗಿಯೇ ಹುಟ್ಟಿಕೊಂಡಿವೆ. ಅದರೊಂದಿಗೆ ವಿದೇಶಿ ಮುಖಾಮುಖಿ ಹಾಗೂ ಆಂತರಿಕ ಅಂತರ್‌ಸಂಬಂಧಗಳ ಮೂಲಕ ಸಂಮಿಶ್ರ ಸಂಸ್ಕೃತಿಯೂ ರೂಪುಗೊಳ್ಳುತ್ತಾ ಹೋಗಿದೆ. ಈ ಅಂಶವನ್ನು ಸ್ಥಳೀಯ ಚರಿತ್ರೆ ಅಧ್ಯಯನದ ಸಂದರ್ಭದಲ್ಲಿ ಬಹಳ ಸೂಕ್ಷ್ಮವಾಗಿ ಪರಿಶೀಲಿಸಬೇಕಾಗುತ್ತದೆ. ಇಲ್ಲವಾದಲ್ಲಿ 'ಸ್ಥಳೀಯತೆ'ಯೇ ಇಲ್ಲದ ಸ್ಥಳೀಯ ಚರಿತ್ರೆಯಷ್ಟೇ ನಿರ್ಮಾಣಗೊಳ್ಳಲು ಸಾಧ್ಯ.

ಪರಾಮರ್ಶನ ಗ್ರಂಥಗಳು

೧. ಕೀತ್ ಜೆಂಕಿನ್ಸ್, ರಿ-ಥಿಂಕಿಂಗ್ ಹಿಸ್ಟರಿ, ರೂಟ್ಲೆಡ್ಜ್, ಲಂಡನ್, ೧೯೯೧ (ಮರುಮುದ್ರಣ, ೨೦೦೩).

೨. ಗೋಪಾಲ್ ಎಸ್. ಮತ್ತು ರೋಮಿಲಾ ಥಾಪರ್ (ಸಂ.), ಪ್ರಾಬ್ಲಂಸ್ ಆಫ್ ಹಿಸ್ಟಾರಿಕಲ್ ರೈಟಿಂಗ್ ಇನ್ ಇಂಡಿಯಾ, ಇಂಡಿಯಾ ಇಂಟರ್‌ನ್ಯಾಷನಲ್ ಸೆಂಟರ್, ನ್ಯೂಡೆಲ್ಲಿ, ೧೯೭೩.

೩. ಬಿಪನ್ ಚಂದ್ರ, ಮೃದುಲಾ ಮುಖರ್ಜಿ, ಆದಿತ್ಯ ಮುಖರ್ಜಿ ಮತ್ತು ಸುಚೇತ ಮಹಾಜನ್, ಇಂಡಿಯಾಸ್ ಸ್ಟ್ರಗಲ್ ಫಾರ್ ಇಂಡಿಪೆಂಡೆನ್ಸ್, ಪೆಂಗ್ವಿನ್ ಬುಕ್ಸ್, ನ್ಯೂಡೆಲ್ಲಿ, ೧೯೮೯.

೪. ಸುರೇಂದ್ರ ರಾವ್ ಬಿ., ವೇಸ್ ಆ್ಯಂಡ್ ಬೈವೇಸ್ ಆಫ್ ಹಿಸ್ಟರಿ–ಮ್ಯೂಸಿಂಗ್ಸ್, ಆನ್ ಹಿಸ್ಟರಿ ಆ್ಯಂಡ್ ಹಿಸ್ಟಾರಿಕಲ್ ರೈಟಿಂಗ್ಸ್, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ೨೦೧೫.

Scanned with OKEN Scanner

Scanned with OKEN Scanner

ISSN 2319-7307

ನಿಮ್ಮದಿಯ ನಾಳಿ ನಿಮ್ಮದು

ಶ್ರಮಿಕ

ಮೇ ೨೦೨೩ ✤ ಬೆಲೆ : ₹ ೩೦

ನವಕರ್ನಾಟಕ ಪ್ರಕಾಶನ



ವಿಶ್ವ ಶ್ರಮಿಕ ದಿನಾಚರಣೆಯ ಶುಭಾಶಯಗಳು

Scanned with OKEN Scanner

Scanned with OKEN Scanner

ಹೊಸತು

ಒಳಗೇನಿದೆ?

ನೆಮ್ಮದಿಯ ನಾಳೆ ನಮ್ಮದು

ಇಂದಿನ ನೆನಪಿನ ಅಂದಿನ ದಿನಗಳು (ನೆನಪಿನಂಗಳದಿಂದ) ಜಿ. ರಾಮಕೃಷ್ಣ ... ೭

'ಕರ್ನಾಟಕ ಪ್ರಾಂತ್ಯ ಆಗಲೇಬೇಕು' ಶಾಂತವೇರಿ ಗೋಪಾಲಗೌಡ ... ೧೧

ನಗರ ಕಾರ್ಮಿಕರ ಐಡೆಂಟಿಟಿ : ಕೆಲವು ಪ್ರಶ್ನೆಗಳು ಡಾ॥ ಕೆ. ಮೋಹನ್‌ಕೃಷ್ಣ ರೈ ... ೧೯

ಎಂಟು ಗಂಟೆಗಳ ಕೆಲಸದ ಅವಧಿಯ ಪರವಾಗಿ
ಮೂಲ : ಎಂ. ಸತ್ಯಾನಂದ, ಅನು : ಎಂ. ಸಿ. ಡೋಂಗ್ರೆ ... ೨೭

ಪ್ರಪಂಚದಾದ್ಯಂತ ಪ್ರಕ್ಷುಬ್ಧ ಪರಿಸ್ಥಿತಿ – ಹೋರಾಟದ ಚಂಡಮಾರುತ
ಡಾ॥ ಬಿ. ಆರ್. ಮಂಜುನಾಥ್ ... ೩೭

ಅಂಕಣಗಳು

ಬ್ಯಾಂಕುಗಳ ಬಿಕ್ಕಟ್ಟುಗಳು ಒಂದು ಎಚ್ಚರಿಕೆಯ ಗಂಟೆ
ಟಿ. ಎಸ್. ವೇಣುಗೋಪಾಲ್ ... ೪೩

ನೆಲದ ಸಂಸ್ಕೃತಿಯ ಹಾಡು ಪಾಡು ಡಾ॥ ಎನ್. ಜಗದೀಶ್ ಕೊಪ್ಪ ... ೫೦

ತಾರಕ್ಕ ಬಿಂದಿಗೆ ನಾ ನೀರಿಗ್ಹೋಗುವೆ, ತಾರೇ ಬಿಂದಿಗೆಯಾ
ಡಾ॥ ವಿನಯಾ ಒಕ್ಕುಂದ ... ೧೭

ಕಾವ್ಯಲೋಕ ೧೬, ೨೬, ೨೯, ೩೨, ೩೬, ೪೬, ೫೨

ಎಲ್ಲಿಂದಲೋ ಬಂದವರು ಡಾ॥ ಬಸು ಬೇವಿನಗಿಡದ ... ೩೧

ವಿಣೆಯೇರುವ ಮೊದಲು ನುಂಗುವ ಹಾವು! ಶಾರದಾ ಗೋಪಾಲ ... ೪೭

ಮದುಮಕ್ಕಳಿಗೆ ಕಿವಿಮಾತು – ಸವಿಮಾತು ಡಾ॥ ಸಂಜೀವ ಕುಲಕರ್ಣಿ ... ೩೪

ಅಂಗನವಾಡಿ ಅಂಗನೆಯರ ಸಾಮಾಜಿಕ ಕ್ರಾಂತಿ
ಶ್ರೀಸುಮಿತ್ರಾಸುತ ಅಗಸಬಾಳ ... ೫೯

ಅಂಗನವಾಡಿ ತಾಯಂದಿರ ಬವಣೆ ಡಾ॥ ಎಚ್. ಜಿ. ಜಯಲಕ್ಷ್ಮಿ ... ೫೩

ಆರೋಗ್ಯ ಕ್ಷೇತ್ರದ ಆಧಾರ ಸ್ತಂಭ – ಆಶಾ ಡಿ. ನಾಗಲಕ್ಷ್ಮಿ ... ೫೭

ಸತ್ಯಪಾಲ್ ಮಲಿಕ್ ಸ್ಫೋಟಕ ಸಂದರ್ಶನ
ಸಂಗ್ರಹ ರೂಪ : ಸುರೇಶ್ ಕಂಜರ್ಪಣೆ ... ೬೧

ತೊಗಲುಗೊಂಬೆಗಳಿಗೆ ಜೀವತುಂಬಿದ ಕಲಾ ಧೀಮಂತ
ಜಾನಪದ ನಾಡೋಜ ಶ್ರೀ ಬೆಳಗಲ್ಲು ವೀರಣ್ಣ ಟಿ. ಕೆ. ಗಂಗಾಧರ ಪತ್ತಾರ ... ೪೧

ನಾನು ಓದಿದ ಪುಸ್ತಕ : ಅಂತರಾಳ ಅನಿಸಿಕೆಗಳು
ವಿದ್ವಾನ್ ವಿ. ನಂಜುಂಡಸ್ವಾಮಿ ... ೨೩

ಮಬ್ಬಿನಿಂದ ಇಬ್ಬನಿಗೆ – ಆತ್ಮಕತೆಯೂ ನೆಲದ ನಂಟೂ ಒಂದಾದ ಬಗೆ
ಎಂ. ನಾಗರಾಜ ಶೆಟ್ಟಿ ... ೨೫

ನಭಾವಲೋಕನ : ವಿಶಾಖಾ ನಕ್ಷತ್ರ – ಚಂದ್ರಗ್ರಹಣಕ್ಕೊಂದು ಪ್ರಯೋಗ
ಡಾ॥ ಬಿ. ಎಸ್. ಶೈಲಜಾ ... ೩೦

ಹೊಸ ಓದು ಇಂದಿರಾಕುಮಾರಿ, ಡಾ॥ ಎಂ. ವೆಂಕಟಸ್ವಾಮಿ ... ೬

ಚಿತ್ರಗಳು : ಬಸವರಾಜ ಕಲೆಗಾರ

ಮುಖಪುಟ : ಅಂತರ್ಜಾಲ

ವಿಷ್ಯವಾನ...

ಇಸ್ರೇಲ್‌ನಿಂದ ಒಂದು ಅದ್ಭುತವಾದ ಸುದ್ದಿ ಬಂದಿದೆ. ಜನಹೋರಾಟಕ್ಕೆ ದೊರೆತ ಭರ್ಜರಿ ವಿಜಯದ ಸುದ್ದಿ ಅದು. ಇಸ್ರೇಲ್‌ನಲ್ಲಿ ಜನಹೋರಾಟವೇ ಇದೆಂಥ ಅಚ್ಚರಿಯ ಸುದ್ದಿ ಎನ್ನಿಸಬಹುದು! ಆದರೆ ಎಲ್ಲೆಲ್ಲಿ ಜನಸಾಮಾನ್ಯರಿರುತ್ತಾರೋ (ಅವರಿರದ ದೇಶ ಎಂಬುದು ಸಾಧ್ಯವೇ!) ಅಲ್ಲೆಲ್ಲಾ ಒಂದಲ್ಲಾ ಒಂದು ದಿನ ಭವ್ಯವಾದ ಹೋರಾಟಗಳು ಸ್ಫೋಟಗೊಳ್ಳಲೇಬೇಕಲ್ಲವೇ! ಈ ಹೋರಾಟದ ಹಿನ್ನೆಲೆ ಏನು?

ಇಸ್ರೇಲ್‌ನಲ್ಲಿ ಬೆಂಜಮಿನ್ ನೆತಾನ್ಯಹು ಎಂಬ ಒಬ್ಬ ಭ್ರಷ್ಟ, ದುಷ್ಟ, ಜನಾಂಗೀಯವಾದಿ, ಬಲಪಂಥೀಯ ಪ್ರಧಾನಮಂತ್ರಿ ಇದ್ದಾನೆ. ಅವನ ಮೇಲೆ ಲಂಚ, ವಿಶ್ವಾಸದ್ರೋಹ ಮುಂತಾದ ಆರೋಪಗಳಿವೆ. ಅದೆಲ್ಲಾ ಕೋರ್ಟುಗಳ ಮುಂದೆ ಬರುತ್ತಿದೆ. ಇಸ್ರೇಲ್‌ನ ನ್ಯಾಯಾಂಗ ಇಂಥ ವಿಷಯಗಳಲ್ಲಿ ಒಂದಿಷ್ಟು ನಿಷ್ಪಕ್ಷಪಾತವಾಗಿ ನಡೆದುಕೊಳ್ಳುವ ಸಾಧ್ಯತೆ ಇದೆ. ಅಂತಿಮವಾಗಿ ಯಾವುದೇ ಬಂಡವಾಳಶಾಹಿ ದೇಶದಲ್ಲಿನ ನ್ಯಾಯಾಂಗವು ಆಳುವವರ್ಗದ ಪರವಾಗಿ ಕೆಲಸ ಮಾಡುತ್ತದೆ ಎಂಬುದು ಸತ್ಯ. ಆದರೆ ಆಳುವ ವರ್ಗದ ಒಳಗಿನ ದ್ವಂದ್ವಗಳಲ್ಲಿ ಕೆಲವೊಮ್ಮೆ ನೀತಿಬದ್ಧ ನ್ಯಾಯಮೂರ್ತಿಗಳು ದೃಢವಾದ ನಿಲುವನ್ನು ತೆಗೆದುಕೊಳ್ಳುವುದುಂಟು. ಸರ್ವಾಧಿಕಾರಿ ಧೋರಣೆಯಿರುವ ಸರ್ಕಾರಗಳು ಇದನ್ನು ಸಹಿಸಲಾರವು. ನೆತಾನ್ಯಹು ಮಾತ್ರವಲ್ಲ ನಮ್ಮ ದೇಶದ ಇಂದಿನ ಸರ್ಕಾರ ಸಹ ಅದೇ ಜಾಯಮಾನದ್ದು.

ತನಗೆ ಬೇಕಾದಂಥ ನ್ಯಾಯಾಧೀಶರಿದ್ದರೆ ತೀರ್ಪುಗಳನ್ನು ತಿರುಚಿ ಅನುಕೂಲವಾಗುವಂತೆ ಬರೆಸಿಕೊಳ್ಳಬಹುದು ಎಂಬುದು ಈ ನೆತಾನ್ಯಹುವಿನ ಹುನ್ನಾರ. ಆದ್ದರಿಂದ ಅವನು ನ್ಯಾಯಾಧೀಶರನ್ನು ನೇಮಿಸುವ ಅಧಿಕಾರ ಸರ್ಕಾರಕ್ಕಿರಬೇಕು ಎಂದು ವರಾತ ಹಚ್ಚಿದ. ನ್ಯಾಯಾಂಗದೊಡನೆ ಸಂಘರ್ಷಕ್ಕಿಳಿದ. ತನ್ನ ಅಧಿಕಾರವನ್ನು ವಿಸ್ತರಿಸಿಕೊಳ್ಳಲು ಇಸ್ರೇಲ್‌ನ ಸಂವಿಧಾನವನ್ನೇ ಬದಲಾಯಿಸಲು ಹೊರಟ. ಇಂಥ ರಾಜಕೀಯ ಪ್ರಶ್ನೆಗಳ ಬಗ್ಗೆ ಜನತೆ ತಲೆಕೆಡಿಸಿಕೊಳ್ಳಲಾರರು ಎಂಬುದು ಅವನ ನಿರೀಕ್ಷೆಯಾಗಿತ್ತು ಎನಿಸುತ್ತದೆ. ಆದರೆ 'ಆದದ್ದು ಒಂದು, ಅಂದುಕೊಂಡದ್ದೊಂದು' ಎಂಬಂತೆ ಜನತೆ ತಿರುಗಿ ಬೀಳಲಾರಂಭಿಸಿದರು.

ಈ ಪ್ರತಿಭಟನೆಯಲ್ಲಿ ಟ್ರೇಡ್ ಯೂನಿಯನ್‌ಗಳು ಬಹಳ ಒಳ್ಳೆಯ ಪಾತ್ರವನ್ನು ವಹಿಸಿದವು. ಸಂವಿಧಾನವನ್ನು (ಅಲ್ಲಿ ಲಿಖಿತ ಸಂವಿಧಾನ ಇಲ್ಲದಿದ್ದರೂ) ಕಾಪಾಡಿ ಎಂಬ ಘೋಷಣೆಯೊಂದಿಗೆ ಜನತೆ ರಸ್ತೆಗಿಳಿದರು. ವಿಮಾನನಿಲ್ದಾಣಗಳು, ವಿದೇಶದಲ್ಲಿನ ರಾಯಭಾರಿ ಕಛೇರಿಗಳು, ಕಾರ್ಖಾನೆ, ವಿದ್ಯಾಸಂಸ್ಥೆಗಳು ಎಲ್ಲೆಡೆ ಪ್ರತಿಭಟನೆ ಕಾಣಿಸಿಕೊಂಡಿತು. ಪ್ಯಾಲೆಸ್ಟೈನ್ ಮುಸ್ಲಿಮರ ವಿರುದ್ಧ ಇಸ್ರೇಲ್‌ನ ಯಹೂದಿ ಜನಸಾಮಾನ್ಯರನ್ನು ಎತ್ತಿಕಟ್ಟುವ ಪ್ರಧಾನಿಯ ದುಷ್ಟತಂತ್ರ ಸಹ ಈ ಬಾರಿ ಫಲಕೊಟ್ಟಿಲ್ಲ.

ಇಸ್ರೇಲ್‌ನಲ್ಲಿಯೂ ಎಡವಾದಿ–ಪ್ರಜಾಸತ್ತಾತ್ಮಕ ಚಳವಳಿ ಇದೆ, ಅದು ಅರಬ್ಬರ ಮತ್ತು ಯಹೂದಿಗಳ ಒಗ್ಗಟ್ಟಿನ ಹೋರಾಟವನ್ನು ಲಕ್ಷಾಂತರ ಸಂಖ್ಯೆಯಲ್ಲಿ ಅನೇಕ ಬಾರಿ ಸಂಘಟಿಸಿದೆ. ಅದೆಲ್ಲಾ ಮಾಧ್ಯಮದಲ್ಲಿ ಬರುವುದಿಲ್ಲ ಅಷ್ಟೇ.

ಈ ಬಾರಿ ಸಹ ಲಕ್ಷಾಂತರ ಜನ ರಸ್ತೆಗಿಳಿದರು, ಪೊಲೀಸರೊಂದಿಗೆ ಗುದ್ದಾಟಕ್ಕಿಳಿದರು. ರಕ್ಷಣಾಮಂತ್ರಿಯೇ ಸರ್ಕಾರವನ್ನು ವಿರೋಧಿಸಿದ್ದರಿಂದ ಪ್ರಧಾನಿ ಅವರನ್ನು ವಜಾಮಾಡಿದ. ಸೈನ್ಯದ ಒಂದು ಭಾಗ ತಿರುಗಿಬೀಳುವ ಸೂಚನೆ ಬಂತು. ಕಡೆಗೆ ಅಮೆರಿಕಾ ಸಹ ನೆತಾನ್ಯಹುವಿನ ಕಿವಿಹಿಂಡಿತು. ಇದೀಗ ಅವನು 'ದೇಶದ ಐಕ್ಯತೆಗಾಗಿ ಸಂವಿಧಾನ ತಿದ್ದುವ ಕಾರ್ಯಕ್ರಮವನ್ನು ಕೈ ಬಿಟ್ಟಿದ್ದೇವೆ' ಎಂದು ಬಾಲ ಮುದುರಿಕೊಂಡು ಹಿಂದೆ ಸರಿದಿದ್ದಾನೆ ಮತ್ತು ರಕ್ಷಣಾಮಂತ್ರಿಯನ್ನು ಮತ್ತೆ ನೇಮಕ ಮಾಡಿದ್ದಾನೆ.

ಕಥೆಯ ಪೂರ್ವಾರ್ಧ ಭಾರತವನ್ನು ಹೋಲುತ್ತದೆ. ಉತ್ತರಾರ್ಧ ಸಹ

Scanned with OKEN Scanner



ನಗರ ಕಾರ್ಮಿಕರ ಐಡೆಂಟಿಟಿ: ಕೆಲವು ಪ್ರಶ್ನೆಗಳು



ಡಾ. ಕೆ. ಮೋಹನ್‌ಕೃಷ್ಣ ರೈ

ಕೈಗಾರಿಕೀಕರಣ ಹಾಗೂ ನಗರೀಕರಣ ಪ್ರಕ್ರಿಯೆಗಳು ಸೃಷ್ಟಿಸಿದ ಹಲವಾರು ಸಮಸ್ಯೆಗಳಲ್ಲಿ ನಗರ ಕಾರ್ಮಿಕ ವರ್ಗದ ಸಮಸ್ಯೆಯೂ ಒಂದು. ಆದರೆ ಇದು ಇನ್ನಿತರ ಸಮಸ್ಯೆಗಳ ರೀತಿಯದ್ದಾಗಿರದೆ ನಗರೀಕರಣದ ಅಸ್ತಿತ್ವವನ್ನೇ ಪ್ರಶ್ನಿಸುವ ಸ್ವರೂಪದ್ದಾಗಿದೆ. ಕಾರ್ಮಿಕರ ಸಮಸ್ಯೆಯನ್ನು ಇನ್ನೊಂದರ್ಥದಲ್ಲಿ ಪರಿಭಾವಿಸುವ ಕ್ರಮವೂ ಇದೆ. ಅದೇನೆಂದರೆ ಕೃಷಿ ಹಾಗೂ ಉದ್ದಿಮೆಗಳಲ್ಲಿ ಕೂಲಿಕಾರರ ಕೊರತೆ ಎನ್ನುವುದು. ಪ್ರಸ್ತುತ ಲೇಖನದ ಉದ್ದೇಶ ಕಾರ್ಮಿಕ ವರ್ಗದ ಬದುಕಿನ ಸಮಸ್ಯೆಗಳು ಹಾಗೂ ಅವರು ಅಸ್ತಿತ್ವಕ್ಕಾಗಿ ನಡೆಸುವ ಪರದಾಟಗಳ ಕುರಿತು ಚರ್ಚಿಸುವುದಾಗಿದೆ. ಕಾರ್ಮಿಕರ ಕೊರತೆ ಯಾಕಾಗಿ ಕಂಡುಬಂತು ಎನ್ನುವ ಪ್ರಶ್ನೆಯೂ ಮುಖ್ಯವಾದದ್ದೇ ಆಗಿದ್ದು, ಅದೂ ಕೂಡ ಕಾರ್ಮಿಕರು ಎದುರಿಸಿದ ಹಾಗೂ ಎದುರಿಸುತ್ತಿರುವ ಸಮಸ್ಯೆಗಳೊಂದಿಗೆ ತಳುಕು ಹಾಕಿಕೊಂಡಿದ್ದೇ ಆಗಿದೆ. ಆದರೆ ಅದು ಬೇರೆ ಬಗೆಯ ಚರ್ಚೆಯನ್ನೇ ಬಯಸುತ್ತದೆ. ಏಕೆಂದರೆ ಕೃಷಿ ಹಾಗೂ ಉದ್ದಿಮೆಗಳ ಸ್ವರೂಪ, ಕಾರ್ಯವೈಖರಿ ಹಾಗೂ ಆಕರ್ಷಣೆಯ ಮೂಲಗಳೇ ಭಿನ್ನವಾಗಿರುವಂಥವು. ನಗರಗಳಲ್ಲಿ ಕಾರ್ಮಿಕರ ಕೊರತೆಯ ಪ್ರಶ್ನೆಗಿಂತ ಅವರ ಬದುಕಿನ ಪ್ರಶ್ನೆಯೇ ಮುಖ್ಯವಾಗಿರುವಂಥದ್ದು. ವ್ಯಾಪಕ ವಲಸೆಯಿಂದಾಗಿ ನಗರಗಳಲ್ಲಿ ಕಾರ್ಮಿಕರಿಗೇನೂ ಕೊರತೆಯಿಲ್ಲ. ಆದರೆ ಕೊರತೆ ಕಂಡುಬರುವುದು ಕಾರ್ಮಿಕರಿಗೆ ಸಿಗಬೇಕಾದ ಕೂಲಿ, ವಸತಿ ಹಾಗೂ ಗೌರವದಲ್ಲಿ. ಇಲ್ಲಿರುವ ಪ್ರಶ್ನೆಯೆಂದರೆ ಕಾರ್ಮಿಕ ವರ್ಗದ ಸಮಸ್ಯೆಯನ್ನು ಸೃಷ್ಟಿಸಿದವರು ಯಾರು ಎನ್ನುವುದು. ಕಾರ್ಮಿಕ ವರ್ಗವೇ ಸಮಸ್ಯೆಯನ್ನು ಸೃಷ್ಟಿಸಿಕೊಂಡಿತೇ ಅಥವಾ ನಗರೀಕರಣ ಪ್ರಕ್ರಿಯೆ ಈ ಸಮಸ್ಯೆಯನ್ನು ಸೃಷ್ಟಿಸಿತೇ ಎನ್ನುವುದು. ಈ ಚರ್ಚೆ ಅತ್ಯಂತ ಪ್ರಮುಖವಾದದ್ದು, ಏಕೆಂದರೆ ಕಾರ್ಮಿಕರನ್ನು ಗುರಿಯಾಗಿಸಿಕೊಂಡೇ ಕಾರ್ಮಿಕ ವರ್ಗದ ಸಮಸ್ಯೆಗಳನ್ನು ನೋಡುವ ವಿಧಾನ ಹಾಗೂ ವ್ಯವಸ್ಥೆ ನಗರಗಳಲ್ಲಿ ಈಗಾಗಲೇ ನಿರ್ಮಾಣಗೊಂಡಿದೆ. ಈ ವ್ಯವಸ್ಥೆಯ ಪ್ರಕಾರ ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ನಡೆಸುವ ಕಾರ್ಮಿಕರು ವಿಲನ್‌ಗಳು ಹಾಗೂ ಅಪರಾಧಿಗಳು. ಅನೇಕ ಸಂದರ್ಭಗಳಲ್ಲಿ ನ್ಯಾಯಯುತವಾಗಿ ನಡೆಯುವ ಹೋರಾಟಗಳ ದಾರಿ ತಪ್ಪಿಸುವ ಪ್ರಯತ್ನಗಳು ಕೂಡ ನಡೆಯುತ್ತಿರುತ್ತವೆ. ಅಷ್ಟೇ ಅಲ್ಲದೆ ನಗರದ ಅಪರಾಧಗಳಿಗೆ ಕೊಳೆಗೇರಿ ಜನರೇ ಕಾರಣ ಎನ್ನುವ ತೀರ್ಮಾನಕ್ಕೂ ಬರುವುದಿದೆ. ನಗರ ಕಾರ್ಮಿಕರ, ಅದರಲ್ಲೂ ಕೊಳೆಗೇರಿಗಳಲ್ಲಿ ನೆಲೆಸಿರುವ ಕಾರ್ಮಿಕರ ಅಸಹಾಯಕತೆಯನ್ನೇ ಅಸ್ತ್ರವಾಗಿಸಿಕೊಂಡು ತಮ್ಮ ಬದುಕನ್ನು ಗಟ್ಟಿಗೊಳಿಸಿಕೊಳ್ಳುವ ಜನವರ್ಗ ನಗರಗಳಲ್ಲಿ ಸಾಕಷ್ಟಿದೆ.

ವಸಾಹತುಶಾಹಿ ಆಳ್ವಿಕೆಯ ಸಂದರ್ಭದಲ್ಲಿ ನಗರ ಕಾರ್ಮಿಕರ ಬದುಕಿಗೊಂದು ಸ್ಥಿರತೆ, ಖಚಿತತೆ ಅಥವಾ ಭರವಸೆ ಎನ್ನುವುದು ಇರಲಿಲ್ಲ. ಇಂದಿನ ಮಾಹಿತಿ ತಂತ್ರಜ್ಞಾನ ಯುಗದ ಕಾರ್ಮಿಕರೊಂದಿಗೆ ಹೋಲಿಸಿ ಅಥವಾ ಅವರ ಬದುಕನ್ನು ಉದಾಹರಣೆಯಾಗಿಟ್ಟುಕೊಂಡು ಇಲ್ಲಿ ತೀರ್ಮಾನಕ್ಕೆ ಬರಲು ಸಾಧ್ಯವಾಗುವುದಿಲ್ಲ. ಏಕೆಂದರೆ ಕೈಗಾರಿಕೆಗಳ ಹಾಗೂ ಕಾರ್ಮಿಕರ ವ್ಯಾಖ್ಯಾನ ಇಂದು ಬದಲಾಗಿದೆ. ಇದೇ ಸ್ವರೂಪ ವಸಾಹತು ಆಳ್ವಿಕೆಯ ಸಂದರ್ಭದಲ್ಲಿ ಇರಲಿಲ್ಲ. ಇದರರ್ಥ ಇಂದು ಕಾರ್ಮಿಕರಿಗೆ "ಶಾಶ್ವತ ಜಯ" ಸಿಕ್ಕಿದೆ ಎಂದಲ್ಲ. ಶಾಶ್ವತ ಜಯ ಎನ್ನುವುದು ಮರೀಚಿಕೆಯಾಗಿದ್ದು, ಕೆಲವೊಂದು ಸಂದರ್ಭಗಳಲ್ಲಿ ಜಯದ ಭ್ರಮೆಯನ್ನು ಮೂಡಿಸುತ್ತದೆ. ಮಾಲೀಕರ ಉದಾರವಾದಿ ನಿಲುವುಗಳನ್ನೇ ಜಯ ಎಂದುಕೊಂಡರೆ ಅದು ಕಾರ್ಮಿಕರ ಸೋಲು ಎಂದೇ ಅರ್ಥ. ಮಾಹಿತಿ ತಂತ್ರಜ್ಞಾನ ಯುಗದ ಅಜೆಂಡಾಗಳು ಹಾಗೂ ಅದರ ಕಾರ್ಯವೈಖರಿ ಬೇರೆಯೇ ಸ್ವರೂಪದ್ದು. ಸಾಮಾನ್ಯೀಕೃತ ಅಧ್ಯಯನಗಳಿಂದ ಇದು ತಿಳಿದುಬರಲು ಸಾಧ್ಯವಿಲ್ಲ. ಕಾರ್ಮಿಕರು ತಾವಾಗಿಯೇ ತಮ್ಮ ಸಮಸ್ಯೆಗಳನ್ನು ಸೃಷ್ಟಿಸಿಕೊಂಡವರಲ್ಲ. ಆದರೆ ಸಮಸ್ಯೆಗಳು ಅವರನ್ನು ಸುತ್ತುವರಿದು ಸುಳಿಯಲ್ಲಿ ಸಿಕ್ಕಿಹಾಕಿಕೊಳ್ಳುವಂತೆ ಮಾಡಿದವು. ಈಸ್ಟ್ ಇಂಡಿಯಾ ಕಂಪನಿಗಳ ವ್ಯಾಪಾರ ಹಿತಾಸಕ್ತಿಗಳು, ಬಂಡವಾಳಶಾಹಿ ಧೋರಣೆಗಳು ಹಾಗೂ ಬ್ರಿಟಿಷ್ ಸರ್ಕಾರದ ಆರ್ಥಿಕ ನೀತಿ ನಗರ ಕಾರ್ಮಿಕರು ಎನ್ನುವ ದುಡಿಯುವ ವರ್ಗವೊಂದನ್ನು ಅಧಿಕೃತವಾಗಿ ಸೃಷ್ಟಿಸಿದ ಮೇಲೆ ನಗರ ಕಾರ್ಮಿಕರ ಸಮಸ್ಯೆಗಳು ಬೆಳೆಯುತ್ತಲೇ ಹೋದವು. ಕಾರ್ಮಿಕರು ಕೂಡ ಬದುಕನ್ನು ಕಟ್ಟಿಕೊಳ್ಳಲು ನಗರಗಳತ್ತ ವಲಸೆ ಹೋದವರೇ ಹೊರತು ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಳ್ಳುವುದಕ್ಕಲ್ಲ. ಆದರೆ ಕಾರ್ಮಿಕರು ಆರಂಭದಲ್ಲಿ ಭಾವಿಸಿದ ಹಾಗೂ ನಗರದಲ್ಲಿ ಅನುಭವಿಸಿದ ನಗರ ಬದುಕು ಬೇರೆಬೇರೆಯದೇ ಆಗಿತ್ತು.

ನಗರಗಳನ್ನು ಕಟ್ಟಿದ ಹಾಗೂ ಅವುಗಳಿಗಾಗಿ ರಾತ್ರಿ ಹಗಲೆನ್ನದೆ ದುಡಿದ ದುಡಿಯುವ ವರ್ಗಗಳು ಅದೇ ನಗರಗಳಲ್ಲಿ ನಗರಾಧಿಕಾರಿಗಳಿಗೆ ಹಾಗೂ ಕೈಗಾರಿಕಾ ಮಾಲೀಕರಿಗೆ 'ಹೊರೆ'ಯಾಗಿ ಕಂಡುಬಂದಿರುವುದು ಮಾತ್ರ ವಿಪರ್ಯಾಸ. ಕಾರ್ಮಿಕರಿಗೆ ವಸತಿನೆಲೆಗಳನ್ನು ಕಲ್ಪಿಸುವ ಹಾಗೂ ವಸತಿನೆಲೆಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ವಿಚಾರ ಬಂದಾಗ ಸಂಬಂಧಿಸಿದ ಅಧಿಕಾರಿಗಳಿಗೆ ಹಾಗೂ ಮಾಲೀಕರಿಗೆ ಇದೇ ಕಾರ್ಮಿಕರು ಹೊರೆಯಾಗಿ ಕಂಡುಬರಲಾರಂಭಿಸಿದರು. ಇನ್ನು ಕಾರ್ಮಿಕರು ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ನಡೆಸಿದಾಗ ಅವರನ್ನು ಅಪರಾಧಿಗಳೆಂಬಂತೆ ನೋಡಲಾಯಿತು. ಕಾರ್ಮಿಕ ಸಂಘಟನೆಗಳಲ್ಲಿ ಒಡಕು ಮೂಡಿಸುವ ಹಾಗೂ ಕಾರ್ಮಿಕ ಮುಖಂಡರುಗಳಿಗೆ ನಾನಾ ತರದ ಆಮಿಷಗಳನ್ನು ಒಡ್ಡುವ ಪ್ರಯತ್ನಗಳಂತೂ ನಡೆಯುತ್ತಲೇ ಹೋದವು. ಒಟ್ಟಾರೆಯಾಗಿ ಕಾರ್ಮಿಕರ ಧ್ವನಿಯನ್ನು

Scanned with OKEN Scanner

ಕ್ಷೀಣಿಸಿ ಅವರನ್ನು ಗುಲಾಮರನ್ನಾಗಿಸುವ ಎಲ್ಲ ಪ್ರಯತ್ನಗಳು ವ್ಯವಸ್ಥಿತವಾಗಿಯೇ ನಡೆದವು. ಕಾರ್ಮಿಕರಿಗೆ ಶಕ್ತಿ ಇರುವುದೇ ಅವರ ಸಂಘಟನೆಯಲ್ಲಿ ಹಾಗೂ ಸಿದ್ಧಾಂತದಲ್ಲಿ. ಆಧುನಿಕ ಕಾರ್ಪೊರೇಟ್ ವಲಯಗಳಲ್ಲಿ ಈ ಬಗೆಯ ಸಂಘಟನೆಗಳಿಗೆ ಅವಕಾಶಗಳೇ ಕಡಿಮೆ. ಇನ್ನು ಸಿದ್ಧಾಂತವ ಮಾತು ದೂರವೇ ಉಳಿಯಿತು. ಯಾವುದೇ ಹೋರಾಟ ಯಶಸ್ವಿಯಾಗಬೇಕಾದರೆ ಸಂಘಟನೆಯ ಜೊತೆಗೆ ಗಟ್ಟಿಯಾದ ಸಿದ್ಧಾಂತವೂ ಇರಬೇಕಾಗುತ್ತದೆ. ನಾಯಕತ್ವ, ಸಂಘಟನೆ ಹಾಗೂ ಸಿದ್ಧಾಂತ ಇವು ಹೋರಾಟದ ಪ್ರಮುಖ ಸ್ತಂಭಗಳು. ಆದರೆ ಇವು ಮೂರು ಕೂಡ ಅಷ್ಟು ಸುಲಭವಾಗಿ ರೂಪುಗೊಳ್ಳುವಂಥವಲ್ಲ. ಇವು ಬಯಸುವುದು ಶ್ರದ್ಧೆ, ಪ್ರಾಮಾಣಿಕತೆ ಹಾಗೂ ಬದ್ಧತೆಯನ್ನು. ಇವು ಯಾವುವೂ ಕೂಡ ಇನ್ಸ್ಟೆಂಟ್‌ನಿಂದ ವಿರೀದಿಸುವಂಥವಲ್ಲ. ಇವು ವಿರೀದಿ ಪ್ರಕ್ರಿಯೆಯಲ್ಲಿ ಭಾಗಿಯಾದರೆ ಆಲ್ಲಿ ಆಸ್ತಿತ್ವದ ಮನೋಧಾವ ಹುಟ್ಟಿಕೊಳ್ಳಲು ಸಾಧ್ಯವಿಲ್ಲ. ಬದಲಾಗಿ ದಾಸ್ಯರೂಪಿ ಸಂಬಂಧಗಳಷ್ಟೇ ವಿರ್ವಹಿಸಲು ಸಾಧ್ಯ. ಈ ಸಂಬಂಧವೇ ವಿರ್ವಹಿಸಿದರೆ ಆಲ್ಲಿ ಕಾರ್ಮಿಕರು ಹೊರೆಯಾಗಿ, ಕೀಳಾಗಿ ಹಾಗೂ ಕೊಳಚೆವಾಸಿಗಳಾಗಿ ಮಾತ್ರ ಕಂಡುಬರಲು ಸಾಧ್ಯ. ಕೈಗಾರಿಕೆಗಳ ಮಾಲೀಕರು ಬಯಸುವುದು ಅವರ ಕಾರ್ಮಿಕರು ಶ್ರದ್ಧೆ, ಪ್ರಾಮಾಣಿಕತೆ ಹಾಗೂ ಬದ್ಧತೆಯನ್ನು. ತಮಗೆ ಹಾಗೂ ತಮ್ಮ ಉದ್ಯಿಮೆಗೆ ಕೋರಿಸದೇಕು ಎನ್ನುವುದನ್ನು. ಆದರೆ ಯಾವಾಗ ಕಾರ್ಮಿಕರು ಈ ಮೂರನ್ನೂ ತಮ್ಮ ಆಸ್ತಿತ್ವಕ್ಕಾಗಿ ಅಸ್ತ್ರವನ್ನಾಗಿಸಿಕೊಂಡರೋ ಆಆಗಿನಿಂದಲೇ ಕಾರ್ಮಿಕ ಶಕ್ತಿ ಜಿನುಗೊಡೆಯಲಾರಂಭಿಸಿತು.

ಕಾರ್ಮಿಕರ ಶಕ್ತಿ ಎಲ್ಲಿ ಆಡಕವಾಗಿವೆ ಎಂಬುದಾಗಿ ನೋಡುವುದಾದರೆ ಮೇಲ್ನೋಟಕ್ಕೆ ಅದು ಅವರ ದುಡಿಮೆಯಲ್ಲಿ. ಅವರ ದುಡಿಮೆಯ ಕೌಶಲ್ಯ ನೈಪುಣ್ಯ ಅನುಭವ ಹಾಗೂ ಸಾಮರ್ಥ್ಯದ ಆಧಾರದ ಮೇಲೆ ಅವರ ಶಕ್ತಿ ನಿರ್ಧರಿತ ವಾಗುತ್ತದೆ. ಆರ್ಥಿಕವಾಗಿ ಅವರು ಉತ್ಪಾದಕ ಶಕ್ತಿಯಾಗಿ ತಮ್ಮ ದುಡಿಮೆಯನ್ನು ಸಾದೀಕರಿಸಿದಾಗ ಅವರು ಮಾನವ ಸಂಪನ್ಮೂಲವಾಗಿ ಆರ್ಥಿಕಾಭಿವೃದ್ಧಿಯಲ್ಲಿ ನಿರ್ಣಾಯಕವಾಗಿ ಗುರುತಿಸಿಕೊಳ್ಳುತ್ತಾರೆ. ಆದರೆ ಇಷ್ಟಕ್ಕೇ ಸೀಮಿತಗೊಳಿಸಿ ಕಾರ್ಮಿಕರನ್ನು ನೋಡಿದರೆ ಅದರಿಂದ ಕಾರ್ಮಿಕರ ಬದುಕಿನ ಒಂದು ಮುಖ ತಿಳಿದುಬರಬಹುದೇ ಹೊರತು ಅವರ ಬದುಕಿನ ಬಹುತ್ವದ ಆಯಾಮಗಳು ತಿಳಿದುಬರಲು ಸಾಧ್ಯವಿಲ್ಲ. ಕಾರ್ಮಿಕರ ಶಕ್ತಿ ಅವರ ಸಂಘಟನೆಯಲ್ಲೂ ಇದೆ. ಕಾರ್ಮಿಕರಿರುವುದೇ ದುಡಿಯುವುದಕ್ಕಾಗಿ. ಅವರ ಆಸ್ತಿತ್ವವೇ ದುಡಿಮೆ, ಅದರಾಚೆಗೆ ಕಾರ್ಮಿಕರು ಏನೂ ಅಲ್ಲ ಎನ್ನುವ ಘೋರಣೆ ಕಾರ್ಮಿಕರನ್ನು ಮಾನಸಿಕವಾಗಿಯೂ ಕ್ಷೀಣಿಸುವಂತೆ ಮಾಡಿತು. ಆದರೆ ಕಾರ್ಮಿಕರು ಎಚ್ಚೆತ್ತುಕೊಂಡು ತಮ್ಮ ಸಂಘಟನೆಗಳನ್ನು ಕಟ್ಟಿಕೊಂಡು ಜಳವಳಗೆ ಮುಂದಾದಾಗ ಕಾರ್ಮಿಕರ ಇನ್ನೊಂದು ಮುಖ ಹಾಗೂ ಶಕ್ತಿ ಜಗತ್ತಿಗೆ ಗೊತ್ತಾಗುವಂತಾಯಿತು. ದುಡಿಯುವ ಶಕ್ತಿ ಇರುವಲ್ಲಿಯವರೆಗೆ ಮಾತ್ರ ಕಾರ್ಮಿಕ ಎನ್ನುವ ಘೋರಣೆ ದುಡಿಯುವ ವರ್ಗಗಳಿಗೆ ಮಾರಕವಾಗಿ ಪರಿಣಮಿಸಿತ್ತು. ಇದು ಕಾರ್ಮಿಕರ ದೈಹಿಕ ಸಾಮರ್ಥ್ಯದ ಮೇಲೆ ನಿರ್ಧರಿತವಾಗುತ್ತಿತ್ತು. ಇದರಿಂದಾಗಿ ದೈಹಿಕ ಸಾಮರ್ಥ್ಯವನ್ನು ಕಳೆದುಕೊಂಡ ನಂತರದ ಬದುಕು ಅತಂತ್ರವಾಗಿ ನರಕಯಾತನೆಯನ್ನು ಅನುಭವಿಸುವ ಸ್ಥಿತಿ ನಿರ್ಮಾಣಗೊಳ್ಳುತ್ತಿತ್ತು. ಇದನ್ನು ವಿರೋಧಿಸಿ ಹಾಗೂ ಗೌರವಯುತ ಬದುಕನ್ನು ಕಟ್ಟಿಕೊಳ್ಳುವ ಸಲುವಾಗಿಯೇ ಕಾರ್ಮಿಕ ಶಕ್ತಿ ಸಂಘಟನೆಯ ಮೂಲಕ ಹುಟ್ಟು ಪಡೆಯಿತು. ದುಡಿಮೆಯ ಸಂದರ್ಭದ ಹಾಗೂ ದುಡಿಮೆಯಿಂದ ನಿವೃತ್ತಿ ಹೊಂದಿದ ನಂತರದ ಬದುಕಿಗೂ ರಕ್ಷಣೆ ಇರಬೇಕು, ಗೌರವ ಇರಬೇಕು ಹಾಗೂ ನ್ಯಾಯಯುತವಾಗಿ ಬರಬೇಕಾದ ಎಲ್ಲ ಸವಲತ್ತುಗಳು ಸಿಗಬೇಕು ಎನ್ನುವ ಒತ್ತಾಯ ಕಾರ್ಮಿಕರಿಂದ ಶಕ್ತಿಯುತವಾಗಿಯೇ ಬಂತು. ದುಡಿಮೆಯಿಂದಾಚೆಗೂ ಕಾರ್ಮಿಕರಿಗೆ ಅವರದೇ ಆದ ಬದುಕಿದೆ ಎನ್ನುವ ಅಂಶ ನಗರೀಕರಣದ ಅತಿ ವೇಗದ ಚಲನೆಯಲ್ಲಿ ಬಹುತೇಕ ಮರೆತು ಹೋದಂತಿದೆ. ರಾಷ್ಟ್ರದ ಆರ್ಥಿಕಾಭಿವೃದ್ಧಿಗೆ ಅವರು ಮಾನವ ಸಂಪನ್ಮೂಲವಾದಂತೆ, ಅವರದೇ ಕೌಟುಂಬಿಕ ಬದುಕಿಗೆ ಸಂಪನ್ಮೂಲವಾಗಲು ಸಾಧ್ಯವಾಗಲಿಲ್ಲ. ಈ ಕಾರಣ ದಿಂದಾಗಿಯೇ ಕಾರ್ಮಿಕರ ಅಸ್ತಿತ್ವದ ಹೋರಾಟಗಳು ಆರಂಭಗೊಂಡಿರುವುದು.

ಮಾಹಿತಿ ತಂತ್ರಜ್ಞಾನ ಪೂರ್ವದಲ್ಲಿ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ದೈಹಿಕ ಸಾಮರ್ಥ್ಯವೂ ಪ್ರಮುಖವಾಗಿ ಪರಿಗಣಿತವಾಗುತ್ತಿತ್ತು. ಕಾರ್ಮಿಕರಿಗೆ ಇರಬೇಕಾದ ಆರ್ಹತೆಗಳಲ್ಲಿ ಇದು ಮುಖ್ಯವಾಗಿತ್ತು. ಶಿಕ್ಷಣ ಅಥವಾ ಉನ್ನತ ಪದವಿಗಳು ದೊಡ್ಡ ಹುದ್ದೆಗಳಷ್ಟೇ ಮುಖ್ಯವಾಗುತ್ತಿತ್ತು. ಅವರ ಸ್ಥಾನಮಾನವೂ ಇವರಿಗಿಂತ ದೇರೆಯೇ ಆಗಿರುತ್ತಿತ್ತು. ಕಾರ್ಮಿಕರು ಎಂದಾಗ ಎಲ್ಲರ ಸ್ಥಾನಮಾನವೂ ಒಂದೇ ರೀತಿಯದ್ದು ಹಾಗೂ ಅವರಿಗೆ ನೀಡಲಾಗುತ್ತಿದ್ದ ಸೌಲಭ್ಯಗಳು ಕೂಡ ಒಂದೇ ರೀತಿಯದ್ದು ಎಂದಲ್ಲ. ಕಾರ್ಮಿಕ ಎನ್ನುವ ಪದದ ಹಿಂದಿರುವ ಅರ್ಥವೇ ಶ್ರಮಿಕ, ಶ್ರಮಜೀವಿ. ಕೆಲಸಗಾರ ಅಥವಾ ದುಡಿಯುವವ ಎಂಬುದಾಗಿ. ಹಾಗಾಗಿ ಕೈಗಾರಿಕಾ ವ್ಯವಸ್ಥೆಯಲ್ಲಿ ಅಥವಾ ಶ್ರೇಣೀಕರಣದಲ್ಲಿ ಇವರು ಅತ್ಯಂತ ಕೆಳಸ್ತರದವರು ಎಂಬುದಾಗಿ ಕೀರ್ಮಾನಿಸಲಾಯಿತು. ಕೈಗಾರಿಕಾ ಅಥವಾ ನಗರ ಶ್ರೇಣೀಕರಣದಲ್ಲಿ ಅತ್ಯಂತ ಕೆಳತುದಿಯಲ್ಲಿ ಕಂಡುಬರುವ ಕೈಗಾರಿಕಾ ಅಥವಾ ನಗರ ಬಡವರನ್ನು ದೈಹಿಕವಾಗಿಯಷ್ಟೇ ಅಲ್ಲದ ಮಾನಸಿಕವಾಗಿಯೂ ಕ್ಷೀಣಿಸಲಾಯಿತು. ಕೈಗಾರಿಕಾ ಅಥವಾ ನಗರ ಮನಸ್ಸು ಮನುಷ್ಯತ್ವ ಹಾಗೂ ಮಾನವೀಯತೆಯನ್ನು ಕೂಡ ಲಾಭ-ನಷ್ಟದ ಲೆಕ್ಕಾಚಾರದಲ್ಲಿಯೇ ನೋಡಿತು. ಆದರೆ ಇದಕ್ಕೆ ವಿರುದ್ಧವಾದ ಇನ್ನೊಂದು ಸಿದ್ಧಾಂತವೂ ಇದೆ. ಅದೇನೆಂದರೆ ಯಾರು ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೋ ಹಾಗೂ ಆ ಮೂಲಕ ಹೊಸ ವ್ಯವಸ್ಥೆಯ ಹುಟ್ಟಿಗೆ ತಮ್ಮ ದುಡಿಮೆಯಿಂದ ಕಾರಣರಾಗುತ್ತಾರೋ ಅವರು ಸಮಾಜದ ಮೇಲ್ತುದಿಯಲ್ಲಿರುವವರು ಎನ್ನುವುದು. ಅವರಿಂದಾಗಿಯೇ ಮಾನವ ವಿಕಾಸ ಹಾಗೂ ಅಭಿವೃದ್ಧಿ ಎನ್ನುವುದು ನೂರಕ್ಕೆ ನೂರು ಸತ್ಯವಾದರೂ, ಅವರ ದುಡಿಮೆಯ ಮೂಲಕ ಆಧಿಕಾರ, ಸವಲತ್ತು ಹಾಗೂ ಒಡೆತನವನ್ನು ಗಿಟ್ಟಿಸಿಕೊಳ್ಳುವ ಸಮಾಜದ ಶ್ರೀಮಂತಿಕೆಯ ನೆಲೆಗಳೇ ಸಮಾಜದ ಮೇಲ್ತುದಿಯಲ್ಲಿ ಕಾಣಿಸಿಕೊಳ್ಳುತ್ತವೆ ಎನ್ನುವುದು ಕೂಡ ಅಷ್ಟೇ ಸತ್ಯ

ಕಾರ್ಮಿಕರು ತಮ್ಮ ಪಿಡೆಂಟಿಟಿಗಾಗಿ ಹೋರಾಟ ನಡೆಸಬೇಕಾಗಿ ಬಂದಿರುವುದು ಕೂಡ ಅವರು ಕೈಗಾರಿಕಾ ವ್ಯವಸ್ಥೆಯಲ್ಲಿ ಕೆಳಸ್ತರದಲ್ಲಿರುವುದರಿಂದಾಗಿಯೇ ಎನ್ನುವುದು ಇಲ್ಲಿ ಸ್ಪಷ್ಟ. ಕೃಷಿ ವ್ಯವಸ್ಥೆಯಲ್ಲಿಯೂ ಕೃಷಿ ಕಾರ್ಮಿಕರು ಕೆಳಸ್ತರದಲ್ಲಿ ಕಂಡು ಬರುವಂಥವರು. ಜಮೀನ್ದಾರರು, ದೊಡ್ಡ ಭೂ ಹಿಡುವಳಿದಾರರು, ಸಣ್ಣ ಭೂ ಹಿಡುವಳಿದಾರರು ಹಾಗೂ ರೈತರು ಕೃಷಿ ಭೂಮಿಯ ಮೂಲಕ ಕೃಷಿ ವ್ಯವಸ್ಥೆಯಲ್ಲಿ ಗುರುತಿಸಿಕೊಂಡರೆ, ಭೂ ರಹಿತ ಕೃಷಿ ಕಾರ್ಮಿಕರು ಕೇವಲ ತಮ್ಮ ದುಡಿಮೆಯ ಮೂಲಕ ಕೃಷಿ ವ್ಯವಸ್ಥೆಯಲ್ಲಿ ಗುರುತಿಸಿಕೊಳ್ಳಬೇಕಾಯಿತು. ಆದರೆ ಕೃಷಿ ಚಟುವಟಿಕೆಗಳೆಲ್ಲವೂ ಈ ಕೃಷಿ ಕಾರ್ಮಿಕರ ದುಡಿಮೆಯನ್ನೇ ಅವಲಂಬಿಸಿರುತ್ತಿತ್ತು. ಕೈಗಾರಿಕಾ ಕಾರ್ಮಿಕರ ಸ್ಥಿತಿಯೂ ಇದೇ ಸ್ವರೂಪದ್ದು. ಕೇವಲ ಕೈಗಾರಿಕಾ ಕಾರ್ಮಿಕರಷ್ಟೇ ಅಲ್ಲ, ಪೌರ ಕಾರ್ಮಿಕರು, ವಲಸೆ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಸಾರಿಗೆ ಕಾರ್ಮಿಕರು ಹಾಗೂ ಅಸಂಘ್ಯಾತ ಅಸಂಘಟಿತ ವಲಯದ ಕಾರ್ಮಿಕರ ಸ್ಥಿತಿಯೂ ಇದೇ ಸ್ವರೂಪದ್ದು. ಜಮೀನ್ದಾರರ ಜಮೀನಿನಲ್ಲಿ ದುಡಿಯುವ, ಬಂಡವಳಿಗರ ಕಟ್ಟಡ ನಿರ್ಮಾಣ ಕಾಮಗಾರಿಯಲ್ಲಿ ಕೆಲಸ ನಿರ್ವಹಿಸುವ, ಮಾಲೀಕರ ವಾಹನವನ್ನು ಚಲಾಯಿಸುವ, ಸರ್ಕಾರ ಹಾಗೂ ವಾಸಗಿಯವರಿಗೆ ಸೇರಿದ ರಸ್ತೆ ಹಾಗೂ ಚರಂಡಿಗಳನ್ನು ಸ್ವಚ್ಛಗೊಳಿಸುವ, ಕೈಗಾರಿಕೋದ್ಯಮಿಗಳ ಉದ್ದಿಮೆಗಳಲ್ಲಿ ದುಡಿಯುವ ಹೀಗೆ ತಮ್ಮದಲ್ಲದ ಹಾಗೂ ಹಣವಂತರ, ಸ್ಥಿತಿವಂತರ ಹಾಗೂ ಅಧಿಕಾರವಂತರ ಅಧಿಕಾರ ಹಾಗೂ ಸವಲತ್ತುಗಳಿಗಾಗಿ ದುಡಿಯುವ ಒತ್ತಾಯಕ್ಕೆ ಈ ಕಾರ್ಮಿಕ ವರ್ಗ ಒಳಗಾಯಿತು. ಕಾರ್ಮಿಕ ವರ್ಗ ಈ ದುಡಿಮೆಯೊಳಗೇ ತಮ್ಮ ಬದುಕನ್ನು ಕೂಡ ಕಟ್ಟಿಕೊಳ್ಳಬೇಕಾಗಿತ್ತು. ಆದರೆ ದುಡಿಮೆಯ ಕೂಲಿಯನ್ನು ಗೌರವಯುತವಾಗಿ ಪಡೆಯುವ ಭಾಗ್ಯ ಮಾತ್ರ ಅವರಿಗಿರಲಿಲ್ಲ. ಈ ವರ್ಗಕ್ಕೆ ಅಧಿಕಾರ ಹಾಗೂ ಸವಲತ್ತುಗಳು ಸಿಗಬೇಕು, ಅದು ಅವರ ಹಕ್ಕು ಎಂಬುದಾಗಿ ಸಾರುವ ಸಿದ್ಧಾಂತಗಳು ಹುಟ್ಟಿಕೊಂಡಿರುವುದು ಕೂಡ ಇದೇ ಕಾರಣದಿಂದಾಗಿ.

ಉಳ್ಳವರು ತಾವಾಗಿಯೇ ಅಧಿಕಾರವನ್ನಾಗಲಿ ಅಥವಾ ಸವಲತ್ತನ್ನಾಗಲಿ ಇಲ್ಲದವರಿಗೆ ನೀಡುವುದು ಸಾಧ್ಯವೇ ಇಲ್ಲದಿರುವುದರಿಂದಾಗಿ ವರ್ಗಸಂಘರ್ಷದ ಮೂಲಕವೇ ಅಧಿಕಾರ ಹಾಗೂ ಸವಲತ್ತುಗಳನ್ನು ಪಡೆಯುವ ಹಾಗೂ ಆ ಮೂಲಕ ಸಮಸಮಾಜವನ್ನು ನಿರ್ಮಿಸುವ ಪ್ರಯತ್ನಗಳು ಜಗತ್ತಿನಾದ್ಯಂತ ನಡೆಯಲಾರಂಭಿಸಿದವು. ಫ್ರಾನ್ಸ್, ಜರ್ಮನಿ, ಇಂಗ್ಲೆಂಡ್, ಇಟಲಿ, ರಷ್ಯಾ, ಚೀಣಾ, ಕ್ಯೂಬಾ, ಆಫ್ರಿಕಾದ ದೇಶಗಳು, ಲ್ಯಾಟಿನ್ ಅಮೆರಿಕಾ ಮುಂತಾದ ದೇಶಗಳಲ್ಲಿ ಕಾರ್ಮಿಕರ ಒಗ್ಗೂಡುವಿಕೆ, ಸಂಘಟನೆ ಹಾಗೂ ಮುಷ್ಕರಗಳು ಬಿರುಸಿನಿಂದ ನಡೆಯಲಾರಂಭಿಸಿದವು. ಭಾರತದಲ್ಲಿಯೂ ಬ್ರಿಟಿಷ್ ಸರ್ಕಾರದ ವಿರುದ್ಧ ನಡೆಯುತ್ತಿದ್ದ ಹೋರಾಟದ ಜೊತೆಜೊತೆಗೆ ಕಾರ್ಮಿಕ ಹೋರಾಟಗಳೂ ನಡೆಯಲಾರಂಭಿಸಿದವು. ಸಮಾಜವಾದಿ ಹಾಗೂ ಎಡವಾದಿ ಚಿಂತನೆಗಳು ಹಾಗೂ ಪಕ್ಷಗಳು ಇದಕ್ಕೆ ಬೆನ್ನೆಲುಬಾಗಿ ನಿಂತವು. ಜಾಗತಿಕ ಮಟ್ಟದಲ್ಲಿ ಕಾರ್ಮಿಕರು ಶಕ್ತಿಯುತವಾಗಿ ಹೊರಹೊಮ್ಮುವ ಸಾಧ್ಯತೆಗಳು ಕೂಡ

ಕಂಡುಬರಲಾರಂಭಿಸಿದವು. ಪ್ಯಾರಿಸ್ ಕಮ್ಯೂನ್ ಸರ್ಕಾರ ರಚನೆ, ಆಂತಾರಾಷ್ಟ್ರೀಯ ದುಡಿಮೆಗಾರರ ಸಂಘದ ಸ್ಥಾಪನೆ, ಜಗತ್ತಿನ ವಿವಿಧ ದೇಶಗಳಲ್ಲಿ ಕಮ್ಯುನಿಸ್ಟ್ ಪಾರ್ಟಿ ಹಾಗೂ ಕೈಗಾರಿಕಾ ಕಾರ್ಮಿಕರ ಸಂಘದ ಹುಟ್ಟು ಇವೆಲ್ಲವೂ ಕಾರ್ಮಿಕರನ್ನು ಜಾಗೃತಗೊಳಿಸಿ ದುಡಿಮೆ ಎನ್ನುವ ಪದಕ್ಕೆ ಹೊಸ ವ್ಯಾಖ್ಯಾನವನ್ನು ನೀಡಿದವು. ಶ್ರಮಜೀವಿಗಳ ವಿವಿಧ ಶಕ್ತಿ ವಿಗಿಂಬುದನ್ನು ಬಂಡವಾಳಶಾಹಿ ಜಗತ್ತಿಗೆ ಮನದಟ್ಟು ಮಾಡುವ ಪ್ರಯತ್ನವೂ ಕೂಡ ಶಕ್ತಿಯುತವಾಗಿಯೇ ನಡೆಯಿತು.

ದುಡಿಯುವ ವರ್ಗಗಳು ಇರುವುದೇ ದುಡಿಯುವುದಕ್ಕಾಗಿ. ಹಾಗಾಗಿ ದುಡಿಮೆ ಎನ್ನುವುದು ಉದ್ಯೋಗದ ಭಾಗವಾಗಿದ್ದು, ಶ್ರಮಕ್ಕೆ ತಕ್ಕಂತೆ ವೇತನವೂ ನಿಗದಿಯಾಗಿರುತ್ತದೆ ಎನ್ನುವುದು ಬಂಡವಾಳಶಾಹಿಯ ವಾದ. ಇದು ಶಾಶ್ವತಗಮಾಸ್ಯ ವ್ಯವಸ್ಥೆಯ ಗುಲಾಮಗಿರಿಯ ಮುಂದುವರಿದ ವಾದ. ಆದರೆ ವಿನ್ಯಾಸಗಳು ಮಾತ್ರ ಬೇರೆ ಬೇರೆ. ಮಾರುಕಟ್ಟೆ ಹಾಗೂ ಬಂಡವಾಳದ ಮೂಲಕ ಆಧುನಿಕತೆಯೊಂದಿಗೆ ಪ್ರಕಟಗೊಂಡ ಬಂಡವಾಳಶಾಹಿ ವ್ಯವಸ್ಥೆ ಮೇಲ್ನೋಟಕ್ಕೆ ಆಕರ್ಷಕವಾಗಿ ಹಾಗೂ ಉದಾರವಾದಿಯಾಗಿ ಕಂಡುಬರುವುದರಿಂದಾಗಿ ಗುಲಾಮಗಿರಿಯ ಕಚ್ಚಾ ರೂಪ ಅಲ್ಲಿ ಇರುವುದಿಲ್ಲ. ಕಾರ್ಮಿಕರನ್ನು ಮಾರಾಟ ಮಾಡುವ ಇಲ್ಲವೇ ಸಾಯಿಸುವ ಕ್ರೂರತ್ವಕ್ಕೆ ಅಲ್ಲಿ ಅವಕಾಶಗಳಿಲ್ಲ. ಆದರೆ ದೈಹಿಕ ಹಾಗೂ ಮಾನಸಿಕ ಶೋಷಣೆ ಮಾತ್ರ ಕಾರ್ಮಿಕರ ದಿನಚರಿ ಎಂಬಂತೆ ನಿರಂತರವಾಗಿ ನಡೆಯುತ್ತಾ ಬಂತು. ಉತ್ಪಾದನಾ ತಂತ್ರಜ್ಞಾನ ಹಾಗೂ ಸಂಬಂಧಗಳಲ್ಲಿ ಬದಲಾವಣೆಗಳು ಆಗುತ್ತಿದ್ದಂತೆ ಶೋಷಣೆಯ ಸ್ವರೂಪವೂ ಬದಲಾಗುತ್ತಾ ಹೋಯಿತು. ಹಾಗೆಯೇ ಮಾಲೀಕರು ನೌಕರರೊಂದಿಗೆ ಜ್ಞಿವಹರಿಸುವ, ನಡೆದುಕೊಳ್ಳುವ ಹಾಗೂ ವರ್ತಿಸುವ ರೀತಿಯೂ ಬದಲಾಗತೊಡಗಿತು. ಈ ಬದಲಾವಣೆಗಳನ್ನು ಮಾಹಿತಿ ತಂತ್ರಜ್ಞಾನ ಕೈಗಾರಿಕೆಗಳಲ್ಲಿನ ನೌಕರರು ಹಾಗೂ ಮಾಲೀಕರಲ್ಲಿ ಕಾಣಬಹುದು. ಇದು ಬಂಡವಾಳಶಾಹಿಯ ಹಲವಾರು ಮುಖಗಳಲ್ಲಿ ಒಂದು. ಅದು ಸಂದರ್ಭಕ್ಕೆ ತಕ್ಕಂತೆ ಮುಖವಾಡಗಳನ್ನು ಧರಿಸುವ ಹಾಗೂ ಕಳಚುವ ಚಾಕಚಕ್ಯತೆಯನ್ನು ಕರಗತ ಮಾಡಿಕೊಂಡಿರುತ್ತದೆ. ಈ ಹಿನ್ನೆಲೆಯಲ್ಲಿಯೇ ಬಂಡವಾಳಶಾಹಿ ವ್ಯವಸ್ಥೆ ಜಾಗತಿಕಗೊಂಡಿರುವುದು.

ನಗರ ಕಾರ್ಮಿಕರು ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವ ಅಥವಾ ವರ್ಗಪ್ರಜ್ಞೆಯನ್ನು ಮೈಗೂಡಿಸಿಕೊಳ್ಳುವ ಪ್ರಕ್ರಿಯೆಯು ಕೂಡ ಕೈಗಾರಿಕೆ ಅಥವಾ ಬಂಡವಾಳದ ಸುತ್ತವೇ ಕೇಂದ್ರೀಕೃತವಾಗಿರುತ್ತದೆ. ಕೈಗಾರಿಕೆ, ಬಂಡವಾಳ, ಆಧುನಿಕತೆ, ತಂತ್ರಜ್ಞಾನ ಮುಂತಾದವು ನಿರ್ಮಿಸಿಕೊಂಡಿರುವ ಯಜಮಾನಿಕೆ ಹಾಗೂ ಕೇಂದ್ರಗಳನ್ನು ಒಡೆಯುವ ಉದ್ದೇಶವನ್ನು ಕಾರ್ಮಿಕರ ಆಸ್ತಿತ್ವ ಹಾಗೂ ವರ್ಗ ಪ್ರಜ್ಞೆ ಹೊಂದಿರುವುದಂತೂ ನಿಜ. ಆದರೆ ಬಂಡವಾಳದ ಪ್ರಭಾವ ವಲಯದಿಂದ ಹೊರಬರಲು ಹಾಗೂ ಸ್ವತಂತ್ರವಾದ ಪರ್ಯಾಯಗಳನ್ನು ರಚಿಸಿಕೊಳ್ಳಲು ಸಾಧ್ಯವಾಗಿದೆಯೇ ಎನ್ನುವ ಪ್ರಶ್ನೆಗೆ ಸ್ಪಷ್ಟ ಉತ್ತರಗಳಿಲ್ಲ. ಕಾರ್ಮಿಕರಿಗೆ ತಾವು ದುಡಿಯುತ್ತಿರುವ ಉದ್ದಿಮೆಗಳಲ್ಲಿ ಶೋಷಣೆಗೆ ಒಳಗಾಗುತ್ತಿದ್ದೇವೆನ್ನುವ ಅರಿವು ಮೂಡಲಾರಂಭಿಸಿದಾಗ ಹಾಗೂ ಈ ಬಗೆಯ ಅರಿವನ್ನು ಕಾರ್ಮಿಕರಲ್ಲಿ ಗಟ್ಟಿಯಾಗಿ ಮೂಡಿಸುವ ವಾತಾವರಣವೂ ಸೃಷ್ಟಿಯಾದಾಗ ಅದೊಂದು ಸಾಂಸ್ಥಿಕ ರೂಪವನ್ನು ಪಡೆದುಕೊಳ್ಳಲಾರಂಭಿಸಿತು. ಅಷ್ಟೇ ಅಲ್ಲದ ಜಾಗತಿಕಮಟ್ಟದಲ್ಲೂ ಕಾರ್ಮಿಕರ ಬದುಕು-ಬವಣೆಗಳ ಕುರಿತಾದ ಹೊಸ ಚಿಂತನೆಗಳು, ಆಲೋಚನೆಗಳು ಹಾಗೂ ಸಂಘಟನೆಗಳು ಹುಟ್ಟು ಪಡೆಯಲಾರಂಭಿಸಿದವು. ಆದರೆ ಮೊದಲೇ ವಿವರಿಸಿದಂತೆ ಈ ಎಲ್ಲ ಬೆಳವಣಿಗೆಗಳು ಬಂಡವಾಳಶಾಹಿ ವ್ಯವಸ್ಥೆಯ ಸುತ್ತವೇ ಕೇಂದ್ರೀಕೃತ ವಾಗಿದ್ದವು. ಬಂಡವಾಳ, ಬಂಡವಾಳಶಾಹಿ ಹಾಗೂ ಬಂಡವಳಿಗರ ಧೋರಣೆಗಳನ್ನು ಪ್ರಶ್ನಿಸುವ ಹಾಗೂ ಶೋಷಣೆಯ ವಿರುದ್ಧ ಸಂಘರ್ಷ ನಡೆಸುವ ಪ್ರಯತ್ನಗಳು ಬಂಡವಾಳಶಾಹಿ ಚೌಕಟ್ಟಿನೊಳಗಿನಿಂದಲೇ ಹುಟ್ಟಿಕೊಂಡವು. ಕೈಗಾರಿಕಾ ಕಾರ್ಮಿಕರು ಅಥವಾ ನಗರ ಕಾರ್ಮಿಕರು ಎನ್ನುವ ಪರಿಸರದಲ್ಲಿಯೇ ಕೇಂದ್ರವ ಹಿತಿತ ಇರುವುದನ್ನು ಕಾಣಬಹುದು. ಇಲ್ಲಿ ಕೈಗಾರಿಕೆ ಅಥವಾ ನಗರ ಎಂದರೆ ಅದು ಬಂಡವಾಳ ಕೇಂದ್ರಿತ ವ್ಯವಸ್ಥೆಗಳು. ಆದೇ ರೀತಿ ಕಾರ್ಮಿಕರು ಎಂದರೆ ಸಮಸಮಾಜಕ್ಕಾಗಿ ಸಂಘರ್ಷದ ಹಾದಿ ಹಿಡಿದ ಸಮಾಜವಾದಿ ಹಿನ್ನೆಲೆಯ ಗುಂಪು. ಬಂಡವಾಳಶಾಹಿ ಹಾಗೂ ಸಮಾಜವಾದಿ ಮಸ್ಕೃತಿ ಹಾಗೂ ಕಾರ್ಯತಂತ್ರಗಳು ವರಸ್ಪರ ಭಿನ್ನವಾಗಿರುವಂಥವು.

ಬಂಡವಾಳಶಾಹಿ ವ್ಯವಸ್ಥೆಯು ತನ್ನ ದರ್ಪಿನ್ನತೆಯನ್ನು ಸ್ವಲ್ಪಮಟ್ಟಿಗೆ ತೊರೆದು ಉದಾರವಾದಿ ಮುಖವಾಡ ಧರಿಸಿ ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸುವ ನಾಟಕಕ್ಕೂ ಮುಂದಾಯಿತು. ಈ ಪ್ರಯೋಗದ ಹಿಂದಿರುವ ಪ್ರಮುಖ ಉದ್ದೇಶವೆಂದರೆ ಸಮಾಜವಾದವನ್ನು ಸೋಲಿಸುವುದು. ಇಲ್ಲಿ ಸೋಲಿಸುವುದಕ್ಕೆ ಯುದ್ಧ ದೇಶಾಗಿಲ್ಲ. ಬದಲಾಗಿ ಕಾರ್ಮಿಕರಿಗೆ ನೈತಿಕ ಮುಂದಾಳತ್ವವನ್ನು ನೀತುವುದು ಹಾಗೂ ಯಾವುದೇ ಹೇಗಿಕೆ ಇಲ್ಲವೇ ಬಲಪ್ರಯೋಗವಿಲ್ಲದೆ ಕಾರ್ಮಿಕರ ಮನವೊರಿಸುವುದು. ಬಿಟ್ಟರೆಯಾಗಿ ಇದರ ಹಿಂದಿರುವ ಉದ್ದೇಶವೆಂದರೆ ಕಾರ್ಮಿಕರು ಮಾಲೀಕರ ವಿರುದ್ಧ ಸಂಘರ್ಷ ನಡೆಸದಂತೆ ಹಾಗೂ ಕಾರ್ಮಿಕ ಸಂಘಟನೆಗಳ ಇಲ್ಲವೇ ಸಮಾಜವಾದ/ಮಾರ್ಕ್ಸ್‌ವಾದ

ಸಹಜ. ಅಂಥ ಪ್ರಜ್ಞೆಯಿಂದ ಸ್ವತಂತ್ರ ಅಸ್ತಿತ್ವವನ್ನು ಕಂಡುಕೊಳ್ಳಲು ಸಾಧ್ಯವಿಲ್ಲ.

ಶೋಷಣೆ, ದೌರ್ಜನ್ಯ, ದಬ್ಬಾಳಿಕೆ ಮುಂತಾದ ಕ್ರೌರ್ಯಗಳವೆ ಎನ್ನುವುದು ಶೋಷಿತರಿಗೆ ಗೊತ್ತಿಲ್ಲದಿರುವ ವಿಚಾರವೇನೂ ಅಲ್ಲ. ಅದು ಅವರ ಬದುಕಿನ ದೈನಂದಿನ ದಿನಚರಿಯೇ ಆಗಿದೆ. ಆದರೆ ಅವುಗಳನ್ನು ಎದುರಿಸುವ ಹಾಗೂ ವಿರೋಧಿಸುವ ಸಾಮರ್ಥ್ಯ ಅವರಲ್ಲಿ ಇಲ್ಲದೇ ಇರುವುದರಿಂದಾಗಿ ಕೇವಲ ಮೌನ ಪ್ರತಿಭಟನೆಗಷ್ಟೇ ಅವರ ಸಿಟ್ಟು ಸೀಮಿತಗೊಳ್ಳಬೇಕಾಯಿತು. ಇದು ಕೇವಲ ವಸಾಹತುಶಾಹಿ ಆಳ್ವಿಕೆಯಿಂದಷ್ಟೇ ಆರಂಭಗೊಂಡಿದ್ದಲ್ಲ. ಅದಕ್ಕಿಂತ ಪೂರ್ವದ ರಾಜಪ್ರಭುತ್ವ ಹಾಗೂ ಧಾರ್ಮಿಕ ಪ್ರಭುತ್ವಗಳ ಜಂಟಿ ಆಳ್ವಿಕೆಯ ಸಂದರ್ಭದಿಂದಲೂ ನಿರಂತರವಾಗಿ ನಡೆಯುತ್ತಾ ಬಂದಿದ್ದೇ ಆಗಿದೆ. ಇಲ್ಲಿ ವ್ಯಾಪಕವಾಗಿ ಕಂಡುಬರುವ ಎರಡು ವಿಚಾರಗಳೆಂದರೆ ಜ್ಞಾನ ಹಾಗೂ ವ್ಯಕ್ತಿ. ಇತ್ತೀಚಿನ ದಿನಗಳಲ್ಲಿ ಸಮಾಜವಿಜ್ಞಾನಗಳಲ್ಲಿ ಈ ಪದಗಳು ಹೆಚ್ಚಿನ ಬಳಕೆಯಾಗುತ್ತಿವೆ. ಮಡಿಯುವ ವರ್ಗಗಳು ಮಡಿಮೆಯ ಜ್ಞಾನವನ್ನು ಹೊಂದಿದ್ದರೂ, ಕೈಗಾರಿಕೋದ್ಯಮಿಗಳ ಹಾಗೂ ನಗರ ಶ್ರೀಮಂತರ ಬಂಡವಾಳಕೇಂದ್ರಿತ ಧೋರಣೆ ಹಾಗೂ ಉದಾರವಾದಿ ಮುಖವಾಡದ ಕುರಿತಾಗಿ ಅಷ್ಟೊಂದು ಜ್ಞಾನವನ್ನು ಹೊಂದಿರಲಿಲ್ಲ. ಇದಕ್ಕೆ ಮಡಿಯುವ ವರ್ಗಗಳು ತಮ್ಮ ಮಾಲೀಕರ ಬಗ್ಗೆ ಹೊಂದಿದ್ದ ಗೌರವ ಹಾಗೂ ತಮ್ಮ ವೃತ್ತಿಯ ಬಗ್ಗೆ ಇದ್ದ ಬದ್ಧತೆ ಮೂಲ ಕಾರಣ. ತಮ್ಮ ಮಾಲೀಕರಿಂತಲೂ ಇವರು ಇದನ್ನೇ ನಿರೀಕ್ಷಿಸುತ್ತಿದ್ದರು. ಆದರೆ ತಮ್ಮ ನಿರೀಕ್ಷೆ ಸುಳ್ಳಾಗತೊಡಗಿದಾಗ ಮಡಿಯುವ ವರ್ಗಗಳು ತಮ್ಮ ಅಸ್ತಿತ್ವದ ಕುರಿತಾಗಿ ಚಿಂತಿಸತೊಡಗಿದವು. ಅಸ್ತಿತ್ವದ ಕುರಿತು ಚಿಂತಿಸುವುದೆಂದರೆ ಅದು ಕೇವಲ ಜ್ಞಾನದ ಉತ್ಪಾದನೆ ಮಾತ್ರವಾಗಿರದೆ ಪ್ರಜ್ಞೆಯ ಹುಟ್ಟು ಕೂಡಾ ಆಗಿದೆ.

ಹೊಸ ಜ್ಞಾನದ ಉತ್ಪಾದನೆ ಎಂದಾಗ ಅದನ್ನು ಎರಡು ರೀತಿಯಲ್ಲಿ ಅರ್ಥೈಸಿಕೊಳ್ಳಬೇಕಾಗುತ್ತದೆ. ಅವುಗಳೆಂದರೆ ವಸ್ತುಗಳ ಉತ್ಪಾದನೆಯಲ್ಲಿ, ಅಂದರೆ ಉತ್ಪಾದನಾ ತಂತ್ರಜ್ಞಾನದಲ್ಲಿ ಹಾಗೂ ಮಡಿಯುವ ವರ್ಗಗಳ ಸಂಘಟನೆ ಹಾಗೂ ಸಿದ್ಧಾಂತದ ರೂಪುಗೊಳ್ಳುವಿಕೆಯಲ್ಲಿ. ಇನ್ನೊಂದರ್ಥದಲ್ಲಿ ಜೇಳುವುದಾದರೆ ಭೌತಿಕ ಹಾಗೂ ಬೌದ್ಧಿಕ ಜ್ಞಾನದ ಉತ್ಪಾದನೆ. ಇಲ್ಲಿ ಜ್ಞಾನವು ಹೊಸ ಆಯಾಮವನ್ನು ಪಡೆದುಕೊಳ್ಳದೇ ಹೋದರೆ ಅದು ಪ್ರಭಾವಯುತವಾಗಿ ಸಮಾಜದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಿಲ್ಲ. ಪ್ರಭಾವಯುತವಾಗಿ ಸಮಾಜದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗದೇ ಇದ್ದರೆ ಅದಕ್ಕೆ ಮಾನ್ಯತೆಯೂ ಲಭ್ಯವಾಗುವುದಿಲ್ಲ. ಕಾರ್ಮಿಕರಿಗೆ ಎದುರಾಗಿರುವುದು ಈ ಗುರುತಿಸಿಕೊಳ್ಳುವಿಕೆ ಹಾಗೂ ಮಾನ್ಯತೆಯ ಸಮಸ್ಯೆ. ಏಕೆಂದರೆ ಅವರಲ್ಲಿ ಅಧಿಕಾರದ ಬಲವಿಲ್ಲ. ಅಧಿಕಾರದ ಬಲವಿರುವುದು ಅವರ ಮಾಲೀಕರಲ್ಲಿ ಅಥವಾ ಅಧಿಕಾರಿಗಳಲ್ಲಿ. ಮಡಿಯುವ ವರ್ಗಗಳ ಮಡಿಮೆಯ ಜ್ಞಾನವನ್ನು ಅವರಿಗೆ ನೀಡಲಾಗುವ ವೇತನದ ಮೂಲಕ ಆಳೆಯಲಾಗುತ್ತಿತ್ತು. ಮಡಿಯುವ ವರ್ಗಗಳು ತಮ್ಮ ಹಕ್ಕೊತ್ತಾಯಗಳಿಗೆ ಮುಂದಾದಾಗ ಅವರನ್ನು ಸಾನಾ ತಂತ್ರ ಬಳಸಿ ನಿಯಂತ್ರಿಸಲಾಗುತ್ತಿತ್ತು. ಈ ತಂತ್ರ ಇಂದಿಗೂ ಜೀವಂತವಾಗಿಯೇ ಇದೆ. ಮಡಿಯುವ ವರ್ಗ ಹೇಗಿರಬೇಕು ಹಾಗೂ ಅದರ ಚೌಕಟ್ಟು ಏನು ಎನ್ನುವುದನ್ನು ನಿರ್ಧರಿಸುವ ಅಧಿಕಾರವನ್ನು ಬಂಡವಾಳಶಾಹಿ ಜ್ಞಾನವು ಪಡೆದುಕೊಂಡಿರುವುದರಿಂದಾಗಿ ಹಾಗೂ ಬದಲಾದ ಸಂದರ್ಭಗಳಲ್ಲಿಯೂ ಅದೇ ಮಾದರಿ ಮುಂದುವರಿದಿರುವುದರಿಂದಾಗಿ ಮಡಿಮೆಯ ಹಾಗೂ ಮಡಿಯುವ ವರ್ಗಗಳ ಜ್ಞಾನ ಗಟ್ಟಿತನವನ್ನು ಪಡೆದುಕೊಳ್ಳಲು ಹೊಸ ದಾರಿಗಳನ್ನೇ ಹುಡುಕಬೇಕಾಯಿತು.

ಇಲ್ಲಿ ಹೊಸ ದಾರಿಗಳನ್ನು ಅಥವಾ ಪರ್ಯಾಯಗಳನ್ನು ಕಂಡುಕೊಳ್ಳುವುದೆಂದರೆ ಅದು ಮಡಿಯುವ ವರ್ಗಗಳ ವರ್ಗ ಪ್ರಜ್ಞೆಯ ಪರಿಣಾಮ ಎಂದೇ ಅರ್ಥೈಸಿಕೊಳ್ಳಬೇಕಾಗುತ್ತದೆ. ವರ್ಗ ಪ್ರಜ್ಞೆಯಲ್ಲಿ ನಿರಚಿಸುವ, ನಿರಾಕರಿಸುವ ಹಾಗೂ ಹೊಸದನ್ನು ಕಟ್ಟುವ ಪ್ರಯತ್ನವಿದೆ. ಮಡಿಮೆಯ ಗೌರವವನ್ನು ಹೆಚ್ಚಿಸುವ, ಅದಕ್ಕೆ ಮಾನ್ಯತೆ ಸಿಗುವಂತೆ ಮಾಡುವ ಹಾಗೂ ವೃತ್ತಿಗೌರವವನ್ನು ಕಾಪಾಡಿಕೊಳ್ಳುವ ಸ್ವಾಭಿಮಾನದ ನೆಲೆಯೂ ಈ ಪ್ರಜ್ಞೆಯಲ್ಲಿದೆ. ಪ್ರಜ್ಞೆ ಎನ್ನುವುದು ಅರಿವಿನ ಅರಿವು ಆಗಿರುವುದರಿಂದಾಗಿ ಅದು ಪರ್ಯಾಯವನ್ನು ಕಟ್ಟುವ ಸಾಮರ್ಥ್ಯವನ್ನು ಕೂಡ ಪಡೆದುಕೊಂಡಿರುತ್ತದೆ. ಅಧೀನಗೊಳಿಸಲ್ಪಟ್ಟ ಜ್ಞಾನಕ್ಕೆ ಮಾನ್ಯತೆ ಸಿಗುವಂತೆ ಮಾಡುವಲ್ಲಿಯೂ ವರ್ಗ ಪ್ರಜ್ಞೆ ನೆರವಾಗುತ್ತಿರುತ್ತದೆ. ಜ್ಞಾನವು ಕೂಡ ಪ್ರಜ್ಞೆಯ ಭಾಗವಾದಾಗ ಮಾತ್ರ ಅದು ಮಾನವ ಅನುಭವಗಳನ್ನು ದಾಖಲಿಸಲು ಹಾಗೂ ಪ್ರತಿನಿಧಿಸಲು ಸಾಧ್ಯ. ವರ್ಗ ಪ್ರಜ್ಞೆ ಎನ್ನುವುದು ವರ್ಗಾತೀತ ಸಮಾಜವನ್ನು ಹುಟ್ಟುಹಾಕುವ ಉದ್ದೇಶವನ್ನು ಹೊಂದಿರುವಂತದ್ದು. ಹಾಗಾಗಿಯೇ ಅದು ವಿಚಿತವಾದ ಸೈದ್ಧಾಂತಿಕ ಹಾಗೂ ಕಾರ್ಯತಂತ್ರಗಳನ್ನು ಹೊಂದುವ ಕಡೆಗೆ ಚಲಿಸಿತು. ವರ್ಗ ಜ್ಞಾನ ಎನ್ನುವುದು ವರ್ಗಗಳ ಅರಿವು. ಅದು ವರ್ಗವಿನಾಶದ ಕಡೆಗೆ ಚಲಿಸಬೇಕಾದರೆ ವರ್ಗ ಪ್ರಜ್ಞೆ ರೂಪುಗೊಳ್ಳುವುದು ಅನಿವಾರ್ಯವಾಗಿತ್ತು. ಇದರ ಪರಿಣಾಮವೇ ವರ್ಗ ಸಂಘರ್ಷ. ವರ್ಗ ಸಂಘರ್ಷ ನಡೆದಾಗ ಮಾತ್ರ ವರ್ಗ ರಹಿತ ಸಮಾಜ ಅಸ್ತಿತ್ವಕ್ಕೆ ಬರಲು ಸಾಧ್ಯ. ಇವೆಲ್ಲವೂ ಹಂತಹಂತವಾಗಿ ಘಟಿಸುತ್ತಾ ಹೋಗಿರುವ ಚಿತ್ರಣವನ್ನು ಆಧುನಿಕ ಕಾರ್ಮಿಕ ಚರಿತ್ರೆಯು ಪರಿಚಯಿಸುತ್ತದೆ. ಜಗತ್ತಿನ ಕಾರ್ಮಿಕರೆಲ್ಲರೂ ಒಂದಾಗಬೇಕು ಎನ್ನುವ ಧ್ವನಿ ಹುಟ್ಟಿಕೊಂಡಿರುವುದೇ ಈ ವರ್ಗ ಪ್ರಜ್ಞೆಯ ಪರಿಣಾಮದಿಂದಾಗಿ.

"ವಿಶ್ವದ ಕಾರ್ಮಿಕರೇ ಒಂದಾಗಿ" ಎನ್ನುವ ಘೋಷಣೆ ವರ್ಗಪ್ರಜ್ಞೆಯ ಪರಿಣಾಮವೇ ಹೊರತು ಇನ್ನೇನಲ್ಲ. ಕಾರ್ಮಿಕರ ಸಮಸ್ಯೆ ಜಗತ್ತಿನ ಯಾವುದೋ ಒಂದು ದೇಶಕ್ಕೆ ಅಥವಾ ದೇಶದ ಯಾವುದೋ ಒಂದು ಪ್ರದೇಶಕ್ಕೆ ಸೀಮಿತವಾದದ್ದಲ್ಲ. ಕೈಗಾರಿಕಾ ಕ್ರಾಂತಿಯ ಪರಿಣಾಮ ಹಾಗೂ ಪ್ರಭಾವ ಎಲ್ಲೆಲ್ಲಿಗೆ ವಿಸ್ತರಿಸಿದೆಯೋ ಹಾಗೂ ಬಂಡವಾಳ ಎಲ್ಲೆಲ್ಲಿ ನಿರ್ಧಾರಕವಾಗಿ ಕಂಡುಬಂದಿದೆಯೋ ಅಲ್ಲೆಲ್ಲಾ ಮಡಿಮೆ ಹಾಗೂ ಮಡಿಯುವ ವರ್ಗ ಹೊಸದಾಗಿ ವ್ಯಾಖ್ಯಾನಗೊಂಡು ಅಧೀನತೆ ಹಾಗೂ ಶೋಷಣೆ ಹೊಸ ರೂಪವನ್ನು ಪಡೆದುಕೊಂಡಿತು. ಅದೇ ಸಂದರ್ಭದಲ್ಲಿ ಕಾರ್ಲ್ ಮಾರ್ಕ್ಸ್ ಅವರ ಮೂಲಕ ಜಗತ್ತಿನಾದ್ಯಂತ ಪ್ರಖರವಾಗಿ ಹಾಗೂ ಅತ್ಯಂತ ವೇಗವಾಗಿ ಹರಡಿದ ಕಮ್ಯುನಿಸ್ಟ್ ತತ್ವಸಿದ್ಧಾಂತಗಳು ಮಡಿಯುವ ವರ್ಗಗಳಲ್ಲಿ ಆತ್ಮವಿಶ್ವಾಸವನ್ನು ಹುಟ್ಟುಹಾಕಿ ಸಂಘಟಿತರಾಗುವಂತೆ ಮಾಡಿತು. ಶ್ರಮಜೀವಿಗಳ ಶ್ರಮದ ಮೌಲ್ಯ ಹಾಗೂ ಮಡಿಮೆಯ ಸಾಮರ್ಥ್ಯ ಏನು ಎನ್ನುವುದು ಇದರ ಮೂಲಕ ಜಗತ್ತಿಗೆ ಗೊತ್ತಾಗುವಂತಾಯಿತು. ಇದೊಂದು ಆರ್ಥಿಕತೆಗೆ ಸಂಬಂಧಿಸಿದ ವಿಚಾರವಾಗಿದ್ದು, ಮಾನವ ಬದುಕಿನ ಅಭಿವೃದ್ಧಿ ಅಥವಾ ಅನಭಿವೃದ್ಧಿ, ಶ್ರೀಮಂತಿಕೆ ಅಥವಾ ಬಡತನ ಇದರ ಸುತ್ತವೇ ಕೇಂದ್ರೀಕೃತವಾಗಿರುತ್ತದೆ. ಈ ಕಾರಣದಿಂದಾಗಿಯೇ ಕಾರ್ಲ್ ಮಾರ್ಕ್ಸ್ ಅವರು ಸಮಾಜದಲ್ಲಿನ ಆರ್ಥಿಕ ಸಂಸ್ಥೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿ ಆ ಮೂಲಕ ಕಾರ್ಮಿಕ ವರ್ಗದ ಲೋಕದೃಷ್ಟಿಯ ಕುರಿತು ಚಿಂತಿಸಿದರು. ಅವರ ಪ್ರಕಾರ ಆರ್ಥಿಕ ಸಂಸ್ಥೆಗಳಲ್ಲಾಗುವ ಬದಲಾವಣೆಗಳು, ಅಂದರೆ ಉತ್ಪಾದನಾ ವಿಧಾನ, ಸಾಮಾಜಿಕ ಸಂಸ್ಥೆಗಳಲ್ಲಿ ಬದಲಾವಣೆಗಳಾಗುವಂತೆ ಮಾಡುತ್ತವೆ. ಇದನ್ನೇ ವರ್ಗ ಪ್ರಜ್ಞೆ ಎಂಬುದಾಗಿ ಕರೆದಿರುವುದು.

ಚಾರಿತ್ರಿಕ ಬದಲಾವಣೆ ಕಂಡುಬರಬೇಕಾದರೆ ಅದು ವರ್ಗ ಸಂಘರ್ಷ ಅಥವಾ ಆರ್ಥಿಕ ಸಂಘರ್ಷದಿಂದ ಮಾತ್ರ ಸಾಧ್ಯ ಎನ್ನುವುದು ಮಾರ್ಕ್ಸ್‌ನ ಅಭಿಪ್ರಾಯ. ಮಾರ್ಕ್ಸ್ ಈ ರೀತಿಯಾಗಿ ಅಭಿಪ್ರಾಯ ಪಟ್ಟಿದ್ದಲ್ಲದೆ, ಅದನ್ನು ಸಾಧ್ಯವಾಗಿಸುವ ಕಾರ್ಯತಂತ್ರವನ್ನು ಕೂಡ ರೂಪಿಸಿ ಕಾರ್ಯಗತಗೊಳಿಸಿರುವುದು ಇಂದಿಗೂ ಜೀವಂತವಾಗಿಯೇ ಇದೆ. ಬಂಡವಾಳ ಹಾಗೂ ಮಾರುಕಟ್ಟೆ ಕೇಂದ್ರಿತ ಅರ್ಥ ವ್ಯವಸ್ಥೆ ಜಗತ್ತಿನಾದ್ಯಂತ ಪ್ರಭಾವಯುತವಾಗಿ ಅಸ್ತಿತ್ವಕ್ಕೆ ಬರುವ ಸಂದರ್ಭದಲ್ಲಿಯೇ ಅದನ್ನು ನಿಯಂತ್ರಿಸುವ ಹಾಗೂ ಪ್ರಶ್ನಿಸುವ ಮಡಿಯುವ ವರ್ಗವೂ ರೂಪುಗೊಳ್ಳಬೇಕು ಎನ್ನುವುದು ಕಾರ್ಲ್ ಮಾರ್ಕ್ಸ್ ಹಾಗೂ ಫ್ರೆಡರಿಕ್ ಏಂಗೆಲ್ಸ್ ಅವರ ನಿಲುವಾಗಿತ್ತು. ಈ ಮಾದರಿಯಲ್ಲಿಯೇ ಮಡಿಯುವ ವರ್ಗಗಳು ಕೂಡ ರೂಪುಗೊಳ್ಳುತ್ತಾ ಹೋದವು. ಆದರೆ ಅವರನ್ನು ಪ್ರತಿನಿಧಿಸುವ ಹಾಗೂ ಸಂಘಟಿಸುವ ಪಕ್ಷಗಳು ಹಾಗೂ ಸಿದ್ಧಾಂತಗಳು ತಮ್ಮ ಹಿಂದಿನ ವರ್ಚಸ್ಸು ಹಾಗೂ ಗಟ್ಟಿತನವನ್ನು ನಿಧಾನವಾಗಿ ಕಳೆದುಕೊಳ್ಳುತ್ತಿರುವುದು ಹಾಗೂ ತಮ್ಮತಮ್ಮಲ್ಲೇ ಒಡೆದುಹೋಗುತ್ತಿರುವುದು ಕಾರ್ಮಿಕ ಐಡೆಂಟಿಟಿಗೆ ಒಂದು ದೊಡ್ಡ ಹಿನ್ನಡೆಯಾಗಿ ಪರಿಣಮಿಸಿದೆ. ಬಂಡವಾಳಶಾಹಿ ಹಾಗೂ ಅದರ ಅಂಗ ಸಂಸ್ಥೆಗಳು ಬಯಸುವುದು ಕೂಡ ಇದೇ ಬೆಳವಣಿಗೆಯನ್ನು. ಹಾಗಾಗಿ 'ವಿಶ್ವದ ಕಾರ್ಮಿಕರೇ ಒಂದಾಗಿ' ಎನ್ನುವ ಅಂದಿನ ಘೋಷಣೆ ಈಗ ಮತ್ತೆ ಶಕ್ತಯುತವಾಗಿ ಪ್ರತಿಧ್ವನಿಸಬೇಕಾಗಿದೆ. ಅದಕ್ಕಿಂತಲೂ ಮೊದಲು ಈ ಧ್ವನಿ ಸ್ಥಳೀಯ ಮಟ್ಟದಿಂದಲೇ ಕೇಳಿಬಂದು ನಂತರ ವಿಶ್ವಾತ್ಮಕ ಮಟ್ಟಕ್ಕೆ ಏರಬೇಕಾಗಿದೆ. ಕಾರ್ಮಿಕರ ಒಗ್ಗೂಡುವಿಕೆಗೆ ಇದು ಅತ್ಯಂತ ಅನಿವಾರ್ಯವೂ ಆಗಿದೆ.

ಡಾ. ಕೆ. ಮೋಹನ್‌ಕೃಷ್ಣ ರೈ
ಪ್ರಾಧ್ಯಾಪಕರು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ – ೫೮೫೫೩೭
Email : mkrai1969@rediffmail.com

ಕೆಲವು ಆಂಗ್ಲ ಕವಿಗಳ ಕವಿತೆಗಳನ್ನು ಶ್ರೀ ನೀಲಕಂಠಂ ಬಹು ಹಿಂದೆಯೇ ಅನುವಾದಿಸಿ ಪ್ರಕಟಿಸಿದ್ದರು. ಅದಕ್ಕೆ ಮುನ್ನುಡಿಯಾಗಿ ವಿಮರ್ಶಾತ್ಮಕ ಟಿಪ್ಪಣಿಯನ್ನು ಬರೆದವರು ವಿದ್ವಾನ್ ಶ್ರೀ ನಂಜುಂಡಸ್ವಾಮಿಯವರು. ಅದೀಗ ಮರುಮುದ್ರಣಗೊಂಡಿದೆ.

ಸತ್ಯವಿತೆಗೆ "ಶ್ಲೋಕಃ ಸ ಏವ ಸುಧಗಃ ಚಿತ್ತಂ ಸಕ್ತಂ ಹಿ ಯತ್ರ ರಸಿಕಸ್ಯ" ಎಂಬಂತೆ ಸಹೃದಯರ ಅನುಭವವೊಂದೇ ಸರಿಯಾದ ಸೂಚಕವಾಗಿರುವುದು. ಲಕ್ಷಣಗಳು, ಅದರ ಹೆಸ್ಗುರುತುಗಳನ್ನು ಮಾತ್ರ ತಿಳಿಸುವುದು. ಭಾವ-ರಸಗಳ ಪಾರಮ್ಯಕ್ಕೆ ಸಮ್ಮನ್ನು ಕರೆದೊಯ್ಯುವುದು ಕವಿತೆಗಳು ಮಾತ್ರ. ಕವಿತೆಗಳಲ್ಲಿ ಗೋಚರವಾಗುವ ವಿಷಯಗಳನ್ನು ಸಾಮಾನ್ಯವಾಗಿ ಎರಡು ವಿಧವೆಂದು ಹೇಳಬಹುದು: ಮೊದಲನೆಯದು "ಪ್ರಕೃತಿ", ಎರಡನೆಯದು ಪ್ರಕೃತಿ ಮಧ್ಯಗತನಾಗಿ ಸುಖದುಃಖಗಳನ್ನು ಅನುಭವಿಸುವ "ಮಾನವ". ಈ ವರ್ಗಗಳಲ್ಲಿ, ಎರಡನ್ನೂ ಸಮಚಿತ್ತದಿಂದ, ಸಮಭಾವದಿಂದ ಮೇಳೈಸಿ, ಕವಿತೆಗಳನ್ನು ರಚಿಸುವುದರ ಜೊತೆಗೆ, ಅನುವಾದವನ್ನು ಕೂಡ ಕವಿ ನೀಲಕಂಠಂ ಅವರು ಮಾಡಿದ್ದಾರೆ. ಕಾವ್ಯವನ್ನು ಓದುವುದೂ, ಅದರಲ್ಲಿ ಆಸಕ್ತಿ ಹೊಂದುವುದೂ, ಒಂದು ಬಗೆಯ ವಿಷಯಾನುಭೂತಿ ಎನ್ನಬಹುದು. ಪುಣ್ಯಕ್ಕಾಗಲೀ, ಪುರುಷಾರ್ಥಕ್ಕಾಗಲೀ ಸದಭಿರುಚಿಯುಳ್ಳ ಯಾರೂ ಕಾವ್ಯವನ್ನು ಓದುವುದಿಲ್ಲ. ಅದರಲ್ಲಿ ತಮಗೆ ಲಭಿಸುವ ಆನಂದ ಬೇರೆ ಕಡೆ ಸಿಗದಿರುವುದರಿಂದ ಅವರು ಕವಿತೆಗಳನ್ನು ಓದುತ್ತಾರೆ.

ಒಳ್ಳೆಯ ಕವಿತೆಯನ್ನು 'ಕವಿ' ಸಹೃದಯರನ್ನು ಮಮತೆಯಿಂದ ಬಂಧಿಸುವ 'ಆನಂದಗ್ರಂಥಿ' ಎಂದು ಕರೆಯಬಹುದು. ಇಲ್ಲಿ ಕವಿಯ ಪಾತ್ರ ಎಂತಹುದು? ಯಾವ ವಿಶಿಷ್ಟವಾದ ಗುಣಸಂಪತ್ತಿನಿಂದ ಅಸಾಧಾರಣ, ಆಶ್ಚರ್ಯಕರವೆನಿಸಿದ ರೀತಿಯಲ್ಲಿ,

ಹಂಬಲ ಹಣತೆ
ಲೇಖಕರು : ಜಿ. ನೀಲಕಂಠಂ
ಪುಟಗಳು : ೨೪ + ೪೪ = ೬೮
ಬೆಲೆ : ರೂ. ೧೫೦/-
ಪ್ರಕಾಶಕರು : ಹರ್ಷಪ್ರಿಂಟ್, ಬೆಂಗಳೂರು

ಅನುಭವಗಳನ್ನು ಪಡೆದು ವಾಗ್ರೂಪವನ್ನು ಕೊಟ್ಟು ಕೃತಾರ್ಥನಾಗುತ್ತಾನೆ? – ಎಂಬುದು ಗಮನಿಸಬೇಕಾದ ಅಂಶ. ಇಲ್ಲಿ ಹಿರಿಯರೂ, ಜ್ಞಾನವೃದ್ಧರೂ ಆದ ಶ್ರೀ ಜಿ. ನೀಲಕಂಠಂ ಅವರು ಕವಿತಾರಚನೆಯಲ್ಲಿ ಸಮರ್ಥರೆನಿಸಿದ್ದಾರೆ. ಕಲೆಗಳಲ್ಲಿ ಸಿದ್ಧಿಯನ್ನು ಬಯಸುವವರು ಅವಶ್ಯಕವಾಗಿ ಸಂಪಾದಿಸಬೇಕಾದ ಯೋಗ್ಯತೆ "ನಾನೃಷಿಃ ಕುರುತೇ ಕಾವ್ಯಂ" ಎಂಬುದು ಮನಸ್ಸುದ್ಧಿಮೆಗೆ ಅನ್ವಯಿಸುತ್ತದೆ. ಅಸಾಧಾರಣ ಭಾವಗಳನ್ನು ಪಡೆಯುವ ವಿಶಿಷ್ಟ ಅಂತಃಕರಣ ವ್ಯವಸ್ಥೆಯನ್ನು ಯಾವುದೋ ದಿವ್ಯಶಕ್ತಿ ಇವರಿಗೆ ನೀಡಿದೆ. ಕವಿಯ ಬದುಕು ಎರಡು ಲೋಕಗಳಲ್ಲಿ ಜರುಗುವ ಬದುಕು. ಪ್ರಮುಖವಾಗಿ ಆತ "ಭವಲೋಕ" ಜೀವಿಗಿಂತಲೂ "ಭಾವಲೋಕ" ನಿವಾಸಿ. ಪರಿಸರ ಸಂವೇದನೆ, ಪ್ರಕೃದ್ಭಾವನೆ – ಈ ಎರಡೂ ಶಕ್ತಿಗಳಲ್ಲೂ ಕವಿತೆಗಳನ್ನು ರಚಿಸಿದ್ದಾರೆ.

ಹಂಬಲ ಹಣತೆ

ಶೀರ್ಷಿಕೆ ಕವಿತೆಯ ಸಾಲುಗಳನ್ನು ನೋಡಿ: "ಇರುಳು ಹಚ್ಚಿದ ತೈಲಧಾರೆಯ ಸೊದರು ಕಳೆಯಲು ಕಾವಳ – ಗುರುವು ಹಚ್ಚಿದ ಅರಿವಿನೊರತೆಯು. ಒಡನೆ ಕಳೆಯದೆ ಕಳವಳ". ಪ್ರತಿಯೊಬ್ಬರ ಜೀವನದಲ್ಲೂ "ಗುರುವು ಜ್ಞಾನದಾರಿ ತೋರಿಸಿ ನಮ್ಮೆಲ್ಲರ ಕಷ್ಟಕಾರ್ಪಣ್ಯಗಳನ್ನು ದೂರ ಸರಿಸುತ್ತಾರೆ" – ಎಂಬ ಉತ್ತಮ ಸಂದೇಶ ಅಡಗಿದೆ. "ಗುರು" ಎಂದರೆ, ಮಾನವ ಗುರುವಷ್ಟೇ ಅಲ್ಲ. "ದೈವ" ಮರೆಯಲ್ಲಿದ್ದು, ಭಕ್ತಿಯಿಂದ, ಹಂಬಲದಿಂದ "ಅರಿವಿನ ಜ್ಯೋತಿ" ಬೆಳಗಿದ ಪ್ರತಿಯೊಬ್ಬರಿಗೂ ದಾರಿ ತೋರುತ್ತದೆ ಎಂಬ ಆಧ್ಯಾತ್ಮಿಕ ಬೆಳಕು ಕೊನೆಯ ಸಾಲುಗಳಲ್ಲಿ ಮೂಡಿಬಂದಿದೆ.

ಡಾಳುವೆಯ ಮತದಲ್ಲಿ

ಕವಿಯ ಪರಿಸರ ಪ್ರಜ್ಞೆ, ದೈವದ ಹಂಬಲ, ಜೀವನದ ಅನುಭವಗಳ ಮೂಸೆಯಲ್ಲಿ ಮೂಡಿಬಂದಿದೆ. ಈ ಕೆಳಕಂಡ ಸಾಲುಗಳನ್ನು ಓದಿ:

ಧರದಿ ಏರಿಸಿ, ಸಿರಿಯ ಕರುಣಿಸಿ, ಮೆರೆಸಿ, ಜಾರಿಸಿ
ಕೊರಗ ಕೆರಳಿಸಿ, ಅರಿತು ನಡೆವೊಡೆ,
ಹರುಷದೊಳರಿಸಿ
ಪೊರೆವ "ಸಮತೆ"ಯನು ಕಲಿಸಿ

ಜೀವನದಲ್ಲಿ ಉತ್ತುಂಗಕ್ಕೇರಿದಾಗ ಮನುಷ್ಯ ಎಷ್ಟೇ ಕೀರ್ತಿ, ಯಶಸ್ಸು, ಹಣ ಗಳಿಸಿದ್ದರೂ ಕೂಡ, ಅಂತರಂಗವ ಅರಿವು ನುಡಿದಂತೆ ನಡೆದರೆ, ಸಂತೋಷದಿಂದ ಕಾಪಾಡುವ "ಸಮರಸ ಜೀವನ

ನಾನು ಓದಿದ ಪುಸ್ತಕ

ವಿದ್ವಾನ್ ವಿ. ನಂಜುಂಡಸ್ವಾಮಿ



ಅಂತರಾಳದ ಅನಿಸಿಕೆಗಳು

Scanned with OKEN Scanner

ಸೊಗಸಿದೆ: 'ಗುಬ್ಬದಲ್ಲಿ ಅವುಚಿಟ್ಟ ಕುರಿಮರಿಗಳು ಬೆಳಗಾಗುತ್ತಲೇ ತಾಯಿ ಬಳಿಗೆ ಓಡಿ ಬಂದು ಜಗ್ಗಿ ಜಗ್ಗಿ ಮೊಲೆ ಕುಡಿಯುತ್ತವೆ. ತಮ್ಮ ಮೂತಿಯಿಂದ ಕೆಚ್ಚಲಿಗೆ ಮೃದುವಾಗಿ ಗುದ್ದುತ್ತಾ ಮರಿಗಳು ಹಾಲು ಕುಡಿಯತೊಡಗಿದರೆ, ತಾಯಿಕುರಿ ಕುಡಿಯಲು ಅನುಕೂಲವಾಗುವಂತೆ ಕಾಲಗಲಿಸಿ ನಿಲ್ಲುತ್ತದೆ. ತಾಯಿಯ ಕರೆಯುವ ಅರಚು, ಮರಿಯು ತಾಯಿಯನ್ನು ಕೂಗುವ ಅರಚು. ತಾಯಿಯದು ಇಲ್ಲಿ ಬಾ ಇಲ್ಲಿದ್ದೇನೆ ಎನ್ನುವ ಮೇssss ಎನ್ನುವ ಕರೆ, ಎಲ್ಲಿದ್ದೀಯಾ ಅವ್ವಾ ಎನ್ನುವ ಮರಿಯ ಮೇssss ಎನ್ನುವ ಎಳೆದನಿಯಲ್ಲಿ ಮೊರೆ. ಕೆಲವೊಮ್ಮೆ ತಾಯಿಯ ದನಿಯನ್ನು ಗುರುತಿಸಲಾರದ ಮರಿಗಳು ಬೇರೊಂದು ತಾಯಿ ಕುರಿಯ ಕೆಚ್ಚಲಿಗೆ ಬಾಯಿ ಹಾಕಿದರೆ, ಆ ತಾಯಿ ಕುರಿ ಕೆಚ್ಚಲುಗೊಡದೆ ತನ್ನ ಮರಿಗೆ ಅರಚುತ್ತಾ ಚಡಪಡಿಸುತ್ತದೆ'. ಮಾನವನೂ ಸೇರಿದಂತೆ ಎಲ್ಲ ಸಸ್ತನಿಗಳಿಗೂ ತಾಯಿ ಮಮತೆ ಸಹಜ. ತಾಯಿಕುರಿಗಳ/ಮರಿಕುರಿಗಳ ಸಂಬಂಧದಲ್ಲಿ ಲೇಖಕರು ಅದನ್ನು ಕಾವ್ಯಾತ್ಮಕವಾಗಿ ಬಣ್ಣಿಸುತ್ತಾರೆ.

ಸಾಮಾಜಿಕ ಸ್ಥಿತ್ಯಂತರಗಳನ್ನು ಎಸ್. ಜಿ. ಸಿದ್ಧರಾಮಯ್ಯನವರು ನಿರ್ಲಿಪ್ತತೆಯಿಂದ ದಾಖಲಿಸುತ್ತಾರೆ. ಅವರಲ್ಲಿ ನೋವಿದೆ, ಆಕ್ರೋಶವಿಲ್ಲ; ನಿರಾಶೆಯಿದೆ, ಸಿನಿಕತೆಯಿಲ್ಲ. ದಾಯಾದಿಗಳ ದ್ವೇಷದ ನಡುವೆಯೂ ನಾಗಜ್ಜಿಯ ಮಮತೆ; ತಮ್ಮ ತೋಟದ ಮಾವಿನ ಹಣ್ಣಿನ ರುಚಿ, ದೊಡ್ಡ ಮಾವಿನ ಹಣ್ಣಿನ ರುಚಿಯನ್ನು ನೆನಪಿಸುವುದು, ಎಲ್ಲವೂ ಕೆಟ್ಟಿಲ್ಲ ಎನ್ನುವ ಸಮಾಧಾನವನ್ನೂ ಹೊಂದಿದೆ.

ಪುಸ್ತಕದ ಎರಡನೇ ಭಾಗದಲ್ಲಿ ೨೦೦೮ರ ಮೂರು ದಿನಗಳಲ್ಲಿ ನಡೆದ ದುರಂತಗಳು ದಾಖಲಾಗಿವೆ. ಕಾಡುಹಂದಿಗಳು ಬಿದ್ದ ತೆಂಗಿನಕಾಯಿಗಳನ್ನು ಸಿಗಿದು ತಿನ್ನುತ್ತವೆ ಎನ್ನುವುದು ಯಾರೂ ಕಂಡು ಕೇಳಿರದ ವಿಷಯ. ತಿನ್ನಲೇನೂ ಸಿಗದೆ ಕಾಡುಪ್ರಾಣಿಗಳು ತಮ್ಮ ಉಳಿವಿನ ದಾರಿಯನ್ನು ಕಂಡುಕೊಳ್ಳುತ್ತವೆ. ಇಂತಹ ಸಂದರ್ಭದಲ್ಲಿ ಕಾಯಿ ಕೀಳಿಸಲು ವ್ಯವಸ್ಥೆ ಮಾಡಿ, ಬೇವಿನ ಗಿಡಗಳನ್ನು ಹಾಕಬೇಕೆಂದಿದ್ದಾಗ ಸಂಬಂಧಿಕನೊಬ್ಬ ಕಟಿಪಿಟಿ ಮಾಡುತ್ತಾನೆ. ಈ ಬೇಸರದಲ್ಲಿ ಬಸ್ಸು ಹತ್ತಿದರೆ ಹಳೆ ಶಿಷ್ಯ ತಗಲಿಕೊಳ್ಳುತ್ತಾನೆ. ಲಂಗು ಲಗಾಮಿಲ್ಲದೆ ಮಾತಾಡುವ, ಜಾತಿ ನಿಂದನೆಗೂ ತೊಡಗಿಕೊಳ್ಳುವ, ಕೆಟ್ಟದ್ದನ್ನು ಮಾಡಿದವ ನಿಮ್ಮ ಶಿಷ್ಯ ಎಂದು ನೋಯಿಸುವವನನ್ನು ಸಹಿಸಿಕೊಳ್ಳುತ್ತಾರೆ. ಆತ ಹೇಳಿದ ಪ್ರೊಫೆಸರ್ ರಾಮಲಿಂಗಯ್ಯನವರ ಸಾವು ಅವರ ನೆಮ್ಮದಿ ಕೆಡಿಸುತ್ತದೆ. ನಿವೃತ್ತರಾದ ಪ್ರೊಫೆಸರ್ ಹೆಗ್ಗೆರೆಯಲ್ಲಿ ಅತೀವ ಪ್ರೀತಿಯಿಂದ ಬೆಳೆಸಿದ ತೋಟಕ್ಕೆ ಬೆಂಕಿ ಇಟ್ಟು ನಾಶ ಮಾಡಿದವರು ಯಾರೆಂದು ತಿಳಿದರೂ ಪೊಲೀಸ್ ಕಂಪ್ಲೈಂಟ್ ಕೊಡದೆ ಕ್ಷಮಿಸುತ್ತಾರೆ. ಆದರೆ ಒಳಗೊಳಗೇ ಕೊರಗಿ ಸಾವನ್ನು ತಂದುಕೊಂಡಿದ್ದಾರೆ. ಈ ಘಟನೆಯಿಂದ ನೋಯುವ ಲೇಖಕರು 'ಒಳ್ಳೆಯವರು ದುರ್ಬಲರಾದರೆ ಹೀಗೆ ಆಗುತ್ತದೆ' ಎಂದು ತಾವೂ ನೊಂದುಕೊಳ್ಳುತ್ತಾರೆ.

ಅವರಲ್ಲಿ, ಉಳುವವನಿಗೆ ಭೂಮಿ ದೊರಕಿದಾಗ ಸಂತೋಷ ಪಟ್ಟ ತಾವು, ತಮ್ಮ ಭೂಮಿಯನ್ನು ಉಳುಮೆ ಮಾಡಲು ಹೇಳುವುದು ಸರಿಯೇ ಎನ್ನುವ ಆತ್ಮವಿಮರ್ಶೆಯಿದೆ. ಬಸವಯ್ಯನ ಮಗನ ದುರಂತಕ್ಕೆ ಯಾರು ಕಾರಣರು, ಅವರ ನಂಬಿಕೆಯೇ, ತಾನೇ ಆತ್ಮಕತೆಯಂತೆಯೇ ಇರುವ ಇವೆರಡು ಭಾಗಗಳಲ್ಲಿ, 'ಯರೆಬೇವು'ನಲ್ಲಿ ಸೇರ್ಪಡೆಯಾಗದ ಕುರುಬರ ಕುಲ ವೃತ್ತಾಂತ, ಆಚರಣೆಗಳು, ಬದುಕಿನ ವಿಧಾನಗಳು ಕುಲಶಾಸ್ತ್ರೀಯ ಅಧ್ಯಯನಕ್ಕೆ ತೆರೆದು ಕೊಳ್ಳುತ್ತವೆ. ವಿಶೇಷವೆಂದರೆ 'ಯರೆಬೇವು' ಸಣ್ಣಸಣ್ಣ ವೃತ್ತಾಂತಗಳ ಮೂಲಕ ಎಸ್. ಜಿ. ಸಿದ್ಧರಾಮಯ್ಯನವರ ಬದುಕಿನ ಘಟ್ಟಗಳಿಗೆ ಸಾಕ್ಷಿಯಾದರೆ, 'ಮಬ್ಬಿನಿಂದ ಇಬ್ಬನಿಗೆ' ಬದುಕಿನ ರೀತಿಯನ್ನು ವಿಸ್ತಾರದಿಂದ ದಾಖಲಿಸುತ್ತದೆ. ಏಳೆಂಟು ವರ್ಷಗಳ ಅಂತರದಲ್ಲಿ ಬರೆದ ಈ ಬರಹಗಳಲ್ಲಿನ ವ್ಯತ್ಯಾಸ ಬೆರಗು ಹುಟ್ಟಿಸುವಂಥದ್ದು. ನಾವು ಬದುಕುವ ಕಾಲಮಾನ ನಮ್ಮ ಬರವಣಿಗೆಯ ಮೇಲೆ ಬೀರುವ ಪ್ರಭಾವಕ್ಕೆ ಇವೆರಡು ಸಾಕ್ಷಿಯಂತಿವೆ.

ಎಸ್‌ಜಿಎಸ್‌ರವರ ಕತೆಗಳನ್ನು ಓದುವಾಗ ಕಾವ್ಯದೊಂದಿಗೆ ಕತೆಗಳನ್ನೂ ಅವರು ಬರೆಯಬೇಕಿತ್ತು ಎಂದನ್ನಿಸುತ್ತದೆ. ಅಪಾರವಾದ ಕೃಷಿ ಮೂಲದ ಜೀವನಾನುಭವ, ಕುರಿ ಸಾಕಣೆಯ ತಿಳಿವಳಿಕೆ, ಊರೊಟ್ಟಿನ ಬದುಕು ಕತೆಗಳಲ್ಲಿ ಮೈದಾಳಿದ್ದರೆ ಸಾರಸ್ವತ ಲೋಕಕ್ಕೆ ವಿಶಿಷ್ಟ ಕೊಡುಗೆಯಾಗಿರುತ್ತಿತ್ತು. ಎಸ್. ಜಿ. ಸಿದ್ಧರಾಮಯ್ಯನವರಿಗೆ ತಮ್ಮದೇ ಆದ ಗದ್ಯ ಶೈಲಿಯಿದೆ. ದೇಸೀ ಮತ್ತು ರೂಢಿಯ ಭಾಷೆಗಳನ್ನು ಹದವಾಗಿ ಬೆರೆಸಿದ ಬರವಣಿಗೆ ಸುಖಾನುಭವ ನೀಡುತ್ತದೆ.

ಎಂ. ನಾಗರಾಜ ಶೆಟ್ಟಿ
ಬಿ ೧೦೧, ಗೋಕುಲ್‌ವ್ಹಿಲಿಂಗ್‌ಟನ್
ಎಂ. ಎಸ್. ರಾಮಯ್ಯ ರಸ್ತೆ, ಗೋಕುಲ
ಬೆಂಗಳೂರು – ೫೬೦೦೫೪
Email : mnshetty.kudla@gmail.com

ಕಾವ್ಯಲೋಕ

ಮನಸೇ

ಸೂರ್ಯನಾ ಕೆಂಪು ಇದೆ
ಕೋಗಿಲೆಯಾ ಇಂಪು ಇದೆ
ಬೆಳದಿಂಗಳಾ ತಂಪು ಇದೆ
ದುಂಡು ಮಲ್ಲಿಗೆಯಾ ಕಂಪು ಇದೆ
ಮರಗಿಡಗಳ ಹೊಂಬಣ್ಣದ ಚಿಗುರಿದೆ
ಮುದ ನೀಡುವ ಹುಲ್ಲಿನಾ ಹಸುರಿದೆ
ಸೃಷ್ಟಿಯ ಸೊಬಗನು ವೀಕ್ಷಿಸುತ
ವಿಹರಿಸು ಮನಸೇ ವಿಹರಿಸು

ಬೇವಿನಾ ಕಹಿಯನ್ನು ಮೇಯ್ದು
ಬೆಲ್ಲದಾ ಸಿಹಿಯನ್ನು ಉಂಡು
ಮಾವಿನ ರಸವನ್ನು ಸವಿದು
ಹಸಿನೇರಳೆಯ ಅಗೆದು
ಇಳೆಗೊಂದು ಧನ್ಯತೆಯ ತೋರುತ
ವಿನೋದಿಸು ಮನಸೇ ವಿನೋದಿಸು

ಸರಳತೆಯ ಮೆರೆಯುತಾ
ಹಳೆಯ ಬೇನೆಗಳನ್ನು ಮರೆಯುತಾ
ಎಲ್ಲೆಲ್ಲಿಯೂ ಎಂದೆಂದಿಗೂ ಹೊಸತನವ ಅರಸುತ
ಭರವಸೆಯ ಬದುಕನ್ನು ಸ್ವಾಗತಿಸುತ
ಮಗುವಂತೆ ಸಂಭ್ರಮದಿ ನಗುನಗುತ
ಕಪ್ಪು ಬಿಳುಪು ಮೇಲುಕೀಳುಗಳಿಲ್ಲದೆ
ಎಲ್ಲ ಮನ ಮನಸುಗಳು ಒಗ್ಗೂಡಿ
ಪ್ರಕೃತಿಯನ್ನಾಸ್ವಾದಿಸಲು
ಶ್ರಮಿಸು ಮನಸೇ ಶ್ರಮಿಸು.



ಲಕ್ಷ್ಮಿ ಎಚ್. ಪಿ.
೧೪೯೭, ೧೮ನೇ ಕ್ರಾಸ್, ೧೪ನೇ ಮೇನ್, ೨ನೇ ಹಂತ
ಕುಮಾರಸ್ವಾಮಿ ಲೇಔಟ್, ಬೆಂಗಳೂರು – ೫೬೦೦೭೮

Scanned with OKEN Scanner

3.4.5

ISSN 2278-5043

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚರಿತ್ರೆ ಅಧ್ಯಯನ

ಸಂಪುಟ - ೧೪ ಸಂಚಿಕೆ - ೧ ಜುಲೈ - ಡಿಸೆಂಬರ್ ೨೦೨೨



Scanned with OKEN Scanner

Scanned with OKEN Scanner

Publication of Department of History

CHARITRE ADHYAYANA

Bi-Annual Vol-14 Issue-1, July-December-2022

Edited by
Dr. N. Chinnaswamy Sosale
Professor
Department of History
Kannada University, Hampi
Vidyaranya 583 276

Published by
Dr. Shailaja I. Hiremath
Director, Prasaranga
Kannada University, Hampi
Vidyaranya 583 276

Pages: x + ೧೪೨

www.kannadauniversity.org

First Impression: 2023

ISSN 2278-5043

ಚರಿತ್ರೆ ಅಧ್ಯಯನ ಅರ್ಧವಾರ್ಷಿಕ ಪತ್ರಿಕೆ

ಸಂಪುಟ - ೧೪ ಸಂಚಿಕೆ - ೧, ಜುಲೈ - ಡಿಸೆಂಬರ್ ೨೦೨೨

(ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳ ಅಭಿಪ್ರಾಯಗಳಿಗೆ ಲೇಖಕರೇ ಜವಾಬ್ದಾರರು)

© ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೨೩

ಪ್ರಧಾನ ಸಂಪಾದಕರು: **ಡಾ. ಡಿ.ವಿ. ಪರಮಶಿವಮೂರ್ತಿ**
ಸಂಪಾದಕರು: **ಡಾ. ಎನ್. ಚಿನ್ನಸ್ವಾಮಿ ಸೋಸಲೆ**

ಸಂಪಾದಕ ಸಲಹಾ ಮಂಡಲಿ
ಡಾ. ವಿಜಯ್ ಪೂಣಚ್ಚ ತಂಬಂಡ, ಡಾ. ಕೆ. ಮೋಹನ್‌ಕೃಷ್ಣ ರೈ
ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಬಿಡಿ ಪ್ರತಿ: ರೂ. ೧೦೦/- ವಾರ್ಷಿಕ ಚಂದಾ: ವ್ಯಕ್ತಿಗಳಿಗೆ ರೂ. ೧೫೦/-
ಸಂಸ್ಥೆಗಳಿಗೆ ರೂ. ೨೦೦/-

ಅಕ್ಷರ ಸಂಯೋಜನೆ: **ಸುರೇಖಾ ಕಂಪ್ಯೂಟರ್ಸ್, ಕಮಲಾಪುರ**

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
ಮೊ: ೯೪೮೦೧ ೮೯೮೬೦

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ಮೈಸೂರು ಬ್ಯಾಂಕ್ ವೃತ್ತ, ನಂ. ೧, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂ.: ೦೮೦-೨೨೩೭೨೩೮೮

ಮುದ್ರಣ
ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

Scanned with OKEN Scanner

ಪರಿವಿಡಿ

ಸಂಪಾದಕರ ಮಾತು / iii

೧. ಭಾರತದ ಚರಿತ್ರೆ ಬರವಣಿಗೆಯ ಸ್ವರೂಪ–ಕೆಲವು ಟಿಪ್ಪಣಿಗಳು / ೧
ಕೆ. ಮೋಹನ್‌ಕೃಷ್ಣ ರೈ

೨. ಮಾತನಾಡಲೇಬೇಕಾದವರ ಚರಿತ್ರೆ : ಚಾರಿತ್ರಿಕ ವಸ್ತುನಿಷ್ಠ ವಿಶ್ಲೇಷಣೆ / ೧೮
ಎನ್. ಚಿನ್ನಸ್ವಾಮಿ ಸೋಸಲೆ

೩. ವಿಜಯನಗರ ರಾಜಧಾನಿ ನಿರ್ಮಾಣದಲ್ಲಿ ವಿದ್ಯಾರಣ್ಯರು :
ದಾವಿಲೆಗಳ ಪುನರಾವಲೋಕನ / ೩೨
ಡಿ.ಎನ್. ಯೋಗೀಶ್ವರಪ್ಪ

೪. ಸೊಂಡೂರು ಪರಿಸರದಲ್ಲಿ ಆಳ್ವಿಕೆ ನಡೆಸಿದ ಪಾಳೆಯಗಾರರು ಮತ್ತು
ಘೋರ್ಪಡೆಗಳ ರಾಜಕೀಯ ಚರಿತ್ರೆ / ೬೦
ವಿರೂಪಾಕ್ಷಿ ಪೂಜಾರಹಳ್ಳಿ

೫. ಕನ್ನಡ ನಾಡಲ್ಲಿ ಅಳಿಸಲಾಗದ ಹೆಜ್ಜೆ ಮೂಡಿಸಿದ ಬುಕಾನನ್
ಹಾಗೂ ಇತರೆ ವಿದೇಶಿ ಮಹನೀಯರು / ೭೭
ಎಂ.ಜಿ. ರಂಗಸ್ವಾಮಿ

೬. ಮೈಸೂರು ರಾಜ್ಯ ಮತ್ತು ಮೊಘಲರ ನಡುವಿನ ರಾಜತಾಂತ್ರಿಕ
ಸಂಬಂಧಗಳು : ಒಂದು ವಿಶ್ಲೇಷಣೆ / ೯೪
ಎನ್. ಮಹದೇವಸ್ವಾಮಿ

೭. ಟಿಪ್ಪುವಿನ ಮತಾಂತರ ರಾಜಕಾರಣ ಮತ್ತು ರಾಜೇಂದ್ರನಾಮೆ / ೧೦೧
ವಿಜಯ್ ಪೂಣಚ್ಚ ತಂಬಂಡ

೮. ತುರ್ತುಪರಿಸ್ಥಿತಿ ಸಂದರ್ಭದಲ್ಲಿ ದಲಿತರ ಸ್ಥಿತಿಗತಿ : ಚಾರಿತ್ರಿಕ ವಿಶ್ಲೇಷಣೆ / ೧೨೫
ಎಚ್.ಸಿ. ನರಸಿಂಹರಾಜು

Scanned with OKEN Scanner

Scanned with OKEN Scanner

೪

ಸೊಂಡೂರು ಪರಿಸರದಲ್ಲಿ ಆಳ್ವಿಕೆ ನಡೆಸಿದ ಪಾಳೆಯಗಾರರು ಮತ್ತು ಘೋರ್ಪಡೆಗಳ ರಾಜಕೀಯ ಚರಿತ್ರೆ

ಎರೂಪಾಕ್ಷಿ ಪೂಜಾರಹಳ್ಳಿ

ಸಂದೂರು, ಸಂಡೂರು, ಸ್ವಂಡೂರು, ಸೊಂಡೂರು ಎಂದು ಕರೆಯುವ ಸಂಡೂರು ಬಳ್ಳಾರಿ ಜಿಲ್ಲೆಯ ಒಂದು ತಾಲೂಕು ಕೇಂದ್ರವಾಗಿದೆ. ಸ್ಕಂದಪುರ, ದೇವಗಿರಿ, ಸುವರ್ಣಗಿರಿ, ಲೋಹಗಿರಿ ಎಂದು ಪುರಾಣಗಳಲ್ಲಿ ಇದಕ್ಕೆ ಕರೆಯಲಾಗಿದೆ. ಈ ಪರಿಸರದಲ್ಲಿ ದಟ್ಟವಾಗಿ ನೆಲಸಿರುವವರು ಆದಿವಾಸಿ, ಗಿರಿಜನರಾದ ಮ್ಯಾಸನಾಯಕರು. ಒಂದೊಂದು ಊರಿಗೂ ಇವರ ಸಾಂಸ್ಕೃತಿಕ ನಾಯಕನ, ಪ್ರಾಣಿಯ ಅಥವಾ ಸಸ್ಯದ ಹೆಸರಿರುವುದು ಗಮನಾರ್ಹ. ಪ್ರಾಚೀನ ಕಾಲದಿಂದಲೂ ಈ ಭಾಗದಲ್ಲಿ ರಾಜಪ್ರಭುತ್ವ ನಡೆಸಿದ್ದು, ಸ್ಥಳೀಯ ಚರಿತ್ರೆ ಮೂಲಕ ಕದಂಬ, ಗಂಗ, ಚಾಲುಕ್ಯ, ಹೊಯ್ಸಳ, ಕುಮ್ಮಟದುರ್ಗ, ವಿಜಯನಗರ, ಪಾಳೆಯಗಾರರು, ಘೋರ್ಪಡೆಗಳು ಹಾಗೂ ಬ್ರಿಟಿಷರ ಆಳ್ವಿಕೆಯವರೆಗೆ ಗುರುತಿಸ ಬಹುದಾಗಿದೆ.

ಮಧ್ಯಕಾಲೀನ ಸಂದರ್ಭದಲ್ಲಿ ವಿಜಯನಗರ ಸಾಮ್ರಾಜ್ಯ ಪ್ರತಿಯೊಂದು ಪಾಳೆಯ ಪಟ್ಟುಗಳ ಏಳಿಗೆಗೆ ಕಾರಣವಾಯಿತು. ಕೃಷ್ಣದೇವರಾಯ ಆಳ್ವಿಕೆ ಮಾಡುವಾಗ ಒಮ್ಮೆ ಯುದ್ಧಕ್ಕೆ ಹೊರಟನು. ಆ ಸಂದರ್ಭದಲ್ಲಿ ತನ್ನೆಲ್ಲಾ ಪಾಳೆಯಗಾರರು, ಅಮರನಾಯಕರನ್ನು ಕರೆಯಿಸಿ ಅವರ ಬೀಳ್ಕೊಡಿಗೆ ಅಭಿನಂದನೆ ಸ್ವೀಕರಿಸಿ ಹೊರಟನು. ಹೀಗೆ ಯುದ್ಧದಲ್ಲಿ ಗೆದ್ದು ಬಂದಾಗ ತನಗೆ ನೆರವಾದ ಅಮರನಾಯಕ, ಪಾಳೆಯಗಾರರಿಗೆ ಉಡುಗೊರೆ, ಬಳುವಳಿಯನ್ನು ಕೊಟ್ಟನು. ಕುಮ್ಮಟದುರ್ಗದ ಕುಮಾರರಾಮ ವಂಸಸ್ಥರಾದ ಮರುಳನವರ ಬೊಮ್ಮಂತರಾಜನಿಗೆ ಕುಡುತಿನಿ, ಸೊಂಡೂರು, ದಾಣರಾವಿ, ಉಜ್ಜನಿ, ಗುಡೇಕೋಟೆ, ಜರಿಮಲೆ ಮತ್ತು ವಡ್ಡು-ದರೋಜಿಯನ್ನು

Scanned with OKEN Scanner

ಕೊಟ್ಟನು. ಮೂಲತಃ ನಾಡ ತಳವಾರಿಕೆಯನ್ನು ಇವರು ವಂಶಪರಂಪರೆಯಾಗಿ ಮಾಡಿಕೊಂಡು ಬಂದಿದ್ದರು. ಹಾಗಾಗಿ ತನ್ನ ಜೀವಮಾನದವರೆಗೆ ಬೊಮ್ಮಂತರಾಜ, ಈ ಪ್ರದೇಶವನ್ನು ಆಳ್ವಿಕೆ ಮಾಡುತ್ತಾನೆ. ಇವನಿಗೆ ವಯಸ್ಸಾದ ಮೇಲೆ ತನ್ನ ಏಳುಜನ ಮಕ್ಕಳಿಗೆ ಈ ಪ್ರದೇಶಗಳನ್ನು ಬಿಟ್ಟು ಕೊಡುತ್ತಾನೆ. ಆ ಪ್ರಕಾರ ಬಿಸಾಳರಾಜನಿಗೆ ಸೊಂಡೂರು, ಹಿರೆ ಬೊಮ್ಮಂತರಾಜನಿಗೆ ಕುಡತಿನಿ, ರಾಜಪ್ಪನಾಯಕನಿಗೆ ಬಾಣರಾವಿ, ವೀರಪ್ಪನಾಯಕನಿಗೆ ಉಜ್ಜನಿ, ಇಮ್ಮಡಿ ರಾಜಪ್ಪನಾಯಕನಿಗೆ ಗುಡೇಕೋಟೆ, ರಾಜಪ್ಪ ನಾಯಕನಿಗೆ ಬಾಣರಾವಿ, ಮಲ್ಲಿಕಾರ್ಜುನ ನಾಯಕನಿಗೆ ಜರಿಮಲೆ ಕೊನೆಯವ ನಾದ ಚಿನ್ನಯರಾಜನಿಗೆ ವಡ್ಡು-ದರೋಜಿಯನ್ನು ಬಿಟ್ಟುಕೊಟ್ಟು ಹಂಚಿಕೆ ಮಾಡಿದನು.

ಬೊಮ್ಮಂತರಾಜ ವಿಜಯನಗರ ಆಳ್ವಿಕೆಯವರೆಗೂ ಸುಖವಾಗಿ ಆಳ್ವಿಕೆ ನಡೆಸಿದ. ನಂತರ ತರುವಾಯ ಆದಿಲ್‌ಶಾಹಿಗಳು, ಹೈದರಾಲಿ-ಟಿಪ್ಪು ಸುಲ್ತಾನ್ ಇತರ ಸ್ಥಳೀಯ ಪಾಳೆಯಗಾರರು, ಮರಾತರು, ಬ್ರಿಟಿಷರು, ಹೈದರಾಬಾದ್‌ನ ನಿಜಾಮ ಹೀಗೆ ನಾನಾ ಭಾಗದ ಅರಸರು ಸೊಂಡೂರಿನ ಮೇಲೆ ಕಬಳಿಸಲು ಹವಣಿಸುತ್ತಿದ್ದರು. ಬೊಮ್ಮಂತರಾಜ ತನ್ನ ಮನೆ ದೇವರಾದ ಜಟ್ಟಂಗಿರಾಮೇಶ್ವರ ಹತ್ತಿರ ಬೇಡಿಕೊಂಡಂತೆ ಶಾಂತಿ ನೆಲಸಿತು. ಆನೆಗೊಂದಿ ಮತ್ತು ಆದೋನಿ ಅರಸರಿಗೆ ಖಂಡಣೆ ಹಣವನ್ನು ಕೊಟ್ಟು ತನ್ನ ರಾಜ್ಯವನ್ನು ಉಳಿಸಿಕೊಂಡನು. ಹೀಗೆ ನೆರೆಹೊರೆಯವರ ಉಪಟಳವನ್ನು ತಾಳಲಾರದೇ ವಯೋವೃದ್ಧನಾದ ಬೊಮ್ಮಂತರಾಜ ಮಕ್ಕಳಿಗೆ ಜಹಗೀರು ಕೊಟ್ಟಿದ್ದನ್ನು ಹಾಗೆಯೇ ಪಾಲುಮಾಡಿಕೊಟ್ಟನು.

ಸೊಂಡೂರು ಪ್ರದೇಶವನ್ನು ಆಳುತ್ತಿದ್ದ ಬಿಸಾಳ ರಾಜನು ತಂದೆಯಂತೆ ಆದವಾನಿಯವರಿಗೆ ಖಂಡಣೆ ಹಣವನ್ನು ಕೊಟ್ಟನು. ಮೊಘಲರು ಆದವಾನಿ ಪ್ರದೇಶವನ್ನು ವಶಪಡಿಸಿಕೊಂಡು ತನ್ನ ಆಳ್ವಿಕೆಗೊಳಪಡಿಸಿಕೊಂಡರು. ಸೊಂಡೂರನ್ನು ಮೊಗಲರು ಕೈವಾಕಿದರು. ಬಿಸಾಳನಾಯಕ ಬಿಟ್ಟುಕೊಡಲಿಲ್ಲ. ಕೊನೆಗೆ ಇವನು ಎತ್ತಿನಹಟ್ಟಿಯನ್ನು ಪರಿಪಾಲನೆ ಮಾಡುತ್ತಿದ್ದ. ಬಿಸಾಳನಾಯಕ ಸೊಂಡೂರು ಪ್ರದೇಶದಲ್ಲಿ ಗಡಿಯನ್ನು ವಿಸ್ತರಿಸಲು ಪ್ರಯತ್ನಿಸಿ ವಿಫಲನಾಗಿ, ಕೊನೆಗೆ ಮರಣ ಹೊಂದಿದನು.

ಬಿಸಾಳರಾಜನ ನಂತರ ಮಗ ರಾಮರಾಯನು ಸೊಂಡೂರು ಪ್ರದೇಶಕ್ಕೆ ಪಾಳೆಯಗಾರನಾಗಿ ಆಳ್ವಿಕೆ ಮಾಡುತ್ತಾನೆ. ರಾಮರಾಯ ಆನೆಗೊಂದಿಗೆ ಹೋಗಿ ವೀರ ವೆಂಕಟಪತಿ ರಾಯನನ್ನು ಕಂಡು ತನ್ನ ಪರಿಸ್ಥಿತಿಯನ್ನು ವಿವರಿಸುತ್ತಾನೆ. ಆನೆಗೊಂದಿ ದೊರೆಯನ್ನು ತನ್ನ ಅಧೀನದಲ್ಲಿದ್ದ ಗಾದಿಗನೂರು, ಕಾಕನೂರು, ಗುಂದಿಗೆರೆ, ವದ್ದಿಗೆರೆ ಮೊದಲಾದ ಗ್ರಾಮಗಳನ್ನು ಉಂಬಳಿಯಾಗಿ ಕೊಡುತ್ತಾನೆ. ಅನೇಕ ವರ್ಷಗಳ ಕಾಲ ಇವುಗಳನ್ನು ಆಳ್ವಿಕೆಗೊಳಪಡಿಸಿಕೊಂಡು ಉತ್ತಮ ಆಡಳಿತವನ್ನು ಮಾಡಿದ.

Scanned with OKEN Scanner

Scanned with OKEN Scanner

ಬಸಾಳರಾಜನಂತೆ ರಾಮರಾಯನು ಏನೆಲ್ಲಾ ಸಾಧನೆಗಳ ಕನಸು ಕಟ್ಟಿಕೊಂಡಿದ್ದನೋ ಕಾಗೆಯೇ ವಯಸ್ಸಾದಂತೆ ಮರಣ ಹೊಂದಿದನು.

ರಾಮರಾಯನ ಮರಣದ ನಂತರ ಆತನ ಮಗ ಅಪ್ಪನಾಯಕ ಸೊಂಡೂರು ಪ್ರದೇಶದಲ್ಲಿ ರಾಜ್ಯಭಕ್ತಿ ಮಾಡುತ್ತಾನೆ. ೧೬೭೮ರಲ್ಲಿ ಮರಾಠರ ಶಿವಾಜಿ ಈ ಪ್ರದೇಶವನ್ನು ಬಿಜಾಪುರದ ಸುಲ್ತಾನರಿಂದ ಪಡೆದುಕೊಂಡನು. ಒಂಗೆ ಶಿವಾಜಿಗಳು ಮತ್ತು ಮೊಘಲರ ಔರಂಗಜೇಬನಿಗೂ ಸಂಘರ್ಷಗಳುಂಟಾಗುತ್ತವೆ. ಅವು ಯುದ್ಧಗಳ ಮೂಲಕ ಸಮಸ್ಯೆಗಳು ಕೊನೆಗೊಳ್ಳುತ್ತವೆ. ೧೬೮೭ರಲ್ಲಿ ಸೊಂಡೂರು ಪ್ರದೇಶ ಮೊಘಲ ಔರಂಗಜೇಬನ ಆಳ್ವಿಕೆಗೆ ಹೋಯಿತು.

ಅಪ್ಪನಾಯಕನ ಅಧೀನದಲ್ಲಿದ್ದ ಪ್ರದೇಶಗಳು ಮೊಗಲರ ಕೈ ವಶವಾಗುತ್ತವೆ. ಅಪ್ಪನಾಯಕನ ಮಗ ಜಟ್ಟಿಂಗರಾಜ ಆನೆಗೊಂದಿಗೆ ತೆರಳಿ ರಾಜರ ಅಪ್ಪಣೆಯಂತೆ ಕಂಪಲಿಯಲ್ಲಿ ನಾಡ ತಳವಾರಿಕೆ ಮಾಡಿಕೊಂಡಿದ್ದನು. ಔರಂಗಜೇಬನು ೧೭೦೭ರಲ್ಲಿ ಮರಣ ಹೊಂದಿದ ಮೇಲೆ ಸೊಂಡೂರು ಪ್ರದೇಶ ಪುನಃ ಮರಾಠರಿಗೆ ಹೋಯಿತು. ಮಹಾರಾಷ್ಟ್ರ ಮೂಲದ ಮರಾಠ ಪಂಗಡವಾದ ಘೋರ್ಪಡೆಗಳು ಆಂಧ್ರದ ಗುತ್ತಿಯಿಂದ ಸಂಡೂರಿಗೆ ಬರುತ್ತಾರೆ. ಶಿವಾಜಿ ವಂಶದ ಬೋಂಸ್ಲೆ ಮನೆತನಕ್ಕೆ ಘೋರ್ಪಡೆಗಳು ಸೇರಿದ್ದರು(೧೪೬೯ರಲ್ಲಿ ದುರ್ಗಮವಾದ ಕೋಟೆ ವಶಪಡಿಸಿಕೊಳ್ಳಲು ಬಾಡ ಬಳಸಿದ್ದರಿಂದ ಘೋರ್ಪಡೆ ಎಂದು ಹೆಸರು ಬಂತು.).

ಈ ಪಾಳೆಯಗಾರರ ಅವಸಾನ ೧೮ನೇ ಶತಮಾನದಲ್ಲಿ ಆರಂಭವಾಯಿತು. ಸೊಂಡೂರನ್ನು ಬಿಟ್ಟು ಕಂಪ್ಲಿ ಮತ್ತು ಬೇರೆ ಬೇರೆ ಕಡೆ ಹೋದ ಬೊಮ್ಮಂತರಾಜನ ವಂಶಸ್ಥರ(ಕೊನೆಯ ರಾಜ ಮತ್ತು ಇಮ್ಮಡಿ ಬಿಜ್ಜಳರಾಜ) ವಾರಸುದಾರರಾದ ಗುಡೇಕೋಟೆ ಮತ್ತು ಜರಿಮಲೆಯವರು ಸೊಂಡೂರಿನ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದರು. ಇದಕ್ಕೆ ಪೂರಕವಾಗಿ ಕೆಲವು ಶಾಸನಗಳು ಬೆಳಕು ಚೆಲ್ಲುತ್ತವೆ. ೧೬೭೬ರಲ್ಲಿ ಸಂಡೂರು ರಾಜಪ್ಪನಾಯಕ ಪಾಳೆಯಗಾರನಾಗಿದ್ದು, ಚೆಲುಮಿನಾಯಕ ವಿಧಿಸಿದ್ದ ತಲೆಹೊರೆ, ಗಾಡಿಹೊರೆ, ಮಿತಸಂತಾನ ಮತ್ತು ನಾಯಿಂದ ತೆರಿಗೆಗಳಿಗೆ ರಾಜಪ್ಪನಾಯಕ ಚೇಕದ ಕೆರೆ, ಚಿಕೇರು ವಿಭಾಗಗಳಲ್ಲಿ ಶಾಶ್ವತವಾದ ವಿನಾಯಿತಿ ಕೊಟ್ಟನು. ಇವನ ಮಗ ಇಮ್ಮಡಿ ರಾಜಪ್ಪನಾಯಕ ೧೬೯೦ರಲ್ಲಿ ಪಾಳೆಯನಾಗಿದ್ದನೆಂದೂ ಅವನಿಗೊಬ್ಬ ಸಹೋದರನಿದ್ದನೆಂದು ಸಿ.ಆರ್. ಶ್ಯಾಮಲ ತಿಳಿಸುತ್ತಾರೆ.[೧] ಸ್ಥಳೀಯ ಬೇಡಪಾಳೆಯಗಾರರು ಆಳುತ್ತಿರುವಾಗಲೇ ನೆರೆಹೊರೆಯರ ಉಪಟಳವನ್ನು ಎದುರಿಸಬೇಕಾಯಿತು.

ಕ್ರಿ.ಶ. ೧೭೧೩ರಲ್ಲಿ ಮರಾಠ ಸೇನಾಪತಿ ಸಿದ್ಧೋಜಿ ಘೋರ್ಪಡೆ ಗುಡೇಕೋಟೆ-ಜರಿಮಲೆ ಬೇಡ ಪಾಳೆಯಗಾರರಿಂದ ಸೊಂಡೂರನ್ನು ವಶಪಡಿಸಿಕೊಂಡನು.

Scanned with OKEN Scanner

Scanned with OKEN Scanner

೧೮೬೮ರಲ್ಲಿ ಸಿದ್ಧೋಜಿ ಮರಣ ಹೊಂದಿದಾಗ ಮಗ ಗೋಪಾಲರಾವ್(೨ನೇ ಮಗ) ಸೊಂಡೂರಿನ ದೊರೆಯಾಗುತ್ತಾನೆ.[೨]

ಗುತ್ತಿಯನ್ನು ಮತ್ತು ಸೊಂಡೂರಿನ ಮೇಲೆ ೧೭೭೫-೭೬ರಲ್ಲಿ ಹೈದರಾಲಿ ಮುತ್ತಿಗೆ ಹಾಕಿ ವಶಪಡಿಸಿಕೊಳ್ಳುತ್ತಾನೆ. ನಿಯಮದಂತೆ ನಡೆದುಕೊಳ್ಳದೆ ಇದ್ದುದರಿಂದ ೧೭೮೯ರಲ್ಲಿ ಹೈದರಾಲಿ ಗುತ್ತಿ-ಸೊಂಡೂರುಗಳನ್ನು ಸ್ವಾಧೀನಪಡಿಸಿಕೊಂಡನು. ೧೭೮೫ರಲ್ಲಿ ಸೊಂಡೂರಿಗೆ ಬಂದ ಟಿಪ್ಪು ಸುಲ್ತಾನ್ ಮುರಾರಿರಾಯರ ದತ್ತುಪುತ್ರ ಗೋಪಾಲರಾವ್‌ನ ಮಗ ಶಿವಾಜಿರಾವ್‌ರನ್ನು ಕೊಲೆಗೈಯುತ್ತಾನೆ. ೧೭೯೦ರಲ್ಲಿ ಶಿವರಾವ್ ಸಹೋದರ ವೆಂಕಟರಾವ್(ಸಿದ್ಧೋಜಿ ಅಳಿಯ) ಟಿಪ್ಪು ವಿರುದ್ಧ ಹೋರಾಡಿ ಸಂಡೂರನ್ನು ಮತ್ತೆ ಪಡೆಯಲು ಪ್ರಯಾಸಪಡುತ್ತಾರೆ. ೧೭೯೨ರಲ್ಲಿ ಬ್ರಿಟಿಷರಿಗೂ-ಟಿಪ್ಪುವಿಗೂ ಆದ ಒಪ್ಪಂದದಂತೆ ಘೋರ್ಪಡೆಗೆ ಅಧಿಕಾರ ನೀಡಲಾಯಿತು. ಟಿಪ್ಪು ಸತ್ತ ನಂತರ ಸಂಡೂರನ್ನು ಯಶವಂತರಾವ್ ಘೋರ್ಪಡೆ ಆಳಿದ. ೧೭೯೬ರಲ್ಲಿ ಸಿದ್ಧೋಜಿ ವಿಧವೆ ಪತ್ನಿ ಪತ್ನಿ ತೀರಿಕೊಂಡಳು. ವಿಂಡೇರಾವ್‌ನ ಮಗ ಶಿವರಾವ್‌ನನ್ನು ದತ್ತು ಪುತ್ರನಾಗಿ ಪಡೆದನು. ೧೮೧೭ರಲ್ಲಿ ಮರಾಠರಿಗೂ ಬ್ರಿಟಿಷರಿಗೂ ಆದ ಒಪ್ಪಂದದಂತೆ ಸೊಂಡೂರನ್ನು ಬ್ರಿಟಿಷರಿಗೆ ಬಿಟ್ಟುಕೊಡಲಾಯಿತು. ಬ್ರಿಟಿಷರು ಶಿವರಾವ್‌ಗೆ ೧೦೦೦ ಪೌಂಡ್‌ಗೆ ಸಂಡೂರು ಭೂಮಿ ಮತ್ತು ಹಣವನ್ನು ಕೊಟ್ಟರು. ೧೮೧೮ರಲ್ಲಿ ಸೊಂಡೂರನ್ನು ಮರಳಿ ಘೋರ್ಪಡೆ ವಶಕ್ಕೆ ನೀಡಲು ಬ್ರಿಟಿಷ್ ಸರ್ಕಾರ ಒಪ್ಪಿತು. ೧೮೨೬ ಬ್ರಿಟಿಷ ಸರ್ಕಾರ ಸನ್ನದನ್ನು ಜಾರಿಗೆ ತರುತ್ತದೆ. ೧೮೪೦ರಲ್ಲಿ ಶಿವರಾವ್ ಅಳಿಯನಾದ ವೆಂಕಟನಿಗೆ ಸಿಗುತ್ತದೆ. ೧೮೬೧ರಲ್ಲಿ ತೀರಿಕೊಂಡ ಸೊಂಡೂರು ಸಂಸ್ಥಾನಿಕರು ಪ್ರತಿ ತಿಂಗಳು ಬ್ರಿಟಿಷ ಸರ್ಕಾರಕ್ಕೆ ಇಂತಿಷ್ಟು ತೆರಿಗೆ ಸಲ್ಲಿಸಬೇಕಾಗಿತ್ತು. ೧೮೬೧ರಲ್ಲಿ ವೆಂಕಟರಾವ್, ಶಿವಷಣ್ಮುಖರಾವ್(೧೮೬೩), ೧೮೭೬ ಜನವರಿ ೨೪ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ನಾರ್ಥ ಬ್ರೂಕ್ ರಾಜ ಎಂಬ ಬಿರುದನ್ನು ಘೋರ್ಪಡೆಗಳಿಗೆ ಕೊಡುತ್ತಾನೆ. ೧೮೭೮ರಲ್ಲಿ ಶಿವ ಷಣ್ಮುಖರಾವ್ ಹಿಂದೂರಾವ್ ಅಧಿಕಾರಕ್ಕೆ ಬಂದ. ೧೯೨೮ರಲ್ಲಿ ಯಶವಂತರಾವ್, ಹಿಂದೂರಾವ್ ಘೋರ್ಪಡೆ ಅಧಿಕಾರ ವಹಿಸಿಕೊಂಡನು. ೧೯೪೭ರಲ್ಲಿ ಸ್ವಾತಂತ್ರವಾದಾಗ ಭಾರತದಲ್ಲಿ ಸೊಂಡೂರು ಸೇರಿಸಲಾಯಿತು. ೧೯೫೦ರಲ್ಲಿ ತಾಲ್ಲೂಕು ಕೇಂದ್ರವಾಯಿತು. ೧೯೫೩ರಲ್ಲಿ ಸೊಂಡೂರು ಮೈಸೂರು ರಾಜ್ಯದಲ್ಲಿ ವಿಲೀನಗೊಂಡಿತು. ಎಂ.ವೈ. ಘೋರ್ಪಡೆ, ಯು.ಆರ್.ಭೂಪತಿ, ಕೆ.ಎಸ್. ವೀರಭದ್ರಪ್ಪ, ಹಿರೋಜಿಲಾಡ್ ಇಲ್ಲಿನ ರಾಜಕೀಯದಲ್ಲಿ ಶಾಸಕರಾಗಿ, ಸಂಸದರಾಗಿದ್ದರು. ೨೦೦೭ರಲ್ಲಿ ಕುಲದೀಪ್‌ಸಿಂಗ್ ವರದಿಯಂತೆ ಸಂಡೂರು ವಿಧಾನ ಸಭಾ ಕ್ಷೇತ್ರ ಪರಿಶಿಷ್ಟ ವರ್ಗಕ್ಕೆ ಮೀಸಲು ಆಯಿತು. ೨೦೦೮ ರಿಂದ ೨೦೨೩ರವರೆಗೆ ಸಾಲ್ಕು ಬಾರಿ ಈ ತುಕರಾಂ ಶಾಸಕರಾಗಿ, ಮಂತ್ರಿಗಳಾಗಿರುವುದು ಶ್ಲಾಘನೀಯ.

ಸೊಂಡೂರು ಪರಿಸರದಲ್ಲಿ ಆಳ್ವಿಕೆ ನಡೆಸಿದ... / ೬೩



ಸಂಡೂರು ಘೋರ್ಪಡೆಗಳು ಮೂಲತಃ ರಾಜಸ್ಥಾನದಿಂದ ಬಂದವರು. ಸಿಸೋಡಿಯಾ ಎಂಬ ರಾಜವಂಶದ ಸುಜನ್‌ಸಿಂಗ್(ಸುಜ್ಜನ್‌ಸಿಂಗ್) ಇವರ ಮೂಲ ಪುರುಷ. ದೆಹಲಿ ಸುಲ್ತಾನರ ದಾಳಿಯಿಂದ ತಪ್ಪಿಸಿಕೊಳ್ಳಲು ದಕ್ಷಿಣಕ್ಕೆ ವಲಸೆ ಬರುತ್ತಾರೆ. ಬಹಮನಿ ಸುಲ್ತಾನರ ಕಾಲದಲ್ಲಿ ಕರ್ಣಸಿಂಗ್ ಘೋರ್ಪಡೆ, ಶುಭಕೃಷ್ಣ ಬೊಂಸ್ಲೆಯವರು ಶಿವಾಜಿ ಪೂರ್ವಿಕರಾಗಿ ಆಳ್ವಿಕೆ ನಡೆಸುತ್ತಾರೆ. ಕರ್ನಾಟಕದಲ್ಲಿ ಮರಾಠರು ಶಿವಾಜಿ ಮೂಲವನ್ನು ಹೇಳಿಕೊಳ್ಳುವುದು ಗಮನಾರ್ಹ.

ಘೋರ್ಪಡೆಗಳ ರಾಜ ಲಾಂಛನ ಉಡ. ಮರಾಠಿಯಲ್ಲಿ ಘೋರ್ಪಡ್ ಎಂದರೆ ಉಡ. ೧೫ನೇ ಶತಮಾನದಲ್ಲಿ ಅಭೇದ್ಯವಾದ ಕೋಟೆ ಬೇಧಿಸಲು ಉಡವನ್ನು ಬಳಸಿದ್ದರಿಂದ ಇವರಿಗೆ ಘೋರ್ಪಡೆ ಎಂದು ಕರೆದರು. ಕರಣ್‌ಸಿಂಗ್ ಮತ್ತು ಭೀಮಸಿಂಗ್‌ರು ಉಡದ ಸಹಾಯದಿಂದ ಜಯಶಾಲಿಗಳಾದರು. ಕರಣ್‌ಸಿಂಗ್ ನಿಧನವಾದ ಮೇಲೆ ಭೀಮಸಿಂಗ್‌ನಿಗೆ ಬಹುಮನಿ ಅರಸರು ೧೪೭೦ರಲ್ಲಿ ರಾಜಾ ಘೋರ್ಪಡೆ ಬಹದ್ದೂರ್ ಪದವಿ ಕೊಟ್ಟು ಮುಧೋಳದ ಸುತ್ತಲಿನ ೮೪ ಹಳ್ಳಿಗಳನ್ನು ಜಹಗೀರಾಗಿ ಕೊಡುತ್ತಾರೆ. ಮಹಾರಾಷ್ಟ್ರ ಇವರನ್ನು ಆಂಧ್ರದ ಗುತ್ತಿಯಿಂದ ಸಂಡೂರಿಗೆ ಬಂದವರೆಂದು ಹೇಳಲಾಗುತ್ತದೆ.

ಸಂಡೂರು ಪ್ರದೇಶದಲ್ಲಿ ಬಂದ ಘೋರ್ಪಡೆಗಳು ನಿಖರವಾಗಿ ಏಕೆ ಬಂದರೆಂದು ತಿಳಿದುಬಂದಿಲ್ಲ. ಶಿವಾಜಿ ಜೊತೆ ದಕ್ಷಿಣ ಕರ್ನಾಟಕದಲ್ಲಿ ಭಾಗವಹಿಸಿದ ಯುದ್ಧಗಳಿಂದ ಮುಂದೆ ಹೋಗಲಾರದೆ ಇಲ್ಲೆ ನೆಲೆ ನಿಂತಿರಬೇಕು. ಮಧ್ಯಕರ್ನಾಟಕದ ದಾವಣಗೆರೆ ಜಿಲ್ಲೆ ಚನ್ನಗಿರಿ ತಾ. ಹೊದಿಗೆರೆ ಬಳಿ ಶಹಜಿ (ಶಿವಾಜಿ ತಂದೆ) ಸಮಾಧಿಯಿದೆ. ಹಾಗೆಯೇ ಬಳ್ಳಾರಿ, ಚಿತ್ರದುರ್ಗ, ವಿಜಯನಗರ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ

• ಸಿ.ಆರ್. ಶ್ಯಾಮಲ, ಪೂರ್ವ ಕರ್ನಾಟಕದ ಪಾಳೆಯಗಾರರು, ಪು.೬೫

Scanned with OKEN Scanner

ಇವರು ಅಲ್ಪಸಂಖ್ಯಾತರಾಗಿ ಮಿಲಿಟರಿ ಹೋಟೆಲ್, ಬಟ್ಟೆ ಅಂಗಡಿ, ಟೈಲರಿಂಗ್ ಇತರ ವೃತ್ತಿಗಳಿಂದ ಜೀವಿಸುತ್ತಿದ್ದಾರೆ.

ಸಂಡೂರು ಪ್ರದೇಶವನ್ನು ಆರಂಭದಲ್ಲಿ ಬೇಡ ಪಾಳೆಯಗಾರರು ಆಳ್ವಿಕೆ ನಡೆಸಿದ್ದರು. ಮೊಮ್ಮಂತರಾಜನ ಮಗ ಬಿಸಾಳರಾಜ ಸಂಡೂರು ಪ್ರದೇಶದಲ್ಲಿ ಪಾಳೆಯಗಾರನಾಗಿದ್ದ. ಆ ಕಾರಣವಾಗಿ ಈಪ್ರದೇಶವನ್ನು ಜರಿಮಲೆ ಪಾಳೆಯಗಾರರು ಆಳುತ್ತಾರೆ. ೧೬೧೩ರಲ್ಲಿ ಮರಾಠ ಸೇನಾಪತಿ ಸಿದ್ಧೋಜಿ ಘೋರ್ಪಡೆ ಸಂಡೂರಿಗೆ ಪ್ರವೇಶಿಸಿದ. ಇದನ್ನು ಮನವರಿಕೊಳ್ಳಲು ಪ್ರಯತ್ನಿಸಿ ೧೬೧೫ರಲ್ಲಿ ಮರಣ ಹೊಂದಿದ. ಇವನ ತರುವಾಯ ಎನೇ ಮಗ ಗೋಪಾಲರಾವ್ ಆಳ್ವಿಕೆ ನಡೆಸಿದನು. ಸಿದ್ಧೋಜಿಗೆ ೪ ಜನ ಪತ್ನಿಯರು ಹಾಗೂ ೪ ಜನ ಗಂಡುಮಕ್ಕಳಿದ್ದರು.

ಬಳ್ಳಾರಿ ಜಿಲ್ಲೆಯ ತಾಲೂಕು ಕೇಂದ್ರವೇ ಸಂಡೂರು. ಇದು ಬಳ್ಳಾರಿಯಿಂದ ನೈಋತ್ಯಕ್ಕೆ ೫೪ ಕಿ.ಮೀ. ದೂರದಲ್ಲಿದೆ. ಸಂಡೂರು ತಾಲೂಕಿನ ಉತ್ತರ-ಪಶ್ಚಿಮಕ್ಕೆ ಹೊಸಪೇಟೆ, ದಕ್ಷಿಣಕ್ಕೆ ಕೂಡ್ಲಿಗಿ, ಪೂರ್ವಕ್ಕೆ ಬಳ್ಳಾರಿ, ಅನಂತಪುರ ಜಿಲ್ಲೆಯ ರಾಯದುರ್ಗ, ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕುಗಳು ಗಡಿಗಳಾಗಿವೆ. ಇದರ ವಿಸ್ತೀರ್ಣ ೯೦೧-೨೯ ಚ.ಕಿ.ಮೀ.ಯಿದೆ. ೧೯೮೧ರ ಜನಗಣತಿ ಪ್ರಕಾರ ೧೩೬೬೫೮ ಇತ್ತು. ಸು. ೮೫ ಗ್ರಾಮಗಳಿದ್ದು, ಬೆಟ್ಟ, ಗುಡ್ಡ, ಕಣಿವೆಗಳಿಂದ ಪಸರಿಸಿದೆ.

೨೦೧೧ರ ಜನಗಣತಿಯಂತೆ ೧,೯೧,೬೫೫ ಜನಸಂಖ್ಯೆಯಿದೆ. ೧೯,೪೨೯ ಹೆಕ್ಟೇರ್ ಅರಣ್ಯ ಪ್ರದೇಶವಿದ್ದು, ಸಾಗುವಳಿ ಭೂಮಿ ೨೪,೨೯೦ ಹೆಕ್ಟೇರ್, ನೀರಾವರಿ ಭೂಮಿ ೬೦೦ ಹೆಕ್ಟೇರ್ ಇದೆ. ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚು ಮಳೆ ಆಗುವ, ಮಲೆನಾಡಿನ ಪ್ರಕೃತಿಯನ್ನು ಇದು ಹೋಲುತ್ತದೆ. ಲೋಹಾದ್ರಿ, ಸ್ಕಂದಪುರ, ಸಂದೂರು, ಸಂಡೂರು (ಸಂದು+ಊರು) ಸಂಡೂರು ಎಂದಾಗಿದೆ. ಸಂಡೂರು ಸಮುದ್ರ ಮಟ್ಟದಿಂದ ೩೦೦೦ ಅಡಿ ಎತ್ತರದಲ್ಲಿದೆ. ಇದು ೧೪.೫೮ ಅಕ್ಷಾಂಶ, ೧೫.೧೨ ರೇಖಾಂಶ, ೭೬.೨೮-೭೬.೪೫ ಪೂರ್ವ ಇದೆ. ೧೬ ಚದರ ಮೈಲು ವಿಸ್ತಾರವಿದೆ. ನಾರಿಹಳ್ಳ, ವಡ್ಡು, ದರೋಜಿ ಕೆರೆ ಆಕರ್ಷಣೀಯವಾಗಿವೆ. ಖನಿಜ ಸಂಪತ್ತು ಇರುವ ಕಾರಣ ಗಣಿ, ಕಾರ್ಖಾನೆಗಳಿದ್ದು ವಿಶ್ವವ್ಯಾಪಿ ಪಡೆದಿದೆ.

ಸಂಡೂರು ಪರಿಸರದಲ್ಲಿ ಶಿಲಾಯುಗ, ಬೃಹತ್ ಶಿಲಾಯುಗ, ಮೌರ್ಯ, ನಂದರು, ಶಾತವಾಹನರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಸಿಂಧರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ಕುಮ್ಮಟದುರ್ಗದ ನಾಯಕರು, ವಿಜಯನಗರ ಅರಸರ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿತ್ತು. ಹೊಸಮಲೆದುರ್ಗ ಮುಮ್ಮಡಿ ಸಿಂಗನ ಎನೇ ರಾಜಧಾನಿ ಆಗಿತ್ತು. ವಿಜಯನಗರ ನಂತರ ಗುಡಿಕೋಟೆ, ಜರಿಮಲೆ, ದರೋಜಿ, ಬಾಣರಾವಿ, ಉತ್ತರಮಲೆ, ಜೋಗಿಕಲ್ಲು ಪ್ರದೇಶದಲ್ಲಿ

Scanned with OKEN Scanner

ಪಾಳೆಯಗಾರರು ಆಳ್ವಿಕೆ ನಡೆಸಿದ್ದಾರೆ.(ಕರ್ನಾಟಕ ಸಾಂಸ್ಕೃತಿಕ ಚರಿತ್ರೆಗೆ ಬಳ್ಳಾರಿಜಿಲ್ಲೆಯ ಪಾಳೆಯಗಾರರ ಕೊಡುಗೆ, ಜಿ. ಕೊಟ್ರಪ್ಪ, ಶಶಿಕಾಂತ (ಸಂ.), ಗಾಯತ್ರಿಪ್ರಕಾಶನ, ೨೦೨೧, ಬಳ್ಳಾರಿ).

ಶಿವಾಜಿ ಸೇನಾನಿ ಸಂತಾಜಿ ಘೋರ್ಪಡೆ ವಂಶದವ ಸಂಡೂರು ಪ್ರದೇಶಕ್ಕೆ ಬರುತ್ತಾನೆ. ಸಿದ್ಧೋಜಿರಾವ್ ಘೋರ್ಪಡೆ ಅಧಿಕೃವಾಗಿ ಸಂಡೂರು ಪ್ರದೇಶದಲ್ಲಿ ರಾಜ್ಯಾಳ್ವಿಕೆ ಮಾಡುತ್ತಾರೆ. ೧೭೭೯ರವರೆಗೆ ತಿರುಚಿಯ ರಾಜಪ್ರತಿನಿಧಿಯಾಗಿದ್ದವನು ಮುರಾರಿರಾವ್. ಇವನು ದೇವಾಲಯಗಳಿಗೆ ಜಹಗೀರು ನೀಡಿದ. ನಿಜಾಮ್ ಉಲ್ಕ್ ಮುಲ್ಕ್ ತಿರುಚಿಗೆ ಮುತ್ತಿಗೆ ಹಾಕಿದಾಗ ತಿರುಚಿಯನ್ನು ಬಿಟ್ಟುಕೊಟ್ಟು ಗುತ್ತಿ-ವೆನುಕೊಂಡಗಳನ್ನು ಪಾಲನೆ ಮಾಡುತ್ತಾನೆ. ಚಂದಾಸಾಹೇಬ್ ಫ್ರೆಂಚರ ಸಹಾಯದಿಂದ ತಿರುಚಿಯನ್ನು ಪಡೆಯಲು ಬಂದಾಗ ಮುರಾರಿ ರಾವ್ ಮರಾಠರ ರಘುಜಿ ಇಂಗ್ಲೀಷರ ಸಹಾಯ ಪಡೆದು ಅವನನ್ನು ಹಿಮ್ಮೆಟ್ಟಿಸುತ್ತಾರೆ. ಚಂದಾಸಾಹೇಬ ಸೋಲು ತಪ್ಪಿಸಿಕೊಳ್ಳಲು ೧೨ ಲಕ್ಷ ಕೊಡಲು ಮುಂದಾದ. ಆದರೆ ಮುರಾರಿರಾವ್ ಮತ್ತು ಮರಾಠರು ಅವರನ್ನು ಬಂಧಿಸುತ್ತಾರೆ. ತಿರುಚನಪಳ್ಳಿಯ ರಾಜ್ಯಪಾಲನಾಗಿ ಮುರಾರಿರಾವ್‌ರನ್ನು ನೇಮಿಸುತ್ತಾರೆ (ಕ್ರಿ.ಶ. ೧೭೪೧–೧೭೪೪).

ಮುರಾರಿರಾವ್ ಶ್ರೀರಂಗಂ ದೇವಾಲಯಕ್ಕೆ ೫೭ ಹಳ್ಳಿಗಳನ್ನು ಜಹಗೀರಾಗಿ ಕೊಟ್ಟಿದ್ದ. ಜಂಬುಕೇಶ್ವರ ದೇವಾಲಯಕ್ಕೆ ೧೪ ಹಳ್ಳಿಗಳನ್ನು, ತಿರುಚಿಯ ತಾಯಿ ಮನಿಸ್ವಾಮಿ ದೇವಾಲಯಕ್ಕೆ ೯ ಹಳ್ಳಿಗಳನ್ನು ದಾನವಾಗಿ ಕೊಟ್ಟಿದ್ದ. ನಿಜಾಮು ಉಲ್ಕ್ ಮುಲ್ಕ್ ೨೯.೮.೧೭೪೩ರಲ್ಲಿ ಮುರಾರಿ ರಾವ್‌ಗೆ ಉಡುಗೊರೆ, ಸನ್ಮಾನಗಳಿಂದ ಗೌರವಿಸಿದ. ನಿಜಾಂ ಉಲ್ಕ್ ಮುಲ್ಕ್ ತಿರುಚಿಯನ್ನು ಮರಳಿ ಮುರಾರಿರಾವ್‌ಗೆ ಬಿಟ್ಟುಕೊಟ್ಟ. ಗುತ್ತಿಯ ಸ್ವತಂತ್ರ ಅರಸನೆಂದು ನಿಜಾಮ ಸಾರಿದ.

ಮುರಾರಿರಾವ್ ತಿರುಚಿಯಲ್ಲಿದ್ದಾಗ ಚಂದ ಸಾಹೇಬನು ತಂಜಾವೂರನ್ನು ಲೂಟ ಮಾಡಲು ಹವಣಿಸಿದ. ಅದನ್ನು ತಡೆಯುವಷ್ಟರಲ್ಲಿ ಸತಾರದಲ್ಲಿ ೧೭೪೯ರಂದು ಶಾಹುವಿನ ಮರಣವಾಯಿತು. ೧೭೪೯ರಲ್ಲಿ ಮುರಾರಿರಾವ್ ಗುತ್ತಿಯಿಂದ ಹೊರಟು ೧೭೫೦ರಲ್ಲಿ ಕೋರಮಂಡಲ ಕರಾವಳಿ ತಲುಪಿ ಮಾರ್ಚ್‌ನಲ್ಲಿ ಚಂದಾಸಾಹೇಬ್ ಮತ್ತು ಮುಜಾಫರ್ ಜಂಗನಿಗೂ ಯುದ್ಧವಾಗುತ್ತದೆ. ಇದರಲ್ಲಿ ಚಂದಾಸಾಹೇಬನ ದಂಡನಾಯಕರಾದ ಶೇಷರಾವ್ ಮತ್ತು ಶೇಖ್ ಮಹಮ್ಮದ್ ಸತ್ತು ಹೋಗುತ್ತಾರೆ. ಫ್ರೆಂಚರು ಚಂದಾಸಾಹೇಬನಿಗೆ ಸಹಾಯ ಮಾಡಿದ್ದರಿಂದ ಕೆಲವು ಯುದ್ಧಗಳಲ್ಲಿ ಮುರಾರಿರಾವ್ ಪ್ರಯಾಸ ಪಟ್ಟು ೯ ಸೈನಿಕರನ್ನು ಕಳೆದುಕೊಂಡ. ಇದು ಮುರಾರಿಗೆ ದೊಡ್ಡ ಹೆಸರು ತಂದಿತು. ಚಂದಾಸಾಹೇಬ ಮತ್ತು ಫ್ರೆಂಚರು ಪಾಂಡಿಚೇರಿಗೆ ಹೋದರೆ ಮುಜಾಫರ ಜಂಗ್ ಶರಣಾಗಿದ್ದ. ಮುರಾರಿರಾವ್ ಪಾಂಡಿಚೇರಿ ಹತ್ತಿರ ಬೀಡು

Scanned with OKEN Scanner

Scanned with OKEN Scanner

ಬಿಟ್ಟಾಗ ನಾಸಿರ್‌ಜಂಗ್ ಮತ್ತು ಡ್ಯೂಪ್ಲೆಕ್ಸ್ ದಿಲಾಎಚ್‌ನು ಯುದ್ಧಮಾಡಿ ೧೨೦೦ ಸೈನಿಕರನ್ನು ಹತ್ಯೆ ಮಾಡಿದನು. ರಾವ್ ವೆಂಕಟಗಿರಿಗೆ ಓಡಿಹೋದ. ೧೭೫೦ರಲ್ಲಿ ಬಂಜಿಯನ್ನು ಪಡೆದ ಫ್ರೆಂಚರು ಮುರಾರಿರಾವ್‌ನೊಂದಿಗೆ ಮಾತುಕತೆ ಮಾಡುತ್ತಾರೆ. ರಾವ್ ಮಹಮದ್ ಅಲಿ ಒಟ್ಟಿಗೆ ಸೇರಿಕೊಳ್ಳುತ್ತಾರೆ.

ಅರ್ಕಾಟ್ ಬ್ರಿಟಿಷರ ಅಧೀನದಲ್ಲಿತ್ತು. ಚಂದಾ ಸಾಹೇಬ್ ಇದನ್ನು ವಶಪಡಿಸಿಕೊಳ್ಳಲು ಡ್ಯೂಪ್ಲೆಕ್ಸ್ ಮತ್ತು ಫ್ರೆಂಚರ ಸಹಾಯ ಪಡೆದ. ಮುರಾರಿರಾವ್ ಅಪಾರ ಧನದೊಂದಿಗೆ ಮಧ್ಯ ಪ್ರವೇಶಿಸಿದ್ದಲ್ಲದೆ, ಯುದ್ಧದಲ್ಲಿ ಗೆದ್ದು ಅರ್ಕಾಟ್‌ಗೆ ಮುತಾರಜಾ ಅಲಿಯನ್ನು ನವಾಬನಾಗಿ ಮಾಡುತ್ತಾನೆ. ೧೭೫೩ರ ಜನವರಿಯಲ್ಲಿ ಮುರಾರಿರಾವ್‌ಗೆ ಡ್ಯೂಪ್ಲೆ ಪಾಂಡಿಚೇರಿಯಲ್ಲಿ ಗೌರವ ಸನ್ಮಾನ ಮಾಡಿದ್ದು ಸ್ಮರಣೀಯ.

ಮುರಾರಿರಾವ್ ತಿರುವಡಿಯ ಮೇಲೆ ದಾಳಿ ಮಾಡಲು ಫ್ರೆಂಚರ ಸಹಾಯ ಬಯಸಿದ. ಆದರೆ ಅವರು ಸಹಕಾರ ನೀಡಲಿಲ್ಲ. ಈ ಹೋರಾಟದಲ್ಲಿ ಭುಜಂಗರಾವ್ ಘೋರ್ಪಡೆ ಸತ್ತು ಮುರಾರಿರಾವ್ ಕುದುರೆ ಸಹ ಮೃತಪಟ್ಟಿತು. ಫ್ರೆಂಚರ ಡ್ಯೂಪ್ಲೆ ರಾವ್‌ಗೆ ಕುದುರೆಗಳಲ್ಲದೆ ಇತರೆ ಅಗತ್ಯ ಯುದ್ಧ ಸಾಮಗ್ರಿಗಳನ್ನು ಕೊಟ್ಟು ಕಳುಹಿಸಿದ. ಮುರಾರಿರಾವ್‌ನನ್ನು ಹೈದರಾಲಿ ನಂಜರಾಜನ ಜತೆ ತಿರುಚಿಯಲ್ಲಿ ಭೇಟಿ ಆಗಿದ್ದ. ೧೭೬೧ರಲ್ಲಿ ಹೈದರಾಲಿ ಪ್ರಬಲವಾಗಿ ಬೆಳೆದಿದ್ದ. ಇವನನ್ನು ಎದುರಿಸುವ ಸಾಮರ್ಥ್ಯ ಮುರಾರಿರಾವ್‌ಗೆ ಮಾತ್ರ ಇತ್ತು. ನಂಜರಾಜ ಮುರಾರಿರಾವ್‌ನನ್ನು ಮೈಸೂರಿಗೆ ಕರಿಸಿಕೊಂಡು ಮೋಸದಿಂದ ಕೊಲೆ ಮಾಡಿರುವುದನ್ನು ಸೇನಾಧಿಪತಿ ಹೈದರಾಲಿ ತಪ್ಪಿಸಿದ. ನಂಜರಾಜನಿಗೆ ಫ್ರೆಂಚರು ತಿರುಚಿಯನ್ನು ಕೊಟ್ಟು ಮೂರಾರಿಗೆ ಸನ್ಮಾನಿಸಿದರು. ಮುರಾರಿರಾವ್ ಪುಣೆ, ಕೊಲ್ಹಾಪುರ, ಮರಾಠ ಸಂಸ್ಥಾನ, ನಿಜಾಮ ನಿವಾಬ ಮದರಾಸು, ಪಾಂಡಿಚೇರಿ, ಇಂಗ್ಲೀಷ್, ಫ್ರೆಂಚರು ಎಲ್ಲರಿಂದ ಗುಪ್ತ ಮಾಹಿತಿ ಸಂಗ್ರಹಿಸುತ್ತಿದ್ದರು.

ಹೈದರಾಲಿ ಚಿಕ್ಕಬಳ್ಳಾಪುರದ ಬಳಿ ಮುರಾರಿರಾವ್‌ನನ್ನು ಸೋಲಿಸಲು ಯುದ್ಧ ನಡೆಯಲು ೨೫೦೦ ಸೈನಿಕರೊಂದಿಗೆ ಶಿವರಾವ್ ಘೋರ್ಪಡೆ ಮತ್ತು ಖಂಡೇರಾವ್ ಘೋರ್ಪಡೆ ಕಳುಹಿಸಿದ್ದ ಅವರಿಬ್ಬರು ಸೋತು ಬಂದರು. ಇಂಥ ಎರಡು ಸನ್ನಿವೇಶಗಳು ಮುರಾರಿರಾವ್ ಎದುರಿಸುತ್ತಾನೆ. ಹೈದರಾಲಿಗೆ ಶಾಂತಿ ಒಪ್ಪಂದ ಮಾಡಿಕೊಂಡ ೭ ಲಕ್ಷ ಕೊಡಬೇಕಾಗಿತ್ತು. ಹೀಗೆ ಹೈದರಾಲಿ ಮುರಾರಿರಾವ್ ಕಡೆಯ ಅಧಿಕಾರಿ, ಸೈನಿಕರನ್ನು ಸೆರೆಹಿಡಿದನು. ನಂದಿದುರ್ಗಕ್ಕೆ ಮುರಾರಿರಾವ್ ಹೋಗಿ ನೆಲಸಿದ್ದ. ೧೭೬೯ ಅಕ್ಟೋಬರ್‌ನಲ್ಲಿ ಹೈದರಾಲಿ ಮತ್ತು ಮುರಾರಿ ಶಾಂತಿ ಸಭೆ ಮಾಡಿದರೂ ವಿಫಲರಾಗಿ ಹೈದರಾಲಿ ಸವಣೂರಿಗೆ, ಮದರಾಸಿಗೆ ಗುತ್ತಿಗೆ ಹೋಗುತ್ತಾರೆ.

೧೭೬೯ರಲ್ಲಿ ಮಾಧವರಾವ್ ಪೇಶ್ವೆ ಸು. ೭೫,೦೦೦ ಸೇನಾ ತುಕಡಿಯೊಂದಿಗೆ ಪುಣೆಯಿಂದ ಮೈಸೂರು ಕಡೆ ಬರುವಾಗ ತುಂಗಭ್ರಾ ನದಿ ದಾಟುತ್ತಿದ್ದಂತೆ ಮುರಾರಿ

Scanned with OKEN Scanner

Scanned with OKEN Scanner

ಬಟ್ಟಾಗ ನಾಸಿರ್‌ಜಂಗ್ ಮತ್ತು ಡೂಪ್ಲಿಕ್ಸ್ ಡಿಲಾಎಚ್‌ನು ಯುದ್ಧಮಾಡಿ ೧೨೦೦ ಸೈನಿಕರನ್ನು ಹತ್ಯೆ ಮಾಡಿದನು. ರಾವ್ ವೆಂಕಟಗಿರಿಗೆ ಹಿಂತಿರುಗಿದ. ೧೭೫೦ರಲ್ಲಿ ಬೆಂಜಿಯನ್ನು ಪಡೆದ ಫ್ರೆಂಚರು ಮುರಾರಿರಾವ್‌ನೊಂದಿಗೆ ಮಾತುಕತೆ ಮಾಡುತ್ತಾರೆ. ರಾವ್ ಮಹಮದ್ ಅಲಿ ಒಟ್ಟಿಗೆ ಸೇರಿಕೊಳ್ಳುತ್ತಾರೆ.

ಅರ್ಕಾಟ್ ಬ್ರಿಟಿಷರ ಅಧೀನದಲ್ಲಿತ್ತು. ಚಂದಾ ಸಾಹೇಬ್ ಇದನ್ನು ವಶಪಡಿಸಿಕೊಳ್ಳಲು ಡ್ಯೂಪ್ಲಿಕ್ಸ್ ಮತ್ತು ಫ್ರೆಂಚರ ಸಹಾಯ ಪಡೆದ. ಮುರಾರಿರಾವ್ ಅಪಾರ ಸೈನ್ಯದೊಂದಿಗೆ ಮಧ್ಯ ಪ್ರವೇಶಿಸಿದ್ದಲ್ಲದೆ, ಯುದ್ಧದಲ್ಲಿ ಗೆದ್ದು ಅರ್ಕಾಟ್‌ಗೆ ಮುತಾರಜಾ ಅಲಿಯನ್ನು ನವಾಬನಾಗಿ ಮಾಡುತ್ತಾನೆ. ೧೭೫೩ರ ಜನವರಿಯಲ್ಲಿ ಮುರಾರಿರಾವ್‌ಗೆ ಡ್ಯೂಪ್ಲೆ ಪಾಂಡಿಚೇರಿಯಲ್ಲಿ ಗೌರವ ಸನ್ಮಾನ ಮಾಡಿದ್ದು ಸ್ಮರಣೀಯ.

ಮುರಾರಿರಾವ್ ತಿರುವಡಿಯ ಮೇಲೆ ದಾಳಿ ಮಾಡಲು ಫ್ರೆಂಚರ ಸಹಾಯ ಬಯಸಿದ. ಆದರೆ ಅವರು ಸಹಕಾರ ನೀಡಲಿಲ್ಲ. ಈ ಹೋರಾಟದಲ್ಲಿ ಭುಜಂಗರಾವ್ ಘೋರ್ಪಡೆ ಸತ್ತು ಮುರಾರಿರಾವ್ ಕುದುರೆ ಸಹ ಮೃತಪಟ್ಟಿತು. ಫ್ರೆಂಚರ ಡ್ಯೂಪ್ಲೆ ರಾವ್‌ಗೆ ಕುದುರೆಗಳಲ್ಲದೆ ಇತರೆ ಅಗತ್ಯ ಯುದ್ಧ ಸಾಮಗ್ರಿಗಳನ್ನು ಕೊಟ್ಟು ಕಳುಹಿಸಿದ. ಮುರಾರಿರಾವ್‌ನನ್ನು ಹೈದರಾಲಿ ನಂಜರಾಜನ ಜತೆ ತಿರುಚಿಯಲ್ಲಿ ಭೇಟಿ ಆಗಿದ್ದ. ೧೭೬೧ರಲ್ಲಿ ಹೈದರಾಲಿ ಪ್ರಬಲವಾಗಿ ಬೆಳೆದಿದ್ದ. ಇವನನ್ನು ಎದುರಿಸುವ ಸಾಮರ್ಥ್ಯ ಮುರಾರಿರಾವ್‌ಗೆ ಮಾತ್ರ ಇತ್ತು. ನಂಜರಾಜ ಮುರಾರಿರಾವ್‌ನನ್ನು ಮೈಸೂರಿಗೆ ಕರಿಸಿಕೊಂಡು ಮೋಸದಿಂದ ಕೊಲೆ ಮಾಡಿರುವುದನ್ನು ಸೇನಾಧಿಪತಿ ಹೈದರಾಲಿ ಕಪ್ಪಿಸಿದ. ನಂಜರಾಜನಿಗೆ ಫ್ರೆಂಚರು ತಿರುಚಿಯನ್ನು ಕೊಟ್ಟು ಮೂರಾರಿಗೆ ಸನ್ಮಾನಿಸಿದರು. ಮುರಾರಿರಾವ್ ಪುಣೆ, ಕೊಲ್ಹಾಪುರ, ಮರಾಠ ಸಂಸ್ಥಾನ, ನಿಜಾಮ ನಿವಾಬ ಮದರಾಸು, ಪಾಂಡಿಚೇರಿ, ಇಂಗ್ಲೀಷ್, ಫ್ರೆಂಚರು ಎಲ್ಲರಿಂದ ಗುಪ್ತ ಮಾಹಿತಿ ಸಂಗ್ರಹಿಸುತ್ತಿದ್ದರು.

ಹೈದರಾಲಿ ಚಿಕ್ಕಬಳ್ಳಾಪುರದ ಬಳಿ ಮುರಾರಿರಾವ್‌ನನ್ನು ಸೋಲಿಸಲು ಯುದ್ಧ ನಡೆಯಲು ೨೫೦೦ ಸೈನಿಕರೊಂದಿಗೆ ಶಿವರಾವ್ ಘೋರ್ಪಡೆ ಮತ್ತು ಖಂಡೇರಾವ್ ಘೋರ್ಪಡೆ ಕಳುಹಿಸಿದ್ದ ಅವರಿಬ್ಬರು ಸೋತು ಬಂದರು. ಇಂಥ ಎರಡು ಸನ್ನಿವೇಶಗಳು ಮುರಾರಿರಾವ್ ಎದುರಿಸುತ್ತಾನೆ. ಹೈದರಾಲಿಗೆ ಶಾಂತಿ ಒಪ್ಪಂದ ಮಾಡಿಕೊಂಡ ೭ ಲಕ್ಷ ಕೊಡಬೇಕಾಗಿತ್ತು. ಹೀಗೆ ಹೈದರಾಲಿ ಮುರಾರಿರಾವ್ ಕಡೆಯ ಅಧಿಕಾರಿ, ಸೈನಿಕರನ್ನು ಸೆರಹಿಡಿದನು. ನಂದಿದುರ್ಗಕ್ಕೆ ಮುರಾರಿರಾವ್ ಹೋಗಿ ನೆಲಸಿದ್ದ. ೧೭೬೯ ಅಕ್ಟೋಬರ್‌ನಲ್ಲಿ ಹೈದರಾಲಿ ಮತ್ತು ಮುರಾರಿ ಶಾಂತಿ ಸಭೆ ಮಾಡಿದರೂ ವಿಫಲರಾಗಿ ಹೈದರಾಲಿ ಸವಣೂರಿಗೆ, ಮದರಾಸಿಗೆ ಗುತ್ತಿಗೆ ಹೋಗುತ್ತಾರೆ.

೧೭೬೯ರಲ್ಲಿ ಮಾಧವರಾವ್ ಪೇಶ್ವೆ ಸು. ೭೫,೦೦೦ ಸೇನಾ ತುಕಡಿಯೊಂದಿಗೆ ಪುಣೆಯಿಂದ ಮೈಸೂರು ಕಡೆ ಬರುವಾಗ ತುಂಗಭ್ರಾ ನದಿ ದಾಟುತ್ತಿದ್ದಂತೆ ಮುರಾರಿ

Scanned with OKEN Scanner

ಫೋರ್ಡೆಯ ೫೦೦೦ ಅಶ್ವದಳ, ೩೦೦೦ ಸೇನಾಪಡೆ ಸೇರಿಕೊಂಡಿತು. ಮಾಧವರಾವ್ ಪೇಶ್ವೆ-ಮುರಾರಿರಾವ್ ೧೭೭೦ರಲ್ಲಿ ಹೈದರಾಲಿಯನ್ನು ಸೋಲಿಸಿದನು. ೧೭೭೪ರಲ್ಲಿ ಹೈದರಾಲಿ-ಟಿಪ್ಪು ಸೇರಿಕೊಂಡು ಪೇಶ್ವೆ ರಘುನಾಥರನ್ನು ಸೋಲಿಸಿದರು. ಹೈದರಾಲಿ-ಬಳ್ಳಾರಿ, ಕರ್ನೂಲುಗಳನ್ನು ವಶಪಡಿಸಿಕೊಂಡ. ಮುರಾರಿರಾವ್ ತನ್ನ ಕುಟುಂಬವನ್ನು ಶಿವರಾವ್ ಫೋರ್ಡೆ ಬೆಂಗಾವಲಿನಲ್ಲಿ ಮಡಕಶಿರಾ ಕೋಟೆಗೆ ಕಳುಹಿಸಿದ. ಹೈದ್ರಾಲಿ ೨೫೦೦೦ ಸೈನಿಕರೊಂದಿಗೆ ೧೭೭೫ರ ಡಿಸೆಂಬರ್‌ನಲ್ಲಿ ಗುತ್ತಿಕೋಟೆ ಮುತ್ತಿಗೆ ಹಾಕಿದ. ಮುರಾರಿಗೆ ಮರಾಠರು ಸೈನ ಸಹಾಯ ಮಾಡಿಲಿಲ್ಲ. ಅನಿವಾರ್ಯವಾಗಿ ಒಪ್ಪಂದ ಮಾಡಿಕೊಂಡು ೧೨ ಲಕ್ಷ ಆಭರಣ ಒತ್ತೆ ಆಳುಗಳನ್ನು ಕೊಡಲಾಯಿತು. ೧೭೭೬ ಮಾರ್ಚ್ ೧೫ರಂದು ಹೈದರಾಲಿ ಮುರಾರಿರಾವ್‌ನನ್ನು ಮುತ್ತಿಗೆ ಹಾಕಿದ. ೧೭೭೭ರಲ್ಲಿ ಕಬ್ಬಲದುರ್ಗದಲ್ಲಿ ಮುರಾರಿರಾವ್‌ನನ್ನು ಗಲ್ಲಿಗೇರಿಸಲಾಯಿತು. ಮುರಾರಿರಾವ್‌ಗೆ ಮಕ್ಕಳಿಲ್ಲದ ಕಾರಣ ಗೋಪಾಲರಾವ್ ಮಗ ಶಿವರಾಯನನ್ನು ದತ್ತು ತೆಗೆದುಕೊಂಡು ಹೈದರಾಲಿ ಸಂಡೂರನ್ನು ಪಡೆದನು. ನಂತರ ಗುತ್ತಿಯನ್ನು ೧೭೭೯ರಲ್ಲಿ ಆಕ್ರಮಿಸಿದನು. ೧೭೮೨ ಡಿಸೆಂಬರ್ ೭ ಹೈದರ್ ಬ್ರಿಟೀಷರ ವಿರುದ್ಧ ಹೋರಾಡುವಾಗ ಮರಣ ಹೊಂದಿದ. ೧೭೮೫ರಲ್ಲಿ ಟಿಪ್ಪು ಸೊಂಡೂರಿಗೆ ಬಂದು, ಶಿವರಾವ್‌ನನ್ನು ಕೊಲೆ ಮಾಡುತ್ತಾನೆ. ಶಿವರಾವ್ ಸಹೋದರ ವೆಂಕಟರಾವ್ ಟಿಪ್ಪುವಿನ ವಿರುದ್ಧ ಹೋರಾಡಿ ಸಂಡೂರನ್ನು ಮರಳಿ ಪಡೆಯುತ್ತಾನೆ.

೧೩ನೇ ವಯಸ್ಸಿನಲ್ಲಿ ಸಿದ್ಧೋಜಿರಾವ್ ಅಧಿಕಾರದಲ್ಲಿರುವಾಗಲೇ ಮೃತನಾದ. ದತ್ತವಾಡದ ಖಿಂಡೇರಾಯನ ಮಗ ೨ನೇ ಶಿವರಾಯನನ್ನು ಸಂಡೂರಿಗೆ ದತ್ತು ಪಡೆದನು. ಶಿವರಾಯ ಮತ್ತು ವೆಂಕಟರಾಯ ಸಂಡೂರನ್ನು ಮುನ್ನೆಡಿಸಿದರು. ಮರಾಠರ ಪೇಶ್ವೆ ೨ನೇ ಬಾಜಿರಾಯ ಸಂಡೂರನ್ನು ಆಕ್ರಮಿಸಲು ಪ್ರಯತ್ನಿಸಿದ್ದನ್ನು ವಿಫಲಗೊಳಿಸಲಾಯಿತು. ೧೮೧೭ರಲ್ಲಿ ಬಾಜಿರಾಯ ಇಂಗ್ಲೀಷರ ಸಹಾಯದೊಂದಿಗೆ ಸಂಡೂರನ್ನು ಮುತ್ತಿಗೆ ಹಾಕಿದ. ಇಂಗ್ಲೀಷರಿಗೆ, ಪೇಶ್ವೆಯವರಿಗೆ ಬೆಸ್ಸಿನ್ ಒಪ್ಪಂದದ ಪ್ರಕಾರ ಸರ್ ಥಾಮಸ್ ಮನ್ರೋ ೧೮೧೮ರಲ್ಲಿ ಶಿವರಾಯನಿಗೆ ಸಂಡೂರನ್ನು ಮರಳಿ ಕೊಡುತ್ತಾನೆ. ಶಿವರಾಯ ಸಂಡೂರನ್ನು ಮೊದಲಿನ ಸ್ಥಿತಿಗೆ ತರಲು ಪ್ರಯತ್ನಿಸಿ ೧೮೪೦ರಲ್ಲಿ ಮರಣ ಹೊಂದಿದ. ಇವನಿಗೆ ಮಕ್ಕಳಿಲ್ಲದ ಕಾರಣ ಭುಜಂಗರಾಯನ ಮಗ ವೆಂಕಟರಾಯ ಅಧಿಕಾರಕ್ಕೆ ತರಲಾಯಿತು. ೧೮೬೧ರಲ್ಲಿ ಇವನು ಮರಣ ಹೊಂದಿದಾಗ ಮಗ ಶಿವಷಣ್ಮುಖರಾವ್ ಅಧಿಕಾರವಹಿಸಿಕೊಳ್ಳುತ್ತಾನೆ. ಇವನಿಗೆ ಜಾನ್ ಮ್ಯಾಕ್ ಕಾಟ್ನಿ ಎಂಬ ಇಂಗ್ಲೀಷ್ ರಾಜ ತಾಂತ್ರಿಕ ಏಜೆಂಟ್ ಇದ್ದನು. ೧೮೭೮ರಲ್ಲಿ ಶಿವಷಣ್ಮುಖರಾವ್ ಮರಣ ಹೊಂದಿದ. ಇವನ ತಮ್ಮ ವಿಠಲರಾವ್ ಅಧಿಕಾರವಹಿಸಿಕೊಂಡು ೧೪ ವರ್ಷದಲ್ಲಿ ೧೮೯೨ರಲ್ಲಿ ನಿಧನನಾದ. ೧೮೯೩ರಲ್ಲಿ ರಾಮಚಂದ್ರ ವಿಠಲರಾವ್‌ನ ಮಗ ವೆಂಕಟರಾವ್ ಮರಣ ಹೊಂದಿದ. ಇವನ ಚಿಕ್ಕಪ್ಪ

Scanned with OKEN Scanner

ನಾಯೋಜಿರಾವ್ ಅಧಿಕಾರಕ್ಕೆ ಬಂದಾಗ ಜೆ.ಬಿ. ಪಿರ್ತ್ ಏಜೆಂಟ್‌ನಾಗಿದ್ದನು. ಇವನ ನಂತರ ಯಶವಂತರಾವ್ ಹಿಂದೂರಾವ್ ಘೋರ್ಪಡೆ ಅಧಿಕಾರಕ್ಕೆ ಬಂದನು. ಇವನು ೧೯೨೮ ರಿಂದ ೧೯೪೯ರವರೆಗೆ ಆಳ್ವಿಕೆ ಮಾಡುತ್ತಾನೆ.

ಘೋರ್ಪಡೆ ವಂಶಸ್ಥರು ಆಳ್ವಿಕೆ ನಡೆಸುವಾಗ ಹೈದರಾಲಿ ೧೭೭೫–೭೬ ಮತ್ತು ೧೭೮೯ರಲ್ಲಿ ಗುತ್ತಿಯನ್ನು ವಶಪಡಿಸಿಕೊಂಡು ಸಂಡೂರನ್ನು ತನ್ನ ತಕ್ಕೆಗೆ ಪಡೆಯುತ್ತಾನೆ. ಕ್ರಿ.ಶ. ೧೭೯೫ರಲ್ಲಿ ಟಿಪ್ಪು ಸುಲ್ತಾನ್ ಸಂಡೂರಿಗೆ ಬಂದು ಗೋಪಾಲರಾಯರ ಮಗ ಮುರಾರಿರಾವ್‌ರ ದತ್ತು ಮಗ ಶಿವಾಜಿರಾವ್‌ನನ್ನು ಕೊನೆಗಾಣಿಸಿದನು. ೧೭೯೦ರಲ್ಲಿ ಶಿವರಾವ್ ಸಹೋದರ ವೆಂಕಟರಾವ್ ಟಿಪ್ಪು ವಿರುದ್ಧ ಹೋರಾಡಿದನು. ೧೭೯೨ರಲ್ಲಿ ಇಂಗ್ಲೀಷರಿಗೂ, ಟಿಪ್ಪುವಿಗೂ, ಬ್ರಿಟಿಷರಿಗೂ ಒಪ್ಪಂದ ಏರ್ಪಟ್ಟು ಸಂಡೂರನ್ನು ಬಿಟ್ಟುಕೊಡಲಾಯಿತು. ಟಿಪ್ಪು ಅವನತಿವರೆಗೂ ಸಂಡೂರು ಕಡೆ ಪುನಃ ಮುತ್ತಿಗೆ ಹಾಕಲು ಯತ್ನಿಸಲಿಲ್ಲ. ಯಶವಂತರಾವ್ ಘೋರ್ಪಡೆ ಸಿಂಧಿಯಾ ಯುದ್ಧದಲ್ಲಿ ಭಾಗವಹಿಸಲಿಲ್ಲ. ೧೭೯೬ರಲ್ಲಿ ಸಿದ್ದೋಜಿ ಪತ್ನಿ ಮರಣ ಹೊಂದಿದಳು.

೧೮೦೦ರಲ್ಲಿ ಬ್ರಿಟಿಷರು ಈ ಪ್ರದೇಶವನ್ನು ವಶಪಡಿಸಿಕೊಂಡರು. ೧೮೧೫ರಲ್ಲಿ ಪೇಶ್ವೆ ಸಂಡೂರಿನ ಮೇಲೆ ಆಕ್ರಮಣ ಮಾಡುತ್ತಾನೆ. ೧೮೧೭ರಲ್ಲಿ ಕರ್ನಲ್ ಮನ್ರೋ ಪೇಶ್ವೆಯವರಿಗೂ–ಇಂಗ್ಲೀಷರಿಗೂ ಬೆಸ್ಸಿನ್ ಒಪ್ಪಂದ ಆಗಿ ಸಂಡೂರನ್ನು ಇಂಗ್ಲೀಷರಿಗೆ ಬಿಟ್ಟುಕೊಡಲಾಯಿತು. ೧೮೧೮ರಲ್ಲಿ ಸಂಡೂರನ್ನು ಮರಳಿ ಘೋರ್ಪಡೆಯವರಿಗೆ ಬಿಟ್ಟುಕೊಟ್ಟು ವಾರ್ಷಿಕ ೧೦೦೦ ಪೌಂಡ್ ಹಣ ನೀಡುವಂತೆ ತಿಳಿಸಿತು. ಶಿವರಾವ್ ಸಂಡೂರು ರಾಜ್ಯವನ್ನು ಒಂದು ಸ್ಥಿತಿಗೆ ತರುವಲ್ಲಿ ನಿರತನಾಗಿದ್ದಾಗಲೇ ೧೮೨೬ರಲ್ಲಿ ಬಳ್ಳಾರಿ ಜಿಲ್ಲೆಯ ಕಲೆಕ್ಟರ್ ಎಫ್.ಡಬ್ಲೂ. ರಾಬರ್ಟ್‌ಸನ್ ಸೊಂಡೂರಿನ ಶಿವರಾಮ್ ಘೋರ್ಪಡೆವರಿಗೆ ಜಹಗೀರುದಾರರಾಗಿದ್ದಕ್ಕೆ ಸನದು ನೀಡಲಾಯಿತು. ಹೀಗೆ ಬ್ರಿಟಿಷ ಸರ್ಕಾರ ಇವರಿಗೆ ಮತ್ತೊಂದು ಸನದನ್ನು ಜಾರಿಗೆ ತಂದಿತು.

೧೮೪೦ರ ಸಂಘರ್ಷದಲ್ಲಿ ಶಿವರಾವ್ ಅಳಿಯನಾದ ವೆಂಕಟನನ್ನು ಸೋಲಿಸುತ್ತಾನೆ. ೧೮೪೧ರಲ್ಲಿ ವೆಂಕಟರಾವ್ ಘೋರ್ಪಡೆಗೆ ಬ್ರಿಟಿಷರು ಸನದು ನೀಡಲಾಯಿತು. ೧೮೬೧ರಲ್ಲಿ ಇವನು ಮರಣ ಹೊಂದಿದ. ಶಿವರಾವ್ ಸತ್ತಾಗ ಮಕ್ಕಳಿಲ್ಲದ ಕಾರಣ ಭುಂಜಗರಾವ್‌ನ ಮಗ ವೆಂಕಟರಾವ್‌ನನ್ನು ಉತ್ತರಾಧಿಕಾರಿಯಾಗಿ ಮಾಡಿದ್ದು ಗಮನಾರ್ಹ. ೧೮೬೧ರಲ್ಲಿ ವೆಂಕಟರಾವ್ ಅಧಿಕಾರ ಪಡೆದು ೧೭ ವರ್ಷ ಆಡಳಿತ ನಡೆಸಿದನು. ಸಿದ್ದೋಜಿಗೆ–ದೌಲತ್‌ರಾವ್, ಭುಜಂಗರಾವ್, ಗೋಪಾಲರಾವ್ ಮುರಾರಿರಾವ್ ಎಂಬ ಮಕ್ಕಳಿದ್ದರು. ಭುಜಂಗರಾವ್ ಚಿಕ್ಕಂದಿನಲ್ಲಿಯೇ ಸತ್ತ. ಗೋಪಾಲರಾವ್ ಅಸಮರ್ಥನಾಗಿದ್ದು, ಮುರಾರಿರಾವ್ ರಾಜನಾಗಿದ್ದ. ದೌಲತ್‌ರಾವ್ ಧಾರವಾಡ ಬಳಿ ಇರುವ ಗಜೇಂದ್ರಗಡ ಸಂಸ್ಥಾನದ ಜಹಗೀರದಾರನಾದ(ಸಂಡೂರು

ಸಂಸ್ಥಾನ, ಪು. ೨೮). ೧೮೬೩ರಲ್ಲಿ ಬ್ರಿಟಿಷರು ಷಣ್ಮುಖಿರಾವ್‌ಗೆ ಸೊಂಡೂರನ್ನು ಜಹಗೀರರಾಗಿ ಸನ್ನದು ನೀಡಲಾಯಿತು.

ಶಿವರಾಮ್ ಮಗ ಶಿವಷಣ್ಮುಖಿರಾವ್‌ಗೆ ೧೮೬೩ರಲ್ಲಿ ಬ್ರಿಟಿಷರಿಂದ ಸನದು ಪಡೆದು, ೨೪.೧೧.೧೮೬೩ರಲ್ಲಿ ಗವರ್ನರ್ ಜನರಲ್ ಲಾರ್ಡ್‌ನಾರ್ಥ್ ಬ್ರೂಕ್‌ನಿಂದ ರಾಜ ಎಂಬ ಬಿರುದು ಪಡೆದನು. ೧೮೬೮ ಮೇ ತಿಂಗಳಲ್ಲಿ ಶಿವಷಣ್ಮುಖಿರಾವ್ ತೀರಿದ. ೧೮೭೪ರಲ್ಲಿ ಬ್ರಿಟಿಷ ಸರ್ಕಾರಕ್ಕೂ ಮತ್ತು ಸೊಂಡೂರಿನ ರಾಜರ ನಡುವೆ ಅರಣ್ಯ ಗುತ್ತಿಗೆ ಸಲುವಾಗಿ ಒಪ್ಪಂದ ಏರ್ಪಟ್ಟಿತು. ಇವನ ನಂತರ ವಿಠಲರಾವ್ ಅಧಿಕಾರಕ್ಕೆ ಬಂದ. ೧೪ ವರ್ಷಗಳ ಕಾಲ ಆಡಳಿತ ನಡೆಸಿ ೧೮೯೨ ಮರಣ ಹೊಂದಿದ. ಆಗ ಚಿಕ್ಕ ಬಾಲಕ ವೆಂಕಟರಾವ್‌ನನ್ನು ಅಧಿಕಾರಕ್ಕೆ ತಂದರು. ಇವನು ಉತ್ತಮ ಆಡಳಿತ ನೀಡುವಲ್ಲಿ ವಿಫಲನಾದ. ದಾಯಾದಿಗಳ ಕಲಹ ಆರಂಭವಾಗುತ್ತದೆ. ಕೊನೆಗೆ ಯಶವಂತರಾವ್-ಹಿಂದೂರಾವ್ ಘೋರ್ಪಡೆಯವರು ಅಧಿಕಾರಕ್ಕೆ ಬಂದನು. ಇವನು ರಾಜ್ಯದ ಗಡಿಗಳನ್ನು ವಿಸ್ತರಿಸಿದ. ಷಣ್ಮುಖಿರಾವ್‌ನ ಇಬ್ಬರು ಸಹೋದರರು ರಾಮಚಂದ್ರ ವಿಠಲರಾವ್‌ಗೆ ೧೮೭೯ರಲ್ಲಿ ರಾಜ ಎಂಬ ಸನದನ್ನು ನೀಡಿ ಗೌರವಿಸಿದ. ಮದ್ರಾಸ್ ಅಧಿಪತ್ಯದ ಕಂದಾಯ ಜವಾಬ್ದಾರಿ, ಪೊಲೀಸ್, ರಾಜ್ಯ, ನಾಗರಿಕ ಸೇವೆ, ನ್ಯಾಯ ತೀರ್ಮಾನ, ಕ್ರಿಮಿನಲ್ ನ್ಯಾಯಾಂಗ ಮೊದಲಾದವುಗಳನ್ನು ಅವರ ಆದೇಶದಂತೆ ರಾಜ ಪಾಲಿಸುತ್ತಿದ್ದ. ಕಲೆಕ್ಟರ್‌ನ ಆದೇಶವನ್ನು ಸಂಡೂರಿನ ರಾಜ ಅಥವಾ ಪ್ರತಿನಿಧಿ ಪಾಲಿಸಬೇಕಿತ್ತು. ಇನಾಂ ಆಗಿ ಭೂಮಿಯನ್ನು ದೇಣಿಗೆ ನೀಡಿದ ಬಗ್ಗೆ ದಾಖಲೆಗಳಿವೆ. ಅಯಗಾರರಿಗೆ ವಿಶೇಷವಾಗಿ ಬಡಗಿ, ವಡ್ಡ, ತಳವಾರ ಇತರರಿಗೆ ನರಪತಿ ಎಂಬ ಬಿರುದು ನೀಡಿ ಗೌರವ ಹಣ ಕೊಡುತ್ತಿದ್ದರು.

ಜೂನ್ ೨೦, ೧೯೨೮ರಲ್ಲಿ ಯಶವಂತರಾವ್ ಹಿಂದೂರಾವ್ ಘೋರ್ಪಡೆ ಸಂಡೂರು ಸಂಸ್ಥಾನಕ್ಕೆ ರಾಜನಾದ. ಇವರ ಕಾಲದಲ್ಲಿ ಪ್ರಜಾಮಂಡಳಿ ಎಂಬ ಶಾಸಕಾಂಗ ವಿದ್ದು ಜನಪರವಾದ ಕಾಯ್ದೆ, ಕಾನೂನು ಹಾಗೂ ಶಾಸನಗಳನ್ನು ಜಾರಿಗೆ ತಂದಿದ್ದು ಸ್ಮರಣೀಯ. ಈ ಶಾಸಕಾಂಗವು ಮದ್ರಾಸ್ ಅಧಿಪತ್ಯದ ನೀತಿ ಕಾನೂನುಗಳನ್ನು ಪಾಲಿಸುತ್ತಿತ್ತು.

ಯಶವಂತರಾವ ಘೋರ್ಪಡೆ ೧೯೩೦ ಫೆಬ್ರವರಿ ೫ರಂದು ಪ್ರಜೆಗಳ ಸರ್ವತೋಮುಖ ಅಭಿವೃದ್ಧಿ, ಪ್ರಜಾಕಲ್ಯಾಣಕ್ಕಾಗಿ ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡನು. ಹಾಗೆಯೇ ಆಡಳಿತ ವಿಕೇಂದ್ರೀಕರಣ ಮಾಡಲಾಯಿತಲ್ಲದೆ ೧೯೩೧ ಪ್ರಜಾಮಂಡಳಿಯನ್ನು ಪ್ರಥಮ ಬಾರಿಗೆ ಹುಟ್ಟುಹಾಕಿದರು. ೧೯೪೭ರಲ್ಲಿ ಸ್ವಾತಂತ್ರ್ಯ ಬಂದಾಗ, ಬಳ್ಳಾರಿ ಜಿಲ್ಲಾ ಕಲೆಕ್ಟರ್ ಇ.ಸಿ. ಅಲ್ಲಾರ್ಡೀಸ್ ೧೯೪೮ರಲ್ಲಿ ಸಂಡೂರು ಸಂಸ್ಥಾನವನ್ನು ಭಾರತ ಒಕ್ಕೂಟಕ್ಕೆ ಸೇರಿಸಿಕೊಳ್ಳಲು ಪ್ರಯತ್ನಿಸಿದನು. ೧೯೪೮ರಲ್ಲಿ ಸಂಡೂರು

Scanned with OKEN Scanner

ಸಂಸ್ಥಾನ ತಾಲೂಕಾಗಿ ೧೯೫೦ರಲ್ಲಿ ಕೇಂದ್ರವಾಗಿ ಬಳ್ಳಾರಿ ಜಿಲ್ಲೆಗೆ ಸೇರ್ಪಡೆಯಾಗಿ ಮೈಸೂರು ರಾಜ್ಯದಲ್ಲಿ ವಿಲೀನಗೊಂಡಿತು. ೧೯೫೩ರಲ್ಲಿ ಬಳ್ಳಾರಿ ಪ್ರದೇಶ ಮೈಸೂರು ರಾಜ್ಯಕ್ಕೆ ಸೇರಿತು. ಸಂಡೂರು, ಚೋರನೂರು ಮತ್ತು ತೋರಣಗಲ್ಲು ಹೋಬಳಿಗಳನ್ನಾಗಿ ಮಾಡಿಕೊಂಡಿದ್ದರು.

ಯಶವಂತರಾವ್ ಹಿಂದೂರಾವ್ ಘೋರ್ಪಡೆ ೧೩.೧೧.೧೯೦೮ರಲ್ಲಿ ಜನಿಸಿದರು. ಬೆಂಗಳೂರಿನ ಯುರೋಪಿಯನ್ ಪಬ್ಲಿಕ್ ಸ್ಕೂಲ್‌ನಲ್ಲಿ ಪ್ರಾಥಮಿಕ ಶಿಕ್ಷಣ, ಇಂದೋರ್‌ನ ಹೊಲ್ಕರ್ ಕಾಲೇಜಿನಲ್ಲಿ ಪದವಿ ಶಿಕ್ಷಣ ಮುಗಿಸಿದರು. ಗ್ವಾಲಿಯಾರ್‌ನ ರಾಜ ರಾಜೇಂದ್ರ ಎಂ.ಎನ್. ಶಿತೋಲೆಯವರ ಮಗಳು ಸುಶೀಲಾದೇವಿಯವರನ್ನು ೧೯೨೯ರಲ್ಲಿ ವಿವಾಹವಾದರು. ಇವರು ಬರೋಡ, ಜತ್, ದೇವಾಸ್ ಮೊದಲಾದವರೊಂದಿಗೆ ವೈವಾಹಿಕ ಸಂಬಂಧ ಇತ್ತು. ಇವರ ಆಳ್ವಿಕೆ ಅವಧಿಯಲ್ಲಿ ಕೆಳಮನೆ ಮತ್ತು ಮೇಲ್ಮನೆ-ಗಳೆಂಬ ಪ್ರಜಾಮಂಡಳಿ ಇತ್ತು. ಕೆಳಮನೆ ರಾಜ ಶಾಸಕಾಂಗವಾಗಿದ್ದು ವಂಶ ಪಾರಂಪರ್ಯವಾಗಿ ಸದಸ್ಯರು ನೇಮಕವಾಗುತ್ತಿದ್ದರು. ಮೇಲ್ಮನೆಯಲ್ಲಿ ಚುನಾಯಿತ ಪ್ರತಿನಿಧಿಗಳು ಆಯ್ಕೆಯಾಗುತ್ತಿದ್ದರು. ಪ್ರಜಾಮಂಡಳದಲ್ಲಿ ಜನಪ್ರತಿನಿಧಿಗಳೇ ಪ್ರಮುಖ ಪಾತ್ರವಹಿಸುತ್ತಿದ್ದರು. ೧೯೩೮ರಲ್ಲಿ ಘೋರ್ಪಡೆ ದೊರೆ ಆದೇಶ ಹೊರಡಿಸಿ ದೇವಸ್ಥಾನ ಗಳಲ್ಲಿ ಹರಿಜನರಿಗೆ ಮುಕ್ತ ಪ್ರವೇಶ ಕಲ್ಪಿಸಿದನು. ಸಂಡೂರು ರಾಜ್ಯದಲ್ಲಿ ಅಸಮಾನತೆ ಯನ್ನು ಹೋಗಲಾಡಿಸಲು ಪಣತೊಟ್ಟರು. ಇವರಿಗೆ ಪ್ರೇರಣೆ ಆದವರು ಮಹಾತ್ಮಗಾಂಧಿ. ೧೯೩೪ರಲ್ಲಿ ಗಾಂಧೀಜಿ ಸಂಡೂರಿಗೆ ಭೇಟಿ ನೀಡಿದಾಗ ರಾಜನಿಗೆ ಹರಿಜನ ಸಮಸ್ಯೆಗಳನ್ನು ಗಮನಕ್ಕೆ ತಂದಿದ್ದರು. ಸಂಡೂರು ಸಂಸ್ಥಾನದಲ್ಲಿ ನ್ಯಾಯಾಂಗ ವ್ಯವಸ್ಥೆಯನ್ನು ೧೯೩೮ರಲ್ಲಿ ಪ್ರಾರಂಭಿಸಿದರು. ಸಂಡೂರು ಚೀಫ್ ಕೋರ್ಟ್ ಆ್ಯಕ್ಟ್‌ನಲ್ಲಿ ಸ್ವತಂತ್ರ ನ್ಯಾಯಾಲಯ ಮತ್ತು ಮುಖ್ಯ ನ್ಯಾಯಾಲಯ ಸ್ಥಾಪಿಸಲು ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡರು. ಬಳ್ಳಾರಿ ಜಿಲ್ಲಾ ನ್ಯಾಯಾಧೀಶರನ್ನು ಸಂಡೂರು ಚೀಫ್ ಕೋರ್ಟಿನ ನ್ಯಾಯಾಧೀಶರಾಗಿ ನಿಯುಕ್ತಿಗೊಳಿಸಲಾಗುತ್ತಿತ್ತು.

ಯಶವಂತರಾವ್ ಘೋರ್ಪಡೆ ಅವಧಿಯಲ್ಲಿ ರೈತರಿಗೆ ಕೃಷಿ ಸಾಲ ನೀಡಲು ೧೯೩೬ರಲ್ಲಿ ಸಂಡೂರು ಸಾಲ ಒಪ್ಪಂದ ಕಾಯಿದೆಯನ್ನು ಚಾಲ್ತಿಗೆ ತಂದರು. ಸಂಸ್ಥಾನ ಪ್ರತಿಯೊಬ್ಬ ಪ್ರಜೆ ಜಿ ರೂ.ನಂತೆ ೧/೪ ಭಾಗ ತೆರಿಗೆ ಸಲ್ಲಿಸಬೇಕಿತ್ತು. ಪಂಚಾಯ್ತಿ, ಮುನ್ಸಿಪಾಲಿಟಿ ಅಧಿಕಾರಿಗಳು ತೆರಿಗೆ ಸಂಗ್ರಹ ಮಾಡುತ್ತಿದ್ದರು. ೧೯೪೫ರಲ್ಲಿ ಮಂತ್ರಿಮಂಡಲದ ಕಾಯಿದೆ ಪ್ರಕಾರ ಮಂತ್ರಿಗಳು ಆಡಳಿತ ಹಾಗೂ ಶಾಸಕಾಂಗಕ್ಕೆ ಜವಾಬ್ದಾರಿಯಾಗಿರುತ್ತಿದ್ದರು. ರಾಜನು ಸಂಸ್ಥಾನಿಕರು ಹಾಗೂ ಆಡಳಿತಗಾರರ ಅಹವಾಲು-ಗಳನ್ನು ೧೯೪೬ರ ಮಸೂದೆಯಲ್ಲಿ ಅನುಮೋದಿಸುತ್ತಿದ್ದನು. ತುರ್ತು ಸಂದರ್ಭದಲ್ಲಿ ರಾಜ ಎಲ್ಲರ ಅನುಮತಿ ಪಡೆದು ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದ್ದ.

Scanned with OKEN Scanner

Scanned with OKEN Scanner

ಯಶವಂತರಾವ್‌ರ ೨೧ ವರ್ಷದ ಅಳಿಕೆಯಲ್ಲಿ ಮದ್ರಾಸ್ ಸರ್ಕಾರದೊಂದಿಗೆ ಉತ್ತಮ ಒಡನಾಟ ಇಟ್ಟುಕೊಂಡಿದ್ದರು. ಕನ್ನಡ ಭಾಷೆಗೆ ಒತ್ತು ನೀಡಿದ್ದುಂಟು. ಏಕೆಂದರೆ ಘೋರ್ಪಡೆಗಳು ಮರಾಠಿ ಭಾಷಿಗರು. ಹಾಗಾಗಿ ಸ್ಥಳೀಯರ ಕೆಂಗಣ್ಣಿಗೆ ಗುರಿಯಾಗುವುದನ್ನು ತಪ್ಪಿಸಿಕೊಂಡಿದ್ದರು.

ಮುರಾರಿರಾವ್-ಯಶವಂತರಾವ್ ಘೋರ್ಪಡೆ

ಇವರು ಎಂ.ವೈ. ಘೋರ್ಪಡೆ ಎಂದೇ ಖ್ಯಾತಿ ಪಡೆದಿದ್ದು ಸಂಸ್ಥಾನದ ಕೊನೆಯ ಕೊಂಡಿ ಇವರಾಗಿದ್ದರು. ವಿದ್ಯಾವಂತ, ರಾಜಕಾರಣಿ, ಮಂತ್ರಿ ಆಗಿದ್ದ ಎಂ.ವೈ. ಘೋರ್ಪಡೆ ೧೧೨.೧೯೩೩ರಲ್ಲಿ ಜನಿಸಿದರು. ಸಂಡೂರಿನಲ್ಲಿ ಆರಂಭದ ಶಿಕ್ಷಣ ಪಡೆದು ಬೆಂಗಳೂರಿನಲ್ಲಿ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಎಂ.ಎ. ಪದವಿ ಪಡೆದರು. ನಂತರ ೧೯೫೨ರಲ್ಲಿ ಅರ್ಥಶಾಸ್ತ್ರ ಎಂ.ಎ.ಯನ್ನು ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಪೂರೈಸಿದರು. ಇವರನ್ನು ಬಳ್ಳಾರಿಯ ಸ್ವಾತಂತ್ರ್ಯ ಹೋರಾಟಗಾರ ಟೇಕೂರು ಸುಬ್ರಹ್ಮಣ್ಯ ರಾಜಕೀಯಕ್ಕೆ ಆಹ್ವಾನಿಸಿದರು.

ಪ್ರಾವೃದ್ಧುತ್ವ ವ್ಯವಸ್ಥೆಯಲ್ಲಿ ಘೋರ್ಪಡೆ ಜನಸಾಮಾನ್ಯರಾಗಿಯೇ ಬೆಳೆದರು. ಉನ್ನತ ಶಿಕ್ಷಣ, ಹವ್ಯಾಸಿ ಛಾಯಾಚಿತ್ರದಲ್ಲಿ ಸಮಾಜ ಸೇವೆ ಇವರಲ್ಲಿ ಅಂತರ್ಗತವಾಯಿತು. ಸೊಂಡೂರು ಪುರಸಭೆಗೆ ಅಧ್ಯಕ್ಷರಾಗುವ ಮೂಲಕ ರಾಜಕೀಯ ಆರಂಭಿಸಿದರು. ೧೯೫೭ರಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದಾಗ ಘೋರ್ಪಡೆಗೆ ಕಾಂಗ್ರೆಸ್ ಪಕ್ಷದ ಟಿಕೇಟ್ ಸಿಗಲಿಲ್ಲ. ಹರಗಿನಡೋಣಿ ರಾಯನಗೌಡರು ಕಾಂಗ್ರೆಸ್‌ನಿಂದ ನಿಂತು ಗೆದ್ದರು. ಇವರ ಅಕಾಲಿಕ ಮರಣದ ತರುವಾಯ ೧೯೫೯ರಲ್ಲಿ ಉಪಚುನಾವಣೆಯಲ್ಲಿ ಎಂ.ವೈ. ಘೋರ್ಪಡೆ ಕಾಂಗ್ರೆಸ್‌ನಿಂದ ಗೆದ್ದು ಶಾಸಕರಾದರು. ೧೯೫೯ರಿಂದ ೧೯೭೨, ೧೯೭೭ ಶಾಸಕರು, ಮಂತ್ರಿಗಳು ಆಗಿದ್ದರು. ೧೯೮೬ರಲ್ಲಿ ರಾಯಚೂರು ಲೋಕಸಭೆಯ ಸದಸ್ಯರಾಗಿ ಆಯ್ಕೆ ಆಗಿದ್ದರು. ೧೯೮೯ರಲ್ಲಿ ಶಾಸಕರಾಗಿ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರಾಗಿದ್ದರು.

ಘೋರ್ಪಡೆಗೆ ಪಂಡಿತ ಜವಹರಲಾಲ್ ನೆಹರೂ, ಎಂ.ಎಸ್. ಸ್ವಾಮಿನಾಥನ್, ಬಿ.ಡಿ. ಜತ್ತಿ, ಟೇಕೂರು ಸುಬ್ರಹ್ಮಣ್ಯಂ, ಎಸ್. ನಿಜಲಿಂಗಪ್ಪ, ದೇವರಾಜ್ ಅರಸು ಅವರುಗಳೊಂದಿಗೆ ನಿಕಟ ಸಂಬಂಧ ಹೊಂದಿದ್ದರು. ೧೯೫೯ ರಿಂದ ೨೦೦೪ರವರೆಗೆ ರಾಜಕೀಯದಲ್ಲಿದ್ದು, ಗಣಿ, ಕಾರ್ಖಾನೆ, ಶಿಕ್ಷಣ ಸಂಸ್ಥೆ ಮೊದಲಾದವುಗಳನ್ನು ತೆರೆದು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಟ್ಟರು.

೧೯೭೫ರಲ್ಲಿ ಸಂಡೂರು ಸಮೀಪದ ನಂದಿಹಳ್ಳಿಯಲ್ಲಿ ಸ್ನಾತಕೋತ್ತರ ಕೇಂದ್ರವನ್ನು ತೆರೆದರು. ೧೯೯೬-೯೭ರಲ್ಲಿ ಕುಮಾರಸ್ವಾಮಿ ದರ್ಶನಕ್ಕೆ ಹೆಣ್ಣುಮಕ್ಕಳ ಪ್ರವೇಶ ನಿಷೇಧವನ್ನು ತೆಗೆದುಹಾಕಲು ಪ್ರಯತ್ನಿಸಿದರು. ಎಂ.ವೈ. ಘೋರ್ಪಡೆ ಅನೇಕ ಗ್ರಂಥಗಳನ್ನು

Scanned with OKEN Scanner

ರಚಿಸಿದ್ದಾರೆ. ಅದರಲ್ಲಿ ಪ್ರಮುಖವಾದುದು (ಗ್ರ್ಯಾಂಡ್ ರೆಸಿಸ್ಟೆನ್ಸ್‌ದ) ಘೋರ್ಪಡೆ ರೆಸಿಸ್ಟೆನ್ಸ್ ಮುರಾರಿರಾವ್ ಘೋರ್ಪಡೆ ಅಂಡ್ ೧೮ ಸೆಂಚುರಿ ಡೆಕ್ಕನ್ (ರೆಪ್ಪಿ. ಬೆಂಗಳೂರು, ೧೯೯೨) ಎಂಬ ಗ್ರಂಥವನ್ನು ಬರೆದಿದ್ದಾರೆ. ವನ್ಯಜೀವಿ ಛಾಯಾಗ್ರಾಹಕರಾಗಿ ಖ್ಯಾತಿ ಪಡೆದಿದ್ದರು. ೨೦೦೬ರಲ್ಲಿ ಮೈಸೂರು ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿದೆ.

ಸ್ವಾತಂತ್ರ್ಯ ಭಾರತದಲ್ಲಿ ಸಂಡೂರು ಸೇರ್ಪಡೆಯಾಗಿ (೧೯೫೦) ಒಂದು ತಾಲೂಕು ಕೇಂದ್ರವಾಯಿತು. ೧೯೫೩ ನವೆಂಬರ್ ೨೮ ಸೊಂಡೂರು(ಸಂಸ್ಥಾನಿಕರು) ಸರ್ದಾರ ತಿರುಮಲರಾವ್ ಘೋರ್ಪಡೆ ಮಂಡಳದವರು ರಾಜಕೀಯವಾಗಿ ಶಾಸಕರಾಗಿ, ಸಚಿವರಾಗಿ ಕೆಲಸ ಮಾಡಿದ್ದು, ಗಣಿ ಮಾಲಿಕರಾಗಿ ಶ್ರೀಮಂತಿಕೆಯನ್ನು ಊಳಿಸಿಕೊಂಡು ಬಂದರು. ಇಂಥ ಘೋರ್ಪಡೆಗಳ ವಿಪುಲ ಭೂಮಿ ಇಲ್ಲದ ಬಡರೈತರು ಭೂಹೋರಾಟ ಮಾಡಿದ್ದು ಗಮನಾರ್ಹ. ಸಂಡೂರು ಘೋರ್ಪಡೆಗಳು ನಿರ್ಮಿಸಿದ ಸ್ಮಾರಕಗಳಲ್ಲಿ ಕೃಷ್ಣನಗರ ಕೋಟೆ, ಶಿವಪುರ ಅರಮನೆ ಮೊದಲಾದವುಗಳನ್ನು ಇಂದಿಗೂ ನೋಡಬಹುದಾಗಿದೆ. ಘೋರ್ಪಡೆಗಳು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಈ ಪ್ರದೇಶದಲ್ಲಿ ಪ್ರಭಾವ ಬೀರಿದ ಬಗ್ಗೆ ಜನಪದ ಸಾಹಿತ್ಯವು ಸಾಕ್ಷೀಕರಿಸುತ್ತದೆ. ೧೯೬೬ ನವೆಂಬರ್ ೨೮ ಸೊಂಡೂರಿನ ರಾಜ ಕುಮಾರಸ್ವಾಮಿ ದೇವಾಲಯವನ್ನು ಭಕ್ತಾಧಿಗಳಿಗೆ ಮುಕ್ತಪ್ರವೇಶಕ್ಕೆ ಅವಕಾಶ ಕಲ್ಪಿಸಿದನು. ಹೀಗೆ ಸೊಂಡೂರು ಪ್ರದೇಶದಲ್ಲಿ ಪಾಳೆಯಗಾರರು ಮತ್ತು ಘೋರ್ಪಡೆಗಳ ಆಳ್ವಿಕೆ ಬ್ರಿಟಿಷರಿಗಿಂತ ಭಿನ್ನವಾಗಿತ್ತು. ಜನಸಾಮಾನ್ಯರ ಹಿತಾಸಕ್ತಿಯನ್ನು ಪ್ರಜಾಪ್ರಭುತ್ವದಲ್ಲಿ ಗುರುತಿಸಿದ್ದು ಅವಕಾಶ ವಂಚಿತರಿಗೆ ರಾಜಕೀಯ ಪ್ರಾತಿನಿಧ್ಯ ಇಂದು ಲಭಿಸಿದ್ದು ನ್ಯಾಯೋಚಿತವಾಗಿದೆ.

ಸಂಡೂರು ಘೋರ್ಪಡೆ ವಂಶಸ್ಥರ ಹೆಸರಿನಲ್ಲಿ ಮೂಲಸ್ಥಳನಾಮಗಳ ಮರುನಾಮಕರಣ

ಕಣಬಿಹಳ್ಳಿ	–	ಯಶವಂತನಗರ
ಶಾಹಾಪುರ	–	ದೌಲತಪುರ
ಎತ್ತಿನಹಟ್ಟಿ	–	ತಾರಾನಗರ
ಚಿಕ್ಕಸಂಡೂರು	–	ಲಕ್ಷ್ಮೀಪುರ
ನವಲಹಟ್ಟಿ	–	ವಿಠಲ್‌ಪುರ
ನರಸಾಪುರ	–	ನರಸಿಂಗಾಪುರ
ಮುದುಕಲಪಂಟಿ	–	ರಣಜಿತ್‌ಪುರ
ಹೊಸಹಳ್ಳಿ	–	ಭುಜಂಗನಗರ

Scanned with OKEN Scanner

ಸೊಂಡೂರು ಘೋರ್ಪಡೆ ವಂಶಾವಳಿ (೧೭೧೫ ರಿಂದ ೧೯೪೭)

ಬಹಿರ್ಜಿ ಹಿಂದೂರಾವ್ (ಗುತ್ತಿಯ ಸ್ಥಾಪಕ)

ಮುರಾರಿರಾವ್	ಸಿದ್ದೋಜಿರಾವ್
(ಯುದ್ಧದಲ್ಲಿ ಅಕಾಲ ಮರಣ ಹೊಂದಿದ)	(ಸಂಡೂರು ಸಂಸ್ಥಾನದ ಸ್ಥಾಪಕ)
ಗೋಪಾಲರಾವ್	ಮುರಾರಿ ರಾವ್ (ಗುತ್ತಿ ಮುಖ್ಯಸ್ಥ)
ದೌಲತರಾವ್	ಶಿವರಾವ್
ಭುಜಂಗರಾವ್	ಸಿದ್ದೋಜಿರಾವ್
	ಎರಡನೇ ಶಿವರಾವ್
	ವೆಂಕಟರಾಯ
	ಶಿವಷಣ್ಮುಖರಾಯ
	ವಿಠಲರಾವ್(ಶಿವಷಣ್ಮುಖರಾವ್‌ನ ತಮ್ಮ)
	ವೆಂಕಟರಾವ್
	ಯಶವಂತರಾವ್ ಹಿಂದೂರಾವ್ ಘೋರ್ಪಡೆ
	ಮುರಾರಿರಾವ್ ಯಶವಂತರಾವ್ ಘೋರ್ಪಡೆ

ಟಿಪ್ಪಣಿಗಳು

೧. ಶ್ಯಾಮಲ ಸಿ.ಆರ್. ಪೂರ್ವ ಕರ್ನಾಟಕದ ಪಾಳೆಯಗಾರರು, ಪು. ೬೩-೬೬

೨. ವಿರೂಪಾಕ್ಷಿ ಪೂಜಾರಹಳ್ಳಿ, ಬಳ್ಳಾರಿ ಜಿಲ್ಲೆಯ ಪಾಳೆಯಗಾರರು, ಪು. ೮೯-೯೬

ಅಭ್ಯಾಸ ಮಾಡಿದ ಗ್ರಂಥಗಳು

ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., ೨೦೦೨, ಇತಿಹಾಸ ದರ್ಶನ, ಸಂ. ೧೭, ಕರ್ನಾಟಕ ಇತಿಹಾಸ ಅಕಾಡೆಮಿ (ರಿ.), ಬೆಂಗಳೂರು.

ಎಡ್ಗರ್ ಥರ್ಸ್ಟನ್, ೧೯೧೩ (೨೦೦೫), ದಿ ಮದ್ರಾಸ್ ಪ್ರೆಸಿಡೆನ್ಸಿ ವಿತ್ ಮೈಸೂರು, ಕೂಗ್ ಅಂಡ್ ದಿ ಆಸೋಷಿಯೇಟೆಡ್ ಸ್ಟೇಟ್ಸ್, ಏಷಿಯನ್ ಎಜ್ಯುಕೇಷನಲ್ ಸರ್ವಿಸಸ್, ಚೆನ್ನೈ.

ಘೋರ್ಪಡೆ ಎಂ.ವೈ. (ಅನು.), ೨೦೧೧, ಭಾರತೀಯ ಕಾಸರಗೋಡು, ವಸಾಹತದ ಒಂದು ಸೀಮಾರೇಖೆ, ಅಭಿನವ, ಬೆಂಗಳೂರು.

Scanned with OKEN Scanner

ಚಾರ್ಲ್ಸ್ ಫಿಲಿಪ್ ಬ್ರೌನ್. ೧೯೮೮. ದಿ ವಾರ್ಸ್ ಆಫ್ ದಿ ರಾಜಸ್ ಬಿಯಿಂಗ್ ದ ಹಿಸ್ಟರಿ ಆಫ್ ಅನಂತಪುರಂ(೧೬೫೦–೧೮೧೦). ಏಷಿಯನ್ ಎಜ್ಯುಕೇಷನಲ್ ಸರ್ವಿಸಸ್. ನ್ಯೂಡೆಲ್ಲಿ.

ಪಿನ್ನಿನಕೊಟ್ರಪ್ಪ, ಶಶಿಕಾಂತ, ೨೦೨೧. ಕರ್ನಾಟಕ ಸಾಂಸ್ಕೃತಿಕ ಚರಿತ್ರೆಗೆ ಬಳ್ಳಾರಿ ಜಿಲ್ಲೆಯ ಪಾಳೆಯಗಾರರ ಕೊಡುಗೆ. ಗಾಯತ್ರಿ ಪ್ರಕಾಶನ, ಬಳ್ಳಾರಿ.

ಫಾಕಿಯ ಫಾನುಂ ಅನ್ಸಾರಿ (ಸಂ.), ೧೯೯೮, ಫ್ಯೂಡಟರಿ ಫ್ಯಾಮಿಲಿಸ್ ಆಫ್ ಮಿಡಿವಲ್ ಕರ್ನಾಟಕ–ಎ ಸ್ಟಡಿ. ಶರಹರಿ ಪ್ರಕಾಶನ, ಧಾರವಾಡ.

ಭೋಜ್ಯನಾಯ್ಕ ಎಲ್.ಎಚ್., ೨೦೧೫, ಸಂಡೂರು ಸಂಸ್ಥಾನಿಕರು ಚಾರಿತ್ರಿಕ ಅಧ್ಯಯನ, ಪ್ರಭುದೇವ ಜನಕಲ್ಯಾಣ ಸಂಸ್ಥೆ, ಸಂಡೂರು.

ನಂದ್ಯವ್ವ ಕೆ.ವಿ., ೧೯೮೫, ಸೊಂಡೂರು ತಾಲೂಕು ದರ್ಶನ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ನಾಗಭೂಷಣ ಎಸ್.ಎಂ., ೧೯೯೫, ಸೊಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ, ಇತಿಹಾಸ ದರ್ಶನ, ಸಂ.೧೦, ಕ.ಇ.ಅ. ಬೆಂಗಳೂರು, ಪು. ೧೭೬–೧೮೨.

ನಾಗಯ್ಯ ಜೆ.ಎಂ., ೨೦೦೨, ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಲೋಹಿಯಾ ಪ್ರಕಾಶನ, ಬಳ್ಳಾರಿ.

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೪, ಬಳ್ಳಾರಿ ಜಿಲ್ಲೆಯ ಪಾಳೆಯಗಾರರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೬, ಚಿನ್ನಹಗರಿ ಸಿರಿ, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ.

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೯, ವಸಾಹತುಕಾಲೀನ ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ವಿರೂಪಾಕ್ಷಿ ಪೂಜಾರಹಳ್ಳಿ, ೨೦೧೪, ಏಕೀಕರಣ ಮತ್ತು ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಯೋಗೀಶ್ವರಪ್ಪ ಡಿ.ಎನ್., ೨೦೨೦, ಪ್ರಾದೇಶಿಕತೆ ಕರ್ನಾಟಕದ ಪಾಳೆಯಗಾರರು, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

ಪಂಟರ್ ಡಬ್ಲ್ಯೂ.ಡಬ್ಲ್ಯೂ. ೧೮೮೭, ದಿ ಇಂಪಿರಿಯಲ್ ಗ್ಯಾಸೆಟಿಯರ್ ಆಫ್ ಇಂಡಿಯಾ, ೨ನೇ ಮುದ್ರಣ, ಟ್ರುಬ್ನರ್, ಲಂಡನ್.

ರವಿಕುಮಾರ್ ಎನ್.ಎಂ., ವೃಷಭೇಂದ್ರಚಾರ್, ೧೯೯೮, ಮುನ್ನಡೆಯ ಕೂಡ್ಲಿಗಿ, ಓಮಂತ ಪ್ರಕಾಶನ, ಯು.ಬಿ. ಅಯ್ಯನಹಳ್ಳಿ.

Scanned with OKEN Scanner

ಸಂದರ್ಭ ಮತ್ತು ಕ್ಷೇತ್ರಕಾರ್ಯ

ಪಂಚೂರು, ಅಂಕಮನಾಳ, ತಾರಾನಗರ, ಕಮತೂರು, ಯಶವಂತನಗರ, ಸುಶೀಲಾ ನಗರ, ಸ್ವಾಮಿಹಳ್ಳಿ, ಬಾವಿಹಳ್ಳಿ, ಗಂಡಿ ನರಸಿಂಹಸ್ವಾಮಿ ಕ್ಷೇತ್ರ, ಕುಮಾರಸ್ವಾಮಿ ಕ್ಷೇತ್ರ, ಬಂಡ್ರಿ, ಚೋರನೂರು, ಬೊಮ್ಮಘಟ್ಟ, ವಡ್ಡು-ದರೋಜಿ, ಕುಡುತಿನಿ ಇತ್ಯಾದಿ.

ಓಬಯ್ಯ, ಗಂಡಿಮಾರಪ್ಪ, ವಿಶ್ವಮೂರ್ತಿ ಚೋರನೂರು ಪಾಪಣ್ಣ ಬಂಡ್ರಿ, ರಮೇಶ ಗೂಡಾಳು ತಾರಾನಗರ, ಗಿರಿಜಾ ಬೋರಯ್ಯ ಮೊದಲಾದವರಿಗೆ ಕೃತಜ್ಞತೆಗಳು.

Scanned with OKEN Scanner

ISSN 2278-5043

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚರಿತ್ರೆ ಅಧ್ಯಯನ

ಸಂಪುಟ-೧೩ ಸಂಚಿಕೆ- ೨ ಜನವರಿ-ಜೂನ್ ೨೦೨೧



Scanned with OKEN Scanner

ಚರಿತ್ರೆ ವಿಭಾಗದ ಪ್ರಕಟಣೆ

ಚರಿತ್ರೆ ಅಧ್ಯಯನ

ಸಂಪುಟ ೧೩, ಸಂಚಿಕೆ ೨
ಜನವರಿ–ಜೂನ್, ೨೦೨೧

ಸಂಪಾದಕ
ಡಾ. ವಿರೂಪಾಕ್ಷಿ ಪೂಜಾರಹಳ್ಳಿ



ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

Scanned with OKEN Scanner

Publication of Dept., of History

CHARITRE ADHYAYANA

Bi-Annual Vol-13, Issue-2, January-June, 2021

Edited by
Dr. Virupakshi Poojarahalli
Professor, Department of History
Kannada University, Hampi
Vidyaranya 583 276

Published by
Dr. Shailaja I. Hiremath
Director, Prasaranga
Kannada University, Hampi
Vidyaranya 583 276

Pages: viii + ೧೬೬

www.kannadauniversity.org

First Impression: 2023

ISSN 2278-5043

ಚರಿತ್ರೆ ಅಧ್ಯಯನ, ಅರ್ಧವಾರ್ಷಿಕ ಪತ್ರಿಕೆ

ಸಂಪುಟ-೧೩, ಸಂಚಿಕೆ-೨, ಜನವರಿ-ಜೂನ್, ೨೦೨೧

© ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೨೨

ಪ್ರಸ್ತುತ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಜವಾಬ್ದಾರರಾಗಿರುತ್ತಾರೆ.

ಪ್ರಧಾನ ಸಂಪಾದಕರು: ಡಾ. ಡಿ.ವಿ. ಪರಮಶಿವಮೂರ್ತಿ

ಸಂಪಾದಕರು: ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಸಂಪಾದಕ ಮಂಡಳಿ

ಡಾ. ವಿಜಯ್ ಪೂಣಚ್ಚ ತಂಬಂಡ
ಡಾ. ಕೆ. ಮೋಹನಕೃಷ್ಣ ರೈ, ಡಾ. ಎನ್. ಚಿನ್ನಸ್ವಾಮಿ ಸೋಸಲೆ

ಬಿಡಿ ಪ್ರತಿ: ರೂ. ೧೦೦/- ವಾರ್ಷಿಕ ಚಂದಾ: ವ್ಯಕ್ತಿಗಳಿಗೆ ರೂ. ೧೫೦/-
ಸಂಸ್ಥೆಗಳಿಗೆ ರೂ. ೨೦೦/-

ಅಕ್ಷರ ಸಂಯೋಜನೆ
ಅಮರೇಶ್ವರ ಕಂಪ್ಯೂಟರ್ಸ್, ಕಮಲಾಪುರ

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ಮೈಸೂರು ಬ್ಯಾಂಕ್ ವೃತ್ತ, ನಂ. ೧, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯, ದೂ.: ೦೮೦-೨೨೩೭೨೩೮೮

ಮುದ್ರಣ
ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

Scanned with OKEN Scanner

ಪರಿವಿಡಿ

ಸಂಪಾದಕರ ಮಾತು / iii

೧. ವ್ಯಾಪಾರಿ ಬಂಡವಾಳ, ಕೈಗಾರಿಕಾ ಬಂಡವಾಳ ಮತ್ತು ನಗರ ಕಾರ್ಮಿಕರು : ಕೆಲವು ಟಿಪ್ಪಣಿಗಳು / ೧
ಡಾ. ಕೆ. ಮೋಹನ್‌ಕೃಷ್ಣ ರೈ

೨. ಜೋಗಿ ಸಂಪ್ರದಾಯ : ಚರಿತ್ರೆ ಮತ್ತು ಜಾನಪದ / ೧೨
ಡಾ. ವಿರೂಪಾಕ್ಷಿ ಪೂಜಾರಹಳ್ಳಿ

೩. ಕನ್ನಡ ನಾಡಿಗೆ ವಿಜಯನಗರ ಸಾಮ್ರಾಜ್ಯದ ಕೊಡುಗೆ : ವಸ್ತುನಿಷ್ಠ ನೋಟ / ೩೭
ಡಾ. ಎನ್. ಚಿನ್ನಸ್ವಾಮಿ ಸೋಸಲೆ

೪. ವಸಾಹತುಶಾಹಿ ಆಳ್ವಿಕೆಯಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಬಂದರುಗಳು / ೪೯
ಡಾ. ಮಾಲತಿ ಕೆ. ಮೂರ್ತಿ

೫. ಬೌದ್ಧಧರ್ಮ ಮತ್ತು ಜೈನಧರ್ಮಕ್ಕೆ ಆಡಳಿತಗಾರ್ತಿಯರ ಕೊಡುಗೆಗಳು / ೫೯
ಡಾ. ತಾರಾ ಬಿ.ಎನ್.

೬ ಕೊಪ್ಪಳ ಜಿಲ್ಲೆಯ ಬೇಟೆ ವೀರಗಲ್ಲುಗಳು / ೭೦
ಡಾ. ಗೀತಾ ಪಾಟೀಲ

೭ ಹೈದರ್ ಮತ್ತು ಟಿಪ್ಪು ಕಾಲದ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆ : ಚಾರಿತ್ರಿಕ ನೋಟ / ೮೪
ಡಾ. ಕುಮಾರ ಎನ್.

೮. ಪೆರಿಯಾರ್ ಚಿಂತನೆಯಲ್ಲಿ ತಳಸಮುದಾಯಗಳು / ೯೫
ಮಹೇಶ ಡಿ.ಪಿ.

Scanned with OKEN Scanner

೨

ಜೋಗಿ ಸಂಪ್ರದಾಯ : ಚರಿತ್ರೆ ಮತ್ತು ಜಾನಪದ

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಜೋಗಿ ಹೆಸರಿನಲ್ಲಿರುವ ಸಮುದಾಯ, ಸ್ಥಳನಾಮ, ಸಂಪ್ರದಾಯ, ಪರಂಪರೆ ಜೀವನ ವಿಧಾನ-ವೈವಿಧ್ಯತೆ ಕುರಿತು ಭೈರವ-ನಾಥ ಸಂಪ್ರದಾಯಕ್ಕೆ ಹೋಲಿಸಿ ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.

ನಾವು ವಾಸಿಸುವ ಪರಿಸರದಲ್ಲಿ ನಮಗೆ ಅರಿವಿಲ್ಲದಂತೆ ಅನೇಕ ಘಟನೆಗಳು ಸಂಭವಿಸುತ್ತವೆ. ಅವುಗಳಿಗೆ ನಿಸರ್ಗ ಹಾಗೂ ಮಾನವ ನಿರ್ಮಿತ ಪ್ರಪಂಚದ ಕುರುಹುಗಳು ಕಾರಣವಾಗಿರುವುದುಂಟು. ಅಗೋಚರ ಸಂಗತಿ, ವಿಚಿತ್ರ ಘಟನೆ, ಸಹಜ ಜೀವನ ಕ್ರಮದಲ್ಲಿ ವೈವಿಧ್ಯಮಯವಾದ ಲಕ್ಷಣಗಳು ಕಂಡುಬರುತ್ತವೆ. ಇವು ಮಾನವ ಪ್ರಪಂಚಕ್ಕೆ ತೀರಾ ಹತ್ತಿರವಾದವು. ಸಮಾಜದಲ್ಲಿ ಪ್ರಕೃತಿ ಮತ್ತು ಮಾನವ ನಿರ್ಮಿತ ಸ್ವರೂಪವು ಭಿನ್ನವಾದುದು. ಕಾಡು ಮತ್ತು ನಾಡಿನ ನಡುವೆ ಪರಸ್ಪರ ಕೊಟ್ಟುಕೊಳ್ಳುವಿಕೆ ವಿಧಾನವಿದೆ. ನದಿ, ಸಮುದ್ರ, ಕೆರೆ, ಕಾಲುವೆ, ಬಾವಿ, ಚಿಲುಮೆ, ಕೊಳ, ಕಟ್ಟೆ ಮೊದಲಾದವು ಜಲಾಶ್ರಯ ಜೀವನ ವಿಧಾನದ ಸಂಕೇತಗಳಾಗಿವೆ. ಬೆಟ್ಟ, ಗುಡ್ಡ, ಪರ್ವತ, ಗವಿ, ಗುಂಡಾರ, ಕಲ್ಲಾಸರೆ, ಕೋಟೆ, ಬುರುಜು; ಬತೇರಿಗಳು ಮಾನವನ ರಕ್ಷಣ ಮತ್ತು ಆಶ್ರಯ ತಾಣಗಳಾಗಿದ್ದವು. ಆಹಾರ ಸಂಗ್ರಹದಲ್ಲಿ ಮರ, ಗಿಡ, ಬಳ್ಳಿ, ಹೂವು, ಎಲೆ, ಸೊಪ್ಪು, ಕಾಯಿ, ಹಣ್ಣು, ಬೀಜ, ಕಾಯಿಗಳು ಆರಂಭದ ಬದುಕಿನ ಅನಿವಾರ್ಯತೆಯನ್ನು ನಿಭಾಯಿಸಿದ್ದವು. ಇವುಗಳಲ್ಲದೆ ಬಿಲ್ಲು, ಬಾಣಗಳ ಮೂಲಕ ಮಾನವ ಕಾಡುಪ್ರಾಣಿಗಳನ್ನು ಬೇಟೆ ಆಡಿ ಆಹಾರ ಸೇವಿಸುತ್ತಿದ್ದ. ಅನಂತರ ಅದನ್ನು ಸುಟ್ಟು ತಿನ್ನುವ ಕಲೆಯನ್ನು ಕಲಿತುಕೊಂಡ. ಬೇಟೆ ಪ್ರಾಣಿಗಳಲ್ಲಿಯು ಸಾಧು ಮತ್ತು ಉಗ್ರಪ್ರಾಣಿಗಳಿದ್ದವು. ಮಾನವ ಕೆಲವು ಪ್ರಾಣಿಗಳೊಂದಿಗೆ ಸ್ನೇಹ ಬೆಳೆಸಿ ತನ್ನ ವ್ಯವಸಾಯಕ್ಕೆ ಬಳಸಿಕೊಂಡ. ಎತ್ತು, ಎಮ್ಮೆ, ಹಸು, ಕತ್ತೆ, ಕುದುರೆ ಇತ್ಯಾದಿ. ಹೀಗೆ ಪ್ರಕೃತಿ ಮಡಿಲಲ್ಲಿ ವಲಸೆ ಜೀವನ ನಡೆಸಿದ ಮಾನವ ಸಾವಿರಾರು ವರ್ಷಗಳ ನಂತರ ಒಂದೆಡೆ ನೆಲೆನಿಂತು ಪೋಡು, ಹಟ್ಟಿ, ಹಳ್ಳಿಗಳನ್ನು ಕಟ್ಟಿಕೊಂಡ.

Scanned with OKEN Scanner

ಆ ಮೂಲಕ ತನ್ನದೇ ಆದ ಮನೆ, ಕುಟುಂಬ ನಿರ್ಮಿಸಿಕೊಂಡ. ಕ್ರಮೇಣ ಹಳ್ಳಿ, ಪಟ್ಟಣ, ನಗರಗಳಾಗಿ ಪ್ರಕೃತಿಯೊಂದಿಗೆ ಮಾನವ ಅಭೂತಪೂರ್ವ ಸಾಧನೆ ಮಾಡಿದ. ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಕಲೆ–ಸಾಹಿತ್ಯ, ಶಿಲ್ಪಕಲೆ ಹೀಗೆ ಸರ್ವಕ್ಷೇತ್ರಗಳಲ್ಲಿ ಮಾನವ ತನ್ನ ವಾಸದ ಪರಿಸರದೊಂದಿಗೆ ಚರಿತ್ರೆ, ಸಂಸ್ಕೃತಿ ಮತ್ತು ನಾಗರಿಕತೆಯನ್ನು ಬಳಸಿಕೊಂಡು ಬಂದುದು ರೋಚಕವಾದುದು.

ಮಾನವ ನಿರ್ಮಿತ ಪ್ರಪಂಚದಲ್ಲಿ ಎಲ್ಲವೂ ಕೃತಕವಲ್ಲ ಮತ್ತು ಎಲ್ಲವೂ ಶಾಶ್ವತವಾದುವುವಲ್ಲ. ರಾಜಪ್ರಭುತ್ವ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಈ ಮೇಲಿನ ಪ್ರಗತಿ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದ ಒಂದು ಉದಾಹರಣೆ ಮಾತ್ರ. ರಾಜ ಪ್ರಭುತ್ವದಲ್ಲಿ ಅಧಿಕಾರ ಕೇಂದ್ರಿಕೃತವಾಗಿ ಅಸಮಾನತೆ, ಅನಿಷ್ಟಪದ್ಧತಿ, ಶೋಷಣೆ ಕೂಪ ಮಂಡೂಕತನ ಇತ್ತು. ಪ್ರಭುತ್ವಕ್ಕೆ ಒಪ್ಪುವಂತೆ ರಸ್ತೆ, ಬೀದಿ, ನೀರಿನಕೊಳ, ಬಾವಿ, ಕೆರೆ, ಕಾಲುವೆ, ಅರವಟ್ಟಿಗೆ ಕಟ್ಟೆಗಳನ್ನು ನಿರ್ಮಿಸಿಕೊಂಡರು. ಆರಾಧನೆಗೆ ದೇವರಗುಡಿ, ದೇವಾಲಯ, ಮಂದಿರಗಳನ್ನು, ರಕ್ಷಣೆಗೆ ಕೋಟೆ, ಅರಮನೆ, ಖಜಾನೆ, ಬತೇರಿ, ನೆಲಸುತಾಣಗಳನ್ನು ರೂಪಿಸಿಕೊಂಡರು. ಗವಿ, ಗುಂಡಾರಗಳಿಗೆ ವಿಮುಖರಾಗಿ ಗುಡಿಸಲುಗಳನ್ನು ನಿರ್ಮಿಸಿಕೊಂಡು ಹಟ್ಟಿ, ಹಳ್ಳಿಗಳನ್ನು ಕಟ್ಟಿದ್ದು ಸ್ಪಷ್ಟ. ಹೊಸ ಗ್ರಾಮಗಳಿಗೆ ನಾಂದಿಹಾಡಿದ್ದಲ್ಲದೆ, ಹಳೆಯ ಗ್ರಾಮಗಳಿಗೆ ಮರುನಾಮಕರಣ ಮಾಡಿದ್ದು ಸ್ಮರಣೀಯ. ರಾಜ, ರಾಣಿ, ಯುವರಾಜನ, ಹೆಸರಿನಲ್ಲಿ ವಾಸಿಸುವ ನೆಲೆಗಳಿಗೆ ಹೆಸರನ್ನು (ನಾಮಕರಣ) ಇಟ್ಟರು. ಪ್ರತಿಯೊಂದು ಗ್ರಾಮದ ಹಿಂದೆ ಒಂದು ಇತಿಹಾಸದ ಘಟನೆ ಇರುವುದು ಸ್ವಾಗತಾರ್ಹ. ಗ್ರಾಮ ಅಥವಾ ಊರು ಮಾನವನ ವಸತಿಯ ಮೂಲ ನೆಲೆ. ಇಂಥ ನೆಲೆಗಳ ಹಿಂದೆ ಐತಿಹಾಸಿಕ, ಧಾರ್ಮಿಕ ಮತ್ತು ಸಾಮಾಜಿಕವಾದ ಹಿನ್ನೆಲೆ ಇರುತ್ತದೆ. ಬರಗಾಲ, ಕ್ಷಾಮ ಬಂದಾಗ ಊರನ್ನು ತೊರೆಯುವುದುಂಟು. ಇತ್ತೀಚಿನ ಎರಡು–ಮೂರು ಶತಮಾನಗಳಲ್ಲಿ ಮಾರಕ ರೋಗಗಳು ಬಾಧಿಸಿ–ಉಲ್ಬಣಿಸಿದಾಗ ವಾಸದ ನೆಲೆಗಳನ್ನು ಬದಲಾಯಿಸಿದ್ದು ಸಂದರ್ಭೋಚಿತವಾಗಿತ್ತು. ಶ್ರೀಮಂತರು ಮತ್ತು ಬಡವರು ತಮ್ಮ ವಾಸದ ನೆಲೆಗಳಿಗೆ ತಕ್ಕಂತೆ ಹೆಸರುಗಳನ್ನು ಇಟ್ಟುಕೊಳ್ಳುತ್ತಿದ್ದರು. ಜನಸಾಮಾನ್ಯರು ತಮ್ಮ ಅನುಕೂಲಕ್ಕೆ ತಕ್ಕಂತೆ ವಾಸದ ನೆಲೆಗಳಿಗೆ ಸಾಂಸ್ಕೃತಿಕ ಆಯಾಮ ನೀಡಿದ್ದರು. ಸಿರುಗುಪ್ಪ ತಾಲೂಕಿನ ಹಳೆಕೋಟೆ, ತೆಕ್ಕಲಕೋಟೆ, ನಿಟ್ಟೂರು, ಉದೆಗೊಳ, ಬಳ್ಳಾರಿ ಹತ್ತಿರದ ಸಂಗನಕಲ್ಲು, ಮೊಳಕಾಲ್ಮೂರು ತಾಲೂಕಿನ ಬ್ರಹ್ಮಗಿರಿ, ಜಟ್ಟಿಂಗರಾಮೇಶ್ವರ, ಅಶೋಕ ಸಿದ್ದಾಪುರ, ಇಸಿಲ, ರೊಪ್ಪ; ಚಿತ್ರದುರ್ಗದ ನಗರದ ಸಮೀಪ ಇರುವ ಚಂದ್ರವಳ್ಳಿ, ತಮಟಕಲ್ಲು ಮೊದಲಾದವು ಮಾನವನ ಆರಂಭಿಕ ವಸತಿ ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರವಾದ ನೆಲೆಗಳೆಂದು ಗುರುತಿಸಲಾಗಿದೆ. ಆದಿವಾಸಿಗಳು ತಮ್ಮ ಭಾಷೆ, ಸಂಸ್ಕೃತಿ ಹೆಸರಲ್ಲಿ ವಾಸದ ನೆಲೆಗಳನ್ನು ಕಟ್ಟಿಕೊಂಡಿದ್ದರು. ಉದಾ: ಆಂಧ್ರ–ಕರ್ನಾಟಕ ಗಡಿಭಾಗದ ಮೊಳಕಾಲ್ಮೂರು ತಾಲೂಕಿನ ಕೋನಸಾಗರ ಹಾಗೂ ಮರ್ಲಹಳ್ಳಿ

(ಮೊರೆರಹಳ್ಳಿ) ಪೂರ್ವಕ್ಕಿರುವ ರೇಪಲ್ಲಿ, ಮಾಪಲ್ಲಿ ಮತ್ತು ಎನ್ನಮುದ್ದಲಪಲ್ಲಿ ಎಂಬ ಬೇಚರಾಕ್ ಗ್ರಾಮಗಳು ಸಾವಿರಾರು ವರ್ಷಗಳ ವಸತಿ ಮತ್ತು ವಲಸೆಯ ಇತಿಹಾಸವನ್ನು ಸಂಕೇತಿಸುತ್ತವೆ.

ಬಯಲುಸೀಮೆಯ ಜಿಲ್ಲೆಗಳಲ್ಲಿ 'ಜೋಗಿ' ಎನ್ನುವ ಹೆಸರಿನ ಗ್ರಾಮಗಳಿವೆ. ಜೋಗಿ-ಯೋಗಿ, ಭೈರವ, ನಾಥ ಸಂಪ್ರದಾಯದ ವ್ಯಕ್ತಿನಾಮಗಳು ಪ್ರಧಾನವಾಗಿವೆ. ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಚಿಕ್ಕಜೋಗಿಹಳ್ಳಿ, ಬಿಷ್ಣಹಳ್ಳಿಯಲ್ಲಿ ಕಿನ್ನರಿ ಜೋಗಿಗಳು ನೆಲಸಿದ್ದಾರೆ. ದೊಂಬರ ಸಿದ್ದಾಪುರದಲ್ಲಿ ಜೋಗಿಗಳಾಗಿದ್ದವರು ದೊಂಬರೇ. ಪಾಂಡವರು ಮತ್ತು ಕೌರವರ ಬಗ್ಗೆ ಕಥೆ, ಹಾಡುಗಳನ್ನು ಹೇಳುತ್ತಾ ಭಿಕ್ಷೆ ಬೇಡುತ್ತಾರೆ. ಈ ಗ್ರಾಮಗಳು ಯಾವಾಗ ಹುಟ್ಟಿದವು. ಹೇಗೆ ನಿರ್ಮಾಣಮಾಡಲಾಯಿತೆಂಬುದು ತಿಳಿದಿಲ್ಲ. ಚಿತ್ರದುರ್ಗದ ಜಿಲ್ಲೆ ಚಳ್ಳಕೆರೆ ತಾಲೂಕಿನ ರಾಮಜೋಗಿಹಳ್ಳಿ ನಾಯಕನಹಟ್ಟಿ ಪಕ್ಕದ ಜೋಗಿಹಟ್ಟಿ, ಮೊಳಕಾಲ್ಮೂರು ತಾಲೂಕಿನ ಎರಿಪೋತಿ ಜೋಗಿಹಳ್ಳಿ, ಮಠದ ಜೋಗಿಹಳ್ಳಿ, ದಾವಣಗೆರೆ ಜಿಲ್ಲೆಯ ಜಗಳೂರು, ಬಳ್ಳಾರಿ ಜಿಲ್ಲೆಯ ಸೊಂಡೂರು ತಾಲೂಕಿನ ಜೋಗ, ಜೋಗಿಕಲ್ಲು ಮೊದಲಾದ ಸ್ಥಳಗಳು ಜೋಗಿ ಸಂಪ್ರದಾಯ ಮತ್ತು ಸಂಸ್ಕೃತಿಗೆ ದ್ಯೋತಕವಾಗಿವೆ.

'ಜೋಗ' ಎಂಬ ಸಂಸ್ಕೃತ ಪದವು 'ಯೋಗ' ಎಂಬ ಪದದ ತದ್ಭವರೂಪವಾಗಿದೆ. ಯೋಗ, ಯೋಗಿ, ಯೋಗಿಣಿ ಆದಂತೆ ಜೋಗದಿಂದ ಜೋಗಿ, ಜೋಗಿ, ಜೋಗತಿ ಆಗಿದೆ. ಎಲ್ಲಮ್ಮ ಚೌಡಿಕೆ ಪದಗಳಲ್ಲಿ ಜೋಗಪ್ಪ ಜೋಗತಿಯವರು ಕಂಡುಬರುತ್ತಾರೆ. ಹೆಂಗಸರ ವೇಷದಲ್ಲಿರುವ ಗಂಡಸರನ್ನು ಗಂಡು ಜೋಗಪ್ಪ ಎಂದು ಸಂಬೋಧಿಸುವರು-ಜೋಗಮ್ಮ ಹೆಣ್ಣಿನ ರೂಪದಲ್ಲಿರುತ್ತಾಳೆ. ಗ್ರಾಮೀಣ ಭಾಗದಲ್ಲಿ ಜೋಗಪ್ಪ-ಜೋಗಮ್ಮ ಇವರಿಂದ ಚೌಡಿಕೆ ಪದಗಳನ್ನು ಹಾಡುತ್ತ ಭಿಕ್ಷೆ ಬೇಡುತ್ತಾರೆ. ಜೋಗಿ ಎನ್ನುವ ಸಮುದಾಯ ಬೆಳೆದುಬಂತು. ಜೋಗಿ ಹೆಸರಿನ ವ್ಯಕ್ತಿಗಳು, ಸ್ಥಳನಾಮಗಳು, ವಸ್ತುಗಳು, ಉಪಕರಣಗಳ ಮೂಲಕ ಸಂಕೇತಗೊಳಿಸಲಾಗಿದೆ.

'ಜೋಗಿ' ಹೆಸರಿನ ಸ್ಥಳ ಯಾಕೆ ಹುಟ್ಟಿತು. ಯಾವಾಗ ಹುಟ್ಟಿತು. ಹುಟ್ಟಲು ಯಾವುದಾದರೊಂದು ಕಾರಣ ಇದ್ದೇ ಇರುತ್ತದೆ. ಹೀಗೆ ಜೋಗಿಹಳ್ಳಿ, ಜೋಗಿಹಟ್ಟಿ ಎಂಬ ಗ್ರಾಮಗಳನ್ನು ಅಧ್ಯಯನ ಮಾಡಲು ಹೊರಟಾಗ ಎಷ್ಟೆಲ್ಲ ಮಾಹಿತಿ ಲಭ್ಯವಾಗುತ್ತದೆ. ನಮ್ಮ ಪರಿಸರದ ಸುತ್ತಮುತ್ತ ಕಂಡುಬರುವ ಜೋಗಿಗಳ ಹೆಸರಿನ ಊರುಗಳ ವಿಶೇಷ ಎಂದರೆ 'ಸಿದ್ಧಾಪುರ' ಎಂಬ ಗ್ರಾಮಗಳು ಸಹಾ ಅಕ್ಕ-ಪಕ್ಕದಲ್ಲಿ ರುವುದು. ಜೋಗಿ-ಸಿದ್ಧ ಹೆಸರಿನ ಹಿಂದೆ ನಾಥ ಸಂಪ್ರದಾಯದ ದಟ್ಟ ಪ್ರಭಾವವಿದೆ. ಎರಡು ಸ್ಥಳಗಳು ಪ್ರತ್ಯೇಕವಿದ್ದು, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಸಾರುವಲ್ಲಿ ಯಶಸ್ವಿಯಾಗಿವೆ. ಮೊಳಕಾಲ್ಮೂರು ತಾಲೂಕಿನಲ್ಲಿರುವ ನುಂಕಮಲೆ ಕಾಲಭೈರವನ ಪ್ರಭಾವದಿಂದ ಅಶೋಕ ಸಿದ್ಧಾಪುರ, ನುಂಕನಹಳ್ಳಿ, ಭೈರಾಪುರ, ಪೂಜಾರಿಹಟ್ಟಿ ಕೂಡ್ಲಿಗಿ ತಾಲೂಕಿನ ದೊಂಬರ ಸಿದ್ಧಾಪುರಗಳಿದ್ದರೆ, ಸಿದ್ಧರಬೆಟ್ಟ, ಸಿದ್ಧೇಶನ ದುರ್ಗ,

ಸಿದ್ಧರಹಳ್ಳ, ಸಿದ್ದಿಹಳ್ಳಿ (ಜಗಳೂರು ತಾ) ಹೆಸರುಗಳಿವೆ. ಹಾಗೆಯೇ ಚಿಕ್ಕ ಜೋಗಿಹಳ್ಳಿ, ಎರಿಸೋತಿ ಜೋಗಿಹಳ್ಳಿ ಮಠದ ಜೋಗಿಹಳ್ಳಿ ಎಂಬ ಗ್ರಾಮಗಳು ಈ ಪರಿಸರದಲ್ಲಿವೆ.

ಆರಂಭದಲ್ಲಿ ಭೈರವನ ಆರಾಧನೆ ಎಲ್ಲ ಸಮುದಾಯಗಳಲ್ಲಿತ್ತು. ತರುವಾಯ ಕೆಲವು ಬುಡಕಟ್ಟುಗಳಿಗೆ ಸೀಮಿತವಾಯಿತು. ಸಂಸ್ಕೃತಿಯ ಪ್ರಭಾವವು ಧಾರ್ಮಿಕ ಸಮಾನತೆ ಧ್ಯೋತಕವಾದರೆ, ಆರ್ಥಿಕ ಮತ್ತು ರಾಜಕೀಯ ಅವಕಾಶಗಳು ಸಾಮಾಜಿಕ ನಿಯಂತ್ರಣದಲ್ಲಿರುತ್ತವೆ ಎಂಬುದಕ್ಕೆ ಕರ್ನಾಟಕದ ಒಕ್ಕಲಿಗರು ಮತ್ತು ಬೇಡರನ್ನು ಉದಾಹರಿಸಬಹುದು. ಈ ಎರಡು ಸಮುದಾಗಳಲ್ಲಿ ಭೈರವನ ಆರಾಧನೆ (ನಾಥ ಸಂಪ್ರದಾಯ) ದಟ್ಟವಾಗಿದೆ. ಬೇಡರು ನುಂಕಮಲೆಗೆ ನಡೆದುಕೊಂಡು–ಬೋರ–ಜೋಗಿ ದೇವರನ್ನು ಆರಾಧಿಸುತ್ತಾರೆ. ಅದೇ ರೀತಿ ಒಕ್ಕಲಿಗರು ಆದಿಚುಂಚನಗಿರಿ ಕಾಲಭೈರವನಿಗೆ ನಡೆದುಕೊಳ್ಳುತ್ತಾರೆ.

ಜೋಗಪ್ಪ–ಜೋಗತಿ ಬಗ್ಗೆ ಜನಪದ ವಿವರ

ರೇಣುಕೆ ಎಲ್ಲಮ್ಮ, ಜಮದಗ್ನಿ ಮತ್ತು ಪರಶುರಾಮರ ಕಥೆಗಳು ಇಂದಿಗೂ ಜನಪ್ರಿಯವಾಗಿವೆ. ಹೀಗೆ ಹುಲಿಗೆಮ್ಮ, ಎಲ್ಲಮ್ಮ, ಮಾರಮ್ಮ, ದುರುಗಮ್ಮ, ಮಾಯಮ್ಮ, ಮಲಿಯಮ್ಮ ಮೊದಲಾದ ಸ್ತ್ರೀ ದೇವತೆಗಳ ಬಗ್ಗೆ ಜನಪದ ಕಥೆಗಳಿವೆ. ಚಿತ್ರರಥನೆಂಬ ಗಂಧರ್ವ ರಾಜ ನದಿಯಲ್ಲಿ ತನ್ನ ಪತ್ನಿಯೊಂದಿಗೆ ಜಲಕ್ರೀಡೆ ಯಾಡುವಾಗ ರೇಣುಕ ಎಲ್ಲಮ್ಮನು ನೀರು ತರಲು ಹೋಗಿ ಮನಸೋಲುತ್ತಾಳೆ. ಪರಪುರುಷನನ್ನು ಮನಸ್ಸಿನಲ್ಲಿ ಮೋಹಿಸಿದ ಕಾರಣ ಆಕೆಯ ಪಾತಿವ್ರತ್ಯಕ್ಕೆ ದಕ್ಕೆ ಆಯಿತು. ಆಕೆಯ ಮೇಲಿದ್ದ ಮಣ್ಣಿನ ಕೊಡ ಕರಗಿ ಹಾವಾಗಿ ಹರಿದು ಹೊಯಿತಂತೆ, ಇದರಿಂದ ಕೊಪೊದ್ರಿಕ್ತನಾದ ಜಮದಗ್ನಿ ರೇಣುಕೆ ಪಾತಿವ್ರತ್ಯವನ್ನು ಕಾಪಾಡಿಕೊಂಡಿಲ್ಲ, ಅಪವಿತ್ರಳೆಂದು ಸಿಟ್ಟಿನಿಂದ ಶಿಕ್ಷೆ ವಿಧಿಸಲು ಮುಂದಾದ. ತನ್ನ ನಾಲ್ಕು ಜನಮಕ್ಕಳನ್ನು ಕರೆದು ರೇಣುಕೆ (ತಾಯಿಯ) ಶಿರಕಡಿಯಲು ಆಜ್ಞೆಮಾಡಿದ, ಕೊನೆಯವನಾದ ಪರಶುರಾಮ ರೇಣುಕೆಯ ಶಿರವನ್ನು ಕಡಿದು ಜಮದಗ್ನಿಕೊಟ್ಟ ವರದಿಂದ ತಾಯಿಯಾದ ರೇಣುಕೆಯನ್ನು ಬದುಕಿಸಿದ್ದು ತಿಳಿದುಬರುತ್ತದೆ. ಕಾರ್ತವೀರ್ಯಾರ್ಜುನನು ಜಮದಗ್ನಿ ಋಷಿಯನ್ನು ಹುಣ್ಣಿಮೆ ದಿನ ಕೊಂದ. ರೇಣುಕೆ ರಂಡೆಯಾದ ದಿನ ಹುಣ್ಣಿಮೆ ಯಾಯಿತು. ಹುಣ್ಣಿಮೆ ರಾತ್ರಿ ಜೋಗಮ್ಮ ಜೋಗಪ್ಪಗಳು ಮತ್ತು ಇತರ ಭಕ್ತರು ತನ್ನ ಕೈಬಳೆಗಳನ್ನು ಎಲ್ಲಮ್ಮನ ಕ್ಷೇತ್ರಗಳಲ್ಲಿ ಒಡೆದುಕೊಳ್ಳುತ್ತಾರೆ. ಪರಶುರಾಮ ಕಾರ್ತವೀರ್ಯನನ್ನು ಕೊಂದು ಸ್ವರ್ಗ ದಿಂದ ಅಮೃತವನ್ನು ತಂದು ತಂದೆಯನ್ನು ಬದುಕಿಸಿದ. ಆಗ ಎಲ್ಲಮ್ಮ ಮುತ್ತೈದೆ ಯಾದಳಂತೆ. ಅದೇ ದಿನ ಹುಣ್ಣಿಮೆ ಆದಕಾರಣ ಮುತ್ತೈದೆ ಹುಣ್ಣಿಮೆ ಎನ್ನುತ್ತಾರೆ. ರಂಡೆ ಹುಣ್ಣಿಮೆ ಎಂದು ಕಳಂಕ ಹೋಗಿ ಬನದ ಹುಣ್ಣಿಮೆ ಆಯಿತು. ಹೆಣ್ಣುಮಕ್ಕಳ ಆಚರಣೆಗಳು ಹುಣ್ಣಿಮೆಯಲ್ಲಿ ಆರಂಭವಾಗುತ್ತವೆ. ಉದಾ: ಸಣ್ಣ ಗೌರಮ್ಮ ಮತ್ತು ದೊಡ್ಡ ಗೌರಮ್ಮ

Scanned with OKEN Scanner

ಜೋಗಿನೆಲೆಗಳು : ಕರ್ನಾಟಕದಲ್ಲಿ ಜೋಗಿ ಸಂಪ್ರದಾಯದ ಪ್ರಮುಖ ನೆಲೆಗಳಾಗಿ ಕದ್ರಿ (ಮಂಗಳೂರು) ಆದಿ ಚುಂಚನಗಿರಿ ಮತ್ತು ನುಂಕಮಲೆ ಗಿರಿಧಾಮಗಳು ಕಂಡುಬರುತ್ತವೆ. ಚಳ್ಳಕೆರೆ ತಾಲೂಕಿನ ಗುಂಡು ಬೋರುವ, ಹೂಡೇಂ ಗ್ರಾಮದ ಭೈರವ–ಬೋರುವ ದೇವಾಲಯವಿದೆ.

ವ್ಯಕ್ತಿನಾಮಗಳು : ನುಂಕಮಲೆ ಕಾಲಭೈರವ, ಜೋಗಿ, ಪರದೇಶಿ ಎಂಬ ಹೆಸರುಗಳಿಂದ ಕರೆಯುವರು. ಜೋಗಯ್ಯ, ಜೋಗೇಶ ಎಂಬ ಹೆಸರುಗಳಿವೆ. ಮಾಸೆಲಾರು ಯರಗಾಟ್ಲರು ಜೋಗಯ್ಯ ಎಂಬ ಹೆಸರನ್ನು ಇಟ್ಟುಕೊಳ್ಳುವ ಮ್ಯಾಸನಾಯಕರು ಕಮಲಾಪುರದಲ್ಲಿದ್ದಾರೆ.

ಚಿತ್ರದುರ್ಗ ನಗರದಿಂದ ಅನತಿ ದೂರದಲ್ಲಿರುವ (೧೪ ಕಿ.ಮಿ) 'ಜೋಗಿಮಟ್ಟಿ' ಎಂಬ ಐತಿಹಾಸಿಕ ಸ್ಥಳದ ಬಗ್ಗೆಯ ಪರಿಶೀಲನೆ ಆಗಬೇಕಾಗಿದೆ. ಚಿನ್ನಹಗರಿ ನದಿಯಲ್ಲಿ ಮಧ್ಯೆಮರದ ಗಂಗಮ್ಮನ ಹತ್ತಿರ, (ಚಿಕ್ಕುಂತಿ ಹತ್ತಿರ) ಭೈರವ ದೇವಾಲಯವಿದೆ.

ಪ್ರಾದೇಶಿಕವಾಗಿ ಜೋಗ–ಜೋಗಿ ಪದಗಳ ಬಳಕೆ ಅತೀಪ್ರಾಚೀನದಿಂದ ಬೆಳೆದು ಬಂದ ಉದಾಹರಣೆಗಳಿವೆ. ರಾಷ್ಟ್ರಕವಿ ಕುವೆಂಪು ಅವರು ಜೋಗಿ ಸಂಪ್ರದಾಯವನ್ನು ಕಂಡು ಇವರ ವೈವಿಧ್ಯತೆಯನ್ನು ಅರಿತು 'ಬೊಮ್ಮನ ಹಳ್ಳಿಯ ಕಿಂದರಿ ಜೋಗಿ'ಯ ಕವನದ ರಚನೆ ಮಾಡಿದ್ದು ಮಹತ್ವವಾದುದು. ಇದು ಕಥನ ಕವನವಾಗಿದ್ದು ಗ್ರಾಮದಲ್ಲಿರುವ ಇಲಿಗಳ ಕಾಟವನ್ನು ಕಿಂದರಿ ಜೋಗಿಯ (ಕೊಳಲಿನಿಂದ) ಕಿನ್ನರಿ ಬಾರಿಸುವ ಉಪಕರಣದಿಂದ ತಪ್ಪಿಸುವ ಪ್ರಯತ್ನ ಮಾಡುತ್ತಾರೆ. ಕನ್ನಡ ಚಲನಚಿತ್ರ ರಂಗದಲ್ಲಿ ಡಾ. ಶಿವರಾಜ್ ಕುಮಾರ್ ಅವರು 'ಜೋಗಿ' ಎಂಬ ಚಲನಚಿತ್ರದಲ್ಲಿ ಜೋಗಿ ಎಂಬ ವ್ಯಕ್ತಿಯ ಪಾತ್ರ ನಟಿಸಿದ್ದಾರೆ.

ಜನಪದ ಸಾಹಿತ್ಯದಲ್ಲಿ ಈ ಬಗ್ಗೆ ಸಾಕಷ್ಟು ಉದಾಹರಣೆಗಳಿವೆ. ಊರೂರು ಮುದ್ದೆ ಕಾಣೋ–ಜೋಗಪ್ಪ ಗುಡಿಯೊಳಗೆ ನಿದ್ದೆಕಾಣೋ' ಎಂಬ ನುಡಿ ಸರ್ವ ಕಾಲಕ್ಕೂ ಅನ್ವಯಿಸುತ್ತದೆ. ಬಡತನ–ಸಿರಿತನದ ಮಧ್ಯೆ ಜೋಗಪ್ಪ, ಬದುಕು ಬೀದಿಗೆ ಬಂದ ಪ್ರಸಂಗಗಳೇ ಹೆಚ್ಚು. ಸಿನಿಮಾ ಹಾಡಿನಲ್ಲಿಯೂ ಸಹಾ 'ಎಲ್ಲೋ ಜೋಗಪ್ಪ ನಿನ್ನ ಅರಮನೆ' ಎಂಬ ಸಂದೇಶವು ಬದುಕಿನ ಸ್ಥಿತಿ–ಗತಿಯನ್ನು ಸಂಕೇತಿಸುತ್ತದೆ. ವಚನ ಕಾರರು, ಕವಿ, ಸಾಹಿತಿಗಳು ಈ ಬಗ್ಗೆ ಚಿಂತನೆ ನಡೆಸಿದ್ದಾರೆ. ಜನಪದ ಗಾಯಕರು ಮತ್ತು ವಿದ್ವಾಂಸರು ಹೆಣ್ಣು ಜೋಗಿ, ಗಂಡು ಜೋಗಿ, ಜೋಗಮ್ಮ, ಜೋಗಪ್ಪ ಕುರಿತು ಕೃಷಿಯನ್ನು ಮಾಡಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ಜೋಗಿಗಳು ವಹಿಸಿದ ಪಾತ್ರ ದೊಡ್ಡದು. ಬಳ್ಳಾರಿ ಜಿಲ್ಲೆಯಲ್ಲಿ ಹಂದಿ ಜೋಗಿ ಸಮುದಾಯವಿದ್ದು ತುಂಬಾ ನಿಕೃಷ್ಟವಾದ ಜೀವನ ನಡೆಸುತ್ತಾರೆ.

'ಜೋಗಿ' ಎಂಬ ಪದ ಶೋಷಿತ ಪರಿಸ್ಥಿತಿಯನ್ನು ಅನಾವರಣಗೊಳಿಸಿದರೂ ಬಹುವ್ಯಾಪಕವಾದ, ವೈವಿಧ್ಯಮಯವಾದ ಹಿನ್ನೆಲೆ ಮತ್ತು ಸ್ವರೂಪವನ್ನು ಹೊಂದಿದೆ.

Scanned with OKEN Scanner

೧. ರಾಜಕೀಯದಲ್ಲಿ ಅರಸರಿಗೆ, ಮಂತ್ರಿಗಳಿಗೆ ಜೋಗಿಗಳು ಮಾರುವೇಷ ತೊಟ್ಟು ಗೂಢಾಚಾರಿಗಳಾಗಿದ್ದರು. ಹಾಗೆಯೇ ಸ್ಥಳೀಯ ಮುಖಂಡರಿಗೆ ಸಲಹೆ–ಸಹಕಾರ ನೀಡುತ್ತಿದ್ದರು. ಭಿಕ್ಷೆ ಬೇಡುವ ರೂಢಿಯು ಇವರಲ್ಲಿತ್ತು.

೨. ಸಾಮಾಜಿಕವಾಗಿ ಇವರು ತಳ ಅಥವಾ ಅಲಕ್ಷಿತ ಸಮುದಾಯಕ್ಕೆ ಸೇರಿದವರು. ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತೆ ಎಂಬ ತತ್ವಗಳು ಇವರಿಗೆ ಮರೀಚಿಕೆ ಆಗಿವೆ. ಬೇರೆ ಸಮುದಾಯಕ್ಕಿಂತ ತಾವು ಭಿನ್ನ ಎಂದು ಗುರುತಿಸಿಕೊಂಡರು ತಮಗೆ ತಾವೇ ಅವಕಾಶ ಹಾಗೂ ಪ್ರತಿನಿಧಿತ್ವದಿಂದ ವಂಚಿತರಾಗಿರುವರು.

೩. ಧಾರ್ಮಿಕವಾಗಿ ಜೋಗಿ–ಜೋಗಯ್ಯಗಳು ಪುರಾಣ, ದಂತ ಕಥೆ, ಮಹಾಕಾವ್ಯಗಳ ಸಾರವನ್ನು ಹೇಳುತ್ತಾ, ಕಿನ್ನರಿ ಬಾರಿಸುವುದು, ಭಜನೆ ಮಾಡುವುದು, ಬಯಲಾಟ, ಯಕ್ಷಗಾನಗಳಲ್ಲಿ ನಟಿಸುವುದನ್ನು ಮಾಡುತ್ತಾರೆ. ಹಬ್ಬ–ಹರಿದಿನ, ಜಾತ್ರೆಗಳಲ್ಲಿ ತಮಗೆ ಮೀಸಲಿಟ್ಟ ಸೇವಾಕಾರ್ಯಗಳನ್ನು ಮಾಡುವರು.

೪. ಸಾಂಪ್ರದಾಯಿಕವಾಗಿ ಇವರು ಕಾಳಮುಖ–ಕಾಪಾಲಿಕರಂತೆ ಪ್ರಕೃತಿಯಲ್ಲಿ ಮೌಢ್ಯ–ಅಂಧ ಸಂಪ್ರದಾಯಗಳನ್ನು ಮಾಡುತ್ತಿದ್ದರು. ನಾಥ ಸಂಪ್ರದಾಯದಂತೆ ಆಹಾರ, ಉಡುಗೆ–ತೊಡುಗೆ ಹಾಗೂ ವರ್ತನೆಯಲ್ಲಿ ವಿಭಿನ್ನವಾಗಿದ್ದರು.

೫. ಆರ್ಥಿಕವಾಗಿ ಅಷ್ಟೇನು ಉತ್ತಮ ಸ್ಥಿತಿಯಲ್ಲಿ ಇಲ್ಲದ ಇವರು ಭಿಕ್ಷೆ ಬೇಡುವುದೇ ವೃತ್ತಿ. ವಿವಿಧ ಸಮುದಾಯದವರಿಂದ 'ಜೋಗಪ್ಪ'ನ ಆಯ ಅಥವಾ ಭಿಕ್ಷೆಯನ್ನು ಪಡೆಯುತ್ತಿದ್ದರು. ಅತೀ ಹಿಂದುಳಿದ ಜಾತಿ–ಸಮುದಾಯಗಳಲ್ಲಿ ಜೋಗಪ್ಪ ಎಂದು ಹೆಸರಿಟ್ಟುಕೊಂಡರು ಜೋಗಿ ಸಂಪ್ರದಾಯದಿಂದ ಭಿನ್ನವಾಗಿದ್ದರು.

೬. ಒಂದು ಕಾಲಕ್ಕೆ ಬೇಟೆ ಆಡಿ ಪ್ರಾಣಿ ಹಿಂಸೆ ಮೂಲಕ ಇವರು ಜೀವನ ನಡೆಸಿ, ಕೊನೆಗೆ ಪಶುಪಾಲನೆ ಮೂಲಕ ಕುರಿ, ಮೇಕೆ, ದನ, ಎಮ್ಮೆಗಳನ್ನು ಸಾಕಿ ಪರಿವರ್ತಿತ ಜೀವನ ನಡೆಸಿ ಈಗ ಆರ್ಥಿಕವಾಗಿ ಕೆಲವು ಭಾಗಗಳಲ್ಲಿ ಉತ್ತಮವಾಗಿದ್ದಾರೆ.

೭. ಜೋಗಿಗಳು ಶೈಕ್ಷಣಿಕವಾಗಿ ತೀರಾ ಹಿಂದುಳಿದಿರುತ್ತಾರೆ. ಇವರಿಗೆ ಆಧುನಿಕ ಶಿಕ್ಷಣದ ಸೌಲಭ್ಯ ಇದ್ದರೂ ಕುಟುಂಬದ ನಂಬಿಕೆ, ವೃತ್ತಿ ಹಾಗೂ ಪರಂಪರೆಗನು ಗುಣವಾಗಿ ಮುಂದುವರೆಯುತ್ತಾರೆ.

೮. ಛತ್ತಿಸಗಡ, ಜಾರ್ಖಂಡ್, ಒರಿಸ್ಸಾ, ತೆಲಂಗಾಣ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕರ್ನಾಟಕದಲ್ಲಿ ಜೋಗಿ ಸಂಪ್ರದಾಯದ ಲಕ್ಷಣಗಳನ್ನು ಗುರುತಿಸಬಹುದು.

೯. ಆರ್ಯ ಮತ್ತು ದ್ರಾವಿಡರ ಸಂಸ್ಕೃತಿಯ ಸಂಘರ್ಷದಲ್ಲಿ ಬಹುತೇಕ ಇವರು ದ್ರಾವಿಡ ಪಂಗಡಕ್ಕೆ ಸೇರುತ್ತಾರೆ. ಕಾಶಿ, ಕೇದಾರ, ಹರಿದ್ವಾರ (ಉತ್ತರ ಭಾರತ)ನಂತೆ ದಕ್ಷಿಣ ಭಾರತದಲ್ಲಿ ಕದರಿ, ನುಂಕಮಲೆ, ಆದಿಚುಂಚನಗಿರಿ ಮೊದಲಾದವುಗಳಲ್ಲಿ ನೆಲೆಸಿರುವುದನ್ನು ಗುರುತಿಸಬಹುದಾಗಿದೆ.

Scanned with OKEN Scanner

೧೦. ಕರ್ನಾಟದಲ್ಲಿ ಭೈರವ ಅಥವಾ ನಾಥ ಸಂಪ್ರದಾಯಕ್ಕೆ ಒಕ್ಕಲಿಗರು, ಬೇಡರು ಮೊದಲಾದ ಸಮುದಾಯದವರು ಅರ್ಪಿಸಿಕೊಂಡಿದ್ದು, ಇವರಲ್ಲಿ ಶೈವ, ವೈಷ್ಣವದ ಪ್ರಭಾವ ಹೆಚ್ಚಾಗಿದೆ. ಶೈವೀಕರಣ ಮತ್ತು ಬ್ರಾಹ್ಮಣೀಕರಣಗಳ ನಡುವೆ ಇವರು ಡೋಲಾಯಮಾನ ಸ್ಥಿತಿ ಎದುರಿಸುತ್ತಿರುವುದು ತೆರೆದ ಸತ್ಯ. ಒಕ್ಕಲಿಗರು ಜೋಗಪ್ಪ, ಜೋಗೇಶನ ಬದಲಾಗಿ ಆಧುನಿಕ ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ.

೧೧. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಪ್ರತಿಯೊಂದು ಸಮುದಾಯಕ್ಕೆ ದೇವರು, ಕಟ್ಟೆ ಮನೆಗಳಿದ್ದರೂ ಜೋಗಿ ದೇವರೆಂದು ಪ್ರತ್ಯೇಕವಾಗಿ ಮಾಡಿಕೊಂಡು ಬಂದಿರುತ್ತಾರೆ. ಹಬ್ಬ, ಜಾತ್ರೆಗಳಲ್ಲಿ ಇವರು ಒಕ್ಕಲುಗಳ ಪ್ರಕಾರ ಸಂಪ್ರದಾಯಗಳನ್ನು ಪೂರೈಸುವರು.

೧೨. ಜೋಗಿ–ಜೋಗಪ್ಪ, ಜೋಗಮ್ಮ ಎಂಬ ಹೆಸರುಗಳು ಸ್ಥಳೀಯವಾಗಿ ಜನಸಂಸ್ಕೃತಿಯ ಪ್ರತಿನಿಧಿಗಳಾದರೂ ಹಿರಿಯರ ಅಣತೆಯಂತೆ ನಡೆದುಕೊಳ್ಳಬೇಕು.

೧೩. ಜೋಗಿ ಎಂದರೆ ಕೈಯಲ್ಲಿ ಬೆತ್ತದ ಕೋಲು, ಕಿವಿಗೆ ಉಂಗುರ ಹಾಕಿಸಿಕೊಂಡು, ಮೈಮೇಲೆ ಮುದ್ರೆಗಳನ್ನು ಹಾಕುತ್ತಿದ್ದರು. ಜೋಗಿ ಆದವನು ತ್ರಿಶೂಲವನ್ನು, ಬೋನಾಸಿ, ಶಂಖ, ತಂಬೂರಿ, ಘಂಟೆ–ಹೊಂದಿರುವರು. ಇತ್ತೀಚೆಗೆ ಶಿಸ್ತು ಕಡಿಮೆ ಆಗಿ ಬಿಳಿಬಟ್ಟೆ ಕೈಗೆ, ಕಿವಿಗೆ ಮುರ, ಮುಂಗೈಗೆ ಕಡಗವನ್ನು ಹಾಕುತ್ತಾರೆ. ಹಿರಿಯೂರು, ದಾವಣಗೆರೆ, ಹೊಳಲ್ಕೆರೆ ಭಾಗದ ಸಾದಾ ವೀರಶೈವರು/ಬೇಡರು/ಒಕ್ಕಲಿಗರು/ ಸಾದ ಲಿಂಗಾಯಿತರು ಹೀಗೆ ನಡೆದುಕೊಳ್ಳುತ್ತಾರೆ. ಇವರಲ್ಲಿ ಜೋಗಿ ಬದಲಾಗಿ ಸಿದ್ಧ, ಸಿದ್ಧೇಶ, ಸಿದ್ಧಮ್ಮ, ಸಿದ್ಧಪ್ಪ ಎಂದೆಲ್ಲ ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ.

೧೪. ಜೋಕುಮಾರಸ್ವಾಮಿ ಆಚರಣೆಗೂ–ಜೋಗಪ್ಪಗಳ ಭಿಕ್ಷೆ ಬೇಡುವ–ಸಂಪ್ರದಾಯಗಳಿಗೂ ಏನೋ ಒಂದು ಕಡೆ ಸಂಬಂಧವಿದ್ದಂತಿದೆ.

ದಾಸಪ್ಪ ಮತ್ತು ಜೋಗಪ್ಪ ಬಗ್ಗೆ ಜಾನಪದ ತಜ್ಞ ಹಿ.ಚಿ. ಬೋರಲಿಂಗಯ್ಯ ಅವರು ಪುಸ್ತಕವನ್ನೇ (೧೯೮೧) ಬರೆದಿದ್ದರು. ಅದರಲ್ಲಿ ವೈಷ್ಣವ ಸಂಪ್ರದಾಯದ ದಾಸಪ್ಪ ಹಾಗೂ ಶೈವ ಸಂಪ್ರದಾಯದ ಜೋಗಪ್ಪನನ್ನು ಕುರಿತು ಚಿಂತನೆ ಮಾಡಿರುತ್ತಾರೆ. ಆಯಾ ಪ್ರಾದೇಶಿಕತೆಗೆ ತಕ್ಕಂತೆ ಲೇಖಕರು ಇಲ್ಲಿನ ಚುಂಚನಗಿರಿ ಭೈರವನಿಂದ ಜೋಗಪ್ಪನ ಸಂಪ್ರದಾಯ ಬೆಳೆದುಬಂದ ಬಗೆಯನ್ನು ವಿವರಿಸಿದ್ದಾರೆ. ಜೋಗಿ ಎಂದರೆ ಸರ್ವಸಂಗಪರಿತ್ಯಾಗಿ ಅಥವಾ ಸನ್ಯಾಸಿ ಎನ್ನುವರು. ಸಿದ್ಧ ಪುರುಷನಿಗೆ ಜೋಗಿ ಎಂಬ ರೂಢಿನಾಮವಿದೆ. ದೇವರು ಗ್ರಾಮ, ಮನೆ ಮನೆ ಅಲೆಯುವುದಿಲ್ಲ. ಭಿಕ್ಷೆಗಾಗಿ ದೇವರ ಪ್ರತಿರೂಪವಾದ ಜೋಗಪ್ಪ ಊರು–ಕೇರಿ ಅಲೆದು ಜನಸಾಮಾನ್ಯರಲ್ಲಿ ಬೆರೆತು ಹೋಗುವ ವೈರಾಗ್ಯ ಪುರುಷರಾಗಿದ್ದಾರೆ.

ದಕ್ಷಿಣ ಕರ್ನಾಟಕದ ಜೋಗಪ್ಪಗಳ ಉಡುಪು–ಉಡುಗೆ ತೊಡಿಗೆಗಳು ಭಿನ್ನವಾಗಿವೆ. ಸ್ವಾಮಿಜಿಯಂತೆ ಕಾವಿ ಶರ್ಟ, ಕಾವಿಲುಂಗಿ, ಕಾವಿವಸ್ತ್ರ, ಕಾವಿಪೇಟ–ರುಮಾಲು, ಕೈಯಲ್ಲಿ ತ್ರಿಶೂಲ, ಬೆತ್ತದ ಕೋಲು ಹೆಗಲಲ್ಲಿ ಜೋಳಿಗೆ ಇರುತ್ತದೆ. ಹಣೆಯಲ್ಲಿ

Scanned with OKEN Scanner

ವಿಭೂತಿ, ಕೈಯಲ್ಲಿ ಅಕ್ಷಯ ಪಾತ್ರೆ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಕಿವಿಯಲ್ಲಿ ಕರ್ಣ ಕುಂಡಲಗಳಿರುತ್ತವೆ. ಜೋಗಿಯ ಕೈಯಲ್ಲಿ ಸಿಂಗನಾಥ, ಪಂಚಪಾತ್ರೆ, ತೀರ್ಥದ ಬಟ್ಟಲು ಮತ್ತು ವಿಭೂತಿ ಉಂಡೆಗಳು ಜೊತೆಯಲ್ಲಿರುತ್ತವೆ. ಭೈರವ ಅಥವಾ ಈಶ್ವರ ಆರಾಧಕರಾದ ಜೋಗಿಗಳು ಸೂರ್ಯೋದಯಕ್ಕೆ ಕೈ ಮುಗಿದು ಮುಂದಿನ ಚಟುವಟಿಕೆಗಳನ್ನು ಆರಂಭಿಸುತ್ತಾರೆ. ಜೋಗಿ ಪ್ರತಿ ದಿನ ಊಟಕ್ಕೆ ಮೊದಲು ಸಿಂಗನಾಥ ಊದುವುದು, ದೇವರ ವಾರದಂದು ಭಾನುವಾರ ಪೂಜೆ ಮಾಡಿ ಭಿಕ್ಷೆಗೆ ಹೋಗಿ–ಭಕ್ತರ ಮುಂದೆ ಸಿಂಗನಾಥ ಊದಿದರೆ ಜೋಗಪ್ಪನ ಭಿಕ್ಷೆ ಎಂದು ಗೊತ್ತಾಗುತ್ತದೆ. ವಿಶೇಷ ಸಂದರ್ಭಗಳಾದ ಹೆಣ್ಣು ಮಕ್ಕಳು ಋತುಮತಿ (ಮೈನೆರೆದಾಗ) ಮಗು ಹುಟ್ಟಿದಾಗ, ಸತ್ತ ವ್ಯಕ್ತಿಯ ಸೂತಕ ಕಳೆಯಲು ಜೋಗಪ್ಪನನ್ನು ಕರೆಸಿ ವಿಧಿ–ವಿಧಾನಗಳನ್ನು ತೀರಿಸುತ್ತಾರೆ. ತನ್ನ ಒಕ್ಕಲಿನ, ಊರಿನ, ಮನೆಯ ಮುಟ್ಟು ತೀರಿಸಿ ಅಥವಾ ಅಪಶಕುನಗಳು ಬಾರದಂತೆ ತಡೆಯುವವನೇ ಜೋಗಪ್ಪ. ಉತ್ತರ ಕರ್ನಾಟಕದಲ್ಲಿ ಕುರುಬ ಅಥವಾ ಹಾಲುಮತ ಸಮುದಾಯದಲ್ಲಿ ಮೈಲಾರಲಿಂಗ ಭಕ್ತರು/ಒಕ್ಕಲು/ಜೋಗಪ್ಪಗಳಿರುತ್ತಾರೆ. ಇವರು ಸಹಾ ಮನೆಮನೆಗೆ ಹೋಗಿ ಭಿಕ್ಷೆ ಬೇಡುತ್ತಾರೆ. ಕೃಷಿ, ಪಶುಪಾಲನೆ ಸಮುದಾಯಗಳಲ್ಲಿ ಜೋಗಿ–ಜೋಗಪ್ಪನ ಪಂಥ ವಿಶಿಷ್ಟ ರೀತಿಯಲ್ಲಿ ಬೆಳೆದು ಬಂದಿದೆ.

ಜೋಗಪ್ಪನ ಕರ್ತವ್ಯ ಹಾಗೂ ಹಕ್ಕು ಭಾದ್ಯತೆಗಳು ಜನಮುಖಿಯಾಗಿರುತ್ತವೆ. ಆದಿಚುಂಚನಗಿರಿಯ ಜೋಗಪ್ಪ ಇಬ್ಬರ ನಡುವೆಕೊಂಡಿಯಾಗಿ ಕಾರ್ಯನಿರ್ವಹಿಸುತ್ತಾನೆ. ದೇವರ ಪೂಜೆ–ಒಕ್ಕಲುಗಳ ವಾರಸುದಾರನಾಗಿ ಚುಂಚನಗಿರಿಯ ವಾರ್ತೆಯನ್ನು ತಲುಪಿಸಿ, ಜನರ ಕುಶಲತೆ ವಿಚಾರಿಸುತ್ತಿದ್ದ. ಒಕ್ಕಲು ಮನೆಯ ಮದುವೆಯಲ್ಲಿ ಮದುಮಗನಿಗೆ ಕಂಕಣ, ತ್ರಿಶೂಲ, ಬಾಸಿಂಗ ಕಟ್ಟುವ ಶಾಸ್ತ್ರ ಮಾಡುವವನು ಜೋಗಪ್ಪ. ಇವನು ವೃದ್ಧನಾದ ಮೇಲೆ ಮಗ ಜೋಗಿಯಾಗುವನು. ಯುವ ಜೋಗಿಗೆ ಹಿರಿಯ ಜೋಗಿಯಿಂದ ದೀಕ್ಷೆ ಕೊಡಲಾಗುತ್ತದೆ.

ಜೋಗಪ್ಪನಿಗೆ ವಿಧಿ–ನಿಷೇಧ–ಸಮಾಜದ ಕಟ್ಟಳೆಗಳು ಅನ್ವಯಿಸುತ್ತವೆ. ಒಕ್ಕಲು–ಸಮುದಾಯದ ಹಬ್ಬ, ಜಾತ್ರೆ, ಮೆರವಣಿಗೆಗಳಲ್ಲಿ ಇವರು ಮೊದಲ ಸಾಲಿನಲ್ಲಿ ನಿಂತು ಆಶೀರ್ವಾದ ಮಾಡುವರು. ಜೋಗಪ್ಪ ಸಾಮಾಜಿಕವಾಗಿ ಶ್ರೇಷ್ಠ ವ್ಯಕ್ತಿಯಾಗಿದ್ದು ಬೇರೆಯವರು ಎಂಜಲು ತಿನ್ನುವುದಿಲ್ಲ. ಪ್ರತ್ಯೇಕ ತಟ್ಟೆಯಲ್ಲಿ ಊಟಮಾಡುತ್ತಾರೆ. ಇಂಥ ಅನೇಕ ಜೋಗಪ್ಪಗಳ ನೇಮಕ–ನಿಯಮಗಳ ಪಾಲನೆಗೆ ಆದಿ ಚುಂಚನಗಿರಿಯಿಂದ ಅನುಭವಿಯಾದ ವ್ಯಕ್ತಿ, ಚೂರುದಾರ'ನಿಂದ ವಿಧಿ–ನಿಯಮಗಳು ನಡೆಯುತ್ತವೆ. ಚೂರುದಾರನ ಸೇವಕನಿಗೆ ಕೊಟವಾಳಿ ಎನ್ನುವರು. ಇವನು ಜೋಗಪ್ಪ ಭಕ್ತರಿಂದ ಸಂಗ್ರಹಿಸಿದ ಕಾಣಿಕೆಯನ್ನು ಚೂರುದಾರ ಇಟ್ಟುಕೊಳ್ಳುತ್ತಾನೆ. ಜೋಗಪ್ಪ ನಿಧನವಾದಾಗ ಅವನ ಕಿವಿಯಲ್ಲಿನ ಕಾಮಾಕ್ಷಿ (ಒಲೆ–ಉಂಗುರ)ಗಳನ್ನು ಶವವನ್ನು ಗುಂಡಿಯಲ್ಲಿ ಹೂಳುವರು. ಸತ್ತ ವ್ಯಕ್ತಿಯ ೧೧ನೇ ದಿವಸದಲ್ಲಿ ದಿವಸ–ತಿಥಿ ಮಾಡುತ್ತಾರೆ. ನಂತರ

Scanned with OKEN Scanner

ಸಮಾಧಿ ಮೇಲೆ ಚಿಕ್ಕ ಮಂಟಪ ನಿರ್ಮಿಸುವರು. ಜೋಗಿ ಜೊತೆ ಭಕ್ತರು ಕಾಮನಹುಣ್ಣಿಮೆಯನ್ನು ಚುಂಚನಗಿರಿಗೆ ಯಾತ್ರೆ ಹೋಗಿ ಭುಕ್ತಿಸೇವೆ ಅಂದರೆ ಬಾಡೂಟ. ಭಂಟರ ಸೇವೆ ಎಂಬ ಸಾಮೂಹಿಕ ಬಾಡೂಟ ಮಾಡಲು ಹರಕೆ ಹೋರುತ್ತಾರೆ. ಈ ಸಂದರ್ಭದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ.

ಇತ್ತೀಚಿನ ಕೆಲವು ಬರಹಗಳು 'ಜೋಗಪ್ಪ'ನ ಹೆಸರಿನಲ್ಲಿ ಪ್ರಕಟವಾಗುತ್ತಿರುವುದು ಸಂತೋಷ. ಕುಂ. ವೀರಭದ್ರಪ್ಪನವರು ತಮ್ಮ ಹೊಸ ಕಾದಂಬರಿಯನ್ನು (೨೦೨೨) ಪ್ರಕಟಿಸಿದ್ದಾರೆ. ಅದರ ಶೀರ್ಷಿಕೆ 'ಎಲ್ಲೋ ಜೋಗಪ್ಪ ನಿನ್ನ ಅರಮನೆ' ಎಂಬುದಾಗಿದೆ. ೧೯೯೦ರ ದಶಕದಿಂದ ಇಂದಿನವರೆಗೆ ಕೆಲವು ಲೇಖಕರು ಈ ಬಗ್ಗೆ ಚಿಂತಿಸಿದ್ದಾರೆ. 'ಊರೂರು ಮುದ್ದೆ ಕಾಣೋ' ಜೋಗಪ್ಪ ಗುಡಿಯೊಳಗೆ ನಿದ್ದೆ ಕಾಣೋ ಎಂಬ ಲೇಖನ (೨-೭-೧೯೯೭ ಸಂಯುಕ್ತ ಕರ್ನಾಟಕ) ಮನಮಿಡಿಯುವಂತಹದ್ದಾಗಿದೆ.

ಜೋಗ-ಜೋಗಿ ಹೆಸರಿನ ಸ್ಥಳನಾಮಗಳು

ಸಂಖ್ಯೆ	ಗ್ರಾಮದ ಹೆಸರು	ತಾಲೂಕು	ಜಿಲ್ಲೆ
೧	ಜೋಗೂರು	ಕಲಬುರ್ಗಿ	ಕಲಬುರ್ಗಿ
೨	ಜೋಗುಂದ ಭಾವಿ	ಸುರಪುರ	ಯಾದಗಿರಿ
೩	ಜೋಜನಾ	ಔರಾದ	ಬೀದರ್
೪	ಜಾನಪುರ	ಬಸವ ಕಲ್ಯಾಣ	ಬೀದರ್
೫	ಜೋಳದ ಬಕಾ	ಭಾಲ್ಕಿ	ಬೀದರ್
೬	ಜಲ ಸಂಗವಿ (ಜಲಸಿಂಗಿ)	ಹುಮಾನ್‌ಬಾದ್	ಬೀದರ್
೭	ಜಗರಕಲ್	ರಾಯಚೂರು	ರಾಯಚೂರು
೮	ಜೆಂಗಿರಾಮಪುರ	ಲಿಂಗಸೂಗೂರು	ರಾಯಚೂರು
೯	ಜೋಗಲದಿನ್ನಿ	ಸಿಂಧನೂರು	ರಾಯಚೂರು
೧೦	ಜಾಲಿಹಾಳ	ಕುಷ್ಟಗಿ	ಕೊಪ್ಪಳ
೧೧	ಜಾಲಿಹುಡಾ	ಗಂಗಾವತಿ	ಕೊಪ್ಪಳ
೧೨	ಜೂಲಕಟ್ಟಿ	ಯಲಬುರ್ಗಾ	ಕೊಪ್ಪಳ
೧೩	ಜಾಲಹಳ್ಳಿ	ದೇವದುರ್ಗ	ರಾಯಚೂರು
೧೪	ಜಾಡಲದಿನ್ನಿ	ದೇವದುರ್ಗ	ರಾಯಚೂರು
೧೫	ಜೋಳದ ಹೆಡಗಿ	ದೇವದುರ್ಗ	ರಾಯಚೂರು
೧೬	ಜೂಕೂರು	ಮಾನ್ವಿ	ರಾಯಚೂರು
೧೭	ಜೋಳದ ರಾಶಿ	ಮಾನ್ವಿ	ರಾಯಚೂರು
೧೮	ಜೋಗ-ಜೋಡಿಬೊಮ್ಮನಹಳ್ಳಿ	ಸಂಡೂರು	ಬಳ್ಳಾರಿ
೧೯	ಜೋಡಿಕರಿನಾಯಕನಹಳ್ಳಿ	ಸಂಡೂರು	ಬಳ್ಳಾರಿ

Scanned with OKEN Scanner

೨೦	ಜೋಳದ ರಾಶಿ	ಬಳ್ಳಾರಿ	ಬಳ್ಳಾರಿ
೨೧	ಜೀರಿಗನೂರು	ಹೊಸಪೇಟೆ	ವಿಜಯನಗರ
೨೨	ಚಿಕ್ಕ ಜೋಗಿಹಳ್ಳಿ	ಕೂಡ್ಲಿಗಿ	ವಿಜಯನಗರ
೨೩	ನುಂಕನಹಳ್ಳಿ	ಕೂಡ್ಲಿಗಿ	ವಿಜಯನಗರ
೨೪	ಸಿದ್ದಾಪುರ (ದೊಂಬರ)	ಕೂಡ್ಲಿಗಿ	ವಿಜಯನಗರ
೨೫	ಬಿಷ್ಪಹಳ್ಳಿ (ಜೋಗಪ್ಪ)	ಕೂಡ್ಲಿಗಿ	ವಿಜಯನಗರ
೨೬	ಜೋಳದ ಕೂಡ್ಲಿಗಿ	ಕೊಟ್ಟೂರು	ವಿಜಯನಗರ
೨೭	ಚಿಕ್ಕ ಜಾಯಿಗನೂರು	ಹೊಸಪೇಟೆ	ವಿಜಯನಗರ
೨೮	ಜಂಬುನಾಥಹಳ್ಳಿ ಜೋಳದರಾಶಿ ಗುಡ್ಡ	ಹೊಸಪೇಟೆ	ವಿಜಯನಗರ
೨೯	ಜೌಕು	ಹೊಸಪೇಟೆ	ವಿಜಯನಗರ
೩೦	ಹಿರೇ ಜಾಯಿಗನೂರು	ಹೊಸಪೇಟೆ	ವಿಜಯನಗರ
೩೧	ಜೋಯಿಸ ಲಿಂಗಾಪುರ	ಹರಪನಹಳ್ಳಿ	ವಿಜಯನಗರ
೩೨	ಜಂಬಾಳ ಮಲ್ಕಿ	ಮೊಳಕಾಲ್ಮುರು	ಚಿತ್ರದುರ್ಗ
೩೩	ಭೈರಾಪುರ	ಮೊಳಕಾಲ್ಮುರು	ಚಿತ್ರದುರ್ಗ
೩೪	ಮಠದ ಜೋಗಿಹಳ್ಳಿ	ಮೊಳಕಾಲ್ಮುರು	ಚಿತ್ರದುರ್ಗ
೩೫	ಯರಪೋತ ಜೋಗಿಹಳ್ಳಿ	ಮೊಳಕಾಲ್ಮುರು	ಚಿತ್ರದುರ್ಗ
೩೬	ಯರಜನ್ನೇನಹಳ್ಳಿ	ಮೊಳಕಾಲ್ಮುರು	ಚಿತ್ರದುರ್ಗ
೩೭	ಸಿದ್ಧಾಪುರ	ಮೊಳಕಾಲ್ಮುರು	ಚಿತ್ರದುರ್ಗ
೩೮	ಜವಗೊಂಡನಹಳ್ಳಿ	ಹಿರಿಯೂರು	ಚಿತ್ರದುರ್ಗ
೩೯	ಜೋಡಿಪುರ	ಹಿರಿಯೂರು	
೪೦	ಜೋಗಮ್ಮನಹಳ್ಳಿ	ಹೊಸದುರ್ಗ	
೪೧	ಜೋಗಿಹಳ್ಳಿ	ಹೊಸದುರ್ಗ	
೪೨	ಕಣಿವೆ ಜೋಗಿಹಳ್ಳಿ	ಹೊಳಲ್ಕೆರೆ	
೪೩	ಜಕ್ಕನಹಳ್ಳಿ	ಹೊಳಲ್ಕೆರೆ	
೪೪	ಜೋಗೇರ ಹನುಮಂತನಹಳ್ಳಿ	ಹೊಳಲ್ಕೆರೆ	
೪೫	ಜೋಗೇರಹಳ್ಳಿ	ಹೊಳಲ್ಕೆರೆ	
೪೬	ಜೋಗಿಮಟ್ಟಿ	ಚಿತ್ರದುರ್ಗ	
೪೭	ಜೋಡಿಬ್ಯಾಡದ ಕೆರೆ	ಕುಣಿಗಲ್	ತುಮಕೂರು
೪೮	ಜೋಡಿ ಮಲ್ಲನಾಯಕನಹಳ್ಳಿ	ಕುಣಿಗಲ್	
೪೯	ಜುಂಜಮಾರನಹಳ್ಳಿ	ಕೊರಟಗೆರೆ	

Scanned with OKEN Scanner

		ಕೊರಟಗೆರೆ	
೫೦	ಜೋನಿಗರಹಳ್ಳಿ	ಗುಬ್ಬಿ	
೫೧	ಜೋಗಿಹಳ್ಳಿ	ಗುಬ್ಬಿ	
೫೨	ಜೋಗಿಹಳ್ಳಿ	ಗುಬ್ಬಿ	
೫೩	ಜೋಗಿಹಳ್ಳಿ	ಚಿಕ್ಕನಾಯಕನಹಳ್ಳಿ	
೫೪	ಜೋಗಿಹಳ್ಳಿ	ತುಮಕೂರು	
೫೫	ಜಕ್ಕನಹಳ್ಳಿ		
೫೬	ಜನಪನಹಳ್ಳಿ	ಪಾವಗಡ	
೫೭	ಜಡೇನಹಳ್ಳಿ		
೫೮	ಜಾಜುರಾಯನಹಳ್ಳಿ		
೫೯	ಜೌಲೋಡು	ಮಧುಗಿರಿ	
೬೦	ಕತ್ತಿ ಜೋಗಿಪಾಳ್ಯ		
೬೧	ಜೋಗಿಹಳ್ಳಿ	ಗೌರಿಬಿದನೂರು	ಚಿಕ್ಕಬಳ್ಳಾಪುರ
೬೨	ಜೋಗಿರೆಡ್ಡಿಹಳ್ಳಿ		
೬೩	ಜೋಡಿಗುರ್ರಪ್ಪನಹಳ್ಳಿ	ಚಿಕ್ಕಬಳ್ಳಾಪುರ	
೬೪	ಜೊನ್ನಲಕುಂಟೆ		
೬೫	ಜೋಳದ ರಾಶಿ		
೬೬	ಜೋಡಿಪುರ	ಮಾಲೂರು	ಕೋಲಾರ
೬೭	ಜೋಗುಲಕಾಷ್ಠಿ	ಮುಳಬಾಗಿಲು	
೬೮	ಜೋಕುಂಟೆ	ಶ್ರೀನಿವಾಸಪುರ	
೬೯	ಜೋಗಣ್ಣನ ಕೆರೆ	ಮೂಡಿಗೆರೆ	ಚಿಕ್ಕಮಗಳೂರು
೭೦	ಜಾವೂರು	ತರೀಕೆರೆ	
೭೧	ಜೋಗಯಲ್ಲಾಪುರ	ಧಾರವಾಡ	ಧಾರವಾಡ
೭೨	ಜೋಗಿಹಳ್ಳಿ	ಹಿರೆಕೆರೂರು	ಹಾವೇರಿ
೭೩	ಜೋಗಿಹಟ್ಟಿ	ಚಳ್ಳಕೆರೆ	ಚಿತ್ರದುರ್ಗ
೭೪	ಜಾಜೂರು		
೭೫	ರಾಮಜೋಗಿಹಳ್ಳಿ		
೭೬	ಜಟ್ಲಹಳ್ಳಿ	ಚಿತ್ರದುರ್ಗ	
೭೭	ಜಮ್ಮೇನಹಳ್ಳಿ		
೭೮	ಜಾನಕೊಂಡ		
೭೯	ಜಾಲಿಕಟ್ಟೆ		
೮೦	ಜೋಡಿ ಚಿಕ್ಕೇನಹಳ್ಳಿ	ಜವಗೊಂಡನಹಳ್ಳಿ	ಹಿರಿಯೂರು

Scanned with OKEN Scanner

೮೧	ಜಗಳೂರು	ಜಗಳೂರು	ದಾವಣಗೆರೆ
೮೨	ಜಯರಾಮನಹಳ್ಳಿ		
೮೩	ಜಾಡನಕಟ್ಟೆ		
೮೪	ಜ್ಯೋತಿಪುರ		
೮೫	ಜಡಗಾನಹಳ್ಳಿ	ದಾವಣಗೆರೆ	
೮೬	ಜಮ್ಮಾಪುರ		
೮೭	ಜಂಪೇನಹಳ್ಳಿ		
೮೮	ಜೋಳದಹಾಳು	ಚನ್ನಗಿರಿ	
೮೯	ಜಕ್ಕಲಿ		
೯೦	ಜಿಗಳ	ಆನೇಕಲ್	ಬೆಂಗಳೂರು
೯೧	ಜಂತಗೊಂಡನಹಳ್ಳಿ		
೯೨	ಜಕ್ಕ ಸಂದ್ರ	ಕನಕಪುರ	
೯೩	ಜಗದಾಪುರ	ಚನ್ನಪಟ್ಟಣ	
೯೪	ಜೋಗಹಳ್ಳಿ	ದೇವನಹಳ್ಳಿ	
೯೫	ಜೋಯಿಸ ಅಗ್ರಹಾರ	ದೊಡ್ಡಬಳ್ಳಾಪುರ	
೯೬	ಜೋಳಿಗೆರೆ–ಜಾಲಿಗೆರೆ		
೯೭	ಜಾಜೂರು	ನೆಲಮಂಗಲ	
೯೮	ಜಕ್ಕೂರು	ಬೆಂಗಳೂರು	ಉತ್ತರ ತಾ॥
೯೯	ಜಾಲಹಳ್ಳಿ		
೧೦೦	ಜರಗನಹಳ್ಳಿ	ಬೆಂಗಳೂರು	ದಕ್ಷಿಣ ತಾ॥
೧೦೧	ಜೋಗೇರಹಳ್ಳಿ	ಮಾಗಡಿ	
೧೦೨	ಜುಟ್ಟನಹಳ್ಳಿ		
೧೦೩	ಜಡೆಗನಹಳ್ಳಿ	ಹೊಸಕೋಟೆ	
೧೦೪	ಜಾತನಾಯಕನಹಳ್ಳಿ	ಕೃಷ್ಣರಾಜಪೇಟೆ	ಮಂಡ್ಯ
೧೦೫	ಜಾಡನೂರು		
೧೦೬	ಜೋಗಿಪುರ	ನಾಗಮಂಗಲ	
೧೦೭	ಜಿನ್ನೇನಹಳ್ಳಿ		
೧೦೮	ಜವರನಹಳ್ಳಿ	ನಾಗಮಂಗಲ	ಮಂಡ್ಯ
೧೦೯	ಜೂಗನಹಳ್ಳಿ	ಮಳವಳ್ಳಿ	
೧೧೦	ಜೋಗಿಪುರ		
೧೧೧	ಜಕ್ಕನಕುಪ್ಪೆ	ಶ್ರೀರಂಗಪಟ್ಟಣ	

Scanned with OKEN Scanner

೧೧೨ ಜಕ್ಕನಹಳ್ಳಿ — ಕೆ.ಆರ್.ನಗರ — ಮೈಸೂರು
೧೧೩ ಜಾಕಹಳ್ಳಿ — ಕೊಳ್ಳೇಗಾಲ
೧೧೪ ಜಕ್ಕನಹಳ್ಳಿ
೧೧೫ ಜಕ್ಕಳ್ಳಿ — ಗುಂಡ್ಲುಪೇಟೆ
೧೧೬ ಜಕ್ಕಹಳ್ಳಿ — ಚಾಮರಾಜನಗರ — ಚಾಮರಾಜನಗರ
೧೧೭ ಜಾಡಹಳ್ಳಿ
೧೧೮ ಜನ್ನೂರು
೧೧೯ ಜ್ಯೋತಿ ಗೌಡನಪುರ — ಟಿ. ನರಸೀಪುರ
೧೨೦ ಜೋಡಿ ಹೊನ್ನೂರು — ನಂಜನಗೂಡು — ಮೈಸೂರು
೧೨೧ ಜಿಂಕಹಳ್ಳಿ
೧೨೨ ಜೋಡಿಹರಿಹರಪುರ — ಪಿರಿಯಾಪಟ್ಟಣ
೧೨೩ ಜೋಗನಹಳ್ಳಿ — ಮೈಸೂರು — ಮೈಸೂರು
೧೨೪ ಜೋಗನಹಳ್ಳಿ
೧೨೫ ಜಾಗನಕೋಟೆ — ಹೆಗ್ಗಡೆ ದೇವನಕೋಟೆ
೧೨೬ ಜೊಂಪನಹಳ್ಳಿ
೧೨೭ ಜೋಗಿ ಹೊಸಹಳ್ಳಿ — ಅರಕಲಗೂಡು — ಹಾಸನ
೧೨೮ ಜೋಗಿ ಕೆಂಚನಹಳ್ಳಿ
೧೨೯ ಜವನಹಳ್ಳಿ — ಅರಸೀಕೆರೆ
೧೩೦ ಜಾಜೂರು
೧೩೧ ಜಾಡಗಟ್ಟ–ಜಾವಗಲ್
೧೩೨ ಜೀರನಹಳ್ಳಿ–ಜೀನಕೆರೆಹಳ್ಳಿ
೧೩೩ ಜೋಗನಹಳ್ಳಿ
೧೩೪ ಜೋಬಿಗೇನಹಳ್ಳಿ
೧೩೫ ಜನಗರವಳ್ಳಿ — ಆಲೂರು
೧೩೬ ಜೋಡಿಕುಪ್ಪೆ
೧೩೭ ಜಕ್ಕೆನಹಳ್ಳಿ — ಚನ್ನರಾಯಪಟ್ಟಣ
೧೩೮ ಜೋಗಿಪುರ
೧೩೯ ಜಗಬೋರನಹಳ್ಳಿ — ಬೇಲೂರು
೧೪೦ ಜೋಗಿಹಳ್ಳಿ–೧
೧೪೧ ಜೋಗಿಹಳ್ಳಿ–೨
೧೪೨ ಜಾನಕೆರೆ–ಜೋಡಿಕಿರುವಾಲೆ — ಮಂಜರಾಬಾದ್

Scanned with OKEN Scanner

೧೪೩ ಜೋಡಿ ಕೆಳವಳ್ಳಿ ಮಂಜರಾಬಾದ್ ಹಾಸನ
೧೪೪ ಜೋಡಿ ಕೃಷ್ಣಾಪುರ ಹಾಸನ
೧೪೫ ಜೋಡಿ ಕಾಮನಹಳ್ಳಿ
೧೪೬ ಜಕ್ಕನಹಳ್ಳಿ–ಜಡ್ನಹಳ್ಳಿ ಹೊಳೆನರಸೀಪುರ
೧೪೭ ಜೋಗೂರು ತೀರ್ಥಹಳ್ಳಿ ಶಿವಮೊಗ್ಗ
೧೪೮ ಜೋಗಿಕೊಪ್ಪ
೧೪೯ ಜಂಬರಗಟ್ಟ ಭದ್ರಾವತಿ
೧೫೦ ಜನ್ನಾಪುರ
೧೫೧ ಜಕ್ಕೇನಕೊಪ್ಪ ಶಿಕಾರಿಪುರ
೧೫೨ ಜಾವಳ್ಳಿ ಶಿವಮೊಗ್ಗ
೧೫೩ ಜಂಬಗರು ಸಾಗರ
೧೫೪ ಜಂಬಾನಿ+ಜೋಗ
೧೫೫ ಜಂಬೇಕೊಪ್ಪ
೧೫೬ ಜೋಗಿಹಳ್ಳಿ ಸೊರಬ
೧೫೭ ಜೋಗ ಹೊನ್ನಾಳಿ
೧೫೮ ಜಂಬಳ್ಳಿ–ಜಾಲ–ಜೇನಿ ಹೊಸನಗರ
೧೫೯ ಜೂಗ ಅಂಕೋಲಾ ಉತ್ತರ ಕನ್ನಡ
೧೬೦ ಜೋಗದ ಮನೆ ಯಲ್ಲಾಪುರ
೧೬೧ ಜೋಗೇಪಾಳ
೧೬೨ ಜೋಯಿಡಾ ಸೂಪಾ
೧೬೩ ಜೋಗನಕೊಪ್ಪ ಹಳಿಯಾಳ
೧೬೪ ಜುಗುಳ ಅಥಣಿ ಬೆಳಗಾವಿ
೧೬೫ ಜಾಂಬೋಡಿ ಖಾನಾಪುರ
೧೬೬ ಜಮ್ಮಾಳ ಗೋಕಾಕ
೧೬೭ ಜಾಗನೂರು ಚಿಕ್ಕೋಡಿ
೧೬೮ ಜಮನಾಯಕನಹಟ್ಟಿ ಬೆಳಗಾವಿ
೧೬೯ ಜಾವ್ವೆನಹಟ್ಟಿ
೧೭೦ ಜಕ್ಕನಾಯಕನಕೊಪ್ಪ ಬೈಲಹೊಂಗಲ
೧೭೧ ಜಾಲಕೊಪ್ಪ
೧೭೨ ಜಾಬಾಪುರ ಹುಕ್ಕೇರಿ
೧೭೩ ಜೀರನಹೊಳೆ

Scanned with OKEN Scanner

	ಜಮಖಂಡಿ	ಬಿಜಾಪುರ
೧೭೪ ಜಕಳೂರು		
೧೭೫ ಜಗದಾಳ		
೧೭೬ ಜಮಖಂಡಿ	ಬಾದಾಮಿ	ಬಾಗಲಕೋಟಿ
೧೭೭ ಜನಗವಾಡ	ಬಾದಾಮಿ	ಬಾಗಲಕೋಟಿ
೧೭೮ ಜಮ್ಮನಕಟ್ಟೆ		
೧೭೯ ಜಾಲಿಹಾಳ	ಬಾಗಲಕೋಟೆ	
೧೮೦ ಜಡ್ರಾಮಕುಂಟ	ಮುದ್ದೆಬಿಹಾಳ	
೧೮೧ ಜೆತ್ತಗಿ		
೧೮೨ ಜೈನಾಪುರ	ಮುಧೋಳ	ಬಿಜಾಪುರ
೧೮೩ ಜನ್ನೂರು		

ನಾಥ ಪಂಥ ಹಾಗೂ ಜೋಗಿ ಸಂಪ್ರದಾಯ

ನಾಥ ಪುರಾತನ ಯೋಗ ಪಂಥ. ವೈದಿಕ, ಬೌದ್ಧ, ಜೈನ, ಶೈವ, ವೈಷ್ಣವ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಬಗ್ಗೆ ಈಗಾಗಲೇ ಚರ್ಚೆಗಳಾಗಿವೆ. ಹಾಗೆಯೇ ಆನಂತರ ಬಂದ ಇಸ್ಲಾಂ, ಕ್ರಿಶ್ಚಿಯನ್, ಸಿಖ್ ಮೊದಲಾದ ಧರ್ಮಗಳ ಬಗ್ಗೆ ಚಿಂತಿಸಿದ್ದು ಗಮನಾರ್ಹ.

ನಾಥ ಎಂದರೆ ರಕ್ಷಕ, ಆಶ್ರಯದಾತ ಎಂದು ಅಥರ್ವವೇದ ಹಾಗೂ ತೈತ್ತರೇಯ ಬ್ರಾಹ್ಮಣದಲ್ಲಿದೆ. 'ನಕಾರೋ ನಾದಿರೂಪ : ಥಕಾರ : ಸ್ಥಾಪ್ಯತೇ : ಸದಾ : ಭೂವನತ್ರಯಮೋವೈಕ : ಶ್ರೀ ಗೋರಕ್ಷನ ಮೋಸ್ತುತೆ : ನಾ ಎಂಬುದು ಅನಾದಿ, ಥ=ತ್ರಿಲೋಕಕ್ಕೆ ಕಾರಣ ಕರ್ತ್ಯವೇ ನಾಥ ಎಂದು ರಾಜಗುಹ್ಯ ಗ್ರಂಥದಲ್ಲಿ ಉಲ್ಲೇಖಿತವಾಗಿದೆ. ಮುಂದುವರೆದು ಗುರು, ಆಶ್ರಯದಾತ, ರಕ್ಷಕ, ಮಹಾದೇವನೆಂದು ತಿಳಿಸಿದ್ದಾರೆ.

ಕಾಡು, ವನ, ಬೆಟ್ಟ, ಗುಡ್ಡಗಳಲ್ಲಿ ಹೆಚ್ಚಾಗಿ ನಾಥರು ಯೋಗ, ತಪಸ್ಸು ಮಾಡುತ್ತಿದ್ದರು. ಕಾಡಿನ ನಡುವೆ ವನಸ್ಪತಿ, ರಸಾಯನ ವಿದ್ಯೆಯನ್ನು ಕಲಿತು ಅಮರತ್ವ ಪಡೆಯುವ ಯತ್ನ ನಡೆಸುತ್ತಿದ್ದರು. ಪತಂಜಲಿಯ ಕೃತಿಯಲ್ಲಿ ಈ ಬಗ್ಗೆ ಮಾಹಿತಿಯಿದೆ.

ಕರ್ನಾಟಕದಲ್ಲಿ ನಾಥ ಸಂಪ್ರದಾಯವಿದ್ದರೂ, ದಟ್ಟವಾಗಿರುವುದು ಬಯಲು ಸೀಮೆ ಮತ್ತು ಕರಾವಳಿಯಲ್ಲಿ : ಚಿತ್ರದುರ್ಗ, ತುಮಕೂರು, ಹಾಸನ, ಮಂಡ್ಯ, ಬೆಳಗಾವಿ ಜಿಲ್ಲೆಗಳಲ್ಲಿ ನೋಡಬಹುದು. ಹಾಗೆಯೇ ಕರಾವಳಿ ಕರ್ನಾಟಕದ ಮಂಗಳೂರು ನಗರದ ಕದ್ರಿ, ವಿಟ್ಲ, ಕುಂದಾಪುರ, ಎಡಮೊಗ್ಗೆಯ ಹಲವರಿ, ಕಾರ್ಕಳ ತಾಲೂಕಿನ ಸೂಡ ಮೊದಲಾದೆಡೆಗಳಲ್ಲಿ ನಾಥ ಪಂಥಕ್ಕೆ ಸೇರಿದ ಜೋಗಿಗಳಿದ್ದರು.

ನಾಥ ಅಥವಾ ಜೋಗಿ ಸಂಪ್ರದಾಯ ಉತ್ತರ ಭಾರತದಲ್ಲಿ ಹೆಚ್ಚು ಪ್ರಚಲಿತ. ೧೧ನೇ ಶಾಳದ ರತನಪುರದ ಮಠದಿಂದ ಹೊರಡುವ ಝುಂಡಿ ೨. ಕಾಠ್ಮಂಡುವಿನ

Scanned with OKEN Scanner

ಭಗಸ್ಥಲಿನಿಂದ ಹೊರಡುವ ಝಂಡಿ. ೩. ತ್ರ್ಯಂಬಕೇಶ್ವರದಿಂದ ಕದರಿಗೆ ಹೊರಡುವ ಝಂಡಿ ಎಂದು ತಿಳಿಸಲಾಗಿದೆ (ನೋಡಿ: ತುಳು ನಾಡಿನಲ್ಲಿ ನಾಥ ಪಂಥದ ವಿಕಾಸ ಮತ್ತು ಜೋಗಿ ಸಮುದಾಯದ ಹಿನ್ನೆಲೆ–ಒಂದು ಅಧ್ಯಯನ, ೨೦೧೬, ಪು ೨ ಎಂ.ಫಿಲ್ ಪ್ರಬಂಧ).

ಮತ್ಸ್ಯೇಂದ್ರನಾಥನ ಶಿಷ್ಯ ಗೋರಕನಾಥನೇ ನಾಥಪಂಥದ ಮೂಲ ಪುರುಷ ಎನ್ನಲಾಗಿದೆ. ಇವನು ಹನ್ನೆರಡು ಶಾಖೆಗಳಾಗಿ ಮಾಡಿದ್ದು ನಾಥ ಸಂಪ್ರದಾಯ ಪ್ರಬಲವಾಗಿ ಬೆಳೆಯಲು ಕಾರಣವಾಯಿತು. ಸತ್ಯನಾಥ್, ಧರ್ಮನಾಥ್, ರಾಮನಾಥ್, ನಕೇಶ್ವರಿ, ಕನಡಿ, ಕಪಲಾನಿ, ಬೈರಾಗ್, ಮಾನ್‌ನಾಥ್, ಆಯೀಪಂಥ್, ಪಾಗಲ್‌ಪಂಥ್, ಧ್ವಜಾ ಪಂಥ್ ಮತ್ತು ಗಂಗಾನಾಥ್. ಭಾರತದ ವಿವಿಧ ಸ್ಥಳದಲ್ಲಿ ಈ ಹನ್ನೆರಡು ಶಾಖೆಗಳಿದ್ದವು. ಒಂಬತ್ತು ಜನ ನಾಥ ಸಂಪ್ರದಾಯದಲ್ಲಿರುವ ಗೋರಕ್ಷನಾಥ, ಜಾಲೆಂದರನಾಥ, ನಾಗಾರ್ಜುನ, ಸಹಸ್ರಾರ್ಜುನ, ದತ್ತಾತ್ರೇಯ, ದೇವದತ್ತ, ಜಡಭರತ, ಆದಿನಾಥ ಮತ್ತು ಮತ್ಸೇಂದ್ರನಾಥ. ಯೋಗಿ ಸಂಪ್ರದಾಯದಲ್ಲಿ ಒಂಬತ್ತು ಜನ ನವನಾಥರು ಅವತಾರ ಎತ್ತುತ್ತಾರೆ. ಅವರುಗಳೆಂದರೆ: ಕವಿ ನಾರಾಯಣ–ಮತ್ಸ್ಯೇಂದ್ರನಾಥ, ಕರಭಾಜನ ನಾರಾಯಣ–ಗಾಹನಿನಾಥ, ಅಂತರಿಕ್ಷ ನಾರಾಯಣ–ಜಾಲಂಧರನಾಥ, ಪ್ರಬುದ್ಧ ನಾರಾಯಣ–ಕರಣಿಪಾನಾಥ, ಅವಿರ್ಹೋತ್ರ ನಾರಾಯಣ–ನಾಗನಾಥ, ಪಿಪ್ಪಲಾಯನ ನಾರಾಯಣ–ಚರ್ಪಟನಾಥ, ಚಮಸ ನಾರಾಯಣ–ರೇವನಾಥ ಹರಿನಾರಾಯಣ–ಭರ್ತೃನಾಥ ಮತ್ತು ದ್ರವಿಲ ನಾರಾಯಣ ಗೋಪಿಚಂದ್ರ ಎಂದು ತಿಳಿದು ಬರುತ್ತದೆ. ಸುಧಾಕರ ಚಂದ್ರಿಕಾದಲ್ಲಿ ಏಕನಾಥ, ಆದಿನಾಥ, ಮತ್ಸೆಂದ್ರನಾಥ, ಉದಯನಾಥ, ದಂಡನಾಥ, ಸತ್ಯನಾಥ್, ಸಂತೋಷನಾಥ್, ಕೋರ್ಮನಾಥ, ಜಾಲಂಧರನಾಥರು ಮಹಾರಾಷ್ಟ್ರೀಯ ನವನಾಥ ಪರಂಪರೆಯವರು.

ಚುಂಚನಗಿರಿಯಲ್ಲಿ ನವನಾಥರು ದಿವ್ಯದರ್ಶನ ಹೊಂದಿದ್ದರು. ಈಶ್ವರನ ಕಪೋಲದಿಂದ ಸಿದ್ಧಯೋಗಿ ಅವತಾರ ಎತ್ತಿದ, ಶಿವನು ತನ್ನ ಆವಾಸಸ್ಥಾನ ಬಿಟ್ಟು ದ್ವಾದಶ ಶರೀರದೊಳಗೆ ಪೀಠಸ್ಥನಾದ. ಶಿವನ ಕಪಾಲದಿಂದ ಹುಟ್ಟಿದ ಸಿದ್ಧಯೋಗಿಯ ಪಂಥವೇ ಕಾಪಾಲ ಮತ ಎಂದಾಯಿತು. ಈ ಬಗ್ಗೆ ಐತಿಹ್ಯಗಳಿವೆ.

ದೀಕ್ಷಾ ಪಡೆದ ನಾಥಪಂಥದಲ್ಲಿ ಗೃಹಸ್ಥರು, ಅವಘಡ್ ಹಾಗೂ ದರ್ಶಿನಿ ಯೋಗಿಗಳು ಕಂಡುಬರುತ್ತಾರೆ. ಬಾಲಕರು ಪ್ರೌಢವಾಸ್ಥೆ (೧೨ವರ್ಷ) ಬರುವಾಗ ಯಜ್ಞೋಪವೀತ ಧಾರಣೆ ಮಾಡಿಕೊಳ್ಳುವರು. ಕೇಶ ಮುಂಡನ, ಭಸ್ಮೀ ದೀಕ್ಷೆಗಳನ್ನು, ಪಂಚಮ ದೀಕ್ಷೆಯ ಕರ್ಣಕುಂಡಲ ಧಾರಣೆ ದೀಕ್ಷೆ ಪಡೆಯುತ್ತಿದ್ದರು. ಸರ್ವಸಂಗಪರಿತ್ಯಾಗಿಗಳೆಂದರೆ ಅವಘಡ್ ದೀಕ್ಷೆ ಪಡೆದವರು. ಮಠದಿಂದ ಇನ್ನೊಂದು ಮಠಕ್ಕೆ ಇವರು ಸಂಚರಿಸುತ್ತಿದ್ದರು. ಶಿವನು ಪಾರ್ವತಿಗೆ ಉಪದೇಶದ ಯೋಗಮಾರ್ಗವೇ ಜೋಗಿಮತ.

Scanned with OKEN Scanner

ಜೋಗಿ ಸಂಪ್ರದಾಯ

ಡಾ. ಎಂ.ಎಂ ಕಲಬುರ್ಗಿ ಅವರು ಸಂಪಾದಿಸಿರುವ 'ಕರ್ನಾಟಕ ಕೈಫಿಯತ್ತುಗಳು' ಕೃತಿಯಲ್ಲಿ ಜೊಗಾ, ಜೋಗಿಭಟ್ಟ, ಜೋಗಿಹಳ್ಳಿ, ಜೋಗಾರು, ಜೋಗೇರು ಮೊದಲಾದ ಪದಗಳ ಉಲ್ಲೇಖಗಳಿವೆ. ಹೊಸಪೇಟೆ ಹಾಗೂ ಸಂಡೂರು ತಾಲೂಕುಗಳಲ್ಲಿ ಜೊಗಾ ಎಂಬ ಗ್ರಾಮವಿದೆ. ವಡ್ಡುಗ್ರಾಮದಲ್ಲಿ ಪಾಪಿನಾಯಕನಹಳ್ಳಿ, ವಡ್ರಹಳ್ಳಿ, ಕಾಕುಬಾಳು, ವದಿಗೆರೆ, ಗಾದಿಗನೂರು, ಧರ್ಮಸಾಗರ, ಕೋಟಿಗನಹಾಳ ಮೊದಲಾದ ಗ್ರಾಮಗಳಲ್ಲಿ 'ಜೋಗ'ವು ಒಂದು. ಇಂದು ಸಂತನಿಂದ ಜೋಗದ ತಾತ ಎಂದು ಪ್ರಸಿದ್ಧ ಪಡೆಯಲಾಗಿದೆ (ಅದೇ ಪು. ೪೧೨-೧೩). ಕುಂಜಾರು ಕೈಫಿಯತ್ತಿನಲ್ಲಿ 'ಕುಂಜಾರ ಜೋಗಿಭಟ್ಟ' ಬರಕೊಟ್ಟ ಕೈಫಿಯತ್ತುನಲ್ಲಿ ಶ್ರೀರಾಮ, ರೇಣುಕಾದೇವಿ, ಪರಶುರಾಮ ಕಾರ್ತವೀರ್ಯಾರ್ಜುನ ಮೊದಲಾದ ವಿವರಗಳಿವೆ. ಮೈಸೂರು ಪ್ರದೇಶದ ಜೋಗಿಹಳ್ಳಿ ಅಗ್ರಹಾರದ ಬಗ್ಗೆ ವಿವರವಿದೆ. ದಕ್ಷಿಣಕನ್ನಡ ಗುಂಡಿಹೊಳೆ, ಸಿರೂರು ಜೋಗುರು ಎಂಬ ಶಾನುಭೋಗರ ವಿವರವಿದೆ. ಮರಾಠೆ ವಾಂಡ್ಲೆ ಕೈಫಿಯತ್ತಿನಲ್ಲಿ ಗೋಸಾಯಿಗಳು, ಜೋಗೇರು ಇದ್ದದ್ದು ಸ್ಪಷ್ಟ (ಅದೇ ಪು. ೫೯೨).

ಸ್ಥಳ ಮತ್ತು ವ್ಯಕ್ತನಾಮಗಳು

೧. ಜೋಗಿ ಬೋರಯ್ಯ-ಮ್ಯಾಸನಾಯಕರ ಗುಂಡೇತಲಾರು ಬೆಡಗಿನವರು ಪೂಜಾರಹಳ್ಳಿ ಸ್ವಂತ ಊರು. ಜೋಗಿ ದೇವರಿಗೆ ನಡೆದುಕೊಳ್ಳುತ್ತಾರೆ.(ನುಂಕಮಲೆ)

೨. ಜೋಗಪ್ಪ-ಜೋಗಯ್ಯ(ಎಂ.ಎನ್) ಜೋಗಯ್ಯ (ಎಂ.ಡಿ) ಕಮಲಾಪುರ

೩. ಜೋಗಿ-ಜೋಗೇಶ-ಚಿತ್ರದುರ್ಗದ ಸಿ.ಟಿ.ಎಸ್. ನಾಯಕರಮಗ ಇಂಜಿನಿಯರ್ ಆಗಿದ್ದರು.

೪. ಜಗಲೂರಯ್ಯ-ಜಗಲೂರಯ್ಯ-ಜಗ್ಗೇಶ-ಜಗದೀಶ, ನೇರ್ಲಹಳ್ಳಿ, ಇಂಗಳದಾಳು

೫. ಅಜಿತ್ ಜೋಗಿ-ಛತ್ತಿಸ್‌ಗಡ ಮೊದಲ ಮುಖ್ಯಮಂತ್ರಿ ಮತ್ತು ಜೋಗಿ ಸಮುದಾಯದ ಐಎಎಸ್ ಅಧಿಕಾರಿ ಆಗಿದ್ದವರು ಮೊದಲ ಉದಾಹರಣೆ ಯಾಗಿದೆ.

೬. ಯೋಗಿ ಆದಿತ್ಯನಾಥ-ಉತ್ತರ ಪ್ರದೇಶದ ಎರಡನೇ ಅವಧಿಗೆ ಮುಖ್ಯಮಂತ್ರಿ ಆಗಿರುವವರು.

ಕರ್ನಾಟಕ ರಾಜ್ಯ ಗ್ಯಾಸೆಟಿಯರ್‌ನಲ್ಲಿ (ಪು. ೩೬೮) ಜೋಗಿ ಬಗ್ಗೆ ವಿವರವಿದೆ. 'ಜೋಗಿಗಳು ತಮ್ಮನ್ನು ಜೋಗೇರ್, ದೊಡ್ಡ ಜೋಗಿ, ಸಣ್ಣ ಜೋಗಿ ಎಂದು ಕರೆಸಿಕೊಂಡಿರುವರು. ಗುಲಬರ್ಗಾ ಜಿಲ್ಲೆ ಹೈದರಾಬಾದ್ ಕರ್ನಾಟಕವನ್ನು ಹೊರತುಪಡಿಸಿ ಕರ್ನಾಟಕದ ಇತರೆಡೆಗಳಲ್ಲಿ ಇವರನ್ನು ಕಾಣಬಹುದು. ಇವರು ಧರ್ಮದ ಹೆಸರಿನಲ್ಲಿ ಭೈರಾಗಿ ಭಿಕ್ಷುಕರಾಗಿ ಅಲೆಯುವ ಜಾತಿಯವರು, ಇವರನ್ನು ಮಣಿಗಳನ್ನು ಮಾರುವ ಜೋಗಿಗಳು ಮತ್ತು ಹಂದಿಗಳನ್ನು ಸಾಕುವ ಜೋಗಿಗಳು(ಹಂದಿಜೋಗಿ) ಎಂದು

Scanned with OKEN Scanner

ಎರಡು ವರ್ಗಗಳಾಗಿ ಮಾಡಿದ್ದಾರೆ. ಇವರು ಹಾವಾಡಿಗರನ್ನು ಹೋಲುತ್ತಾರೆ. ಬಹುತೇಕ ಇವರು ಕೃಷಿ ಕೂಲಿಕಾರರಾಗಿ ದುಡಿಯುತ್ತಾರೆ. ಬೆಡಗು-ಗೋತ್ರಗಳ ಹೊಂದಾಣಿಕೆ ಮೂಲಕವೇ ವಿವಾಹಗಳು ಇವರಲ್ಲಿ ಜರುಗುತ್ತವೆ. ಪೆದ್ದುವಾಳ್ಳು, ಗಂಗಮ್ಮ, ಅಯ್ಯಪಾರು, ರುದ್ರಮ್ಮ, ಭವಾನಿ ಮತ್ತು ರೇಣುಕಾ ಮೊದಲಾದ ದೇವತೆಗಳನ್ನು ಪೂಜಿಸುತ್ತಾರೆ. ಜೋಗಿ ಸಮಾಜದಲ್ಲಿ ವಿವಾಹ ವಿಚ್ಛೇದನವಿದ್ದು, ವಿಧವಾ ವಿವಾಹವು ರೂಢಿಯಲ್ಲಿದೆ. ಇತರೆ ಜನಸಮುದಾಯಗಳ ರೂಢಿ ಸಂಪ್ರದಾಯಗಳಂತೆ ಇವರು ಸತ್ತವರನ್ನು ಹೂಳುತ್ತಾರೆ. ಚಾರಿತ್ರಿಕವಾಗಿ ತಮ್ಮ ಮೂಲವನ್ನು ಎಲ್ಲೂ ಹೇಳಿಕೊಂಡಿಲ್ಲ. ವರ್ತಮಾನದ ಘಟನೆಗಳನ್ನು ಹೆಚ್ಚಾಗಿ ವೈಭವೀಕರಿಸುತ್ತಾರೆ. ಇವರಲ್ಲಿ ಮೌಖಿಕ ಸಾಹಿತ್ಯ ಉಳಿದುಬಂದಿದೆ. (ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೧, ಸಂ: ಸೂರ್ಯನಾಥ ಯು. ಕಾಮತ್ ಕರ್ನಾಟಕ ಸರ್ಕಾರ, ಬೆಂಗಳೂರು ೧೯೮೪ ಪು: ೩೬೮).

ಮ್ಯಾಸಬೇಡರು ಕಾಲ ಭೈರವ, ನುಂಕಪ್ಪ ಜೋಗಿ ದೇವರುಗಳನ್ನು ಆರಾಧಿಸುತ್ತಾರೆ. ಒಕ್ಕಲಿಗರು ಆದಿಚುಂಚನಗಿರಿಯ ಕಾಲಭೈರವನನ್ನು ಆರಾಧಿಸುತ್ತಾರೆ. ಇಬ್ಬರಿಗೂ ಮನೆದೇವರು ಕಾಲಭೈರವನೇ ಆಗಿದ್ದರೂ, ಸಾಂಸ್ಕೃತಿಕ ಭಿನ್ನತೆ, ಆರ್ಥಿಕ-ಸಾಮಾಜಿಕ ಸ್ಥಿತಿ-ಗತಿ, ರಾಜಕೀಯ ಪ್ರಭಾವವನ್ನು ನಿರ್ಣಯಿಸಲಾಗಿದೆ. ಬೇಡರು ಉಡುಗೆ-ತೊಡುಗೆ, ಆಹಾರ, ಜೀವನ ಶೈಲಿಯಲ್ಲಿ ಆದಿವಾಸಿ ಹಾಗೂ ಬುಡಕಟ್ಟು ಲಕ್ಷಣಗಳನ್ನು ಹೊಂದಿರುತ್ತಾರೆ. ಆಹಾರ ಕ್ರಮದಲ್ಲಿ ಇವರಿಗೆ ವಿಧಿ-ನಿಷೇಧಗಳಿವೆ. ಕೋಳಿ ತಿನ್ನುವುದಿಲ್ಲ, ಶೇಂದಿ ಸಾರಾಯಿ ಕುಡಿಯುವುದಿಲ್ಲ, ಈಚಲು ಚಾಪೆ ಬಳಸುವುದಿಲ್ಲ ಎಂಬುದು ಮ್ಯಾಸ ನಾಯಕರಲ್ಲಿದೆ. ಇವರಲ್ಲಿ ಶೈವ-ವೈಷ್ಣವ ಪಂಥಗಳಿದ್ದರೂ ಉಭಯರೂ ಏಕ ರೀತಿಯ ಸಂಪ್ರದಾಯಗಳನ್ನು ಹೊಂದಿರುತ್ತಾರೆ. ಒಕ್ಕಲಿಗರಲ್ಲಿ ಹಲವಾರು ಒಳಪಂಗಡಗಳಿವೆ. ಶಿವನಿಗೆ ನಡೆದುಕೊಳ್ಳುವ ಒಕ್ಕಲಿಗರು ಹಂದಿಯನ್ನು ಆಹಾರವಾಗಿ ಸೇವಿಸುತ್ತಾರೆ. ಹಂದಿ ಪವಿತ್ರ ಪ್ರಾಣಿಯಾಗಿದ್ದು ಅನೇಕ ರಾಜವಂಶಗಳು ರಾಜಲಾಂಛನವಾಗಿ ಇದನ್ನು ಬಳಸಿಕೊಳ್ಳಲಾಗಿದೆ. ಚರಿತ್ರೆಯಲ್ಲಿ ಹಂದಿಗೆ ಉಲುಸಾದ ಪ್ರಾಣಿಯೆಂದು, ಲಕ್ಷ್ಮಿ ಎಂದು ಚಾಲುಕ್ಯ, ವಿಜಯನಗರದ ಅರಸರು ವರಹಾ ಲಾಂಛನವನ್ನು ಬಳಸಿಕೊಂಡಿದ್ದರು.

ಕರ್ನಾಟಕದಲ್ಲಿ ಚಾರಿತ್ರಿಕವಾಗಿ 'ಜೋಗಿ' ಹೆಸರಿನಲ್ಲಿ ಸಂಪ್ರದಾಯಗಳಿದ್ದು, ಅನೂಚಾನವಾಗಿ ರಾಜಪೋಷಣೆ ಇತ್ತು. ಅದಕ್ಕೆ ನಾಥ, ಭೈರವ, ಜೋಗಿ ಪಂಥಗಳ ಮೂಲಕ ವಿಶ್ಲೇಷಿಸಲಾಗಿದೆ. ಒಕ್ಕಲಿಗರು(ಗೌಡರು), ಬೇಡರು, ಕಾಪರ ಲಿಂಗಾಯಿತರು(ಲಾಳಗೊಂಡ, ಸಾದರ, ಪಂಚಮಶಾಲಿ ಹೊರತುಪಡಿಸಿ) ಭೈರವನ ಆರಾಧನೆ ಮಾಡುತ್ತಾರೆ. ಇವರು ಪ್ರಾದೇಶಿಕವಾಗಿ ವಿಭಿನ್ನವಾದ ಆಚರಣೆ ಮತ್ತು ಸಂಪ್ರದಾಯಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಆ ಮೂಲಕ ನಾಡು-ನುಡಿಗೆ ನಾಥ ಸಂಪ್ರದಾಯದ ಕೊಡುಗೆ ವಿಶೇಷವಾಗಿದೆ ಎಂಬುದರಲ್ಲಿ ಯಾವುದೇ

Scanned with OKEN Scanner

ಅನುಮಾನವಿಲ್ಲ. ಭೈರವ ಪಂಥದ ಮೂಲಕ ಅಲಕ್ಷಿತ ಸಮುದಾಯಗಳು ಒಂದಾಗುವ ಸನ್ನಿವೇಶ ಮೊಳಕಾಲ್ಮೂರು ತಾಲೂಕಿನ ನುಂಕಪ್ಪನ ಜಾತ್ರೆಯಲ್ಲಿ ನೋಡುತ್ತೇವೆ. ಬೇಡರು ಮತ್ತು ಒಕ್ಕಲಿಗರಲ್ಲಿ ಶೈವ ಆರಾಧನೆ ಇದ್ದರೂ ಸಹ ವಿಷ್ಣುವಿನ ಪ್ರಭಾವವಾದ ಆಚರಣೆಗಳು ಪ್ರಚಲಿತದಲ್ಲಿವೆ. ವೈಷ್ಣವ ಸಾಂಸ್ಕೃತಿಕ ಅನನ್ಯತೆ ನಾಮಧಾರಿ ಒಕ್ಕಲಿಗರಲ್ಲಿ ಅಹೋಬಲನರಸಿಂಹಸ್ವಾಮಿ, ಓಬಳ್ಳ ದೇವರ ಮೂಲಕ ಬೇಡರಲ್ಲಿ ನೋಡಬಹುದಾಗಿದೆ.

'ಜೋಗಿ' ಒಂದು ಸಂಪ್ರದಾಯವೆಂದು ತಿಳಿಯುವ ಮುನ್ನ ಅದೊಂದು 'ಸಮುದಾಯ' ಎಂಬುದು ಸ್ಪಷ್ಟ. ಅಲೆಮಾರಿ, ಆದಿವಾಸಿ, ಆದಿಮ ಸಂಸ್ಕೃತಿಗಳಂತೆ ಜೋಗಿಗಳು ಸಹಾ ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿರುತ್ತಾರೆ.

ಪಂಡಿತ ರೇವಣ್ಣಶಾಸ್ತ್ರಿಗಳು ತಮ್ಮ 'ವಾಲ್ಮೀಕರ ಪುರಾಣವು' ಎಂಬ ಗ್ರಂಥದಲ್ಲಿ(೧೯೫೯) ಜೋಗೇರು ಬಗ್ಗೆ ತಿಳಿಸುತ್ತಾ(ಪು.೪೪) ಗಂಟೆ ಹೆಳವ, ಹಂದಿಜೋಗಿ, ಉದ್ದಿನ ಕೊರವ(ಹಂದಿಚಿಕ್ಕ), ಹಳವ, ಮಾಂದರು, ಜಂಗಲಿಗಾರು ಇವರ ಪರ್ಯಾಯ ಮತ್ತು ಹೋಲುವ ಇತರ ಸಮುದಾಯಗಳ ಬಗ್ಗೆ ತಿಳಿಸುತ್ತಾರೆ.

ಎಡ್ಗರ್ ಥರ್ಸ್ಟನ್ ಮತ್ತು ಕೆ. ರಂಗಾಚಾರಿ ಅವರು 'ದಕ್ಷಿಣ ಭಾರತದ ಜಾತಿ ಮತ್ತು ಬುಡಕಟ್ಟುಗಳು' ಎಂಬ ಕೃತಿಯಲ್ಲಿ ಜೋಗಿ ಜನಸಮುದಾಯದ ವಿವರವಿದೆ. ಎಚ್. ಎ. ಸ್ಟುವರ್ಟ ಪ್ರಕಾರ ತೆಲುಗು ತಿರುಕರ ಒಂದು ಜಾತಿಯಾದ ಜೋಗಿಗಳು ದಾಸರಿಗಳಂತೆ ಜೀವಿಸುವ ಗಾರುಡಿಗಾರ ಮತ್ತು ಭಿಕ್ಷುಕರಾಗಿದ್ದಾರೆ. ಇವರು ಮಣಿಗಳನ್ನು ಮಾರಾಟ ಮಾಡಿ, ಹಂದಿಗಳನ್ನು ಸಾಕುತ್ತಿದ್ದ ವೃತ್ತಿಯವರು. ಜೋಗಿಗಳು ಹಾವಾಡಿಗರು ಈ ಬಗ್ಗೆ ಔಷಧಿ ತಯಾರಕರು ಆಗಿದ್ದರು. ಇವರ ಹವ್ಯಾಸಗಳು ಕೊಳಕಾಗಿದ್ದವು. ಯಾವ ಜಾತಿ ಮನೆಯಲ್ಲಾದರೂ ಸರಿ ಆಹಾರ ಸೇವಿಸುತ್ತಾರೆ. ವಿಧವೆಗೆ ಉಪಪತ್ನಿಯಾಗಿ ಸ್ಥಾನ ಕೊಡುತ್ತಿದ್ದರು. ಕೆಲವು ಸಾಮಾಜಿಕ ನಿಯಮ ಕಟ್ಟುಪಾಡುಗಳಿಗೆ ಒಳಪಡಬೇಕಿತ್ತು. ಭಿಕ್ಷೆ ಬೇಡುವುದು ಮತ್ತು ಹಂದಿ ಸಾಕಾಣಿಕೆಯ ಜೊತೆಯಲ್ಲಿ ಜೋಗಿಗಳು ಭೂಮಿಯ ಬೇಸಾಯ ಪರ್ಯೆಯ ನಾಯಿಗಳ ಧ್ವಂಸ, ಜಾಡಮಾಲಿ, ದರೋಡೆ ಮತ್ತು ಡಕಾಯಿತಿಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ(ಪು. ೫೫೯). ಇವರ ಮಹಿಳೆಯರಲ್ಲಿ ಕೆಲವರನ್ನು 'ಕಿಳ್ಳೆಕ್ಯಾತ' ಎನ್ನುತ್ತಾರೆ. ಇವರಲ್ಲಿ ಕೆಲವರು ಹಚ್ಚೆ ಹಾಕುವರು. ಜೋಗಿಗಳಿಗೆ ವಾಹನ ಕತ್ತೆ, ಈ ಕತ್ತೆಗಳ ಮೂಲಕ ನಾಡಿನಾದ್ಯಂತ ಸಂಚರಿಸುವರು. 'ಕತ್ತೆಯ ಮೇಲಿನ ಮೂಟೆಗಳನ್ನು ತಮ್ಮ ಸಂಚಾರದಲ್ಲಿ ದೊರಕಿದ ಅಥವಾ ಕೊಳ್ಳೆ ಹೊಡೆದ ಬಟ್ಟೆಗಳನ್ನು ಸಂಗ್ರಹಿಸುವುದಕ್ಕೆ ಆಧಾರವಾಗಿ ಬಳಸುತ್ತಾರೆ (ಅದೇ., ಪು. ೫೬೦). ಜೋಗಿಗಳು ಊರಿನ ಹೊರಗೆ ಕೆರೆ ಅಂಗಳ ಅಥವಾ ಹಿಂಭಾಗದಲ್ಲಿ ಗುಡಿಸಲುಗಳನ್ನು ತಾಳೇಗರಿ ಹುಲ್ಲಿನಿಂದ ನಿರ್ಮಿಸಿಕೊಳ್ಳುತ್ತಾರೆ. ಅದು ಕಾಮಾನಿನಾಕಾರದಲ್ಲಿರುತ್ತವೆ. ತಮಿಳುನಾಡಿನಲ್ಲಿ ಜೋಗಿಗಳನ್ನು ದೊಡ್ಡಿಯನ್ ಅಥವಾ

Scanned with OKEN Scanner

ತೊಟ್ಟಿಯನ್ ಎನ್ನುತ್ತಾರೆ. ಜಾಡಮಾಲಿಗಳನ್ನು ಕೊರವ ಅಥವಾ ಒಡ್ಡನ್ ಎಂದು ಕರೆಯುವರು. ಜಾಡಮಾಲಿ ವೃತ್ತಿಯಲ್ಲಿರುವ ಜೋಗಿಗಳು ಇತರರೊಂದಿಗೆ ಬೆರೆಯುವುದಿಲ್ಲ. ಇವರಲ್ಲಿರುವ ಭಿಕ್ಷೆಗೆ ಪೌರಾಣಿಕ ಕಥೆ ಹೇಳುವರು. ಇವರ ಪೂರ್ವಜ ರಲ್ಲಿ ಒಬ್ಬ ಪಾರ್ವತಿ ದೇವಿಯ ಸ್ತನಗಳನ್ನು ಕೀಳಾಗಿ ಅವಿವೇಕದಿಂದ ಜರಿದಿದ್ದ ಕಾರಣ ಅವರಿಂದ ಶಾಪ ಪಡೆದು ಭಿಕ್ಷೆ ಬೇಡಿದರಂತೆ. ಮೂಲ ಮತ್ತು ಮಾದಿಗರಿಗೆ ಶ್ರೇಷ್ಠರೆಂದು ಕರೆದುಕೊಳ್ಳುತ್ತಾರೆ. ಇವರು ಮೊಸಳೆ, ಹೆಗ್ಗಣ ಮತ್ತು ಬೆಕ್ಕುಗಳನ್ನು ತಿನ್ನುತ್ತಾರೆ. ಜೋಗಿಗಳು ಮದುವೆಯಲ್ಲಿ ಹೆಣ್ಣಿಗೆ ತಾಳಿಕಟ್ಟುವ ಮುನ್ನ ಬೆಕ್ಕಿಗೆ ಹರಿಷಿಣ ಕೊಂಬಿನ ದಾರ ಕಟ್ಟುತ್ತಾರಂತೆ. ಬೆಕ್ಕು ಇವರಿಗೆ ಪವಿತ್ರ ಹಾಗೂ ಆಹಾರದ ಪ್ರಾಣಿ. ಬೆಕ್ಕುಗಳನ್ನು ತಿನ್ನುವುದು ಜೋಗಿಗಳಲ್ಲಿ ಇಂದಿಗೂ ಇದೆ.

ಜೋಗಿಗಳು ತಿರುಕರಾಗಿದ್ದೂ, ಕೆಂಪು ಮತ್ತು ಕೊಳಕು ಬಟ್ಟೆಯನ್ನು ಧರಿಸುತ್ತಿದ್ದರು. ನಾಗರಹಾವು, ಹೆಬ್ಬಾವು, ಕೇರೆಹಾವುಗಳನ್ನು ಬುಟ್ಟಿಯಲ್ಲಿ ಹಾಕಿಕೊಂಡು ಊರಾಡುತ್ತಾರೆ. ಭಿಕ್ಷೆಗೆ ಇವುಗಳನ್ನು ಬಳಸುತ್ತಾರೆ. ಹೆಗಲಿನಲ್ಲಿರುವ ಚೀಲದಲ್ಲಿ ಬಕುಲದ ಹಣ್ಣು, ನೆಲ ಹಿಪ್ಪಲಿ. ಪುಂಗಿ, ಕಪ್ಪೆ ಚಿಪ್ಪು, ಮುಳ್ಳು ಹಂದಿ, ತೆಂಗಿನ ಚಿಪ್ಪು, ನರಿಕೊಂಬು ಮೊದಲಾದವುಗಳನ್ನು ಹಾವು ಕಚ್ಚಿದವರಿಗೆ ಔಷಧಿಯಾಗಿ ಕೊಡುತ್ತಾರೆ.

ಬೇರೆ ಬೇರೆ ಸಮುದಾಯಗಳಂತೆ ಜೋಗಿಗಳು ಸಹಾ ಬೆಡಗು–ಗೋತ್ರ ಉಪಬೆಡಗುಗಳನ್ನು ಹೊಂದಿರುವವರು. ವಗಿಟಿ(ಅಂಗಳ) ಉವಲ(ಹುರುಳಿ), ಜಲ್ಲಿ(ತಾಳೆಗೆರೆ) ವವಟಿ(ಸಂಬಂಧ) ಗುಂಡ್ರ(ಗುಂಡನೆಯ), ಬಿಂದೊಳು (ಬಿಂದಿಗೆ), ಚೆರುಕು(ಕಬ್ಬು), ಚಪ್ಪಡಿ(ಜಡ), ಬೋಡದಾಸರಿ(ಬೊಕ್ಕ ತಲೆಯ ತಿರುಕ), ಗುಡಿ(ಮಂದಿರ) ಎಂದಿವೆ. ೧೯೦೧ರಲ್ಲಿ ಕಿಳ್ಳೆಕ್ಯಾತ, ಹೆಳವ, ಜಂಗಲಿಗ ಜಾತಿಗಳು ಜೋಗಿಗಳ ಪಟ್ಟಿಯಲ್ಲಿದ್ದವು. ಜೋಗಿಗಳ ಮೂಲ ತೆಲುಗು ಭಾಷೆ ಆಂಧ್ರ ಮತ್ತು ತಮಿಳುನಾಡನ್ನು ತೋರಿಸಿಕೊಳ್ಳುತ್ತಾರೆ. ಜನಗಣತಿ (ಮದ್ರಾಸ್) ಸಿದ್ಧರು ಮತ್ತು ಪಾಮುಲ(ಹಾವುಗಳು) ಉಪಜಾತಿಗಳಾಗಿವೆ. ಪಾಮುಲ ಎಂಬುದು ಹಾವಾಡಿಸುವ ವೃತ್ತಿಯಲ್ಲಿದ್ದ ಜೋಗಿಗಳಿಗೆ ಕರೆಯುತ್ತಾರೆ.

ಜೋಗಿ ಮಹಿಳೆಯರಲ್ಲಿ ಸಾಂಸ್ಕೃತಿಕವಾಗಿ ಸಡಿಲತೆ ಮತ್ತು ಸ್ವೇಚ್ಛಾಚಾರವಿದೆ. ಇವರು ಮುಕ್ತ ಲೈಂಗಿಕತೆಯನ್ನು ಬಯಸುತ್ತಾರೆ. ವೇಶ್ಯಾವಾಟಿಕೆಯಲ್ಲಿ ಜೋಗಿ ಮಹಿಳೆಯರು ಈ ಹಿಂದೆ ತೊಡಗಿದ್ದರು. ಗಂಡು ವ್ಯಭಿಚಾರ ಮಾಡಿದರೆ ಕಠಿಣ ಶಿಕ್ಷೆಗಳಿದ್ದವು. ಜೋಗಿ ಮದುವೆಯಲ್ಲಿ ಹೆಣ್ಣಿನ ಕಡೆಯವರಿಗೆ ಹಣ ಮತ್ತು ಹಂದಿಯನ್ನು ಕೊಡುತ್ತಾರೆ. ನಂತರ ಹಂದಿಯನ್ನು ಕೊಂದು ಮಾಂಸದ ಊಟ ಮಾಡುತ್ತಾರೆ. ಮದುವೆಯಲ್ಲಿ ಹಗ್ಗದ ಆಟ ಆಡುತ್ತಾರೆ. ನಂತರ ತಾಳಿ ಕಟ್ಟುವ ಕಾರ್ಯಗಳು ನಡೆಯುತ್ತವೆ. ಜೋಗಿ ಜಾತಿಯಲ್ಲಿ ವಿಧವೆ ಏಳುಬಾರಿ ಮದುವೆ ಆಗಲು ಅವಕಾಶವಿದೆ. ಈ ಬಾಲಕಿ ಋತುಮತಿಯಾದಾಗ ನೇರಳೆ, ಬೇವು, ಮಾವು, ಹೊಂಗೆಮರ ರೆಂಬೆಗಳನ್ನು

Scanned with OKEN Scanner

ತಂದು ಗುಡಿಸಲು ಹಾಕುತ್ತಾರೆ. ೩–೭ ದಿನಗಳ ನಂತರ ಆ ಗುಡಿಸಲನ್ನು ಸುಡುತ್ತಾರೆ. ಇವರಲ್ಲಿ ಸತ್ತ ವ್ಯಕ್ತಿಯನ್ನು ಹೂಳುತ್ತಾರೆ. ಆದರೂ ಕೆಲವೊಮ್ಮೆ ಬೆಂಕಿಯನ್ನು ಸಂಬಂಧಿಯೊಬ್ಬರು ಸ್ಮಶಾನಕ್ಕೆ ಒಯ್ಯುತ್ತಾರೆ. ಎಲ್ಲ ಜೋಗಿಗಳು ಮಾಂಸಹಾರ ಮತ್ತು ಸಸ್ಯಹಾರವನ್ನು ತಿಥಿ ವೇಳೆಯಲ್ಲಿ ಸೇವಿಸುತ್ತಾರೆ. ನದಿ, ಕೆರೆ, ಮರ ಸೇರಿದಂತೆ ಪ್ರಕೃತಿ ಆರಾಧನೆ ಇವರಲ್ಲಿದೆ. ಪತಿ ತೀರಿದಾಗ ಆಕೆಯ ತಾಳಿಯನ್ನು ವಿಧವೆ ಕತ್ತರಿಸುತ್ತಾಳೆ. ಸಂಪ್ರದಾಯದಂತೆ ಮುತ್ತೈದೆ ವಿಧವೆ ಆದಾಗ ತಾಳಿಯನ್ನು ತೆಗೆಯುತ್ತಾಳೆ.

ಜೋಗಿಗಳಲ್ಲಿ ಪ್ರಮುಖವಾಗಿ ಪೆದ್ದವಾಡು, ಮಲಲಮ್ಮ, ಗಂಗಮ್ಮ, ಅಯ್ಯವಾರು, ರುದ್ರಮ್ಮ ಮತ್ತು ಮದುರ ವೀರುಡು ಮೊದಲಾದ ದೇವರುಗಳನ್ನು ಆರಾಧಿಸುತ್ತಾರೆ. ಜೋಗಿ ಪುರುಷನ ಸ್ಥಾನಮಾನವು ಸಾಮಾಜಿಕವಾಗಿ ಉತ್ತಮವಾಗಿದೆ. ಜೋಗಿಗಳು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಹೆಚ್ಚಾಗಿರುತ್ತಾರೆ. ತುಳು, ಮರಾಠಿ ಮಾತನಾಡುತ್ತಾರೆ. ಕದರಿಯಲ್ಲಿ ಇವರ ಮಠವಿದೆ. ಇವರ ದೈವ ಭೈರವ, ಕೆಲವು ಬಾಲಕರು ಬ್ರಹ್ಮಚಾರಿಯಾಗಿ ಕಿವಿಗೆ ರಂಧ್ರವನ್ನು ಹಾಕಿಕೊಳ್ಳುವವರನ್ನು 'ಜೋಗಿ' ಎಂದು ಗುರುತಿಸುತ್ತಾರೆ (ಹೆಚ್ಚಿನ ವಿವರಕ್ಕೆ ನೋಡಿ: ಬಂಜಗೆರೆ ಜಯಪ್ರಕಾಶ(ಸಂ) ದಕ್ಷಿಣ ಭಾರತದ ಜಾತಿ ಮತ್ತು ಬುಡಕಟ್ಟುಗಳು. ೨೦೧೯ ಪು. ೫೫೯–೫೬೬). ಜೋಗಿ ಸಮುದಾಯವನ್ನು ಕಳ್ಳರೆಂದು, ಉಪದ್ರವ ಕೊಡುವವರೆಂದು ಈವರಿಗೆ ಭಾವಿಸಲಾಗಿತ್ತು. ಕಾಲ ಸರಿದಂತೆ, ಆಧುನಿಕತೆ ಗಾಳಿ ಇವರಲ್ಲಿ ಪರಿವರ್ತನೆಯನ್ನು ತಂದಿದೆ. ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಕೇಂದ್ರವಾದ ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾಕೇಂದ್ರ ಬಲ್ಮಠ. ಮಂಗಳೂರು ಇಲ್ಲಿ ಸಂಶೋಧನಾ ವಿದ್ಯಾರ್ಥಿಯೊಬ್ಬ(ಥೀಸಸ್‌ನಲ್ಲಿ ಹೆಸರಿಲ್ಲ – –ನಂ. ಇದೆ) ಎಂಫಿಲ್ ಪದವಿಗಾಗಿ 'ತುಳುನಾಡಿನಲ್ಲಿ ನಾಥ ಪಂಥದ ವಿಕಾಸ ಮತ್ತು ಜೋಗಿ ಸಂಪ್ರದಾಯದ ಹಿನ್ನೆಲೆ–ಒಂದು ಅಧ್ಯಯನ' ಎಂಬ ಪ್ರಬಂಧವನ್ನು (೨೦೧೬) ಮಂಡಿಸಿದ್ದಾರೆ. ಇದರಲ್ಲಿ ನಾಥ ಪಂಥದ ಉದಯ, ಹಿನ್ನೆಲೆ ಮತ್ತು ನೆಲೆ, ನಾಥಪಂಥ ಮತ್ತು ಜೋಗಿ ಸಮುದಾಯವನ್ನು ಕರ್ನಾಟಕದಲ್ಲಿ ಗುರುತಿಸಲಾಗಿದೆ. ಜೋಗಿ ಸಮುದಾಯದ ಹೆಸರೂ ಜೊತೆಗೆ 'ನಾಥ' ಎಂಬ ಉಪನಾಮ ಸೇರ್ಪಡೆಯಾಗಿದೆ. ಹಾಗೆಯೇ ತುಳುನಾಡಿನ ಜೋಗಿಗಳ ಸ್ಥಿತಿ–ಗತಿ, ತ್ರ್ಯಯಂಬಕೇಶ್ವರದಿಂದ ಕದಳಿಗೆ ಝಂಡಿಯಾತ್ರೆ ಮೊದಲಾದ ಸಂಗತಿಗಳನ್ನು ಚರ್ಚಿಸಿದ್ದಾರೆ.

ಚಿಂತಗುಂಟ್ಲು ಬೋರುವ(ಡು)

ಬುಡಕಟ್ಟು ನೆಲೆಯ ಭೈರವ ಸಂಪ್ರದಾಯದ ಚಾರಿತ್ರಿಕ ನೆಲೆಯೇ ಚಿಂತಗುಂಟ್ಲು ಕುದಾಪುರ. ಚಳ್ಳಕೆರೆ ತಾಲೂಕಿನಲ್ಲಿರುವ ಈ ಗ್ರಾಮಕ್ಕೆ ಬೋರವನಹಟ್ಟಿ ಎಂಬುದು ಮತ್ತೊಂದು ಹೆಸರು. ಗ್ರಾಮದ ಪಶ್ಚಿಮ ದಿಕ್ಕಿಗೆ ಸಮತಟ್ಟಾದ ಪ್ರದೇಶದ ಬೋರೆದೇವರ ಗುಡಿಯಿದೆ. ಹಿಂದೆ ಸುತ್ತಲೂ ಕಾಡಿದ್ದು, ಇಂದು ಕಡಿಮೆ ಆಗಿದ್ದು ಕೃಷಿ ಆಧಾರಿತ ತೋಟಗಳು ಮಾತ್ರ ಇವೆ.

Scanned with OKEN Scanner

ಚಿಂತಗುಂಟ್ಲಾ ಬೋರವ ಎಂಬುದು ಉದ್ಭವ ಲಿಂಗ ಎನ್ನುವರು. ಸಹಜವಾಗಿ ಮತ್ತು ಪ್ರಕೃತಿ ದತ್ತವಾಗಿರುವ ಶಿಲೆಯನ್ನು ಶಿವಲಿಂಗ – ಬೋರೆ ದೇವರಾಗಿ ಆರಾಧಿಸುವರು. ಈ ಬಗ್ಗೆ ಚಾರಿತ್ರಿಕ, ಧಾರ್ಮಿಕ, ಪೌರಾಣಿಕ ಹಿನ್ನೆಲೆ ಇರುವುದುಂಟು.

ಪೌರಾಣಿಕ ಹಿನ್ನೆಲೆ : ಮಧ್ಯಕಾಲೀನ ಕರ್ನಾಟಕದ ಚರಿತ್ರೆಯಲ್ಲಿ ಬುಡಕಟ್ಟು ಜನರು ಹಂಪಿ – ಆನೆಗೊಂದಿ ತುಂಗಭದ್ರಾ ಹಾಗೂ ವೇದಾವತಿ ನದಿಗಳ ಮಧ್ಯೆ ನೆಲೆಸಿದ್ದರು. ಮ್ಯಾಸನಾಯಕರ ಹನ್ನೆರಡು ಪಟ್ಟಿಗೆ ದೇವರುಗಳನ್ನು ನರಕದ ಕೋಟೆಯಲ್ಲಿ(ಆನೆಗೊಂದಿ) ಸೆರೆಹಿಟ್ಟಿದ್ದರು. ಕೊಡಗಲು ಬೊಮ್ಮ ಎಂಬುವನು ವೀಳ್ಯೆ(ಎಲೆ–ಅಡಿಕೆ) ಹಿಡಿದು ಆನೆಗೊಂದಿ ಕೋಟೆಗೆ ನುಗ್ಗಿ ೧೨ ಪೆಟ್ಟಿಗೆ ದೇವರುಗಳನ್ನು ವಿಮೋಚನೆಗೊಳಿಸಿ ತಲೆಮೇಲೆ ಒತ್ತು ತಂದಿದ್ದರು. ಈ ಕಾರಣಕ್ಕಾಗಿ ಅವನಿಗೆ ಆಳ್ವಿಕೆಯ ಅಧಿಕಾರವನ್ನು ರಾಜನೆಂದು ಕೊಟ್ಟಿದ್ದರು. ಇವನ ಪ್ರವೃತ್ತಿ ರಾಕ್ಷಸಿತನದಿಂದ ಕೂಡಿತ್ತು. ರಾಕ್ಷಸಿ ಕೊಡಗಲು ಬೊಮ್ಮನಿಂದ ಜನರು ತತ್ತರಿಸಿ ಹೋದರು. ಎತ್ತು, ಟಗರು, ಹೋತು, ಬೆಣ್ಣೆ, ಮುದ್ದೆ, ಮೊಸರು, ಗಂಡು ಕರುಗಳೂ ರಜಸ್ವಾದ ಯುವತಿ, ಹೊಸದಂಪತಿಗಳಿಗೆ ಮೊಗ್ಗಲ ತೆರಿಗೆ ಇತ್ಯಾದಿ ಸುಂಕಗಳನ್ನು(ತೆರಿಗೆ) ವಿಧಿಸಿ ಬರ್ಬರ, ನಿರಂಕುಶ, ದರ್ಪಿಷ್ಟ ದೊರೆಯಾಗಿ ಭಯ ಹುಟ್ಟಿಸಿದ್ದನು. ಕೊಡಗಲು ಬೊಮ್ಮನನ್ನು ಹತ್ತಿಕ್ಕಲು ಮ್ಯಾಸ ನಾಯಕ ಬುಡಕಟ್ಟಿನ ಮುಖಂಡರೆಲ್ಲ ಸೇರಿ ಚಿಂತನಾ ಸಭೆ ನಡೆಸಿದ ಸ್ಥಳವೇ ಈ ಬೋರೇ ದೇವರ ಆವರಣವಾಗಿದೆ.

ಕೊಡಗಲು ಬೊಮ್ಮನು ಸಾಯಬೇಕೆಂದು ಎಲ್ಲ ಜನರು ಸೇರಿ ಯಜ್ಞ, ಹೋಮ ಇತ್ಯಾದಿಗಳನ್ನು ಮಾಡುತ್ತಿದ್ದರು. ಮ್ಯಾಸನಾಯಕರು ಬುಡಕಟ್ಟು ಪದ್ಧತಿಗಳಂತೆ ಚಿಂತನೆ ಮಾಡಿದರು. ವಾಸೆ ಕೊಯ್ಯುವ ಸರದಿ ಬಂದಾಗ ಯರಮಂಚಿನಾಯಕ ಇನ್ನು ಬಂದಿರಲಿಲ್ಲ(ಓಬಣ್ಣನಹಳ್ಳಿ, ಮೊಳಕಾಲ್ಮೂರು ತಾ) ಕಾರ್ಯಗಳು ಬಿರುಸಾಗಿ ನಡೆಯುತ್ತಿದ್ದವು. ಯರಮಂಚಿನಾಯಕನು ಬಂದಾಗ ಕೆಲವು ಪ್ರಮುಖ ಕಾರ್ಯಗಳು ಮುಗಿದಿದ್ದವು. ಆಗ ಕರೆಹೋತು ಸಿಗಲಿಲ್ಲದ ಕಾರಣ ತನ್ನ ಏಕೈಕ ಮಗನನ್ನೇ ಏಳುಬಾರಿ ವಾಸೆಕೊಯ್ಯುತ್ತಾನೆ (ಕರೆ ಹೋತನ್ನು ದೇವರಿಗೆ ಬಲಿ ಕೊಡಲಾಗಿತ್ತು. ತಡವಾಗಿ ಬಂದಾಗ ಹೆತ್ತಮಗನನ್ನೇ ದೇವರಿಗೆ ಬಲಿಕೊಡುವುದು ಈ ಬುಡಕಟ್ಟಿನ ಮೊದಲ ಉದಾಹರಣೆಯಾಗಿದೆ). ಆಗ ಸೂರ್ಯನಿಗೆ ಕೈಮುಗಿದು(ಸೂರ್ಯಮೊಕ್ಕು) ಕರೆಹಾಲು ಕರೆಯುವುದು, ಒಣಗಿದ ಮರ ಚಿಗುರಬೇಕು ಚಿಗುರಿದ ಮರ ಒಣಗಬೇಕು ಎಂದು ಪಂಥ ಕಟ್ಟಿಕೊಂಡು ಇವೆಲ್ಲವು ಈಡೇರಿದರೆ ಕೊಡಗಲು ಬೊಮ್ಮ ಸಾಯುತ್ತಾನೆ. ಯರಮಂಚಿನಾಯಕನ ಪಂಥದಂತೆ ಎಲ್ಲವೂ ಈಡೇರಿದವು. ಕೊಡಗು ಬೊಮ್ಮನು ಸತ್ತ ಸುದ್ದಿ, ಸುಟ್ಟ ಹೊಗೆ ಕೇಳಿ – ನೋಡಿದಾಕ್ಷಣ ನಾವೇಲ್ಲಾ ವಿಮುಕ್ತರಾದೆವೆಂದು ನಿಟ್ಟುಸಿರು ಬಿಟ್ಟ ಬೊಮ್ಮನ ವಿರೋಧಿಗಳು ಬೋರುವನಿಗೆ ಪರುವು ಮಾಡಿದರು

Scanned with OKEN Scanner

(ವಾಸೆ ಕೊಯ್ಯುವಾಗ ಇವರಿಗೆ ಕಲ್ಲು ಸಿಕ್ಕಿರಲಿಲ್ಲ ಆಗ ಬೋರುವುದು ಗುಂಡು ತಂದಿದ್ದರಿಂದ ಇವರಿಗೆ ಗುಂಡೆತಲಾರು ಗುಂಡು ಬೋರುವುದು ಎನ್ನುತ್ತಾರೆ). ಗಂಡಾಧಿಗಂಡು ಬೋರವ, ಚಿಂತಗುಟ್ಲು ಬೋರವ, ಚಿಗುರುಗುಟ್ಲು ಬೋರವ, ಪಾಲಜಟ್ಲು ಪರಮೇಶ್ವರ, ಶ್ರೀ ಶೈಲ ಮಲ್ಲಿಕಾರ್ಜುನ ಎಂದೆಲ್ಲ ಇದಕ್ಕೆ ಕರೆದಿರುವರು. ಪಶ್ಚಿಮದಿಂದ ಬಂದ ರಸಸಿದ್ಧರ ೩ ಜನ ಗುಂಪು ಬೋರವನನ್ನು ಅರಣ್ಯದಲ್ಲಿ ತಡೆದರು. ೩ ಜನ ರಸಸಿದ್ಧರು ಶೈಲಕ್ಕೆ ಯಾತ್ರೆ ಹೋಗುವ ದಾರಿ ಮಧ್ಯದಲ್ಲಿ ಬೋರವನ ಕುಮರೆಯನ್ನು ಕೇಳುತ್ತಾರೆ. ಪೂರ್ವದಲ್ಲಿ ನಡೆದ ಸಂಗತಿಗಳನ್ನು ವಿವರಿಸಿದ ನಂತರ ಅವನನ್ನು ಹಿಂದಕ್ಕೆ ಕರೆತಂದರು. ಬಂದ ರಸಸಿದ್ಧರು ಇಲ್ಲಿಯೇ ಐಕ್ಯರಾದರು. ಇಂದಿಗೂ ಇವರ ಸಮಾಧಿ ಬೋರವನ ದೇವಾಲಯದ ಹಿಂದೆ ಇದೆ. ನಿತ್ಯವು ಪೂಜಾ ಕಾರ್ಯಕ್ರಮಗಳು ನಡೆಯುತ್ತವೆ. ಬೋರವನಿಗೆ(ಶಿವ) ಬೇಟೆ ಕಡೆಯುವುದಿಲ್ಲ. ಅವನು ಸಸ್ಯಹಾರಿ. ಗುಡಿಯ ಹಿಂದೆ ಇರುವ ರಸಸಿದ್ಧರ ಸಮಾಧಿಗೆ ಬೇಟೆ ಕಡಿಮ(ಮಾಂಸಹಾರಿ) ಎಡೆ ಹಾಕುತ್ತಾರೆ. ಯರಮಂಚಿನಾಯಕ ದೊರೆ ನಲುಬೋತು ಯರಬೋತು ಕಡಿಯಲು ಅದು ಉದ್ರಿಕ್ತ ಪರಿಸ್ಥಿತಿ ಇಂದಿಗೂ ಆಗುತ್ತದೆ. ಇದರಲ್ಲಿ ನಲಗೇತಿ ಒಂದು ಭಾಗದ ಪೂಜೆ ಅಧಿಕಾರವಿದೆ. ಗೊಡಗುದಾಸರು ಇದರ ಪೂಜಾರಿಗಳು. ಇಲ್ಲಿನ ಗಂಧದ ಪಾದರಕ್ಷೆಗಳನ್ನು ಉಜ್ಜಿನಿ ಸ್ವಾಮಿಗಳು ಕೊಂಡೊಯ್ದರು. ಎಲ್ಲಾ ಜನಾಂಗದವರು ಇದಕ್ಕೆ ಬರುತ್ತಾರೆ. ಹರಕೆಗಳನ್ನು ತೀರಿಸಿಕೊಳ್ಳುತ್ತಾರೆ. ೩ ವಾಸೆಗಳನ್ನು ಕೊಯ್ಯತ್ತಾರೆ. ಇದರ ಪಕ್ಕದ ಗೌರಿಪುರದ ಹತ್ತಿರ ಬೂದಿ ದಿಬ್ಬದಲ್ಲಿ ಪದಿಮುತ್ತಿಗಾರು ಐಕ್ಯರಾದರು. (ದಿ. ಪೂಜಾರಿ ಬೋರಯ್ಯ ೬೦, ಬೋರೇದೇವರ ಪೂಜಾರಿ, ಕುದಾಪುರ ಬೋರವನ ಹಟ್ಟಿ). ಭೈರವ ಅಥವಾ ನಾಥ ಸಂಪ್ರದಾಯವು ಚಾರಿತ್ರಿಕವಾಗಿ ಬಹುಪುರಾತನ ಕಾಲಕ್ಕೆ ಕೊಂಡೊಯ್ಯುತ್ತದೆ. ಸಿಂಧೂ ಬಯಲಿನ ನಾಗರಿಕತೆಯಲ್ಲಿ ದೊರೆತ ಪ್ರಾಚ್ಯಾವಶೇಷಗಳಲ್ಲಿ ಗೂಳಿ, ಪಶುಪತ ಮೊದಲಾದ ಮುದ್ರಿಕೆಗಳು ಅಂದಿನ ಜನಜೀವನವನ್ನು ಸಂಕೇತಿಸುತ್ತವೆ. ಹಸು(ಗೂಳಿ), ಪಶುಪತಿ ಕ್ರಮೇಣ ಬೇರೆ ಬೇರೆ ಸ್ವರೂಪ ಪಡೆಯಿತು. ಅಧ್ಯಯನದ ದೃಷ್ಟಿಯಿಂದ ದಾಸ, ದಸ್ಯು, ಅನಾರ್ಯರು ವೇದಗಳಲ್ಲಿ ನಂಬಿಕೆ ಇಲ್ಲದವರು, ಪಂಚಮರು, ಅಂತ್ಯಜರು, ದ್ವಿಜರಲ್ಲದವರು, ವರ್ಣಸಂಕರ, ಸಂಕೀರ್ಣ ಜಾತಿಗೊಳಪಟ್ಟ ಶೋಷಿತ ಸಮುದಾಯಗಳು ಆಧುನಿಕ ಕಾಲದಲ್ಲಿ ದ್ರಾವಿಡರೆಂದು ಕರೆದುಕೊಂಡರು. ಇದನ್ನು ಅಂಬೇಡ್ಕರ್ ಅವರು ಶೂದ್ರರು ಯಾರು? ಎಂಬ ಪ್ರಶ್ನೆಯೊಂದಿಗೆ ದಾಸ್ಯು, ದಾಸ, ದ್ರಾವಿಡರಂತೆ ವಿಶ್ಲೇಷಿಸಿದ್ದಾರೆ. ಆರ್ಯರ ಬಗ್ಗೆಯು ಮ್ಯಾಕ್ಸ್‌ಮುಲ್ಲರ್, ಪೆಂಕ, ಜೇಮ್ಸ್‌ಮಿಲ್ ಮೊದಲಾದವರು ಚಿಂತಿಸಿರುವುದು ಗಮನಾರ್ಹ. ಆರ್.ಎಸ್. ಶರ್ಮ, ರೊಮಿಲಾ ಥಾಪರ್, ಎಚ್.ಡಿ. ಸಂಕಾಲಿಯಾ, ಡಿ.ಡಿ. ಕೊಸಾಂಬಿ ಮೊದಲಾದವರು

Scanned with OKEN Scanner

ಪಶುಪಾಲನಾ ಬುಡಕಟ್ಟುಗಳನ್ನು ಬೇರೆ ಬಗೆಯಲ್ಲಿ ಅರ್ಥೈಸಿದ್ದಾರೆ. ಹಾಗೆಯೇ ಚಾರಿತ್ರಿಕವಾಗಿ ಲಾಕುಲೀಶ, ಕಾಪಾಲಿಕ ಮತ್ತು ಕಾಳಾಮುಖರು ಸಾಮಾಜಿಕವಾಗಿ ಧಾರ್ಮಿಕವಾಗಿ ಮಹತ್ವದ ಪಾತ್ರ ವಹಿಸಿದ್ದರು. ಶಿವನನ್ನು ಕೇಂದ್ರೀಕರಿಸಿಕೊಂಡು ಆಚರಣಾತ್ಮಕ ನೆಲೆಗಳಲ್ಲಿ ಉಗ್ರತೆ, ಕ್ರೂರತೆ, ವಿಕೃತ ರೂಪವು ಇತ್ತು ಹಾಗೆಯೇ ಹಟಯೋಗ, ಭಂಗಿಸೊಪ್ಪು ಸೇದುವುದು, ಮಾಂಸ ತಿನ್ನುವುದು ಬೂದಿ ಬಳಿದುಕೊಂಡು ನಗ್ನ ರೂಪದಲ್ಲಿರುವ ಭೈರಾಗಿಗಳು ತ್ರಿಶೂಲ ಹಿಡಿದು, ಢಮರುಗ ಬೊನಾಸಿ ಹಿಡಿದು ಜೋಗಿಯಾಗಿದ್ದುದು ಸಹಾ ಮಧ್ಯಕಾಲೀನವರೆಗೂ ಕಂಡು ಬರುವ ಚಿತ್ರಣ. ರಾಜಮನ್ನಣೆ ಪಡೆದ ಅವಧಿಯಲ್ಲಿ ಕಾಳಾಮುಖ, ಕಾಪಾಲಿಕರು ಮತ್ತು ಲಾಕುಲೀಶರು ಸಮಾಜಕ್ಕೆ ವಿಶೇಷವಾಗಿ ಮತ್ತು ವ್ಯತಿರಿಕ್ತವಾಗಿ ವರ್ತಿಸಿದ್ದು ಸ್ಪಷ್ಟ. ಇಂಥವರು ಶಂಕರಾಚಾರ್ಯರು, ರಾಮಾನುಜಾಚಾರ್ಯರು ಪ್ರಭಾವಕ್ಕೊಳಪಟ್ಟು ತಮ್ಮದೇ ಆದ ಆರಾಧನಾ ಕೇಂದ್ರಗಳನ್ನು ಸ್ಥಾಪಿಸಿಕೊಂಡರು.

ಶಿವ ದೇವಾಲಯಗಳಲ್ಲಿ ವೀರಭದ್ರ, ಆಂಜನೇಯ, ಜನಾರ್ಧನ, ಸೂರ್ಯ, ಲಕ್ಷ್ಮಿ, ಪಾರ್ವತಿ ಶಿಲ್ಪಗಳನ್ನು ಒಂದು ಕಾರಣಕ್ಕಾಗಿ ಕೆತ್ತಲಾಗಿರುತ್ತದೆ. ಸಪ್ತಮಾತೃಕೆಯರು, ಭೈರವ, ಭದ್ರಕಾಳಿ, ಮೊದಲಾದ ವಿಗ್ರಹಗಳಿರುತ್ತವೆ. ಇವು ಪ್ರಭುತ್ವದ ಸೂಚನೆಯಂತೆ ಸ್ಥಾಪನೆ ಮತ್ತು ಮರು ಸ್ಥಾಪನೆಗೊಳ್ಳುತ್ತವೆ.

ಹೆಣ್ಣನ್ನು ಭೋಗ ವಸ್ತುವಾಗಿ ಮಾಡಿಕೊಂಡು ರಾಮಾನುಜರ ಪ್ರಭಾವಕ್ಕೊಳಗಾದವರು ಆಂಜನೇಯ ಗುಡಿ–ದೇವಾಲಯಗಳನ್ನು ವೈಷ್ಣವೀಕರಿಸಿ ಅಮಾಯಕ ಹೆಣ್ಣುಮಕ್ಕಳನ್ನು ಮುತ್ತು ಕಟ್ಟಿಸಿ ದೇವದಾಸಿಯರನ್ನಾಗಿ ಮಾಡಿದ್ದು ದುರಂತವೇ ಸರಿ. ಗ್ರಾಮೀಣ, ಬಡ, ಶೋಷಿತ ಮಹಿಳೆರ ಏಳಿಗೆಗೆ ಹೆಗಲು ಕೊಡುವ ಬದಲು ಬದುಕನ್ನು ನರಕಕ್ಕೆ ತಳ್ಳಿದ್ದು ಪುರೋಹಿತ ಶಾಹಿಯ ವಿಕೃತ ಅಧ್ಯಾಯವಾಗಿದೆ. ಆಂಜನೇಯ ಹುಟ್ಟಿದ್ದು ಅಂಜನಾದ್ರಿ ಪರ್ವತದಲ್ಲಿ, ಆತನಿಗಿಲ್ಲದ ವಿಶೇಷ ಸ್ಥಾನಮಾನವನ್ನು ತುಂಬಿದವರು ಮೌಢ್ಯತೆ ಅಂದಾನುಕರಣೆ ಮಾಡಿಕೊಂಡು ಬಂದ ಮುಗ್ಧ ಜನರು. ಹಾಗಾಗಿ ದೇವಾಲಯಗಳಲ್ಲಿ ರಂಗಭೋಗ–ಅಂಗಭೋಗ ನಿರಂತರವಾಗಿ ನಡೆಯಿತು. ನಾಥ ಸಂಪ್ರದಾಯದಲ್ಲಿ ಚಿತ್ರದುರ್ಗ, ಶಿವಮೊಗ್ಗ, ದಕ್ಷಿಣಕನ್ನಡ, ಉಡುಪಿ ಬಳ್ಳಾರಿ, ದಾವಣಗೆರೆ ಮೊದಲಾದ ಜಿಲ್ಲೆಗಳಲ್ಲಿ ಹೆಣ್ಣನ್ನು ಶೋಷಿಸುವ ಸಂಪ್ರದಾಯಗಳಿವೆ.

ಸಮಾರೋಪ

ಬುಡಕಟ್ಟು ನೆಲೆಯಲ್ಲಿ ಜೋಗಿ ಸಂಪ್ರದಾಯದ ಆಚರಣೆ–ರೂಢಿ–ಜೀವನಶೈಲಿ ಇಂದಿಗೂ ಉಳಿದುಕೊಂಡು ಬಂದಿರುವುದು ಸಾಂಸ್ಕೃತಿಕ ಅಸ್ಮಿತೆಗಳಿಂದಲೇ. ಹಾಗಾಗಿ ಜೋಗಿ, ಸಿದ್ಧ ಹೆಸರಿನ ಸ್ಥಳನಾಮಗಳು ಹಾಗೂ ವ್ಯಕ್ತಿನಾಮಗಳು ಜೀವಂತಿಕೆ ಪಡೆದಿರುವುದೇ ಬುಡಕಟ್ಟು ಜನರಿಂದ. ಯಾವುದೇ ನಿರ್ಣಾಯಕ ಆಚರಣೆಗಳು

Scanned with OKEN Scanner

ನಡೆದಾಗ ಕಟ್ಟುನಿಟ್ಟಿನ ವಿಧಿ ಮತ್ತು ನಿಷೇಧಗಳನ್ನು ಹೇರುವುದು ಇಂದಿಗೂ ಇದೆ. ಉತ್ತರ ಭಾರತದ ಜೋಗಿ ಅಥವಾ ನಾಥ ಸಂಪ್ರದಾಯಕ್ಕೂ ದಕ್ಷಿಣಭಾರತದ ಜೋಗಿ ಸಂಪ್ರದಾಯಕ್ಕೂ ವ್ಯತ್ಯಾಸವಿದೆ. ಕರ್ನಾಟಕದಲ್ಲಿ ಚಾಲ್ತಿಯಲ್ಲಿರುವ ಜೋಗಿ ಹೆಸರಿನ ಸ್ಥಳನಾಮ ಮತ್ತು ವ್ಯಕ್ತಿನಾಮಗಳ ಹಿನ್ನಲೆಯಲ್ಲಿ ಬುಡಕಟ್ಟು ಸಂಸ್ಕೃತಿಯೊಳಗಿನ ಅಪೂರ್ವ ಸಂಗತಿಗಳನ್ನು ವಿಶ್ಲೇಷಿಸಲಾಗಿದೆ. ಬೋರೇ ದೇವರು, ಕಾಲಭೈರವ, ನುಂಕಪ್ಪ ಮೊದಲಾದ ಹೆಸರುಗಳಿಂದ ಕರೆಯುವ ಜೋಗಿ ಸಮುದಾಯ ವಿಶಿಷ್ಟ ಸಂಪ್ರದಾಯಗಳನ್ನು ಹೊಂದಿರುವುದು ಗಮನಾರ್ಹ.

ಅಭ್ಯಾಸ ಮಾಡಿದ ಗ್ರಂಥಗಳು

೧. ಎಡ್ಗರ್ ಥರ್ಸ್ಟನ್ ಕೆ. ರಂಗಾಚಾರಿ, (ಅನು.), ಬಂಜಗೆರೆ ಜಯಪ್ರಕಾಶ್, ೨೦೧೯ ದಕ್ಷಿಣ ಭಾರತದ ಜಾತಿ ಮತ್ತು ಬುಡಕಟ್ಟುಗಳು, ಕುವೆಂಪು ಭಾಷಾ ಭಾರತಿ, ಪ್ರಾಧಿಕಾರ, ಬೆಂಗಳೂರು.

೨. ಕೃಷ್ಣಮೂರ್ತಿ ಹನೂರು, ೧೯೯೩ ಮ್ಯಾಸಬೇಡರ ಸಂಸ್ಕೃತಿ, ಕ.ಸಾ.ಅ. ಬೆಂಗಳೂರು

೩. ಬೋರಪ್ಪನಾಯಕ, ೨೦೧೯, ನುಂಕಮಲೆ ಕಾಲಭೈರವ ಮಹಾತ್ಮೆ, ಪ್ರಬುದ್ಧ ಪ್ರಕಾಶನ ಸೂಲೇನಹಳ್ಳಿ.

೪. ರಾಜಣ್ಣ ಆರ್, ೧೯೮೨, ನಾಯಕ ಜನಾಂಗದ ಇತಿಹಾಸ, ಚಳ್ಳಕೆರೆ.

೫. ರಹಮತ್ ತರೀಕೆರೆ, ೨೦೧೭, ಕರ್ನಾಟಕದ ನಾಥಪಂಥ, ಪ್ರಸಾರಾಂಗ, ಕವಿಹಂ.

೬. ರಹಮತ್ ತರೀಕೆರೆ, ೨೦೧೭, ಕರ್ನಾಟಕದ ಶಾಕ್ತಪಂಥ, ಪ್ರಸಾರಾಂಗ, ಕವಿಹಂ.

೭. ಸೂರ್ಯನಾಥ ಕಾಮತ್ (ಸಂ.), ೧೯೮೪, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೧, ಕರ್ನಾಟಕ ಸರ್ಕಾರ, ಬೆಂಗಳೂರು.

೮. ಪಂಡಿತ ರೇವಣ್ಣ ಕವಿಗಳು, ೧೯೫೯, ವಾಲ್ಮೀಕರ ಪುರಾಣವು, ದ್ವಾಮವ್ವನಹಳ್ಳಿ.

೯. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೭, ಬೇಟೆ ಮತ್ತು ಬೇಡರು, ಚಿನ್ನಹಗರಿ, ಪೂಜಾರಹಳ್ಳಿ

೧೦. ಕರ್ನಾಟಕ ಗ್ರಾಮಕೋಶ, ಕರ್ನಾಟಕ ಸರ್ಕಾರ, ಬೆಂಗಳೂರು.

Scanned with OKEN Scanner

ISSN 2278-5043

ಚರಿತ್ರೆ ಅಧ್ಯಯನ

ಸಂಪುಟ ೧೪ ಸಂಚಿಕೆ ೨, ಜನವರಿ - ಜೂನ್ ೨೦೨೩



ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

Scanned with OKEN Scanner

CHARITRE ADHYAYANA
Bi-Annual-Vol-14-Issue-2, January-June-2023

Edited by
Prof. N. Chinnaswamy Sosale
Senior Professor
Deptartment of History
Kannada University, Hampi
Vidyaranya 583 276

Published by
Dr. Madhava Peraje
Director, Prasaranga
Kannada University, Hampi
Vidyaranya 583 276

Pages: x + ೧೪೮

www.kannadauniversity.org

First Impression: 2024

ISSN 2278-5043

ಚರಿತ್ರೆ ಅಧ್ಯಯನ ಅರ್ಧವಾರ್ಷಿಕ ಪತ್ರಿಕೆ

ಸಂಪುಟ-೧೪, ಸಂಚಿಕೆ-೨, ಜನವರಿ-ಜೂನ್ ೨೦೨೩

(ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳ ಅಭಿಪ್ರಾಯಗಳಿಗೆ ಲೇಖಕರೇ ಜವಾಬ್ದಾರರು)

© ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೨೪

ಪ್ರಧಾನ ಸಂಪಾದಕರು: **ಡಾ. ಡಿ.ವಿ. ಪರಮಶಿವಮೂರ್ತಿ**

ಸಂಪಾದಕರು: **ಡಾ. ಎನ್. ಚಿನ್ನಸ್ವಾಮಿ ಸೋಸಲೆ**

ಸಂಪಾದಕ ಸಲಹಾ ಮಂಡಲಿ
ಡಾ. ವಿಜಯ್ ಪೂಣಚ್ಚ ತಂಬಂಡ
ಡಾ. ಕೆ. ಮೋಹನ್‌ಕೃಷ್ಣ ರೈ
ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಬಿಡಿ ಪ್ರತಿ: ರೂ. ೧೦೦/- ವಾರ್ಷಿಕ ಚಂದಾ: ವ್ಯಕ್ತಿಗಳಿಗೆ ರೂ. ೧೫೦/-
ಸಂಸ್ಥೆಗಳಿಗೆ ರೂ. ೨೦೦/-

ಅಕ್ಷರ ಸಂಯೋಜನೆ: **ಸುರೇಖಾ ಕಂಪ್ಯೂಟರ್ಸ್, ಕಮಲಾಪುರ**

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ಮೈಸೂರು ಬ್ಯಾಂಕ್ ವೃತ್ತ, ನಂ. ೧, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯, ದೂ.: ೦೮೦-೨೨೩೭೨೩೪೮

ಮುದ್ರಣ
ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

Scanned with OKEN Scanner

೮. ಶಹಾಪುರದ ಸಗರಾದ್ರಿ ಬೆಟ್ಟ ಮೂಲದಲ್ಲಿ ಬೌದ್ಧನೆಲೆ : ಲಕ್ಷಿಸಬೇಕಾದ ಕೆಲವು ಸಂಗತಿಗಳು / ೧೦೬
ಡಾ. ಬುದ್ಧಘೋಷ್ ದೇವೇಂದ್ರ ಹೆಗಡೆ

೯. ವಿಜಯನಗರ ಕಾಲದ ಪಾಪಯ್ಯ ಮತ್ತು ಪಾಪಿನಾಯಕನಹಳ್ಳಿಯ ಚಾರಿತ್ರಿಕ ಮಹತ್ವ / ೧೨೪
ಡಾ. ವಿರೂಪಾಕ್ಷಿ ಪೂಜಾರಹಳ್ಳಿ

೧೦. ಅಸ್ಪೃಶ್ಯತೆಯ ಕರಾಳ ಮುಖಗಳು : ಹೆಗ್ಗೋಠಾರ ಗ್ರಾಮದ ಘಟನೆ ಅನುಲಕ್ಷಿಸಿ / ೧೩೭
ಮಣಿಕಂಠ ಹಂಗಳ

ಲೇಖಕರ ವಿಳಾಸಗಳು / ೧೪೭

Scanned with OKEN Scanner

೯

ವಿಜಯನಗರ ಕಾಲದ ಪಾಪಯ್ಯ ಮತ್ತು ಪಾಪಿನಾಯಕನಹಳ್ಳಿಯ ಚಾರಿತ್ರಿಕ ಮಹತ್ವ

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಆನೆಗೊಂದಿ ಮತ್ತು ಹಂಪಿ ಪರಿಸರದಲ್ಲಿ ವಿಜಯನಗರ ಕಾಲದ ಸ್ಮಾರಕಗಳು, ಏನವಸತಿ ನೆಲೆಗಳು, ಬೇಚರಾಕ್ ಗ್ರಾಮಗಳಲ್ಲಿವೆ. ಹಟ್ಟಿ, ಹಳ್ಳಿ, ಗ್ರಾಮ, ಪಟ್ಟಣ, ನಗರಗಳು ತಮ್ಮದೇ ಆದ ಚಾರಿತ್ರಿಕ ಮಹತ್ವವನ್ನು ಹೊಂದಿರುವುದು ಗಮನಾರ್ಹ. ಇಂಥ ಐತಿಹಾಸಿಕ ಗ್ರಾಮಗಳ ಪೈಕಿ ಪಾಪನಾಯಕನಹಳ್ಳಿ ಮತ್ತು ಕೊಂಡನಾಯಕನ ಹಳ್ಳಿ ಪ್ರಮುಖವಾಗಿವೆ. ಇವೆರಡು ಗ್ರಾಮಗಳು ನಾಯಕನ ಹೆಸರಿನಲ್ಲಿರುವುದು ವಿಶೇಷ. ಹಂಪಿ ಪರಿಸರದಲ್ಲಿ ಕಮಲಾಪುರ, ಆನೆಗೊಂದಿ, ಬುಕ್ಕಸಾಗರ, ರಾಮಸಾಗರ, ವೆಂಕಟಾಪುರ, ಮುದ್ದಾಪುರ, ನಾಗಲಾಪುರ, ಬೆನಕಾಪುರ, ಸಣಾಪುರ, ಮಲ್ಲಾಪುರ, ವಿಯಾಪುರ ಮೊದಲಾದ ಸ್ಥಳಗಳನ್ನು ಶೋಧನೆ ಮತ್ತು ಸಂಶೋಧನೆಗೊಳಪಡಿಸುವ ಅಗತ್ಯವಿದೆ. ಇಲ್ಲಿನ ಒಂದೊಂದು ಸ್ಥಳಕ್ಕೂ ಒಂದೊಂದು ಬಗೆಯ ಚಾರಿತ್ರಿಕ ಮಹತ್ವ ಇರುವುದು ಗಮನಾರ್ಹ. ಪ್ರಸ್ತುತ ಪ್ರಬಂಧದಲ್ಲಿ ವಿಜಯನಗರ ಕಾಲದ ಶಾಸನಗಳಲ್ಲಿ ಕಂಡುಬರುವ ಪಾಪಯ್ಯ ಎಂಬ ವ್ಯಕ್ತಿಯಾರು? ಈತನ ಬಗೆಗಿನ ಐತಿಹಾಸಿಕ ಮಹತ್ವ ಏನು? ಪಾಪನಾಯಕನ ಹಳ್ಳಿಯ ಗ್ರಾಮ/ಸ್ಥಳೀಯ ಚರಿತ್ರೆಯ ಮಹತ್ವವನ್ನು ತಿಳಿಸುವ ಉದ್ದೇಶವಿದೆ.

'ಪಾಪಯ್ಯ' ಎಂಬ ಹೆಸರು ಶಾಸನ ಹಾಗೂ ಕೈಫಿಯತ್ತುಗಳಲ್ಲಿದ್ದು, ಈತ ಯಾರು? ಸಾಧನೆ ಏನು? ಕಾಲಮಾನ ಯಾವುದು? ವಂಶ ಪರಂಪರೆ ಏನು? ಸ್ಮಾರಕಗಳು ಮತ್ತು ಮೌಖಿಕ ಚರಿತ್ರೆ ಹೇಳುವ ವಿಚಾರಗಳನ್ನು ಇಲ್ಲಿ ಜಿಜ್ಞಾಸೆಗೊಳಪಡಿಸಲಾಗಿದೆ. ಕಮಲಾಪುರ ಪಟ್ಟಣದ ಈಶಾನ್ಯಕ್ಕಿರುವ ಎಚ್.ಪಿ.ಸಿ. ಕ್ಯಾಂಪಿನ(ವರದರಾಜಮ್ಮ ಪಟ್ಟಣ-ಪಟ್ಟಾಭಿರಾಮ ದೇವಾಲಯದ ಪಶ್ಚಿಮ) ಪಶ್ಚಿಮಕ್ಕಿರುವ ಬೇಟೆಗಾರರ ಹೆಬ್ಬಾಗಿಲು (ಮಾಲ್ಯವಂತ ರಘುನಾಥ ದೇವಾಲಯದ ಆಗ್ನೇಯಕ್ಕೆ) ಸಮೀಪದಲ್ಲಿ ಶಾಸನ

ದೊರೆತಿದೆ. ಶಿಥಿಲವಾದ ದೇವಾಲಯದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ 'ವಿಜಯನಗರ ಕೃಷ್ಣರಾಯ ಮಹಾರಾಯ ಸರ್ವಧಾರಿ: ಪುಷ್ಯ ಬ ೧೦ ಸೋಮವಾರ ಕ್ರಿ.ಶ. ೧೫೨೯ ಜನವರಿ ೫ ಮಂಗಳವಾರ ಅರಸನ ಪಾಲಿಸುತ್ತಾ ಪಾಪಯ್ಯ ಎಂಬುವ ವ್ಯಕ್ತಿ ದೇವಸ್ಥಾನ ಕಟ್ಟಿಸುತ್ತಾನೆ' (ವಿಜಯನಗರ ಪ್ರೊಗ್ರೆಸ್ ರೀಪೋರ್ಟ್ ೧೯೯೧-೯೨ ಸಂ ೪) ಎಂದು ತಿಳಿದು ಬರುತ್ತದೆ.[೧]

ದೇವಸ್ಥಾನ ಕಟ್ಟಿಸುವ ಕಾರ್ಯಕ್ಕೆಗೊಂಡ ಪಾಪಯ್ಯ ಯಾರು? ಈತನ ಸ್ಥಾನಮಾನ ಏನು? ಎಂಬ ಬಗ್ಗೆ ಉಲ್ಲೇಖವಿಲ್ಲ. ಬೇಡನಾಯಕರೇ ವ್ಯಾಪಕವಾಗಿ ನೆಲಸಿರುವ ಕಮಲಾಪುರ ಪರಿಸರದಲ್ಲಿ ಪಾಪಯ್ಯ ಎಂಬ ವ್ಯಕ್ತಿ ಜವಾಬ್ದಾರಿ ಸ್ಥಾನದಲ್ಲಿದ್ದಂತೆ ಕಂಡುಬರುತ್ತದೆ. ಪಾಪಯ್ಯ ಎಂಬುವನು ಸೈನಿಕನೊ, ದಂಡನಾಯಕನೋ, ಅಮರನಾಯಕನೋ ಅಥವಾ ಈ ಭಾಗದ ಸಾಮಂತ ಅಧಿಕಾರಿಯೋ ಪಾಳೆಯಗಾರನೋ ಎಂದು ಊಹಿಸಲು ಆಧಾರಗಳಿವೆ. ಇದಕ್ಕೆ ಮೌಖಿಕ ಚರಿತ್ರೆ ಸತ್ಯಕ್ಕೆ ಹತ್ತಿರವಾದ ಸಂಗತಿಯನ್ನು ತಿಳಿಸುತ್ತದೆ. ಹಂಪಿ ಜಾನಪದ ಕೃತಿಯಲ್ಲಿ 'ವಿಜಯನಗರ ಸಂಸ್ಥಾನದ ಸಂಸ್ಥಾಪಕರಾದ ಹಕ್ಕ-ಬುಕ್ಕರು ಬೇಡರಾಗಿದ್ದರೆಂದೂ ಅವರು ಪೂರ್ವದಲ್ಲಿ ಕಂಪಿಲನ ಜೊತೆಗಿದ್ದರೆಂದೂ ಬೇಡರು ಹೇಳಿಕೊಳ್ಳುತ್ತಾರೆ. ಉಳಿದಂತೆ ಕೊಂಡನಾಯಕನು ಪ್ರಸಿದ್ಧ ಸೇನಾಧಿಪತಿಯೂ ಪಾಪಿನಾಯಕನೂ ಪ್ರಸಿದ್ಧ ಸಂತನೂ ಆಗಿದ್ದನೆಂದು ಅವರು ವಾದಿಸುತ್ತಾರೆ. ಆದರೆ ಬೇಡನಾಯಕರಲ್ಲಿ ಕೊಂಡನಾಯಕನ ಬಗೆಗೆ ಯಾವುದೇ ಕತೆಗಳಿಲ್ಲ, ಪಾಪಿನಾಯಕನ ಬಗೆಗೆ ಮಾತ್ರ ಅವರಲ್ಲಿ ಸಾಕಷ್ಟು ಕತೆಗಳಿವೆ ಎಂಬ ಮಾತನ್ನು ಇಲ್ಲಿ ಪರಿಶೀಲಿಸಬೇಕಿದೆ.[೨]

ಪಾಪಯ್ಯನಿಗೆ ಜನಪದರು ಪಾಪನಾಯಕ ಎಂದು ಕರೆದಿರುವ ಶಕ್ಯತೆಯಿದೆ. ವಿಜಯನಗರ ಸಾಮ್ರಾಜ್ಯದ ರಾಜ್ಯಾಡಳಿತದಲ್ಲಿ ರಾಜನು ಅಧಿಕಾರ ಸ್ಥಾನಕ್ಕೆ ಬರುವ ಪೂರ್ವದಲ್ಲಿ ಚಿಕ್ಕಪಟ್ಟ ಅಧಿಕಾರ ಸ್ಥಾನದ ಅನುಭವ ಹೊಂದಿರಬೇಕಿತ್ತು. ಡಾ. ಪಿ.ಬಿ. ದೇಸಾಯಿ ಅವರು ತಿಳಿಸುವಂತೆ 'ಹರಿಹರನ ತಮ್ಮ ಮಹಾಮಂಡಲೇಶ್ವರ ಬುಕ್ಕರಾಯ ಮಹಾಮಂಡಲೇಶ್ವರ ಕಂಪಣ್ಣನು ಉದಯಗಿರಿ ರಾಜ್ಯ(ನೆಲ್ಲೂರು, ಕಡಪಾ ಸೀಮೆ) ನೆಲ್ಲೂರು ರಾಜಧಾನಿಯಾಗಿ ಕಂಪಣ್ಣನ ಮನ ೨ನೇ ಸಂಗಮ ಉದಯಗಿರಿ ರಾಜ್ಯ ಮಾರಪ್ಪ ಆರಗ(ಮಲೆ) ರಾಜ್ಯಕ್ಕೆ ಒಡೆಯನಾದ ಬಗ್ಗೆ ತಿಳಿಸುತ್ತಾರೆ.[೩] ಈ ಕಾಲದಲ್ಲಿ ಮುಳಬಾಗಿಲು, ಪೆನುಗೊಂಡ, ಚಂದ್ರಗಿರಿ ಮೊದಲಾದ ರಾಜ್ಯಗಳಿದ್ದವು.

ಈ ಮೇಲಿನ ಎರಡು ಸಂಗತಿಗಳನ್ನು ಗಮನಿಸಿದರೆ, ರಾಜಪರಿವಾರದವರು ಮಾತ್ರ ಉನ್ನತ ಹುದ್ದೆ ಮತ್ತು ಅಧಿಕಾರ ಹೊಂದಿದ್ದು ವೇದ್ಯವಾಗುತ್ತದೆ. ಪಾಪಯ್ಯನು ಇಂಥ ಸೀಮೆಗೆ ಅಧಿಕಾರಿಯೋ ಅಥವಾ ಅಮರನಾಯಕನೋ ಆಗಿರಬೇಕು. ಅಂಥ ಇಂಥ ಪ್ರದೇಶ ಈಗಿನ ಜಗಲೂರು ಸೀಮೆ ಇರಬೇಕು ಮತ್ತು ಈತ ಶಾಸನ ಹಾಕಿಸುವಂಥ ಅಧಿಕಾರ ಹೊಂದಿದ್ದನೆಂದರೆ ಉನ್ನತ ಹುದ್ದೆಯಲ್ಲಿರಬೇಕೆಂದು ತಿಳಿಯಬಹುದು.

Scanned with OKEN Scanner

ಈ ಬಗ್ಗೆ ಹೆಚ್ಚಿನ ವಿವರಗಳು ಲಭ್ಯವಿಲ್ಲ. ಆದರೂ ಪಾಪಯ್ಯ/ಪಾಪನಾಯಕ/ಸೂರ್ಯದೇವ/ಪಾಪಯ್ಯ/ಕೋರೆಲು ಪಾಪನಾಯಕ/ಪರದೇಶಿ ಪಾಪಯ್ಯ/ದಾವರ್ಲ ಪಾಪನಾಯಕ/ಸೂರ್ಯಪಾಪಯ್ಯ ಎಂಬ ಹೆಸರುಗಳಿಂದ ಕರೆಯುವ ಏಕೈಕ ವ್ಯಕ್ತಿ ಜಗಳೂರು ಪಾಪನಾಯಕ. ಈತ ಹಂಪಿ ಪರಿಸರದಲ್ಲಿ ನೆಲಸಿದ್ದ ಬಗ್ಗೆ ಗ್ರಾಮವೊಂದು ನಿರ್ಮಾಣಗೊಂಡಿದೆ ಎಂದರೆ ಅತಿಶಯೋಕ್ತಿಯಲ್ಲ. ಏಕೆಂದರೆ ಒಬ್ಬ ವ್ಯಕ್ತಿ ಬಗ್ಗೆ ಹಂಪಿ ಪರಿಸರದಲ್ಲಿ ಶಾಸನ, ಬೇರೆ ಕಡೆ ಸ್ಮಾರಕಗಳು ಆತನ ಹೆಸರಿನಲ್ಲಿದ್ದರೆ, ಗ್ರಾಮವೊಂದು ಆತನ ಹೆಸರಲ್ಲಿ ನಿರ್ಮಾಣಗೊಂಡಿರುವುದು ಐತಿಹಾಸಿಕ ಸತ್ಯ. ಈ ಬಗ್ಗೆ ಹೊಸಪೇಟೆ ತಾಲೂಕು ದರ್ಶನದಲ್ಲಿ ಪಾಪಿನಾಯಕನಹಳ್ಳಿಗೆ ಸಂಬಂಧಿಸಿದಂತೆ ಸ್ಥಳೀಯರು ಈ ರೀತಿ ತಿಳಿಸುತ್ತಾರೆ. 'ವಿಜಯನಗರ ಕಾಲದಲ್ಲಿ ಈ ಊರಿನ ಕಂದಾಯ ವಸೂಲಿ ಹಕ್ಕನ್ನು ಪಾಪಯ್ಯ ಎಂಬ ಪಾಳೆಯಗಾರನಿಗೆ ವಹಿಸಲಾಗಿತ್ತು. ಆದುದರಿಂದ ಈ ಹಳ್ಳಿಗೆ ಪಾಪ(ಪಿ)ನಾಯಕನಹಳ್ಳಿ ಎಂಬ ಹೆಸರು ಬಂದಿದೆ. ಇಲ್ಲಿ ದೊರೆತಿರುವ ಕ್ರಿಶ ೧೫೨೨ ಅಚ್ಯುತರಾಯನ ಶಾಸನದಲ್ಲಿ 'ನಿಡುಗುಲ ಆಲಿಯಾಸ್ ಅಪಿನಾಯಕಪುರ ಎಂಬ ಸರ್ವಮಾನ್ಯ ಅಗ್ರಹಾರದ ಉಲ್ಲೇಖವಿದೆ. ಬಹುಶಃ ಪಾಪಿನಾಯಕನಹಳ್ಳಿ ಗ್ರಾಮದ ಮೊದಲ ಸ್ಥಳನಾಮ ನಿಡುಗುಲ ಎಂದಿದ್ದು ನಂತರ ಅಪಿನಾಯಕನಪುರಂ ಆಗಿ, ಈಗ ಪಾಪಿನಾಯಕನಹಳ್ಳಿ ಆಗಿದೆ.[೪] ವೆಂಕಟಪತಿರಾಯನ ಕಾಲದಲ್ಲಿ ಕ್ರಿಶ. ೧೭೪೨ರ ಇಲ್ಲಿನ ಶಾಸನವು ಮಾದಿನಾಯಕನಹಳ್ಳಿಯನ್ನು ಕವಿರಾಜ ಮೊಮ್ಮಗನಿಗೆ ಉಂಬಳಿ ಕೊಟ್ಟಿದ್ದನ್ನು ಗಮನಿಸಿದರೆ ಇಲ್ಲಿ ಪಾಪನಾಯಕನಹಳ್ಳಿಯನ್ನು ಪಾಪಯ್ಯ ಎಂಬ ಕಂದಾಯ ವಸೂಲಿ ಮಾಡುವ ಅಧಿಕಾರಿ ಹಾಗೂ ಸಂತನಿಂದ ಕರೆದಿರುವುದು ಜನರ ಪ್ರೀತಿಯ ದ್ಯೋತಕವಾಗಿದೆ.

ಪಾಪಿನಾಯಕನಹಳ್ಳಿ ಎಂಬ ಗ್ರಾಮ ಹೊಸಪೇಟೆಯಿಂದ ಪೂರ್ವಕ್ಕೆ ೧೧ ಕಿ.ಮೀ ಹಾಗೂ ಬಳ್ಳಾರಿಯಿಂದ ಪಶ್ಚಿಮಕ್ಕೆ ೫೧ ಕಿ.ಮೀ ಅಂತರದಲ್ಲಿದೆ. ಪ್ರಸ್ತುತ ಗ್ರಾಮ ಪಂಚಾಯಿತಿ ಕೇಂದ್ರ ಹಾಗೂ ಜಿಲ್ಲಾ ಪಂಚಾಯತ್ ಕ್ಷೇತ್ರವಾಗಿರುವ ಪಾಪಿನಾಯಕನಹಳ್ಳಿ ಎಲ್ಲ ಸಮುದಾಯ, ಎಲ್ಲ ಧರ್ಮದವರಿಂದ ಕೂಡಿದೆ. ಶತಮಾನಗಳ ಹಿಂದಿನ ಗ್ರಾಮ ದೇವತೆಗಳು, ಶಿಥಿಲಗೊಂಡಿರುವ ಕೋಟೆ, ವೀರಗಲ್ಲು ಇತರ ಸ್ಮಾರಕಗಳು ಈ ಗ್ರಾಮದ ಮಹತ್ವವನ್ನು ಇಮ್ಮಡಿಗೊಳಿಸಿದ್ದು ಸ್ಪಷ್ಟ. ಪಾಪಿನಾಯಕನಹಳ್ಳಿ ಐತಿಹಾಸಿಕ ಗ್ರಾಮ ಎಂಬುವುದಕ್ಕೆ ಇಲ್ಲಿರುವ ಅಂಕಲಮ್ಮ, ಈಶ್ವರ, ವೆಂಕಟೇಶ್ವರ, ಹನುಮಪ್ಪ, ವೀರಪ್ಪ, ಬಸವಣ್ಣ, ಮಾರೆಮ್ಮ, ಕೆಂಚಮ್ಮ, ದುರ್ಗಮ್ಮ ಗುಂಡಪ್ಪ ಇತರ ದೇವರ ಗುಡಿಗಳೇ ಸಾಕ್ಷಿ. ಗ್ರಾಮದ ಉತ್ತರಕ್ಕೆ ಬೆಟ್ಟವಿದೆ. ಕೋಟೆ, ಬುರಜುಗಳನ್ನು ನಿರ್ಮಿಸಲಾಗಿದೆ.

ಒಬ್ಬ ಉನ್ನತ ಅಧಿಕಾರಿ ವಿಜಯನಗರ ಕಾಲದಲ್ಲಿ ಇಲ್ಲಿದ್ದನೆಂಬುದಕ್ಕೆ ಕುರುಹುಗಳಿವೆ. ಆದರೆ ಗ್ರಾಮ ನಿರ್ಮಾಣವಾದರೂ ಆ ವ್ಯಕ್ತಿಯ ಹೆಸರಲ್ಲಿ(ಪಾಪನಾಯಕ/ಪಾಪೇದೇವರು) ಗುಡಿ ಇಲ್ಲದಿರುವುದು ವಿಶೇಷ ಹಾಗೂ ಕುತೂಹಲ ಮೂಡಿಸಿದೆ.

ವಿಜಯನಗರ ಕಾಲದಲ್ಲಿ ಅಂಕಲಾದೇವಿ, ಮಾಂಕಾಳಮ್ಮ ನೂಕಲ ಪರಮೇಶ್ವರಿ, ಸಾಂಚರಮ್ಮ ಗಾಳಿಮ್ಮ ಎಕ್ಕಲಾದೇವಿ ಮಾರಮ್ಮ, ದುರ್ಗಮ್ಮ, ಚೌಡಿ ಇತರೆ ದೇವತೆಗಳ ಆರಾಧನೆಯಿತ್ತು.[೫] ಇದು ಆರಂಭ ಕಾಲದಲ್ಲಿತ್ತು. ಕೃಷ್ಣದೇವರಾಯನ ಕಾಲಕ್ಕೆ ಸ್ಥಳೀಯ ದೇವತೆ-ವ್ಯಕ್ತಿಗಳ ಆರಾಧನೆ ಕಡಿಮೆ ಆಯಿತು. ಏಕೆಂದರೆ ತಮಿಳುನಾಡು, ಆಂಧ್ರಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳಲ್ಲಿ ಕೃಷ್ಣದೇವರಾಯ ಹೆಚ್ಚು ಸೇನಾ ಕಾರ್ಯಾಚರಣೆ, ಧಾರ್ಮಿಕ ಪ್ರವಾಸಗಳನ್ನು ಕೈಗೊಂಡಿದ್ದಕ್ಕೆ ಆಧಾರಗಳಿವೆ.[೬]

ಪಾಪನಾಯಕನ ಬಗೆಗೆ ದೇಶಿಯ ಮತ್ತು ವಿದೇಶಿ ಸಾಹಿತ್ಯ ಆಕರಗಳಲ್ಲಿಯೂ ಮಾಹಿತಿ ಲಭ್ಯವಿದೆ. ವಿದೇಶಿ ಬರಹಗಳನ್ನು ಅಧ್ಯಯನ ಮಾಡಿದ ರಾಬರ್ಟ್ ಸಿವೆಲ್ ಅವರು ಮರೆತು ಹೋದ ಮಹಾಸಾಮ್ರಾಜ್ಯ: ವಿಜಯನಗರ ಎಂಬ ಕೃತಿಯಲ್ಲಿ ವಿದೇಶಿ ಯಾತ್ರಿಕರು ತಿಳಿಸುವ ದಳವಾಯಿಗಳ ಹೆಸರುಗಳಿವೆ. ಅವರುಗಳೆಂದರೆ: ಗಪನಾಯಿಕ್, ಲೆಪಪಾಯಿಕ್, ಚಿನಪನಾಯಿಕ್, ಅದಪನಾಯಿಕ್, ಒಜಪನಾಯಿಕ್‌ರ ಹೆಸರುಗಳಿವೆ.[೭] ಇವರು ಹೆಚ್ಚಾಗಿ ತೆಲುಗುನಾಡಿನಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಇವರಲ್ಲಿ ಲೆಪಪಾಯಿಕ್‌ನೇ ಪಾಪನಾಯಕ ಇರಬೇಕೆಂದು ಊಹಿಸಬಹುದಾಗಿದೆ. ಇದಕ್ಕೆ ಹೋಲುವಂತೆ ಬೇಟೆಕಾರರ ಹೆಬ್ಬಾಗಿಲು ಹತ್ತಿರ ಎಚ್.ಪಿ.ಸಿ ಜಲಾಶಯದ ಪಶ್ಚಿಮಕ್ಕಿರುವ ಶಾಸನವು ಸಹಾ ತೆಲುಗಿನಲ್ಲಿದ್ದು, ಕೃಷ್ಣದೇವರಾಯನ(೧೫೨೮ ಜನವರಿ ಮಂಗಳವಾರ) ಕಾಲಕ್ಕೆ ಸೇರಿದೆ. ಅರಸನ ಧರ್ಮ ಮತ್ತು ಪಾಪಯ್ಯ ದೇವಸ್ಥಾನ ಕಟ್ಟಿಸಿದ್ದನ್ನು ಇದು ತಿಳಿಸುತ್ತದೆ. ಅಧಿಕಾರಿ, ದಂಡನಾಯಕ, ದಳವಾಯಿ ಮತ್ತು ಅಮರ ನಾಯಕ ಸ್ಥಾನದಲ್ಲಿದ್ದ ವ್ಯಕ್ತಿಯಿಂದ ಮಾತ್ರ ಶಾಸನ ಹಾಕಿಸಲು ಸಾಧ್ಯ. ಪಾಪಯ್ಯನು ದೇವಸ್ಥಾನ ಕಟ್ಟಿಸಿದ್ದು ಆತ ಸನ್ಯಾಸಿ ಆಗಿರುವ ಶಕ್ಯತೆಯಿದೆ. ಈ ಬಗೆಗಿನ ಲಿಖಿತ ಮತ್ತು ಮೌಖಿಕ ಆಕರಗಳು ಪಾಪಯ್ಯನನ್ನು ಹೆಚ್ಚಾಗಿ ಸಂತನಾಗಿ ಬಿಂಬಿಸಿರುವುದು ಸ್ಪಷ್ಟ.

ವಿಜಯನಗರ ಕಾಲದ (ಕೃಷ್ಣದೇವರಾಯ) ಒಂದು ಶಾಸನವು ಸ್ಪಷ್ಟವಾಗಿ ಪಾಪಯ್ಯ ಎಂದು ಉಲ್ಲೇಖಿಸಿದೆ. ಆನಂತರ ಅಚ್ಯುತರಾಯ, ವೆಂಕಟಪತಿ ದೇವರಾಯನ ಕಾಲದಲ್ಲಿ ಪಾಪಯ್ಯನ ಉಲ್ಲೇಖಗಳು ಕಂಡುಬರುತ್ತವೆ. ವಿಜಯನಗರೋತ್ತರ ಕಾಲದಲ್ಲಿಯು ಸಹಾ ಪಾಪಯ್ಯ, ಪಾಪನಾಯಕನ ಹೆಸರುಗಳು ಪ್ರಚಲಿತದಲ್ಲಿದ್ದವು. ವಿಜಯನಗರ ಕಾಲದಲ್ಲಿ ಮಂತ್ರಿ, ಅಧಿಕಾರಿ, ಅಮರನಾಯಕ, ದಳವಾಯಿ, ದಂಡನಾಯಕ ಮೊದಲಾದ ಜವಾಬ್ದಾರಿಯುತ ಸ್ಥಾನಮಾನ ಹೊಂದಿರುವ ವ್ಯಕ್ತಿಗಳು ಸಾಮ್ರಾಜ್ಯದ ಬೇರೆಬೇರೆ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಸಂಗಮ, ಸಾಳುವ, ತುಳುವ ವಂಶಗಳ ಅವಧಿಯಲ್ಲಿ ಇವರು ದಕ್ಷತೆ ಮತ್ತು ಪ್ರಾಮಾಣಿಕ ಸೇವೆ ಮಾಡುವವರಾಗಿದ್ದರು. ಅರವೀಡು ವಂಶದ ಅವಧಿಯಲ್ಲಿ ಸ್ವಾತಂತ್ರ್ಯರಾಗಲು ಪ್ರಯತ್ನಿಸಿದ್ದು ಸ್ಪಷ್ಟ. ಇಂಥ ಸಂದರ್ಭದಲ್ಲಿ ಸಂಘರ್ಷಗಳು ಪ್ರತಿಯೊಬ್ಬ ನಾಯಕರು ತಮ್ಮದೇ ಆದ ಸೈನಿಕ ಬಲವನ್ನು ಹೊಂದಿದ್ದರು. ಅವುಗಳೆಂದರೆ:

Scanned with OKEN Scanner

ಗೊಬ್ಬೂರಿ ಜಗ್ಗರಾಯ	೨೦,೦೦೦	ಸೈನ್ಯ	೧೬೧೪
ಮೇಲುಗೋಟೆ ಎಚ್ಚಮನಾಯಕ	೧೬,೦೦೦	ಸೈನ್ಯ	೧೬೧೫
ಅರವೀಡು ರಾಮದೇವ	೧,೦೦,೦೦೦	ಸೈನ್ಯ	೧೬೧೭
ತಂಜಾವೂರು, ವೇಲುಗೋಟೆ(ತೋಪುರ)			
ಗೊಬ್ಬೂರಿ/ಮಧುರೆ/ಸೆಂಜಿ	೧,೦,೦೦,೦೦	ಸೈನ್ಯ	೧೬೧೭(ತೋಪುರ)
ತಂಜಾವೂರು	೪೦,೦೦೦	ಸೈನ್ಯ	೧೬೫೭
ಮದುರೆ	೪೦,೦೦೦	ಸೈನ್ಯ	೧೬೬೨

ಹೀಗೆ ಸೈನ್ಯವನ್ನು ಹೊಂದಿದ್ದವರು ಇದ್ದದು ಗಮನಾರ್ಹ.[೮] ಈ ಮೇಲೆ ಗಮನಿಸಿದಂತೆ ಎಲ್ಲೂ ಪಾಪನಾಯಕನಾಗಲಿ, ಬೇಡರ ಪಡೆ, ಖಾಸ ಬೇಡರ ಪಡೆ, ಮೀಸಲು ಪಡೆಗಳ ಉಲ್ಲೇಖವಿಲ್ಲ. ವೇಲುಗೋಟೆ ಎಚ್ಚಮನಾಯಕನಿಗೆ ಹತ್ತಿರದ ಸಂಬಂಧಿಗಳು ಸೈನ್ಯದ ಹೊಣೆಹೊತ್ತ ಉದಾಹರಣೆಗಳಿವೆ. ವೇಲುಗೋಟೆ ಕಸ್ತೂರಿ ರಂಗನಾಯಕ ಎರಡನೇ ವೆಂಕಟನ ಸಾಮಂತನಾಗಿದ್ದ. ಈಗಿನ ಆಂಧ್ರ ಪ್ರದೇಶದ ನೆಲ್ಲೂರು, ವೆಂಕಟಗಿರಿ, ತಿರುಪತಿ ಮತ್ತು ಕಾಳಹಸ್ತಿ ಭಾಗದಲ್ಲಿ ಇವನಿದ್ದ. ವೆಂಕಟಪತಿದೇವರಾಯನ ಕಾಲದಲ್ಲಿ ಸುಲ್ತಾನರ ಕಿರುಕುಳ, ಶತ್ರುಗಳ ಉಪಟಳವಿತ್ತು. ಮಾಂಡಲಿಕರು, ಸಾಮಂತರು, ಪಾಳೆಯಗಾರರು ಸ್ವಾತಂತ್ರರಾಗಲು ಹವಣಿಸಿದರು. ಈ ಕಾರಣಕ್ಕಾಗಿ ಸಂಘರ್ಷ ಮತ್ತು ಹೋರಾಟಗಳಾಗುತ್ತವೆ. ಕಾಳಹಸ್ತಿ ಸಮೀಪ ವೆಂಕಟನಾಯಕ(ಎಚ್ಚಮ ನಾಯಕ) ಆಳ್ವಿಕೆ ಮಾಡುತ್ತಿದ್ದ. ಕಸ್ತೂರಿರಂಗ, ಎಚ್ಚಮ ವಿಜಯನಗರದ ಅರಸರ ಪರ ಇದ್ದು ಪ್ರಾಮಾಣಿಕತೆ ಮೆರೆದರು. ವೆಲ್ಲೂರಿನ ಲಿಂಗಮ ನಾಯಕ, ಚಿನ್ನ ತಿರುಮಲನಾಯಕ ಜಂಜಿಯ ಮಾಂಡಲಿಕ ಕೃಷ್ಣಪ್ಪನಾಯಕ, ತಿರುಮಲೆಯ ದೇವಪ್ಪ ಪಾಪನಾಯಕ ಇವರೆಲ್ಲ ವಿಜಯನಗರ ಕಾಲದ ಅಮರನಾಯಕರಾಗಿದ್ದರು. ಇವರಲ್ಲಿ ತಿರುಮಲೆಯ ದೇವಪ್ಪ ಪಾಪನಾಯಕ ಎಂಬುವನೇ ಪಾಪಯ್ಯನಿಗೆ ಸಂಬಂಧವಿರಬೇಕು. ಅಥವಾ ಪಾಪನಾಯಕ ತಿರುಪತಿ ಯಾತ್ರೆ ಮಾಡುವ ಪ್ರಸಂಗ ಬರುತ್ತದೆ. ಆ ಸಂದರ್ಭದಲ್ಲಿ ಈ ಪ್ರದೇಶದ ಅಮರ ನಾಯಕನಾಗಿರುವ ಸಾಧ್ಯತೆಯಿದೆ.

ಮತ್ತೊಂದು ದಾಖಲೆಯ ಪ್ರಕಾರ ನಾಯಕನಹಟ್ಟಿ ಪಾಳೆಯಗಾರರ ವಂಶವೃಕ್ಷದಲ್ಲಿ ಕಾಟೇಮಲ್ಲ ನಾಯಕನ ಮಗ ಸೂರದೇವ ಪಾಪನಾಯ್ಕ ಎಂದು, ಅದೇ ವಂಶಾವಳಿಯಲ್ಲಿ ತೊರ್ರಲ ಮಲ್ಲನಾಯ್ಕನ ಮಗ ಜಗಳೂರು ಪಾಪನಾಯಕ ಸಂತತಿ ಇಲ್ಲ ಎಂದು ಉಲ್ಲೇಖಿಸಲಾಗಿದೆ.[೯] ಇಲ್ಲಿ ಸಾಮಂತ ನಾಯಕನಾಗಿ ಆಳ್ವಿಕೆ ಮಾಡಿದ ಬಗ್ಗೆ ಪರಿಶೀಲಿಸಬೇಕಿದೆ. ಎರಡು ಬಾರಿ ಇಲ್ಲಿ ಸೂರದೇವಪಾಪನಾಯ್ಕ, ಜಗಳೂರು ಪಾಪನಾಯಕ ಎಂಬ ಉಲ್ಲೇಖಗಳು ಒಬ್ಬ ವ್ಯಕ್ತಿಗೆ ಸೇರಿಲ್ಲ. ಹಾಗಾಗಿ ಇಬ್ಬರೂ ಬೇರೆಬೇರೆ ಇರಬೇಕು. 'ಪಾಪಯ್ಯ' ಎಂಬ ವ್ಯಕ್ತಿ ಅವರ ನಾಯಕತನಕ್ಕೆ ಸೇರಿರುವ

ಸಾಧ್ಯತೆಯಿದೆ ಎಂದು ಹೇಳಬಹುದು.[೧೦] ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲೂಕಿನ ಪರತಿ ಗ್ರಾಮದಲ್ಲಿ ಹಿಂದೆ ಎನುಮಲ ವಂಶದ ಪಾಳೆಯಗಾರರು ಆಳ್ವಿಕೆ ನಡೆಸಿದ್ದಾರೆ. ಇವರಲ್ಲಿ ಪಾಲನಾಯಕ ಮತ್ತು ಎರಬಾಪೆಯನಾಯಕ ಎಂಬ ಅರಸರು ಆಳ್ವಿಕೆ ಮಾಡಿದ ಉದಾಹರಣೆಗಳಿವೆ.[೧೧] ನಾಯಕನಹಟ್ಟಿ ಪಾಳೆಯಗಾರರ ಮೂಲ ಪುರುಷ ಕಾಟಮಲ್ಲನಾಯಕ. ಇವನಿಗೆ ಮೂರು ಜನ ಗಂಡು ಮಕ್ಕಳಿದ್ದರು. ಹಿರಿಯವನು ಸೂರದೇವಿನ ಪಾಪನಾಯಕರ, ಮಧ್ಯದವನು ತೊರ್ರಲ ಮಲ್ಲನಾಯಕ, ಕೊನೆಯವನು ಗಾದರ್ರೆ ಪಾಲನಾಯ್ಕ ಎಂದು ತಿಳಿಯುತ್ತದೆ. ಇದೇ ಲೇಖಕರು ಮಧ್ಯದ ತೊರ್ರೆಲ ಮಲ್ಲನಾಯ್ಕನ ಮಗ ಜಗಳೂರು ಪಾಪನಾಯಕನಾಗಿದ್ದು, ಮ್ಯಾಸಬೇಡ ಜನಾಂಗದ ಮತ್ತೊಬ್ಬ ಸಾಂಸ್ಕೃತಿಕ ವೀರ(ಮೊದಲ ವೀರ ಗಾದರಿಪಾಲನಾಯಕ) ಎಂದು ಗುರುತಿದ್ದಾರೆ.[೧೨] ಇವನು ಜಗಳೂರಿನಲ್ಲಿ ಸಮಾಧಿ ಆಗಿದ್ದರಿಂದ ಜಗಳೂರಜ್ಜನೆಂತಲೂ ಪ್ರಸಿದ್ಧಿಯಾಗಿರುತ್ತಾನೆ. ಹೀಗೆ ಪಾಪನಾಯಕ ವಿಜಯನಗರ ಕಾಲದಲ್ಲಿ ಹಂಪಿಯಲ್ಲಿದ್ದ ವನಿಗೂ ಈ ಪಾಳೆಯಗಾರರ ಅವಧಿಗೂ ವ್ಯತ್ಯಾಸವಿದ್ದಂತಿದೆ. ವಿಜಯನಗರೋತ್ತರ ಕಾಲದಲ್ಲಿ ಪಾಪನಾಯಕ ಎಂಬ ಹೆಸರು ಹೆಚ್ಚು ಪ್ರಚಲಿತಕ್ಕೆ ಬರುತ್ತದೆ. ವಿಜಯನಗರದ ವೆಂಕಟಪತಿ ಅರಸನಿಗೆ ಕ್ರಮೇಣ ಶತ್ರುಗಳ ಕಾಟ ಹೆಚ್ಚಾಗಿತ್ತು. ಕಸ್ತೂರಿರಂಗ, ಮೇಲು ಗೋಟೆ ಎಚ್ಚಮನಾಯಕ ರಾಜನ ಶತ್ರುಗಳನ್ನು ಸದೆಬಡಿದು ಅನೇಕ ಯುದ್ಧಗಳಲ್ಲಿ ರಾಜನಿಗೆ ಜಯತಂದು ಕೊಟ್ಟರು. ಗುತ್ತಿ ಕಂದನವೋಲು, ಗಂಡಕೋಸಿ, ಮೇಲೂರು ಗಳಲ್ಲಿ ಯುದ್ಧ ನಡೆದು ವಿಜಯನಗರದ ವೆಂಕಟಪತಿಗೆ ವೇಲುಗೋಟೆ ವಂಶ ನಿಷ್ಠೆಯನ್ನು ತೋರಿತು. ಉತ್ತರ ಮೇರೂರಿನಲ್ಲಿ ಯುದ್ಧ ನಡೆದು ಅರವೀಡು ವೆಂಕಟಪತಿಗೆ ಜಯ ಸಿಕ್ಕಿತು. ಪೆರಿಮೇಟಿ, ಚಂಗಲಪೇಟೆ, ವೇಲೂರಿನವರೆಗೂ ಮಧುರಾಂತಕಮಾನ ಹತ್ತಿರ ಪಾಳೆಯವನ್ನು ಸ್ಥಾಪಿಸಿ, ಉತ್ತರ ಮೇರೂರಿನಲ್ಲಿ ಕೋಟೆ ಕಟ್ಟಿಸಿದ. ವೆಂಕಟಪತಿ ಮೇಲುಗೋಟೆ ಎಚ್ಚಮನಿಗೆ ಹೊಸ ಪ್ರದೇಶಗಳ ಹೆಚ್ಚಿನ ಜವಾಬ್ದಾರಿ ಕೊಟ್ಟ, ಶತ್ರುಗಳನ್ನು ಹಿಮ್ಮೆಟ್ಟಿಸಿದ. ವೆಲ್ಲೂರಿನ ದೊರೆ ಲಿಂಗಮನಾಯಕನನ್ನು ಮಟ್ಟಹಾಕುವುದಾಗಿತ್ತು. ವೆಲ್ಲೂರಿನ ಲಿಂಗಮನಾಯಕ ಎಚ್ಚಮನಾಯಕನ (ಎಚ್ಚಮ) ವಿರೋಧಿಯಾಗಿದ್ದ ಒಂದು ಒಕ್ಕೂಟವನ್ನು ಸ್ಥಾಪಿಸಿದ. ಅದು ಅರಾಡಿನಾಗಮ ನಾಯಕ, ಪಾಳೆಯಗಾರ ಮತ್ತು ಅವನ ಭಾವ ಮೈದುನ ಖ್ಯಾತ ವೀರನಾದ ದಾವಲ ಪಾಪನಾಯಕ. ದಾವಲಪಾಪನಾಯಕನು ಯುದ್ಧಕ್ಕೋಸ್ಕರವಾಗಿ ಕುದುರೆ, ಸೈನ್ಯ ಮತ್ತು ಆನೆಗಳನ್ನೊಳಗೊಂಡ ಒಂದು ಬೃಹತ್ ಪಕ್ಷವನ್ನು ಸಂಘಟಿಸಿದ್ದನು. ಯುದ್ಧಕ್ಕೋಸ್ಕರ ಆನೆ ಮತ್ತು ಕುದುರೆಗಳನ್ನು ಜಿಂಜಿ ಮತ್ತು ತಂಜಾವೂರುಗಳಿಂದ ತಂದು ಅವುಗಳದೇ ಸೈನ್ಯವನ್ನು ಸಂಘಟಿಸಿದ್ದನು. ದಾವರ್ಣ ಪಾಪನಾಯಕನು ಎಚ್ಚಮನಾಯಕನನ್ನು ನೇರ ಯುದ್ಧದಲ್ಲಿ, ಎದುರಿಸಲು ತೀರ್ಮಾನಿಸಿದ್ದ. ಆದರೆ ದಾವರ್ಣ ಪಾಪನಾಯಕ ಈ ಯುದ್ಧದ ತೀರ್ಮಾನವು ಎಚ್ಚಮನನ್ನು ಎದುರಿಸಿದ ವಿಷಯವು

Scanned with OKEN Scanner

ಅಸಾಧಾರಣವಾದುದಲ್ಲ. ೧೬೦೧ ಮೇ ೧೮ರಂದು ಎಚ್ಚಮನಾಯಕನು ತಮ್ಮನಾದ ಸಿಂಗಮನಾಯಕನೊಂದಿಗೆ ಆಕ್ರಮಣವನ್ನು ಮಾಡಿದ. ಇಬ್ಬರಿಗೂ ಯುದ್ಧ ನಡೆದು ರುಂಡ-ಮುಂಡಗಳು ಚಿಂಡಾಡಿ ರಕ್ತದ ಕೋಡಿ ಹರಿಯಿತು. ಎಚ್ಚಮನಿಗೆ ವಿಜಯ ಲಭಿಸಿತು. ಅರವೀಡು ವೆಂಕಟಪತಿದೇವರಾಯನು ವಿಜಯೋತ್ಸವ ಹಬ್ಬ ಆಚರಿಸಿದನು. ಎಚ್ಚಮ ನಾಯಕ ಚಂಗಲಪೇಟೆ, ವೇಲೂರು, ಮಧುರಾಂತಕಮ್‌ನ ಬಳೇ ಪಾಳೆಯಪಟ್ಟು ಸ್ಥಾಪಿಸಿ ಸ್ಮಾರಕಗಳನ್ನು ನಿರ್ಮಿಸಿದ. ಗೊಬ್ಬೂರಿ ಜಗರಾಯನು ಮತ್ತು ವೆಂಕಟಪತಿದೇವರಾಯನಿಗೂ ತೋಪುರ ಯುದ್ಧವಾಯಿತು. ವೇಲುಗೋಟಿ ಎಚ್ಚಮನಾಯಕನಿಗೂ ದಾಮರ್ಲ ಚನ್ನಪ್ಪನಾಯಕನಿಗೂ ಯುದ್ಧವಾಗುತ್ತದೆ. ೧೬೧೭ ಡಿಸೆಂಬರ್‌ನಲ್ಲಿ ಕಾವೇರಿ ನದಿ ಹತ್ತಿರ ತೋಪುರ ಬಳಿ ಯುದ್ಧವಾಗಿ, ಜಗರಾಯ ಸತ್ತುಹೋದನು. ದಾಮರ್ಲ ವಂಶ ಅರವೀಡು ವಂಶದ ಸ್ನೇಹ ಬಯಸಿತು. ಸಣ್ಣಸಣ್ಣ ರಾಜ್ಯಗಳು ಹುಟ್ಟಿಕೊಂಡರೂ, ಅರವೀಡು ಆಳ್ವಿಕೆಯಲ್ಲಿ ವೇಲುಗೋಟಿ ಮತ್ತು ದಾಮರ್ಲಾ ವಂಶಗಳು ಪ್ರಬಲವಾಗಿದ್ದವು. ವಿಜಯನಗರ ಸಾಮ್ರಾಜ್ಯವನ್ನಾಳಿದ ನಾಲ್ಕು ವಂಶಗಳಲ್ಲಿ ಕೆಲವು ವ್ಯಕ್ತಿ, ಸಮುದಾಯ, ಪ್ರದೇಶಗಳು ನಿರ್ಣಾಯಕ ಪಾತ್ರ ವಹಿಸಿವೆ.

ಪಾಪಯ್ಯ ಎಂಬ ವ್ಯಕ್ತಿ ವಿಜಯನಗರ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ದಂಡನಾಯಕ ಅಥವಾ ಅಮರನಾಯಕ ಆಗಿರುವ ಸಾಧ್ಯತೆಯಿದೆ. ಏಕೆಂದರೆ ರಾಜನ ಧರ್ಮಕ್ಕೆ ಪುಣ್ಯವಾಗಲೆಂದು ಪಾಪಯ್ಯ ದೇವಸ್ಥಾನ ನಿರ್ಮಾಣ ಮಾಡಿಸುತ್ತಾನೆ. ಹಾಗಾಗಿ ಈತ ಪ್ರಭಾವಿ ವ್ಯಕ್ತಿ ಇರಬೇಕು. ಈತನ ಸಾಧನೆ, ಪವಾಡಗಳಿಂದ ಹಲವು ಹೆಸರುಗಳಿಂದ ಕರೆದಿರಬೇಕು. ತುಳುವ ಅವಧಿಯಲ್ಲಿ ಪಾಪಯ್ಯ, ಪಾಪನಾಯಕ ಎಂದು, ಅರವೀಡು ಅವಧಿಯಲ್ಲಿ ದ್ಯಾವರ್ಲು ಪಾಪನಾಯಕ, ಪರದೇಶಿ ಪಾಪನಾಯಕ, ಸೂರ್ಯ ಪಾಪನಾಯಕ, ಪಾಪಜ್ಜ, ಜಗಳೂರಜ್ಜ, ಜಗಳೂರು ಪಾಪನಾಯಕ ಎಂದು ಆಯಾ ಪ್ರಾದೇಶಿಕತೆಗೆ ತಕ್ಕಂತೆ ಕರೆದಿರಬೇಕು.

ಪಾಪಯ್ಯ ದಂಡನೆಗೆ ಒಳಗಾಗಿದ್ದು, ರಾಜದ್ರೋಹದ ಅಪರಾಧವೋ ಇನ್ಯಾವ ಕಾರಣವೂ ರಾಜಧಾನಿ ಕ್ಷೇತ್ರದಿಂದ ಗಡಿಪಾರು ಹೊಂದಿರಬೇಕು. ಪ್ರಾಮಾಣಿಕ ವ್ಯಕ್ತಿ, ಸಮಾಜ ಸುಧಾರಕನಾದ ಕಾರಣ ಈತನ ಸ್ಮರಣಾರ್ಥ ಪಾಪನಾಯಕನಹಳ್ಳಿ ಎಂಬ ಗ್ರಾಮಕ್ಕೆ ಆತನ ಹೆಸರನ್ನೇ ನಾಮಕರಣ ಮಾಡಿರಬೇಕು.

ವಿಜಯನಗರ ಕಾಲದಲ್ಲಿದ್ದ ಸಂಘಟನೆ ಮತ್ತು ಹೋರಾಟಕ್ಕೆ ಅಮರ ನಾಯಕರೇ ಕಾರಣ. ಇವರು ಅರವೀಡು ವಂಶವನ್ನು ಚಂದ್ರಗಿರಿಯಲ್ಲಿ ಅಧಿಕಾರಕ್ಕೆ ತರಲು ಪ್ರಾಮಾಣಿಕ ಹೋರಾಟ ಮಾಡಿದ್ದು ಎಚ್ಚಮನಾಯಕ. ಇಂಥವರ ವಿರುದ್ಧ ಬೇರೊಬ್ಬರನ್ನು ಸಿಂಹಾಸನಕ್ಕೆ ತರಲು ಜಗ್ಗರಾಯ ಪ್ರಯತ್ನ ಮಾಡಿದ್ದ. ಇವನಿಗೆ ಸಹಾಯ ಮಾಡಿ ಯುದ್ಧದಲ್ಲಿ ಹೋರಾಡಲು ಶಕ್ತಿ ತುಂಬಿದವನು ದಾವರ್ಣ ಪಾಪನಾಯಕ, ಈ ಪಾಪನಾಯಕನೇ ಹಂಪಿಯಿಂದ ಹೊರಟು ದಶಮಾಪುರ,

ಜಗಳೂರು, ಚಳ್ಳಕೆರೆಗಳ ಮೂಲಕ ತಿರುಪತಿಯಾತ್ರೆ ಮಾಡುತ್ತಾನೆ. ಆನಂತರ ಪವಾಡ ಪುರುಷ, ಸಮಾಜ ಸುಧಾರಕ, ಸನ್ಯಾಸಿಯಾಗಿ ಜನಪ್ರಿಯವಾಗುತ್ತಾನೆ. ವಿಜಯನಗರದ ಪಾಪಯ್ಯ ಮತ್ತು ಜಗಳೂರು ಪಾಪ ನಾಯಕ ಒಂದೇ ಆಗಿರಬೇಕೆಂದು ಊಹಿಸಬಹುದು.

೧. ಪ್ರಸ್ತುತ ಸಂಶೋಧನೆ ವಿಷಯ ವಿಜಯನಗರ ಕಾಲದ ಹಂಪಿ-ಕಮಲಾಪುರ ಪರಿಸರದ ವ್ಯಕ್ತಿ ಮತ್ತು ಸ್ಥಳನಾಮಕ್ಕೆ ಸಂಬಂಧಿಸಿದೆ.

೨. ಪಾಪಯ್ಯ ವಿಜಯನಗರದಲ್ಲಿದ್ದ, ಆನಂತರ ಬೇರೆ ಬೇರೆ ಕಡೆ ನೆಲಸಿದ್ದ, ಅಧಿಕಾರದಲ್ಲಿದ್ದಾಗ ಸಾಧನೆ ಮಾಡಿ, ಸಮಾಜ ಸುಧಾರಕನಾಗಿದ್ದಾನೆ.

೩. ನಿಡ-ಗುಲ ಗ್ರಾಮಕ್ಕೆ ಪಾಪನಾಯಕಪುರ, ಹಳ್ಳಿ ಎಂದು ಆನಂತರದ ಅರಸರು ನಾಮಕರಣ ಮಾಡಿರುತ್ತಾರೆ.

೪. ಹಂಪಿ, ಕಮಲಾಪುರ, ಪಾಪಿನಾಯಕನಹಳ್ಳಿ, ದಶಮಾಪುರ, ಚಳ್ಳಕೆರೆ, ತಿರುಪತಿ ಮೊದಲಾದ ಯಾತ್ರಾ ಸ್ಥಳಗಳು ಪ್ರಾಮುಖ್ಯತೆ ಪಡೆಯಲು ಪಾಪಯ್ಯನೇ ಕಾರಣ.

೫. ಈವರೆಗೆ ಪಾಪನಾಯಕ ಮತ್ತು ಗಾದರಿಪಾಲನಾಯಕ ಅಣ್ಣ ತಮ್ಮಂದಿರೆಂದು ನಂಬಲಾಗಿತ್ತು. ಇಲ್ಲಿ ವೃತ್ತಿ ಮತ್ತು ಸೇವೆಯಲ್ಲಿ ಬೇರೆ ಬೇರೆಯಾಗಿ ಕಂಡುಬರುತ್ತಾರೆ.

೬. ಅಮರನಾಯಕ, ದಳಪತಿ, ದಂಡನಾಯಕ ಮನೆತನಗಳಂತೆ ಪಾಪಯ್ಯನ ಮನೆತನ ಇಲ್ಲಿರಬೇಕು. ಆತನ ತಂದೆ ಸೂರಪ್ಪ(ರಾಜ ಅನ್ನಯ್ಯ) ಇರಬೇಕು

೭. ವೇಲುಗೋಟೆ ಕಸ್ತೂರಿ ರಂಗಪ್ಪನಾಯಕನಂತೆ ಮಗ ವೇಲುಗೋಟೆ ಎಚ್ಚಮ ನಾಯಕ ಪ್ರಾಮಾಣಿಕತೆಯಿಂದ ಹೋರಾಡುತ್ತಾನೆ.

೮. ಸೂರ್ಯನ ಆರಾಧನೆ ಸಾಮ್ರಜ್ಯದಲ್ಲಿತ್ತು ಎಂಬುವುದಕ್ಕೆ ಸೂರ್ಯಶಿಲ್ಪ, ದೇವಾಲಯಗಳೇ ಸಾಕ್ಷಿ, ಸೂರ್ಯ ವಂಶದವರು ತಮ್ಮ ಹೆಸರಿನ ಮುಂದೆ ಸೂರೆ ದೇವಯ್ಯನು, ಸೂರ್ಯ ಪಾಪಯ್ಯನು ಎಂದೇ ಕರೆದುಕೊಳ್ಳುತ್ತಾರೆ.

೯. ಪಾಪನಾಯಕನಹಳ್ಳಿಯಲ್ಲಿರುವ ಸ್ಮಾರಕಗಳು ಒಬ್ಬ ಸಾಮಂತ ಅಥವಾ ಅಧಿಕಾರಿ ಆಳಿದ ಬಗ್ಗೆ ಕುರುಹುಗಳಾಗಿ ಸಾಬೀತು ಪಡಿಸುತ್ತವೆ.

೧೦. ಒಟ್ಟಾರೆ ಹೇಳುವುದಾದರೆ ಕೃಷ್ಣದೇವರಾಯನ ಕಾಲದ ಪಾಪಯ್ಯ ಒಬ್ಬ ದಂಡನಾಯಕನಾಗಿದ್ದ ಆನಂತರ ದೈವತ್ವಕ್ಕೇರಿಸಲಾಗಿದೆ. ಆ ಹಿನ್ನೆಲೆಯಲ್ಲಿ ಪಾಪನಾಯಕನಹಳ್ಳಿಗೆ ಆತನ ಹೆಸರನ್ನು ಮರುನಾಮಕರಣ ಮಾಡಲಾಗಿದೆ.

ಪಾಪನಾಯಕನ ಹೆಸರಿನ ಗ್ರಾಮಗಳು ಉದಯವಾಗಲು ಪಾಪನಾಯಕ ಎಂಬ ಪವಾಡ ಪುರುಷ(ಹೋರಾಟಗಾರ ಹಾಗೂ ಅಧಿಕಾರಿ) ಕಾರಣವಾಗಿದ್ದಾನೆ. ಈ ಬಗ್ಗೆ ಅಧ್ಯಯನ ಮಾಡಿರುವ ದಶಮಾಪುರ ಗ್ರಾಮದ ಡಾ. ಎಂ.ಕೆ. ದುರುಗಪ್ಪ ಹೀಗೆ ವಿವರಿಸಿದ್ದಾರೆ. ದಶಮಾಪುರ ಗ್ರಾಮ ಸ್ಥಾಪನೆಗೆ ಸಂಬಂಧಿಸಿದ ಕಂಚಿನ ಪತ್ರಗಳು ಎಂಬ ಲೇಖನದಲ್ಲಿ (ಇತಿಹಾಸ ದರ್ಶನ) ಹಗರಿಬೊಮ್ಮನಹಳ್ಳಿ ತಾಲೂಕು

Scanned with OKEN Scanner

(ಬಳ್ಳಾರಿ ಜಿಲ್ಲೆ) ದಶಮಾಪುರ ಗ್ರಾಮ ಸ್ಥಾಪನೆ ಮಾಡಿದ ವಂಶಸ್ಥರ ವಿವರವಿದೆ. ಕ್ರಿ ಶ ೧೪೪೯ರಲ್ಲಿ ಜರಿಮಲೆ ಪಾಳೆಯಗಾರರ ಲೂಟಿಗೆ ಅಂಜಿ ತುಂಗಭದ್ರ ದಕ್ಷಿಣ ಕರ್ನಾಟಕ ಮಧ್ಯದ ದಟ್ಟ ಅರಣ್ಯ ಪ್ರದೇಶದ ಪಾಲನಹಳ್ಳಿ ಎಂಬ ಮ್ಯಾಸರಹಟ್ಟಿಯಲ್ಲಿ ಪಾಲಯ್ಯ, ಬೋರಯ್ಯ ಮತ್ತು ದೊಡ್ಡಪಾಲಯ್ಯ ಎಂಬುವರು ಅಜ್ಞಾತದಲ್ಲಿದ್ದರು, ಇವರು ತಮ್ಮ ನಿತ್ಯ ಕರ್ಮದಂತೆ ಬೇಟೆಯಲ್ಲಿ ತೊಡಗಿರುವಾಗ ಯುಗಾದಿ ಅಮವಾಸ್ಯೆಯಂದು ಬೇಟೆಯಾಡಲು ಪಾಲನಹಳ್ಳಿ ಪಶ್ಚಿಮ ದಿಕ್ಕಿಗೆ ಪ್ರಯಾಣ ಬೆಳೆಸಿದರು. ಅಲ್ಲಿ ಬೇಟೆನಾಯಿಗಳನ್ನು ಮೊಲಗಳು ಹೆದರಿಸಿ ನಿಂತಿರುವ ದೃಶ್ಯವನ್ನು ಕಂಡು ಇವರು ಬೆರಗಾದರು. ಈ ವಿಷಯ ಶ್ರೀ ಗುರುಸಿದ್ಧ ಸ್ವಾಮಿಗಳಿಗೆ ತಿಳಿಸಿದರು. ಅವರು ಗಂಡು ಮೆಟ್ಟಿದ ಭೂಮಿ ಎಂದು ೧೮ ಗುಡಿಸಲುಗಳನ್ನು ನಿರ್ಮಿಸಿ ಕೆಲವರು ಅಲ್ಲಿ ನೆಲೆಸಿದರು. ಗುರುಗಳಿಗೆ ಒಂದು ಮಠವನ್ನು ಕಟ್ಟಿಸಿಕೊಟ್ಟರು. ಹೊಸ ಗ್ರಾಮಕ್ಕೆ 'ದಶಮಾಪುರ' ಎಂದು ಕರೆದರು. ಬೇಡ ಜನಾಂಗದ ಪಾಳೆಯಗಾರರಾದ ಜರಿಮಲೆಯವರು ಅದೇ ಸಮುದಾಯಕ್ಕೆ ಅನ್ಯಾಯ ಮಾಡಿರುವುದಕ್ಕೆ ಲೇಖಕರು ಪತ್ತೆ ಹಚ್ಚಿದ್ದಾರೆ.[೧೫] ಅಜ್ಞಾತದಲ್ಲಿದ್ದ ಪಾಲಯ್ಯ ಸಹೋದರರು ಬೇಡರೆ ಆಗಿದ್ದರು. ಮ್ಯಾಸರಹಟ್ಟಿ, ಪಾಲಯ್ಯನಹಳ್ಳಿಯಾಗಿ ಈಗ ದಶಮಾಪುರ ಆಗಿದೆ. ಆದರೆ ಪಾಲನಹಳ್ಳಿ ಮ್ಯಾಸರಹಟ್ಟಿಯನ್ನು ಚಲ್ಮನಹಳ್ಳಿ ಈಚಲು, ಚಲಪ್ಪನಹಳ್ಳ ಎಂದು ಕರೆಯುವರು. ಇಲ್ಲಿ ಮ್ಯಾಸ ನಾಯಕ ಬುಡಕಟ್ಟಿನ ಸಹೋದರರು ಗ್ರಾಮ ನಿರ್ಮಾಣದಲ್ಲಿ ಕ್ರಮವಹಿಸಿದಂತೆ ಪಾಪಯ್ಯನ ಹೆಸರಿನಲ್ಲಿ ಗ್ರಾಮನಿರ್ಮಾಣದಲ್ಲಿ ಕ್ರಮವಹಿಸಿದಂತೆ ಪಾಪಯ್ಯನ ಹೆಸರಲ್ಲಿ ಪಾಪಿನಾಯಕನಹಳ್ಳಿ ಗ್ರಾಮ ನಿರ್ಮಾಣವಾದ ಇತಿಹಾಸವನ್ನು ಗಮನಿಸುವುದು ಸೂಕ್ತವೆನಿಸಿದೆ.

ಪಾಪಿನಾಯಕನಹಳ್ಳಿ ಚಾವಡಿಯ ಮುಂದಿರುವ ಶಾಸನದಲ್ಲಿ ಶಾಲಿವಾಹನ ಶಕವರ್ಷ ೧೪೩೩ನೆಯ ಪ್ರಜಾಪತಿ, ಚೈತ್ರ ಶು. ೧೩ ಬುಧವಾರ(ಕ್ರಿಶ ೧೫೧೩.೧೫೫೧) ಕೃಷ್ಣರಾಯನು ನಾನಾಗೋತ್ರದ ಮಹಾಜನಗಳಿಗೆ ನಾರಿ ಸೀಮೆಯ ಹಂಪದೇವನಹಳ್ಳಿಯನ್ನು ಕೃಷ್ಣ ರಾಯಪುರವೆಂದು ಮರುನಾಮಕರಣ ಮಾಡಿ ದಾನ ನೀಡಿದ ವಿವರವಿದೆ.[೧೬] ಮೂಲ ಹೆಸರುಗಳನ್ನು ಬದಲಿಸಿ ರಾಜನ ಹೆಸರನ್ನು ಇಟ್ಟಿರುವುದು ಸ್ಪಷ್ಟ.

ಇದೇ ಗ್ರಾಮದ ಅಂಕಾಲಮ್ಮನಗುಡಿಯ ಮಂಟಪದ ಕಂಬದಲ್ಲಿನ ಶಾಸನವು ತೆಲುಗು ಭಾಷೆಯಲ್ಲಿದ್ದು, ತ್ರುಟಿತಗೊಂಡಿದೆ. ಶಾಲಿವಾಹನ ಶಕವರ್ಷ ೧೪೫೪ನೆಯ ನಂದನ, ಶ್ರಾವಣ, ೨೧-೩೦ ಗುರುವಾರ ಕ್ರಿ.ಶ. ೧೫೮೧ರಿಂದ ೨೦ ಅಚ್ಯುತದೇವರಾಯನ ಕಾಲದಲ್ಲಿ ನಿಡುಗಲ ಅಥವಾ ಅಪಿನಾಯಕನಪುರವನ್ನು ಆರುಗೊಂಡ ಅಂಕಾಲ ದೇವಿಯ ಅಮೃತಪಡಿಗೆ ತಲಾರಿ ತಿಮ್ಮನಾಯಕನು ನೀಡುತ್ತಾನೆ.[೧೭] ಪಾಪನಾಯಕಹಳ್ಳಿ ವಿಜಯನಗರ ಪೂರ್ವದಲ್ಲಿ ನಿಡುಗಲ ಎಂಬ ಹೆಸರನ್ನು ಹೊಂದಿತ್ತು. ಸ್ಥಳೀಯ ವ್ಯಕ್ತಿ ಪಾಪಯ್ಯನಿಂದ ಅಪಿನಾಯಕಪುರ ಎಂದು ಮರು ನಾಮಕರಣ ಪಡೆಯಿತು.

ಅಂದಿಗೆ ಗ್ರಾಮದ ಉಸ್ತುವಾರಿಯನ್ನು ತಳವಾರ ನೋಡಿಕೊಳ್ಳುತ್ತಿದ್ದ. ಪಾಪಯ್ಯ ನಾಯಕ ಸ್ಥಳೀಯ ಅಧಿಕಾರಿಯಾಗಿದ್ದುದು ಸ್ಪಷ್ಟ. ಹಂಪಿ ಪರಿಸರದಲ್ಲಿ ನೆಲಸಿದ್ದ ಪಾಪಯ್ಯ ಅಥವಾ ಪಾಪನಾಯಕ ರಾಜದ್ರೋಹ ಎಸಗಿದ ಕಾರಣಕ್ಕೆ ಏನೋ ಅಥವಾ ಬೇರೆ ಸೀಮೆಗಳ ಜವಾಬ್ದಾರಿಯನ್ನು ಕೊಟ್ಟಿರಬೇಕು ಹಾಗಾಗಿ ದೇಶಸಂಚಾರ ಮಾಡುವುದು ಕಂಡುಬರುತ್ತದೆ. ಹಂಪಿ, ಕಮಲಾಪುರ, ಪಾಪಿನಾಯಕನಹಳ್ಳಿ ಜಗಳೂರು, ಚಳ್ಳಕೆರೆ(ಗೋರ್ಲಕಟ್ಟಿ) ತಿರುಪತಿ ಮೊದಲಾದ ಸ್ಥಳಗಳೊಡನೆ ಇವನಿಗೆ ನಂಟಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಪಾಪಿನಾಯಕನಹಳ್ಳಿ ಗ್ರಾಮದಲ್ಲಿ ಅಂಕಲಾದೇವಿ, ಮಾಂಕಾಳಮ್ಮ, ನೂಕಲ ಪರಮೇಶ್ವರಿ, ನಾಂಚರಮ್ಮ, ಗಾಳೆಮ್ಮ, ಎಕ್ಕಲಾದೇವಿ, ಮಾರಮ್ಮ, ದುರ್ಗಮ್ಮ ಚೌಡಿ ಇತರ ದೇವತೆಗಳ ಆರಾಧನೆಯು ಇತ್ತು.[೧೮] ಇಲ್ಲಿ ಪಾಪನಾಯಕ ದೇವಾಲಯವಾಗಲಿ, ಶಾಸನವಾಗಲಿ ದೊರೆತಿಲ್ಲ ದಿರುವುದು ಖೇದಕರ ಸಂಗತಿ. ಗ್ರಾಮವೇ ಪಾಪನಾಯಕನನ್ನು ಸ್ಮರಿಸುವಂತಾಗಿದೆ.

ಒಟ್ಟಾರೆ ಹೇಳುವುದಾದರೆ, ವಿಜಯನಗರ ಕಾಲದಲ್ಲಿ ಪಾಪಯ್ಯ ಅಥವಾ ಪಾಪನಾಯಕ ಎಂಬ ಅಧಿಕಾರಿ ಇಂದಿನ ಬೇಟೆಗಾರರ ಹೆಬ್ಬಾಗಿಲು ಪ್ರದೇಶದಲ್ಲಿ ಶಾಸನ ಹಾಕಿಸಿದ್ದು ಸ್ಪಷ್ಟ.[೧೯] ಇವನ ಸಾಹಸ ಮತ್ತು ಅಧಿಕಾರಕ್ಕೆ ಸಂಬಂಧಿಸಿದಂತೆ ಬೇರೆ ವರ್ಗಾವಣೆ ಆಗಿರುವ ಸಾಧ್ಯತೆಯಿದ್ದು, ಇಂದಿನ ಪಾಪಿನಾಯಕನಹಳ್ಳಿಯಲ್ಲಿ ಸುಂಕ ವಸೂಲು ಮಾಡುವ ಅಧಿಕಾರಿಯಾಗಿ, ಸಮಾಜ ಸುಧಾರಕನಾಗಿ, ಪವಾಡ ಪುರುಷನಾಗಿದ್ದನು. ಹಾಗಾಗಿ ಪಾಪಿನಾಯಕನಹಳ್ಳಿ ಎಂಬ ಹೆಸರು ಬಂದಿದೆ. ಇಲ್ಲಿಂದ ಕ್ರಮೇಣ ಜಗಳೂರು, ಗೋರ್ಲಕಟ್ಟೆ, ತಿರುಪತಿಯಾತ್ರೆ ಮಾಡಿ ಬಂದ ಕಾರಣ ಪ್ರಸಿದ್ಧ ವ್ಯಕ್ತಿಯಾಗಿ ಜಗಪತಿರಾಯ ಎಂಬ ಪಾಳೆಯಗಾರನಿಂದ ಜಗಳೂರಿನಲ್ಲಿ ಕಾಲವಾಗುತ್ತಾನೆ. ಸ್ಥಳೀಯ ಮತ್ತು ಮೌಖಿಕ ಚರಿತ್ರೆಯಲ್ಲಿ ಈ ಎರಡು ಸಂಗತಿಗಳು ಮಹತ್ವವಾಗಿರುವುದು ಸ್ಮರಣೀಯ. ಪಾಪಿನಾಯಕನಹಳ್ಳಿಯಲ್ಲಿ ಬಸವಣ್ಣ, ಆಂಜನೇಯ, ಭರಮದೇವರಕಟ್ಟಿ, ತಿಮ್ಮಪ್ಪ ದೇವರಗುಡಿ ಮೊದಲಾದ ದೇವಾಲಯಗಳು ಹಾಗೂ ಸ್ಮಾರಕಗಳು ಇಂದಿಗೂ ಕಂಡುಬರುತ್ತವೆ.

ಕೊನೆಟಿಪ್ಪಣಿಗಳು ಮತ್ತು ಆಧಾರಸೂಚಿ

೧. ಚನ್ನಬಸಪ್ಪ ಎಸ್ ಪಾಟೀಲ (ಸಂ) **ವಿಜಯನಗರ (ಹಂಪೆಯ) ಶಾಸನಗಳು**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೬೬, ಪು: ೧೧೧ (ಶಾ.ಸಂ. ೩೮೯)

೨. ಪುರುಷೋತ್ತಮ ಬಿಳಿಮಲೆ, ಚಲುವ ರಾಜು, **ಹಂಪಿ ಜನಪದ**, ಪ್ರಸಾರಾಂಗ, ಕವಿಹಂ ೧೯೯೬, ಪು. ೧೦೬

೩. ಪಿ.ಬಿ. ದೇಸಾಯಿ, **ವಿಜಯನಗರ ಸಾಮ್ರಾಜ್ಯ**, ಇತಿಹಾಸ ಸಂಶೋಧನ ಮಂಡಲ, ಧಾರವಾಡ, ಪು.೨೬

Scanned with OKEN Scanner

೪. ವಿವಿಧ ಲೇಖಕರು/ಸಂಪಾದಕರು, **ಹೊಸಪೇಟೆ ತಾಲೂಕು ದರ್ಶನ**, ಪ್ರಸಾರಾಂಗ, ಕವಿಹಂ, ೨೦೦೧, ಪು. ೮೧

೫. ಕೆ.ಎಸ್. ಶಿವಣ್ಣ(ಸಂ.), **ಸಮಗ್ರ ಕರ್ನಾಟಕ ಚರಿತ್ರೆ**, ಸಂಪುಟ–೩, ೧೯೬೭, ಪು. ೩೫೩

೬ ನೋಡಿ: ಅದೇ. ಪು. ೨೧೮

೭ ರಾಬರ್ಟ್ ಸಿವೆಲ್(ಮೂಲ), ಸದಾನಂದ ಕನವಳ್ಳಿ(ಅನು), **ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ**, ಕವಿಹಂ ಪ್ರಸಾರಾಂಗ, ೧೯೩೩, ಪು. ೩೯೧–೩೯೩

೮. ಸಿಂಬಲ್ಸ್ ಆಫ್ ಸಬ್‌ಸ್ಟೆನ್ಸ್ ಪು. ೨೩೭

೯. ಲಕ್ಷ್ಮಣ್ ತೆಲಗಾವಿ(ಸಂ.), **ಜರಿಮಲೆ ಸಂಸ್ಥಾನದ ವಂಶಾವಳಿ 'ಚಂದ್ರವಳ್ಳಿ'**, ಪು. ೩೭

೧೦.ನೋಡಿ, ಎನ್. ವೆಂಕಟರಮಣಯ್ಯ, **ವಿಜಯನಗರ ಒರಿಜಿನ್ ಆಫ್ ದಿ ಸಿಟಿ ಅಂಡ್‌ದ ಎಂಪೈರ್**, ಏಷಿಯನ್ ಎಜುಕೇಷನಲ್ ಸರ್ವೀಸಸ್, ನವದೆಹಲಿ, ೧೯೯೦, ಪು. ೧೦೮–೧೧೧

೧೧.ವಸು ಎಂ.ವಿ., **ದಕ್ಷಿಣ ಕರ್ನಾಟಕದ ಅರಸು ಮನೆತನಗಳು**, ಪ್ರಸಾರಾಂಗ, ಕವಿಹಂ. ೨೦೦೧, ಪು. ೧೬೧

೧೨.ಅದೇ, ಪು, ೭೬+೭೭+೭೮+೭೯

೧೩.ಅದೇ.

೧೪.ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ–೧, AR NO fo 745 , 1924 Sii Vol ix, Page. 210-699.

೧೫.ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ, ಚನ್ನಬಸಪ್ಪ ಎಸ್. ಪಾಟೀಲ (AR NO 744, Of 1922, Sii XVI NO 699) ಸಂ. ೪೪೬ (ಆ್ಯರಿಸೌ ಇಎ 1922 -23, ಸಂ–೧೯೨೨ರ ೭೪೪ ಸೌಇಇ XVI ಸಂ.೯೯) ಗಮನಿಸಬಹುದಾಗಿದೆ.

೧೬. ಕೆ.ಎಸ್. ಶಿವಣ್ಣ(ಸಂ), ಕರ್ನಾಟಕ ಸಮಗ್ರ ಚರಿತ್ರೆ ಸಂ. ೩, ಪು.೩೫೫

೧೭. ಹಂಪಿ–ಕಮಲಾಪುರ ಪರಿಸರದಲ್ಲಿ ನೆಲೆಸಿರುವ ಮ್ಯಾಸನಾಯಕರು ಇಂದಿಗೂ ಪಾಪಯ್ಯ, ಪಾಪನಾಯಕ, ಪಾಪಜ್ಜ, ಪಾಪೇಶಿ, ಪಾಪಮ್ಮ, ಪಾಪಕ್ಕ ಎಂಬ ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ. ಅಲ್ಲದೆ ಇವರು ತಮ್ಮ ಹಿರಿಯರ ಹಬ್ಬವನ್ನು ಮಾಡುವಾಗ ಪಾಪೇದೇವರು, ಪರದೇಶಿ ಪಾಪಯ್ಯ, ಸೂರ್ಯದೇವ ಪಾಪನಾಯಕ, ಕೊರೇಳು ಪಾಪಯ್ಯ, ಜಗಳೂರಜ್ಜ ಎಂದೆಲ್ಲ ಕರೆದು ಆರಂಭಿಸುವ ಪದ್ಧತಿಯಿದೆ. ಕೋರ್ಲ ಮಲ್ಲಿನಾಯಕ ಮತ್ತು ಭಾಳೆದ ಪಟ್ಟಮ್ಮ

ಪಾಪನಾಯಕನ ತಂದೆತಾಯಿಗಳು ಇವನಿಗೆ ಸೂರಪ್ಪನಾಯಕ ಚಿಕ್ಕಪ್ಪನಾಗ ಬೇಕೆಂದು ಇವನಿಗೆ ಸೂರಪರಾಜ, ಸೂರೆದೇವ ಮೊದಲಾದ ಹೆಸರುಗಳಿವೆ. ಕಮಲಾಪುರ ಪಟ್ಟಣದ ದಿ. ಗಲಗಲ್ಲು ಸೂರಯ್ಯನ ಮಗ ಡಾ. ಪಾಪಯ್ಯ ಜಗಳೂರು ಪಾಪಯ್ಯನ ಹೆಸರನ್ನು ಇಟ್ಟುಕೊಂಡರೆ, ಇವರ ಅಣ್ಣ ಚಾರ್ಟರ್ಡ್ ಅಕೌಂಟೆಂಡ್ ಜಿ. ಸೂರಪ್ಪ ಎಂದು ಹೆಸರನ್ನು ಹೊಂದಿದ್ದಾರೆ. ಸೂರಯ್ಯ ಮತ್ತು ಪಾಪಯ್ಯನಿಗೆ ಹೆಸರಲ್ಲಿ ಅವಿನಾಭವ ಸಂಬಂಧವಿದೆ. ಬೇಡರಲ್ಲಿ ಸೂರೆದೇವರು ಮತ್ತು ಪಾಪೇ ದೇವರು ಪ್ರತ್ಯೇಕವಾಗಿದ್ದರೂ. ಒಂದೇ ಗುಡಿಯಲ್ಲಿರುವುದು ವಿಶೇಷ. ಜರಿಮಲೆ ಪಾಳೆಯಗಾರರ ಮೊದಲ ಅರಸನೇ ಹೆಸರೇ ಪಾಪನಾಯಕ. ವಿಜಯನಗರ ಕಾಲದ ಒಬ್ಬ ಐತಿಹಾಸಿಕ ವ್ಯಕ್ತಿಯಾಗಿದ್ದ ಪಾಪನಾಯಕ.

೧೮. ನೋಡಿ: ಡಿ.ಎನ್. ಯೋಗೀಶ್ವರಪ್ಪ, ನಾಯಕತನ ಪದ್ಧತಿ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೧೭, ಪು. ೧೮ರಿಂದ ೧೮೫

ಆಧಾರ ಗ್ರಂಥಗಳು

Burtonstein: 1997, Vijayanagara, Combridge University (Reprint) Press, New Delhi

Nilakanta Sastri K.A.: 2009, The illustrateel History of South India, Oxford University Press, New Delhi

V. N. Rao, D. Shulman, Sanjay Subrahmanyam, 1992, Symbols of substance court and state in Nayaka Period Tamilnadu, O.U.P. New Delhi.

ರಾಬರ್ಟ್ ಸಿವೆಲ್(ಅನು)ಸದಾನಂದ ಕನವಳ್ಳಿ: ಮರೆತು ಹೋದ ಮಹಾ ಸಾಮ್ರಾಜ್ಯ ವಿಜಯನಗರ, ಪ್ರಸಾರಾಂಗ, ಕವಿಹಂ, ೧೯೯೨.

ಎಸ್.ಬಿ. ತಿಪ್ಪನಾಯಕ: ೧೯೯೭, ಜಗಳೂರು ಪಾಪಜ್ಜ, ಕಾನಕಟ್ಟೆ(ಪು. ೧ರಿಂದ ೭ರವರೆಗೆ ಅಪ್ರಕಟಿತ)

ಚನ್ನಬಸಪ್ಪ ಎಸ್ ಪಾಟೀಲ ೧೯೯೬ ವಿಜಯನಗರದ(ಹಂಪೆಯ) ಶಾಸನಗಳು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಮಹದೇವ ಸಿ. ಇತರರು: ೨೦೨೨, ಹೊಸಪೇಟೆ ತಾಲ್ಲೂಕು ದರ್ಶನ, ಪ್ರಸಾರಾಂಗ, ಕವಿಹಂ

ರಾಜನರಾಜಣ್ಣ: ೨೬.೯.೧೯೮೨, ನಾಯಕ ಜನಾಂಗದ ಇತಿಹಾಸ, ಚಳ್ಳಕೆರೆ (ಜಗಳೂರು ಪಾಪನಾಯಕ–ಪು. ೫೫ರಿಂದ ೭೨ರವರೆಗೆ) ಇತಿಹಾಸ ದರ್ಶನ, ಸಂ. ೧೮, ೨೦೦೩, ಕರ್ನಾಟಕ ಇತಿಹಾಸ ಅಕಾಡೆಮಿ(ರಿ) ಬೆಂಗಳೂರು

Scanned with OKEN Scanner

(ದಶಮಾಪುರ ಗ್ರಾಮ ಸ್ಥಾಪನೆಗೆ ಸಂಬಂಧಿಸಿದ ಕಂಚಿನ ಪತ್ರಗಳು–ದುರುಗಪ್ಪ ಎಂ.ಕೆ., ಪು. ೧೨೪–೧೨೬)

ಪಂಡಿತ ರೇವಣ್ಣ ಕವಿಗಳು: ೧೯೫೯, ವಾಲ್ಮೀಕರ ಪುರಾಣವು, ದ್ವಾಮವ್ವನಹಳ್ಳಿ

ವಿರೂಪಾಕ್ಷಿ ಪೂಜಾರಹಳ್ಳಿ: ೨೦೧೬, ವೇಲುಗೋಟೆ ಎಚ್ಚಮನಾಯಕನ ಕಥನ, ಯೋಜನೆ ಹಸ್ತಪ್ರತಿ, ಕವಿಹಂ

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಪು. ೧೦೪.

ಶಿವಣ್ಣ ಕೆ.ಎಸ್.(ಸಂ) ೧೯೯೭, ಸಮಗ್ರ ಕರ್ನಾಟಕ ಚರಿತ್ರೆ ಸಂ–೩, ಪ್ರಸಾರಾಂಗ,

ಚನ್ನಬಸಪ್ಪ ಎಸ್ ಪಾಟೀಲ(ಸಂ) ೧೯೯೭, ಬಳ್ಳಾರಿ ಜಿಲ್ಲೆಯ ಶಾಸನಗಳು (ಕರ್ನಾಟಕ ಶಾಸನಗಳೂ(ಸಂ.೨) ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ದೇವರಕೊಂಡಾರೆಡ್ಡಿ(ಸಂ), ೧೯೯೮, ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

Scanned with OKEN Scanner

3.4.5.

ಚರಿತ್ರೆ ಅಧ್ಯಯನ

ಸಂಪುಟ - ೧೪, ಸಂಚಿಕೆ - ೨
ಜನವರಿ - ಜೂನ್ ೨೦೨೩.

10.06.2024

ಸಂಪಾದಕರು
ಪ್ರೊ. ಎನ್. ಚಿನ್ನಸ್ವಾಮಿ ಸೋಸಲೆ

ಕನ್ನಡ ವಿಶ್ವವಿದ್ಯಾಲಯ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

Scanned with OKEN Scanner

CHARITRE ADHYAYANA
Bi-Annual-Vol-14-Issue-2, January-June-2023
Edited by
Prof. N. Chinnaswamy Sosale
Senior Professor
Deptartment of History
Kannada University, Hampi
Vidyaranya 583 276
Published by
Dr. Madhava Peraje
Director, Prasaranga
Kannada University, Hampi
Vidyaranya 583 276
Pages: x + ೧೪೮
www.kannadauniversity.org
First Impression: 2024
ISSN 2278-5043
ಚರಿತ್ರೆ ಅಧ್ಯಯನ ಅರ್ಧವಾರ್ಷಿಕ ಪತ್ರಿಕೆ
ಸಂಪುಟ-೧೪, ಸಂಚಿಕೆ-೨, ಜನವರಿ-ಜೂನ್ ೨೦೨೩
(ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳ ಅಭಿಪ್ರಾಯಗಳಿಗೆ ಲೇಖಕರೇ ಜವಾಬ್ದಾರರು)
© ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೨೪
ಪ್ರಧಾನ ಸಂಪಾದಕರು: **ಡಾ. ಡಿ.ವಿ. ಪರಮಶಿವಮೂರ್ತಿ**
ಸಂಪಾದಕರು: **ಡಾ. ಎನ್. ಚಿನ್ನಸ್ವಾಮಿ ಸೋಸಲೆ**
ಸಂಪಾದಕ ಸಲಹಾ ಮಂಡಲಿ
ಡಾ. ವಿಜಯ್ ಪೂಣಚ್ಚ ತಂಬಂಡ
ಡಾ. ಕೆ. ಮೋಹನ್‌ಕೃಷ್ಣ ರೈ
ಡಾ. ವಿರೂಪಾಕ್ಷಿ ಪೂಜಾರಹಳ್ಳಿ
ಬಿಡಿ ಪ್ರತಿ: ರೂ. ೧೦೦/- ವಾರ್ಷಿಕ ಚಂದಾ: ವ್ಯಕ್ತಿಗಳಿಗೆ ರೂ. ೧೫೦/-
ಸಂಸ್ಥೆಗಳಿಗೆ ರೂ. ೨೦೦/-
ಅಕ್ಷರ ಸಂಯೋಜನೆ: **ಸುರೇಖಾ ಕಂಪ್ಯೂಟರ್ಸ್, ಕಮಲಾಪುರ**
ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ಮೈಸೂರು ಬ್ಯಾಂಕ್ ವೃತ್ತ, ನಂ. ೧, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯, ದೂ.: ೦೮೦-೨೨೨೭೨೩೮೮
ಮುದ್ರಣ
ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

ಸಂಪಾದಕರ ಮಾತು

ಭಾರತದಲ್ಲಿ ಧಾರ್ಮಿಕತೆಯ ಹಿನ್ನೆಲೆಯಿಂದ ಇನ್ನೂ ನಾವು ಕ್ರಿಸ್ತಪೂರ್ವ ಓನೇ ಶತಮಾನದಲ್ಲಿ ಹುಟ್ಟಿ-ನಡೆದಾಡಿ, ನೀತಿ ಬೋಧನೆಯ ಮೂಲಕ ಜನರನ್ನು ಪ್ರಜ್ಞಾವಂತರಾಗಿಸಿ, ಭಾರತಕ್ಕೆ ಆಗಮಿಸಿದವರ ಧಾರ್ಮಿಕ ಹಿನ್ನೆಲೆಯ ಕೆಂಗಣ್ಣಿಗೆ ಗುರಿಯಾಗಿ ನೇಪಾರ್ಥ್ಯಕ್ಕೆ ಸರಿಸಿದ ಬುದ್ಧನನ್ನೇ ಭಕ್ತಿ-ಭಾವದಿಂದ ಕಣ್ಣು ಮುಚ್ಚಿಕೊಂಡಿಯೇ ಆರಾಧಿಸುತ್ತಿದ್ದೇವೆಯೇ ಹೊರತು, ಬಾಬಾಸಾಹೇಬ್ ಅಂಬೇಡ್ಕರ್ ಅವರು ಬೌದ್ಧಿಕತೆಯ ಹಿನ್ನೆಲೆಯಿಂದ ಸೂಟುಬೂಟು ಹಾಕಿಕೊಂಡು, ಭಾರತದಲ್ಲಿ ಬೌದ್ಧಿಕವಾಗಿ ಪುನರ್‌ಸ್ಥಾಪಿಸಿದ ಬುದ್ಧ ಹಾಗೂ ಆತನ ಧರ್ಮವನ್ನು ಸಂವಿಧಾನದ ಹಿನ್ನೆಲೆಯಿಂದ ಪ್ರಜ್ಞಾಪೂರ್ವಕವಾಗಿ ಆಚರಿಸುತ್ತಲೇ ಇಲ್ಲ. ಮುಂದುವರೆದು, ಯಾರು ಬೌದ್ಧ ಧರ್ಮವನ್ನು ತಮ್ಮ ಸ್ವಾರ್ಥಕ್ಕಾಗಿ ಬಲಿ ತೆಗೆದುಕೊಂಡು-ಶಾಶ್ವತವಾಗಿ ಅಂಚಿನೆಡೆಗೆ ಕೊಂಡೊಯ್ಯುದಿದ್ದರೂ, ಅವರ ವಿರುದ್ಧವೇ ಬೌದ್ಧಿಕವಾಗಿ ಸೆಣಸಾಡಿ, ಸಂವಿಧಾನಾತ್ಮಕವಾಗಿ ಶಾಶ್ವತವಾಗಿ ಜಯ ಗಳಿಸಿ ಮನೆ ಹಾಗೂ ಮನಸ್ಸುಗಳಿಗೆ ಬುದ್ಧ ಮತ್ತು ಆತನ ಧರ್ಮವನ್ನು ಬೌದ್ಧಿಕವಾಗಿ ಪ್ರವೇಶ ಮಾಡಿಸಿದ ಬಾಬ ಸಾಹೇಬರ ವಾಸ್ತವದ ಹಿನ್ನೆಲೆಯ ಸಂವಿಧಾನಾತ್ಮಕ ನವಬೌದ್ಧ ಧರ್ಮವನ್ನು ಬೌದ್ಧಿಕತೆಯ ಹಿನ್ನೆಲೆಯಿಂದ ಆರಾಧಿಸಲೇ ಇಲ್ಲ. ಇದಕ್ಕೆ ಎರಡು ಮೂರು ಸಾವಿರ ಶತಮಾನಗಳ ಅಜ್ಞಾನವೂ ಕಾರಣವಾಗಿದೆ.

ಏಕೆಂದರೆ, ಕ್ರಿಸ್ತಪೂರ್ವ ಓನೇ ಶತಮಾನದ ಸ್ಥಾಪಿತ ಹಂತದ ಬುದ್ಧ ಮತ್ತು ಆತನ ಧರ್ಮ ಅಪಾರ ಧಾರ್ಮಿಕ ವೈಭವದ ನಂಬಿಕೆಗಳ ಮೂಲಕ ಇಂದು ಬಹುದೊಡ್ಡ ಜನಸಮುದಾಯದ ಮನಸ್ಸಿನ ತೊಟ್ಟಿಲಲ್ಲಿ ಭಾವನಾತ್ಮಕವಾಗಿ ಲಾಲಿಯನ್ನು ಹಾಡಿ ಭ್ರಾಂತಿಯಿಂದಲೇ ಮಲಗಿಸಲಾಗುತ್ತಿದೆ. ಈ ಹಿನ್ನೆಲೆಯಿಂದ ಇದು ಇಂದಿನ ಧಾರ್ಮಿಕ-ಸಾಮಾಜಿಕ ಸ್ಥಿತ್ಯಂತರದ ನಡುವೆಯೂ ಯಾವುದೇ ಪ್ರಶ್ನೆ ಕೇಳುವುದಿಲ್ಲ. ಆದರೆ ಅಂಬೇಡ್ಕರ್ ಅವರ ಬುದ್ಧ ಮತ್ತು ಬೌದ್ಧ ಧರ್ಮ ಸಮಕಾಲೀನ ಸಂದರ್ಭದಲ್ಲಿ ಜನ ಹಾಗೂ ಸಂಸ್ಕೃತಿಯನ್ನು ಮುಖಾಮುಖಿಗೊಳಿಸಿ ವೈಚಾರಿಕತೆ ಹಿನ್ನೆಲೆಯಿಂದ ಪ್ರಶ್ನೆಗಳನ್ನು ಹುಟ್ಟುಹಾಕುವ, ಶತ ಶತಮಾನಗಳಿಂದ ಬೌದ್ಧಿಕ ಹಾಗೂ ಬೌದ್ಧಿಕವಾಗಿ ಶ್ರೀಮಂತರಾಗಿದ್ದರೂ ಸಹ ಮೂಕರಾಗಿದ್ದ ಜನರಿಗೆ ಮಾತು ಕಲಿಸುವ ಮೂಲಕ ಬೌದ್ಧಿಕವಾಗಿ ನಡೆದಾಡಿದೆ. ಹಾಗೂ ಬಹುದೊಡ್ಡ ಜನವರ್ಗವನ್ನು ಆ ಹಿನ್ನೆಲೆಯಲ್ಲಿ ನಡೆಸುವಂತೆ ಮಾಡುತ್ತಿದೆ. ಈ ನಡೆದಾಟದಿಂದ ಪ್ರಶ್ನೆಗಳನ್ನು ಕಂಡುಕೊಂಡು ಶತ

Scanned with OKEN Scanner

ಅವರು ನಿರೂಪಿಸಿದ್ದಾರೆ. ವಿಜಯನಗರ ಕಾಲದ ಪಾವಯ್ಯ ಮತ್ತು ಪಾಪನಾಯಕನ ಹಳ್ಳಿಯ ಚಾರಿತ್ರಿಕ ಮಹತ್ವದ ಕುರಿತು ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರು ಮಹತ್ವದ ದಾಖಲೆಯೊಂದಿಗೆ ಚಾರಿತ್ರಿಕ ವಿಶ್ಲೇಷಣೆ ಮಾಡಿರುವುದು ವಿಶೇಷವಾಗಿದೆ. ಒಟ್ಟಾರೆ ಈ ಸಂಚಿಕೆಯ ಲೇಖನಗಳು ಅಂಬೇಡ್ಕರ್ ಅವರ ಒಡಲಾಳದಿಂದ ಗ್ರಹಿಸಿದ ಭಾರತ, ಭಾರತದ ಜನತೆಯ ಸಮಸಮಾಜ ಪ್ರಜ್ಞೆಯನ್ನು ಬೌದ್ಧಿಕವಾಗಿ ಪ್ರತಿನಿಧಿಸುತ್ತವೆ.

ಪ್ರೊ. ಎನ್. ಚಿನ್ನಸ್ವಾಮಿ ಸೋಸಲೆ

ಪರಿವಿಡಿ

ಸಂಪಾದಕೀಯ / iii

೧. ಅಂಬೇಡ್ಕರ್ ಮತ್ತು ಗಾಂಧಿ ಚಿಂತನೆಗಳಲ್ಲಿ ಗ್ರಾಮ ಮತ್ತು ನಗರಗಳ ಪರಿಕಲ್ಪನೆ / ೧
ಡಾ. ಕೆ. ಮೋಹನ್‌ಕೃಷ್ಣ ರೈ

೨. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಭಾರತದ ಮಹಿಳೆ ಮತ್ತು ಧಾರ್ಮಿಕ ಅಮಾನವೀಯ ಆಚರಣೆಗಳು : ವಸ್ತುನಿಷ್ಠ ವಿಶ್ಲೇಷಣೆ / ೧೬
ಡಾ. ಜಿ. ವಿಜಯಲಕ್ಷ್ಮಮ್ಮ

೩. ಅಂಬೇಡ್ಕರ್ ದೃಷ್ಟಿಯಲ್ಲಿ ಅಸಂಘಟಿತ ಮಹಿಳಾ ಕಾರ್ಮಿಕರು : ವಸ್ತುನಿಷ್ಠ ವಿಶ್ಲೇಷಣೆ / ೩೨
ಡಾ. ಚನ್ನಮ್ಮ ಕಂಬಾರ

೪. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಸಾಮಾಜಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರು : ವಸ್ತುನಿಷ್ಠ ವಿಶ್ಲೇಷಣೆ / ೪೯
ಡಾ. ಪದ್ಮಿನಿ ನಾಗರಾಜ್

೫. ಅಂಬೇಡ್ಕರ್ ಮಾತನಾಡಿದ ಇಂದಿನ ವಾಸ್ತವದ ಭಾರತದಲ್ಲಿ ನಾವು–ನೀವು.....? / ೬೬
ಡಾ. ಎನ್. ಚಿನ್ನಸ್ವಾಮಿ ಸೋಸಲೆ

೬. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಮೂಲನಿವಾಸಿಗಳು ಎಂದರೆ ಯಾರು : ಚಾರಿತ್ರಿಕ ವಿಶ್ಲೇಷಣೆ / ೭೯
ಸಾವಿತ್ರಿ

೭. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಎನ್ ಜಿ ಓ : ಸಾಧಕ ಬಾಧಕಗಳ ವಸ್ತುನಿಷ್ಠ ವಿಶ್ಲೇಷಣೆ / ೮೮
ಡಾ. ಕೃಷ್ಣಪ್ಪ ಕೊಂಚಾಡಿ

೫

ಅಂಬೇಡ್ಕರ್ ಮಾತನಾಡಿಸಿದ ಇಂದಿನ ವಾಸ್ತವದ ಭಾರತದಲ್ಲಿ ನಾವು–ನೀವು.... ?

ಡಾ. ಎನ್. ಚಿನ್ನಸ್ವಾಮಿ ಸೋಸಲೆ

ಭಾರತ ಪ್ರಪಂಚದ ಕಣ್ಣಿಗೆ ತನ್ನನ್ನು ಮುಕ್ತ ಧರ್ಮ ಹಾಗೂ ಸಮಾಜವನ್ನು ಹೊಂದಿರುವ–ಬಹುಸಂಸ್ಕೃತಿನೂ ಒಗ್ಗಟ್ಟಿನಿಂದ ಸೌಹಾರ್ದತವಾಗಿ ಒಂದಾಗಿ ಮಾಡಿ ಕೊಂಡಿರುವ ದೇಶ ಎಂದು ದಾಖ್ಯವಾಗಿ ಹೇಳಿಕೊಳ್ಳುತ್ತದೆ. ಆದರೆ ಆಂತರಿಕವಾಗಿ ಏಕಮುಖಿ ಚಿಂತನೆಯನ್ನೇ ಮೈಗೂಡಿಸಿಕೊಂಡಿರುವುದು–ಅದನ್ನೇ ಭಾರತದ ಬಹುದೊಡ್ಡ ಸಂಸ್ಕೃತಿಯೆಂದು ಹೇಳಿಕೊಳ್ಳುವ ಸ್ವಭಾವದದಾಗಿದೆ.ಇದಕ್ಕೆ ನಮ್ಮ ಅಸಮಾನತೆಯನ್ನು ಪ್ರತಿಪಾದನೆ ಮಾಡುತ್ತಿರುವ ಸಾಂಸ್ಕೃತಿಕ ಚರಿತ್ರೆಯೇ ಸಾಕ್ಷಿಯಾಗಿದೆ.

ಈ ಏಕಮುಖಿ ಸಂಸ್ಕೃತಿಯ ವಿರುದ್ಧವೇ ಬಹುಮುಖ ಸಂಸ್ಕೃತಿಯನ್ನು ಈ ದೇಶವಾಸಿಗಳಲ್ಲಿ ಅನಾವರಣಗೊಳಿಸಲು ಕಾಲಕಾಲಕ್ಕೆ ಅನೇಕ ಮಹನೀಯರು ಜನಿಸಿರುವುದಕ್ಕೆ ಭಾರತದ ಇತಿಹಾಸ ಹಾಗೂ ಚರಿತ್ರೆ ಸಾಕ್ಷಿಯಾಗಿದೆ. ಈ ಹಿನ್ನೆಲೆಯಲ್ಲಿಯೇ ಬುದ್ಧ, ಬಸವ, ಬಸವಾದಿಶರಣ–ಶರಣೆಯರು, ದಾಸರು, ತತ್ವಪದಕಾರರು ಜನಿಸಿ ನಮ್ಮ ಪ್ರಗತಿಪರ ಚಿಂತನೆಗೆ ನಾಂದಿ ಹಾಡಿದ್ದಾರೆ.ಇವರೆಲ್ಲರ ಚಿಂತನೆಗೆ ಶತ್ರು ಮತ್ತು ಮಿತ್ರರು ಯಾರು ಎಂಬುದು ಸ್ಪಷ್ಟವಾಗಿ ತಿಳಿದಿತ್ತು.ಇವರೆಲ್ಲರ ಚಿಂತನೆ ಏಕಮುಖಿವಾಗಿ ದೇಶ ಹಾಗೂ ದೇಶದ ಜನರನ್ನು ಬಳಸಿಕೊಳ್ಳುತ್ತಿದ್ದವರ ವಿರುದ್ಧ ಇತ್ತೇ ಹೊರತು, ಬಹುಮುಖಿವಾಗಿ ಕಾಯಕ ಸಿದ್ಧಾಂತದ ಮೂಲಕ ರಾಷ್ಟ್ರ ಕಟ್ಟಿದವರ ಹಾಗೂ ಕಟ್ಟುವವರ ಪರ ತಮ್ಮ ಅನುಭಾವದ ಬೌದ್ಧಿಕತೆಯನ್ನು ಅನಾವರಣ ಗೊಳಿಸಿದರು. ಇಂತಹ ಜನಪರ ಕಾರ್ಯ ಮಾಡುವುದಕ್ಕಾಗಿ ಇವರ ಜಯಂತಿಗಳನ್ನು ನಾವು ಕಾಲಕಾಲಕ್ಕೆ ಆಚರಿಸುತ್ತಾ ಬಂದಿದ್ದೇವೆ. ಇವರೆಲ್ಲರು ವಾಸ್ತವದ ಸಂಕೇತ ವಾಗಿದ್ದರು. ಮುಂದಿನ ದಿನಗಳಲ್ಲಿ ಪ್ರಕೃತಿಯ ಕರೆಗೆ ತಲೆಬಾಗಿ ಇವರೆಲ್ಲರೂ ನಿರ್ಗಮಿಸಿದ ನಂತರ, ಇಂತಹ ಸಾಧಕರು ಕಾಣಲು "ಬಯಸದ ದೇಶವನ್ನು ಪುನಃ ಯಾವುದೇ

ದಿಕ್ಕು ದೆಸೆ ಇಲ್ಲದ ಪುರಾಣದ ಮೂಲಕವೇ ಭಾರತ ಹಾಗೂ ಭಾರತದ ಚರಿತ್ರೆಯನ್ನು ಕಟ್ಟಲು ಬಯಸಿ ಮುಂಚೂಣಿಗೆ ಬಂದರು. ದೇವರು ಇವರಿಗೆ ಸಹಕರಿಸಿದ್ದು, ಸಾವಿದ್ದರೂ ಸಹ ಸಾವಿಲ್ಲದ ಪುರಾಣ ಭಾರತಕ್ಕೆ ಕಾಲಕಾಲಕ್ಕೆ ಎದುರಾಗುವ ಸಮಸ್ಯೆಗಳಿಗೆ ದೇವರ ಹೆಸರಿನ ಧಾರ್ಮಿಕ ಸಂಕೋಲೆಯಲ್ಲಿ ಸಿಲುಕಿಸಿ, ಪರಿಹಾರಕ್ಕೆ ಪುರಾಣವನ್ನೇ ಚರಿತ್ರೆಯನ್ನಾಗಿಸಲು ಮುಂದಾಯಿತು. ಹೀಗೆ ವಿಕಮುಖಿವಾಗಿ ಚಲಿಸಲು ಆರಂಭಿಸಿದ ಸಂದರ್ಭದಲ್ಲಿ–ಈ ಚಲನೆಯನ್ನು ಬಹುಮುಖಿಗೊಳಿಸಲು ಮೇಲಿನವರ ವಾರಸುದಾರರಾಗಿ ಏಪ್ರಿಲ್ ೧೪, ೧೮೯೧ರಂದು ಜನಿಸಿದವರೇ ಬಾಬಾಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರು.

ಅಂಬೇಡ್ಕರ್‌ರವರ ಜನನವೇ ಎರಡು ಸಾವಿರ ವರ್ಷಗಳಿಂದ ತಟಸ್ಥವಾಗಿದ್ದ ಭಾರತದ ಚರಿತ್ರೆಯ ಚಲನಶೀಲತೆಗೆ ಮುನ್ನುಡಿ ಬರೆದಂತಾಯಿತು. ಅಂಬೇಡ್ಕರ್ ಅವರ ಜನನ–ಜೀವನ ಹಾಗೂ ಮರಣವೇ ಭಾರತ–ಭಾರತೀಯ ಹಾಗೂ ಭಾರತೀಯತೆಯ ಸಂಕೇತ. ಅವರು ನಮಗೆಲ್ಲ ಬಿಟ್ಟು ಹೋಗಿರುವುದು ಜೀವನದ ಜೊತೆಗೆ ಬಹುದೊಡ್ಡ ಬದುಕನ್ನು.ಜೀವ ಅಲ್ಪ–ಬದುಕು ಯುಗ ಯುಗಾಂತರಕ್ಕೂ ಶಾಶ್ವತವಾದದ್ದು. ಇದಕ್ಕೆ ಭಾರತ ದೇಶದಲ್ಲಿ ಅನ್ವಯವಾಗುವ ವಿಶ್ವೈಕ ಸಾಧಕರು ಎಂದರೆ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು.

ಒಬ್ಬ ಮಹಾನ್ ಮನುಷನ ಹುಟ್ಟು ಹಲವಾರು ಸಾಂಸ್ಕೃತಿಕ ಸಂಕೋಲೆಗಳಿಂದ ತನ್ನ–ತನ್ನವರು ಒಳಗೊಂಡ ದೇಶವಾಸಿಗಳ ಸಾಂಸ್ಕೃತಿಕ ಸಂಕೋಲೆಗಳಿಂದ ಮುಕ್ತಿಗೊಳಿಸಿ ವ್ಯಕ್ತಿ ಹಾಗೂ ವ್ಯಕ್ತಿತ್ವವನ್ನು ಸಾಂಸ್ಕೃತಿಕವಾಗಿ ಸ್ವಾತಂತ್ರ್ಯಗೊಳಿಸುವ ಸಂಕೇತವಾದರೆ–ಕೆಲವು ಮಹಾನ್ ಪುರಷರ ನಿಧನ ರಾಜಕೀಯ ಹಾಗೂ ಸಾಮಾಜಿಕ ದಿಕ್ಕನ್ನೇ ಬದಲಾಯಿಸಿರುವುದಕ್ಕೂ ಭಾರತದ ಮಣ್ಣಿನಲ್ಲಿ ಜ್ವಲಂತ ನಿದರ್ಶನಗಳಿವೆ. ಈ ಮಾದರಿಯ ಜನನ ಮತ್ತು ಮರಣಗಳೆರಡರಿಂದಲೂ ಭಾರತದ ಸಾಂಸ್ಕೃತಿಕ ದಿಕ್ಕನ್ನೆ ಬದಲಾಯಿಸಿದ – ಯಾವುದೇ ದಾಳಿ ಆಕ್ರಮಣ ಗಳನ್ನು ಕತ್ತಿ ಹಿಡಿದು ಮಾಡದೆ–ಶತಶತಮಾನಗಳಿಂದ ಬಹುಜನರ ಕೈಯಲ್ಲಿ ಹಿಡಿಸದೆ ಇದ್ದಂತಹ ಲೇಖನಿ ಎಂಬ ವಿದ್ವತ್ ಜ್ಞಾನವೆಂಬ ಖಡ್ಗವನ್ನು ಹಿಡಿದು ಕಟ್ಟಿದ ಸಾಮ್ರಾಜ್ಯದ ಅಧಿಪತಿಯಾಗಿ ಶಾಶ್ವತವಾಗಿ ಜನಮಾನಸದಲ್ಲಿ ನೆಲೆಯೂರಿದ ವಿಶ್ವೈಕ ಮಹಾನ್ ಮಾನವತವಾದಿ ದೊರೆಯೆಂದರೆ ಬಾಬಾಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ಅವರು.

ಅಂಬೇಡ್ಕರ್ ಅವರು ಜನಿಸಿದ ಸಂದರ್ಭ ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಭದ್ರಗೊಂಡು ಎರಡು ಸಾವಿರ ವರ್ಷಗಳಿಂದ ಭಾರತದಲ್ಲಿ ಸಾಂಪ್ರದಾಯಿಕವಾಗಿ ಜಾರಿಯಲ್ಲಿದ್ದ ಧಾರ್ಮಿಕ ಹಾಗೂ ಸಾಮಾಜಿಕ ಕಟ್ಟುಪಾಡುಗಳು, ಜನತೆ ಮತ್ತು ಪ್ರಭುತ್ವದ ಹಿನ್ನೆಲೆಯಲ್ಲಿ ಚರ್ಚೆಗೆ ಒಳಗಾಗಿದ್ದ ಸಂದರ್ಭವೂ ಆಗಿದ್ದವು. ಈ ಮಾದರಿಯ ಚರ್ಚೆಗಳು ಭಾರತವನ್ನು ಬ್ರಿಟಿಷರಿಗೂ ಪೂರ್ವದಲ್ಲಿ ಅಥವಾ ಬ್ರಿಟಿಷರು ಆರಂಭದಲ್ಲಿ ಆಳ್ವಿಕೆ ಮಾಡಿದ ದಿನಗಳಲ್ಲಿಯೂ ಕಂಡುಬಂದಿರುವುದಿಲ್ಲ. ಬುದ್ಧ–ಬಸವರು ಈ ಕಾರ್ಯವನ್ನು

Scanned with OKEN Scanner

ಬಾಬಾಸಾಹೇಬ್ ಅಂಬೇಡ್ಕರ್ ಅವರು ಭಾರತವನ್ನು ನೋಡಿದ ಪರಿ ಕೇವಲ ಭೂಪಟದ ಭಾರತವಾಗಿರಲಿಲ್ಲ–ಬದಲಾಗಿ, ಸಮಗ್ರ ಭಾರತದ ಭೂಪ್ರದೇಶದ ಭಾರತವಾಗಿತ್ತು. ಭೂಪಟದ ಭಾರತ ಬದಲಾವಣೆಯನ್ನು ಬಯಸದೆ ಕೇವಲ ಸಾಂಪ್ರದಾಯಿಕವಾಗಿ, ಏಕಮುಖವಾಗಿ ಚಿಂತಿಸಲು ಬಯಸಿದರೆ, ಭೂಪ್ರದೇಶದ ಭಾರತ–'ಭಾರತ, ಭಾರತೀಯ ಹಾಗೂ ಭಾರತೀಯತೆ'ಯನ್ನು ಅನಾವರಣಗೊಳಿಸುವುದಾಗಿತ್ತು.ಅಂಬೇಡ್ಕರ್ ಅವರ ಗಟ್ಟಿತನದ ಜ್ಞಾನದ ಧಾರತದಲ್ಲಿ ಮಾತನಾಡುವವರಿದ್ದಾರೆ–ಮಾತು ಕಲಿಯುವವರಿದ್ದಾರೆ ಹಾಗೂ ಮಾತು ಕಲಿಸುವವರಿದ್ದಾರೆ.ಇಪ್ಪು ಮಾತನಾಡಿಸುವ ಕಾರ್ಯವನ್ನು ಮಾಡಿದ್ದು ಎರಡು ಸಾವಿರ ವರ್ಷಗಳಿಂದ ಮಾತು ಬಂದರೂ, ಮೂಕರನ್ನಾಗಿಸಿದವರ–ಶ್ರಮಪಟ್ಟರೂ ಶ್ರಮಕ್ಕೆ ಪ್ರತಿಫಲ ನೀಡದವರ ವಿರುದ್ಧವಾಗಿತ್ತು ಎಂಬುವುದನ್ನು ಪ್ರತಿಯೊಬ್ಬರು ಅರ್ಥಮಾಡಿಕೊಳ್ಳಬೇಕು.ಈ ಮಾದರಿಯಲ್ಲಿ ಶತಶತಮಾನಗಳಿಂದ ಅರಿಯದೆ ಇದ್ದ ಅಜ್ಞಾನದಿಂದ ಕಶ್ಮಲಗೊಂಡಿದ್ದ ನದಿಯ ನೀರನ್ನು ಜ್ಞಾನ ಎಂಬ ಶುದ್ಧವಾದ ವಾಸ್ತವದ ಅಸ್ತಿಂದ ಶುದ್ಧಗೊಳಿಸಿ–ವಿಶಾಲ ಭಾರತದ ಎಲ್ಲಾ ನರನಾಡಿಗಳಲ್ಲೂ ಹರಿಯುವಂತೆ ಮಾಡಿದ ಧೀಮಂತ ಡಾಬಾಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ಅವರು.ಅದಕ್ಕಾಗಿಯೇ ಇವರನ್ನು ಭಾರತದ ಸುಪುತ್ರ–ಜ್ಞಾನದ ಶಿಖರ ಎಂದು ಕರೆಯುವುದು.

ಬಾಬಾಸಾಹೇಬ್ ಅಂಬೇಡ್ಕರ್ ಅವರು ದೇಶ–ವಿದೇಶಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆದು ಭಾರತಕ್ಕೆ ಬಂದರು.ಏಕೆಂದರೆ ಭಾರತದ ಕಾಯಕ ಸಿದ್ಧಾಂತದ ಹಿನ್ನಲೆಯ ಬಹುಜನ ತಮ್ಮ ಮೂಲಭೂತ ಹಕ್ಕುಗಳನ್ನು ಕಳೆದುಕೊಂಡದ್ದು ಭಾರತದಲ್ಲಿಯೇ ಎಂಬುವುದು ಸ್ಪಷ್ಟವಾಗಿ ತಿಳಿದಿದ್ದ ಕಾರಣಕ್ಕಾಗಿ. ಈ ಮೂಲಭೂತ ಹಕ್ಕುಗಳ ಕಸಿಯುವಿಕೆಗೆ ಯಾವ ವಿದೇಶಿ ಧರ್ಮ ಅಥವಾ ಯಾವ ವಿದೇಶಿ ಪ್ರಭುತ್ವವೂ ಕಾರಣವಲ್ಲ ಎಂಬುದು ಸ್ಪಷ್ಟವಾಗಿ ತಿಳಿದಿತ್ತು. ಅದಕ್ಕಾಗಿ ಅವರು ತನ್ನ ಜನರಿಗೆ ಮೊರಕಲೇ ಬೇಕಾದ ಮೂಲಭೂತ ಹಕ್ಕುಗಳನ್ನು ಒದಗಿಸಲು ಯಾವುದೇ ಕಾರಣಕ್ಕೂ ವಿದೇಶಿ ನೆಲದಲ್ಲಿ ಚಳುವಳಿಗಳನ್ನಾಗಲಿ, ಮುಷ್ಕರಗಳನ್ನಾಗಲಿ ಮಾಡಲಿಲ್ಲ, ಬದಲಿಗೆ ಅವರು ಕೈಗೊಂಡಿದ್ದು ಭಾರತದ ನೆಲದಲ್ಲಿಯೇ. ಇದು ಅವರು ಭಾರತದ ಭೂಪ್ರದೇಶವನ್ನು ಗ್ರಹಿಸಿದ ಒಡಲಾಳದ ಗಟ್ಟಿತನದ ಬೌದ್ಧಿಕ ಅಂಶ. ಕೆಲವರು ತಮ್ಮ ಕೈ ಬೆರಳಿನ ಉಂಗುರವನ್ನು(ಉಂಗುರ ಎಂದರೆ: ಭಾರತದಲ್ಲಿ ಇರುವ ಅಸ್ಪೃಶ್ಯತೆ–ವರ್ಣಭೇದ ನೀತಿ–ಜಾತೀಯತೆ–ಧಾರ್ಮಿಕ ಅಂಧಕಾರ ಇತ್ಯಾದಿ ಇತ್ಯಾದಿ) ಭಾರತದ ನೆಲದಲ್ಲಿ ಕಳೆದುಕೊಂಡು, ಅದನ್ನು ಪತ್ತೆಹಚ್ಚಲು ವಿದೇಶಿ ನೆಲದಲ್ಲಿ ಹುಡುಕಾಟ ನಡೆಸಿರುವುದಕ್ಕೆ ಸಾಕ್ಷಿ ಇದೆ. ಆದರೆ ಅಂಬೇಡ್ಕರ್ ಅವರು ಭಾರತದ ವಾರಸುದಾರರಾಗಿ, ತಮ್ಮ ಹಾಗೂ ತಮ್ಮವರ ಕೈಬೆರಳಿನ ಉಂಗುರವನ್ನು ಯಾರು ಕಸಿದುಕೊಂಡರು ಎಂಬುವುದು ಸ್ಪಷ್ಟವಾಗಿ ತಿಳಿದ ಕಾರಣಕ್ಕಾಗಿ ಎರಡು ಸಾವಿರ ವರ್ಷಗಳಿಂದ ಕಸಿದುಕೊಂಡಿದ್ದ ವರಿಂದಲೇ ನ್ಯಾಯಯುತವಾಗಿ ಹೋರಾಡಿ–ಸಂವಿಧಾನಾತ್ಮಕವಾಗಿ ಪಡೆಯಲು

ಮಾಡಿದರೂ ಸಹ ಕಾಲದ ಗರ್ಭದಲ್ಲಿ ಸಿಲುಕಿ ನೆಪಮಾತ್ರಕ್ಕೆ ಸರಿದರು. ಆದರೆ ೧೮೯೯ರಲ್ಲಿ ಟಿಪ್ಪುಸುಲ್ತಾನ್‌ನ ಮರಣದ ನಂತರ ಇಡೀ ಭರತ ಖಂಡವನ್ನು ಬ್ರಿಟಿಷರು ತಮ್ಮ ಆರ್ಥಿಕ ತೋಳ್ಬಲಕ್ಕೆ ತೆಗೆದುಕೊಂಡು ತಮ್ಮ ಸ್ವಾರ್ಥ ಸಾಧನೆಗಾಗಿಯೂ ಹಾಗೂ ಅಖಂಡ ಭಾರತದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಹಿನ್ನಲೆಯಲ್ಲಿ ಸಾಂಪ್ರದಾಯಕವಾಗಿಯೇ ಜಾರಿಯಲ್ಲಿದ್ದ ಬಾಲ್ಯವಿವಾಹ, ಸತಿವದ್ಧತಿ, ವಿಧವೆಯರ ಮನರ್ ವಿವಾಹ, ಸಾಮಾಜಿಕ ಹಿನ್ನಲೆಯ ಅಮಾನವೀಯ ಬದುಕಿನ ಸ್ಥಿತಿಗತಿ, ಜಾತಿ ವದ್ಧತಿ ಹಾಗೂ ಏಕಮುಖ ಜನಾಂಗವೇ ಶತಶತಮಾನಗಳಿಂದ ಶಿಕ್ಷಣವನ್ನು ತಮ್ಮ ಪಿತ್ರಾರ್ಜಿತ ಹಕ್ಕನ್ನಾಗಿಸಿಕೊಂಡಿದ್ದವರ ವಿರುದ್ಧ ಕಾನೂನುಗಳನ್ನು ರೂಪಿಸಿ, ಇವುಗಳನ್ನು ಸಂಪೂರ್ಣವಾಗಿ ನಿಷೇಧ ಮಾಡಿಸಲು ಆಡಳಿತಾತ್ಮಕ ಕ್ರಮಗಳನ್ನು ತೆಗೆದುಕೊಂಡ ಕಾಲವೂ ಆಗಿತ್ತು. ಇಂತಹ ಪ್ರಗತಿಪರ ಚಿಂತನೆಗೆ ಭಾರತವು ಒಳಗಾಗುತ್ತಿರ್ವ ಪರ್ವಕಾಲದಲ್ಲಿಯೇ ಅಂಬೇಡ್ಕರ್ ಅವರ ಜನನವಾಯಿತು.

ಅಂದು ಚಾರಿತ್ರಿಕವಾಗಿ ರಾಷ್ಟ್ರೀಯ ಮೂಲಭೂತವಾದಿಗಳ ಉಪಟಳವನ್ನು ಸಹಿಸಲಾರದೆ ಭಾರತ ಮತ್ತು ಭಾರತೀಯರನ್ನು ಉಳಿಸಲು ಅಂದೆ ಪ್ರಜಾಪ್ರಭುತ್ವ ಮಾದರಿಯ ಸಮ ಸಮಾಜವನ್ನು ನಿರ್ಮಾಣ ಮಾಡಲು ಬುದ್ಧ ಜನಿಸಿದಂತೆ–ಕರ್ನಾಟಕಕ್ಕೆ ರಾಮಾನುಜಾಚಾರ್ಯರ ಪ್ರವೇಶ ಆದ ಮೇಲೆ ಇಡೀ ಕನ್ನಡ ನಾಡು ಶ್ರೀವೈಷ್ಣವ ಕರಣ ಗೊಳಿಸಲು ಪ್ರಭುತ್ವವನ್ನೇ ತಮ್ಮ ತೋಳ್ ತೆಕ್ಕೆಗೆ ತೆಗೆದುಕೊಂಡು ಬೃಹತ್ ವೈಷ್ಣವ ದೇವಾಲಯಗಳ ನಿರ್ಮಾಣ ಹಾಗೂ ಬಹುದೊಡ್ಡ ಜನವರ್ಗವನ್ನು ಶ್ರೀವೈಷ್ಣವ ಕರಣಗೊಳಿಸಿ ಸಾಮಾಜಿಕ ಹಾಗೂ ಧಾರ್ಮಿಕ ಅಂಧಕಾರದ ಕೊಂಪೆನ್ನಾಗಿ ನಿರ್ಮಾಣ ಮಾಡಿದವರ ವಿರುದ್ಧ ಪ್ರಜಾ ಪ್ರಭುತ್ವದ ಕಲ್ಪನೆಯನ್ನು ಹುಟ್ಟಿದ ಬಸವಣ್ಣ ಹಾಗೂ ಬಸವರಿ ಶರಣ ಶರಣೆಯರ ರೀತಿಯಲ್ಲಿ ಅಂಬೇಡ್ಕರ್ ಅವರು ಸಾಂಪ್ರದಾಯಿಕವಾಗಿ ಧಾರಕದಲ್ಲಿ ಇದ್ದಂತಹ ಧಾರ್ಮಿಕ ಹಾಗೂ ಸಾಮಾಜಿಕ ಅಸ್ಪೃಶ್ಯತೆಯನ್ನು ಈ ರಾಷ್ಟ್ರದ ಮೂಲನಿವಾಸಿಗಳ ವಾರಸುದಾರರಾಗಿ ಜನಿಸಿ, ಈ ಬೆಲದ ಸಾಮಾಜಿಕ ಹಾಗೂ ಧಾರ್ಮಿಕ ಹಿನ್ನಲೆಯ ಕಟ್ಟುಪಾಡುಗಳ ಇಕ್ಕಟ್ಟು ಮತ್ತು ದಿಕ್ಕುಟ್ಟುಗಳನ್ನು ಸ್ವತಃ ಅನುಭವಿಸಿ, ಈ ರಾಷ್ಟ್ರದ ಮೂಲನಿವಾಸಿಯಾದರು ಸಹ ಶಾಪ ಮತ್ತು ಶನ್ನ ಜಪ ಈ ರಾಷ್ಟ್ರದಲ್ಲಿ ಅನುಭವಿಸು ಕ್ತಿರುವ ಅಸ್ವಾತಂತ್ರ್ಯ ನೀತಿಯ ವಿರುದ್ಧ ದೌರ್ಜಿಕವಾಗಿ ಸಿಡಿದೇಳುವ ಗಟ್ಟಿತನವನ್ನು ಮೈಗೂಡಿಸಿಕೊಂಡರು. ಇದಕ್ಕೆ ಮುಖ್ಯ ಕಾರಣ ಅಂಬೇಡ್ಕರ್ ಅವರು ಬಾಲ್ಯದಲ್ಲಿಯೇ ಕನ್ನ ಓದು–ಚಿಂತನೆ ಹಾಗೂ ಹೋರಾಟಗಳು ಯಾರ ಪರವಾಗಿ ಮತ್ತು ಯಾರ ವಿರುದ್ಧವಾಗಿ ಎಂಬುದನ್ನು ಸ್ಪಷ್ಟಪಡಿಸಿಕೊಂಡಿದ್ದು ಕಾರಣವಾಗಿತು. ಈ ಮಾತಿನ ಅರ್ಥವೇ ಅವರೇ ಹೇಳಿರುವ ಹಾಗೆ 'ಇತಿಹಾಸವನ್ನು ಮರೆತವರು ಇತಿಹಾಸವನ್ನು ನಿರ್ಮಿಸಲಾರರು' ಎಂಬ ಮಹತ್ವದ ಮಾತಿಗೆ ಸಾಕ್ಷಿಯಾಗಿದೆ.

Scanned with OKEN Scanner

ಭಾರತದ ನೆಲೆದಲ್ಲಿಯೇ ಬೌದ್ಧಿಕ ಮುಷ್ಕರವನ್ನೂಡಿ ಯಶಸ್ವಿಯಾದರು.ಇದು ಅಷ್ಟು ಭಾರತೀಯನ ಸಾಂಸ್ಕೃತಿಕ ದಿಗ್ವಿಜಯ ಎಂದು ಹೇಳಿದರೆ ತಪ್ಪಾಗದು.

ಇದರ ಮುಂದುವರಿದ ಭಾಗವೇ ಭಾರತದಲ್ಲಿ ಶತಶತಮಾನಗಳಿಂದ ಜಾರಿಯಲ್ಲಿದ್ದ ಇಂದಿಗೂ ಕಿತ್ತಿಬದ್ಧವಾಗಿ ಸ್ಪೃಶ್ಯರ ಮನಸ್ಸಿನಲ್ಲಿ ಜಾರಿಯಲ್ಲಿರುವ "ಜಲಾಸ್ಪೃಶ್ಯತೆ"ಯ ವಿರುದ್ಧ ಭಾರತೀಯತೆಯ ಹಿನ್ನಲೆಯಲ್ಲಿ ಸೈದ್ಧಾಂತಿಕ ಚಳವಳಿ ಮಾಡಿ ತಮ್ಮ ಬೌದ್ಧಿಕ ಚಳುವಳಿಗೆ ಮುಂದಾದದ್ದು. ೧೯೨೭ ಮಾರ್ಚ್ ೨೦ ರಂದು ಅಂಬೇಡ್ಕರ್ ಅವರು ಮಹಾರಾಷ್ಟ್ರದ ಮಹಾಡ್ ಕೆರೆ ನೀರನ್ನು ಪ್ರತಿಯೊಬ್ಬ ಮಾನವ ಹಾಗೂ ಸಕಲ ಜೀವಿಗಳು ಬದುಕಲು ಅವಶ್ಯಕವಾದ ಮಾನವತ್ವವನ್ನು ಬಯಸುವ ಜೀವಸೆಲೆಯನ್ನು ಎರಡು ಬೊಗಸೆಗಳಿಂದ ತನ್ನ ಲಕ್ಷಾಂತರ ಅನುಯಾಯಿಗಳೊಂದಿಗೆ ಮುಂಚೂಣಿ ನಾಯಕರಾಗಿ ಭಾರತಮಾತೆ ಒಡಲಿನ ತನ್ನೆರಡುಕೈಗಳಿಂದ ಮೊಗೆದು ಕುಡಿದರು-ತನ್ನವರಿಗೂ ಕುಡಿಸಿದರು. ಇದು ಎರಡು ಸಾವಿರ ವರ್ಷಗಳ ಸಾಂಪ್ರದಾಯಿಕ ಭಾರತದ ಚರಿತ್ರೆಯ ವಿರುದ್ಧದ ವಾಸ್ತವದ ಚರಿತ್ರೆಗೆ ವಸ್ತುನಿಷ್ಠವಾದ ಮುನ್ನುಡಿ ಬರೆದಂತಾಯಿತು. ಏಕೆಂದರೆ ಕುಡಿಯುವ ನೀರಿಗೂ ಧಾರ್ಮಿಕ ಹಾಗೂ ಸಾಮಾಜಿಕ ನಿರ್ಬಂಧಗಳನ್ನೇರಿ ನೀರನ್ನು ಸಹ ಜಲಾಸ್ಪೃಶ್ಯತೆಯ ಚೌಕಟ್ಟಿಗೆ ಒಳಪಡಿಸಿದ ದೇಶ ನಮ್ಮದಲ್ಲವೇ?. ಇಂತಹ ಕುಡಿಯುವ ನೀರಿಗಾಗಿ ಪ್ರಪಂಚದಲ್ಲಿ ಬಹುದೊಡ್ಡ ಚಳವಳಿ ನಡೆದಿರುವುದು ಸತ್ಯ ಎನ್ನುವುದಾದರೆ ಅದು ಅಂಬೇಡ್ಕರ್ ಅವರು ಹೂಡಿದ ಮಹಾಡ್ ಕೆರೆ ಚಳುವಳಿಯೇ ಆಗಿದೆ. ಅದು ನಡೆದದ್ದು ಭಾರತದಂತಹ ಸ್ವಘೋಷಿತ ಸಾಂಸ್ಕೃತಿಕ ದೇಶದಲ್ಲಿ ಎಂಬುವುದೇ ದುರಂತ.

ಭಾರತ ಬಹು ಪ್ರಾಚೀನ ಕಾಲದಿಂದಲೂ ದೇವಾಲಯಗಳ ನಾಡು ಎಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಆದರೆ ಈ ದೇವಾಲಯಗಳನ್ನು ತಮ್ಮ ಶ್ರಮದ ಮೂಲಕ ಕಟ್ಟಿದ ಈ ಈ ನೆಲದ ಮೂಲ ನಿವಾಸಿಗಳನ್ನೇ ಅವರ ಹುಟ್ಟು-ವಾಸಿಸುವ ಸ್ಥಳ-ಮಾಡುವ ಕಾಯಕ-ವಾಸಿಸುವ ಸ್ಥಳ-ಸೇವಿಸುವ ಆಹಾರದಿಂದ ಅಸ್ಪೃಶ್ಯರಾಗಿಸಿ ಇವರು ದೇವಾಲಯದೊಳಗೆ ಪ್ರವೇಶ ಮಾಡಬಾರದು ಹಾಗೂ ಮಾಡಿಸಬಾರದು ಎಂಬ ಕಠೋರ ಅಚಿತಿಯ ನಿಯಮವನ್ನು ಧಿಕ್ಕರಿಸಿ ದೇವಾಲಯದೊಳಗೆ ಹೋಗುವ ಚಳವಳಿಯನ್ನು ೧೯೩೦ರಲ್ಲಿ ಕಾಳಾರಾಮ್‌ಮರ ದೇವಸ್ಥಾನದ ಪ್ರವೇಶವನ್ನು ತಾವು ಮಶ್ತು ಶಮೊಂದಿಗಿನ ಲಕ್ಷಾಂತರ ಜನರನ್ನು ದೇವಾಲಯದ ಪ್ರವೇಶ ಮಾಡಿಸಿ ಈ ನೆಲದ ಮೂಲನಿವಾಸಿಗಳು ಸಹ ತಮ್ಮ ನೆಲದ ದೇವಾಲಯಗಳ ಪ್ರವೇಶ ಮಾಡಲೇಬೇಕು ಎಂಬ ಶಕ್ತ ಸಿದ್ಧಾಂತಕ್ಕೆ ಮುನ್ನುಡಿ ಬರೆದರು. ಈ ಎರಡು ಘಟನೆಗಳೂ ಸಹ ಅಂಬೇಡ್ಕರ್ ಅವರು ಕೇವಲ "ಥಿಯರಿಯ"(ಬರವಣಿಗೆಯ) ರೂಪದಲ್ಲಿ ಮಾಡಿದ್ದರೆ ಭಾರತ ಮಶ್ತು ಭಾರತೀಯರನ್ನು ಎಚ್ಚರಿಸುತ್ತಿರಲಿಲ್ಲ. ಬದಲಿಗೆ ಅವರು ಮಾಡಿದ್ದು "ಪ್ರಾಕ್ಟಿಕಲ್"(ಸಾಮಾಜಿಕ ಶಸ್ತ್ರ ಚಿಕಿತ್ಸೆಯ) ರೂಪದಲ್ಲಿ ಎಂಬುದನ್ನು

ಮರೆಯಬಾರದು.ಇವಕ್ಕೆ ಪೂರಕ ಎಂಬುವಂತೆ ಬಸವಣ್ಣನವರ ವಚನ ಚಳವಳಿ ಒಂದರ್ಧದಲ್ಲಿ ಬೌದ್ಧಿಕ ಥಿಯರಿಯ ರೂಪವಾದರೇ-ಅವರ ಅಂತರ್ಜಾತಿ ವಿವಾಹಕ್ಕೆ ಮುಂದಾದ ಸಂದರ್ಭ ಪ್ರಾಕ್ಟಿಕಲ್ ರೂಪದ್ದು. ಈ ಪ್ರಾಕ್ಟಿಕಲ್ ರೂಪಗಳೇ ಅನೇಕ ವಲ್ಲಟಗಳಿಗೆ ಕಾರಣವಾದವು ಎಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ.

ಮೇಲಿನ ಈ ವಸ್ತುನಿಷ್ಠ ಆಲೋಚನೆಯೇ ಅಂಬೇಡ್ಕರ್ ಅವರಲ್ಲಿ ಭಾರತೀಯತೆ 'ಯನ್ನು ಇನ್ನು ಹೆಚ್ಚು ಹೆಚ್ಚು ಅನಾವರಣಗೊಳಿಸಿತು.ಭಾರತ ಮತ್ತು ಭಾರತೀಯತೆ ಕುರಿತು ಸಮಗ್ರ ಅಧ್ಯಯನಕ್ಕೆ ಹಗಲಿರುಳು ಎನ್ನದೆ ತಮ್ಮನ್ನು ತೊಡಗಿಸಿಕೊಂಡರು. ಭಾರತದ ಸಮಗ್ರ ಪ್ರಭುತ್ವದ ಚರಿತ್ರೆಯನ್ನು ಅರ್ಥೈಸಿಕೊಂಡು ಅದರ ವೈಭವದೊಳಗೆ ಕಳೆದುಹೋದ ಪ್ರಜೆಗಳ ಸಾಂಸ್ಕೃತಿಕ ಚರಿತ್ರೆಯನ್ನು ಸಂಶೋಧನಾತ್ಮಕವಾಗಿ ವಾಸ್ತವದ ನೆಲೆಯಲ್ಲಿ ಹುಡುಕಲಾರಂಭಿಸಿದರು. ಹೀಗೆ ಆರಂಭಗೊಂಡ ಇವರ ಸಮಗ್ರ ಬರವಣಿಗೆ ಸಾಂಪ್ರದಾಯಿಕವಾದಿಗಳು-ಪುರಾಣಮಿಶ್ರಿತವಾಗಿ-ಅವರೇ ಕಲ್ಪಿಸಿಕೊಂಡ ಸುಂದರವಾದ ಪ್ರಕೃತಿಯ ಮಡಿಲಿನಲ್ಲಿ ಸೌಮ್ಯ ಸ್ವರೂಪದ ಪ್ರಾಣಿ-ಪಕ್ಷಿಗಳನ್ನು ಜೊತೆಗೂಡಿಸಿಕೊಂಡು-ನದಿ ಸರೋವರಗಳ ದಂಡೆಯಲ್ಲಿ ನವಿಲುಗರಿಯನ್ನು ಹಿಡಿದುಕೊಂಡು ತೀರ್ಥವನ್ನೇ ಅಜ್ಜಿಕೊಂಡು ಬರೆದವರ ಪುರಾಣಮಿಶ್ರಿತ ವೈಭವದ ಚರಿತ್ರೆಯ ವಿರುದ್ಧವಾಗಿತ್ತೇ ಹೊರತು, ಜನಸಾಮಾನ್ಯರ ಜೀವನದ ಭವಣೆಗಳನ್ನು ಅನಾವರಣಗೊಳಿಸುವುದರ ಜೊತೆಗೆ ಈ ನೆಲದಲ್ಲಿ ಬದುಕಲು ವಿಧಿಸಲ್ಪಟ್ಟಿದ್ದ ಅನೇಕ ಸಾಮಾಜಿಕ ಸಂಕೋಲೆಗಳಿಗೆ ಸಿಲುಕಿ ದಿನಪೂರ್ತಿ ದುಡಿದರೂ ಹಸಿವಿನಿಂದ ಮಲಗಿದವರ ಪರವಾಗಿ ದೇವರನ್ನೇ ಅಜ್ಜಿಕೊಂಡು ಬರೆದ ಚರಿತ್ರೆಯೇ ಆಗಿತ್ತು. ಈ ಚರಿತ್ರೆಯನ್ನು ಬರೆಯಲು ಅಂಬೇಡ್ಕರ್ ಅವರು ತಮ್ಮ ಹತ್ತು ಬೆರಳನ್ನು ಭೂಮಿಗೆ ಊರಿ ಬರೆದ ಕಾರಣಕ್ಕಾಗಿ ಇದು ವಾಸ್ತವದ ಚರಿತ್ರೆಯಾಗಿ ನಮ್ಮ ನಡುವೆ ಕಂಗೊಳಿಸುತ್ತಿದೆ.

ಇಂತಹ ಅಂಶಗಳನ್ನು ೧೯೧೭ರಲ್ಲಿ 'ಭಾರತದಲ್ಲಿ ಸಾಂಪ್ರದಾಯ' ಎಂಬ ಮಸ್ತಕವನ್ನು ಬರೆದು ಪ್ರಕಟಿಸುವುದರ ಮೂಲಕ ಪ್ರಪ್ರಥಮವಾಗಿ ಅನಾವರಣಗೊಳಿಸಿ, ಕಡೆಯದಾಗಿ ಇವರು ೧೯೫೬ರಲ್ಲಿ ಬರೆದು ಮುಗಿಸಿ ಅವರ ನಿಧನದ ನಂತರ ೧೯೫೭ರಲ್ಲಿ ಪ್ರಕಟಗೊಂಡ 'ಬುದ್ಧ ಮತ್ತು ಆತನ ಧಮ್ಮ' ಕೃತಿಯವರೆಗೂ ಎಲ್ಲೂ ಜಾಡು ತಪ್ಪದೇ ತಮ್ಮ ದೃಷ್ಟಿಕೋನವನ್ನು ಯಥಾವತ್ತಾಗಿ ಕಾಪಾಡಿಕೊಂಡು ಬಂದಿರುವುದಕ್ಕೆ ಅವರ ಬೌದ್ಧಿಕ ನಿಲುವೇ ಕಾರಣವಾಗಿದೆ. ಎರಡು ಸಾವಿರ ವರ್ಷಗಳಿಂದ ಅಸಂಪ್ರದಾಯಿಕ ಹಿನ್ನಲೆಯಲ್ಲಿ-ದೇವರು ದೇವಾಲಯಗಳ ಹೆಸರಿನಲ್ಲಿ ಅಬೌದ್ಧಿಕವಾಗಿಯೇ ಬೆಳೆದು ನಿಂತಿದ್ದ ಬೃಹತ್ ಜಾಲಿಗಿಡಗಳು ತುಂಬಿದ ರಸ್ತೆಗೆ ಸ್ವತಃ ಅಂಬೇಡ್ಕರ್‌ರವರೇ ಬೌದ್ಧಿಕತೆಯ ರಸ್ತೆಯನ್ನು ನಿರ್ಮಾಣ ಮಾಡಲು ಏಕಾಂಗಿಯಾಗಿ ಮುಂದಾದರು. ಈ ರಸ್ತೆಯನ್ನು ಶುದ್ಧಗೊಳಿಸಲು ಅವರು ಹಿಡಿದುಕೊಂಡ ಅಸ್ತ್ರವೇ ಬೌದ್ಧಿಕತೆಯ ಸಂಕೇತವಾಗಿರುವ ಲೇಖನಿ ಎಂಬ ಖಡ್ಗವನ್ನು ಈ ಲೇಖನಿ ಎಂಬ

Scanned with OKEN Scanner

ಖಡ್ಗ ಬಾಬಾಸಾಹೇಬರಿಗೆ ಎಂದೆಂದಿಗೂ ಶಾಂತಿಯ ಸಂಕೇತವಾಗಿತ್ತೇ ಹೊರೆತು ಅಶಾಂತಿಯ ಮಾರ್ಗದ್ದಾಗಿರಲಿಲ್ಲ ಎಂಬುವುದಕ್ಕೆ ಅವರ ಬರವಣಿಗೆ ಹಾಗೂ ಹೋರಾಟದ ಮಾದರಿಯೇ ಸಾಕ್ಷಿಯಾಗಿದೆ.ಇದು ಅಂಬೇಡ್ಕರ್ ಅವರ "ರಾಷ್ಟ್ರೀಯತೆ"ಯ ಸಂಕೇತವು ಆಗಿದೆ.

೧೯೧೭ರಲ್ಲಿ ಪ್ರಕಟಗೊಂಡ 'ಭಾರತದಲ್ಲಿ ಸಾಂಪ್ರದಾಯ' ಎಂಬ ಕೃತಿಯು ನಾನು ಮೇಲೆ ಉಲ್ಲೇಖಿಸಿದ ಹಾಗೆ ಭಾರತದ ಸಾಂಪ್ರದಾಯಿಕ ಚರಿತ್ರೆಯ ವಿರುದ್ಧದ ಚರಿತ್ರೆಗೆ ಮುನ್ನುಡಿ ಬರೆದಂತಿದೆ.ಈ ಕೃತಿಯಲ್ಲಿಯೇ ಅಂಬೇಡ್ಕರ್ ಅವರು ಧರ್ಮದ ಹಿನ್ನೆಲೆಯಲ್ಲಿ ಚಲನೆಗೊಳ್ಳಬೇಕಾದ ಜಾತಿ ಮತ್ತು ಸಮಾಜ, ಹೇಗೆ ಧಾರ್ಮಿಕತೆಯ ಸಂಕೋಲೆಗೆ ಸಿಲುಕಿ ಜಾತಿ ಮತ್ತು ಸಮಾಜದ ಹಿನ್ನೆಲೆಯಲ್ಲಿ ತಟಸ್ಥಗೊಂಡಿತು ಎಂಬುದನ್ನು ದಾಖಲೆ ಸಮೇತ ವಿವರಿಸಲು ಮುಂದಾಗುತ್ತಾರೆ. ಈ ಕೃತಿಯನ್ನು ರಚನೆ ಮಾಡುವುದಕ್ಕಾಗಿ ಅಂಬೇಡ್ಕರ್ ಅವರು ಸಂಸ್ಕೃತವನ್ನು ಅಧ್ಯಯನ ಮಾಡಲು ಅಸ್ಪೃಶ್ಯರಿಗೆ ಭಾರತದಲ್ಲಿ ಅವಕಾಶವಿಲ್ಲದಿರುವುದನ್ನು ಮನಗಂಡು ಜರ್ಮನಿ ದೇಶಕ್ಕೆ ಹೋಗಿ ಅಲ್ಲಿನ ವಿದ್ವಾಂಸರಿಂದ ಸಂಸ್ಕೃತವನ್ನು ಗಂಭೀರವಾಗಿ ಅಧ್ಯಯನ ಮಾಡಿ, ಮನುಸ್ಮೃತಿ ಮತ್ತು ಶುಕ್ರನೀತಿ ಎಂಬ ಸಂಸ್ಕೃತದ ಸಂಪ್ರದಾಯಿಕವಾದಿ ಗ್ರಂಥಗಳನ್ನು ಗಂಭೀರವಾಗಿ ಅಭ್ಯಾಸ ಮಾಡಿ, ಅವುಗಳು ಏಕಮುಖವಾದ-ಕೆಲವೇ ಕೆಲವು ಬೆರಳೆಣಿಕೆಯಷ್ಟು ಜನರ ಸಂಸ್ಕೃತಿಯನ್ನು ಅನಾವರಣಗೊಳಿಸುವ ನೀತಿಯನ್ನು ಹೊರಪ್ರಪಂಚಕ್ಕೆ ಪರಿಚಯಿಸಲು ಹಾಗೂ ಆಚರಣೆ ಮಾಡುತ್ತಿದ್ದವರಿಗೆ ಹಾಗೂ ಅವರ ಆಚರಣೆಗೆ ಒಳಗಾಗುತ್ತಿದ್ದವರಿಗೆ ಮನಮುಟ್ಟುವಂತೆ ಅನಾವರಣಗೊಳಿಸಿದರು. ಹಾಗೂ ಅವುಗಳ ವಿರುದ್ಧವೇ ಬಹು ಜನಮುಖಿಯಾಗಿ ಈ ಕೃತಿಯನ್ನು ರಚಿಸಿ ನಾನು ಈ ದೇಶದ ಬೌದ್ಧಿಕ ವಾರಸುದಾರ ಎಂಬುದನ್ನು ಸ್ಪಷ್ಟವಾಗಿ ತಿಳಿಸಿದರು.ಈ ಕೃತಿಯಲ್ಲಿಯೇ ಅಂಬೇಡ್ಕರ್ ಅವರ ಭಾರತ ಹಾಗೂ ಭಾರತೀಯತೆಯ ಕುರಿತ ಅಪಾರ ಜ್ಞಾನ ವ್ಯಕ್ತವಾಗುತ್ತದೆ.

ಭಾರತದಲ್ಲಿ ಬ್ರಿಟಿಷರು ಆಳ್ವಿಕೆ ಮಾಡುತ್ತಿದ್ದ ಸಂದರ್ಭದಲ್ಲಿ ಇದ್ದಂತಹ ಆರ್ಥಿಕ ಸಮಸ್ಯೆ ಮತ್ತು ಅವುಗಳ ಪರಿಹಾರಕ್ಕೆ ಸಂಬಂಧಿಸಿದಂತೆ ೧೯೩೨ರಲ್ಲಿ 'ದಿ ಪ್ರಾಬ್ಲಮ್ಸ್ ಆಫ್ ರೂಪಿಸ್'(ಹಣದ ಸಮಸ್ಯೆ) ಎಂಬ ಕೃತಿಯನ್ನು ರಚಿಸಿದರು. ಈ ಕೃತಿಯ ಆಧಾರದ ಮೇಲೆಯೇ ೧೯೩೫ರಲ್ಲಿ ಭಾರತದಲ್ಲಿ 'ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ' ಆರಂಭಗೊಳ್ಳಲು ಪ್ರೇರಣೆಯಾಯಿತು.ಈ ಕೃತಿ ಹಾಗೂ ಇದರ ಆಧಾರದ ಮೇಲೆ ಸ್ಥಾಪಿತಗೊಂಡ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಿಂದಾಗಿ ಭಾರತದ ಆರ್ಥಿಕತೆಯ ದಿಕ್ಕೆ ಸ್ವಾವಲಂಬನೆಡೆಗೆ ಮುನ್ನಡೆಯಿತು. ಪ್ರಬುದ್ಧ ಭಾರತದ ನಿರ್ಮಾಣಕ್ಕೆ ಇಂದು ಇದೇ ಆಧಾರಸ್ತಂಭವಾಗಿದೆ. ಇದಕ್ಕೆ ಪೂರಕವಾಗಿ ೧೯೨೬ರಲ್ಲಿ 'ಬ್ರಿಟಿಷ್ ಭಾರತದಲ್ಲಿ ಪ್ರಾಂತೀಯ ಆರ್ಥಿಕ ವ್ಯವಸ್ಥೆಯ ಇತಿಹಾಸ' ಎಂಬ ಕೃತಿಯನ್ನು ಬರೆದು ನಮ್ಮ ದೇಶವನ್ನು ಆಳ್ವಿಕೆ ಮಾಡುತ್ತಿದ್ದ ಬ್ರಿಟಿಷರಿಗೂ ಸಹ ಭಾರತದ ಜನ ಶ್ರಮಜೀವಿಗಳಾದರೂ

ಸಹ ಅವರು ಎದುರಿಸುತ್ತಿರುವ ಆರ್ಥಿಕ ಸಂಪನ್ಮೂಲಗಳ ಕೊರತೆಯ ಸಾಧಕ-ಬಾಧಕಗಳನ್ನು ವಸ್ತುನಿಷ್ಠವಾಗಿ ತಿಳಿಸಿದರು. ಆ ಮೂಲಕ ಬ್ರಿಟಿಷರಿಗೂ ಸಹ ಇವರು ಭಾರತದ ಪ್ರಬುದ್ಧ ವ್ಯಕ್ತಿಯಾಗಿ ಗುರುತಿಸಿಕೊಳ್ಳಲು ಕಾರಣವಾಯಿತು. ಬಾಬಾಸಾಹೇಬ್ ಅಂಬೇಡ್ಕರ್ ಅವರ ಈ ಪ್ರೌಢಿಮೆಗೆ ಇಂಗ್ಲೀಷ್ ಭಾಷೆಯ ಅಪಾರಜ್ಞಾನ ಹಾಗೂ ವಿದ್ಯುತ್ ಪೂರ್ಣ ಪ್ರೌಢಿಮೆಯು ಕಾರಣವಾಯಿತು. ವಿದ್ಯುತ್ ಪೂರ್ಣವಾದ ಸಂಸ್ಕೃತವನ್ನು ಇವರು ಕಲಿತಿದ್ದರೆ ಈ ಕಾಯಕ ಮಾಡಲು ಸಾಧ್ಯವಾಗುತ್ತಿರಲಿಲ್ಲ ಎಂಬುದನ್ನು ನಾವು ಅರಿಯಬೇಕಾಗಿದೆ.

ಮತ್ತೆ ನಾನು ಹೇಳುವುದೆಂದರೆ ಅಂಬೇಡ್ಕರ್ ಅವರು ಈ ಹಂತದಲ್ಲಿ ದೇವರ ಭಾಷೆ, ಧರ್ಮದ ಭಾಷೆ ಎಂದು ಏಕಮುಖವಾಗಿ ಚಲಿಸುತ್ತಿದ್ದ ಸಂಸ್ಕೃತ ಕಲಿತಿದ್ದರೆ ಈ ಸಾಧನೆ ಮಾಡಲು ಸಾಧ್ಯವಾಗುತ್ತಿರಲಿಲ್ಲ ಎಂಬುದನ್ನು ನಾವು ಮರೆಯಬಾರದು. (ಸಂಸ್ಕೃತವನ್ನು ದಲಿತರಿಗೆ ಈ ಭಾಷೆಯ ವಾರಸುದಾರರು ಧರ್ಮದ ಹಿನ್ನೆಲೆಯಲ್ಲಿ ಕಲಿಸಲು ಅಜ್ಞಾನದ ನಿರ್ಬಂಧನೆಗಳಿದ್ದವು ಎಂಬುದು ಬೇರೆ ಮಾತು).ನಿಜಾರ್ಥದಲ್ಲಿ ಎರಡು ಸಾವಿರ ವರ್ಷಗಳಿಂದ ಭಾರತ ಹಾಗೂ ಭಾರತೀಯರನ್ನು "ಸಂಸ್ಕೃತ" ಸಂಕುಚಿತಗೊಳಿಸಿದರೆ-ನೂರಾರು ವರ್ಷಗಳಿಂದ ಭಾರತಕ್ಕೆ ಆಗಮನ ಮಾಡಿದ "ಇಂಗ್ಲಿಷ್" ವಿಶಾಲತೆಗೊಳಿಸುವ ಮನೋ ಭೂಮಿಕೆಯನ್ನು ಸೃಷ್ಟಿ ಮಾಡಿತ್ತು.ಈ ಅಂಶವನ್ನು ವಿಶಾಲ ದೃಷ್ಟಿಯಿಂದ ಅರ್ಥೈಸಿಕೊಳ್ಳಬೇಕಾಗಿದೆ.

ಭಾರತದ ಸಾಮಾಜಿಕ ವ್ಯವಸ್ಥೆಯನ್ನು ತಳಸ್ಪರ್ಶಿಯವಾಗಿ ಮನಗಂಡಿದ್ದ ಅಂಬೇಡ್ಕರ್‌ರವರು ೧೯೩೬ರಲ್ಲಿ 'ಜಾತಿ ವಿನಾಶ' ಎಂಬ ಮಹತ್ವದ ಕೃತಿಯನ್ನು ಬರೆದರು. ಈ ಕೃತಿಯು ಭಾರತದಲ್ಲಿ ಕಾಯಕ ಸಿದ್ಧಾಂತದ ಹಿನ್ನೆಲೆಯಲ್ಲಿ ರೂಪಿತಗೊಂಡಿದ್ದ ಜಾತಿಗಳನ್ನು ಪುರಾಣದ ಮೂಲಕ ಧರ್ಮಿಕರಣಗೊಳಿಸಿ-ಅನೇಕ ಸಾಂಸ್ಕೃತಿಕ ಕಟ್ಟುಪಾಡುಗಳ ಒಳಗೆ ಸಿಲುಕಿಸಿ-ಅವರ ಮನ ಹಾಗೂ ಮನೆಯನ್ನು ಅಜ್ಞಾನದ ಸಂಕೋಲೆಗಳ ಎಂದೆಂದಿಗೂ ಬಿಡಿಸಲಾಗದ ಬಂಧನದಲ್ಲಿಟ್ಟಿದ್ದವರ ವಿರುದ್ಧ, ವಾಸ್ತವ ಅಂಶಗಳೊಂದಿಗೆ ಗುರುತರವಾಗಿ ಬರೆದ ಕೃತಿಯಾಗಿತ್ತು. ಬಹುಪ್ರಾಚೀನ ಕಾಲದಿಂದಲೂ ಸಾಂಪ್ರಾದಾಯಿಕ ಚರಿತ್ರೆಯನ್ನು ತನ್ನ ಒಡಲಿನಲ್ಲಿ ಅದುಮಿಕೊಂಡಿದ್ದ ಭಾರತಕ್ಕೆ ಈ ಕೃತಿಯ ಪ್ರವೇಶದಿಂದಾಗಿ ಅವರ ಸಾಂಪ್ರದಾಯಿಕ ಒಡಲು ಒಡೆದು ಬಹುಜನರು ಬಹುಮುಖವಾಗಿ ಚಿಂತಿಸಲು ಪ್ರೇರಣೆಯಾಯಿತು. ಮುಂದುವರೆದು ಈ ನೆಲದ ಜನ ತನ್ನ ನೆಲೆಯಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಕಾರಣವಾಯಿತು.ಈ ದೃಷ್ಟಿಯಿಂದಲೇ ಹೇಳುವುದು ಅಂಬೇಡ್ಕರ್ ಅವರು 'ನೀರಿನಲ್ಲಿ ಕರಗುವ ಬಂಡೆಯಲ್ಲ-ಬದಲಿಗೆ ಹರಿಯುವ ನೀರಿನ ಧಿಕ್ಕನ್ನೇ ಬದಲಾಯಿಸುವ-ಬದಲಾಯಿಸಿದ ಕರಗದ ಗಟ್ಟಿ ಬಂಡೆ' ಎಂದು.

ಅಶೋಕನ ಕಾಲದಿಂದಲೂ ಇಂದಿನ ಪಾಕಿಸ್ತಾನ, ಅಫ್ಘಾನಿಸ್ತಾನ, ಬಾಂಗ್ಲಾದೇಶ, ಭೂತಾನ್, ಟಿಬೆಟ್‌ಗಳು ಭಾರತದ ಅವಿಭಾಜ್ಯ ಅಂಗವೇ ಆಗಿದ್ದವು ಎಂಬುವುದಕ್ಕೆ

Scanned with OKEN Scanner

ಇತಿಹಾಸವೇ ಸಾಕ್ಷಿಯಾಗಿದೆ. ಬೌದ್ಧ ಧರ್ಮದ ತತ್ವ ಸಿದ್ಧಾಂತದಂತೆ ಈ ಎಲ್ಲಾ ಸಮಗ್ರ ಭರತ ಖಂಡವನ್ನು ಆಳ್ವಿಕೆ ಮಾಡಿದ್ದು ಸಮ ಸಂಸ್ಕೃತಿಯ ಹರಿಕಾರ ಸಾಮ್ರಾಟ ಅಶೋಕನ ಸಾಮ್ರಾಜ್ಯವೇ ಎಂಬುದು ಸಹ ಚರಿತ್ರೆಯ ದಾಖಲಾರ್ಹ ವಿಷಯವೇ ಆಗಿದೆ. ಈ ಭೂಪ್ರದೇಶಗಳು ಕಾಲಾಂತರದಲ್ಲಿ ಪ್ರತ್ಯೇಕಗೊಂಡು ಸ್ವತಂತ್ರ ರಾಷ್ಟ್ರಗಳಾಗಿರುವುದಕ್ಕೂ ನಮ್ಮಲ್ಲಿ ನಿದರ್ಶನಗಳಿವೆ. ೧೯೪೭ರವರೆಗೂ ಭಾರತದ ಅವಿಭಾಜ್ಯ ಅಂಗವೇ ಆಗಿದ್ದ ಇಂದಿನ ಪಾಕಿಸ್ತಾನದ ಇಕ್ಕಟ್ಟು-ಬಿಕ್ಕಟ್ಟುಗಳ ಕುರಿತು ೧೯೪೧ರಲ್ಲಿಯೇ ಪಾಕಿಸ್ತಾನ ಅಥವಾ ಭಾರತದ ವಿಭಜನೆ ಎಂಬ ಮಹತ್ವ ಸಂಶೋಧನಾ ಕೃತಿಗಳನ್ನು ಬರೆದು ಪ್ರಕಟಿಸಿದರು.ಈ ಕೃತಿಯು ಪಾಕಿಸ್ತಾನ ಮತ್ತು ಭಾರತದ ಅವಿನಾಭಾವ ಸಂಬಂಧದ ಸಾಂಸ್ಕೃತಿಕ ವಿಷಯಗಳನ್ನು ಅನಾವರಣಗೊಳಿಸುವುದರ ಜೊತೆಗೆ ಒಕ್ಕೂಟ ವ್ಯವಸ್ಥೆಯಲ್ಲಿ ಇದರ ಪ್ರತ್ಯೇಕತೆಯ ಇಕ್ಕಟ್ಟು-ಬಿಕ್ಕಟ್ಟುಗಳನ್ನು ಭೌಗೋಳಿಕ ಹಾಗೂ ಸಾಂಸ್ಕೃತಿಕ ಹಿನ್ನಲೆಯಿಂದ ವಸ್ತುನಿಷ್ಠತೆಯ ಹಿನ್ನೆಲೆಯಲ್ಲಿ ತಿಳಿಸಿತು.ಒಂದರ್ಥದಲ್ಲಿ ಪಾಕಿಸ್ತಾನದ ಸ್ವಾತಂತ್ರ ಹೋರಾಟಗಾರರಿಗೆ ಮತ್ತು ಪ್ರತ್ಯೇಕತವಾದಿಗಳಿಗೂ ಈ ಸಂಶೋಧನಾತ್ಮಕ ಕೃತಿ ಚರ್ಚಾತ್ಮಕವಾದ ಕೃತಿಯಾಗಿಯೇ ಹೊರಹೊಮ್ಮಿತು.

೧೯೪೩ರಲ್ಲಿ ಬರೆದ 'ಗಾಂಧಿ ಮತ್ತು ಅಸ್ಪೃಶ್ಯತೆ ನಿವಾರಣೆ' ಮತ್ತದೇ ೧೯೪೩ರಲ್ಲಿ ಬರೆದ 'ರಾನಡೆ ಗಾಂಧಿ ಮತ್ತು ಜಿನ್ನಾ' ಹಾಗೂ ೧೯೪೫ರಲ್ಲಿ ಬರೆದ 'ಕಾಂಗ್ರೆಸ್ ಮತ್ತು ಗಾಂಧಿ ಅಸ್ಪೃಶ್ಯರಿಗಾಗಿ ಏನು ಮಾಡಿದ್ದಾರೆ?' ಎಂಬ ಮೂರು ಕೃತಿಗಳು ಅಂಬೇಡ್ಕರ್ ರವರು ಭಾರತ ಮತ್ತು ಈ ನೆಲದ ಮೂಲ ನಿವಾಸಿ ಭಾರತೀಯರನ್ನು ಸ್ವಾತಂತ್ರ ಚಳವಳಿಯ ಸಂದರ್ಭದಲ್ಲಿ ತನು ಮನಗಳನ್ನು ಅರ್ಪಿಸಿ ಭಾಗವಹಿಸಿದ್ದರೂ ಸಹ-ಹಾಗೂ ದುಡಿದು ಶ್ರಮದ ಮೂಲಕ ರಾಷ್ಟ್ರವನ್ನು ಕಟ್ಟಿತ್ತಿದ್ದರೂ ಸಹ ಜಾತಿಯ ಹಿನ್ನೆಲೆಯಲ್ಲಿ ಪರಿಗಣಿಸದೆ ಅವರನ್ನು ಅಸ್ಪೃಶ್ಯನಾಗಿಸಿದಂತೆ ಅವರ ಚರಿತ್ರೆಯನ್ನೋ ಅಸ್ಪೃಶ್ಯತೆಗೆ ಒಳಪಡಿಸಿದ ಮಾದರಿಯನ್ನು ವಸ್ತುನಿಷ್ಠವಾದ ಅಧ್ಯಯನಕ್ಕೆ ಒಳಪಡಿಸಿದ್ದು ಅವರ ಭಾರತ ಮತ್ತು ಭಾರತೀಯತೆಯ ವಾಸ್ತವದ ಚರಿತ್ರೆ ರಚಿಸಲು ನೋಟಕ್ಕೆ ಹಿಡಿದ ಕೈಗನ್ನಡಿಯಾಗಿದೆ. ೧೯೪೭ರ ಸಂದರ್ಭ ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿ ತನ್ನ ಶುತ್ತಶುದಿಯನ್ನು ಮುಟ್ಟಿದ ಸಂದರ್ಭವೇ ಆಗಿತ್ತು. ಈ ಸಂದರ್ಭದಲ್ಲಿ ಅಂಬೇಡ್ಕರ್ ಅವರು ಬ್ರಿಟಿಷರು ಭಾರತೀಯರಿಗೆ ಸ್ವಾತಂತ್ರವನ್ನು ಕೊಡಲೇಬೇಕು, ಅವರು ಭಾರತವನ್ನು ಬಿಟ್ಟು ಹೋಗಲೇಬೇಕು ಎಂದು ಬಹುದೊಡ್ಡ ಸಾಂಪ್ರದಾಯಿಕ ವಾದಿಗಳು ನಡೆಸುತ್ತಿದ್ದ ಚಳವಳಿಯ ವಿರುದ್ಧ ಭಾರತೀಯರು-ಭಾರತೀಯರಿಗೆ ಎರಡು ಸಾವಿರಕ್ಕೂ ಹೆಚ್ಚು ವರ್ಷಗಳಿಂದ ಕಸಿದುಕೊಂಡಿರುವ ಮೂಲಭೂತ ಹಕ್ಕುಗಳ ಸ್ವಾತಂತ್ರ್ಯ ಕೊಡಬೇಕು ಎಂಬ ಕೂಗಿನೊಂದಿಗೆ ಸೈದ್ಧಾಂತಿಕ ಚಳವಳಿಯನ್ನು ಹೂಡಿದರು. ಈ ಸೈದ್ಧಾಂತಿಕ ಚಳವಳಿಯಿಂದಾಗಿ ಕೆಲವು ರಾಷ್ಟ್ರೀಯವಾದಿಗಳ ದೃಷ್ಟಿಯಲ್ಲಿ ಅಂಬೇಡ್ಕರ್ ರವರು

ರಾಷ್ಟ್ರದ್ರೋಹಿ ಎಂಬ ಹೇಳಿಕೆಯನ್ನು ಹೇಳಿಸಿಕೊಂಡರು. ಆದರೆ ಅಂಬೇಡ್ಕರ್‌ರವರ ಹೋರಾಟ ರಾಷ್ಟ್ರದ್ರೋಹಿತ್ವದ ಹೋರಾಟವಾಗಿರಲಿಲ್ಲ-ಬದಲಿಗೆ ಭಾರತ ಮತ್ತು ಭಾರತೀಯತ್ವದ ಮೂಲಭೂತ ಹಕ್ಕುಗಳ ಸ್ವಾತಂತ್ರ ಹೋರಾಟವಾಗಿತ್ತು.ಇದಕ್ಕೆ ಪೂರಕವಾಗಿ ಗಾಂಧೀಜಿಯವರು ದುಂಡುಮೇಜಿನ ಸಮ್ಮೇಳನ ಹಾಗೂ ಪೂನಾ ಒಪ್ಪಂದಗಳಲ್ಲಿನ ನಿಲುವುಗಳ ವಿರುದ್ಧ, ಗಾಂಧೀಜಿಯವರ 'ಹರಿಜನ' ಎಂಬ ಪದದ ವಿರುದ್ಧ ಬಹುದೊಡ್ಡ ಅಸ್ಮಿತೆಯಹೋರಾಟ ಮಾಡಿದ್ದೇ ಸಾಕ್ಷಿಯಾಗಿದೆ.

ಈ ಎಲ್ಲಾ ಅಂಶಗಳನ್ನು ಅಂಬೇಡ್ಕರ್‌ರವರು ಮೇಲಿನ ಕೃತಿಗಳಲ್ಲಿ ಜನಮುಖಿಯಾಗಿ ಚರ್ಚಿಸಲು ಮುಂದಾಗಿದ್ದಾರೆ. ಈ ಕೃತಿಗಳು ಇಂದಿನ ಭಾರತದ ಜನಕೇಂದ್ರಿತ ಸಮಾಜಮುಖಿ ಅಧ್ಯಯನಕಾರರಿಗೆ ಬಹುದೊಡ್ಡ ಅಕರ ಗ್ರಂಥಗಳಾಗಿ ಹೊರಹೊಮ್ಮಿವೆ. ಈ ಕೃತಿಗಳಲ್ಲಿ ಅಂಬೇಡ್ಕರ್ ಅವರು ಎತ್ತಿದ ವಾಸ್ತವದ ಪ್ರಶ್ನೆಗಳಿಗೆ-ಇವರೆಗೂ ಸಾಂಪ್ರದಾಯವಾದಿಗಳಿಂದ ಪುರಾಣದ ಉತ್ತರ ದೊರಕಿದೆ ಹೊರತು, ವಾಸ್ತವದ ಉತ್ತರ ದೊರಕಲಿಲ್ಲ. ಇದಕ್ಕೆ ಮೂಲಕಾರಣ ಭಾರತದ ಐತಿಹಾಸಿಕ ಹಾಗೂ ಜನಕೇಂದ್ರಿತ ಚರಿತ್ರೆ ಪುರಾಣಮಿಶ್ರಿತಗೊಂಡಿರುವುದೇ ಆಗಿದೆ ಎಂಬುದು ಅಂಬೇಡ್ಕರ್ ಅವರ ಸ್ಪಷ್ಟ ನಿಲುವಾಗಿತ್ತು. "ಈ ಹಂತದಲ್ಲಿ ಭಾರತದ ವಸ್ತುನಿಷ್ಠ ಚರಿತ್ರೆಯಲ್ಲಿ ಪುರಾಣ ಮಾತನಾಡಿದಷ್ಟು ವಾಸ್ತವ ಮಾತನಾಡಲೇ ಇಲ್ಲ" ಎಂಬುದು ಅಂಬೇಡ್ಕರ್ ಅವರ ಸ್ಪಷ್ಟ ನಿಲುವಾಗಿತ್ತು.

ಮೇಲಿನ ಈ ಎಲ್ಲಾ ಕೃತಿಗಳ ಸ್ವರೂಪ ಭಾರತಕ್ಕೆ ದಾಳಿ ಮಾಡಿದ ಆರ್ಯ ಮತ್ತು ಮುಸ್ಲಿಂ ಪ್ರಭುತ್ವಗಳ ಆಳ್ವಿಕೆ ಹಾಗೂ ಮುಂದೆ ಭಾರತಕ್ಕೆ ಬರಬೇಕೆಂದುಕೊಂಡಿದ್ದ ಪ್ರಜಾಪ್ರಭುತ್ವಗಳ ವಿಶ್ಲೇಷಣಾತ್ಮಕ ಅಧ್ಯಯನವೇ ಆಗಿದೆ. ೧೯೪೬ರಲ್ಲಿ ಅಂಬೇಡ್ಕರ್ ಅವರ ಮಹತ್ವದ ಕೃತಿ ಶೂದ್ರರು ಯಾರು? ಎಂಬುವುದು.ಈ ಕೃತಿಯ ಜೀವಾಳ ಭಾರತದಲ್ಲಿ ಚಾತುರ್ವರ್ಣ ವ್ಯವಸ್ಥೆಯಲ್ಲಿ ಶೂದ್ರರ ಸ್ಥಾನಮಾನಗಳನ್ನು ವಸ್ತುನಿಷ್ಠವಾಗಿ ಧಾರ್ಮಿಕ ಹಾಗೂ ಸಾಮಾಜಿಕ ಹಿನ್ನಲೆಯಲ್ಲಿ ಅನಾವರಣಗೊಳಿಸುವುದೇ ಆಗಿತ್ತು. ದೇವರು ಹಾಗೂ ಧರ್ಮದ ಹೆಸರಿನಲ್ಲಿ ದುಡಿಯದೇ ಸ್ಪೃಶ್ಯರೆಂದು ಗುರುತಿಸಿಕೊಂಡವರ ವಿರುದ್ಧ, ದೇವರು ಹಾಗೂ ಧರ್ಮದ ಹೆಸರಿನಲ್ಲಿ ದುಡಿದರು ಸಹ ಅಸ್ಪೃಶ್ಯರೆನೆಸಿ ಕೊಂಡವರ ನಿಜ ಚರಿತ್ರೆಯನ್ನು ಅನಾವರಣಗೊಳಿಸುವುದೇ ಈ ಕೃತಿಯ ಮತ್ತೊಂದು ಜೀವಾಳ. ಒಟ್ಟಾರೆ ಹೇಳುವುದಾದರೆ ದೇವಾಲಯ ಕಟ್ಟಿದರೂ ದೇವಾಲಯದೊಳಗೆ ಪ್ರವೇಶ ಮಾಡದವರ ಹಾಗೂ ಮಾಡಿಸದವರ, ಕೆರೆ ಕಟ್ಟಿದರೂ ಕೆರೆಯ ನೀರನ್ನು ಮುಟ್ಟದವರ ಹಾಗೂ ಮುಟ್ಟಿಸದವರ, ಸಮೃದ್ಧವಾಗಿ ಬೆಳೆಯನ್ನು ಬೆಳೆದರೂ ಹಸಿವಿನಿಂದ ಮಲಗಿದವರ, ಉತ್ತು-ಬಿತ್ತಿ ಬೆಳೆಯದಿದ್ದರೂ ಹೊಟ್ಟೆ ತುಂಬ ಉಂಡು ತೇಗಿದವರ ವಿರುದ್ಧವೇ ಆಗಿತ್ತು. ಮುಂದುವರೆದು ಪಾರಂಪರಿಕ ಆಚರಣೆಯ,

Scanned with OKEN Scanner

ಸಂಪ್ರದಾಯ. ಶ್ರಮದ ಹಿನ್ನೆಲೆಯ ವಾಸ್ತವಂಶದ ದೇವರುಗಳನ್ನು ಪುರಾಣ ಮಿತ್ರತಗೊಳಿಸಿ ತಮ್ಮ ಸ್ವಾರ್ಥದ ತೋಳ್ಬಿಕ್ಕಿಗೆ ಪಡೆದುಕೊಂಡವರ ವಿರುದ್ಧವೇ ಬರೆದಿದ್ದು ಎಂಬುವುದು ಸ್ಪಷ್ಟ. ಈ ಕೃತಿ ಪ್ರಕಟಗೊಂಡಿದ್ದು ೧೯೪೬ರಲ್ಲಿ. ಭಾರತಕ್ಕೆ ಸ್ವಾತಂತ್ರ್ಯ ಬಂದದ್ದು ೧೯೪೭ರಲ್ಲಿ. ಈ ಸಂದರ್ಭ ಬಹುದೊಡ್ಡ ಸಾಂಸ್ಕೃತಿಕ ಚರ್ಚೆಗೆ ಗ್ರಾಸವಾದ ಸಂದರ್ಭವೂ ಆಯಿತು. ಹಾಗೆಯೇ ಸ್ವಾತಂತ್ರ ರಾಷ್ಟ್ರೀಯವಾದಿ ಚಳವಳಿಗಾರರು ಹಾಗೂ ಆವಿಂಡ ಭಾರತದ ಜನತೆ ಅಂಬೇಡ್ಕರ್‌ರತ್ತ ಬಹುದೃಷ್ಟಿಕೋನ ದಿಂದ ನೋಡುವಂತೆಯೂ ಆಯಿತು. ಈ ಕೃತಿಯ ಹಿನ್ನೆಲೆಯಿಂದಲೇ ಬಂದಂತಹ ಮತ್ತೊಂದು ಮಹತ್ವದ ಕೃತಿ 'ಅಸ್ಪೃಶ್ಯರು' ಎಂಬುವುದು. ಹೆಸರೇ ಹೇಳುವ ಹಾಗೆ ಈ ಕೃತಿಯ ಜೀವಾಳವೇ ಈ ರಾಷ್ಟ್ರದ ಮೂಲನಿವಾಸಿಗಳು ವಾಸಿಸುವ ಸ್ಥಳ, ಸೇವಿಸುವ ಆಹಾರ, ಪೂಜಿಸುವ ದೇವರು, ಮಾಡುವ ಕಸುಬುಗಳು, ಆಡುವ ಭಾಷೆಯ ಹಿನ್ನೆಲೆ ಯಲ್ಲಿ ಸ್ವಘೋಷಿತ ಸ್ಪೃಶ್ಯರು ಇವರನ್ನು ಅಸ್ಪೃಶ್ಯರು ಎಂದು ಗುರ್ತಿಸಿದರು ಎಂಬುದನ್ನು ಸಂಶೋಧನಾತ್ಮವಾಗಿ ಜನಮುಖಿ ಆಧಾರದಲ್ಲಿ ಅಂಬೇಡ್ಕರ್ ಅವರು ಅನಾವರಣಗೊಳಿಸಿದರು. ಎರಡು ಸಾವಿರ ವರ್ಷಗಳಿಂದ ಯಾರೋ ಹೇಳಿದ, ಯಾರು ಹೇಳಬಾರದು ಎಂಬ ನಿರ್ಬಂಧನೆಗೆ ಒಳಗಾಗಿದ್ದ ಅಂಶಗಳನ್ನು ಘಂಟಾಘೋಷವಾಗಿ ಬರೆದು ಅನಾವರಣ ಗೊಳಿಸಿದ ಧೀಮಂತರು ದಾದಾಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್‌ರವರು.ಅದಕ್ಕಾಗಿ ಇವರನ್ನು ನವಭಾರತದ ಪೌರ್ಣಿಕತೆಯ ಸಾಂಸ್ಕೃತಿಕ ಶಿಲ್ಪಿ ಎಂದು ಕರೆಯುವುದು.

ಭಾರತದ ಎಲ್ಲ ಧಾಮೆಗಳಿಗೂ ತರ್ಜುಮೆಗೊಂಡಿರುವ ಈ ಕೃತಿ ಈ ನೆಲದ ಮೂಲ ಭಾರತೀಯರಿಗೆ ತಮ್ಮ ರಾಷ್ಟ್ರೀಯತೆಯನ್ನು ಅರ್ಥಮಾಡಿಕೊಳ್ಳಲು ಪ್ರೇರಣೆಯಾಗಿದೆ. ಅಂಬೇಡ್ಕರ್ ಅವರಿಗೆ ಅಸ್ಪೃಶ್ಯರು ಎಂಬ ಸಾಮಾಜಿಕ ಹಿನ್ನೆಲೆಯಿಂದ ಗುರುತುಸಲ್ಪಟ್ಟ ಜನಾರ್ಗ ಒಂದಾದರೆ, ಧಾರ್ಮಿಕ ಹಾಗೂ ಸಾಮಾಜಿಕ ಹಿನ್ನೆಲೆಯಿಂದ ಸ್ಪೃಶ್ಯ ಮತ್ತು ಅಸ್ಪೃಶ್ಯರೆಂದೆನ್ನದೆ ಶತ ಶತಮಾನಗಳಿಂದಲೂ ಶೋಷಣೆ ಒಳಗಾಗಿದ್ದ ಮಹಿಳೆಯರು, ಅವರ ಸ್ಥಿತಿಗತಿ, ಅವರ ಮೂಲಭೂತ ಹಕ್ಕುಗಳನ್ನು ಈ ನೆಲದಲ್ಲಿ ಸಾಂಸ್ಕೃತಿಕವಾಗಿ ಕಸಿದುಕೊಂಡವರ ವಿರುದ್ಧ ಪ್ರತಿವಾದನೆ ಅಥವಾ ಒಡಲಾಳದ ಧಾರತೀಯತ್ವದ ಹಿನ್ನೆಲೆಯಲ್ಲಿ ವಕಲಾತು ಮಾಡುವ ಹಿನ್ನೆಲೆಯಲ್ಲಿ ೧೯೫೦ ರಲ್ಲಿ 'ಹಿಂದೂ ಮಹಿಳೆಯರ ಏಳಿಗೆ ಮತ್ತು ಪತನ' ಎಂಬ ಮಹತ್ವದ ಕೃತಿಯನ್ನು ರಚಿಸಿದರು. ಈ ಕೃತಿಯನ್ನು ಪ್ರಕಟ ಮಾಡಿದ ಸಂದರ್ಭ ಭಾರತಕ್ಕೆ ಸ್ವಾತಂತ್ರ ಬಂದು, ದಾದಾ ಸಾಹೇಬ್ ಅಂಬೇಡ್ಕರ್ ಅವರೇ ರೂಪಿಸಿದ ಪ್ರಜಾಪ್ರಭುತ್ವ ವ್ಯವಸ್ಥೆಯು ಸಂವಿಧಾನ ಜಾರಿಗೆ ಬಂದ ಸಂದರ್ಭವೂ ಆಗಿತ್ತು. ಶತಶತಮಾನಗಳಿಂದ ಮಹಿಳೆ ಎಂಬ ಕಾರಣಕ್ಕಾಗಿ ಅನೇಕ ಬಿಡಿಸಲಾಗದ ಧಾರ್ಮಿಕ ಹಾಗೂ ಸಾಮಾಜಿಕ ಸಂಕೋಲೆಗಳಿಗೆ ಸಿಲುಕಿದ್ದ ಈ ಬಹುದೊಡ್ಡ ಜನಸಮುದಾಯ ಪುರುಷ ಪ್ರಧಾನ

ವ್ಯವಸ್ಥೆಯಿಂದ ಕಾನೂನಾತ್ಮಕವಾಗಿ ಮುಕ್ತಗೊಳಿಸಿ, ಅವರನ್ನು ಭಾರತ ಸತ್ಪಜೆಗಳನ್ನಾಗಿ ಅನಾವರಣಗೊಳಿಸಲು ಭಾರತ ಸರ್ಕಾರದ ಪ್ರಥಮ ಕಾನೂನು ಮಂತ್ರಿಯಾಗಿ ಹಿಂದೂ ಕೋಡ್ ಬಿಲ್‌ನ್ನು ಜಾರಿಗೆ ತರಲು ಮುಂದಾದರು. ಆದರೆ ಅವರದೇ ಸರ್ಕಾರದ ಭಾರತಕ್ಕೆ ಸ್ವಾತಂತ್ರ್ಯವೇನು ಬಂದಿತ್ತು. ಭಾರತ ಹಾಗೂ ಭಾರತೀಯರನ್ನು ಆಳ್ವಿಕೆ ಮಾಡಲು ಅಂಬೇಡ್ಕರವರು ರಚಿಸಿದ ಲಿಖಿತ ಸಂವಿಧಾನವು ಜಾರಿಗೆ ಬಂದಿತ್ತು. ಆದರೆ ಭಾರತೀಯರ ಸಾಂಪ್ರದಾಯಿಕ ಪುರುಷ ಪ್ರಧಾನ ವ್ಯವಸ್ಥೆಯ ಮನಸ್ಸುಗಳಿಗೆ ಸ್ವಾತಂತ್ರವಾಗಲಿ, ಸಂವಿಧಾನವಾಗಲಿ ಕಿಂಚಿತ್ತೋ ಜಾರಿಗೆ ಬಂದಿರಲೇ ಇಲ್ಲ. ಇಂತಹ ಅಜ್ಞಾನದ ಮನಸ್ಸುಗಳ ಮುಂದೆ ಅಂಬೇಡ್ಕರ್ ಅವರ ಮಹಿಳಾಪರ ಚಿಂತನೆಯ ಜ್ಞಾನದ ಮಸೂದೆಗಳು ಅಂಗೀಕಾರವಾಗಲಿಲ್ಲ. ತತ್‌ಕ್ಷಣವೇ ಅಂಬೇಡ್ಕರ್ ಅವರು ತಮ್ಮ ಸಂವಿಧಾನಾತ್ಮಕ ನಿಲುವಿಗೆ ನ್ಯಾಯ ದೊರಕದ ಕಾರಣದಿಂದ ತಮ್ಮ ಮಂತ್ರಿ ಪದವಿಗೆ ರಾಜೀನಾಮೆಯನ್ನು ನೀಡಿ ಹೊರ ನಡೆದರು. ಈ ರಾಜೀನಾಮೆ ಅವರ ಸೋಲಾಗಿರಲಿಲ್ಲ–ಬದಲಿಸಿ ತಮ್ಮ ಭಾರತತ್ವದ ಗಟ್ಟಿತನದ ನಿಲುವಿಗೆ ಸಂದ ಜಯವಾಗಿತ್ತು.

ಈ ಮೊದಲೇ ಹೇಳಿದ ಅವರ ಸಮಗ್ರ ಕೃತಿಗಳು ಹಾಗೂ ಅವರು ಜನರಿಗಾಗಿ ಆರಂಭಿಸಿದ ಮೂಕನಾಯಕ–ಬಹಿಷ್ಕೃತ ಭಾರತ–ಸಮತ ಜನತಾ–ಹಾಗೂ ಪ್ರಬುದ್ಧ ಭಾರತ ಎಂಬ ಪತ್ರಿಕೆಗಳು ಸಹ ಎರಡು ಸಾವಿರ ವರ್ಷಗಳಿಂದ ಸಾಂಸ್ಕೃತಿಕವಾಗಿ ಗಟ್ಟಿಯಾಗಿದ್ದರೂ, ಅಸಾಂಸ್ಕೃತಿಕ ಹಿನ್ನೆಲೆಗೆ ಒಳಗಾಗಿ ಮಲಗಿದ್ದ ಹಾಗೂ ಮಲಗಿಸಿದ್ದವರ ಎಚ್ಚರಿಸುವ ಬರವಣಿಗೆಗಳೇ ಆಗಿ ಹೊರಹೊಮ್ಮಿದ್ದು ಚಾರಿತ್ರಿಕ ಹಂಸವೇ ಆಗಿದೆ. ಮುಂದುವರೆದಂತೆ ಈ ಎಲ್ಲದರ ಸಾರವೇ ಭಾರತದ ಸಮ ಸಂಸ್ಕೃತಿಯನ್ನು ಅನಾವರಣಗೊಳಿಸುವ ಪ್ರಪಂಚಕ್ಕೆ ಮಾದರಿಯಾಗಿರುವ ಅಂಬೇಡ್ಕರ್ ಅವರು ರಚಿಸಿದ ಭಾರತದ ಸಂವಿಧಾನ.

ಭಾರತದ ಸಂವಿಧಾನ ಭಾರತ ಮತ್ತು ಭಾರತೀಯರಿಗಾಗಿ ನಿರ್ಮಾಣಗೊಂಡು, "ಸರ್ವರಿಗೂ ಸಮಪಾಲು–ಸರ್ವರಿಗೂ ಸಮಬಾಳು" ಎಂಬ ಸಮಸಂಸ್ಕೃತಿಯ ಪ್ರತಿಪಾದನೆಯ ಹಿನ್ನೆಲೆಯಲ್ಲಿ ಅಂಬೇಡ್ಕರ್‌ರವರಿಂದ ರಚನೆಗೊಂಡು ಭಾರತಕ್ಕಲ್ಲದೆ ಪ್ರಪಂಚಕ್ಕೆ ಮಾದರಿಯಾಗಿದೆ.ಇಂದು ಭಾರತ ಅಂಬೇಡ್ಕರ್‌ರವರು ರಚಿಸಿದ ಈ ಬೃಹತ್ ಲಿಖಿತ ಸಂವಿಧಾನದಲ್ಲಿ ಶತಮಾನಗಳಿಂದ ಮಾತನಾಡದೆ ಇದ್ದ ಮೂಕನಾಯಕರನ್ನು ಮಾತನಾಡಿಸುತಿದೆ. ಹಾಗೆಯೇ ಏಕಮುಖವಾಗಿ ಒಬ್ಬರೇ ಮಾತನಾಡಿಸಿದ್ದನ್ನು ಸಂವಿಧಾನಾತ್ಮಕ ಕಾನೂನುಗಳಿಂದ ನಿರ್ಬಂಧಕ್ಕೆ ಒಳಪಡಿಸಿ–ಬಹು ಜನರು ಮುಕ್ತವಾಗಿ ಮಾತನಾಡುವಂತೆ ಮಾಡಿ ಪ್ರಬುದ್ಧ ಭಾರತದ ಕಲ್ಪನೆಯ ಪ್ರಜಾಪ್ರಭುತ್ವದ ಆಶಯಕೇ ಪ್ರಪ್ರಥಮವಾಗಿ ಮುನ್ನುಡಿ ಬರೆದಿದೆ. ಈ ಎಲ್ಲದರ ಸಾರವೇ ಅಂಬೇಡ್ಕರ್ ಅವರು ಭಾರತ ಹಾಗೂ ಭಾರತೀಯರಲ್ಲೂ ತಮ್ಮ ಅಂತರಾಳದ ಭಾರತೀಯತ್ವದ ಒಡಲಾಳ ದಿಂದ ಕಂಡ ಪರಿಯೇ ತಮ್ಮ ಕೊನೆಯ ದಿನಮಾನಗಳಲ್ಲಿ ರಚಿಸಿದ ಕೃತಿ "ಬುದ್ಧ ಮತ್ತು ಆತನ ಧಮ್ಮ" ಎಂಬ ಮಹತ್ವದ ಕೃತಿ.

Scanned with OKEN Scanner

ಈ ಕೃತಿಯೂ ಅವರ ಪ್ರೌಢಿಮೆಗೆ ಹಿಡಿದ ಕೈಗನ್ನಡಿಯಾಗಿದೆ.೧೯೫೬ರಲ್ಲಿ ನಿಧನರಾದ ಅಂಬೇಡ್ಕರ್ ಅವರ ಈ ಹಸ್ತಪ್ರತಿಯನ್ನು ೧೯೫೭ರಲ್ಲಿ ಅವರ ಪ್ರೀತಿ ಅಭಿಮಾನಿಗಳ ಸಹಕಾರದೊಂದಿಗೆ ಪ್ರಕಟಗೊಳಿಸಲಾಯಿತು. ದೇಶಿ ಹಾಗೂ ವಿದೇಶಿ ಭಾಷೆಗಳಿಗೆ ವಸ್ತುನಿಷ್ಠವಾಗಿ ತರ್ಜಮೆಗೊಂಡಿರುವ ಕೆಲವೇ ಕೆಲವು ಮಹತ್ವದ ಕೃತಿಗಳಲ್ಲಿ ಈ ಕೃತಿಯು ಮೊದಲ ಪಂಕ್ತಿಯದು. ಇದಕ್ಕೆ ಅದರ ಮೂಲಭೂತ ಸಾರವೇ ಕಾರಣವಾಗಿದೆ. ಈ ಕೃಷಿಯಲ್ಲಿ ಭಾರತ ಇದೆ ಹಾಗೂ ಭಾರತೀಯತೆ ಹೆಚ್ಚು ಹೆಚ್ಚಾಗಿ ಅನಾವರಣಗೊಂಡಿದೆ. ಈ ಕೃತಿಯಲ್ಲಿ ಭಾರತದ ಜನತೆ ಮಾತನಾಡುವ ಅಂಬಲವನ್ನು ಬಯಸಿದ್ದಾರೆ. ಎರಡು ಸಾವಿರ ವರ್ಷಗಳಿಂದ ಮಾತನಾಡದೆ ಇದ್ದ ಮೂಕ ನಾಯಕರಿಗೆ ಈ ಕೃತಿಯು ಮಾತನ್ನು ಬರಿಸಿತು ಎಂದು ಹೇಳಿದರೆ ಖಂಡಿತವಾಗಿಯೂ ತಪ್ಪಾಗಲಾರದು.

ಅಂಬೇಡ್ಕರ್ ಅವರು ಬಿಡಿಬಿಡಿಯಾಗಿ ಬರೆದಿದ್ದ ಹಾಗೂ ಸಮಾರಂಭಗಳಲ್ಲಿ ದೇಶ ಹಾಗೂ ದೇಶವಾಸಿಗಳನ್ನು ಉದ್ದೇಶಿಸಿ ಒಡಳಾಳದಿಂದ ಮಾತನಾಡಿರುವುದನ್ನು ಸಮಗ್ರವಾಗಿ ಸಂಗ್ರಹಿಸಿ 'ಅಂಬೇಡ್ಕರ್‌ರವರ ಬರಹ ಹಾಗೂ ಭಾಷಣಗಳು' ಎಂಬ ಒಟ್ಟು ೨೨ ಬೃಹತ್ ಸಂಮಟಗಳು ಹಾಗೂ ಭಾರತದ ಜನರನ್ನು ಎಚ್ಚರಿಸಲು ತಾವೇ ಸಂಪಾದಕರಾಗಿ ಹೊರ ತಂದ ೫ ಪತ್ರಿಕೆಗಳನ್ನೊಗೊಂಡ ಬೃಹತ್ ಸಂಮಟಗಳು–ಭಾರತ ಸರ್ಕಾರ ಹಾಗೂ ಭಾರತದ ಎಲ್ಲಾ ರಾಜ್ಯ ಸರ್ಕಾರಗಳು ಕೂಡ ತಮ್ಮ ತಮ್ಮ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದ ಮಾಡಿ ಪ್ರಕಟಿಸಿ ಅಂಬೇಡ್ಕರ್‌ರವರ ಚಿಂತನೆಗಳನ್ನು ಓದುಗರಿಗೆ ತಲುಪಿಸುವ ಜವಬ್ದಾರಿಯನ್ನು ಮಾಡಿವೆ. ಮಾಡುತ್ತಿವೆ.

ಈ ಮಹತ್ವದ ಸಂಮಟಗಳು ತನ್ನೊಡಲೊಳಗೆ ಒಂದಿರುವ ಭಾರತ ಹಾಗೂ ಭಾರತೀಯರನ್ನು ಪ್ರತಿನಿಧಿಸುವ ಪ್ರತಿಯೊಬ್ಬ ಭಾರತೀಯನ ಜೀವಸೆಲೆಯ ಸಾರ. ಈ ಬೃಹತ್ ಸಂಮಟಗಳ ಜೀವಾಳವೆ ಭಾರತೀಯರಿಗೆ ಭಾರತೀಯತೆಯನ್ನು ಅನಾವರಣಗೊಳಿಸುವುದೇ ಆಗಿದೆ. ಈ ರಾಷ್ಟ್ರದ ವಾರಸುದಾರರಾದ ಈ ನೆಲ ಸಂಸ್ಕೃತಿ ಹಿನ್ನೆಲೆಯ ಜನರ ಮೂರ್ವಿಕರು ಬದುಕಿ ಬಾಳಿದ ದೇಶದ ನೆಲದ ಐತಿಹಾಸಿಕ ಇತಿಹಾಸವನ್ನು ಅನಾವರಿಸುವ ಜೊತೆಗೆ–ಅನೇಕ ಪ್ರಶ್ನೆಗಳೊಂದಿಗೆ ಉತ್ತರವನ್ನು ತಮಗೆ ತಾವೇ ಹುಡುಕಿಕೊಳ್ಳುವಂತೆ ಮಾಡುವುದೇ ಈ ಕೃತಿಗಳ ಮುಖ್ಯ ಜೀವಾಳವಾಗಿದೆ.

ಪರಾಮರ್ಶನ ಗ್ರಂಥಗಳು

೧. ಬಾಬಾಸಾಹೇಬರು ಒಡಲಾಳದಿಂದ ಗ್ರಹಿಸಿದ ಭಾರತ ಮತ್ತು ಭಾರತೀಯರು, ಡಾ. ಎನ್. ಚಿನ್ನಸ್ವಾಮಿ ಸೋಸಲೆ, ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೨೪.

Scanned with OKEN Scanner

ISSN 2278-5043

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚರಿತ್ರೆ ಅಧ್ಯಯನ

ಸಂಪುಟ - ೧೪ ಸಂಚಿಕೆ - ೧ ಜುಲೈ - ಡಿಸೆಂಬರ್ ೨೦೨೨



Publication of Department of History

CHARITRE ADHYAYANA

Bi-Annual Vol-14 Issue-1, July-December-2022

Edited by
Dr. N. Chinnaswamy Sosale
Professor
Department of History
Kannada University, Hampi
Vidyaranya 583 276

Published by
Dr. Shailaja I. Hiremath
Director, Prasaranga
Kannada University, Hampi
Vidyaranya 583 276

Pages: x + ೧೪೨

www.kannadauniversity.org

First Impression: 2023

ISSN 2278-5043

ಚರಿತ್ರೆ ಅಧ್ಯಯನ ಅರ್ಧವಾರ್ಷಿಕ ಪತ್ರಿಕೆ

ಸಂಪುಟ - ೧೪ ಸಂಚಿಕೆ - ೧, ಜುಲೈ - ಡಿಸೆಂಬರ್ ೨೦೨೨

(ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳ ಅಭಿಪ್ರಾಯಗಳಿಗೆ ಲೇಖಕರೇ ಜವಾಬ್ದಾರರು)

© ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೨೩

ಪ್ರಧಾನ ಸಂಪಾದಕರು: **ಡಾ. ಡಿ.ವಿ. ಪರಮಶಿವಮೂರ್ತಿ**
ಸಂಪಾದಕರು: **ಡಾ. ಎನ್. ಚಿನ್ನಸ್ವಾಮಿ ಸೋಸಲೆ**

ಸಂಪಾದಕ ಸಲಹಾ ಮಂಡಲಿ
ಡಾ. ವಿಜಯ್ ಪೂಣಚ್ಚ ತಂಬಂಡ, ಡಾ. ಕೆ. ಮೋಹನ್‌ಕೃಷ್ಣ ರೈ
ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಬಿಡಿ ಪ್ರತಿ: ರೂ. ೧೦೦/- ವಾರ್ಷಿಕ ಚಂದಾ: ವ್ಯಕ್ತಿಗಳಿಗೆ ರೂ. ೧೫೦/-
ಸಂಸ್ಥೆಗಳಿಗೆ ರೂ. ೨೦೦/-

ಅಕ್ಷರ ಸಂಯೋಜನೆ: **ಸುರೇಖಾ ಕಂಪ್ಯೂಟರ್ಸ್, ಕಮಲಾಪುರ**

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಮೊ: ೯೪೮೦೧ ೮೯೮೭೦

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ಮೈಸೂರು ಬ್ಯಾಂಕ್ ವೃತ್ತ, ನಂ. ೧, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯

ದೂ.: ೦೮೦-೨೨೩೭೨೫೮೮

ಮುದ್ರಣ
ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

ಪರಿವಿಡಿ

ಸಂಪಾದಕರ ಮಾತು / iii

೧. ಭಾರತದ ಚರಿತ್ರೆ ಬರವಣಿಗೆಯ ಸ್ವರೂಪ–ಕೆಲವು ಟಿಪ್ಪಣಿಗಳು / ೧
ಕೆ. ಮೋಹನ್‌ಕೃಷ್ಣ ರೈ

೨. ಮಾತನಾಡಲೇಬೇಕಾದವರ ಚರಿತ್ರೆ : ಚಾರಿತ್ರಿಕ ವಸ್ತುನಿಷ್ಠ ವಿಶ್ಲೇಷಣೆ / ೧೮
ಎನ್. ಚಿನ್ನಸ್ವಾಮಿ ಸೋಸಲೆ

೩. ವಿಜಯನಗರ ರಾಜಧಾನಿ ನಿರ್ಮಾಣದಲ್ಲಿ ವಿದ್ಯಾರಣ್ಯರು :
ದಾಖಲೆಗಳ ಪುನರಾವಲೋಕನ / ೩೨
ಡಿ.ಎನ್. ಯೋಗೀಶ್ವರಪ್ಪ

೪. ಸೊಂಡೂರು ಪರಿಸರದಲ್ಲಿ ಆಳ್ವಿಕೆ ನಡೆಸಿದ ಪಾಳೆಯಗಾರರು ಮತ್ತು ಘೋರ್ಪಡೆಗಳ ರಾಜಕೀಯ ಚರಿತ್ರೆ / ೬೦
ವಿರೂಪಾಕ್ಷಿ ಪೂಜಾರಹಳ್ಳಿ

೫. ಕನ್ನಡ ನಾಡಲ್ಲಿ ಅಳಿಸಲಾಗದ ಹೆಜ್ಜೆ ಮೂಡಿಸಿದ ಬುಕಾನನ್
ಹಾಗೂ ಇತರೆ ವಿದೇಶಿ ಮಹನೀಯರು / ೭೭
ಎಂ.ಜಿ. ರಂಗಸ್ವಾಮಿ

೬. ಮೈಸೂರು ರಾಜ್ಯ ಮತ್ತು ಮೊಘಲರ ನಡುವಿನ ರಾಜತಾಂತ್ರಿಕ
ಸಂಬಂಧಗಳು : ಒಂದು ವಿಶ್ಲೇಷಣೆ / ೯೪
ಎನ್. ಮಹದೇವಸ್ವಾಮಿ

೭. ಟಿಪ್ಪುವಿನ ಮತಾಂತರ ರಾಜಕಾರಣ ಮತ್ತು ರಾಜೇಂದ್ರನಾಮೆ / ೧೦೧
ವಿಜಯ್ ಪೂಣಚ್ಚ ತಂಬಂಡ

೮. ತುರ್ತುಪರಿಸ್ಥಿತಿ ಸಂದರ್ಭದಲ್ಲಿ ದಲಿತರ ಸ್ಥಿತಿಗತಿ : ಚಾರಿತ್ರಿಕ ವಿಶ್ಲೇಷಣೆ / ೧೨೫
ಎಚ್.ಸಿ. ನರಸಿಂಹರಾಜು

೯. ಪ್ರೊ. ಬಿ. ಷೇಕ್ ಅಲಿ ಅವರ ಜೀವನ–ಸಾಧನೆಗಳ ವಸ್ತುನಿಷ್ಠ ನೋಟ / ೧೩೧
ನರೇಂದ್ರ ಪ್ರಸಾದ್

೧೦. ಕನ್ನಡ ನೆಲೆದ ಚರಿತ್ರೆ ರಚನೆ, ಬೋಧನೆ ಹಾಗೂ ಮಾನವೀಯತೆಯ ನೆಲೆಯ ಶಿಖರ : ಪ್ರೊ. ಬಿ. ಷೇಕ್ ಅಲಿ / ೧೩೭
ಎನ್. ಚಿನ್ನಸ್ವಾಮಿ ಸೋಸಲೆ

ಲೇಖಕರ ವಿಳಾಸ / ೧೪೨

೨

ಮಾತನಾಡಲೇಬೇಕಾದವರ ಚರಿತ್ರೆ : ಚಾರಿತ್ರಿಕ ವಸ್ತುನಿಷ್ಠ ವಿಶ್ಲೇಷಣೆ

ಎನ್. ಚಿನ್ನಸ್ವಾಮಿ ಸೋಸಲೆ

ಭಾರತ ಹಲವಾರು ಧಾರ್ಮಿಕ ಸಂಕೋಲೆಗಳಲ್ಲಿ ಸಿಲುಕಿಕೊಂಡಿರುವ ರಾಷ್ಟ್ರ. ಈ ರಾಷ್ಟ್ರಕ್ಕೆ ಅದರದೆ ಮೂಲ ನಿವಾಸಿಗಳ–ಮೂಲ ನೆಲೆಯ–ಮೂಲ ಸಂವೇದನೆಯ ದೇಶೀಯ ಧರ್ಮವಿದೆ. ಹಾಗೆಯೇ ಕಾಲಕಾಲಕ್ಕೆ ದಾಳಿ ಮಾಡಿದ ವಿದೇಶಿ ಧರ್ಮಗಳು ಸಹ ಇಲ್ಲಿ ಭದ್ರವಾಗಿ ನೆಲೆ ನಿಂತಿವೆ. ನಮ್ಮ ಊರಿನಲ್ಲಿ ಒಂದು ಪಾರಂಪರಿಕವಾದ ಗಾದೆಯಿದೆ. ಆ ಗಾದೆ ಅಂದರೆ "ಊರು ಒಕ್ಕಲಿನವರೀಗಿಂತ –ಸೇರ್ ಒಕ್ಕಲಿನವರು ಊರನ್ನು ಆಳ್ವಿಕೆ ಮಾಡಿದ್ದಾರೆ" ಎಂಬುದು ಈ ಗಾದೆಯನ್ನು ವಿಸ್ತರಿಸಿ ಚರ್ಚೆಗೆ ಎಡೆ ಮಾಡುವುದಾದರೆ, ಭಾರತದ ಮೂಲ ಧರ್ಮವಾದ ಬೌದ್ಧ ಮತ್ತು ಜೈನಧರ್ಮೀಯರನ್ನು ಅನೇಕ ಸಾಂಸ್ಕೃತಿಕ ಪಲ್ಲಟಗಳಿಂದಾಗಿ ಮೂಲೆ ಗುಂಪಾಗಿಸಿ ಈ ದೇಶಕ್ಕೆ ಆಗಮಿಸಿದ ವೈದಿಕ ಧರ್ಮ–ವೈದಿಕರೇ ಹೇಳಿಕೊಂಡ ಹಾಗೆ ದಾಳಿ ಮಾಡಿದ ಇಸ್ಲಾಂ ಧರ್ಮ–ಪ್ರವೇಶ ಮಾಡಿದ ಕ್ರೈಸ್ತ ಧರ್ಮ–ಇಂದಿನ ಸಾಂಸ್ಕೃತಿಕ ಸಂದರ್ಭದಲ್ಲಿ ನನ್ನ ಈ ಪಾರಂಪರಿಕ ನೆಲದ ಭಾರತ ದೇಶವನ್ನು ಆಳ್ವಿಕೆ ಮಾಡುತ್ತಿರುವುದು ನಮ್ಮ ದುರಂತವೇ ಸರಿ .

ಈ ವಿದೇಶಿ ಧರ್ಮಗಳು ನಾಗರ ಹಾವು ಇದ್ದಾಂಗೆ(ತೀರ್ಥದ ಜನ)– ನಮ್ಮ ದೇಶೀಯ ಧರ್ಮ (ಗೆದ್ದಲು ಹುಳುಗಳ ಹಾಗೆ). ಗೆದ್ದಲು ಹುಳುಗಳು ಶ್ರಮದಿಂದ ದುಡಿದು ತಮ್ಮ ಬಾಯಿಯಿಂದ ಮಣ್ಣನ್ನು ತಂದು ಉತ್ತವನು ಕಟ್ಟಿದ್ದಾರೆ .... ನಾಗರಹಾವು ಬಂದು ಹುತ್ತದಲ್ಲಿ ಸೇರಿಕೊಂಡು ತನ್ನ ಪ್ರಭುತ್ವವನ್ನು ಸ್ಥಾಪಿಸಿಕೊಳ್ಳುವ ಹಾಗೆ ನಮ್ಮ ಭಾರತದ ಚರಿತ್ರೆ ನಿರ್ಮಾಣಗೊಂಡಿದೆ. ದುಡಿಮೆಯ ಮೂಲಕ ಬೆವರು ಹರಿಸಿದ ಜನರ ಚರಿತ್ರೆ ಸಂಪೂರ್ಣವಾಗಿ ಗೌಣವಾಗಿದೆ. ಇವರ ದುಡಿಮೆಯಿಂದಲೇ ಹೊಟ್ಟೆ ಬಿರಿಯುವ ಹಾಗೆ ಉಂಡು ಸಂತೃಪ್ತವಾಗಿರುವ 'ದೇವರ 'ಜನರ ಚರಿತ್ರೆ ರಾರಾಜಿಸುತ್ತಿದೆ.

ಬೃಹತ್ ದೇವಾಲಯಗಳು–ಬೃಹತ್ ಕೆರೆಗಳು–ಬೃಹತ್ ಅರಮನೆಗಳು–ಬೃಹತ್ ಅಣೆಕಟ್ಟುಗಳು–ಬೃಹತ್ ಕೋಟೆಗಳನ್ನು ಕಟ್ಟಿದವರು ಈ ರಾಷ್ಟ್ರದ ಮೂಲ ನಿವಾಸಿಗಳಾದ ನಾವು. ಬೃಹತ್ ನಗರಗಳನ್ನು ನಿರ್ಮಾಣ ಮಾಡಿದವರು ಹಾಗೂ ಆ ಮೂಲಕ ಈ ಭಾರತದ ಮೂಲ ನಾಗರಿಕತೆಗೆ ಸೃಷ್ಟಿಕರ್ತ ರಾದವರು ನಾವು. ನಮ್ಮನ್ನೇ(ಭಾರತದ ಮೂಲ ಧರ್ಮವಾದ ಬೌದ್ಧರನ್ನು)ಈ ದೇಶಕ್ಕೆ ಆಗಮಿಸಿದವರು(ಆರ್ಯರು)–ದಾಳಿ ಮಾಡಿದವರು(ಮುಸ್ಲಿಮರು)–ಹಾಗೂ ಪ್ರವೇಶ ಮಾಡಿದವರು(ಕ್ರೈಸ್ತರು) ಮೂಲೆ ಗುಂಪಾಗಿ ಮಾಡಿ ನಮ್ಮನ್ನು ಊರಿಂದ ಹೊರಗಿನ ಕೇರಿಯಲ್ಲಿ ಇಟ್ಟು ಇವರು ಊರಿನಲ್ಲಿ ಉಳಿದುಕೊಂಡು ಈ ರಾಷ್ಟ್ರವನ್ನು ತಮ್ಮದಾಗಿ ಮಾಡಿಕೊಳ್ಳಲು 'ದೇವರು' ಎಂಬ ಕಟ್ಟುಪಾಡಿನ ಮೂಲಕ ಹೊಂಚು ಹಾಕಿ ಯಶಸ್ವಿಯಾದರು... ನಮ್ಮ ದುಡಿಮೆ ಮತ್ತು ಶ್ರಮದ ಮೂಲಕ ಅವರು ಸದ್ಯಕ್ಕೆ ಸಮೃದ್ಧವಾದ–ಶ್ರೇಷ್ಠವಾದ ಸಾಮಾಜಿಕ–ಆರ್ಥಿಕ ಮತ್ತು ರಾಜಕೀಯ ಜೀವನವನ್ನು ನಡೆಸುತ್ತಿದ್ದಾರೆ. ನಿಜ ಭಾರತದ ಚರಿತ್ರೆ ಉತ್ತವನು ನಿರ್ಮಿಸಿದವರ ಚರಿತ್ರೆಯಾಗಿ ನಿರ್ಮಾಣಗೊಂಡಿಲ್ಲ(ಏಕೆಂದರೆ ಈ ಉತ್ತವನು ಕಟ್ಟುವವರಿಗೆ ಬರೆಯುವುದು ತಿಳಿದಿರಲಿಲ್ಲ.

ಬಹಳ ಮುಖ್ಯವಾಗಿ ತಿಳಿದಿಲ್ಲ ಎನ್ನುವುದನ್ನು ಹಿಂತೆಗೆದುಕೊಂಡು ತಿಳಿಯಲು ಬಿಟ್ಟಿರಲಿಲ್ಲ ಎಂದರೆ ವಾಸ್ತವವಾಗಬಹುದು. ಬದಲಿಗೆ ಹುತ್ತದೊಳಗೆ ಬಂದು ಸೇರಿಕೊಂಡ ನಾಗರ ಹಾವಿನ ಚರಿತ್ರೆಯೆ ನಿಜವಾದ ಚರಿತ್ರೆಯಾಗಿ ನಿರ್ಮಾಣಗೊಂಡಿದೆ. ಅಕ್ಷರವನ್ನು ತಮ್ಮ ಸ್ವತ್ತಾಗಿ ಮಾಡಿಕೊಂಡವರು–ನಮ್ಮ ಈ ರಾಷ್ಟ್ರದ ಮೂಲ ನಿವಾಸಿಗಳ ಬೆವರು, ರಕ್ತ, ಮಾಂಸ,ಮಿದುಳು ಮತ್ತು ಮೂಳೆಗಳನ್ನು ಸಿಮೆಂಟ್ ಮತ್ತು ನೀರಾಗಿ ಮಾಡಿಕೊಂಡು ಬಂಗಲೆ–ಅರಮನೆ–ಗುರುಮನೆ–ಹಾಗೂ ಅಗ್ರಹಾರ ಗಳನ್ನು ನಿರ್ಮಿಸಿಕೊಂಡವರು. ಅವರು ಬರೆದ ಚರಿತ್ರೆಯಲ್ಲಿ ಈ ಜನರ ಅಲ್ಪಸ್ವಲ್ಪ ಮಾಹಿತಿಯೂ ಇಲ್ಲ. ಇವರಿಂದ ಎಲ್ಲವನ್ನು ಪಡೆದವರ ಚರಿತ್ರೆ ಮಾತ್ರ ವಿಜೃಂಭಿಸುತ್ತಿದೆ–ವರ್ಣನಾತ್ಮಕವಾಗಿ ಇದಿಷ್ಟೇ, ಇನ್ಯಾರು ಪ್ರಶ್ನೆ ಮಾಡಬಾರದು–ಎಂದುಕೊಂಡು ಕೊಂಡಾಡುತ್ತಿದೆ. ಅದರ ಮೂಲಕ ಭಾರತೀಯ ಬೃಹತ್ ಶ್ರಮ ಸಂಸ್ಕೃತಿಯನ್ನು ನಾಶ ಮಾಡಿದೆ. ಸೋಂಬೇರಿತನದ ಸಂಸ್ಕೃತಿಯನ್ನು ವಿಜೃಂಭಿಸಲಿದೆ.

ಇಷ್ಟೆಲ್ಲ ಪೀಠಿಕೆ ನಂತರ ಈಗ ಮುಖ್ಯ ವಿಷಯಕ್ಕೆ ಬರುತ್ತೇನೆ. ಭಾರತದಲ್ಲಿ ಧಾರ್ಮಿಕವಾಗಿ ಯಾರೆಲ್ಲಾ.. ಏನೆಲ್ಲಾ... ಮಾತನಾಡಿದರೂ ಅವರು ಜೀವಂತವಾಗಿದ್ದಾರೆ. ಅವರ ಕಟ್ಟುಪಾಡುಗಳು–ಸಾಮಾಜಿಕ ವಿಡಂಬನೆಗಳು–ಧಾರ್ಮಿಕ ಆದರ್ಶಗಳು ಹಾಗೂ ಈ ರಾಷ್ಟ್ರವನ್ನು ನಿಯಂತ್ರಿಸಲು ಅವರು ಸೃಷ್ಟಿ ಮಾಡಿದ ಅನಿಷ್ಠ–ಅಮಾನವೀಯ – ಆ ಸಾಂವಿಧಾನಿಕ–ಕಟ್ಟುಪಾಡುಗಳು ಜೀವಂತವಾಗಿವೆ. ಈ ಜೀವಂತಿಕೆ ಮೇಲೆ ತಮ್ಮ ಬದುಕನ್ನು ರೂಪಿಸಿಕೊಂಡು ಇಲ್ಲಿ ನಾವು ಶ್ರೇಷ್ಠರು–ಉತ್ತಮರು–ಪವಿತ್ರವಾದವರು–ದೇವರ ಮಕ್ಕಳು ಎಂದು ಹೇಳಿಕೊಂಡು ದೇವರೆಂಬ ಅಜ್ಞಾನಿಯನ್ನು ಮುಂದಿಟ್ಟು

ಕೊಂಡು ನಾವು ಎಲ್ಲರಿಗಿಂತ ಸಾಂಸ್ಕೃತಿಕವಾಗಿ ಶ್ರೇಷ್ಠರು ಎಂದು ಹೇಳಿಕೊಂಡು ಮೆರೆಯುತ್ತಿದ್ದಾರೆ .

ಇವುಗಳ ಆಧಾರದ ಮೇಲೆಯೇ ಪ್ರತಿಪಾದನೆ ಮಾಡಿದ ಶಂಕರ–ರಾಮಾನುಜ–ಮಧ್ವ– ರಾಘವೇಂದ್ರ–ದಯಾನಂದ ಸರಸ್ವತಿ–ಅವರ ಪ್ರತಿಪಾದಿಸಿದ ಅಸಂವಿಧಾನದ ಧರ್ಮಗಳು ಇಂದು ದೇಶದಲ್ಲಿ ಭದ್ರವಾಗಿ ನೆಲೆಯೂರಿವೆ. ಈ ತೀರ್ಥವನೆ ನಂಬಿರುವ ಸೋಂಬೇರಿ ಜನ ತಮ್ಮ ಸ್ವಾರ್ಥಕ್ಕಾಗಿ ಭಾರತ ಮೂಲನಿವಾಸಿಗಳಿಂದ ದುಡಿಸಿ ಅವರ ದುಡಿಮೆಯ ಮೂಲಕ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಅವರ ತಲೆಯಲ್ಲಿ "ದೇವರು" ಎಂಬ ಭಯಾನಕ ವಸ್ತುವನ್ನು ಶಾಶ್ವತವಾಗಿ ಇವರ ತಲೆಯಲ್ಲಿ ಒಂದು ತೊಟ್ಟು ರಕ್ತ ಬರದೆ ಇರುವ ಹಾಗೆ ಕೊರೆಯುವ ಹುಳವನ್ನು ಬಿಟ್ಟು ಉಳಿಸಿ ಕೊಂಡಿದಾರೆ.

ನನ್ನ ಭಾರತದ ಮೂಲನಿವಾಸಿಗಳ "ಜ್ಞಾನದ " ಶ್ರಮವನ್ನು "ಅಜ್ಞಾನ"ವನ್ನಾಗಿಸಿ .... ಅವರ ಶ್ರಮ ದುಡಿಮೆಯ ಮೂಲಕ ಬದುಕುತ್ತಿರುವ ಈ "ಜ್ಞಾನಿಗಳು" ನಾವು ಈ ರಾಷ್ಟ್ರದ ಮಹಾನ್ "ಜ್ಞಾನಿಗಳು" ಎಂದು ಹೇಳಿಕೊಂಡು ಸಾಂಸ್ಕೃತಿಕ ರಾಕ್ಷಸರಂತೆ ಮೆರೆಯುತ್ತಿದ್ದಾರೆ .

ಅದೇ ಭಾರತದಲ್ಲಿ ಸಾಮಾಜಿಕ ಸುಧಾರಣೆಗಾಗಿ ಧರ್ಮ ಪ್ರತಿಪಾದನೆ ಮಾಡಿದ ವ್ಯಕ್ತಿಗಳು ಸಂಪೂರ್ಣವಾಗಿ ಗೌಣವಾದರು. ಏಕೆ ?? ಭಾರತದಲ್ಲಿ ಸಮ ಸಮಾಜವನ್ನು ಪ್ರತಿಪಾದನೆ ಮಾಡಿದ–ಸಮ ಸಂಸ್ಕೃತಿಯನ್ನು ಪ್ರತಿಪಾದಿಸಿದ–ಶ್ರಮದ ಮೂಲಕ ರಾಷ್ಟ್ರವನ್ನು ಕಟ್ಟಲು ಧರ್ಮವನ್ನು ಸ್ಥಾಪಿಸಿದ ಬುದ್ಧ–ಬಸವ–ಅಂಬೇಡ್ಕರ್–ಜ್ಯೋತಿಬಾ ಫುಲೆ–ಸಾವಿತ್ರಿಬಾಯಿ ಫುಲೆ–ಗಾಡ್ಗೆ ಬಾಬಾ–ಅಯ್ಯನ್ ಕಾಳಿ–ಅಯೋತಿ ದಾಸ್–ಪೆರಿಯಾರ್–ನಾಲ್ವಡಿ ಕೃಷ್ಣರಾಜ ಒಡೆಯರ್–ಶಾಹುಮಹಾರಾಜ–ಟಿಪ್ಪು ಸುಲ್ತಾನ್–ಮಿರ್ಜಾ ಇಸ್ಮಾಯಿಲ್–ಅವರುಗಳು ಅನೇಕ ಈ ಅಗ್ರಹಾರದವರ ಸಾಂಸ್ಕೃತಿಕ ಅಂಧ ಪತನದಿಂದಾಗಿ ಪತನವಾಗಿ ಬಿಟ್ಟರು.

ಆದರೆ ಇವರನ್ನು ಒಂದಷ್ಟು ಕಾಲದವರೆಗೆ ಮರೆಮಾಚಿದ್ದು ಅಕ್ಷರ ಲೋಕದಿಂದ ಮಾತ್ರ ಹೊರತು, ಜ್ಞಾನದ ಲೋಕದಿಂದ ಅಲ್ಲ. ಅಕ್ಷರಕ್ಕೆ ಮರು ಹುಟ್ಟು ಇಲ್ಲದಿರಬಹುದು ಆದರೆ ಜ್ಞಾನಕ್ಕೆ ನಿರಂತರವಾದ ಮರುಹುಟ್ಟು ಇದ್ದೇ ಇರುತ್ತದೆ. ಆ ಮರುಹುಟ್ಟಿನ ರೂಪವಾಗಿ ಇಂದು ಬುದ್ಧ ಬಸವ ಅಂಬೇಡ್ಕರ್ ಪೆರಿಯಾರ್ ಟಿಪ್ಪು ನಾಲ್ವಡಿ ಕೃಷ್ಣರಾಜ ಒಡೆಯರ್ ಪೆರಿಯಾರ್ ನಾರಾಯಣ ಗುರು ಶಾಹುಮಹಾರಾಜ ಸಾವಿತ್ರಿಬಾ ಫುಲೆ ಜ್ಯೋತಿಬಾ ಫುಲೆ ಜ್ಞಾನದ ಮೂಲಕ ಮರುಹುಟ್ಟು ಪಡೆದಿರುವುದು–ಪಡೆಯುತ್ತಿರುವುದು. ಈ ಮರುಹುಟ್ಟಿಗೆ ಮೂಲ ಕಾರಣಕರ್ತರೇ ಈ ಭಾರತದ ನೆಲ ಸಂಸ್ಕೃತಿಯ ಜ್ಞಾನ ಜ್ಯೋತಿ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರು ಹಾಗೂ ಅವರು ಈ ನೆಲ ಸಂಸ್ಕೃತಿಯನ್ನು ಅರ್ಥ ಮಾಡಿಕೊಂಡು ನಮ್ಮೆಲ್ಲರಿಗೂ

ಬೃಹತ್ ಪವಿತ್ರ ಸಮ ಸಮಾಜ ನಿರ್ಮಾಣದ ಆಧಾರದಲ್ಲಿ ರಚಿಸಿ ಈ ರಾಷ್ಟ್ರಕ್ಕೆ ನೀಡಿದ ಸಂವಿಧಾನವೇ ಕಾರಣವಾಗಿದೆ.

ಇಂದು ಮೈಸೂರಿನ ಕೆ ಆರ್ ಎಸ್ ಅಣೆಕಟ್ಟಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ವಿಶ್ವೇಶ್ವರಯ್ಯನವರ ಸ್ಮಾರಕ ಗಳನ್ನು ನಿರ್ಮಾಣ ಮಾಡಲು ನಮ್ಮ ಸರ್ಕಾರ ಮುಂದಾಗಿದೆ. ನಿಜಕ್ಕೂ ಇವತ್ತಿನ ಸಾಂಸ್ಕೃತಿಕ ಸಂದರ್ಭದಲ್ಲಿ ವಿಶ್ವೇಶ್ವರಯ್ಯನವರ ಸ್ಮಾರಕವನ್ನು ಅಲ್ಲಿ ನಿರ್ಮಾಣ ಮಾಡಲು ನಾಲ್ವಡಿಯವರನ್ನು ಬಳಸಿಕೊಳ್ಳಲಾಗುತ್ತಿದೆಯೋ ಅಥವಾ ನಾಲ್ವಡಿಯವರ ಸ್ಮಾರಕವನ್ನು ನಿರ್ಮಾಣ ಮಾಡಲು ವಿಶ್ವೇಶ್ವರಯ್ಯನವರನ್ನು ಬಳಸಿಕೊಳ್ಳಲಾಗುತ್ತಿದೆಯೋ.. ಎಂಬ ಪ್ರಶ್ನೆ ನಮ್ಮೆಲ್ಲರನ್ನು ಪ್ರಜ್ಞಾಪೂರ್ವಕವಾಗಿ ಕಾಡುತ್ತದೆ. ಯಾರಿಂದ ಏನೇ ಪಡೆದುಕೊಂಡರು ಇತಿಹಾಸದಲ್ಲಿ ಅಲ್ಲಿ ವಿಶ್ವೇಶ್ವರಯ್ಯನವರಿಗೆ ಅಂತಹ ಮಹತ್ವದ ಸ್ಥಾನ ಇಲ್ಲ ಎಂಬುದು ನನ್ನ ಅಭಿಪ್ರಾಯ.

ಆದರೂ ಇಂತಹ ಸ್ಮಾರಕ ಗಳು ರಾಜಕಾರಣ ಮತ್ತು ಧಾರ್ಮಿಕ ಹಿನ್ನೆಲೆಯ ಚರಿತ್ರೆಯಲ್ಲಿ ಆಗಿರುವ ಅನೇಕ ಜ್ವಲಂತ ಘಟನೆಗಳು ಸಹ ಕಾರಣೀಭೂತವಾಗಿವೆ.

ಅಂತರಂಗದಲ್ಲಿ ಮೈಸೂರು ಅರಮನೆಯವರಿಗಾಗಲಿ ಅಥವಾ ಸರ್ಕಾರವಾಗಲಿ ನಾಲ್ವಡಿಯವರ ಸ್ಮಾರಕವನ್ನು ಅಲ್ಲಿ ನಿರ್ಮಾಣ ಮಾಡಲು ಇಷ್ಟ ಪಡುವುದಿಲ್ಲ ಎಂದು ನಾನಂತೂ ಸ್ಪಷ್ಟವಾಗಿ ಹೇಳುತ್ತೇನೆ !!! ಏಕೆಂದರೆ..... ಅಂಬೇಡ್ಕರ್ ಅವರನ್ನು ಈಗ ಹೇಗೆ ಯಾವ ವರ್ಗ ಯಾವ ತನ್ನ ಸ್ವಾರ್ಥದ ಉದ್ದೇಶಕ್ಕಾಗಿ ಕತೋರವಾಗಿ–ಉಗ್ರವಾಗಿ ಮರಣದಂಡನೆ ಕೊಡುವಷ್ಟು–ಬರ್ಬರವಾಗಿ ಕೊಲೆ ಮಾಡುವಷ್ಟು ದ್ವೇಷಿಸುತ್ತಿದೆಯೊ ಅದೇ ವರ್ಗ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಪ್ರಬಲವಾಗಿ ದ್ವೇಷಿಸುತ್ತೀರುವುದು. ಏಕೆಂದರೆ ೧. ಇವರು ಭಾರತದಲ್ಲಿ ದುಡಿಮೆಯ ಮೂಲಕ ಈ ರಾಷ್ಟ್ರವನ್ನು ಕಟ್ಟಿದ ಶತಶತಮಾನಗಳಿಂದ ಸಾಂಸ್ಕೃತಿಕವಾಗಿ ಶ್ರೀಮಂತರಾದರೂ ಶಿಕ್ಷಣ ಮತ್ತು ಸಾಮಾಜಿಕ ಸ್ಥಾನಮಾನದಿಂದಾಗಿ ಹಿನ್ನಡೆ ಅನುಭವಿಸಿದ್ದನ್ನು ಗಮನಿಸಿ ತಮ್ಮ ಸರ್ಕಾರದಲ್ಲಿ ಕಾನೂನಾತ್ಮಕವಾಗಿ ರಕ್ಷಣೆ ನೀಡಲು ಮುಂದಾದದ್ದು ಒಂದು ಪ್ರಮುಖ ಕಾರಣ. ನಮಗೆ ನಾಲ್ವಡಿ ಕೃಷ್ಣರಾಜ ಒಡೆಯರ ಅವರು "ರಾಜಶ್ರೀ" ಆಗಬಹುದು. ಆದರೆ ಅವರ ಪಾಲಿಗೆ ಇವರು "ರಾಷ್ಟ್ರದ್ರೋಹಿ"ಯೇ ಸರಿ.

೨. ಅಸ್ಪೃಶ್ಯರಿಗೆ ಶಿಕ್ಷಣ ಕೊಟ್ಟದ್ದು, ಸ್ವ–ಘೋಷಿಸಿಕೊಂಡ ಸ್ಪೃಶ್ಯ ಜಾತಿಯವರೊಂದಿಗೆ ಅವರು ಕರೆಯುವ ಅಸ್ಪೃಶ್ಯರು ಸಮಾನತೆಯನ್ನು ಪ್ರತಿಪಾದಿಸಿದ್ದು, ವೈದಿಕರು ಮತ್ತು ಶ್ರೀಮಂತರಿಗೆ ಮಾತ್ರ ಪ್ರವೇಶವಿದ್ದ ಅರಮನೆಗೆ ಅಸ್ಪೃಶ್ಯರನ್ನು ಪ್ರವೇಶ ಮಾಡಿಸಿದ್ದು, ದೇವದಾಸಿ ಪದ್ಧತಿ ನಿರ್ಮೂಲನೆ ಮಾಡಿದ್ದು, ಜೀತ ಪದ್ಧತಿಯನ್ನು ನಿರ್ಮೂಲ ಮಾಡಿದ್ದು, ಕೃಷಿಗೆ ಪೂರಕವಾದ ಭೂಮಿಯನ್ನು ಹಂಚಿದ್ದು, ಪ್ರತಿಯೊಂದು ಕ್ಷೇತ್ರದಲ್ಲಿಯೂ ಈ ಮೂಲ ನಿವಾಸಿಗಳಿಗೆ ಮೀಸಲಾತಿಯನ್ನು ಪ್ರಪ್ರಥಮವಾಗಿ ನೀಡಿದ್ದು, ಇದು ಈ ನೆಲಕ್ಕೆ ಅಗಮಿಸಿದ ವೈದಿಕರು ಹಾಗೂ ನಮ್ಮ ರಾಷ್ಟ್ರದವರೇ ಆದ

ಬಂಡವಾಳಶಾಹಿಗಳು ಮತ್ತು ಜಮೀನ್ದಾರಿಕೆ ವ್ಯವಸ್ಥೆಯ ಮೂಲಕ ನಾವೇ ಊರಿನ ಶ್ರೇಷ್ಠರು ಎಂದು ಹೇಳಿಕೊಂಡಿದ್ದವರ ಪಾರಂಪರಿಕ ಹಕ್ಕುಗಳಿಗೆ ಚ್ಯುತಿ ತಂದಿದ್ದು, ಆ ಮೂಲಕ ಇವರ ನಂಬಿರುವ ಕೊಳಕು ಆಸಂವಿಧಾನಿಕ ಸಾಮಾಜಿಕ ಸಂಪ್ರದಾಯ ಹಾಗೂ ಅಧರ್ಮವನ್ನು ಒಂದಷ್ಟು ಅಲುಗಾಡಿಸಿದ್ದು ಮೈಸೂರು ಸಂಸ್ಥಾನದಲ್ಲಿ ಇದೇ ನಾಲ್ವಡಿ ಕೃಷ್ಣರಾಜ ಒಡೆಯರ್.

ಇಂತಹ ಜನಪರ ಧಾರ್ಮಿಕ ಕಟ್ಟುಪಾಡುಗಳ ವಿರೋಧಿಯ ನಾಯಕನ ಸ್ಪ್ಯಾಚುವನ್ನು ನಿಜವಾಗಲೂ ಇವರು ಅಂತರಾಳದಿಂದ ಗೌರವಪೂರ್ವಕವಾಗಿ ನಿರ್ಮಿಸಲು ಮುಂದಾಗಿರುವರೇ ಎಂಬ ಪ್ರಶ್ನೆಯಂತೂ ನನಗೆ ಕಾಡುತ್ತದೆ . ಹಾಗೆಯೇ... ಅದೇ ಸಂಸ್ಥಾನದಲ್ಲಿ ಪ್ರಪ್ರಥಮವಾಗಿ ಅಸ್ಪೃಶ್ಯರಿಗೆ ಮೀಸಲಾತಿಯನ್ನು ವಿರೋಧ ಮಾಡಿದವರು–ಪಂಚಾಮರಿಗೆ ಶಿಕ್ಷಣ ಕೊಡಲು ಹಿಂದೆ ಮುಂದೆ ನೋಡಿದವರು–ಅವರ ಶ್ರೇಷ್ಠತೆಗೆ ಅನುಗುಣವಾಗಿ ಮೀಸಲಾತಿ ನೀಡಬೇಕು ಎಂದವರು–ಈ ವಿವಾದ ಕ್ಕಾಗಿಯೇ ತಮ್ಮ ದಿವಾನ್ ಪದವಿಗೆ ರಾಜೀನಾಮೆ ಕೊಟ್ಟು ಸಂಪ್ರದಾಯವಾದಿಗಳ ಕಣ್ಮಣಿಯಾದವರು, ಕೆ ಆರ್ ಎಸ್ ನಿರ್ಮಾಣಕ್ಕೆ ಸೇವೆ ಸಲ್ಲಿಸಿದ ಲಕ್ಷಾಂತರ ಕೂಲಿ ಕಾರ್ಮಿಕರರಲಿ ಒಬ್ಬ ಮುಖ್ಯ ಇಂಜಿನಿಯರ್ ಆಗಿ ಶ್ರಮಿಸಿದ ವಿಶ್ವೇಶ್ವರಯ್ಯನವರ ಸ್ಪ್ಯಾಚುವನ್ನು ಇವತ್ತು ಧರ್ಮ ಮತ್ತು ಜಾತಿಯ ಶ್ರೇಷ್ಠತೆಯ ಹಿನ್ನೆಲೆಯ ಸ್ವಘೋಷಿತ **"ಕರುಳಿನಿಂದ"** ಅಂದರೆ ಅಂತರಾಳದಿಂದ ನಿರ್ಮಿಸಲು ಮುಂದಾಗಿರುವುದು ಬೌದ್ಧಿಕ ಅಧಃಪತನಕ್ಕೆ ಹಿಡಿದ ಕೈಗನ್ನಡಿಯಾಗಿದೆ. (ನಾನು ಇಲ್ಲಿ ಸರ್ ಎಂ ವಿಶ್ವೇಶರಯ್ಯನವರ ಸ್ಪ್ಯಾಚು ವನ್ನು ವಿರೋಧ ಮಾಡುತ್ತಿಲ್ಲ. ಕೆ ಆರ್ ಎಸ್ ಆವರಣದಲ್ಲಿ ವಿರೋಧ ಮಾಡುತ್ತೇನೆ ಅಷ್ಟೆ. ಅವರ ಸ್ಪ್ಯಾಚುವನ್ನು ಕರ್ನಾಟಕ ರಾಜ್ಯದಲ್ಲಿ ಎಲ್ಲಾದರೂ ಬೃಹತ್ ಆಕಾರದಲ್ಲಿ ನಿರ್ಮಾಣ ಮಾಡಲಿ ಖಂಡಿತವಾಗಿಯೂ ಅದಕ್ಕೆ ನನ್ನಂಥವರ ಸ್ವಾಗತ ಇದ್ದೇ ಇರುತ್ತದೆ. ಅವರು ನಮ್ಮ ಕನ್ನಡ ನಾಡಿನ ಬೌದ್ಧಿಕ ಚಿಂತನೆಯ ಭಾರತ ರತ್ನ. ಕನ್ನಂಬಾಡಿ ಅಣೆಕಟ್ಟನ್ನು ಕಟ್ಟಲು ವಿಶ್ವೇಶ್ವರಯ್ಯನವರ ಪಾತ್ರ ಎಷ್ಟು ಪ್ರಮಾಣದ್ದು ಎಂಬುದನ್ನು ಈಗಾಗಲೇ ಹಲವಾರು ನನ್ನ ಮಿತ್ರರು ಚರ್ಚೆ ಮಾಡಿದ್ದಾರೆ. ಅದರ ಚರ್ಚೆ ಅವಶ್ಯಕತೆ ನನಗೆ ಇಲ್ಲಿ ಇಲ್ಲ.

ಆದರೆ ವಿಶ್ವೇಶ್ವರಯ್ಯನವರ ಸ್ಪ್ಯಾಚುವನ್ನು ಅಲ್ಲಿ ಪ್ರತಿಷ್ಠಾಪನೆ ಮಾಡುವುದಕ್ಕಾಗಿ ನಾಲ್ವಡಿ ಕೃಷ್ಣರಾಜ ಒಡೆಯರನ್ನು ಬಳಸಿಕೊಳ್ಳುತ್ತಿರುವುದು ಇಲ್ಲಿ ದುರಂತ ಎಂಬುದು ನನ್ನ ಸ್ಪಷ್ಟ ಅನಿಸಿಕೆ. ಅಂದರೆ ಇವರ್ಯಾರೂ ಸಹ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸ್ಪ್ಯಾಚುವನ್ನು ಕೆ.ಆರ್.ಎಸ್.ನಲ್ಲಿ ಪ್ರೀತಿಯಿಂದ ನಿರ್ಮಾಣ ಮಾಡುತ್ತಿಲ್ಲ. ಬದಲಿಗೆ ರಾಜಕೀಯ ಸ್ವಾರ್ಥ ಮತ್ತು ಒಂದಷ್ಟು ಜನರ ವಿಶ್ವಾಸ ಗಳಿಸಲು. ಆದರೆ ನಾಲ್ವಡಿ ಅವರನ್ನು ಮುಂದಿಟ್ಟುಕೊಂಡು ಇವರ ಸ್ವಾರ್ಥಕ್ಕಾಗಿ ಪ್ರೀತಿಯಿಂದ ನಿರ್ಮಾಣ ಮಾಡುತ್ತಿರುವುದು ಕೇವಲ 'ವಿಶ್ವೇಶ್ವರಯ್ಯನವರ ಸ್ಪ್ಯಾಚುವನ್ನು' ಮಾತ್ರ. ಇಲ್ಲಿ

ವಿಶ್ವೇಶ್ವರಯ್ಯನವರು ಸ್ಪ್ಯಾಚು ಮುಖ್ಯವೇ ಹೊರತು –ನಾಲ್ವಡಿ ಕೃಷ್ಣರಾಜ ಒಡೆದವರ ಸ್ಪ್ಯಾಚು ಮುಖ್ಯವಲ್ಲ.

ವಿಶ್ವೇಶ್ವರಯ್ಯನವರ ಸ್ಪ್ಯಾಚು ವನ್ನು ನಿರ್ಮಾಣ ಮಾಡುವುದರ ಹಿಂದೆ ಭಾರತದ ಅಂಥ ಪತನದ ಬೌದ್ಧಿಕ–ಧಾರ್ಮಿಕ ಮತ್ತು ವೈದಿಕಶಾಹಿ ಚಿಂತನೆಗಳು ಅಡಗಿವೆ ಎಂಬುದನ್ನು ಮರೆಯಬಾರದು. ಈ ಭಾರತದ ಮಣ್ಣಿನಲ್ಲಿ ಧರ್ಮದ ಬಗ್ಗೆ ಮಾತನಾಡಿದವರು ಜೀವಂತವಾಗಿದ್ದಾರೆ. ಸಮ ಸಮಾಜದ ಉನ್ನತಿಗಾಗಿ ಮಾತನಾಡಿದವರು ಸತ್ತಿದ್ದಾರೆ.

ಇದನ್ನು ಹೀಗೂ ಹೇಳಬಹುದು... "ಭಾರತದಲ್ಲಿ ಸಾಮಾಜಿಕ ಚಿಂತನೆ ಬಗ್ಗೆ ಮಾತನಾಡಿದವರು ರಾಷ್ಟ್ರ ದ್ರೋಹಿಗಳಾಗಿದ್ದಾರೆ –ಹಾಗೆಯೇ ಧರ್ಮದ ಪರ ಮಾತನಾಡಿದವರು ರಾಷ್ಟ್ರ ಪ್ರೇಮಿಗಳಾಗಿದ್ದಾರೆ " ಭಾರತ ಅಂದರೆ ಕೇವಲ ಒಂದೇ ಧರ್ಮದ ರಾಷ್ಟ್ರವಲ್ಲ. ಇದು ಬಹು ಸಂಸ್ಕೃತಿಯ–ಬಹುಧರ್ಮದ ಜನರು ವಾಸಿಸುವ ಭೂ–ಪ್ರದೇಶವಾಗಿದೆ. ಕೇವಲ ಭಾರತದ ಭೂಪಟ ಗೊತ್ತಿರುವವರಿಗೆ ಭಾರತದ ಇತಿಹಾಸ ಗೊತ್ತಿಲ್ಲ. ಭಾರತದ ಭೂ–ಪ್ರದೇಶ ಗುತ್ತಿದ್ದವರೀಗೆ ಮಾತ್ರ ಈ ರಾಷ್ಟ್ರದ ನರನಾಡಿಗಳು ಅರ್ಥವಾಗುತ್ತದೆ. ಇದರಲ್ಲಿ ಪ್ರಮುಖ ಸಾಲಿನಲ್ಲಿ ನಿಲ್ಲುವವರೇ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರು. ಅಂಬೇಡ್ಕರ್ ಅವರಿಗೆ ಭಾರತದ ಭೂಪಟ ಗೊತ್ತಿರಲಿಲ್ಲ. ಆದರೆ ಭಾರತದ ಭೂ–ಪ್ರದೇಶ ಸ್ಪಷ್ಟವಾಗಿ ತಿಳಿದಿತ್ತು. ಇಂದು ಭಾರತ ದೇಶದಲ್ಲಿ ....ಧರ್ಮದ ಬಗ್ಗೆ ಮಾತನಾಡಿದವರನ್ನು ಜೀವಂತವಾಗಿ ಇರಿಸಲಾಗಿದೆ. ಅದೇ ... ಸಮ ಸಮಾಜದ ಬಗ್ಗೆ ಮಾತನಾಡಿದವರನು ಸಾಯಿಸಲಾಗಿದೆ. ಬರ್ಬರವಾಗಿ ಕೊಲೆ ಮಾಡಲಾಗಿದೆ. ಅತ್ಯಾಚಾರ ಮಾಡಲಾಗಿದೆ– ಬಹಿಷ್ಕರಿಸಲಾಗಿದೆ –ದೇಶದಿಂದಲೇ ಓಡಿಸಲಾಗಿದೆ–ಸಾಮೂಹಿಕವಾಗಿ ಕಗ್ಗೊಲೆ ಮಾಡಲಾಗಿದೆ.

ಆದರೆ, ದೇವರ ಹೆಸರಿನಲ್ಲಿ ಅಸಮಾನತೆಯ ಧರ್ಮವನ್ನು ಪ್ರತಿಪಾದನೆ ಮಾಡಿದವರು ಇಲ್ಲಿ ದೇವರುಗಳಾಗಿ ಪ್ರತಿ ಸ್ಥಾಪನೆಯಾಗಿದ್ದಾರೆ. ಈ ಧಾರ್ಮಿಕ ರಾಜಕೀಯ ವ್ಯವಸ್ಥೆಯಲ್ಲಿ 'ಧರ್ಮ' ಸಿಲುಕಿಕೊಂಡು ಧರ್ಮ ಎಂಬ ಸತ್ಯದ–ಪವಿತ್ರ ವಾದ ಬೇರಿನಿಂದ ಹೊರಬಂದ ಕೊಂಬೆ ರೆಂಬೆಳೆಂಬ ಸಮಾಜ ಮಾತ್ರ ಮೇಲು–ಕೀಳು, ಸ್ಪೃಶ್ಯ–ಅಸ್ಪೃಶ್ಯ, ಬಿಳಿಯ–ಕರಿಯ–ಊರಿನ ವಾಸಿ–ಕೇರಿಯ ವಾಸಿ ಎಂದು ತನ್ನಲ್ಲಿ ತಾನೇ ವಿಂಗಡಿಸಿಕೊಂಡು ನರಳಿ ನರಳಿ ಸಾಯುವಾಗೆ ಮಾಡಲಾಗಿದೆ. ಇಲ್ಲಿ ಧರ್ಮ ಉಳಿಯಲು ಹಾಗೂ ಸಮಾಜವನ್ನು ಒಂದಷ್ಟು ತಲೆ ಸವರಿ ತನ್ನ ಹದ್ದು ಬಸ್ತಿನಲ್ಲಿ ಇಟ್ಟುಕೊಳ್ಳಲು ವಿಶ್ವೇಶ್ವರಯ್ಯನವರ ಸ್ಪ್ಯಾಚುವನ್ನು(ಧರ್ಮ) ಸ್ಥಾಪಿಸುವುದರ ಜೊತೆಗೆ ನಾಲ್ವಡಿಯವರ ಸ್ಪ್ಯಾಚುವನ್ನು ಸ್ಥಾಪಿಸಿ(ಸಮಾಜ) ತಮ್ಮ ಸ್ವಾರ್ಥದ ಧರ್ಮ ರಕ್ಷಣೆಗೆ ಮುಂದಾಗಿರುವುದು ದುರಂತವೇ ಸರಿ. ಇಲ್ಲಿಯೂ ಸಹ ಧರ್ಮ ಗೆಲ್ಲುತ್ತಿದೆ ಜಾತಿ ತನ್ನ ಅಸ್ಪೃಶ್ಯತೆಯನ್ನು ಉಳಿಸಿಕೊಳ್ಳುತ್ತಿದೆ.

ಪವಿತ್ರ ಸಮ ಸಮಾಜದ ಈ ನೆಲದ ಮೂಲ ನಿವಾಸಿಗಳ ಧರ್ಮ ಬೌದ್ಧ ಧರ್ಮದ ಹಿನ್ನೆಲೆಯ ಅಶೋಕನ ಸಾಮ್ರಾಜ್ಯವನ್ನು ನಾಶ ಮಾಡಲು ಆ ಮೂಲಕ ತಮ್ಮ ವೈದಿಕ ಪರಂಪರೆಯ ಸಂವಿಧಾನಾತ್ಮಕ ಧರ್ಮ ಸಾಮ್ರಾಜ್ಯವನ್ನು ಸ್ಥಾಪಿಸಿಕೊಳ್ಳಲು "ಗುಪ್ತ ಸಾಮ್ರಾಜ್ಯ" ವನ್ನು ನಿರ್ಮಿಸಿಕೊಂಡು ಅವರ ಕೈಯಲ್ಲಿ ಬೌದ್ಧ ಧರ್ಮವನ್ನು ನಾಶ ಮಾಡಿಸಿ.. ಈ ಮಹಾನ್ ಕಾರ್ಯಕ್ಕಾಗಿ ಈ ಗುಪ್ತರ ಸಾಮ್ರಾಜ್ಯವನ್ನು "ಸುವರ್ಣ ಯುಗ" ಎಂದು ಅಕ್ಷರ ನಮ್ಮ ಮನೆಯ ಸ್ವತ್ತು ಎಂದು ಹೇಳಿಕೊಂಡು ಬರೆದುಕೊಂಡ ಸ್ವಾರ್ಥಿಗಳಲ್ಲವೇ ಇವರು. ಇಂದಿಗೂ ಈ ಮನಸ್ಥಿತಿಯ ಧಾರ್ಮಿಕ ಚಿಂತಕರು ಹಾಗೂ ರಾಜಕೀಯಮನಸ್ಥಿತಿಯನ್ನು ಉಳ್ಳವರು ಈ ಸ್ವಾಚು ವಿಷಯದಲ್ಲಿಯೂ ಇದನ್ನೇ ಮಾಡುತ್ತಿರುವುದು.

ನಾನು ನನ್ನ ಮಿತಿಯಲ್ಲಿ ೧೮೮೧ ರಿಂದ ೧೯೪೭ ರವರೆಗಿನ ಮೈಸೂರು ಸಂಸ್ಥಾನದ ಒಂದಷ್ಟು ತಳಸಮುದಾಯದ ಕುರಿತ ಚರಿತ್ರೆಯನ್ನು ವಸ್ತುನಿಷ್ಠತೆಯ ಚಿಂತನೆಯ ಹಿನ್ನೆಲೆಯಲ್ಲಿ ಮೂಲ ದಾಖಲೆಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಿದ್ದೇನೆ–ಬರೆದಿದ್ದನೆ ಹಾಗೂ ಪುಸ್ತಕ ರೂಪದಲ್ಲಿ ಪ್ರಕಟಿಸಿ ಓದುಗರ ಮನೆ ಮತ್ತು ಮನದಲ್ಲಿ ನೆಲೆಯೂರುವಂತೆ ಮಾಡಿದ್ದೇನೆ .

ಅವುಗಳಲ್ಲಿ "ನಾಲ್ವಡಿ ಕೃಷ್ಣನ ಮೈಸೂರು" (೩೦೦೪), "ನಾಲ್ವಡಿ ಕೃಷ್ಣರಾಜ ಒಡೆ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು" (೩೦೧೨, ದ್ವಿತೀಯ ಮುದ್ರಣ ೨೦೧೬ .ತೃತೀಯ ಮುದ್ರಣ ೧೦೧೯), "ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಕಾಲದ ಮೈಸೂರು ಸಂಸ್ಥಾನ" (೨೦೧೨), " ಜಯ ಚಾಮರಾಜೇಂದ್ರ ಒಡೆಯರ್ ಕಾಲದ ಮೈಸೂರು ಸಂಸ್ಥಾನ" (೨೦೧೬), "ವಸಾಹತು ಕಾಲಘಟ್ಟದ ಮೈಸೂರು ಸಂಸ್ಥಾನ" (೨೦೧೫), ಈ ಎಲ್ಲ ಕೃತಿಗಳು ಸಹ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸುಧಾರಣೆಯನ್ನು ಕುರಿತು ಮಾತನಾಡಿದ್ದಕ್ಕಾಗಿ ವೈದಿಕ ಅಥವಾ ಮೂಲಭೂತ ವಾದಿ ಚರಿತ್ರೆಕಾರರ ವಲಯದಲ್ಲಿ ಶೈಕ್ಷಣಿಕ ಸಂಘಟನೆಗಳಲ್ಲಿ ಹಾಗೂ ಸ್ವಾರ್ಥಕ್ಕಾಗಿ ನಡೆಯುವ ಕೆಲವು ಶೈಕ್ಷಣಿಕ ಸಮ್ಮೇಳನಗಳಲ್ಲಿ ಹೆಚ್ಚಿನ ಚರ್ಚೆಗೆ ಒಳಗಾಗಲಿಲ್ಲ.

ಇದೇ ಮಹಾರಾಜರ ದೇವಾನುದೇವತೆಗಳ ಕಾರ್ಯಗಳು–ಅವರ ತೀರ್ಥ ಯಾತ್ರೆಗಳು–ಅವರು ದೇವಸ್ಥಾನಗಳಿಗೆ ನೀಡಿದ ದಾನ ದತ್ತಿಗಳು . ರಾಜ ರಾಣಿಯರ ದಂಡಯಾತ್ರೆ, ತೀರ್ಥಯಾತ್ರೆ, ವೈಭವಗಳು ಯಥೇಚ್ಛವಾಗಿ ಚರ್ಚೆಗೆ ಒಳಗಾದವು – ಬರೆಯಲ್ಪಟ್ಟವು. ಅಷ್ಟೇ ಅಲ್ಲದೆ ಬಹುಮುಖ್ಯವಾಗಿ ವರ್ಣನಾತ್ಮಕವಾಗಿ ಚರಿತ್ರೆಯ ಭಾಗವಾಗಿ ಸೇರ್ಪಡೆಗೊಂಡವು. ಇನ್ನು ಮೈಸೂರಿನ ದಸರಾವೂ ಅದರ ವೈಭವವನ್ನು ಯಾರೂ ಅನುಭವಿಸುತ್ತಾರೋ ಅವರು ಈ ರಾಷ್ಟ್ರದ–ಈ ದೇಶದ–ಈ ರಾಜ್ಯದ – ಈ ಜಿಲ್ಲೆಯ ಸಾಂಸ್ಕೃತಿಕ ನಾಯಕರಾಗಿಯೇ ಮೆರೆದರು. ಇಂದಿಗೂ ಎಗ್ಗಿಲ್ಲದೆ

ಮೇರೆಯುತ್ತಿದ್ದಾರೆ. ಇವರಿಗೇನು ಗೊತ್ತು ಮೈಸೂರಿನ ಸಂಸ್ಕೃತಿ ಚರಿತ್ರೆ. ತಮ್ಮ ಸ್ವಾರ್ಥಕ್ಕಾಗಿ ನನ್ನ ಮೈಸೂರನ್ನು ನನ್ನ ಮೂಲ ನಿವಾಸಿಗಳು ಕಟ್ಟಿ ಬೆಳೆಸಿದ ನನ್ನ ಮೈಸೂರನ್ನು– ನನ್ನ ಪೂರ್ವಿಕರು ಶತಶತಮಾನಗಳಿಂದ ಪೂಜಿಸಿಕೊಂಡು ಬಂದ ನನ್ನ ಮನೆ ದೇವರಾದ ಚಾಮುಂಡಿಯನ್ನು ಚಾಮುಂಡೇಶ್ವರಿ–ಭುವನೇಶ್ವರಿ–ಕುಸ್ಮಾಡಿನಿ–ಪದ್ಮಾವತಿ–ಬನಶಂಕರಿ–ಕಾತ್ಯಾಯಿನಿ ಯನ್ನಾಗಿ ತಮಗೆ ಅನುಕೂಲವಾಗುವ ಹಾಗೆ ಪರಿವರ್ತನೆ ಮಾಡಿಕೊಂಡು (ತಮ್ಮ ಅನುಕೂಲಕ್ಕೆ ಮತ್ತು ಸಂದರ್ಭಕ್ಕೆ ತಕ್ಕಂತೆ ಪರಿವರ್ತಿಸಿಕೊಂಡು) ತಮ್ಮ ಸ್ವಾರ್ಥಕ್ಕಾಗಿ ದೇವರ ಹೆಸರಿನಲ್ಲಿ ಸಾಂಸ್ಕೃತಿಕ ನಗರಿಯನ್ನಾಗಿ ಮಾಡಿಕೊಂಡರು. ವಿಜಯನಗರ ಪತನವಾದ ಮೇಲೆ ಏಲ್ಲೂ ನೆಲೆಸಲು ಸಾಧ್ಯವಾಗದೆ ಈ ವೈದಿಕರ ಕಣ್ಣಿಗೆ 'ಅಸು'ವಿನ ರೂಪವಾಗಿ ಕಂಡವರೇ ಈ ಮೈಸೂರಿನ ಸೌಮ್ಯ ಸ್ವಭಾವದ ಪಾಳೇಗಾರರು. ದಕ್ಷಿಣದಲ್ಲಿ ಪ್ರಾಕೃತಿಕವಾಗಿ ಸುಂದರವಾದ ಮೈಸೂರಿನ ಕಡೆ ಮುಖ ಮಾಡಿ ಇಲ್ಲಿ ಬಂದು ನೆಲೆ ನಿಂತು ದೇವರು ಮತ್ತು ಧರ್ಮದ ಹೆಸರಿನಲ್ಲಿ ಮೆರೆಯುತ್ತಿದ್ದಾರೆ.

ಮೈಸೂರಿನ ಮೂಲ ನಿವಾಸಿಗಳಾದ ನನ್ನ ಜನ ಊರಿನ ಹೊರಗಿನ ಪುರಂಗಳಲ್ಲಿ ಇಕ್ಕಟ್ಟಿನ ಜೀವನ ನಡೆಸುತ್ತಿದ್ದಾರೆ. ಈ ಮೂಲ ನಿವಾಸಿಗಳ ಕುರಿತ ಚರ್ಚೆ, ಇವರ ಶ್ರಮ ಎಲ್ಲೂ ಯಾವ ಲಿಖಿತ ದಾಖಲೆಗಳಲ್ಲಿಯೂ ಇಲ್ಲ. ಆದರೆ ಈ ಶ್ರಮಜೀವಿಗಳು ಆಡುವ ಮಾತುಗಳಲ್ಲಿ– ಒಗಟುಗಳಲ್ಲಿ–ಆಚರಿಸುವ ಸಂಪ್ರದಾಯಗಳಲ್ಲಿ –ಅಪಾರವಾದ ಚರಿತ್ರೆ ಅಡಗಿದೆ.

ಅದು ಮುದ್ರಣ ಮಾಧ್ಯಮವಾಗಲಿ ಅಥವಾ ಎಲೆಕ್ಟ್ರಾನಿಕ್ ಮಾಧ್ಯಮಗಳಾಗಲಿ ಚರ್ಚೆಗೆ ಎಡೆ ಆಗಲೇ ಇಲ್ಲ. ಏಕೆಂದರೆ ಈ ಎಲ್ಲ ಮಾಧ್ಯಮಗಳ ಸೃಷ್ಟಿಕರ್ತರು ಭಾರತ ದೇಶ ಹಾಗೂ ಈ ಕರ್ನಾಟಕ ರಾಜ್ಯದಲ್ಲಿ ಪ್ರಾಚೀನ–ಮಧ್ಯಕಾಲೀನ–ಆಧುನಿಕ ತಮ್ಮಿಂದ ತಮಗಾಗಿ ಬರೆದುಕೊಂಡ ಈ ಬೂಸಾ ಸಾಹಿತ್ಯವನ್ನು ಬರೆದವರ ವಂಶಸ್ಥರು ತಾನೇ.

ಈ ಬೂಸಾ ಮಾಧ್ಯಮಗಳಿಗೆ ಶಕ್ತಿ ಇಲ್ಲ. ಭಾರತದ ಶಕ್ತಿ ವಂತರನ್ನು ತೋರಿಸುವ ಅವರ ಬಗ್ಗೆ ಮಾತನಾಡುವ ಆ ಮೂಲಕ ರಾಷ್ಟ್ರ ಕಟ್ಟುವ ತಾಕತ್ತು ಸಹ ಇಲ್ಲ. ಭಾರತದಲ್ಲಿ ಧರ್ಮ ರಾಜಕಾರಣಕ್ಕಾಗಿ ಒಂದು ವರ್ಗ ಸೃಷ್ಟಿಸಿದ ಅಮಾನವೀಯ ಸಂಪ್ರದಾಯದ ಚರ್ಚೆಗಳೇ ಇಂದಿನ ಪುಸ್ತಕ ಹಾಗೂ ಎಲೆಕ್ಟ್ರಾನಿಕ್ ಮೀಡಿಯಾಗಳಲ್ಲಿ ಪೂರಕವಾಗಿ ವೈಭವ ಪ್ರೇರಿತವಾಗಿ ಚರ್ಚೆಯಾಗಿ ಜನರನ್ನು ಚರಿತ್ರೆ ಹೀನರಾಗಿ ಮಾಡುತ್ತಿರುವುದು ದುರಂತ ಅಲ್ಲದೆ ಇನ್ನೇನನ್ನಬೇಕು ನಾನು.

ದುರಂತವೆಂದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು, ಅವರ ಸಾಂಸ್ಕೃತಿಕ ಸಾಧನೆಯನ್ನು ಎಲ್ಲೂ ಹೋಗಳದ.. ಅಥವಾ ಅವರ ಏಳ್ಗೆಯನ್ನು ಬಯಸದ ಹಿಂದಿನ ಅರಮನೆಯ ವಾರಸುದಾರ ಪ್ರಜೆಗಳು ಜಯಚಾಮರಾಜೇಂದ್ರ ಒಡೆಯರ್ ಅವರ ಕುರಿತು ಮೃದು ಧೋರಣೆಯನ್ನು ಹೊಂದಿರುವುದು ಸ್ವಾಭಾವಿಕವಾದದ್ದು

ಆಗಿದೆ. ಕಾರಣ ಇಷ್ಟೇ ....ಇಂದಿನ ಈ ಅರಮನೆಯ ಪ್ರಜೆಗಳು ನಾಲ್ವಡಿ ಕೃಷ್ಣರಾಜ ಒಡೆಯರ ಅವರ ವಂಶಸ್ಥರು ಎಂದು ಹೇಳಿಕೊಳ್ಳುವುದಕ್ಕಿಂತಲೂ ಹೆಚ್ಚಾಗಿ ಜಯಚಾಮರಾಜೇಂದ್ರ ಒಡೆಯರ್ ಅವರ ವಂಶಸ್ಥರು ಎಂದು ಹೇಳಿಕೊಂಡು ಬರುವಲ್ಲಿ ಇಚ್ಛೆಪಡುತಿರುವುದು .

ಇದಕ್ಕೆ ಕಾರಣ ಜಯಚಾಮರಾಜೇಂದ್ರ ಒಡೆಯರ್ ಅವರ ಸ್ವಂತ ಮಗನ ಹೆಂಡತಿ ಇವತ್ತಿನ ಪ್ರಮೋದಾ ದೇವಿಯವರು ಹಾಗೂ ಸ್ವಂತ ಮಗಳ ಮಗ ಯದುವೀರ್ ಒಡೆಯರ್ ಅವರು ಆಗಿರುವುದು. ಇದರಿಂದಾಚೇಗೂ ಕೈಮೀರಿ ನಾನು ಮೇಲೆ ಪ್ರಸ್ತಾಪಿಸಿರುವ ಹಾಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕುರಿತು ಹಾಗೂ ಜಯಚಾಮರಾಜೇಂದ್ರ ಒಡೆಯರ್ ಅವರ ಕುರಿತು ಸಾಮಾಜಿಕ ಮತ್ತು ಧಾರ್ಮಿಕ ಅಂಶಗಳು ಕೆಲಸ ಮಾಡುತ್ತಿವೆ.

ಈ ಧಾರ್ಮಿಕ ಮತ್ತು ಸಾಮಾಜಿಕ ಅಂಶಗಳ ಸಂಘ–ಸಂಸ್ಥೆಗಳು ಹಾಗೂ ಇಂದಿನ ರಾಜಕೀಯವಂತೂ ಪ್ರಬಲವಾಗಿಯೇ ನನ್ನ ಮೇಲಿನ ವಿಚಾರಗಳನ್ನು ತನ್ನ ಒಡಲಾಳದಲ್ಲಿ ಸೇರ್ಪಡೆಯನ್ನು ಮಾಡಿಕೊಂಡಿದೆ. ಇದಕ್ಕೆ ಒಂದಷ್ಟು ನಿದರ್ಶನ ಗಳನ್ನು ನೀಡುವುದಾದರೆ

೧. ನಾಲ್ವಡಿ ಅವರ ಈ ಎಲ್ಲ ಸಾಮಾಜಿಕ ಸಾಂಸ್ಕೃತಿಕ ಕೊಡುಗೆಗಳನ್ನು ಗಮನಿಸಿ ನಾವು ಅವರಿಗೆ ಮರಣೋತ್ತರವಾಗಿ "ಭಾರತ ರತ್ನ"ಪ್ರಶಸ್ತಿಯನ್ನು ಕೊಡಬೇಕೆಂದು ಇಡೀ ದಲಿತ ಸಂಘಟನೆಗಳು ಚಳವಳಿಯನ್ನು ಮಾಡಿದಾಗ ಅರಮನೆ ಯವರು ಸ್ಪಂದಿಸಿದ್ದಕ್ಕೆ ಉದಾಹರಣೆಗಳಿಲ್ಲ.

೨. ಬಹುಮುಖ್ಯವಾಗಿ ಅಂಬೇಡ್ಕರ್ ಈ ಸ್ವಾತಂತ್ರ್ಯ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಅಸ್ಪೃಶ್ಯರಿಗೆ ಮುಕ್ತವಾದ ಶಿಕ್ಷಣವನ್ನು ನೀಡಿದ ಫಲವಾಗಿ ಉದಯಿಸಿದ ಈ ನೆಲದ ಮೂಲ ನಿವಾಸಿಗಳ ವಿದ್ವಾಂಸರುಗಳು ಶತಶತಮಾನಗಳಿಂದ ವಂಚಿತರರಾಗಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಮಾಜಿಕ–ಸಾಂಸ್ಕೃತಿಕ ಚಿಂತನೆಯನ್ನು ಅಕ್ಷರ ರೂಪಕ್ಕೆ ಹೊರತಂದು ದಲಿತ ಮಹತ್ವದ ಜನಮುಖಿ ಅಂಶಗಳೊಂದಿಗೆ ಆಳುವ ಮತ್ತು ಪುರಾತಶಾಹಿ ವರ್ಗವನ್ನು ಪ್ರಶ್ನೆ ಮಾಡಿದಾಗ, ಇದಕ್ಕೆ ಎಂದಿಗೂ ಅರಮನೆ ನಾಲ್ವಡಿ ಅವರ ಪ್ರಗತಿಯ ಕುರಿತು ಧ್ವನಿ ಕೂಡಿಸಲಿಲ್ಲ.

೩. ಮೈಸೂರು ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರಿಡಬೇಕು ಎಂದು ದಲಿತ ಹಾಗೂ ಪ್ರಗತಿಪರ ಸಂಘಟನೆಗಳು ಹೋರಾಟಕ್ಕಿಳಿದಾಗ ಅರಮನೆಯವರು ತಟಸ್ಥವಾಗಿದ್ದರು. ಮುಂದುವರಿದು ವಿಮಾನ ನಿಲ್ದಾಣಕ್ಕೆ ಜಯ ಚಾಮರಾಜೇಂದ್ರ ಒಡೆಯರ್ ಅವರ ಹೆಸರಿಡಲು ಬಯಸಲು ಇಚ್ಛಿಸಿದ್ದರು. ಈಗಿನ ಯದುವೀರರು ಬಹಿರಂಗವಾಗಿಯೇ ಜಯಚಾಮರಾಜೇಂದ್ರ ಒಡೆಯರ್ ಅವರ ಹೆಸರನ್ನು ಪ್ರಸ್ತಾಪಿಸಿದರು.

೪. ನಾಲ್ವಡಿ ಅವರು ಕೊಟ್ಟ ಮೀಸಲಾತಿ ಮತ್ತು ಪಂಚಮ ಶಾಲೆಗಳಿಂದ ಶಿಕ್ಷಣ ಪಡೆದ ದಲಿತರು ನಾಲ್ವಡಿ ಕೃಷ್ಣರಾಜ ಒಡೆಯರ ಅವರ ಕುರಿತು ಪುಸ್ತಕ ಬರೆಯುವ ವರಿಗೂ ನಾಲ್ವಡಿ ಅವರನ್ನು ಬೌದ್ಧಿಕವಾಗಿ ಹೆಸರಿಲ್ಲದಂತೆ ಮಾಡಿದ್ದು ಇದೇ ಅರಮನೆ ಯವರು ಮತ್ತು ಅರಮನೆಗೆ ಪೂರಕವಾದ ಪಂಡಿತ ಪಾಮರರು.

ಆದರೆ ಇವರು ನಾಲ್ವಡಿಯವರು ಬದುಕಿದ್ದಾಗ ದೊಡ್ಡ ದೊಡ್ಡ ಬಡಾವಣೆ–ಪುರಂಗಳನ್ನು ನಿರ್ಮಿಸಿಕೊಂಡು ಬಂಗಲೆಯನ್ನು ನಿರ್ಮಿಸಿಕೊಂಡವರು. ಸಭೆ ಸಮಾರಂಭ ಧಾರ್ಮಿಕ ಆಚರಣೆಗಳಲ್ಲಿ ಹೊಟ್ಟೆ ತುಂಬಾ ಉಂಡು ತೆಗೆದವರು. ಆದರೆ ನಾಲ್ವಡಿ ಅವರ ಕುರಿತು ವಸ್ತುನಿಷ್ಠವಾದ ಅಧ್ಯಯನಗಳನ್ನು ಅಂದರೆ ನಾಲ್ವಡಿ ಯವರು ನಿಧನರಾದ (೧೯೪೦) ಐವತ್ತು ವರ್ಷಗಳ ನಂತರ ಅಂದರೆ, ೧೯೯೦ ರಿಂದ ಈಚೆಗೆ ಅವರ ಸಾಂಸ್ಕೃತಿಕವಾದ–ಸಮಾಜಪರವಾದ–ಕೆಲಸ ಕಾರ್ಯಗಳು ಜನ ಮುಟ್ಟುವ ಹಾಗೆ ನನ್ನಂತಹ ಒಂದಷ್ಟು ಸಂಶೋಧಕರು ಬರೆದರು. ಯಾರು ಅಕ್ಷರವನ್ನು ಪಾರಂಪರಿಕ ಸ್ವತ್ತೆಂದು ಮಾಡಿಕೊಂಡಿದ್ದರೊ ಅವರು ಯಾರೊ ಸಹ ಬರೆದಯಲಿಲ್ಲ.

ನಾಲ್ವಡಿಯವರ ಈ ಎಲ್ಲ ಜನಪರ ಕೆಲಸಗಳನ್ನು ಮೊದಲು ಸಂಶೋಧನಾತ್ಮಕವಾಗಿ ಮಾಹಿತಿ ಸಂಗ್ರಹಿಸಿ ಬರೆಯಲ್ಪಟ್ಟದ್ದು ಮತ್ತು ಅವರನ್ನು ಇಂದಿನ ಸಮಾಜಕ್ಕೆ ಜನಮುಖಿ ಗೊಳಿಸಿದ್ದು ನನ್ನನ್ನೂ ಒಳಗೊಂಡಂತೆ ನನ್ನ ಮಿತ್ರರಾದ ಇಂದಿನ ಚಾಮರಾಜನಗರದ ಜಿಲ್ಲಾಧಿಕಾರಿಯಾಗಿರುವ ಎಂ ಆರ್ ರವಿ ಹಾಗೂ ನನ್ನ ಬಂಧು ಎಂ ಎಸ್ ಅನಿತಾ ಇತ್ಯಾದಿ ಇತ್ಯಾದಿ. ಹಾಗೂ ಇತ್ತೀಚಿನ ನನ್ನ ವಿದ್ಯಾರ್ಥಿ ಬಳಗಗಳು .ಇದೆಲ್ಲವೂ ಸಹ ಆಗುತ್ತಿರುವುದು ದಲಿತರಿಂದ ಎಂಬುದು ವಿಶೇಷ. ಈ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕುರಿತ ಈ ಪ್ರಗತಿಪರ ಆಲೋಚನೆ ಮತ್ತು ಅವರ್ನೆಸ್ ಇವತ್ತಿನ ಆಳುವ ವರ್ಗಕ್ಕೆ ಹಾಗೂ ನಾಲ್ವಡಿಯವರನ್ನು ಒಂದಷ್ಟು ವಿರೋಧಿಸುವ ಅರಮನೆ ಯವರಿಗೆ ಸಹಿಸಲಾಗದ ತುತ್ತಾಗಿದೆ. ಜೊತೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ದಲಿತರು ಹೆಚ್ಚಿನ ಪ್ರಮಾಣದಲ್ಲಿ ಆರಾಧಿಸುತ್ತಿರುವುದು ಸಹ ಇದಕ್ಕೆ ಅಪವಾದವಾಗಿದೆ.

೫. ಮೈಸೂರಿನಲ್ಲಿ ಮರೆಯಾಗಿದ್ದ (ದಾನ–ದತ್ತಿ–ಅರಮನೆ ಮತ್ತು ದಸರಾ ವೈಭವಗಳಿಗೆ ಮೀಸಲಾಗಿದ್ದ) ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಪುನಶ್ಚೇತನ ಗೊಳಿಸಿದೆ ದಲಿತ ವಿದ್ವಾಂಸರು–ದಲಿತ ಸಂಘಟಕರು ಮತ್ತು ದಲಿತ ರಾಜಕಾರಣಿಗಳು. ಇವರನ್ನು ಅಂದಿನ ಪಾರಂಪರಿಕ ಪ್ರಭುತ್ವ ಹಾಗೂ ಸಾಂಪ್ರದಾಯಿಕ ಧರ್ಮದ ಹಿನ್ನೆಲೆಯ ಸಮಾಜ ಹೇಗೆ ದಲಿತರನ್ನು ಕಂಡಿತ್ತೋ ಹಾಗೆಯೇ ದಲಿತ ಹೋರಾಟ ಗಾರರನ್ನು–ದಲಿತ ವಿದ್ವಾಂಸರನ್ನು ಅರಮನೆ ಕಂಡಿರುವುದು ದುರಂತವೇ ಸರಿ. ಇವರ ವಸ್ತುನಿಷ್ಠವಾದ ಸಂಶೋಧನಾತ್ಮಕ ಸಾಹಿತ್ಯ ಮತ್ತು ಜನಪರವಾದ ಹೋರಾಟಗಳನ್ನು

ಸಹ ಅಸ್ಪೃಶ್ಯತೆಯ ಹಿನ್ನೆಲೆಯೊಂದಿಗೆ ಗಮನಿಸುತ್ತಿರುವುದು ದುರಂತವೇ ಸರಿ. ಎಷ್ಟೋ ಸಂದರ್ಭದಲ್ಲಿ.

ಇಂದಿಗೂ ಸಹ ನನ್ನ ದಲಿತ ಜನಾಂಗ ಅರಮನೆಯ ಪಾಲಿಗೆ "ಯೂಸ್ ಅಂಡ್ ಥ್ರೋ" ಆಗಿಯೇ ಉಳಿದಿದೆ. ಕೆ.ಆರ್.ಎಸ್.ನಲ್ಲಿ ನಿಜವಾಗಲೂ ಟಿಪ್ಪು ಸುಲ್ತಾನ್ ಮತ್ತು ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಸ್ಪ್ಯಾಚುಗಳು ಮುಖ್ಯವಾಗಿ ಅಲ್ಲಿರಬೇಕು. ನಿಮಗೆಲ್ಲ ಗೊತ್ತಿರುವ ಹಾಗೆ ಇಂದು ಕೆ.ಆರ್.ಎಸ್. ನಿರ್ಮಾಣವಾಗಿರುವ ಸ್ಥಳದಲ್ಲಿ ಈ ರಾಷ್ಟ್ರ ಕಂಡ ಪ್ರಪ್ರಥಮ ಸ್ವಾತಂತ್ರ್ಯ ಪ್ರೇಮಿ ಹಾಗೂ ಸಮ ಸಮಾಜದ ಚಿಂತಕ ಟಿಪ್ಪುಸುಲ್ತಾನ್ ಮೊದಲು ಅಣೆಕಟ್ಟನ್ನು ನಿರ್ಮಾಣ ಮಾಡಲು ಅಡಿಗಲ್ ಹಾಕಿದ್ದ. ಅದಕ್ಕೆ ಪೂರಕವಾದ ಶಾಸನವನ್ನು ಇಂದಿನ ಅಣೆಕಟ್ಟಿನ ಭಾಗದಲ್ಲಿ ದಾಖಲಿಸಿರುವುದು ಚರಿತ್ರೆಯ ಭಾಗವೇ ಆಗಿದೆ.

ದೇಶೀಯ ಮತ್ತು ವಿದೇಶೀಯ ಕುತಂತ್ರದಿಂದ ಟಿಪ್ಪು ಸುಲ್ತಾನ್ ಅಂದು ಯುದ್ಧದಲ್ಲಿ ವೀರ ಮರಣ ಹೊಂದದೆ ಹೋಗಿದ್ದರೆ ಇಂದು ಆ ಪ್ರದೇಶದಲ್ಲಿಯೇ "ಟಿಪ್ಪುಸುಲ್ತಾನ್ ಹೆಸರಿನ" ಅಣೆಕಟ್ಟು ನಿರ್ಮಾಣಗೊಳ್ಳುತ್ತಿತ್ತು. ಆದರೆ ಅಧಿಕಾರದ ಆಸೆಗಾಗಿ ದೇಶೀಯರ ಕುತಂತ್ರ ಮತ್ತು ಕೋರಿಕೆಯಿಂದ ವಿದೇಶಿಯರು ಟಿಪ್ಪುವನ್ನು ಸೋಲಿಸಿದರು–ಸಾಯಿಸಿದರು–ಬರ್ಬರವಾಗಿ ಹತ್ಯೆ ಮಾಡಿದ್ದರು. ದೇಶಕ್ಕಾಗಿ ಯುದ್ಧರಂಗದಲ್ಲಿ ಪ್ರಾಣತ್ಯಾಗ ಮಾಡಿದ ಇಂಥ ಸಾವು ಭಾರತದ ಸಾಂಪ್ರದಾಯಿಕ ರಾಷ್ಟ್ರೀಯವಾದಿ ಚರಿತ್ರೆಗಾರರಿಗೆ ವೀರ ಸಾವು ಆಗಲೇ ಇಲ್ಲ. ಕಾರಣ ಇಷ್ಟೇ ಆತನು ಭಾರತಕ್ಕೆ ಬಂದು ಇಲ್ಲಿನ ಮೂಲ ನಿವಾಸಿಗಳ ಧರ್ಮ ಬೌದ್ಧ ಧರ್ಮವನ್ನು ವಿಷ್ಣು ಧರ್ಮವಾಗಿ ಪರಿವರ್ತಿಸಿಕೊಂಡು ಭದ್ರವಾಗಿ ನೆಲೆಯೂರಿದ್ದ ಆರ್ಯರನ್ನು ಎದುರಾಕಿ ಕೊಂಡಿದ್ದು –ಅವರನ್ನು ಮೂಲೆ ಗುಂಪನ್ನಾಗಿ ಮಾಡಿದ್ದು ಒಂದಾದರೆ, ವೈದಿಕರೇ ಬರೆದಿರುವ ಹಾಗೆ ಭಾರತದ ಮೇಲೆ ದಾಳಿಮಾಡಿದ 'ಮುಸ್ಲಿಂ' ಸಮುದಾಯಕ್ಕೆ ಸೇರಿದವನು ಎಂಬ ಏಕೈಕ ಕಾರಣದಿಂದಾಗಿ. (ಇಂದಿನ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಗಲಭೆಗಳಿಂದಾಗಿ ಹಿಂದೂ ಮತ್ತು ಇಸ್ಲಾಂ ಧರ್ಮೀಯರ ನಡುವೆ ಭಾರತದಲ್ಲಿ ಉಂಟಾಗಿರುವ ಸಾಂಸ್ಕೃತಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ)

ಮಿತ್ರರೇ ನಮ್ಮ ಭಾರತದ ಚರಿತ್ರೆಯಲ್ಲಿ "ಹುಟ್ಟು" ಮತ್ತು "ಸಾವು "ಎರಡೂ ಸಹ ಒಂದೊಂದು ಚರಿತ್ರೆಯ ಪವಿತ್ರ ಭಾಗಗಳೇ. ಒಬ್ಬರು ಹುಟ್ಟಿನಿಂದ ಚಾರಿತ್ರಿಕ ವ್ಯಕ್ತಿಯಾದರೆ ಕೆಲವೇ ಕೆಲವರು "ಸಾವಿನಿಂದ" ಚಾರಿತ್ರಿಕ ವ್ಯಕ್ತಿಯಾಗುತ್ತಾರೆ.

ಅದರಲ್ಲಿ ಹುಟ್ಟಿನಿಂದ ಚಾರಿತ್ರಿಕ ವ್ಯಕ್ತಿಯಾದರು ವಿಶ್ವ ಜ್ಞಾನಜ್ಯೋತಿ–ವಿಶ್ವರತ್ನ ನಮ್ಮ ಹೃದಯ ವಾರಸುದಾರ ಬಾಬಾಸಾಹೇಬ್ ಅಂಬೇಡ್ಕರ್ ಅವರು. ಅವರ ಜನನ ದಿಂದಾದ ಭಾರತದ ಬಹುದೊಡ್ಡ ಸಾಂಸ್ಕೃತಿಕ ಪಲ್ಲಟ ಉಂಟಾಯಿತು ...ಅವೆಲ್ಲವೂ ಚರಿತ್ರೆಯ ಭಾಗ. ಅದಕ್ಕಾಗಿ ಹಾಗೆಯೇ, ಟಿಪ್ಪು ಸುಲ್ತಾನ್ನನ ಮರಣ.

ಟಿಪ್ಪು ಸುಲ್ತಾನ್ ಜನನಗಿಂತಲೂ ಮರಣದಲ್ಲಿಯೇ ಚರಿತ್ರೆಯಲ್ಲಿ ಉನ್ನತ ಸ್ಥಾನವನ್ನು ಪಡೆದವನು.

ಟಿಪ್ಪು ಮರಣದ ನಂತರವೆ ಈ ಭಾರತದ ಸಾಂಸ್ಕೃತಿಕ ಮತ್ತು ರಾಜಕೀಯ ಚಿತ್ರಣವೇ ಬದಲಾಹಿತು. ಇಂದಿನ ಭಾರತ ಸ್ವತಂತ್ರ ಭಾರತವಾಗಲು ಟಿಪ್ಪುವಿನ ಮರಣವೂ ಒಂದು ಕಾರಣವಾಯಿತು ಎಂಬುದನ್ನು ಬಹುಸೂಕ್ಷ್ಮವಾಗಿ ಚರಿತ್ರೆ ವಿದ್ವಾಂಸರು ಹಾಗೂ ಇವತ್ತಿನ ಚಿಂತಕರು ಗ್ರಹಿಸಬೇಕಾಗಿದೆ. ಕಾವೇರಿ ನದಿಗೆ ಅಡ್ಡಲಾಗಿ ಪ್ರಪ್ರಥಮವಾಗಿ ಇದೇ ಸ್ಥಳದಲ್ಲಿ ಅಣೆಕಟ್ಟು ನಿರ್ಮಿಸಲು ಅಡಿಗಲ್ಲು ಹಾಕಿದ್ದು ಸಹ ಟಿಪ್ಪುವೇ. ಇಂತಹ ವ್ಯಕ್ತಿಯ ಸ್ಪ್ಯಾಚುವನ್ನು ಇಂದಿನ ನಮ್ಮ ಐತಿಹಾಸಿಕ ಕೆ ಆರ್ ಎಸ್ ನಲ್ಲಿ ಹಾಕಲು ಇವತ್ತಿನ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ನಮ್ಮ ಸಾಂಸ್ಕೃತಿಕ ಮನಸ್ಸುಗಳಿಗೆ ಇಷ್ಟ ಇಲ್ಲ. ಏಕೆಂದರೆ ಅವರೊಬ್ಬ 'ಮುಸ್ಲಿಂ'. ಆದರೆ ಸರ್ ಎಂ ವಿಶ್ವೇಶ್ವರಯ್ಯನವರ ಸ್ಪ್ಯಾಚುಅಲ್ಲಿ ಬೃಹತ್ ಆಕಾರವಾಗಿ ಬೇಕು .ಏಕೆಂದರೆ ಅವರೊಬ್ಬ 'ಬ್ರಾಹ್ಮಣರು' ಇನ್ನು ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಬಗ್ಗೆ ಬರೆಯಲೇ ಬೇಕಾದ ಒಂದಷ್ಟು ವಿಷಯಗಳು. ಹಾಗೂ ಕೆ ಆರ್ ಎಸ್ ನಲ್ಲಿ ಹಾಕಲೇ ಬೇಕಾದ ಸ್ಪ್ಯಾಚುಗಳಲ್ಲಿ ಮುಖ್ಯವಾದದ್ದು ಇದೇ ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಅವರದ್ದು ಎಂಬುದು ನನ್ನ ಪ್ರಬಲವಾದ ಪ್ರತಿಪಾದನೆ ಕೆ ಆರ್ ಎಸ್ ನಿರ್ಮಾಣದ ಹಂತದಲ್ಲಿ ನಾಲ್ವಡಿಯವರ ಪಾತ್ರವನ್ನು ನಾನು ಮತ್ತೆ ಮತ್ತೆ ಹೇಳುವ ಅವಶ್ಯಕತೆ ಇಲ್ಲ. ಅವರೇ ಅದಕ್ಕೆ ಅಪ್ಪ–ಅಮ್ಮ–ಬಂಧು–ಬಳಗ–ಎಲ್ಲವೂ ಸಹ ಇದಕ್ಕೆ ಆಗಿದ್ದಾರೆ.

ಕೆ ಆರ್ ಎಸ್ ನಿರ್ಮಾಣದ ಅಲ್ಪಕಾಲಿಕ ಮಿತ್ರರಾಗಿ ಕೆಲಸ ಮಾಡಿದವರು ಸರ್ ಎಂ ವಿಶ್ವೇಶ್ವರಯ್ಯನವರು, ಆದರೆ... ದೀರ್ಘಕಾಲಿಕ ಮಿತ್ರರಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಹೆಗಲಿಗೆ ಹೆಗಲು ಕೊಟ್ಟು ದುಡಿದವರು ಸರ್ ಮಿರ್ಜಾ ಇಸ್ಮಾಯಿಲ್ ಅವರು. ಕೆ ಆರ್ ಎಸ್ ತನ್ನಬಾಲ್ಯ ವ್ಯವಸ್ಥೆಯನ್ನು ಪೂರ್ಣಗೊಳಿಸಿಕೊಂಡು ಪ್ರಾಯ ಮತ್ತು ವೃದ್ಧಾಪ್ಯವನ್ನು ಕಂಡುಕೊಳ್ಳುವ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಜನಪರ ದಿವಾನರಾಗಿ ಕೆಲಸ ಮಾಡುತ್ತಿದ್ದವರು ನಮ್ಮೆಲ್ಲರ ನೆಚ್ಚಿನ ಸಮಾಜಮುಖಿ ಚಿಂತನೆಯನ್ನು ಮೈಗೂಡಿಸಿಕೊಂಡಿದ್ದ ಮಿರ್ಜಾ ಇಸ್ಮಾಯಿಲ್ ಅವರು. (ಹೆಚ್ಚಿನ ಮಾಹಿತಿಗೆ "ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಕಾಲದ ಮೈಸೂರು ಸಂಸ್ಥಾನ" ಎಂಬ ನನ್ನ ರಚನೆ ಮತ್ತು ಸಂಪಾದಕತ್ವದ ಕೃತಿಯನ್ನು ನೋಡಬಹುದು).

ಇಂತಹ ಮಿರ್ಜಾ ಇಸ್ಮಾಯಿಲ್ ಬಗ್ಗೆ ಅವರೇ ಬರೆದ "ಮೈ ಲೈಫ್" ಎಂಬ ಒಂದು ಸಣ್ಣ ಕೃತಿ ಹಾಗೂ ಬೆಂಗಳೂರಿನ ನಾರಾಯಣರಾವ್ ಅವರು ಬರೆದ ಸಣ್ಣ ಮಾಹಿತಿ ಪ್ರಧಾನವಾದ "ಮಿರ್ಜಾ ಇಸ್ಮಾಯಿಲ್" ಎಂಬ ಕೃತಿಯನ್ನು ಬಿಟ್ಟರೆ ಇದು ವರೆಗೂ ಯಾರೂ ಸಹ ಒಂದು ಪುಸ್ತಕವನ್ನು ಸಹ ಅವರ ಕುರಿತು ಬರೆದು ಪ್ರಕಟಿಸಿರಲಿಲ್ಲ.

ಇಂತಹ ಒಬ್ಬಜನಪರ ಮತ್ತು ಮಹಾರಾಜರ ಆಸೆಗಳಿಗೆ ನೀರೆರೆದ ಮಿರ್ಜಾ ಇಸ್ಮಾಯಿಲ್ ಅವರು (೧೯೨೬–೧೯೪೦) ಈ ದೇಶದ ಮೂಲ ನಿವಾಸಿಗಳ ಅಭಿವೃದ್ಧಿಗೆ ಹಾಗೂ ಅವರ ಸಾಂಸ್ಕೃತಿಕ ಪ್ರಗತಿಗೆ ತಮ್ಮ ದಿವಾನ್ ಎಂಬ ಪದವಿಯ ಅಧಿಕಾರವನ್ನು ಮೀಸಲಿಟ್ಟರು . ತಮ್ಮ ದಿವಾನ್ ಪದವಿಯಲಿ ಸಾಂಸ್ಕೃತಿಕ ಪ್ರಗತಿಯ ಚಿಂತನೆಗಳನ್ನು ಮೈಗೂಡಿಸಿಕೊಂಡು ಆಳ್ವಿಕೆ ಮಾಡಿದ ಮಿರ್ಜಾ ಇಸ್ಮಾಯಿಲ್ ಅವರು ಜೀವನ ಕುರಿತು ನಾನು (ಪ್ರೊ ಎನ್. ಚಿನ್ನಸ್ವಾಮಿ ಸೋಸಲೆ) ಹೇಳನೂರ ಐವತ್ತು ಪುಟಗಳ ಸಮಗ್ರವಾದ ಇತಿಹಾಸವನ್ನು ಹೊರ ಚೆಲ್ಲುವ ಕೃತಿಯನ್ನು ಹೊರತಂದೆ . ಅವರ ಕಾಲದ ಮೈಸೂರು ಸಂಸ್ಥಾನದ ಚಾರಿತ್ರಿಕ ಇತಿಹಾಸವನ್ನು ಅನಾವರಣಗೊಳಿಸುವ "ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಕಾಲದ ಮೈಸೂರು ಸಂಸ್ಥಾನ" ಎಂಬ ಪುಸ್ತಕವನ್ನು ನಾನೇಕೆ ಇಷ್ಟಪಟ್ಟು ಮಾಡಿದೆ ಎಂದರೆ ನಮ್ಮ ಭೀಮರು ನಮಗೆ ಹಾಕಿಕೊಟ್ಟ

'ಇತಿಹಾಸವನ್ನು ಮರೆತವರು ಇತಿಹಾಸವನ್ನು ನಿರ್ಮಿಸಲಾರರು' ಎಂಬ ನುಡಿಗಟ್ಟಿನ –ನೆಲ ಸಂಸ್ಕೃತಿಯ ಮಾರ್ಗದರ್ಶನದ ಫಲವೇ ಎಂಬುದು ನನ್ನ ಅಭಿಪ್ರಾಯ. ೧೯೨೬ ರಿಂದ ೧೯೪೧ ವರೆಗೆ ಅಂದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಜನಪರ ಕೆಲಸವನ್ನು ಉದ್ವೇಗದಿಂದ ಆರಂಭ ಮಾಡಿದ ದಿನಗಳಿಂದ ಅವರು ಅಂತಿಮವಾಗಿ ನಿಧನ ಆಗುವವರೆಗೂ ಅವರ ಎಲ್ಲ ಕೆಲಸಗಳಿಗೂ ಹೆಗಲಿಗೆ ಹೇಗಲಾಗಿ ನಿಂತವರು ಮಿರ್ಜಾ ಇಸ್ಮಾಯಿಲ್ ಎಂಬುದನ್ನು ಮರೆಯಬಾರದು .

ದಲಿತರಿಗೆ ಶಿಕ್ಷಣ ನೀಡುವ ವಿಷಯ ಆಗಬಹುದು. ಅವರಿಗೆ ಮೀಸಲಾತಿಯ ಸೌಲಭ್ಯವನ್ನು ಕಲ್ಪಿಸುವುದರಲಾಗಬಹುದು. ಕೆ ಆರ್ ಎಸ್ ನಿರ್ಮಾಣವನ್ನು ಪೂರ್ಣ ಗೊಳಿಸಿ ಅದರ ಮುಂದೆ ಬೃಹತ್ತಾದ ಬೃಂದಾವನವನ್ನು ನಿರ್ಮಾಣ ಮಾಡುವುದರಲ್ಲಿ ಹಾಗೂ ಬಹುಮುಖ್ಯವಾಗಿ ಕೆ ಆರ್ ಎಸ್ ಅಣೆಕಟ್ಟೆಯ ನಂತರ ಬೃಹತ್ ಪ್ರಮಾಣದಿಂದ ಹಿಡಿದು, ಸಣ್ಣ ಪ್ರಮಾಣದ ಕಾಲುವೆಗಳನ್ನು ನಿರ್ಮಾಣ ಮಾಡಿ ನೀರಾವರಿ ವ್ಯವಸ್ಥೆ ಯನ್ನು ಸುಗಮಗೊಳಿಸಿ ಅಣೆಕಟ್ಟಿನ ಮುಂದಿನ ಬರಡು ಭೂಮಿಯನ್ನು ಫಲವತ್ತಾದ ಭೂಮಿಯನ್ನಾಗಿ ಫಸಲು ಬೆಳೆಯಲು ಅನುವು ಮಾಡಿಕೊಟ್ಟ ಕೀರ್ತಿ ಮಿರ್ಜಾ ಇಸ್ಮಾಯಿಲ್ ಅವರಿಗೆ ಸಲ್ಲುತ್ತದೆ.

ಇಂತಹ ಮಹಾನ್ ಸಾಂಸ್ಕೃತಿಕ ಚಿಂತಕ ಮತ್ತು ಸೇವಕನ ಕುರಿತು ನಮ್ಮ ಮಂಡ್ಯ ನಗರದಲ್ಲಾಗಲಿ–ಮೈಸೂರು ನಗರದಲ್ಲಾಗಲಿ–ಬೆಂಗಳೂರು ನಗರದಲ್ಲಾಗಲಿ –ಇನ್ನಿತರೆ ಯಾವುದೇ ಭಾಗದಲ್ಲಾಗಲಿ ಒಂದು ಮುಖ್ಯ ರಸ್ತೆಗೂ ಹೆಸರಿಲ್ಲ-ಸರ್ಕಲ್‌ಗಳಿಗೂ ಹೆಸರಿಲ್ಲ–ಯಾವ ಭವನವೂ ಇಲ್ಲ–ಅವರ ಹೆಸರಿನ ಒಂದು ಬಡಾವಣೆಯೂ ಇಲ್ಲ–ಯಾವ ಅಲಂಕಾರವೂ ಇಲ್ಲ–ಯಾವ ಪ್ರಶಸ್ತಿಯೂ ಇಲ್ಲ-ಯಾಕೆ ಎಂಬುದನ್ನು ನಾನು ಮತ್ತೆ ಮತ್ತೆ ಹೇಳುವ ಅವಶ್ಯಕತೆ ಇಲ್ಲ ಅವರೊಬ್ಬ

'ಮುಸ್ಲಿಂ' ಅಷ್ಟೇ. ಅವರು ದಿವಾನರಾಗಿದ್ದಾಗ ಇದೇ ವೈದಿಕ ಪರಂಪರೆಯವರು ಅವರಿಗೆ ಕೊಟ್ಟ ತೊಂದರೆಗಳನ್ನು ನನ್ನ ಕೃತಿಯಲ್ಲಿ ಎಳೆ–ಎಳೆಯಾಗಿ ಚರ್ಚಿಸಲಾಗಿದೆ.

ಅದು ಬೆಂಗಳೂರಿನ ಗಣಪತಿ ಗಲಾಟೆ ಆಗಬಹುದು ಅಥವಾ ಅಂಬಾರಿಯ ಮೇಲೆ ನಾಲ್ವಡಿ ಮಹಾರಾಜರು ಇವರನ್ನು ಕೂರಿಸಿಕೊಂಡಾಗ ಚಪ್ಪಲಿಯನ್ನು ಎಸೆದ ಪ್ರಸಂಗ ಆಗಬಹುದು ಇತ್ಯಾದಿ ಇತ್ಯಾದಿಗಳು. ಈ ಘಟನೆಗಳೆಲ್ಲವೂ ಏಕೆ ನಡೆದವು? ಯಾರೂ ನಟಿಸಿದರು? ಎಂಬುದನ್ನು ಮತ್ತೆ ನಿಮಗೆ ಪ್ರತ್ಯೇಕವಾಗಿ ಹೇಳುವ ಅವಶ್ಯಕತೆ ಇಲ್ಲ.

ಬಹುಮುಖ್ಯವಾಗಿ ಇವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಎಲ್ಲ ಮೀಸಲಾತಿ ಕಾರ್ಯಗಳನ್ನು ಹೆಗಲಿಗೆ ಹೆಗಲಾಗಿ ಚಾಚೂತಪ್ಪದೆ ಜಾರಿಗೊಳಿಸಿದ ನಾಯಕ. ಕೆಆರ್ ಎಸ್ ಅಣೆಕಟ್ಟನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಾಯಕ. ಗ್ರಾಮೀಣ ಜನರ ಬಾಯಲ್ಲಿ ಜಾನಪರ ಸೇವಕನಾಗಿ–ಜಾನಪದ ನಾಯಕರಾಗಿ ಉಳಿದುಕೊಂಡ ನಾಯಕರಲ್ಲಿ ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಕೂಡ ಒಬ್ಬರು. ಈ ಎಲ್ಲ ಕಾರಣಗಳಿಂದಾಗಿ ಕನ್ನಂಬಾಡಿ ಅಣೆಕಟ್ಟೆಯ ಮುಂದುಗಡೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪಕ್ಕದಲ್ಲಿ ಮಿರ್ಜಾ ಇಸ್ಮಾಯಿಲ್ ಅವರ ಸ್ಟ್ಯಾಚುವನ್ನು ನಿಲ್ಲಿಸಲೇ ಬೇಕು.

ಆದರೆ ಕೇವಲ ಅಕ್ಷರ ಬಲ್ಲವರು ರಚಿಸಿದ ಪುಸ್ತಕದಲ್ಲಿಯೇ ರಾರಾಜಿಸಿದ ಸರ್ ಎಂ.ವಿಶ್ವೇಶ್ವರಯ್ಯನವರು ಪುಸ್ತಕದಲ್ಲಿ ಮಾತ್ರ ಉಳಿದುಕೊಂಡವರು.ತನ್ನ ಸಮಾಜಮುಖಿ ಕಾರ್ಯಗಳಿಂದಾಗಿ ಜನರ ಬಾಯಿಯಲ್ಲಿ ಉಳಿದುಕೊಂಡ ಜನನಾಯಕನ ಸ್ಟ್ಯಾಚುವನ್ನು ನಿರ್ಮಾಣ ಮಾಡಲು ನಾವೆಲ್ಲರೂ ಟೊಂಕಕಟ್ಟಿ ಒಗ್ಗಟ್ಟಿನಿಂದ ನಿಲ್ಲಬೇಕಾಗಿದೆ.

ಇಲ್ಲಿಗೆ ನನ್ನ ಮಾತನ್ನು ಮುಗಿಸುತ್ತೇನೆ. ಅಂತಿಮವಾಗಿ ನನ್ನ ಇಚ್ಛೆ ಇಷ್ಟೇ. ಈಗ ಅಣೆಕಟ್ಟು ಇರುವ ಜಾಗದಲ್ಲಿಯೇ ಕಾವೇರಿ ನದಿಗೆ ಅಡ್ಡಲಾಗಿ ಬೃಹತ್ ಅಣೆಕಟ್ಟನ್ನು ನಿರ್ಮಾಣ ಮಾಡಲು ಕನಸು ಕಂಡಿದ್ದ ಟಿಪ್ಪು ಸುಲ್ತಾನ್ ಕೆ ಆರ್ ಎಸ್ ನಿರ್ಮಾಣದಲ್ಲಿ ಶ್ರಮಿಸಿದ ಕನ್ನಡ ನಾಡಿನ ಜನರ ಹೃದಯ–ಮನೆ–ಮನ ಹಾಗೂ ಬಾಯಿಯಲ್ಲಿ "ನಾಲ್ವಡಿ ಭೂಪ– ಮನೆಮನೆ ದೀಪ" ಎಂದು ಕರೆಸಿಕೊಂಡು ಕರ್ನಾಟಕ ರತ್ನ–ಭಾರತರತ್ನವೇ ಆಗಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸಾಂಸ್ಕೃತಿಕ ಚಿಂತಕ ಮಿರ್ಜಾ ಇಸ್ಮಾಯಿಲ್ ಅವರ ಸ್ಟ್ಯಾಚು ಗಳನ್ನು ಕೆ ಆರ್ ಎಸ್ ಆವರಣದಲ್ಲಿ ಸ್ಥಾಪಿಸಿ ಈವರೆಗೆ ಚರಿತ್ರೆಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿ ತಾವೆಲ್ಲರೂ ಚಾರಿತ್ರಿಕ ವ್ಯಕ್ತಿಗಳಾಗಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಯಪೂರ್ವಕವಾಗಿ ಕೋರುತ್ತೇನೆ.

ಕಾಕ

೧೦

ಕನ್ನಡ ನೆಲೆದ ಚರಿತ್ರೆ ರಚನೆ, ಬೋಧನೆ ಹಾಗೂ ಮಾನವೀಯತೆ ನೆಲೆಯ ಶಿಖರ : ಪ್ರೊ. ಬಿ. ಷೇಕ್ ಅಲಿ

ಎನ್. ಚಿನ್ನಸ್ವಾಮಿ ಸೋಸಲೆ

ಭಾರತ ಹಾಗೂ ಕರ್ನಾಟಕದ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದ್ದ ಪ್ರೊ. ಬಿ ಷೇಕ್ ಅಲಿ (೯೯) ಅವರು ಇಂದು ಬೆಳಗ್ಗೆ ಹನ್ನೊಂದು ಮೂವತ್ತರ ಸಮಯದಲ್ಲಿ ಮೈಸೂರಿನ ತಮ್ಮ ಸ್ವಗೃಹದಲ್ಲಿ ನಿಧನರಾಗಿದ್ದಾರೆ. ಅವರ ನಿಧನಕ್ಕೆ ಸಂತಾಪವನ್ನು ಗೌರವ ಪೂರಕವಾಗಿ ವ್ಯಕ್ತಪಡಿಸುತ್ತೇನೆ.

ಮಾನ್ಯರು ಮೂಲತಃ ಹಾಸನ ಜಿಲ್ಲೆ–ಅರಸೀಕೆರೆ ತಾಲೂಕಿನ ಬೆಳಗೋಡು ಗ್ರಾಮದವರು. ಮಾನ್ಯರು ಮೈಸೂರು ವಿಶ್ವವಿದ್ಯಾಲಯ ಹಾಗೂ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯದಿಂದ

ಪಿ.ಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗವನ್ನು (ಇವರು ಕೆಲಸವನ್ನು ಆರಂಭ ಮಾಡಿದಾಗ ಸ್ನಾತಕೋತರ ಅಧ್ಯಯನ ಕೇಂದ್ರಗಳು ಇವತ್ತಿನ ಪ್ರತಿಷ್ಠಿತ ಮಹಾರಾಜ ಕಾಲೇಜಿನಲ್ಲಿ ನಡೆಯುತ್ತಿದ್ದವು) ಸುಧೀರ್ಘವಾಗಿ ಕಟ್ಟಿ ಬೆಳೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕನ್ನಡ ಇಂಗ್ಲಿಷ್ ಫ್ರೆಂಚ್ ಅರೇಬಿಕ್ ಭಾಷೆಗಳನ್ನು ಬಹುಸುಲಲಿತವಾಗಿ ಓದುವ ಬರೆಯುವ ಬೌದ್ಧಿಕ ತಜ್ಞತೆಯನ್ನು ಹೊಂದಿದ್ದರು.

ಇವರು ಸಾಲಾರ್ ಉರ್ದು ದಿನಪತ್ರಿಕೆ ಹಾಗೂ ವಾರಪತ್ರಿಕೆಯ ಪ್ರಧಾನ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇಲ್ಲಿನ ಇವರ ಸಂಪಾದಕೀಯ ಹಾಗೂ ಲೇಖನಗಳು ಕರ್ನಾಟಕದ ಚರಿತ್ರೆ ಹಾಗೂ ಸಮಕಾಲ ಸಂದರ್ಭದಲ್ಲಿ ಚರಿತ್ರೆ ಬರವಣಿಗೆಯ ವಿಧಾನ ಹಾಗೂ ಅವಶ್ಯಕತೆಯನ್ನು ಅನಾವರಣಗೊಳಿಸುತ್ತವೆ.

ರಾಷ್ಟ್ರಕವಿ ಕುವೆಂಪು ಅವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗ ಇಂದಿನ ಬಹು ವಿಶಾಲವಾದ ಸ್ನಾತಕೋತ್ತರ ಅಧ್ಯಯನ ಕೇಂದ್ರವನ್ನಾಗಿಸಲು

ಮಾನಸ ಗಂಗೋತ್ರಿಯಲ್ಲಿ ನಿರ್ಮಿಸಲು ಆರಂಭಿಸಿದ ಸಂದರ್ಭದಲ್ಲಿ ಅದರ ಶೈಕ್ಷಣಿಕ ತಜ್ಞ ಸಮಿತಿಯಲ್ಲಿ ಪ್ರಮುಖರಾಗಿ ಮಹತ್ವದ ಸಾಧನೆ ಮಾಡಿದವರು. ಮೈಸೂರು ವಿಶ್ವವಿದ್ಯಾಲಯದ ಇತಿಹಾಸ ಅಧ್ಯಯನ ಹಾಗೂ ಸಂಶೋಧನಾ ವಿಭಾಗದ ೨೦ ವರ್ಷಗಳಿಗೂ ಹೆಚ್ಚು ಕಾಲ ಮುಖ್ಯಸ್ಥರಾಗಿ ಮಹತ್ವದ ಸೇವೆ ಸಲ್ಲಿಸಿದರು. ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್–ಸಿನಿಟ್ ಸದಸ್ಯರಾಗಿ ವಿಶ್ವವಿದ್ಯಾಲಯವು ಭದ್ರಬುನಾದಿಯಲ್ಲಿ ನಿಂತುಕೊಳ್ಳಲು ಮಹತ್ವದ ಕೆಲಸ ಮಾಡಿದ್ದಾರೆ. ಕಲಾ ನಿಕಾಯದ ಡೀನ್ ಆಗಿಯೂ ಕೆಲಸವನ್ನು ಮಾಡಿದರು. ಸಾವಿರಾರು ವಿದ್ಯಾರ್ಥಿಗಳಿಗೆ ಬೋಧನೆ ಮಾಡಿದ ಇವರು, ಇಂದು ರಾಜ್ಯದ ಪ್ರತಿಷ್ಠಿತ ಇತಿಹಾಸ ಹಾಗೂ ಚರಿತ್ರೆ ಕಾರರಿಗೆ ಗುರು ಸ್ಥಾನದಲ್ಲಿ ಇದ್ದದ್ದು ನಮ್ಮೆಲ್ಲರಿಗೂ ಗೌರವ.

ಈ ಮೂಲಕ ನಾನು ನನ್ನ ತವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಸಮಸ್ತ ಆಡಳಿತ ವರ್ಗದವರಲ್ಲಿ ಕೇಳಿಕೊಳ್ಳುವುದೇನೆಂದರೆ ಮಾನಸ ಗಂಗೋತ್ರಿಯ ಪ್ರಮುಖ ರಸ್ತೆಗೆ ಪ್ರೊ. ಬಿ. ಷೇಕ್ ಅಲಿ ಅವರ ಹೆಸರನ್ನು ಇಟ್ಟು ಅವರ ಮಹತ್ವದ ಕೊಡುಗೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸಲು ಅನು ಮಾಡಬೇಕೆಂದು ಕಳಕಳಿಯಿಂದ ಕೋರುತ್ತೇನೆ.

ಗೋವಾ ಹಾಗೂ ಮಂಗಳೂರು ವಿಶ್ವವಿದ್ಯಾಲಯಗಳ ಸಂಸ್ಥಾಪನ ಕುಲಪತಿಗಳಾಗಿ ಮಹತ್ವದ ಶೈಕ್ಷಣಿಕ ಸಾಧನೆಯನ್ನು ಮಾಡಿರುವ ಪ್ರೊ. ಷೇಕ್ ಆಲಿ ಆ ಎರಡು ವಿಶ್ವವಿದ್ಯಾಲಯಗಳು ಸಹ ಇವರ ಹೆಸರನ್ನು ಅಲ್ಲಿ ಸ್ಥಿರಸ್ಥಾಯವಾಗಿ ಉಳಿಸಿಕೊಂಡಿವೆ. ಇದಕ್ಕೆ ಅವರ ಬೌದ್ಧಿಕ ಹಾಗೂ ಆಡಳಿತಾತ್ಮಕ ಶಿಸ್ತು ಮತ್ತು ಕರ್ತವ್ಯ ನಿಷ್ಠೆಯೇ ಕಾರಣ. ಅವರು ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದೊಂದಿಗೆ ಅವಿನ ಭಾವ ಸಂಬಂಧವನ್ನು ಇಟ್ಟುಕೊಂಡಿದ್ದವರು. ಕನ್ನಡ ವಿಶ್ವವಿದ್ಯಾಲಯದ ಸಂಸ್ಥಾಪನ ಕುಲಪತಿಗಳಾದ ಪ್ರೊ. ಚಂದ್ರಶೇಖರ್ ಕಂಬಾರ ಅವರ ಕಳಕಳಿಯ ಕೋರಿಕೆಯಂತೆ ಕರ್ನಾಟಕ ಚರಿತ್ರೆ ಸಂಪುಟಗಳು ಎಂಬ ಹೆಸರಿನ ಸಮಗ್ರ ಕರ್ನಾಟಕ ಚರಿತ್ರೆ ಯನ್ನು ಕನ್ನಡದಲ್ಲಿ ಅನಾವರಣಗೊಳಿಸುವ ಕಾಲಾನುಕ್ರಮಣಿಕೆಯ ಸಮಗ್ರ ಏಳು ಸಂಪುಟಗಳನ್ನು ತಮ್ಮ ಪ್ರಧಾನ ಸಂಪಾದಕತ್ವದಲ್ಲಿ ಹೊರತಂದ ಕೀರ್ತಿ ಇವರಿಗೆ ಸಲ್ಲುತ್ತದೆ.

ಈ ಏಳು ಸಂಪುಟಗಳಲ್ಲಿ ಎರಡು ಬೃಹತ್ ಸಂಪುಟಗಳನ್ನು ಇವರೇ ಸ್ವತಃ ಬರೆದಿರುವುದು ವಿಶೇಷವಾದುದು. ಹೈದರ್ ಮತ್ತು ಟಿಪ್ಪು ಸುಲ್ತಾನರ ಕುರಿತ ವಸ್ತುನಿಷ್ಠ ಸಂಶೋಧನಾತ್ಮಕ ಬರವಣಿಗೆ ಸಂಪುಟ ಒಂದಾದರೆ, ಮತ್ತೊಂದು ಬಿಜಾಪುರ ಹಾಗೂ ಬಹುಮನಿ ಸುಲ್ತಾನರ ಕುರಿತ ಸಂಪುಟ. ಈ ಎರಡು ಸಂಪುಟಗಳು ಇಂಗ್ಲಿಷ್ ಭಾಷೆಯಲ್ಲಿಯೂ ಪ್ರಕಟಗೊಂಡಿರುವುದರಿಂದ ಇವರು ಭಾರತವನ್ನು ಹೊರತುಪಡಿಸಿ ಅಂತರಾಷ್ಟ್ರೀಯ ಪ್ರಖ್ಯಾತ ಚರಿತ್ರೆ ವಿದ್ವಾಂಸರಾಗಿ ಅನಾವರಣಗೊಂಡಿದ್ದರು. ಈ ಸಂಪುಟಗಳು ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಚಿಂತನೆಗೆ ಎಡೆ ಮಾಡಿಕೊಟ್ಟದ್ದು

ನಮ್ಮ ನಡುವಿನ ವಾಸ್ತವ. ಈ ಏಳು ಸಂಪುಟಗಳು ಕರ್ನಾಟಕದ ಪ್ರೀತಿಯ ಓದುಗ ಮತ್ತು ಸಂಶೋಧಕರ ಕೃತಿಗಳಾದ್ದರಿಂದ ಬೇಡಿಕೆ ಬಂದ ಕಾರಣಕ್ಕಾಗಿ ನನ್ನ ಸಂಚಾಲಕತ್ವ–ದಲ್ಲಿ ಸಮಗ್ರವಾಗಿ ಪರಿಷ್ಕರಿಸಿ ಪುನರ್ ಮುದ್ರಣಗೊಳಿಸಿದ್ದು ನನಗೆ ಒದಗಿದ ಸೌಭಾಗ್ಯ ಎಂದು ತಿಳಿದುಕೊಳ್ಳುತ್ತೇನೆ.

ಬ್ರಿಟಿಷರನ್ನು ದಕ್ಷತೆಯಿಂದ ಎದುರಿಸಿ ರಣರಂಗದಲ್ಲಿ ಜೀವ ತ್ಯಜಿಸಿದ ಟಿಪ್ಪು ಸುಲ್ತಾನ್ ಅವರ ವಸ್ತುನಿಷ್ಠ ಸತ್ಯ ಚರಿತ್ರೆಯನ್ನು ಸಮಗ್ರವಾಗಿ ಅನಾವರಣಗೊಳಿಸಿದರ ಕುರಿತು ಹಾಗೂ ಬಹುಮನಿ ಸುಲ್ತಾನರ ಸಮಗ್ರ ಚರಿತ್ರೆಯನ್ನು ವಾಸ್ತುನಿಷ್ಟವಾಗಿ ಅನಾವರಣಗೊಳಿಸಿದ ಕಾರಣಕ್ಕಾಗಿಯೇ ಇವರಿಗೆ ಇತರೆ ಚರಿತ್ರೆಕಾರರಿಗೆ (ರಾಷ್ಟ್ರೀಯವಾದಿ ಚರಿತ್ರೆ ಕಾರರು ಎಂದು ಗುರುತಿಸಿಕೊಂಡವರಿಗೆ) ಸಿಕ್ಕಷ್ಟು ಮಾನ್ಯತೆ ದೊರಕಲಿಲ್ಲವೋ ಎಂಬ ಪ್ರಶ್ನೆಯು ನನ್ನನ್ನು ಕಾಡುತ್ತದೆ.

ಇತಿಹಾಸ ಹಾಗೂ ಚರಿತ್ರೆಯ ಸಂಶೋಧನಾ ವಿಧಾನಗಳ ಕುರಿತು ಅವರು ಬರೆದ ಮೆಥಡಾಲಜಿ ಪುಸ್ತಕ ಚರಿತ್ರೆ ವಿದ್ಯಾರ್ಥಿಗಳಿಗೆ ಒಂದು ಬೈಬಲ್ ಆಗಿ ಪರಿವರ್ತನೆಯಾಗಿದೆ. ಹಾಗೂ ಕರ್ನಾಟಕದ ಮೊದಲ ರಾಜ ಮನೆತನದಲ್ಲಿ ಒಂದಾದ ತಲಕಾಡಿನ ಗಂಗರ ಕುರಿತ ಇವರು ಪಿಎಚ್ಡಿ ಅಧ್ಯಯನ ಕನ್ನಡದ ಮೊದಲ ರಾಜ ಮನೆತನ ಕದಂಬರೋ ಅಥವಾ ಗಂಗರೋ ಎಂಬ ಪ್ರಶ್ನೆಯನ್ನು ನಮ್ಮೊಳಗೆ ಹುಟ್ಟುವಾಗುತ್ತದೆ. ಕದಂಬ ವಂಶದ ಸ್ಥಾಪಕ ಮೂಲದಲ್ಲಿ ಬ್ರಾಹ್ಮಣ ಸಮುದಾಯದ ಮಯೂರ ಶರ್ಮನಾಗಿದ್ದ ಎಂಬ ಕಾರಣಕ್ಕಾಗಿ ಈ ಸಾಮ್ರಾಜ್ಯವೇ ಕನ್ನಡದ ಮೊದಲ ಸಾಮ್ರಾಜ್ಯ ಎಂದು ಕರೆದರೂ ಅಥವಾ ಕದಂಬರ ಜೊತೆಗೆ ಆರಂಭಗೊಳ್ಳುವ ಗಂಗಾ ಸಾಮ್ರಾಜ್ಯದ ಸ್ಥಾಪಕರು ಶೂದ್ರರು ಆಗಿದ್ದ ಕಾರಣಕ್ಕಾಗಿ ಇವರನ್ನು ಕಡೆಗಣಿಸಲಾಯಿತು ಎಂಬ ಪ್ರಶ್ನೆಯನ್ನು ನಮ್ಮ ಮುಂದಿಡುತ್ತಾರೆ. ಈ ಪ್ರಶ್ನೆಗಳು ಇಂದಿನ ಸಮಕಾಲ ಸಂಧರ್ಭದ ಚರಿತ್ರೆ ರಚನೆಯನ್ನು ಪ್ರಶ್ನೆಗಳ ಮೂಲಕ ಉತ್ತರ ಹುಡುಕುವ ಮಾದರಿಗೆ ಎಡೆ ಮಾಡುತ್ತವೆ. ಇವರ ವಿಸ್ತೃತವಾದ ಪ್ರಶ್ನಾರ್ಥಕ ಸಂಶೋಧನೆ, ಸಂಶೋಧನಾತ್ಮಕ ಅಧ್ಯಯನ ಹಾಗೂ ಬರವಣಿಗೆಗಳು ಇಂದಿನ ಪ್ರತಿಯೊಬ್ಬ ಚರಿತ್ರೆ ಹಾಗೂ ಇತಿಹಾಸ ಅಧ್ಯಯನಕಾರರಿಗೆ ಮಾರ್ಗದರ್ಶನವಾಗಿವೆ.

ಕರ್ನಾಟಕ ಇತಿಹಾಸ ಕಾಂಗ್ರೆಸ್ಸ ಸಂಸ್ಥಾಪಕ ಅಧ್ಯಕ್ಷರಾಗಿ ಮಹತ್ವದ ಸೇವೆ ಮಾಡಿರುವ ಇವರು, ಅದು ನಾಡಿನ ಚರಿತ್ರೆ ಅಧ್ಯಯನ ಮಾಡುವ ಯುವ ಪೀಳಿಗೆಗೆ ಮತ್ತು ವಿದ್ವಾಂಸರ ಬಳಿಗೆ ತಲುಪಲು ಹಗಲು–ರಾತ್ರಿ ಶ್ರಮಿಸಿದರು. ಕರ್ನಾಟಕ ಇತಿಹಾಸ ಕಾಂಗ್ರೆಸ್ ಇಂದು ಉಜ್ವಲವಾಗಿ ಬೆಳೆದು ನಮ್ಮ ಮುಂದೆ ನಿಂತಿರಲು ಇವರ ಕೊಡುಗೆ ಅಪಾರವಾಗಿದೆ.

ಅಖಿಲ ಭಾರತ ಮಟ್ಟದಲ್ಲಿ "ಇಂಡಿಯನ್ ಹಿಸ್ಟರಿ ಕಾಂಗ್ರೆಸ್" ಸ್ಥಾಪಿಸಿ ಅದರ ಸಂಸ್ಥಾಪಕ ಅಧ್ಯಕ್ಷರಾಗಿ ಹತ್ತು ವರ್ಷಗಳ ಕಾಲ ಸೇವೆಗೆದವರು.

"ಸೌತ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್"ನ ಸಂಸ್ಥಾಪಕ ಅಧ್ಯಕ್ಷರಾಗಿ ಸುದೀರ್ಘಕಾಲ ದವರಿಗೆ ಇವರು ದಕ್ಷತೆಯಿಂದ ಕಾರ್ಯನಿರ್ವಹಿಸಿದ್ದಾರೆ.

ಬೌದ್ಧಿಕ ಹಿನ್ನೆಲೆಯಲ್ಲಿ ವಿಶೇಷ ಆಗವಾನ್ವಿತ ಉಪನ್ಯಾಸ ನೀಡಲು ೧೨ ರಾಷ್ಟ್ರಗಳಿಗೆ ಭೇಟಿ ನೀಡಿರುವ ಕೀರ್ತಿ ಇವರಿಗೆ ಸಲ್ಲುತ್ತದೆ.ರಷ್ಯಾ ಜಪಾನ್, ಯುರೋಪ್ ರಾಷ್ಟ್ರಗಳು, ಅರಬ್ ರಾಷ್ಟ್ರಗಳ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಇವರನ್ನು ಆಹ್ವಾನಿಸಿ ಉಪನ್ಯಾಸವನ್ನು ಪಡೆದು ಗೌರವಿಸಿದೆ. ಕನ್ನಡ ಇಂಗ್ಲಿಷ್ ಉರ್ದು ಭಾಷೆಯಲ್ಲಿ ಚರಿತ್ರೆ ಹಾಗೂ ಸ್ಥಳೀಯ ಚರಿತ್ರೆಗೆ ಸಂಬಂಧಿಸಿದ ೪೫ ಕೃತಿಗಳನ್ನು ರಚಿಸಿರುವುದು ರಚಿಸಿರುವುದು ಇವರ ವಿದ್ವತ್ತಿಗೆ ಹಿಡಿದ ಕೈಗನ್ನಡಿಯಾಗಿದೆ.

ಪ್ರೊ.ಬಿ ಷೇಕ್ ಅಲಿ ಅವರು ಶಿಕ್ಷಣ ಕ್ಷೇತ್ರದ ಜೊತೆಗೆ ಅದಕ್ಕೆ ಪೂರಕವಾದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ ಮಹಾನ್ ಸಾಧಕರು.ಮೈಸೂರಲ್ಲಿ ಇವರು ಸ್ಥಾಪಿಸಿರುವ ಶಿಕ್ಷಣ ಸಂಸ್ಥೆ ಶಿಕ್ಷಣದ ಜೊತೆ ವಿವಿಧ "ಜಾಬ್ ಓರಿಯೆಂಟೆಡ್ ಸ್ಕಿಲ್" ಗಳನ್ನು ತಿಳಿಸಿಕೊಡುವ ಹಿನ್ನೆಲೆಯಲ್ಲಿ ಸ್ಥಾಪನೆಗೊಂಡು ಮುನ್ನುಡುತ್ತಿರುವುದು ಇವರ ದೂರ ದೃಷ್ಟಿಯ ಫಲವಾಗಿದೆ.

ಭಾರತ ಹಾಗೂ ಕರ್ನಾಟಕದ ಚರಿತ್ರೆ ಲೋಕದಲ್ಲಿ ಇವರು ಅಜಾತಶತ್ರು.ಆದರೆ ಹುಟ್ಟಿನ ಆಧಾರದ ಮೇಲೆ ಇವರಿಗೆ ಮಾನ್ಯತೆ ಸಿಗದಿರುವುದು ಇವರ ಶತ್ರು. ಈ ಶತ್ರುತ್ವವನ್ನು ಇಂದಿನ ವಸ್ತುನಿಷ್ಠ ಚರಿತ್ರೆ ಸಂಶೋಧಕರು ಹೋಗಲಾಡಿಸಬೇಕಾಗಿದೆ. ಆ ಮೂಲಕ ಸಮ ಸಮಾಜದ ವಸ್ತುನಿಷ್ಠ ಚರಿತ್ರೆಯನ್ನು ಅನಾವರಣಗಳಿಸಬೇಕಾಗಿದೆ.

ಒಂದು ಅರ್ಥದಲ್ಲಿ ಕರ್ನಾಟಕದಲ್ಲಿ ಎರಡನೇ ತಲೆಮಾರಿನಲ್ಲಿ ಉದಯಿಸಿದ ಚರಿತ್ರೆಕಾರರುಗಳೆಲ್ಲರೂ ಸಹ ಇವರ ವಿದ್ಯಾರ್ಥಿಗಳೇ. ಪ್ರೊ. ಬಿ ಸುರೇಂದ್ರ ರಾವ್, ಪ್ರೊ. ಕೆ ಎಸ್ ಶಿವಣ್ಣ, ಪ್ರೊ. ಓ ಅನಂತರಾಮಯ್ಯ, ಪ್ರೊ.ಸೇಬೇಸ್ಟಿಂನ್ ಜೋಸೆಫ್, ಪ್ರೊ.ಲಕ್ಷ್ಮಣ್ ತೆಲಗಾವಿ, ಪ್ರೊ.ಸೈಯದ್ ಆಝಮ್, ಪ್ರೊ.ಎಸ್ ಎ ಬಾರಿ, ಪ್ರೊ.ಎಮ್ ಬಿ ಪದ್ಮ, ಪ್ರೊ.ವೆಂಕಟರತ್ನಂ, ಪ್ರೊ ಎ ವಿ ನರಸಿಂಹಮೂರ್ತಿ ಇತ್ಯಾದಿ ಇತ್ಯಾದಿ ನೂರಾರು ವಿಶ್ರಾಂತ ಚರಿತ್ರೆ ಕಾರರು ಇವರ ಬಹುದೊಡ್ಡ ಶಿಷ್ಯ ಬಳಗವೇ.

ನಾನು ಮೈಸೂರಿಗೆ ಹ್ಞೋದಾಗಲೆಲ್ಲ ಇವರನ್ನು ಭೇಟಿಯಾಗುವ ಪರಿಪಾಠ ಇದ್ದದ್ದೇ ಆಗಿತ್ತು. ೨೦೧೦ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದಿಂದ ಮೈಸೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಸಹಯೋಗದಲ್ಲಿ ಮೈಸೂರಿನಲ್ಲಿ ಆಯೋಜಿಸಿದ್ದ "ದಿವಾನ್ ಸರ್ ಮಿರ್ಜಾ ಎಂ ಇಸ್ಮಾಯಿಲ್ ಕಾಲದ ಮೈಸೂರು ಸಂಸ್ಥಾನ" ಎಂಬ ವಿಷಯ ಕುರಿತು ೨೫ ವರ್ಷಗಳ ಕಾಲ ದಿವಾನರಾಗಿ ಯಶಸ್ವಿ ಆಳ್ವಿಕೆ ನೀಡಿದ ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಕುರಿತು ಈವರೆಗೂ ಒಂದೇ ಒಂದು ಪುಸ್ತಕವು ಪ್ರಕಟಗೊಳ್ಳದ ಹಿನ್ನೆಲೆಯಲ್ಲಿ ನನ್ನ ಸಂಚಾಲಕತ್ವದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿಚಾರ ಸಂಕೀರ್ಣದ ಉದ್ಘಾಟನೆ ಮಾಡಿದವರು ಸಹ ಇವರೇ. ಮಾನ್ಯರು

ಉದ್ಘಾಟನಾ ಸಂದರ್ಭದಲ್ಲಿ ನನ್ನ ಕುರಿತು, ಹಾಗೂ ನಿಜ ಇಸ್ಮಾಯಿಲ್ ಕುರಿತು ನಾನು ಹಮ್ಮಿಕೊಂಡಿರುವ ಈ ವಿಚಾರ ಸಂಕೀರ್ಣದ ಮಹತ್ವ ಕುರಿತು ಆಡಿದ ಆಶೀರ್ವಾದದ ಮಾತುಗಳು ನನಗೆ ದಾರಿದೀಪ ಹಾಗೂ ಈಗಿನ ನನ್ನ ಚರಿತ್ರೆ ಕೆಲಸ ಕಾರ್ಯಗಳಿಗೆ ಸ್ಫೂರ್ತಿದಾಯಕವೂ ಆಯಿತು.

೧೯೮೭ ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರದಿಂದ ಪ್ರಕಟಗೊಂಡ ಕರ್ನಾಟಕದ ಸಮಗ್ರ ಚರಿತ್ರೆ ಸಂಪುಟಗಳು, ಬಹು ಬೇಡಿಕೆಯ ಕೃತಿಗಳಾದ್ದರಿಂದ ೨೦೧೯ ರಲ್ಲಿ ನನ್ನ ಸಂಚಾಲಕತ್ವದಲ್ಲಿ ಪುನರ್ ಮುದ್ರಣಗೊಂಡು ಈಗಾಗಲೇ ಸಂಪೂರ್ಣವಾಗಿ ಮಾರಾಟಗೊಂಡಿದೆ. ಇಂತಹ ಕಾರ್ಯವನ್ನು ಮಾಡುವಾಗ ನಾನು ಹೆಚ್ಚಿನ ಸಂಪರ್ಕ ವನ್ನು ಅವರೊಂದಿಗೆ ಹೊಂದಲು ಸಾಧ್ಯವಾಯಿತು.ಅವರ ಭೇಟಿ ನಿರಂತರವಾಗಿತ್ತು.

ಮಾನ್ಯರ ಸೇವೆಯನ್ನು ಗುರುತಿಸಿ ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಮೈಸೂರು ವಿಶ್ವವಿದ್ಯಾನಿಲಯ. ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯ, ತುಮಕೂರು ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದ ಹಲವಾರು ಗೌರವಗಳಿಗೆ ಅವರು ಭಾಜನರಾಗಿದ್ದಾರೆ. ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯದ ವಿಶೇಷ ಕೋರಿಕೆಯ ಮೇರೆಗೆ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಕನ್ನಡ ವಿಶ್ವವಿದ್ಯಾಲಯವು ಪ್ರತಿಷ್ಠಿತ ನಾಡೋಜ ಪದವಿಯನ್ನು ನೀಡಿ ತನ್ನ ಗೌರವವನ್ನು ಹೆಚ್ಚಿಸಿಕೊಂಡಿದೆ. ಕನ್ನಡ ನಾಡಿನ ಸಾಂಸ್ಕೃತಿಕ ಹಾಗೂ ಚರಿತ್ರೆ ಕ್ಷೇತ್ರಕ್ಕೆ ಇವರ ನಿಧನ ಬಹುದೊಡ್ಡ ನಷ್ಟ. ಇವರು ಇತಿಹಾಸ ಹಾಗೂ ಚರಿತ್ರೆ ಕ್ಷೇತ್ರಕ್ಕೆ ನೀಡಿರುವ ಕೊಡುಗೆ–ಜೀವನದಿದ್ದಕ್ಕೂ ಮಾಡಿರುವ ಸಾಧನೆ ನಮ್ಮ ಬದುಕಿಗೆ ಹಾಗೂ ಅಧ್ಯಯನಕ್ಕೆ ದಾರಿದೀಪವಾಗಬೇಕಾಗಿದೆ. ಆ ದಾರಿಯಲ್ಲಿ ನಡೆದಾಗ ಮಾತ್ರ ಇಂತಹ ಮಹಾನ್ ವ್ಯಕ್ತಿಯ ಆತ್ಮಕ್ಕೆ ನಾವು ಶಾಂತಿ ಕೋರಲು ಸಾಧ್ಯ. ಮಾನ್ಯರ ಆತ್ಮಕ್ಕೆ ಶಾಂತಿ ಕೋರುತ್ತೇನೆ.

ಕಕ

ISSN 2278-5043

ಚರಿತ್ರೆ ಅಧ್ಯಯನ

ಸಂಪುಟ ೧೪ ಸಂಚಿಕೆ ೨, ಜನವರಿ - ಜೂನ್ ೨೦೨೩



ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

CHARITRE ADHYAYANA
Bi-Annual-Vol-14-Issue-2, January-June-2023

Edited by
Prof. N. Chinnaswamy Sosale
Senior Professor
Deptartment of History
Kannada University, Hampi
Vidyaranya 583 276

Published by
Dr. Madhava Peraje
Director, Prasaranga
Kannada University, Hampi
Vidyaranya 583 276

Pages: x + ೧೪೮

www.kannadauniversity.org

First Impression: 2024

ISSN 2278-5043

ಚರಿತ್ರೆ ಅಧ್ಯಯನ ಅರ್ಧವಾರ್ಷಿಕ ಪತ್ರಿಕೆ

ಸಂಪುಟ-೧೪, ಸಂಚಿಕೆ-೨, ಜನವರಿ-ಜೂನ್ ೨೦೨೩

(ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳ ಅಭಿಪ್ರಾಯಗಳಿಗೆ ಲೇಖಕರೇ ಜವಾಬ್ದಾರರು)

© ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೨೪

ಪ್ರಧಾನ ಸಂಪಾದಕರು: **ಡಾ. ಡಿ.ವಿ. ಪರಮಶಿವಮೂರ್ತಿ**

ಸಂಪಾದಕರು: **ಡಾ. ಎನ್. ಚಿನ್ನಸ್ವಾಮಿ ಸೋಸಲೆ**

ಸಂಪಾದಕ ಸಲಹಾ ಮಂಡಲಿ
ಡಾ. ವಿಜಯ್ ಪೂಣಚ್ಚ ತಂಬಂಡ
ಡಾ. ಕೆ. ಮೋಹನ್‌ಕೃಷ್ಣ ರೈ
ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಬಿಡಿ ಪ್ರತಿ: ರೂ. ೧೦೦/- ವಾರ್ಷಿಕ ಚಂದಾ: ವ್ಯಕ್ತಿಗಳಿಗೆ ರೂ. ೧೫೦/-
ಸಂಸ್ಥೆಗಳಿಗೆ ರೂ. ೨೦೦/-

ಅಕ್ಷರ ಸಂಯೋಜನೆ: **ಸುರೇಖಾ ಕಂಪ್ಯೂಟರ್ಸ್, ಕಮಲಾಪುರ**

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ಮೈಸೂರು ಬ್ಯಾಂಕ್ ವೃತ್ತ, ನಂ. ೧, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯, ದೂ.: ೦೮೦-೨೨೩೭೨೩೪೮

ಮುದ್ರಣ
ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

ಪರಿವಿಡಿ

ಸಂಪಾದಕೀಯ / iii

೧. ಅಂಬೇಡ್ಕರ್ ಮತ್ತು ಗಾಂಧಿ ಚಿಂತನೆಗಳಲ್ಲಿ ಗ್ರಾಮ ಮತ್ತು ನಗರಗಳ ಪರಿಕಲ್ಪನೆ / ೧

ಡಾ. ಕೆ. ಮೋಹನ್‌ಕೃಷ್ಣ ರೈ

೨. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಭಾರತದ ಮಹಿಳೆ ಮತ್ತು ಧಾರ್ಮಿಕ ಅಮಾನವೀಯ ಆಚರಣೆಗಳು : ವಸ್ತುನಿಷ್ಠ ವಿಶ್ಲೇಷಣೆ / ೧೬

ಡಾ. ಜಿ. ವಿಜಯಲಕ್ಷ್ಮಮ್ಮ

೩. ಅಂಬೇಡ್ಕರ್ ದೃಷ್ಟಿಯಲ್ಲಿ ಅಸಂಘಟಿತ ಮಹಿಳಾ ಕಾರ್ಮಿಕರು : ವಸ್ತುನಿಷ್ಠ ವಿಶ್ಲೇಷಣೆ / ೩೨

ಡಾ. ಚನ್ನಮ್ಮ ಕಂಬಾರ

೪. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಸಾಮಾಜಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರು : ವಸ್ತುನಿಷ್ಠ ವಿಶ್ಲೇಷಣೆ / ೪೯

ಡಾ. ಪದ್ಮಿನಿ ನಾಗರಾಜ್

೫. ಅಂಬೇಡ್ಕರ್ ಮಾತನಾಡಿದ ಇಂದಿನ ವಾಸ್ತವದ ಭಾರತದಲ್ಲಿ ನಾವು–ನೀವು.....? / ೬೬

ಡಾ. ಎನ್. ಚಿನ್ನಸ್ವಾಮಿ ಸೋಸಲೆ

೬. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಮೂಲನಿವಾಸಿಗಳು ಎಂದರೆ ಯಾರು : ಚಾರಿತ್ರಿಕ ವಿಶ್ಲೇಷಣೆ / ೭೯

ಸಾವಿತ್ರಿ

೭. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಎನ್ ಜಿ ಓ : ಸಾಧಕ ಬಾಧಕಗಳ ವಸ್ತುನಿಷ್ಠ ವಿಶ್ಲೇಷಣೆ / ೮೮

ಡಾ. ಕೃಷ್ಣಪ್ಪ ಕೊಂಚಾಡಿ

೫

ಅಂಬೇಡ್ಕರ್ ಮಾತನಾಡಿಸಿದ ಇಂದಿನ ವಾಸ್ತವದ ಭಾರತದಲ್ಲಿ ನಾವು–ನೀವು.... ?

ಡಾ. ಎನ್. ಚಿನ್ನಸ್ವಾಮಿ ಸೋಸಲೆ

ಭಾರತ ಪ್ರಪಂಚದ ಕಣ್ಣಿಗೆ ತನ್ನನ್ನು ಮುಕ್ತ ಧರ್ಮ ಹಾಗೂ ಸಮಾಜವನ್ನು ಹೊಂದಿರುವ–ಬಹುಸಂಸ್ಕೃತಿನೂ ಒಗ್ಗಟ್ಟಿನಿಂದ ಸೌಹಾರ್ದತವಾಗಿ ಒಂದಾಗಿ ಮಾಡಿ ಕೊಂಡಿರುವ ದೇಶ ಎಂದು ಬಾಹ್ಯವಾಗಿ ಹೇಳಿಕೊಳ್ಳುತ್ತದೆ. ಆದರೆ ಆಂತರಿಕವಾಗಿ ಏಕಮುಖ ಚಿಂತನೆಯನ್ನೇ ಮೈಗೂಡಿಸಿಕೊಂಡಿರುವುದು–ಅದನ್ನೇ ಭಾರತದ ಬಹುದೊಡ್ಡ ಸಂಸ್ಕೃತಿಯೆಂದು ಹೇಳಿಕೊಳ್ಳುವ ಸ್ವಭಾವದದಾಗಿದೆ.ಇದಕ್ಕೆ ನಮ್ಮ ಅಸಮಾನತೆಯನ್ನು ಪ್ರತಿಪಾದನೆ ಮಾಡುತ್ತಿರುವ ಸಾಂಸ್ಕೃತಿಕ ಚರಿತ್ರೆಯೇ ಸಾಕ್ಷಿಯಾಗಿದೆ.

ಈ ಏಕಮುಖ ಸಂಸ್ಕೃತಿಯ ವಿರುದ್ದವೇ ಬಹುಮುಖ ಸಂಸ್ಕೃತಿಯನ್ನು ಈ ದೇಶವಾಸಿಗಳಲ್ಲಿ ಅನಾವರಣಗೊಳಿಸಲು ಕಾಲಕಾಲಕ್ಕೆ ಅನೇಕ ಮಹನೀಯರು ಜನಿಸಿರುವುದಕ್ಕೆ ಭಾರತದ ಇತಿಹಾಸ ಹಾಗೂ ಚರಿತ್ರೆ ಸಾಕ್ಷಿಯಾಗಿದೆ. ಈ ಹಿನ್ನೆಲೆಯಲ್ಲಿಯೇ ಬುದ್ಧ, ಬಸವ, ಬಸವಾದಿಶರಣ–ಶರಣೆಯರು, ದಾಸರು, ತತ್ವಪದಕಾರರು ಜನಿಸಿ ನಮ್ಮ ಪ್ರಗತಿಪರ ಚಿಂತನೆಗೆ ನಾಂದಿ ಹಾಡಿದ್ದಾರೆ.ಇವರೆಲ್ಲರ ಚಿಂತನೆಗೆ ಶತ್ರು ಮತ್ತು ಮಿತ್ರರು ಯಾರು ಎಂಬುದು ಸ್ಪಷ್ಟವಾಗಿ ತಿಳಿದಿತ್ತು.ಇವರೆಲ್ಲರ ಚಿಂತನೆ ಏಕಮುಖವಾಗಿ ದೇಶ ಹಾಗೂ ದೇಶದ ಜನರನ್ನು ಬಳಸಿಕೊಳ್ಳುತ್ತಿದ್ದವರ ವಿರುದ್ಧ ಇತ್ತೇ ಹೊರತು, ಬಹುಮುಖಿವಾಗಿ ಕಾಯಕ ಸಿದ್ಧಾಂತದ ಮೂಲಕ ರಾಷ್ಟ್ರ ಕಟ್ಟಿದವರ ಹಾಗೂ ಕಟ್ಟುವವರ ಪರ ತಮ್ಮ ಅನುಭಾವದ ಬೌದ್ಧಿಕತೆಯನ್ನು ಅನಾವರಣ ಗೊಳಿಸಿದರು. ಇಂತಹ ಜನಪರ ಕಾರ್ಯ ಮಾಡುವುದಕ್ಕಾಗಿ ಇವರ ಜಯಂತಿಗಳನ್ನು ನಾವು ಕಾಲಕಾಲಕ್ಕೆ ಆಚರಿಸುತ್ತಾ ಬಂದಿದ್ದೇವೆ. ಇವರೆಲ್ಲರು ವಾಸ್ತವದ ಸಂಕೇತ ವಾಗಿದ್ದರು. ಮುಂದಿನ ದಿನಗಳಲ್ಲಿ ಪ್ರಕೃತಿಯ ಕರೆಗೆ ತಲೆಬಾಗಿ ಇವರೆಲ್ಲರೂ ನಿರ್ಗಮಿಸಿದ ನಂತರ, ಇಂತಹ ಸಾಧಕರು ಕಾಣಲು "ಬಯಸದ ದೇಶವನ್ನು ಪುನಃ ಯಾವುದೇ

ದಿಕ್ಕು ದೆಸೆ ಇಲ್ಲದ ಪುರಾಣದ ಮೂಲಕವೇ ಭಾರತ ಹಾಗೂ ಭಾರತದ ಚರಿತ್ರೆಯನ್ನು ಕಟ್ಟಲು ಬಯಸಿ ಮುಂಚೂಣಿಗೆ ಬಂದರು. ದೇವರು ಇವರಿಗೆ ಸಹಕರಿಸಿದ್ದು, ಸಾವಿದ್ದರೂ ಸಹ ಸಾವಿಲ್ಲದ ಪುರಾಣ ಭಾರತಕ್ಕೆ ಕಾಲಕಾಲಕ್ಕೆ ಎದುರಾಗುವ ಸಮಸ್ಯೆಗಳಿಗೆ ದೇವರ ಹೆಸರಿನ ಧಾರ್ಮಿಕ ಸಂಕೋಲೆಯಲ್ಲಿ ಸಿಲುಕಿಸಿ, ಪರಿಹಾರಕ್ಕೆ ಪುರಾಣವನ್ನೇ ಚರಿತ್ರೆಯನ್ನಾಗಿಸಲು ಮುಂದಾಯಿತು. ಹೀಗೆ ಏಕಮುಖಿವಾಗಿ ಚಲಿಸಲು ಆರಂಭಿಸಿದ ಸಂದರ್ಭದಲ್ಲಿ–ಈ ಚಲನೆಯನ್ನು ಬಹುಮುಖಿಗೊಳಿಸಲು ಮೇಲಿನವರ ವಾರಸುದಾರರಾಗಿ ಏಪ್ರಿಲ್ ೧೪, ೧೮೯೧ರಂದು ಜನಿಸಿದವರೇ ಬಾಬಾಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರು.

ಅಂಬೇಡ್ಕರ್‌ರವರ ಜನನವೇ ಎರಡು ಸಾವಿರ ವರ್ಷಗಳಿಂದ ತಟಸ್ಥವಾಗಿದ್ದ ಭಾರತದ ಚರಿತ್ರೆಯ ಚಲನಶೀಲತೆಗೆ ಮುನ್ನುಡಿ ಬರೆದಂತಾಯಿತು. ಅಂಬೇಡ್ಕರ್ ಅವರ ಜನನ–ಜೀವನ ಹಾಗೂ ಮರಣವೇ ಭಾರತ–ಭಾರತೀಯ ಹಾಗೂ ಭಾರತೀಯತೆಯ ಸಂಕೇತ. ಅವರು ನಮಗೆಲ್ಲ ಬಿಟ್ಟು ಹೋಗಿರುವುದು ಜೀವನದ ಜೊತೆಗೆ ಬಹುದೊಡ್ಡ ಬದುಕನ್ನು.ಜೀವ ಅಲ್ಪ–ಬದುಕು ಯುಗ ಯುಗಾಂತರಕ್ಕೂ ಶಾಶ್ವತವಾದದ್ದು. ಇದಕ್ಕೆ ಭಾರತ ದೇಶದಲ್ಲಿ ಅನ್ವಯವಾಗುವ ಏಕೈಕ ಸಾಧಕರು ಎಂದರೆ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು.

ಒಬ್ಬ ಮಹಾನ್ ಪುರುಷನ ಹುಟ್ಟು ಹಲವಾರು ಸಾಂಸ್ಕೃತಿಕ ಸಂಕೋಲೆಗಳಿಂದ ತನ್ನ–ತನ್ನವರು ಒಳಗೊಂಡ ದೇಶವಾಸಿಗಳ ಸಾಂಸ್ಕೃತಿಕ ಸಂಕೋಲೆಗಳಿಂದ ಮುಕ್ತಿಗೊಳಿಸಿ ವ್ಯಕ್ತಿ ಹಾಗೂ ವ್ಯಕ್ತಿತ್ವವನ್ನು ಸಾಂಸ್ಕೃತಿಕವಾಗಿ ಸ್ವಾತಂತ್ರ್ಯಗೊಳಿಸುವ ಸಂಕೇತವಾದರೆ–ಕೆಲವು ಮಹಾನ್ ಪುರಷರ ನಿಧನ ರಾಜಕೀಯ ಹಾಗೂ ಸಾಮಾಜಿಕ ದಿಕ್ಕನ್ನೇ ಬದಲಾಯಿಸಿರುವುದಕ್ಕೂ ಭಾರತದ ಮಣ್ಣಿನಲ್ಲಿ ಜ್ವಲಂತ ನಿದರ್ಶನಗಳಿವೆ. ಈ ಮಾದರಿಯ ಜನನ ಮತ್ತು ಮರಣಗಳೆರಡರಿಂದಲೂ ಭಾರತದ ಸಾಂಸ್ಕೃತಿಕ ದಿಕ್ಕನ್ನೆ ಬದಲಾಯಿಸಿದ – ಯಾವುದೇ ದಾಳಿ ಆಕ್ರಮಣ ಗಳನ್ನು ಕತ್ತಿ ಹಿಡಿದು ಮಾಡದೆ–ಶತಶತಮಾನಗಳಿಂದ ಬಹುಜನರ ಕೈಯಲ್ಲಿ ಹಿಡಿಸದೆ ಇದ್ದಂತಹ ಲೇಖನಿ ಎಂಬ ವಿದ್ವತ್ ಜ್ಞಾನವೆಂಬ ಖಡ್ಗವನ್ನು ಹಿಡಿದು ಕಟ್ಟಿದ ಸಾಮ್ರಾಜ್ಯದ ಅಧಿಪತಿಯಾಗಿ ಶಾಶ್ವತವಾಗಿ ಜನಮಾನಸದಲ್ಲಿ ನೆಲೆಯೂರಿದ ಏಕೈಕ ಮಹಾನ್ ಮಾನವತವಾದಿ ದೊರೆಯೆಂದರೆ ಬಾಬಾಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ಅವರು.

ಅಂಬೇಡ್ಕರ್ ಅವರು ಜನಿಸಿದ ಸಂದರ್ಭ ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಭದ್ರಗೊಂಡು ಎರಡು ಸಾವಿರ ವರ್ಷಗಳಿಂದ ಭಾರತದಲ್ಲಿ ಸಾಂಪ್ರದಾಯಿಕವಾಗಿ ಜಾರಿಯಲ್ಲಿದ್ದ ಧಾರ್ಮಿಕ ಹಾಗೂ ಸಾಮಾಜಿಕ ಕಟ್ಟುಪಾಡುಗಳು, ಜನತೆ ಮತ್ತು ಪ್ರಭುತ್ವದ ಹಿನ್ನೆಲೆಯಲ್ಲಿ ಚರ್ಚೆಗೆ ಒಳಗಾಗಿದ್ದ ಸಂದರ್ಭವೂ ಆಗಿದ್ದವು. ಈ ಮಾದರಿಯ ಚರ್ಚೆಗಳು ಭಾರತವನ್ನು ಬ್ರಿಟಿಷರಿಗೂ ಪೂರ್ವದಲ್ಲಿ ಅಥವಾ ಬ್ರಿಟಿಷರು ಆರಂಭದಲ್ಲಿ ಆಳ್ವಿಕೆ ಮಾಡಿದ ದಿನಗಳಲ್ಲಿಯೂ ಕಂಡುಬಂದಿರುವುದಿಲ್ಲ. ಬುದ್ಧ–ಬಸವರು ಈ ಕಾರ್ಯವನ್ನು

ಮಾಡಿದರೂ ಸಹ ಕಾಲದ ಗರ್ಭದಲ್ಲಿ ಸಿಲುಕಿ ನೆಪತ್ಯಕ್ಕೆ ಸರಿದರು. ಆದರೆ ೧೭೯೯ ರಲ್ಲಿ ಟಿಪ್ಪುಸುಲ್ತಾನ್‌ನ ಮರಣದ ನಂತರ ಇಡೀ ಭರತ ಖಂಡವನ್ನು ಬ್ರಿಟಿಷರು ತಮ್ಮ ಆಳ್ವಿಕೆಯ ತೋಳ್ತೆಕ್ಕೆಗೆ ತೆಗೆದುಕೊಂಡು ತಮ್ಮ ಸ್ವಾರ್ಥ ಸಾಧನೆಗಾಗಿಯೂ ಹಾಗೂ ಅಖಂಡ ಭಾರತದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಹಿನ್ನಲೆಯಲ್ಲಿ ಸಾಂಪ್ರದಾಯಕವಾಗಿಯೇ ಜಾರಿಯಲ್ಲಿದ್ದ ಬಾಲ್ಯವಿವಾಹ, ಸತಿಪದ್ಧತಿ, ವಿಧವೆಯರ ಪುನರ್ ವಿವಾಹ, ಸಾಮಾಜಿಕ ಹಿನ್ನಲೆಯ ಅಮಾನವೀಯ ಬದುಕಿನ ಸ್ಥಿತಿಗತಿ, ಜಾತಿ ಪದ್ಧತಿ ಹಾಗೂ ಏಕಮುಖ ಜನಾಂಗವೇ ಶತಶತಮಾನಗಳಿಂದ ಶಿಕ್ಷಣವನ್ನು ತಮ್ಮ ಪಿತ್ರಾರ್ಜಿತ ಹಕ್ಕನ್ನಾಗಿಸಿಕೊಂಡಿದ್ದವರ ವಿರುದ್ಧ ಕಾನೂನುಗಳನ್ನು ರೂಪಿಸಿ, ಇವುಗಳನ್ನು ಸಂಪೂರ್ಣವಾಗಿ ನಿಷೇಧ ಮಾಡಿಸಲು ಆಡಳಿತಾತ್ಮಕ ಕ್ರಮಗಳನ್ನು ತೆಗೆದುಕೊಂಡ ಕಾಲವೂ ಆಗಿತ್ತು. ಇಂತಹ ಪ್ರಗತಿಪರ ಚಿಂತನೆಗೆ ಭಾರತವು ಒಳಗಾಗುತ್ತಿದ್ದ ಪರ್ವಕಾಲದಲ್ಲಿಯೇ ಅಂಬೇಡ್ಕರ್ ಅವರ ಜನನವಾಯಿತು.

ಅಂದು ಚಾರಿತ್ರಿಕವಾಗಿ ರಾಷ್ಟ್ರೀಯ ಮೂಲಭೂತವಾದಿಗಳ ಉಪಟಳವನ್ನು ಸಹಿಸಲಾರದೆ ಭಾರತ ಮತ್ತು ಭಾರತೀಯರನ್ನು ಉಳಿಸಲು ಅಂದೆ ಪ್ರಜಾಪ್ರಭುತ್ವ ಮಾದರಿಯ ಸಮ ಸಮಾಜವನ್ನು ನಿರ್ಮಾಣ ಮಾಡಲು ಬುದ್ಧ ಜನಿಸಿದಂತೆ- ಕರ್ನಾಟಕಕ್ಕೆ ರಾಮಾನುಜಚಾರ್ಯರ ಪ್ರವೇಶ ಆದ ಮೇಲೆ ಇಡೀ ಕನ್ನಡ ನಾಡು ಶ್ರೀವೈಷ್ಣವಿ ಕರಣ ಗೊಳಿಸಲು ಪ್ರಭುತ್ವವನ್ನೇ ತಮ್ಮ ತೋಳ್ ತೆಕ್ಕೆಗೆ ತೆಗೆದುಕೊಂಡು ಬೃಹತ್ ವೈಷ್ಣವ ದೇವಾಲಯಗಳ ನಿರ್ಮಾಣ ಹಾಗೂ ಬಹುದೊಡ್ಡ ಜನವರ್ಗವನ್ನು ಶ್ರೀವೈಷ್ಣವಿ ಕಾರಣಗೊಳಿಸಿ ಸಾಮಾಜಿಕ ಹಾಗೂ ಧಾರ್ಮಿಕ ಅಂಧಕಾರದ ಕೊಂಪೆನ್ನಾಗಿ ನಿರ್ಮಾಣ ಮಾಡಿದವರ ವಿರುದ್ಧ ಪ್ರಜಾ ಪ್ರಭುತ್ವದ ಕಲ್ಪನೆಯನ್ನು ಹುಟ್ಟಿದ ಬಸವಣ್ಣ ಹಾಗೂ ಬಸವದಿ ಶರಣ ಶರಣೆಯರ ರೀತಿಯಲ್ಲಿ ಅಂಬೇಡ್ಕರ್ ಅವರು ಸಾಂಪ್ರದಾಯಿಕವಾಗಿ ಭಾರತದಲ್ಲಿ ಇದ್ದಂತಹ ಧಾರ್ಮಿಕ ಹಾಗೂ ಸಾಮಾಜಿಕ ಅಸ್ಪೃಶ್ಯತೆಯನ್ನು ಈ ರಾಷ್ಟ್ರದ ಮೂಲನಿವಾಸಿಗಳ ವಾರಸುದಾರರಾಗಿ ಜನಿಸಿ, ಈ ನೆಲದ ಸಾಮಾಜಿಕ ಹಾಗೂ ಧಾರ್ಮಿಕ ಹಿನ್ನಲೆಯ ಕಟ್ಟುಪಾಡುಗಳ ಇಕ್ಕಟ್ಟು ಮತ್ತು ಬಿಕ್ಕಟ್ಟುಗಳನ್ನು ಸ್ವತಹ ಅನುಭವಿಸಿ, ಈ ರಾಷ್ಟ್ರದ ಮೂಲನಿವಾಸಿಯಾದರು ಸಹ ತಾನು ಮತ್ತು ತನ್ನ ಜನ ಈ ರಾಷ್ಟ್ರದಲ್ಲಿ ಅನುಭವಿಸು ತ್ತಿರುವ ಅಸ್ಪಾತಂತ್ರ್ಯ ನೀತಿಯ ವಿರುದ್ಧ ಬೌದ್ಧಿಕವಾಗಿ ಸಿಡಿದೇಳುವ ಗಟ್ಟಿತನವನ್ನು ಮೈಗೂಡಿಸಿಕೊಂಡರು. ಇದಕ್ಕೆ ಮುಖ್ಯ ಕಾರಣ ಅಂಬೇಡ್ಕರ್ ಅವರು ಬಾಲ್ಯದಲ್ಲಿಯೇ ತನ್ನ ಓದು-ಚಿಂತನೆ ಹಾಗೂ ಹೋರಾಟಗಳು ಯಾರ ಪರವಾಗಿ ಮತ್ತು ಯಾರ ವಿರುದ್ಧವಾಗಿ ಎಂಬುದನ್ನು ಸ್ಪಷ್ಟಪಡಿಸಿಕೊಂಡಿದ್ದು ಕಾರಣವಾಗಿತು. ಈ ಮಾತಿನ ಅರ್ಥವೇ ಅವರೇ ಹೇಳಿರುವ ಹಾಗೆ 'ಇತಿಹಾಸವನ್ನು ಮರೆತವರು ಇತಿಹಾಸವನ್ನು ನಿರ್ಮಿಸಲಾರರು' ಎಂಬ ಮಹತ್ವದ ಮಾತಿಗೆ ಸಾಕ್ಷಿಯಾಗಿದೆ.

ಬಾಬಾಸಾಹೇಬ್ ಅಂಬೇಡ್ಕರ್ ಅವರು ಭಾರತವನ್ನು ನೋಡಿದ ಪರಿ ಕೇವಲ ಭೂಪಟದ ಭಾರತವಾಗಿರಲಿಲ್ಲ-ಬದಲಾಗಿ, ಸಮಗ್ರ ಭಾರತದ ಭೂಪ್ರದೇಶದ ಭಾರತವಾಗಿತ್ತು. ಭೂಪಟದ ಭಾರತ ಬದಲಾವಣೆಯನ್ನು ಬಯಸದೆ ಕೇವಲ ಸಾಂಪ್ರದಾಯಿಕವಾಗಿ, ಏಕಮುಖವಾಗಿ ಚಿಂತಿಸಲು ಬಯಸಿದರೆ, ಭೂಪ್ರದೇಶದ ಭಾರತ-'ಭಾರತ, ಭಾರತೀಯ ಹಾಗೂ ಭಾರತೀಯತೆ'ಯನ್ನು ಅನಾವರಣಗೊಳಿಸುವುದಾಗಿತ್ತು.ಅಂಬೇಡ್ಕರ್ ಅವರ ಗಟ್ಟಿತನದ ಜ್ಞಾನದ ಭಾರತದಲ್ಲಿ ಮಾತನಾಡುವವರಿದ್ದಾರೆ-ಮಾತು ಕಲಿಯುವವರಿದ್ದಾರೆ ಹಾಗೂ ಮಾತು ಕಲಿಸುವವರಿದ್ದಾರೆ.ಇಷ್ಟು ಮಾತನಾಡಿಸುವ ಕಾರ್ಯವನ್ನು ಮಾಡಿದ್ದು ಎರಡು ಸಾವಿರ ವರ್ಷಗಳಿಂದ ಮಾತು ಬಂದರೂ, ಮೂಕರನ್ನಾಗಿಸಿದವರ-ಶ್ರಮಪಟ್ಟರೂ ಶ್ರಮಕ್ಕೆ ಪ್ರತಿಫಲ ನೀಡದವರ ವಿರುದ್ಧವಾಗಿತ್ತು ಎಂಬುವುದನ್ನು ಪ್ರತಿಯೊಬ್ಬರು ಅರ್ಥಮಾಡಿಕೊಳ್ಳಬೇಕು.ಈ ಮಾದರಿಯಲ್ಲಿ ಶತಶತಮಾನಗಳಿಂದ ಅರಿಯದೆ ಇದ್ದ ಅಜ್ಞಾನದಿಂದ ಕಶ್ಮಲಗೊಂಡಿದ್ದ ನದಿಯ ನೀರನ್ನು ಜ್ಞಾನ ಎಂಬ ಶುದ್ಧವಾದ ವಾಸ್ತವದ ಅಸ್ತ್ರದಿಂದ ಶುದ್ಧಗೊಳಿಸಿ- ವಿಶಾಲ ಭಾರತದ ಎಲ್ಲಾ ನರನಾಡಿಗಳಲ್ಲೂ ಹರಿಯುವಂತೆ ಮಾಡಿದ ಧೀಮಂತ ಬಾಬಾಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ಅವರು.ಅದಕ್ಕಾಗಿಯೇ ಇವರನ್ನು ಭಾರತದ ಸುಪುತ್ರ-ಜ್ಞಾನದ ಶಿಖರ ಎಂದು ಕರೆಯುವುದು.

ಬಾಬಾಸಾಹೇಬ್ ಅಂಬೇಡ್ಕರ್ ಅವರು ದೇಶ-ವಿದೇಶಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆದು ಭಾರತಕ್ಕೆ ಬಂದರು.ಏಕೆಂದರೆ ಭಾರತದ ಕಾಯಕ ಸಿದ್ಧಾಂತದ ಹಿನ್ನಲೆಯ ಬಹುಜನ ತಮ್ಮ ಮೂಲಭೂತ ಹಕ್ಕುಗಳನ್ನು ಕಳೆದುಕೊಂಡದ್ದು ಭಾರತದಲ್ಲಿಯೇ ಎಂಬುವುದು ಸ್ಪಷ್ಟವಾಗಿ ತಿಳಿದಿದ್ದ ಕಾರಣಕ್ಕಾಗಿ. ಈ ಮೂಲಭೂತ ಹಕ್ಕುಗಳ ಕಸಿಯುವಿಕೆಗೆ ಯಾವ ವಿದೇಶಿ ಧರ್ಮ ಅಥವಾ ಯಾವ ವಿದೇಶಿ ಪ್ರಭುತ್ವವೂ ಕಾರಣವಲ್ಲ ಎಂಬುದು ಸ್ಪಷ್ಟವಾಗಿ ತಿಳಿದಿತ್ತು. ಅದಕ್ಕಾಗಿ ಅವರು ತನ್ನ ಜನರಿಗೆ ದೊರಕಲೇ ಬೇಕಾದ ಮೂಲಭೂತ ಹಕ್ಕುಗಳನ್ನು ಒದಗಿಸಲು ಯಾವುದೇ ಕಾರಣಕ್ಕೂ ವಿದೇಶಿ ನೆಲದಲ್ಲಿ ಚಳುವಳಿಗಳನ್ನಾಗಲಿ, ಮುಷ್ಕರಗಳನ್ನಾಗಲಿ ಮಾಡಲಿಲ್ಲ, ಬದಲಿಗೆ ಅವರು ಕೈಗೊಂಡಿದ್ದು ಭಾರತದ ನೆಲದಲ್ಲಿಯೇ. ಇದು ಅವರು ಭಾರತದ ಭೂಪ್ರದೇಶವನ್ನು ಗ್ರಹಿಸಿದ ಒಡಲಾಳದ ಗಟ್ಟಿತನದ ಬೌದ್ಧಿಕ ಅಂಶ. ಕೆಲವರು ತಮ್ಮ ಕೈ ಬೆರಳಿನ ಉಂಗುರವನ್ನು(ಉಂಗುರ ಎಂದರೆ: ಭಾರತದಲ್ಲಿ ಇರುವ ಅಸ್ಪೃಶ್ಯತೆ-ವರ್ಣಭೇದ ನೀತಿ-ಜಾತೀಯತೆ-ಧಾರ್ಮಿಕ ಅಂಧಕಾರ ಇತ್ಯಾದಿ ಇತ್ಯಾದಿ) ಭಾರತದ ನೆಲದಲ್ಲಿ ಕಳೆದುಕೊಂಡು, ಅದನ್ನು ಪತ್ತೆಹಚ್ಚಲು ವಿದೇಶಿ ನೆಲದಲ್ಲಿ ಹುಡುಕಾಟ ನಡೆಸಿರುವುದಕ್ಕೆ ಸಾಕ್ಷಿ ಇದೆ. ಆದರೆ ಅಂಬೇಡ್ಕರ್ ಅವರು ಭಾರತದ ವಾರಸುದಾರರಾಗಿ, ತಮ್ಮ ಹಾಗೂ ತಮ್ಮವರ ಕೈಬೆರಳಿನ ಉಂಗುರವನ್ನು ಯಾರು ಕಸಿದುಕೊಂಡರು ಎಂಬುವುದು ಸ್ಪಷ್ಟವಾಗಿ ತಿಳಿದ ಕಾರಣಕ್ಕಾಗಿ ಎರಡು ಸಾವಿರ ವರ್ಷಗಳಿಂದ ಕಸಿದುಕೊಂಡಿದ್ದ ವರಿಂದಲೇ ನ್ಯಾಯಯುತವಾಗಿ ಹೋರಾಡಿ-ಸಂವಿಧಾನಾತ್ಮಕವಾಗಿ ಪಡೆಯಲು

ಭಾರತದ ನೆಲೆದಲ್ಲಿಯೇ ಬೌದ್ಧಿಕ ಮುಷ್ಕರವನ್ನೂಡಿ ಯಶಸ್ವಿಯಾದರು.ಇದು ಅಪ್ಪಟ ಭಾರತೀಯನ ಸಾಂಸ್ಕೃತಿಕ ದಿಗ್ವಿಜಯ ಎಂದು ಹೇಳಿದರೆ ತಪ್ಪಾಗದು.

ಇದರ ಮುಂದುವರಿದ ಭಾಗವೇ ಭಾರತದಲ್ಲಿ ಶತಶತಮಾನಗಳಿಂದ ಜಾರಿಯಲ್ಲಿದ್ದ, ಇಂದಿಗೂ ಕಟಿಬದ್ಧವಾಗಿ ಸ್ಪೃಶ್ಯರ ಮನಸ್ಸಿನಲ್ಲಿ ಜಾರಿಯಲ್ಲಿರುವ "ಜಲಾಸ್ಪೃಶ್ಯತೆ"ಯ ವಿರುದ್ಧ ಭಾರತೀಯತೆಯ ಹಿನ್ನಲೆಯಲ್ಲಿ ಸೈದ್ಧಾಂತಿಕ ಚಳವಳಿ ಮಾಡಿ ತಮ್ಮ ಬೌದ್ಧಿಕ ಚಳುವಳಿಗೆ ಮುಂದಾದದ್ದು. ೧೯೨೭ ಮಾರ್ಚ್ ೨೦ ರಂದು ಅಂಬೇಡ್ಕರ್ ಅವರು ಮಹಾರಾಷ್ಟ್ರದ ಮಹಾಡ್ ಕೆರೆ ನೀರನ್ನು, ಪ್ರತಿಯೊಬ್ಬ ಮಾನವ ಹಾಗೂ ಸಕಲ ಜೀವಿಗಳು ಬದುಕಲು ಅವಶ್ಯಕವಾದ ಮಾನವತ್ವವನ್ನು ಬಯಸುವ ಜೀವಸೆಲೆಯನ್ನು ಎರಡು ಬೊಗಸೆಗಳಿಂದ ತನ್ನ ಲಕ್ಷಾಂತರ ಅನುಯಾಯಿಗಳೊಂದಿಗೆ ಮುಂಚೂಣಿ ನಾಯಕರಾಗಿ ಭಾರತಮಾತೆ ಒಡಲಿನ ತನ್ನೆರಡುಕೈಗಳಿಂದ ಮೊಗೆದು ಕುಡಿದರು–ತನ್ನವರಿಗೂ ಕುಡಿಸಿದರು. ಇದು ಎರಡು ಸಾವಿರ ವರ್ಷಗಳ ಸಾಂಪ್ರದಾಯಿಕ ಭಾರತದ ಚರಿತ್ರೆಯ ವಿರುದ್ದದ ವಾಸ್ತವದ ಚರಿತ್ರೆಗೆ ವಸ್ತುನಿಷ್ಠವಾದ ಮುನ್ನುಡಿ ಬರೆದಂತಾಯಿತು. ಏಕೆಂದರೆ ಕುಡಿಯುವ ನೀರಿಗೂ ಧಾರ್ಮಿಕ ಹಾಗೂ ಸಾಮಾಜಿಕ ನಿರ್ಬಂಧಗಳನ್ನೇರಿ ನೀರನ್ನು ಸಹ ಜಲಾಸ್ಪೃಶ್ಯತೆಯ ಚೌಕಟ್ಟಿಗೆ ಒಳಪಡಿಸಿದ ದೇಶ ನಮ್ಮದಲ್ಲವೇ?. ಇಂತಹ ಕುಡಿಯುವ ನೀರಿಗಾಗಿ ಪ್ರಪಂಚದಲ್ಲಿ ಬಹುದೊಡ್ಡ ಚಳವಳಿ ನಡೆದಿರುವುದು ಸತ್ಯ ಎನ್ನುವುದಾದರೆ ಅದು ಅಂಬೇಡ್ಕರ್ ಅವರು ಹೂಡಿದ ಮಹಾಡ್ ಕೆರೆ ಚಳುವಳಿಯೇ ಆಗಿದೆ. ಅದು ನಡೆದದ್ದು ಭಾರತದಂತಹ ಸ್ವಘೋಷಿತ ಸಾಂಸ್ಕೃತಿಕ ದೇಶದಲ್ಲಿ ಎಂಬುವುದೇ ದುರಂತ.

ಭಾರತ ಬಹು ಪ್ರಾಚೀನ ಕಾಲದಿಂದಲೂ ದೇವಾಲಯಗಳ ನಾಡು ಎಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಆದರೆ ಈ ದೇವಾಲಯಗಳನ್ನು ತಮ್ಮ ಶ್ರಮದ ಮೂಲಕ ಕಟ್ಟಿದ ಈ ಈ ನೆಲದ ಮೂಲ ನಿವಾಸಿಗಳನ್ನೇ ಅವರ ಹುಟ್ಟು–ವಾಸಿಸುವ ಸ್ಥಳ–ಮಾಡುವ ಕಾಯಕ–ವಾಸಿಸುವ ಸ್ಥಳ–ಸೇವಿಸುವ ಆಹಾರದಿಂದ ಅಸ್ಪೃಶ್ಯನಾಗಿಸಿ ಇವರು ದೇವಾಲಯದೊಳಗೆ ಪ್ರವೇಶ ಮಾಡಬಾರದು ಹಾಗೂ ಮಾಡಿಸಬಾರದು ಎಂಬ ಕಠೋರ ಅನೀತಿಯ ನಿಯಮವನ್ನು ಧಿಕ್ಕರಿಸಿ ದೇವಾಲಯದೊಳಗೆ ಹೋಗುವ ಚಳವಳಿಯನ್ನು ೧೯೩೦ರಲ್ಲಿ ಕಾಳರಾಮ್‌ಪುರ ದೇವಸ್ಥಾನದ ಪ್ರವೇಶವನ್ನು ತಾವು ಮತ್ತು ತಮ್ಮೊಂದಿಗಿನ ಲಕ್ಷಾಂತರ ಜನರನ್ನು ದೇವಾಲಯದ ಪ್ರವೇಶ ಮಾಡಿಸಿ ಈ ನೆಲದ ಮೂಲನಿವಾಸಿಗಳು ಸಹ ತಮ್ಮ ನೆಲದ ದೇವಾಲಯಗಳ ಪ್ರವೇಶ ಮಾಡಲೇಬೇಕು ಎಂಬ ತತ್ವ ಸಿದ್ಧಾಂತಕ್ಕೆ ಮುನ್ನುಡಿ ಬರೆದರು. ಈ ಎರಡು ಘಟನೆಗಳೂ ಸಹ ಅಂಬೇಡ್ಕರ್ ಅವರು ಕೇವಲ "ಥಿಯರಿಯ"(ಬರವಣಿಗೆಯ) ರೂಪದಲ್ಲಿ ಮಾಡಿದ್ದರೆ ಭಾರತ ಮತ್ತು ಭಾರತೀಯರನ್ನು ಎಚ್ಚರಿಸುತ್ತಿರಲಿಲ್ಲ, ಬದಲಿಗೆ ಅವರು ಮಾಡಿದ್ದು "ಪ್ರಾಕ್ಟಿಕಲ್"(ಸಾಮಾಜಿಕ ಶಸ್ತ್ರ ಚಿಕಿತ್ಸೆಯ) ರೂಪದಲ್ಲಿ ಎಂಬುದನ್ನು

ಮರೆಯಬಾರದು.ಇದಕ್ಕೆ ಪೂರಕ ಎಂಬುವಂತೆ ಬಸವಣ್ಣನವರ ವಚನ ಚಳವಳಿ ಒಂದರ್ಥದಲ್ಲಿ ಬೌದ್ಧಿಕ ಥಿಯರಿಯ ರೂಪವಾದರೇ–ಅವರ ಅಂತರ್ಜಾತಿ ವಿವಾಹಕ್ಕೆ ಮುಂದಾದ ಸಂದರ್ಭ ಪ್ರಾಕ್ಟಿಕಲ್ ರೂಪದ್ದು. ಈ ಪ್ರಾಕ್ಟಿಕಲ್ ರೂಪಗಳೇ ಅನೇಕ ಪಲ್ಲಟಗಳಿಗೆ ಕಾರಣವಾದವು ಎಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ.

ಮೇಲಿನ ಈ ವಸ್ತುನಿಷ್ಠ ಆಲೋಚನೆಯೇ ಅಂಬೇಡ್ಕರ್ ಅವರಲ್ಲಿ ಭಾರತೀಯತೆಯನ್ನು ಇನ್ನು ಹೆಚ್ಚು ಹೆಚ್ಚು ಅನಾವರಣಗೊಳಿಸಿತು.ಭಾರತ ಮತ್ತು ಭಾರತೀಯತೆ ಕುರಿತು ಸಮಗ್ರ ಅಧ್ಯಯನಕ್ಕೆ ಹಗಲಿರುಳು ಎನ್ನದೆ ತಮ್ಮನ್ನು ತೊಡಗಿಸಿಕೊಂಡರು. ಭಾರತದ ಸಮಗ್ರ ಪ್ರಭುತ್ವದ ಚರಿತ್ರೆಯನ್ನು ಅರ್ಥೈಸಿಕೊಂಡು ಅದರ ವೈಭವದೊಳಗೆ ಕಳೆದುಹೋದ ಪ್ರಜೆಗಳ ಸಾಂಸ್ಕೃತಿಕ ಚರಿತ್ರೆಯನ್ನು ಸಂಶೋಧನಾತ್ಮಕವಾಗಿ ವಾಸ್ತವದ ನೆಲೆಯಲ್ಲಿ ಹುಡುಕಲಾರಂಭಿಸಿದರು. ಹೀಗೆ ಆರಂಭಗೊಂಡ ಇವರ ಸಮಗ್ರ ಬರವಣಿಗೆ ಸಾಂಪ್ರದಾಯಿಕವಾದಿಗಳು–ಪುರಾಣಮಿಶ್ರಿತವಾಗಿ–ಅವರೇ ಕಲ್ಪಿಸಿಕೊಂಡ ಸುಂದರವಾದ ಪ್ರಕೃತಿಯ ಮಡಿಲಿನಲ್ಲಿ ಸೌಮ್ಯ ಸ್ವರೂಪದ ಪ್ರಾಣಿ–ಪಕ್ಷಿಗಳನ್ನು ಜೊತೆಗೂಡಿಸಿಕೊಂಡು–ನದಿ ಸರೋವರಗಳ ದಂಡೆಯಲ್ಲಿ ನವಿಲುಗರಿಯನ್ನು ಹಿಡಿದುಕೊಂಡು ತೀರ್ಥವನ್ನೇ ಅಜ್ಜಿಕೊಂಡು ಬರೆದವರ ಪುರಾಣಮಿಶ್ರಿತ ವೈಭವದ ಚರಿತ್ರೆಯ ವಿರುದ್ಧವಾಗಿತ್ತೇ ಹೊರತು, ಜನಸಾಮಾನ್ಯರ ಜೀವನದ ಭವಣೆಗಳನ್ನು ಅನಾವರಣಗೊಳಿಸುವುದರ ಜೊತೆಗೆ ಈ ನೆಲದಲ್ಲಿ ಬದುಕಲು ವಿಧಿಸಲ್ಪಟ್ಟಿದ್ದ ಅನೇಕ ಸಾಮಾಜಿಕ ಸಂಕೋಲೆಗೊಳಗೆ ಸಿಲುಕಿ ದಿನಪೂರ್ತಿ ದುಡಿದರೂ ಹಸಿವಿನಿಂದ ಮಲಗಿದವರ ಪರವಾಗಿ ಬೆವರನ್ನೇ ಅಜ್ಜಿಕೊಂಡು ಬರೆದ ಚರಿತ್ರೆಯೇ ಆಗಿತ್ತು. ಈ ಚರಿತ್ರೆಯನ್ನು ಬರೆಯಲು ಅಂಬೇಡ್ಕರ್ ಅವರು ತಮ್ಮ ಹತ್ತು ಬೆರಳನ್ನು ಭೂಮಿಗೆ ಊರಿ ಬರೆದ ಕಾರಣಕ್ಕಾಗಿ ಇದು ವಾಸ್ತವದ ಚರಿತ್ರಿಯಾಗಿ ನಮ್ಮ ನಡುವೆ ಕಂಗೊಳಿಸುತ್ತಿದೆ.

ಇಂತಹ ಅಂಶಗಳನ್ನು ೧೯೧೭ರಲ್ಲಿ 'ಭಾರತದಲ್ಲಿ ಸಾಂಪ್ರದಾಯ' ಎಂಬ ಪುಸ್ತಕವನ್ನು ಬರೆದು ಪ್ರಕಟಿಸುವುದರ ಮೂಲಕ ಪ್ರಪ್ರಥಮವಾಗಿ ಅನಾವರಣಗೊಳಿಸಿ, ಕಡೆಯದಾಗಿ ಇವರು ೧೯೫೬ರಲ್ಲಿ ಬರೆದು ಮುಗಿಸಿ ಅವರ ನಿಧನದ ನಂತರ ೧೯೫೭ರಲ್ಲಿ ಪ್ರಕಟಗೊಂಡ 'ಬುದ್ಧ ಮತ್ತು ಆತನ ಧಮ್ಮ' ಕೃತಿಯವರೆಗೂ ಎಲ್ಲೂ ಜಾಡು ತಪ್ಪದೇ ತಮ್ಮ ದೃಷ್ಟಿಕೋನವನ್ನು ಯಥಾವತ್ತಾಗಿ ಕಾಪಾಡಿಕೊಂಡು ಬಂದಿರುವುದಕ್ಕೆ ಅವರ ಬೌದ್ಧಿಕ ನಿಲುವೇ ಕಾರಣವಾಗಿದೆ. ಎರಡು ಸಾವಿರ ವರ್ಷಗಳಿಂದ ಅಸಂಪ್ರದಾಯಿಕ ಹಿನ್ನಲೆಯಲ್ಲಿ–ದೇವರು ದೇವಾಲಯಗಳ ಹೆಸರಿನಲ್ಲಿ ಅಬೌದ್ಧಿಕವಾಗಿಯೇ ಬೆಳೆದು ನಿಂತಿದ್ದ ಬೃಹತ್ ಜಾಲಿಗಿಡಗಳು ತುಂಬಿದ ರಸ್ತೆಗೆ ಸ್ವತಃ ಅಂಬೇಡ್ಕರ್‌ರವರೇ ಬೌದ್ಧಿಕತೆಯ ರಸ್ತೆಯನ್ನು ನಿರ್ಮಾಣ ಮಾಡಲು ಏಕಾಂಗಿಯಾಗಿ ಮುಂದಾದರು. ಈ ರಸ್ತೆಯನ್ನು ಶುದ್ಧಗೊಳಿಸಲು ಅವರು ಹಿಡಿದುಕೊಂಡ ಅಸ್ತ್ರವೇ ಬೌದ್ಧಿಕತೆಯ ಸಂಕೇತವಾಗಿರುವ ಲೇಖನಿ ಎಂಬ ಖಡ್ಗವನ್ನು. ಈ ಲೇಖನಿ ಎಂಬ

ಖಿಡ್ಗ ಬಾಬಾಸಾಹೇಬರಿಗೆ ಎಂದೆಂದಿಗೂ ಶಾಂತಿಯ ಸಂಕೇತವಾಗಿತ್ತೇ ಹೊರತು ಅಶಾಂತಿಯ ಮಾರ್ಗದ್ದಾಗಿರಲಿಲ್ಲ ಎಂಬುವುದಕ್ಕೆ ಅವರ ಬರವಣಿಗೆ ಹಾಗೂ ಹೋರಾಟದ ಮಾದರಿಯೇ ಸಾಕ್ಷಿಯಾಗಿದೆ.ಇದು ಅಂಬೇಡ್ಕರ್ ಅವರ "ರಾಷ್ಟ್ರೀಯತೆ"ಯ ಸಂಕೇತವು ಆಗಿದೆ.

೧೯೧೭ರಲ್ಲಿ ಪ್ರಕಟಗೊಂಡ 'ಭಾರತದಲ್ಲಿ ಸಾಂಪ್ರದಾಯ' ಎಂಬ ಕೃತಿಯು ನಾನು ಮೇಲೆ ಉಲ್ಲೇಖಿಸಿದ ಹಾಗೆ ಭಾರತದ ಸಾಂಪ್ರದಾಯಿಕ ಚರಿತ್ರೆಯ ವಿರುದ್ಧದ ಚರಿತ್ರೆಗೆ ಮುನ್ನುಡಿ ಬರೆದಂತಿದೆ.ಈ ಕೃತಿಯಲ್ಲಿಯೇ ಅಂಬೇಡ್ಕರ್ ಅವರು ಧರ್ಮದ ಹಿನ್ನೆಲೆಯಲ್ಲಿ ಚಲನೆಗೊಳ್ಳಬೇಕಾದ ಜಾತಿ ಮತ್ತು ಸಮಾಜ, ಹೇಗೆ ಧಾರ್ಮಿಕತೆಯ ಸಂಕೋಲೆಗೆ ಸಿಲುಕಿ ಜಾತಿ ಮತ್ತು ಸಮಾಜದ ಹಿನ್ನೆಲೆಯಲ್ಲಿ ತಟಸ್ಥಗೊಂಡಿತು ಎಂಬುದನ್ನು ದಾಖಲೆ ಸಮೇತ ವಿವರಿಸಲು ಮುಂದಾಗುತ್ತಾರೆ. ಈ ಕೃತಿಯನ್ನು ರಚನೆ ಮಾಡುವುದಕ್ಕಾಗಿ ಅಂಬೇಡ್ಕರ್ ಅವರು ಸಂಸ್ಕೃತವನ್ನು ಅಧ್ಯಯನ ಮಾಡಲು ಅಸ್ಪೃಶ್ಯರಿಗೆ ಭಾರತದಲ್ಲಿ ಅವಕಾಶವಿಲ್ಲದಿರುವುದನ್ನು ಮನಗಂಡು ಜರ್ಮನಿ ದೇಶಕ್ಕೆ ಹೋಗಿ ಅಲ್ಲಿನ ವಿದ್ವಾಂಸರಿಂದ ಸಂಸ್ಕೃತವನ್ನು ಗಂಭೀರವಾಗಿ ಅಧ್ಯಯನ ಮಾಡಿ, ಮನುಸ್ಮೃತಿ ಮತ್ತು ಶುಕ್ರನೀತಿ ಎಂಬ ಸಂಸ್ಕೃತದ ಸಂಪ್ರದಾಯಿಕವಾದಿ ಗ್ರಂಥಗಳನ್ನು ಗಂಭೀರವಾಗಿ ಅಭ್ಯಾಸ ಮಾಡಿ, ಅವುಗಳು ಏಕಮುಖವಾದ–ಕೆಲವೇ ಕೆಲವು ಬೆರಳೆಣಿಕೆಯಷ್ಟು ಜನರ ಸಂಸ್ಕೃತಿಯನ್ನು ಅನಾವರಣಗೊಳಿಸುವ ನೀತಿಯನ್ನು ಹೊರಪ್ರಪಂಚಕ್ಕೆ ಪರಿಚಯಿಸಲು ಹಾಗೂ ಆಚರಣೆ ಮಾಡುತ್ತಿದ್ದವರಿಗೆ ಹಾಗೂ ಅವರ ಆಚರಣೆಗೆ ಒಳಗಾಗುತ್ತಿದ್ದವರಿಗೆ ಮನಮುಟ್ಟುವಂತೆ ಅನಾವರಣಗೊಳಿಸಿದರು. ಹಾಗೂ ಅವುಗಳ ವಿರುದ್ಧವೇ ಬಹು ಜನಮುಖಿಯಾಗಿ ಈ ಕೃತಿಯನ್ನು ರಚಿಸಿ ನಾನು ಈ ದೇಶದ ಬೌದ್ಧಿಕ ವಾರಸುದಾರ ಎಂಬುದನ್ನು ಸ್ಪಷ್ಟವಾಗಿ ತಿಳಿಸಿದರು.ಈ ಕೃತಿಯಲ್ಲಿಯೇ ಅಂಬೇಡ್ಕರ್ ಅವರ ಭಾರತ ಹಾಗೂ ಭಾರತೀಯತೆಯ ಕುರಿತ ಅಪಾರ ಜ್ಞಾನ ವ್ಯಕ್ತವಾಗುತ್ತದೆ.

ಭಾರತದಲ್ಲಿ ಬ್ರಿಟಿಷರು ಆಳ್ವಿಕೆ ಮಾಡುತ್ತಿದ್ದ ಸಂದರ್ಭದಲ್ಲಿ ಇದ್ದಂತಹ ಆರ್ಥಿಕ ಸಮಸ್ಯೆ ಮತ್ತು ಅವುಗಳ ಪರಿಹಾರಕ್ಕೆ ಸಂಬಂಧಿಸಿದಂತೆ ೧೯೨೨ರಲ್ಲಿ 'ದಿ ಪ್ರಾಬ್ಲಮ್ಸ್ ಆಫ್ ರೂಪಿಸ್'(ಹಣದ ಸಮಸ್ಯೆ) ಎಂಬ ಕೃತಿಯನ್ನು ರಚಿಸಿದರು. ಈ ಕೃತಿಯ ಆಧಾರದ ಮೇಲೆಯೇ ೧೯೨೫ರಲ್ಲಿ ಭಾರತದಲ್ಲಿ 'ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ' ಆರಂಭಗೊಳ್ಳಲು ಪ್ರೇರಣೆಯಾಯಿತು.ಈ ಕೃತಿ ಹಾಗೂ ಇದರ ಆಧಾರದ ಮೇಲೆ ಸ್ಥಾಪಿತಗೊಂಡ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಿಂದಾಗಿ ಭಾರತದ ಆರ್ಥಿಕತೆಯ ದಿಕ್ಕೆ ಸ್ವಾವಲಂಬನೆಡೆಗೆ ಮುನ್ನಡೆಯಿತು. ಪ್ರಬುದ್ಧ ಭಾರತದ ನಿರ್ಮಾಣಕ್ಕೆ ಇಂದು ಇದೇ ಆಧಾರಸ್ತಂಭವಾಗಿದೆ. ಇದಕ್ಕೆ ಪೂರಕವಾಗಿ ೧೯೨೬ರಲ್ಲಿ 'ಬ್ರಿಟಿಷ್ ಭಾರತದಲ್ಲಿ ಪ್ರಾಂತೀಯ ಆರ್ಥಿಕ ವ್ಯವಸ್ಥೆಯ ಇತಿಹಾಸ' ಎಂಬ ಕೃತಿಯನ್ನು ಬರೆದು ನಮ್ಮ ದೇಶವನ್ನು ಆಳ್ವಿಕೆ ಮಾಡುತ್ತಿದ್ದ ಬ್ರಿಟಿಷರಿಗೂ ಸಹ ಭಾರತದ ಜನ ಶ್ರಮಜೀವಿಗಳಾದರೂ

ಸಹ ಅವರು ಎದುರಿಸುತ್ತಿರುವ ಆರ್ಥಿಕ ಸಂಪನ್ಮೂಲಗಳ ಕೊರತೆಯ ಸಾಧಕ–ಬಾಧಕಗಳನ್ನು ವಸ್ತುನಿಷ್ಠವಾಗಿ ತಿಳಿಸಿದರು. ಆ ಮೂಲಕ ಬ್ರಿಟಿಷರಿಗೂ ಸಹ ಇವರು ಭಾರತದ ಪ್ರಬುದ್ಧ ವ್ಯಕ್ತಿಯಾಗಿ ಗುರುತಿಸಿಕೊಳ್ಳಲು ಕಾರಣವಾಯಿತು. ಬಾಬಾಸಾಹೇಬ್ ಅಂಬೇಡ್ಕರ್ ಅವರ ಈ ಪ್ರೌಢಿಮೆಗೆ ಇಂಗ್ಲೀಷ್ ಭಾಷೆಯ ಅಪಾರಜ್ಞಾನ ಹಾಗೂ ವಿದ್ಯುತ್ ಪೂರ್ಣ ಪ್ರೌಢಿಮೆಯು ಕಾರಣವಾಯಿತು. ವಿದ್ಯುತ್ ಪೂರ್ಣವಾದ ಸಂಸ್ಕೃತವನ್ನು ಇವರು ಕಲಿತಿದ್ದರೆ ಈ ಕಾಯಕ ಮಾಡಲು ಸಾಧ್ಯವಾಗುತ್ತಿರಲಿಲ್ಲ ಎಂಬುದನ್ನು ನಾವು ಅರಿಯಬೇಕಾಗಿದೆ.

ಮತ್ತೆ ನಾನು ಹೇಳುವುದೆಂದರೆ ಅಂಬೇಡ್ಕರ್ ಅವರು ಈ ಹಂತದಲ್ಲಿ ದೇವರ ಭಾಷೆ, ಧರ್ಮದ ಭಾಷೆ ಎಂದು ಏಕಮುಖವಾಗಿ ಚಲಿಸುತ್ತಿದ್ದ ಸಂಸ್ಕೃತ ಕಲಿತಿದ್ದರೆ ಈ ಸಾಧನೆ ಮಾಡಲು ಸಾಧ್ಯವಾಗುತ್ತಿರಲಿಲ್ಲ ಎಂಬುದನ್ನು ನಾವು ಮರೆಯಬಾರದು. (ಸಂಸ್ಕೃತವನ್ನು ದಲಿತರಿಗೆ ಈ ಭಾಷೆಯ ವಾರಸುದಾರರು ಧರ್ಮದ ಹಿನ್ನೆಲೆಯಲ್ಲಿ ಕಲಿಸಲು ಅಜ್ಞಾನದ ನಿರ್ಬಂಧನೆಗಳಿದ್ದವು ಎಂಬುದು ಬೇರೆ ಮಾತು).ನಿಜಾರ್ಥದಲ್ಲಿ ಎರಡು ಸಾವಿರ ವರ್ಷಗಳಿಂದ ಭಾರತ ಹಾಗೂ ಭಾರತೀಯರನ್ನು "ಸಂಸ್ಕೃತ" ಸಂಕುಚಿತಗೊಳಿಸಿದರೆ–ನೂರಾರು ವರ್ಷಗಳಿಂದ ಭಾರತಕ್ಕೆ ಆಗಮನ ಮಾಡಿದ "ಇಂಗ್ಲಿಷ್" ವಿಶಾಲತೆಗೊಳಿಸುವ ಮನೋ ಭೂಮಿಕೆಯನ್ನು ಸೃಷ್ಟಿ ಮಾಡಿತ್ತು.ಈ ಅಂಶವನ್ನು ವಿಶಾಲ ದೃಷ್ಟಿಯಿಂದ ಅರ್ಥೈಸಿಕೊಳ್ಳಬೇಕಾಗಿದೆ.

ಭಾರತದ ಸಾಮಾಜಿಕ ವ್ಯವಸ್ಥೆಯನ್ನು ತಳಸ್ಪರ್ಶಿಯವಾಗಿ ಮನಗಂಡಿದ್ದ ಅಂಬೇಡ್ಕರ್‌ರವರು ೧೯೩೬ರಲ್ಲಿ 'ಜಾತಿ ವಿನಾಶ' ಎಂಬ ಮಹತ್ವದ ಕೃತಿಯನ್ನು ಬರೆದರು. ಈ ಕೃತಿಯು ಭಾರತದಲ್ಲಿ ಕಾಯಕ ಸಿದ್ಧಾಂತದ ಹಿನ್ನೆಲೆಯಲ್ಲಿ ರೂಪಿತಗೊಂಡಿದ್ದ ಜಾತಿಗಳನ್ನು ಪುರಾಣದ ಮೂಲಕ ಧರ್ಮೀಕರಣಗೊಳಿಸಿ–ಅನೇಕ ಸಾಂಸ್ಕೃತಿಕ ಕಟ್ಟುಪಾಡುಗಳ ಒಳಗೆ ಸಿಲುಕಿಸಿ–ಅವರ ಮನ ಹಾಗೂ ಮನೆಯನ್ನು ಅಜ್ಞಾನದ ಸಂಕೋಲೆಗಳ ಎಂದೆಂದಿಗೂ ಬಿಡಿಸಲಾಗದ ಬಂಧನದಲ್ಲಿಟ್ಟಿದ್ದವರ ವಿರುದ್ಧ, ವಾಸ್ತವ ಅಂಶಗಳೊಂದಿಗೆ ಗುರುತರವಾಗಿ ಬರೆದ ಕೃತಿಯಾಗಿತ್ತು. ಬಹುಪ್ರಾಚೀನ ಕಾಲದಿಂದಲೂ ಸಾಂಪ್ರಾದಾಯಿಕ ಚರಿತ್ರೆಯನ್ನು ತನ್ನ ಒಡಲಿನಲ್ಲಿ ಅದುಮಿಕೊಂಡಿದ್ದ ಭಾರತಕ್ಕೆ ಈ ಕೃತಿಯ ಪ್ರವೇಶದಿಂದಾಗಿ ಅವರ ಸಾಂಪ್ರದಾಯಿಕ ಒಡಲು ಒಡೆದು ಬಹುಜನರು ಬಹುಮುಖವಾಗಿ ಚಿಂತಿಸಲು ಪ್ರೇರಣೆಯಾಯಿತು. ಮುಂದುವರೆದು ಈ ನೆಲದ ಜನ ತನ್ನ ನೆಲೆಯಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಕಾರಣವಾಯಿತು.ಈ ದೃಷ್ಟಿಯಿಂದಲೇ ಹೇಳುವುದು ಅಂಬೇಡ್ಕರ್ ಅವರು 'ನೀರಿನಲ್ಲಿ ಕರಗುವ ಬಂಡೆಯಲ್ಲ–ಬದಲಿಗೆ ಹರಿಯುವ ನೀರಿನ ಧಿಕ್ಕನ್ನೇ ಬದಲಾಯಿಸುವ–ಬದಲಾಯಿಸಿದ ಕರಗದ ಗಟ್ಟಿ ಬಂಡೆ' ಎಂದು.

ಅಶೋಕನ ಕಾಲದಿಂದಲೂ ಇಂದಿನ ಪಾಕಿಸ್ತಾನ, ಅಫ್ಘಾನಿಸ್ತಾನ, ಬಾಂಗ್ಲಾದೇಶ, ಭೂತಾನ್, ಟಿಬೆಟ್‌ಗಳು ಭಾರತದ ಅವಿಭಾಜ್ಯ ಅಂಗವೇ ಆಗಿದ್ದವು ಎಂಬುವುದಕ್ಕೆ

ಇತಿಹಾಸವೇ ಸಾಕ್ಷಿಯಾಗಿದೆ. ಬೌದ್ಧ ಧರ್ಮದ ತತ್ವ ಸಿದ್ಧಾಂತದಂತೆ ಈ ಎಲ್ಲಾ ಸಮಗ್ರ ಭರತ ಖಂಡವನ್ನು ಆಳ್ವಿಕೆ ಮಾಡಿದ್ದು ಸಮ ಸಂಸ್ಕೃತಿಯ ಹರಿಕಾರ ಸಾಮ್ರಾಟ ಅಶೋಕನ ಸಾಮ್ರಾಜ್ಯವೇ ಎಂಬುದು ಸಹ ಚರಿತ್ರೆಯ ದಾಖಲಾರ್ಹ ವಿಷಯವೇ ಆಗಿದೆ. ಈ ಭೂಪ್ರದೇಶಗಳು ಕಾಲಾಂತರದಲ್ಲಿ ಪ್ರತ್ಯೇಕಗೊಂಡು ಸ್ವತಂತ್ರ ರಾಷ್ಟ್ರಗಳಾಗಿರುವುದಕ್ಕೂ ನಮ್ಮಲ್ಲಿ ನಿದರ್ಶನಗಳಿವೆ. ೧೯೪೭ರವರೆಗೂ ಭಾರತದ ಅವಿಭಾಜ್ಯ ಅಂಗವೇ ಆಗಿದ್ದ ಇಂದಿನ ಪಾಕಿಸ್ತಾನದ ಇಕ್ಕಟ್ಟು-ಬಿಕ್ಕಟ್ಟುಗಳ ಕುರಿತು ೧೯೪೧ರಲ್ಲಿಯೇ ಪಾಕಿಸ್ತಾನ ಅಥವಾ ಭಾರತದ ವಿಭಜನೆ ಎಂಬ ಮಹತ್ವ ಸಂಶೋಧನಾ ಕೃತಿಗಳನ್ನು ಬರೆದು ಪ್ರಕಟಿಸಿದರು.ಈ ಕೃತಿಯು ಪಾಕಿಸ್ತಾನ ಮತ್ತು ಭಾರತದ ಅವಿನಾಭಾವ ಸಂಬಂಧದ ಸಾಂಸ್ಕೃತಿಕ ವಿಷಯಗಳನ್ನು ಅನಾವರಣಗೊಳಿಸುವುದರ ಜೊತೆಗೆ ಒಕ್ಕೂಟ ವ್ಯವಸ್ಥೆಯಲ್ಲಿ ಇದರ ಪ್ರತ್ಯೇಕತೆಯ ಇಕ್ಕಟ್ಟು-ಬಿಕ್ಕಟ್ಟುಗಳನ್ನು ಭೌಗೋಳಿಕ ಹಾಗೂ ಸಾಂಸ್ಕೃತಿಕ ಹಿನ್ನಲೆಯಿಂದ ವಸ್ತುನಿಷ್ಠತೆಯ ಹಿನ್ನೆಲೆಯಲ್ಲಿ ತಿಳಿಸಿತು.ಒಂದರ್ಥದಲ್ಲಿ ಪಾಕಿಸ್ತಾನದ ಸ್ವಾತಂತ್ರ ಹೋರಾಟಗಾರರಿಗೆ ಮತ್ತು ಪ್ರತ್ಯೇಕತವಾದಿಗಳಿಗೂ ಈ ಸಂಶೋಧನಾತ್ಮಕ ಕೃತಿ ಚರ್ಚಾತ್ಮಕವಾದ ಕೃತಿಯಾಗಿಯೇ ಹೊರಹೊಮ್ಮಿತು.

೧೯೪೩ರಲ್ಲಿ ಬರೆದ 'ಗಾಂಧಿ ಮತ್ತು ಅಸ್ಪೃಶ್ಯತೆ ನಿವಾರಣೆ' ಮತ್ತದೇ ೧೯೪೩ರಲ್ಲಿ ಬರೆದ 'ರಾನಡೆ ಗಾಂಧಿ ಮತ್ತು ಜಿನ್ನಾ' ಹಾಗೂ ೧೯೪೫ರಲ್ಲಿ ಬರೆದ 'ಕಾಂಗ್ರೆಸ್ ಮತ್ತು ಗಾಂಧಿ ಅಸ್ಪೃಶ್ಯರಿಗಾಗಿ ಏನು ಮಾಡಿದ್ದಾರೆ?' ಎಂಬ ಮೂರು ಕೃತಿಗಳು ಅಂಬೇಡ್ಕರ್ ರವರು ಭಾರತ ಮತ್ತು ಈ ನೆಲದ ಮೂಲ ನಿವಾಸಿ ಭಾರತೀಯರನ್ನು ಸ್ವಾತಂತ್ರ ಚಳವಳಿಯ ಸಂದರ್ಭದಲ್ಲಿ ತನು ಮನಗಳನ್ನು ಅರ್ಪಿಸಿ ಭಾಗವಹಿಸಿದ್ದರೂ ಸಹ-ಹಾಗೂ ದುಡಿದು ಶ್ರಮದ ಮೂಲಕ ರಾಷ್ಟ್ರವನ್ನು ಕಟ್ಟಿತ್ತಿದ್ದರೂ ಸಹ ಜಾತಿಯ ಹಿನ್ನೆಲೆಯಲ್ಲಿ ಪರಿಗಣಿಸದೆ ಅವರನ್ನು ಅಸ್ಪೃಶ್ಯನಾಗಿಸಿದಂತೆ ಅವರ ಚರಿತ್ರೆಯನ್ನೋ ಅಸ್ಪೃಶ್ಯತೆಗೆ ಒಳಪಡಿಸಿದ ಮಾದರಿಯನ್ನು ವಸ್ತುನಿಷ್ಠವಾದ ಅಧ್ಯಯನಕ್ಕೆ ಒಳಪಡಿಸಿದ್ದು ಅವರ ಭಾರತ ಮತ್ತು ಭಾರತೀಯತೆಯ ವಾಸ್ತವದ ಚರಿತ್ರೆ ರಚಿಸಲು ನೋಟಕ್ಕೆ ಹಿಡಿದ ಕೈಗನ್ನಡಿಯಾಗಿದೆ. ೧೯೪೭ರ ಸಂದರ್ಭ ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿ ತನ್ನ ತುತ್ತತುದಿಯನ್ನು ಮುಟ್ಟಿದ ಸಂದರ್ಭವೇ ಆಗಿತ್ತು. ಈ ಸಂದರ್ಭದಲ್ಲಿ ಅಂಬೇಡ್ಕರ್ ಅವರು ಬ್ರಿಟಿಷರು ಭಾರತೀಯರಿಗೆ ಸ್ವಾತಂತ್ರವನ್ನು ಕೊಡಲೇಬೇಕು, ಅವರು ಭಾರತವನ್ನು ಬಿಟ್ಟು ಹೋಗಲೇಬೇಕು ಎಂದು ಬಹುದೊಡ್ಡ ಸಾಂಪ್ರದಾಯಿಕ ವಾದಿಗಳು ನಡೆಸುತ್ತಿದ್ದ ಚಳವಳಿಯ ವಿರುದ್ಧ ಭಾರತೀಯರು-ಭಾರತೀಯರಿಗೆ ಎರಡು ಸಾವಿರಕ್ಕೂ ಹೆಚ್ಚು ವರ್ಷಗಳಿಂದ ಕಸಿದುಕೊಂಡಿರುವ ಮೂಲಭೂತ ಹಕ್ಕುಗಳ ಸ್ವಾತಂತ್ರ್ಯ ಕೊಡಬೇಕು ಎಂಬ ಕೂಗಿನೊಂದಿಗೆ ಸೈದ್ಧಾಂತಿಕ ಚಳವಳಿಯನ್ನು ಹೂಡಿದರು. ಈ ಸೈದ್ಧಾಂತಿಕ ಚಳವಳಿಯಿಂದಾಗಿ ಕೆಲವು ರಾಷ್ಟ್ರೀಯವಾದಿಗಳ ದೃಷ್ಟಿಯಲ್ಲಿ ಅಂಬೇಡ್ಕರ್ ರವರು

ರಾಷ್ಟ್ರದ್ರೋಹಿ ಎಂಬ ಹೇಳಿಕೆಯನ್ನು ಹೇಳಿಸಿಕೊಂಡರು. ಆದರೆ ಅಂಬೇಡ್ಕರ್‌ರವರ ಹೋರಾಟ ರಾಷ್ಟ್ರದ್ರೋಹಿತ್ವದ ಹೋರಾಟವಾಗಿರಲಿಲ್ಲ-ಬದಲಿಗೆ ಭಾರತ ಮತ್ತು ಭಾರತೀಯತ್ವದ ಮೂಲಭೂತ ಹಕ್ಕುಗಳ ಸ್ವಾತಂತ್ರ ಹೋರಾಟವಾಗಿತ್ತು.ಇದಕ್ಕೆ ಪೂರಕವಾಗಿ ಗಾಂಧೀಜಿಯವರು ದುಂಡುಮೇಜಿನ ಸಮ್ಮೇಳನ ಹಾಗೂ ಪೂನಾ ಒಪ್ಪಂದಗಳಲ್ಲಿನ ನಿಲುವುಗಳ ವಿರುದ್ಧ, ಗಾಂಧೀಜಿಯವರ 'ಹರಿಜನ' ಎಂಬ ಪದದ ವಿರುದ್ಧ ಬಹುದೊಡ್ಡ ಅಸ್ಮಿತೆಯಹೋರಾಟ ಮಾಡಿದ್ದೇ ಸಾಕ್ಷಿಯಾಗಿದೆ.

ಈ ಎಲ್ಲಾ ಅಂಶಗಳನ್ನು ಅಂಬೇಡ್ಕರ್‌ರವರು ಮೇಲಿನ ಕೃತಿಗಳಲ್ಲಿ ಜನಮುಖಿಯಾಗಿ ಚರ್ಚಿಸಲು ಮುಂದಾಗಿದ್ದಾರೆ. ಈ ಕೃತಿಗಳು ಇಂದಿನ ಭಾರತದ ಜನಕೇಂದ್ರಿತ ಸಮಾಜಮುಖಿ ಅಧ್ಯಯನಕಾರರಿಗೆ ಬಹುದೊಡ್ಡ ಅಕರ ಗ್ರಂಥಗಳಾಗಿ ಹೊರಹೊಮ್ಮಿವೆ. ಈ ಕೃತಿಗಳಲ್ಲಿ ಅಂಬೇಡ್ಕರ್ ಅವರು ಎತ್ತಿದ ವಾಸ್ತವದ ಪ್ರಶ್ನೆಗಳಿಗೆ-ಇವರೆಗೂ ಸಾಂಪ್ರದಾಯವಾದಿಗಳಿಂದ ಪುರಾಣದ ಉತ್ತರ ದೊರಕಿದೆ ಹೊರತು, ವಾಸ್ತವದ ಉತ್ತರ ದೊರಕಲಿಲ್ಲ. ಇದಕ್ಕೆ ಮೂಲಕಾರಣ ಭಾರತದ ಐತಿಹಾಸಿಕ ಹಾಗೂ ಜನಕೇಂದ್ರಿತ ಚರಿತ್ರೆ ಪುರಾಣಮಿಶ್ರಿತಗೊಂಡಿರುವುದೇ ಆಗಿದೆ ಎಂಬುದು ಅಂಬೇಡ್ಕರ್ ಅವರ ಸ್ಪಷ್ಟ ನಿಲುವಾಗಿತ್ತು. "ಈ ಹಂತದಲ್ಲಿ ಭಾರತದ ವಸ್ತುನಿಷ್ಠ ಚರಿತ್ರೆಯಲ್ಲಿ ಪುರಾಣ ಮಾತನಾಡಿದಷ್ಟು ವಾಸ್ತವ ಮಾತನಾಡಲೇ ಇಲ್ಲ" ಎಂಬುದು ಅಂಬೇಡ್ಕರ್ ಅವರ ಸ್ಪಷ್ಟ ನಿಲುವಾಗಿತ್ತು.

ಮೇಲಿನ ಈ ಎಲ್ಲಾ ಕೃತಿಗಳ ಸ್ವರೂಪ ಭಾರತಕ್ಕೆ ದಾಳಿ ಮಾಡಿದ ಆರ್ಯ ಮತ್ತು ಮುಸ್ಲಿಂ ಪ್ರಭುತ್ವಗಳ ಆಳ್ವಿಕೆ ಹಾಗೂ ಮುಂದೆ ಭಾರತಕ್ಕೆ ಬರಬೇಕೆಂದುಕೊಂಡಿದ್ದ ಪ್ರಜಾಪ್ರಭುತ್ವಗಳ ವಿಶ್ಲೇಷಣಾತ್ಮಕ ಅಧ್ಯಯನವೇ ಆಗಿದೆ. ೧೯೪೬ರಲ್ಲಿ ಅಂಬೇಡ್ಕರ್ ಅವರ ಮಹತ್ವದ ಕೃತಿ ಶೂದ್ರರು ಯಾರು? ಎಂಬುವುದು.ಈ ಕೃತಿಯ ಜೀವಾಳ ಭಾರತದಲ್ಲಿ ಚಾತುರ್ವರ್ಣ ವ್ಯವಸ್ಥೆಯಲ್ಲಿ ಶೂದ್ರರ ಸ್ಥಾನಮಾನಗಳನ್ನು ವಸ್ತುನಿಷ್ಠವಾಗಿ ಧಾರ್ಮಿಕ ಹಾಗೂ ಸಾಮಾಜಿಕ ಹಿನ್ನಲೆಯಲ್ಲಿ ಅನಾವರಣಗೊಳಿಸುವುದೇ ಆಗಿತ್ತು. ದೇವರು ಹಾಗೂ ಧರ್ಮದ ಹೆಸರಿನಲ್ಲಿ ದುಡಿಯದೇ ಸ್ಪೃಶ್ಯರೆಂದು ಗುರುತಿಸಿಕೊಂಡವರ ವಿರುದ್ಧ, ದೇವರು ಹಾಗೂ ಧರ್ಮದ ಹೆಸರಿನಲ್ಲಿ ದುಡಿದರು ಸಹ ಅಸ್ಪೃಶ್ಯರೆನೆಸಿ ಕೊಂಡವರ ನಿಜ ಚರಿತ್ರೆಯನ್ನು ಅನಾವರಣಗೊಳಿಸುವುದೇ ಈ ಕೃತಿಯ ಮತ್ತೊಂದು ಜೀವಾಳ. ಒಟ್ಟಾರೆ ಹೇಳುವುದಾದರೆ ದೇವಾಲಯ ಕಟ್ಟಿದರೂ ದೇವಾಲಯದೊಳಗೆ ಪ್ರವೇಶ ಮಾಡದವರ ಹಾಗೂ ಮಾಡಿಸದವರ, ಕೆರೆ ಕಟ್ಟಿದರೂ ಕೆರೆಯ ನೀರನ್ನು ಮುಟ್ಟದವರ ಹಾಗೂ ಮುಟ್ಟಿಸದವರ, ಸಮೃದ್ಧವಾಗಿ ಬೆಳೆಯನ್ನು ಬೆಳೆದರೂ ಹಸಿವಿನಿಂದ ಮಲಗಿದವರ, ಉತ್ತು-ಬಿತ್ತಿ ಬೆಳೆಯದಿದ್ದರೂ ಹೊಟ್ಟೆ ತುಂಬ ಉಂಡು ತೇಗಿದವರ ವಿರುದ್ಧವೇ ಆಗಿತ್ತು. ಮುಂದುವರೆದು ಪಾರಂಪರಿಕ ಆಚರಣೆಯ,

ಸಂಪ್ರದಾಯ, ಶ್ರಮದ ಹಿನ್ನೆಲೆಯ ವಾಸ್ತವಂಶದ ದೇವರುಗಳನ್ನು ಪುರಾಣ ಮಿಶ್ರಿತಗೊಳಿಸಿ ತಮ್ಮ ಸ್ವಾರ್ಥದ ತೋಳ್ತೆಕ್ಕೆಗೆ ಪಡೆದುಕೊಂಡವರ ವಿರುದ್ಧವೇ ಬರೆದದ್ದು ಎಂಬುವುದು ಸ್ಪಷ್ಟ. ಈ ಕೃತಿ ಪ್ರಕಟಗೊಂಡಿದ್ದು ೧೯೪೬ರಲ್ಲಿ. ಭಾರತಕ್ಕೆ ಸ್ವಾತಂತ್ರ್ಯ ಬಂದದ್ದು ೧೯೪೭ರಲ್ಲಿ. ಈ ಸಂದರ್ಭ ಬಹುದೊಡ್ಡ ಸಾಂಸ್ಕೃತಿಕ ಚರ್ಚೆಗೆ ಗ್ರಾಸವಾದ ಸಂದರ್ಭವೂ ಆಯಿತು. ಹಾಗೆಯೇ ಸ್ವಾತಂತ್ರ ರಾಷ್ಟ್ರೀಯವಾದಿ ಚಳವಳಿಗಾರರು ಹಾಗೂ ಅಖಂಡ ಭಾರತದ ಜನತೆ ಅಂಬೇಡ್ಕರ್‌ರತ್ತ ಬಹುದೃಷ್ಟಿಕೋನ ದಿಂದ ನೋಡುವಂತೆಯೂ ಆಯಿತು. ಈ ಕೃತಿಯ ಹಿನ್ನೆಲೆಯಿಂದಲೇ ಬಂದಂತಹ ಮತ್ತೊಂದು ಮಹತ್ವದ ಕೃತಿ 'ಅಸ್ಪೃಶ್ಯರು' ಎಂಬುವುದು. ಹೆಸರೇ ಹೇಳುವ ಹಾಗೆ ಈ ಕೃತಿಯ ಜೀವಾಳವೇ ಈ ರಾಷ್ಟ್ರದ ಮೂಲನಿವಾಸಿಗಳು ವಾಸಿಸುವ ಸ್ಥಳ, ಸೇವಿಸುವ ಆಹಾರ, ಪೂಜಿಸುವ ದೇವರು, ಮಾಡುವ ಕಸುಬುಗಳು, ಆಡುವ ಭಾಷೆಯ ಹಿನ್ನೆಲೆ ಯಲ್ಲಿ ಸ್ವಘೋಷಿತ ಸ್ಪೃಶ್ಯರು ಇವರನ್ನು ಅಸ್ಪೃಶ್ಯರು ಎಂದು ಗುರ್ತಿಸಿದರು ಎಂಬುದನ್ನು ಸಂಶೋಧನಾತ್ಮವಾಗಿ ಜನಮುಖಿ ಆಧಾರದಲ್ಲಿ ಅಂಬೇಡ್ಕರ್ ಅವರು ಅನಾವರಣಗೊಳಿಸಿದರು. ಎರಡು ಸಾವಿರ ವರ್ಷಗಳಿಂದ ಯಾರೋ ಹೇಳದ, ಯಾರು ಹೇಳಬಾರದು ಎಂಬ ನಿರ್ಬಂಧನೆಗೆ ಒಳಗಾಗಿದ್ದ ಅಂಶಗಳನ್ನು ಘಂಟಾಘೋಷವಾಗಿ ಬರೆದು ಅನಾವರಣ ಗೊಳಿಸಿದ ಧೀಮಂತರು ಬಾಬಾಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ರವರು.ಅದಕ್ಕಾಗಿ ಇವರನ್ನು ನವಭಾರತದ ಬೌದ್ಧಿಕತೆಯ ಸಾಂಸ್ಕೃತಿಕ ಶಿಲ್ಪಿ ಎಂದು ಕರೆಯುವುದು.

ಭಾರತದ ಎಲ್ಲ ಭಾಷೆಗಳಿಗೂ ತರ್ಜುಮೆಗೊಂಡಿರುವ ಈ ಕೃತಿ ಈ ನೆಲದ ಮೂಲ ಭಾರತೀಯರಿಗೆ ತಮ್ಮ ರಾಷ್ಟ್ರೀಯತೆಯನ್ನು ಅರ್ಥಮಾಡಿಕೊಳ್ಳಲು ಪ್ರೇರಣೆಯಾಗಿದೆ. ಅಂಬೇಡ್ಕರ್ ಅವರಿಗೆ ಅಸ್ಪೃಶ್ಯರು ಎಂಬ ಸಾಮಾಜಿಕ ಹಿನ್ನೆಲೆಯಿಂದ ಗುರುತುಸಲ್ಪಟ್ಟ ಜನವರ್ಗ ಒಂದಾದರೆ, ಧಾರ್ಮಿಕ ಹಾಗೂ ಸಾಮಾಜಿಕ ಹಿನ್ನೆಲೆಯಿಂದ ಸ್ಪೃಶ್ಯ ಮತ್ತು ಅಸ್ಪೃಶ್ಯರೆಂದೆನ್ನದೆ ಶತ ಶತಮಾನಗಳಿಂದಲೂ ಶೋಷಣೆ ಒಳಗಾಗಿದ್ದ ಮಹಿಳೆಯರು, ಅವರ ಸ್ಥಿತಿಗತಿ, ಅವರ ಮೂಲಭೂತ ಹಕ್ಕುಗಳನ್ನು ಈ ನೆಲದಲ್ಲಿ ಸಾಂಸ್ಕೃತಿಕವಾಗಿ ಕಸಿಮಕೊಂಡವರ ವಿರುದ್ಧ ಪ್ರತಿಪಾದನೆ ಅಥವಾ ಒಡಲಾಳದ ಭಾರತೀಯತ್ವದ ಹಿನ್ನೆಲೆಯಲ್ಲಿ ವಕಲಾತು ಮಾಡುವ ಹಿನ್ನೆಲೆಯಲ್ಲಿ ೧೯೫೦ ರಲ್ಲಿ 'ಹಿಂದೂ ಮಹಿಳೆಯರ ಏಳಿಗೆ ಮತ್ತು ಪತನ' ಎಂಬ ಮಹತ್ವದ ಕೃತಿಯನ್ನು ರಚಿಸಿದರು. ಈ ಕೃತಿಯನ್ನು ಪ್ರಕಟ ಮಾಡಿದ ಸಂದರ್ಭ ಭಾರತಕ್ಕೆ ಸ್ವಾತಂತ್ರ ಬಂದು, ಬಾಬಾ ಸಾಹೇಬ್ ಅಂಬೇಡ್ಕರ್ ಅವರೇ ರೂಪಿಸಿದ ಪ್ರಜಾಪ್ರಭುತ್ವ ವ್ಯವಸ್ಥೆಯು ಸಂವಿಧಾನ ಜಾರಿಗೆ ಬಂದ ಸಂದರ್ಭವೂ ಆಗಿತ್ತು. ಶತಶತಮಾನಗಳಿಂದ ಮಹಿಳೆ ಎಂಬ ಕಾರಣಕ್ಕಾಗಿ ಅನೇಕ ಬಿಡಿಸಲಾಗದ ಧಾರ್ಮಿಕ ಹಾಗೂ ಸಾಮಾಜಿಕ ಸಂಕೋಲೆಗಳಿಗೆ ಸಿಲುಕಿದ್ದ ಈ ಬಹುದೊಡ್ಡ ಜನಸಮುದಾಯ ಪುರುಷ ಪ್ರಧಾನ

ವ್ಯವಸ್ಥೆಯಿಂದ ಕಾನೂನಾತ್ಮಕವಾಗಿ ಮುಕ್ತಗೊಳಿಸಿ ಅವರನ್ನು ಭಾರತ ಸತ್ರಜೆಗಳನ್ನಾಗಿ ಅನಾವರಣಗೊಳಿಸಲು ಭಾರತ ಸರ್ಕಾರದ ಪ್ರಥಮ ಕಾನೂನು ಮಂತ್ರಿಯಾಗಿ ಹಿಂದೂ ಕೋಡ್ ಬಿಲ್‌ನ್ನು ಜಾರಿಗೆ ತರಲು ಮುಂದಾದರು. ಆದರೆ ಅವರದೇ ಸರ್ಕಾರದ ಭಾರತಕ್ಕೆ ಸ್ವಾತಂತ್ರ್ಯವೇನು ಬಂದಿತ್ತು. ಭಾರತ ಹಾಗೂ ಭಾರತೀಯರನ್ನು ಆಳ್ವಿಕೆ ಮಾಡಲು ಅಂಬೇಡ್ಕರವರು ರಚಿಸಿದ ಲಿಖಿತ ಸಂವಿಧಾನವು ಜಾರಿಗೆ ಬಂದಿತ್ತು. ಆದರೆ ಭಾರತೀಯರ ಸಾಂಪ್ರದಾಯಿಕ ಪುರುಷ ಪ್ರಧಾನ ವ್ಯವಸ್ಥೆಯ ಮನಸ್ಸುಗಳಿಗೆ ಸ್ವಾತಂತ್ರವಾಗಲಿ, ಸಂವಿಧಾನವಾಗಲಿ ಕಿಂಚಿತ್ತೋ ಜಾರಿಗೆ ಬಂದಿರಲೇ ಇಲ್ಲ. ಇಂತಹ ಅಜ್ಞಾನದ ಮನಸ್ಸುಗಳ ಮುಂದೆ ಅಂಬೇಡ್ಕರ್ ಅವರ ಮಹಿಳಾಪರ ಚಿಂತನೆಯ ಜ್ಞಾನದ ಮಸೂದೆಗಳು ಅಂಗೀಕಾರವಾಗಲಿಲ್ಲ. ತತ್‌ಕ್ಷಣವೇ ಅಂಬೇಡ್ಕರ್ ಅವರು ತಮ್ಮ ಸಂವಿಧಾನಾತ್ಮಕ ನಿಲುವಿಗೆ ನ್ಯಾಯ ದೊರಕದ ಕಾರಣದಿಂದ ತಮ್ಮ ಮಂತ್ರಿ ಪದವಿಗೆ ರಾಜೀನಾಮೆಯನ್ನು ನೀಡಿ ಹೊರ ನಡೆದರು. ಈ ರಾಜೀನಾಮೆ ಅವರ ಸೋಲಾಗಿರಲಿಲ್ಲ–ಬದಲಿಸಿ ತಮ್ಮ ಭಾರತತ್ವದ ಗಟ್ಟಿತನದ ನಿಲುವಿಗೆ ಸಂದ ಜಯವಾಗಿತ್ತು.

ಈ ಮೊದಲೇ ಹೇಳಿದ ಅವರ ಸಮಗ್ರ ಕೃತಿಗಳು ಹಾಗೂ ಅವರು ಜನರಿಗಾಗಿ ಆರಂಭಿಸಿದ **ಮೂಕನಾಯಕ–ಬಹಿಷ್ಕೃತ ಭಾರತ–ಸಮತ ಜನತಾ–ಹಾಗೂ ಪ್ರಬುದ್ಧ ಭಾರತ** ಎಂಬ ಪತ್ರಿಕೆಗಳು ಸಹ ಎರಡು ಸಾವಿರ ವರ್ಷಗಳಿಂದ ಸಾಂಸ್ಕೃತಿಕವಾಗಿ ಗಟ್ಟಿಯಾಗಿದ್ದರೂ, ಅಸಾಂಸ್ಕೃತಿಕ ಹಿನ್ನಲೆಗೆ ಒಳಗಾಗಿ ಮಲಗಿದ್ದ ಹಾಗೂ ಮಲಗಿಸಿದ್ದವರ ಎಚ್ಚರಿಸುವ ಬರವಣಿಗೆಗಳೇ ಆಗಿ ಹೊರಹೊಮ್ಮಿದ್ದು ಚಾರಿತ್ರಿಕ ಹಂಸವೇ ಆಗಿದೆ. ಮುಂದುವರೆದಂತೆ ಈ ಎಲ್ಲದರ ಸಾರವೇ ಭಾರತದ ಸಮ ಸಂಸ್ಕೃತಿಯನ್ನು ಅನಾವರಣಗೊಳಿಸುವ ಪ್ರಪಂಚಕ್ಕೆ ಮಾದರಿಯಾಗಿರುವ ಅಂಬೇಡ್ಕರ್ ಅವರು ರಚಿಸಿದ ಭಾರತದ ಸಂವಿಧಾನ.

ಭಾರತದ ಸಂವಿಧಾನ ಭಾರತ ಮತ್ತು ಭಾರತೀಯರಿಗಾಗಿ ನಿರ್ಮಾಣಗೊಂಡು, "ಸರ್ವರಿಗೂ ಸಮಪಾಲು–ಸರ್ವರಿಗೂ ಸಮಬಾಳು" ಎಂಬ ಸಮಸಂಸ್ಕೃತಿಯ ಪ್ರತಿಪಾದನೆಯ ಹಿನ್ನೆಲೆಯಲ್ಲಿ ಅಂಬೇಡ್ಕರ್‌ರವರಿಂದ ರಚನೆಗೊಂಡು ಭಾರತಕ್ಕಲ್ಲದೆ ಪ್ರಪಂಚಕ್ಕೆ ಮಾದರಿಯಾಗಿದೆ.ಇಂದು ಭಾರತ ಅಂಬೇಡ್ಕರ್‌ರವರು ರಚಿಸಿದ ಈ ಬೃಹತ್ ಲಿಖಿತ ಸಂವಿಧಾನದಲ್ಲಿ ಶತಮಾನಗಳಿಂದ ಮಾತನಾಡದೆ ಇದ್ದ ಮೂಕನಾಯಕರನ್ನು ಮಾತನಾಡಿಸುತಿದೆ. ಹಾಗೆಯೇ ಏಕಮುಖವಾಗಿ ಒಬ್ಬರೇ ಮಾತನಾಡಿಸಿದ್ದನ್ನು ಸಂವಿಧಾನಾತ್ಮಕ ಕಾನೂನುಗಳಿಂದ ನಿರ್ಬಂಧಕ್ಕೆ ಒಳಪಡಿಸಿ–ಬಹು ಜನರು ಮುಕ್ತವಾಗಿ ಮಾತನಾಡುವಂತೆ ಮಾಡಿ ಪ್ರಬುದ್ಧ ಭಾರತದ ಕಲ್ಪನೆಯ ಪ್ರಜಾಪ್ರಭುತ್ವದ ಆಶಯಕೇ ಪ್ರಪ್ರಥಮವಾಗಿ ಮುನ್ನುಡಿ ಬರೆದಿದೆ. ಈ ಎಲ್ಲದರ ಸಾರವೇ ಅಂಬೇಡ್ಕರ್ ಅವರು ಭಾರತ ಹಾಗೂ ಭಾರತೀಯರಲ್ಲೂ ತಮ್ಮ ಅಂತರಾಳದ ಭಾರತೀಯತ್ವದ ಒಡಲಾಳ ದಿಂದ ಕಂಡ ಪರಿಯೇ ತಮ್ಮ ಕೊನೆಯ ದಿನಮಾನಗಳಲ್ಲಿ ರಚಿಸಿದ ಕೃತಿ "ಬುದ್ಧ ಮತ್ತು ಆತನ ಧಮ್ಮ" ಎಂಬ ಮಹತ್ವದ ಕೃತಿ.

ಈ ಕೃತಿಯೂ ಅವರ ಪ್ರೌಢಿಮೆಗೆ ಹಿಡಿದ ಕೈಗನ್ನಡಿಯಾಗಿದೆ.೧೯೫೬ರಲ್ಲಿ ನಿಧನರಾದ ಅಂಬೇಡ್ಕರ್ ಅವರ ಈ ಹಸ್ತಪ್ರತಿಯನ್ನು ೧೯೫೭ರಲ್ಲಿ ಅವರ ಪ್ರೀತಿ ಅಭಿಮಾನಿಗಳ ಸಹಕಾರದೊಂದಿಗೆ ಪ್ರಕಟಗೊಳಿಸಲಾಯಿತು. ದೇಶಿ ಹಾಗೂ ವಿದೇಶಿ ಭಾಷೆಗಳಿಗೆ ವಸ್ತುನಿಷ್ಠವಾಗಿ ತರ್ಜಮೆಗೊಂಡಿರುವ ಕೆಲವೇ ಕೆಲವು ಮಹತ್ವದ ಕೃತಿಗಳಲ್ಲಿ ಈ ಕೃತಿಯು ಮೊದಲ ಪಂಕ್ತಿಯದು. ಇದಕ್ಕೆ ಅದರ ಮೂಲಭೂತ ಸಾರವೇ ಕಾರಣವಾಗಿದೆ. ಈ ಕೃಷಿಯಲ್ಲಿ ಭಾರತ ಇದೆ ಹಾಗೂ ಭಾರತೀಯತೆ ಹೆಚ್ಚು ಹೆಚ್ಚಾಗಿ ಅನಾವರಣಗೊಂಡಿದೆ. ಈ ಕೃತಿಯಲ್ಲಿ ಭಾರತದ ಜನತೆ ಮಾತನಾಡುವ ಅಂಬಲವನ್ನು ಬಯಸಿದ್ದಾರೆ. ಎರಡು ಸಾವಿರ ವರ್ಷಗಳಿಂದ ಮಾತನಾಡದೆ ಇದ್ದ ಮೂಕ ನಾಯಕರಿಗೆ ಈ ಕೃತಿಯು ಮಾತನ್ನು ಬರಿಸಿತು ಎಂದು ಹೇಳಿದರೆ ಖಂಡಿತವಾಗಿಯೂ ತಪ್ಪಾಗಲಾರದು.

ಅಂಬೇಡ್ಕರ್ ಅವರು ಬಿಡಿಬಿಡಿಯಾಗಿ ಬರೆದಿದ್ದ ಹಾಗೂ ಸಮಾರಂಭಗಳಲ್ಲಿ ದೇಶ ಹಾಗೂ ದೇಶವಾಸಿಗಳನ್ನು ಉದ್ದೇಶಿಸಿ ಒಡಳಾಳದಿಂದ ಮಾತನಾಡಿರುವುದನ್ನು ಸಮಗ್ರವಾಗಿ ಸಂಗ್ರಹಿಸಿ 'ಅಂಬೇಡ್ಕರ್‌ರವರ ಬರಹ ಹಾಗೂ ಭಾಷಣಗಳು' ಎಂಬ ಒಟ್ಟು ೨೨ ಬೃಹತ್ ಸಂಪುಟಗಳು ಹಾಗೂ ಭಾರತದ ಜನರನ್ನು ಎಚ್ಚರಿಸಲು ತಾವೇ ಸಂಪಾದಕರಾಗಿ ಹೊರ ತಂದ ೫ ಪತ್ರಿಕೆಗಳನ್ನೊಗೊಂಡ ಬೃಹತ್ ಸಂಪುಟಗಳು–ಭಾರತ ಸರ್ಕಾರ ಹಾಗೂ ಭಾರತದ ಎಲ್ಲಾ ರಾಜ್ಯ ಸರ್ಕಾರಗಳು ಕೂಡ ತಮ್ಮ ತಮ್ಮ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದ ಮಾಡಿ ಪ್ರಕಟಿಸಿ ಅಂಬೇಡ್ಕರ್‌ರವರ ಚಿಂತನೆಗಳನ್ನು ಓದುಗರಿಗೆ ತಲುಪಿಸುವ ಜವಬ್ದಾರಿಯನ್ನು ಮಾಡಿವೆ. ಮಾಡುತ್ತಿವೆ.

ಈ ಮಹತ್ವದ ಸಂಪುಟಗಳು ತನ್ನೊಡಲೊಳಗೆ ಒಂದಿರುವ ಭಾರತ ಹಾಗೂ ಭಾರತೀಯರನ್ನು ಪ್ರತಿನಿಧಿಸುವ ಪ್ರತಿಯೊಬ್ಬ ಭಾರತೀಯನ ಜೀವಸೆಲೆಯ ಸಾರ. ಈ ಬೃಹತ್ ಸಂಪುಟಗಳ ಜೀವಾಳವೆ ಭಾರತೀಯರಿಗೆ ಭಾರತೀಯತೆಯನ್ನು ಅನಾವರಣಗೊಳಿಸುವುದೇ ಆಗಿದೆ. ಈ ರಾಷ್ಟ್ರದ ವಾರಸುದಾರರಾದ ಈ ನೆಲ ಸಂಸ್ಕೃತಿ ಹಿನ್ನೆಲೆಯ ಜನರ ಪೂರ್ವಿಕರು ಬದುಕಿ ಬಾಳಿದ ದೇಶದ ನೆಲದ ಐತಿಹಾಸಿಕ ಇತಿಹಾಸವನ್ನು ಅನಾವರಿಸುವ ಜೊತೆಗೆ–ಅನೇಕ ಪ್ರಶ್ನೆಗಳೊಂದಿಗೆ ಉತ್ತರವನ್ನು ತಮಗೆ ತಾವೇ ಹುಡುಕಿಕೊಳ್ಳುವಂತೆ ಮಾಡುವುದೇ ಈ ಕೃತಿಗಳ ಮುಖ್ಯ ಜೀವಾಳವಾಗಿದೆ.

ಪರಾಮರ್ಶನ ಗ್ರಂಥಗಳು

೧. ಬಾಬಾಸಾಹೇಬರು ಒಡಲಾಳದಿಂದ ಗ್ರಹಿಸಿದ ಭಾರತ ಮತ್ತು ಭಾರತೀಯರು, ಡಾ. ಎನ್. ಚಿನ್ನಸ್ವಾಮಿ ಸೋಸಲೆ, ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೨೪.

ISSN 2278-5043

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚರಿತ್ರೆ ಅಧ್ಯಯನ

ಸಂಪುಟ-೧೩ ಸಂಚಿಕೆ- ೨ ಜನವರಿ-ಜೂನ್ ೨೦೨೧



ಚರಿತ್ರೆ ವಿಭಾಗದ ಪ್ರಕಟಣೆ

ಚರಿತ್ರೆ ಅಧ್ಯಯನ

ಸಂಪುಟ ೧೩, ಸಂಚಿಕೆ ೨
ಜನವರಿ–ಜೂನ್, ೨೦೨೧

ಸಂಪಾದಕ
ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

Publication of Dept., of History

CHARITRE ADHYAYANA

Bi-Annual Vol-13, Issue-2, January-June, 2021

Edited by
Dr. Virupakshi Poojarahalli
Professor, Department of History
Kannada University, Hampi
Vidyaranya 583 276

Published by
Dr. Shailaja I. Hiremath
Director, Prasaranga
Kannada University, Hampi
Vidyaranya 583 276

Pages: viii + ೧೬೬

www.kannadauniversity.org

First Impression: 2023

ISSN 2278-5043

ಚರಿತ್ರೆ ಅಧ್ಯಯನ, ಅರ್ಧವಾರ್ಷಿಕ ಪತ್ರಿಕೆ

ಸಂಪುಟ-೧೩, ಸಂಚಿಕೆ-೨, ಜನವರಿ-ಜೂನ್, ೨೦೨೧

© ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೨೨

ಪ್ರಸ್ತುತ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಜವಾಬ್ದಾರರಾಗಿರುತ್ತಾರೆ.

ಪ್ರಧಾನ ಸಂಪಾದಕರು: ಡಾ. ಡಿ.ವಿ. ಪರಮಶಿವಮೂರ್ತಿ
ಸಂಪಾದಕರು: ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಸಂಪಾದಕ ಮಂಡಳಿ

ಡಾ. ವಿಜಯ್ ಪೂಣಚ್ಚ ತಂಬಂಡ
ಡಾ. ಕೆ. ಮೋಹನಕೃಷ್ಣ ರೈ, ಡಾ. ಎನ್. ಚಿನ್ನಸ್ವಾಮಿ ಸೋಸಲೆ

ಬಿಡಿ ಪ್ರತಿ: ರೂ. ೧೦೦/- ವಾರ್ಷಿಕ ಚಂದಾ: ವ್ಯಕ್ತಿಗಳಿಗೆ ರೂ. ೧೫೦/-
ಸಂಸ್ಥೆಗಳಿಗೆ ರೂ. ೨೦೦/-

ಅಕ್ಷರ ಸಂಯೋಜನೆ

ಅಮರೇಶ್ವರ ಕಂಪ್ಯೂಟರ್ಸ್, ಕಮಲಾಪುರ

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ಮೈಸೂರು ಬ್ಯಾಂಕ್ ವೃತ್ತ, ನಂ. ೧, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯, ದೂ.: ೦೮೦-೨೨೩೭೨೩೪೮

ಮುದ್ರಣ

ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

ಪರಿವಿಡಿ

ಸಂಪಾದಕರ ಮಾತು / iii

೧. ವ್ಯಾಪಾರಿ ಬಂಡವಾಳ, ಕೈಗಾರಿಕಾ ಬಂಡವಾಳ ಮತ್ತು ನಗರ ಕಾರ್ಮಿಕರು : ಕೆಲವು ಟಿಪ್ಪಣಿಗಳು / ೧
ಡಾ. ಕೆ. ಮೋಹನ್‌ಕೃಷ್ಣ ರೈ

೨. ಜೋಗಿ ಸಂಪ್ರದಾಯ : ಚರಿತ್ರೆ ಮತ್ತು ಜಾನಪದ / ೧೨
ಡಾ. ವಿರೂಪಾಕ್ಷಿ ಪೂಜಾರಹಳ್ಳಿ

೩. ಕನ್ನಡ ನಾಡಿಗೆ ವಿಜಯನಗರ ಸಾಮ್ರಾಜ್ಯದ ಕೊಡುಗೆ : ವಸ್ತುನಿಷ್ಠ ನೋಟ / ೩೭
ಡಾ. ಎನ್. ಚಿನ್ನಸ್ವಾಮಿ ಸೋಸಲೆ

೪. ವಸಾಹತುಶಾಹಿ ಆಳ್ವಿಕೆಯಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಬಂದರುಗಳು / ೪೯
ಡಾ. ಮಾಲತಿ ಕೆ. ಮೂರ್ತಿ

೫. ಬೌದ್ಧಧರ್ಮ ಮತ್ತು ಜೈನಧರ್ಮಕ್ಕೆ ಆಡಳಿತಗಾರ್ತಿಯರ ಕೊಡುಗೆಗಳು / ೫೯
ಡಾ. ತಾರಾ ಬಿ.ಎನ್.

೬ ಕೊಪ್ಪಳ ಜಿಲ್ಲೆಯ ಬೇಟೆ ವೀರಗಲ್ಲುಗಳು / ೭೦
ಡಾ. ಗೀತಾ ಪಾಟೀಲ

೭ ಹೈದರ್ ಮತ್ತು ಟಿಪ್ಪು ಕಾಲದ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆ : ಚಾರಿತ್ರಿಕ ನೋಟ / ೮೪
ಡಾ. ಕುಮಾರ ಎನ್.

೮. ಪೆರಿಯಾರ್ ಚಿಂತನೆಯಲ್ಲಿ ತಳಸಮುದಾಯಗಳು / ೯೫
ಮಹೇಶ ಡಿ.ಪಿ.

ನಡೆದಾಗ ಕಟ್ಟುನಿಟ್ಟಿನ ವಿಧಿ ಮತ್ತು ನಿಷೇಧಗಳನ್ನು ಹೇರುವುದು ಇಂದಿಗೂ ಇದೆ. ಉತ್ತರ ಭಾರತದ ಜೋಗಿ ಅಥವಾ ನಾಥ ಸಂಪ್ರದಾಯಕ್ಕೂ ದಕ್ಷಿಣಭಾರತದ ಜೋಗಿ ಸಂಪ್ರದಾಯಕ್ಕೂ ವ್ಯತ್ಯಾಸವಿದೆ. ಕರ್ನಾಟಕದಲ್ಲಿ ಚಾಲ್ತಿಯಲ್ಲಿರುವ ಜೋಗಿ ಹೆಸರಿನ ಸ್ಥಳನಾಮ ಮತ್ತು ವ್ಯಕ್ತಿನಾಮಗಳ ಹಿನ್ನಲೆಯಲ್ಲಿ ಬುಡಕಟ್ಟು ಸಂಸ್ಕೃತಿಯೊಳಗಿನ ಅಪೂರ್ವ ಸಂಗತಿಗಳನ್ನು ವಿಶ್ಲೇಷಿಸಲಾಗಿದೆ. ಜೋರೇ ದೇವರು, ಕಾಲಭೈರವ, ನುಂಕಪ್ಪ ಮೊದಲಾದ ಹೆಸರುಗಳಿಂದ ಕರೆಯುವ ಜೋಗಿ ಸಮುದಾಯ ವಿಶಿಷ್ಟ ಸಂಪ್ರದಾಯಗಳನ್ನು ಹೊಂದಿರುವುದು ಗಮನಾರ್ಹ.

ಅಭ್ಯಾಸ ಮಾಡಿದ ಗ್ರಂಥಗಳು

೧. ಎಡ್ಗರ್ ಥರ್ಸ್ಟನ್ ಕೆ. ರಂಗಾಚಾರಿ, (ಅನು.), ಬಂಜಗೆರೆ ಜಯಪ್ರಕಾಶ್, ೨೦೧೯ ದಕ್ಷಿಣ ಭಾರತದ ಜಾತಿ ಮತ್ತು ಬುಡಕಟ್ಟುಗಳು, ಕುವೆಂಪು ಭಾಷಾ ಭಾರತಿ, ಪ್ರಾಧಿಕಾರ, ಬೆಂಗಳೂರು.

೨. ಕೃಷ್ಣಮೂರ್ತಿ ಹನೂರು, ೧೯೯೩ ಮ್ಯಾಸಬೇಡರ ಸಂಸ್ಕೃತಿ, ಕ.ಸಾ.ಅ. ಬೆಂಗಳೂರು

೩. ಜೋರಪ್ಪನಾಯಕ, ೨೦೧೯, ನುಂಕಮಲೆ ಕಾಲಭೈರವ ಮಹಾತ್ಮೆ, ಪ್ರಬುದ್ಧ ಪ್ರಕಾಶನ ಸೂಲೇನಹಳ್ಳಿ

೪. ರಾಜಣ್ಣ ಆರ್, ೧೯೮೨, ನಾಯಕ ಜನಾಂಗದ ಇತಿಹಾಸ, ಚಳ್ಳಕೆರೆ.

೫. ರಹಮತ್ ತರೀಕೆರೆ, ೨೦೧೭, ಕರ್ನಾಟಕದ ನಾಥಪಂಥ, ಪ್ರಸಾರಾಂಗ, ಕವಿಹಂ.

೬. ರಹಮತ್ ತರೀಕೆರೆ, ೨೦೧೭, ಕರ್ನಾಟಕದ ಶಾಕ್ತಪಂಥ, ಪ್ರಸಾರಾಂಗ, ಕವಿಹಂ.

೭. ಸೂರ್ಯನಾಥ ಕಾಮತ್ (ಸಂ.), ೧೯೮೪, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೧, ಕರ್ನಾಟಕ ಸರ್ಕಾರ, ಬೆಂಗಳೂರು.

೮. ಪಂಡಿತ ರೇವಣ್ಣ ಕವಿಗಳು, ೧೯೫೯, ವಾಲ್ಮೀಕರ ಪುರಾಣವು, ದ್ವಾಮವ್ವನಹಳ್ಳಿ

೯. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೭, ಬೇಟೆ ಮತ್ತು ಬೇಡರು, ಚಿನ್ನಹಗರಿ, ಪೂಜಾರಹಳ್ಳಿ

೧೦. ಕರ್ನಾಟಕ ಗ್ರಾಮಕೋಶ, ಕರ್ನಾಟಕ ಸರ್ಕಾರ, ಬೆಂಗಳೂರು.

೩

ಕನ್ನಡ ನಾಡಿಗೆ ವಿಜಯನಗರ ಸಾಮ್ರಾಜ್ಯದ ಕೊಡುಗೆ : ವಸ್ತುನಿಷ್ಠ ನೋಟ

ಡಾ. ಎನ್. ಚಿನ್ನಸ್ವಾಮಿ ಸೋಸಲೆ

ಒಡಲಾಳದಲ್ಲಿ ನಿರ್ಮಾಣಗೊಂಡಿರುವ ಕನ್ನಡನಾಡಿನ ಚರಿತ್ರೆ ಮತ್ತು ಸಂಸ್ಕೃತಿಗೆ ವಿಶಿಷ್ಟವಾದ ಸ್ಥಾನವಿದೆ. ಸಾಂಸ್ಕೃತಿಕವಾಗಿ ದ್ರಾವಿಡ ನಾಡು ಎಂದೆನಿಸಿಕೊಂಡಿರುವ ದಕ್ಷಿಣ ಭಾರತದ ಪ್ರಾಚೀನ ನೆಲೆಗಳಲ್ಲಿ ಕರುನಾಡು ಒಂದು. ಭಾಷೆ, ಸಾಹಿತ್ಯ, ಸಂಪ್ರದಾಯ, ಜನಪದ ಇತ್ಯಾದಿ ಇತ್ಯಾದಿ ಸಾಂಸ್ಕೃತಿಕ ಸ್ತರಗಳ ಜೊತೆಗೆ ಸಾಮಾಜಿಕ ಹಾಗೂ ಚಾರಿತ್ರಿಕ ಹಿನ್ನಲೆಯಿಂದ ಈ ನಾಡು ಭಾರತದಲ್ಲಿಯೇ ಅಲ್ಲದೆ ಪ್ರಪಂಚದ ಅನೇಕ ನೆಲೆಗಳೊಂದಿಗೆ ಸಾಂಸ್ಕೃತಿಕವಾಗಿ ಅವಿನಾಭಾವ ಸಂಬಂಧ ಹೊಂದಿರುವುದಕ್ಕೆ ನಿದರ್ಶನಗಳಿವೆ.

ಕನ್ನಡದ ಪ್ರಥಮ ಸಾಹಿತ್ಯ ಕೃತಿ ಎನಿಸಿಕೊಳ್ಳುವ ಶ್ರೀವಿಜಯನ 'ಕವಿರಾಜಮಾರ್ಗ' ದಲ್ಲಿ ಕನ್ನಡನಾಡಿನ ಮೇರೆಯನ್ನು ಕಾವೇರಿಯಿಂದ ಗೋದಾವರಿಯವರೆಗೆ ಎಂದು ಗುರುತಿಸಲಾಗಿದೆ. ಹಾಗೆಯೇ ಕನ್ನಡದ ಪ್ರಥಮ ಗದ್ಯ ಕೃತಿ ಎನಿಸಿಕೊಂಡಿರುವ ಶಿವಕೋಟ್ಯಾಚಾರ್ಯನ 'ವಡ್ಡಾರಾಧನೆ'ಯಲ್ಲಿ ಪ್ರಥಮವಾಗಿ ನಾಡಿನ ಜನರ ಮುಖ್ಯ ಕಸುಬು ಹಾಗೂ ಕಸುಬದಾರಿತ ಜಾತಿಗಳು, ಭಾರತೀಯ ಧಾರ್ಮಿಕ ಹಿನ್ನೆಲೆಗೆ ಸಮಾಜ ಸಂರಕ್ಷಣೆಯಲ್ಲಿ ಅವುಗಳ ಸ್ಥಾನಮಾನ, ಬಹುಮುಖ್ಯವಾಗಿ ಜನತೆ ಮತ್ತು ಪ್ರಭುಗಳ ನಡುವಿನ ಸಾಂಸ್ಕೃತಿಕ ಸಂಬಂಧಗಳ ಕುರಿತು ಚರ್ಚಿಸಲಾಗಿದೆ. ನಂತರ ೧೦ನೇ ಶತಮಾನದಲ್ಲಿ ಪ್ರಕಟಗೊಂಡ ಪಂಪ, ರನ್ನ,ಜನ್ನ, ಇತ್ಯಾದಿ ಕನ್ನಡದ ಅಸ್ಮಿತೆ ಎನಿಸಿಕೊಂಡಿರುವ ಸಾಹಿತಿಗಳು ಆ ಸಂದರ್ಭದ ಜನತೆ ಮತ್ತು ಪ್ರಭುತ್ವಗಳ ಅವಿನಾಭಾವ ಸಂಬಂಧಗಳನ್ನು ತಮ್ಮ ಸಾಹಿತ್ಯದ ಮುಖ್ಯ ವಸ್ತುವನ್ನಾಗಿಸಿಕೊಂಡು ಸಾಹಿತ್ಯ ರಚಿಸಿ ಅಜರಾಮರ ರಾಗಿದ್ದಾರೆ . ಜೊತೆಗೆ ಕನ್ನಡ ನಾಡು ನುಡಿಯನ್ನು ಬಹು ಪ್ರಾಚೀನ ಹಿನ್ನಲೆಯ ಶ್ರೀಮಂತ ಚರಿತ್ರೆಯನ್ನಾಗಿಸಿದ್ದಾರೆ. ಈ ಶ್ರೀಮಂತಿಕೆಗೆ ಮತ್ತೊಂದು ಮುಕುಟಪ್ರಾಯವಾಗಿ ಸೇರಿಕೊಳ್ಳವಂತಹದ್ದು ೧೨ನೇ ಶತಮಾನದ ಬಸವ ಹಾಗೂ

ಬಸವಾದಿ ಶರಣರ ನೆಲಮೂಲ ಸಂಸ್ಕೃತಿಯ ಮೌಲ್ಯಯುತವಾದ ವಚನ ಸಾಹಿತ್ಯ ಈ ವಚನ ಸಾಹಿತ್ಯ ಜನಸಂಸ್ಕೃತಿಯನ್ನು ಅವರ ಕಾಯಕ ಸಿದ್ಧಾಂತದ ಮೂಲಕ ಅನಾವರಣಗೊಳಿಸಿದ್ದಕ್ಕಾಗಿ ಇಂದಿಗೂ ವಿಶ್ವಮಾನವತೆಯನ್ನು ಪಡೆದುಕೊಂಡಿದೆ. ಸ್ವಾತಂತ್ರ ನಂತರ ಭಾರತವು ಪ್ರಜಾಪ್ರಭುತ್ವ ಮಾದರಿ ಸರ್ಕಾರವನ್ನು ಜಾರಿಗೆ ತಂದು ನಮ್ಮನ್ನು ಆಳ್ವಿಕೆ ಮಾಡಿಕೊಳ್ಳಲು ರಚಿಸಿಕೊಂಡ ಸಂವಿಧಾನದಲ್ಲಿಯೂ ಸಹ ಬಸವ ಮತ್ತು ಬಸವಾದಿ ಶರಣರು ಪ್ರತಿಪಾದಿಸಿದ ತತ್ವ ಸಿದ್ಧಾಂತಗಳು ಅಡಕವಾಗಿರುವುದು ನಮ್ಮ ನಾಡಿನ ಹೆಮ್ಮೆ.

ಮೇಲಿನ ಎಲ್ಲಾ ಪ್ರಾಚೀನ ಚರಿತ್ರೆಯನ್ನು ಬದಿಗೆ ಸರಿಸಿ, ಮಧ್ಯಯುಗದಲ್ಲಿ ಆಧುನಿಕ ಮಾದರಿಯ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸಲು ಆರಂಭಗೊಂಡದ್ದೇ ಕನ್ನಡ ನಾಡಿನ ಹೆಮ್ಮೆಯ ವಿಜಯನಗರ ಸಾಮ್ರಾಜ್ಯ. ೧೩೩೬ರಲ್ಲಿ–ಅಂದರೆ, ೧೩ನೇ ಶತಮಾನದ ಆರಂಭದಲ್ಲಿ ಐತಿಹಾಸಿಕ ಮತ್ತು ಪುರಾಣ ಪ್ರಸಿದ್ಧ ಸ್ಥಳ ಎನಿಸಿಕೊಂಡಿರುವ ಹಂಪಿಯಲ್ಲಿ ವಿಜಯನಗರ ಸಾಮ್ರಾಜ್ಯ ನೆಲಮೂಲ ಸಂಸ್ಕೃತಿಯನ್ನು ಮೈಗೂಡಿಸಿ ಕೊಂಡಿದ್ದ ಶೂದ್ರ ಜನಾಂಗದ ಹರಿಹರ ಮತ್ತು ಬುಕ್ಕರ ಸಂಗಮದಿಂದ 'ಸಂಗಮ' ವಂಶ ಎಂದು ಹೇಳಿಕೊಂಡು ಸ್ಥಾಪನೆಗೊಂಡಿತು.

ವಿಜಯನಗರ ಸಾಮ್ರಾಜ್ಯ

೧೨ನೇ ಶತಮಾನದಲ್ಲಿ ಕನ್ನಡ ನೆಲದಲ್ಲಿ ಸಂಭವಿಸಿದ ಶರಣ ಚಳುವಳಿಯ ನಂತರ ನಿರ್ಮಾಣಗೊಂಡ ಮೊದಲ ವೈಚಾರಿಕ ಹಿನ್ನೆಲೆಯ ಸಾಮ್ರಾಜ್ಯವೇ ವಿಜಯನಗರ. ಆರಂಭದ ಸಂಗಮ ಹಾಗೂ ಸಾಳುವ ವಂಶಸ್ಥರು ಕಾಯಕ ಸಿದ್ಧಾಂತವನ್ನೇ ಮೊದಲು ಮಾಡಿ ವಿಜಯನಗರ ಸಾಮ್ರಾಜ್ಯವನ್ನು ಶ್ರಮ ಮತ್ತು ಬೌದ್ಧಿಕತೆಯಿಂದ ಕಟ್ಟಿದರು. ೨೫೦ ವರ್ಷಗಳ ಕಾಲ ಕನ್ನಡ ನಾಡಿನಲ್ಲಿ ವೈಭವಯುತ ಆಳ್ವಿಕೆ ಮಾಡಿದ ವಿಜಯನಗರ ದರಸರು ತಮ್ಮದೇ ಆದ ಧಾರ್ಮಿಕ–ಸಾಮಾಜಿಕ ಹಾಗೂ ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ಸಂಗಮ, ಸಾಳುವ, ತುಳುವ ಹಾಗೂ ಅರವೀಡು ಎಂಬ ಹೆಸರಿನ ನಾಲ್ಕು ವಂಶಸ್ಥರು ಆಳ್ವಿಕೆ ಮಾಡಿದರು.

ಆರಂಭದ ಸಂಗಮ ಮತ್ತು ಸಾಳುವ ವಂಶಸ್ಥರು ಶೈವ ಹಾಗೂ ವೀರಶೈವ ಸಂಪ್ರದಾಯಸ್ಥರಾಗಿದ್ದ ಕಾರಣಕ್ಕಾಗಿ ಕಾಯಕ ಸಿದ್ಧಾಂತದ ಹಿನ್ನಲೆಯಲ್ಲಿ ಕೃಷಿ ಹಾಗೂ ಕೃಷಿಯಾಧರಿತ ಕೈಗಾರಿಕೆಗಳಿಗೆ ಹೆಚ್ಚಿನ ಆಸಕ್ತಿವಹಿಸಿ ಒತ್ತು ನೀಡಿದರು. ಹಂಪಿ ಸುತ್ತಮುತ್ತಲು ಪ್ರದೇಶ ಒಳಗೊಂಡಂತೆ ನಾಡಿನಾದ್ಯಂತ ಅನೇಕ ಬೃಹತ್ ಹಾಗೂ ಸಣ್ಣಪುಟ್ಟ ಕೆರೆಗಳನ್ನು ನಿರ್ಮಿಸಿದರು. ಮಳೆಯಾಶ್ರಿತ ಪ್ರದೇಶದಲ್ಲಿ ಜೀವನಕ್ಕೆ ಮೂಲಾಧಾರವಾದ ಮಳೆಯಾಶ್ರಿತ ದ್ವಿದಳ ಹಾಗೂ ಏಕದಳ ಧಾನ್ಯಗಳನ್ನು ಮಾತ್ರ ಬೆಳೆಯುತ್ತಿದ್ದರು. ಇಂತಹ ಸಂದರ್ಭದಲ್ಲಿ ಕೃಷಿ ಪದ್ಧತಿಯಲ್ಲಿ ಬದಲಾವಣೆ ತರಲು ಅನೇಕ ಸ್ಥಳಗಳಲ್ಲಿ ಬೃಹತ್ ಕೆರೆಗಳ ನಿರ್ಮಾಣ ಮಾಡಿಸಿದರು. ಈ ಹಿನ್ನಲೆಯಲ್ಲಿ

ಅನೇಕ ಪ್ರದೇಶಗಳು ನೀರಾವರಿಗೊಂಡು ಸಾಂಪ್ರಾದಾಯಿಕ ಆಹಾರ ಧಾನ್ಯಗಳೊಂದಿಗೆ ವಾಣಿಜ್ಯ ಬೆಳೆಗಳು ಎನಿಸಿಕೊಂಡಿರುವ ಕಬ್ಬು, ಬಾಳೆ, ಭತ್ತ ಇನ್ನಿತರೆ ವಾಣಿಜ್ಯ ಬೆಳೆಗಳನ್ನು ಬೆಳೆದು ಸಾಮ್ರಾಜ್ಯವನ್ನು ಪ್ರಜಾ ಕೇಂದ್ರಿತವಾಗಿ ಸದೃಢವಾಗಿ ಕಟ್ಟಲು ಮುಂದಾದರು.

ಸಂಗಮ–ಸಾಳುವರ ಆಳ್ವಿಕೆ ಕಾಲದಲ್ಲಿ ರಾಜಧಾನಿಯನ್ನು ಒಳಗೊಂಡಂತೆ ಅನೇಕ ಪ್ರದೇಶಗಳಲ್ಲಿ ಶೈವ (ಶಿವ) ಕೇಂದ್ರಿತ ದೇವಾಲಯಗಳಿವೆ. ದೇವರಿಗೆ ಪೂರಕವಾದ ಮಾರಿ ಹೆಸರಿನ ಅನೇಕ ಗ್ರಾಮ ದೇವತೆಗಳ ದೇವಾಲಯಗಳು ನಿರ್ಮಾಣಗೊಂಡವು. ಅದರ ಉತ್ಸವ ಮತ್ತು ಆರಾಧನೆಗಳೇ ರಾಜಧಾನಿಯನ್ನು ಒಳಗೊಂಡಂತೆ ಗ್ರಾಮೀಣ ಪ್ರದೇಶಗಳಲ್ಲಿಯೂ ಭಕ್ತಿ ಭಾವದಿಂದ ವಿಜೃಂಭಣೆಯೊಂದಿಗೆ ನಡೆಯುತ್ತಿದ್ದುದ್ದಕ್ಕೆ ಸಾಹಿತ್ಯ ಹಾಗೂ ಜನಪದ ಆಕರಗಳು ಸಾಕ್ಷೀಕರಿಸುತ್ತವೆ. ಹಂಪಿ ವಿರೂಪಾಕ್ಷ ದೇವಾಲಯ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೂ ಪೂರ್ವದ್ದು ಎಂಬುವುದು ಸತ್ಯ. ಸಂಗಮ ಹಾಗೂ ಸಾಳುವ ವಂಶಸ್ಥರು ತಮ್ಮ ಆಳ್ವಿಕೆಗೆ ಈ ಭಾಗದ ಅಧಿದೇವತೆಯಾಗಿದ್ದ ವಿರೂಪಾಕ್ಷನನ್ನೇ ಅಧಿಪತಿಯನ್ನಾಗಿಸಿಕೊಂಡು ಆಳ್ವಿಕೆ ಮಾಡಿಕೊಂಡು ಬಂದಿರುವುದಕ್ಕೆ ಅನೇಕ ಸಾಹಿತ್ಯ ಮತ್ತು ಶಾಸನಾಧಾರಗಳು ಲಭ್ಯವಿವೆ. ಪ್ರಾರಂಭದಿಂದಲೂ ಅನೇಕ ಶಾಸನಗಳ ನಿರ್ಮಾಣದ ಮೊದಲ ಸಾಲಿನಲ್ಲಿ 'ಶ್ರೀವಿರೂಪಾಕ್ಷ' ಎಂಬ ನಾಮದೊಂದಿಗೆ ಆರಂಭಿಸಿರುವುದು, ವಿರುಪಾಕ್ಷನ ಹೆಸರಿನಲ್ಲಿ ನಾಣ್ಯಗಳನ್ನು ಹೊರಡಿಸಿರುವುದು ಇದನ್ನು ಸಾಕ್ಷೀಕರಿಸುತ್ತವೆ .

ಕನ್ನಡ ನಾಡು ನುಡಿಯನ್ನು ಶ್ರೀಮಂತ ಗೊಳಿಸಿರುವ ಸಾಹಿತ್ಯ, ಸಂಗೀತ, ಸಾಂಸ್ಕೃತಿಕ ಕಲೆಗಳಿಗೆ ಸಂಗಮ ಮತ್ತು ಸಾಳ್ವ ವಂಶಸ್ಥರ ಕೊಡುಗೆ ಅಪಾರವಾದದ್ದು. ಸಂಗಮ ವಂಶದ ಸ್ಥಾಪಕರಾದ ಹರಿಹರ ಮತ್ತು ಬುಕ್ಕರಾಯರು ಕರುನಾಡ ಕನ್ನಡ ಭಾಷೆಯನ್ನೇ ತಮ್ಮ ಮಾತೃಭಾಷೆ ಎನ್ನಾಗಿಸಿಕೊಂಡಿದ್ದರು. ಬಹುಮುಖ್ಯವಾಗಿ ಬಸವ ಮತ್ತು ಬಸವಾದಿ ಶರಣರ ಕಾಯಕ ಸಿದ್ಧಾಂತವನ್ನು ಮೈಗೂಡಿಸಿಕೊಂಡಿದ್ದ ಇವರು, ಶ್ರಮಜೀವಿಗಳ ಕಾಯಕ ಸಿದ್ಧಾಂತದ ಮೂಲಕ ಸಾಮ್ರಾಜ್ಯಕ್ಕೆ ಸಾಂಸ್ಕೃತಿಕವಾದ ಭದ್ರ ಬುನಾದಿಯನ್ನು ಹಾಕಿಸಿದರು. ಇವರ ಆಳ್ವಿಕೆಯ ಕಾಲದಲ್ಲಿ ನೆಲಮೂಲ ಸಂಸ್ಕೃತಿಯ ಜನವರ್ಗ ಸಾಮ್ರಾಜ್ಯವನ್ನು ಗಟ್ಟಿಯುತವಾಗಿ ಕಟ್ಟಲು ಕಟಿಭದ್ರವಾಗಿ ಶ್ರಮಿಸಿ ಬೃಹತ್ ಏಳುಸುತ್ತಿನ ಕೋಟೆಯನ್ನು ರಾಜಧಾನಿಯಲ್ಲಿ ನಿರ್ಮಿಸಿದರು.ಅಂದು ಇವರು ನಿರ್ಮಿಸಿದ ಈ ಬೃಹತ್ ಏಳು ಸುತ್ತಿನ ಕೋಟೆ ಇಂದು ವಿಶ್ವ ಪಾರಂಪರಿಕ ತಾಣವೆಂದು ಗುರುತಿಸಿಕೊಂಡು ಕನ್ನಡ ನಾಡಿನ ಹಿರಿಮೆಯನ್ನು ಹೆಚ್ಚಿಸಿದೆ.

ವಿಶೇಷವಾಗಿ ಕೋಟೆಗಳ ವರ್ಗೀಕರಣದಲ್ಲಿ ನಾಲ್ಕು ವಿಧಗಳಿವೆ. ೧. ಬಯಲು ದುರ್ಗ, ೨. ಜಲದುರ್ಗ, ೩. ಗಿರಿದುರ್ಗ, ೪. ವನದುರ್ಗ ಮೇಲಿನವುಗಳಿಗೆ ಉದಾಹರಣೆಗಳೆಂದರೆ ಬೃಹತ್ ಬಯಲುದುರ್ಗಕ್ಕೆ–ಬಿಜಾಪುರದ ಏಳುಸುತ್ತಿನ ಕೋಟೆಯನ್ನು, ಬೃಹತ್ ಗಿರಿದುರ್ಗಕ್ಕೆ ಚಿತ್ರದುರ್ಗ ಹಾಗೂ ಸಾವನದುರ್ಗ ಕೋಟೆ

ಗಳನ್ನು, ವನದುರ್ಗಕ್ಕೆ ಇಕ್ಕೇರಿನಾಯಕರ ಬಿದನೂರಿನ ಹಾಗೂ ಬನವಾಸಿ ಕದಂಬರ ಕೋಟೆಯನ್ನು, ಮುಂದುವರೆದು.. ಜಲದುರ್ಗಕ್ಕೆ ಕಡಲ ತೀರದ ಉಲ್ಲಾಳದ ಕೋಟೆ, ಬಾರ್ಕೂರಿನ ಕೋಟೆ ಹಾಗೂ ಶ್ರೀರಂಗಪಟ್ಟಣದ ಕೋಟೆಯನ್ನು ಗುರುತಿಸಬಹುದು.

ಮೇಲಿನ ಉದಾಹರಣೆಯನ್ನು ನೀಡುವ ಉದ್ದೇಶವೆಂದರೆ ವಿಜಯನಗರ ಸ್ಥಾಪನೆಯ ನಂತರ ರಾಜಧಾನಿ ಹಂಪಿಯಲ್ಲಿ ಬೃಹತ್ ಐತಿಹಾಸಿಕ ಕೋಟೆಯೂ ತುಂಗಭದ್ರ ನದಿಯಿಂದ ಆವೃತಗೊಂಡಿರುವುದರಿಂದ ಜಲದುರ್ಗವೂ ಹೌದು–ವಿಶಾಲ ಬಯಲಿನಲ್ಲಿ ಸುರಕ್ಷಿತ ಸಂರಕ್ಷಣೆಯೊಂದಿಗೆ ಏಳುಸುತ್ತಿನಲ್ಲಿ ನಿರ್ಮಾಣಗೊಂಡಿರುವ ಬಯಲು ಕೋಟೆಯು ಹೌದು. ಬೃಹತ್ ಆಕಾರದ ಶಿಲಾ ಬೆಟ್ಟ ಹಾಗೂ ಕಡಿದಾಗ ಕಿಷ್ಕಿಂಧೆಗಳ ನಡುವೆ ತಾಂತ್ರಿಕತೆಯಿಂದ ನಿರ್ಮಾಣಗೊಂಡಿರುವುದರಿಂದ ಇದು ಬಹು ಮುಖ್ಯವಾದ ಗಿರಿದುರ್ಗವು ಹೌದು. ಮುಂದುವರೆದು ಬಹುದೊಡ್ಡ ಕುರುಚಲು ಕಾಡಿನ ನಡುವೆ ನಿರ್ಮಾಣಗೊಂಡಿರುವುದರಿಂದ ಇಲ್ಲಿನ ಕೋಟೆಯು ವನದುರ್ಗವೂ ಹೌದು. ಹಂಪಿ ಪರಿಸರದ ಕೋಟೆಯು ನಾಲ್ಕು ಲಕ್ಷಣಗಳನ್ನು ಮೈಗೂಡಿಸಿಕೊಂಡು ಇಂದಿಗೂ ನಿಂತಿರುವುದು ನಮ್ಮ ಕನ್ನಡ ನಾಡಿನ ಹೆಮ್ಮೆ.

ಕೋಟೆಯ ನಿರ್ಮಾಣದಲ್ಲಿ ವಿಜಯನಗರದ ಅರಸರು ಹೊಂದಿದ್ದ ತಂತ್ರಜ್ಞಾನಿಕೆಯ ಹಿರಿಮೆಯನ್ನು ಭಾರತದ ಇತರ ಸಂಸ್ಥಾನಿಕರು ಹಾಗೂ ಸಾಮ್ರಾಟರು ಮೆಚ್ಚಿ ತಮ್ಮ ಸಾಮ್ರಾಜ್ಯಗಳಲ್ಲಿ ಅಳವಡಿಸಿಕೊಂಡಿರುವುದಕ್ಕೆ ಅನೇಕ ನಿದರ್ಶನಗಳಿವೆ. ವಿಜಯನಗರಕ್ಕೆ ಭೇಟಿ ನೀಡಿದ ವಿದೇಶಿ ಯಾತ್ರಿಕರು ತಮ್ಮ ಪ್ರವಾಸಿ ಸಾಹಿತ್ಯ ಕೃತಿಗಳಲ್ಲಿ ಸಾಮ್ರಾಜ್ಯದ ಕೋಟೆಯ ನಿರ್ಮಾಣಕ್ಕೆ ಬಳಸಿರುವ ತಂತ್ರಜ್ಞಾನಿಕೆ ಹಾಗೂ ಭದ್ರತೆಯನ್ನು ಕೊಂಡಾಡಿರುವುದು ಕನ್ನಡನಾಡಿನ ನಮ್ಮ ಹಿರಿಯರ ಕೌಶಲತೆಯನ್ನು ಹೊರೆ ಹಚ್ಚುವಂತೆ ಮಾಡುತ್ತದೆ. ವಿಜಯನಗರದ ಅರಸರು ಕೋಟೆ ನಿರ್ಮಾಣಕ್ಕೆ ಸ್ಥಳೀಯ ಬೆಣಚು ಕಲ್ಲನ್ನೇ ಸಮೃದ್ಧವಾಗಿ ಬಳಸಿಕೊಂಡಿರುವುದು ಇದರ ಮತ್ತೊಂದು ವಿಶೇಷತೆ.

ಸಂಗಮ ಹಾಗೂ ಸಾಳುವ ವಂಶಸ್ಥರ ಆಳ್ವಿಕೆಯ ಕಾಲದಲ್ಲಿ ಕನ್ನಡ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಅಪಾರ. ಜನರ ಕವಿ ಎನಿಸಿಕೊಂಡಿರುವ ಹರಿಹರನ 'ರಗಳೆ' ಗಿರಿಜಾ ಕಲ್ಯಾಣ', ವಿಜಯನಗರ ಸಾಮ್ರಾಜ್ಯದಲ್ಲಿ ಪ್ರಸಿದ್ಧ ದೊರೆ ಎನಿಸಿಕೊಂಡಿರುವ ಪ್ರೌಢದೇವರಾಯನಿಂದ ರಚಿತವಾದ 'ಪ್ರೌಢದೇವರಾಯ ಕಾವ್ಯ'. ಹರಿಹರನ ಸಂಬಂಧಿ ರಾಘವಾಂಕನು ರಚಿಸಿ–ಇಂದಿಗೂ ಕನ್ನಡ ನಾಡನ್ನು ಮೀರಿ ದೇಶದಾದ್ಯಂತ ಸತ್ಯನಿಷ್ಠೆಗೆ ಹೆಸರಾಗಿರುವ 'ಹರಿಶ್ಚಂದ್ರ ಕಾವ್ಯ' , ನಂಜುಂಡ ಕವಿ ರಚಿಸಿದ 'ರಾಮನಾಥ ಚರಿತೆ', ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ ' ರಾಜನಾಥ ಡಿಂಡಿಮನ 'ಸಾಳುವಾಭ್ಯುದಯಂ 'ಅಹೋಬಲ ಸೂರಿಯ 'ವಿರೂಪಾಕ್ಷ ವಸಂತೋತ್ಸವ 'ಇತ್ಯಾದಿ ನೆಲಮೂಲ ಸಂಸ್ಕೃತಿಯ ಸಾಹಿತ್ಯ ಕೃತಿಗಳು ರಚನೆಗೊಂಡು ವಿಜಯನಗರ ಸಾಮ್ರಾಜ್ಯದ ಆರಂಭದ ವಂಶದವರ

ರಾಜಕೀಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯ ಅನಾವರಣ ಗೊಳಿಸುವುದರ ಜೊತೆಗೆ ಕನ್ನಡ ಸಾಹಿತ್ಯದ ವಿಭಿನ್ನ ಪ್ರಕಾರಗಳನ್ನು ಸೃಷ್ಟಿಸಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಐತಿಹಾಸಿಕತೆಗೊಳಿಸಿವೆ. ೧೦ ಮತ್ತು ೧೨ನೇ ಶತಮಾನದಲ್ಲಿ ನಿರ್ಮಾಣಗೊಂಡ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಪ್ರಾಚೀನತೆಯನ್ನು ಮನಗಂಡು ಬಹುಮುಖ್ಯವಾಗಿ ವಿಜಯನಗರದ ಅರಸರ ಕಾಲದಲ್ಲಿ ನಿರ್ಮಾಣ ಗೊಂಡ ಸಾಹಿತ್ಯ ಹಾಗೂ ಕೀರ್ತನ ಸಾಹಿತ್ಯ ಪ್ರಾಚೀನತೆಯನ್ನು ಮನಗಂಡ ಕೇಂದ್ರ ಸರ್ಕಾರ ಕನ್ನಡ ಭಾಷೆಗೆ 'ಶಾಸ್ತ್ರೀಯ' ಮಾನ್ಯತೆಯನ್ನು ನೀಡಿ ಗೌರವಿಸಿರುವುದು.

ವಿಜಯನಗರದ ಆರಂಭದ ಆಳ್ವಿಕೆಯ ಕಾಲಘಟ್ಟದಲ್ಲಿಯೇ ಪರ್ಶಿಯಾದ ಅಬ್ದುಲ್ ರಜಾಕ್, ಇಟಲಿಯ ನಿಕೋಲೋಕಂಟಿ, ವಿಜಯನಗರ ಹಾಗೂ ಬಹುಮನಿ ಸುಲ್ತಾನರ ನಡುವೆ ಆಗಾಗ ನಡೆಯುತ್ತಿದ್ದ ಯುದ್ಧ ಹಾಗೂ ವಿಜಯನಗರದಲ್ಲಿ ಬೆಳೆಯುತ್ತಿದ್ದ ಬೆಳೆ–ವಾಣಿಜ್ಯ ವ್ಯಾಪಾರ ಕುರಿತು ವಿಸ್ತೃತವಾಗಿ ದಾಖಲಿಸಿರುವ ನಿಕಿಟನ್, ಪೋರ್ಚುಗಲ್ ದೇಶದ ಬಾರ್ಬೋಸ, ಮತ್ತದೇ ಪೋರ್ಚುಗಲ್‌ನ ಡುಮ್ಮಿಂಗೋ ಫಯಾಸ್ ಇತ್ಯಾದಿ ವಿದೇಶಿ ಯಾತ್ರಿಕರು ರಾಜಧಾನಿಗೆ ಆಗಮಿಸಿ ಸಾಮ್ರಾಜ್ಯದಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಸಂಗತಿಗಳನ್ನು ಕಣ್ಣಾರೆ ಕಂಡು, ಬೃಹತ್ ಕೋಟೆ–ಕೆರೆ–ದೇವಾಲಯಗಳ ನಿರ್ಮಾಣದ ಹಿಂದಿರುವ ತಾಂತ್ರಿಕತೆಯನ್ನು ಬರೆದು ಕನ್ನಡ ನಾಡಿನ ಕೀರ್ತಿಯನ್ನು ಪ್ರಪಂಚಕ್ಕೆ ಪರಿಚಯಿಸಿದ್ದಾರೆ. ಮಹಾನವಮಿ ಹಬ್ಬದಂದು ಐತಿಹಾಸಿಕ ಮಹಾನವಮಿ ದಿಬ್ಬದ ಮೇಲೆ ಹಾಗೂ ಮುಂದಿನ ರಾಜಬೀದಿಯಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯ ಕ್ರಮಗಳನ್ನು 'ಕಣ್ಣು ಕಂಡಿಲ್ಲ–ಕಿವಿ ಕೇಳಿಲ್ಲ' ಎಂಬ ಮಾತುಗಳನ್ನಾಡಿ ಹೊಗಳಿದ್ದಾರೆ. ಮಳೆ ಹಾಗೂ ಕೆರೆಯ ಆಶ್ರಿತ ಪ್ರದೇಶದಲ್ಲಿ ಬೆಳೆಯುತ್ತಿದ್ದ ಬೆಳೆಗಳ ಕುರಿತು ವಿಸ್ತೃತವಾಗಿ ತಮ್ಮ ಪ್ರವಾಸಿ ಕಥನಗಳಲ್ಲಿ ಬರೆದು ವರ್ಣಿಕರಿಸಿರುವುದು ಕನ್ನಡ ನಾಡಿನ ಐತಿಹಾಸಿಕ ಹಿರಿಮೆಯನ್ನು ಹೆಚ್ಚಿಸಿದೆ. ಎಷ್ಟೋ ಯಾತ್ರಿಕರು ಸಾಮ್ರಾಜ್ಯದ ರಾಜಧಾನಿಯನ್ನು ಒಳಗೊಂಡಂತೆ ಇಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಜನರಲ್ಲಿದ್ದ ಸ್ನೇಹ–ಸೌಹಾರ್ದತೆ, ಸಹೋದರತ್ವ ಮತ್ತು ಬ್ರಾತೃತ್ವವನ್ನು ಗಮನಿಸಿ ದಾಖಲಿಸಿರುವುದು ನಮ್ಮ ನಾಡಿನ ಸಾಂಸ್ಕೃತಿಕ ಹಿರಿಮೆಯಾಗಿದೆ. ಇಲ್ಲಿನ ಸಾಹಿತ್ಯ ಮತ್ತು ಭಾಷಾ ಸಂಪತ್ತನ್ನು ಬಹು ಸೂಕ್ಷ್ಮವಾಗಿ ಗ್ರಹಿಸಿದ ವಿದೇಶಿಗರು ಇಂತಹ ಬಹು ಸರಳ ಮತ್ತು ಸುಂದರ ಭಾಷೆಯನ್ನು ನಮ್ಮ 'ಕಿವಿಗಳು ಎಲ್ಲೂ ಕೇಳಿಲ್ಲ' ಎಂದು ವರ್ಣಿಸಿರುವುದು ಕನ್ನಡ ಭಾಷೆಯ ಸಾಂಸ್ಕೃತಿಕ ಐಡೆಂಟಿಟಿಯನ್ನು ವಿಶ್ವ ಮಾನ್ಯ ಗೊಳಿಸುತ್ತದೆ.

ಸಂಗಮ ವಂಶದ ನಂತರ ಸಾಳುವ ಎಂಬ ಹೆಸರಿನಲ್ಲಿ ಎರಡನೇ ಮನೆತನವು ೧೪೭೮ ರಲ್ಲಿ ಸಾಳ್ವ ನರಸಿಂಹ ನೇತೃತ್ವದಲ್ಲಿ ಆರಂಭಗೊಂಡಿತು. ಕೇವಲ ಇಬ್ಬರೂ ಅರಸರಿಂದ ಆಳ್ವಿಕೆಗೆ ಒಳಪಡುವ ಈ ವಂಶವು ೧೫೦೩ ರಲ್ಲಿ ಕೊನೆಗೊಂಡಿತು. ವಿಜಯನಗರವನ್ನು ಬೃಹತ್ ಸಾಮ್ರಾಜ್ಯವನ್ನಾಗಿಸುವಲ್ಲಿ ಸಾಳ್ವ ನರಸಿಂಹ ಮತ್ತು

ಇಮ್ಮಡಿ ನರಸಿಂಹರ ಕೊಡುಗೆ ಅಪಾರವಾದದ್ದು. ಕನ್ನಡ ನಾಡಿನ ಪಶ್ಚಿಮ ಕರಾವಳಿ ಪ್ರದೇಶದ ಅರಬ್ಬಿ ಸಮುದ್ರದವರೆಗೂ ಹಾಗೂ ಇಂದಿನ ಆಂಧ್ರಪ್ರದೇಶವನ್ನು ಒಳಗೊಂಡಂತೆ ಉತ್ತರದ ತಮಿಳುನಾಡು ಹಾಗೂ ಕೇರಳದ ಪ್ರದೇಶಗಳನ್ನು ತಮ್ಮ ಆಳ್ವಿಕೆಯ ತೆಕ್ಕೆಗೆ ಒಳಪಡಿಸಿಕೊಂಡ ಕೀರ್ತಿ ಈ ವಂಶದವರಿಗೆ ಸಲ್ಲುತ್ತದೆ. ಇದಕ್ಕೆ ಸಾಕ್ಷೀಕರಿಸುವಂತೆ ರಾಜನಾಥ ಡಿಂಡಿಮನ ಸಾಳ್ವಾಭ್ಯುದಯ್ಯಂ ಎಂಬ ಕೃತಿಯಲ್ಲಿ ಹಾಗೂ ಪೆನಗೊಂಡೆಯಲ್ಲಿ ನಿರ್ಮಾಣಗೊಂಡಿರುವ ಬೃಹತ್ ತೆಲುಗು ಹಾಗೂ ಕನ್ನಡ ಭಾಷೆಯ ಶಿಲಾಶಾಸನಗಳು ದೃಢೀಕರಿಸುತ್ತವೆ. ಸಾಳುವ ವಂಶದವರನ್ನು ವೀರಶೈವ ಸಮುದಾಯಕ್ಕೆ ಸೇರಿದವರು ಎಂದು ಹೇಳುವುದುಂಟು. ಸಂಗಮ ಮತ್ತು ಸಾಳುವವಂಶಸ್ಥರದು ಶೈವ ಮತ್ತು ವೀರಶೈವ ಸಂಪ್ರದಾಯದ ಸಮ್ಮಿಲನ.

ವಿಜಯನಗರ ಸಾಮ್ರಾಜ್ಯವು ಭಾರತದಲ್ಲಿಯೇ ಅಲ್ಲದೇ ಪ್ರಪಂಚಾದ್ಯಂತ ತನ್ನ ಸಾಂಸ್ಕೃತಿಕ ಪ್ರಾಮುಖ್ಯತೆ ಯನ್ನು ಗುರುತಿಸಿಕೊಳ್ಳುವುದು ಸಾಮ್ರಾಜ್ಯವನ್ನು ಆಳ್ವಿಕೆಯ ಮಾಡಿದ ತುಳುವರು ಎಂಬ ಮೂರನೇ ವಂಶಸ್ಥರ ಕಾಲದಲ್ಲಿ. ಈ ವಂಶ ವಿಜಯನಗರ ಸಾಮ್ರಾಜ್ಯದ ಅಧಿಪತ್ಯವನ್ನು ವಹಿಸಿಕೊಂಡು ದಕ್ಷಿಣ ಭಾರತದಲ್ಲಿ ಪ್ರಬಲವಾಗಿ ಆಳ್ವಿಕೆ ಮಾಡುವ ಸಂದರ್ಭದಲ್ಲಿಯೇ ಉತ್ತರ ಭಾರತದಲ್ಲಿ ೧೫೨೬ರಲ್ಲಿ ಬಾಬರ್ ನಿಂದ ಸ್ಥಾಪಿತಗೊಂಡ ಮುಘಲ್ ಸಾಮ್ರಾಜ್ಯ ನಿರ್ಮಾಣವಾಗಿತ್ತು. ಈ ಸಂದರ್ಭದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಆಳ್ವಿಕೆ ಮಾಡುತ್ತಿದ್ದ ಅರಸನೇ ಕೃಷ್ಣದೇವರಾಯ. ಮೊಘಲರ ದಕ್ಷಿಣದ ಬಹುದೊಡ್ಡ ಸಾಂಸ್ಕೃತಿಕ ದಾಳಿಯನ್ನು ಎದುರಿಸುವುದು ಹಾಗೂ ತನ್ನ ಸಾಮ್ರಾಜ್ಯದ ರಕ್ಷಣೆಯೊಂದಿಗೆ–ಸಾಮ್ರಾಜ್ಯದ ವಿಸ್ತರಣೆ–ಸಾಮಂತ ಅರಸರನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಬಹುದೊಡ್ಡ ಜಾಣ್ಮೆಯ ಜವಾಬ್ದಾರಿಯು ಕೃಷ್ಣದೇವರಾಯನ ಆಳ್ವಿಕೆ ಕಾಲದಲ್ಲಿದ್ದ ಬಹು ದೊಡ್ಡ ಹಾಗೂ ಜವಾಬ್ದಾರಿಯುತ ಸವಾಲುಗಳಾಗಿದ್ದವು. ಬಹು ಸೂಕ್ಷ್ಮಮತಿಯಾಗಿದ್ದ ಕೃಷ್ಣದೇವರಾಯನು ಪಾಳಯಗಾರರು ಹಾಗೂ ಸಂಸ್ಥಾನಿಕರ ನಿಷ್ಠೆ ಹಾಗೂ ಬೆಂಬಲದಿಂದ ಮುಂದುವರೆದು ತನ್ನ ಸಾಮ್ರಾಜ್ಯ ದಲ್ಲಿ ಬಲಿಷ್ಠವಾಗಿ ಹೊಂದಿದ್ದ ಸೈನ್ಯಬಲದ ಸಹಕಾರ ದೊಂದಿಗೆ ಎದುರಿಸಿ ಕನ್ನಡ ನಾಡಿನ ರತ್ನಸಿಂಹಾಸನವನ್ನು ರಕ್ಷಿಸಿ ಕರುನಾಡ ಕುಲ ತಿಲಕನೇ ಆದನು.

ವಿಜಯನಗರದ ಅರಸರು ಆರಂಭದ ಕಾಲಘಟ್ಟದಲ್ಲಿ ಶೈವ ಹಾಗೂ ವೀರಶೈವ (ಶಿವಾರಾಧನೆ) ಸಂಪ್ರದಾಯದ ಅನುಯಾಯಿಗಳಾಗಿದ್ದರು. ಆದರೆ ತುಳುವ ವಂಶದ ಕಾಲಘಟ್ಟವು 'ವೈಷ್ಣವ' ಧರ್ಮಾವಲಂಬಿಗಳಾಗಿ (ವಿಷ್ಣು ಆರಾಧನೆ) ಈ ಧರ್ಮದ ಶ್ರೇಯೋಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದನ್ನು ಕಾಣಬಹುದು. ಪ್ರಸಿದ್ಧ ದೊರೆ ಕೃಷ್ಣದೇವರಾಯನು ಸ್ವತಃ ವೈಷ್ಣವಾವಲಂಬಿಯಾಗಿದ್ದನು. ಇವನ ಆಳ್ವಿಕೆ ಕಾಲದಲ್ಲಿ ರಾಜಧಾನಿ ಹಂಪಿ ಹಾಗು ಸುತ್ತಮುತ್ತಲ ಪ್ರದೇಶಗಳಲ್ಲಿ ವೈಷ್ಣವ ಕೇಂದ್ರಿತ ಬೃಹತ್ ದೇವಾಲಯಗಳು ನಿರ್ಮಾಣಗೊಂಡವು.ಪುರೋಹಿತಶಾಹಿ ಹೆಚ್ಚಿನ ಪ್ರಾಮುಖ್ಯತೆ

ಪಡೆದ ಹಿನ್ನೆಲೆಯಿಂದಾಗಿ ಸಾಹಿತ್ಯ ಕೃತಿಗಳು ಕನ್ನಡ ತೆಲುಗು ಸಂಸ್ಕೃತ ಭಾಷೆಯಲ್ಲಿ ವ್ಯಾಪಕವಾಗಿ ರಚನೆಯಾದವು. ಸ್ವತಃ ಕೃಷ್ಣದೇವರಾಯನೇ ತೆಲುಗುನಲ್ಲಿ ಅಮುಕ್ತ ಮಾಲ್ಯದ–ಹಾಗೂ ಸಂಸ್ಕೃತದಲ್ಲಿ ಜಾಂಬವತಿ ಕಲ್ಯಾಣ ಎಂಬ ಗ್ರಂಥಗಳನ್ನು ರಚಿಸಿರುವುದು ವಿಶೇಷವಾಗಿದೆ. ಇನ್ನೂರ ಐವತ್ತು ವರ್ಷಗಳ ಕಾಲ ಆಳ್ವಿಕೆ ಮಾಡಿದ ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಬಹುಪಾಲು ಹೆಚ್ಚಿನ ಶಾಸನಗಳು ಕೃಷ್ಣದೇವ ರಾಯನ ಆಳ್ವಿಕೆಗೆ ಸೀಮಿತ ಗೊಂಡಿರುವುದು ಇವನ ಸಾಂಸ್ಕೃತಿಕ ಹಿರಿಮೆಯನ್ನು ಹೆಚ್ಚಿಸಿದೆ.

ಕೃಷ್ಣದೇವರಾಯನು ತನ್ನ ಆಳ್ವಿಕೆಯ ಕಾಲದಲ್ಲಿ ರಾಜಧಾನಿಯನ್ನು ಸುಭದ್ರಗೊಳಿಸು ವುದರ ಜೊತೆಗೆ ರಾಯಚೂರು, ಮುದಗಲ್, ಬಳ್ಳಾರಿ, ಚಿತ್ರದುರ್ಗ, ಮೈಸೂರು, ಗುಲ್ಬರ್ಗಾ, ಮಾಗಡಿ, ಸಾವನದುರ್ಗ, ವಿಜಯಪುರ–ತಮಿಳುನಾಡಿನ ಕೃಷ್ಣಗಿರಿ ಇತ್ಯಾದಿ ಇತ್ಯಾದಿ ಕೋಟೆಗಳನ್ನು ವಶಪಡಿಸಿಕೊಂಡು ಸಾಮ್ರಾಜ್ಯವನ್ನು ವಿಸ್ತರಣೆ ಮಾಡವುದರ ಜೊತೆಗೆ ಓರಿಸ್ಸಾದ ಗಜಪತಿ ಪ್ರತಾಪ ರುದ್ರ ಸಾಮ್ರಾಟರೊಂದಿಗೆ ಯುದ್ಧ ಮಾಡಿ ಜಯಶೀಲನಾಗಿ ವಿಜಯದ ಸಾಮ್ರಾಜ್ಯವನ್ನು ಒರಿಸ್ಸಾದವರೆಗೂ ವಿಸ್ತರಣೆ ಮಾಡಿದನು. ಈ ವಿಜಯದ ನೆನಪಿಗಾಗಿಯೇ ಆ ವರೆಗೂ 'ಹಂಪಿ' ಎನಿಸಿಕೊಂಡಿದ್ದ ರಾಜಧಾನಿಯ ಹೆಸರನ್ನು 'ವಿಜಯನಗರ ' ಎಂದು ಮರುನಾಮಕರಣ ಮಾಡಿದನು. ಇದು ವಿಜಯದ ಸಂಕೇತವೂ ಆಗಿತ್ತು. ಪರಾಕ್ರಮದಿಂದ ಗೆದ್ದ ಒರಿಸ್ಸಾದಿಂದ ರಾಜಧಾನಿ ವಿಜಯನಗರಕ್ಕೆ ತಂದ ಬಾಲಕೃಷ್ಣನಿಗಾಗಿ ಬೃಹತ್ ಆಕಾರದ ಬಾಲಕೃಷ್ಣ ದೇವಾಲಯವನ್ನು ರಾಜಧಾನಿ ಹಂಪಿಯಲ್ಲಿ ನಿರ್ಮಾಣ ಮಾಡಿಸಿದನು. ಈ ದೇವಾಲಯವು ದಕ್ಷಿಣ ಭಾರತದ ಕೆಲವೇ ಕೆಲವು ಬೃಹತ್ ದೇವಾಲಯಗಳಲ್ಲಿ ಒಂದೇಂದು ಪರಿಗಣಿಸಲಾಗಿರುವುದು ವಿಶೇಷ.

ಕೃಷ್ಣದೇವರಾಯನ ಆಳ್ವಿಕೆ ಕಾಲದಲ್ಲಿ ಸನಾತನೀಯ ಸಂಪ್ರದಾಯದ ವೈಷ್ಣವ ಧರ್ಮವು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯಿತು.

ಅಲ್ಲಸಾನಿ ಪೆದ್ದಣ್ಣನನ್ನು ಒಳಗೊಂಡಂತೆ 'ಅಷ್ಟ ದಿಗ್ಗಜ'ರೆಂಬ ಕವಿಗಳು ಇವನ ಆಸ್ಥಾನದಲ್ಲಿ ಆಶ್ರಯ ಪಡೆದು ಕನ್ನಡ ಮತ್ತು ತೆಲುಗು ಭಾಷೆಯಲ್ಲಿ ಸಾಹಿತ್ಯ ಕೃಷಿ ಮಾಡಿ ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸಿದರು. ಹೊಯ್ಸಳರ ಕಾಲದ ರಾಮಾನುಜಾ ಚಾರ್ಯರ ನಂತರ ತುಳುವ ವಂಶದ ಕೃಷ್ಣದೇವರಾಯನ ಆಳ್ವಿಕೆ ಕಾಲದಲ್ಲಿ ಅತ್ಯಂತ ಹೆಚ್ಚು ಪ್ರಾಬಲಕ್ಕೆ ಬಂದ ವೈಷ್ಣವರು ರಾಜಧಾನಿ ವಿಜಯನಗರದಲ್ಲಿ ವೈಷ್ಣವ ಸಂಪ್ರದಾಯದ ವಿಜಯ ವಿಠ್ಠಲ ದೇವಾಲಯ–ಹಜಾರರಾಮ ದೇವಾಲಯ–ಅಚ್ಯುತ ರಾಯ ದೇವಾಲಯ– ಪಟ್ಟಾಭಿರಾಮ ದೇವಾಲಯ–ಮೇಲೆ ಉಲ್ಲೇಖಿಸಿದ ಬೃಹತ್ ಬಾಲ ಕೃಷ್ಣದೇವಾಲಯ–ಇನ್ನಿತರೆ ವೈಷ್ಣವ ಧರ್ಮದ ಕೇಂದ್ರ ಬಿಂದುವಾದ ವಿಷ್ಣು ದೇವಾಲಯಗಳು ಯಥೇಚ್ಛವಾಗಿ ಬಹುಶ್ರೀಮಂತಿಕೆಯಿಂದ ನಿರ್ಮಾಣಗೊಂಡವು. ಈ ದೇವಾಲಯಗಳ ನಿರ್ಮಾಣದ ಶಿಸ್ತು ಹಾಗೂ ಶಿಲ್ಪಕಲೆಗಳ ಬಹುಸುಂದರ ಕೆತ್ತನೆ

ಗಳಿಂದಾಗಿ ವಿಶ್ವ ಮಾನ್ಯತೆಯನ್ನು ಪಡೆದು ಕನ್ನಡ ನಾಡಿನ ಸಾಂಸ್ಕೃತಿಕ ಹಿರಿಮೆಯನ್ನು ಪ್ರಪಂಚದಾದ್ಯಂತ ಇಂದಿಗೂ ಪ್ರಚಾರ ಪಡಿಸುವ ರಾಯಭಾರಿಯಾಗಿ ಕಂಗೊಳಿಸುತ್ತಿವೆ. ಬಹುಮುಖ್ಯವಾಗಿ ೧೦ನೇ ಶತಮಾನದಲ್ಲಿ ಆಳ್ವಿಕೆ ಮಾಡಿದ ಹೊಯ್ಸಳ ಹಾಗೂ ಕಲ್ಯಾಣಿ ಚಾಲುಕ್ಯರ ಕಾಲದ ದೇವಾಲಯದ ಶಿಲ್ಪಗಳು ಮೃದುಸ್ವರೂಪವನ್ನು ಮೈಗೂಡಿಸಿ ಕೊಂಡಿರುವ ಬಳಪದ ಕಲ್ಲಿನಿಂದ ನಿರ್ಮಾಣಗೊಂಡು ಬಹುಸೂಕ್ಷ್ಮ ಕೆತ್ತನೆಗೆ ಒಳಗಾಗಿದ್ದರೆ, ವಿಜಯನಗರದಲ್ಲಿ ಕ್ರಿ.ಶ. ೧೪ ಮತ್ತು ೧೫ನೇ ಶತಮಾನದಲ್ಲಿ ನಿರ್ಮಾಣ ಗೊಂಡ ಬೃಹತ್ ವಿಸ್ತಾರಣೆಯನ್ನು ಒಳಗೊಂಡಿರುವ ರಾಜಧಾನಿ ವಿಜಯನಗರ ಹಾಗೂ ಅದರ ಸುತ್ತಮುತ್ತಲಿನ ದೇವಾಲಯಗಳ ನಿರ್ಮಾಣ ಸ್ಥಳೀಯವಾಗಿ ದೊರಕಿದ ಬೆಣಚುಕಲ್ಲು ಅಥವಾ ಒರಟು ಕಲ್ಲಿನಿಂದ ನಿರ್ಮಾಣಗೊಂಡವುಗಳಾಗಿವೆ. ಹೊಯ್ಸಳರ ಕಾಲದ ಶಿಲ್ಪಗಳಂತೆ ಸೂಕ್ಷ್ಮ ಕೆತ್ತನೆಗಳು ಕಂಡು ಬರದಿದ್ದರೂ ಬೃಹತ್ ಬೆಣಚುಕ್ಕಲ್ಲಿನ ಏಕಶಿಲೆಯಲ್ಲಿ ದೇವಾಲಯದ ಕಂಬಗಳನ್ನು ನಿರ್ಮಾಣ ಮಾಡಿರುವುದು ಕನ್ನಡಿಗರ ಹಿರಿಮೆಯನ್ನು ಹೆಚ್ಚಿಸಿದೆ. ವಿಜಯನಗರ ಸಾಮ್ರಾಜ್ಯದ ಅರಸರ ಆರಾಧ್ಯ ದೈವ ಸ್ಥಳೀಯ ನೆಲಮೂಲ ಸಂಸ್ಕೃತಿಯ ಶೈವ ಸಂಪ್ರದಾಯದ 'ವಿರೂಪಾಕ್ಷ'ನೇ ಆಗಿದ್ದು ಸ್ಪಷ್ಟ. ಆದರೆ ತುಳುವ ಮತ್ತು ಅರವೀಡು ವಂಶದವರ ಆಳ್ವಿಕೆಯ ಕಾಲದಲ್ಲಿ ವೈಷ್ಣವ ಧರ್ಮಕ್ಕೆ ಪ್ರಾಮುಖ್ಯತೆ ದೊರಕಿದ ಹಿನ್ನೆಲೆಯಲ್ಲಿ ವೈಷ್ಣವ ಸಂಪ್ರದಾಯದ ದೇವರಾದ 'ತಿರುಪತಿ ತಿಮ್ಮಪ್ಪ' ಇವರ ಆರಾಧ್ಯದೈವವಾಗಿ ಪರಿವರ್ತನೆಗೊಂಡನು. ಆದರೆ ವಿರೂಪಾಕ್ಷ ನನ್ನು ಎಂದಿಗೂ ಮೂಲೆಗುಂಪು ಮಾಡಲಿಲ್ಲ. ಅನೇಕ ಸಾಹಿತ್ಯ ಹಾಗೂ ಶಾಸನಾಧಾರಗಳ ದಾಖಲೆಗಳ ಪ್ರಕಾರ ತಿರುಪತಿಯೂ ಸಹ ಕನ್ನಡನಾಡಿನ ಅವಿಭಾಜ್ಯ ಅಂಗವೇ ಆಗಿತ್ತು ಎಂಬುದನ್ನು ತಿಳಿಸುತ್ತವೆ.

ವಿಜಯನಗರ ಹಾಗೂ ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ನಿರ್ಮಾಣಗೊಂಡ ಬೃಹತ್ ದೇವಾಲಯಗಳು ಏಕಶಿಲೆಯಿಂದ ಬೃಹತ್ ಪ್ರಮಾಣದ ಕಂಬಗಳನ್ನು ನಿರ್ಮಿಸಿ, ಆ ಏಕಶಿಲಾ ಕಂಬಗಳಲ್ಲಿಯೇ ಹತ್ತಾರು ಪೂರಕ ಕಂಬಗಳನ್ನು ನಿರ್ಮಿಸಿರುವುದು ಹಾಗೂ ದೇವಾಲಯದ ಮೇಲಿನ ಬೃಹತ್ ಗಾತ್ರದ ಕಲ್ಲಿನ ಚಾವಣಿಯ ಬಾರ ಕಂಬದ ಮೇಲೆ ಇರುವ ಕಾರಣದಿಂದಾಗಿ ಪೂರಕ ಸಣ್ಣ ಸಣ್ಣ ಕಂಬಗಳನ್ನು ಬೆರಳಿನಿಂದ ಮೃದುವಾಗಿ ಒಡೆದಾಗ ಸಪ್ತಸ್ವರಗಳ ನಾದ ಹೊರಹೊಮ್ಮುವುದು ಕಂಡುಬರುತ್ತದೆ. ಇದೊಂದು ಶಿಲ್ಪ ಕಲೆಯ ವಿಸ್ಮಯ ಹಾಗೂ ವಿಜಯನಗರ ಕಾಲದ ಶಿಲ್ಪಕಲೆಯ ವೈಶಿಷ್ಟವೂ ಆಗಿ ಹೊರಹೊಮ್ಮಿದೆ.ಈ ಕಲಾ ಸಂಸ್ಕೃತಿಯನ್ನು ಕನ್ನಡ ನಾಡು ಭಾರತಕ್ಕೆ ಕೊಟ್ಟ ಬಹುದೊಡ್ಡ ಕೊಡುಗೆ. ವಿಜಯನಗರದರಸರ ಕಾಲದ ಕಲಾ ಶೈಲಿಯ ಕಲಾ ಪ್ರಕಾರದ ಮೂರು ಭಾಗಗಳಾದ ನಾಗರ–ದ್ರಾವಿಡ ಹಾಗೂ ವೇಸರ ಶೈಲಿಯಲ್ಲಿ ನಿರ್ಮಾಣಗೊಂಡಿವೆ. ಈ ಪ್ರಕಾರಗಳು ದ್ರಾವಿಡ ಸಂಸ್ಕೃತಿಯ ಪ್ರತೀಕಗಳೂ ಆಗಿವೆ. ಇವುಗಳ ಜೊತೆಗೆ ವಿಜಯನಗರದ ಕಾಲದ ದೇವಾಲಯಗಳು ಹೊಸ ಹೊಸ

ರೂಪದಲ್ಲಿ ನಿರ್ಮಾಣಗೊಂಡ ಕಾರಣಕ್ಕಾಗಿ ಈ ಕಾಲದ ಶಿಲ್ಪಕಲಾ ಶೈಲಿಯನ್ನು 'ವಿಜಯನಗರ ಶೈಲಿ' ಎಂದು ಗುರುತಿಸಿರುವುದು ಭಾರತದಲ್ಲಿ ಕನ್ನಡ ನಾಡಿನ ಸಾಮ್ರಾಜ್ಯದ ವೈಭವವನ್ನು ಅನಾವರಣಗೊಳಿಸುತ್ತದೆ.

ವಿಶ್ವ ಪ್ರಸಿದ್ಧ ವಿಜಯ ವಿಠ್ಠಲ ದೇವಾಲಯದಲ್ಲಿ ವಿಷ್ಣುವಿನ ವಾಹನ ಎನಿಸಿ ಕೊಂಡಿರುವ ಗರುಡನಿಗಾಗಿ ಕಲ್ಲಿನ ರಥದ ರೂಪದಲ್ಲಿ ಬಹುಸುಂದರವಾಗಿ ದೇವಾಲಯವನ್ನು ನಿರ್ಮಾಣ ಮಾಡಿರುವುದು ವಿಜಯನಗರ ಶೈಲಿಯ ಶಿಲ್ಪಕಲೆಗೆ ಹಿಡಿದ ಕೈಗನ್ನಡಿಯಾಗಿದೆ. ಇದು ಪ್ರಪಂಚದ ಪಾರಂಪರಿಕ ಶಿಲ್ಪಕಲೆಯ ಪಟ್ಟಿಯಲ್ಲಿ ಪ್ರಮುಖ ಸ್ಥಾನವನ್ನು ಪಡೆದು ವಿಶ್ವ ಮಾನ್ಯತೆಯನ್ನು ಪಡೆದಿದೆ. ರಾಜಧಾನಿ ವಿಜಯನಗರದಲ್ಲಿ ನಿರ್ಮಾಣಗೊಂಡ ಏಕಶಿಲಾ ಉಗ್ರ ನರಸಿಂಹ (ಲಕ್ಷ್ಮಿ ನರಸಿಂಹ ಎಂತಲೂ ಉಲ್ಲೇಖಿಸುತ್ತಾರೆ), –ಏಕಶಿಲಾ ಬಡವಿಲಿಂಗ–ಏಕಶಿಲಾ ಕಡಲೆಕಾಳು ಗಣಪ –ಏಕಶಿಲಾ ಸಾಸಿವೆ ಗಣಪ–ವಿರುಪಾಕ್ಷ ದೇವಾಲಯದ ಎದುರಿಗೆ ಇರುವ ಬೃಹತ್ ಬಸವ ಹಾಗೂ ಅತ್ಯಂತ ಪ್ರಾಚೀನ ಸ್ಥಳ ಎನಿಸಿಕೊಂಡಿರುವ ಹೇಮಕೂಟದ ಮೇಲಿರುವ ವಿಜಯನಗರ ಪೂರ್ವದ ದೇವಾಲಯಗಳು ವಿಶ್ವ ಪಾರಂಪರಿಕ ಪಟ್ಟಿಯಲ್ಲಿ ಪ್ರಥಮ ಸ್ಥಾನವನ್ನು ಪಡೆದು ಕನ್ನಡದ ಸಾಂಸ್ಕೃತಿಕ ಹಿರಿಮೆ ಗರಿಮೆಯನ್ನು ಹೆಚ್ಚಿಸಿವೆ.

ಕ್ರಿಸ್ತಶಕ ೭ನೇ ಶತಮಾನದಿಂದ ಇಂದಿನವರೆಗೂ ಜನರಿಂದ ಪೂಜೆಗೆ ಒಳಗಾಗುತ್ತಿರುವ ದೇವರೆಂದರೆ ವಿಜಯನಗರ ಸಾಮ್ರಾಜ್ಯದ ಅರಸರ ಅಧಿದೇವತೆನಿಸಿಕೊಂಡಿರುವ ಪಂಪ ಹಾಗೂ ಪಂಪಾಂಬಿಕೆ ಅಥವಾ ವಿರೂಪಾಕ್ಷ–ಭುವನೇಶ್ವರಿ ದೇವಾಲಯ. ಈ ದೇವಾಲಯವು ಕನ್ನಡ ನಾಡಿನ ಬೃಹತ್ ದೇವಾಲಯಗಳಲ್ಲಿ ಒಂದಾಗಿದೆ.ಕನ್ನಡ ನಾಡಿನಲ್ಲಿಯೇ ಬೃಹತ್ ರಾಜ ಗೋಪುರವನ್ನು ಹೊಂದಿರುವ ದೇವಾಲಯ ಇದು. ತುಂಗಭದ್ರ ನದಿಯ ದಂಡೆಯಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯದಲ್ಲಿ ವರ್ಷಂ ಪ್ರತಿ ಕಾಲಕಾಲಕ್ಕೆ ಶತಶತಮಾನಗಳಿಂದಲೂ ನಡೆದುಕೊಂಡು ಬರುತ್ತಿರುವ ರಥೋತ್ಸವ–ತೆಪ್ಪೋತ್ಸವ–ದೀಪೋತ್ಸವ–ಜಾತ್ರೋತ್ಸವಗಳು ಸ್ಥಳೀಯ ಜನರಿಂದ ನಡೆದುಕೊಂಡು ಬರುತ್ತಿರುವುದು ಇಲ್ಲಿನ ಚಾರಿತ್ರಿಕ ಹಿರಿಮೆಯನ್ನು ಹೆಚ್ಚಿಸಿದೆ.

ಮೇಲಿನ ಧರ್ಮ ಕೇಂದ್ರಿತ ವ್ಯವಸ್ಥೆಯ ಸಾಂಸ್ಕೃತಿಕ ಸಿದ್ಧಾಂತ ಹಾಗೂ ಬೆಳವಣಿಗೆಗೆ ರಾಜ ಹಾಗೂ ಪ್ರಭುತ್ವವನ್ನು ಆಳಿತಾತ್ಮಕವಾಗಿ ನಿಯಂತ್ರಣ ಮಾಡುತ್ತಿದ್ದ ವೈದಿಕ ಕೇಂದ್ರಿತ ಅಲಿಖಿತ ಮಾದರಿಯ ಅಸಂಪ್ರದಾಯಿಕ ಸಂವಿಧಾನದ ಮೂಲ ಕಾರಣ ವಾಗಿತ್ತು. ಈ ಸಂವಿಧಾನದ ಅಡಿಯಲ್ಲಿ ರಾಜ ತನ್ನ ಪ್ರಭುತ್ವದ ಆಳ್ವಿಕೆಯನ್ನು ನಡೆಸಬೇಕಾಗಿತ್ತು. ಸಾಮಾಜಿಕ ಸ್ತರ ವಿನ್ಯಾಸಗಳನ್ನು ಕಿಂಚಿತ್ತೋ ಬದಲಾಯಿಸುವ ಗೋಜಿಗೆ ಯಾವ ರಾಜರು ಮುಂದಾಗದಿದ್ದು ಇದಕ್ಕೆ ಕಾರಣ. ರಾಜ ಸಾಮ್ರಾಜ್ಯಗಳನ್ನು ತನ್ನ ಪರಾಕ್ರಮದ ಮೂಲಕ ಗೆದ್ದಿಕೊಂಡು ಬಂದರೂ ಸಹ ವೈದಿಕರ ಮುಂದೆ ಧಾರ್ಮಿಕ ಹಾಗೂ ಸಾಮಾಜಿಕ ಶ್ರೇಣಿಕೃತ ವ್ಯವಸ್ಥೆ ಹಿನ್ನೆಲೆಯಲ್ಲಿ ಶರಣಾಗಲೇ

ಬೇಕಾಗಿತ್ತು. ಈ ಹಿನ್ನೆಲೆಯಲ್ಲಿ ಜನಸಾಮಾನ್ಯರ ಜೀವನದ ಭಾವಣೆ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಯಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಸಂಕೋಲೆಗಳಲ್ಲಿ ಬಲಿಯಾಗಿ ದುಃಸ್ತರವಾಗಿತ್ತು. ಇಂತಹ ಜನಸಾಮಾನ್ಯರ ಅಂಧಕಾರದ ಬದುಕನ್ನು ಸಾಮ್ರಾಜ್ಯದ ಬಹುದೊಡ್ಡ ಪಂಡಿತ ಪಾಮರರು ತಿಳಿಸಲೇ ಇಲ್ಲ. ಇಂಥ ಜನಸಾಮಾನ್ಯರ ಬದುಕನ್ನು ವಾಸ್ತುನಿಷ್ಠವಾಗಿ ಅನಾವರಣಗೊಳಿಸಿದವರು ವಿಜಯನಗರದ ಅರಸು ಮನೆತನದಲ್ಲಿ 'ಸುವರ್ಣ ಯುಗ'ದ ಮಾದರಿಯಲ್ಲಿ ಆಳ್ವಿಕೆ ಮಾಡಿದರು ಎಂದೆನ್ನಿಸಿ ಕೊಂಡಿರುವ ತುಳುವ ವಂಶದವರ ಆಳ್ವಿಕೆಯ ಕಾಲದಲ್ಲಿಯೇ ಇದ್ದ ಧಾರ್ಮಿಕ ಕೀರ್ತನೆಕಾರರಾದ ಕನಕದಾಸರು. ಕನಕದಾಸರು ದಾಸ ಪರಂಪರೆಯಲ್ಲಿ ಶ್ರೇಷ್ಠರಾದವರು. ಅಂದಿನ ಕಾಲದಲ್ಲಿ ಜನರ ನಡುವೆ ಇದ್ದ ಶ್ರೇಷ್ಠ–ಕನಿಷ್ಠ, ಸ್ಪೃಶ್ಯ–ಅಸ್ಪೃಶ್ಯ, ಊರಿನ ಶ್ರೇಷ್ಠ ಜನ–ಕೇರಿಯ ಕನಿಷ್ಠ ಜನ, ಶಾಖಾಹಾರಿ–ಮಾಂಸಾಹಾರಿ , ದೇವಾಲಯದ ಒಳಗಿನ ಜನ–ದೇವಾಲಯದ ಹೊರಗಿನ ಜನ, ದುಡಿದು ಹಸಿದು ಮಲಗುವ ಜನ –ದುಡಿಯದೇ ಹೊಟ್ಟೆ ಬಿರಿಯುವ ಹಾಗೆ ಉಂಡು ಸಂತೋಷಪಡುವ ಜನ. ಶಿಕ್ಷಣವನ್ನು ತಮ್ಮ ಪಾರಂಪರಿಕ ಹಕ್ಕು ಎಂದು ಹೇಳಿಕೊಳ್ಳುವ ಜನ–ಶಿಕ್ಷಣವನ್ನೇ ಕಲಿಯಬಾರದು ಎಂದು ದೂರ ನಿಂತ ಜನ ಇಂತಹ ಬಹುದೊಡ್ಡ ಧಾರ್ಮಿಕ ಹಿನ್ನೆಲೆಯ ಸಾಮಾಜಿಕ ಸಾಂಸ್ಕೃತಿಕ ಹಂತಪಥನಕ್ಕೆ ಕನಕರೆಳಿದ ಮನಮುಟ್ಟುವ ಮಾತೆಂದರೆ "ಕುಲ ಕುಲ ಕುಲವೆಂದು ಹೊಡೆದಾಡದಿರಿ–ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ಬಲ್ಲಿರಾ" ಎಂದು. ಈ ಪ್ರಶ್ನೆಗೆ ಈವರೆಗೂ ಉತ್ತರ ದೊರಕಿಲ್ಲ , ಸದ್ಯದ ಪರಿಸ್ಥಿತಿಲಿ ದೊರಕುವ ಆಗಿಯೂ ಕಾಣುತ್ತಿಲ್ಲ. ಭಾರತದಲ್ಲಿ ಇರುವ ಜಡ್ಡುಗಟ್ಟಿದ ಸಾಮಾಜಿಕ ಸಂರಕ್ಷಣೆಯಲ್ಲಿ ಇಂತಹ ಪ್ರಶ್ನೆಗಳಿಗೆ ಉತ್ತರ ದೊರಕುವುದು ಕಷ್ಟವಾದರೂ ಸಹ ಬುದ್ಧ ಬಸವ ಸರ್ವಜ್ಞರ ಹಾದಿಯಲ್ಲಿ ಜ್ಞಾನದ ದೀಪವನ್ನು ಹಚ್ಚಲು ಕನಕರು ಮುಂದಾದರು.ಇಷ್ಟಕ್ಕೆ ಬಿಡದ ಕನಕದಾಸರು–ಶಿರದಿಂದ ಹುಟ್ಟಿದವನು 'ಬ್ರಾಹ್ಮಣ' ಅವನು ಹುಟ್ಟಿನಲ್ಲಿ ಶ್ರೇಷ್ಠನಾದ ರಿಂದ ಅಕ್ಷರ ಮತ್ತು ಶಿಕ್ಷಣ ಅವನ ಸ್ವತ್ತು–ಜೊತೆಗೆ ದೇವಾಲಯದ ಜವಾಬ್ದಾರಿಯುತ ಒಡೆಯನು ಅವನೇ ಎಂಬ ಕಲ್ಪನೆ–ತೋಳಿನಿಂದ ಹುಟ್ಟಿದವನು 'ಕ್ಷತ್ರಿಯ' ಅವನೇ ಪ್ರಭುತ್ವದ ಸಂಕೇತ, ಹಾಗೂ ಇವನೇ ವೈದಿಕರ ಮಾರ್ಗದರ್ಶನದಂತೆ ರಾಜಾಧಿಕಾರ ವನ್ನು ಅನುಭವಿಸುವವನು–ಇನ್ನು ಹೊಟ್ಟೆಯಿಂದ ಹುಟ್ಟಿದವನು 'ವೈಶ್ಯ' ಅವನನ್ನು ಸಮಸ್ತ ನಾಡಿನ ವಾಣಿಜ್ಯ ವ್ಯಾಪಾರದ ವಾರಸುದಾರಿಕೆ ವ್ಯಾಪಾರದ ಸಂಕೇತವನ್ನಾಗಿಸಿ – ಕಾಲಿನಿಂದ ಹುಟ್ಟಿದವನನ್ನು 'ಶೂದ್ರ'ನೆಂದು, ಇವನು ಅಸ್ಪೃಶ್ಯನೆಂದು ಜರಿದು ಅನೇಕ ಧಾರ್ಮಿಕ ಹಿನ್ನೆಲೆಯ ಸಾಮಾಜಿಕ ಸಂಕೋಲೆಯಲ್ಲಿ ಜೀವಿಸುವಂತೆ ಮಾಡಿದ್ದವರಿಗೆ ಕನಕ ಹೇಳಿದ ಮಾತು 'ಹುಟ್ಟಿದ ಯೋನಿಗಳಿಲ್ಲ–ಮೆಟ್ಟಿದ ಭೂಮಿಗಳಿಲ್ಲ–ಅಟ್ಟು ಉಣ್ಣದ ವಸ್ತುಗಳಿಲ್ಲ' ಎಂಬ ವಸ್ತುನಿಷ್ಠವಾದ ವಾಸ್ತವದ ಮಾತು. ಈ ಮಾತುಗಳು ವಿಜಯ

ನಗರದ ಕಾಲದ ಸಂದರ್ಭದಲ್ಲಿ ಇದ್ದಂತಹ ಸಾಮಾಜಿಕ ಮೇಲುಕೀಳು ಎಂಬ ಬಹುದೊಡ್ಡ ಸ್ತರ ವಿನ್ಯಾಸಗಳನ್ನು ಅನಾವರಣಗೊಳಿಸುತ್ತವೆ. ಜಡ್ಡುಕಟ್ಟಿದ ಸಾಂಪ್ರದಾಯಿಕ ವ್ಯವಸ್ಥೆಗೆ 'ಹೊಲೆಯ ಹೊರಗಿನವನೆ, ಊರೊಳಗಿಲ್ಲವೇ?' ಎಂಬ ಮಾರ್ಮಿಕ ಮಾತುಗಳನ್ನಾಡಿ ಎಚ್ಚರಿಸಿದ್ದಾರೆ.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಉದಯಿಸಿದ ಸಾಂಪ್ರದಾಯಿಕ ಹಾಗೂ ಪ್ರಗತಿಪರ ಹಿನ್ನೆಲೆ ಸಾಹಿತ್ಯವು ಕನ್ನಡ ನಾಡಿನಲ್ಲಿ ಸ್ವತಂತ್ರ ಪೂರ್ವ ಹಾಗೂ ಸ್ವತಂತ್ರ ನಂತರದಲ್ಲಿ ಉದಯಿಸಿದ ನವ್ಯ–ನವೋದಯ–ಪ್ರಗತಿಪರ–ಬಂಡಾಯ–ಹಾಗೂ ಮಹಿಳಾ ಕೇಂದ್ರಿತ ಸಾಹಿತ್ಯ ಪ್ರಕಾರಗಳ ರಚನೆಗೆ ಪೂರಕ ಕೊಡುಗೆಗಳಾಗಿವೆ. ಕನಕದಾಸರ ಮೋಹನತರಂಗಿಣಿ, ನಳ ಚರಿತ್ರೆ, ರಾಮಧಾನ್ಯ ಚರಿತ್ರೆ, ಹರಿಭಕ್ತಸಾರ ಎಂಬ ಕೃತಿಗಳು ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ಶ್ರೀಮಂತ ಗೊಳಿಸಿದೆ. ಪುರಂದರ ದಾಸರ ಕೀರ್ತನೆಗಳು ಜನರನ್ನು ಜಾಗೃತಿಗೊಳಿಸಿವೆ. ಶಾಸನ–ನಾಣ್ಯ–ಸ್ಮಾರಕ ಹಾಗೂ ಹಸ್ತಪ್ರತಿ ಗಳು ಕನ್ನಡ ಕನ್ನಡಿಗ ಕರ್ನಾಟಕವನ್ನು ಶ್ರೀಮಂತ ಉಳಿಸಿವೆ. ಭಾರತದ ಪ್ರಸಿದ್ಧ ಅರಸು ಮನೆತನಗಳಲ್ಲಿ ಕನ್ನಡ ನಾಡಿನ ವಿಜಯನಗರ ಸಾಮ್ರಾಜ್ಯದ ಅರಸು ಮನೆತನ ಗಳು ಪ್ರಮುಖ ಸ್ಥಾನವನ್ನು ಪಡೆಯುವಂತೆ ಮಾಡಿವೆ. ವಿಜಯನಗರ ಅರಸರು ಆಳ್ವಿಕೆ ಮಾಡಿದ ರಾಜಧಾನಿಯೂ, ಅಲ್ಲಿನ ಶಿಲ್ಪಕಲಾ ವೈಭವವು ವಿಶ್ವ ಮಾನ್ಯತೆಯನ್ನು ಪಡೆದು ಕಂಗೊಳಿಸಿ ಕನ್ನಡ ನಾಡನ್ನು ಅಮರಗೊಳಿಸಿದೆ.

ಮೇಲಿನ ಬರವಣಿಗೆಯ ಒಟ್ಟಾರೆ ಅಂಶಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಣೆ ಮಾಡಿ ದಾಗ 'ಉರಿಯುವ ದೀಪದ ಬುಡದಲ್ಲಿ ಕತ್ತಲು ಇರುವ ಹಾಗೆ ವೈಭವ ಸುಂದರ ಎಂದು ಕರೆಸಿಕೊಳ್ಳುವ ಸುವರ್ಣ ಯುಗದ ಸಾಮ್ರಾಜ್ಯದ ಬುಡದಲ್ಲಿಯೇ ಹಸಿವು ಮತ್ತು ಅಮಾನವೀಯ ಪದ್ಧತಿಗಳಂತಹ ಆಕ್ರಂದನಗಳು ಇದ್ದವು' ಎಂಬುವುದು ಚರಿತ್ರೆ ಉದ್ದಕ್ಕೂ ಮನಗಂಡಿರುವ ಸಂಗತಿಯಾಗಿದೆ.

ವಿಜಯನಗರ ಸಾಮ್ರಾಜ್ಯ ರಾಜಧಾನಿಯಾಗಿದ್ದ ಹಂಪಿ ಸ್ವಾತಂತ್ರ್ಯ ಮತ್ತು ವಿಕೀಕರಣ ಹೋರಾಟಕ್ಕೆ ಪ್ರೇರಣೆ ಸಂಕೇತವಾಗಿತ್ತು. ಭಾರತವು ಸ್ವಾತಂತ್ರ್ಯಗೊಂಡ ನಂತರ ಭಾಷಾವಾರು ಪ್ರಾಂತ್ಯ ರಚನೆಯ ಹಿನ್ನೆಲೆಯಲ್ಲಿ ಕರುನಾಡು ಕರ್ನಾಟಕವಾಗಿ ನಿರ್ಮಾಣಗೊಳ್ಳಲು ಬಹುದೊಡ್ಡ ಸಾಂಸ್ಕೃತಿಕ ಗುರುತಿಸುವಿಕೆಗೆ ಅಡಿಗಲ್ಲಾಗಿತ್ತು. ರಾಜ, ಪ್ರಜೆಗಳ ಸಂಬಂಧ, ರಾಜನೀತಿ, ಸಾಮಾಜಿಕತೆ, ಧಾರ್ಮಿಕತೆ, ಶೈಕ್ಷಣಿಕ, ಸಾಹಿತ್ಯ ರಚನೆ, ಕಲೆ ಮತ್ತು ವಾಸ್ತುಶಿಲ್ಪ ರಚನೆ, ಸ್ಮಾರಕಗಳ ನಿರ್ಮಾಣ ರಾಜಧಾನಿ, ನಗರ, ಪಟ್ಟಣಗಳಲ್ಲಿ ಆರ್ಥಿಕ ಬೆಳವಣಿಗೆಗೆ ವಿಜಯನಗರ ಸಾಮ್ರಾಜ್ಯದ ಕೊಡುಗೆ ಅಪಾರ. ವಿಜಯನಗರ ಸಾಮ್ರಾಜ್ಯ ಭೌಗೋಳಿಕ, ಚಾರಿತ್ರಿಕ, ಸಾಂಸ್ಕೃತಿಕವಾಗಿ ಇಡೀ ದಕ್ಷಿಣ ಭಾರತಕ್ಕೆ ಒಳಪಟ್ಟಿದ್ದರೂ ಅದು ಕನ್ನಡ ನಾಡಿನ ಆಸ್ತಿಯಾಗಿತ್ತು. ಅದು ಕರ್ನಾಟಕ ಸಾಮ್ರಾಜ್ಯವಾಗಿದ್ದರಿಂದ ಇಂದಿಗೂ ಅದರ ಪ್ರಭಾವ ಸರ್ವಕ್ಷೇತ್ರ, ದಿಕ್ಕಿನಲ್ಲೂ ಪಸರಿಸಿದೆ.

ಪರಾಮರ್ಶನ ಗ್ರಂಥಗಳು

೧. ಕರ್ನಾಟಕ ಚರಿತ್ರೆ ಸಂಪುಟ ೩ ಪ್ರಧಾನ ಸಂಪಾದಕರು ಪ್ರೊ.ಬಿ.ಷೇಕ್ ಅಲಿ, ಸಂಪುಟ ಸಂಪಾದಕರು ಕೆ ಶಿವಣ್ಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುನರ್ ಮುದ್ರಣ ೨೦೧೮

೨. ವಿಜಯನಗರ ಸಾಮ್ರಾಜ್ಯ ಮತ್ತು ಸಂಸ್ಥಾನಗಳ ಸಾಂಸ್ಕೃತಿಕ ಚರಿತ್ರೆ, ಡಾ.ಎನ್. ಚಿನ್ನಸ್ವಾಮಿ ಸೋಸಲೆ, ಪ್ರಸಾರಾಂಗ, ಕವಿವಿ,ಹಂಪಿ

೩. ವಿಜಯನಗರ ಕಾಲದ ಸಂಸ್ಕೃತಿ, ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಪ್ರಸಾರಾಂಗ, ಕವಿವಿ, ಹಂಪಿ ೨೯೧೮ (೨೯೯೮)

೪. ಸಮಕಾಲೀನ ಕರ್ನಾಟಕ: ಚರಿತ್ರೆಯ ವಿವಿಧ ಆಯಾಮಗಳು, ಪ್ರ.ಸಂ, ಡಾ.ವಿಜಯ ಪೂಣಚ್ಚ ತಂಬಂಡ, ಸಂ.ಸಂ. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೮

ISSN 2319-7307

ನವಕರ್ನಾಟಕ ಪ್ರಕಾಶನ

ಹೊಸತು

ನವ್ಯದಿಯ ನಾಳೆ ನವ್ಯದ

ಜನಪರ ಹೆಜ್ಜೆಗೆ ಇಪ್ಪತ್ತೈದು ವರ್ಷ

ಆಗಸ್ಟ್ ೨೦೨೩
ಬೆಲೆ : ₹ ೩೦

೧೯೯೯-೨೦೨೩



ಹೊಸತು

ಒಳಗೇನಿದೆ?

ನೆಮ್ಮದಿಯ ನಾಳೆ ನಮ್ಮದು

ಇಂದಿನ ನೆನಪಿನ ಅಂದಿನ ದಿನಗಳು (ನೆನಪಿನಂಗಳದಿಂದ) ಜಿ. ರಾಮಕೃಷ್ಣ ... ೬

ಸಂದರ್ಶನ

ನಮ್ಮ ನಡುವಿನ ಶಾಂತಿದೂತ ಇ. ಪಿ. ಮೆನನ್
ಡಾ॥ ಜಿ. ರಾಮಕೃಷ್ಣ, ಡಾ॥ ಎನ್. ಗಾಯತ್ರಿ ... ೩೧

ಮಣಿಪುರದಲ್ಲಿ ಮರಣಮೃದಂಗ ಡಾ॥ ಬಿ. ಆರ್. ಮಂಜುನಾಥ್ ... ೧೧

ಅಸಾಂವಿಧಾನಿಕ ರಾಶಿನೀ ೨೦೨೦ ರದ್ದು ಮಾಡಲು ೬ ಸಕಾರಣಗಳು
ನಿರಂಜನಾರಾಧ್ಯ ವಿ. ಪಿ. ... ೧೯

ಏಕರೂಪ ನಾಗರಿಕ ಸಂಹಿತೆ ಅಗತ್ಯವೇ? – ಒಂದು ವಿಶ್ಲೇಷಣೆ
ಮುರಳಿಧರ ಚಿಕ್ಕಮಗಳೂರು ... ೨೭

ಕಾವ್ಯಲೋಕ ೧೮, ೨೪, ೨೬, ೩೦, ೪೪, ೪೭, ೬೧

ಅಂಕಣಗಳು

ಗಾಂಧೀಜಿಯವರ ನೆಲಮೂಲ ಸಂಸ್ಕೃತಿಗೆ ಜೀವ ತುಂಬಿದ ದೀದಿ ಕಂಟ್ರಾಕ್ಟರ್
ಡಾ॥ ಎನ್. ಜಗದೀಶ್ ಕೊಪ್ಪ ... ೩೭

ನಗರದಲ್ಲಿನ ನಿರುದ್ಯೋಗಕ್ಕೆ ಜರೂರು ಪರಿಹಾರ ಬೇಕಾಗಿದೆ
ಟಿ. ಎಸ್. ವೇಣುಗೋಪಾಲ್ ... ೨೧

ಅಪರಾಧಿ ಯಾರು? ಡಾ॥ ವಿನಯಾ ಒಕ್ಕುಂದ ... ೪೯

ಬಟ್ಟೆಗಳು ಪ್ರೇಮಶೇಖರ ... ೧೫

ಹದಿಹರೆಯದ ಆದರ್ಶಗಳು ಪ್ರೊ॥ ಕಾಳೇಗೌಡ ನಾಗವಾರ ... ೩೫

ಕನ್ನಡ ಸಾಹಿತ್ಯ ಲೋಕದ ಒಂಟಿ ನಕ್ಷತ್ರ – ನಿರಂಜನ
ಡಾ॥ ಸಿದ್ದನಗೌಡ ಪಾಟೀಲ ... ೩೯

ಹನುಮಂತ ದೇವರು ಸೇವಕ – ಚಾರಿತ್ರಿಕ ವಿಶ್ಲೇಷಣೆ
ಡಾ॥ ಎನ್. ಚಿನ್ನಸ್ವಾಮಿ ಸೋಸಲೆ ... ೫೭

ಸ್ವಾತಂತ್ರ್ಯ ಅಮೃತ ಮಹೋತ್ಸವದ ಹೊಸ್ತಿಲಲ್ಲಿ ನಿಂತು ಹೆಣ್ಣಿನ ಬಿಡುಗಡೆಯ ದಾರಿಗಳ ಹುಡುಕುತ್ತಾ...
ರೂಪ ಹಾಸನ ... ೪೫

ಅಮೃತ ಘಳಿಗೆಯಲ್ಲಿ ಸ್ವಾತಂತ್ರ್ಯದ ಚಿಂತನೆ ಡಾ॥ ಕಿರಣ್ ಎಂ. ಗಾಜನೂರು ... ೫೧

ಬ್ರಿಟಿಷ್ ಸರ್ಕಾರದ ನಿದ್ದೆಗೆಡಿಸಿದ ಇಂಚಗೇರಿ ಮಠದ ಮಹಾದೇವಪ್ಪ
ಸನತ್ ಕುಮಾರ್ ಬೆಳಗಲಿ ... ೫೫

ಡೇರ್ ಡೆವಿಲ್ ಮುಸ್ತಾಫಾ: ಮನುಷ್ಯ ಪ್ರೇಮದ ರೂಪಕ
ಡಾ॥ ದಸ್ತಗೀರಸಾಬ್ ದಿನ್ನಿ ... ೩೬

ನಾನು ಓದಿದ ಪುಸ್ತಕ: ಗ್ರಾಮೀಣ ಭಾರತಕ್ಕೆ ಹಿಡಿದ ಕನ್ನಡಿ ಎಂ. ಕೆ. ವಿನಯ್ ... ೨೫

ನಭಾವಲೋಕನ : ನೀಲಿಚಂದ್ರ ಮತ್ತು ಸೂಪರ್ ಮೂನ್ ಎರಡೂ!!!
ಡಾ॥ ಬಿ. ಎಸ್. ಶೈಲಜಾ ... ೬೨

ಹೊಸ ಓದು ಇಂದಿರಾಕುಮಾರಿ, ಶ್ರೀಸುಮಿತ್ರಾಸುತ ಅಗಸಬಾಳ ... ೪೮

ಸಾದರ ಸ್ವೀಕಾರ ... ೫೪

ಚಿತ್ರಗಳು : ಬಸವರಾಜ ಕಲೆಗಾರ, ತನು

ಮುಖಪುಟ : 'ಹೊಸತು' ಪತ್ರಿಕೆಯ ೨೫ನೇ ವರ್ಷದ ಸ್ಮರಣೆ

ವಿನ್ಯಾಸ : ನವಕರ್ನಾಟಕ ವಿನ್ಯಾಸ

ಕಚೇರಿ ಸಹಕಾರ : ಸುಲಕ್ಷಣಾ ಆರ್., ಆನಂದ ಕೆ.

ವಿದ್ಯಮಾನ...

'ಹೊಸತು' ೨೫ನೆಯ ವರ್ಷಕ್ಕೆ ಕಾಲಿರಿಸುತ್ತಿದೆ. ಅದನ್ನು ದಾಪುಗಾಲು ಎನ್ನಲಾಗದು. ನಮ್ಮ ರಾಜ್ಯದ ಜನಸಂಖ್ಯೆಯ ಹಿನ್ನೆಲೆಯಲ್ಲಿ ಅಗಾಧವಾದ ವ್ಯಾಪ್ತಿ ಉಳ್ಳದ್ದೆಂದು ಪತ್ರಿಕೆಯು ಬೀಗುವಂತಿಲ್ಲ. ಆದರೂ ೨೫ರ ಸಂಭ್ರಮವು ನಗಣ್ಯವಲ್ಲ. ಅಂದಿನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಆರ್. ಎಸ್. ರಾಜಾರಾಮ್ ಅವರ ಮುಂದಾಳತ್ವದಲ್ಲಿ ನವಕರ್ನಾಟಕ ಪ್ರಕಾಶನ ಸಂಸ್ಥೆಯು ಪತ್ರಿಕೆಯನ್ನು ಆರಂಭಿಸಿದಾಗ ಅದರ ಒಂದು ಉದ್ದೇಶ ನಿರ್ದಿಷ್ಟವಾಗಿತ್ತು: ಓದುಗರು ಸ್ವತಃ ಲೇಖಕರೂ ಆಗುತ್ತಾರೆಂದು; ಅಂದರೆ ಚಿಂತನೆ, ಅಭಿವ್ಯಕ್ತಿ ಮತ್ತು ಬೌದ್ಧಿಕ ಮುಂಚೂಣಿಯಲ್ಲಿ ಅವರಿಗೆ ವಿಶಿಷ್ಟ ಸ್ಥಾನವಿದೆಯೆಂದು. ಈ ಅರ್ಥದಲ್ಲಿ ಪತ್ರಿಕೆಯು ಸಹಕಾರಿ ಆಕಾಂಕ್ಷೆಯನ್ನು ಹೊಂದಿತ್ತು. ಅದು ತಕ್ಕಮಟ್ಟಿಗೆ ಸಫಲವಾಗಿದೆಯೆಂಬ ಸಮಾಧಾನ ನಮ್ಮದು. ನಮ್ಮ ಓದುಗರಿಗೆ ಹಾಗೂ ಲೇಖಕರಿಗೆ ನಾವು ಇದಕ್ಕಾಗಿ ಆಭಾರ ಮನ್ನಿಸುತ್ತೇವೆ.

ನಮ್ಮ ದೇಶದ ಇಂದಿನ ಸನ್ನಿವೇಶವು ಸಮಾಧಾನಕ್ಕಿಂತಲೂ ಹೆಚ್ಚಾಗಿ ಆತಂಕವನ್ನು ಉಂಟುಮಾಡುವಂತಿದೆ. ಮಣಿಪುರವು ನಮ್ಮ ಸಮಭಾಗಿಯೇ ಅಲ್ಲವೇನೋ ಎಂಬಂತೆ ವರ್ತಿಸುವುದು, ಸಾರ್ವಜನಿಕ ಸಂಪತ್ತನ್ನು ಅವಿವೇಕದಿಂದ ಖಾಸಗಿಗೆ ಹಸ್ತಾಂತರಿಸುವುದು, ಅಲಕ್ಷ್ಯಕ್ಕೆ ಒಳಗಾದ ಸಮುದಾಯಗಳು ಅಂತೆಯೇ ಉಳಿದಿರುವುದು, ಶಿಕ್ಷಣ ಮತ್ತು ವೈದ್ಯಕೀಯ ಸೇವೆಯಲ್ಲಿ ತಾರತಮ್ಯವು ಹೆಚ್ಚುತ್ತಿರುವುದು, ಮುಂತಾಗಿ ಸವಾಲುಗಳು ಹೆಚ್ಚುತ್ತಲೇ ಇವೆ. ಪತ್ರಿಕೆಯ ಮೊದಲ ಸಂಚಿಕೆಯ ಬಿಡುಗಡೆಯ ಸಂದರ್ಭದಲ್ಲಿ ಇವನ್ನು ಜನಮನದಲ್ಲಿ ಪ್ರಮುಖವಾಗಿ ನೆಲೆಗೊಳಿಸುವ ಕೆಲಸವನ್ನು ಒಂದು ವ್ರತದಂತೆ ಕೈಗೊಳ್ಳಬೇಕೆಂದು ಕೀರ್ತಿಶೇಷ ಎಚ್. ಎಸ್. ದೊರೆಸ್ವಾಮಿ ಮತ್ತು ಇ. ಆರ್. ಸೇತೂರಾಂ ಸೂಚಿಸಿದ್ದರು. ನಮ್ಮ ಓದುಗ–ಲೇಖಕ ಬಳಗವು ಇದಕ್ಕೆ ಇಂಬು ನೀಡುತ್ತಾ ಬಂದಿದೆ. ಸಂವಿಧಾನದತ್ತವಾದ ಸ್ವಾತಂತ್ರ್ಯವು ಮುಗ್ಗಟ್ಟಿಗೆ ಸಿಲುಕುತ್ತಿರುವುದು ನಮ್ಮ ದೇಶದಲ್ಲಿ ಇನ್ನೊಂದು ಅನಿಷ್ಟ ಬೆಳವಣಿಗೆ. ಅಂದರೆ, ಜನತೆಯ ಕಾಳಜಿಗೆ ಹತ್ತಾರು ಅಂಶಗಳು ಒತ್ತಡ ಹೇರುತ್ತಿವೆ.

ಸಂಸ್ಕೃತಿ, ಸಾಹಿತ್ಯ, ಆರ್ಥಿಕತೆ ಮತ್ತು ರಾಜಕೀಯ ಗುಣಾತ್ಮಕವಾಗಿ ವಿಕಸಿಸಿ ನಮ್ಮ ಸಮಾಜವನ್ನು ಮುನ್ನಡೆಸಬೇಕಾಗಿದೆ. 'ಹೊಸತು' ಬಳಗವು ಈ ಗುರಿಯ ಸಾಧನೆಗೆ ಅತಿಶಯವಾಗಿ ಕೈಜೋಡಿಸುವ ಅಗತ್ಯ ವಿಪುಲವಾಗಿದೆ. ಓದುಗ–ಲೇಖಕ ಬಳಗ, ಸಂಪಾದಕ ಮಂಡಲಿ ಮತ್ತು ಪ್ರಕಾಶಕರು ಒಟ್ಟಾಗಿ ಈ ದಿಕ್ಕಿನಲ್ಲಿ ದಿಟ್ಟವಾಗಿ ಹೆಜ್ಜೆ ಹಾಕೋಣ. ಪಂಥಾನಃ ಸಂತು ನೋ ಶಿವಾಃ. ಹಾದಿಯನ್ನು ಸುಗಮಗೊಳಿಸಿಕೊಳ್ಳಲು ಸಮುದಾಯದ ಭಾಗವಹಿಸುವಿಕೆ ಮತ್ತು ಪರಸ್ಪರ ಸಹಕಾರ ಗುಣಾತ್ಮಕವಾಗಿ ವರ್ಧಿಸಲೆಂದು ಆಶಿಸೋಣ. ಪಣವನ್ನು ತೊಟ್ಟು ಅದನ್ನು ಸಿದ್ಧಿಸಿಕೊಳ್ಳೋಣ. ಸಮಗ್ರತೆ ನಮ್ಮ ಗುರಿ, ಸಹಕಾರ ನಮ್ಮ ಹಾದಿ.



ಡಾ॥ ಎನ್. ಚಿನ್ನಸ್ವಾಮಿ ಸೋಸಲೆ

ರಾಮ ಹಾಗೂ ರಾಮನ ಕುಟುಂಬದವರಲ್ಲಿ ದೇವರನ್ನು ಕಂಡು, ಪ್ರಾಣದ ಹಂಗನ್ನೇ ಲೆಕ್ಕಿಸದೆ ಸೇವೆ ಮಾಡಿ ಅಸಾಧ್ಯವಾದುದ್ದನ್ನು ಸಾಧ್ಯ ಮಾಡಿದ ಕಾರಣಕ್ಕಾಗಿಯಾದರೂ ಇಲ್ಲಿನ ಮೂಲ ನಿವಾಸಿ ವರ್ಗವು ದೇವರಿರಲಿ – ದೇವರನ್ನು ಪೂಜಿಸುವವರಿಗೆ ಮನುಷ್ಯರಾಗಿಯೂ ಸಹ ಕಾಣಲು ಸಾಧ್ಯವೇ ಆಗಲಿಲ್ಲ. ಈ ಸ್ವಘೋಷಿತ ದೇವಮಾನವರ ಕಣ್ಣಿಗೆ ಶ್ರಮಿಕ ವರ್ಗ ದೇವರಾಗಿ ಪರಿವರ್ತನೆಗೊಳ್ಳದೆ – ಶತಶತಮಾನಗಳಿಂದ ದಲಿತರು ಅದರಲ್ಲಿಯೂ ಅಸ್ಪೃಶ್ಯರು ಈ ಅಮಾನವೀಯ ಧಾರ್ಮಿಕ ಹಾಗೂ ಧಾರ್ಮಿಕ ಹಿನ್ನೆಲೆಯ ಸಾಮಾಜಿಕ ಅಸ್ಪೃಶ್ಯತೆಯ ಸಂಕೋಲೆಯಲ್ಲಿ ಸಿಲುಕಿ ಶತಶತಮಾನಗಳಿಂದ ಮೊದಲುಗೊಂಡು ಇಂದಿಗೂ ಬಿಡಿಸಿಕೊಳ್ಳಲಾಗದೆ ನರಳುತ್ತಿದ್ದಾರೆ.

ಹನುಮಂತ ದೇವರು-ಸೇವಕ ಚಾರಿತ್ರಿಕ ವಿಶ್ಲೇಷಣೆ



ರಾಮಾಯಣದಲ್ಲಿ ರಾಮನ ಕುಟುಂಬದವರೆಲ್ಲರೂ ಸಹ ದೇವರಾಗಿ ಕಾಣುತ್ತಾರೆ. ಏಕೆಂದರೆ ಅವರು ರಾಜ ವಂಶಸ್ಥರು. ವೈದಿಕರಿಂದ ಶಾಸ್ತ್ರೋಕ್ತವಾಗಿ ಕ್ಷತ್ರಿಯರಾಗಿ ದೇವಮಾನವರಾಗಿ ರಾಜ್ಯವಾಳಿದರು ಎಂಬ ಪುರಾಣ ಕಲ್ಪಿತ ಚರಿತ್ರೆಯಿಂದ. ಆದರೆ ಇದೇ ಮಾದರಿಯಲ್ಲಿ ರಾಮನ ವಿರೋಧಿ ರಾವಣ ಹಾಗೂ ರಾವಣನ ಕುಟುಂಬದವರೆಲ್ಲರೂ ಸಹ ದೆವ್ವವಾಗಿ (ರಾಕ್ಷಸ) ಕಾಣುವಂತೆ ಚಿತ್ರಿಸಿಕೊಂಡಿದ್ದಾರೆ. ಆದರೆ ಹೀಗೆ ಕರೆದುಕೊಂಡ ದೇವರು ಹಾಗೂ ದೆವ್ವಗಳ ನಡುವೆ ಬರುವ ಈ ನೆಲದ ವಾರಸುದಾರ – ಮೂಲ ನಿವಾಸಿ – ಶಕ್ತಿಯುತ ಶ್ರಮಜೀವಿ ಆಂಜನೇಯ ಯಾರು? ಇವನು ರಾಮನ ವಂಶಸ್ಥನೂ ಅಲ್ಲ – ರಾವಣನ ವಂಶಸ್ಥನೂ ಅಲ್ಲ. ಕೇವಲ ಇವನು ತನ್ನ ಪಾರಂಪರಿಕ ಅಜ್ಞಾನದ ಹಿನ್ನೆಲೆಯ ದೈವ ಪುರುಷನಾಗಿ ಪುರಾಣದಲ್ಲಿ ರೂಪಿತವಾದ ರಾಮನ ಸೇವಕ – ಬಂಟ. ರಾಮನ ಪರಮಭಂಟ ಹನುಮ, ರಾಮನ ಸೇವಕ ಹನುಮ ಎಂಬ ನಾಮಗಳೇ ಅವನ ಹೆಸರಿನೊಂದಿಗೆ ಸೇರಿಕೊಂಡಿರುವುದು ಇದಕ್ಕೆ ನಿದರ್ಶನ.

ಇದೇ ಮಾದರಿಯಲ್ಲಿ ಇಂದಿಗೂ ವಾಸ್ತವವಾಗಿ ರಾಮನನ್ನು ತಮ್ಮ ಸ್ವಾರ್ಥ ಸಾಧನೆಗಾಗಿ ದೇವರನ್ನಾಗಿಸಿದವರು ಮತ್ತದೇ ತಮ್ಮ ಸ್ವಾರ್ಥ ಸಾಧನೆಗಾಗಿ ತಾವು ಇದು ಯಾವುದಕ್ಕೂ ಸಂಬಂಧ ಇಲ್ಲದಿದ್ದರೂ ಸಹ ಸ್ವಾರ್ಥ ಸಾಧನೆಯ ವೈಭವದ ಬದುಕನ್ನು ರೂಪಿಸಿಕೊಳ್ಳಲು ಯಾವುದೇ ಮುಜುಗರಕ್ಕೆ ಒಳಗಾಗದೆ ರಾಮನ ವಂಶಸ್ಥರು ಎಂದು ಹೇಳಿಕೊಂಡು ರಾಮನ ಸ್ಥಾನವನ್ನು ಮೀರಿ ದೇವರ ರೂಪದಲ್ಲಿ ತಮ್ಮನ್ನು ತಾವೇ ಗುರುತಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಸಮಕಾಲೀನ ಸಂದರ್ಭದಲ್ಲಿ ವಾಸ್ತವ ಚರಿತ್ರೆಯೇ ಸಾಕ್ಷೀಕರಿಸಿದೆ.

ನಿಜಾರ್ಥದಲ್ಲಿ ಈ ಭೂಮಿ ಮೇಲಿನ ಪ್ರತಿಯೊಂದು ಪ್ರಕೃತಿ ಹಾಗೂ ಮಾನವ ನಿರ್ಮಿತ ಸಂಪತ್ತೆಲ್ಲವನ್ನು ಅನುಭವಿಸುವ ಹಾಗೂ ಅನುಭೋಗಿಸುವ ಮೂಲಭೂತ ಹಕ್ಕುಗಳನ್ನು ತಮ್ಮ ಏಕಸ್ವಾಮ್ಯ ಪಾರಂಪರಿಕ ಹಕ್ಕನ್ನಾಗಿಸಿಕೊಂಡು ಸ್ವಕಲ್ಪಿತ ದೇವರಾಗಿ ಮೆರೆದವರು ಹಾಗೂ ಮೆರೆಯುತ್ತಿರುವವರು ಎಂದಿಗೂ ರಾಮನನ್ನೇ ತಮ್ಮ ಸೇವಕರನ್ನಾಗಿ ಮಾಡಿಕೊಂಡು ಅನುಭವಿಸಲು ಮುಂದಾಗುತ್ತಿರುವುದು ಸಹ ವಾಸ್ತವವೇ

ಆಗಿದೆ. ಪುರಾಣ ಕಾಲದಿಂದಲೂ ಹನುಮಂತ ಹೇಗೆ ರಾಮನ ಸೇವಕನಾಗಿದ್ದನೋ ಅದೇ ಮಾದರಿಯಲ್ಲಿ ಇಂದಿಗೂ ಸಹ ಹನುಮಂತನ ದೇವರನ್ನಾಗಿ ಪರಿವರ್ತಿಸಿಕೊಂಡು ಆರಾಧನೆ ಮಾಡುತ್ತಿರುವ ಆಧುನಿಕ ಹನುಮಂತರು ರಾಮನ ಭಕ್ತರಾಗಿಯೇ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಎದೆಯಲ್ಲಿ ರಾಮ ಲಕ್ಷ್ಮಣ ಸೀತೆ ಇದ್ದಾರೆ ಹೊರತು, ಬುದ್ಧ ಬಸವ ಅಂಬೇಡ್ಕರ್ ಹಾಗೂ ಆಧುನಿಕ ಭಾರತದ ಸಂವಿಧಾನ ಇಲ್ಲವೇ ಇಲ್ಲ. ಏಕೆಂದರೆ ಇವರು ವಾಸ್ತವವನ್ನು ಪ್ರತಿಪಾದನೆ ಮಾಡಿದವರು ಅದಕ್ಕಾಗಿ. ಆದರೆ, ರಾಮ – ಸೀತೆ – ಲಕ್ಷ್ಮಣರು ಪುರಾಣವನ್ನು ಪ್ರತಿಪಾದನೆ ಮಾಡಿದವರು. ಭಾರತದ ಚರಿತ್ರೆಯಲ್ಲಿ ಪುರಾಣ ಮಾತಾಡಿದಷ್ಟು ವಾಸ್ತವ ಮಾತನಾಡಲೇ ಇಲ್ಲ ಎಂಬುದಕ್ಕೆ ಜ್ವಲಂತ ನಿದರ್ಶನಗಳು ಪುಂಖಾನುಪುಂಖವಾಗಿ ಇವೆ.

ಸಾಮಾಜಿಕ ಶ್ರೇಣೀಕೃತ ವ್ಯವಸ್ಥೆಯಲ್ಲಿ ಮೇಲ್ಪಂಕ್ತಿ ಎಂದು ಹೇಳಿಕೊಳ್ಳುವ ಒಂದು ವರ್ಗದವರಿಗೆ ಇನ್ನೊಂದು ಅವರಿಂದಲೇ ಕೆಳಪಂಕ್ತಿಯರು ಎಂದು ಕರೆಸಿಕೊಂಡ ವರ್ಗ ಪಾರಂಪರಿಕವಾಗಿ ವಾಸ್ತವದ ಹಿನ್ನೆಲೆಯ ಯಾವುದೇ ಫಲ ಅಪೇಕ್ಷೆಯನ್ನು ಬಯಸದೆ ಸೇವೆ ಮಾಡಿದೆ. ನಿಜಾರ್ಥದಲ್ಲಿ ಇಂದಿಗೂ ಬೇರೆ ಬೇರೆ ರೂಪದಲ್ಲಿ ಅದೇ ಮಾದರಿಯ ಸೇವೆಯನ್ನು ಮಾಡಿಸಿಕೊಳ್ಳುತ್ತಿದ್ದಾರೆ. ಹೀಗೆ ಮಾಡಿಸಿಕೊಳ್ಳುತ್ತಿರುವ ಕಾರಣಕ್ಕಾಗಿಯೇ ಇತಿಹಾಸದುದ್ದಕ್ಕೂ ಪುರಾಣ ವ್ಯಕ್ತಿಗಳಾದ ರಾಮ ಲಕ್ಷ್ಮಣ ಸೀತೆ ಅಂತೆಲ್ಲ ಹೇಳಿಕೊಂಡು, ಈ ವ್ಯಕ್ತಿಗಳೇ ನಮ್ಮ ವಂಶಸ್ಥರು ಎಂದು ಹೇಳಿಕೊಂಡು ಅವರ ಹಿನ್ನೆಲೆಯಿಂದಲೇ ಶ್ರೇಷ್ಠತೆಯಿಂದ ಮೆರೆದರು. ಆದರೆ ಬದಲಾದ ಸಂದರ್ಭದಲ್ಲಿ ತಲೆತಲಾಂತರದಿಂದ ಸೇವೆಯನ್ನು ಮಾಡಿದವರು ಸಂವಿಧಾನದ ಆಧಾರದ ಮೇಲೆ ಪ್ರಶ್ನೆ ಮಾಡಲು ಮುಂದಾದಾಗ ರಾಮ ಲಕ್ಷ್ಮಣ ಸೀತೆಯವರನ್ನೇ ಸೇವಕನ ಮನೆ ಬಾಗಿಲಿಗೆ ತಂದು ನಿಲ್ಲಿಸಿದರು. ಯಾವ ದೇವರನ್ನು ಶತಶತಮಾನಗಳಿಂದ ಮುಟ್ಟಲು ಸಾಧ್ಯವಾಗಿರಲಿಲ್ಲವೋ – ಅಥವಾ ಸಾಧ್ಯ ಮಾಡಿಸಿರಲಿಲ್ಲವೋ ಆ ದೇವರು ಇಂದು ಹಾದಿ ಬೀದಿಯಲ್ಲಿ ನಿಂತು ಎಲ್ಲರನ್ನೂ ಮುಟ್ಟಿಸಿಕೊಂಡು ಮಾತನಾಡುತ್ತಿದೆ ಹಾಗೂ ಮುಟ್ಟ ಮಾತನಾಡಿಸುವಂತೆ ಮಾಡಲಾಗುತ್ತಿದೆ. ಇದೇ ಕಾಲಕಾಲಕ್ಕೂ ನಡೆದುಕೊಂಡು ಬಂದಿರುವ ಧರ್ಮ ರಾಜಕಾರಣದ ಬಹುದೊಡ್ಡ ಸ್ಥಿತ್ಯಂತರ. ಅಂದು ಅವರ ಶ್ರೇಷ್ಠತೆಯ ಬದುಕಿಗಾಗಿ ರಾಮ ಲಕ್ಷ್ಮಣ ಸೀತೆಯರು ದೇವಾಲಯದ ಒಳಗೆ ಇದ್ದರು – ಇಂದೂ ಸಹ ಅದೇ



ಮಾದರಿಯ 'ಶ್ರೇಷ್ಠತೆ'ಯ ಬದುಕಿಗಾಗಿ ರಾಮ ಸೀತೆ ಲಕ್ಷ್ಮಣರು ಧರ್ಮ ಪ್ರಭುತ್ವದ ರಾಜಕಾರಣ ಪ್ರತಿಪಾದನೆ ಹಿನ್ನೆಲೆಯಲ್ಲಿ ಬೀದಿಯಲ್ಲಿ ತಂದು ಕೂರಿಸಲಾಗಿದೆ. ರಾಮನ ಭಂಟ, ರಾಮನ ಸೇವಕ ಹನುಮಂತ ಭಕ್ತರು ಮಾತ್ರ ಅದೇ ರಾಮ ಲಕ್ಷ್ಮಣ ಸೀತೆಯರ ಸೇವಕರಾಗಿ ಹನುಮಂತನನ್ನು ಮೀರಿಸುವಷ್ಟು ಭಯ ಭಕ್ತಿ ಶ್ರದ್ಧೆಯಿಂದ ನಡೆದುಕೊಳ್ಳುತ್ತಿದ್ದಾರೆ. ಇವರ ಸೇವೆ ಎಷ್ಟಿದೆ ಎಂದರೆ ಹನುಮಂತ ಭಕ್ತಿಯಿಂದ ರಾಮ ಲಕ್ಷ್ಮಣ ಸೀತೆಯನ್ನು ತನ್ನ ಎದೆ ಗೂಡಿನಲ್ಲಿ ಬಚ್ಚಿಟ್ಟುಕೊಂಡಿದ್ದ ಎಂಬುವುದು ಪುರಾಣದ ಹಿನ್ನೆಲೆಯಲ್ಲಿ ಸೃಷ್ಟಿ ಮಾಡಿ ಬರೆದವರ ಕಲ್ಪನೆಯಾದರೆ – ಇಂದಿನ ಭಕ್ತರು ಎದೆಗೂಡು (ಭೌತಿಕ) ಹಾಗೂ ತಲೆಯ ಮೆದುಳಿನ (ಬೌದ್ಧಿಕ) ಜಾಗಗಳನ್ನು ಹೊರತುಪಡಿಸಿ ಅಜ್ಞಾನವನ್ನೇ ಮೈಗೂಡಿಸಿಕೊಂಡಿರುವ ದೇಹದಲ್ಲೆಲ್ಲಾ ಇರಿಸಿಕೊಂಡು ಭಕ್ತರಾಗಲು ಮುಂದಾಗುತ್ತಿದ್ದಾರೆ.

"ಅಂದು ಹನುಮಂತ ಸಂಜೀವಿನಿ ಬೆಟ್ಟವನ್ನೇ ತನ್ನ ಒಂದೇ ಕೈಯಿಂದ ಎತ್ತಿ ತಂದನು. ಈ ಸಾಹಸಮಯ ಕಾರ್ಯವು ಸರ್ವರ ಸುಖವನ್ನು ಬಯಸಿ ಮನುಷ್ಯ ಮನುಷ್ಯರನ್ನು ಅರಿತು ಸಾಮರಸ್ಯದಿಂದ ಬದುಕಲು ಭ್ರಾತೃತ್ವ ಸಂಕೇತದ ಕಾರ್ಯವಾಯಿತು. ಸರಿ, ಇಂದಿನ ಹನುಮಂತನ ಭಕ್ತರು ಅದೇ ಬೆಟ್ಟವನ್ನು ಅಜ್ಞಾನದಿಂದ ತಮ್ಮ ಕಾಲುಗಳಿಂದ ಹತ್ತುತ್ತಿದ್ದಾರೆ ಅಷ್ಟೇ. ಹೀಗೆ ಇವರು ಸಂವಿಧಾನದ ಆಶಯದಂತೆ ಹತ್ತುತ್ತಿರುವ ಸ್ವಾತಂತ್ರ್ಯ ಸಮಾನತೆ ಭ್ರಾತೃತ್ವದ ಬೆಟ್ಟದಲ್ಲಿ ಮಾನವ ಬಂಧುತ್ವದ ಭಾವನೆ ನಾಶವಾಗಿ ನಾನು ನಾನೇ ಎನ್ನುವ ಅಧರ್ಮ ಹಾಗೂ ಅದರ ಕೂಸಾದ ಜಾತಿಯ ಪ್ರತಿಷ್ಠೆಯೇ ಮೆರೆಯುತ್ತಿದೆ. ಇದೆ ಅಂದಿಗೂ – ಇಂದಿಗೂ ಇರುವ ಧರ್ಮ ಹಾಗೂ ಧರ್ಮದೊಳಗಿನ ಜಾತಿ ರಾಜಕಾರಣದ ಬಹುದೊಡ್ಡ ವ್ಯತ್ಯಾಸ" ಇದೆ ಜಾತಿ – ಧರ್ಮದೊಳಗೆ ಸೇರಿಕೊಂಡು ಅಬೌದ್ಧಿಕ ಮಾನವರ ದಿಕ್ಕು ದೆಸೆ ಕಾಣದ ಸ್ಥಿತ್ಯಂತರಕ್ಕೆ ಕಾರಣವಾಗುತ್ತಿದೆ.

ಆಂಜನೇಯನ ಪಾರಂಪರಿಕ ಭಕ್ತಿ ಹಾಗೂ ಸೇವೆಯನ್ನೇ ನಮ್ಮ ಹಾಗೂ ನಮ್ಮವರ ಪ್ರತಿಷ್ಠೆಯ ಬದುಕು ಎಂದು ರೂಪಿಸಿಕೊಂಡು ಮಾನವನ ಮೂಲಭೂತ ಹಕ್ಕುಗಳಿಂದಲೂ ಸಂಪೂರ್ಣವಾಗಿ ವಂಚಿತರಾಗಿ ಜೀತಗಾರಿಕೆ ಮಾಡಿದ – ಇಟ್ಟಬಿಟ್ಟಿ ಚಾಕ್ರಿ ಮಾಡಿದ – ರಾಮನನ್ನೇ ಬಂಡವಾಳ ಮಾಡಿಕೊಂಡು ತಮಗೆ ಶಾವೇ ದೇವಾಲಯಗಳ ವಾರಸುದಾರಿಕೆಯನ್ನು ಪಡೆದ ವರ್ಣಾಶ್ರಮ ಪದ್ಧತಿಯ ಹಿನ್ನೆಲೆಯ ಮೊದಲ ಪಂಕ್ತಿಯ ಜನ ಸೃಷ್ಟಿಸಿದ ದೇವರ ಹೆಸರಿನ ಅಮಾನವೀಯ ಪದ್ಧತಿಗಳನ್ನು ಚಾಚು ತಪ್ಪದೇ ಶ್ರದ್ಧೆಯಿಂದ ಮಾಡಿದ ಆಂಜನೇಯನ ವಂಶಸ್ಥರು ತ್ರೇತಾಯುಗ – ದ್ವಾಪರಯುಗ ಕಳೆದು ಕಲಿಯುಗವು ಮುಗಿಯುತ್ತಾ ಬಂದರೂ ಸಹ ದೇವರಾಗಲೇ ಇಲ್ಲ. "ಈ ಮೂರು ಯುಗಗಳಲ್ಲಿಯೂ ಒಂದು ವರ್ಗ ದೇವರ ಹೆಸರಿನಲ್ಲಿ ಶ್ರೇಷ್ಠತೆಯ ದೇವಮಾನವರೆಂದು ಹೇಳಿಕೊಂಡು ದೇವರಾಗಿಯೇ ಉಳಿದಿರುವುದು – ಇನ್ನೊಂದು ವರ್ಗ ದೇವರ ಹೆಸರಿನಲ್ಲಿ ದೇವರ ಸೇವೆಯನ್ನೇ ಮಾಡುತ್ತಾ ಅಸ್ಪೃಶ್ಯರಾಗಿ ಉಳಿಸಿಕೊಂಡಿರುವ ಅಂತರವನ್ನು ಕಾಪಾಡಿಕೊಂಡಿರುವುದು ನಾವೆಲ್ಲ ವೈಭವದಿಂದ ಹೇಳಿಕೊಳ್ಳುವ ಭವ್ಯ ಭಾರತದ ವಿಶಿಷ್ಟದಲ್ಲಿ ವಿಶಿಷ್ಟವಾದ ಗುಣವೇ ಸರಿ." ಏಕೆಂದರೆ ಇವರು ಶ್ರಮದ ಮೂಲಕ ರಾಷ್ಟ್ರವನ್ನು ಭದ್ರವಾಗಿ ಕಟ್ಟಿದ ರಾಷ್ಟ್ರದ ಸೇವಕರು, ಪಾರಂಪರಿಕ ಭಂಟರು. ಮುಂದುವರೆದು ಹೇಳುವುದಾದರೆ ಇವರು ಕಾನೂನನ್ನು ರೂಪಿಸುವವರಲ್ಲ – ಬದಲಿಗೆ ಕಾನೂನು ರೂಪಿಸಿದವರ ಕಾನೂನಿಗೆ ತಲೆಬಾಗಿ, ಆ ಕಾನೂನಿಗೆ ಕಟಿಬದ್ಧವಾಗಿ ನಡೆದುಕೊಳ್ಳುವವರು. ಇವರ ಎದೆ ಬೌದ್ಧಿಕವಾಗಿ ಹಾಗೂ ಭ್ರಾತೃತ್ವದ ಹಿನ್ನೆಲೆಯಲ್ಲಿ ಸಮೃದ್ಧವಾಗಿದ್ದರೂ ಸಹ ಪಾರಂಪರಿಕ ಕಟ್ಟುಪಾಡುಗಳ ಆಧಾರದ ಮೇಲೆ ಒಂದು ಅಕ್ಷರವನ್ನು ಎದೆಗೆ ಹಾಕದೆ – ಇವರ ಎದೆಯಲ್ಲಿ ಅಜ್ಞಾನದ ರಾಮ ಸೀತೆ ಲಕ್ಷ್ಮಣನನ್ನು ಇರಿಸಿ ಬಗೆದು ತೋರಿಸುವಂತೆ ಮಾಡಿದರು ಈ ಅಧರ್ಮ ಹಿನ್ನೆಲೆಯ ಕಾನೂನುಗಳ ಸೃಷ್ಟಿಕರ್ತರು. ಹೀಗೆ ಎದೆಯ ಅಂತರಾಳದಲ್ಲಿ ಶಾಶ್ವತವಾಗಿ ಉಳಿಸಿಕೊಂಡ ಇಲ್ಲಿನ ದುಡಿಮೆಯ ಮೂಲಕವೇ ರಾಷ್ಟ್ರವನ್ನು ಸಮೃದ್ಧವಾಗಿ ಕಟ್ಟಿದ – ಕಟ್ಟುತ್ತಿರುವ ಮುಂದುವರೆದು ನಿರಂತರವಾಗಿ ಕಟ್ಟುತ್ತಲೇ ಇರುವ ಶ್ರಮಿಕ ವರ್ಗ ಈ ಪುರಾಣ ಎಂಬ ಅಜ್ಞಾನವನ್ನೇ ಎದೆಯ ಅಂತರಾಳದಲ್ಲಿ ತುಂಬಿಕೊಂಡು ಊರಿನ ಆಚೆ ಕೇರಿಯಲ್ಲಿ ಅಸ್ಪೃಶ್ಯರಾಗಿ ಬದುಕಿದರು – ಇಂದಿಗೂ ಸಹ ಯಾವುದೇ ಬದಲಾವಣೆಯನ್ನು ಕಾಣದೆ ಹಾಗೆ ಅನೇಕ ಬದಲಾವಣೆಗಳ ನಡುವೆಯೂ ಬದುಕುತ್ತಿರುವುದು.

ರಾಮ ಹಾಗೂ ರಾಮನ ಕುಟುಂಬದವರಲ್ಲಿ ದೇವರನ್ನು ಕಂಡು, ಪ್ರಾಣದ

ಹಂಗನ್ನೇ ಲೆಕ್ಕಿಸದೆ ಸೇವೆ ಮಾಡಿ ಅಸಾಧ್ಯವಾದುದ್ದನ್ನು ಸಾಧ್ಯ ಮಾಡಿದ ಕಾರಣಕ್ಕಾಗಿಯಾದರೂ ಇಲ್ಲಿನ ಮೂಲ ನಿವಾಸಿ ವರ್ಗವು 'ದೇವರಿರಲಿ – ದೇವರನ್ನು ಪೂಜಿಸುವವರಿಗೆ ಮನುಷ್ಯರಾಗಿಯೂ ಸಹ ಕಾಣಲು ಸಾಧ್ಯವೇ ಆಗಲಿಲ್ಲ. ಈ ಸ್ವಘೋಷಿತ ದೇವಮಾನವರ ಕಣ್ಣಿಗೆ ಶ್ರಮಿಕ ವರ್ಗ ದೇವರಾಗಿ ಪರಿವರ್ತನೆಗೊಳ್ಳದೆ – ಶತಶತಮಾನಗಳಿಂದ ದಲಿತರು ಅದರಲ್ಲಿಯೂ ಅಸ್ಪೃಶ್ಯರು ಈ ಅಮಾನವೀಯ ಧಾರ್ಮಿಕ ಹಾಗೂ ಧಾರ್ಮಿಕ ಹಿನ್ನೆಲೆಯ ಸಾಮಾಜಿಕ ಅಸ್ಪೃಶ್ಯತೆಯ ಸಂಕೋಲೆಯಲ್ಲಿ ಸಿಲುಕಿ ಶತಶತಮಾನಗಳಿಂದ ಮೊದಲುಗೊಂಡು ಇಂದಿಗೂ ಬಿಡಿಸಿಕೊಳ್ಳಲಾಗದೆ ನರಳುತ್ತಿದ್ದಾರೆ. ಇವರ ಈ ನರಳಾಟ ಕಣ್ಣು ಕಿವಿ ಮೂಗು ಹಾಗೂ ಸ್ಪರ್ಶದ ಯಾವುದೇ ಸಂವೇದನೆ ಇಲ್ಲದ ರಾಜಪ್ರಭುತ್ವ ಹಾಗೂ ರಾಜಪ್ರಭುತ್ವದ ಧರ್ಮ ಕೇಂದ್ರಿತ ಪ್ರಭುತ್ವದ ಸಂವಿಧಾನಕ್ಕೆ ಕಾಣುವುದೇ ಇಲ್ಲ, ಏಕೆಂದರೆ ಅದು ಅಜ್ಞಾನದಿಂದ ಕುರುಡಾಗಿದೆ, ಆದರೆ ಇಂದು ಕಣ್ಣು ಕಿವಿ ಮೂಗು ಎಲ್ಲವೂ ಸ್ಪಷ್ಟವಾಗಿಯೇ ಇರುವ ಪ್ರಜಾಪ್ರಭುತ್ವಕ್ಕೂ ಅದರದೇ ಸೆಳೆತ ಹೆಚ್ಚು ಬೀರುತ್ತಿರುವುದರಿಂದ ಇದರ ನರನಾಡಿಗಳಿಗೂ ಪಾರ್ಶ್ವವಾಯು ಬಡಿದು ಮುಂದೆ ನಡೆಯಲು ಆಗದೆ – ಕುಂತಲ್ಲಿ ಕೂರಲು ಆಗದೆ ಇರುವ ಸ್ಥಳದಲ್ಲಿಯೇ ಹೆಣಗಾಡುತ್ತಿದೆ. ಏಕೆಂದರೆ ಇದು ಶತಶತಮಾನಗಳಿಂದ ತನ್ನ ಚಲನೆಯ ಶಕ್ತಿಯನ್ನೇ ಕಳೆದುಕೊಂಡಿದ್ದ ಕಾರಣವೂ ಇದಕ್ಕೆ ಪ್ರೇರಣೆಯಾಗಬಹುದು.'

ಆದರೆ, ಯಾವುದರ ಸ್ಪರ್ಶಕ್ಕೂ ಒಳಗಾಗದವರ ಶ್ರದ್ಧೆ ಹಾಗೂ ಸೇವೆಗೆ ಸಂಬಂಧಿಸಿದಂತೆ ಒಂದು ಉಪಮೇಯವನ್ನು ಹೇಳುವುದಾದರೆ "ಭಕ್ತಕುಂಬಾರನಿಗೆ ಪುರಾಣದ ಶ್ರೀನಿವಾಸ ಸಾಮಾನ್ಯ ಪ್ರಜೆಯಾಗಿ ಬಂದು ಸೇವೆ ಮಾಡಿ ನಂತರ ದೇವಸ್ಥಾನದಲ್ಲಿ ಶಿಲೆಯಾಗಿ, ಪುರಾಣದ ದೇವರ ರೂಪದ ಮೇಲೆ ಬಹುರೂಪವನ್ನು ಪಡೆದು ಆರಾಧಿಸಿಕೊಂಡಂತೆ – ಈ ನೆಲದ ಮೂಲ ನಿವಾಸಿಗಳಾದ ಅಸ್ಪೃಶ್ಯರು ಶತಶತಮಾನಗಳ ಧಾರ್ಮಿಕ ಅಂಧಕಾರದ ಸಾಮಾಜಿಕ ಜಾತಿ ವ್ಯವಸ್ಥೆಯ ಬಿಗಿ ಹಿಡಿತದ ಸಂಕೋಲೆಯ ಕೊನೆಯ ಕೊಂಡಿಗಳಾಗಿ ಬೆವರು ರಕ್ತವನ್ನೇ ಸುರಿಸಿ ಸೇವೆ ಮಾಡಿ ಸೇವೆ ಮಾಡಿಸಿಕೊಂಡವರ ಮನ ಹಾಗೂ ಮನೆಯನ್ನು ಸಂತೃಪ್ತಿಪಡಿಸಿದರೂ ಸಹ – ಬೌದ್ಧಿಕ ಅಂಧಕಾರದಿಂದ ಪುರಾಣದ ದೇವರನ್ನು ಮೈಮೇಲೆ ಬರಿಸಿಕೊಂಡು ಕಲ್ಲಾಗಿರುವವರ ಹೃದಯ ಕರಗಲೇ ಇಲ್ಲ. ಅದು ಧರ್ಮ ದೇವರು ಹಾಗೂ ಇದರ ನಿಯಂತ್ರಣದ ಶ್ರೇಷ್ಠತೆಯ ಮೂಲಕ ಇನ್ನೂ ಗಟ್ಟಿಯಾಗಿ ಪರಿವರ್ತನೆಗೊಂಡಿತ್ತು. ಇದೇ ಭಾರತದ ಧರ್ಮ ಪ್ರಭುತ್ವದ ಬಹುದೊಡ್ಡ ರಾಜಕಾರಣ. ಮನುಷ್ಯನನ್ನು ಮನುಷ್ಯನಾಗಿ ಕಾಣುವ ಮಾನವೀಯತೆ ಎಂಬ ವಾಸ್ತವದ ದೇವರು ಪುರಾಣದ ಹಿನ್ನೆಲೆಯಿಂದಲೇ ಸ್ವಾರ್ಥ ಪರವಾಗಿಯೇ ಜೀವಿಸಲು ಮಾತ್ರ ಇರುವ ಶ್ರೇಷ್ಠ ಹೃದಯವಂತರೆಂದು ಹೇಳಿಕೊಳ್ಳುವ ಕನಿಷ್ಠವೂ ಇಲ್ಲದ ಹೃದಯವಂತಿಕೆಯ ಹೃದಯಕ್ಕೆ ದೇವರಾಗಿ ಕಾಣಲೇ ಇಲ್ಲ. ಅವರ ತೀರ್ಥದ ಮುಂದೆ ಇವರ ಬೆವರು ದೇವರಾಗಲೇ ಇಲ್ಲ. ಅಂದರೆ, ಅಂದು ರಾಮನಿಗೆ ಅಸಾಧ್ಯವಾದುದನ್ನು ತನ್ನ ಶಕ್ತಿ ಸಾಮರ್ಥ್ಯದಿಂದ ಏಕಾಂಗಿಯಾಗಿ ಸಾಧಿಸಿ ಸಾಧನೆ ಮಾಡಿದ – ತನ್ನ ಶಕ್ತಿ ಸಾಮರ್ಥ್ಯ ಹಾಗೂ ಬುದ್ಧಿವಂತಿಕೆಯಿಂದ – ತನ್ನ ನೆಲದಲ್ಲಿ ತಮ್ಮ ಸೇವೆಯನ್ನು ಪ್ರೀತಿಯಿಂದ ಬಯಸಿದವರಿಗೆ ಯಾವುದೇ ಫಲಾಪೇಕ್ಷೆಯನ್ನೇ ಬಯಸದೆ ಕೇವಲ ಸೇವೆ ರೂಪದಲ್ಲಿಯೇ ಭಕ್ತಿಯಿಂದ ಮಾಡಿದ ಹನುಮಂತನಿಗೂ ಅವರು ನೀಡಿದ ಸ್ಥಾನಮಾನ ಕನಿಷ್ಠವಾದದ್ದೇ ಆಗಿದೆ. ಇದೇ ಮಾದರಿಯಲ್ಲಿ ಹನುಮಂತನನ್ನು ಮೀರಿಸುವಷ್ಟು ಭಕ್ತಿ ಭಾವದಿಂದ ನೆಲಮೂಲ ಸಂಸ್ಕೃತಿಯ ಹಿನ್ನೆಲೆಯಿಂದ ಸೇವೆ ಮಾಡುತ್ತಿದ್ದರೂ ಇವರ ಸೇವೆಗೆ ಕಿಂಚಿತ್ತೂ ಈ ಮೂಲ ನಿವಾಸಿ ಶ್ರಮಜೀವಿ ಮಾನವರನ್ನು ಮಾನವರನ್ನಾಗಿ ನೋಡುವ ಸ್ಥಾನವು ಸಿಕ್ಕಲೇ ಇಲ್ಲ. ಆದರೂ ಸಹ ತನ್ನ ನೆಲ, ತನ್ನ ನೀರು, ತನ್ನ ದೇಶದ ಗಾಳಿ, ತನ್ನ ನೆಲದ ಕರುಳು ಬಳ್ಳಿಯ ಜನ ಎಂಬ ಮಮಕಾರದ ಜೊತೆಗೆ – ತಮ್ಮನ್ನು ಧಾರ್ಮಿಕ ಹಾಗೂ ಸಾಮಾಜಿಕ ಹಿನ್ನೆಲೆಯಿಂದ ಕನಿಷ್ಠ ಮಾಡಿದವರು ತನ್ನ ನೆಲಕ್ಕೆ ಬಂದ ಅತಿಥಿಗಳು ಎಂಬ ಪ್ರೀತಿ ಹಾಗೂ ಸ್ವಾಭಿಮಾನದ ಸಂಕೇತದಿಂದ ಇಂದಿಗೂ ಯಾವುದೇ ಅಸಹಿಷ್ಣುತೆಯನ್ನು ಬಯಸದೆ ಸೇವೆ ಮಾಡುತ್ತಲೇ ಇದ್ದಾರೆ. ಇದು ಭಾರತದ ಧರ್ಮಗುಣವೂ ಆಗಿದೆ." ಈ ಅರ್ಥದಲ್ಲಿ ಇಂತಹ ನೆಲದ ಮೂಲ ನಿವಾಸಿಗಳು ಹಾಗೂ ಇಲ್ಲಿನ ಶ್ರಮಜೀವಿ ಜನಾಂಗದವರ ಕೇರಿಯ ನಿವಾಸಿಗಳ ದೇವರಾಗಿ ಕಂಗೊಳಿಸುತ್ತಿರುವ ಆಂಜನೇಯ ದೇವಮಾನವರಿಗೆ ಒಬ್ಬ ಸೇವಕನೇ ಹೊರತು – ದೇವರಲ್ಲ ಎಂದು ಪುರಾಣ ಹಿನ್ನೆಲೆಯ ಚಾರಿತ್ರಿಕ ಅಂಶಗಳನ್ನು ಮನಗಂಡು ಸ್ಪಷ್ಟವಾಗಿ ಹೇಳಬಹುದು. ಆದರೆ ಇಲ್ಲಿನ ಮೂಲ ನಿವಾಸಿ ಶ್ರಮಿಕರಿಗೆ ಅವರ ಶ್ರಮದ ಪ್ರೀತಿಯ ಸಂಕೇತವಾದ ಆಂಜನೇಯನೇ ಪರಮ ಪರಮಾತ್ಮ. ಅವರು ವಾಸಿಸುವ ಸ್ಥಳದ ಆರಾಧ್ಯ ದೈವ. ಅವನ ಹಬ್ಬದ ಆಚರಣೆ ಎಂದರೆ ತಮ್ಮ ತಮ್ಮ ನೆಲದ ಭೂಪತಿಯ – ಸಾಧಕನ ಆಚರಣೆಯ ಸಂಕೇತ ಇಂದು ಆಚರಿಸುತ್ತಾರೆ. ರಾಜ ದೇವನಾಗಿ ಆಚರಿಸಿಕೊಳ್ಳುವ ಹಬ್ಬಕ್ಕೂ – ಒಬ್ಬ ಸಾಮಾನ್ಯ ಮನುಷ್ಯ 'ಭೂಪ ಅಥವಾ ಭೂಪತಿ' ಯಾಗಿ ಜನರಿಂದ ಪ್ರೀತಿಯಿಂದ ಆಚರಿಸಿಕೊಳ್ಳುವ ಹಬ್ಬಕ್ಕೂ ಅಜ–ಗಜಾಂತರವಿದೆ.

ಅಂದರೆ, ಸಾಧ್ಯವಾಗದ್ದನ್ನು ಸಾಧನೆ ಮಾಡಿದ ವಾಸ್ತವದ ಬುದ್ಧ ಬಸವ ಅಂಬೇಡ್ಕರ್‌ಗಳಂತಹ ನೆಲಮೂಲ ಚಿಂತನೆಯ 'ಭೂಪತಿ' ಗಳನ್ನು ನಿಜ ಜ್ಞಾನದ ದೇವರನ್ನಾಗಿ ಮಾಡಿಕೊಳ್ಳುವುದನ್ನು ಬದಿಗೆ ಸರಿಸಿ – ಈ ದೇಶಕ್ಕೆ ಆಗಮನ ಮಾಡಿದವರು ಸೃಷ್ಟಿಸಿದ ಪುರಾಣದ ವಿವಿಧ ಅವತಾರಗಳ ಮೂಲಕವೇ ವೈಭವವಾಗಿ ಅಜ್ಞಾನದಿಂದ ನಮ್ಮ ನಡುವೆ ದೇವರನ್ನಾಗಿ ತಮ್ಮ ಸ್ವಾರ್ಥ ಸಾಧನೆಯ ಬದುಕಿಗಾಗಿಯೇ ನಿರ್ಮಿಸಿದ ದೇವರುಗಳನ್ನೇ ಭಕ್ತಿಭಾವದಿಂದ ನಮ್ಮ ಎದೆಗೂಡಲ್ಲಿ ಬಚ್ಚಿಟ್ಟುಕೊಂಡು – ಎದೆಯನ್ನು ಬಗೆದರು ಕಾಣುವಷ್ಟು ಭಕ್ತಿಯಿಂದ ಪೂಜಿಸುತ್ತಿರುವುದು ಅಜ್ಞಾನದ ಸಂಕೇತವೇ ಸರಿ. ಬುದ್ಧ – ಬಸವ, ಬಸವಾದಿ ಶರಣ ಶರಣೆಯರು ಹಾಗೂ ಅಂಬೇಡ್ಕರ್ ಅವರು ಹೇಳಿದಂತೆ ಕಾಯಕ ಸಿದ್ಧಾಂತದ ಮೂಲಕ ಹಾಗೂ ಮನುಷ್ಯನನ್ನು ಮನುಷ್ಯನನ್ನಾಗಿ ಗೌರವದಿಂದ ಕಾಣುವ ಸಂಸ್ಕೃತಿಯ ಸಿದ್ಧಾಂತದ ಮೂಲಕ ನಮ್ಮ ದೈವತ್ವವನ್ನು ಕಾಣಬೇಕು. ಈ ಮಾತಿನ ಅರ್ಥದಲ್ಲಿ ಆಂಜನೇಯ ನಮ್ಮ ಶ್ರಮದ ಮೂಲಕ ನಮ್ಮೆಲ್ಲರಿಗೂ ಬಹುದೊಡ್ಡ ದೈವ. ಆದರೆ ನಾನು ಮೇಲೆ ಉಲ್ಲೇಖಿಸಿದವರಿಗೆ ನಾವೆಲ್ಲರೂ ಜಾತಿಯ ಹಿನ್ನೆಲೆಯಿಂದ ಹೇಗೆ ಪಾರಂಪರಿಕ ಸೇವಕರೋ ಅದೇ ಮಾದರಿಯಲ್ಲಿ ರಾಮ ಸೀತೆ ಲಕ್ಷ್ಮಣನನ್ನು ದೇವರ ರೂಪದಲ್ಲಿ ಆರಾಧಿಸುವವರಿಗೆ ಹನುಮಂತನೂ ಸಹ ಎಂದೆಂದಿಗೂ ಸೇವಕ – ಪರಮಾಪ್ತ ಭಂಟನೇ ಆಗಿದ್ದಾನೆ. ಇಂದಿಗೂ ದಲಿತರು ತಮ್ಮ ತಮ್ಮಲ್ಲಿ ಒಡೆದಾಳಿಕೊಳ್ಳುವ ಕುತಂತ್ರಕ್ಕೆ ಬಲಿಯಾಗಿ ಅಸ್ಪೃಶ್ಯತೆಯಲ್ಲಿಯೂ ಶ್ರೇಷ್ಠತೆಯನ್ನು ಗುರುತಿಸಿಕೊಂಡು ಹೇಗೆ ಪಾರಂಪರಿಕ ಸೇವೆಯಲ್ಲಿ ತೊಡಗಿದ್ದಾರೋ ಅದೇ ಮಾದರಿಯಲ್ಲಿ ಸಾಗಲು ಬಯಸುತ್ತಿರುವುದು ನಮ್ಮ ನಡುವಿನ ಬಹುದೊಡ್ಡ ಸಂವಿಧಾನಾತ್ಮಕ ಬಿಕ್ಕಟ್ಟಾಗಿದೆ.

ದಲಿತರು, ಅಂದರೆ ಧಾರ್ಮಿಕ ಚೌಕಟ್ಟಿಗೆ ಒಳಪಡದೆ ಕೇವಲ ಅವರು ಬದುಕುವ ಸ್ಥಳ – ಸೇವಿಸುವ ಆಹಾರ – ಮಾಡುವ ವೃತ್ತಿ ಆಧಾರದ ಮೇಲೆ ಜಾತಿ ಅದರಲ್ಲೂ ಅಸ್ಪೃಶ್ಯ ಜಾತಿಯಾಗಿ ನಿರ್ಮಾಣಗೊಂಡಿರುವವರು – ಏನೆಲ್ಲಾ ಸಾಧನೆ ಮಾಡಿದರೂ ಸ್ವಘೋಷಿತ ದೇವಮಾನವರು ಎಂದು ಹೇಳಿಕೊಂಡಿರುವವರಿಗೆ ಕೇವಲ ಅಸ್ಪೃಶ್ಯರು ಅಥವಾ ಸೇವಕರು ಮಾತ್ರ ಇವರು. ಇದನ್ನು ಬದಲಾಯಿಸುವ ಯಾವ ಸಂವಿಧಾನ ಬಂದರೂ ಸಹ ಅದರ ಪರಮ ವಿರೋಧಿಗಳಲ್ಲಿ ಮೊದಲಿಗರೇ ಇವರು. ಇವರ ಪಾರಂಪರಿಕ ಸೇವಕ ಅಥವಾ ಭಂಟನನ್ನಾಗಿ ಹನುಮಂತನನ್ನು ಕಂಡಂತೆ – ಅಸ್ಪೃಶ್ಯ ವರ್ಗದವರನ್ನು ಸಹ ತಾವು ಪ್ರತಿಪಾದನೆ ಮಾಡುತ್ತಿರುವ ರಾಮನ ಭಂಟರನ್ನಾಗಿಸಿಕೊಂಡು – ಸೇವಕರನ್ನಾಗಿ ಬಹು ನಿಕೃಷ್ಟ ರೂಪದಲ್ಲಿ ಕಾಣುವುದೇ ಇವರ ಮನುಕೇಂದ್ರಿತ ಸೃಷ್ಟಿಯ ಧರ್ಮದ ಸ್ವರೂಪ. ಈ ಅರ್ಥದಲ್ಲಿಯೇ ಆಂಜನೇಯನು ಸಹ ಒಬ್ಬ ಸೇವಕನಾಗಿ ಅವರಿಗೆ ಕಾಣುವುದರಲ್ಲಿ ಎರಡು ಮಾತಿಲ್ಲ. ಮುಂದುವರೆದು ಹೇಳುವುದಾದರೆ "ಹನುಮಂತನೂ ಸಹ ರಾಮನ ಮುಂದೆ ದೇವರಾಗಲು ಹಕ್ಕು ಮಂಡಿಸಲಿಲ್ಲ – ರಾಮನು ಸಹ ಹನುಮಂತನು ದೇವರಾಗಲು ಅಪೇಕ್ಷಿಸಬಹುದಾದ ಹಕ್ಕನ್ನು ಯಾವ ಸಂದರ್ಭದಲ್ಲಿಯೂ ಸಹ ಮಂಡಿಸಲು ಬಿಟ್ಟುಕೊಡಲಿಲ್ಲ."

ಇನ್ನು... ಬಹು ಬಲಶಾಲಿಯಾದರೂ, ಬೌದ್ಧಿಕವಾಗಿ ಬಹುಶಕ್ತಿವಂತನಾಗಿದ್ದರೂ ಸಹ ಇವನಿಗೆ ಇನ್ನೊಬ್ಬರ ಆಸೆ ಆಕಾಂಕ್ಷೆಗಳೆಂಬ ಮನುಷ್ಯನ ಸ್ವಾಭಾವಿಕ ಆಸ್ತಿಯನ್ನು ಕಿತ್ತುಕೊಂಡು ನಾನೊಬ್ಬನೇ ಸ್ವಾರ್ಥದಿಂದ ಬದುಕಬೇಕು ಎಂಬ ದುರಾಸೆ ಎಂಬುದು ಇರಲಿಲ್ಲ. ಈ ಅರ್ಥದಲ್ಲಿಯೇ ಈ ನೆಲದ ಮೂಲ ನಿವಾಸಿಗಳು ತಮ್ಮ ನೆಲದ ಉದ್ಧಾರಕ್ಕಾಗಿ ಶ್ರದ್ಧೆಯಿಂದ ದುಡಿದರು. ಆದರೆ ಈ ನೆಲಕ್ಕೆ ಆಗಮಿಸಿದವರು ತಮ್ಮ ಉದ್ಧಾರಕ್ಕಾಗಿ ಈ ಜನರನ್ನೇ ನೆಲವನ್ನಾಗಿಸಿಕೊಂಡು ದುಡಿಸಿಕೊಂಡರು. ಈ ಬಹುದೊಡ್ಡ ಬಹು ಜನಾಂಗ 'ನಮಗೇಕೆ ಓದುಬರಹ – ಅದು ನಿಮ್ಮಂಥ ಪಂಡಿತಪಾಮರರ ದೇವರನ್ನು ಪೂಜಿಸಿ ದೇವರಾಗಿ ಕಾಣಲು ಹಂಬಲಿಸುತ್ತಿದ್ದವರ ಪಿತ್ರಾರ್ಜಿತ ಸ್ವತ್ತು' ಎಂದು ಹೇಳಿಕೊಂಡೆ ಬರುವಂತೆ

ಮಾಡಿದರು. ಇದೆ ಭಾರತದ ಧರ್ಮಪ್ರಭುತ್ವ ರಾಜಕಾರಣದ ವಾಸ್ತವ ಸತ್ಯ.

ಈ ಭರತ ಭೂಮಿಯಲ್ಲಿ ಹುಟ್ಟಿದ ಪ್ರತಿಯೊಬ್ಬ ಪ್ರಜೆಯೂ ಸಹ ಈ ಮಣ್ಣಿನ ಸೇವಕರೇ, ಅದರಲ್ಲಿ ಎರಡು ಮಾತಿಲ್ಲ. ಆದರೆ ಈ ಸೇವೆ ದೇಶ ಹಾಗೂ ದೇಶೀಯತೆಯನ್ನು ಮೀರಿ ಕೇವಲ ಒಂದು ಧರ್ಮ ಧರ್ಮದ ಹಿನ್ನೆಲೆಯಿಂದಲೇ ದೇವಮಾನವರೆಂದು ಕರೆಸಿಕೊಂಡವರ ಅಜ್ಞಾನ ಅಂಧಕಾರದ ಚೌಕಟ್ಟಿಗೆ ಒಳಪಟ್ಟರೆ ಅದು ಸೇವೆ ಎನಿಸಿಕೊಳ್ಳುವುದಿಲ್ಲ, ಬದಲಿಗೆ ಅದು ಜೀತಗಾರಿಕೆ ಅನ್ನಿಸಿಕೊಳ್ಳುತ್ತದೆ.

ಈ ಹಿನ್ನೆಲೆಯಿಂದ ಭಾರತ – ಹಾಗೂ ಭಾರತೀಯತ್ವದ ಮಣ್ಣಿನಲ್ಲಿ ಕಾಯಕ ಸಿದ್ಧಾಂತದ ಮೂಲಕವೇ ಭ್ರಾತೃತ್ವ ಬೆಸೆದ ಆಂಜನೇಯನ ವಂಶಸ್ಥರ ಸೇವೆ–ಶ್ರಮ, ಅವರ ಶ್ರಮಕ್ಕೆ ತಕ್ಕದಾದ ಸಂವಿಧಾನಾತ್ಮಕ ಪ್ರತಿಫಲವನ್ನು ಎಲ್ಲಿಯವರೆಗೆ ಬೌದ್ಧಿಕವಾಗಿ ಅಪೇಕ್ಷಿಸುವುದಿಲ್ಲವೋ ಅಲ್ಲಿಯವರೆಗೂ ಸಹ 'ಭೌತಿಕ'ವಾಗಿ ಮೆರೆಯುತ್ತಿರುವ ರಾಮನ ಹೆಸರಿನ ಅಂಧಕಾರದ ಭಕ್ತರು ಇವರೆಲ್ಲರನ್ನು ಆಂಜನೇಯನ ತರಹ ಸೇವಕನಾಗಿ ಮಾಡಿಕೊಂಡು ವೈಭವವಾಗಿ ಸ್ವಪ್ರತಿಷ್ಠೆಯಿಂದ ಮೆರೆಯುತ್ತಿದ್ದಾರೆ. ಇವರ ಈ ಪ್ರತಿಷ್ಠೆಗೆ ಮೂಲ ಆಕಾರವೇ ದೇವರು ಹಾಗೂ ಧರ್ಮದ ಆಧಾರ ಸ್ತಂಭವೇ ಆಗಬೇಕಾದ ಜನರನ್ನೇ ಬಿಟ್ಟು – ಜನರನ್ನು ಜಾತಿಗೆ ಸೀಮಿತಗೊಳಿಸಿ ಶ್ರೇಷ್ಠ ಕನಿಷ್ಠತೆಯ ಹಿನ್ನೆಲೆಯಿಂದಲೇ ಹೊಡೆದಾಳಿದ ದೇವರನ್ನೇ ತನ್ನ ಆಧಾರ ಸ್ತಂಭವನ್ನಾಗಿಸಿಕೊಂಡಿರುವ 'ಧರ್ಮ' ಹಾಗೂ ಆ ಧರ್ಮ ಸೃಷ್ಟಿಸಿದ ಧರ್ಮರಾಜಕಾರಣವೂ ಪ್ರಮುಖ ಕಾರಣವಾಗಿದೆ.

ಇಂತಹ ಅಜ್ಞಾನದ ಜನ ಜನರನ್ನು ಹೊಡೆದಾಡುವ – ಕೇವಲ ಸ್ವಹಿತಕ್ಕಾಗಿ ಬಹು ಜನರನ್ನು ಶತಶತಮಾನಗಳಿಂದಲೂ ದೇವರು ಹಾಗೂ ದೇವರ ಹೆಸರಿನ ಧರ್ಮದ ಮೂಲಕ ರಚಿಸಿಕೊಂಡಿದ್ದ ಅಲಿಖಿತ ಸಂವಿಧಾನದ ಅಧರ್ಮ ರಾಜಕಾರಣಕ್ಕೆ– ಕಾನೂನಾತ್ಮಕವಾದ ಬೌದ್ಧಿಕ ಹಿನ್ನೆಲೆಯ ಬಹುದೊಡ್ಡ ತಡೆಯನ್ನು ಒಡ್ಡಿದ್ದೇ ಬಾಬಾಸಾಹೇಬ್ ಅಂಬೇಡ್ಕರ್ ಅವರು ಹಾಗೂ ಅವರು ಬರೆದ ಶಕ್ತಿಯುತವಾದ ಭಾರತ ಹಾಗೂ ಭಾರತೀಯತ್ವದ ಸಂವಿಧಾನ. ಅಂಬೇಡ್ಕರ್‌ರವರು ತಾವು ರಚಿಸಿದ ಸಂವಿಧಾನದಲ್ಲಿ ಭಾರತ ಹಾಗೂ ಭಾರತೀಯರನ್ನು ನೋಡಿದ ಪರಿ ಹಾಗೂ ಅದರ ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ಜನಧರ್ಮದ ಹಿನ್ನೆಲೆಯಿಂದಲೇ ರಚಿಸಿದ ಬೃಹತ್ ಲಿಖಿತ ಸಂವಿಧಾನ ಶತಶತಮಾನಗಳಿಂದ ಈ ಇಕ್ಕಳೆಯಲ್ಲಿ ಸಿಕ್ಕಿಕೊಂಡು ಮೂಕರಾಗಿದ್ದವರನ್ನು ಯಥೇಚ್ಛವಾಗಿ ಮಾತನಾಡಿಸಿತು. ಈ ಅಸಾಧ್ಯವನ್ನು ಸಾಧ್ಯ ಮಾಡಿದ್ದಕ್ಕಾಗಿಯೇ ಅಂಬೇಡ್ಕರ್ ಅವರನ್ನು ನಾವೆಲ್ಲರೂ ಜ್ಞಾನವಂತರಾಗಿ ಭಾರತದ ನೆಲಮೂಲ ಚಿಂತನೆಯ 'ಭೂಪಾ, ಈ ನೆಲದ ಭೂಪತಿ' ಎಂದು ಕರೆಯುವುದು. ಭೂಪತಿ ಎಂದು ಕರೆಯುವುದರಲ್ಲಿ ನೆಲಮೂಲ ಸಂಸ್ಕೃತಿಯ ಬೆವರಿನ ಜ್ಞಾನವಿದೆ. ಇಂತಹ ಭೂಪರನ್ನು 'ರಾಜರ್ಷಿ' ಎಂದು ಕರೆಯುವುದಾಗಲಿ – ಹೀಗೆ ಕರೆಯುವ ಮೂಲಕ ಎಂದೆಂದಿಗೂ ಮಾತನಾಡದೆ ಶಿಲೆಯಾಗಿ ಶತಶತಮಾನಗಳಿಂದಲೂ ಕುಳಿತಲ್ಲೇ ಕುಳಿತಿರುವ ದೇವರನ್ನಾಗಿಸುವುದರಲ್ಲಿ ಮಾತ್ರ ತೀರ್ಥದ ಸಂಕೇತವಾಗಿರುವ ಅಜ್ಞಾನವಿದೆ. ಏಕೆಂದರೆ ಕಲ್ಲಿನ ದೇವರನ್ನು ನಾವು ಕಣ್ಮುಚ್ಚಿ ಭಕ್ತಿಯಿಂದ ಮಾತಾಡಿಸುತ್ತೇವೆ. ಏಕೆಂದರೆ ಅದು ಮಾತನಾಡುವುದಿಲ್ಲ, ನಾವೇ ಮನಸ್ಸಿನ ಸ್ಥಿಮಿತವನ್ನು ಕಳೆದುಕೊಂಡು ಮಾತನಾಡಬೇಕು ಅಷ್ಟೇ. ಮನಸ್ಸಿನ ಸ್ಥಿಮಿತತೆಯನ್ನು ಕಳೆದುಕೊಂಡು ನಾವು ಅಜ್ಞಾನಿಗಳಾಗುತ್ತೇವೆ ಹೊರತು ಬೇರೇನೂ ಆಗಲು ಸಾಧ್ಯವಿಲ್ಲ – ಆದರೆ ಅಂಬೇಡ್ಕರ್ ಅವರು ಭಾರತ ಹಾಗೂ ಭಾರತೀಯರಿಗೆ ಬಹು ವಾಸ್ತವದ ನೆಲೆಯಲ್ಲಿ ರೂಪಿಸಿರುವ ಸಂವಿಧಾನವನ್ನು ನಾವು ಕಣ್ತೆರೆದು ಮಾತನಾಡಿಸಬೇಕು. ಏಕೆಂದರೆ ಅದು ನಮ್ಮೊಂದಿಗೆ ಮಾತನಾಡುತ್ತದೆ – ನಮಗೆ ಮಾತು ಕಲಿಸುತ್ತದೆ ಹಾಗೂ ಆ ಮೂಲಕ ವಾಸ್ತವದ ಭಾರತ ಹಾಗೂ ಭಾರತೀಯತೆಯನ್ನು ಅನಾವರಣಗೊಳಿಸುತ್ತದೆ. ಏಕೆಂದರೆ ಇದಕ್ಕೆ ಕಣ್ಣು ಇದೆ.



ಮೌನ – ಜ್ಞಾನ

ಪುಸ್ತಕದ ಪ್ರತಿ ಹಾಳೆಯು
ಮೌನ!!
ಮನಸಿಟ್ಟು ತಿರುವಿ ಹಾಕಿದರೆ
ಜ್ಞಾನ!!

ಕಾಡಜ್ಜಿ ಮಂಜುನಾಥ
Email : manjuk2905@gmail.com

ಹೀಗೆ ಕಣ್ಣಿರುವ ಸಂವಿಧಾನವನ್ನು ನಾವು ಕಣ್ತೆರೆದು ಬಹು ಜ್ಞಾನದಿಂದ ನೋಡಿ ಬಾಯಿ ತುಂಬಾ ಮಾತನಾಡಿಸಿ ಅದು ನೀಡುವ ಸಕಲ ಸೌಲಭ್ಯ ವನ್ನು ಕಾನೂನಾತ್ಮಕವಾಗಿ ಪಡೆದು ಅನುಭವಿಸಬೇಕು.

ಒಂದು ಪಕ್ಷ ಅಂಬೇಡ್ಕರ್ ಅವರನ್ನು ಹಾಗೂ ಅವರ ಚಿಂತನೆಯ ರೂಪದಲ್ಲಿ ಒಡಲಾಳದಿಂದ ಹೊರಹೊಮ್ಮಿದ ಸಂವಿಧಾನವನ್ನು ನಾವು ಬೌದ್ಧಿಕವಾಗಿ ಗ್ರಹಿಸಿಕೊಳ್ಳದೆ ಕೇವಲ 'ಭೌತಿಕ' ಸ್ಥಾನದಲ್ಲಿಯೇ ಕೂರಿಸಿ ದೇವರ ಸ್ಥಾನದಲ್ಲಿ ಕಾಣುವ ಈ ಮಾದರಿಯು ಹನುಮಂತ ತನ್ನ ಎದೆಯನ್ನು ತನ್ನ ಕೈಗಳಿಂದಲೇ ಬಗೆದು ರಾಮ ಲಕ್ಷ್ಮಣ ಸೀತೆಯನ್ನು ತೋರಿಸಿದಂತೆಯೇ ಆಗುತ್ತದೆ. ಅಂದರೆ ಜ್ಞಾನವನ್ನು ಮನದಲ್ಲಿ ಇಟ್ಟುಕೊಳ್ಳದೆ – ಅಜ್ಞಾನವನ್ನು ಮನೆಯಲ್ಲಿ ಬಹು ವೈಭವದಿಂದ ಇರಿಸಿಕೊಳ್ಳುವುದು ಎಂಬರ್ಥ. ಈ ಹಿನ್ನೆಲೆಯಲ್ಲಿ ನಾವೆಲ್ಲರೂ ಅಂಬೇಡ್ಕರ್ ಹಾಗೂ ಅವರು ರೂಪಿಸಿದ ಬೌದ್ಧಿಕ ಚಿಂತನೆಯನ್ನು ಆಂಜನೇಯನ ತರಹ ರಾಮನನ್ನು ಎದೆಯಲ್ಲಿ ಇಟ್ಟುಕೊಳ್ಳದೇ – ಮನದಲ್ಲಿ (ಜ್ಞಾನದಲ್ಲಿ) ಇಟ್ಟುಕೊಂಡು ಈ ರಾಷ್ಟ್ರದ ಬೌದ್ಧಿಕತೆಯ ಪ್ರೌಢತೆಯನ್ನು ಸಂವಿಧಾನಾತ್ಮಕವಾಗಿ ಪಡೆಯಬೇಕಾಗಿದೆ. ಆದರೆ ಈ ೭೫ ವರ್ಷದ ಪ್ರಜಾಪ್ರಭುತ್ವ ಭಾರತದಲ್ಲಿ ಪಡೆಯುತ್ತಿದ್ದೇವೆಯೇ...? ಎಂಬ ಪ್ರಶ್ನೆಗೆ ನಮ್ಮ ನಿಮ್ಮೆಲ್ಲರಿಗೂ ಒಡಲಾಳದ ಸೂಕ್ತ ಉತ್ತರ ದೊರಕಿದಾಗ ಮಾತ್ರ ಆಂಜನೇಯ (ಜ್ಞಾನವೆಂಬ ಸಂವಿಧಾನ) ದೇವರಾಗುತ್ತಾನೆ – ಇಲ್ಲವಾದಲ್ಲಿ ಅವನು ಕೇವಲ ಸೇವಕ ನಾಗಿರುತ್ತಾನೆ. ದಲಿತರು ಸಹ ಶತಶತಮಾನಗಳ ರಾಜಪ್ರಭುತ್ವದಲ್ಲಿ – ಈ ರಾಜಪ್ರಭುತ್ವದ ಆಧಾರ ಸ್ತಂಭವೇ ಆಗಿದ್ದ ಧರ್ಮಪ್ರಭುತ್ವ ಕೇಂದ್ರಿತ ಪ್ರಶ್ನೆ ಮಾಡದ ಸಂವಿಧಾನವನ್ನು ಒಪ್ಪುವುದಾದರೆ – ಏಕಮುಖವಾದ ಮಾನವ ವಿರೋಧಿ ದರ್ಪದ ಆಳ್ವಿಕೆ ಮಾಡಿದ ಧರ್ಮಪ್ರಭುತ್ವದ ಹಿನ್ನೆಲೆಯಲ್ಲಿ ಬದುಕಿದಂತೆಯೇ ಸರಿ. ಇದನ್ನೇ ಪ್ರಜಾಪ್ರಭುತ್ವ ಭಾರತದಲ್ಲಿಯೂ ಸಹ ಧರ್ಮಪ್ರಭುತ್ವವಾದಿಗಳು ಅಪೇಕ್ಷಿಸುತ್ತಿರುವುದು. ಇದಕ್ಕೆ ಸ್ವತಂತ್ರ ಭಾರತದಲ್ಲಿ ಜ್ವಲಂತ ನಿದರ್ಶನಗಳಿವೆ. ಅಂದರೆ ಭಾರತದ ಮೂಲ ನಿವಾಸಿಗಳು ಸ್ವಾತಂತ್ರ ಬಂದು ೭೫ ವರ್ಷಗಳು ಕಳೆದಿದ್ದರೂ ಸಹ ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವದ ಹಿನ್ನೆಲೆಯಿಂದ ಬದುಕಲು ಅಪೇಕ್ಷಿಸುತ್ತಿರುವುದು. ಆದರೆ ಇವರ ಅಪೇಕ್ಷೆಗೆ ಧರ್ಮ ರಾಜಕಾರಣ ಅಡ್ಡಿ ಮಾಡುತ್ತಿರುವುದು. ಈ ಅರ್ಥದಲ್ಲಿಯೇ ಪುರಾಣದಿಂದ ಹಿಡಿದು ಇಂದಿನವರೆಗೂ ಆಂಜನೇಯ ಸೇವಕನಾಗಿ – ರಾಮನ ಭಂಟನಾಗಿ – ಅಂದರೆ ಧರ್ಮದ ಪಾರಂಪರಿಕ ಭಂಟನಾಗಿ ಇರುವಂತಾಗಿದೆ.. ಇಲ್ಲಿ ಹನುಮ ಎನ್ನುವುದು ಕೇವಲ ಉಪಮೇಯ ಮಾತ್ರ – ವಾಸ್ತವ ಇಲ್ಲಿನ ಮೂಲ ನಿವಾಸಿ ಜನ ಎಂಬುದನ್ನು ಬಹು ಸೂಕ್ಷ್ಮವಾಗಿ ಗ್ರಹಿಸಬೇಕಾಗಿದೆ.

ಸೇವೆ ಮಾಡಿದವನು ಎಂದಿಗೂ ದೇವರೇ ಆಗಲಿಲ್ಲ. ನಮ್ಮ ಧರ್ಮ ಪ್ರಭುತ್ವದ ರಾಜಕಾರಣದಲ್ಲಿ ಇದು ಎಂದೆಂದಿಗೂ ಸಾಧ್ಯವೇ ಆಗಲಿಲ್ಲ. ದೇವಾಲಯ ಕಟ್ಟಿದವನು ದೇವರಾಗಲಿಲ್ಲ ಬದಲಿಗೆ ಕಟ್ಟಿಸಿಕೊಂಡವನು ದೇವರಾದನು. ಹುತ್ತವನ್ನು ಶ್ರಮದಿಂದ ಕಟ್ಟಿದ ಗೆದ್ದಲನ್ನು ತಿಂದು ಹೊರಗಿಟ್ಟು ಹೇಗೆ ನಾಗರಹಾವು ಅಧಿಪತಿ ಆಯಿತು ಆ ಮಾದರಿಯಲ್ಲಿ. ತನ್ನ ಜೀವದ ಹಂಗನ್ನೇ ತೊರೆದು ಮಾನವ ಜೀವನದ ಮಿತಿಯನ್ನು ಮೀರಿ ಸೇವೆಯನ್ನು ಮಾಡಿದ ಈ ರಾಷ್ಟ್ರದ ಮೂಲ ನಿವಾಸಿ ಜನಾಂಗದವರು ತಮ್ಮ ಸೇವೆಗೆ ತಕ್ಕಂತೆ ದೇವರು ಆಗಲೇ ಇಲ್ಲ. ಆಂಜನೇಯನೂ ಹಾಗೆಯೇ. ತನ್ನ ಪರಮ ಭಕ್ತಿ ಹಾಗೂ ಸೇವೆಯ ಮೂಲಕ ತನ್ನ ಆರಾಧ್ಯ ದೈವವನ್ನು ಎದೆಯ ಗೂಡಲ್ಲಿ ಬಚ್ಚಿಟ್ಟಿಕೊಂಡು ಅವರಿಗೆ ತನ್ನ ಪ್ರಾಣದ ಹಂಗನ್ನು ತೊರೆದು ಸೇವೆ ಮಾಡಿದರು ಸಹ ಮಾಡಿದವರು ದೇವರು ಆಗಲೇ ಇಲ್ಲ, ಆದರೆ ಇದನ್ನು ಮಾಡಿಸಿಕೊಂಡು ಪರಮಾನ್ನ ಉಂಡವರು ದೇವರಾದರು. ಅಂದರೆ ಶ್ರಮಕ್ಕೆ ತಕ್ಕ ಪ್ರತಿಫಲದ ಮೂಲಕ ಯಾರಿಗೆ ದೇವರ ಪಟ್ಟ ಸಿಗಬೇಕಾಗಿತ್ತು ಅವರಿಗೆ ಸಿಗಲಿಲ್ಲ – ಕಿಂಚಿತ್ತೂ ದುಡಿಯದೇ ದುಡಿದು ಉತ್ಪತ್ತಿ ಮಾಡಿದವರ ಸಂಪತ್ತನ್ನೇ

ಧರ್ಮ ರಾಜಕಾರಣದ ಹಿನ್ನೆಲೆಯಿಂದ ವಶಪಡಿಸಿಕೊಂಡು – ಆ ಮೂಲಕ ಸಕಲವನ್ನು ತಮ್ಮದಾಗಿಸಿಕೊಂಡು ಏಕಮುಖವಾಗಿಯೇ ಮೆರೆದವರು ದೇವರಾದರು. ಈ ಸಿದ್ಧಾಂತವನ್ನು ವಿರೋಧಿಸಿದ್ದೇ ಸಂವಿಧಾನ. ಅದಕ್ಕಾಗಿ ಈ ಸಿದ್ಧಾಂತವನ್ನು ಅಪೇಕ್ಷಿಸುವವರು ಸಂವಿಧಾನವನ್ನು ವಿರೋಧಿಸುವುದು. ಬದಲಾಯಿಸುತ್ತೇವೆ ಎಂಬ ಹೇಳಿಕೆಯನ್ನು ನೀಡುವುದು.

ದಲಿತರನ್ನು ದೇವರನ್ನಾಗಿಸದೆ – ಸತ್ವಜೆಗಳ ರೂಪದ ಮಾನವರನ್ನಾಗಿ ರೂಪಿಸಿದ್ದು ಮಾತ್ರ ಈ ೫೦೦೦ ವರ್ಷಗಳ ಧರ್ಮಪ್ರಭುತ್ವದ ಇತಿಹಾಸವನ್ನೇ ಹೊಂದಿರುವ, ಈ ಅಭವ್ಯ ಯಾವುದೇ ಸಾಕ್ಷ್ಯಾಧಾರವಿಲ್ಲದ – ಹೇಳಿದರೆ ದೇವರನ್ನೇ ಸಾಕ್ಷಿಯನ್ನಾಗಿ ಮುಂದಿಡುವ ಪುರಾಣದ ಇತಿಹಾಸದ ಭಾರತ. ಈ ಪುರಾಣದ ದೇವರ ಇತಿಹಾಸಕ್ಕೆ ವಾಸ್ತವದ ಜನರ ಇತಿಹಾಸವನ್ನು ರೂಪಿಸಿದ್ದು ಪ್ರಜಾಪ್ರಭುತ್ವ ಮಾದರಿಯ ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದ ಆಳ್ವಿಕೆಯ ಕೇವಲ ೭೫ ವರ್ಷದ ಪ್ರಜಾಪ್ರಭುತ್ವ ಭಾರತ ಎಂಬುವುದನ್ನು ನಾವು ಅರಿಯಬೇಕಾಗಿದೆ, ಇದಕ್ಕೆ ಕಾರಣರಾದ ಅಂಬೇಡ್ಕರ್ ಅವರ ಜ್ಞಾನ ಹಾಗೂ ಅವರು ಬರೆದು ನಮ್ಮೆಲ್ಲರಿಗೂ ಅರ್ಪಿಸಿರುವ ಸಂವಿಧಾನದ ಪ್ರಬುದ್ಧತೆಯನ್ನು ಅರ್ಥ ಮಾಡಿಕೊಂಡು ನಮ್ಮ ಮೂಲಭೂತ ಹಕ್ಕುಗಳನ್ನು ಪಡೆದು ಶ್ರಮ ಸಿದ್ಧಾಂತದ ಮೂಲಕ ರಾಷ್ಟ್ರವನ್ನು ಭದ್ರಬುನಾದಿಯಲ್ಲಿ ನಿರ್ಮಿಸಿ ಈ ದೇಶದಲ್ಲಿ ಶ್ರಮಜೀವಿಗಳು ದೇವರಾಗಿ ಬದುಕಬೇಕಾಗಿದೆ. ಇದೇ ಹನುಮಂತನನ್ನು ದೇವರ ಸೇವಕ ದೇವರ ಬಂಟ ಎಂಬ ಧರ್ಮ ಕೇಂದ್ರಿತ ಪದವಿಯಿಂದ ಮುಕ್ತಗೊಳಿಸಿ ಬೌದ್ಧಿಕತೆಯ ದೇವರನ್ನಾಗಿಸುವ ಪರಿ.

ಇಂದಿನ ವಾಸ್ತವ ಏನೆಂದರೆ, ಶ್ರಮದ ಮೂಲಕ ರಾಮಾಯಣದ ಸುಖಾಂತ್ಯವನ್ನು ಕಾಣಿಸಿದ ಹನುಮಂತ ಇಂದಿಗೂ ಊರಿನವರ ಸ್ಪೃಶ್ಯ ವರ್ಗದವರ ದೇವರು ಆಗಲೇ ಇಲ್ಲ. ಇದೇ ಸ್ಪೃಶ್ಯರ ಸೇವೆಯನ್ನು ನಿರಂತರವಾಗಿ ಮಾಡಿ ಅಸ್ಪೃಶ್ಯರಾಗಿ ಕೇರಿಯಲ್ಲಿ ಹೇಗೆ ಜೀವನ ಕಟ್ಟಿಕೊಂಡರೋ ಅದೇ ಮಾದರಿಯಲ್ಲಿ ಹನುಮಂತನು ಸಹ ತಾನು ನೆಚ್ಚಿದ ದೇವರಿಗೆ ಸೇವೆಯನ್ನು ಮಾಡಿ ಕೇರಿಯಲ್ಲಿ ತಮ್ಮ ಬದುಕನ್ನು ರೂಪಿಸಿಕೊಂಡು ಅಸ್ಪೃಶ್ಯ ಸೇವಕನಾಗಿಯೇ ಕೇರಿಯಲ್ಲಿ ನೆಲೆ ನಿಂತು ಹೊರಗುಳಿದ. ಈ ಕಾರಣಕ್ಕಾಗಿ ಹನುಮಂತನ ದೇವಾಲಯ ಕೇರಿಯಿಂದಲೂ ಹೊರಗಿರುವುದು.

ಅಂಬೇಡ್ಕರ್ ಅವರು ಕಂಡ ಭಾರತದಲ್ಲಿ ಪ್ರತಿಯೊಬ್ಬರೂ ಸಹ ಸೇವಕರೇ. ಆ ಮೂಲಕ ಈ ವರ್ಗವೇ ದೇಶ ಹಾಗೂ ದೇಶದ ಸಂಸ್ಕೃತಿಯನ್ನು ಭದ್ರಬುನಾದಿಯಾಗಿ ಕಟ್ಟುವ ಪರಿಯಲ್ಲಿ ಜೀವಿಸಿದ ಸೇವಕರೇ. ಆದರೆ ನಮ್ಮ ಧರ್ಮ ಪ್ರಭುತ್ವದ ಹಿನ್ನೆಲೆಯಲ್ಲಿ ಮಾತ್ರ ಒಬ್ಬರು ದುಡಿಯದೇ ದೇವಮಾನವರಾದರು – ಮತ್ತೊಬ್ಬರು ದುಡಿದು ದೇವರ ಸೇವಕರಾದರು.

ಇದನ್ನು ಪ್ರಜಾಪ್ರಭುತ್ವ ಮಾದರಿಯ ಅಂಬೇಡ್ಕರ್ ಅವರು ಭಾರತ ಮತ್ತು ಭಾರತೀಯರಿಗಾಗಿ ಒಡಲಾಳದ ಅಂತಃಕರಣದ ಅಕ್ಷರದಿಂದ ಬರೆದ ಸಂವಿಧಾನ ಎಂದಿಗೂ ಸಹ ಒಪ್ಪುವುದಿಲ್ಲ. ಇದೇ ವಾಸ್ತವ.

ಡಾ॥ ಎನ್. ಚಿನ್ನಸ್ವಾಮಿ ಸೋಸಲೆ
ಪ್ರಾಧ್ಯಾಪಕರು, ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
Email : drsosale@gmail.com

ನಿಮ್ಮ ಮಗಳಾಗಿದ್ದರೆ...

(ನಿಮ್ಮೊಳಗಿನ ಹೆಣ್ತನಕ್ಕೆ ಗೌರವಿಸುತ್ತಾ) ಕಾವ್ಯಲೋಕ



ನೀವೇಕೆ ಇನ್ನು ಬಂಧನವಾಗಿಲ್ಲ
ನನ್ನನ್ನು ಬಂಧನದಲ್ಲಿಡಲು
ಬಯಸಿದವರು ನೀವಲ್ಲವೇ ?
ನಾನು ಆಡಿದ್ದು ನನ್ನ ದೇಶಕ್ಕಾಗಿ,
ದೇಶವೇ ಈಗ ನನ್ನ ಜೊತೆಗಿಲ್ಲದಿರುವಾಗ ದ್ರೋಹ ಎನಿಸಿಗಿದಂತಲ್ಲವೇ ?

ಅವರು,
ನಾ ಬಳಸುತ್ತಿದ್ದ ಘಮ್ಮೆನ್ನುವ ಟಾಯ್ಲೆಟ್ಟ ಪೇಪರ್ ಬಗ್ಗೆ ಬರೆದರು
ನಾ ಬಳಸುತ್ತಿದ್ದ ಸ್ನಾನದ ಮನೆಯ ಸೋಪಿನ ಬಗ್ಗೆ ಬರೆದರು

ಮೈಗೊತ್ತಿಕೊಂಡಂತೆ ಕಾಣುವ ನಾ ತೊಟ್ಟ ಬಟ್ಟೆಗಳ ಕುರಿತು ಬರೆದರು
ಕುಸ್ತಿಯ ಕಣದೊಳಗಿನ ನನ್ನ ಪಾದದಿಂದ ಜಾರಿದ ಉಸುಕಿನ ಬಗ್ಗೆ ಬರೆದರು

ನನ್ನ ತೋಳಿನ ಮೀನ ಖಂಡಗಳಿಗೆ ಹತ್ತಿದ ಮಣ್ಣಿನ ವಾಸನೆ ಬಗ್ಗೆ ಬರೆದರು
ನನ್ನ ಎದೆಯ ಮೇಲೆ ಮಿರಿ ಮಿರಿ ಮಿಂಚುವ ಬಣ್ಣದ ಬಟ್ಟೆಯ ಬಗ್ಗೆ ಬರೆದರು

ನನ್ನ ಪಾದಗಳ ಚಲನೆಯನ್ನು ಗಮನಿಸಿ ನನ್ನ ಚುರುಕುತನವ ಕುರಿತು ಬರೆದರು
ನನ್ನ ಮೈಯಿಂದ ಜಾರುವ ಬೆವರ ಹನಿಗಳ ಎಣಿಸಿ ಜಾರುವ ಮುತ್ತುಗಳೆಂದು ಬರೆದರು

ನನ್ನ ಕೈಗಳಿಂದ ಎದುರಾಳಿಯ ಬಿಗಿಯುವ ಪಟ್ಟುಗಳ ಹೊಗಳಿ ಬರೆದರು
ನನ್ನ ಕಂಗಳಲ್ಲಿ ಸೂಸುವ ಬೆಳದಿಂಗಳು ಬೆಂಕಿಜ್ವಾಲೆ ಮಿಂಚನ್ನು ನೋಡಿ ಭಲೇ ಎಂದರು

ಇಷ್ಟಾಗಿದ್ದಿದ್ದರೆ
ನಾನೇಕೆ
ಬೀದಿಗಿಳಿಯುತ್ತಿದ್ದೆ ?

ಅವರು ಹುಟ್ಟಿಗೆ ಸಂಬಂಧವಾದ ಹೊಕ್ಕಳ ಬಳ್ಳಿಯ ಬಂಧವ ಹರಿಯ ಬಂದರು
ಅವರು ನನ್ನ ಆಟದ ಸಮಯ ಎಗರುವ ಜೋಡಿ ಮೊಲೆಗಳ ನೋಡಿ
ಉಸಿರುಗಟ್ಟಿಸಬಂದರು.

ಅಷ್ಟೇ....
ತಿರುಗಿ ನನ್ನ ಮೇಲೆಯೇ ಎರಗಿಬಿದ್ದರು.

ಅವರು ನನ್ನ ಬಲಿಷ್ಠ ಮೈಯನ್ನು ಖರೀದಿಸಿ ತಮ್ಮ ಪಾದಗಳ ಸೇವೆಗೆ
ಮುಡುಪಾಗಿಡಲು ಬಯಸಿದರು
ಅವರು ನನ್ನ ಉಸಿರನ್ನು ತಮ್ಮ ಸುಖವಾಗಿಸಿಕೊಳ್ಳಲು ಬಯಸಿದರು

ಅವರು ಬರೆದದ್ದು ಯಾಕೆಂದು ನಿಮಗೆ ಅರ್ಥವಾಗದಿದ್ದರೆ ನಾನೇನು ಮಾಡಲಿ

ಈಗ ಹೇಳಿ
ನೀವು ಮಾಡಬೇಕಾದುದು ಏನೆಂದು...
ಅದು ನಿಮ್ಮ ಮಗಳಾಗಿದ್ದರೆ...???

ರಮೇಶ ಗಬ್ಬೂರ್
ಗಂಗಾವತಿ
Email : gopuradaramesh@gmail.com

ISSN 2319-7307

ನೆಮ್ಮದಿಯ ನಾಳೆ ನಮ್ಮದು

ಹೊಸತು

ಜನಪರ ಹೆಜ್ಜೆಗೆ ಇಪ್ಪತ್ತೈದು ವರ್ಷ

ಡಿಸೆಂಬರ್ ೨೦೨೩
ಬೆಲೆ : ₹ ೭೦

ನವಚೈತನ್ಯ ಪ್ರಕಾಶನ

೧೯೯೯-೨೦೨೩



ಹೊಸತು

ಒಳಗೇನಿದೆ?

ನೆಮ್ಮದಿಯ ನಾಳೆ ನಮ್ಮದು

ಅಂಬೇಡ್ಕರರ ಸಹವರ್ತಿ ಸುರೇಂದ್ರನಾಥ ಟಿಪ್ನಿಸ್ — ಜೆ. ರಾಮಕೃಷ್ಣ ... ೭

ಬಲಪಂಥೀಯ, ಎಡಪಂಥೀಯ ಎಂಬ ಭೇದ ಹೋಗಿ ಮನುಷ್ಯಕೇಂದ್ರಿತ ಸಾಹಿತ್ಯ ರಚನೆಯಾಗಬೇಕು – ಪ್ರೊ॥ ಎಚ್. ಟಿ. ಪೋತೆ — ಕಿರಣ ವಲ್ಲೇಪುರೆ ... ೧೧

ಚೀನಾ ಬೆಲ್ಟ್ ಅಂಡ್ ರೋಡ್ ಮುಂದೊಡಗು ಬೃಹತ್ ಬದಲಾವಣೆಯ ಸಾಧ್ಯತೆ ಹೌದೇ, ಅಲ್ಲವೇ? — ಡಾ॥ ಬಿ. ಆರ್. ಮಂಜುನಾಥ್ ... ೧೭

ವಿವೇಕಾನಂದರು ಹಾಗೂ ಹಿಂದೂ–ಮುಸ್ಲಿಂ ಸಮಸ್ಯೆ
ಮರಾಠಿ ಮೂಲ : ದತ್ತಪ್ರಸಾದ ದಾಭೋಲ್ಕರ್
ಕನ್ನಡಕ್ಕೆ : ಚಂದ್ರಕಾಂತ ಪೋಕಳೆ ... ೨೯

ಪಿಕಳಾರ ಹಕ್ಕಿ ಮತ್ತು ನಾನು — ಮನಮೋಹನ ಎಂ. ... ೫೫

ಪ್ರ..... ಶಾಸ್ತ್ರಿ! — ಚಂದ್ರಶೇಖರ ಹೆಗಡೆ ... ೪೫

ಕಾವ್ಯಲೋಕ — ೬, ೧೫, ೩೫, ೪೪, ೪೭, ೫೧, ೫೪, ೫೭

ಅಂಕಣಗಳು

ಜೆ. ಸಿ. ಕುಮಾರಪ್ಪನವರ ಗಾಂಧಿ ಅರ್ಥಶಾಸ್ತ್ರದ ಅಮೂಲ್ಯ ಚಿಂತನೆಗಳು — ಡಾ॥ ಎನ್. ಜಗದೀಶ್ ಕೊಪ್ಪ ... ೧೩

ಅಪೌಷ್ಟಿಕತೆ, ಹಸಿವು ಹಾಗೂ ಬಡತನ — ಟಿ. ಎಸ್. ವೇಣುಗೋಪಾಲ್ ... ೨೫

ಶಿಕ್ಷಣವು ಯಾರಿಗಾಗಿ? ಯಾಕಾಗಿ? — ಡಾ॥ ವಿನಯಾ ಒಕ್ಕುಂದ ... ೩೬

ಕನಕ ಸಬಾಲ್ಟರ್ನ್ ಚಿಂತಕ — ಎನ್. ಚಿನ್ನಸ್ವಾಮಿ ಸೋಸಲೆ ... ೪೧

ಅಂಬೇಡ್ಕರ್ ನುಡಿಮುತ್ತು ಮತ್ತು ವರ್ತಮಾನದ ಮನಸ್ಸು — ಡಾ॥ ಸಂಪತ್ ಬೆಟ್ಟಗೆರೆ ... ೪೯

ಕಾಯಕ ಮತ್ತು ದಾಸೋಹ ಶರಣ ಜೀವದ ಸಂಪದ — ಡಾ॥ ಸಣ್ಣವೀರಣ್ಣ ಹಾಲಪ್ಪ ದೊಡ್ಡಮನಿ ... ೫೯

ಪ್ರಶಸ್ತಿಗಳು ಮಾರಾಟಕ್ಕಿವೆಯೆ? — ಈರಪ್ಪ ಎಂ. ಕಂಬಳಿ ... ೫೩

ರಂಗದ ಮೇಲೆ ತನ್ನ ಬದುಕನ್ನು ನೋಡಿ ಕಣ್ಣೀರು ಹಾಕಿದ ಮಾತಾ... — ರಮೇಶ ಗಬ್ಬೂರ ... ೧೬

ಅನುಭಾವದ ಆಡುಂಬೊಲ – ಗೂಗಲ್ಲು — ಕೆ. ಶಶಿಕಾಂತ ... ೩೩

ನಾನು ಓದಿದ ಪುಸ್ತಕ :

ಅಂಬೇಡ್ಕರ್ ಜಗತ್ತು — ಡಾ॥ ಎನ್. ಗಾಯತ್ರಿ ... ೩೯

ನಭಾವಲೋಕನ : ಗುರು ಚಂದ್ರ ಸಮಾಗಮ — ಡಾ॥ ಬಿ. ಎಸ್. ಶೈಲಜಾ ... ೪೮

ಹೊಸ ಓದು — ಇಂದಿರಾಕುಮಾರಿ, ಡಾ॥ ಎಂ. ವೆಂಕಟಸ್ವಾಮಿ ... ೬೨

ಚಿತ್ರಗಳು : ತನು, ಬಸವರಾಜ ಕಲೆಗಾರ

ಮುಖಪುಟ : ತೈಲವರ್ಣ ಚಿತ್ರ ಅಭಿಷೇಕ್ ಕುಮಾರ್

ವಿನ್ಯಾಸ : ನವಕರ್ನಾಟಕ

ಕಚೇರಿ ಸಹಕಾರ : ಸುಲಕ್ಷಣಾ ಆರ್., ಆನಂದ ಕೆ.

ವಿದ್ಯಮಾನ...

ಈ ಸಾಲುಗಳನ್ನು ಬರೆಯುವ ವೇಳೆಗೆ ಉತ್ತರಖಂಡದ ಸಿಲ್ಕ್ಯಾರ ಎಂಬ ಸುರಂಗವನ್ನು ಕೊರೆಯುತ್ತಿದ್ದ ಕಾರ್ಮಿಕರು ಭೂಕುಸಿತದಿಂದ ಒಳಗೆ ಸಿಲುಕಿಕೊಂಡು ೨೭ಕ್ಕೆ ಗಂಟೆಗಳೇ ಕಳೆದಿವೆ. ಪ್ರತಿದಿನವೂ ಅಧಿಕಾರಿಗಳು ಇನ್ನೊಂದೆರಡು ದಿನದಲ್ಲಿ ಕಾರ್ಮಿಕರನ್ನು ಹೊರಗೆ ತರುತ್ತೇವೆ ಎನ್ನುತ್ತಿದ್ದಾರೆ. ಆದರೆ ಒಳಗೆ ಸಿಲುಕಿರುವ ಕಾರ್ಮಿಕರು ಭರವಸೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಇನ್ನೊಂದು ಕಡೆ ಹೊರಗೆ ನೆರೆದಿರುವ ಕಾರ್ಮಿಕರ ಸಂಗಾತಿಗಳು, ಬಂಧುಗಳು ವಿಳಂಬವನ್ನು ಪ್ರತಿಭಟಿಸುತ್ತಿದ್ದಾರೆ.

ನಡೆದಿರುವ ಅಪಘಾತವು ಒಂದು ನೈಸರ್ಗಿಕ ದುರಂತ ಅಥವಾ ಆಕಸ್ಮಿಕ ಎಂದು ಸುಮ್ಮನಾಗುವುದು ಸಾಧ್ಯವಿಲ್ಲ. ಏಕೆಂದರೆ ಕಾರ್ಮಿಕರ ಜೀವದ ಬಗ್ಗೆ ಆಳುವ ವರ್ಗಗಳಿಗೆ, ಲಾಭೋದ್ದೇಶದ ನಿರ್ಮಾಣ ಕಂಪನಿಗಳಿಗಿರುವ ಉಡಾಫೆ ಇವೆಲ್ಲವೂ ಈ ದುರಂತದ ಹಿಂದೆ ಇವೆ.

ಇದಕ್ಕೆ ಇನ್ನೊಂದು ಆಯಾಮವೂ ಇದೆ. ಇಂದಿನ ಕೇಂದ್ರ ಸರ್ಕಾರಕ್ಕೆ ಚಾರ್ ಧಾಮ್ ಹಿಂದೂ ತೀರ್ಥ ಕ್ಷೇತ್ರಗಳನ್ನು ಜೋಡಿಸಲು ಉದ್ದನೆಯ ಹೆದ್ದಾರಿಯೊಂದನ್ನು ನಿರ್ಮಿಸುವ ಯೋಜನೆ ಇದೆ. ಇದು ಸರ್ಕಾರಕ್ಕೆ ಘನತೆಯ ಪ್ರಶ್ನೆಯಾಗಿಬಿಟ್ಟಿದೆ. ಆದರೆ ಇಂತಹ ಮಹತ್ವಾಕಾಂಕ್ಷೆಯ ಮತಗಳನ್ನು ಸೆಳೆಯುವ ಯೋಜನೆಯನ್ನು ರೂಪಿಸುವಾಗ ಸೂಕ್ತ ವೈಜ್ಞಾನಿಕ ಸರ್ವೇಕ್ಷಣೆಯನ್ನು ನಡೆಸಿಲ್ಲ ಎನ್ನಲಾಗಿದೆ.

ಈ ಸುರಂಗವನ್ನು ನಿರ್ಮಿಸುವ ಮೊದಲು ಇಡೀ ಪ್ರದೇಶದ ಬಗ್ಗೆ ಸೂಕ್ಷ್ಮವಾದ ಭೂಗರ್ಭ ಶಾಸ್ತ್ರೀಯ ಅಧ್ಯಯನವೂ ಅಗತ್ಯವಾಗಿತ್ತು, ಅದು ನಡೆದಿಲ್ಲ ಎನ್ನಲಾಗುತ್ತಿದೆ. ಭೂಗರ್ಭ ಶಾಸ್ತ್ರಜ್ಞರು ಹೇಳುವ ಪ್ರಕಾರ ಹಿಮಾಲಯ ಪರ್ವತ ಶ್ರೇಣಿಯು ಇಡಿಯ ಜಗತ್ತಿನಲ್ಲಿಯೇ ಅತ್ಯಂತ ಎಳೆಯ ಪರ್ವತಶ್ರೇಣಿ. ಅದು ಆಲ್ಪ್ಸ್ ಮುಂತಾದ ಪರ್ವತಗಳಂತೆ ಗಟ್ಟಿಯಾಗಿ ರೂಪುಗೊಂಡಿಲ್ಲ. ಇಲ್ಲಿ ವಿಪರೀತ ಸುಣ್ಣದ ಕಲ್ಲು ಇದ್ದು, ಅದು ನೀರು ಬಿದ್ದೊಡನೆ ಕರಗಿ ಸುರಂಗ ತೋಡುವ ಜಾಗದಲ್ಲಿನ ಭೂಮಿಯನ್ನು ದುರ್ಬಲಗೊಳಿಸುತ್ತದೆ. ಹಾಗೆಯೇ ಹಿಮಾಲಯವು ಇನ್ನೂ ಬೆಳೆಯುತ್ತಿರುವ ಪರ್ವತ. ಅಲ್ಲದೆ ಇಲ್ಲಿ ವಿಪರೀತ ಭೂಕಂಪಗಳು ಕೂಡ ಘಟಿಸುತ್ತವೆ. ಸಾಲದೆಂಬಂತೆ ಬೃಹತ್ ಜಲಾಶಯಗಳ ಮತ್ತು ಹೆದ್ದಾರಿಗಳ ನಿರ್ಮಾಣ ಗಳಿಂದಾಗಿ ಇಡಿಯ ಪ್ರದೇಶವೇ ದುರ್ಬಲವಾಗಿದೆ. ಅಲ್ಲದೆ ಇಂತಹ ಸುರಂಗವನ್ನು ರಚಿಸುವಾಗ ಇರತಕ್ಕಂತಹ ಭದ್ರತಾ ನಿಯಮಗಳ ಪ್ರಕಾರ ಯಾವುದೇ ಅಪಘಾತ ಉಂಟಾದಲ್ಲಿ ಕಾರ್ಮಿಕರನ್ನು ಸುರಕ್ಷಿತವಾಗಿ ಹೊರತರಲು ಪರ್ಯಾಯ ಮಾರ್ಗವನ್ನು ಸೃಷ್ಟಿಸಲೇ ಬೇಕಾಗಿತ್ತು. ಆದರೆ ಸುರಂಗವನ್ನು ನಿರ್ಮಿಸುತ್ತಿರುವ ಕಂಪೆನಿಯು ಈ ಕರಾರನ್ನು ಸಂಪೂರ್ಣವಾಗಿ ಮುರಿದಿದೆ.

ಈ ದೇಶದಲ್ಲಿ ಮ್ಯಾನ್ ಹೋಲ್‌ನಲ್ಲಿ ಸಿಕ್ಕಿ ಸಾಯುವ ಕಾರ್ಮಿಕನಾಗಲಿ, ವಿದ್ಯುಚ್ಛಕ್ತಿ ಕಂಬದ ಮೇಲೆ ಸಾಯುವ ಕಾರ್ಮಿಕನಾಗಲಿ, ಇನ್ನೂ ಅನೇಕ ಅಸುರಕ್ಷಿತ ಕೆಲಸಗಳಲ್ಲಿ ಸಾಯುವ ಸ್ತ್ರೀ ಮತ್ತು ಪುರುಷ ಕೆಲಸಗಾರರಾಗಲಿ ಇವರು ಯಾರೂ ಸಹ ನಮ್ಮ ರಾಜಕೀಯ ನಾಯಕತ್ವದ ಕಣ್ಣಿನಲ್ಲಿ ಬೆಲೆಬಾಳುವ ಜೀವಗಳಲ್ಲ. ಆದ್ದರಿಂದಲೇ ಇಂತಹ ಅವಘಡಗಳನ್ನು ತಣ್ಣಗೆ ಕ್ಷಮಿಸುವುದು ಕಷ್ಟವಾಗುತ್ತದೆ

ಅದೇನೆ ಆಗಲಿ ಆದಷ್ಟು ಬೇಗ ಎಲ್ಲ ಕಾರ್ಮಿಕರನ್ನು ಸುರಕ್ಷಿತವಾಗಿ ಹೊರಗೆ ಕರೆದುಕೊಂಡು ಬರುವಂತಾಗಲಿ ಎಂದು ಹೊಸತು ಹಾರೈಸುತ್ತದೆ. ದೀಪಾವಳಿಯ ಹಬ್ಬದ ನಡುವೆ ಕತ್ತಲಲ್ಲಿ ಸಿಲುಕಿಕೊಂಡ ಈ ಕಾರ್ಮಿಕ ಕುಟುಂಬಗಳಿಗೆ ಸಾಕಷ್ಟು ಪರಿಹಾರ ಮತ್ತು ನೆರವು ತುರ್ತು ಅಗತ್ಯವಾಗಿದೆ.

ಕನಕ ಸಬಾಲ್ಟ್ರನ್ ಚಿಂತಕ

ಎನ್. ಚಿನ್ನಸ್ವಾಮಿ ಸೋಸಲೆ



ಶಿಕ್ಷಣವನ್ನು ತಮ್ಮ ಪಾರಂಪರಿಕ ಸ್ವತ್ತಾಗಿ ಶತಶತಮಾನಗಳಿಂದಲೂ ಮಾಡಿಕೊಂಡಿದ್ದವರು ಕನಕನ ಬಗ್ಗೆ ಬರೆದರು, ವಿಶ್ಲೇಷಣೆ ಮಾಡಿದರು, ವಿಮರ್ಶೆ ಮಾಡಿದರು ಸರಿ...

ನನ್ನ ತಾತ–ಮುತ್ತಾತ–ನನ್ನಪ್ಪಂದಿರಿರಲಿ ನನ್ನ ಜನ್ಮ ದಿನಾಂಕವೇ ನನಗೆ ಸರಿಯಾಗಿ ತಿಳಿದಿಲ್ಲ. ಆದರೂ ಋತುಮಾನಗಳು–ಅವರವರ ಹೆಸರಿನ ಹಿಂದಿರುವ ಗೋತ್ರ – ಗ್ರಹ ಗ್ರಾಚಾರಗಳನ್ನು ಇಟ್ಟುಕೊಂಡು ಜನ್ಮ ದಿನಾಂಕವನ್ನು ದಾಖಲಿಸುವುದೇ ನಮ್ಮ ಪಾರಂಪರಿಕ ಕಸುಬು ಎಂದು ಹೇಳಿಕೊಂಡ ವರಿಂದ ಸೃಷ್ಟಿಸಿಕೊಂಡು ಅದನ್ನೇ ನಮ್ಮ ಪುರಾಣದ ಹಾಗೂ ಜನಸಾಮಾನ್ಯರ ಏಳಿಗೆಗಾಗಿ ದುಡಿದ ಮಹಾನ್ ಚೇತನರ ದಿನಾಂಕಗಳನ್ನು ನಮೂದಿಸಿ ಕೊಂಡು ಅಷ್ಟೇ ಅಸಿಸ್ತುಬದ್ಧವಾಗಿ ಆಚರಣೆ ಮಾಡು ತ್ತಿರುವುದು ಇಂದಿನ ವಾಸ್ತವ ಆಗಿದೆ. ಒಂದು ಸ್ವಾರ್ಥಪರ ಪುಸ್ತಕವನ್ನೇ ನೋಡಿ ದಾಖಲಿಸುವುದನ್ನು ತಮ್ಮ ಸ್ವತ್ತು ಎಂದುಕೊಂಡಿರುವ ಕೆಲವೇ ಕೆಲವು ಮೂಲಭೂತವಾದಿಗಳು ಅಮಾವಾಸ್ಯೆ–ಹುಣ್ಣಿಮೆ – ಇವುಗಳ ಆಧಾರದ ಮೇಲೆ ಬದಲಾವಣೆಯಾಗುವ ಪ್ರಾಕೃತಿಕ ಹಿನ್ನೆಲೆಯ ಸ್ವಾಭಾವಿಕ ಋತುಗಳನ್ನು ನೋಡಿ ತಮ್ಮ ಅನುಕೂಲಕ್ಕೆ ಸಂಬಂಧಿಸಿದಂತೆ ಬಲಿ ಕೊಟ್ಟವರ ಹೆಸರಿನಲ್ಲಿ ಹಬ್ಬಗಳು ಹಾಗೂ ನಾಡ ಹಬ್ಬಗಳನ್ನು ದಾಖಲಿಸುವ ಹಾಗೇ ಸಾಧಕರ ಜಯಂತಿಗೆ ಉದ್ದವಾದ ಕಾಲವನ್ನು, ಈ ಸಾಧಕರಿಗೆ ವಿರುದ್ಧವಾಗಿ ಮಾತನಾಡಿದವರ ಹುಟ್ಟಿದ ದಿನಾಂಕವನ್ನು ಕೆಟ್ಟ ಕಾಲಕ್ಕೂ ತಾಳೆ ಹಾಕಿ ಹೇಳಿ ಧರ್ಮ ಪ್ರಭುತ್ವವನ್ನು ಸ್ಥಾಪಿಸುವುದಕ್ಕೆ ವಾಸ್ತವದ ನಿದರ್ಶನಗಳಿವೆ.

ಇಲ್ಲಿಯೂ ಸಹ ಬಹು ಮುಖ್ಯವಾಗಿ ಕಾಡುವ ಪ್ರಶ್ನೆ ಎಂದರೆ: ಕಾಲಗಳಲ್ಲಿಯೂ ಒಳ್ಳೆಯ ಕಾಲ – ಕೆಟ್ಟ ಕಾಲ ಎಂಬುವುದು ಇದೆಯೆ...? ಇದ್ದರೆ ಅದು ಯಾವುದು..? ...ಎರಡೂವರೆ ಸಾವಿರ ವರ್ಷ ಗಳಿಂದಲೂ ಈ ನೆಲದ ಅಸ್ಪೃಶ್ಯರು ಎಂದು ಕರೆಸಿ ಕೊಂಡವರಿಗೆ ಇಂದಿನ ಪ್ರಜಾಪ್ರಭುತ್ವ ಭಾರತದಲ್ಲಿ ಅಂಬೇಡ್ಕರ್ ಅವರು ರಚಿಸಿದ ಕಾನೂನುಗಳ ರೂಪಿತ ಲಿಖಿತ ಸಂವಿಧಾನ ಶಾಸನಬದ್ಧವಾಗಿ ಜಾರಿಗೆ ಬರುವವರೆಗೂ ಏಕೆ ಕಿಂಚಿತ್ತು ಒಳ್ಳೆಯ ಕಾಲ ಬರಲೇ ಇಲ್ಲ....? ಎಂಬ ಪ್ರಶ್ನೆ ನನಗಂತೂ ಕಾಡುತ್ತದೆ. ಇದು ನಿಮ್ಮೆಲ್ಲರಿಗೂ ಕಾಡುವ ಪ್ರಶ್ನೆಯಾಗಿದೆ. ಅದೇನೇ ಇರಲಿ ನಮ್ಮ ಕನ್ನಡ ನಾಡಿನಲ್ಲಿ ಬಸವ ಹಾಗೂ ಬಸವಾದಿ ಶರಣ–ಶರಣೆಯರ ನಂತರ ಹೊರಹೊಮ್ಮಿದ ಬಹುದೊಡ್ಡ ಸಬಾಲ್ಟ್ರನ್ ಚಿಂತಕ – ಕೀರ್ತನ ಸಾಹಿತ್ಯದ ಅರಸ ಕನಕದಾಸ. ಈ ಹಿನ್ನೆಲೆಯಿಂದ ಸಮಸ್ತ ನಾಡಿನ ಜನತೆಗೆ ಕನಕದಾಸರ ಜನ್ಮ ದಿನದ ಹಾರ್ದಿಕ ಶುಭಾಶಯಗಳು.

ಕನಕದಾಸರ ವಸ್ತುನಿಷ್ಠವಾದ ಬೌದ್ಧಿಕ ಚಿಂತನೆಯನ್ನು ಸಹ ತಮ್ಮ ಸ್ವಾರ್ಥ ಸಾಧನೆಗೆ ಬಳಸಿಕೊಂಡ ಪರಿಯ ಕುರಿತು ಕೆಲವು ನನ್ನ ವಸ್ತುನಿಷ್ಠವಾದ ಬೌದ್ಧಿಕ ಪ್ರಶ್ನೆಗಳಿವೆ. ಆ ಪ್ರಶ್ನೆಗಳನ್ನು ನಿಮ್ಮ ಮುಂದೆ ವಸ್ತುನಿಷ್ಠವಾಗಿ ಮಂಡಿಸುವುದರ ಜೊತೆಗೆ ಒಂದಷ್ಟು ಆ ಪ್ರಶ್ನೆಗಳಿಗೆ ವಿಶ್ಲೇಷಣಾತ್ಮಕ ಹಿನ್ನೆಲೆಯಲ್ಲಿ ಚರ್ಚೆಯನ್ನು ತಮ್ಮ ಮುಂದೆ ಇಡುತ್ತೇನೆ. ರಾಮಾಯಣ ಬರೆದ ವಾಲ್ಮೀಕಿ – ಮಹಾಭಾರತ ಬರೆದ ವ್ಯಾಸ – ಭಗವದ್ಗೀತೆಯನ್ನು ಬೋಧಿಸಿದ ಕೃಷ್ಣ ಇವರೆಲ್ಲರೂ ಸಹ ಧರ್ಮದ ಹಿನ್ನೆಲೆಯ ಅಂತಃಕರಣದ ಸಹೋದರತೆಯನ್ನು ಪ್ರತಿಪಾದನೆ ಮಾಡುವ ಸಮ ಸಮಾಜದ ತತ್ವ ಸಿದ್ಧಾಂತದ ಅಡಿಯಲ್ಲಿಯೇ ಬರೆದದ್ದು – ಮಾತನಾಡಿಸಿದ್ದು ಹಾಗೂ ಜೀವಿಸಿದ್ದು ಎಂಬುದು ವಾಸ್ತವ. ಆದರೆ ಇಂತಹ ಮಾನವೀಯತೆ ಹೊಂದಿರುವ "ಅಂತಃಕರಣದ" ಧರ್ಮ ಬೋಧನೆಯನ್ನು

"ರಾಜಕಾರಣಗೊಳಿಸಿ" ತಮ್ಮ ಸ್ವಾರ್ಥಕ್ಕೆ ಅಳವಡಿಸಿಕೊಂಡಿದ್ದು ಭಾರತದ ಪುರಾಣ ಮಿಶ್ರಿತವಾಗಿ ಮೆರೆಯುತ್ತಿರುವ ಚರಿತ್ರೆಯಲ್ಲಿ ಬಹುದೊಡ್ಡ ನಿದರ್ಶನವಾಗಿ ಉಳಿದಿದೆ. ಇಂತಹ ರಾಜಕಾರಣದ ಒಳಗೊಳಿಸುವಿಕೆಗೆ ಕನಕದಾಸರೂ ಹೊರತಾಗಲಿಲ್ಲ. ಏಕೆಂದರೆ ವಾಲ್ಮೀಕಿ, ವ್ಯಾಸ, ಕೃಷ್ಣರಂತೆ ಕನಕನೂ ಸಹ ಶೂದ್ರಾದಿ ಶೂದ್ರನೆ ಆಗಿದ್ದಾನೆ.

ಇವರೆಲ್ಲದರ ಮುಖ್ಯ ಸಾರ ಎಲ್ಲರನ್ನೂ ಒಳಗೊಳ್ಳುವ – ಎಲ್ಲರಿಗೂ ಬೇಕಾಗುವ – ಎಲ್ಲರೂ ಒಳಗೂಡಿಯೂ ಇರುವ "ಧರ್ಮ". ಎಲ್ಲರಿಗೂ ಸಮಾನ ಬೌದ್ಧಿಕತೆಯ ಅರಿವನ್ನು ಮೂಡಿಸಿದ ಧರ್ಮದ ಕಡೆ ಸಮಸ್ತರನ್ನು ಕೊಂಡೊಯ್ಯುವುದೇ ಆಗುತ್ತೆ ಹೊರತು – ತಮ್ಮ ಸ್ವಾರ್ಥ ಸಾಧನೆಗಾಗಿ ಏಕವ್ಯಕ್ತಿಗಳ ಪುರಾಣ ಹಿನ್ನೆಲೆಯ ವ್ಯಕ್ತಿ–ವ್ಯಕ್ತಿತ್ವವನ್ನು ಮೀರಿದ ಪವಾಡಗಳನ್ನು ಸೃಷ್ಟಿಸಿ, ಇವುಗಳ ಆಧಾರದ ಮೇಲೆ ಬಹುಜನರಲ್ಲಿ ಜೀವನದ ಭಯವನ್ನು ರೂಪಿಸಿ – ಇನ್ನೂ ಮುಂದುವರೆದು ನಾನು – ನನ್ನಿಂದಲೇ – ನನಗಾಗಿಯೇ – ಎಂದು ಸ್ವಹಿತಾಸಕ್ತಿಗಾಗಿ ಏಕಮುಖವಾಗಿ ಬೋಧಿಸಿದ ತತ್ವ ಸಿದ್ಧಾಂತಗಳ ಆಧಾರದಲ್ಲಿ ನಿರ್ಮಿತವಾದ "ಮತ" ಸಿದ್ಧಾಂತದ ವಿರುದ್ಧವಾಗಿತ್ತು ಎಂಬುದನ್ನು ಮೊದಲು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ನಾವು ಇಂದಿಗೂ ಸಹ ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಸೇರ್ಪಡೆಗೊಂಡರೆ ಅಂಥವರನ್ನು "ಮತಾಂತರ ಗೊಂಡರು" ಎಂದು ಹೇಳುತ್ತೇವೆ ಹೊರತು – ಯಾವುದೇ ಕಾರಣಕ್ಕೂ "ಧರ್ಮಾಂತರಗೊಂಡರು" ಎಂದು ಹೇಳುವುದೇ ಇಲ್ಲ. ಎಂದಿಗೂ ಯಾವ ಸಂದರ್ಭದಲ್ಲಿಯೂ ಯಾವುದೇ ಮನುಷ್ಯ ಪ್ರಾಕೃತಿಕವಾಗಿ ಧರ್ಮಾಂತರಗೊಳ್ಳಲು ಸಾಧ್ಯವಿಲ್ಲ. ನಿಜಾರ್ಥದಲ್ಲಿ ಪ್ರಾಕೃತಿಕವಾದದ್ದೆ ಧರ್ಮ. ಮನುಷ್ಯ ಈ ಭೂಮಿಯಲ್ಲಿ ಸಂಘ ಜೀವಿಯಾಗಿ ಪ್ರಕೃತಿಯ ಜೊತೆ ಹೇಗೆ ಸಮನಾಂತರ ಬದುಕಬೇಕು ಎಂದು ಹೇಳುವುದೇ ಧರ್ಮದ ನಿಜ ಸಾರ. ಆದರೆ ಮನುಷ್ಯ ನಿರ್ಮಿತ "ಮತ" ಪ್ರಕೃತಿಯನ್ನೇ ತನ್ನ ಸ್ವಾರ್ಥಕ್ಕೆ ಬಳಸಿಕೊಂಡು, ಅದರ ಆಧಾರದ ಮೇಲೆ ಒಂದು ವರ್ಗ ಹುಟ್ಟಿನ ಮೂಲಕವೇ ಶ್ರೇಷ್ಠತೆಯಿಂದ ಗುರುತಿಸಿಕೊಂಡು, ಹುಟ್ಟಿನ ಮೂಲಕವೇ ಕನಿಷ್ಠತೆಗೆ ಒಳಗಾದವರು ಶ್ರೇಷ್ಠರ ಮುಂದೆ ಹೇಗೆ...? ಯಾಕಾಗಿ..? ಯಾವ ರೀತಿ...? ಜೀವಿಸಿ ಬದುಕು ಸಾಗಿಸಬೇಕು ಎಂಬುದನ್ನು ಮತ ನಿರ್ಧರಿಸುತ್ತದೆ. ಇದೆ ಧರ್ಮ ಹಾಗೂ ಮತಕ್ಕೆ ಇರುವ ಬಹುದೊಡ್ಡ ವ್ಯತ್ಯಾಸ. ಇಂತಹ ಧರ್ಮ ಹಾಗೂ ಮತಕ್ಕೆ ಇರುವ ಬಹುದೊಡ್ಡ ವ್ಯತ್ಯಾಸವನ್ನು ಮನುಷ್ಯನ ಹುಟ್ಟು – ಹುಟ್ಟಿದ ನಂತರ ಮಾಡಿಕೊಂಡ ಕುಲಗಳು – ಕುಲದ ನಂತರ ಮೆಟ್ಟುವ ನೆಲ – ಅಟ್ಟು ತಿನ್ನುವ ಆಹಾರ – ಮುಂದುವರೆದು ಬಹು ಮುಖ್ಯವಾಗಿ ಭೌತಿಕವಾಗಿ ಕಾಣುವ ದೇವರಿಗೆ ವಿರುದ್ಧವಾಗಿ ಬೌದ್ಧಿಕವಾಗಿ ಗ್ರಹಿಸಬೇಕಾದ ದೇವರು. ಇನ್ನೂ ಮೊದಲಾದ ಅನೇಕ ವಸ್ತುನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ತಮ್ಮ ಕೀರ್ತನೆಯ ಮೂಲಕ ಅನಾವರಣಗೊಳಿಸಿದವರೇ ಕನಕದಾಸರು.

ಈ ಹಿನ್ನೆಲೆಯಲ್ಲಿ ಕೆಲವು ಪ್ರಶ್ನೆಗಳು ಹಾಗೂ ಅವುಗಳಿಗೆ ಕೆಲವು ಸ್ಪಷ್ಟನೆ...

೧. ಕನಕದಾಸರ ಗುರುಗಳಾದ ವಾದಿರಾಜರು ಒಂದು ದಿನ ಸಭೆಯಲ್ಲಿ ಎಲ್ಲರಿಗೂ ಬಾಳೆಹಣ್ಣನ್ನು ಕೊಟ್ಟು ದೇವರಿಲ್ಲದ ಸ್ಥಳದಲ್ಲಿ ತಿಂದು ಬನ್ನಿ ಎಂದು ಹೇಳಿದರಂತೆ. ಮರುದಿನ ಎಲ್ಲರೂ ಬಂದು ಬಾಳೆಹಣ್ಣು ತಿಂದ ಸ್ಥಳಗಳನ್ನು ತಮ್ಮದೇಯಾದ ವರ್ಣನಾತ್ಮಕ ರೀತಿಯಲ್ಲಿ ಸಭೆಯಲ್ಲಿ ವಿವರಿಸಿದರು. ಏಕೆಂದರೆ ಇವರಿಗೆ ಸ್ಪಷ್ಟವಾಗಿ ತಿಳಿದಿತ್ತು ದೇವರನ್ನು ನಾವೇ ಸೃಷ್ಟಿ ಮಾಡಿರುವುದು, ನಾವು ನಮ್ಮ ಸ್ವಾರ್ಥಕ್ಕಾಗಿ ಪೂಜಿಸುವ ದೇವರು ದೇವಸ್ಥಾನದ ಒಳಗೂ ಇಲ್ಲ ಎಂಬುವುದು. ಎಲ್ಲಿಯೂ ದೇವರಿಲ್ಲ ಎಂಬುದು ಸ್ಪಷ್ಟವಾಗಿ ಅವರಿಗೆ ಗೊತ್ತಿದ್ದ ಕಾರಣಕ್ಕಾಗಿ ಅವರು ಮುಕ್ತವಾಗಿ ಬಾಳೆಹಣ್ಣನ್ನು ತಿಂದು ಚಪ್ಪರಿಸಿ ಬಂದಿದ್ದರು. ಬಾಳೆಹಣ್ಣನ್ನು ತಿಂದು ಬಂದವರ ವಿವರಣೆಯೇ ವಿಶಿಷ್ಟವಾಗಿತ್ತು. ಏಕೆಂದರೆ ಅವರು ಅದರ ಸವಿಯನ್ನು ಸವಿದಿದ್ದರು ಅದಕ್ಕಾಗಿ. ಇದು ದೇವರನ್ನು ಸೃಷ್ಟಿಸಿದವರ "ಪುರಾಣದ" ಕಥೆಯಾದರೆ...,

ಕನಕದಾಸರು ಮಾತ್ರ ಬಾಳೆಹಣ್ಣು ತಿನ್ನದೇ ಹಾಗೆ ಬಂದು ವಾದಿರಾಜರ ಮುಂದೆ ದೇವರು ಇಲ್ಲದ ಸ್ಥಳವೇ ಇಲ್ಲ ...ಅದಕ್ಕಾಗಿ ನಾನು ತಿಂದಿಲ್ಲ.. ಎಂದು ಬಾಳೆಹಣ್ಣನ್ನು ವಾದಿರಾಜರಿಗೆ ಕೊಟ್ಟರು. ಏಕೆಂದರೆ ಕನಕ ಮತ್ತು ಕನಕಾದಿ ಕನಕರಿಗೆ ದೇವರು ಕಂಬದಲ್ಲಿ, ನೀರಿನಲ್ಲಿ, ಆಕಾಶದಲ್ಲಿ, ಭೂಮಿಯಲ್ಲಿ, ಗಾಳಿಯಲ್ಲಿ, ಬೆಂಕಿಯಲ್ಲಿ, ನಿನ್ನಲ್ಲಿ–ನನ್ನಲ್ಲಿ – ಸಕಲ ಚರಚರಗಳಲ್ಲೂ ಇದ್ದಾನೆ, ಅವನಿಲ್ಲದ ಜಾಗವೇ ಇಲ್ಲ ಎಂದು ನಂಬಿಸಿದ್ದರು. ಇದು ದೇವರನ್ನು ಸೃಷ್ಟಿಸಿದವರನ್ನು ದೇವರ ಸ್ಥಾನದಲ್ಲಿಟ್ಟು ನಂಬಿದವರ "ವಾಸ್ತವದ" ಕಥೆ. ಆದರೆ ಇಂದು ವಾಸ್ತವವಾಗಿ ಅಂದು "ಬಾಳೆಹಣ್ಣನ್ನು ತಿಂದರೆ ದೇವರು ಇಲ್ಲಿ ನೋಡುವುದಿಲ್ಲ" ಎಂದು ಬಚ್ಚಿಟ್ಟುಕೊಂಡು ತಿಂದವರು– ಅಂದರೆ, ದೇವರೇ ಇಲ್ಲ ಎಂದು ಸ್ಪಷ್ಟವಾಗಿ ತಿಳಿದಿರುವವರು ಈ ದೇಶದ ಮೇಲೆ ಯಾರೆಲ್ಲಾ ದಾಳಿ– ಆಕ್ರಮಣ ಮಾಡಿ ನೂರಾರು ವರ್ಷಗಳ ಕಾಲ ವ್ಯಾಪ್ತ ರೂಪದ ಪ್ರಭುತ್ವದ ಆಳ್ವಿಕೆ ಮಾಡಿದರೂ ಸಹ ಅವರಿಗೂ ಸಹ ದೇವರ ಹೆಸರಿನಲ್ಲಿ ತೀರ್ಥವನ್ನು ಕುಡಿಸಿ ಸಕಲ ಸೌಲಭ್ಯ ಹಾಗೂ ಸಾಂಸ್ಕೃತಿಕ ಸುಖವನ್ನು ಪಡೆದವರು.

ಆದರೆ, ಕಾಯಕ ಸಿದ್ಧಾಂತದ ಮೂಲಕ – ತೌಸದ್ದಿಯಿಂದ ಮಾಡುವ ಕಾಯಕದಲ್ಲಿಯೇ ದೇವರನ್ನು ಕಾಣುವವರು – ತಮ್ಮ ಬೆವರಿನ ಮೂಲಕ ಈ ರಾಷ್ಟ್ರದಲ್ಲಿ ಪ್ರತಿನಿತ್ಯ ದುಡಿದು ಒಂದ್ ಒಪ್ಪೊತ್ತಿನ ಊಟ ಮಾಡಿ ದೇವರನ್ನು ಕಾಣುತ್ತಿರುವವರು ಮಾತ್ರ ಇನ್ನೂ ಬಾಳೆಹಣ್ಣನ್ನು ತಿನ್ನಲು ಸಾಧ್ಯವಾಗುತ್ತಿಲ್ಲ. ಎರಡು ಸಾವಿರ ವರ್ಷದ ಅಲಿಖಿತ ಸಂವಿಧಾನದ ನೀತಿ ನಿಯಮಗಳಿಂದ ಮೊದಲುಗೊಂಡು, ಇಂದಿನ ಲಿಖಿತ ಸಂವಿಧಾನದ ೭೫ ವರ್ಷಗಳ ಅವಧಿಯಲ್ಲಿ ನಾವು ಜೀವಿಸುತ್ತಿದ್ದರೂ ಸಹ ಅದು ಸಾಧ್ಯ ಆಗದ ಪರಿಸ್ಥಿತಿ ನಿರ್ಮಾಣಗೊಂಡಿದೆ. ಏಕೆಂದರೆ ಇವರಿಗೆ ಎಲ್ಲೆಲ್ಲೂ ದೇವರು ಕಾಣುವ "ಅಜ್ಞಾನ"ವೇ ತುಂಬಿದೆ. ಬಾಳೆಹಣ್ಣು ತಿಂದವರಿಗೆ ಮಾತ್ರ ಎಲ್ಲಿಯೂ ದೇವರಿಲ್ಲ ಎಂಬ ಸ್ಪಷ್ಟ ಅರಿವಿರುವುದರಿಂದ ಅವರ ಸ್ವಹಿತಾ ಸಕ್ತಿಯ "ಸ್ವಾರ್ಥಪರ ಜ್ಞಾನ" ಮೆರೆಯುತ್ತಿದೆ ಎಂಬ ಸ್ಪಷ್ಟವಾದ ಪ್ರಶ್ನೆ ಕಾಣುತ್ತಿದೆ.

ಆತ್ಮೀಯರೆ,

ಸದಾ 'ಹೊಸತು' ನಿಮ್ಮ ಜೊತೆಗಿರಲಿ.

ಕಳೆದ ೨೫ ವರ್ಷಗಳಿಂದ ಪ್ರಕಟವಾಗುತ್ತಿರುವ ಜನಪರ ತಿಂಗಳ ಪತ್ರಿಕೆಗೆ ಚಂದಾದಾರರಾಗಿ 'ಹೊಸತು' ಓದುಗರ ಬಳಗದ ವಿಸ್ತರಣೆಗೆ ಕೈಜೋಡಿಸಬೇಕಾಗಿ ಮನವಿ.

ತಿಂಗಳ ಪತ್ರಿಕೆ

ಹೊಸತು

ನೆಮ್ಮದಿಯ ನಾಳೆ ನಮ್ಮದು

ಜನಪರ ಹೆಜ್ಜೆಗೆ ೨೫ ವರ್ಷ

ನವಕರ್ನಾಟಕ ಪ್ರಕಾಶನ

ತಮ್ಮ ಸಹಭಾಗಿತ್ವದ ನಿರೀಕ್ಷೆಯಲ್ಲಿ

ಡಾ॥ ಜಿ. ರಾಮಕೃಷ್ಣ
ಗೌರವ ಸಂಪಾದಕ

ಡಾ॥ ಸಿದ್ದನಗೌಡ ಪಾಟೀಲ
ಸಂಪಾದಕ

ಚಂದಾ ವಿವರ

ವಾರ್ಷಿಕ ಚಂದಾ ₹ ೩೫೦/- ೫ ವರ್ಷದ ಚಂದಾ ₹ ೯೦೦/-

ನಿಮ್ಮ ಚಂದಾ ಹಣವನ್ನು 'ಹೊಸತು' ಹೆಸರಿನಲ್ಲಿ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ ಇಲ್ಲವೇ, ನೇರವಾಗಿ 'ಹೊಸತು' ಬ್ಯಾಂಕ್ ಖಾತೆಗೆ ಜಮಾ ಮಾಡಿ (Current A/c No. 0788201015590; IFSC Code CNRB0000788, ಕೆನರಾ ಬ್ಯಾಂಕ್, ಮಾಧವನಗರ, ಬೆಂಗಳೂರು) ಅಥವಾ ಮೊಬೈಲ್ ಸಂಖ್ಯೆ 7೩೮೩೮೩೦೫೦೬ಕ್ಕೆ ಗೂಗಲ್/ಫೋನ್ ಪೇ ಮೂಲಕ ಪಾವತಿಸಿ. ವಿಳಾಸ ಮತ್ತು ಹಣ ಕಳಿಸಿದ ಸ್ಕ್ರೀನ್‌ಶಾಟ್‌ನ್ನು ವಾಟ್ಸಾಪ್‌ನಲ್ಲಿ ಕಳಿಸಬೇಕಾಗಿ ಮನವಿ.

ಎ. ರಮೇಶ ಉಡುಪ
ಕಾರ್ಯನಿರ್ವಾಹಕ ನಿರ್ದೇಶಕ

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು – 560 001

ಈ ನಿಜಾರ್ಥದಲ್ಲಿಯೇ ಬಾಳೆಹಣ್ಣನ್ನು ತಿಂದವರ ಅಲಿಖಿತ ಸಂವಿಧಾನ ಈ ದೇಶವನ್ನು ಆಳುತ್ತಿದೆ. ಅದಕ್ಕಾಗಿ ಅವರು ಯಾವುದೇ ಚಳುವಳಿ ಮುಷ್ಕರ ಮಾಡದಿದ್ದರೂ ಸಹ, ನಾವೇ (ಸರ್ಕಾರಗಳೇ) ಅವರಿರುವ ಸ್ಥಳಕ್ಕೆ ಹೋಗಿ ಅವರು ಕೇಳಿದ್ದಕ್ಕಿಂತಲೂ ಹೆಚ್ಚಿನದಾಗಿ "ಮೀಸಲಾತಿ" ಯನ್ನು ಅವರ ಕೈಗೆ ನೀಡುತ್ತಿದ್ದೇವೆ. ಹೀಗೆ ನೀಡಿದ ಮೀಸಲಾತಿ ಎಂಬ ಬಾಳೆಹಣ್ಣನ್ನು ಅವರು ಎಲ್ಲೂ ದೇವರು ಇಲ್ಲ ಎಂದು ತಿಳಿದ ಕಾರಣಕ್ಕಾಗಿ ಚೆನ್ನಾಗಿ ಸಿಪ್ಪೆ ಸುಲಿದು ತಿನ್ನುತ್ತಿದ್ದಾರೆ..

ಬಾಳೆಹಣ್ಣು ತಿನ್ನದೇ ದೇವರನ್ನು ಶ್ರಮದ ಮೂಲಕ ಎಲ್ಲೆಲ್ಲೂ ಕಾಣುತ್ತಿರುವ – ಕಾಣಲು ಪರಿತಪಿಸುತ್ತಿರುವ ಬಾಬಾಸಾಹೇಬ್ ಅಂಬೇಡ್ಕರ್ ಅವರು ಬರೆದ ಲಿಖಿತ ಸಂವಿಧಾನದ ಮೂಲಕ ಸಂವಿಧಾನಬದ್ಧವಾಗಿಯೇ ಪಡೆಯಬೇಕಾದ ಮೀಸಲಾತಿಯನ್ನು ದೇವರು ಇದ್ದಾನೆ ಎಂದು ನಂಬಿಸಿದವರ "ಒಡೆದಾಳುವ" ನೀತಿಗೆ ತಲೆಬಾಗಿ ಇಂದಿಗೂ ಸಹ ಮೀಸಲಾತಿ ಎಂಬ ಕೈಯಲ್ಲಿರುವ ಬಾಳೆಹಣ್ಣನ್ನು ತಿನ್ನಲಾಗದೆ ದೇವರು ಎಲ್ಲೆಲ್ಲಿಯೂ ಇದ್ದಾನೆ ಎಂದು ಸುತ್ತುತ್ತಿದ್ದಾರೆ. ಇದಕ್ಕೆ ಇಂದಿನ ನೂರೆಂಟು ಜ್ವಲಂತ ವಿಷಯಗಳೇ ಸಾಕ್ಷಿಯಾಗಿದೆ.

೨. ಕನಕ... ಧರ್ಮ–ಧರ್ಮದೊಳಗೆ ಸಮಾಜ–ಸಮಾಜದೊಳಗಿನ ಜನರ ಬದುಕು ಬವಣೆಗಳ ಕುರಿತು ಎಷ್ಟೆಲ್ಲ ವಸ್ತುನಿಷ್ಠ ವಿಶ್ಲೇಷಣೆಯನ್ನು ತನ್ನ ಮನದಾಳದ ಕೀರ್ತನೆಗಳಲ್ಲಿ ಸ್ಪಷ್ಟವಾಗಿ ಹೇಳಿದ್ದರೂ ಸಹ, ಮುಂದುವರೆದು ಅಂದಿನ ಸಂದರ್ಭದಲ್ಲಿನ ಸಾಮಾಜಿಕ ವಿಡಂಬನೆಗಳನ್ನು ವಸ್ತುನಿಷ್ಠವಾಗಿ ಚಾರಿತ್ರಿಕ ಹಿನ್ನೆಲೆಯಲ್ಲಿ ಅನಾವರಣಗೊಳಿಸಿದರೂ ಸಹ, ಅವರ ಕೀರ್ತನೆಯ ವಸ್ತುನಿಷ್ಠತೆಯ ವಿಡಂಬನೆಗೆ ವೈರಿಗಳಾಗಿದ್ದಂತಹ ವೈದಿಕರ ಬಹುದೊಡ್ಡ ಒಡ್ಡೊಲಗದಲ್ಲಿ ಹೇಗೆ..? ಯಾಕಾಗಿ...? ಉಳಿದುಕೊಂಡರು ಎಂಬ ಪ್ರಶ್ನೆ ಪ್ರತಿಯೊಬ್ಬರಲ್ಲಿಯೂ ಮೂಡುತ್ತದೆ. ಈ ಪ್ರಶ್ನೆಗೆ ನಿಖರವಾದ ಉತ್ತರ ಕನಕದಾಸರು ತಮ್ಮ ಚಿಂತನಾರ್ಹವಾದ ಕೀರ್ತನೆಗಳಲ್ಲಿ ವೈದಿಕರು ದೇವರ ಹೆಸರಿನಲ್ಲಿ ಈ ನೆಲದ ಬಹುಜನರಿಗೆ ಏನೆಲ್ಲಾ ಮೋಸ – ಅನ್ಯಾಯಗಳ ಮೂಲಕ ಪ್ರತಿಯೊಬ್ಬ ಮಾನವನಿಗೂ ಜೀವಿಸಲು ಸಿಗಬೇಕಾದ ಸಾಮಾನ್ಯ ಮಾನವ ಹಕ್ಕುಗಳನ್ನು ಸಂಪೂರ್ಣ ಉಲ್ಲಂಘನೆ ಮಾಡಿದ್ದನ್ನು ಕಠಿಣ ಭಾಷೆಯಲ್ಲಿ ವಸ್ತುನಿಷ್ಠವಾಗಿ ಹೇಳಿದರೂ ಸಹ ಅಂತಿಮವಾಗಿ ತನ್ನ ಎಲ್ಲಾ ಒಡಲಾಳದ ಬವಣೆಯ ಕೀರ್ತನೆಗಳನ್ನು ಅರ್ಪಣೆ ಮಾಡಿದ್ದು "ಆದಿಕೇಶವ"ನಿಗೆ ಎಂಬುದನ್ನು ಮರೆಯಬಾರದು.

ಆದಿ ಕೇಶವನಿಗೆ ಅರ್ಪಣೆ ಮಾಡಿದ ಕಾರಣಕ್ಕಾಗಿ ಹಾಗೂ ಬಹು ಮುಖ್ಯವಾಗಿ ಆದಿಕೇಶವನ ಆರಾಧಕರೇ ಈ ದೇಶದಲ್ಲಿ ಪ್ರಭುತ್ವದೊಂದಿಗೆ ಬೆಸೆದುಕೊಂಡು ಇಂದಿಗೂ ತಮ್ಮ ಉಜ್ವಲ ಅಸ್ಮಿತೆಯನ್ನು ಸ್ಥಾಪಿಸಲು ಮುಂದಾಗಿರುವ ಕಾರಣಕ್ಕಾಗಿ ಕನಕ ಇಂಥವರ ಮನಸ್ಸಿನ ಒಡ್ಡೋಲಗದಲ್ಲಿ ಉಳಿದ.

ಆದರೆ, ಕನಕನಿಗೂ ೩೦೦ ವರ್ಷಗಳಷ್ಟು ಪೂರ್ವದಲ್ಲಿಯೇ ಬಸವ – ಅಲ್ಲಮ – ಅಕ್ಕ – ಮಾದರ ಚೆನ್ನಯ್ಯ– ಡೋರಕಕ್ಕಯ್ಯ – ಸಮಗಾರ ಹರಳಯ್ಯ– ಚನ್ನಬಸವಣ್ಣ– ಸಿದ್ದರಾಮಯ್ಯ – ಹೊಲೆಯರ ಉಲ್ಲಿಂಗಪೆದ್ದಿ ಇವನ ಪತ್ನಿ ಕಾಳವ್ವೆ–ಆಯ್ದಕ್ಕಿ ಲಕ್ಕಮ್ಮ – ಅಮುಗೆ ರಾಯಮ್ಮ – ಸೂಳೇ ಸಂಕವ್ವೆ – ಬೊಂತದೇವಿ – ಇತರ ತಳ ಸಮುದಾಯದ ಶೈವ – ಲಿಂಗಾಯತ ವಚನಕಾರರು ೧೫ನೇ ಶತಮಾನದಲ್ಲಿ ಹೇಳಿದ ಕನಕನಿಗೂ ಮಾದರಿಯಾಗುವಂತೆಯೇ ದೇವರು, ದೇವರ ಹೆಸರಿನಿಂದ ತಮ್ಮ ಸ್ವಾರ್ಥ ಸಾಧನೆಯನ್ನು ಯಾವುದೇ ಶ್ರಮವಿಲ್ಲದೆ ದಕ್ಕಿಸಿಕೊಳ್ಳುತ್ತಿದ್ದವರು – ದೇವಸ್ಥಾನದ ಹೆಸರಿನಲ್ಲಿ ಬಹು ಜನರಿಗೆ ಮೋಸ ಮಾಡಿ ನಾವೇ ಶ್ರೇಷ್ಠರು ಎಂದು ತಮಗೆ ತಾವೇ ಅಜ್ಞಾನದ ಅಭೌತಿಕ ಕೋಟೆ ಕಟ್ಟಿಕೊಂಡಿದ್ದವರಿಗೆ– ಬೌದ್ಧಿಕ ಚಾಟಿ ಏಟನ್ನು ನೀಡುವ ಮೂಲಕ ಜ್ಞಾನದ ಕೋಟೆಯನ್ನು ನಿರ್ಮಿಸಿದರೂ ಸಹ ಅವರು ತಮ್ಮ ವಚನಗಳನ್ನು ಶಿವನಿಗೆ (ಕೂಡಲಸಂಗಮ – ಚನ್ನಮಲ್ಲಿಕಾರ್ಜುನ – ಗುಹೇಶ್ವರ... ಇತ್ಯಾದಿ ಇತ್ಯಾದಿ) ಅರ್ಪಿಸಿದ ಕಾರಣಕ್ಕಾಗಿ ಇವರ ವಚನಗಳು ಕನ್ನಡ ನಾಡಿನಲ್ಲಿ ಬಸಲಿಂಗಪ್ಪನವರ "ಕನ್ನಡ ಸಾಹಿತ್ಯ ಭೂಸ ಸಾಹಿತ್ಯ" ಎಂದು ಹೇಳಿದ ಅಂಗವಾಗಿ ನಡೆದ ಚಳುವಳಿ, ಈ ಬೌದ್ಧಿಕ ಚಳುವಳಿಯ ನಂತರ ಹುಟ್ಟಿಕೊಂಡ ಬಂಡಾಯ ಸಾಹಿತ್ಯದ ಉಗಮವಾಗುವವರೆಗೂ ಈ ರಾಜ್ಯದಲ್ಲಿ ಮರುಜೀವ ಪಡೆದಿರಲಿಲ್ಲ ಎಂಬ ಪ್ರಶ್ನೆಯೂ ಮೂಡುತ್ತದೆ ಹಾಗೂ ಕಾಡುತ್ತದೆ.

ಇದಕ್ಕೆ ಉತ್ತರವೂ ಸುಲಭ. ಕನಕ ಏನೆಲ್ಲ ವೈದಿಕ ಪರಂಪರೆಯ ಧಾರ್ಮಿಕ – ಸಾಮಾಜಿಕ ಕಟ್ಟುಪಾಡುಗಳ ವಿರುದ್ಧ ವಸ್ತುನಿಷ್ಠವಾಗಿ – ಜಾತೀಯತೆಯ ಕಲ್ಪನೆ ಕುರಿತಂತೆ "ಕುಲ ಕುಲ ಕುಲವೆಂದು ಹೊಡೆದಾಡದಿರಿ – ನಿಮ್ಮ ಕುಲದ ನೆಲೆಯನೇ ನಾದರೂ ಬಲ್ಲಿರಾ" ಎಂದು ಕೇಳಿದರೂ ಸಹ, ತಲೆಯಿಂದ ಹುಟ್ಟಿದವನು ಶ್ರೇಷ್ಠ, ಕೈಯಿಂದ ಹುಟ್ಟಿದವನು ಕ್ಷತ್ರಿಯ, ಹೊಟ್ಟೆಯಿಂದ ಹುಟ್ಟಿದವನು ವೈಶ್ಯ, ಕಾಲಿಂದ ಹುಟ್ಟಿದವನು ಶೂದ್ರ ಎಂಬ ಅವೈಜ್ಞಾನಿಕ ಹುಟ್ಟಿನ ಬಗ್ಗೆ ಮಾತನಾಡಿದವರಿಗೆ ಕನಕದಾಸರು ನೀಡಿದ ಸ್ಪಷ್ಟ ಮತ್ತು ನೇರ ಉತ್ತರ "ಹುಟ್ಟದ ಯೋನಿಗಳಿಲ್ಲ – ಮೆಟ್ಟದ ಭೂಮಿಗಳಿಲ್ಲ – ಉಟ್ಟು ಉಣ್ಣದ ವಸ್ತುಗಳಿಲ್ಲ" ಎಂದು. ಇಷ್ಟೆಲ್ಲಾ ಆದರೂ ಸಹ ಕನಕ ಅವರಲ್ಲಿ ಎಲ್ಲೋ ಬಿಟ್ಟು ಹೋಗದ ಹಾಗೆ ಉಳಿಸಿಕೊಂಡರು ಅಥವಾ ತಮ್ಮ ಲಾಭಕ್ಕಾಗಿ ಅವನನ್ನು ಉಳಿಸಿಕೊಂಡರು. ಏಕೆಂದರೆ, ಅವನು ಇವೆಲ್ಲವನ್ನು ಅರ್ಪಣೆ ಮಾಡಿದ್ದು ಮತ್ತದೇ ಪುರಾಣ ಕಲ್ಪಿತ ಆರಾಧ್ಯ ದೈವ ಎನಿಸಿಕೊಂಡಿರುವ ಆದಿಕೇಶವನಿಗೆ. ಅದೇ ವಚನಕಾರರು ವೈದಿಕ ಪರಂಪರೆಯ ವಿರುದ್ಧ ಮಾತನಾಡಿ, ಜಾತಿ ಸೃಷ್ಟಿ ಮಾಡಿ ಜಾತಿಯ ಹೆಸರಲ್ಲಿ ಮಾನವ ಹಕ್ಕುಗಳನ್ನೇ ಕಿತ್ತುಕೊಂಡಿದ್ದವರ ವಿರುದ್ಧ ಕಠಿಣ ಪದಗಳಲ್ಲಿ ಮಾತನಾಡಿ ಖಂಡಿಸಿ, ಕಾಯಕ ಸಿದ್ಧಾಂತದ ಮೂಲಕ ಸಮಸಮಾಜದ ಪರವಾಗಿ ಮಾತನಾಡಿ ಜನಮುಖಿ ಆಧಾರದಲ್ಲಿ ಅವರು ಹೇಳಿದ ಹಾಗೂ ಬರೆದ ವಚನಗಳನ್ನು ಅವರು ಅರ್ಪಣೆ ಮಾಡಿದ್ದು ಮಾತ್ರ ಮೇಲೆ ಹೇಳಿರುವಂತೆ ಶೈವ ಸಂಪ್ರದಾಯದ ಕೂಡಲ ಸಂಗಮ – ಮಲ್ಲಿಕಾರ್ಜುನ – ಗುಹೇಶ್ವರರಿಗೆ.

ಇದರಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ, ಭಾರತದ ಆರಂಭಿಕ ಸಾಂಸ್ಕೃತಿಕ ಚರಿತ್ರೆ ಬೌದ್ಧ ಹಾಗೂ ಜೈನ ಧರ್ಮಗಳ ನಡುವಿನ ಬಹುದೊಡ್ಡ ಸಂಘರ್ಷವಾದರೆ – ನಂತರದ್ದು ಶೈವ ಮತ್ತು ವೈಷ್ಣವರ ನಡುವಿನ ಬಹುದೊಡ್ಡ ಸಾಂಸ್ಕೃತಿಕ ಭಿನ್ನಾಭಿಪ್ರಾಯಗಳ ಬಿಡಿಸಲಾಗದ ಸಂಘರ್ಷ ಎಂಬುವುದು ಚಾರಿತ್ರಿಕವಾಗಿ ಸ್ಪಷ್ಟವಾಗುತ್ತದೆ. ಈ ಸ್ಪಷ್ಟತೆಯನ್ನು ಮೊದಲು ವಸ್ತುನಿಷ್ಠವಾಗಿ ಗ್ರಹಿಸಿದವರೇ ಭಾರತದ ನೆಲಮೂಲ ಚಿಂತನೆಯ ಮೊದಲ ಸಬಾಲ್ಟರ್ನ್ ಚರಿತ್ರೆಕಾರರಾದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರು.

ಈ ಶೈವ ಮತ್ತು ವೈಷ್ಣವ ಕಿತ್ತಾಟಗಳಿಂದಾಗಿಯೇ ಬಸವಣ್ಣ ಹಾಗೂ ಅವರ ಸಮಕಾಲೀನ ಯಾವ ವಚನಗಳು ಕನಕದಾಸ ಅಥವಾ ದಾಸ ಪರಂಪರೆಗೂ ೩೦೦ ವರ್ಷಗಳ ಪೂರ್ವದಲ್ಲಿಯೇ ರಚನೆಗೊಂಡಿದ್ದರೂ ಸಹ ವೈದಿಕ ಪರಂಪರೆಯವರು ಸ್ಥಾಪಿಸಿ ಆಶೀರ್ವಾದ ಮಾಡಿದ ಯಾವ ರಾಜ ಮನೆತನಗಳ ದರ್ಬಾರ್ ನಲ್ಲಿಯೂ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವಾಗಿ ಅಥವಾ ಕರ್ನಾಟಕ ಶಾಸ್ತ್ರೀಯ ಸಂಗೀತವಾಗಿ, ಮುಂದುವರೆದು ಇನ್ನಿತರ ಯಾವುದೇ ಸಂಗೀತದ ರೂಪಕವಾಗಿ ಪರಿವರ್ತನೆಗೊಂಡು ಹೇಳಿರುವುದಕ್ಕೆ ನಿದರ್ಶನವಿಲ್ಲ. ಇನ್ನೊಂದು ಮುಖ್ಯ ವಿಷಯವೆಂದರೆ ಸಾಮ್ರಾಜ್ಯ ಹಾಗೂ ಸಂಸ್ಥಾನಗಳಲ್ಲಿ ಸಂಗೀತವನ್ನು ಶಾಸ್ತ್ರಬದ್ಧವಾಗಿ ಹೇಳುತ್ತಿದ್ದವರೆಲ್ಲರೂ ಸಹ ಆದಿ ಕೇಶವನನ್ನೇ ಆರಾಧ್ಯ ದೈವೆಂದು ನಂಬಿದ ವೈಷ್ಣವರೇ ಆಗಿದ್ದು ಎಂಬುದು. ಈ ಹಿನ್ನೆಲೆಯಿಂದಾಗಿ ಸಂಗೀತ ಶಾಲೆಗಳಲ್ಲಿ – ಶಾಸ್ತ್ರೀಯ ಸಂಗೀತವಾಗಿ ಶರಣ ಶರಣಿಯರ ವಚನಗಳು ಮೂಡಿಬಂದ ಉದಾಹರಣೆಯಿಲ್ಲ. ಆದರೆ ಆದಿ ಕೇಶವನ ಇನ್ನೊಂದು ಹೆಸರಾದ ವಿಠ್ಠಲನಿಗೆ ಅರ್ಪಣೆ ಮಾಡಿ ಕೀರ್ತನೆಗಳನ್ನು ಹೇಳಿಯೇ ಪುರಂದರದಾಸ "ಕರ್ನಾಟಕ ಸಂಗೀತ ಪಿತಾಮಹ" ಎಂಬ ಬಿರುದನ್ನು ಅವರಿಂದಲೇ ಪಡೆದುಕೊಂಡ.

ಆದರೆ, ಕನಕ, ಪುರಂದರ ಕೀರ್ತನೆಗಳು ಮಾತ್ರ ಶತಮಾನಗಳಿಂದ ರಾಜರ ದರ್ಬಾರ್‌ಗಳಲ್ಲಿ ಹಿಂದೂಸ್ತಾನಿ – ಕರ್ನಾಟಕ ಶಾಸ್ತ್ರೀಯ ಸಂಗೀತಗಳಲ್ಲಿ ಮಿಂಚಿವೆ. ಅಷ್ಟೇ ಅಲ್ಲದೆ ಇನ್ನೂ ಮುಂದುವರೆದು ಪುರಂದರದಾಸರನ್ನು ಕರ್ನಾಟಕ ಸಂಗೀತದ ಪಿತಾಮಹರೆಂದು ಸಹ ಕರೆದುಕೊಂಡಿದ್ದಾರೆ. ಇಲ್ಲಿ ಶೈವ ಪರಂಪರೆಯ ವಚನಕಾರರು ಸಂಪೂರ್ಣವಾಗಿ ಗೌಣ. ಕನಕ ತಮ್ಮ ಕೀರ್ತನೆಗಳನ್ನು ಆದಿಕೇಶವನಿಗೆ ಅರ್ಪಣೆ ಮಾಡದೆ ಶೈವ ಹಿನ್ನೆಲೆಯ ದೇವರಿಗೆ ಅರ್ಪಣೆ ಮಾಡಿದ್ದರೆ ಇವನ ಸ್ಥಿತಿಯೂ ವಚನ ಹಾಗೂ ವಚನಕಾರರಿಗೆ ಆದಂತೆಯೇ ಹೀನಾಯ ಬದುಕು ಕಂಡು ಬರುತ್ತಿತ್ತು ಎಂಬುದಕ್ಕೆ ಇಂದಿನ ಬೌದ್ಧಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳೇ ಸಾಕ್ಷಿಯಾಗುತ್ತಿವೆ. ಈ ಎಲ್ಲ ಕುತಂತ್ರಗಳು ಸಹ ಈ ರಾಷ್ಟ್ರದ ಮೂಲನಿವಾಸಿ ಗೌತಮಬುದ್ಧನನ್ನು ವಿಷ್ಣುವಿನ ಅವತಾರವೆಂದು, ಶೈವಧರ್ಮ ಈ ನೆಲದ ಪ್ರಾಚೀನ ಧರ್ಮವಾದರೂ ಸಹ ಈ ನೆಲಕ್ಕೆ ಆಗಮಿಸಿದ ವೈದಿಕಧರ್ಮ ದೇವರ ಮೂಲಕ ವೈಭವವಾಗಿ ಸೃಷ್ಟಿಸಿದವರ ಕುತಂತ್ರವೇ ಸರಿ. ಈ ಹಂತದಲ್ಲಿ ಕಾಯಕ ಸಿದ್ಧಾಂತದ ಬೆವರು ಸೋತಿತು – ಈ ಬೆವರನ್ನೇ ಬಳಸಿಕೊಂಡು ಬೃಹತ್ ದೇವಾಲಯ –

ವಿಶಾಲ ಕೆರೆಗಳು – ಊರ ಮುಂದಿನ ಫಲವತ್ತಾದ ಭೂಮಿಯನ್ನು ಯಾವುದೇ ಶ್ರಮಪಡದೆ ಬಳುವಳಿಯಾಗಿ ಪಡೆದವರ ತೀರ್ಥ ಗೆದ್ದಿತು.

೩. ಕನಕದಾಸರ ಮಹತ್ವದ ಕೃತಿ ರಾಮಧಾನ್ಯ ಚರಿತ್ರೆ. ಈ ಕೃತಿಯ ಕುರಿತು ನನ್ನ ನಾಲ್ಕು ಅನಿಸಿಕೆಗಳು

ಇದು ಸಹ ದೇವಸ್ಥಾನದ ಒಡೆಯರು ಮತ್ತು ಭೂಮಿಯ ಉಳುಮೆ ಮಾಡುವ ರೈತರ ಕುರಿತು ಬಂದಂತಹ ವಸ್ತುನಿಷ್ಠವಾದ ವಿಷಯ ಒಳಗೊಂಡ ಕೃತಿ. ಕೃತಿಯ ಮುಖ್ಯ ಜೀವಾಳ ತೀರ್ಥ ಮತ್ತು ಬೆವರಿನ ನಡುವೆ ನಡೆಯುವ ಸುದೀರ್ಘವಾದ ಸಂಭಾಷಣೆಯ ಕಥೆ.

ಕನಕ ರಾಮಧಾನ್ಯ ಚರಿತ್ರೆಯ ಮೂಲಕ ತೀರ್ಥಕ್ಕೂ – ಬೆವರಿಗೂ ಇರುವ ವಸ್ತುನಿಷ್ಠವಾದ ಮೌಲ್ಯಗಳನ್ನು ಗುರುತಿಸಿದ್ದಾರೆ. ಈ ರೀತಿ ಗುರುತಿಸುವ ಮೂಲಕ ಕನ್ನಡ ನಾಡಿನ ಪ್ರಥಮ ಸಬಾಲ್ಟರ್ನ್ ಚಿಂತಕರಾಗಿ ಕಂಡುಬರುತ್ತಾರೆ.

ರಾಜನನ್ನು ಹೊಗಳಿ, ಅಟ್ಟಕ್ಕೇರಿಸಿ ದೇವಸ್ಥಾನ ಕಟ್ಟಿಸಿಕೊಂಡವರು – ಕೆರೆಯನ್ನು ಕಟ್ಟಿಸಿಕೊಂಡವರು, ವ್ಯವಸಾಯಕ್ಕಾಗಿ ಕೆರೆ ಕೆಳಗಡೆ ಫಲವತ್ತಾದ ಭೂಮಿಯನ್ನು ದೇವಸ್ಥಾನದ ಹೆಸರಿನಲ್ಲಿ ತಮ್ಮದಾಗಿಸಿಕೊಂಡವರು, ಈ ಭಾರತದ ಮೂಲ ನಿವಾಸಿಗಳನ್ನು ದೇವರ ಹೆಸರಲ್ಲಿ ತಮ್ಮವರನ್ನಾಗಿ ಮಾಡಿಕೊಂಡು ಅವರ ಶ್ರಮದ ಮೂಲಕ ಭತ್ತ ಬೆಳೆದು ವರ್ಷಪೂರ್ತಿ ಅನ್ನ ತಿನ್ನುತ್ತಿದ್ದರು..... ಹಾಗೂ ...ಆ ಕೆರೆ ಭೂಮಿ ತಮ್ಮದಲ್ಲದ, ಮಳೆಯಾಶ್ರಿತ ಪ್ರದೇಶವೇ ತಮ್ಮ ಭೂಮಿಯಾದಂತಹ ಈ ನಾಡಿನ ಮೂಲ ನಿವಾಸಿಗಳ ಭೂಮಿಯಲ್ಲಿ ಬೆಳೆದದ್ದು ಮಾತ್ರ ರಾಗಿ ಮತ್ತು ಜೋಳ ಇತರೆ ಮಳೆ ಆಶ್ರಿತ ದ್ವಿದಳ ಧಾನ್ಯಗಳು. ನೀರಾವರಿ ಭೂಮಿಯನ್ನೇ ಕಾಣದ ಕೆರೆಯ ನೀರನ್ನು ಮುಟ್ಟಿಸದ–ದೇವಾಲಯದೊಳಗೆ ಪ್ರವೇಶ ಮಾಡಿಸದ... ಇನ್ನೂ ಮುಂದುವರೆದು ಈ ರಾಷ್ಟ್ರದ ಮೂಲ ನಿವಾಸಿಗಳಿಗೆ ಕೆರೆಯ ಮೂಲಕ ನೀರಿನ ಆಶ್ರಯದ ಬೆಳೆಯಾಗಿರುವ ಭತ್ತವನ್ನು ಬೆಳೆಯುವುದಕ್ಕೂ ಅವಕಾಶ ನೀಡದೆ ತಮ್ಮ ಸ್ವತ್ತಾಗಿ ಕೊಂಡವರ ಜನರ ನಡುವೆ ನಡೆಯುವ ತಾತ್ವಿಕ ಶೈವ ಮತ್ತು ವೈಷ್ಣವ ತಿಕ್ಕಾಟದ ಜಗಳವೇ ರಾಮಧಾನ್ಯ ಚರಿತ್ರೆಯ ಮುಖ್ಯ ಜೀವಾಳ.

ಈ ಕೀರ್ತನೆಯಲ್ಲಿ ಭತ್ತ ವೈಷ್ಣವ ಸಂಕೇತವಾಗಿಯೂ – ರಾಗಿ ಶೈವ ಸಂಕೇತ ವಾಗಿಯೂ ವಸ್ತುನಿಷ್ಠವಾಗಿ ಚರ್ಚೆಗೆ ಎಡೆಯಾಗಿರುವುದು ಕಂಡುಬರುತ್ತದೆ. ಹಬ್ಬಗಳಲ್ಲಿ ಮಾತ್ರ ಅನ್ನ ಉಂಡ.. ಐನೋರು ಮತ್ತು ಒಕ್ಕಲಿಗರ ಗದ್ದೆಗಳಲ್ಲಿ ಸುಗ್ಗಿಯ ವೇಳೆ ದೇವರ ವರವೆಂದೇ ತೆಗೆದುಕೊಂಡು ಬಂದ ನನ್ನಪ್ಪ ... ಭತ್ತವನ್ನು ಮಡಿಕೆಯಲ್ಲಿ ಶೇಖರಿಸಿ ಹಬ್ಬದಲ್ಲಿ ಅಥವಾ ಅಪರೂಪದ ನೆಂಟರು ಅಥವಾ ಅಳಿಯ ಮನೆಗೆ ಬಂದಾಗ ಮಾತ್ರ ಅನ್ನವನ್ನು ಮಾಡಿ ನಮ್ಮ ತಾಯಂದಿರು ಬೇಯಿಸಿ ತಿನ್ನಿಸಿದ ಅನ್ನದ ಚರಿತ್ರೆ ನಮ್ಮಂತವರಿಗೆ ಸ್ಪಷ್ಟವಾಗಿ ಗೋಚರಿಸದೇ ಇರದು. ಬರೆಯುತ್ತಾ ಹೋದರೆ ಕನಕನ ಚಿಂತನೆ ಬಗ್ಗೆ ವಿಸ್ತೃತವಾಗಿ ಬರೆಯಬಹುದು. ಇರಲಿ ಇಷ್ಟು ಸಾಕು. ಏನೇ ಆಗಲಿ ಕನಕದಾಸರು ಕನ್ನಡ ನಾಡಿನ ಬಸವಣ್ಣನ ನಂತರದ ಬಹುದೊಡ್ಡ ಸಬಾಲ್ಟರ್ನ್ ಚಿಂತಕ. ಇದನ್ನು ಒಪ್ಪಿಕೊಳ್ಳಲು ನಮ್ಮ ರಾಷ್ಟ್ರೀಯ ಚರಿತ್ರೆಕಾರರು ಕಷ್ಟಪಡುತ್ತಾರೆ. ಅವರಿಗೆ ವಿದೇಶಿ ಚಿಂತಕರಾದ ಆಂಟನಿ ಗ್ರಾಂಸಿ ಅವರನ್ನು ಸಬಾಲ್ಟರ್ನ್ ಚಿಂತಕ–ಸಬಾಲ್ಟರ್ನ್ ಬರವಣಿಗೆಗಾರ ಎಂದು ಕರೆದುಕೊಳ್ಳುವುದಿರಲಿ ರಾಷ್ಟ್ರೀಯತೆಯನ್ನು ಪ್ರದರ್ಶಿಸುತ್ತಾರೆ. ಈ ದೇಶದ ಎಲ್ಲಾ ಪ್ರಥಮಗಳಿಗೂ "ತಾವೇ ಆಗಬೇಕು – ಅದಿಲ್ಲದಿದ್ದರೆ ಅವರು ಸಾಂಸ್ಕೃತಿಕವಾಗಿ ಅವಿನಾಭಾವ ಸಂಬಂಧವನ್ನು ಹೊಂದಿರುವ ಪಶ್ಚಿಮದ ಚಿಂತಕರೆ ಆಗಬೇಕು". ಯಾವ ಕಾರಣಕ್ಕೂ ಈ ನೆಲ ಮೂಲ ಸಂಸ್ಕೃತಿಯ ಸಾಧಕರನ್ನು ಪ್ರಥಮ ಸಾಧಕರು ಎಂದು ಇವರು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಇದಕ್ಕೆ ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಹ ಹೊರತಾಗಿದ್ದಲ್ಲ. ಏಕೆಂದರೆ ಇಲ್ಲಿನ ಮೂಲ ನಿವಾಸಿಗಳ ಸಾಂಸ್ಕೃತಿಕ ಹಿನ್ನೆಲೆಯ ಬೌದ್ಧಿಕ ನೋಟ ತೆರೆದ ಮನಸ್ಸಿನಿಂದ ದೇಶ ಹಾಗೂ ದೇಶವಾಸಿಗಳನ್ನು ನೋಡಿದ್ದು ಆಗಿರುತ್ತದೆ. ದೇವರು ಹಾಗೂ ದೇವರ ಕೇಂದ್ರಿತ ಧರ್ಮದ ಹಿನ್ನೆಲೆಯಲ್ಲಿ ದೇಶ ಹಾಗೂ ದೇಶವಾಸಿಗಳನ್ನು ನೋಡಿದ್ದು ಅಂಧಕಾರದ ಮುಚ್ಚಿದ ಕಣ್ಣಿನಿಂದ ಎಂಬುದನ್ನು ಬರೆಯಬೇಕಾಗಿದೆ. ಇದನ್ನು ತಮ್ಮ ಕೀರ್ತನೆಗಳ ಮೂಲಕ ಸ್ಪಷ್ಟಪಡಿಸಿದವರೇ ಈ ನೆಲದ ಜನರ ಬದುಕಿನ ಸಾಧಕ ಬಾಧಕಗಳನ್ನು ಅನಾವರಣಗೊಳಿಸಿದ ಸರದಾರ ಕನಕದಾಸರು. ಕನ್ನಡ ನಾಡಿನ ಭೂಪ್ರದೇಶದ ಸಮಾಜಮುಖಿ ಚಿಂತನೆಯ ಚರಿತ್ರೆಯನ್ನು ರೂಪಿಸಿದ ಕೀರ್ತನೆಕಾರ ಕನಕದಾಸರು ಕನ್ನಡ ನಾಡು ಕಂಡ ಸಬಾಲ್ಟರ್ನ್ ಚಿಂತಕರು.

ಅವರ ಕೀರ್ತನೆಗಳಲ್ಲಿ ಜನರಿದ್ದರೆ – ಜನರ ಬದುಕಿದೆ – ಅವರು ದೇವರನ್ನು ಸೃಷ್ಟಿಸಿರುವ ಹಾಗೂ ತಮ್ಮ ಅನುಕೂಲಕ್ಕೆ ಈ ಜನರನ್ನು ಬಳಸಿಕೊಳ್ಳಲು ಸಾಮಾಜಿಕ ಮತ್ತು ಧಾರ್ಮಿಕ ಶ್ರೇಣೀಕೃತ ವ್ಯವಸ್ಥೆಯ ಮೂಲಕ ಹುನ್ನಾರ ಮಾಡಿದವರಿಂದಾಗುವ ಅಮಾನವೀಯ ಆಚರಣೆಗಳ ವಿಸ್ತೃತ ನೋಟವಿದೆ. ಶೋಷಣೆ ಇದೆ, ಹಸಿವಿದೆ, ಬಡತನವಿದೆ ಇದಕ್ಕೆ ಕಾರಣವಾದ ಮೂಲಭೂತವಾದಿಗಳ ಬಗ್ಗೆ ಕಠಿಣವಾದ ನಿಂದನೆ ಇದೆ. ತನ್ನ ಮೂಲನಿವಾಸಿಗಳು ಈ ನಿಂದನೆಯಿಂದ ಹೊರಬರುವ ಪರಿಹಾರವೂ ಇದೆ.

ಡಾ. ಬಿ. ಆರ್. ಅಂಬೇಡ್ಕರ್ ಅವರು ಹೇಳಿದ ಹಾಗೆ ಶಿಕ್ಷಣ ನಮ್ಮೆಲ್ಲರ ಮನೆಯ ಸ್ವತ್ತಾಗಬೇಕು ಎಂಬುದು. ಇದೊಂದೇ ಕನಕದಾಸರನ್ನು ಅರ್ಥ ಮಾಡಿಕೊಳ್ಳಲು ಇರುವಂತಹ ಮೂಲಧಾತು. ಶಿಕ್ಷಣವನ್ನು ತಮ್ಮ ಪಾರಂಪರಿಕ ಸ್ವತ್ತಾಗಿ ಶತಶತಮಾನಗಳಿಂದಲೂ ಮಾಡಿಕೊಂಡಿದ್ದವರು ಕನಕನ ಬಗ್ಗೆ ಬರೆದರು, ವಿಶ್ಲೇಷಣೆ ಮಾಡಿದರು, ವಿಮರ್ಶೆ ಮಾಡಿದರು ಸರಿ. ಆದರೆ ಇಂದು ಸಂವಿಧಾನದ ಆಶಯದಂತೆ ಚರಿತ್ರೆಯ ಪುನರ್ ವ್ಯಾಖ್ಯಾನ ಹಾಗೂ ಪುನರ್ ರಚನೆಯ ಸಂದರ್ಭದಲ್ಲಿ ಜೀವಿಸುತ್ತಿರುವ ಪ್ರತಿಯೊಬ್ಬರೂ ಸಹ ಕನಕದಾಸರನ್ನು ಒಂದಷ್ಟು ಜನಮುಖಿ ಚಿಂತನೆಯ ಮೂಲಕ ವಿಶ್ಲೇಷಣೆ ಮಾಡಬೇಕಾಗಿದೆ. ಹೀಗಾದಾಗ ಮಾತ್ರ ಕನಕ ಕನ್ನಡ ನಾಡಿನಲ್ಲಿ ಮತ್ತೊಮ್ಮೆ ಬೌದ್ಧಿಕವಾಗಿ ಹುಟ್ಟಿ ಎಲ್ಲರನ್ನೂ ಪರಿವರ್ತನೆ ಮಾಡುತ್ತಾರೆ.

ಎನ್. ಚಿನ್ನಸ್ವಾಮಿ ಸೋಸಲೆ
ಪ್ರಾಧ್ಯಾಪಕರು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
Email : drsosale@gmail.com

ಪ್ರೀತಿಯ ಅಂಗಡಿ

ದ್ವೇಷದ ಸಂತೆಯಲ್ಲಿ
ಪ್ರೀತಿಯ ಅಂಗಡಿ ತೆರೆಯುತ್ತಾನಂತೆ,
ನಿನಗೆಲ್ಲೋ ಹುಚ್ಚೊ ಹುಡುಗ,
ಇಲ್ಲಿ ಗೆಲ್ಲಬೇಕೆಂದರೆ
ಮಾತಿಗೆ ಸಿಹಿ ಲೇಪ ಹಚ್ಚಬೇಕು,
ಮೇಲಕ್ಕೆ ಏರಬೇಕೆಂದರೆ
ಮಾತಿನ ಮಂಟಪ ಕಟ್ಟಿ
ಧರ್ಮದ ಪುತ್ಥಳಿ ಇಡಬೇಕು,
ನಿನಗೆ ಭವಿಷ್ಯ ಬೇಕೆಂದರೆ
ಇತಿಹಾಸದ ಗೋರಿ ಅಗೆಯಬೇಕು,
ನೀನಿನ್ನು ಹಸಿರು ಸಮೃದ್ಧಿಯ ಸಂಕೇತ
ಎಂದು ನಂಬಿದ್ದೀಯಾ...
ಹುಡುಗ ಎಂದಾದರೂ
ಊಸರವಳ್ಳಿಯ ಕಂಡಿದ್ದೀಯಾ..
ಇಲ್ಲವೆಂದಾದರೆ ಟಿವಿ ಹಚ್ಚು,
ಬಿಡು, ಬಿಟ್ಟು ಬಿಡು,
ನಿನ್ನ ಕನಸ ಬದಿಗಿಡು,
ಧರ್ಮದ ಅಮಲೇರಿದ ನಾಡಿನಲ್ಲಿ
ಪ್ರೀತಿಯ ನಾಣ್ಯ ನಡೆಯುವುದಿಲ್ಲ,
ದ್ವೇಷದ ಬೆಂಕಿ ಆರದ ಹೊರತು
ಪ್ರೇಮದ ಹೂವು ಅರಳುವುದಿಲ್ಲ.

ಸಂತೋಷ್ ಕುಂದಾಡಿ
ಸಹಾಯಕ ಪ್ರಾಧ್ಯಾಪಕರು, ಹೂವಿನ ಹಡಗಲಿ
Email : santhoshundadi1982@gmail.com

ಜಾನಪದ ಜಗತ್ತು

ಜಾನಪದಕ್ಕೆ ಮೀಸಲಾದ ಪತ್ರಿಕೆ

ಸಂಪುಟ : 43 ಸಂಚಿಕೆ : 2 ರಿಂದ 6, ಸಂಪುಟ : 44 ಸಂಚಿಕೆ : 1 ರಿಂದ 6
ಏಪ್ರಿಲ್ 2022 ರಿಂದ ಡಿಸೆಂಬರ್ 2023ರವರೆಗೆ



ದೀಪಾವಳಿ ವಿಶೇಷ ಸಂಯುಕ್ತ ಸಂಚಿಕೆ

Scanned with OKEN Scanner

ಜಾನಪದ ಜಗತ್ತು

ಜಾನಪದಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು
ಪ್ರೊ. ಹಿ.ಶಿ. ರಾಮಚಂದ್ರೇಗೌಡ

ಸಂಪಾದಕರು
ಪ್ರೊ. ಹಿ.ಚಿ. ಬೋರಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ನಂ. 1, ಜಲದರ್ಶಿನಿ ಲೇಔಟ್, ಎಂ.ಎಸ್. ರಾಮಯ್ಯ ಆಸ್ಪತ್ರೆ ಮುಖ್ಯ ಗೇಟ್ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054. ದೂರವಾಣಿ : 080–23605033
E-mail : kjp@janapadaloka.in, Website : www.janapadaloka.in

Scanned with OKEN Scanner

JANAPADA JAGATTU (The World of Folklore) -
Chief Editer **Prof. Hi.Shi. Ramachandregowda** Edited by **Prof. Hi.Chi Boralingiah**

Published by
KARNATAKA JANAPADA PARISHAT
Janapada Siri Bhuvana, No. 1, Jaladarshini Layout,
Near M.S. Ramaiah Hospital Main Gate, New BEL Road,
Bengaluru - 560 054. Phone : 080-23605033
E-mail : kjp@janapadaloka.in, Website : www.janapadaloka.in

Volume : 43 & 44

Issue : April 2022 to December 2023

Page : 104+12

Price : Rs. 100/-

ISSN : 5282-3906

Text Layout :
G.V. Dhananjaya

ಮುದ್ರಣ :
ಉಷಾ ಗ್ರಾಫಿಕ್ಸ್
ಗೋವಿಂದರಾಜನಗರ, ಬೆಂಗಳೂರು – 560 079.
ಮೊಬೈಲ್ : 98444 67351

Scanned with OKEN Scanner

ಪರಿವಿಡಿ

1.	ಆಶಯ ನುಡಿ	– ಪ್ರೊ. ಹಿ.ಶಿ. ರಾಮಚಂದ್ರೇಗೌಡ	07
2.	ಮಣ್ಣಿನ ಮಗನಿಗೊಂದು ನಮನ	– ಪ್ರೊ. ಹಿ.ಚಿ. ಬೋರಲಿಂಗಯ್ಯ	09
3.	ಸಬಾಲ್ಟರ್ನ್ ಅಧ್ಯಯನ : ಜಾನಪದವನ್ನು ಅರ್ಥೈಸುವ ಪರ್ಯಾಯ ಹಂಬಲ	– ಡಾ. ಎ.ಎಸ್. ಪ್ರಭಾಕರ	23
4.	ದೇವಿ ಮಹಾತ್ಮೆ : ಬಹುಪಠ್ಯಗಳ ಸಾಂಸ್ಕೃತಿಕ ರಾಜಕಾರಣ ಮತ್ತು ಸಮಕಾಲೀನ ಮುಖಾಮುಖಿ	– ಡಾ. ಅರುಣ್ ಜೋಳದಕೂಡ್ಲಿಗಿ	36
5.	ವಸಾಹತುಶಾಹಿ ಪ್ರತಿರೋಧದ ಕುರುಹು : ಜನಪದ ನಾಯಕರು	– ಡಾ. ವಿಜಯಲಕ್ಷ್ಮಿ ಮನಾಪುರ	41
6.	ನೀನ್ಯಾರಿಗಲ್ಲದವಳು	– ಡಾ. ಎಂ. ಕೆಂಪಮ್ಮ ಕಾರ್ಕಹಳ್ಳಿ	46
7.	ಇರುಳಿಗರು : ದೇವರು	– ಡಾ. ಎಂ. ಬೈರೇಗೌಡ	52
8.	ಸಾರು ಸಹಸ್ರಾರು	– ಪ್ರೊ. ರಹಮತ್ ತರೀಕೆರೆ	73
9.	ಎಚ್.ಎಲ್. ನಾಗೇಗೌಡರು ಅನುವಾದಿಸಿದ "ಎಲ್ವಿನ್ನರ ಗಿರಿಜನ ಪ್ರಪಂಚ"	– ಡಾ. ಕರೀಗೌಡ ಬೀಚನಹಳ್ಳಿ	80
10.	ಕೌಜಲಗಿ ನಿಂಗವ್ವನೆಂಬ ಪಾರಿಜಾತ	– ಡಾ. ಸುಜಾತ ಅಕ್ಕಿ	87
11.	ಹಾಡುವ ಹಕ್ಕಿ ತಂಬೂರಿ ರಾಜಮ್ಮ	– ಅಪ್ಪಗೆರೆ ಸೋಮಶೇಖರ್	93
12.	ಪುಸ್ತಕ ಪರಿಚಯ : ಬೆಳ್ದಿಂಗ್ಳಪ್ಪನ ಪೂಜೆ	– ಹಿ.ಚಿ.ಬೋ.	97
13.	ಹಿರಿಜನ ಲೋಕದ ಸೋಜಿಗ	– ಡಾ. ಶಿವರಾಜ್ ಬ್ಯಾಡರಹಳ್ಳಿ	99
14.	**ನಾಡೋಜ ಎಚ್.ಎಲ್. ನಾಗೇಗೌಡ ಕಲಾ ಶಾಲೆ ಬಗ್ಗೆ**		103



Scanned with OKEN Scanner

ಸಬಾಲ್ಟ್ರನ್ ಅಧ್ಯಯನ : ಜಾನಪದವನ್ನು ಅರ್ಥೈಸುವ ಪರ್ಯಾಯ ಹಂಬಲ

○ ಡಾ. ಎ.ಎಸ್. ಪ್ರಭಾಕರ

'ಸಬಾಲ್ಟ್ರನ್' ಅಧ್ಯಯನವೆಂದರೆ ಅದೊಂದು ಅಲಕ್ಷಿತ ಸಮುದಾಯಗಳನ್ನೂ ಸಂಸ್ಕೃತಿಯನ್ನೂ ಕುರಿತ ಚಿಂತನೆ ಎಂಬುದು ಮೇಲ್ನೋಟದ ಮಾತು. ಅದನ್ನು ಮೀರಿ ಅದೊಂದು ಸಾಮಾಜಿಕ, ಚಾರಿತ್ರಿಕ ಮತ್ತು ರಾಜಕೀಯ ಹಿನ್ನೆಲೆಯ ಮಾನವಶಾಸ್ತ್ರೀಯ ಅಧ್ಯಯನ ಎಂಬುದನ್ನು ಜಾಗತಿಕ ಅಧ್ಯಯನಗಳ ಉದಾಹರಣೆ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ. ಬುಡಕಟ್ಟು ಹಾಗೂ ಸಂಸ್ಕೃತಿ ಅಧ್ಯಯನ ಕ್ಷೇತ್ರದ ಯುವ ಚಿಂತಕರಾದ ಎ.ಎಸ್. ಪ್ರಭಾಕರ ಈ ಲೇಖನ ಬರೆದಿದ್ದಾರೆ.

ಕಳೆದ ಹಲವು ದಶಕಗಳಿಂದ 'ಸಬಾಲ್ಟ್ರನ್' ಎಂಬ ಪದವನ್ನು ರಾಜಕೀಯ, ಚರಿತ್ರೆ ಮತ್ತು ಸಾಮಾಜಿಕ ಅಧ್ಯಯನಗಳ ಸಂದರ್ಭದಲ್ಲಿ ಬಳಸುತ್ತಾ ಬಂದಿದ್ದೇವೆ. ಆಂತೋನಿ ಗ್ರಾಮ್ಷಿಯಿಂದ ಬಳಕೆಗೆ ಬಂದ 'ಸಬಾಲ್ಟ್ರನ್' ಮತ್ತು 'ಹೆಜಿಮೊನಿ' ಎಂಬ ಎರಡು ಪರಿಭಾಷೆಗಳು ಇಟಲಿಯ ನಿರ್ದಿಷ್ಟ ರಾಜಕೀಯಾರ್ಥಿಕ ಸಂದರ್ಭದಲ್ಲಿ ರೂಪಗೊಂಡವುಗಳು. ಅದರಲ್ಲೂ 'ಸಬಾಲ್ಟ್ರನ್' ಎಂಬ ಪರಿಭಾಷೆಯನ್ನ ನಾವು ಸಾಂಸ್ಕೃತಿಕ ನೆಲೆಯಲ್ಲಿ ಅರ್ಥ ಮಾಡಿಕೊಂಡಿರುವುದೇ ಹೆಚ್ಚು. ಆದರೆ 'ಸಬಾಲ್ಟ್ರನ್' ಎಂಬುದು ಅದರ ಹುಟ್ಟಿನಲ್ಲಿ ಶುದ್ಧ ರಾಜಕೀಯ ಕಾರಣಗಳಿಗಾಗಿ ರೂಪಗೊಂಡ ಪರಿಭಾಷೆಯಾಗಿದೆ. ಇಟಲಿಯ ಮಾರ್ಕ್ಸ್‌ವಾದಿ ಚಳುವಳಿಗಾರ ಗ್ರಾಮ್ಷಿ ತನ್ನ ಅಪಾರ ಓದು ಮತ್ತು ಅವಿರತ ಹೋರಾಟಗಳ ಅನುಭವಗಳ ಮೂಲಕ ಮಾರ್ಕ್ಸ್‌ವಾದಿ ಓದಿಗೆ ಮತ್ತು ಹೋರಾಟಗಳ ಸ್ವರೂಪಕ್ಕೆ ಭಿನ್ನ ನೆಲೆಗಳನ್ನು ಕಂಡುಕೊಳ್ಳಲು ಯತ್ನಿಸಿದವನು. ಗ್ರಾಮ್ಷಿ ಬದುಕುತ್ತಿದ್ದ ಕಾಲಘಟ್ಟದಲ್ಲಿ ಯುರೋಪ್‌ನ ಆಳುವ ವರ್ಗ ಊಳಿಗಮಾನ್ಯ ಮತ್ತು ಬಂಡವಾಳಶಾಹಿ ಪ್ರಣೀತ 'ಮೌಲ್ಯಗಳನ್ನು' ಜನ ಬದುಕಿನ ಮೇಲೆ ಹೇರಲಾರಂಭಿಸಿತ್ತು. ಒಂದೆಡೆ ಕ್ಯಾಥೊಲಿಕ್ ಚರ್ಚ್‌ನ ಮೂಲಭೂತವಾದ, ಇನ್ನೊಂದೆಡೆ ಊಳಿಗಮಾನ್ಯ ವ್ಯವಸ್ಥೆಯ ಕ್ರೂರ ದಮನಗಳು, ಮಗುದೊಂದೆಡೆ ಈ ಇಬ್ಬರೂ ರೂಢ ರಾಕ್ಷಸರನ್ನು ಬಳಸಿಕೊಂಡು ಫ್ಯಾಸಿಸಂನ್ನು ಸನ್ನದ್ಧಗೊಳಿಸುತ್ತಿದ್ದ ಬಂಡವಾಳಶಾಹಿ. ಇಟಲಿಯ ಬಹುಸಂಖ್ಯಾತ ದುಡಿವ ವರ್ಗ ಈ ಚಕ್ರಸುಳಿಯಲ್ಲಿ ನಲುಗುತ್ತಿದ್ದ ಸಂಕೀರ್ಣ ಕಾಲಘಟ್ಟದಲ್ಲಿ ಸ್ಥಳಿಯ ಪುರೋಗಾಮಿ ಸಂಘಟನೆಗಳು ವಿಭಿನ್ನ ಪರಿಭಾಷೆ ಮತ್ತು ಹೊಸ ಸಾಮಾಜಿಕ ವ್ಯಾಕರಣಗಳನ್ನು ಕಂಡುಕೊಳ್ಳುವ ಅನಿವಾರ್ಯತೆಗಳನ್ನು ಎದುರಿಸುತ್ತಿದ್ದವು. ಇಟಲಿಯನ್ನೂ ಒಳಗೊಂಡಂತೆ ಇಡೀ ಯುರೋಪ್ ಬಂಡವಾಳಶಾಹಿಯ ಹೊಸ ರಾಜಕೀಯ ತಂತ್ರಗಾರಿಕೆಗೆ ಬೆಚ್ಚಿಬಿದ್ದಿತ್ತು. ಇಂತಹ ಸಂದರ್ಭದಲ್ಲಿ ಇಟಲಿಯ ಸಮಾಜವಾದಿ ಸಂಘಟನೆಗಳು ಹಳೆಕಾಲದ ರಾಜಕೀಯ ಪ್ರಮೆಯಗಳನ್ನೇ ನೆಚ್ಚಿಕೊಂಡಿದ್ದವು.

ಗ್ರಾಮ್ಷಿ ಟಿಪಿಕಲ್ ಮಾರ್ಕ್ಸ್‌ವಾದಿಯಲ್ಲ. ರಷ್ಯಾದ ಕ್ರಾಂತಿ ಮತ್ತು ಲೆನಿನ್, ಮಾರ್ಕ್ಸ್‌ವಾದವನ್ನು ತನ್ನ ವರ್ತಮಾನದ ರಾಜಕಾರಣಕ್ಕೆ ತಕ್ಕಂತೆ ವಿಸ್ತರಿಸಿದ ಉದಾಹರಣೆಗಳಿಂದ ಪ್ರಭಾವಿತನಾದವನು. ಮಾರ್ಕ್ಸ್‌ವಾದದ ಗಿಳಿಪಾಠ ಒಪ್ಪಿಸುತ್ತಿದ್ದ ಮತ್ತು ಅನುಕರಿಸುತ್ತಿದ್ದ ಕಮ್ಯುನಿಷ್ಟರಿಂದ ಗ್ರಾಮ್ಷಿ ದೂರವೇ ಉಳಿದ. ರಷ್ಯಾದ ಜನರ ನಿತ್ಯದ ಬದುಕಿಗೆ ಬೇಕಾದ ಪ್ರಮೆಯಗಳನ್ನು ಮಾರ್ಕ್ಸ್‌ವಾದದಿಂದಲೇ ಹೆಕ್ಕಿ ಸಮಗ್ರ ಬದಲಾವಣೆಯನ್ನು ತಂದ ಲೆನಿನ್ ಪ್ರಯೋಗವನ್ನು ಗ್ರಾಮ್ಷಿ ಇಟಲಿಯಲ್ಲಿ ವಿಭಿನ್ನವಾಗಿ ಅನ್ವಯಿಸತೊಡಗಿದ. 'ಇಟಲಿಯ ಜನರ ಬದುಕಿನ ಅನುಭವದ ಮೂಲಕ ಮಾರ್ಕ್ಸ್‌ವಾದವನ್ನು ಪುನರ್‌ರೂಪಿಸಿಕೊಳ್ಳುವುದು. ಮಾರ್ಕ್ಸ್‌ವಾದದ ವಿಚಾರಗಳ ಆಧಾರದಲ್ಲಿ ಇಟಲಿಯ ಜನರ ಬದುಕನ್ನು ರೂಪಿಸುವ ಕಾರ್ಯಕ್ರಮಗಳನ್ನು ರಚಿಸಿಕೊಳ್ಳಬೇಕು'[1] ಎಂಬ ಆಶಯದ ಮೂಲಕ ಗ್ರಾಮ್ಷಿ ಮಾರ್ಕ್ಸ್‌ವಾದವನ್ನು ವರ್ತಮಾನಕ್ಕೆ ಅಣಿಗೊಳಿಸುತ್ತಾನೆ. ಇಟಲಿಯ ಉತ್ತರ ಭಾಗದ ಕಾರ್ಮಿಕರು ಮತ್ತು ದಕ್ಷಿಣ ಭಾಗದ ಹತಭಾಗ್ಯ ಕೃಷಿಕರ ದುಮ್ಮಾನಗಳನ್ನು ಬೆಸೆದು ನವಸಮಾಜದ ನಿರ್ಮಾಣಕ್ಕೆ ಗ್ರಾಮ್ಷಿ ಅಡಿಗಲ್ಲು ಹಾಕಲು ಯತ್ನಿಸುತ್ತಾನೆ. ಜಗತ್ತಿನ ಎಲ್ಲ ಶೋಷಿತರ ಮಿಡಿತಗಳಿಗೆ ಮಾರ್ಕ್ಸ್‌ವಾದವನ್ನು ಮೂಲಭಿತ್ತಿಯಾಗಿಸುವ ಅಭೂತಪೂರ್ವ

ಪ್ರಯತ್ನವಿದು. ಗ್ರಾಮ್ಷಿ ತನ್ನ ಪ್ರಯತ್ನದಲ್ಲಿ ಯಶಸ್ಸು ಕಂಡನೆಂಬುದಕ್ಕೆ ಸಮಕಾಲೀನ ರಾಜಕೀಯ ಚಿಂತನೆಗಳೇ ಸಾಕ್ಷಿಗಳನ್ನೊದಗಿಸುತ್ತವೆ. ಗ್ರಾಮ್ಷಿ ಬಹುಸಂಖ್ಯಾತ ಶೋಷಿತರ ವರ್ಗ ಹಿತಾಸಕ್ತಿಯ ಭಾಗವಾಗಿ ರೂಪಿಸಿದ 'ಸಬಾಲ್ಟರ್ನ್' ಮತ್ತು 'ಹೆಜಿಮೊನಿ' ಎಂಬ ರಾಜಕೀಯ ಪರಿಭಾಷೆಗಳು ಚಳುವಳಿ ರಾಜಕಾರಣ ಮತ್ತು ಸಮಕಾಲೀನ ಶೈಕ್ಷಣಿಕ ವಿಧಾನಗಳೆರಡನ್ನೂ ಪ್ರಭಾವಿಸಿದವು. ಗ್ರಾಮ್ಷಿಯ ಮರಣಾನಂತರ, ಯೂರೋಪ್, ಅಮೇರಿಕಾ ಮತ್ತು ದಕ್ಷಿಣ ಏಷಿಯಾದ ಚಿಂಕರನ್ನು 'ಗ್ರಾಮ್ಷಿಯನ್ ಮಾರ್ಕ್ಸ್‌ವಾದ' ಪ್ರಭಾವಿಸಿದೆ.

ಮೊದಲಿಗೆ, ಮಾರ್ಕ್ಸ್ ಮತ್ತು ಗ್ರಾಮ್ಷಿಗೂ ಮುನ್ನ ಇದ್ದ ಯುರೋಪ್ ಮತ್ತು ಅದರ ವಸಾಹತು ರಾಜಕಾರಣಗಳ ಚಾರಿತ್ರಿಕತೆಯನ್ನು ಗಮನಿಸುವುದೊಳಿತೆನ್ನಿಸುತ್ತದೆ. ಪುನರುಜ್ಜೀವನದ ನಂತರದ ಯುರೋಪಿನಲ್ಲಾದ ಜ್ಞಾನದ ಹರಿವು, ಬಂಡವಾಳಶಾಹಿ ಆರ್ಥಿಕತೆಯ ಬೆಳವಣಿಗೆ, ಈ ಆರ್ಥಿಕತೆಯ ಒಳಗೆ ರೂಪಗೊಂಡ ದಮನ ಮತ್ತು ಹಿಂಸೆಗಳು ಜನಬದುಕಿನ ನಡುವೆ ಅನೇಕ ತಲ್ಲಣಗಳನ್ನು ಸೃಷ್ಟಿಸಿದ್ದವು. ಬಂಡವಾಳಶಾಹಿಯು ಜ್ಞಾನದ ವಿವಿಧ ಪ್ರಕಾರಗಳಲ್ಲಿ ತನಗೆ ಪೂರಕವಾದ ತಿಳುವಳಿಕೆಯನ್ನೇ ಲೋಕೋತ್ತರ ಸಂಗತಿಯೆಂದು ಸಂಚಯಿಸಲಾರಂಭಿಸಿತ್ತು. ಜೊತೆಗೆ ಬಂಡವಾಳವಾದ, ತನ್ನ ಮಾರುಕಟ್ಟೆ ವಿಸ್ತರಣೆಗೆ ಅಡ್ಡಿಯನ್ನುಂಟು ಮಾಡುವ ಎಲ್ಲಾ ಬಗೆಯ ಪ್ರತಿರೋಧಗಳನ್ನು ಕ್ರೂರ ಹಿಂಸೆಗಳ ಮೂಲಕ ನಿವಾರಿಸಿಕೊಳ್ಳಲೆತ್ನಿಸುತ್ತಿತ್ತು. ಬಂಡವಾಳವು ತನ್ನ ವಿಸ್ತರಣೆಯನ್ನು ಅನೇಕ ಜ್ಞಾನ ಕ್ರಮದ ಮೂಲಕ ಮತ್ತು ಕ್ರೂರ ದಮನಗಳ ಮೂಲಕ ಸಮರ್ಥಿಸಿಕೊಳ್ಳಲು ಯತ್ನಿಸಿತು. ಹೀಗಾಗಿ ಅಧುನಿಕ ಯುರೋಪಿನ ಚರಿತ್ರೆಯನ್ನು, ಅದು ಬಂಡವಾಳಶಾಹಿ ತನ್ನ ರಕ್ಷಣೆಗಾಗಿ ಹೂಡಿದ ಯುದ್ಧಗಳು ಮತ್ತು ಹುಟ್ಟು ಹಾಕಿದ ಜನವಿರೋಧಿ ಜ್ಞಾನಕ್ರಮಗಳ ಹೊರತಾಗಿಸಿ ನೋಡಲಾಗುವುದಿಲ್ಲ. ಈ ಕಾರಣಕ್ಕಾಗಿಯೇ ಚರಿತ್ರೆಯಲ್ಲಿ ಈಗಾಗಲೇ ಹೆಸರಿಸಲ್ಪಟ್ಟಿರುವ ಎರಡು ಜಾಗತಿಕ ಯುದ್ಧಗಳನ್ನು ಮತ್ತು ಅವುಗಳ ಕೇಡುಗಳನ್ನು ಆಧುನಿಕ ಜಗತ್ತು ಅನುಭವಿಸುತ್ತಲೇ ಇದೆ. ಬಂಡವಾಳವಾದ ತನ್ನ ಜಾಗತಿಕ ವಿಸ್ತರಣೆಗಾಗಿ ಮುಂದಾದ ಮೇಲೆ ಜಗತ್ತಿನ ಯಾವುದೋ ಒಂದು ಭಾಗದಲ್ಲಿ ಯುದ್ಧಗಳು ಇಂದಿಗೂ ಚಾಲ್ತಿಯಲ್ಲಿವೆ. ಹೀಗಾಗಿ ಬಂಡವಾಳಶಾಹಿ ವ್ಯವಸ್ಥೆ ಕೇವಲ ಎರಡು ಜಾಗತಿಕ ಯುದ್ಧಗಳನ್ನು ಮಾತ್ರ ಮಾಡಿ ವಿರಮಿಸಿದೆ ಎಂದು ಭಾವಿಸಿದರೆ ತಪ್ಪಾಗುತ್ತದೆ.

ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆ ಕೇವಲ ಯುದ್ಧಗಳಿಂದ ಮಾತ್ರ ತನ್ನ ಅಸ್ತಿತ್ವವನ್ನು ಗಟ್ಟಿಗೊಳಿಸಲಿಲ್ಲ. ಬದಲಿಗೆ ಜ್ಞಾನ ಕ್ಷೇತ್ರದ ವಿವಿಧ ಪ್ರಕಾರಗಳಲ್ಲಿ ತನಗೆ ಬೇಕಾದ ತಿಳುವಳಿಕೆಯನ್ನು ಸೃಷ್ಟಿಸಿ ಅದರ ಮೂಲಕ ತನ್ನ ಅಸ್ತಿತ್ವವನ್ನು ನ್ಯಾಯಬದ್ಧಗೊಳಿಸಿಕೊಳ್ಳುತ್ತಾ ಬಂದಿದೆ. ವಿಜ್ಞಾನ ಮತ್ತು ಸಮಾಜವಿಜ್ಞಾನಗಳ ಕ್ಷೇತ್ರದಲ್ಲಿ ನಡೆದ ಅನೇಕ ಅಧ್ಯಯನಗಳು ಪ್ರಯೋಜಕತ್ವ ನೀಡುವ ಮೂಲಕ ಬಂಡವಾಳವಾದ ತನ್ನ ಪೂರಕವೆನ್ನುವ ತಿಳುವಳಿಕೆಯ ಕ್ರಮಗಳನ್ನು ರೂಪಿಸಿದ್ದು ಅದರಲ್ಲೂ ಜನರನ್ನು ನೇರವಾಗಿ ತಲುಪುವ ಸಮಾಜವಿಜ್ಞಾನ ಕ್ಷೇತ್ರವನ್ನು ತನ್ನ ಬೆಳವಣಿಗೆಯ ಅಡಿಗಲ್ಲಿನಂತೆಯೇ ಬಳಸಿಕೊಂಡು ಬಂದಿದೆ. ಸಾಮಾಜಿಕ ಅಧ್ಯಯನಗಳು, ರಾಜಕೀಯಶಾಸ್ತ್ರ, ಅರ್ಥಶಾಸ್ತ್ರ, ಚರಿತ್ರೆ, ಮಾನವಶಾಸ್ತ್ರಗಳಾದಿಯಾಗಿ ಸಮಾಜವಿಜ್ಞಾನದ ಬಹುತೇಕ ಎಲ್ಲಾ ಆಧುನಿಕ ಶೈಕ್ಷಣಿಕ ಶಿಸ್ತುಗಳು ಬಂಡವಾಳಶಾಹಿ ಪ್ರಣೀತ ಯುರೋಪಿನ ಸೃಷ್ಟಿಗಳೇ ಆಗಿವೆ. ಬಂಡವಾಳವಾದದ ಈ ಪ್ರಯತ್ನಗಳು ಕೇವಲ ಯುರೋಪಿಗೆ ಮಾತ್ರ ಸೀಮಿತವಾಲಿಲ್ಲ. ಯುರೋಪ್ ತಾನು ವಸಾಹತುವನ್ನಾಗಿ ಮಾಡಿಕೊಂಡ ಎಲ್ಲಾ ಭೂಖಂಡಗಳಲ್ಲೂ ಬಂಡವಾಳವಾದದ ದಮನಗಳನ್ನು ಸಮರ್ಥಿಸುವ ಜ್ಞಾನವನ್ನು ವಿಶ್ವವಿದ್ಯಾಲಯಗಳ ಮೂಲಕ ಸಂಚಯಿಸಿತು. ವಸಾಹತುಗಳು ಕೇವಲ ಯುರೋಪಿನ ಜ್ಞಾನ ಕ್ರಮವನ್ನು ಮಾತ್ರ ಒಳಗೊಳ್ಳಲಿಲ್ಲ. ಯುರೋಪಿನ ಬಂಡವಾಳಶಾಹಿ ಉತ್ಪಾದನಾ ಕ್ರಮವನ್ನೂ ಆದರ್ಶ ಮಾದರಿಯೆಂದು ಒಪ್ಪಿಕೊಂಡವು. ಯುರೋಪಿನಿಂದ ಹೆಸರಿಗಷ್ಟೇ ವಿಮೋಚನೆಗೊಂಡ ವಸಾಹತುಗಳಲ್ಲಿ ಸ್ವಾತಂತ್ರ್ಯವೆಂಬುದು ನಗೆಪಾಟಲಿನ ವಸ್ತುವೇ ಆಗಿ ಬಿಟ್ಟಿತು. ಹೀಗೆ ವಿಮೋಚಿತ ವಸಾಹತುಗಳ ರಾಜಕೀಯಾರ್ಥಿಕ ವಿದ್ಯಮಾನಗಳೆಲ್ಲವೂ ಯುರೋಪಿನ ಮತ್ತು ಸಾಮ್ರಾಜ್ಯಶಾಹಿಗಳ ನಿಯಂತ್ರಣದಲ್ಲಿಯೇ ಇವೆ. ಯುರೋಪಿನ ಬಂಡವಾಳವಾದವು ಉತ್ಪಾದನಾ ಕ್ಷೇತ್ರದ ತನ್ನ ಯಜಮಾನಿಕೆಯನ್ನು ವಸಾಹತುಗಳಲ್ಲಿ ತಾನು ಸಂಚಯಿಸಿದ ಜ್ಞಾನದ ಮೂಲಕ ನ್ಯಾಯಬದ್ಧಗೊಳಿಸುತ್ತಲೇ ಬಂದಿದೆ. ಈ ಜ್ಞಾನ ಕ್ಷೇತ್ರದ ಎಲ್ಲಾ ಚಟುವಟಿಕೆಗಳನ್ನು ತಾನೂ ಸ್ಥಾಪಿಸಿದ ಹಲವು ಫಂಡಿಂಗ್ ಏಜೆನ್ಸಿಗಳ ಮೂಲಕ ಹತೋಟಿಯಲ್ಲಿಟ್ಟುಕೊಳ್ಳುತ್ತಾ ಬಂದಿದೆ. ಯುರೋಪ್ ಮತ್ತು ಆ ನಂತರದ ಅಮೇರಿಕಾಗಳು ತಮ್ಮ ಅನೇಕ ಹಣಕಾಸು ಸಂಸ್ಥೆಗಳ ಮೂಲಕ ವಸಾಹತುಗಳ ಮತ್ತು ವಿಮೋಚಿತ ವಸಾಹತುಗಳ ಜ್ಞಾನ ಕ್ಷೇತ್ರದ ಚಟುವಟಿಕೆಗಳನ್ನು ರೂಪಿಸುತ್ತಲೇ ಇವೆ. ಈ ಕ್ಷೇತ್ರದಲ್ಲಿ ಕೆಲಸ ಮಾಡುವ ವಿದ್ವಾಂಸರೂ ಸಹ ಈ ಜಾಗತಿಕ ಹಣಕಾಸು ಸಂಸ್ಥೆಗಳ ನಿಯೋಗಿಗಳಂತೆ ಕೆಲಸ ಮಾಡುತ್ತಲೇ ಬಂದಿದ್ದಾರೆ.

Scanned with OKEN Scanner

ಜ್ಞಾನ ಮತ್ತು ಅಧಿಕಾರ: ನಿರ್ವಸಾಹತೀಕರಣ ಚಿಂತನೆಗಳ ಸ್ವರೂಪ

ಇಂಡಿಯಾದ ಸಮಾಜವನ್ನು ಅಧ್ಯಯನ ಮಾಡಲು ಆರಂಭಿಸಿದವರು ಅಂದು ನಮ್ಮ ದೇಶವನ್ನು ವಸಾಹುವನ್ನಾಗಿಸಿಕೊಂಡಿದ್ದ ಯುರೋಪಿನವರು. ಇವತ್ತು ನಾವು ಯಾವುದನ್ನು ಸಮಾಜವಿಜ್ಞಾನ ಎಂದು ಕರೆಯುತ್ತೇವೋ ಅದರ ಅಧ್ಯಯನ ಶಿಸ್ತುಗಳ ಶೈಕ್ಷಣಿಕ ವಿಧಾನಗಳನ್ನು ರೂಪಿಸಿದ್ದು ಮತ್ತು ಪ್ರಚಲಿತಗೊಳಿಸಿದ್ದು ಯುರೋಪು. ಎರಡನೇ ಮಹಾಯುದ್ಧದ ನಂತರ ಈ ಬಗೆಯ ಅಧಿಕಾರವು ಅಮೇರಿಕಾಕ್ಕೆ ಹಸ್ತಾಂತರಗೊಂಡಿತು. ಯಾವುದು ಸಂಶೋಧನೆ? ಸಂಶೋಧನೆಯ ಆದ್ಯ ಕಾಳಜಿಗಳೇನು? ಸಂಶೋಧನೆಯಿಂದ 'ಯಾವ' ಸತ್ಯವನ್ನು ಕಂಡುಕೊಳ್ಳಬೇಕು? ಸತ್ಯವೆಂದರೆ ಯಾವುದು? ಯಾವ ಶೈಕ್ಷಣಿಕ ವಿಧಾನದ ಮೂಲಕ ಕಂಡುಕೊಂಡ ಅಧ್ಯಯನದ ಫಲಿತವು ಸತ್ಯವಾಗಿರುತ್ತದೆ? ಎಂಬುದನ್ನು ನಿರ್ಧರಿಸುವ ಅಧಿಕಾರವು ಯುರೋಪಿನಿಂದ ಅಮೇರಿಕಾಕ್ಕೆ ವರ್ಗವಾಯಿತು. ಕಾರಣ ಜಗತ್ತನ್ನು ನಿಯಂತ್ರಿಸುವ ಅಧಿಕಾರವನ್ನು ಅಮೇರಿಕಾವು ಯುರೋಪಿನಿಂದ ಕಿತ್ತುಕೊಂಡಿತ್ತು. ಆ ನಂತರ ಅಮೇರಿಕ ಪ್ರಣೀತ ಶೈಕ್ಷಣಿಕ ವಿಧಾನಗಳು ಸಮಾಜವಿಜ್ಞಾನಗಳಲ್ಲಿ ಅದರಲ್ಲೂ ಮಾನವಶಾಸ್ತ್ರದಲ್ಲಿ ಹೆಚ್ಚು ಮುಂಚೂಣಿಗೆ ಬಂದವು. ಮೆಲಿನೋವಸ್ಕಿಯ 'ಸಹಭಾಗಿ ಅನುಭವಾತ್ಮಕ' ಅಧ್ಯಯನ, ರೆಡ್‌ಕ್ಲಿಪ್ ಬ್ರೌನ್ ಅವರ 'ಸ್ಟ್ರಕ್ಚರಲ್ ಫಂಕ್ಷನಲಿಸಂ' ಮಾನವಶಾಸ್ತ್ರದ ವಿಧಿವಿಧಾನಗಳನ್ನು ನಿರ್ಣಾಯಕವಾಗಿ ಪ್ರಭಾವಿಸಿದವು.

ಈ ಕಾಲಘಟ್ಟದಿಂದ ಸಮಾಜ ವಿಜ್ಞಾನಗಳ ಅಧ್ಯಯನ ವಿಧಾನಗಳು ಮಹಾಕಥನಗಳಾಗಿ ಬೆಳೆದು ನಿಂತವು. ಜಗತ್ತಿನೆಲ್ಲೆಡೆ ಈ ಕಥನಗಳು ತೀವ್ರ ಪ್ರಭಾವ ಬೀರಿದ ಕಾರಣಕ್ಕಾಗಿ ಅಮೇರಿಕಾವು ಜಗತ್ತಿನ ಸಮಾಜಗಳ ಹಲವು ಸಂಗತಿಗಳನ್ನು ಅರ್ಥಮಾಡಿಕೊಳ್ಳುವ ಮತ್ತು ನಿಯಂತ್ರಿಸುವ ಶಕ್ತಿಯಾಗಿ ಬೆಳೆದು ನಿಂತಿತು. 'ಅಮೇರಿಕಾದ ಅನೇಕ ಫೌಂಡೇಶನ್‌ಗಳು ಭಾರತದಲ್ಲಿ ಸಾಮಾಜಿಕ ಅಧ್ಯಯನಗಳನ್ನು ಕೈಗೊಳ್ಳಲು ಧನಸಹಾಯ ಮಾಡತೊಡಗಿದವು. ಪಠ್ಯಕ್ರಮ ರೂಪಿಸುವುದು, ವಿದ್ಯಾರ್ಥಿ ವೇತನಗಳನ್ನು ನೀಡುವುದರ ಜೊತೆಗೆ ಹಲವು ಶೈಕ್ಷಣಿಕ ಸಂಸ್ಥೆಗಳನ್ನು ಹುಟ್ಟುಹಾಕಿ ಅಲ್ಲಿ ನಡೆಯುವ ಅಧ್ಯಯನಗಳಿಗೆ ಈ ಫೌಂಡೇಶನ್‌ಗಳು ಅನುವು ಮಾಡಿಕೊಟ್ಟವು. ಇದರಿಂದಾಗಿ ವಸಾಹತೋತ್ತರ ಕಾಲಘಟ್ಟದ ನಂತರವೂ ಭಾರತದ ಸಾಮಾಜಿಕ ಅಧ್ಯಯನಗಳು ಮೊದಲಿನ ಜನಪ್ರಿಯ ಮಾದರಿಯಲ್ಲಿಯೇ ಉಳಿದವು'[2]. ಅಮೇರಿಕಾವು 'ಏರಿಯಾ ಸ್ಪಡಿ' ಮತ್ತು ಅನ್ವಯಿಕ ಶೈಕ್ಷಣಿಕ ಯೋಜನೆಗಳ ನೆಪದಲ್ಲಿ ಮೂರನೇ ಜಗತ್ತಿನ ದೇಶಗಳಲ್ಲಿ ಸಾಮ್ರಾಜ್ಯಶಾಹಿ ಹುನ್ನಾರಗಳು ಮಿಳಿತಗೊಂಡ ಅಧ್ಯಯನ ವಿಧಾನಗಳನ್ನೇ ಪ್ರಚುರಪಡಿಸಿತು. ಯೋಗೇಂದ್ರಸಿಂಗ್ ಅದನ್ನು ಹೀಗೆ ವಿವರಿಸುತ್ತಾರೆ. 'ಭಿನ್ನ ಶೈಕ್ಷಣಿಕ ವಿಧಾನ ಮತ್ತು ಯೋಜನೆಗಳನ್ನು ನಿರೂಪಿಸುವ ಅನ್ವಯಿಕ ಗುಣವುಳ್ಳ ಅಮೇರಿಕಾದ ಸಮಾಜಶಾಸ್ತ್ರದ ಮಾದರಿಯನ್ನು ಮೂರನೇ ಜಗತ್ತಿನ ರಾಷ್ಟ್ರಗಳು ಅನುಸರಿಸತೊಡಗಿದವು. ಅಲ್ಲದೆ ಸಮಾಜಶಾಸ್ತ್ರದ ಜೊತೆಗೆ ಅಮೇರಿಕಾದಲ್ಲಿ ಸಾಮಾಜಿಕ ಮಾನವಶಾಸ್ತ್ರವೂ ರೂಪುಗೊಂಡಿತು. ಇಂಡಿಯಾದ ಸಮಾಜಶಾಸ್ತ್ರವೂ ಸಹ ಅಮೇರಿಕಾದ ಸಮಾಜಶಾಸ್ತ್ರ ಮತ್ತು ಸಾಮಾಜಿಕ ಮಾನವಶಾಸ್ತ್ರದ ಪರಿಕಲ್ಪನೆ ಮತ್ತು ಹಿನ್ನೆಲೆಗಳಿಂದ ಸಹಜವಾಗಿಯೇ ಪ್ರಭಾವಿತವಾಯಿತು'[3]. ಇದರ ಜೊತೆಗೆ ಭಾರತದ ಅಭಿವೃದ್ಧಿಯ ನಿಯಂತ್ರಕ ಶಕ್ತಿಯೂ ಯುರೋಪಿನಿಂದ ಅಮೇರಿಕಾಕ್ಕೆ ವರ್ಗಗೊಂಡಿತು. ಕೃಷಿ ಉತ್ಪಾದನೆ, ಕೈಗಾರಿಕೆ ಮತ್ತು ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದಂತೆ ಅಮೇರಿಕಾವು ಭಾರತಕ್ಕೆ ಮಾದರಿಯಾಯಿತು. ಇದೇ ಹೊತ್ತಿನಲ್ಲಿ 'ಮಾನವಶಾಸ್ತ್ರದ ಅಧ್ಯಯನಗಳು ಆದಿಮ ಬುಡಕಟ್ಟುಗಳನ್ನು ಸ್ವಲ್ಪ ಹಿಂಜರಿಕೆಯಿಂದಲೇ ಬಿಟ್ಟುಕೊಟ್ಟು ರೈತ ಸಮುದಾಯಗಳನ್ನು ಹೆಚ್ಚು ಪರಿಗಣಿಸಲಾರಂಭಿಸಿದವು. ವ್ಯವಸಾಯೀ ಸಂಸ್ಕೃತಿಯು ಒಂದು ನಾಗರೀಕತೆಗೆ ಅತ್ಯಂತ ಆದಿಮವಾದದ್ದು ಎಂದು ಮಾನವಶಾಸ್ತ್ರಜ್ಞರು ಭಾವಿಸಲಾರಂಭಿಸಿದರು. ಮಾನವಶಾಸ್ತ್ರದ ಅಧ್ಯಯನಗಳಿಗೆ ಈ ಬಗೆಯ ನೆರವು ಕೊಟ್ಟಿದ್ದು ಅಮೇರಿಕಾದ ವಿಶ್ವವಿದ್ಯಾಲಯಗಳು. ಅದರಲ್ಲೂ ಚಿಕಾಗೋ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದ ಮುಖ್ಯಸ್ಥನಾಗಿದ್ದ ರಾಬರ್ಟ್ ರೆಡ್‌ಫೀಲ್ಡ್ ಈ ಬಗೆಯ ಅಧ್ಯಯನಗಳಿಗೆ ಅನುವು ಮಾಡಿದ'[4].

ಅಮೇರಿಕಾವು ಯುರೋಪಿಗಿಂತ ಹೆಚ್ಚು 'ಮುತ್ಸದ್ದಿ'ಯಂತೆ ಮೂರನೇ ಜಗತ್ತಿನ ದೇಶಗಳಲ್ಲಿ ತನ್ನ ಬೌದ್ಧಿಕ ಕಾರ್ಯಾಚರಣೆಗಳನ್ನು ಆರಂಭಿಸಿತು. ಯುರೋಪಿನ ಒರಟು ತಂತ್ರಗಾರಿಕೆಯ ಮುಂದೆ ಅಮೇರಿಕಾವು ಹೆಚ್ಚು ಪ್ರಗತಿಪರವೂ, ಅಭಿವೃದ್ಧಿಶೀಲವೂ ಆದ ಏರಿಯಾ ಸ್ಪಡಿಗಳ ಮುಖವಾಡಗಳನ್ನು ಮುಂದುಮಾಡಿಕೊಂಡು ಪ್ರತ್ಯಕ್ಷವಾಯಿತು. ಮೂರನೇ ಜಗತ್ತಿನ ಅಭಿವೃದ್ಧಿಯ ಕುರಿತು ಸದಾ ಚಿಂತಿಸುವ ಬಿಡುವಿಲ್ಲದ ಹರಿಕಾರನಂತೆ ಅಮೇರಿಕಾವು ತನ್ನನ್ನು ಬಿಂಬಿಸಿಕೊಂಡಿತು. ಇದಕ್ಕೆ ಪೂರಕವಾಗಿ ವಿಶ್ವಬ್ಯಾಂಕ್. ಐ.ಎಂ.ಎಫ್ ಮತ್ತು ವಿಶ್ವಸಂಸ್ಥೆಯಂತಹ ಜಾಗತಿಕ ಸಂಸ್ಥೆಗಳು ಅಮೇರಿಕಾದ ಅಂಗಸಂಸ್ಥೆಗಳಾಗಿ ಬದಲಾದವು. ಅಮೇರಿಕಾವು ಈ ಮೊದಲೇ ಹೇಳಿದಂತೆ ತನ್ನ ವಿಶ್ವವಿದ್ಯಾಲಯಗಳ ಮೂಲಕ ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿ ಅನೇಕ ಸ್ವಯಂಸೇವಾ ಸಂಸ್ಥೆಗಳನ್ನು ಮತ್ತು ಫೌಂಡೇಶನ್‌ಗಳನ್ನು ಪ್ರಾರಂಭಿಸಿ ಅವುಗಳ ಮೂಲಕ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಂಡಿತು. ಭಾರತದಲ್ಲಿ

Scanned with OKEN Scanner

ಇದೇ ಸಂದರ್ಭದಲ್ಲಿ ಏರಿಯಾ ಸ್ಪಡಿಗಳು ಮತ್ತು ಗ್ರಾಮ ಅಧ್ಯಯನಗಳು ಪ್ರಾರಂಭಗೊಂಡವು. '1950ರ ದಶಕದಲ್ಲಿ ಭಾರತದಲ್ಲೂ ಗ್ರಾಮ ಮತ್ತು ನಗರಗಳ ಅಧ್ಯಯನಗಳು ಪ್ರಾರಂಭವಾದವು. ಎಸ್.ಸಿ.ದುಬೆ, ಎಂ.ಎನ್.ಶ್ರೀನಿವಾಸ್. ರಾಮಕೃಷ್ಣ ಮುಖರ್ಜಿ ಮತ್ತು ಎ.ಆರ್.ದೇಸಾಯಿಯಂತಹ ಸಮಾಜಶಾಸ್ತ್ರಜ್ಞರು ಗ್ರಾಮಗಳ ಅಧ್ಯಯನ ಕೈಗೊಂಡರು. ಇವರ ಜೊತೆಗೆ ಅಮೇರಿಕಾ, ಬ್ರಿಟನ್ ಮತ್ತು ಫ್ರಾನ್ಸ್ ದೇಶದ ಹಲವು ಸಾಮಾಜಿಕ ಮಾನವಶಾಸ್ತ್ರಜ್ಞರೂ ಸಹ ಇಂಡಿಯಾದಲ್ಲಿ ಹಳ್ಳಿಗಳ ಅಧ್ಯಯನ ಕೈಗೊಂಡರು. ಅಮೇರಿಕಾದ ಸಾಮಾಜಿಕ ಮಾನವಶಾಸ್ತ್ರಜ್ಞ ಆಸ್ಕರ್ ಲಿವೀಸ್ ಉತ್ತರ ಭಾರತದ ಹಳ್ಳಿಯೊಂದನ್ನು ಅಧ್ಯಯನ ಮಾಡಿದ. (ಆಸ್ಕರ್ ಲಿವೀಸ್ ಈ ಹಿಂದೆ ಮೆಕ್ಸಿಕೋದ ಹಳ್ಳಿಯೊಂದನ್ನು ಅಧ್ಯಯನ ಮಾಡಿದ್ದ) ಆಸ್ಕರ್ ಲಿವೀಸ್ ಈ ಅಧ್ಯಯನವನ್ನು ಭಾರತ ಸರಕಾರದ ಯೋಜನಾ ಆಯೋಗದ ಸಹಯೋಗದಲ್ಲಿ ಕೈಗೊಂಡಿದ್ದನು. ಅಲ್ಲದೆ ಈತ ಭಾರತದ ಯೋಜನಾ ಆಯೋಗದ ಸಲಹೆಗಾರನೂ ಆಗಿದ್ದನು'[5]. ಹೀಗೆ ಅಮೇರಿಕಾವು ವಿದ್ವಾಂಸರೆನ್ನಿಸಿಕೊಂಡ ತನ್ನ ಜನರನ್ನು ಭಾರತದಂತಹ ದೇಶದ ಆಡಳಿತದ ಆಯಕಟ್ಟಿನ ಸ್ಥಳಕ್ಕೆ ರವಾನೆ ಮಾಡಲಾರಂಭಿಸಿತು. ಅದೇ ಹೊತ್ತಿಗೆ 'ಎರಡನೇ ಮಹಾಯುದ್ಧದ ನಂತರ ಗ್ರಾಮಗಳ ಅಧ್ಯಯನಗಳಲ್ಲಿ ಅಗಾಧ ಪ್ರಮಾಣದ ಬದಲಾವಣೆಗಳು ಸಂಭವಿಸಿದವು. ಭಾರತದ ಸಾಮಾಜಿಕ ಮಾನವಶಾಸ್ತ್ರಜ್ಞರು ವಿದೇಶಗಳಿಗೆ ಹೋಗಿ ಅಲ್ಲಿನ ತಜ್ಞರಿಂದ ಗ್ರಾಮಗಳ ಅಧ್ಯಯನಗಳನ್ನು ಮಾಡುವ ವಿಧಾನದಲ್ಲಿ ತರಬೇತಿ ಪಡೆದು ಬಂದರು. ಆನಂತರ ಭಾರತದ ಗ್ರಾಮಗಳ ಅಧ್ಯಯನಗಳ ಶೈಕ್ಷಣಿಕ ವಿಧಾನದಲ್ಲಿ ಮೂಲಭೂತ ಬದಲಾವಣೆಗಳಾದವು'[6].

ಗ್ರಾಮಗಳ ಅಧ್ಯಯನದಲ್ಲಿ ವಸಾಹತುಶಾಹಿ ಅಧ್ಯಯನಕಾರರು ಮತ್ತು ಅವರಿಂದ ತರಬೇತಿ ಪಡೆದು ಬಂದ ದೇಶೀಯ ವಿದ್ವಾಂಸರು ತಾವು ಅನುಸರಿಸುತ್ತ ಬಂದ ಅಧ್ಯಯನ ವಿಧಾನಕ್ಕೆ ಸಂಬಂಧಿಸಿದಂತೆ ಯಾವ ಮಹತ್ವದ ಮಾರ್ಪಾಡುಗಳನ್ನು ಮಾಡಿಕೊಂಡಿರಲಿಲ್ಲ. ಅಮೇರಿಕಾದ ನವವಸಾಹತು ನೀತಿಗೆ ಪೂರಕವಾದ ರಾಜಕೀಯ ಧೋರಣೆಗಳನ್ನು ಇವರು ಚಾಚೂ ತಪ್ಪದೆ ಅನುಸರಿಸಿದರು. 'ಅಮೇರಿಕ ಪಶ್ಚಿಮದ ಸಾಮ್ರಾಜ್ಯಶಾಹಿ ನೀತಿಯನ್ನು ಸಮರ್ಥಿಸುವ ಮತ್ತು ರಕ್ಷಿಸುವ ಶಕ್ತಿಯಾಗಿ ರೂಪುಗೊಂಡಿತ್ತು. ಆಂತರಿಕವಾಗಿ ತನ್ನೆಲ್ಲ ಉದ್ಯಮಗಳನ್ನು ಮತ್ತು ಕಾರ್ಪೋರೇಟ್ ಶಕ್ತಿಗಳನ್ನು ಬಲಪಡಿಸಲು, ಬಂಡವಾಳ ತೊಡಗಿಸಲು ಮತ್ತು ಸಾಮ್ರಾಜ್ಯಶಾಹಿ ಆಕ್ರಮಣಶೀಲತೆಯನ್ನು ಜಾರಿಯಲ್ಲಿಡಲು ಅಮೇರಿಕ ಮುಂದಾಯಿತು. ಈ ಕಾರಣಕ್ಕಾಗಿ ಯುರೋಪಿನ ಮಾಜಿ ವಸಾಹತುಗಳಾದ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾ ದೇಶಗಳ ಮಾಹಿತಿ ಸಂಗ್ರಹಿಸಲು ಮುಂದಾಯಿತು.

ಈ ಯೋಜನೆಗಳಿಗೆ ಅಮೇರಿಕಾ ಬೃಹತ್ ಪ್ರಮಾಣ ಹಣವನ್ನು ವಿನಿಯೋಗಿಸತೊಡಗಿತು. ಇದಕ್ಕಾಗಿ ತಜ್ಞತೆಯನ್ನು ಧಾರೆ ಎರೆಯಲು ಅನೇಕ ಮಾನವಶಾಸ್ತ್ರಜ್ಞರು ಅಮೇರಿಕಾದ ಈ ಯೋಜನೆಗಳಲ್ಲಿ ತೊಡಗಿಕೊಂಡರು. ಕೆಲವು 'ಮಾನವಶಾಸ್ತ್ರಜ್ಞರು ಅಮೇರಿಕಾದ ಇಂಟಲಿಜೆನ್ಸಿಯ, ಅದರಲ್ಲೂ ಅಖಂಯ ಅಲ್ಪಾವಧಿಯ ಇಲ್ಲವೆ ಪೂರ್ಣಾವಧಿಯ ನೌಕರರಾದರು. ಇವರು ಕೆಲವು ಅನುಮಾನಾಸ್ಪದ ಮತ್ತು ಪ್ರಶ್ನಾರ್ಹವಾದ ಮೂಲಗಳಿಂದ ಸಂಶೋಧನಗೆ ಹಣ ಪಡೆಯಲಾರಂಭಿಸಿದರು. ಇಲ್ಲವೆ ಖಾಸ್ಗೆ ಸಂಸ್ಥೆಗಳ ಸಂಶೋಧನೆಗಳನ್ನು ಕೈಗೆತ್ತಿಕೊಂಡರು'[8]. ಮೂರನೇ ಜಗತ್ತಿನ ದೇಶಗಳ ಅಭಿವೃದ್ಧಿಯ ಸಲುವಾಗಿ ಅನ್ವಯಿಸಿ ಅಧ್ಯಯನಗಳು ನಡೆಯುತ್ತವೆ ಎಂದು ಹೇಳಲಾಗುತ್ತಿತ್ತಾದರೂ ಈ ಅಧ್ಯಯನಗಳಿಗೆ ಭಾರತದಂತಹ ದೇಶದ ಹಳ್ಳಿಗಳಲ್ಲಿ ವರ್ಗ ವೈರುಧ್ಯಗಳನ್ನು ಮತ್ತು ಜಾತಿ ಅಸಮಾನತೆಗಳನ್ನು ಅರ್ಥ ಮಾಡಿಕೊಳ್ಳುವ ಜರೂರುಗಳು ಇರಲಿಲ್ಲ. ಅಧ್ಯಯನಕಾರರು ಇಂಡಿಯಾದ ಸಮಾಜವನ್ನು ಅಖಂಡವಾಗಿ ಗ್ರಹಿಸಿದರು. ಮತ್ತು ಮೇಲ್‌ಸ್ತರದ ವಿವರಗಳನ್ನೆ ನಂಬಿ ಹಲವು ಶೈಕ್ಷಣಿಕ ಸಿದ್ಧಾಂತಗಳನ್ನು ರೂಪಿಸಿದರು.

20ನೇ ಶತಮಾನದ ಪೂರ್ವಾರ್ಧದಲ್ಲಿ ಎರಡು ಜಾಗತಿಕ ಯುದ್ಧಗಳಲ್ಲಿ ಪಾಲ್ಗೊಂಡ ಯುರೋಪಿನ ರಾಷ್ಟ್ರಗಳು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ತಲ್ಲಣಗೊಂಡವು. ಅಲ್ಲದೆ ಮಿತಿಮೀರಿದ ಆರ್ಥಿಕ ಪೈಪೋಟಿಯೂ ಸಹ ಯುರೋಪಿನ ದೇಶಗಳಲ್ಲಿ ಅನೇಕ ಸಂಘರ್ಷಗಳನ್ನು ಹುಟ್ಟು ಹಾಕಿತ್ತು. ಎರಡನೇ ಮಹಾಯುದ್ಧದ ನಂತರ ಯುರೋಪಿನ ಮಿತ್ರಕೂಟಕ್ಕೆ ಸಹಾಯ ಮಾಡಿದಂತೆ ಮಾಡಿ, ಏಷ್ಯಾ ದೇಶವೊಂದರ ಮೇಲೆ ಅಣುಬಾಂಬ್ ಪ್ರಯೋಗ ಮಾಡಿ ಲಕ್ಷಾಂತರ ಜನರನ್ನು ಕೊಂದುಹಾಕಿದ ಅಮೇರಿಕಾವು ಯುರೋಪ್ ಮತ್ತು ಏಷ್ಯಾ ಖಂಡದ ದೇಶಗಳ ಯಜಮಾನನಾಗಿ ರೂಪುಗೊಂಡಿತು. ಯಾವಾಗ ಜಾಗತಿಕ ರಾಜಕಾರಣಕ್ಕೆ ಅಮೇರಿಕಾವು ಕೇಂದ್ರವಾಯಿತೋ ಆಗಿನಿಂದ ಅಮೇರಿಕಾ ಜಗತ್ತಿನ ಆಗುಹೋಗುಗಳ ನಿಯಂತ್ರಕ ಶಕ್ತಿಯಾಗಿ ಪರಿಣಮಿಸಿತು. ಆದರೆ ಅಮೇರಿಕಾದ ಗೋಮುಖ ವ್ಯಾಘ್ರತನ ವಿಯಟ್ನಾಂ ಯುದ್ಧದ ನಂತರ ಬಯಲಾಯಿತು. ಅಮೇರಿಕಾದ ರಾಜಕೀಯ ಚಲನೆಗಳು ಮೂರನೇ ಜಗತ್ತಿನ ಬುದ್ಧಿಜೀವಿಗಳನ್ನು ತಲ್ಲಣಗೊಳಿಸಿದವು. ವಿಯಟ್ನಾಂ ಮೇಲಿನ ದಾಳಿಯ ಮೂರನೇ ಜಗತ್ತಿನ ರಾಷ್ಟ್ರಗಳನ್ನು ದಿಕ್ಕೆಡಿಸಿತು. ಅನಂತರ ಈ ರಾಷ್ಟ್ರಗಳು ಕೇವಲ ರಾಜಕೀಯ ಕಾರಣಗಳಿಗಾಗಿ ಮಾತ್ರವಲ್ಲದೆ ಶೈಕ್ಷಣಿಕವಾಗಿಯೂ ಅಮೇರಿಕಾವನ್ನು ಅನುಮಾನಿಸಲಾರಂಭಿಸಿದವು. ಅಮೇರಿಕಾದ ಶೈಕ್ಷಣಿಕ ಸಿದ್ಧಾಂತಗಳು ಮತ್ತು ಅದು ಸೃಷ್ಟಿಸಿದ ಜಾಗತಿಕ ಮಹಾಕಥನಗಳನ್ನು ವಿದ್ವಾಂಸರು

ಪ್ರಶ್ನಿಸಲಾರಂಭಿಸಿದರು. ಜೊತೆಗೆ ಅ
ಸಂಕಥನಗಳನ್ನೇ ಅಲ್ಪಸ್ವಲ್ಪ
ಜಾರಿಗೊಳಿಸಿತ್ತು. ಮೂಲದಲ್ಲಿ
ಸಂಕಥನಗಳು ಸಾಮ್ರಾಜ್ಯಶಾಹಿ
ಕಾರಣಕ್ಕೆ, ಯುರೋಪು ಅಮೇರಿ
ಪೂರಕವಾಗಿದ್ದ ಕಾರಣಕ್ಕೆ ಅದು
ಆತ್ಮದಲ್ಲಿ ಅಂತರ್ಗತವಾಯಿತು.
ಸೋತ ದೇಶಗಳ ಕೆಲವು ವಿದ್ವಾಂ
ವಸಾಹತುವಾದದ ಸಾಮ್ರಾಜ್ಯ
ಶೈಕ್ಷಣಿಕ ವಿಧಾನಗಳನ್ನು
ವಸಾಹತೋತ್ತರವಾದ ಎಂದು
ವಸಾಹತೊತ್ತರ ಸಂದಭ
ಯುರೋಪ್ ಸೃಷ್ಟಿಸಿದ
ಪ್ರಶ್ನಿಸಲಾರಂಭಿಸಿದರು. 20ನೇ
ಪ್ರಾರಂಭವಾದ ಈ ವಸಾಹ
ಹಂತವಾಗಿ ಘನೀಕರಣ
ವಸಾಹತುಗಳನ್ನು ನೋಡುವ
ಸಲುವಾಗಿ ಯುರೋಪಲ್ಲಿ
ವಸಾಹತೋತ್ತರ ಕಾಲಘ
ಒಳಪಟ್ಟವಲ್ಲದೆ, ವಿಮೋಚನೆ
ಬೌದ್ಧಿಕ ಕ್ರಮಗಳನ್ನು ಕಟ್ಟಿಕೊಳ
ಪ್ರೇರೇಪಿಸಿದರು. ಜೊತೆಗೆ ಯ
ವಿಧಾನದ ಹಿಂದಿರುವ ಸಾವ
ಚಿಂತಕರು ಬಹಿರಂಗಗೊಳಿ
ರಾಜಕೀಯ ದೃಷ್ಟಿಕೋನ ರ
ಆಂಥೋನಿ ಗ್ರಾಂಮ್ಷಿ. ಆನಂ
ಸೈದ್, ಫ್ರಾಂಜ್ ಫ್ಯಾನನ್
ಚಿಂತಕರಲ್ಲಿ ಪ್ರಮುಖರ
ಅಧಿಕಾರಗಳಿಗಿರುವ ಸಂ
ವಿಶ್ಲೇಷಿಸಿದನು. 'ಎಲ್ಲಾ ಜ್ಞಾ
ಡಿಸ್‌ಕೋರ್ಸ್‌ಗಳು ಆಂ
ಸ್ಥಾನದಲ್ಲಿರುವವರ ಅಧಿಕಾ
ರಕ್ಷಿಸುವುದಕ್ಕಾಗಿ ಮತ
ಜನ್ಮತಾಳಿರುತ್ತವೆ. ಪರಿಣಾ
ಡಿಸ್‌ಕೋರ್ಸ್‌ನ್ನು ಒಪ್ಪಿಕೆ
ಆ ಡಿಸ್‌ಕೋರ್ಸ್‌ನ್ನು ರ
ಹೋಗಲಾಗುವುದಿಲ್ಲ. ಆ
ನಾವು ಭಾಗಿಗಳಾಗುವುದು
ಅಧಿಕಾರಕ್ಕೂ ಹಾಗೂ
ಗುರುತಿಸಿ 'ಜ್ಞಾನವೆಂದರ

ಏಪ್ರಿಲ್ 2022 ರಿಂದ ಡಿ

ಡಿಸೆಂಬರ್ 2023 ರವರೆ

ಪ್ರಶ್ನಿಸಲಾರಂಭಿಸಿದರು. ಜೊತೆಗೆ ಅಮೇರಿಕಾವು ಯುರೋಪಿನ ಸಂಕಥನಗಳನ್ನೇ ಅಲ್ಪಸ್ವಲ್ಪ ಮಾರ್ಪಾಡಿನೊಂದಿಗೆ ಜಾರಿಗೊಳಿಸಿತ್ತು. ಮೂಲದಲ್ಲಿ ಈ ವಸಾಹತು ಸಂದರ್ಭದ ಸಂಕಥನಗಳು ಸಾಮ್ರಾಜ್ಯಶಾಹಿ ನೀತಿಗೆ ಪೂರಕವಾಗಿದ್ದ ಕಾರಣಕ್ಕೆ, ಯುರೋಪು ಅಮೇರಿಕಾದ ಸಾಮ್ರಾಜ್ಯಶಾಹಿ ನೀತಿಗೆ ಪೂರಕವಾಗಿದ್ದ ಕಾರಣಕ್ಕೆ ಅದು ಅಮೇರಿಕಾದ ಸಾಮ್ರಾಜ್ಯಶಾಹಿ ಆತ್ಮದಲ್ಲಿ ಅಂತರ್ಗತವಾಯಿತು. ಈ ಕಾರಣದಿಂದ ಜಗತ್ತಿನ ಸೋತ ದೇಶಗಳ ಕೆಲವು ವಿದ್ವಾಂಸರು ಮತ್ತು ಚಳುವಳಿಗಾರರು ವಸಾಹತುವಾದದ ಸಾಮ್ರಾಜ್ಯಶಾಹಿ ನೀತಿಯನ್ನು ಮತ್ತು ಶೈಕ್ಷಣಿಕ ವಿಧಾನಗಳನ್ನು ನಿರಾಕರಿಸಿದರು. ಇದನ್ನು ವಸಾಹತೋತ್ತರವಾದ ಎಂದು ಸ್ಥೂಲವಾಗಿ ಕರೆಯಲಾಗುತ್ತದೆ.

ವಸಾಹತೊತ್ತರ ಸಂದರ್ಭದ ಪ್ರಮುಖ ಚಿಂತಕರು ಯುರೋಪ್ ಸೃಷ್ಟಿಸಿದ ವಿರಾಟ್ ಕಥನಗಳನ್ನು ಪ್ರಶ್ನಿಸಲಾರಂಭಿಸಿದರು. 20ನೇ ಶತಮಾನದ ಆರಂಭದಲ್ಲಿಯೇ ಪ್ರಾರಂಭವಾದ ಈ ವಸಾಹತೋತ್ತರ ಚರ್ಚೆಗಳು ಹಂತ ಹಂತವಾಗಿ ಘನೀಕರಣಗೊಂಡವು. ಮುಖ್ಯವಾಗಿ ವಸಾಹತುಗಳನ್ನು ನೋಡುವ ಮತ್ತು ಅವುಗಳನ್ನು ಅರ್ಥೈಸುವ ಸಲುವಾಗಿ ಯುರೋಪಲ್ಲಿ ರೂಪುಗೊಂಡ ಸಂಕಥನಗಳು ವಸಾಹತೋತ್ತರ ಕಾಲಘಟ್ಟದಲ್ಲಿ ತೀವ್ರ ಪರಿಶೀಲನೆಗೆ ಒಳಪಟ್ಟವಲ್ಲದೆ, ವಿಮೋಚನೆಗೊಂಡ ರಾಷ್ಟ್ರಗಳು ಪರ್ಯಾಯ ಬೌದ್ಧಿಕ ಕ್ರಮಗಳನ್ನು ಕಟ್ಟಿಕೊಳ್ಳಲು ವಸಾಹತೋತ್ತರ ಚಿಂತಕರು ಪ್ರೇರೇಪಿಸಿದರು. ಜೊತೆಗೆ ಯುರೋಪಿನ ಅಭಿಜಾತ ಶೈಕ್ಷಣಿಕ ವಿಧಾನದ ಹಿಂದಿರುವ ಸಾಮ್ರಾಜ್ಯಶಾಹಿ ಹುನ್ನಾರಗಳನ್ನು ಈ ಚಿಂತಕರು ಬಹಿರಂಗಗೊಳಿಸಿದರು. ಈ ಚಿಂತಕರಿಗೆ ಒಂದು ರಾಜಕೀಯ ದೃಷ್ಟಿಕೋನ ರೂಪುಗೊಳ್ಳಲು ಕಾರಣನಾದವನು ಆಂಥೋನಿ ಗ್ರಾಂಷ್ಚಿ. ಆನಂತರ ಮೈಕೇಲ್ ಫುಕೋ, ಎಡ್ವರ್ಡ್ ಸೈದ್, ಫ್ರಾಂಜ್ ಫ್ಯಾನನ್ ಮತ್ತು ಅಲ್ಬರ್ಟ್ ಮೆಮ್ಮಿ ಈ ಚಿಂತಕರಲ್ಲಿ ಪ್ರಮುಖರು. ಫೋಕೋ ಜ್ಞಾನ ಮತ್ತು ಅಧಿಕಾರಗಳಿಗಿರುವ ಸಂಬಂಧಗಳನ್ನು ಚಾರಿತ್ರಿಕವಾಗಿ ವಿಶ್ಲೇಷಿಸಿದನು. 'ಎಲ್ಲಾ ಜ್ಞಾನಕ್ಷೇತ್ರಗಳಲ್ಲಿಯೂ ವಿಜೃಂಭಿಸುವ ಡಿಸ್‌ಕೋರ್ಸ್‌ಗಳು ಆಯಾಯಾ ಕ್ಷೇತ್ರಗಳಲ್ಲಿ ಉನ್ನತ ಸ್ಥಾನದಲ್ಲಿರುವವರ ಅಧಿಕಾರವನ್ನು ಮತ್ತು ಸ್ಥಾನಮಾನಗಳನ್ನು ರಕ್ಷಿಸುವುದಕ್ಕಾಗಿ ಮತ್ತು ಮುಂದುವರೆಸುವುದಕ್ಕಾಗಿ ಜನ್ಮತಾಳಿರುತ್ತವೆ. ಪರಿಣಾಮತಃ ಒಂದು ಕ್ಷೇತ್ರದ ಪ್ರಭಾವಿ ಡಿಸ್‌ಕೋರ್ಸ್‌ನ್ನು ಒಪ್ಪಿಕೊಳ್ಳದೆ ಮತ್ತು ಅದನ್ನು ಸ್ವೀಕರಿಸದೆ ಆ ಡಿಸ್‌ಕೋರ್ಸ್‌ನ್ನು ರೂಪಿಸಿದ ಸಂಸ್ಥೆಯ ಹತ್ತಿರ ನಾವು ಹೋಗಲಾಗುವುದಿಲ್ಲ. ಆ ಸಂಸ್ಥೆಯು ಕೊಡುವ ಅಧಿಕಾರದಲ್ಲಿ ನಾವು ಭಾಗಿಗಳಾಗುವುದು ಸಾಧ್ಯವಿಲ್ಲ. ಆದ್ದರಿಂದಲೇ ಜ್ಞಾನಕ್ಕೂ ಅಧಿಕಾರಕ್ಕೂ ಹಾಗೂ ಪರಸ್ಪರ ಪೋಷಕ ಸಂಬಂಧವನ್ನು ಗುರುತಿಸಿ 'ಜ್ಞಾನವೆಂದರೆ ಅಧಿಕಾರ' ಎಂದು ಫೋಕೋ ತೀರ್ಮಾನಿಸುತ್ತಾನೆ..... ಅಧಿಕಾರ ಮತ್ತು ಜ್ಞಾನ ಇವುಗಳನ್ನು ಭಿನ್ನ ಸ್ವತಂತ್ರ ಸಂಗತಿಗಳೆಂಬಂತೆ ಫುಕೋ ಪರಿಗಣಿಸುವುದಿಲ್ಲ. ಅವೆರಡೂ ಪರಸ್ಪರ ಹೆಣೆದುಕೊಂಡು ಒಂದು ಬಗೆಯ ಅವಿನಾ ಸಂಬಂಧವನ್ನು ಹೊಂದಿವೆ. ಆದ್ದರಿಂದಲೇ ಫುಕೋ ಅವನ್ನು 'ಅಧಿಕಾರ / ಜ್ಞಾನ' (Power/knowledge) ಎಂದು ದಾಖಲಿಸುತ್ತಾನೆ. 'ಅಧಿಕಾರ ಮತ್ತು ಜ್ಞಾನ ಇವುಗಳು ನೇರವಾಗಿ ಒಂದು ಮತ್ತೊಂದನ್ನು ಒಳಗೊಳ್ಳುತ್ತವೆ..... ಯಾವುದೋ ಅಧಿಕಾರಾಧಾರಿತ ಸಂಬಂಧವೂ ಅದಕ್ಕೆ ಪೂರಕವಾಗುವ ಜ್ಞಾನಕ್ಷೇತ್ರದ ರಚನೆಯಾಗದೆ ಅಸ್ತಿತ್ವಕ್ಕೆ ಬರುವುದಿಲ್ಲ ಮತ್ತು ಅಧಿಕಾರಾಧರಿತ ಸಂಬಂಧಗಳನ್ನು ರೂಪಿಸದೆ ಯಾವ ಜ್ಞಾನಕ್ಷೇತ್ರವೂ ಅಸ್ತಿತ್ವದಲ್ಲಿರುವುದಿಲ್ಲ" ಎನ್ನುತ್ತಾನೆ ಫುಕೋ. ಫುಕೋ ಆಧುನಿಕ ಜಗತ್ತಿನಲ್ಲಿ ಚಾಲ್ತಿಯಲ್ಲಿರುವ ಯುರೋಪಿನ ಸಾಂಪ್ರದಾಯಿಕ ತಿಳುವಳಿಕೆಯ ಕ್ರಮಗಳನ್ನು ಮತ್ತು ಶೈಕ್ಷಣಿಕ ಶಿಸ್ತುಗಳನ್ನು ತೀವ್ರ ವಿಮರ್ಶೆಗೆ ಒಳಪಡಿಸುತ್ತಾನೆ. ಯುರೋಪಿನ ಆಧುನಿಕಪೂರ್ವ ಕಾಲಘಟ್ಟದ ಸಮಾಜವಿಜ್ಞಾನಗಳ ಶೈಕ್ಷಣಿಕ ಶಿಸ್ತುಗಳು ಯಾವ ಬಗೆಯಲ್ಲಿ ಅಧಿಕಾರಸ್ಥ ಕೇಂದ್ರಗಳನ್ನು ಪೋಷಿಸಿದವು ಎಂಬುದನ್ನು ಫುಕೋ ತರ್ಕಬದ್ಧವಾಗಿ ವಿವರಿಸುತ್ತಾನೆ.

ವಸಾಹತೋತ್ತರ ಕಾಲಘಟ್ಟದ ಚಿಂತನೆಗಳಿಗೆ ಸೈದ್ಧಾಂತಿಕ ತಳಹದಿ ರೂಪಿಸಿದವನೆಂದರೆ ಫ್ರಾಂಜ್ ಫ್ಯಾನನ್. ಈತನ Black Skin White Mask ಮತ್ತು The Wretched Of The Earth ಕೃತಿಗಳು ವಸಾಹತೀಕರಣಗೊಂಡ ಜನಾಂಗಗಳು ಕೀಳರಿಮೆಗಳಿಂದ ತಮ್ಮನ್ನು ಆಳುವ ಧಣಿಗಳ ಸಂಸ್ಕೃತಿಯನ್ನು ಅನುಕರಿಸುವ ಪ್ರವೃತ್ತಿಯನ್ನು ಫ್ಯಾನನ್ ತನ್ನ ಈ ಎರಡು ಕೃತಿಗಳಲ್ಲಿ ವಿವರಿಸಲೆತ್ನಿಸುತ್ತಾನೆ. ಪರತಂತ್ರ ವ್ಯವಸ್ಥೆಯಲ್ಲಿ ಅಧೀನ ಜನಾಂಗಗಳು, ಆಳುವ ವರ್ಗದ ಸಂಸ್ಕೃತಿ, ಭಾಷೆ ಮತ್ತು ಜೀವನ ವಿಧಾನಗಳನ್ನು ತಮ್ಮದನ್ನಾಗಿಸಿಕೊಳ್ಳುವ ಆತ್ಮದ್ವೇಷದ ಸಂದರ್ಭಗಳನ್ನು ಫ್ಯಾನನ್ ವಿವರಿಸುತ್ತಾನೆ. ಆಳ್ವಿಕೆಗೊಳಪಡುವ ಜನರ ರಾಜಕೀಯ ಪರಾತಂತ್ರವೇ ಅವರ ಆತ್ಮದ್ವೇಷಕ್ಕೆ ಕಾರಣವಾಗುತ್ತದೆ. ತಮ್ಮ ಸಾಂಸ್ಕೃತಿಕ ಚಹರೆಗಳನ್ನು ಬಿಟ್ಟುಕೊಡುವ ಈ ಜನ ಆಳುವವರ ಜೀವನ ವಿಧಾನವನ್ನು ಮೋಹಿಸುತ್ತಾರೆ. ಚರ್ಮ ಕಪ್ಪಾಗಿದ್ದರೂ, ತಮ್ಮ ಆಳುವ ಬಿಳಿ ಜನರ ಮುಖವಾಡಗಳನ್ನು ಧರಿಸಲು ಈ ಆಳಿಸಿಕೊಳ್ಳುವ ಜನ ಕಾತುರಗೊಳ್ಳುತ್ತಾರೆ. ತಮ್ಮತನವನ್ನು ದ್ವೇಷಿಸಿಕೊಳ್ಳುವುದರ ಜೊತೆಗೆ ಬಿಳಿಯರ ಸಂಸ್ಕೃತಿಯನ್ನು ಅನುಕರಿಸುವುದರಲ್ಲಿಯೇ ತಮ್ಮ ಸಾರ್ಥಕ್ಯವನ್ನು ಕಂಡುಕೊಳ್ಳುತ್ತಾರೆ ಎಂದು ಫ್ಯಾನನ್ ಆಳಿಸಿಕೊಳ್ಳುವ ಜನರ ಮನೋವ್ಯಾಪಾರವನ್ನು ವಿವರಿಸುತ್ತಾನೆ. ಜೊತೆಗೆ ವಸಾಹತುಶಾಹಿಯ ಜೊತೆಗಿನ ಪ್ರತಿರೋಧದಲ್ಲಿ ದುಡಿವ ವರ್ಗಗಳು ಅದರಲ್ಲೂ ರೈತರು ಮಹತ್ತರ ಪಾತ್ರ ವಹಿಸುತ್ತಾರೆ. ಹಿಂಸಾತ್ಮಕ ಮಾರ್ಗದಿಂದ ಮಾತ್ರ ಯಶಸ್ಸು

Scanned with OKEN Scanner

ದೊರಕುತ್ತದೆಂಬ ಸತ್ಯ ಎಲ್ಲರಿಗಿಂತ ಮೊದಲು ಆ ವರ್ಗಕ್ಕೆ ಅರಿವಾಗುತ್ತದೆ. ಅವರಿಗೆ ಸಾಮ್ರಾಜ್ಯಶಾಹಿಯೊಡನೆ ಯಾವುದೋ ವಿಧದ ರಾಜಿ ಅಥವಾ ಸಂಧಾನ ಸಾಧ್ಯವಿಲ್ಲ'[10] ಎನ್ನುತ್ತಾನೆ. ಇದರ ಜೊತೆಗೆ ಆಳ್ವಿಕೆಗೊಳಪಟ್ಟ ಜನರನ್ನು ಅರ್ಥಮಾಡಿಕೊಳ್ಳುವ ಯುರೋಪಿನ ಶೈಕ್ಷಣಿಕ ತಿಳುವಳಿಕೆಗೆ ಪರ್ಯಾಯವಾಗಿ ದೇಶೀ ಚಿಂತಕರು ತಮ್ಮದೇ ಆದ ವಿವೇಚನೆಗಳನ್ನು ರೂಪಿಸಿಕೊಳ್ಳುವ ಅಗತ್ಯಗಳನ್ನು ಫ್ಯಾನನ್ ಸೂಚಿಸುತ್ತಾನೆ. ಈ ಬಗೆಯ ಪರ್ಯಾಯ ದೃಷ್ಟಿಕೋನದಿಂದ ಮಾತ್ರ ನಮ್ಮನ್ನು ನಾವು ಅರ್ಥಮಾಡಿಕೊಳ್ಳಲು ಸಾಧ್ಯ ಎನ್ನುತ್ತಾನೆ.

ವಸಾಹತೋತ್ತರ ಚಿಂತನೆಯ ಸಂದರ್ಭದಲ್ಲಿ ಪ್ರಮುಖವಾಗಿ ಕೇಳಿಬರುವ ಮತ್ತೊಂದು ಹೆಸರು ಎಡ್ವರ್ಡ್ ಸೈದ್. ಈತನೂ ಗ್ರಾಂಷ್ಚಿಯ ರಾಜಕೀಯ ಚಿಂತನೆಗಳಿಂದ ಪ್ರಭಾವಿತನಾದವನು. ಅದರಲ್ಲೂ ಈತನ Orientalism ಮತ್ತು Culture and Imperialism ಕೃತಿಗಳು ವಸಾಹತೋತ್ತರ ಚಿಂತನೆಗಳನ್ನು ಸೈದ್ಧಾಂತಿಕವಾಗಿ ಪ್ರೇರೇಪಿಸಿವೆ. ಈತನ 'ಓರಿಯಂಟಲಿಸಂ' ಕೃತಿ ಒಂದು ಅರ್ಥದಲ್ಲಿ ಪಶ್ಚಿಮದ ಶೈಕ್ಷಣಿಕ ಶಿಸ್ತುಗಳನ್ನು ನೋಡುವ ದೃಷ್ಟಿಕೋನವನ್ನು ರೂಪಿಸುವಷ್ಟು ದಾರ್ಶನಿಕವಾದದ್ದು. ಆಧುನಿಕಪೂರ್ವ ಯುರೋಪಿನ ಜ್ಞಾನಶಿಸ್ತುಗಳು ಹೇಗೆ ಸಾಮ್ರಾಜ್ಯಶಾಹಿ ಹುನ್ನಾರಗಳನ್ನು ಪೂರೈಸಲು ಬಳಕೆಯಾಗುತ್ತವೆ ಎಂಬುದನ್ನು ಓರಿಯಂಟಲಿಸಂ ಕೃತಿ ವಿವರಿಸುತ್ತದೆ. ಯುರೋಪ್ 'ಪೂರ್ವ' ಎಂದು ಕರೆಯುವ ಕಲ್ಪಿತ ಭೂಭಾಗವು ಕೇವಲ ಶೈಕ್ಷಣಿಕ ಚರ್ಚೆಗಳಲ್ಲಿ ಮಾತ್ರ ಇಲ್ಲ. ಅದು ಯುರೋಪಿನ ಬಂಡವಾಳ ವಿಸ್ತರಣೆಯಾಗುವ ಮತ್ತು ಯುರೋಪಿನ ಅಧಿಕಾರದ ವ್ಯಾಪ್ತಿಗೆ ಒಳಪಡುವ ಅಧೀನ ರಾಷ್ಟ್ರಗಳ ಗುಂಪು. ಈ ರಾಷ್ಟ್ರಗಳನ್ನು ನಿಯಂತ್ರಿಸಲೆಂದೇ ಯುರೋಪಿನ ಜ್ಞಾನಶಿಸ್ತುಗಳು ವಸಾಹತಶಾಹಿಗಳಿಗೆ ಪೂರಕ ಮಾಹಿತಿಗಳನ್ನು ಒದಗಿಸುತ್ತವೆ. '18ನೇ ಶತಮಾನದ ಕೊನೆಯ ಹೊತ್ತಿಗೆ ಓರಿಯಂಟಲ್‌ವಾದವು ಯುರೋಪಿನ ಮುಖ್ಯ ಚರ್ಚೆಗಳಲ್ಲಿ ಆಕಾರಗೊಂಡಿತು. ಇದು 'ಪೂರ್ವ'ದ ಕುರಿತ ಸಂಗತಿಗಳನ್ನು ವಿವರಿಸಲು ತನ್ನನ್ನು ಸೀಮಿತಗೊಳಿಸಿಕೊಂಡಿತು. ಇದು ಪೂರ್ವವನ್ನು ಕುರಿತು ವಿವರಿಸುವ, ಅಧಿಕೃತವೆಂದು ಭಾವಿಸಲ್ಪಡುವ ಮತ್ತು ಆಳುವ ಎಲ್ಲ ಕ್ರಿಯೆಗಳನ್ನು ಒಳಗೊಂಡಿತು. ಓರಿಯಂಟಲ್‌ವಾದವೆಂದರೆ ಅದು ಪಶ್ಚಿಮದ ಆಕ್ರಮಣಕಾರೀ ಪ್ರವೃತ್ತಿಯ ಭಾಗವಾಗಿಯೇ ರೂಪಿಸಲ್ಪಟ್ಟಿದೆ. ಅದು ಪೂರ್ವವನ್ನು ಆಳುವುದಕ್ಕಾಗಿಯೇ ರಚನೆಗೊಂಡ ಚಿಂತನಾಕ್ರಮ'[11] ಎಂದು ಎಡ್ವರ್ಡ್ ಸೈದ್ ಓರಿಯಂಟಲ್‌ವಾದವನ್ನು ವಿವರಿಸುತ್ತಾನೆ.

ಸೈದ್ ಮುಂದುವರೆದು 'ಪಶ್ಚಿಮ ಮತ್ತು ಪೂರ್ವದ ಸಂಬಂಧವು ಅಧಿಕಾರದ ಮತ್ತು ಆಕ್ರಮಣದ ಸುತ್ತ ಹೆಣೆದುಕೊಂಡಿದೆ'[12] ಎನ್ನುತ್ತಾನೆ. ಜೊತೆಗೆ ಪುನರುಜ್ಜೀವನ ನಂತರ ಯುರೋಪಿನಲ್ಲಿ ಕಾಣಿಸಿಕೊಂಡ ಸಮಾಜಶಾಸ್ತ್ರ ವಿವಿಧ ಶಾಖೆಗಳಾದ ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಸಮಾಜಶಾಸ್ತ್ರಗಳು ಅಧಿಕಾರಸ್ಥ ಕೇಂದ್ರಗಳ ಅಧ್ಯಯನ ಗಾಗಿಯೇ ರೂಪುಗೊಂಡವು[13]. ಅವು ಯುರೋಪಿನ ದಂಡಯಾತ್ರೆಗಳ ಜೊತೆಗೆ ವಸಾಹತುಗಳು ತಮ್ಮ ವಿಸ್ತರಿಸಿಕೊಂಡವು ಎನ್ನುತ್ತಾನೆ. ಈ ಕಾರಣದಿಂದ ಪ್ರೌ ವಿದ್ವಾಂಸನೊಬ್ಬ ಈಜಿಪ್ತನಲ್ಲಿರಲಿ ಅಥವಾ ಇಂಡಿಯಾದಲ್ಲಿ ಆತ 19ನೇ ಶತಮಾನದ ತನ್ನ ಸಮಕಾಲೀನ ಅಧಿಕಾರ ರಾಜಕಾರಣದ ಹೊರತಾಗಿ ತನ್ನ ವಸಾಹತುಗಳ ಪರಿಭಾವಿಸಲಾರ. 19ನೇ ಶತಮಾನದಲ್ಲಿ ಈಜಿಪ್ತ ಇಂಡಿಯಾದಂತಹ ದೇಶಗಳ ಕುರಿತು ಸೃಷ್ಟಿಯಾದ ಜ್ಞಾನ ಯುರೋಪಿನ ಆಕ್ರಮಣಕಾರೀ ರಾಜಕಾರಣದ ಮೊತ್ತವೇ ಎನ್ನುತ್ತಾನೆ ಎಡ್ವರ್ಡ್ ಸೈದ್. ಸೈದ್‌ನ ಚಿಂತನೆಗಳು ಮುಂದೆ ಜಗತ್ತಿನಲ್ಲಿ ಆಧುನಿಕೋತ್ತರವಾದ ಹುಟ್ಟಲು ಕಾರಣವಾಗುತ್ತ ಭಾರತದಲ್ಲಿ ಅಶೀಶ್‌ನಂದಿ, ಅನಂದಕುಮಾರಸ್ವಾಮಿ ಜಿ.ಎನ್.ದೇವಿ, ಕನ್ನಡದ ಸಂದರ್ಭದಲ್ಲಿ ಅನಂತಮೂರ್ತಿ ಮತ್ತು ಡಿ.ಆರ್.ನಾಗರಾಜ್ ಅವರು ಪ್ರಮುಖವಾಗಿ ಈ ವಾದವನ್ನು ಪ್ರಚುರಗೊಳಿಸಿದರು. ಆಧುನಿಕೋತ್ತರವಾದ ದೇಶೀ ಜ್ಞಾನವನ್ನು ಸ್ಥಳೀಯ ಸಂಸ್ಕೃತಿಗಳು ಪಶ್ಚಿಮ ಪರ್ಯಾಯವಾಗಿ ಕಟ್ಟಿಕೊಂಡಿರುವುದನ್ನು ಮತ್ತು ಈ ಸಂಸ್ಕೃತಿಗ ಸ್ಮೃತಿಯಲ್ಲಿ ಸಂಚಯಗೊಂಡಿರುವ ಜ್ಞಾನ ಪರಂಪರೆಯ ಪಶ್ಚಿಮದ ಮಹಾಕಥನಗಳಿಗೆ ಪರ್ಯಾಯವಾಗಿ ಎತ್ತಿ ನಿಲ್ಲಿಸು ಕೆಲಸವನ್ನು ಮಾಡಿತು. ದೇಶೀ ಪರಂಪರೆ, ದೇಶೀ ಜ್ಞಾ ಮತ್ತು ದೇಶೀಯ ಅಧ್ಯಯನ ವಿಧಾನಗಳನ್ನು ಕಂಡುಕೊಳ್ಳು ನಿಟ್ಟಿನಲ್ಲಿ ಈ ಪ್ರಸ್ಥಾನದ ಚಿಂತಕರು ಮಹತ್ವದ ಕೆಲ ಮಾಡಿದರೂ ಸಹ, ಇವರು ಹೆಚ್ಚಾಗಿ ಯಾವುದನ್ನು ದೇಶೀಯ ಪರಂಪರೆ ಎಂದು ಭಾವಿಸಿದ್ದರೋ ಅದು ಮುಖ್ಯವಾಗಿ ಪ್ರತಿಷ್ಠಿತ ವರ್ಗಗಳ ಜ್ಞಾನ ಪರಂಪರೆಯೇ ಆಗಿತ್ತು[15]. ದೇಶೀಯ ಸಮುದಾಯಗಳ ಸ್ಮೃತಿಗಳಲ್ಲಿನ ಜ್ಞಾನರೂಪಗಳ ಯುರೋಪಿನ ಮಹಾಕಥನಗಳಿಗೆ ಪರ್ಯಾಯವಾಗಬಲ್ಲವು. ಈ ಕಾರಣದಿಂದಾಗಿ ಸಮುದಾಯಗಳಿಗೆ ಆವರಿಸಿರುವ ವಿಸ್ಮೃತಿಗಳಲ್ಲಿನ ಜ್ಞಾನರೂಪಗಳು ಯುರೋಪಿನ ಮಹಾಕಥನಗಳಿಗೆ ಪರ್ಯಾಯವಾಗಬಲ್ಲವು. ಆ ಕಾರಣದಿಂದಾಗಿ ಸಮುದಾಯಗಳಿಗೆ ಆವರಿಸಿರುವ ವಿಸ್ಮೃತಿಯನ್ನು ಹೋಗಲಾಡಿಸಿ, ಅವರ ಜ್ಞಾನಪರಂಪರೆಗಳಿಗೆ ಮರು ಜೀವ ನೀಡಬೇಕು ಎಂಬ ನಿಲುವುಗಳನ್ನು ಈ ಚಿಂತಕರು ಮಂಡಿಸಿದರು. ಜಿ.ಎನ್.ದೇವಿ Arter Amnesia: Tradition and change in Indian literary criticism ಕೃತಿಯಲ್ಲಿ ಈ ವಾದವನ್ನು ಮಂಡಿಸಿದರೆ, ಕನ್ನಡದಲ್ಲಿ ಡಿ.ಆರ್. ನಾಗರಾ

ಅಕ್ಷರ ಚಿಂತನೆಯ ಮಾಲೆಯ ಮೂಲಕ ಅನೇಕ ಪುಸ್ತಕಗಳನ್ನು ಸಂಪಾದಿಸಿ ಪ್ರಕಟಿಸುವುದರ ಮೂಲಕ ಈ ವಾದವನ್ನು ಹೆಚ್ಚು ವಿಸ್ತರಿಸಿದರು.

ವಸಾಹತೋತ್ತರ ಸಂದರ್ಭದಲ್ಲಿ ಭಾರತದಲ್ಲಿ ಸಬಾಲ್ಟ್ರನ್ ಅಧ್ಯಯನಗಳು ಮಾರ್ಕ್ಸ್‌ವಾದಿಗಳಿಂದ ಆರಂಭವಾದವು. ಇವರಿಗೂ ಮುನ್ನ, ಪೆರಿಯಾರ್, ಅಂಬೇಡ್ಕರ್, ಲೋಹಿಯಾ ಈ ಅಧ್ಯಯನಗಳಿಗೆ ಬೇಕಾದ ಭಿನ್ನ ದಾರಿಗಳ ಹೊಳಹುಗಳನ್ನು ತೆರೆದಿಟ್ಟಿದ್ದರು. ಭಾರತದ ಸಬಾಲ್ಟ್ರನ್ ಅಧ್ಯಯನಕಾರರ ಬೆನ್ನಿಗೆ ಇವರ ಪ್ರೇರಣೆಗಳೂ ಇವೆ. ಇವರು ಭಾರತ ದೇಶದ ಅಲಕ್ಷಿತ ಸಮುದಾಯಗಳಾದ ರೈತ, ಆದಿವಾಸಿ ಮತ್ತು ಅಲೆಮಾರಿ ಸಮುದಾಯಗಳ ತಿಳುವಳಿಕೆಯ ಜಗತ್ತನ್ನು ಅನಾವರಣ ಮಾಡುವ ಮೂಲಕ ಹೊಸ ಶೈಕ್ಷಣಿಕ ನೋಟಕ್ರಮವನ್ನು ರೂಪಿಸಿದರು. ಅಭಿಜಾತ ಮಾನವಶಾಸ್ತ್ರದ ಅಧ್ಯಯನ ವಿಧಾನವನ್ನು ಪ್ರಜ್ಞಾಪೂರ್ವಕವಾಗಿ ಮೀರುವ ಪ್ರಯತ್ನಗಳು ಭಾರತದಲ್ಲಿ ಈ ಅಧ್ಯಯನಗಳ ಮೂಲಕ ಸಂಭವಿಸಿದವು. ರಂಜಿತ್ ಗುಹಾ, ಡೇವಿಡ್ ಹಾರ್ಡಿಮನ್. ಸುಮಿತ್ ಸರ್ಕಾರ್, ಗಾಯತ್ರಿ ಸ್ಪಿವಾಕ್ ಮುಂತಾದ ಚಿಂತಕರು ಈ ಪ್ರಸ್ಥಾನವನ್ನು ಭಾರತದಲ್ಲಿ ಬೆಳೆಸಿದರು. ಈ ಅಧ್ಯಯನಗಳು ಮುಖ್ಯವಾಗಿ ಸ್ಥಾಪಿತ ಶೈಕ್ಷಣಿಕ ವಿಧಾನವನ್ನಷ್ಟೇ ಅಲ್ಲದೆ, ಸಮಕಾಲೀನ ರಾಜಕೀಯ ವಿದ್ಯಮಾನಗಳನ್ನು ಪ್ರಶ್ನಿಸಿದವು. ಇಲ್ಲಿಯವರೆಗೆ ಯಾವ ಶೈಕ್ಷಣಿಕ ಮತ್ತು ರಾಜಕೀಯ ನಂಬಿಕೆಗಳು ಮೂರನೇ ಜಗತ್ತನ್ನು ಅದರಲ್ಲೂ ಭಾರತದ ತಿಳುವಳಿಕೆಯ ಕ್ಷೇತ್ರವನ್ನು ನಿಯಂತ್ರಿಸುತ್ತಾ ಬಂದಿದ್ದವೋ ಆ ಗ್ರಹೀತಗಳನ್ನು ಸಬಾಲ್ಟ್ರನ್ ಅಧ್ಯಯನಗಳು ಪ್ರಶ್ನಿಸಿದವು ಮತ್ತು ಈ ದೇಶದ ಕೆಳಜಾತಿ, ಆದಿವಾಸಿ, ಅಲೆಮಾರಿ ಮತ್ತು ಅಂಚಿನ ಸಮುದಾಯಗಳ ತಿಳುವಳಿಕೆಯ ಲೋಕವನ್ನು ಸೈದ್ಧಾಂತಿಕವಾಗಿ ಮಂಡಿಸುವ ಮೂಲಕ ಪರ್ಯಾಯ ಅಧ್ಯಯನ ವಿಧಾನವನ್ನು ಈ ಅಧ್ಯಯನಗಳು ರೂಪಿಸಿದವು.

ಪರ್ಯಾಯ ಶೈಕ್ಷಣಿಕ ವಿಧಾನದ ಹಂಬಲಗಳು

ನಮ್ಮ ನಡುವಿನ ಸೂಕ್ಷ್ಮ ಸಂವೇದಿ ಸಂಸ್ಕೃತಿ ಚಿಂತಕ, ಭಾಷಾಶಾಸ್ತ್ರಜ್ಞ ಮತ್ತು ಈಗ ಬುಡಕಟ್ಟು ಮತ್ತು ಅಲೆಮಾರಿಗಳ ನಡುವೆ ಕೆಲಸ ಮಾಡುತ್ತಿರುವ ಜಿ.ಎನ್.ದೇವಿ ತಮ್ಮ ಒಂದು ಲೇಖನದಲ್ಲಿ ಟಿಪ್ಪಣಿ ಬರೆದಿದ್ದಾರೆ. 'ಇದು ಒಂದು ವ್ಯಕ್ತಿಗತ ಟಿಪ್ಪಣಿ, ಗಿರೀಶ್ ಕರ್ನಾಡರ ಪ್ರಸಿದ್ಧ ನಾಟಕ ಹಯವದನವನ್ನು ಆರಂಭದಲ್ಲೇ ಉಲ್ಲೇಖಿಸಲಿಚ್ಚಿಸುತ್ತೇನೆ. ಅಪರಿಪೂರ್ಣತೆ ಈ ನಾಟಕದ ವಸ್ತು. ಅರ್ಧ ವ್ಯಕ್ತಿ, ಅರ್ಧ ಕುದುರೆ ಪಾತ್ರವಾದ 'ಹಯವನದ'ವನ್ನು ಗಿರೀಶ್ ಕಾರ್ನಾಡರು ನಾಟಕದ ಆರಂಭದಲ್ಲಿಯೇ ಪರಿಚಯಿಸುತ್ತಾರೆ. ಸಮಕಾಲೀನ ಬೌದ್ಧಿಕ ವಲಯದಲ್ಲಿ ವಿಮರ್ಶಕನಾಗಿ ದುಡಿಯುತ್ತಿರುವ ನನಗೆ, ನಾನೊಬ್ಬ ಬೌದ್ಧಿಕ ಹಯವದನ ಇರಬಹುದೇ ಎಂಬ ಭಾವನೆ ಆಗಾಗ ಕಾಡುತ್ತದೆ. ನನ್ನ ದೇಹದ ಎಲ್ಲಾ ರಕ್ತಕಣಗಳೂ ಭಾರತೀಯ ಮಣ್ಣು, ನೀರು, ಗಾಳಿಯಿಂದ ಮಾಡಲ್ಪಟ್ಟಿದ್ದರೆ, ನನ್ನ ಮಿದುಳಿನಲ್ಲಿ ಸಂಗಹಿತವಾಗಿರುವ ಜ್ಞಾನ ಎಲ್ಲಿಂದಲೋ ಬಂದಂತೆ ಕಾಣುತ್ತದೆ'[೧೮] ಎನ್ನುತ್ತಾರೆ. ಬಹುಕಾಲ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತಕರಾಗಿ After Amnesia ದಂತಹ ಪುಸ್ತಕದ ಮೂಲಕ ದೇಶೀಯ ಜ್ಞಾನ ಪರಂಪರೆಗಳ ಮಹತ್ವದ ಕುರಿತು ತೀವ್ರವಾಗಿ ಬರೆದ ದೇವಿಯವರು ತಮ್ಮನ್ನು 'ಹಯವದನ' ರೂಪಕದ ಮೂಲಕ ಭಾವಿಸಿಕೊಳ್ಳುವುದು ದೇಶೀ ಚಿಂತಕನ ತೀವ್ರ ಆತ್ಮವಿಮರ್ಶೆಯಂತೆ ಕಾಣುತ್ತದೆ. ದೇವಿ ಒಬ್ಬ ಚಿಂತಕನಾಗಿ ವಸಾಹತೋತ್ತರ ಸಂದರ್ಭದ ತನ್ನೆಲ್ಲ ಓರಿಗೆಯ ಲೇಖಕರನ್ನು ಸಮರ್ಥವಾಗಿ ಪ್ರತಿನಿಧಿಸುವವರು. ಅದರಲ್ಲೂ ಆಧುನಿಕೋತ್ತರ ವಿದ್ವಾಂಸರಲ್ಲಿ ದೇವಿಯವರಿಗೆ ಮಹತ್ವದ ಸ್ಥಾನವಿದೆ. ಈ ಕಾರಣದಿಂದ ತಮ್ಮ ತಿಳುವಳಿಕೆಯನ್ನು 'ಅನ್ಯ' ಎಂದು ಭಾವಿಸುವ ಒರಟು ಸಿನಿಕತನ ದೇವಿಯವರಿಂದ ವ್ಯಕ್ತವಾಗಲಾರದು. ದೇವಿಯವರಂತೆ ಆಧುನಿಕೋತ್ತರ ಸಂದರ್ಭದಲ್ಲಿ ಸ್ಥಳೀಯ ಸಂಸ್ಕೃತಿಗಳ ಕುರಿತು ಚಿಂತಿಸುವ ಪ್ರತಿಯೊಬ್ಬ ಚಿಂತಕನಿಗೆ ಈ 'ಹಯವದನದ' ರೂಪಕವು ಲಗಾಮು ಹಾಕುತ್ತಲೇ ಇರುಬೇಕು. ಈ ಬಗೆಯ ಆತ್ಮವಿಮರ್ಶೆಯು ಪರ್ಯಾಯ ಚಿಂತನಾಕ್ರಮ ಮತ್ತು ಪರ್ಯಾಯ ಅಧ್ಯಯನ ವಿಧಾನಗಳನ್ನು ಹಂಬಲಿಸುವಂತಹ ರಚನಾತ್ಮಕ ತಳಮಳಗಳನ್ನು ಹುಟ್ಟುಹಾಕಬೇಕಿದೆ. ದೇವಿ ಸಾಹಿತ್ಯ ವಿಮರ್ಶೆ ಮತ್ತು ಭಾಷಾವಿಜ್ಞಾನದ ಅಧ್ಯಯನಗಳಿಂದ ಬುಡಕಟ್ಟು ಮತ್ತು ಅಲೆಮಾರಿ ಸಮುದಾಯಗಳ ಕಡೆಗೆ ನಡೆದು ಹೋದದ್ದು ಈ ಬಗೆಯ ರಚನಾತ್ಮಕ ತಳಮಳಗಳಿಂದಾಗಿಯೇ ಎನ್ನಿಸುತ್ತದೆ.

ಪಶ್ಚಿಮವನ್ನು ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ತೀವ್ರ ಪರಿಶೀಲನೆಗೆ ಒಳಪಡಿಸದ ಹೊರತು ಸ್ಥಳೀಯವಾದ ಮತ್ತು ದೇಶೀಯ ಅಧ್ಯಯನ ಕ್ರಮಗಳನ್ನು ಕಂಡುಕೊಳ್ಳಲು ಸಾಧ್ಯವಿಲ್ಲ. ಕಳೆದ ಮುನ್ನೂರು ವರ್ಷಗಳಿಂದ ಯಾರಿಂದ ನಾವು ವ್ಯಾಖ್ಯಾನಿಸಲ್ಪಟ್ಟೆವು? ಯಾರು ಹೇಗೆಲ್ಲ ನಮ್ಮನ್ನು ವ್ಯಾಖ್ಯಾನಿಸಿದರು? ಯಾವ ವ್ಯಾಖ್ಯಾನದ ಕ್ರಮಗಳು ನಮ್ಮ ಚಿಂತನೆಗಳನ್ನು ನಿಯಂತ್ರಿಸುತ್ತಿವೆ? ಎಂಬುದನ್ನು ವಿವರಿಸಿಕೊಳ್ಳದ ಹೊರತು ನಾವು ಕನಸುವ ಪರ್ಯಾಯ ನೋಟದ ಕ್ರಮಗಳು ರೂಪುಗೊಳ್ಳಲಾರವು. ಅದರಲ್ಲೂ ಪಶ್ಚಿಮದ ಶೈಕ್ಷಣಿಕ ವಿಧಾನಗಳನ್ನು ಅದರ ರಾಜಕೀಯಾರ್ಥಿಕ ಹುನ್ನಾರಗಳಲ್ಲಿಟ್ಟು ಪರಿಭಾವಿಸದ ಹೊರತು ನಾವು 'ನಮ್ಮದೇ' ಆದ ಅಧ್ಯಯನ ವಿಧಾನಗಳನ್ನು ಸೈದ್ಧಾಂತಿಕವಾಗಿ ನಿರೂಪಿಸಿಕೊಳ್ಳಲು ಸಾಧ್ಯವಿಲ್ಲ.

ನಾವು ನಮ್ಮನ್ನು ನೋಡಿಕೊಳ್ಳುವ ವಿಧಾನವು ನಮ್ಮ ಲೌಕಿಕ ಬದುಕಿಗೆ ಸಂಬಂಧಿಸಿದ್ದು. ನಮ್ಮ ಒಳಿತು ಕೆಡುಕುಗಳ ರಾಜಕಾರಣಕ್ಕೆ ಸಂಬಂಧಿಸಿದ್ದು. ಯಾಕೆಂದರೆ ಸಮಾಜ ವಿಜ್ಞಾನಗಳಲ್ಲಿ ನಡೆಯುವ ಸಂಶೋಧನೆಯು ನಾವು ಬದುಕುವ

ಸಮಾಜಕ್ಕೆ ಮತ್ತು ಮನುಷ್ಯರಿಗೆ ಸಂಬಂಧಪಟ್ಟದ್ದಾಗಿದೆ. ಆದರೆ ಇಲ್ಲಿಯವರೆಗೆ ನಮ್ಮ ಸಮಾಜ ಮತ್ತು ಇಲ್ಲಿನ ಮನುಷ್ಯರನ್ನು ನಿರ್ವಚಿಸಿದ್ದು ಯುರೋಪಿನ ಹಲವು ಕ್ಷೇತ್ರಕ್ಕೆ ಸಂಬಂಧಿಸಿದ ವಿದ್ವಾಂಸರು. ಓರಿಯಂಟಲಿಸ್ಟರು, ಇತಿಹಾಸಜ್ಞರು, ಮಾನವಶಾಸ್ತ್ರಜ್ಞರು ತಮ್ಮನ್ನು ಕರೆತಂದ ವಸಾಹತುಶಾಹಿಗಳ ರಾಜಕೀಯ ದೃಷ್ಟಿಕೋನಕ್ಕೆ ಪೂರಕವಾಗಿಯೇ ನಮ್ಮನ್ನು ವ್ಯಾಖ್ಯಾನಿಸಿದರು. ಇಂಡೆನ್ ಪ್ರಕಾರ 'ಭಾರತವನ್ನು ಕುರಿತು ರಚನೆಗೊಂಡಿರುವ ಸಂವಾದಗಳನ್ನೆಲ್ಲ 'ವಿರಚಿಸುವುದು' ಮೊದಲ ಹೆಜ್ಜೆಯಾಗುತ್ತದೆ. ಈ ಸಂವಾದಗಳ ಸ್ವರೂಪ ಮತ್ತು ಪರಿಣಾಮಗಳ ಬಗ್ಗೆ ಎಚ್ಚರವನ್ನು ಪಡೆಯದೆ ಅವುಗಳಿಂದ ತಪ್ಪಿಸಿಕೊಂಡು ಬರಲು ಸಾಧ್ಯವಿಲ್ಲ'[17]. ಈ ಮೊದಲೇ ಹೇಳಿದಂತೆ ಬೌದ್ಧಿಕವಾಗಿ ವಸಾಹತುಶಾಹಿಯಿಂದ ವಿಮೋಚನೆ ಪಡೆಯುವುದು ನಮಗೆ ಇನ್ನೂ ಸಾಧ್ಯವಿಲ್ಲ. ಏಕೆಂದರೆ 'ವಸಾಹತುಶಾಹಿಯು ವಸಾಹತೀಕರಣಕ್ಕೊಳಪಟ್ಟವರನ್ನು ಕೇವಲ ಭೌತಿಕವಾಗಿ ಮಾತ್ರ ಆಕ್ರಮಿಸಿಕೊಳ್ಳುವುದಿಲ್ಲ. ಆ ಜನರ ಮನಸ್ಸನ್ನು ವಸಾಹತೀಕರಣಗೊಳಿಸುತ್ತದೆ. ಜೊತೆಗೆ ವಸಾಹತೀಕರಣಗೊಂಡ ಸಮಾಜವು ತನ್ನ ಸಾಂಸ್ಕೃತಿಕ ಆದ್ಯತೆಗಳನ್ನು ಸಂಪೂರ್ಣವಾಗಿ ಬದಲಿಸಿಕೊಳ್ಳದಷ್ಟು ವಸಾಹತುಶಾಹಿಯು ತನ್ನ ಕಬಂಧ ಬಾಹುಗಳನ್ನು ವಿಸ್ತರಿಸಿಕೊಳ್ಳುತ್ತದೆ'[18]. ಅಶೀಶ್ ನಂದಿ ವಸಾಹತಶಾಹಿಯನ್ನು ಕೇವಲ ಒಂದು ರಾಜಕೀಯಶಕ್ತಿ ಎಂದು ಮಾತ್ರ ಪರಿಭಾವಿಸುವುದಿಲ್ಲ. ಜೊತೆಗೆ ವಿಮೋಚಿತ 'ವಸಾಹತವು ಸ್ವಾತಂತ್ರ್ಯ ಸಿಕ್ಕ ತಕ್ಷಣ ಅದು ವಸಾಹತುಶಾಹಿಯಿಂದ ಮುಕ್ತಿ ಪಡೆದಂತಲ್ಲ. ವಸಾಹತುಶಾಹಿಯು ಒಂದು ಮನಃಸ್ಥಿತಿ. ಅದು ತನ್ನದಲ್ಲದ ಸಮಾಜದಲ್ಲೂ ಸುಲಭವಾಗಿ ಅಂತರ್ಗತವಾಗಿ ಬಿಡುವ ಪ್ರಕ್ರಿಯೆ'[19] ಎನ್ನುತ್ತಾರೆ.

ಇದರಿಂದಾಗಿ ವಸಾಹತು ಸಂದರ್ಭದ ಜ್ಞಾನಕ್ರಮಗಳು ವಸಾಹತುಗಳಲ್ಲಿ ಇಲ್ಲಿಯವರೆಗೂ ಪ್ರಶ್ನಿತವಾಗದೆ ಚಾಲ್ತಿಯಲ್ಲಿದ್ದವು. ಇಲ್ಲಿಯವರೆಗೂ ನಾವು ಪಶ್ಚಿಮದ ಕಣ್ಣುಗಳ ಮೂಲಕ ನಮ್ಮನ್ನು ನಾವು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದೇವೆ. ಹಾಗೆಂದು ಪಶ್ಚಿಮದಲ್ಲಿನ ಎಲ್ಲ ಜ್ಞಾನಕ್ರಮಗಳನ್ನು ನೋಡಬೇಕಿಲ್ಲ. ವಿಮೋಚಿತ ವಸಾಹತುಗಳಲ್ಲಿ ಮಾಜಿ ಯಜಮಾನರು ಬಿಟ್ಟುಹೋದ ನೋಟಕ್ರಮಗಳನ್ನು ನಾವು ಪರಿಶೀಲಿಸುವ ಅಗತ್ಯವಿದೆ. ಈ ಹೇಳಿಕೆಯನ್ನು ನಾವು ಹಲವು ಉದಾಹರಣೆಗಳ ಮೂಲಕ ಸಮರ್ಥಿಸಬಹುದು. ವಸಾಹತು ಆಡಳಿತದ ಯಾವ ಅಧಿಕಾರಿಗಳು ಮತ್ತು ಆ ಸಂದರ್ಭದ ವಿದ್ವಾಂಸರು ಇಲ್ಲಿನ ಅಲೆಮಾರಿಗಳನ್ನು, ಆದಿವಾಸಿಗಳನ್ನು ಕಳ್ಳರು, ಅಪರಾಧಿಗಳು ಎಂದು ಪರಿಭಾವಿಸಿದ್ದರೋ ಅದೇ ಬಗೆಯ ಸೈದ್ಧಾಂತಿಕತೆ, ಈವತ್ತೂ ವಿಮೋಚಿತ ವಸಾಹತುಗಳ ವಿದ್ವಾಂಸರಲ್ಲಿ ಜೀವಂತವಾಗಿದೆ.

ಈ ಕಾರಣದಿಂದ ಅಭಿಜಾತ ಮಾನವಶಾಸ್ತ್ರವು ತಾನು ಅಧ್ಯಯನ ಮಾಡುವ ಸಮುದಾಯಗಳ ಪರವಾಗಿರುವುದಿಲ್ಲ. ಮೆಮ್ಮಿ ಪ್ರಕಾರ 'ಮಾನವಶಾಸ್ತ್ರಜ್ಞನು ಯಾವತ್ತೂ ಶಕ್ತಿರಾಜಕಾರ ಮಾಡುವ ಪ್ರಬಲ ಗುಂಪಿನ ಪರವಾಗಿರುತ್ತಾನೆ. ಜೊತೆ ವಸಾಹತಶಾಹಿ ಆಡಳಿತದ ಚಲನೆಗಳನ್ನು ಯಾವತ್ತೂ ಸಮರ್ಥಿಸುತ್ತಿರುತ್ತಾನೆ. ಮತ್ತು ಆಳಿಸಿಕೊಳ್ಳುವ ಜನಕ್ಕೆ ತಾನು ಒಳಿತನ್ನು ಸಾಧಿಸಿಕೊಳ್ಳುವ ಶಕ್ತಿ ಇಲ್ಲದವರೆಂದು ನಂಬಿಸುತ್ತಾನೆ'[20]. ಈ ಮೊದಲೇ ಹೇಳಿದಂತೆ ಆಳಿಸಿಕೊಳ್ಳುವ ಜನರನ್ನು ವಸಾಹತು ಶಕ್ತಿಗಳು ಬೌದ್ಧಿಕವಾಗಿ ನಾಶ ಮಾಡಿದವು. ಯಾವ ಓರಿಯಂಟಲಿಸ್ಟರು 'ಭವ್ಯ, ಆದರ್ಶ, ಭಾರತವನ್ನು ರಮ್ಯವಾಗಿ ಚಿತ್ರಿಸಿದರೋ ಅದರ ವಿವರಗಳನ್ನು ಇಟ್ಟುಕೊಂಡು ಮುಂದೆ ಬಂದ ಆಡಳಿತಗಾರರು ವಿದ್ವಾಂಸರು ಯುರೋಪಿನ ಮಾನವಶಾಸ್ತ್ರಜ್ಞರು ವಸಾಹತು ಭಾರತದ ಸಮಾಜದ ಆತ್ಮಪ್ರತ್ಯಯದ ನಾಶಕ್ಕೆ ಕೈ ಹಾಕಿದರು.

ಮಾನವಶಾಸ್ತ್ರದ ಶೈಕ್ಷಣಿಕ ಆದ್ಯತೆಗಳಲ್ಲಿ ಮೊದಲನೆಯದು 'ಮಾಹಿತಿಯನ್ನು' ಕ್ರೋಢೀಕರಿಸುವುದು. ಸಂಗ್ರಹಿಸಿದ ಮಾಹಿತಿಯನ್ನು ಮಹತ್ವದ್ದೆಂದು ಸಂರಕ್ಷಿಸುವುದು. ತಾವು 'ಅಧ್ಯಯನ' ಮಾಡುವ ಜನರ ಮೇಲ್‌ಸ್ತರದ ವಿವರಗಳನ್ನೆ ಅತ್ಯಂತಿಕ ಸತ್ಯಗಳೆಂದು ಪರಿಗಣಿಸುವುದು ಅಭಿಜಾತ ಮಾನವಶಾಸ್ತ್ರದ ಗುಣ. ಇಲ್ಲಿ ಪಡೆದ ಮಾಹಿತಿಯ ಮರುಪರಿಶೀಲನೆ ಇರುವುದಿಲ್ಲ. ಉದಾಹರಣೆಗೆ ಸಿದ್ದಿಯರು ಮುದ್ದೆ ಮಾಡುವಾಗ ಹಿಟ್ಟನ್ನು ಸರಿಯಾಗಿ ಮಿಶ್ರಣ ಮಾಡಲು ಒಂದು ಮರದ ಕೋಲನ್ನು ಬಳಸುತ್ತಾರೆ. ಮತ್ತು ಸಿದ್ದಿ ಸಮುದಾಯದವರು ಯಾವತ್ತೂ ಮುದ್ದೆಯನ್ನು ಆಹಾರಕ್ಕಾಗಿ ಬಳಸುತ್ತಾರೆ. ಸಿದ್ದಿಯರು ಮುದ್ದೆ ಮಾಡಲು ಬಳಸುವ ಮುದ್ದೆಕೋಲು 'ಇಷ್ಟು ಉದ್ದ, ಇಷ್ಟು ಅಗಲ' ಇರುತ್ತದೆ. ಈ ಮುದ್ದೆಕೋಲು ಕಾಲಾನಂತರ ನಶಿಸಿಹೋಗಿಬಿಡಬಹುದು. ಇದನ್ನು ಮುಂದಿನ ಪೀಳಿಗೆಗಾಗಿ ರಕ್ಷಿಸಬೇಕು ಎಂದು ಮಾನವಶಾಸ್ತ್ರಜ್ಞನೊಬ್ಬ ಯೋಚಿಸಿಬಿಡುತ್ತಾನೆ. ಮದ್ರಾಸಿನ ಮಾನವಶಾಸ್ತ್ರೀಯ ವಸ್ತು ಸಂಗ್ರಹಾಲಯದಲ್ಲಿ ತೋಡ, ಬಡಗ ಮತ್ತು ಇರುಳ ಮುಂತಾದ ಸಮುದಾಯಗಳ ತಲೆ ಬುರುಡೆ, ಅಸ್ತಿ ಪಂಜರ ಸಮೇತ ಆಯಾ ಸಮುದಾಯಗಳ ದಿನ ಬಳಕೆಯ ಪರಿಕರಗಳ ಸಂಗ್ರಹವನ್ನು ನೋಡಬಹುದು. ಅಲ್ಲಿನ 'ವಸ್ತುಗಳು' ಕೆಲವು 'ಕಥೆ' ಹೇಳುತ್ತವೆ. ಆದರೆ ಪಶ್ಚಿಮದ ಮಾನವಶಾಸ್ತ್ರಕ್ಕೆ ಸಿದ್ದಿಯರು ಆಹಾರಕ್ಕೆ ಮುದ್ದೆಯನ್ನೇ ಏಕೆ ಬಳಸುತ್ತಾರೆ? ಸಿದ್ದಿಯರು ಈ ಮುದ್ದೆ ಕೋಲನ್ನು ಬಳಸಿ ದಿನಕ್ಕೆ ಎಷ್ಟು ಬಾರಿ ಅಡುಗೆ ಮಾಡುತ್ತಿದ್ದರು? ಸಿದ್ದಿಯರು ದಿನಕ್ಕೆ ಎಷ್ಟು ಬಾರಿ ಮುದ್ದೆಯನ್ನು ಊಟ ಮಾಡುತ್ತಿದ್ದರು? ಎಂಬ ಪ್ರಶ್ನೆಗಳು ಕಾಡುವುದಿಲ್ಲ. ಆ ಕ್ಷಣಕ್ಕೆ ಪಡೆದ ವಿವರಗಳು ಮಾತ್ರ ಮಾನವಶಾಸ್ತ್ರಕ್ಕೆ ಅತ್ಯಂತಿಕ. ಅದಕ್ಕೆ ಕ್ಲಿಫಾರ್ಡ್

'ಮಾನವಶಾಸ್ತ್ರದ ಸತ್ಯಗಳು ಅರ್ಧ ಸತ್ಯಗಳಾಗಿರುತ್ತವೆ. ಜೊತೆಗೆ ಈ ಸತ್ಯಗಳು ನಿಶ್ಚಿತ ಹಿತಾಸಕ್ತಿಗಳನ್ನು ರಕ್ಷಿಸಲು ಬದ್ಧವಾಗಿರುತ್ತವೆ'[21] ಎನ್ನುತ್ತಾನೆ. ಅಭಿಜಾತ ಮಾನವಶಾಸ್ತ್ರ ಯಾವುದನ್ನು ಈ ಕ್ಷಣದ ಸತ್ಯ ಎಂದು ನಂಬುತ್ತದೋ ಅದು ಸ್ಥಳೀಯ ಸಾಮಾಜಿಕ ಸಂದರ್ಭದಲ್ಲಿ ಸಾಮಾನ್ಯ ವಿವರವಾಗಿ ಮಾತ್ರ ಲಭ್ಯವಾಗಿರುತ್ತದೆ. ಒಟ್ಟಿನಲ್ಲಿ ಅಭಿಜಾತ ಮಾನವಶಾಸ್ತ್ರಕ್ಕೆ ಭಾರತದಂತಹ ದೇಶದ ಸಮಾಜದ ತಿಳುವಳಿಕೆಯನ್ನು ಜ್ಞಾನದ ಮಟ್ಟದಲ್ಲಿ ವಿವರಿಸಿಕೊಳ್ಳುವ ಜರೂರು ಇರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇದೇ ಬಗೆಯ ಶೈಕ್ಷಣಿಕ ವಿಧಾನವನ್ನು ಸ್ಥಳೀಯ, ದೇಶೀಯ ಮಾನವಶಾಸ್ತ್ರಜ್ಞರು ಇಂದಿಗೂ ಅನುಸರಿಸುತ್ತಿರುವುದು ಒಂದು ವಿಪರ್ಯಾಸ.

ಮೇಲೆ ಉಲ್ಲೇಖಿಸಿದ ಜಿ.ಎನ್.ದೇವಿ ಅವರ ಲೇಖನದ ಕೊನೆಗೆ 'ಬ್ರಿಟಿಶ್ ವಸಾಹತು ಕಾಲದಿಂದ ಪಶ್ಚಿಮ ಮತ್ತು ಭಾರತದ ನಡುವಿನ ಬೌದ್ಧಿಕ ವ್ಯಾಪಾರ ಏಕಮುಖವಾಗಿ ಸಾಗಿದೆ. ನಮ್ಮ ವಿಮರ್ಶಾ ವ್ಯಾಪಾರದಲ್ಲಿ ನಾವು ಎಷ್ಟರ ಮಟ್ಟಿಗೆ ವಿದೇಶಿಯನ್ನು ಸ್ವೀಕರಿಸುತ್ತಿದ್ದೇವೆ ಎಂದರೆ, ಅದರಲ್ಲಿನ 'ದೇಶೀ' ಅವಕಾಶ ಮತ್ತಷ್ಟು ಅನಿರ್ವಚನೀಯವಾಗುತ್ತಾ ಸಾಗಿದೆ'[22] ಎನ್ನುತ್ತಾರೆ. ರಾಜಕೀಯವಾಗಿ ತಿರಸ್ಕರಿಸಿದ್ದನ್ನು ಬೌದ್ಧಿಕವಾಗಿ ಮತ್ತು ಆರ್ಥಿಕವಾಗಿ ಅವಲಂಬಿಸುವ ಹುಂಬ ನಿರ್ಧಾರಗಳ ಕುರಿತ ಹಳಹಳಿಕೆ ದೇವಿಯವರ ಲೇಖನದುದ್ದಕ್ಕೂ ವ್ಯಕ್ತವಾಗುತ್ತದೆ. ಜೊತೆಗೆ ದೇವಿ 'ದೇಶೀ' ಅಧ್ಯಯನ ವಿಧಾನವನ್ನು ಪ್ರಜ್ಞಾಪೂರ್ವಕವಾಗಿ ಹಂಬಲಿಸುತ್ತಾರೆ. ಆವೇಶದಿಂದ ಆಕ್ರಮಣ ಮಾಡುವ ದುಡುಕಿನ ಉಗ್ರಗಾಮಿಯಾಗದ, ನಿಂತಲ್ಲೇ ನಿಂತು ಮಿತಿಗಳನ್ನು ಆರಾಧಿಸುವ ಕೂಪ ಮಂಡೂಕವಾಗದ ದೇಶಿ ಅಧ್ಯಯನ ವಿಧಾನಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಬೇಕೆಂದು ದೇವಿ ತಮ್ಮ ಲೇಖನದಲ್ಲಿ ಚರ್ಚಿಸಿದ್ದಾರೆ.

ಈ ದೇಶೀ ಅಧ್ಯಯನ ವಿಧಾನ ಕುರಿತ ಚರ್ಚೆ ಏಕರೂಪವಾಗಿಲ್ಲ. ದೇವಿ ಮತ್ತು ಡಿ.ಆರ್. ವಿಸ್ಮೃತಿಯ ಪರಿಕಲ್ಪನೆ ಹಿನ್ನೆಲೆಯಲ್ಲಿ ಜಾಗತಿಕ ಮಟ್ಟದ ಸರ್ವಕಾಲಿಕ ಎನ್ನುವ ಅಧ್ಯಯನ ಮಾದರಿಗಳಿಗೆ ಮತ್ತು ಕಥನಗಳಿಗೆ ಸ್ಥಳೀಯ ಜ್ಞಾನ ಪರಂಪರೆಗಳು ಪರ್ಯಾಯಗಳು ಎಂದು ಭಾವಿಸುತ್ತಾರೆ. ಆದರೆ ಇವರು ನಂಬುವುದು 'ಸ್ಥಳೀಯ' ಜ್ಞಾನ ಪರಂಪರೆಗಳು ಮತ್ತೆ ಅಖಿಲ ಭಾರತ ಮಟ್ಟದ ವಿರಾಟ್ ಕಥನಗಳನ್ನೇ. ಅಕ್ಷರ ಚಿಂತನ ಮಾಲೆಯಲ್ಲಿ ಡಿ.ಆರ್. ನಾಗರಾಜ್ ಹೊರತಂದ ಹಲವು ಪುಸ್ತಕಗಳು ಇದನ್ನು ಸಮರ್ಥಿಸುತ್ತವೆ. ದಾವ್ ದ ಜಿಂಗ್, ದಾರು ಪ್ರತಿಮಾ ಪೂಜಿವೆಯಂತಹ ಕೆಲವು ಪುಸ್ತಕಗಳನ್ನು ಬಿಟ್ಟರೆ ಉಳಿದ ಕೃತಿಗಳು Pan Indian ಮಾದರಿಯನ್ನು ಸಮರ್ಥಿಸುವಂತವುಗಳೇ ಆಗಿವೆ.

ಸ್ವಕೀಯ ತಿಳುವಳಿಕೆ ಮೂಲಕ ಉತ್ಪನ್ನವಾಗುವ ಗ್ರಹಿಕೆಯ ವಿಧಾನಗಳನ್ನು ಕಂಡುಕೊಳ್ಳಲೆತ್ನಿಸುವ ವಿದ್ವಾಂಸರು ದೇಶೀಯತೆಯನ್ನು ಇವರಿಗಿತ ಭಿನ್ನವಾಗಿಯೇ ಪರಿಭಾವಿಸುತ್ತಾರೆ. ಇವರು ಅಂಚಿನ ಸಮುದಾಯಗಳು, ಜಾನಪದದ, ಆದಿವಾಸಿಗಳ ತಿಳುವಳಿಕೆಯ ಮೂಲಕ ದೇಶೀಯತೆಯನ್ನು ಪರಿಕಲ್ಪಿಸಲು ಪ್ರಯತ್ನಿಸುತ್ತಾರೆ. ಮೊಗಳ್ಳಿ ಗಣೇಶ್, 'ದೇಶೀ' ತನ್ನ ಅಸ್ತಿತ್ವವನ್ನು ಪುನರ್ ಸೃಷ್ಟಿಸಿಕೊಳ್ಳುವ ಕಥನ'[23] ಎನ್ನುತ್ತಾರೆ. ಅಖಿಲ ಭಾರತ ಮಟ್ಟದ ಚಿಂತಕರು ಪರ್ಯಾಯವೆಂದು ಸಮರ್ಥಿಸುವ ದೇಶೀ ಜ್ಞಾನ ಮತ್ತು ದೇಶೀ ಅಧ್ಯಯನ ವಿಧಾನಗಳನ್ನು ನಿರಾಕರಿಸುವ ಗುಣ ಇವರ ಚಿಂತನೆಯಲ್ಲಿದೆ. ಕನ್ನಡದ ಸಂದರ್ಭದಲ್ಲಿ ರಹಮತ್ ತರೀಕೆರೆಯವರ ಪ್ರತಿಸಂಸ್ಕೃತಿಯ ಪರಿಕಲ್ಪನೆ ಮತ್ತು ಸೂಫಿಗಳನ್ನು ಅಧ್ಯಯನ ಮಾಡಿದ ಕ್ರಮ, ಕನ್ನಡದ ಸಾಹಿತ್ಯ ಮೀಮಾಂಸೆಯನ್ನು ಸಂಸ್ಕೃತದ ಲಾಕ್ಷಣಿಕರ ಕ್ಲೀಷೆಗಳಿಂದ ಬೇರ್ಪಡಿಸಿ ಕನ್ನಡದ್ದೇ ಮೀಮಾಂಸೆಯನ್ನು ರೂಪಿಸಲು ಮಾಡಿದ ಪ್ರಯತ್ನಗಳು ಗಮನಾರ್ಹವಾದವುಗಳೇ ಆಗಿವೆ. ಜೊತೆಗೆ ಅಖಿಲ ಭಾರತ ಮಟ್ಟದ ವಿಸ್ಮೃತಿ ಚರ್ಚೆಯನ್ನು ಬುಡಕಟ್ಟೊಂದರ ಲೋಕದೃಷ್ಟಿಯ ಹಿನ್ನೆಲೆಯಲ್ಲಿ ವಿಮರ್ಶೆಗೊಳಪಡಿಸುವ ಹಿ.ಚಿ.ಬೋರಲಿಂಗಯ್ಯನವರ 'ವಿಸ್ಮೃತಿ ಮತ್ತು ಸಂಸ್ಕೃತಿ' ಪುಸ್ತಕವು ಈ ಬಗೆಯ ಪರ್ಯಾಯ ಅಧ್ಯಯನ ವಿಧಾನಗಳನ್ನು ಮಂಡಿಸುತ್ತದೆ. ಬಿ.ಎಂ. ಪುಟ್ಟಯ್ಯನವರ 'ಸಾವು ! ಒಂದು ಚರ್ಚೆ', ಎಸ್.ಎಸ್. ಹಿರೇಮಠರ ಕರ್ನಾಟಕ ದಲಿತ ಸಂಸ್ಕೃತಿ ಕುರಿತ ಅಧ್ಯಯನಗಳು, ಸಾಕಿಯವರ Making Historyಯ ಎರಡು ಸಂಪುಟಗಳು, ಮೊಗಳ್ಳಿ ಗಣೇಶರ ದೇಶಿ, ಮೌಖಿಕ ಕಥನಗಳ ಕುರಿತ ಅವರ ಬರಹಗಳು ಅಖಿಲ ಭಾರತ ಮಟ್ಟದ ದೇಶೀ ಚರ್ಚೆಯನ್ನು ಸೂಕ್ಷ್ಮ ನೆಲೆಯಲ್ಲಿ ವಿಮರ್ಶಿಸುತ್ತಾ, ಹೊಸ ಶೈಕ್ಷಣಿಕ ದೃಷ್ಟಿಕೋನವನ್ನು ರೂಪಿಸಲು ಪ್ರೇರೇಪಿಸುತ್ತವೆ.

ಈ ಮೇಲಿನ ಶೈಕ್ಷಣಿಕ ವಿಧಾನಗಳು ಸಬಾಲ್ಟ್ರನ್ ಅಧ್ಯಯನಗಳ ಶೈಕ್ಷಣಿಕ ವಿಧಾನಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತವೆ. ಅಲಕ್ಷಿತ ಅಧ್ಯಯನಗಳು ಆದಿವಾಸಿ, ರೈತ, ಕೆಳಜಾತಿ ಮತ್ತು ಮಹಿಳಾ ಲೋಕಗಳ ತಿಳುವಳಿಕೆಗಳನ್ನು ಚರಿತ್ರೆಯ ಭಾಗವಾಗಿಸುವ ಪ್ರಯತ್ನ ಮಾಡುತ್ತಾ ಬಂದಿವೆ. ಯಾವುದೋ ಆದಿವಾಸಿ ಸಮುದಾಯದ ವಿಧವೆ ಚಂದ್ರಾಳ ಸಾವನ್ನು ಮುಖ್ಯವಾಗಿಟ್ಟುಕೊಂಡು ಭಾರತದ ಸಾಮಾಜಿಕ ಚರಿತ್ರೆಯಲ್ಲಿ ಪುರುಷ ಪ್ರಧಾನ ಸಮಾಜದ ನ್ಯಾಯ ವ್ಯವಸ್ಥೆಯನ್ನು ಪರಿಶೀಲಿಸುವ ಮೂಲಕ ರಂಜಿತ್ ಗುಹಾ ಆದಿವಾಸಿಗಳ ಕಣ್ಣುಗಳ ಮೂಲಕ ದಬ್ಬಾಳಿಕೆಯು ಜಗತ್ತಿನ ಮುಂದೆ 'ಹೊಸ' ಚರಿತ್ರೆಯ ರಚನಾ ಮಾದರಿಯನ್ನು ಎತ್ತಿ ನಿಲ್ಲಿಸುತ್ತಾರೆ. ಆದಿವಾಸಿಗಳು 'ಮುಖ್ಯವಾಹಿನಿ' ಎಂಬ ಜಗತ್ತಿನ

Scanned with OKEN Scanner

ಮುಂದೆ ಕ್ಷುಲ್ಲಕವಾಗಿ ಬಿಡುವ, ಅವರ ದುಃಖ ದುಮ್ಮಾನುಗಳು ದಾಖಲಾಗದೆ ನಗಣ್ಯವಾಗುವುದನ್ನು ಸಬಾಲ್ಟ್ರನ್ ಚರಿತ್ರೆ ರಚನಾಶಾಸ್ತ್ರವು ವಿರೋಧಿಸುತ್ತದೆ. ಅಲೆಮಾರಿ, ಆದಿವಾಸಿ, ರೈತ ಮತ್ತು ಮಹಿಳೆಯರ ಕಷ್ಟ ಸುಖಗಳ ಮೂಲಕ ರೂಪುಗೊಳ್ಳುವ ಸಾಮಾಜಿಕ ಚರಿತ್ರೆಯು ಯಾವುದನ್ನು ನಾವು ಅಖಿಲ ಭಾರತೀಯ ಚರಿತ್ರೆ ಎನ್ನುತ್ತೇವೋ ಆ ಚರಿತ್ರೆಗೆ ಸಹಜವಾಗಿಯೇ ತಾತ್ವಿಕವಾಗಿ ಪರ್ಯಾಯವಾಗುತ್ತದೆ. ಈ ಬಗೆಯ ಅಂಚಿನ ಸಮುದಾಯಗಳ ದುಮ್ಮಾನಗಳ ಭಾಗವಾಗಿ ರೂಪುಗೊಳ್ಳುವ ಚರಿತ್ರೆಯ ರಾಜಕೀಯ ಸಿದ್ಧಾಂತ ರಾಜರ ದಂಡಯಾತ್ರೆಗಳ ವಿವರಗಳನ್ನೇ ಒಳಗೊಂಡ ಅಭಿಜಾತ ಚರಿತ್ರೆಶಾಸ್ತ್ರವನ್ನು ಲೇವಡಿ ಮಾಡಿಬಿಡುತ್ತದೆ. ಈವರೆಗೆ ಸಬಾಲ್ಟ್ರನ್ ಅಧ್ಯಯನ ಮಾಲಿಕೆಯಲ್ಲಿ ಹನ್ನೆರಡು ಸಂಪುಟಗಳು ಪ್ರಕಟವಾಗಿವೆ. ರಂಜಿತ್ ಗುಹಾ ಸಂಪಾದಕತ್ವದಲ್ಲಿ ನಡೆದ ಈ ಶೈಕ್ಷಣಿಕ ಯೋಜನೆಯ ಸೈದ್ಧಾಂತಿಕತೆಯನ್ನೂ ತಾತ್ವಿಕವಾಗಿ ವಿರೋಧಿಸುವ ಒಂದು ವಿದ್ವಾಂಸ ಪಡೆಯೂ ಇದೆ. ಮೊದಲು ಸಬಾಲ್ಟ್ರನ್ ಅಧ್ಯಯನ ಬಳಗದಲ್ಲಿಯೇ ಇದ್ದ ಸುಮಿತ್ ಸರ್ಕಾರ್ ಮತ್ತು ವೀಣಾದಾಸ್ ಸಬಾಲ್ಟ್ರನ್ ಅಧ್ಯಯನಗಳಲ್ಲಿರುವ ಕೆಲವು ಸೈದ್ಧಾಂತಿಕ ಮಿತಿ ಮತ್ತು ಗೊಂದಲಗಳನ್ನು ಪ್ರಶ್ನಿಸುತ್ತಾರೆ. ವೀಣಾದಾಸ್ ತಮ್ಮ Subaltern as perspective ಲೇಖನದಲ್ಲಿ ಈ ಕುರಿತು ವಿಶ್ಲೇಷಿಸುತ್ತಾರೆ.

ಸಬಾಲ್ಟ್ರನ್ ಸ್ಟಡೀಸ್‌ನ ಆರನೇ ಸಂಪುಟದಲ್ಲಿ ಪ್ರಕಟವಾದ ಮೇಲಿನ ಲೇಖನದಲ್ಲಿ ವೀಣಾದಾಸ್ ಮೊದಲ ಐದು ಸಂಪುಟಗಳ ಲೇಖನಗಳಲ್ಲಿಯ ಸೈದ್ಧಾಂತಿಕ ಬಿರುಕುಗಳನ್ನು ಇಲ್ಲಿ ಸೂಕ್ಷ್ಮ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಮೂಲತಃ ಸಾಮ್ರಾಜ್ಯಶಾಹಿಗಳ ಅಗತ್ಯಕ್ಕೆ ರೂಪುಗೊಂಡ ಮಾನವಶಾಸ್ತ್ರ ಮತ್ತು ಅದರ ಶೈಕ್ಷಣಿಕ ವಿಧಾನಗಳನ್ನು ಸೈದ್ಧಾಂತಿಕವಾಗಿ ಸಬಾಲ್ಟ್ರನ್ ಅಧ್ಯಯನಗಳು ನಿರಾಕರಿಸುತ್ತವೆ. ಆದರೆ ಸಬಾಲ್ಟ್ರನ್ ಅಧ್ಯಯನಗಳಲ್ಲೂ ಸಹ ಅಭಿಜಾತ ಮಾನವಶಾಸ್ತ್ರದ ಶೈಕ್ಷಣಿಕ ವಿಧಾನಗಳು ಸದ್ದಿಲ್ಲದೆ ನುಸುಳಿ ಬಂದಿರುವುದನ್ನು ವೀಣಾದಾಸ್ ಎತ್ತಿ ತೋರಿಸುತ್ತಾರೆ. ತನಿಕಾ ಸರ್ಕಾರ್, ಡೇವಿಡ್ ಆರ್ನಾಲ್ಡ್, ಪಾರ್ಥಚಟರ್ಜಿ ಮತ್ತು ಗೌತಮಭದ್ರ ಅವರ ಕೆಲವು ಲೇಖನಗಳಲ್ಲಿ ಅಭಿಜಾತ ಮಾನವಶಾಸ್ತ್ರದ ಅಧ್ಯಯನ ವಿಧಾನವು ನುಸುಳಿ ಬಂದಿರುವುದನ್ನು ವಿಶ್ಲೇಷಿಸುತ್ತಾರೆ.[24] ಇದೇ ರೀತಿ, ಸುಮಿತ್ ಸರಕಾರ್ ಅವರ Writing Social History ಪುಸ್ತಕದ Decline Of Subltern In Subltern Studies ಎಂಬ ಲೇಖನದಲ್ಲಿ ಸಬಾಲ್ಟ್ರನ್ ಅಧ್ಯಯನಗಳ ತಾತ್ವಿಕ ಮಿತಿಗಳನ್ನು ಗುರುತಿಸುತ್ತಾರೆ. ಸಬಾಲ್ಟ್ರನ್ ಅಧ್ಯಯನಗಳು ಸಾರ್ವಕಾಲಿಕ ಮತ್ತು ಜಾಗತಿಕವೆನ್ನಿಸುವ ಸತ್ಯ ಮತ್ತು ಶೈಕ್ಷಣಿಕ ವಿಧಾನಗಳನ್ನು ಪ್ರಶ್ನಿಸುತ್ತಲೇ ರೂಪಗೊಂಡವು ಎಂಬುದನ್ನು ಸುಮಿತ್ ಸರ್ಕಾರ್ ಒಪ್ಪುತ್ತಾರೆ. ಆದರೆ ಆನಂತರ ಸಬಾಲ್ಟ್ರನ್ ಅಧ್ಯಯನಗಳು ಭಾರತದ ಅಂಚಿನ ಸಮುದಾಯಗಳ ಕುರಿತು ಚರ್ಚಿಸದೆ ಮತ್ತೆ ಜಾಗತಿಕ ಮಟ್ಟದ ಚರ್ಚೆಗಳಿಗೆ ತಮ್ಮನ್ನು ಒಪ್ಪಿಸಿಕೊಂಡಿರುವುದನ್ನು ಸುಮಿತ್ ಸರ್ಕಾರ್ ವಿರೋಧಿಸುತ್ತಾರೆ[25]. ಸಬಾಲ್ಟ್ರನ್ ಅಧ್ಯಯನಗಳ ಕುರಿತು ಸೈದ್ಧಾಂತಿಕವಾಗಿ ಅನೇಕ ಭಿನ್ನಾಭಿಪ್ರಾಯಗಳು ಸಹಜ ಮತ್ತು ಅವು ಅನಿವಾರ್ಯವೂ ಹೌದು. ಆದರೆ ಅಲಕ್ಷಿತ ಅಧ್ಯಯನಗಳು ಶೈಕ್ಷಣಿಕ ವಿಧಾನ ಮತ್ತು ರಾಜಕೀಯ ಸೈದ್ಧಾಂತಿಕತೆಯ ದೇಶೀಯ ಮಾನವಶಾಸ್ತ್ರಜ್ಞರಿಗೆ ಮತ್ತು ಸಾಮಾಜಿಕ ಚರಿತ್ರೆಕಾರರಿಗೆ ಒಂದು ದಿಕ್ಸೂಚಿ. ಮುಖ್ಯವಾಹಿನಿಯ ಭಾರತದ ಅಥವಾ ಸ್ಥಳೀಯ ಚರಿತ್ರೆಯನ್ನೇ ದುಡಿವ ವರ್ಗಗಳ ಕಣ್ಣುಗಳ ಮೂಲಕ ನೋಡುವ ಮತ್ತು ರೂಪಿಸುವ ವಿಧಾನವೇ ಒಂದು ಕ್ರಾಂತಿಕಾರಿ ಮತ್ತು ರಚನಾತ್ಮಕ ಶೈಕ್ಷಣಿಕ ಪ್ರಯತ್ನ.

ಕನ್ನಡದ ಸಂದರ್ಭದಲ್ಲಿ ಈ ತರಹದ ಪ್ರಯತ್ನಗಳು ಸಾಹಿತ್ಯ ಅಕಾಡೆಮಿಯ ಉಪಸಂಸ್ಕೃತಿ ಮಾಲೆಯ ಮೂಲಕ ನಡೆದವು. ಈ ಮಾಲೆಯ ಪುಸ್ತಕಗಳಿಗೆ ಬರಗೂರರು ಬರೆದ ಸಂಪಾದಕೀಯವು ಒಂದು ಅರ್ಥದಲ್ಲಿ ಇತ್ತೀಚಿನ ಸಬಾಲ್ಟ್ರನ್ ಅಧ್ಯಯನಗಳ ತಾತ್ವಿಕತೆಯನ್ನು ಧ್ವನಿಸುತ್ತದೆ. ಈ ಸಂಪಾದಕೀಯವು ಇಡೀ ಉಪಸಂಸ್ಕೃತಿ ಮಾಲೆಗೆ ಒಂದು ಸೈದ್ಧಾಂತಿಕ ನೀಲನಕ್ಷೆಯನ್ನು ರೂಪಿಸುತ್ತದೆ. ಉಪಸಂಸ್ಕೃತಿಗಳ ಅಧ್ಯಯನವು ಆಯಾ ಸಂಸ್ಕೃತಿಗಳ ವೈಭವೀಕರಣವಲ್ಲ. 'ನಾಗರಿಕ' ಎಂದು ಕರೆಸಿಕೊಳ್ಳುತ್ತಿರುವ ಸಮಾಜ ಮತ್ತು ಸಂಸ್ಕೃತಿಯು ಅಸಂಖ್ಯಾತ ಸಂಸ್ಕೃತಿಗಳನ್ನು ದೂರದಲ್ಲೇ ಬಿಟ್ಟು ದಾಪುಗಾಲು ಹಾಕಿದ ಇತಿಹಾಸದ ಒಡಕುತನವನ್ನು ತಂತಾನೆ ಹೊರಗೆಳೆಯುವ ಶಕ್ತಿಯುಳ್ಳ ವಿವರಗಳ ನಿರೂಪಣೆ ಮತ್ತು ವಿಶ್ಲೇಷಣೆ ವಸ್ತು ಸ್ಥಿತಿಯ ಹೂರಣ ಮತ್ತು ಒಂದು ಅನಾವರಣ'[26] ಎಂದು ತಮ್ಮ ಯೋಜನೆಯ ಉದ್ದೇಶಗಳನ್ನು ಬರಗೂರ್ ಅವರು ಪ್ರತಿಪಾದಿಸುತ್ತಾರೆ. ಆದರೆ ಈ ಮಾಲಿಕೆಯ ಒಂದೆರಡು ಪುಸ್ತಕಗಳ್ನು ಬಿಟ್ಟರೆ ಬಹುಪಾಲು ಕೃತಿಗಳು ಅಭಿಜಾತ ಮಾನವಶಾಸ್ತ್ರದ ಅಧ್ಯಯನ ವಿಧಾನವನ್ನೇ ಅನುಸರಿಸಿ ಬರೀ ಮಾಹಿತಿ ಕಲೆ ಹಾಕುವ ಪ್ರಯತ್ನಗಳಿಗೆ ತಮ್ಮನ್ನು ಸೀಮಿತಗೊಳಿಸಿಕೊಂಡಿವೆ. ಕೋಟಗಾನಳ್ಳಿ ರಾಮಯ್ಯನವರ 'ಸಿಂದ್ ಮಾದಿಗರ ಸಂಸ್ಕೃತಿ, ಲಕ್ಷ್ಮೀಪತಿ ಕೋಲಾರ ಅವರ 'ಮಾಸ್ಟಿಕರ ಸಂಸ್ಕೃತಿ' ಮುಂತಾದ ಕೆಲವು ಪುಸ್ತಕಗಳು ಸಮುದಾಯಗಳ ನಿತ್ಯದ ಬವಣೆಗಳ ಮೂಲಕ ಸಂಸ್ಕೃತಿ ಮತ್ತು ಸಮಾಜವನ್ನು ಗ್ರಹಿಸುವ ಕಾರಣಕ್ಕಾಗಿ ಭಿನ್ನವಾಗಿ ನಿಲ್ಲುತ್ತವೆ. ಆದರೆ ಉಳಿದವು ಕೇವಲ ಮಾಹಿತಿ ಸಂಗ್ರಹಿಸುವುದಕ್ಕೇ ಹೆಚ್ಚು ಸೀಮಿತಗೊಂಡಿವೆ. ಕನ್ನಡದಲ್ಲಿ ಇತ್ತೀಚಿನ ಕೆಲವು ಅಧ್ಯಯನಗಳು ತಮ್ಮ ತಾತ್ವಿಕ ನಿಲುವುಗಳ ಕಾರಣಕ್ಕಾಗಿ ಭಿನ್ನ ಶೈಕ್ಷಣಿಕ ವಿಧಾನವನ್ನು ರೂಪಿಸಿಕೊಳ್ಳಲು

ತವಕಿಸುತ್ತಿರುವುದು ಗಮನಾರ್ಹ ಸಂಗತಿ. ಇಲ್ಲಿ ಹಲವು ಸಂದರ್ಭಗಳಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯವೇ ಅಧ್ಯಯನಕಾರನನ್ನು ತಾತ್ವಿಕವಾಗಿ ನಿಯಂತ್ರಿಸಿರುವುದು. ಇದಲ್ಲದೆ, ಮಾರ್ಕ್ಸ್, ಅಂಬೇಡ್ಕರ್, ಲೋಹಿಯಾ ಮತ್ತು ಪೆರಿಯಾರ್ ಅವರ ಚಿಂತನೆಗಳ ಬೆಳಕಲ್ಲಿ ನಮ್ಮ ಸಮಾಜದ ಚರಿತ್ರೆಯನ್ನು ಸೈದ್ಧಾಂತಿಕವಾಗಿ ರೂಪಿಸಲು ಹೊರಟಿರುವ ಎರಡು ಸಂದರ್ಭಗಳೂ ಚಾಲ್ತಿಯಲ್ಲಿವೆ.

ಒಟ್ಟಾರೆಯ ಈ ಬರಹದ ಸಾರಾಂಶವನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು. ಪುನರುಜ್ಜೀವನ ಕಾಲಘಟ್ಟದ ನಂತರ ನಡೆದ ಜ್ಞಾನಕ್ರಾಂತಿಯ ಕಾರಣಕ್ಕಾಗಿ ಯುರೋಪಿನ ದೇಶಗಳು ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳಿಂದ ಜಗತ್ತಿನ ಮೇಲೆ ಹಲವು ಬಗೆಗಳಲ್ಲಿ ಹಿಡಿತ ಸಾಧಿಸಲು ಸಾಧ್ಯವಾಯಿತು. ಕೈಗಾರಿಕಾ ಕ್ರಾಂತಿಯಿಂದ ಯುರೋಪಿನ ಸಮಾಜ ಊಳಿಗಮಾನ್ಯತೆಯಿಂದ ಬಂಡವಾಳಶಾಹಿ ವ್ಯವಸ್ಥೆಯ ಕಡೆಗೆ ನಡೆದು ಹೋಯಿತು. ಮುಂದೆ ಯುರೋಪಿನ ದೇಶಗಳು ಜಗತ್ತಿನ 'ಹಿಂದುಳಿದ' ದೇಶಗಳನ್ನು ಆಕ್ರಮಿಸಿಕೊಂಡು ವಸಾಹತುಗಳನ್ನಾಗಿ ರೂಪಾಂತರಿಸಿಕೊಂಡ ನಂತರ, ಅಲ್ಲಿನ ಸ್ಥಳೀಯ ಸಮಾಜಗಳನ್ನು ಅರ್ಥ ಮಾಡಿಕೊಳ್ಳಲು ತಾನೇ ರೂಪಿಸಿದ್ದ ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರಗಳೆಂಬ ಜ್ಞಾನಶಿಸ್ತುಗಳನ್ನು ಬಳಸಿಕೊಂಡಿತು. ಈ ಜ್ಞಾನಶಿಸ್ತುಗಳು ಯುರೋಪಿನ ರಾಜಕೀಯ ಗಣ್ಯತೆಯನ್ನೇ ಸೈದ್ಧಾಂತಿಕ ನೆಲೆಗಟ್ಟಾಗಿಸಿಕೊಂಡಿದ್ದ ಕಾರಣಕ್ಕಾಗಿ, ತಾವು ಅಧ್ಯಯನ ಮಾಡುವ ಸಮುದಾಯಗಳು ಕೇವಲ ವಸ್ತು ಮತ್ತು ಆಕರಗಳೆಂದು ಪರಿಭಾವಿಸಿದವು. ತಮ್ಮ ಆಡಳಿತ ಸುಗಮಗೊಳ್ಳಲೆಂದ ಸ್ಥಳೀಯ ಸಮುದಾಯಗಳನ್ನು ಅಧ್ಯಯನ ಮಾಡಿದ ಯುರೋಪಿನ ಜನ ಒಂದು ಅಭಿಜಾತ ಶೈಕ್ಷಣಿಕ ವಿಧಾನವನ್ನು ಸಮಾಜ ವಿಜ್ಞಾನಗಳ ಕ್ಷೇತ್ರದಲ್ಲಿ ಅದರಲ್ಲೂ ಮಾನವಶಾಸ್ತ್ರದ ಕ್ಷೇತ್ರದಲ್ಲಿ ರೂಪಿಸಿದ್ದರು. ಆದರೆ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಮೇಲೂ ಯುರೋಪಿನ ಶೈಕ್ಷಣಿಕ ಯಜಮಾನಿಕೆ ಅಬಾಧಿತವಾಗಿ ಮುಂದುವರೆಯಿತು. 50ರ ದಶಕದ ನಂತರ ಜಗತ್ತಿನ ರಾಜಕೀಯ ಯಜಮಾನಿಕೆಯು ಯುರೋಪಿನಿಂದ ಅಮೇರಿಕಾಕ್ಕೆ ವರ್ಗಾವಣೆಗೊಂಡಿತ್ತು. ಆದರೆ ಭಾರತದ ಪಾಲಿಗೆ ಯಜಮಾನ ಮಾತ್ರ ಬದಲಾಗಿದ್ದ. ರಾಜಕೀಯ ಮತ್ತು ಆರ್ಥಿಕ ಕ್ಷೇತ್ರದಲ್ಲಿನ ಭಾರತದ ಅವಲಂಬನೆ ಮುಂದುವರಿದೇ ಇತ್ತು. ಇದು ಶೈಕ್ಷಣಿಕ ಕ್ಷೇತ್ರದಲ್ಲೂ ಮುಂದುವರೆಯಿತು.

ಆದರೆ 80ರ ದಶಕದ ನಂತರ ಭಾರತದಲ್ಲಿ ಭಿನ್ನ ಶೈಕ್ಷಣಿಕ ವಿಧಾನವನ್ನು ಕಂಡುಕೊಳ್ಳಲಾಯಿತು. ಗ್ರಾಂಸಿಯ ಸಬಾಲ್ಟರ್ನ್ ಪರಿಕಲ್ಪನೆಯನ್ನು ಆಧರಿಸಿ ಭಾರತದಲ್ಲಿ ರಂಜಿತ್ ಗುಹಾ ಸಂಪಾದಕತ್ವದಲ್ಲಿ ನಡೆದ ಸಬಾಲ್ಟರ್ನ್ ಅಧ್ಯಯನಗಳು ಪ್ರಾರಂಭವಾದವು. ಕನ್ನಡದಲ್ಲೂ ದಲಿತ ಬಂಡಾಯ ಚಳುವಳಿಯ ಭಾಗವಾಗಿ ಪ್ರಾರಂಭವಾದ ಚಿಂತನೆಗಳಲ್ಲಿ ಈ ಬಗೆಯ 'ಸಬಾಲ್ಟರ್ನ್' ವಿಷಯಗಳ ಕುರಿತ ಚರ್ಚೆ ಇದ್ದರೂ, ಬರಗೂರರು ಸಾಹಿತ್ಯ ಅಕಾಡೆಮಿಯಿಂದ ಉಪಸಂಸ್ಕೃತಿ ಮಾಲೆಯ ಪುಸ್ತಕಗಳ ಮೂಲಕ ಅಲಕ್ಷಿತ ಸಮುದಾಯಗಳ ಅಧ್ಯಯನಗಳನ್ನು ಪ್ರಾರಂಭಿಸಿದರು. ಆದರೆ ಈ ಮಾಲೆಯ ಬಹುತೇಕ ಲೇಖಕರು ಮಾಹಿತಿ ಕಲೆಹಾಕುವ ಮತ್ತು ಅದನ್ನೇ ಸಂಶೋಧನೆ ಎಂದು ಭಾವಿಸುವ ಅಭಿಜಾತ ಮಾನವಶಾಸ್ತ್ರದ ಶೈಕ್ಷಣಿಕ ವಿಧಾನವನ್ನೇ ಅನುಸರಿಸಿದರು. ಕನ್ನಡದಲ್ಲಿ ವ್ಯಕ್ತಿಗತವಾಗಿ ಸಬಾಲ್ಟರ್ನ್ ಅಧ್ಯಯನಗಳನ್ನು ಕೈಗೊಂಡ ಅನೇಕ ಲೇಖಕರಿದ್ದಾರೆ. ಇವರು ಮಾರ್ಕ್ಸ್, ಗಾಂಧಿ, ಅಂಬೇಡ್ಕರ್ ಮತ್ತು ಲೋಹಿಯಾವಾದದ ಸೈದ್ಧಾಂತಿಕ ಹಿನ್ನೆಲೆಯಿಂದ ಬಂದವರು 'ಮುಖ್ಯಧಾರೆ'ಯಿಂದ ಅಲಕ್ಷಿತವಾದ ಸಮುದಾಯಗಳ ಅಂತಸ್ಥ ಜಗತ್ತುಗಳ ಅನಾವರಣ ಮಾಡುವ ಮೂಲಕ ಕನ್ನಡದಲ್ಲಿ ಈ ಬಗೆಯ ಪ್ರಯತ್ನಗಳು ನಿರಂತರವಾಗಿ ಸಾಗುತ್ತಿವೆ. ಸೂಫಿಗಳ, ಜನಪದ ಅನುಭಾವಿಗಳು ಮತ್ತು ಅಲೆಮಾರಿ, ಆದಿವಾಸಿ ಸಮುದಾಯಗಳ ಅಧ್ಯಯನಗಳು ಕನ್ನಡದಲ್ಲಿ ನಿರಂತರವಾಗಿ ಸಾಗುತ್ತಿವೆ. ಪ್ರಸ್ತುತ ನಮ್ಮ ಯೋಜನೆ ಬುಡಕಟ್ಟು ಮತ್ತು ಅಲೆಮಾರಿ ಸಮುದಾಯಗಳ ಬದುಕನ್ನು, ಈ ಸಮುದಾಯಗಳ ಅನುಭವಗಳ ಮೂಲಕ ದಕ್ಕಿದ ಒಳನೋಟ ಮತ್ತು ಸಬಾಲ್ಟರ್ನ್ ಅಧ್ಯಯನ ವಿಧಾನಗಳ ಮೂಲಕ ಮರುರೂಪಿಸು ಅಗತ್ಯವಿದೆ.

ಅಡಿ ಟಿಪ್ಪಣಿಗಳು

1. ಫಣಿರಾಜ್, ಆಂಟೋನಿಯೋ ಗ್ರಾಮ್ಷಿ, ಪು 21, 2001
2. Jaganath Pathy, Anthropology Of Development, Demystification and Relevance, p vi,1987
3. Yogendra Singh, Indian Socialogy:Retrospect and Prospect. Ed: M V Nadakarni, Land Marks In Development Of Social Science, p 89-90, 2002
4. M.N. Srinivas, Studing One's Own Culture, p 574, 2002
5. Yogendra Singh, Indian Socialogy:Retrospect and Prospect. Ed: M V Nadakarni, Land Marks In Development Of Social Science, p 90, 2002
6. M.N. Srinivas, Village Studies, Perticipant Observation, p 516, 2002
7. Satish Saberwal, Inetrnational Social science: Some Political Aspects, 1970
8. Nelson, Quoted: Jaganath Pathy, Anthropology Of Development, Demystification and Relevance, 1987
9. Simans Jan, Foucault and the political p 27 1979, Quoted: ಸಿ.ಎನ್. ರಾಮಚಂದ್ರನ್

10. Frantz Fanon, The Wretched Of the Earth, p 47,1966
11. Edward W Said, Orientaism, p3,1979
12. Ibid p 5
13. Ibid p 9
14. Ibid p 11
15. ವಸಾಹತೋತ್ತರ ಚಿಂತನೆಯ ಸಂದರ್ಭದಲ್ಲಿ ಅಶೀಶ್ ನಂದಿ ದೇಶಿ ಜ್ಞಾನ ಪರಂಪರೆಗಳ ಕುರಿತು ಹೆಚ್ಚು ವಕಾಲತ್ತು ವಹಿಸಿದವರು. 'ಪ್ರಸ್ತುತ ಭಾರತ ಮತ್ತು ದೇಶಿ ಜ್ಞಾನ ಪರಂಪರೆಗಳು' ಎಂಬ ಅವರ ಲೇಖನದಲ್ಲಿ ಭಾರತದ ನ್ಯಾಯಾಧೀಶ ಜಸ್ಟೀಸ್ ರಾಧಾ ವಿನೋದ್ ಪಾಲ್ ಅವರು ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಟೋಕಿಯೋ ವಾರ್ ಕ್ರೈಮ್ಸ್ ಟಿಬ್ಯುನಲ್‌ನಲ್ಲಿ ಕೊಟ್ಟ ತೀರ್ಪನ್ನು ಅಮೇರಿಕಾದ ಕಾನೂನು ತಜ್ಞನೊಬ್ಬ ಶ್ಲಾಘಿಸಿರುವುದನ್ನು ಉಲ್ಲೇಖಿಸುತ್ತಾರೆ. ಆ ಟಬ್ಯುನಲ್‌ನಲ್ಲಿ ಇದ್ದ ಬೇರೆ ದೇಶಗಳ ಹತ್ತು ನ್ಯಾಯಾಧೀಶರಿಗಿಂತ ಅಂತಾರಾಷ್ಟ್ರೀಯ ಕಾನೂನಿನ ಅರಿವು ಇದ್ದದ್ದು ರಾಧಾವಿನೋದ್ ಪಾಲ್ ಅವರಿಗೆ ಎಂಬ ಸಂಗತಿಯು ಭಾರತದ ದೇಶಿ ಜ್ಞಾನ ಪರಂಪರೆಯನ್ನು ಪ್ರತಿನಿಧಿಸುತ್ತದೆ ಎನ್ನುತ್ತಾರೆ ಅಶೀಶ್ ನಂದಿ. ರಾಧಾವಿನೋದ್ ಪಾಲ್ ಈ ದೇಶದ ಪ್ರತಿಷ್ಠಿತ ವರ್ಗಕ್ಕೆ ಸೇರಿದವರು. ಜೊತೆಗೆ ಅವರು ಕೆಲಸ ಮಾಡುತ್ತಿದ್ದುದು ಅಂತಾರಾಷ್ಟ್ರೀಯ ವಾರ್ ಕ್ರೈಮ್ಸ್ ಟ್ರಿಬ್ಯುನಲ್‌ನಲ್ಲಿ ಮತ್ತು ಅವರು ಕೊಟ್ಟ ತೀರ್ಪು ಸಹ ಅಂತಾರಾಷ್ಟ್ರೀಯ ಅಪರಾಧಗಳಿಗಾಗಿ!, ನೋಡಿ: ಅಶೀಶ್ ನಂದಿ ವಿಚಾರ, ಅಶೀಶ್ ನಂದಿ, ಅನು: ಕು ಶಿ ಹರಿದಾಸ್‌ಭಟ್, ಅಕ್ಷರ ಪ್ರಕಾಶನ ಹೆಗ್ಗೋಡು, 1995
16. ದೇವಿ,ಜಿ ಎನ್ ಅನು: ವಿ ಬಿ ತಾರಕೇಶ್ವರ್, ದೇಶಿವಾದ, ಕನ್ನಡ ಅಧ್ಯಯನ, ಗಾಳಿ ಸಂಚಿಕೆ, ಸಂ 5, ಸಂ 2, ಪು 95, 1999
17. ರೋನಾಲ್ಡ್ ಇಂಡೆನ್, ಅನು: ಓ ಏಲ್ ನಾಗಭೂಷಣಸ್ವಾಮಿ, ಭಾರತವನ್ನು ಕುರಿತ ಓರಿಯಂಟಲಿಸ್ಟರ ಗಹಿಕೆಗಳು, ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ, ಪು 232, 2004
18. Ashis Nandi, The Intimate Enemy, Loss And Recovery Of Self Under Colonialism, p xi, 1983
19. Ibid p 3
20. Albert Memmi, The Coloniser and the Colonised, p 17, 1967
21. James Clifford, Writing Culture, The Poetics And Politics Of Ethnography, Ed: James Clifford, Gerge E, p7, 1990
22. ದೇವಿ, ಜಿ ಎನ್ ಅನು: ವಿ ಬಿ ತಾರಕೇಶ್ವರ್, ದೇಶಿವಾದ, ಕನ್ನಡ ಅಧ್ಯಯನ, ಗಾಳಿ ಸಂಚಿಕೆ, ಸಂ 5, ಸಂ 2, ಪು 101, 1999
23. ಮೊಗಳ್ಳಿ ಗಣೇಶ್, ದೇಶಿ ಸಂಶೋಧನಾ ವಿಧಾನ, ಬುಡಕಟ್ಟು ಅಧ್ಯಯನ 4, ಪು 20, 2005
24. ನೋಡಿ: Subaltern as perspective. Veena Das, p 310, Ranajit Guha, Ed: Subaltern studies Vol vi, 1989
25. ನೋಡಿ: Sumit Sarkar, The Decline of the subaltern in subaltern studies, p 82, 1997
26. ಬರಗೂರು ರಾಚಂದ್ರಪ್ಪ, ಪ್ರಸ್ತಾವನೆ, ಉಪಸಂಸ್ಕೃತಿ ಮಾಲೆ ಪು 31, 1993

ಈ ಬರಹಕ್ಕಾಗಿ ಓದಿದ ಪುಸ್ತಕಗಳು

1. ಅಶೀಶ್ ನಂದಿ ವಿಚಾರ, ಅಶೀಶ್ ನಂದಿ, ಅನು: ಕು ಶಿ ಹರಿದಾಸ್‌ಭಟ್, ಅಕ್ಷರ ಪ್ರಕಾಶನ ಹೆಗ್ಗೋಡು, 1995
2. ದೇವಿ, ಜಿ ಎನ್ ಅನು: ವಿ ಬಿ ತಾರಕೇಶ್ವರ್, ದೇಶಿವಾದ, ಕನ್ನಡ ಅಧ್ಯಯನ, ಗಾಳಿ ಸಂಚಿಕೆ, ಸಂ 5, ಸಂ 2, ಪು ರಹಮತ್ ತರೀಕೆರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999
3. ಫಣಿರಾಜ್, ಕೆ, ಆಂಟೋನಿಯೋ ಗ್ರಾಮ್ಷಿ, ಅಭಿನವ ಪ್ರಕಾಶನ, ಬೆಂಗಳೂರು, 2001
4. ಬರಗೂರು ರಾಚಂದ್ರಪ್ಪ, ಪ್ರಸ್ತಾವನೆ, ಉಪಸಂಸ್ಕೃತಿ ಮಾಲೆ ಪು 31, 1993
5. ಬೋರಲಿಂಗಯ್ಯ ಹಿ.ಚಿ., ವಿಸ್ಮೃತಿ ಮತ್ತು ಸಂಸ್ಕೃತಿ, ಸಿಬ್ಬಂ ಪಬ್ಲಿಕೇಶನ್ಸ್, ಬೆಂಗಳೂರು, 2001
6. ಮೊಗಳ್ಳಿ ಗಣೇಶ್, ದೇಶಿ ಸಂಶೋಧನಾ ವಿಧಾನ, ಬುಡಕಟ್ಟು ಅಧ್ಯಯನ 4, ಸಂ: ಬೋರಲಿಂಗಯ್ಯ, ಹಿ ಚಿ, ಎ ಮಾ ಪ್ರಭಾಕರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2005
7. ಮೊಗಳ್ಳಿ ಗಣೇಶ್, ದೇಶಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, 1997
8. ರಾಮಚಂದ್ರನ್ ಸಿ ಎನ್, ವಸಾಹತೋತ್ತರ ಚಿಂತನೆ, ಕರ್ನಾಟ ಸಾಹಿತ್ಯ ಅಕಾಡೆಮಿ, ಬೆಂಗಳೂರು 2000
9. ರೋನಾಲ್ಡ್ ಇಂಡೆನ್, ಅನು: ಓ ಏಲ್ ನಾಗಭೂಷಣಸ್ವಾಮಿ ಭಾರತವನ್ನು ಕುರಿತ ಓರಿಯಂಟಲಿಸ್ಟರ ಗಹಿಕೆಗಳು ರಾಜಾರಾಮ್ ಹೆಗಡೆ, ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ,2004
10. Aime Cesare, Discourse On Colonialism, Trans Joan Pinkham Newyork and London Monthly Review Press, 1972
11. Albert Memmi, The Coloniser and the Colonised Beacon Press, Boston, 1967
12. Antonio Gramsci,. Selections from the Prison Notebooks. Translated and edited: Quintin Hoare and Geoffrey Nowell-Smith. New York: International Publishers 1973.
13. Ashis Nandi, The Intimate Enemy, Loss And Recovery Of Self Under Colonialism, Oxford University Press, 1983
14. Devy, G N, After Amnesia, Treadition and Literary Criticism, Orient Blackswan, 1992
15. Edward W Said, Orientaism, Vintage Books Newyork,1979
16. Frantz Fanon. T 1967
17. Frantz Fanon. Press, New Yo
18. Guha, Ranajit. Insurgency in University Pres
19. Guha, Ranajit F and Society, De
20. Jaganath Pathy Demystificatio House, New D
21. James Cliffor Culture, The P Oxford Univer
22. Milton Siger a And Change I Jaipur and Ne

Scanned with OKEN Scanner

16. Frantz Fanon. The wreteched of the earth, penguin, 1967
17. Frantz Fanon. Black Skin White Masks, Grove Press, New York, 2008
18. Guha, Ranajit. Elementary Aspects of Peasant Insurgency in Colonial India. Delhi: Oxford University Press. 1983.
19. Guha, Ranajit Ed: Writings on South Asian History and Society, Delhi: Oxford University Press, 1982.
20. Jaganath Pathy, Anthropology Of Development, Demystification and Relevance, Gian Publishing House, New Delhi, 1987
21. James Clifford, Gerge E, Marcus, Ed: Writing Culture, The Poetics And Politics Of Ethnography, Oxford University Press, 1990
22. Milton Siger and Bernard S. Cohn , Ed: Structure And Change In Indian Society, Rawat Publications Jaipur and New Delhi, 1994
23. Nadakarni, M V, Ed: Land Marks In Development Of Social Science, Allied Publisher PVT Limited, New Delhi, 2002
24. Satish Saberwal, Inetrnational Social science: Some Political Aspects, Economic and Political Weekly July 4, 1970
25. Srinivas, M.N. Collected Essays, Oxord University Press, New Delhi, 2002
26. Sumit Sarkar, Writing Social History, Oxford University Press New Delhi,1997
27. Surjit Chanrda Sinh, Ed: Research Programmes on Cultural Anthropology and Allied Disciplines, Anthropological Survey of India, 1970
28. Veena Dass, Critical Events, Oxford University Press, 1995
29. Veena Dass, Socialogy And Social Anthropologgy, Vol 1, Oxford University Press, 2003



Scanned with OKEN Scanner

ISSN 2454-6054

ಸಂವಾದ

ಫೆಬ್ರವರಿ 2024 ರೂ. 40



'ಗ್ಯಾರಂಟಿ'ಗಳ ಕಡ್ಡಿ
ಗುಡ್ಡ ಆದದ್ದು ಹೇಗೆ?

ಒಕ್ಕೂಟ ಸರ್ಕಾರದಿಂದ
ಸಂಪನ್ಮೂಲ
ವರ್ಗಾವಣೆಯಲ್ಲಿ
ತಾರತಮ್ಯ

ದಕ್ಷಿಣ ರಾಜ್ಯಗಳಿಗೆ ನಿರಂತರ ಅನ್ಯಾಯ

ಸಂವಾದ

ಮಾಸ ಪತ್ರಿಕೆ

ಸಂಪುಟ 22 ಸಂಚಿಕೆ 04

ಫೆಬ್ರವರಿ 2024

ಸಂಪಾದಕ:
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ:

ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ
ಬಿ. ಶ್ರೀಪಾದ್ ಭಟ್
ಡಾ॥ ಅರುಣ್ ಜೋಳದಕೂಡ್ಲಗಿ
ವಿ.ಎಲ್. ನರಸಿಂಹಮೂರ್ತಿ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು ೫೬೦ ೦೯೧

EDITOR:
INDUDHARA HONNAPURA

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE 560 091

✆ **Circulation: 9108830437**
9945264687

✆ **Editorial: 9448048306**

email Editorial
samvaadapatrike@gmail.com
samvaada@hotmail.com

Circulation :
samvaadacirculation@gmail.com

ಒಳಪ್ರವೇಶಗಳು

- ಪತ್ರಗಳು ೦೪
- ಸಂಪಾದಕರೊಂದಿಗೆ ಸಂವಾದ
  - ೦ ನಾಗರಾಜನಾಯಕ ಡಿ ಡೊಳ್ಳಿನ ೦೬
  - ೦ ಜ್ಯೋತಿ ಎಸ್ ೦೭
- 'ದಾಸೋಹ' ಮತ್ತು 'ಕಾಯಕ': ಸಮಸಮಾಜದ ನಿರ್ಮಾಣದ ಅನಿವಾರ್ಯ ತತ್ವಗಳು
  - ೦ ಶ್ರೀ ಸಿದ್ಧರಾಮಯ್ಯನವರು ೦೮
- ಆದಿವಾಸಿ ದೈವಗಳ ಮೌಲ್ಯಮಾಪನ ಹಾಗೂ ಶ್ರೀರಾಮನ ನ್ಯಾಯದ ಗಂಟೆ
  - ೦ ದೇವನೂರ ಮಹಾದೇವ ೧೨
- "ಗ್ಯಾರಂಟಿ"ಗಳ ಕಡ್ಡಿ ಗುಡ್ಡ ಆದದ್ದು ಹೇಗೆ?
  - ೦ ರಾಜಾರಾಂ ತಲ್ಲೂರು ೧೪
- ಹದಗೆಡುತ್ತಿರುವ ಒಕ್ಕೂಟ ರಾಜ್ಯಗಳ ನಡುವಣ ಹಣಕಾಸು ಸಂಬಂಧಗಳು
  - ೦ ಟಿ ಆರ್ ಚಂದ್ರಶೇಖರ್ ೧೮
- ಮಾದಿಗ ಮುನ್ನಡೆ ಹೆಸರಲ್ಲಿ ಮನುವಾದ ಮುನ್ನಡೆ
  - ೦ ಯತಿರಾಜ್ ಬ್ಯಾಲಹಳ್ಳಿ ೨೨
- ಪರಿಶಿಷ್ಟರ ಉಪಯೋಜನೆಯ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸುವುದು ಎಷ್ಟು ಸರಿ?
  - ೦ ಎನ್ ಸಿ ಮುನಿಯಪ್ಪ ೨೬
- ದಲಿತ–ಮುಸ್ಲಿಂ ಅಲ್ಪಸಂಖ್ಯಾತರ ಐಕ್ಯತೆಯ ಕನಸು ಕಂಡಿದ್ದ ಬಿ.ಶ್ಯಾಮಸುಂದರ್
  - ೦ ಅರುಣ್ ಜೋಳದಕೂಡ್ಲಿಗಿ ೩೦
- ಪದ್ಮಶ್ರೀ ಸೋಮಣ್ಣ ಮತ್ತು ಪ್ರಶಸ್ತಿಯ ಸಾಂಕೇತಿಕತೆ
  - ೦ ಡಾ. ಎ ಎಸ್ ಪ್ರಭಾಕರ್ ೩೨
- ಮಹಾ ಹೋರಾಟಗಾರನ ಕ್ರಿಯಾಶೀಲ ಬದುಕಿನ ಕಥನ
  - ೦ ಪ್ರೊ. ರಾಜೇಂದ್ರ ಚೆನ್ನಿ ೩೬
- ಸಂವಿಧಾನದ ಅಮೃತ ಮಹೋತ್ಸವ ಭಾರತೀಯತೆಯ ಪ್ರಜ್ಞೆ ಮೆರೆಯಬೇಕಾದ ಗಣರಾಜ್ಯೋತ್ಸವ
  - ೦ ಡಾ. ಎಸ್ ನರೇಂದ್ರಕುಮಾರ್ ೩೮
- ನ್ಯಾನೋ ಗೊಬ್ಬರವು ಕೃಷಿಯಲ್ಲಿ ಸುಸ್ಥಿರತೆ ತಂದೀತೆ?
  - ೦ ಆರ್ ಬಿ ಗುರುಬಸವರಾಜ ೪೨
- ದಲಿತ ಟೆಕ್ಕಿಗಳ ಮೇಲಿನ ದೌರ್ಜನ್ಯ ತಡೆಗೆ ಜಾತಿ ತಾರತಮ್ಯ ವಿರೋಧಿ ಮಸೂದೆ ಜಾರಿ ಮಾಡಿದ ಕ್ಯಾಲಿಫೋರ್ನಿಯಾ
  - ೦ ರುದ್ರು ಪುನೀತ್ ೪೪
- ಕಾಟೇರ ಎಂಬ ಸ್ವಾಭಿಮಾನದ ದನಿ
  - ೦ ಮುರಳಿ ಮೋಹನ್ ಕಾಟಿ ೪೬
- ಲೋಕಾವಲೋಕನ–33
  - ೦ ನ್ಯಾ॥ ನಾಗಮೋಹನ ದಾಸ್ ೪೮
- ನೆಲದ ಕಣ್ಣು–43
  - ೦ ಮಲ್ಲಿಗೆ ಸಿರಿಮನೆ ೫೦
- **Just Asking**
  - ೦ ಶಿವಸುಂದರ್ ೫೪











ಮುಖಪುಟ ವಿನ್ಯಾಸ: ಮುರಳೀಧರ ರಾಥೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)



ಕನ್ನಡದ್ದೇ ಆದ ಆಲೋಚನಾ ಮಾದರಿಗಳನ್ನು ಕಟ್ಟಿದ ಕನ್ನಡ ವಿಶ್ವವಿದ್ಯಾಲಯದಲ್ಲಿ ಬುಡಕಟ್ಟು ಮತ್ತು ಜಾನಪದ ಅಧ್ಯಯನಕ್ಕೆ ವಿಶಿಷ್ಟವಾದ ಆಲೋಚನಾ ಮಾದರಿಗಳನ್ನು ರೂಪಿಸಿದವರಲ್ಲಿ ಪ್ರಮುಖರು. ಕರ್ನಾಟಕದ ಬುಡಕಟ್ಟು ಜನಾಂಗಗಳ ಕುರಿತಾಗಿ ನಿರಂತರ ಅಧ್ಯಯನದಲ್ಲಿ ತೊಡಗಿದ್ದಾರೆ. 'ಮ್ಯಾಸ ಬೇಡರ ಕಥನ', 'ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು', 'ಬುಡಕಟ್ಟು ಅಭಿವೃದ್ಧಿ ಮೀಮಾಂಸೆ' ಸೇರಿದಂತೆ ಅನೇಕ ಕೃತಿಗಳನ್ನು ರಚಿಸಿದ್ದಾರೆ.

ಡಾ. ಎ ಎಸ್ ಪ್ರಭಾಕರ್
Email: asprabhakar1@gmail.com

ಪದ್ಮಶ್ರೀ ಸೋಮಣ್ಣ ಮತ್ತು ಪ್ರಶಸ್ತಿಯ ಸಾಂಕೇತಿಕತೆ

ಜೇನುಕುರುಬ ಸಮುದಾಯದ ನಮ್ಮ ಸೋಮಣ್ಣನಿಗೆ ಪದ್ಮಶ್ರೀ ಬಂದಿದೆ. ಪದ್ಮಶ್ರೀ ದೇಶದ ಉನ್ನತ ನಾಗರಿಕ ಪ್ರಶಸ್ತಿಗಳಲ್ಲಿ ಒಂದು. ಸೋಮಣ್ಣನಂತಹ ಸಾರ್ಥಕ ನಾಗರಿಕನಿಗೆ ಈ ಪ್ರಶಸ್ತಿ ಬಂದಿರುವ ಕಾರಣಕ್ಕಾಗಿ ಆ ಪ್ರಶಸ್ತಿಗೂ ಗೌರವ ಸಲ್ಲುವಂತಾಗಿದೆ. ತಮ್ಮ ಕ್ರಿಯೆ ಮತ್ತು ವಿವೇಕಗಳಿಂದ ಪರಂಪರೆಗಳನ್ನು ರೂಪಿಸಿದ ತಳಸ್ತರದ ಸಮುದಾಯದ ವ್ಯಕ್ತಿಗಳಿಗೆ ಇತ್ತೀಚೆಗೆ ಪ್ರಶಸ್ತಿಗಳನ್ನು ನೀಡುವ ಪರಿಕ್ರಮ ಮುನ್ನೆಲೆಗೆ ಬರುತ್ತಿದೆ. ಪಿಂಡಪಾಪನಾಯಕಹಳ್ಳಿ ಮುನಿವೆಂಕಟಪ್ಪ, ಹಾಲಕ್ಕಿ ಒಕ್ಕಲಿಗರ ಸುಕ್ರಿ ಬೊಮ್ಮಗೌಡ, ತುಳಸಿಗೌಡ, ಹರೇಕಾಳ್ ಹಾಜಬ್ಬ, ಸಾಲುಮರದ ತಿಮ್ಮಕ್ಕನಂತಹ ತಳಸಮುದಾಯಗಳಿಗೆ ಸೇರಿದ ಪ್ರತಿಭಾವಂತರಿಗೆ ಸರ್ಕಾರಗಳು ಪದ್ಮಶ್ರೀ ಕೊಡುತ್ತಿರುವುದು ಸಂತೋಷದ ವಿಷಯ. ಸಮಾಜ, ಸಂಸ್ಕೃತಿ ಮತ್ತು ನೆಲಮೂಲದ ಪರಂಪರೆಗಳಿಗೆ ಸದ್ದಿಲ್ಲದೆ ಏಗುವ ತಳಸ್ತರದ ಈ ವ್ಯಕ್ತಿತ್ವಗಳನ್ನು ತಲುಪುವ ಯಾವುದೇ ಪ್ರಶಸ್ತಿಯು ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳುತ್ತದೆ. ತಳಸ್ತರದ ವ್ಯಕ್ತಿಗಳು ಲೌಕಿಕದ ಆಮಿಷಗಳನ್ನು ಮೀರಿ ನಮ್ಮ ಪರಂಪರೆಯ ಬೇರುಗಳಿಗೆ ಚೈತನ್ಯವನ್ನು ತುಂಬಿರುತ್ತಾರೆ. ಕನಿಷ್ಠ ಪ್ರಚಾರದ ಹಂಗೂ ಇಲ್ಲದೆ, ಸದ್ದು ಮಾಡದೆ ಇವರು ಸದಾ ಕ್ರಿಯಾಶೀಲರಾಗಿರುತ್ತಾರೆ. ದೇಶವೆಂಬ ಬಹುತ್ವದ ಜೇನುಗೂಡಿಗೆ ಈ ತಳಸ್ತರದ ದುಡಿಮೆಗಾರರು ತಂದು ಸುರಿಯುವ ಜೀವದ್ರವದ ಲೆಕ್ಕ ಸಿಗುವುದಿಲ್ಲ. ಬದುಕಿನ ಕಷ್ಟಕೋಟಲೆಗಳ ಸಿಕ್ಕುಗಳಲ್ಲಿದ್ದೂ ನಾಡಿನ ಪರಂಪರೆಯ ಘನತೆಯನ್ನು ಎತ್ತರಿಸುವಲ್ಲಿ ದುಡಿವ ತಳಸಮುದಾಯಗಳ ಪಾತ್ರ ಹಿರಿದು. ಜೇನುಗೂಡಿನ ಯಾವ ಹನಿಯಲ್ಲಿ ಯಾವ ಹೂವಿನ ಮಕರಂದವಿದೆ ಎಂದು ಪತ್ತೆ ಮಾಡಲು ಸಾಧ್ಯವಿಲ್ಲ. ಹೂವಿಂದ ಹೂವಿಗೆ ಚಲಿಸಿ ಮಕರಂದವನ್ನು ಉತ್ಪಾದಿಸುವವರು ಮಾತ್ರ ದುಡಿಮೆಗಾರ ಜೇನದುಂಬಿಗಳು. ಇಂತಹ ದುಡಿಮೆಗಾರರು ಇಲ್ಲದೇ ಇದ್ದಲ್ಲಿ ಜೇನುಗೂಡು ಸಾಧ್ಯವಿಲ್ಲ, ಮಕರಂದಕ್ಕೆ ಅಸ್ತಿತ್ವವೂ ಇರುವುದಿಲ್ಲ. ಜೇನುಹುಳುಗಳನ್ನು ಓಡಿಸಿ ತುಪ್ಪವನ್ನು ಸವಿಯುವ ನಮಗೆ ದುಂಬಿಗಳ ಶ್ರಮದ ಕುರಿತು ಕೃತಜ್ಞತೆಯೂ ಇರುವುದಿಲ್ಲ. ಹೀಗೆ ನಮ್ಮ ದೇಶವೆಂಬ ಬಹುತ್ವದ ಜೇನುಗೂಡಿಗೆ ಮಕರಂದವನ್ನು ಅಂತರ್ಗತಗೊಳಿಸಿದ ಶ್ರಮಜೀವಿಗಳಲ್ಲಿ ಜೇನುಕುರುಬರ ಸೋಮಣ್ಣ ಸಹ ಒಬ್ಬರು. ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಹೆಚ್ಚಾಗಿ ವಾಸಿಸುತ್ತಿರುವ ಜೇನುಕುರುಬ ಸಮುದಾಯಕ್ಕೆ ಸೇರಿದ ಸೋಮಣ್ಣ ಅತ್ಯಂತ ವಿಶಿಷ್ಟ ವ್ಯಕ್ತಿ.

ಕಳೆದೊಂದು ಶತಮಾನದ ಅವಧಿಯಲ್ಲಿ ರಾಷ್ಟ್ರೀಯ ಉದ್ಯಾನ ವಿಸ್ತರಣೆಯ ಭಾಗವಾಗಿ ಸರ್ಕಾರಗಳು ಈ ಜೇನುಕುರುಬ ಸಮುದಾಯವದವರನ್ನು ಬೇಕಾಬಿಟ್ಟಿಯಾಗಿ ಒಕ್ಕಲೆಬ್ಬಿಸಿವೆ. ಸಾವಿರಾರು ವರ್ಷಗಳಿಂದ ತಾವು ಬದುಕಿ ಬಾಳಿದ್ದ ಮೂಲನೆಲೆಗಳನ್ನು ಈ ಸಮುದಾಯದವರು ಕಳೆದುಕೊಂಡಿದ್ದಾರೆ. ಸ್ಥಳಾಂತರಗೊಂಡ ನಂತರ ಪುನರ್ವಸತಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಇವರಿಗೆ ಇಂದಿಗೂ ಮೂಲಭೂತ ಸೌಕರ್ಯಗಳು ಸೌಲಭ್ಯಗಳು ಲಭಿಸಿಲ್ಲ. ಇಂತಹ ಸಂದರ್ಭದಲ್ಲಿ ಸೋಮಣ್ಣನಿಗೆ ಪದ್ಮ ಪ್ರಶಸ್ತಿ ಸಿಕ್ಕಿರುವುದಕ್ಕೆ ಒಕ್ಕಲೆದ್ದ ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಬಹುದು ಎಂಬ ಕುತೂಹಲ ನನ್ನಲ್ಲಿದೆ.

ಮೈಸೂರು, ಚಾಮರಾಜನಗರ, ಕೊಡಗು, ಚಿಕ್ಕಮಗಳೂರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅನೇಕ ಆದಿವಾಸಿ ಸಮುದಾಯಗಳನ್ನು ಸರ್ಕಾರಗಳು ಒಕ್ಕಲೆಬ್ಬಿಸಿವೆ. ಮೈಸೂರು–ಕೊಡಗು ರಾಷ್ಟ್ರೀಯ ಅರಣ್ಯ ವ್ಯಾಪ್ತಿಯಲ್ಲಿ ಜೇನುಕುರುಬ, ಬೆಟ್ಟಕುರುಬ, ಎರವ ಮತ್ತು ಸೋಲಿಗರಂತಹ ಆದಿಮ ಸಮುದಾಯಗಳನ್ನು ಸರ್ಕಾರಗಳು ದಿಕ್ಕಾಪಾಲಾಗಿಸಿವೆ. ಸ್ಥಳೀಯ ಅಧಿಕಾರಸ್ಥ ಸಮುದಾಯಗಳು, ಯಾವ ಒಳನೋಟಗಳು ಇಲ್ಲದ ಮೂಢ ಸರ್ಕಾರಗಳು ಮತ್ತು ಲಾಭಕೋರ ಎನ್‌ಜಿಒಗಳು ಯಾವೂ ಈ ಸಮುದಾಯಗಳ ತಾಯ್ನೆಲವನ್ನು ಅವುಗಳಿಗೆ ಉಳಿಸಿಕೊಟ್ಟಿಲ್ಲ. ಅರಣ್ಯಗಳಿಂದ ಒಕ್ಕಲೆದ್ದ ಆದಿವಾಸಿಗಳನ್ನು ಕಾಡಂಚಿನ ನಿರುಪಯುಕ್ತ ಪ್ರದೇಶಗಳಲ್ಲಿ ನೆಲೆನಿಲ್ಲಿಸಲಾಗಿದೆ. ಒಕ್ಕಲೆದ್ದು ಘಾಸಿಗೊಂಡ ಸಮುದಾಯಗಳು ನೆಲೆನಿಂತ ಕಡೆಯಲ್ಲಿ ನಿರುಮ್ಮಳವಾಗಿ ಬದುಕಲು ಪ್ರಯತ್ನಿಸುತ್ತಿವೆ. ರಾಜ್ಯದ ಹೆದ್ದಾರಿಯೊಂದರ ಪಕ್ಕದ ಕಣಿವೆಯಲ್ಲಿ ಸೋಮಣ್ಣನ ಮತ್ತಾ ಹಾಡಿ ಇದೆ. ತೊಳೆದಿಟ್ಟಂತಹ ಸ್ಫಟಿಕದ ಆವರಣ, ಪುಟ್ಟ ಪುಟ್ಟ



ಚೊಕ್ಕಟ ಗುಡಿಸಲುಗಳು, ಎತ್ತರೆತ್ತರ ಮರಗಳ ಮಡಿಲು, ಎಲ್ಲವೂ ನೀರವ, ಸೋಮಣ್ಣನಂತೆ. ಅರಣ್ಯವಾಸಿ ಬುಡಕಟ್ಟುಗಳ ಸೋಪಜ್ಞತೆಯು ರೂಪುಗೊಂಡಿರುವುದು ನಿಸರ್ಗದ ಈ ಅಗಾಧತೆಯಿಂದ. ಹೀಗೆ ತನ್ನ ಪಾರಂಪರಿಕ ವಾಸದ ನೆಲೆಯನ್ನು ಕಳೆದುಕೊಂಡು ಜೀತ ಮಾಡುತ್ತಿದ್ದ ಕುನ್ನಯ್ಯ ಎಂಬ ವ್ಯಕ್ತಿಯೊಬ್ಬರ ಮಗ ಸೋಮಣ್ಣ. ತಾನು ಹುಟ್ಟಿ ಬೆಳೆದ ಆಲತ್ತಾಳಹುಂಡಿಯಿಂದ ಒಕ್ಕಲೆದ್ದು ಮತ್ತಾ ಹಾಡಿಗೆ ಬಂದು ನೆಲೆಸಿದ ಸೋಮಣ್ಣನ ಹಾಸ್ಯಭರಿತ ತೀಕ್ಷ್ಣ ಮಾತುಗಳಲ್ಲಿ ತನ್ನ ತಾಯ್ನೆಲದ ನೆನಪುಗಳ ಮೆರವಣಿಗೆಯೇ ಇದೆ. ನೆನಪುಗಳು ಹುಟ್ಟುಹಾಕಿರುವ ತಪ್ತತೆ ಮತ್ತು ಆದಿವಾಸಿಗಳ ಸಹಜ ತಾಯ್ತನಗಳು ಸೋಮಣ್ಣನನ್ನು ಅಪರೂಪದ ಚಿಂತಕನನ್ನಾಗಿಸಿವೆ. ಸರಿಸುಮಾರು ಅರ್ಧ ಶತಮಾನ ಕಣ್ಣೆದುರು ನಡೆದ ಮತ್ತು ನಡೆಯುತ್ತಲೇ ಇರುವ ಕ್ರೌರ್ಯವನ್ನು ಸೋಮಣ್ಣ ಕೇವಲ ತನ್ನ ಮುಗುಳ್ನಗೆಯಿಂದಲೇ ಮುಖಾಮುಖಿ ಮಾಡುತ್ತಾರೆ. ಅರಣ್ಯಾಧಿಕಾರಿಗಳ ಮೇಲಿನ ಅವನ ಕ್ರೋಧ, ಮಾತು ಬೆಳೆಯ ಬೆಳೆಯುತ್ತಲೇ ಆತನ ತಾಯ್ತನದ ಒರತೆಯಲ್ಲಿ ಅಮೃತವಾಗಿ ಹರಿದು ಬಿಡುತ್ತದೆ. ತನ್ನ ಮೂಲ ನೆಲೆ, ದೈವ, ತನ್ನ ಹಿರೀಕರ ಆತ್ಮಗಳು, ಒಡನಾಡಿದ್ದ ಮರ ಗಿಡ ಹೂವುಗಳು, ಸಹ ಜೀವನ ನಡೆಸಿದ್ದ ಕಾಡು ಪ್ರಾಣಿಗಳು ಇವ್ಯಾವು ಈಗ ಸೋಮಣ್ಣನ ಜೊತೆಗಿಲ್ಲ. ಪ್ರಭುತ್ವ ಈತನನ್ನು ವಂಚಿಸಿದೆ, ಎದುರಾಎದುರೇ ಮೋಸ ಮಾಡಿ ಆತನ

ಈ ಮೊದಲು ಸರಕಾರವು ರಕ್ಷಿತ ಅರಣ್ಯಗಳಲ್ಲಿ ಯಾವುದೇ ಯೋಜನೆಯನ್ನು ಅನುಷ್ಠಾನಗೊಳಿಸುವ ಮುನ್ನ ಸ್ಥಳೀಯ ಗ್ರಾಮಸಭಾಗಳ ಮತ್ತು ಆದಿವಾಸಿ ಅರಣ್ಯ ಸಮಿತಿಗಳ ಅನುಮತಿಯನ್ನು ಪಡೆಯುವುದು ಕಡ್ಡಾಯವಾಗಿತ್ತು. ಅನುಸೂಚಿತ ಪ್ರದೇಶಗಳಲ್ಲಿನ ಆದಿವಾಸಿಗಳಿಗೆ ತಮ್ಮ ಪಾರಂಪರಿಕ ನೆಲೆಗಳ ಮೇಲೆ ಇದ್ದ ಸಹಜ ಅಧಿಕಾರಗಳನ್ನು ಈ ಕಾಯ್ದೆ ಕಿತ್ತುಕೊಳ್ಳಲಿದೆ. ಜೊತೆಗೆ, 1996ರಲ್ಲಿ ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಮೊಂದರಲ್ಲಿ ವ್ಯಾಖ್ಯಾನಿಸಿದ್ದ 'ಅರಣ್ಯ' ಎಂಬ ಪರಿಕಲ್ಪನೆಯನ್ನೇ ಈ ಕಾಯ್ದೆಯು ಬದಲಾಯಿಸುತ್ತದೆ. ಲೋಕಸಭೆಯ ಮೇಲ್ಮನೆಯಲ್ಲೂ ಈ ತಿದ್ದುಪಡಿ ಕಾಯ್ದೆಯು ಅಂಗೀಕರಿಸಲ್ಪಟ್ಟರೆ ಅರಣ್ಯ ಮತ್ತು ಅದನ್ನು ಶತಮಾನಗಳಿಂದ ಸಂರಕ್ಷಿಸಿಕೊಂಡು ಬಂದ ಆದಿವಾಸಿಗಳ ಸಾಂವಿಧಾನಿಕ ಹಕ್ಕುಗಳು ನಾಶವಾಗುತ್ತವೆ. ಒಂದೆಡೆ ಆದಿವಾಸಿ ಸಮುದಾಯಗಳ ಪ್ರತಿಭಾವಂತ ವ್ಯಕ್ತಿಗಳಿಗೆ ಪದ್ಮ ಪ್ರಶಸ್ತಿಗಳನ್ನು ನೀಡುತ್ತ ಇನ್ನೊಂದೆಡೆ ಈ ಸಮುದಾಯಗಳ ಬದುಕುವ ಹಕ್ಕುಗಳನ್ನು ಕಿತ್ತುಕೊಳ್ಳಲಾಗುತ್ತದೆ. ಪ್ರಭುತ್ವ ಕೊಡಮಾಡುವ ಈ ಸಾಂಕೇತಿಕ ಗೌರವಗಳು ತಳಸಮುದಾಯಗಳ ಬದುಕುಗಳಿಗೆ ಘನತೆಯನ್ನು ತರಲಾರವು.



ಮೂಲ ನೆಲೆಯಿಂದ ಎತ್ತಿ ಬಿಸಾಡಿದೆ. ದಿಕ್ಕಾಪಾಲಾದ ಆದಿವಾಸಿಗಳು ಕಾಡಂಚಿನ ಪುಟ್ಟ ಜಾಗಗಳಲ್ಲಿ, ನಗರಗಳ ಕೊಳೆಗೇರಿಗಳಲ್ಲಿ ಬದುಕುತ್ತಿವೆ. ಒಕ್ಕಲೇಳುವಾಗ ಪ್ರಭುತ್ವ ಕೊಟ್ಟ ಭರವಸೆಗಳು ಭ್ರಮೆಗಳಾಗಿ ಹೋಗಿವೆ. ಪ್ರಾಣಿಗಳೂ ವಾಸಿಸಲು ಯೋಗ್ಯವಾಗಿಲ್ಲದ ಸ್ಥಳಗಳಲ್ಲಿ ಆದಿವಾಸಿಗಳನ್ನು ಬಿಸಾಡಲಾಗಿದೆ. ಆದರೂ ಸೋಮಣ್ಣ ತನ್ನ ಅಖಂಡ ಕೋಪದಲ್ಲಿ ಎದುರಿನ ಶತ್ರುವನ್ನು ಸುಟ್ಟುಬಿಡಲಾರ. ಆಕ್ರೋಶದ ಮಾತುಗಳಿಂದ ತಿವಿಯಲಾರ, ಸೇಡಿನ ಈಟಿಯಿಂದ ಚುಚ್ಚಲಾರ. ಆದರೆ ಈತನ ಅಪಾರ ತಿಳುವಳಿಕೆಯಿಂದ ಬರುವ ಮಾತುಗಳು ಮಾತ್ರ ಎದುರು ನಿಂತ ಎಲ್ಲವನ್ನೂ ಸೋಲಿಸಿ ಬಿಡುತ್ತವೆ. ದಶಕಗಳಿಂದ ಆತನಲ್ಲಿ ಮಡುಗಟ್ಟಿರುವ ಗಾಢ ವಿಷಾದವು ಆತನನ್ನು ಸಿನಿಕನನ್ನಾಗಿಸಿಲ್ಲ. ಅವರಿಸಿದ ವಿಷಾದದ ತೀವ್ರವತೆಯನ್ನು ಮೀರಲು ಲಘು ವಿಡಂಬನೆಯನ್ನು ಸೋಮಣ್ಣ ರೂಢಿಸಿಕೊಂಡಿದ್ದಾರೆ. ಈ ವಿಡಂಬನೆಯಲ್ಲಿ ಸಮಾಜದ ಆಷಾಡಭೂತಿ ನಿಲುವುಗಳನ್ನು ಬೆತ್ತಲು ಮಾಡುವ ಚಾಕಚಕ್ಯತೆ ಇದೆ. ಸೇಡು, ಕಹಿ ಮತ್ತು ಕ್ರೌರ್ಯಗಳನ್ನು ಮೈಗೂಡಿಸಿಕೊಳ್ಳದೆಯೂ ಎದುರಾಳಿಯನ್ನು ಗೆಲ್ಲುವ ತಂತ್ರವಾಗಿ ಸೋಮಣ್ಣ ಈ ವಿಡಂಬನೆಯನ್ನು ಬಳಸುತ್ತ ಬಂದಿದ್ದಾರೆ.

ಸೋಮಣ್ಣನನ್ನೂ ಒಳಗೊಂಡಂತೆ ಆದಿವಾಸಿಗಳು ಸೋತು ಹೋಗಿದ್ದಾರೆ. ಸೋತ ಕಾರಣಕ್ಕೆ ಈ ಸಮುದಾಯಗಳು ಪರಂಪರೆಯನ್ನು ದ್ವೇಷಿಸಲಿಲ್ಲ. ತಾವು ಕಟ್ಟಿದ ಜೇನುಗೂಡು ಪರರ ಸ್ವತ್ತಾದ ನಂತರವೂ ಈ ದುಡಿಮೆಗಾರರು ಪರಾಭವಗೊಳ್ಳಲಿಲ್ಲ. ಮತ್ತೆ ಬೇರೆಡೆ ಹಾರಿ ಹೋಗಿ ಇನ್ನೊಂದು ಗೂಡು ಕಟ್ಟುವಲ್ಲಿ ಈ ಸಮುದಾಯಗಳು ನಿರತವಾಗಿವೆ. ಸೋತೂ ಗೆಲ್ಲುವ ಈ ಸಮುದಾಯಗಳ ಮುಂದೆ ನಾಗರಿಕ ಸಮಾಜದ ಲೌಕಿಕದ ವಿಜಯಗಳು ಕ್ಷುಲ್ಲಕವಾಗಿ ಕಾಣುತ್ತವೆ. ಸೋತು ಕುಗ್ಗಿದ ಈ ಆದಿವಾಸಿ ಸಮುದಾಯಗಳ ಸಮಾಜವು ಭಿದ್ರಗೊಳ್ಳಲಿಲ್ಲ. ತಮ್ಮ ಪರಂಪರೆಯನ್ನು ಕುಗ್ಗಿಸುವ ಪ್ರಯತ್ನಗಳನ್ನು ಈ ಸಮುದಾಯಗಳು ನಗುತ್ತಲೇ ಪರಭಾವಗೊಳಿಸಿದವು. ಶತಾಯಗತಾಯ ಬದುಕಲು ಈ ಸಮುದಾಯಗಳು ನಡೆಸಿದ ಇಂತಹ ಅಖಂಡ ಪ್ರಯತ್ನಗಳು ನಮ್ಮ ದೇಶದ ಪರಂಪರೆಯನ್ನು ರೂಪಿಸುತ್ತಾ ಬಂದಿವೆ. ಪದ್ಮಶ್ರೀ ಸೋಮಣ್ಣ ಇಂತಹ ಸೃಜನಶೀಲ ಪರಂಪರೆಯ ವಾರಸುದಾರ. ಇಂತಹ ಅಪರೂಪದ ವ್ಯಕ್ತಿಗೆ ಹಿಂದೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯು ತಪ್ಪಿಹೋಗಿತ್ತು. ರಾಜ್ಯೋತ್ಸವ ಪ್ರಶಸ್ತಿ ಪಡೆದವರ ಪಟ್ಟಿಯಲ್ಲಿದ್ದ ಸೋಮಣ್ಣನ ಹೆಸರು ರಾತ್ರೋರಾತ್ರಿ ಕಣ್ಮರೆಯಾಗಿತ್ತು. ಸೋಮಣ್ಣ ಮತ್ತು ಅವರನ್ನು ಬಲ್ಲ ನನ್ನಂತಹ ಅನೇಕರಿಗೆ ಸಹಜವಾಗಿಯೇ ನೋವಾಗಿತ್ತು. ಆದರೆ, ಸೋಮಣ್ಣ ಫೋನ್ ಮಾಡಿ ನಮ್ಮನ್ನೇ ಸಮಾಧಾನಪಡಿಸಿದರು. 'ಸಾ, ನಮ್ಮ ಹಾಡಿತಾವ ಬಂದುಬುಡಿ ಇಲ್ಲೆ ಮರದ ಬುಡದಲ್ಲಿ ಮಾಂಸ ಬೇಯಿಸ್ಕೊಂಡು ಊಟ ಮಾಡೋವ' ಎಂದು ತಮಾಷೆ ಮಾಡಿ, ಸೋಮಣ್ಣ ನಮ್ಮನ್ನು ನಗಿಸಿ ತಾವೂ ನಕ್ಕಿದ್ದರು. ಸೋಮಣ್ಣನಿಗೆ ಆದ ವಂಚನೆಗೆ ಪ್ರತಿಯಾಗಿ ನಾವೆಲ್ಲ ಗೆಳೆಯರು ಸೇರಿ ಅವರಿಗೆ 'ಜನರಾಜ್ಯೋತ್ಸವ' ಪ್ರಶಸ್ತಿಯನ್ನು ಆತನ ಮತ್ತಾ ಹಾಡಿಯಲ್ಲೇ ಪ್ರದಾನ ಮಾಡಿದೆವು. ನಮ್ಮ ರಾಜ್ಯದ ಅನೇಕ ಮಾನವಂತರು ಅಂದು ಸೋಮಣ್ಣನ ಸಂತೋಷದಲ್ಲಿ ಭಾಗಿಯಾದರು. ಸೋಮಣ್ಣನ ವಿರೋಚಿತ ನಗು ನಮ್ಮಲ್ಲಿ ಹೊಸ ಪರ್ಯಾಯವನ್ನು ಕಂಡುಕೊಳ್ಳಲು ಪ್ರೇರಣೆ ನೀಡಿತ್ತು.

ಸೋಮಣ್ಣ ಅನೇಕರಂತೆ, ಯಾವ ಪ್ರಶಸ್ತಿಗೆ ಅರ್ಜಿ ಹಾಕಿದವರಲ್ಲ, ಪ್ರಶಸ್ತಿಯ ಕುರಿತು ಅವರಿಗೆ ಸಹಜವಾಗಿಯೇ ಯಾವ ಮೋಹಗಳೂ ಇಲ್ಲ. ಪ್ರಶಸ್ತಿಗಳ ಹಂಬಲದಲ್ಲಿ ಸೋಮಣ್ಣ ಯಾವ ಕೆಲಸಗಳಲ್ಲೂ ತೊಡಗಿಕೊಂಡವರಲ್ಲ. ರಾಜೀವ್ ಗಾಂಧೀ ರಾಷ್ಟ್ರೀಯ ಉದ್ಯಾನದಿಂದ ಒಕ್ಕಲೆದ್ದ ಬುಡಕಟ್ಟು ಹಾಡಿಗಳಿಗೆ ಕಾಲ್ನಡಿಗೆಯಲ್ಲಿ ತಿರುಗಾಡಿ ಅವರ ಕಷ್ಟಗಳಲ್ಲಿ ಭಾಗಿಯಾಗುತ್ತಿರುವ ಸೋಮಣ್ಣ ಯಾವ ಪ್ರಶಸ್ತಿಗಳ ಕನಸು ಕಾಣಬೇಕು? ನಮ್ಮನ್ನು ನಮ್ಮಷ್ಟಕ್ಕೆ ಬದುಕಲು ಬಿಟ್ಟರೆ ಸಾಕು ಎಂಬ ಪರಿಸ್ಥಿತಿಯಲ್ಲಿದ್ದವರು ಹೇಗೆ ತಾನೆ ಪ್ರಶಸ್ತಿಗಳನ್ನು ನಿರೀಕ್ಷಿಸಲು ಸಾಧ್ಯ? ಇಂತಹ ಒಂದು ಕುಟುಂಬದಲ್ಲಿ ಸೋಮಣ್ಣ ದಿ:01.06.1957ರಲ್ಲಿ ಜನಿಸುತ್ತಾರೆ. ಕಾಡೇ ಇವರು ಪಾಠ ಶಾಲೆ. ಹೀಗಾಗಿ ಸೋಮಣ್ಣ ಶಾಲೆಯ ಸಾಂಪ್ರದಾಯಿಕ ಶಿಕ್ಷಣ ಪಡೆಯಲು ಸಾಧ್ಯವಾಗಲಿಲ್ಲ. ತಂದೆ ಕುನ್ನಯ್ಯನಿಗಿದ್ದ ತೀವ್ರ ಬಡತನದಿಂದ ಸೋಮಣ್ಣ ತನ್ನ ಹಾಡಿಗೆ ಸೀಮಿತವಾಗಬೇಕಾಯಿತು. ಆದರೆ ಕ್ರಿಯಾಶೀಲ ಸೋಮಣ್ಣ ತನ್ನ ಸಮುದಾಯದ ಇರುವನ್ನು ಬದಲಾಯಿಸಲು ಮುಂದಾದರು. ತನಗಿದ್ದ ಮಿತಿಗಳನ್ನು ಮತ್ತು ಬಡತನವನ್ನೂ ಮೀರಿ ಸೋಮಣ್ಣ ಬೆಳೆದರು. ಕಳೆದ ಮೂರ್ನಾಲ್ಕು ದಶಕಗಳಿಂದ ಸೋಮಣ್ಣ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿರುವ ಭೂರಹಿತ ಆದಿವಾಸಿಗಳನ್ನು ಸಂಘಟಿಸಿದ್ದಾರೆ. ಸ್ಥಳೀಯ ಪ್ರಗತಿಪರ ಹೋರಾಟಗಾರರ ಜೊತೆಗೂಡಿ ಕಟ್ಟಿದ 'ರಾಜ್ಯ ಮೂಲನಿವಾಸಿ ವೇದಿಕೆಯ' ಅಧ್ಯಕ್ಷನಾಗಿ ಕಾರ್ಯನಿರ್ವಹಿಸಿದ್ದಾರೆ. ಸೋಮಣ್ಣ ತನ್ನ ಈ ಸಾಂಘಿಕ ಪ್ರಯತ್ನದಿಂದಾಗಿ ಆದಿವಾಸಿಗಳಿಗೆ ಸರಿಸುಮಾರು ಆರು ಸಾವಿರ ಎಕರೆ ಕೃಷಿ ಭೂಮಿ ದೊರಕಿಸಿಕೊಟ್ಟಿದ್ದಾರೆ. ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ

ನಾಗರಹೊಳೆ ಮತ್ತು ಕಾಕನಕೋಟೆ ಅರಣ್ಯ ಪ್ರದೇಶದಿಂದ ಒಕ್ಕಲೆದ್ದ ಆದಿವಾಸಿಗಳನ್ನು ಸೋಮಣ್ಣ ಸಂಘಟಿಸಿ, ಪುನರ್ವಸತಿಗಾಗಿ ಅನೇಕ ಚಳವಳಿಗಳನ್ನು ರೂಪಿಸಿದ್ದಾರೆ. ಸರ್ಕಾರ ಬೇಕಾಬಿಟ್ಟಿಯಾಗಿ ಮತ್ತು ದೌರ್ಜನ್ಯದ ಮೂಲಕ ಒಕ್ಕಲೆಬ್ಬಿಸಿದ ಆದಿವಾಸಿಗಳಿಗೆ ಈ ಸೋಮಣ್ಣ ಅಂತರಂಗದ ಬಂಧು.

1989ರಿಂದಲೇ ಸೋಮಣ್ಣ ಸ್ಥಳಾಂತರಗೊಂಡು ದಿಕ್ಕೆಟ್ಟು ಹೋದ ಜೇನುಕುರುಬ, ಬೆಟ್ಟಕುರುಬ, ಎರವ ಮತ್ತು ಸೋಲಿಗರನ್ನು ಸಂಘಟಿಸಿ ಪುನರ್ವಸತಿಗಾಗಿ ಹೋರಾಡುತ್ತಲೇ ಬಂದಿದ್ದಾರೆ. ಆದರೆ, ನಮ್ಮ ಪರಂಪರೆಯ ಮೂಲ ಬೇರುಗಳಂತಿರುವ ಆದಿವಾಸಿಗಳಿಗೆ ಮಾತ್ರ ಘನತೆಯುಳ್ಳ ಪುನರ್ವಸತಿ ದೊರಕಿಲ್ಲ. ಸೋಮಣ್ಣ ಈ ಕಾರಣಕ್ಕಾಗಿ ಸುಮ್ಮನೆ ಕುಳಿತವರೂ ಅಲ್ಲ. ಚಳವಳಿಯ ದಾರಿಯ ಜೊತೆಗೆ ಕಾನೂನು ಹೋರಾಟಕ್ಕೂ ಸೋಮಣ್ಣ ಮುಂದಾದ ಉದಾಹರಣೆಗಳಿವೆ. ಒಕ್ಕಲೆದ್ದ ಆದಿವಾಸಿಗಳ ಪರ ಸಾರ್ವಜನಿಕ ಹಿತಾಸಕ್ತಿ ಆಧಾರದ ಮೇಲೆ ಇತರ ಚಳವಳಿಗಾರರ ಜೊತೆಗೆ ಸೋಮಣ್ಣ ಹೈಕೋರ್ಟ್ ಮೊರೆ ಹೋದರು. ರಾಜ್ಯದ ಹೈಕೋರ್ಟ್, ಒಕ್ಕಲೆದ್ದ ಆದಿವಾಸಿಗಳ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಏಕವ್ಯಕ್ತಿ ಆಯೋಗವನ್ನು ಪ್ರೊ. ಮುಜಫರ್ ಅಸಾದಿಯವರ ಹೆಸರಲ್ಲಿ ರಚಿಸಿತು. ಪ್ರೊ. ಅಸಾದಿಯವರು ನೀಡಿದ ವರದಿಯನ್ನಾಧರಿಸಿ ಹೈಕೋರ್ಟ್ ಆದಿವಾಸಿಗಳ ಪುನರ್ವಸತಿಯನ್ನು ಗೌರವಾನ್ವಿತವಾಗಿ ಕೈಗೊಳ್ಳಬೇಕೆಂದು ರಾಜ್ಯ ಸರ್ಕಾರಕ್ಕೆ ಆದೇಶ ನೀಡಿತು. ಆದರೆ, ಹೈಕೋರ್ಟ್ ಆದೇಶವು ಕಡತದ ಪಾಲಾಗಿ ಧೂಳು ಹಿಡಿಯುತ್ತಿದೆ. ಹೈಕೋರ್ಟ್ ಆದೇಶದ ಮೂಲಕ ಸೋಮಣ್ಣನಿಗೆ ನೈತಿಕ ಜಯವೇನೋ ಸಿಕ್ಕಿತು. ಆದರೆ ಆ ವರದಿಯನ್ನು ಅನುಷ್ಠಾನಗೊಳಿಸಲು ಸರ್ಕಾರಗಳು ಮುಂದಾಗುತ್ತಿಲ್ಲ. ಆದರೆ ಸೋಮಣ್ಣ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಸ್ಥಳಾಂತರಗೊಂಡ ಆದಿವಾಸಿಗಳಿಗೆ ಪಡಿತರ ಚೀಟಿ ದೊರಕಿಸಿ ಕೊಟ್ಟು, ಆದಿವಾಸಿಗಳ ಪ್ರದೇಶದಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ತೆರೆದು ಬಡ ಆದಿವಾಸಿಗಳಿಗೆ ಆಹಾರದ ಕೊರತೆ ನೀಗುವಂತೆ ಮಾಡಿದ್ದರಲ್ಲಿ ಸೋಮಣ್ಣನ ಪಾತ್ರ ಹಿರಿದು. ಸೋಮಣ್ಣ ಅವರದು ಕೇವಲ ಸಮಾಜಸೇವಕನ ಶುಷ್ಕ ವ್ಯಕ್ತಿತ್ವವಲ್ಲ. ಸದಾ ನಗುವ, ಜೊತೆಗಿದ್ದವರನ್ನು ನಗೆಯ ಕಡಲಲ್ಲಿ ಮುಳುಗೇಳಿಸುವ ಸೋಮಣ್ಣ ಬಂಡವಾಳಶಾಹಿಗಳ ವಿರುದ್ಧವೂ ಬಂಡೆದ್ದಿದ್ದಾರೆ. ನಾಗರಹೊಳೆ ದಟ್ಟಾರಣ್ಯದಲ್ಲಿ ಬಂಡವಾಳಶಾಹಿಗಳು ಕಟ್ಟಲು ಹೊರಟಿದ್ದ ತಾಜ್ ಹೋಟೆಲ್ ನಿರ್ಮಾಣದ ವಿರುದ್ಧವೂ ಸೋಮಣ್ಣ ಹೋರಾಡಿದ್ದಾರೆ. ಆ ಭಾಗದ ಆದಿವಾಸಿ ಮತ್ತು ಪ್ರಗತಿಪರರ ಜೊತೆ ಹೋರಾಟಕ್ಕಿಳಿದ ಸೋಮಣ್ಣ ತಾಜ್ ಹೋಟೆಲ್ ನಿರ್ಮಾಣ ರದ್ದಾಗುವವರೆಗೂ ಸುಮ್ಮನಾಗಲಿಲ್ಲ. ಮೇಧಾ ಪಾಟ್ಕರ್ ಜೊತೆ ಸೇರಿ ಸೋಮಣ್ಣ ನರ್ಮದಾ ಬಚಾವ್ ಆಂದೋಲನದ ಭಾಗವಾಗಿ ದುಡಿದಿದ್ದಾರೆ. ಇದಲ್ಲದೆ ಪಶ್ಚಿಮಘಟ್ಟ ಉಳಿಸುವ ಸಲುವಾಗಿ ಕೈಗೊಂಡ ಗೋವಾ ಕನ್ಯಾಕುಮಾರಿ ಕಾಲ್ನಡಿಗೆ ಜಾಥಾದಲ್ಲಿ ಸೋಮಣ್ಣ ಮುಂಚೂಣಿಯಲ್ಲಿದ್ದವರು. 2006ರಲ್ಲಿ ಜಾರಿಗೆ ಬಂದ ಅರಣ್ಯವಾಸಿಗಳ ಪಾರಂಪರಿಕ ಹಕ್ಕುಗಳ ಸಮಿತಿಯಲ್ಲಿ ಸೋಮಣ್ಣ ಸಕ್ರೀಯನಾಗಿ ಆದಿವಾಸಿಗಳ ಪರ ಹೋರಾಡುತ್ತಲೇ ಇದ್ದಾರೆ. 1991ರಲ್ಲಿ ಫಿಲಿಫೈನ್ಸ್ ದೇಶದಲ್ಲಿ ನಡೆದ ಆದಿವಾಸಿಗಳ ಮೇಳದಲ್ಲಿ ಸೋಮಣ್ಣ ಕರ್ನಾಟಕದ ಬುಡಕಟ್ಟು ಸಮುದಾಯಗಳನ್ನು ಪ್ರತಿನಿಧಿಸಿ ಭಾಗವಹಿಸಿದ್ದರು. ಇಂತಹ ಸೋಮಣ್ಣ ನಿರಂತರ 'ಆಂದೋಲನ ಜೀವಿ'. ಇಂತಹ ಅಪರೂಪದ ವ್ಯಕ್ತಿಗೆ ಪದ್ಮಶ್ರೀ ಸಂದಿದೆ. ಇದು ತಳಸಮುದಾಯಗಳ ಸೃಜನಶೀಲ ಬದುಕಿಗೆ ಲಭಿಸಿದ ಬಹುಮಾನ. ಹೀಗೆ ತಳಸಮುದಾಯಗಳ ವ್ಯಕ್ತಿತ್ವಗಳನ್ನು ಹುಡುಕಿ ಗೌರವಿಸುವ ಪರಂಪರೆಯನ್ನು ಪ್ರಭುತ್ವ ರೂಢಿಸಿಕೊಳ್ಳುತ್ತಿದೆ. ಪ್ರಭುತ್ವ ಹೀಗೆ ಆದಿವಾಸಿಗಳಿಗೆ ನೀಡುವ ಗೌರವ ಕೇವಲ ಸಂಕೇತದ ಮಟ್ಟದಲ್ಲಿದೆ.

ಸಂತಾಲ ಸಮುದಾಯದ ಶ್ರೀಮತಿ ದ್ರೌಪತಿ ಮುರ್ಮು ಅವರನ್ನು ದೇಶದ ರಾಷ್ಟ್ರಪತಿಯನ್ನಾಗಿಸಲಾಗಿದೆ. ಮುರ್ಮು ಅವರು ಮಧ್ಯಭಾರತದ ಸಂತಾಲ ಆದಿವಾಸಿ ಸಮುದಾಯಕ್ಕೆ ಸೇರಿದವರು. ಮುರ್ಮು ಅವರು ಪ್ರತಿನಿಧಿಸುವ ಸಂತಾಲ ಸಮುದಾಯದವರು ತಾವು ಅನುಸರಿಸುವ 'ಸರ್ನ' ಧರ್ಮವನ್ನು ಸರ್ಕಾರ ಅಧಿಕೃತಗೊಳಿಸಬೇಕು ಎಂಬ ಹಕ್ಕೊತ್ತಾಯವನ್ನು ಅನೇಕ ದಶಕಗಳಿಂದ ಮಾಡುತ್ತಾ ಬಂದಿದ್ದಾರೆ. ಆದರೆ ಸಂತಾಲರ ಈ ಬೇಡಿಕೆಯನ್ನು ನಿರಂತರವಾಗಿ ಬದಿಗೆ ಸರಿಸಲಾಗಿದೆ. ಶ್ರೀಮತಿ ದ್ರೌಪತಿ ಮುರ್ಮು ಅವರನ್ನು ರಾಷ್ಟ್ರಪತಿಯನ್ನಾಗಿಸಿ ಗೌರವಿಸುವ ನಮ್ಮ ಪ್ರಭುತ್ವವು, ಸುಂದರಬನ್ ಅರಣ್ಯ ಪ್ರದೇಶದಲ್ಲಿನ ಹುಲಿಗಳಿಗೆ ಬಲಿಯಾದ ಆದಿವಾಸಿ ಕುಟುಂಬಗಳ ಕಣ್ಣೀರನ್ನೂ ಒರೆಸಬೇಕಿದೆ. ಪಿಂಡಪಾಪನಾಯಕಹಳ್ಳಿ ಮುನಿವೆಂಕಟಪ್ಪ ಅವರಿಗೆ, ಹಾಲಕ್ಕಿ ಒಕ್ಕಲಿಗರ ಸುಕ್ರಿ ಬೊಮ್ಮಗೌಡ, ತುಳಸಿಗೌಡ ಅವರಂತಹ ತಸಮುದಾಯಗಳಿಗೆ



ಸೇರಿದ ಪ್ರತಿಭಾವಂತರಿಗೆ ಸರಕಾರಗಳು ಪದ್ಮಶ್ರೀ ಕೊಡುತ್ತಿರುವುದು ಸಂತೋಷದ ವಿಷಯ. ಹೀಗೆ ಪ್ರಶಸ್ತಿಗಳನ್ನು ನೀಡುವ ಸಂದರ್ಭದಲ್ಲಿಯೇ ಲೋಕಸಭೆಯಲ್ಲಿ ಅರಣ್ಯ ಕಾಯ್ದೆಗೆ ಸಂಬಂಧಿಸಿದ ಒಂದು ತಿದ್ದುಪಡಿ ಮಸೂದೆಯೊಂದನ್ನು ಇತ್ತೀಚೆಗೆ (1.08.2023ರಂದು) ಅಂಗೀಕರಿಸಲಾಯ್ತು. ಅರಣ್ಯಗಳ ಸಂರಕ್ಷಣೆಗಾಗಿ ಜಾರಿಗೆ ತಂದಿದ್ದ ಕಾಯ್ದೆಯಲ್ಲಿದ್ದ ಬಿಗಿ ನಿಲುವನ್ನು ಸಡಿಲಿಸಿ ಬಂಡವಾಳಿಗರಿಗೆ ಅನುಕೂಲವಾಗುವ ರೀತಿಯಲ್ಲಿ ಅರಣ್ಯ ಕಾಯ್ದೆಗೆ ತಿದ್ದುಪಡಿಯನ್ನು ತರಲಾಯಿತು. ಸರ್ಕಾರ ಮತ್ತು ಅನುಮತಿ ಪಡೆದ ಬಹುರಾಷ್ಟ್ರೀಯ ಕಂಪನಿಗಳು ಬಂಡವಾಳ ಹೂಡಿ ಯಾವುದೇ ಯೋಜನೆಗಳನ್ನು ಪ್ರಾರಂಭಿಸಲು ಈ ತಿದ್ದುಪಡಿ ಕಾಯ್ದೆ ಅವಕಾಶ ನೀಡಲಿದೆ. ಈ ಮೊದಲು ಸರ್ಕಾರವು ರಕ್ಷಿತ ಅರಣ್ಯಗಳಲ್ಲಿ ಯಾವುದೇ ಯೋಜನೆಯನ್ನು ಅನುಷ್ಠಾನಗೊಳಿಸುವ ಮುನ್ನ ಸ್ಥಳೀಯ ಗ್ರಾಮಸಭಾಗಳ ಮತ್ತು ಆದಿವಾಸಿ ಅರಣ್ಯ ಸಮಿತಿಗಳ ಅನುಮತಿಯನ್ನು ಪಡೆಯುವುದು ಕಡ್ಡಾಯವಾಗಿತ್ತು. ಅನುಸೂಚಿತ ಪ್ರದೇಶಗಳಲ್ಲಿನ ಆದಿವಾಸಿಗಳಿಗೆ ತಮ್ಮ ಪಾರಂಪರಿಕ ನೆಲೆಗಳ ಮೇಲೆ ಇದ್ದ ಸಹಜ ಅಧಿಕಾರಗಳನ್ನು ಈ ಕಾಯ್ದೆ ಕಿತ್ತುಕೊಳ್ಳಲಿದೆ. ಜೊತೆಗೆ, 1996ರಲ್ಲಿ ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಪೊಂದರಲ್ಲಿ ವ್ಯಾಖ್ಯಾನಿಸಿದ್ದ 'ಅರಣ್ಯ' ಎಂಬ ಪರಿಕಲ್ಪನೆಯನ್ನೇ ಈ ಕಾಯ್ದೆಯು ಬದಲಾಯಿಸುತ್ತದೆ. ಲೋಕಸಭೆಯ ಮೇಲ್ಮನೆಯಲ್ಲೂ ಈ ತಿದ್ದುಪಡಿ ಕಾಯ್ದೆಯು ಅಂಗೀಕರಿಸಲ್ಪಟ್ಟರೆ ಅರಣ್ಯ ಮತ್ತು ಅದನ್ನು ಶತಮಾನಗಳಿಂದ ಸಂರಕ್ಷಿಸಿಕೊಂಡು ಬಂದ ಆದಿವಾಸಿಗಳ ಸಾಂವಿಧಾನಿಕ ಹಕ್ಕುಗಳು ನಾಶವಾಗುತ್ತವೆ. ಒಂದೆಡೆ ಆದಿವಾಸಿ ಸಮುದಾಯಗಳ ಪ್ರತಿಭಾವಂತ ವ್ಯಕ್ತಿಗಳಿಗೆ ಪದ್ಮ ಪ್ರಶಸ್ತಿಗಳನ್ನು ನೀಡುತ್ತ ಇನ್ನೊಂದೆಡೆ ಈ ಸಮುದಾಯಗಳ ಬದುಕುವ ಹಕ್ಕುಗಳನ್ನು ಕಿತ್ತುಕೊಳ್ಳಲಾಗುತ್ತದೆ. ಪ್ರಭುತ್ವ ಕೊಡಮಾಡುವ ಈ ಸಾಂಕೇತಿಕ ಗೌರವಗಳು ತಳಸಮುದಾಯಗಳ ಬದುಕುಗಳಿಗೆ ಘನತೆಯನ್ನು ತರಲಾರವು.

ಸೋಮಣ್ಣ ತನ್ನ ಬದುಕಿನುದ್ದಕ್ಕೂ ಸೋಲುಗಳ ಪ್ರವಾಹದಲ್ಲಿ ಈಜಿ ಬಂದಿದ್ದಾರೆ. ಸೋಲುಗಳನ್ನು ಪರಾಭಾವಗೊಳಿಸುವ ಈತನ ನಿರಂತರ ಪ್ರಯತ್ನಗಳು ಇಂದಿಗೂ ಜಾರಿಯಲ್ಲಿವೆ. ಸೋಮಣ್ಣ ತನ್ನ ಸಹವಾಸಿಗಳ ಜೊತೆ ಸೇರಿ ಪ್ರೊ. ಅಸಾದಿಯವರ ಏಕವ್ಯಕ್ತಿ ಆಯೋಗದ ವರದಿ ರಚನೆಗಾಗಿ ದುಡಿದಿದ್ದಾರೆ. ರಾಜ್ಯ ಉಚ್ಚ ನ್ಯಾಯಾಲಯ ಈ ವರದಿಯನ್ನು ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಸೂಚಿಸಿದೆ. ಪದ್ಮ ಪ್ರಶಸ್ತಿಯನ್ನು ನೀಡಿ ಆದಿವಾಸಿಗಳನ್ನು ತಾನು ಗೌರವಿಸುತ್ತಿದ್ದೇನೆ ಎಂದು ಭಾವಿಸುವ ಸರ್ಕಾರಗಳು ಈ ವರದಿಯ ಅನುಷ್ಠಾನಕ್ಕೂ ಮುಂದಾಗಬೇಕಿದೆ. ಕೇವಲ ಪ್ರಶಸ್ತಿಗಳಿಂದಾಗಿ ತಳಸಮುದಾಯಗಳ ಬದುಕು ಹಸನಾಗಲು ಸಾಧ್ಯವಿಲ್ಲ. ಸಾಂಕೇತಿಕತೆ ನೀಡುವ ಕ್ಷಣಿಕ ಅಹ್ಲಾದವು ತಳಸಮುದಾಯಗಳ ಬದುಕನ್ನು ಹಸನು ಮಾಡುವುದಿಲ್ಲ ಎಂಬುದಕ್ಕೆ ನಮ್ಮ ದೇಶದ ಚರಿತ್ರೆಯಲ್ಲಿ ರಾಶಿರಾಶಿ ಸಾಕ್ಷ್ಯಗಳು ದೊರೆಯುತ್ತವೆ. ಆದಿವಾಸಿಗಳು ಘನತೆಯಿಂದ ಬದುಕಲು ಅವುಗಳಿಗೆ ಸಮಾನ ಅವಕಾಶಗಳು ಸಿಗುವಂತಾಗಬೇಕು. ನಮ್ಮ ಸಮಾಜದ ಬೇರುಗಳೇ ಆಗಿರುವ ಆದಿವಾಸಿಗಳು ಸೋತು ಹೋಗಬಾರದು. ಸೋಮಣ್ಣನಂತಹ ವಿವೇಕಶಾಲಿಗಳು ಸ್ವಾವಲಂಬಿ ಬದುಕನ್ನು ನಡೆಸುವಂತಾಗಬೇಕು. ಆದಿವಾಸಿಗಳಿಗೆ ಹೀಗೆ ಘನತೆಯ ಬದುಕನ್ನು ನಡೆಸಲು ಅನುವು ಮಾಡಿಕೊಡುವ ಉಪಕ್ರಮವು ಪ್ರಶಸ್ತಿಗಳನ್ನು ನೀಡುವ ಶುಷ್ಕ ಔದಾರ್ಯಕ್ಕಿಂತ ಮಿಗಿಲಾದದ್ದು. ಪದ್ಮ ಪ್ರಶಸ್ತಿ ಪಡೆಯುವ ವೇದಿಕೆಯಲ್ಲೂ ಸೋಮಣ್ಣ ಪಾರಿತೋಷಕ ಹಿಡಿದು ಇದನ್ನೇ ಬಯಸುತ್ತಾರೆ ಎಂದು ನಾನು ಭಾವಿಸುತ್ತೇನೆ. □

ISSN-2347-4017- ನವೆಂಬರ್-ಡಿಸೆಂಬರ್ 2023 ಸಂಪುಟ-9 ಸಂಚಿಕೆ-6

ಮಾಹಿತಿ ಯುಗದ ಸಂದರ್ಭದಲ್ಲಿ ನಾವಿದ್ದೇವೆ. ನಮ್ಮ ಭಾಷೆಯ ಎಲ್ಲ ಮಾಹಿತಿಗಳು ಬೆರಳ ತುದಿಯಲ್ಲಿ ಸಿಗುವಂತಾಗಬೇಕೆಂಬುದು ಭಾಷಾಪ್ರೇಮಿಗಳಾದ ನಮ್ಮೆಲ್ಲರ ಕಾಳಜಿಯಾಗಿದೆ. ಬೆರಳತುದಿಯತ್ತ ಪ್ರಾಚೀನದಿಂದ ಆರ್ವಾಚೀನದವರೆಗಿನ ಹಾಗೂ ಜಾಗತೀಕರಣೋತ್ತರ ಸಂದರ್ಭದವರೆಗಿನ ಕನ್ನಡದ ಸಾಹಿತ್ಯ, ಸಂಸ್ಕೃತಿ ಅದರಲ್ಲೂ ಮುಖ್ಯವಾಗಿ ವಾಸ್ತು, ಶಿಲ್ಪ, ಚಿತ್ರ, ನೃತ್ಯ, ಸಂಗೀತ, ಅಭಿನಯ, ಆಭರಣ ಹಾಗೂ ಇತರ ಲಲಿತಕಲೆಗಳು ರಾಜಕೀಯ, ತಂತ್ರಜ್ಞಾನೀಯ ಮುಂತಾದ ಜ್ಞಾನ-ವಿಜ್ಞಾನ ತಂತ್ರಜ್ಞಾನಗಳ ಕುರಿತ ಎಲ್ಲ ಮಾಹಿತಿಗಳು ಕನ್ನಡದಲ್ಲಿ ಅದರಲ್ಲೂ ಬೆರಳ ತುದಿಯಲ್ಲಿ ಸಿಗುವಂತಾಗಬೇಕು. ಈ ನಿಟ್ಟಿನಲ್ಲಿ ಒಂದಿಷ್ಟು ಪ್ರಯತ್ನಗಳು ನಡೆದಿವೆ. ಆ ಪ್ರಯತ್ನಗಳಿಗೆ ಕನ್ನಡಿಗರು ಸ್ಪಂದಿಸಿದ್ದಾರೆ, ಕೆಲವರು ಅದನ್ನು ಬಳಸುವುದರ ಮೂಲಕ ಪ್ರೋತ್ಸಾಹಿಸಿದ್ದಾರೆ. ಆಧುನಿಕ ಸಂದರ್ಭದ ಆನ್‌ಲೈನ್ ವೇದಿಕೆಗಳು ನಮ್ಮ ಸಾಂಸ್ಕೃತಿಕ ಅಭಿವ್ಯಕ್ತಿಗೆ ವೇದಿಕೆಗಳಾಗಿ ಪರಿವರ್ತನೆಯಾಗುತ್ತಿರುವ ಈ ಸಂದರ್ಭದಲ್ಲಿ ಕನ್ನಡಿಗರ ಜವಾಬ್ದಾರಿ ದೊಡ್ಡದಿದೆ. ನಮ್ಮೆಲ್ಲ ಮಾಹಿತಿಯು ಡಿಜಿಟಲೀಕರಣವಾಗಬೇಕಾದ ಅನಿವಾರ್ಯತೆಯಿದೆ. ಈವರೆಗೆ ಕನ್ನಡದ ಅಪೂರ್ಣ ಮಾಹಿತಿಗಳು ಕ್ವಚಿತ್ತಾಗಿ ಅಲ್ಲಲ್ಲಿ ಪ್ರಕಟಗೊಳ್ಳುತ್ತಿವೆ. ಇಂತಹ ಮಾಹಿತಿಗಳನ್ನು ಒದಗಿಸಲು ಒಂದು ಶಾಸನಬದ್ಧ ಮತ್ತು ಅಧಿಕೃತ ಸಂಸ್ಥೆಯ ಅನಿವಾರ್ಯತೆಯಿದೆ. ಮಾಹಿತಿ ನೀಡುವಲ್ಲಿ ಆ ಶಾಸನಬದ್ಧ ಸಂಸ್ಥೆಯ ಪಾತ್ರ ಪ್ರಮುಖವಾದದ್ದಾಗಿರಬೇಕಾಗುತ್ತದೆ. ಅಧಿಕೃತ ಮಾಹಿತಿಗಳಿಲ್ಲದೆ ಆರೆಬರೆ ಹಾಗೂ ಹಸಿಬಿಸಿಯಾದ ಕೆಲವು ಸಂಗತಿಗಳು ಮಾತ್ರ ಸಂದರ್ಭಕ್ಕನುಗುಣವಾಗಿ ಸಿಗುತ್ತಿರುವುದು ಏಕಮುಖೀಯವಾದ ಮತ್ತು ವರ್ತಮಾನದ ಸಣ್ಣ ಅಗತ್ಯಗಳನ್ನು ಈಡೇರಿಸುತ್ತದೆ. ಪಂಪ ರನ್ನಾದಿ ಮಹಾಕವಿಗಳ ಕುರಿತು, ಆಂಡಯ್ಯ, ಭೀಮಕವಿ, ವಿರೂಪಾಕ್ಷ ಪಂಡಿತರಂತಹ ಎರಡನೆಯ ಹಂತದ ಕವಿಗಳ ಕುರಿತು ಮಾಹಿತಿಗಳು ನಮಗೆ ಅಧಿಕೃತವಾಗಿ ಸಿಗುತ್ತಿಲ್ಲ. ಕಣಜ ಮತ್ತು ವಿಕಿಪೀಡಿಯಾಗಳಂತಹ ಸಂಸ್ಥೆಗಳು ಜನರಿಂದಲೇ ಸಂಗ್ರಹಿಸಲ್ಪಟ್ಟ ಮಾಹಿತಿಗಳನ್ನು ಮಾತ್ರ ಒದಗಿಸುತ್ತಿವೆ.

ಪ್ರಕಾಶನ
ಪ್ರತಿಭಾನ
(ಒಂದು ಬೌದ್ಧಿಕ ಹಾಗೂ ಸಾಂಸ್ಕೃತಿಕ ಸಂಸ್ಥೆ)
ಕಾದಪ್ಪನಂಗ (ರಿ), ಬೆಂಗಳೂರು ಇದರ ಅಂಗಸಂಸ್ಥೆ
(Reg. No. BMH-4-00002-2010-11 Dt: 03.04.2010 Under Trust Colum 10/A, 1957)
ನಂ. 133, "ಶಿವಾದ್ವೈತ", ಸೆಕ್ಟರ್ -2, ಶಿವಬಸವನಗರ, ಬೆಳಗಾವಿ-590010, ಮೊ: 9448324100

ಅಭಿಜಾತ ಕನ್ನಡ

ವಿದ್ವತ್ ಮಂಡಳಿಯಿಂದ ಪರಿಶೀಲನಗೊಂಡಿರುವ
ದ್ವೈಮಾಸಿಕ ಸಂಶೋಧನಾ ಪತ್ರಿಕೆ

ABHIJATA KANNADA

Peer Reviewed Referred Journal ISSN : 2347-4017
ರೆಫರೀಡ್ ಜರ್ನಲ್

ನವೆಂಬರ್-ಡಿಸೆಂಬರ್ 2023 ಸಂಪುಟ-9 ಸಂಚಿಕೆ-6
November-December 2023 Vol - 9 Issue - 6



ಪ್ರಧಾನ ಸಂಪಾದಕರು
ಪ್ರೊ. ಎಸ್. ಎಂ. ಗಂಗಾಧರಯ್ಯ

ಅಭಿಜಾತ ಕನ್ನಡ

ದ್ವೈಮಾಸಿಕ ಸಂಶೋಧನಾ ಪತ್ರಿಕೆ
(ವಿದ್ವತ್ ಮಂಡಳಿಯಿಂದ ಪರಿಶೀಲನೆಗೊಂಡಿರುವ)

ABHIJATA KANNADA

Peer Reviewed & Refereed Journal with ISSN : 2347-4017

ನವೆಂಬರ್–ಡಿಸೆಂಬರ್ 2023 ಸಂಪುಟ–9 ಸಂಚಿಕೆ–6
November-December 2023 Vol - 9 Issue - 6

ಪ್ರಧಾನ ಸಂಪಾದಕರು : **ಪ್ರೊ. ಎಸ್. ಎಂ. ಗಂಗಾಧರಯ್ಯ**
ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

ಕಾರ್ಯನಿರ್ವಾಹಕ ಸಂಪಾದಕರು : **ಡಾ. ಕೊಟ್ರಸ್ವಾಮಿ. ಎ.ಎಂ.ಎಂ.**
ಅಭಿಜಾತ ಕನ್ನಡ ಸಂಶೋಧನಾ ಪತ್ರಿಕೆ ಪ್ರಾದೇಶಿಕ ಘಟಕ, ಬೆಂಗಳೂರು

ವ್ಯವಸ್ಥಾಪಕ ಸಂಪಾದಕರು : **ಡಾ. ಕೆ.ಎಂ. ರೋಹಿಣಿ**
ಅಧ್ಯಕ್ಷರು, ಪ್ರತಿಭಾನ ಸಾಂಸ್ಕೃತಿಕ ಸಂಸ್ಥೆ ಭಾರತೀಯ ಗಾಯನ ಸಮಾಜ, ಶಿವಬಸವನಗರ, ಬೆಳಗಾವಿ

ಸಂಪಾದಕ ಮಂಡಳಿ

ಡಾ. ಶೋಭಾ ನಾಯಕ : ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

ಡಾ. ಪಿ. ನಾಗರಾಜ : ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

ಡಾ. ಹಾ. ಮ. ನಾಗಾರ್ಜುನ : ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ

ಡಾ. ಸುರೇಶ ಹನಗಂಡಿ : ಮುಖ್ಯಸ್ಥರು, ಕನ್ನಡ ವಿಭಾಗ,
ಎಸ್.ಆರ್.ಇ.ಎಸ್. ಪ್ರಥಮದರ್ಜೆ ಕಾಲೇಜು,
ಕಲ್ಲೋಳಿ, ಬೆಳಗಾವಿ ಜಿಲ್ಲೆ

ಡಾ. ಸಾವುಕಾರ ಕಾಂಬಳೆ : ಸಹಾಯಕ ಪ್ರಾಧ್ಯಾಪಕರು,
ಸಂಗೊಳ್ಳಿ ರಾಯಣ್ಣ ಪ್ರಥಮದರ್ಜೆ
ಘಟಕ ಮಹಾವಿದ್ಯಾಲಯ, ರಾಣಿ ಚನ್ನಮ್ಮ
ವಿಶ್ವವಿದ್ಯಾಲಯ, ಬೆಳಗಾವಿ

ಡಾ. ಕಲ್ಲಯ್ಯ ಹಿರೇಮಠ : ಸಹಾಯಕ ಪ್ರಾಧ್ಯಾಪಕರು,
ಅನ್ನದಾನೇಶ್ವರ ಕಲಾ, ವಿಜ್ಞಾನ ಮತ್ತು
ವಾಣಿಜ್ಯ ಕಾಲೇಜು, ನರೇಗಲ್, ಗದಗ ಜಿಲ್ಲೆ

ಪ್ರಕಾಶನ : ಪ್ರತಿಭಾನ (ಒಂದು ಬೌದ್ಧಿಕ ಹಾಗೂ
ಸಾಂಸ್ಕೃತಿಕ ಸಂಸ್ಥೆ) ನಾದಪ್ರಸಂಗ(ರಿ)
ಬೆಂಗಳೂರು ಇದರ ಅಂಗಸಂಸ್ಥೆ (Reg. No.
BMH-4-00002-2010-11 Dt. 03-04-2010 Under
Trust Act Colum 10/A, 1957)

ವಿಳಾಸ : ನಂ. 133, 'ಶಿವಾದ್ವೈತ', ಸೆಕ್ಟರ್–2,
ಶಿವಬಸವನಗರ, ಬೆಳಗಾವಿ–590010,
ದೂ: 9448324100

ಮುದ್ರಣ : ಸನ್‌ಸ್ಟಾರ್ ಪ್ರಕಾಶಕರು ಮತ್ತು ಮುದ್ರಕರು
#4/1 ಕುಪ್ಪುಸ್ವಾಮಿ ಬಿಲ್ಡಿಂಗ್, 19ನೇ ಕ್ರಾಸ್,
ಕಬ್ಬನ್‌ಪೇಟೆ, ಬೆಂಗಳೂರು –560002
ಫೋನ್ : 080–22224143/41537471

❖❖❖

ABHIJATA KANNADA
Peer Reviewed & Refereed Journal with ISSN : 2347-4017
November-December 2023 Vol-9 Issue-6

EDITORS

Chief Editor : **Prof. S.M. Gangadharaiah**
Professor, School of Classical Kannada Studies, Rani Channamma University, Belagavi

Executive Editor : **Dr. Kotraswamy. A.M.M.**
Abhijata Kannada Research Journal, Regional Office, Bengaluru

Managing Editor : **Dr. K.M. Rohini**
Chairman, Pratibhana cultural forum Bharatiya Gayana Samaja
Shivabasav Nagar, Belagavi

EDITORIAL BOARD

Dr. ShobaNayak : Assistant Professor,
School of Classical Kannada Studies,
Rani Channamma University,
Belagavi

Dr. P. Nagaraja : Assistant Professor,
School of Classical Kannada Studies,
Rani Channamma University,
Belagavi

Dr. H.M. Nagarjuna : Associate Professor,
Department of Kannada
Sahyadri Science College, Shimoga

Dr. Suresh Hanagandi : H.O.D. Department of Kannada
S.R.E.S. First Grade Degree College
Kallolli, Belagavi District

Dr. Kallayya S. Hiremath : Assistant Professor
Department of Kannada
Annadaneshwara ASC College
Naregal, Gadag District

Dr. Savakar Kamble : Assistant Professor
Sangolli Rayanna First Grade
Constituent College, Rani
Channamma University, Belagavi

PUBLISHER : **PRATHIBHANA**
(An Intellectual & Cultural Form)
A Division of NADAPRASANGA
(Reg.) Under Karnataka Trust Act - 10/A 1957, Reg. No. BMH-4-00002-2010-11 Dt. 03-04-2010.

ADDRESS : No133, 'Shivadwaita', Sector II,
Shivabasavanagara, Belagavi-590010
Ph. 9448324100

PRINTER : Sunstar Publisher & Printers,
#4/1 Kuppaswamy Building,
19th Cross, Cubonpet,
Bengaluru -560002,
Ph No. 080-2222 4143/41537471

❖❖❖

ABHIJATA KANNADA
Peer Reviewed Refereed Journal with ISSN : 2347-4017
November-December 2023 Vol - 9 Issue - 6

PEER REVIEW COMMITTEE

Prof.D.V.PARAMASHIVAMURTHY : Honourable Vice Chancellor
Kannada University
Hampi

Prof. C. NAGABHUSHANA : Professor, Centre for Kannada Studies, Jnanabharathi, Bangalore University, Bangalore

Prof. S.M. GANGADHARAIAH : Professor, School of Classical Kannada Studies, Rani channamma University, Vidyasangama Belagavi,

Prof. M.G. MANJUNATH : Professor, Department of Kannada Studies, P.G. Centre, Hema Gangotri, Hassan

Prof. SOMMANNA : Professor, S.V.P. Department of Kannada Studies, Mangalore University, Mangalagangotri, Konaje-574199

Prof. NIJALINGAPPA MATTIHAL : Professor
Dr R.C. Hiremath Institute of Kannada Studies, Karnataka University, Pavate Nagar, Dharwad

Prof. M. NAGARAJA : Professor, Department of Kannada Studies, Akkamahadevi Women University, Toravi, Vijayapura

Dr. MALLIKARJUNA K : Associate Professor
Dr. Chidananda Murti Kannada Studies & Research Centre
Davanagere University,
Davanagere

❖❖❖

ಅಭಿಜಾತ ಕನ್ನಡ
ದ್ವೈಮಾಸಿಕ ಸಂಶೋಧನಾ ಪತ್ರಿಕೆ
(ವಿದ್ವತ್ ಮಂಡಳಿಯಿಂದ ಪರಿಶೀಲನೆಗೊಂಡಿರುವ)
ನವೆಂಬರ್–ಡಿಸೆಂಬರ್ 2023 ಸಂಪುಟ–9 ಸಂಚಿಕೆ–6

ಪರಿಶೀಲಕ ಮಂಡಳಿ

ಪ್ರೊ. ಡಿ.ವಿ. ಪರಮಶಿವಮೂರ್ತಿ : ಮಾನ್ಯ ಕುಲಪತಿಗಳು
ಕನ್ನಡ ವಿಶ್ವವಿದ್ಯಾಲಯ
ಹಂಪಿ

ಪ್ರೊ. ಸಿ. ನಾಗಭೂಷಣ : ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು

ಪ್ರೊ. ಎಸ್.ಎಂ. ಗಂಗಾಧರಯ್ಯ : ಪ್ರಾಧ್ಯಾಪಕರು
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ,
ರಾಣಿಚನ್ನಮ್ಮ ವಿಶ್ವವಿದ್ಯಾಲಯ,
ಜ್ಞಾನಸಂಗಮ, ಬೆಳಗಾವಿ

ಪ್ರೊ. ಎಂ.ಜಿ. ಮಂಜುನಾಥ : ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ
ಹಾಸನ

ಪ್ರೊ. ಸೋಮಣ್ಣ : ಪ್ರಾಧ್ಯಾಪಕರು
ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾಲಯ,
ಮಂಗಳಗಂಗೋತ್ರಿ, ಕೊಣಾಜೆ
ಮಂಗಳೂರು –574199

ಪ್ರೊ. ನಿಜಲಿಂಗಪ್ಪ ಮಟ್ಟಿಹಾಳ : ಪ್ರಾಧ್ಯಾಪಕರು
ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ
ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರೊ. ಎಂ. ನಾಗರಾಜ : ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ,
ತೋರವಿ, ವಿಜಯಪುರ

ಡಾ. ಮಲ್ಲಿಕಾರ್ಜುನ. ಕೆ : ಸಹ ಪ್ರಾಧ್ಯಾಪಕರು
ಡಾ. ಎಂ. ಚಿದಾನಂದಮೂರ್ತಿ ಕನ್ನಡ ಅಧ್ಯಯನ
ಮತ್ತು ಸಂಶೋಧನಾ ಕೇಂದ್ರ
ದಾವಣಗೆರೆ ವಿಶ್ವವಿದ್ಯಾಲಯ
ದಾವಣಗೆರೆ ಜಿಲ್ಲೆ

❖❖❖

ಸಂಪಾದಕೀಯ

ಮಾಹಿತಿ ಯುಗದ ಸಂದರ್ಭದಲ್ಲಿ ನಾವಿದ್ದೇವೆ. ನಮ್ಮ ಭಾಷೆಯ ಎಲ್ಲ ಮಾಹಿತಿಗಳು ಬೆರಳ ತುದಿಯಲ್ಲಿ ಸಿಗುವಂತಾಗಬೇಕೆಂಬುದು ಭಾಷಾಪ್ರೇಮಿಗಳಾದ ನಮ್ಮೆಲ್ಲರ ಕಾಳಜಿಯಾಗಿದೆ. ಬೆರಳತುದಿಯತ್ತ ಪ್ರಾಚೀನದಿಂದ ಆರ್ವಾಚೀನದವರೆಗಿನ ಹಾಗೂ ಜಾಗತೀಕರಣೋತ್ತರ ಸಂದರ್ಭದವರೆಗಿನ ಕನ್ನಡದ ಸಾಹಿತ್ಯ, ಸಂಸ್ಕೃತಿ ಅದರಲ್ಲೂ ಮುಖ್ಯವಾಗಿ ವಾಸ್ತು, ಶಿಲ್ಪ, ಚಿತ್ರ, ನೃತ್ಯ, ಸಂಗೀತ, ಅಭಿನಯ, ಆಭರಣ ಹಾಗೂ ಇತರ ಲಲಿತಕಲೆಗಳು ರಾಜಕೀಯ, ತಂತ್ರಜ್ಞಾನೀಯ ಮುಂತಾದ ಜ್ಞಾನ–ವಿಜ್ಞಾನ ತಂತ್ರಜ್ಞಾನಗಳ ಕುರಿತ ಎಲ್ಲ ಮಾಹಿತಿಗಳು ಕನ್ನಡದಲ್ಲಿ ಅದರಲ್ಲೂ ಬೆರಳ ತುದಿಯಲ್ಲಿ ಸಿಗುವಂತಾಗಬೇಕು. ಈ ನಿಟ್ಟಿನಲ್ಲಿ ಒಂದಿಷ್ಟು ಪ್ರಯತ್ನಗಳು ನಡೆದಿವೆ. ಆ ಪ್ರಯತ್ನಗಳಿಗೆ ಕನ್ನಡಿಗರು ಸ್ಪಂದಿಸಿದ್ದಾರೆ, ಕೆಲವರು ಅದನ್ನು ಬಳಸುವುದರ ಮೂಲಕ ಪ್ರೋತ್ಸಾಹಿಸಿದ್ದಾರೆ. ಆಧುನಿಕ ಸಂದರ್ಭದ ಆನ್‌ಲೈನ್ ವೇದಿಕೆಗಳು ನಮ್ಮ ಸಾಂಸ್ಕೃತಿಕ ಅಭಿವ್ಯಕ್ತಿಗೆ ವೇದಿಕೆಗಳಾಗಿ ಪರಿವರ್ತನೆಯಾಗುತ್ತಿರುವ ಈ ಸಂದರ್ಭದಲ್ಲಿ ಕನ್ನಡಿಗರ ಜವಾಬ್ದಾರಿ ದೊಡ್ಡದಿದೆ. ನಮ್ಮೆಲ್ಲ ಮಾಹಿತಿಯು ಡಿಜಿಟಲೀಕರಣವಾಗಬೇಕಾದ ಅನಿವಾರ್ಯತೆಯಿದೆ. ಈವರೆಗೆ ಕನ್ನಡದ ಅಪೂರ್ಣ ಮಾಹಿತಿಗಳು ಕ್ವಚಿತ್ತಾಗಿ ಅಲ್ಲಲ್ಲಿ ಪ್ರಕಟಗೊಳ್ಳುತ್ತಿವೆ. ಇಂತಹ ಮಾಹಿತಿಗಳನ್ನು ಒದಗಿಸಲು ಒಂದು ಶಾಸನಬದ್ಧ ಮತ್ತು ಅಧಿಕೃತ ಸಂಸ್ಥೆಯ ಅನಿವಾರ್ಯತೆಯಿದೆ. ಮಾಹಿತಿ ನೀಡುವಲ್ಲಿ ಆ ಶಾಸನಬದ್ಧ ಸಂಸ್ಥೆಯ ಪಾತ್ರ ಪ್ರಮುಖ ವಾದದ್ದಾಗಿರಬೇಕಾಗುತ್ತದೆ. ಅಧಿಕೃತ ಮಾಹಿತಿಗಳಿಲ್ಲದೆ ಅರೆಬರೆ ಹಾಗೂ ಹಸಿಬಿಸಿಯಾದ ಕೆಲವು ಸಂಗತಿಗಳು ಮಾತ್ರ ಸಂದರ್ಭಕ್ಕನುಗುಣವಾಗಿ ಸಿಗುತ್ತಿರುವುದು ಏಕಮುಖೀಯವಾದ ಮತ್ತು ವರ್ತಮಾನದ ಸಣ್ಣ ಅಗತ್ಯಗಳನ್ನು ಈಡೇರಿಸುತ್ತವೆ. ಪಂಪ ರನ್ನಾದಿ ಮಹಾಕವಿಗಳ ಕುರಿತು, ಆಂಡಯ್ಯ, ಭೀಮಕವಿ, ವಿರೂಪಾಕ್ಷ ಪಂಡಿತರಂತಹ ಎರಡನೆಯ ಹಂತದ ಕವಿಗಳ ಕುರಿತು ಮಾಹಿತಿಗಳು ನಮಗೆ ಅಧಿಕೃತವಾಗಿ ಸಿಗುತ್ತಿಲ್ಲ. ಕಣಜ ಮತ್ತು ವಿಕಿಪೀಡಿಯಾಗಳಂತಹ ಸಂಸ್ಥೆಗಳು ಜನರಿಂದಲೇ ಸಂಗ್ರಹಿಸಲ್ಪಟ್ಟ ಮಾಹಿತಿಗಳನ್ನು ಮಾತ್ರ ಒದಗಿಸುತ್ತಿವೆ. ಮಾಹಿತಿಕ್ಷೇತ್ರದಲ್ಲಿ ನಡೆಯುತ್ತಿರುವ ಉತ್ಕ್ರಾಂತಿಯಲ್ಲಿ ಇದು ಮೊದಲನೆಯ ತಲೆಮಾರು. ಈ ಸಂದರ್ಭದಲ್ಲಿಯೇ ನಾವು ಮಾಹಿತಿಯನ್ನು ಶಾಸನಬದ್ಧಗೊಳಿಸಿ ನೀಡಿದಲ್ಲಿ ಅಧಿಕೃತತೆ ಹೆಚ್ಚಿರುತ್ತದೆ. ಇಲ್ಲದಿದ್ದಲ್ಲಿ ಮಾಹಿತಿಯು ತಪ್ಪಾಗಿ ಹರಿಯುವ ಅಪಾಯವಿದೆ. ಹಲವು ಸನ್ನಿವೇಶಗಳಲ್ಲಿ ಮಾಹಿತಿಯನ್ನು ತಿರುಚಿ ಪ್ರಸಾರ ಮಾಡುವ, ನೀಡುವ, ಅಪಾಯಗಳನ್ನು ಕಾಣಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡದ ಪ್ರಾಚೀನ, ಮಧ್ಯಯುಗೀನ, ಆರ್ವಾಚೀನ ಹಾಗೂ ಸಮಕಾಲೀನ ಸಂಗತಿಗಳ ಮಾಹಿತಿಗಳನ್ನು ನೀಡಲು ಒಂದು

ವಿಧಿಬದ್ಧ ಇಲಾಖೆಯ ಅಗತ್ಯವಿದೆ. ಇಲ್ಲದಿದ್ದಲ್ಲಿ ನಮ್ಮವರ ಬದುಕಿಗೆ ಚರಿತ್ರೆಗೆ ಅಪಚಾರವೆಸಗಿದಂತಾಗುತ್ತದೆ.

ಪ್ರಸ್ತುತ ಮಾಹಿತಿಯನ್ನು ಪಡೆದುಕೊಳ್ಳಲು ಕನ್ನಡಿಗನು ಮಾಡುತ್ತಿರುವ (ಡೇಟಾ ಮೈನಿಂಗ್) ಪ್ರಯತ್ನಗಳು ಹೆಚ್ಚಿನ ಸಂದರ್ಭದಲ್ಲಿ ನಿರರ್ಥಕವಾಗುತ್ತಿವೆ. ಏಕೆಂದರೆ ಯಾವ ಸರಿಯಾದ ಮಾಹಿತಿಯು, ಸೂಕ್ತ ಸಂಸ್ಥೆಯಿಂದ ಅಪ್‌ಲೋಡ್ ಆಗುತ್ತಿಲ್ಲ. ನಿಖರ ಮಾಹಿತಿಗಳಿಲ್ಲದೆ ಆಸಕ್ತರು ಭೌತಿಕ ಪುಸ್ತಕಗಳನ್ನು ಹುಡುಕುವ ಪಡಿಪಾಟಲಿನಿಂದ ಮುಕ್ತರಾಗಿಲ್ಲ. ಕರ್ನಾಟಕದ ಪುರಾತತ್ವ, ಪತ್ರಾಗಾರ, ರಾಜ್ಯಪತ್ರ, ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ವಸ್ತುಸಂಗ್ರಹಾಲಯಗಾರಗಳು, ಅಧ್ಯಯನ ಕೇಂದ್ರಗಳು ಹಾಗೂ ಸಂಸ್ಥೆಗಳು, ವ್ಯಕ್ತಿಗತ ಸಂಗ್ರಹ ಮತ್ತು ಸಂಶೋಧನಾ ಆಕರಗಳು –ಈ ಎಲ್ಲವುಗಳನ್ನು ಕ್ರೋಢೀಕರಿಸಿ ಒಂದು ವೇದಿಕೆಯನ್ನು ರೂಪಿಸಿಕೊಂಡು ಸರಿಯಾದ ಮಾಹಿತಿಯನ್ನು ಸೂಕ್ತ ಸಂಸ್ಥೆಗಳ ಮೂಲಕ ನಿಖರವಾದ, ಪೂರ್ವಾಗ್ರಹವಿಲ್ಲದ, ಪೂರ್ಣಪ್ರಮಾಣದ, ಅಧಿಕೃತ ಮಾಹಿತಿಯನ್ನು ಕನ್ನಡಿಗನ ಬೆರಳತುದಿಗೆ ಇಡಬಹುದಾಗಿದೆ. ಈ ನಿಟ್ಟಿನಲ್ಲಿ ಸರ್ಕಾರಗಳು, ಸಂಘ ಸಂಸ್ಥೆಗಳು, ಆಸಕ್ತ ವ್ಯಕ್ತಿಗಳು ಸೂಕ್ತವೇದಿಕೆಯನ್ನು ಕಲ್ಪಿಸಿಕೊಂಡು ಕಾರ್ಯಪ್ರವೃತ್ತವಾಗುವುದು ಔಚಿತ್ಯಪೂರ್ಣಸಂಗತಿ ಎನ್ನಿಸುತ್ತದೆ. ಇಲ್ಲದಿದ್ದಲ್ಲಿ ಮಾಹಿತಿಗಳು ವಿಕೃತಗೊಂಡು, ವೈಪರೀತ್ಯ ಬಳಕೆಯ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುವ ಅಪಾಯವು ಕನ್ನಡಿಗರ ಮುಂದಿದೆ. ಇದನ್ನು ಯುವಸಮುದಾಯವು ಗಮನಿಸಿ ಮಾಹಿತಿ ಬಳಕೆಯಲ್ಲಿ ಪರಿಶೀಲನಾ ಮಾದರಿಯನ್ನು, ಪುನರಾವಲೋಕನ ಮಾದರಿಯನ್ನು, ಪ್ರತ್ಯವಲೋಕನ ಮಾದರಿಯನ್ನು ಅನುಸರಿಸುವುದು ಔಚಿತ್ಯಪೂರ್ಣ ಸಂಗತಿ.

– ಪ್ರೊ. ಎಸ್.ಎಂ. ಗಂಗಾಧರಯ್ಯ
ಪ್ರಧಾನ ಸಂಪಾದಕರು

ಪರಿವಿಡಿ

೧. ಪಂಪನು ಚಿತ್ರಿಸಿರುವ ವಿದ್ಯಾಭ್ಯಾಸ ಕ್ರಮ / ೧೫
❖ **ಡಾ. ಮಾಲಿನಿ ಎನ್. ಅಭ್ಯಂಕರ್**

೨. ಖಗೇಂದ್ರಮಣಿ ದರ್ಪಣ : ಕೆಲವು ಒಳನೋಟಗಳು / ೩೦
❖ **ಪ್ರೊ. ಎಸ್.ಎಂ. ಗಂಗಾಧರಯ್ಯ**

೩. ಸೋಮಲಾಪುರದಲ್ಲಿ ಹಂಡೆ ಹಣುಮಿ(ಮ)ನಾಯಕನ ಶಾಪಾಶಯ ಶಿಲ್ಪಗಳ ಶಾಸನ ಶೋಧ / ೩೭
❖ **ಪ್ರೊ. ಎಸ್.ಸಿ. ಪಾಟೀಲ**

೪. ಕುರಗೋಡು ಪಾಳೆಯಗಾರರ ಅಪರೂಪದ ಅಪ್ರಕಟಿತ ಶಿಲಾ ಶಾಸನದ ವೈಶಿಷ್ಟ್ಯತೆಗಳು / ೪೦
❖ **ಪ್ರೊ. ಎಚ್. ತಿಪ್ಪೇಸ್ವಾಮಿ, ಡಾ. ಗೋವಿಂದ**

೫. ವಾದಿ, ಸಂವಾದಿ, ಅನುವಾದಿ ಮತ್ತು ವಿವಾದಿ : ಸ್ವರಗಳ ಪರಿಕಲ್ಪನಾತ್ಮಕ ಬೆಳವಣಿಗೆ / ೪೬
❖ **ವಿದುಷಿ ಡಾ. ಕೆ.ಎಂ. ರೋಹಿಣಿ**

೬. ಜನಪದ ಶರಣ ಕಾವ್ಯಗಳಲ್ಲಿ ಕಲಾತ್ಮಕ ವಿಚಾರಗಳು / ೫೦
❖ **ಡಾ. ಮಲ್ಲಿಕಾರ್ಜುನ ಕೆ.**

೭. ಬಣ್ಣದ ಬದುಕೆಂಬ ಸಣ್ಣದೆವ್ವ ಬಡಿಯಿತೆ : ಬಡಿವಾರದ ಬದುಕಿಗೆ ಬಿಡುಗಡೆ ಕೇಳಿದ ಶಿವಕವಿ ಶಿವಣ್ಣ ಹುಲ್ಲೂರು / ೫೯
❖ **ಡಾ. ಜಾಜಿ ದೇವೇಂದ್ರಪ್ಪ**

೮. ಭಾಷೆಯ ಸ್ವರೂಪ / ೬೪
❖ **ಡಾ. ಎಸ್. ಕರಿಬಸಪ್ಪ**

೯. ಬರಗೂರು ರಾಮಚಂದ್ರಪ್ಪನವರ ಕಾವ್ಯ : ಪ್ರತಿಭಟನೆ ನೆಲೆಗಳು / ೬೯
❖ **ಆನಂದ ಕಟ್ಟಿಮನಿ, ಡಾ. ನಿಂಗಪ್ಪ ಎನ್. ಹಳ್ಳಿ**

೧೦. ತತ್ವಪದ ಸಾಹಿತ್ಯದಲ್ಲಿ ಮಹಿಳಾ ಅಸ್ಮಿತೆಯ ನೆಲೆಗಳು / ೭೫
❖ **ಧನಂಜಯಕುಮಾರ, ಡಾ. ನಿಂಗಪ್ಪ ಎನ್. ಹಳ್ಳಿ**

೪. ಕುರಗೋಡು ಪಾಳೆಯಗಾರರ ಅಪರೂಪದ ಅಪ್ರಕಟಿತ ಶಿಲಾ ಶಾಸನದ ವೈಶಿಷ್ಟ್ಯತೆಗಳು

❖

ಪ್ರೊ. ಎಚ್. ತಿಪ್ಪೇಸ್ವಾಮಿ
ಡಾ. ಗೋವಿಂದ

ಬಳ್ಳಾರಿ ಜಿಲ್ಲಾ ಕೇಂದ್ರದಿಂದ ಸುಮಾರು ೧೮ ಮೈಲಿ ದೂರದಲ್ಲಿರುವ ಕುರಗೋಡು ಪಟ್ಟಣವು ಉತ್ತರ ಅಕ್ಷಾಂಶ ೧೫°.೨೦.೫೫೦, ಉತ್ತರ ರೇಖಾಂಶ ೭೬°.೫೦.೧೭೦ ದಲ್ಲಿದ್ದು, ಪ್ರಸಕ್ತ ತಾಲೂಕು ಕೇಂದ್ರವಾಗಿದೆ. ಇದು ಪೌರಾಣಿಕವಾಗಿ ಸಾಕಷ್ಟು ಪ್ರಸಿದ್ಧಿ ಪಡೆದಿದ್ದು, ಇದನ್ನು 'ಕುಂತಳದೇಶ' ಎಂದು ಪ್ರಾಚೀನ ಕೃತಿಗಳಲ್ಲಿ ಉಲ್ಲೇಖಿಸಲಾಗಿದೆ. ಈ ನಗರ ಸುತ್ತಲೂ ಬೆಟ್ಟಗಳಿಂದಾವೃತವಾಗಿದ್ದು, ಸಮುದ್ರ ಮಟ್ಟದಿಂದ ಸುಮಾರು ಕನಿಷ್ಠ ೪೬೦ ಮೀಟರ್, ಗರಿಷ್ಠ ೫೯೯ ಮೀಟರ್ ಎತ್ತರವನ್ನು ಹೊಂದಿದೆ. ಇಡೀ ಬೆಟ್ಟಗಳು ಗ್ರಾನೈಟ್, ನೈಸ್ ಶಿಲೆಗಳಿಂದ ಕೂಡಿವೆ. ಈ ಬೆಟ್ಟಗಳ ಬಳಿ ಮಾನವ ವಾಸಕ್ಕೆ ಯೋಗ್ಯವಾದ ಎಲ್ಲಾ ಅನುಕೂಲಗಳು ಇದ್ದ ಕಾರಣಕ್ಕೆ ಆದಿಮ ಕಾಲಘಟ್ಟದಲ್ಲಿಯೇ ಇಲ್ಲಿ ಮಾನವ ವಾಸಿಸಿದ ಕುರುಹುಗಳು ದೊರೆತಿವೆ. ವಿದ್ವಾಂಸರ ಪರಿಶ್ರಮದಿಂದಾಗಿ ಇಲ್ಲಿ ಶಿಲಾಯುಗ ಮತ್ತು ಲೋಹಯುಗ ಹಾಗೂ ಆದಿ ಚಾರಿತ್ರಿಕ ಯುಗದ ಅನೇಕ ಸಾಕ್ಷಿಗಳು ದೊರೆತಿವೆ. ಚಾರಿತ್ರಿಕ ಕಾಲಘಟ್ಟದಲ್ಲಿಯೂ ಈ ಭಾಗ ಕೆಲ ರಾಜ ಮನೆತನಗಳ ರಾಜಧಾನಿಯಾಗಿ, ಅವರ ಆಡಳಿತ ಕೇಂದ್ರವಾಗಿ ಸಕ್ರಿಯ ಪಾತ್ರವಹಿಸಿರುವುದನ್ನು ಗುರುತಿಸಬಹುದಾಗಿದೆ. ಇಲ್ಲಿನ ಪಂಚಮುಖಿ ವೀರಭದ್ರ ದೇವಾಲಯ, ಬಾಳೇಕೊಳ್ಳದ ಯಲ್ಲಮ್ಮ ಗುಡಿ, ಮುಷ್ಠಿಗಟ್ಟೆ ಬಳಿ, ರಾಮತೀರ್ಥ, ಲಕ್ಷ್ಮೀಪುರ, ವಜ್ರಯ್ಯನ ಗುಡ್ಡದ ಬಳಿಯಲ್ಲಿ ಅನೇಕ ವರ್ಣ ಚಿತ್ರಗಳು ಮತ್ತು ಶಿಲಾಯುಗ ಕಾಲದ ಮಾನವನಿಗೆ ಸಂಬಂಧಿಸಿದ ಹಲವು ಕುರುಹುಗಳು ದೊರೆತಿವೆ. ಅದೇ ರೀತಿ ಮೈಸೂರು ವಿಶ್ವವಿದ್ಯಾಲಯ ಮತ್ತು

ಪ್ರೊ. ಎಚ್.ತಿಪ್ಪೇಸ್ವಾಮಿ : ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ವಿಭಾಗ ವಿಜಯ ನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ–೫೮೫೩೧೦೫

ಡಾ. ಗೋವಿಂದ : ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಸಂಗೀತ ಮತ್ತು ನೃತ್ಯ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ

ಕೇಂದ್ರ ಪುರಾತತ್ವ ಇಲಾಖೆಯವರು ಸಂಯುಕ್ತವಾಗಿ ಇತ್ತೀಚೆಗೆ ನಡೆಸಿದ ಉತ್ಖನನದಲ್ಲಿ ಈ ಕಾಲಕ್ಕೇ ಸೇರಿದ ಅನೇಕ ಪುರಾವೆಗಳು ದೊರೆತಿವೆ.

ಕುರುಗೋಡು ಬೆಟ್ಟಗುಡ್ಡಗಳ ಮತ್ತು ದೇವಾಲಯಗಳ ತವರೂರು ಎಂದು ಪ್ರಸಿದ್ಧವಾಗಿದ್ದು, ಐತಿಹಾಸಿಕವಾಗಿ ಸಾಕಷ್ಟು ಪ್ರಸಿದ್ಧಿ ಪಡೆದ ಸ್ಥಳವಾಗಿದೆ. ಇದನ್ನು ರಾಷ್ಟ್ರಕೂಟ, ಚಾಲುಕ್ಯರು, ದೇವಗಿರಿಯ ಯಾದವರು, ಸಿಂಧರು, ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತು. ಆನಂತರ ಕ್ರಿ.ಶ. ೧೩ನೇ ಶತಮಾನದ ಕೊನೆಯಲ್ಲಿ ಈ ಪ್ರದೇಶವು ಸ್ವತಂತ್ರ ರಾಜ್ಯವಾದ ಕಂಪಲಿಗೆ ಆನಂತರ ವಿಜಯನಗರ ಅರಸರಿಗೆ, ಮರಾಠ, ಬಿಜಾಪುರದ ಆದಿಲ್ ಶಾಹಿಗಳಿಗೆ, ಆನಂತರ ಹೈದರ್ ಟಿಪ್ಪು, ಕುರುಗೋಡು ಪಾಳೇಯಗಾರರ ಅಧೀನಕ್ಕೆ ಒಳಪಟ್ಟಿತು. ಪಾಳೆಗಾರ ವಂಶದಲ್ಲಿ ಕ್ರಿ.ಶ ೧೯೬೨–೧೭೦೭ ರ ಕಾಲದಲ್ಲಿ ಆಳಿದ ಚಿಕ್ಕಪ್ಪ ನಾಯಕನ ಮಗ ದೇವಪ್ಪ ನಾಯಕನು ಈ ಪಟ್ಟಣದ ಕೋಟೆಯನ್ನು ಮತ್ತು ಈಗಿನ ಪಟ್ಟಣವನ್ನು ಕ್ರಿ.ಶ ೧೭೦೧–೧೭೦೨ ರ ಕಾಲದಲ್ಲಿ ಕಟ್ಟಿಸಿದನೆಂಬ ಪ್ರತೀತಿ ಇದೆ. ಕುರಗೋಡನ್ನು ಸಿಂಧ್ ಮನೆತನದ ಅರಸರು ಬಲ್ಲಕುಂದೆ–೩೦೦ ನಾಡಿನ ತಮ್ಮ ರಾಜಧಾನಿಯನ್ನಾಗಿ (ಕ್ರಿ.ಶ ೯೫೦ ರಿಂದ ೧೨೦೦ ರವರೆಗೆ) ಮಾಡಿಕೊಂಡು ಇದರ ಸುತ್ತಲಿರುವ ೩೦೦ ನಾಡುಗಳನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡಿದ್ದರು. ಇದರೊಂದಿಗೆ ಈ ಪ್ರದೇಶವು ಹಿಂದೆ ಪ್ರಸಿದ್ಧ ಪಟ್ಟಣವಾಗಿತ್ತು. ಅಲ್ಲದೇ ಕೆಲ ಅರಸರ ಕಾಲದಲ್ಲಿ ಆಡಳಿತದ ಕೇಂದ್ರವಾಗಿ (ಸೀಮೆ, ಸ್ಥಳ, ನಾಡು, ಚಾವಡಿ ಇತ್ಯಾದಿ) ಪ್ರಸಿದ್ಧಿಯಾಗಿತ್ತು.

ಈ ಪಟ್ಟಣ ಪ್ರದೇಶವು ಮಧ್ಯಕಾಲಿನ ಶಿಲ್ಪಕಲೆಗೆ ಪ್ರಸಿದ್ಧವಾಗಿದೆ. ಇಲ್ಲಿ ಲಭ್ಯವಿರುವ ದೇವಾಲಯಗಳು, ಕೋಟೆ ಕೊತ್ತಲಗಳು, ಶಿಲಾ ಶಾಸನಗಳು ಮತ್ತು ವೀರಗಲ್ಲು ಮೊದಲಾದವುಗಳ ಸಹಾಯದಿಂದ ಇಲ್ಲಿನ ಐತಿಹಾಸಿಕ ಘಟನೆಗಳನ್ನು ಕಾಲಾನುಕ್ರಮವಾಗಿ ಅರಿಯಲು ನಮಗೆ ಸಾಧ್ಯವಾಗಿದೆ. ಇಲ್ಲಿನ ಶ್ರೀ ಸಂಗಮೇಶ್ವರ, ಶ್ರೀ ದೊಡ್ಡಬಸವೇಶ್ವರ, ಶ್ರೀ ವೀರಭದ್ರ, ಶ್ರೀ ವಜ್ರಬಂಡೆ ಬಸಪ್ಪ, ಬಾಳೇಕೊಳ್ಳದ ಯಲ್ಲಮ್ಮ ದೇವಾಲಯಗಳು ಅತ್ಯಂತ ಮಹತ್ವವನ್ನು ಪಡೆದುಕೊಂಡಿವೆ.

ಕುರುಗೋಡು ಪದದ ನಿಷ್ಪತ್ತಿ

ಈ ಕುರಿತಂತೆ ವಿದ್ವಾಂಸರಲ್ಲಿ ವಿಭಿನ್ನ ಅಭಿಪ್ರಾಯಗಳಿವೆ. 'ಕುರು' ಎಂದರೆ ಸಣ್ಣ ಕೋಡು, 'ಕೊಂಬು' ಶಿಖರ ಎನ್ನುವ ಅರ್ಥಗಳಿವೆ. ಈ ಪಟ್ಟಣದ ಸುತ್ತಲೂ ಹಬ್ಬಿರುವ ಸಣ್ಣ ಸಣ್ಣ ಕಲ್ಲಿನ ಬೆಟ್ಟಗಳು ಈ ಹೆಸರಿಗೆ ಅನ್ವಯಿಸುತ್ತವೆ ಆಗಾಗಿ ಈ ಊರಿಗೆ ಕುರುಗೋಡು ಎಂದು ಹೆಸರು ಬಂದಿರಬೇಕೆಂದು ಸ್ಥಳೀಯ ಹವ್ಯಾಸಿ ಇತಿಹಾಸಗಾರರಾದ ಶ್ರೀ ಅಂಬರೇಶ್‌ರವರು ಅಭಿಪ್ರಾಯಪಡುತ್ತಾರೆ. ಅದೇ ರೀತಿ ಈ ಪಟ್ಟಣದ ಪ್ರಖ್ಯಾತ ಮತ್ತು ಅಧಿ ದೈವವಾದ ಶ್ರೀ ದೊಡ್ಡಬಸವೇಶ್ವರ ದೇವಾಲಯದ ಸುಮಾರು ೧೨ ಅಡಿ ಎತ್ತರವಿರುವ ಬೃಹಾದಾಕಾರದ ಶಿಲಾ ನಂದಿ ವಿಗ್ರಹವು ಅದರ ಆಕಾರಕ್ಕೆ ಬಹು ಚಿಕ್ಕವೇನೋ ಎನ್ನುವಂತಿವೆ. ಅದರ ಕೋಡುಗಳನ್ನು ಆಧರಿಸಿ ಮೊದಲಿಗೆ ಈ ಊರನ್ನು ಕಿರುಕೋಡು ಎಂದು ಕರೆದು ಅದನ್ನೇ ಕಾಲಕ್ರಮೇಣ ಕುರುಗೋಡು ಎಂಬ ಹೆಸರಿನಿಂದ ಕರೆಯಲ್ಪಟ್ಟಿರುವ

ಸಾಧ್ಯತೆಯನ್ನು ಸ್ಥಳೀಯ ಇತಿಹಾಸಕಾರರೂ ಮತ್ತು ನಿವೃತ್ತ ಪ್ರಾಚಾರ್ಯರಾದ ಶ್ರೀ ಎನ್.ವೈ.ಹನುಮಂತರೆಡ್ಡಿಯವರು ಒತ್ತಿ ಹೇಳುತ್ತಾರೆ. ಕುರುಗೋಡು ಎಂಬ ಹೆಸರು ಇಂದು ಆ ಪ್ರದೇಶದ ಸುತ್ತಮುತ್ತ ಚಾಲ್ತಿಲ್ಲಿದೆ.

ಕುರುಗೋಡು ಪ್ರದೇಶದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಪ್ರತಿನಿಧಿಸುವ ಮತ್ತು ಕುರಗೋಡು ಪಾಳೆಯಗಾರರಿಗೆ ಸಂಬಂಧಿಸಿದ ಅಪರೂಪದ ಅಪ್ರಕಟಿತ ಬೃಹತ್ ಬಂಡೆಗಲ್ಲು ಶಾಸನವೊಂದನ್ನು ಇತ್ತೀಚಿಗೆ ಕುರುಗೋಡಿನ ನಾಯಕನ ಕೆರೆಯ ಪೂರ್ವ ದಿಕ್ಕಿನ ಬೆಟ್ಟದ ಕೆಳಭಾಗದ ಸರ್ವೆ ನಂ.೬೬೬ ರಲ್ಲಿ ಇತ್ತೀಚಿಗೆ ವಿಜಯನಗರ ತಿರುಗಾಟ ಸಂಶೋಧನಾ ತಂಡವು ಹೊಸದಾಗಿ ಪತ್ತೆಹಚ್ಚಿದೆ. ಈ ಬೃಹತ್ ಬಂಡೆಗಲ್ಲು ಶಾಸನ ಪತ್ತೆ ಕಾರ್ಯವನ್ನು ಸ್ಥಳೀಯ ಇತಿಹಾಸಕಾರರು ಮತ್ತು ನಿವೃತ್ತ ಪ್ರಾಚಾರ್ಯರಾದ ಶ್ರೀ ಎನ್.ವೈ. ಹನುಮಂತರೆಡ್ಡಿಯವರ ನೇತೃತ್ವದಲ್ಲಿ ಈ ಸಂಶೋಧನಾ ತಂಡದ ಸದಸ್ಯರಾದ ಪ್ರೊ.ತಿಪ್ಪೇಸ್ವಾಮಿ. ಪ್ರೋ.ಗೋವಿಂದ, ಡಾ.ಕೃಷ್ಣೇಗೌಡ, ಡಾ.ಗೋವಿಂದ ಅವರುಗಳು ಈ ಶಾಸನ ಅನ್ವೇಷಣೆ ಕಾರ್ಯದಲ್ಲಿ ಭಾಗವಹಿಸಿದ್ದರು. ಅವರುಗಳು ಈ ಶಾಸನದ ಪಡಿಯಚ್ಚು ತೆಗದು ಅದನ್ನು ಓದಿ ಅದರ ಮಹತ್ವವನ್ನು ವಿಶ್ಲೇಷಿಸಿದ್ದಾರೆ. ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪುರಾತತ್ವ ವಿಭಾಗದ ಸ್ಥಳೀಯ ಪಿಎಚ್.ಡಿ. ಸಂಶೋಧನಾರ್ಥಿಯಾದ ವೀರಾಂಜನೇಯ.ಕೆ ಅವರು ಮತ್ತು ಸ್ನಾತಕೋತ್ತರ ವಿದ್ಯಾರ್ಥಿ ರವಿಕುಮಾರ ಹಾಗೂ ಸ್ಥಳೀಯರಾದ ಅಂಬರೀಶ್, ಕರಿಬಸವ, ಪರ್ತಕರ್ತರಾದ ವೀರಭದ್ರಗೌಡ ಇವರ ಸಹಕಾರದಿಂದ ಈ ಶಾಸನ ಪತ್ತೆ ಹಚ್ಚಲಾಯಿತು. ಈ ಅಪ್ರಕಟಿತ ಶಿಲಾ ಶಾಸನವು ಸ್ಥಳೀಯ ಕುರುಗೋಡು ಪಾಳೆಯಗಾರರು ಅಲ್ಲಿನ ತಮ್ಮ ಕುಲ ಗುರುಗಳಾದ ಭಟ್ಟರಿಗೆ ನೀಡಲಾದ ಭೂದಾನದ ವಿಶೇಷ ವಿವರವನ್ನು ಒಳಗೊಂಡಿದೆ. ಈ ವಿವರಕ್ಕೆ ಮಾತ್ರ ಈ ಲೇಖನ ಸೀಮಿತವಾಗಿದ್ದು, ಅದರ ವೈಶಿಷ್ಟ್ಯತೆಗಳನ್ನು ಇಲ್ಲಿ ವಿವರಿಸಲಾಗಿದೆ.

ಶಾಸನ ಪಾಠ

೧. ಶ್ರೀ ಗಣಾಧೀಪತೇಯ ನಮಃ/ಶುಭಮಸ್ತು ನಮಸ್ತುಂಗ ಶಿರಚ್ಚುಂಬಿ ಚಂದ್ರ ಚಾಮರ

೨. ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯು ಶಂಭುವೇ ಸ್ವಸ್ತಿಶ್ರೀಜಯಾಭ್ಯುದಯ

೩. ಶಾಲಿವಾಹನ ಶಕ ವರ್ಷಂಗಳು ೧೫೫೦ನೆಯ ವಿಭವನಾಮ ಸಂವತ್ಸರದ ಮಾಘ ಶುಕ್ಲಪಕ್ಷ

೪. .. ೧೫ಪೌರ್ಣಮಿಯಲ್ಲೂ ಶ್ರೀ ಮನ್ ಮಹಾನಾಯಕಾಚಾರ್ಯ ನಾಯಕ ಶಿರೋಮಣಿ ರಾಜ...

೫. ...ವಂಶದ ಪಡಿಮಿಳ ಗೋತ್ರದ ತಿಂಮಿನಾಯಕ..ಪೌತ್ರ ಚಿನ್ನಪ್ಪ ನಾಯಕ ಪುತ್ರ ...

೬. ...ಯಲ್ಲಪ್ಪ ನಾಯಕರು ನಂಮ ರಾಜ ಪುರೋಹಿತರಾದ ಆಪಸ್ಥಂಭ ... (ಸೂತ್ರದ) (ಕೌಂಡಿಣ್ಯಸ) ಗೋತ್ರದ (ಆ)ಚಾರ್ಯ

೭. ತ್ರ ಯಾದಾಟಿ ಪುಟ್ಟ ಭಟ್ಟರ ಪೌತ್ರರಾದ ಚಿಕ್ಕ ಔಭಳ ಭಟ್ಟರ (ಪುತ್ರ)

೮. ರಾದ ಯೋಗೀಶ್ವರ ಭಟ್ಟರಿಗೆ ದಕ್ಷಿಣ ಕಾಶಿ ಶ್ರೀ ಪಂಪಾವಿರೂಪಾಕ್ಷ ಕ್ಷೇತ್ರದಲ್ಲಿ

೯. ಸೋಮ್ಯೆವರಾದ ಪೌರ್ಣಮಿ ಪುಂಣ್ಯ ಕಾಲದಲ್ಲಿ ನಂಮ ಆಳಿದ ಸ್ವಾಮಿಗೆ ಪುಂಣ್ಯವಾಗಬೇ

೧೦. ಕುಯಂದು. ನಮ ಆಳುವ ಕುರುಗೋಡು ಶೀಮೆಗೆ ಸಲ್ಲುವ ಗ್ರಾಮಗಳೋಳಗಾಗಿ ನಿಮಗೆ ಭೂಮಿಯನು

೧೧. ಸಹಿತಂ(ಪು)ಣ್ಯದಕದಿಂದ ದಾನ ಧಾರಾಪೂರ್ವಕವಾಗಿ ಬರಶಿಕೊಟ್ಟ ಶಾಸನ ಕ್ರಮವೆಂ

೧೨. ತೆಂದರೆ ಉತ್ತಮ ಕೃಷ್ಣ ಭೂಮಿ ಬಿಜವನಿ ಪ್ರಕಾರ ಕುರಗೋಡ ಸ್ಥಳದಲ್ಲಿಯ

೧೩. ಯ್ಯಳ ಕೊಳೋರು ಲಾ೧ ಸೋಮ ಸಮುದ್ರ ಲಾ೧ ವದ್ದಿಹಟ್ಟಿ ಲಾ೧ ಬಾದನಹಟ್ಟಿ ಲಾ೧ ಓರುವಾ

೧೪. ಯಿ ಲಾ೧ ಗುತ್ತಗನೂರು ಲಾ೧ ಕಗ್ಗಲ್ಲು ಲಾ೧ ಹಂದಿಹಾಳ ಲಾ೧ ದಮ್ಮೂರು ಲಾ೧ ವಕ್ಕುಳ ವೀರಾಪು

೧೫. ರ ಲಾ೧ ಹಾವಿನಾಳ ಲಾ೧ ಗಣಿಕೆಹಾಳ ಲಾ೧ ಸಿಂದಿಗೆರೆ ಲಾ೧ ಬಯಲೂರು ಲಾ// ಪಟ್ಟಣ ಶೆರಗು

೧೬. ಯಿ ಕ್ಷೇತ್ರಗಳಿಂದ ಬಂದಂಥಾ ಫಲ ಪುಷ್ಪಗಳು ಮೊದಲಾದ ಅಷ್ಟಭೋಗ ತೇಜ

೧೭. ಪೂಜಾರಿಕೆಯನು ನಿಂಮಪುತ್ರ ಪೌತ್ರ ಪಾರಂಪರ್ಯವಾಗಿ ಆ ಚಂದ್ರಾರ್ಕವಾಗಿ

೧೮. ಅನುಭವಿಸಿಕೊಂಡ ಸಮಯದಂದೂ ಇರುವದೆಂದು ಬರೆಶಿಕೊಟ್ಟ ಶಿಲಾಶಾಸನ

೧೯. ಓರುವಾಯಿ ಗುತ್ತಗನೂರು ಪಟ್ಟಣಶೆರಗು ಗ್ರಾಮದವರು ಬಾದ್ಯಸ್ಥರು.// ?

ಶಾಸನದ ವಿವರ ಮತ್ತು ವೈಶಿಷ್ಟತೆಗಳು

ಈ ಶಾಸನದಲ್ಲಿ ವಂಶಾವಳಿ, ಕಾಲ ಮತ್ತು ಭೂದಾನದ ಮಾಹಿತಿ ಇದ್ದು, ಆ ವಿವರ ಇಂತಿದೆ.

೧. ಶಾಸನದ ಕಾಲ ಮತ್ತು ದಾನ ನೀಡಿದ ವಿವರ

"ಶಾಲಿವಾಹನ ಶಕ ವರುಷ ೧೫೫೦ರ ವಿಭವ ನಾಮ ಸಂವತ್ಸರದಲ್ಲಿ (ಕ್ರಿ.ಶ.೧೬೨೮ಕ್ಕೆ ಇದು ಸರಿ ಹೊಂದುತ್ತದೆ) ಶ್ರೀ ಮಹಾನಾಯಕಚಾರ್ಯ, ನಾಯಕ ಶಿರೋಮಣಿ ಮಿಕಗೋತ್ರದ ತಿಮ್ಮಿನಾಯಕನ ಮೊಮ್ಮಗನಾದ ಚಿನ್ನಪ್ಪನಾಯಕರ ಪುತ್ರರಾದ ಯಲ್ಲಪ್ಪ ನಾಯಕರು ಸ್ಥಳೀಯ ಆವನಂಭ ಗೋತ್ರದ ಪುರೋಹಿತರಾದ ಪುಟ್ಟ ಭಟ್ಟರ ಮರಿ ಮೊಮ್ಮಗನಾದ ಯೋಗೀಶರಭಟ್ಟರಿಗೆ ಶ್ರೀ ಪಂಪಾ ವಿರೂಪಾಕ್ಷ ಕ್ಷೇತ್ರದಲ್ಲಿ ಸೋಮುವಾರದ ಪೂರ್ಣಮಿಯ ಪುಣ್ಯಕಾಲದಲ್ಲಿ ಶ್ರೀಸ್ವಾಮಿಗೆ ಒಳತಾಗಲೆಂದು ಭೂಮಿಯನ್ನು ದಾನ ನೀಡಿದ ವಿವರವು ಶಾಸನದಲ್ಲಿ ಉಲ್ಲೇಖಿತವಾಗಿದೆ".

೨. ಶಾಸನ ಉಲ್ಲೇಖಿತ ಗ್ರಾಮಗಳು

ಇಲ್ಲಿ ವಿಶೇಷವಾಗಿ ಕುರುಗೋಡು ಸೀಮೆಗೆ ಸಲ್ಲುವ ಕೋಳೋರು, ವದ್ದಟ್ಟಿ, ಬಾದನಹಟ್ಟಿ, ಸೋಮಸಮುದ್ರ, ಓರ್ವಾಯಿ, ಗುತ್ತಗನೂರು, ಕಗ್ಗಲ್ಲು, ಹಂದಿಹಾಳು, ದಮ್ಮೂರು, ಒಕ್ಕಲು ವೀರಾಪುರ, ಹಾವಿನಹಾಳ್, ಗಣಿಕೆಹಾಳ್, ಶಿಂಧಿಗೇರಿ, ಬೈಲೂರು, ಪಟ್ಟಣಸೆರಗು ಮೊದಲಾದ ೧೯ ಗ್ರಾಮಗಳಲ್ಲಿನ ಭೂಮಿಯನ್ನು ದಾನ ನೀಡಿದ ವಿವರಗಳನ್ನು ಒಳಗೊಂಡಿದೆ. ಅಲ್ಲದೇ ಈ ಕ್ಷೇತ್ರಗಳಿಂದ ಬಂದಂತಹ ಫಲಪುಷ್ಪ, ಅಷ್ಟಭಾಗ ತೇಜ, ಉದಕ ಮೊದಲಾದವುಗಳು ಪೂಜನೀಯಲು ನಿಮ್ಮ ಪುತ್ರ ಪೌತ್ರರಿಗೆ ಪುಣ್ಯವಾಗಲೇಂದು ಆಚಾದರ್ಕವಾಗಿ ದಾನ ನೀಡಿದ ವಿವರವನ್ನು ಈ ಶಾಸನವು ವಿವರಿಸುತ್ತದೆ.

೩. ಶಾಸನದಲ್ಲಿ ಉಕ್ತವಾದ ಹೊಣೆಗಾರಿಕೆ

ಈ ಶಾಸನದಲ್ಲಿ ಶಾಸನದ ಹೊಣೆಗಾರಿಕೆಯ ವಿವರವಿದೆ. ಓರ್ವಾಯಿ, ಗುತ್ತಿಗನೂರು, ಪಟ್ಟಣಸೆರಗು ಗ್ರಾಮಸ್ಥರು ಸಹಾ ಇದಕ್ಕೆ ಭಾದ್ಯಸ್ಯರು ಎನ್ನುವ ವಿಶೇಷ ಮಾಹಿತಿ ಈ ಶಾಸನದಲ್ಲಿ ನಿರೂಪಿತಗೊಂಡಿದೆ.

೪. ಬೃಹತ್ ಬಂಡೆಗಲ್ಲು ಶಾಸನ

ಇದು ಬೃಹತ್ ಬಂಡೆಗಲ್ಲು ಶಾಸನವಾಗಿದ್ದು, ಇದನ್ನು ನೈಸರ್ಗಿಕ ಹುಟ್ಟು ಬಂಡೆಗೆ ಕೊರೆಯಲಾಗಿದೆ. ಇದು ತಳಭಾಗದಿಂದ ೧೨ ಅಡಿ ೭ಇಂಚು ಎತ್ತರ, ೧೩ ಅಡಿ ಅಗಲವಾಗಿರುವ ಬಹು ದೊಡ್ಡ ಶಾಸನವಾಗಿದೆ. ಈ ಬೃಹತ್ ಶಾಸನವನ್ನು ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯಲ್ಲಿ ಕೊರೆಯಲಾಗಿದೆ. ಈ ಸುಧೀರ್ಘ ಶಾಸನವು ಒಟ್ಟು ೧೯ ದೊಡ್ಡ ಸಾಲುಗಳನ್ನು ಒಳಗೊಂಡಿದ್ದು, ದಪ್ಪನೆಯ ಅಕ್ಷರದಲ್ಲಿ ಬರೆಯಲಾಗಿದೆ. ಇಲ್ಲಿನ ಬಹುತೇಕ ಅಕ್ಷರಗಳನ್ನು ೬–೮ ಇಂಚು ಎತ್ತರ ಹಾಗೂ ೬ ಇಂಚು ಅಡ್ಡಲಾಗಿ ಬರೆಯಲಾಗಿದೆ.

ಮೌರ್ಯ ಸಾಮ್ರಾಟ ಅಶೋಕನ ಶಾಸನಗಳ ಮಾದರಿಯಲ್ಲಿ ಹುಟ್ಟು ಬಂಡೆಯ ಮೇಲೆ ಕೆತ್ತಲಾಗಿರುವ ಎತ್ತರಕ್ಕಿಂತಲೂ ಹೆಚ್ಚು ಅಗಲವಾಗಿರುವ ಈ ದೀರ್ಘ ಶಾಸನದಲ್ಲಿ– ಕುರುಗೋಡು ಪಾಳೇಯಗಾರರ ವಂಶಾವಳಿ ಮತ್ತು ದಾನ ಪಡೆದವರ ವಂಶಾವಳಿಯನ್ನು ಅವರವರ ಗೋತ್ರಗಳ ಸಮೇತ, ದಾನ ನೀಡಲ್ಪಟ್ಟ ವಿವಿಧ ಗ್ರಾಮಗಳನ್ನು ಇಲ್ಲಿ ಉಲ್ಲೇಖಿಸಿರುವುದು ವಿಶೇಷವಾಗಿದೆ. ಕನ್ನಡ ವಿವಿಯ ಸಂಗೀತ ಮತ್ತು ನೃತ್ಯವಿಭಾಗದ ಮುಖ್ಯಸ್ಥ ಮತ್ತು ಸಂಶೋಧನಾ ತಂಡದ ಸದಸ್ಯರಾದ ಡಾ. ಗೋವಿಂದರವರು ಬೃಹತ್ ಬಂಡೆಯ ಈ ಶಾಸನವು ಮಹತ್ವದ್ದಾಗಿದ್ದು, ದಪ್ಪನೆಯ ಅಕ್ಷರದಲ್ಲಿ ರಚಿಸಿರುವುದು ಅತ್ಯಂತ ವಿಶೇಷವೆನಿಸಿದೆ ಎಂದಿದ್ದಾರೆ.

೫. ಅಪರೂಪದ ಶಾಸನ

ಇದೇ ಶಾಸನದಲ್ಲಿ ಕುರಗೋಡ ಸ್ಥಳದ ಮತ್ತು ಕಾಲ. ತಿಥಿ. ಅಳತೆಗೆ ಸಂಬಂಧಿಸಿದ ವಿವರಗಳು ಹಾಗೂ ವಂಶಾವಳಿ, ಬಿರುದುಗಳ ಉಲ್ಲೇಖಗಳು ಸಹಾ ಇವೆ. ಅಲ್ಲದೇ

ಶಾಸನದಲ್ಲಿ ಉಲ್ಲೇಖಗೊಂಡ ನಾಯಕ ಶ್ರೀ, ನಾಯಕ ಶಿರೋಮಣಿ ಎನ್ನುವ ಬಿರುದುಗಳಿಂದ ಕುರುಗೋಡು ಪಾಳೇಯಗಾರರು ನಾಯಕ (ವಾಲ್ಮೀಕಿ) ಸಮುದಾಯಕ್ಕೆ ಸೇರಿದವರು ಎಂಬದು ಸ್ಪಷ್ಟವಾಗುತ್ತದೆ. ಈ ಕುರಿತಂತೆ ಮತ್ತಷ್ಟು ಅಧ್ಯಯನಗಳು ನಡೆಯಬೇಕಿದೆ.

ಕುರುಗೋಡು ಪಟ್ಟಣವು ಒಂದು ಐತಿಹಾಸಿಕ ಸ್ಥಳವಾಗಿದ್ದು, ಅನೇಕ ಪ್ರಾಚ್ಯ ಅವಶೇಷಗಳನ್ನು ತನ್ನ ಒಡಲಾಳದಲ್ಲಿ ಹುದುಗಿಸಿಟ್ಟುಕೊಂಡಿದೆ. ವೇಗವಾಗಿ ಬೆಳೆಯುತ್ತಿರುವ ಇಲ್ಲಿನ ನಗರೀಕರಣ, ಗಣೀಗಾರಿಕೆ ಹಾಗೂ ಜನರ ಮೂಢನಂಬಿಕೆಗಳಿಂದಾಗಿ ಮತ್ತು ನೈಸರ್ಗಿಕ ವೈಪರೀತ್ಯ ಮತ್ತು ಇತರೆ ಕೆಲ ಕಾರಣಗಳಿಂದಾಗಿ ಇಲ್ಲಿನ ಐತಿಹಾಸಿಕ ಕುರುಹುಗಳು ನಾಶಹೊಂದುತ್ತಿರುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಇಲ್ಲಿನ ಪ್ರಾಚ್ಯಾವಶೇಷಗಳು ಈಗಾಗಲೇ ವಿನಾಶದ ಹಂತವನ್ನು ತಲುಪಿದ್ದು, ಅವುಗಳನ್ನು ತುರ್ತಾಗಿ ಸಂರಕ್ಷಿಸಬೇಕಾದ ಅಗತ್ಯವಿದೆ. ಈ ಕಾರ್ಯದಲ್ಲಿ ಸರ್ಕಾರ, ಸಂಘ ಸಂಸ್ಥೆಗಳು ಸ್ಥಳೀಯ ಪಂಚಾಯಿತಿ ಮತ್ತು ಗ್ರಾಮದ ನಾಗರೀಕರು ಹಾಗೂ ಇತಿಹಾಸಕಾರರು ಸಕ್ರಿಯವಾಗಬೇಕಿದೆ. ಆ ಮೂಲಕ ಮುಂದಿನ ಪೀಳಿಗೆಗೆ ಇಲ್ಲಿನ ಇತಿಹಾಸ ಮತ್ತು ಸಂಸ್ಕೃತಿಯ ಮಹತ್ವವನ್ನು ಪಸರಿಸಲು ನೆರವಾಗಬೇಕು.

ಆಧಾರ ಗ್ರಂಥಗಳು

೧. ಕರ್ನಾಟಕ ಗೆಜೆಟ್ಟೀಯರ್, (ಬಳ್ಳಾರಿ ಜಿಲ್ಲೆ) ೨೦೦೪, ಕರ್ನಾಟಕ ಸರ್ಕಾರ, ಬೆಂಗಳೂರು

೨. ನಾಗಯ್ಯ, ಜಿ.ಎಮ್., ೨೦೦೨, ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಲೋಹಿಯಾ ಪ್ರಕಾಶನ, ಬಳ್ಳಾರಿ

೩. ಚನ್ನಬಸಪ್ಪ ಎಸ್ ಪಾಟೀಲ್, ವಿನೋದ ಪಾಟೀಲ, ೧೯೯೭ ಬಳ್ಳಾರಿ ಜಿಲ್ಲೆಯ ಶಾಸನಗಳು ಭಾಗ–೨ ಮೈಸೂರು ಪ್ರಾಚ್ಯವಸ್ತು ನಿರ್ದೇಶನಾಲಯ, ಮೈಸೂರು

೪. ದೇವರಕೊಂಡ ರೆಡ್ಡಿ ಮತ್ತು ಇತರರು, ೨೦೦೧, ಬಳ್ಳಾರಿ ಜಿಲ್ಲೆಯ ಶಾಸನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ರವೀಂದ್ರನಾಥ, ಕೆ. ೨೦೦೫, ಬಳ್ಳಾರಿ ಜಿಲ್ಲಾ ದರ್ಶನ, ಪ್ರಸಾರಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೬. ಸದಾಶಿವಪ್ಪ ಕುಂಬಾ, ೧೯೯೦, ಬಳ್ಳಾರಿ ಜಿಲ್ಲಾ ದರ್ಶನ, ಮಾಲತೇಶ ಪ್ರಕಾಶನ, ಕುಂಚೂರು

೭. ಹನುಮಂತರೆಡ್ಡಿ ಎನ್. ವೈ., ೨೦೦೮, ಬಳ್ಳಾರಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ಇತಿಹಾಸ ಕರ್ನಾಟಕ ಇತಿಹಾಸ ಸಂಶೋಧನ ಮಂಡಳ, ಧಾರವಾಡ.

■■

ISSN: 2249-2429 Volume : 13, Issue : 1, Pages 96, 7th June 2023 Annual Subscription ₹.750/-

RNI REG.NO.KARKAN/2011/38712

3,4-5

34

ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ

SHIKSHAN SOUDHA *A Quarterly Education and Research Journal*

Listed in U.G.C. Care List

APPROVED BY UGC CARE





ಮಾಧ್ಯಮ, ತಂತ್ರಜ್ಞಾನ ಮತ್ತು ಗ್ರಾಮೀಣ ಅಭಿವೃದ್ಧಿ

Scanned with OKEN Scanner

ಶಿಕ್ಷಣ ಸೌಧ

ವೈಮಾಸಿಕ ಶಿಕ್ಷಣ ಮತ್ತು ಶಿಕ್ಷಣಶಾಸ್ತ್ರ ಪತ್ರಿಕೆ

UGC Care Listed Journal

ಸಂಪುಟ : 13 ಸಂಚಿಕೆ : 1

ಪ್ರಧಾನ ಸಂಪಾದಕರು :

ಡಾ। ಬಿ.ಪಿ.ವೇದ ಮೂರ್ತಿ

ಸಂಪಾದಕ ಮಂಡಳಿ

- ಪ್ರೊ. ಎಸ್.ಎಸ್. ಕಾಶೀಲ
- ಪ್ರೊ. ಬಿ.ಎಲ್. ರಘುನಂದನ
- ಪ್ರೊ. ಕೆ.ಎಂ. ಮೇತ್ರಿ
- ಡಾ. ಎಸ್. ರಘು
- ಡಾ. ಜಗನ್ನಾಥ ಕೆ. ಹಾಂಗೆ
- ಡಾ. ರಾಜಪ್ಪ ದಳವಾಯಿ
- ಪ್ರೊ. ಭೀಮಪ್ಪ ರಂಗಣ್ಣನವರ
- ಡಾ. ಮುತ್ತಣ್ಣಗೌಡ

Shikshan Soudha

A Quarterly Education and Research Journal

VIDYANIDHI PRAKASHANA®

SRI SIVAKUMAR AGENCY®

Station Road, Near Mahendrakar Circle,
GADAG-582 101 Dist. Gadag
Karnataka State (India)
Phone 08372-200527

The views expressed in the articles side are the individual opinions of the author and they in no way represent or reflect the opinion of SHIKSHAN SOUDHA nor does SHIKSHAN SOUDHA subscribe to these views in no way. All disputes are subject to the jurisdiction of Gadag court only.

ಶಿಕ್ಷಣ ಸೌಧ

ಯು.ಜಿ.ಸಿ. ಕೇರ್ ಪಟ್ಟಿಗೆ ಸೇರಿರುವ ಪತ್ರಿಕೆ

ಅನುಕ್ರಮಣಿಕೆ Inside

ಸೈದ್ಧಾಂತಿಕ (Articles)

06 ಪ್ರಸ್ತುತವಾದ ಕರ್ನಾಟಕ ಸರ್ಕಾರ ಮಕ್ಕಳ ಪಠ್ಯಗಳ ರಚನೆಗೆ ಸಂಬಂಧಿಸಿದಂತೆ ಹಾಗೆ ಕೈಬಿಡಿಯಬೇಕಾದ ಬೋಧನೆಗಳು : ಒಂದು ಅವಲೋಕನ - ಡಾ. ವೀರಣ್ಣ ಕುಮಾರ್

10 ಬೆಳಗಲಿಕ್ಕೆ ದೀಪವನ್ನು ಮತ್ತು ಹೊಸ್ಮನಾಯಣಕ್ಕೆ ಶ್ರೀಕೃಷ್ಣನವರ ಗೀತಾ ಗಾಯನದ ವಸ್ತುವಿನ ತೌಲನಿಕ ವಿಮರ್ಶೆ - ಡಾ. ಪ್ರಸನ್ನ ಎಂ.ಎಸ್.

13 ಕನ್ನಡ ಅರಿವಿನ ಶಾಸನ : ಪ್ರ. ಶೈಲಿಯ ಚಿಂತನೆಗಳು - ಡಾ. ರಮೇಶ್‌ಕುಮಾರ ದಂಡಾಪ

15 ಡಾ. ನರೇಂದ್ರ ರೈ ದೇರ್ಲ ಬರಹಗಳಲ್ಲಿ ಪರಿಸರ ಪ್ರಜ್ಞೆ - ಡಾ. ಶಂಕರ್ ಕೆ.ಎಸ್.

21 ಕನ್ನಡ ವೃತ್ತಿ ರಂಗಭೂಮಿಯ ರಂಗಗೀತೆಗಳು : ಕುಂದಾಪ್ರದ ಹೊಸ ತಲೆಮಾರಿನ - ಡಾ. ಮೆಲ್ಲಯ್ಯ ಕುಂದೂರ

25 'ಕಾಯ' ಕಾದಂಬರಿ ಮತ್ತು ಚಲನಚಿತ್ರದಲ್ಲಿ ಮಹಿಳಾ ಸಂವೇದನೆ - ಕವಿತಾ ಬಿ.ಎಸ್.

28 ಅಮೀನಮರದ ಸಂತೆ : ಗ್ರಾಮ್ಯ ನೆಲೆಯ ಚಹರೆಗಳು - ಡಾ. ಅಂದಯ್ಯ ಅರಸಿಗುಡಿಮಠ

29 ಮಳೆಗುಂದ ನಾಡಿನ ಸ್ಥಾವರ ಶಿಲ್ಪಗಳು ಮಳೆಗುಂದ ನಾಡಿನ ಸ್ಥಾವರ ಶಿಲ್ಪಗಳು - ಡಾ. ಬಿ. ಸುರೇಶ

31 ರನ್ನನ ಮೇಲೆ ಪಂಪನ ಋಣ - ಶ್ರೀನಿವಾಸ ಎನ್.

34 ಒಡರಾಳ : ಹುಟ್ಟು, ಮೌನ ಮತ್ತು ಪ್ರತಿಭಟನೆ - ಡಾ. ವೆಂಕಟಗಿರಿ ದಳವಾಯಿ

38 ಸಾಮಾಜಿಕ ವಿಜ್ಞಾನಿ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರ್ತಿಯಾಗಿ ಮಾತೆ ಸಾವಿತ್ರಿಬಾಯಿ ಫುಲೆ : ಒಂದು ಅವಲೋಕನೆ - ಶಶಿಕುಮಾರ್ ಬಿ.ಎಸ್.

41 ಆತ್ಮಹತ್ಯೆಗೆ ಕಾರಣ ಮತ್ತು ಪರಿಹಾರಗಳು : ಒಂದು ವಿಶ್ಲೇಷಣೆ - ಪ್ರೊ. ಮನೋಜಾ ಕೆ.

45 ಶರಣರ ವಚನಗಳಲ್ಲಿ ಜೀವನ ಮೌಲ್ಯಗಳು - ಚಂದ್ರಪ್ಪ ಬಾರಂಗಿ

50 ಮಾನವ ಅಭಿವೃದ್ಧಿ ಮತ್ತು ಶಿಕ್ಷಣ - ಡಾ. ಮಂಜಯ್ಯ

55 ಗಿಡಮೂಲಿಕೆ ಔಷಧಿಗಳ ಐತಿಹಾಸಿಕ ದೃಷ್ಟಿಕೋನಗಳು ಮತ್ತು ಭವಿಷ್ಯದ ಪ್ರಾಮುಖ್ಯತೆ - ಡಾ. ಕುಮಾರ್ ಎಂ.ಎಸ್., ಚೈತ್ರಾ ಜಿ.ಕೆ.

57 ಮಹಿಳಾ ಅಭಿವೃದ್ಧಿ ದೃಷ್ಟಿಕೋನಗಳು - ಡಾ. ಯಲ್ಲಪ್ಪಾ ಈ.

60 ನಾಡೋಜ ಪಂಪ : ಪರಿಚಯಾತ್ಮಕ ಅವಲೋಕನ - ಶಿವಪುರ ಸಾವಿರೆಂಗಪ್ಪ

63 ಹೆಣ್ಣನ್ನು ಋಣಮಂಜರಿ ನಿಧಿಸುವ ಚಿತ್ರಣ ರಾಮಾಯಣ ಮಹಾಭಾರತ - ಶ್ರೀಶ ಜ.

67 ಮಾಧ್ಯಮ, ತಂತ್ರಜ್ಞಾನ ಮತ್ತು ಸ್ವಾಮೀಜಿಯ ಅಭಿವೃದ್ಧಿ - ರಾಷ್ಟ್ರೀಯತೆಯ ಪಿ.ಎಂ. ಪಾಟೀಲ್

70 ನೀನು ಓದಿಯಾದ ಏನ ? ಒಂದು ವೈಜ್ಞಾನಿಕ ವಿಶ್ಲೇಷಣೆ ಮತ್ತು ವಿಮರ್ಶೆ ! - ಡಾ.ಸುರೇಶ್ ಎಲ್.ಎ., ಪ್ರೊ. ಮಲ್ಲೇಶಿ ಅರಮನಿ

74 ಫ್ಲೋರೆನ್ಸ್ ನೈಟ್ : ಶಿಕ್ಷಣ ತಜ್ಞರೊಂದಿಗೆ ಸಂಕ್ಷಿಪ್ತ ಅಧ್ಯಯನ - ಡಾ. ಮಲ್ಲೇಶಿ ಬಿ. ಪಾಟೀಲ್

76 ಇತಿಹಾಸ ಅಧ್ಯಯನದಲ್ಲಿ ಶಾಸನಗಳ ಪ್ರಾಮುಖ್ಯತೆ - ಎಮ್.ಎ. ಪಟಾಣ

77 ಉತ್ತಮ ಅಡೂರಿಗೆ ಬೀಡುವಲ್ಲಿ ಯೋಗ....! - ಡಾ. ಶಂಕರ ಬಾಂಡೇರಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಹಿಳಾ ಅಭಿವೃದ್ಧಿ ದೃಷ್ಟಿಕೋನಗಳು

ಡಾ. ಯಮ್ರಿಸ್ವಾಮಿ ಈ., ಸಹಾಯಕ ಪ್ರಾಧ್ಯಾಪಕ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ವಿಶ್ವಸಂಸ್ಥೆಯ ಮಹಿಳಾ ದಶಕದ ಘೋಷಣೆಗಿಂತ ಮುಂಚೆ ಅಭಿವೃದ್ಧಿ ಸಿದ್ಧಾಂತಗಳನ್ನು ಲಿಂಗತಟಸ್ಥವೆಂದು ಪರಿಗಣಿಸಲಾಗಿತ್ತು. ಆದಕಾರಣ ನೀತಿ ರೂಪಿಸುವವರು ಅಭಿವೃದ್ಧಿಯಲ್ಲಿ ಮಹಿಳೆ ಮತ್ತು ಪುರುಷರ ನಡುವಿನ ವ್ಯತ್ಯಾಸವನ್ನು ಗುರುತಿಸುವ ಗೋಜಿಗೆ ಹೋಗಲಿಲ್ಲ. "ಅಭಿವೃದ್ಧಿಯು ಸ್ತ್ರೀ ಮತ್ತು ಪುರುಷರ ಮೇಲೆ ಏಕತೆರನಾದ ಪರಿಣಾಮ ಬೀರುತ್ತದೆ ಎಂದು ಭಾವಿಸಿದ್ದರು. ಆದರೆ ಸ್ತ್ರೀವಾದಿ ಚಿಂತಕರು ಮಹಿಳೆ ಮತ್ತು ಪುರುಷರು ಅಭಿವೃದ್ಧಿಯ ಯೋಜನೆಗಳಿಂದ ಭಿನ್ನವಾಗಿ ಪ್ರಯೋಜನ ಪಡೆದುಕೊಂಡಿದ್ದಾರೆ ಎಂಬುದನ್ನು ಸಾಬೀತು ಮಾಡಿದರು"(ಘೋರೈಶಿ ಪಿ.[illegible] ಬೆಲಾಂಜರ್ ಸಿ., 1996, ಪು.92).ಈ ತೆರನಾದ ಜಾಗೃತಿಯ ಪರಿಣಾಮ ಅಭಿವೃದ್ಧಿಯ ಎಲ್ಲ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಸಂಪೂರ್ಣವಾಗಿ ಉತ್ತೇಜಿಸುವ ಕ್ರಮ ಪ್ರಾರಂಭವಾಯಿತು. "ಮಹಿಳೆಯರನ್ನು ಒಳಗೊಳ್ಳುವಿಕೆಯ ಅಭಿವೃದ್ಧಿ ಮತ್ತು ಸಾಮಾಜಿಕ ಪ್ರಗತಿಗೆ ಹೆಚ್ಚಿನ ಕೊಡುಗೆಯನ್ನು ಮರಳಿ ನೀಡುತ್ತದೆ ಎಂದು ಭಾವಿಸಲಾಯಿತು" (ಜಾಕ್ಸನ್ ಸಿ. ಮತ್ತು ಪಿಯರ್ಸನ್ ಆರ್., 1998, ಪು. 114).

ಸ್ತ್ರೀವಾದಿ ಸಂಶೋಧಕರು ಜಂಡರ್ ವಿಶ್ಲೇಷಣೆಯನ್ನು ಮಾಡಿದ್ದರ ಪರಿಣಾಮ "ಕಳೆದ ಮೂರು ದಶಕಗಳಿಂದ ಅಭಿವೃದ್ಧಿಯ ಸಿದ್ಧಾಂತಗಳಲ್ಲಿ ಬದಲಾವಣೆಗಳು ಕಂಡು ಬಂದವು. ಅಂದರೆ ಅಭಿವೃದ್ಧಿ ಪರಿಕಲ್ಪನೆಯಲ್ಲಿ ಅಭಿವೃದ್ಧಿಯಲ್ಲಿ ಮಹಿಳೆ, ಮಹಿಳೆ ಮತ್ತು ಅಭಿವೃದ್ಧಿ ಹಾಗೂ ಲಿಂಗವ್ಯವಸ್ಥೆ ಮತ್ತು ಅಭಿವೃದ್ಧಿ ಪರಿಕಲ್ಪನೆಗಳು ವಿಕಸನಗೊಂಡಿವೆ. ಇವು ಪ್ರತಿಯೊಂದು ಪರಿಕಲ್ಪನೆಯು ಸಹ ಒಂದು ಕಾಲಾವಧಿಯನ್ನು ಸೂಚಿಸುತ್ತವೆ"(ದೇಸಾಯಿ, ವಿ.ಮತ್ತು ಪಾಟರ್ ಆರ್. (ಇಡಿ), 2002, ಪು.126).

ಇದರ ಮುಂದುವರೆದ ಭಾಗವಾಗಿ ದೇಸಾಯಿ ಮತ್ತು ಪೋಟರ್ ಅವ[illegible] "ಯೋಜನಾ ವಿಧಾನಗಳು ಸಿದ್ಧಾಂತಗಳ ಮೂಲಭೂತ ಪರಿಕಲ್ಪನೆಗಳನ್ನು ಒಳಗೊಳ್ಳುತ್ತವೆ. ಸಂಘ ಮತ್ತು ಸಂಸ್ಥೆಗಳು ಯಾವ ತೆರನಾಗಿ ನೀತಿಗಳನ್ನು ಘೋಷಿಸಿಕೊಳ್ಳಬೇಕು ಎನ್ನುವುದನ್ನು ಇವು ನಿರ್ಧರಿಸುತ್ತವೆ. ಯೋಜನೆಯು ನೀತಿಗಳನ್ನು ತಾರ್ಕಿಕತೆ, ಉದ್ದೇಶ, ತತ್ವ ಹಾಗೂ ಕಾರ್ಯತಂತ್ರಗಳನ್ನು ಪರಿಗಣಿಸಿ ರೂಪಿಸಲಾಗುತ್ತದೆ. ಅಭಿವೃದ್ಧಿ ಯೋಜನೆಯ ಕುರಿತ ಸಾಹಿತ್ಯವು ಐದು ನೀತಿ ದೃಷ್ಟಿಕೋನಗಳನ್ನು ಗುರುತಿಸಿದೆ. ಅವುಗಳನ್ನು ಈ ಭಾಗದಲ್ಲಿ ಪರೀಕ್ಷಿಸಲಾಗುತ್ತದೆ. ಇವು ಕಲ್ಯಾಣ, ಸಮಾನತೆ, ಬಡತನ ವಿರೋಧಿ, ದಕ್ಷತೆ ಮತ್ತು ಸಬಲೀಕರಣ ಗುರಿಗಳನ್ನು ಒಳಗೊಂಡಿವೆ. ಅಭಿವೃದ್ಧಿಯಲ್ಲಿ ಮಹಿಳೆ ದೃಷ್ಟಿಕೋನವು ಪ್ರಮುಖವಾಗಿ ಸಮಾನತೆ, ಬಡತನ ವಿರೋಧಿ ಮತ್ತು ದಕ್ಷತೆಯನ್ನು ಒಳಗೊಂಡಿದ್ದರೆ ಲಿಂಗವ್ಯವಸ್ಥೆ ಮತ್ತು ಅಭಿವೃದ್ಧಿ ಸಬಲೀಕರಣ ದೃಷ್ಟಿಕೋನವನ್ನು ಒಳಗೊಂಡಿದೆ" (ದೇಸಾಯಿ ವಿ.ಮತ್ತು ಪಾಟರ್ ಆರ್. (ಇಡಿ), 2002, ಪು.174).

ಕಲ್ಯಾಣ ದೃಷ್ಟಿಕೋನವು 1950 ಮತ್ತು 1960ರಲ್ಲಿ ಪ್ರಾರಂಭವಾಯಿತು. ಅಭಿವೃದ್ಧಿ ಪ್ರಯತ್ನಗಳಲ್ಲಿ ಮೊಟ್ಟಮೊದಲ ಬಾರಿಗೆ ಮಹಿಳೆಯನ್ನು ಗುರುತಿಸಲಾಯಿತು. ಇದನ್ನು ಅನುಸರಿಸಿ 1970ರಲ್ಲಿ ಅಭಿವೃದ್ಧಿಯಲ್ಲಿ ಮಹಿಳೆ ನಂತರ 1980ರಲ್ಲಿ ಲಿಂಗವ್ಯವಸ್ಥೆ ಮತ್ತು ಅಭಿವೃದ್ಧಿ ಅದರ ಸ್ಥಾನವನ್ನು ಅಲಂಕರಿಸಿತು. ಅಭಿವೃದ್ಧಿಯಲ್ಲಿ ಮಹಿಳೆ ದೃಷ್ಟಿಕೋನಕ್ಕಿಂತ ಮೊದಲು ಅನುಷ್ಠಾನದಲ್ಲಿದ್ದ ಕಲ್ಯಾಣ ವಿಧಾನವು ಅತ್ಯಂತ ಪರಿಣಾಮಕಾರಿ ಹಾಗೂ ವೈರುಧ್ಯ ನೀತಿಗಳಿಂದ ಕೂಡಿತ್ತು. 1990ರಲ್ಲಿ ಸಬಲೀಕರಣ ವಿಧಾನವನ್ನು ಯೋಜನಾ ಗ್ರಹಿಕೆಯಲ್ಲಿ ಅಳವಡಿಸಿಕೊಳ್ಳಲಾಯಿತು. ಇಲ್ಲಿ ಪ್ರಸ್ತುತಪಡಿಸಿದ ವಿವಿಧ ನೀತಿಗಳು ವಿವಿಧ ಅವಧಿಗಳಲ್ಲಿ ಪ್ರಭಾವ ಬೀರುತ್ತವೆ.

ಹಳೆಯ ದೃಷ್ಟಿಕೋನವಿಧಾನದ ಟೀಕೆಯನ್ನು ಒಳಗೊಂಡ ನೂತನ ನೀತಿ ವಿಧಾನಗಳು ಪ್ರಾರಂಭಗೊಂಡವು. ಆದರೂ ಒಂದೊಂದು ಸಲ ಹಳೆಯ ವಿಧಾನಗಳಿಗೆ ಮರುಕಳಿಸಿರುವುದು ತಿಳಿದುಬರುತ್ತದೆ. ಆದ್ದರಿಂದ ರೂಢಿಯಲ್ಲಿರುವ ವಿಧಾನಗಳಿಂದ ವಿವರಿಸಿದಷ್ಟು ಈ ಯೋಜನಾ ವಿಧಾನಗಳು ಪರಿಪೂರ್ಣವಾಗಿಲ್ಲ ಮತ್ತು ಹಲವು ಬಾರಿ ಬೆರತುಹೋಗಿರುವುದು ಇದೆ.

ಕಲ್ಯಾಣ ದೃಷ್ಟಿಕೋನ

ಕಲ್ಯಾಣ ದೃಷ್ಟಿಕೋನವು 19ನೆಯ ಶತಮಾನದ ಸಾಮಾಜಿಕ ಕಲ್ಯಾಣದ ಬೇರುಗಳಲ್ಲಿ ಅಡಕಗೊಂಡಿವೆ. ಈ ಅವಧಿಯಲ್ಲಿ ಬಡವರು ಯಶಸ್ಸುಗೊಳ್ಳಲು ಸಾಧ್ಯವಿಲ್ಲದವರು, ಸ್ವಪ್ರಯತ್ನದಿಂದ ಸುಧಾರಿಸಿಕೊಳ್ಳಲು ಅಸಮರ್ಥರು ಎಂದು ಪರಿಗಣಿಸಲಾಗಿತ್ತು ಮತ್ತು ಸ್ವಯಂದತ್ತಿ ನೀಡುವ ಸ್ವಯಂ ಸಂಘಗಳು, ಸಂಸ್ಥೆಗಳು ಇವರಿಗೆ ಸಹಾಯ ಮಾಡಲು ಜವಾಬ್ದಾರಿಯನ್ನು ಹೊತ್ತವು. ವಸಾಹತು ಅವಧಿಯಲ್ಲಿ ಅಭಿವೃದ್ಧಿ ಮುಖ್ಯ ಪ್ರಯತ್ನವನ್ನು ಕಲ್ಯಾಣದ ನೆರವಿನಿಂದಾಗಿ ಪ್ರತ್ಯೇಕಿಸುವುದು ಸಾಮಾನ್ಯವಾಗಿತ್ತು. 1950 ಮತ್ತು 1960ರಲ್ಲಿ ಇದು ಪ್ರಾರಂಭವಾದರೂ ಇದು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮಹಿಳೆಯರನ್ನು ಕೇಂದ್ರೀಕರಿಸಿತ್ತು. ಪುರುಷರನ್ನು ಉತ್ಪಾದನಾ ಕಾರ್ಮಿಕರೆಂದು ಪರಿಗಣಿಸಿದರೆ ಮಹಿಳೆಯರನ್ನು ದುರ್ಬಲ ವರ್ಗದವರೆಂದು ನಿಷ್ಕ್ರಿಯ ಪಾಲುದಾರರೆಂದು ಪರಿಗಣಿಸಿತು. ಏಕೆಂದರೆ ಅವರನ್ನು ಪ್ರಾಥಮಿಕವಾಗಿ ಸಂತಾನೋತ್ಪತ್ತಿ ಪಾತ್ರಗಳಿಂದ ಗುರುತಿಸಲಾಗುತ್ತಿತ್ತು.

ಈ ದೃಷ್ಟಿಕೋನದ ಮೊದಲ ಉದ್ದೇಶವು ಮಹಿಳೆಯರಿಗೆ ಸಹಾಯ ಮಾಡುವುದಾಗಿತ್ತು. ಅದು ಯಾವ ತೆರನಾದ ಸಹಾಯವೆಂದರೆ ಅವರನ್ನು ಉತ್ತಮ ತಾಯಿಯರನ್ನಾಗಿ ಮಾಡುವುದು, ಹೆಂಡತಿಯರನ್ನಾಗಿ ಮಾಡುವುದಾಗಿತ್ತು. ಇದರ ಮೂಲಕ ಕುಟುಂಬದ ಕಲ್ಯಾಣವನ್ನು ಸಾಧಿಸಬಹುದು ಎಂದು ಭಾವಿಸಲಾಗಿತ್ತು. ಆದಕಾರಣ ತಾಯಿ ಮತ್ತು ಮಕ್ಕಳ ಆರೋಗ್ಯ, ಪೌಷ್ಟಿಕಾಂಶಗಳ ಸುಧಾರಣೆ, ಕುಟುಂಬ ಯೋಜನೆ ಮತ್ತು ಕುಟುಂಬದ ಆರ್ಥಿಕತೆಗೆ ಸಹಾಯ ಮಾಡುವುದು, ಆ ಮೂಲಕ ಸುಧಾರಿಸುವುದು ಎಂದುಕೊಂಡು ಅವುಗಳನ್ನೇ ಕೇಂದ್ರೀಕರಿಸಿತ್ತು.

ಕಲ್ಯಾಣ ವಿಧಾನದ ಪ್ರಮುಖ ವಿಮರ್ಶಕರಾದ ಕಬೀರ್ ಸಿಂಡರ್ ಮತ್ತು ತಡಸ್ಸೆ "ಮಹಿಳೆಯ ಸಂಸಾರದ ಪಾತ್ರ ಹಾಗೂ ಲಿಂಗಾಧಾರಿತ ಶ್ರಮವಿಭಜನೆಯ ರೂಢಿಗತ ಊಹೆಯನ್ನು ಹೊಂದಿದ್ದರು. ಈ ವಿಧಾನವು ಮಹಿಳೆಯರ ಉತ್ಪಾದನ ಚಟುವಟಿಕೆಗಳು ಹಾಗೂ ಅವರ ಆರ್ಥಿಕ ಕೆಲಸಗಳ ಜವಾಬ್ದಾರಿಗಳನ್ನು ಪ್ರಶ್ನಿಸುವ ಮತ್ತು ಆದರಲ್ಲಿಬೇರೂರಿರುವ ತಪ್ಪುಗ್ರಹಿಕೆಗಳನ್ನು ತಿಳಿಸುವಲ್ಲಿ ವಿಫಲಾಯಿತು. ಆದರೂ ಮಹಿಳೆ ಮತ್ತು ಪುರುಷರ ನಡುವೆ ಗೊಂದಲ ಸೃಷ್ಟಿಸದ ಒಂದು ಸುರಕ್ಷಿತ ವಿಧಾನವಾಗಿದೆ ಎಂದಿರುವರು" (ಕಬೀರ್ ಎನ್., 1994, ಪು.80-97). ಬ್ಯುವಿನಿಕ್

Scanned with OKEN Scanner

ಎಮ್ "ಕಲ್ಯಾಣ ವಿಧಾನವು ಸ್ವಾತಂತ್ರಾನಂತರದಲ್ಲಿ ಅನುಸರಿಸಿದ ರಾಜ್ಯನೀತಿಯ ಎಂದರು" (ಮಾಹಿತಿ ಎಮ್. ಪೈ ಎ ಮತ್ತು ಏಲಿಯಾ, ಕೆ., 1983, ಪು.158). ಮೋಸರ್ ಹೇಳುವಂತೆ "ಕಲ್ಯಾಣ ವಿಧಾನ ಕುರಿತ ಅಭಿಪ್ರಾಯ ಹಾಗೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಸರ್ಕಾರಿ ವಿಧಾನಗಳಿಗೆ ಹಾಗೂ ಸಮಾಜಕೆಯ ವಿಧಾನಕ್ಕೆ ಕಾರಣವಾಯಿತು ಎನ್ನುತ್ತಾರೆ" (ಮೋಸರ್ ಕೆ., 1993, ಪು.213).

ಕಾರ್ಯ ದೃಷ್ಟಿಕೋನ

ಎಸ್ತರ್ ಬೋಸ್ರಪ್ ಅವರು ಮೊದಲು 'ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ (1970)'ರ ಪ್ರಕಾರ, ಪಾಶ್ಚಿಮಾತ್ಯ ಸಿದ್ಧಾಂತಗಳ, ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮಹಿಳೆಯರ ಆರ್ಥಿಕ ಸ್ಥಿತಿ ಮತ್ತು ಸ್ಥಾನಮಾನಗಳಲ್ಲಾದ ಬದಲಾವಣೆಯನ್ನು ಗ್ರಹಿಸಿದರು. ಇದರ ಪ್ರಮುಖ ಉತ್ಪನ್ನವೆಂದರೆ "ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರು ಮತ್ತು ಪುರುಷರಿಗೆ ಹೊಂದಿದ್ದ ಸಂಬಂಧವನ್ನು ಕಳೆದುಕೊಳ್ಳುತ್ತಾರೆ. ಅದಕ್ಕೆ ಇದರ ಕಾರಣಗಳೆಂದರೆ ಒಂದು, ಮಹಿಳೆಯರು ಉತ್ಪಾದನೆ ಹಾಗೂ ಸಂಕೀರ್ಣತೆಯ ಎರಡು ಪಾತ್ರಗಳನ್ನು ಸಮತೂಕದಲ್ಲಿ ನಿರ್ವಹಿಸುತ್ತಾರೆ ಎರಡನೆಯದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಮಹಿಳೆಯರನ್ನು ಆರ್ಥಿಕ ಉತ್ಪಾದನೆಗಿಂತ ಅವರ ಸಂತಾನೋತ್ಪತ್ತಿ ಪಾತ್ರಗಳಿಗೆ ಹೆಚ್ಚಿನ ಪ್ರಮುಖತೆಯನ್ನು ನೀಡಲಾಗಿದೆ. ಎರಡು ಸಾಂಪ್ರದಾಯಿಕ ಮತ್ತು ಪಾಶ್ಚಾತ್ಯ ಅಭಿವೃದ್ಧಿ ಚಟುವಟಿಕೆಗಳನ್ನು ಅಳವಡಿಸುವ ಮಹಿಳೆಯರ ಸಂತಾನೋತ್ಪತ್ತಿ ಪಾತ್ರಗಳ ಮೌಲ್ಯಗಳನ್ನು ಕಡೆಗಣಿಸಿವೆ. ಏಕೆಂದರೆ ಆಧುನಿಕ ವಲಯದಲ್ಲಿ ಅವರ ಕೆಲಸ ಸಂಬಳ ರಹಿತ ದುಡಿಮೆಯಾಗಿದೆ ಮೂರು ಅಭಿವೃದ್ಧಿ ನೀತಿಗಳು ಕೃಷಿಯ ಜಗತ್ತಿನ ಮಹಿಳೆಯರ ಸಂಬಳಸಹಿತ ದುಡಿಮೆಗೆ ಅಡ್ಡಿಯಾಗಿವೆ. ನಾಲ್ಕು ಈ ಯೋಜನೆಯು ಸಾಂಪ್ರದಾಯಿಕ ವಲಯದಲ್ಲಿ ಮಹಿಳೆಯರನ್ನು ಹಿಂದೆ ಕಳೆದ ಮತ್ತು ಎರಡು ಲಿಂಗಗಳ ನಡುವಿನ ಅದಾಯದ ಅಂತರವನ್ನು ಹೆಚ್ಚಿಸಿವೆ" (ಬೋಸ್ತರಪ್ ಇ., 1970, ಪು.148).

ಈ ದೃಷ್ಟಿಕೋನದ ಪ್ರಕಾರ ಮಹಿಳೆ ಮತ್ತು ಪುರುಷರ ನಡುವೆ ಸಮಾನತೆ ತರಲು ಇವುರ ಮಧ್ಯೆ ಸಂಪನ್ಮೂಲ, ಆಸ್ತಿಯನ್ನು ಎಲ್ಲ ಹಂತದಲ್ಲಿ ಮರುಹಂಚಿಕೆ ಮಾಡುವುದು ಮತ್ತು ಮಹಿಳೆಯರ ಪರ ಸಕಾರಾತ್ಮಕ ತಾರತಮ್ಯವನ್ನು ಮಾಡುವುದು. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರು ಉದ್ಯೋಗಾವಕಾಶವನ್ನು ಪಡೆದುಕೊಳ್ಳಲು ಹಾಗೂ ಮಾರುಕಟ್ಟೆಯಲ್ಲಿ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸುವುದು. ಇದು ಮಹಿಳೆಯರ ರಾಜಕೀಯ, ಸಾಮಾಜಿಕ, ಆರ್ಥಿಕ ಸ್ಥಾನಮಾನ, ಸ್ವಾಯತ್ತತೆಯನ್ನು ಗಳಿಸಲು ಶಾಸನಬದ್ಧ ಕ್ರಮದ ಅಗತ್ಯವನ್ನು ತಿಳಿಸುತ್ತದೆ. ಈ ವಿಧಾನದ ಮೂಲಕವೇ ಮಹಿಳೆಯರ ಮಾನವ ಹಕ್ಕುಗಳು ವಿಸ್ತಾರವಾಗಿ ಗುರುತಿಸಲ್ಪಟ್ಟಿವೆ. ಉದಾಹರಣೆಗೆ ವಿಚ್ಛೇದನ ಹಕ್ಕು, ಭೂ ಒಡೆತನ, ಆಸ್ತಿ ಸೂಲ ಹಾಗೂ ಮತದಾನ ಹಕ್ಕುಗಳನ್ನು ಉಲ್ಲೇಖಿಸಬಹುದು.

ಎಲ್ಲ ಮಹಿಳೆಯರಿಗೆ ಅಧಿಕಾರದ ಮರುಹಂಚಿಕೆಯ ಪ್ರಸ್ತಾಪ ಅಂದರೆಯೇ ಸಮಾನತೆಯ ವಿಧಾನವು ಹಲವಾರು ಸಮಸ್ಯೆಗಳನ್ನು ಹಾಗೂ ಸೀಮಿತತೆಯನ್ನು ಎದುರಿಸಿತು. ಇದನ್ನು ಒಂದು ನೀತಿಯಾಗಿ ಪರಿಗಣಿಸಿದ್ದಕ್ಕೆ ಈ ವಿಧಾನವು ಮುಂದಿಟ್ಟಿರುವ ವಿಮರ್ಶೆಯನ್ನು ಗ್ರಹಿಸಲಾಯಿತು.

ಬಡತನ ನಿರ್ಮೂಲನ ದೃಷ್ಟಿಕೋನ

1970ರ ಸಮಾನತೆ ದೃಷ್ಟಿಕೋನ ಕುರಿತ ಅಸಂತುಷ್ಟಿಯು ಬಡತನ ನಿರ್ಮೂಲನ ದೃಷ್ಟಿಕೋನ ಹುಟ್ಟಿಗೆ ಕಾರಣವಾಯಿತು. ಮೋಸರ್ ಈ ದೃಷ್ಟಿಕೋನವು "ಮಹಿಳೆಯರ ಮೇಲೆ ಕೇಂದ್ರೀಕೃತವಾಗಿರದೆ ಮತ್ತು ಬಡತನದ ನಿರ್ಮೂಲನೆಗೆ ಮೂಲ ಕಾರಣವನ್ನು ಹೊಂದಿಲ್ಲ ಬಡತನ ನಿರ್ಮೂಲನೆ ಉದ್ದೇಶಕ್ಕಾಗಿ ಬಡವರಲ್ಲಿ ಕೆಳ ಬಡವ ಅಂದರೆ ಕಡಿಮೆ ಆದಾಯದ ಗುಂಪಿನ ಮಹಿಳೆಯನ್ನು ಗುರುತಿಸಲಾಗಿದೆ ಎಂದರೆ ಅವರನ್ನು ಆರ್ಥಿಕ ಚಲನೆಗಳಲ್ಲಿ ಒಳಗೊಳ್ಳುವುದಾಗಿ ಅವರ ಕುಟುಂಬದ ಎದ ಸದಸ್ಯರ ಮೂಲ ಅಗತ್ಯಗಳನ್ನು ಪೂರೈಸುವುದು ಮಹಿಳೆ ಮತ್ತು ಪುರುಷರ ನಡುವಿನ ಅಸಮಾನತೆಗೆ ಕೆಲಸ ಆರ್ಥಿಕ ಮಾತ್ರ ಕಾರಣವಲ್ಲ ಅವರುಗಳಿಗೆ ಬಡತನದ ಹೊರೆ ಸಂಬಂಧ ಅವರ ಬಡತನ ಕೊಂದಲ ದಾಖಲಿಸಿದ್ದು ಅವರ ಲಿಂಗಾಧಾರಿತ ಸಂಬಂಧಗಳನ್ನು ಬದಲಾಯಿಸಿದ್ದರೆ ಎನ್ನುವುದು" (ಮೋಸರ್ ಕೆ., 1993, ಪು.17). ಈ ವಿಧಾನದ ಪ್ರಮುಖ ಉದ್ದೇಶ ಉದ್ಯೋಗ ಹಾಗೂ ಆದಾಯದ ಹೆಚ್ಚಿನ ಚಟುವಟಿಕೆಗಳ ಮೂಲ ಬಡಮಹಿಳೆಯರ ಉತ್ಪಾದಕತೆಯ ಹೆಚ್ಚಿಸುವುದು ಮತ್ತು ಬಡತನವನ್ನು ಕಡಿಮೆಗೊಳಿಸಿ ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸಿವುದು.

ಇದು ಮಹಿಳೆಯರ ಸ್ಥಾನಮಾನವನ್ನು ಬದಲಿಸಲು ಬಡತನ ನಿರ್ಮೂಲನ ಸಾಮರ್ಥ್ಯವನ್ನು ಬಳಸಲಾಗಿದೆಯೆಂದು ಪ್ರಾಮಾಣಿಕವಾಗಿ ಹೇಳಲಾಗಿದೆ. ಹೀಗಾಗಿ ಈ "ಮಹಿಳೆಯರ ಸಮಸ್ಯೆಗಳನ್ನು ಕಡಿಮೆಯಾದ ಮೂಲ ಅಭಿವೃದ್ಧಿಗೆಯಿಂದ ವಿವರಿಸಲಾಗಿದೆ ಹೊರತು ಸಂಪನ್ಮೂಲಗಳ ಹೊರಹಂಚಿಕೆಯ ಅಸಮಾನತೆಯ ಕುರಿತು ವಿವರಿಸಲಾಗಿಲ್ಲ ಎಂದು ವಿಮರ್ಶಿಸಲಾಗಿದೆ (ಕಬೀರ್ ಎನ್., 1994, ಪು.89). ಇದು "ಎಲ್ಲ ಮಹಿಳೆಯರು ಹೊರಹಾಕಿಸಿ ಕೇವಲ ಬಡಮಹಿಳೆಯರೆಡೆಗೆ ಗಮನ ಹರಿಸುತ್ತ ಅಭಿವೃದ್ಧಿಯ ಪ್ರಯತ್ನದಲ್ಲಿ ಮಹಿಳೆಯರಿಗಾಗಿರುವ ರಾಜಿಯ ಮತ್ತು ನಷ್ಟವನ್ನು ಸೂಚಿಸುತ್ತದೆ ಎನ್ನುವ ದ್ವಂದವನ್ನು ಈ ವಿಧಾನವು ಕೈಬಿಟ್ಟಿದೆ (ವರ್ಸಾಂಡೀಸ್-ಕೆಲ್ಲಿ ಎಮ್., 1991, ಪು. 414–419).

ಈ ದೃಷ್ಟಿಕೋನವು ಮುಖ್ಯವಾಗಿ ಮಹಿಳೆಯರನ್ನೊಳಗೊಂಡ ಹಾಗೂ ಮನೆಯ ಸಮೀಪವೇ ಸ್ಥಾಪಿತವಾದ ಸಣ್ಣ ಪ್ರಮಾಣದ ಆದಾಯ ಉತ್ಪಾದಿಸುವ ಯೋಜನೆಗಳನ್ನು ಕೇಂದ್ರೀಕರಿಸುತ್ತದೆ. ಆದಾಯ ಉತ್ಪಾದನೆ ಯೋಜನೆಯ ಅನುಷ್ಠಾನದಲ್ಲಿ ಮಹಿಳೆಯರ ಸಂತಾನೋತ್ಪತ್ತಿ ಪಾತ್ರವನ್ನು ನಿರ್ಲಕ್ಷಿಸಲಾಗಿದೆ. ಅವರಿಗೆ ಸಾಕಷ್ಟು ವಿರಾಮದ ವೇಳೆ ಇರುತ್ತದೆಂದು ಭಾವಿಸಲಾಗಿದೆ. ಆದರೆ ಆದಾಯ ಉತ್ಪಾದನ ಯೋಜನೆಗಳು ಮಹಿಳೆಯ ಕೆಲಸದ ಅವಧಿಯನ್ನು ಹಾಗೂ ಕೆಲಸದ ಹೊರೆಯನ್ನು ಅಧಿಕಗೊಳಿಸಿವೆ. ಇದು ಮಹಿಳೆಯರ ಸಾಂಪ್ರದಾಯಿಕ ಪಾತ್ರಗಳ ಗ್ರಹಿಕೆಯನ್ನೇ ಹೊಂದಿದ್ದು ಮಹಿಳೆಯ ಸಾಂಪ್ರದಾಯಿಕ ಚಟುವಟಿಕೆಗಳಿಂದಲೇ ಉತ್ಪಾದನೆಯ ಹೆಚ್ಚುವ ಪ್ರಯತ್ನ ನಡೆಸಿದೆಯೇ ಹೊರತು ಅವರನ್ನು ಸೂಕ್ತ ಕೆಲಸಗಳಿಗೆ ಪರಿಚಯಿಸುವ ಪ್ರಯತ್ನ ನಡೆಸಿರುವುದಿಲ್ಲ ಅದರೂ ಈ ಸಣ್ಣ ಪ್ರಮಾಣದ ಈ ಯೋಜನೆಗಳು ಸ್ವ-ಬೆಳವಣಿಗೆಯನ್ನು ಹೆಚ್ಚುವಲ್ಲಿ ಅಲ್ಪಮಟ್ಟಿಗೆ ಹೊಂದಿದ್ದು, ಆರ್ಥಿಕವಾಗಿ ಮಹತ್ವಪೂರ್ಣವಾಗಿವೆ ಕಾರಣ ಬಡತನ ಕಡಿಮೆಗೊಳಿಸಲು ಹಾಗೂ ಮಹಿಳೆಯರ ಜೀವನಾಧಾರ ಭದ್ರತೆಯ ವಿಫಲವಾಗಿದೆ.

ದಕ್ಷತಾ ದೃಷ್ಟಿಕೋನ

ಇದರ ಹೆಸರೇ ಸೂಚಿಸುವಂತೆ ಮೂರನೆಯ ಜಗತ್ತಿನ ಮಹಿಳೆಯ ಆರ್ಥಿಕ ದಕ್ಷತೆ ಹಾಗೂ ಪರಿಣಾಮಕಾರಿಯಾದ ಅಭಿವೃದ್ಧಿ ಪ್ರಕ್ರಿಯೆಯ ಕೊಡುಗೆಯನ್ನೊಳಗೊಳ್ಳುವುದನ್ನು ಪ್ರತಿಪಾದಿಸುತ್ತದೆ. ಆರ್ಥಿಕ ಬೆಳವಣಿಗೆಯ ಮಹಿಳೆಯರ ಜೀವನೋತ್ಪಾದಕ ಸಾಮರ್ಥ್ಯವನ್ನು ಹೆಚ್ಚಿಸುವುದಾಗಿ ದೃಷ್ಟಿಕೋನದ ಗುರಿ. ಅಭಿವೃದ್ಧಿ ಪ್ರಯತ್ನಗಳು ಹೆಚ್ಚುಗೊಳಿಸಲು ಅಭಿವೃದ್ಧಿಯ ಉತ್ಪಾದನೆಯಲ್ಲಿ ಭಾಗವಹಿಸುವಿಕೆಯ ಹೆಚ್ಚಿಸಲಾಗಬೇಕೆಂಬುದು ಈ ದೃಷ್ಟಿಕೋನದ ಗುರಿ. [197]

ಮಧ್ಯಭಾಗದ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯ ಸಂದರ್ಭದಲ್ಲಿ ದಕ್ಷತೆ ವಿಧಾನಕ್ಕೆ ಮಹತ್ವ ನೀಡಲಾಯಿತು ಹಾಗೂ ಮಹಿಳೆಯನ್ನು ಆರ್ಥಿಕ ಕಾರ್ಯಕರ್ತರೆಂದು ಪರಿಗಣಿಸಲಾಯಿತು. 1980ರಲ್ಲಿ ಐಎಂಎಫ್ ಮತ್ತು ವಿಶ್ವಬ್ಯಾಂಕ್ ಮತ್ತು ಎಸ್ಎಪಿ ರಚನೆ ಮಾಡಿದ ಅಭಿವೃದ್ಧಿ ತಿಸ್ಸೈನ್ನಲ್ಲಿಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ದಕ್ಷತೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವುದು ಇದರ ಉದ್ದೇಶಗಳಾಗಿದ್ದವು.

ನವಉದಾರವಾದಿ ಚಿಂತನೆಯನ್ನು ಹೊಂದಿದ ಯೋಜನಾ ಕಾರ್ಯಕರ್ತರು ಈ ದೃಷ್ಟಿಕೋನದ ಯೋಜನೆಗಳಿಗೆ ಜವಾಬ್ದಾರರು. ಇವರು ಆರ್ಥಿಕ ಚಟುವಟಿಕೆಯಲ್ಲಿ ಮಹಿಳೆಯರನ್ನು ಪ್ರಮುಖ ಪಾತ್ರದಾರಿಗಳನ್ನಾಗಿ ಪರಿಗಣಿಸಲಿಲ್ಲ. ಈ ದೃಷ್ಟಿಕೋನವು ಮಹಿಳೆಯರ ಸ್ಥಾನಮಾನವನ್ನು ಪ್ರಾಥಮಿಕವಾಗಿ ಆರ್ಥಿಕ ನೆಲೆಯಲ್ಲಿಯೆ ಪರಿಗಣಿಸಲಾಗಿದೆ ಹೊರತು ಅವರನ್ನು ಸಮಾನತೆಯ ಅಂಶವಾಗಿ ನೋಡಿಲ್ಲ. ಈ ವಿಧಾನದ ಯೋಜನೆಸ್ವಸಹಾಯ ಸಂಘಗಳ ಅಂಶಗಳೆಡೆ ಗಮನಹರಿಸಿದೆ ಮತ್ತು ಮಹಿಳೆಯರು ಸ್ವಸಹಾಯ ಸಂಘದ ಸದಸ್ಯರಾಗಿ ಸಮುದಾಯಕ್ಕೆ ವಿವಿಧ ಸೇವೆಯನ್ನು ಸಲ್ಲಿಸುತ್ತಿರುವುದರ ಕುರಿತು ತಿಳಿಸುತ್ತದೆ.

ಈ ದೃಷ್ಟಿಕೋನದ ಕುರಿತು ಹಲವಾರು ವಿಮರ್ಶೆಗಳು ಬಂದಿವೆ. ಅಭಿವೃದ್ಧಿ ಪ್ರಕ್ರಿಯೆಯ ಯಶಸ್ಸಿಗೆ ಮಹಿಳೆಯರನ್ನು ಒಟ್ಟುಗೂಡಿಸುವುದು ಅವಶ್ಯಕ ಎನ್ನುವ ಊಹೆಯನ್ನು ಪ್ರಶ್ನಿಸಲಾಗಿದೆ. ಇದಕ್ಕೆ ಕಾರಣ ಈ ವಿಧಾನವು ಆರ್ಥಿಕ ಸ್ಥಿತಿ ಹಾಗೂ ಮಹಿಳೆಯರ ಸ್ಥಾನಮಾನವನ್ನು ಅಗತ್ಯವಾಗಿ ಸುಧಾರಿಸುವುದಿಲ್ಲ ಎನ್ನುವ ವಾಸ್ತವ. ಅದಲ್ಲದೇ ಈ ವಿಧಾನವು ಪ್ರತಿಪಾದಿಸಿಯೂ ಅಧಿಕ ಲಿಂಗ ಸಮಾನತೆ ಹಾಗೂ ಎಲ್ಲ ಮಹಿಳೆಯರಿಗೂ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವಿದೆ ಎಂದು ಮಹಿಳೆಯರ ಭಾಗವಹಿಸುವಿಕೆಯನ್ನು ತಪ್ಪಾಗಿ ಅರ್ಥೈಸಲಾಗುತ್ತದೆ. ಮಹಿಳೆಯರ ಜೀವನದ ಉತ್ಪಾದನೆ ಹಾಗೂ ಸಂತಾನೋತ್ಪತ್ತಿಯ ನಡುವಿರುವ ಅಂತರ ಸಂಬಂಧವನ್ನು ನಿರ್ಲಕ್ಷಿಸಿರುವುದೆಂದು ಟೀಕಿಸಲಾಗಿದೆ. ಇದಲ್ಲದೆ ಮಹಿಳಾ ಶ್ರಮದ ಮನರ್ ಚೈತನ್ಯ ಶಕ್ತಿಯ ಮೇಲೆ ಅತಿಯಾದ ಅವಲಂಬನೆ ಹೊಂದಿದೆ. ಅತಿಯಾದ ದೀರ್ಘಕೆಲಸದ ಅವಧಿ ಹಾಗೂ ವೇತನರಹಿತ ಕೆಲಸ. ಜೊತೆಗೆ ಇವರನ್ನು ಮನುಷ್ಯರನ್ನಾಗಿ ಪರಿಗಣಿಸದೇ ಕೇವಲ ಅಭಿವೃದ್ಧಿಗೆ ಅನುಕೂಲ ಮಾಡುವವರು ಎಂದು ತಿಳಿಸುತ್ತದೆ. ಮಹಿಳೆಯರನ್ನು ಇತರೆ ಅಭಿವೃದ್ಧಿ ಉದ್ದೇಶಗಳಿಗಾಗಿ ಪರಿಗಣಿಸಿ ಅವರಿಗೆ ದೊರೆಯುವ ಹಕ್ಕುಗಳನ್ನು ಪರಿಗಣಿಸದೆ ನೋಡುವ ಈ ದೃಷ್ಟಿಕೋನವಿವಾದಕ್ಕೆ ಒಳಗಾಯಿತು.

ಸಬಲೀಕರಣ ದೃಷ್ಟಿಕೋನ

ಸಬಲೀಕರಣ ವಿಧಾನವು ಕೇವಲ ಇತ್ತೀಚಿನ ವಿಧಾನವಾಗಿದ್ದು, ಇದನ್ನು 1980ರಲ್ಲಿ ಸ್ತ್ರೀವಾದಿಗಳು ಹಾಗೂ ದಕ್ಷಿಣದ ಪ್ರಗತಿಪರರು ಪ್ರಾರಂಭಿಸಿದರು. ಆದ್ದರಿಂದ ಈ ಸಿದ್ಧಾಂತದಲ್ಲಿ ದಕ್ಷಿಣದ ವಾಸ್ತವತೆಗಳು ಅಡಗಿವೆ. ಈ ವಿಧಾನವು ಲಿಂಗ ಹಾಗೂ ಅಭಿವೃದ್ಧಿಯ ಆಯಾಮದಿಂದ ರಚಿಸಲಾಗಿದೆ. ಇದು 'ಕೆಳಗಿನಿಂದ ಮೇಲೆತ್ತು', 'ಬಾಟಮ್ ಅಪ್' ಮತ್ತು ಪಾತ್ರಗಳ ಆಧಾರಿತ ತಂತ್ರವಾಗಿದೆ. ಮಹಿಳೆಯರು ಅಸಮಾತೆಯನ್ನು ಭಿನ್ನವಾಗಿ ಅನುಭವಿಸುತ್ತಾರೆ ಎಂಬುದನ್ನು ಈ ದೃಷ್ಟಿಕೋನ ಗುರುತಿಸಿತು. ಇದು ಅಂದರೆ ವರ್ಗ, ವರ್ಣ, ಜನಾಂಗ, ಜಾತಿ, ವಯಸ್ಸು, ಮಸಾಪಕುಶಾಹಿ, ಸಮಮಸಾಹಕುಶಾಹಿಯನ್ನು ಅವಲಂಬಿಸಿದೆ. ಮಹಿಳೆಯ ಮೇಲೆ ನಡೆಯುವ ಹಿಂಸೆಯು ವಿವಿಧ ಹಂತದಲ್ಲಿ, ವಿವಿಧ ಬಗೆಯಲ್ಲಿ, ವಿವಿಧ ಸಂದರ್ಭಗಳಲ್ಲಿ ನಿರ್ಧಾರವಾಗುತ್ತದೆ. ಮಹಿಳೆ ಮತ್ತು ಪುರುಷರಲ್ಲಿನ ಅಸಮಾನತೆಯು ಕೇವಲ ಅವರ ನಡುವಿನ ಸಂಬಂಧದಿಂದ ಮಾತ್ರ ಬರುವುದಿಲ್ಲ, ಸಮಾಜದಲ್ಲಿನ ಇತರ ಸಂಬಂಧ ಮತ್ತು ರಚನೆಗಳಿಂದ ಬರುತ್ತದೆ ಎಂದು ಭಾವಿಸುತ್ತದೆ.

ಮಹಿಳೆಯರನ್ನು ನಿಯಂತ್ರಣಗೊಳಿಸುವ ಹಾಗೂ ಪುರುಷರಿಗೆ ಒಲವು ತೋರುವ ಸಾಮಾಜಿಕ ಸಂಸ್ಥೆಗಳು ಹಾಗೂ ಸಂಬಂಧಗಳು ಮಹಿಳೆಯರಿಗೆ ಕಾಳಜಿ ತೋರುವುದಕ್ಕಿಂತಲೂ ಪ್ರತ್ಯೇಕ ಗುಂಪಾಗಿ ಪರಿಗಣಿಸಿವೆ. ಆದ್ದರಿಂದ ಲಿಂಗಸಂಬಂಧಗಳು ಮತ್ತು ಅಧಿಕಾರ, ಮಹಿಳಾ ಸಬಲೀಕರಣದ ಮಹತ್ವ, ಪ್ರತ್ಯೇಕತೆ ಮತ್ತು ತಮ್ಮ ಸ್ವ ಜೀವನವನ್ನು ಸ್ವಕ್ರಮ ಮಾರ್ಗದಲ್ಲಿ ನಿಯಂತ್ರಣದಲ್ಲಿ ತೆಗೆದುಕೊಳ್ಳುವ ಕುರಿತು ಈ ವಿಧಾನವು ಗಮನಹರಿಸುತ್ತದೆ. ಸಬಲೀಕರಣದ ಮೂಲಕ ಮಹಿಳೆಯರು ಪುರುಷರೊಂದಿಗೆ ಹೆಚ್ಚಿನ ಸಮಾನತೆ ಹೊಂದುತ್ತಾರೆಂದು ಈ ವಿಧಾನವು ಊಹಿಸಿದೆ. ಆದ್ದರಿಂದ ಮಹಿಳಾ ಸಬಲೀಕರಣದ ಮಾರ್ಗವೆಂದರೆ ರಾಜಕೀಯದಲ್ಲಿ ತೊಡಗುವಿಕೆ, ಜಾಗೃತಿಗೊಳ್ಳುವಿಕೆ ಹಾಗೂ ಶಿಕ್ಷಣ ಮತ್ತು ಆದಾಯ ಗಳಿಕೆಯ ಅವಕಾಶಗಳು. ಇದರ ಉದ್ದೇಶ ನೀತಿ ಪ್ರಕ್ರಿಯೆ ಹಾಗೂ ಅಭಿವೃದ್ಧಿ ತಂತ್ರವನ್ನು ಪರಿವರ್ತನೆಗೊಳಿಸುವುದಾಗಿದೆ.

ಮಹಿಳೆ ಮತ್ತು ಅಭಿವೃದ್ಧಿ ಪ್ರಯತ್ನದಲ್ಲಿ ತೊಡಗಿರುವ ಇತರ ನೀತಿ ಮತ್ತು ವಿಧಾನಗಳನ್ನು ಸಬಲೀಕರಣ ವಿಧಾನವು ಕಾನೂನಾತ್ಮಕವಾಗಿಸಲು ಯತ್ನಿಸಿದೆ ಎಂದು ಹಲವು ವಿಮರ್ಶಕರ ನಿಲುವು.ಜ್ಯಾಕ್ಸನ್ "ಮಹಿಳೆಯರು ಜನಸಂಖ್ಯಾ ನಿಯಂತ್ರಣ, ಸಮರ್ಥನೀಯ ಅಭಿವೃದ್ಧಿ, ಬಡತನ ನಿರ್ಮೂಲನೆಯ ಸಾಧನವೆಂದು" (ಜಾಕ್ಸನ್ ಸಿ.ಮತ್ತು ಪಿಯರ್ಸನ್ ಆರ್., 1998, ಪು.157) ಸಬಲೀಕರಣ ವಿಧಾನವನ್ನು ವಿಮರ್ಶಿಸಿದ. ಇದಲ್ಲದೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳಾ ಸಬಲೀಕರಣದ ಯೋಚನೆಯು ಪುರುಷರು ತಮ್ಮ ನಿಯಂತ್ರಣವನ್ನು ಕಳೆದುಕೊಳ್ಳುತ್ತಾರೇನೋ ಎನ್ನುವ ಭಯ ಇರುವುದು ವ್ಯಕ್ತವಾಗುತ್ತಿದೆ ಎನ್ನಬಹುದು.

ಪರಾಮರ್ಶನ ಗ್ರಂಥಗಳು

- ಕಬೀರ್ ಎನ್. (1994) : ಜಂಡರ್-ಅವೇರ್ ಪಾಲಿಸಿ ಪ್ಲಾನಿಂಗ್: ಎ ಸೋಶಿಯಲ್ ರಿಲೇಶನ್ಸ್ ಪರ್ಸ್ಪೆಕ್ಟಿವ್ಸ್, ಇನ್ ಎಂ. ಮ್ಯಾಕ್ ಡೊನಾಲ್ಡ್(ಇಡಿ) ಜಂಡರ್ ಪ್ಲಾನಿಂಗ್ ಇನ್ ಡೆವಲ್ಪ್ಮೆಂಟ್ ಏಜೆನ್ಸಿ: ಆಕ್ಸ್ಫಾಮ್: ಆಕ್ಸ್ಫರ್ಡ್, ಪು.80-97
- ಫೋರೈಶಿ ಪಿ.ಮತ್ತು ಬೆಲಾಂಜರ್ ಸಿ., (1996) : ವುಮನ್, ವರ್ಕ್ ಆ್ಯಂಡ್ ಜಂಡರ್ ರಿಲೇಷನ್ಸ್ ಇನ್ ಡೆವಲಪಿಂಗ್ ಕಂಟ್ರಿಸ್: ಎ ಗ್ಲೋಬಲ್ ಪರ್ಸ್ಪೆಕ್ಟಿವ್: ಗ್ರೀನ್ವುಡ್ ಪ್ರೆಸ್, ಕನೆಕ್ಟಿಕಟ್, ಪು.92.
- ಜಾಕ್ಸನ್ ಸಿ. ಆ್ಯಂಡ್ ಪಿಯರ್ಸನ್ ಆರ್, (1998) : ಫೆಮಿನಿಸ್ಟ್ ವಿಜನ್ ಆಫ್ ಡೆವಲಪ್ಮೆಂಟ್: ಜಂಡರ್ ಅನಾಲಿಸಿಸ್ ಆ್ಯಂಡ್ ಪಾಲಿಸಿ: ರೂಟ್ಲೆಡ್ಜ್, ನ್ಯೂಯಾರ್ಕ್, ಪು. 33-157.
- ದೇಸಾಯಿ ವಿ. ಆ್ಯಂಡ್ ಪಾಟರ್, ಆರ್(ಇಡಿ), (2002) : ದಿ ಕಂಪ್ಯಾನಿಯನ್ ಟು ಡೆವಲಪ್ಮೆಂಟ್ ಸ್ಟಡೀಸ್: ಆಕ್ಸ್ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಯಾರ್ಕ್, ಪು. 126-174.
- ಫರ್ನಾಂಡೀಸ್-ಕೆಲ್ಲಿ ಎಮ್., (1991) : ದ ಸೆಕ್ಸ್ಯುವಲ್ ಡಿವಿಜನ್ ಆಫ್ ಲೇಬರ್, ಡೆವಲಪ್ಮೆಂಟ್, ಆ್ಯಂಡ್ ವುಮನ್ ಸ್ಟೇಟ್ಸ್: ಕರೆಂಟ್ ಅಂಥ್ರೊಪಾಲಜಿ 22(4), ಪು. 414-419.
- ಬುವಿನಿಕ್ ಎಮ್., ಲೈಸೆಟ್ ಎ.ಆ್ಯಂಡ್ ವಿಲಿಯಂ ಪಿ., (1983) : ವುಮೆನ್ ಆ್ಯಂಡ್ ಪಾವರ್ಟಿ ಇನ್ ದ ಥರ್ಡ್ ವರ್ಲ್ಡ್: ಬ್ರಾಂ ಯೂನಿವರ್ಸಿಟಿ ಪ್ರೆಸ್, ಬಾಲ್ಟಿಮೋರ್ ಪು. 137-158.
- ಬೋಸ್ತರಪ್ ಇ., (1970) : ವುಮನ್ಸ್ ರೋಲ್ ಇನ್ ಎಕನಾಮಿಕ್ ಡೆವಲಪ್ಮೆಂಟ್: ಜಾರ್ಜ್ ಅಲೆನ್ ಉರ್ವಿನ್, ಲಂಡನ್, ಪು.138-148.
- ಮೋಸರ್ ಸಿ., (1993) : ಜಂಡರ್ ಪ್ಲಾನಿಂಗ್ ಆ್ಯಂಡ್ ಡೆವಲಪ್ಮೆಂಟ್: ಥಿಯರಿ, ಪ್ರಾಕ್ಟಿಸ್ ಆ್ಯಂಡ್ ಟ್ರೈನಿಂಗ್: ರೂಟ್ಲೆಡ್ಜ್, ಲಂಡನ್, ಪು.178-213. ■■

Scanned with OKEN Scanner

—35

3.4.5

ISSN 2250-1711

॥ सत्यं ज्ञानमनन्तम् ॥

JOURNAL OF VEDA SAMSKRITA ACADEMY

जर्नल् आफ् वेद संस्कृत अकाडेमि

Recognised in the UGC-CARE List

A NATIONAL PEER-REVIEWED RESEARCH JOURNAL

विश्वविद्यालय-अनुदान-आयोगेन केर सूच्यां मानिता

मूल्याङ्किता राष्ट्रियसंशोधनपत्रिका

VOLUME: XXI

January to June – 2023

Editor in Chief :

DR. GOPALKRISHNA HEGDE

[Jyotishashastra-Dharmashastra Vidwan]

VEDA SAMSKRITA ACADEMY (Regd.)

Formerly : Veda Samskrita Prasarinee Sabha (R.)

Regd. No. : DR : SOR : 108 : 2003-04, Dated : 30-10-2003

Registered under Societies Registration Act, of Karnataka-1960

Registered office address :

1347, Kalkod Road, HEGDE-581330, Kumta, Uttarakannada, Karnataka, India

E-mail ID : **vedasmkac@gmail.com**

Website : **www.vedasamskritaacademy.org**

Scanned with OKEN Scanner

Title of the Journal : **Journal of Veda Samskrita Academy**
Recognised in the UGC-CARE List
A National Peer-Reviewed Research Journal

जर्नल् आफ् वेद संस्कृत अकाडेमि
विश्वविद्यालय-अनुदान-आयोगेन केर सूच्यां मानिता
मूल्याङ्किता राष्ट्रियसंशोधनपत्रिका

ISSN : **2250-1711**

Editor & Publisher : **Dr. Gopalkrishna Hegde**
gopalkrishnh9@gmail.com
9741847399
Director,
Veda Samskrita Academy (Regd.)
Kalkod Road, HEGDE- 581330
Kumta, Uttara Kannada, Karnataka
web site : www.vedasamskritaacademy.org
E-mail : vedasmkac@gmail.com

All rights are Reserved with the Publisher

" All opinion / views expressed in the research papers are of the authors only, no way they are ascribed to the Academy"

Languages : Samskrita, Kannada, English, Hindi
Imprint : Volume XXI, January to June – 2023
Paper : 70gsm (B2B) and Art paper – 300gsm
Size of the Journal : A4
Number of Pages : 518 + 14 + 3 (colour page)
Number of Copies : 200
D. T. P. : Chanda Graphics, Kumta
Art works : Girish R. Bhat, Digital World, Kumta
Printing & Binding : Shiva Offset Printers, Kumta
Shri Krishna Mudranalaya, Hegde
Price : **1000/- Rs.**

Scanned with OKEN Scanner

CONTENTS

विषयसूची

	सम्पादकीयम्	IX
	PROLOGUE	X
	प्राक् कथन	XI
	[illegible]	XII
	EDITORIAL ADVISORY BOARD	XIII
	संस्कृतविभागः	
1.	आधुनिककाव्येषु नारी Dr. Narayanaswamy M. S., Bengaluru, Karnataka- 8317428412	1-3
2.	काश्मीरशैवदर्शनसम्मतपदार्थानाम् आलोचनात्मकमध्ययनम् Keshavkumar Pandey, Prayagraj, Uttarapradesh- 9472169049	4-6
3.	काश्मीरशैवदर्शनस्य समालोचनात्मकमध्ययनम् Krishnakumar Pandey, Prayagraj, Uttarapradesh- 9472169049	7-9
4.	आधुनिकयुगे संस्कारेषु उपनयनसंस्कारस्य वैज्ञानिकमहत्वम् Rajkumar Jha, Research Scholar, Varanasi, Uttarapradesh- 7903843700	10-12
5.	पुराणस्य पञ्चलक्षणविचारः Prasenjit Malo, Research Scholar, Bhagalpur, Bihar- 9800953250	13-17
6.	फलव्यापारयोरेधातुः : एका समीक्षा Dr. Kamala Prasad Gautam, Assistant Professor, Guwahiti, Assam- 8133813967	18-21
7.	सर्वनामसंज्ञाविधाने निषेधसूत्राणि : एका समीक्षा Sajal Mondal, Research Scholar, Patliputra University, Patna, Bihar- 9641751513	22-25
8.	स्फोटविचारः Dr. Ranjita Goswami, Associate Professor., Guwahati, Assam- 7399110778	26-29
9.	दर्शनप्रसिद्धात्मतत्त्वस्योत्सरूपेण ऋक्संहिताविमर्शः Dr. Kalyan Panda, Assist. Professor, Cooch Behar, West Bengal - 7003358017	30-34
10.	समासेन रघुवंशस्य महाकाव्यत्वसमीक्षणम् Debajyoti Manna, Research Scholar, Howarh, West Bengal- 6291039183	35-37
11.	शब्दपदवाच्यत्वेन साधु-असाधुशब्दयोः भेदः महत्वञ्च Shibpada Mondal, Research Scholar, Purri, Odisha- 9062182935	38-42
12.	मञ्जूषाकोशाध्यायविमर्शः V. R. Hariprasad, Research Scholar, K.S.U., Bengaluru, Karnataka- 9964144251	43-46
13.	भगवद्गीतोद्धृतगताद्वैतविशिष्टाद्वैताचिन्त्यभेदाभेदभाष्यसमीक्षणम् Dr. Tridib Roy Mondal, Asst. Prof., Diamond Harbour, West Bengal- 9875459288	47-50
14.	वैदिकवर्णव्यवस्था : एका समीक्षा Suchana Saren, Research Scholar, Purulia, West Bengal- 8967896100	51-53
15.	पाणिनीयतन्त्रे भूतपूर्वगतिमाश्रित्य केषाञ्चन सिद्धान्तानामालोचनम् Suman Das, Research Scholar, Belur Math, West Bengal- 96095406765	54-57
16.	सुसंस्कृतजीवनप्राप्तये आयुर्वेदः – एकं सामान्यमध्ययनम् Manas Mondal, Research Scholar, Bhagalpur, Bihar- 9564886260	58-61
17.	यतीन्द्रविमलचतुर्वीणयोः यतीन्द्रविमल-भारतविवेकनाटकयोः प्रपञ्चितं धर्मतत्त्वम् Dr. Santu Singa, Assistant Professor, Bankura, West Bengal- 8017018043	62-65

Scanned with OKEN Scanner

6.	ಹದಿಹರೆಯದ ಹುಡುಗಿಯ ಆತ್ಮಹತ್ಯೆ ಡಾ. ಮೈತ್ರಿ ಭಟ್, ಪುತ್ತೂರು 9449793584 ಮತ್ತು ಡಾ. ಚಂದನಾ ಜೈನ್- 9449728668	434-437
7.	ಮಲಕ ಜೇಡ : ಜನನ ಜನ್ಮಕಥನ ಡಾ. ಬಾಯಿ ಸ್ವಾಮಿ, ಬೆಂಗಳೂರು, ಕರ್ನಾಟಕ- 9482948320	438-442
8.	ಹೀರಕೈನ ಮಕ ಮತ್ತು ಜಾನಪದ ವಿಮರ್ಶೆಗಳು ಡಾ. ಮೆಸ್. ಎಸ್. ವಿರೋಷಾಕ್ಷಪ್ಪ, ಹೊಳೆಹೊನ್ನೂರು, ಕರ್ನಾಟಕ- 9482754792	443-446
10.	ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಧಾರವಾಡ ಪ್ರದೇಶದ ಕನ್ನಡದ ಸ್ಥಿತಿ-ಗತಿ ಡಾ. ವಿಠ್ಠಲ ಕೋಲಿ, ಸಹಾಯಕ ಪ್ರಾಧ್ಯಾಪಕರು, ಗದಗ, ಕರ್ನಾಟಕ- 9164645055	447-450
11.	ವಚಾಸಕಾಲೀನ ಸೊಕ್ಕಮ್ಮರ : ಜಂಪದೇವಿಕಾಯ ಲಿಂಗಾಯತರ ಕನ್ನಡದ ಹೋರಾಟ ಡಾ. ನಿಂಗಮ್ಮ ಗದಗ, ಸಹಾಯಕ ಪ್ರಾಧ್ಯಾಪಕರು, ಗದಗ, ಕರ್ನಾಟಕ- 9632566328	451-453
12.	ಪ್ರೇಮ ವಿಷಾದ ಕವಿತೆಗಳಲ್ಲಿ ಸಾಮಾಜಿಕ ಪ್ರಜ್ಞೆ ಕಿರಣ ವಡ್ಡೀಮನೆ, ಸಂಶೋಧನಾ ವಿದ್ಯಾರ್ಥಿ, ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ, ಕರ್ನಾಟಕ	454-456
13.	ಏಲ್ಲಾಲಾ ಸಂಸ್ಕೃತಿಗೆ ಶಿವಾರಪ್ಪನವರ ಕೊಡುಗೆ ಡಾ. ಸರ್ವೇಶ ಬಿ. ಎಸ್., ಮುಖ್ಯಶಿಕ್ಷಕರು, ಕನ್ನಡ ವಿಭಾಗ, ಬೆಂಗಳೂರು, ಕರ್ನಾಟಕ- 9738482935	457-460
14.	ನಾಟ್ಯಶಾಸ್ತ್ರ : ಅಭಿನಯ ಪದ್ಧತಿ ಕುರಿತು ವಿಚಾರ ಡಾ. ರವಿಶಂಕರ ಎ. ಕೆ., ಕೆ. ನಾರಾಯಣಪುರ, ಬೆಂಗಳೂರು, ಕರ್ನಾಟಕ- 9663433403	461-464
15.	ಜನಪದರು : ಸಾವಿರದ ನಂಬಿಕೆಗಳು ಸ್ಮೊ. ಚಂದ್ರಶೇಖರ್. ಎನ್., ಸಹಾಯಕ ಪ್ರಾಧ್ಯಾಪಕರು, ಬೆಂಗಳೂರು, ಕರ್ನಾಟಕ- 9916465100	465-469
16.	ಸಂಸ್ಕೃತ ಮಹಾಕಾವ್ಯಗಳ ಉದ್ಭವ ಮತ್ತು ವಿಕಾಸ ಡಾ.ಸೈಯದ್ ಮುಬೀನ್, ಸಹಾಯಕ ಪ್ರಾಧ್ಯಾಪಕ, ಬೆಂಗಳೂರು, ಕರ್ನಾಟಕ.- 9972925077	470-472
17.	ಅಂಬಿಕಾತನಯದತ್ತರ 'ಕನ್ನಡ ಮೇಘದೂತ': ಒಲವಿನ ಚಿಂತನ ಅನಿತ ಕೆ. ವಿ., ಸಹಾಯಕ ಪ್ರಾಧ್ಯಾಪಕರು, ಬೆಂಗಳೂರು, ಕರ್ನಾಟಕ.-	473-476
18.	ಸಿನಿಮಾ ಯಾನದಲ್ಲಿ ಸಿರಿಯಾಳ ಸಂಕಥನ ('ಭಕ್ತ ಸಿರಿಯಾಳ'ಸಿನಿಮಾ ಕುರಿತ ವಿಶ್ಲೇಷಣೆ) ಡಾ. ಎಂ. ಭೈರಪ್ಪ, ಕನ್ನಡ ಸಹಾಯಕ ಪ್ರಾಧ್ಯಾಪಕ, ಬೆಂಗಳೂರು, ಕರ್ನಾಟಕ, 9741436723	477-481
19.	ಚಾಣಕ್ಯನ ನೀತಿಸೂತ್ರ : ಆಡಳಿತ ನೀತಿ ಸಂಹಿತೆಯ ಅಧ್ಯಯನ ಮತ್ತು ಅದರ ಪ್ರಸ್ತುತತೆ ಡಾ. ದೀಕ್ಷಿತ್ ಕುಮಾರ್ ಎಂ., ಸಹಾಯಕ ಪ್ರಾಧ್ಯಾಪಕ, ಬೆಂಗಳೂರು, ಕರ್ನಾಟಕ, 9740360317	482-484
20.	ಕಾರಂತ ಕಥನ ಮತ್ತು ಮಹಿಳಾ ಜಗತ್ತು ಡಾ. ಭಾಗಿ ಮರವಂತೆ, ಸಹ ಪ್ರಾಧ್ಯಾಪಕರು, ಶಿವಮೊಗ್ಗ, 9448560118	485-488
21.	ಕುಮಾರ ಸಂಭವ ಮತ್ತು ಗಿರಿಜಾ ಕಲ್ಯಾಣ : ಒಂದು ಅವಲೋಕನ ಡಾ. ಗೋವಿಂದರಾಯ ಎಂ, ಕುಣಿಗಲ್	489-493
22,	ಮಹಾಭಾರತದಲ್ಲಿ ವಿದುರನೀತಿ ಡಾ. ರೇಖಾದೇವಿ ಹೆಚ್. ಎಸ್., ಸಹಾಯಕ ಪ್ರಾಧ್ಯಾಪಕರು, ಕ. ಸಂ. ವಿ., ಬೆಂಗಳೂರು- 9591071457	494-496
23.	ವೈಶ್ವಿ ವಿಜ್ಞಾನ ಡಾ. ಶ್ರೀಧರ ಎನ್. ಭಟ್ಟ, ಸಹಪ್ರಾಧ್ಯಾಪಕರು, ಎಸ್. ಡಿ. ಎಮ್., ಕಾಲೇಜು, ಉಜಿರೆ, 9448335652	497-501
24.	'ಆಚಾರ'ಕ್ಕೆ ಸಂಬಂಧಿಸಿದ ವಿಚಾರಗಳ ವಿಶ್ಲೇಷಣೆ ಡಾ. ಶ್ರೀಧರ ಟಿ. ಡಿ., ಪ್ರಾಧ್ಯಾಪಕರು, ಒಂದಿ ಅಧ್ಯಯನವಿಭಾಗ, ಬೆಂಗಳೂರು, ಕರ್ನಾಟಕ,	502-506
25.	ಗೀತಾ ನಾಗಭೂಷಣ ಅವರ ಬದುಕು ಕಾದಂಬರಿಯ ಲೋಕ ಡಾ. ಮಲ್ಲಯ್ಯ ಸಚಿಹೂರು, ಅಧ್ಯಾಪಕರು, ಸಂಡೂರು, ಬಳ್ಳಾರಿ, 9481046934	507-510
26.	ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸಂಕಥನಗಳು ಡಾ. ಪಾರ್ವತಮ್ಮ ಬಿ., ಅತಿಥಿ ಉಪನ್ಯಾಸಕರು, ರಾಜ್ಯಶಾಸ್ತ್ರ ವಿಭಾಗ, ಬಳ್ಳಾರಿ, ಕರ್ನಾಟಕ- 8861676806	511-514
27.	ಬಲಸುಟಪ್ರಗಳಲ್ಲಿ ಮಹಿಳಾ ಅಭಿವ್ಯಕ್ತಿ ಮಾದರಿಗಳು ಡಾ. ಯಶ್ವಿಸ್ವಾಮಿ, ಈ, ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಶ್ವವಿದ್ಯಾಲಯ, ಹಂಪಿ- 9481715062	515-518

****

Volume XXI : January to June – 2023, ISSN 2250-1711
Journal of Veda Samskrita Academy [Recognised in the UGC-CARE List]

ಚಲನಚಿತ್ರಗಳಲ್ಲಿ ಮಹಿಳಾ ಅಭಿವ್ಯಕ್ತಿ ಮಾದರಿಗಳು

ಡಾ. ಯತ್ರಿಸ್ವಾಮಿ ಈ. (ಹಂಪಿ, ಕರ್ನಾಟಕ)

ಸಿನಿಮಾ ಅತ್ಯಂತ ಜನಪ್ರಿಯ ಮಾಧ್ಯಮ ಮಾತ್ರವಷ್ಟೇ ಅಲ್ಲದೆ ಪುರುಷ ಪ್ರಧಾನ ಕಾರ್ಯಕ್ಷೇತ್ರವೂ ಆಗಿದೆ. ಚಲನಚಿತ್ರಗಳಲ್ಲಿ ಅಭಿನಯ ಕ್ಷೇತ್ರವೊಂದನ್ನು ಬಿಟ್ಟರೆ ಉಳಿದೆಲ್ಲ ಕ್ಷೇತ್ರಗಳಲ್ಲಿ ಮಹಿಳೆಯರ ಪಾತ್ರ ಕಂಡುಬರುವುದೆ ಇಲ್ಲ. ಸಿನಿಮಾದ ಕತೆ, ಚಿತ್ರಕತೆ, ಸಂಭಾಷಣೆ, ಸಾಹಿತ್ಯ ಸಿದ್ಧತೆ, ಸಂಗೀತ, ನಿರ್ಮಾಣ, ನಿರ್ದೇಶನ, ಛಾಯಾಗ್ರಹಣ, ಸಂಕಲನ ಮೊದಲಾದ ಎಲ್ಲ ಕ್ಷೇತ್ರಗಳಲ್ಲೂ ಪುರುಷರೆ ಆವರಿಸಿಕೊಂಡಿದ್ದಾರೆ. ಚಲನಚಿತ್ರದ ವಸ್ತು, ಆದರ ನಿರೂಪಣಾ ಶೈಲಿಯಲ್ಲೂ ಪುರುಷ ಪ್ರಧಾನ ಧೋರಣೆ ಕಂಡುಬರುತ್ತದೆ. ಅಲ್ಲಿ ಕಾಣಿಸಿಕೊಳ್ಳುವ ಮಹಿಳೆ ಪುರುಷರ ದೃಷ್ಟಿಕೋನ ಹೊಂದಿದವಳಾಗಿರುತ್ತಾಳೆ. ಚಲನಚಿತ್ರ ನಾಯಕಿ ಪ್ರಧಾನವಾಗಿರಲೀ ನಾಯಕ ಪ್ರಧಾನವಾಗಿರಲೀ ಮಹಿಳೆಯರ ಪಾತ್ರ ದುರ್ಬಲವೂ ದೌರ್ಜನ್ಯಕ್ಕೊಳಗಾದದ್ದೂ ಆಗಿದ್ದು ಅಶ್ಲೀಲವಾಗಿ ಚಿತ್ರಿತವಾಗಿರುತ್ತದೆ. ಚಿತ್ರಿತ ಹಿಂಸೆ ಮತ್ತು ಅತ್ಯಾಚಾರ ಕ್ರಿಯೆಗಳು ನೋಡುಗರನ್ನು ಪ್ರೇರೇಪಿಸುತ್ತವೆ. ಅವು ಹಿಂಸಾರತಿಯನ್ನು ಉದ್ದೀಪಿಸುತ್ತವೆ ಮತ್ತು ವಿಕೃತ ಮನೋಭಾವವನ್ನು ಸ್ಥಿರಗೊಳಿಸುತ್ತವೆ.

ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ ಯಶಸ್ಸು ಸಾಧಿಸುವ ಬಂಡವಾಳದ ಸರಕಾಗಿರುವ ಅಶ್ಲೀಲತೆ ಬಹುರೂಪಿ ನೆಲೆಯಲ್ಲಿದೆ. ಅದರ ಕಲ್ಪನೆ ಒಂದು ಸಮುದಾಯದಿಂದ ಇನ್ನೊಂದು ಸಮುದಾಯಕ್ಕೆ, ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಭಿನ್ನವಾಗಿದೆ. ಅಶ್ಲೀಲತೆ ಕೇವಲ ಲೈಂಗಿಕ ಪ್ರಚೋದನೆಯನ್ನುಂಟು ಮಾಡುವುದಷ್ಟೇ ಅಲ್ಲದೆ ಮಹಿಳೆಯರ ಆತ್ಮ ಗೌರವ, ಘನತೆ ಕುಗ್ಗಿಸುವ ಕ್ರಮವೂ ಆಗಿದೆ. ಒಂಗಿದ್ದರೂ ಮಹಿಳೆಯನ್ನು ಪುರುಷದಾಸಿಯೆಂಬಂತೆ ಅಪಮಾನದ ರೀತಿಯಲ್ಲಿ ನಿರೂಪಿಸುವಂತೆಯೂ ಇಲ್ಲ ದಾಸ್ಯವನ್ನೆ ಮಹಿಳೆಯರ ಆದರ್ಶವೆಂದು ವೈಭವೀಕರಿಸುವಂತೆಯೂ ಇಲ್ಲ. ಸಿನಿಮಾಗಳಲ್ಲಿ ಯಥೇಚ್ಛವಾಗಿ ಕಂಡುಬರುವ ಅಶ್ಲೀಲ ದೃಶ್ಯ ಮತ್ತು ವೇಶ್ಯಾವಾಟಿಕೆ ದೃಶ್ಯವಲ್ಲದೆ ಪುರುಷಾಧಿಪತ್ಯ ಪ್ರತಿರೋಧಿಸುವ ಮಗಳು/ಹೆಂಡತಿಯನ್ನು ಮನೆಹೊರಗೆ ದಬ್ಬುವ ದೃಶ್ಯಗಳೆಲ್ಲವೂ ಅತ್ಯಾಚಾರಕ್ಕೆ ಪೂರಕವಾಗಿವೆ. ಸಿನಿಮಾದಲ್ಲಿ ಅತ್ಯಾಚಾರ ಹಲವು ಮಾದರಿಯಲ್ಲಿ ಅಭಿವ್ಯಕ್ತಗೊಂಡಿದ್ದು ಸಾಮಾಜಿಕ ಗ್ರಹಿಕೆಯನ್ನು ಪ್ರತಿಬಿಂಬಿಸುತ್ತದೆ.

ಅತ್ಯಾಚಾರ ಭಾರತೀಯ ಸಮಾಜವನ್ನು ಕಾಡುವ ರೋಗ ಲಕ್ಷಣವಾಗಿದೆ. ಅತ್ಯಾಚಾರಕ್ಕೊಳಗಾಗುವ ಮಹಿಳೆ ಸಾಮಾನ್ಯವಾಗಿ ಅಪರಿಚಿತಳಾಗಿದ್ದು ಹದಿಪರೆಯದವಳೂ ಮಧ್ಯವಯಸ್ಕಳೂ ಆಗಿರುತ್ತಾಳೆ. ಕೆಲವು ಅಂಕಿ ಅಂಶಗಳ ಪ್ರಕಾರ ಹೆಚ್ಚಿನ ಸಂದರ್ಭಗಳಲ್ಲಿ ಅತ್ಯಾಚಾರಿಗಳು ಅತ್ಯಾಚಾರಕ್ಕೊಳಗಾದ ಮಹಿಳೆಗೆ ಪರಿಚಿತರಾಗಿಯೇ ಇರುತ್ತಾರೆ ಮತ್ತು ಅತ್ಯಾಚಾರಕ್ಕೊಳಪಡುವ ಹೆಣ್ಣು ಹದಿಹರೆಯದವಳೇ ಆಗಿರುತ್ತಾಳೆ. ಕಳವು, ದರೋಡೆ, ಕೊಲೆ ಮೊದಲಾದ ಪ್ರಕರಣಗಳಂತೆ ಅತ್ಯಾಚಾರಕ್ಕೊಳಗಾದವರು ಕೂಡ ಹಿಂಜರಿಕೆ ಸ್ವಭಾವದವರಾಗಿದ್ದು ದೃಶ್ಯ ಮಾಧ್ಯಮಗಳು ಅವರನ್ನೇ ಹೆಚ್ಚು ಕೇಂದ್ರೀಕರಿಸುತ್ತವೆ. ಸಾಮಾನ್ಯವಾಗಿ ಅವರನ್ನೇ ಸಾಮಾಜಿಕ ನಿಂದನೆಗೂ ಅಪಮಾನಕ್ಕೂ ಗುರಿಪಡಿಸಲಾಗುತ್ತದೆಯೇ ವಿನಹಃ ಅಪರಾಧಿಯ ಮೇಲಲ್ಲವಾದ್ದರಿಂದ ಬಹಳಷ್ಟು ಅತ್ಯಾಚಾರಗಳು ವರದಿಯಾಗದೆ ಉಳಿಯುತ್ತವೆ. ತಮ್ಮ ಮೇಲೆ ನಡೆದ ಅತ್ಯಾಚಾರ ಬಹಿರಂಗಪಡಿಸುವ ಮಹಿಳೆಯರಿಗೆ ಸಾಮಾನ್ಯವಾಗಿ ಸಾಮಾಜಿಕ ಭದ್ರತೆಯೊದಗದೆ ಅವರು ನಿರಾಶೆಗೊಳಗಾಗುತ್ತಾರೆ. ಅಪರಾಧಿಯನ್ನು ಬಂಧಿಸುವ, ಅವರ ಮೇಲೆ ಕಾನೂನು ಕ್ರಮ ಜರುಗಿಸುವ ಹಾಗೂ ಅಪರಾಧ ಪ್ರಮಾಣ ನಿರ್ಣಯ ಮಾಡುವ ಪ್ರಸಂಗಗಳು ಅತಿ ಕಡಿಮೆ ಇದ್ದು ಹೆಚ್ಚಿನ ಅತ್ಯಾಚಾರಿಗಳು ಅಪರಾಧದ ನಂತರವೂ ಸುರಕ್ಷಿತವಾಗಿ ಪಾರಾಗುತ್ತಾರೆ.

ಅತ್ಯಾಚಾರ ಪ್ರಸಂಗಗಳಲ್ಲಿನ ಸಾಂಸ್ಕೃತಿಕ ಧೋರಣೆಗಳು, ಕಟ್ಟಳೆಗಳು, ಆಚರಣೆಗಳು ಮಹಿಳೆಯರಿಗೆ ಹೆಚ್ಚು ತೊಂದರೆ ಉಂಟುಮಾಡುತ್ತವೆ. ಅವು ಮಹಿಳೆಯರ ವಿರುದ್ಧ ಲೈಂಗಿಕ ಹಿಂಸೆ ಪ್ರಚೋದಿಸುವ ಅಥವಾ ಕ್ಷಮಿಸುವ ಗುಣ ಬೋಧಿಸುತ್ತವೆ ಮತ್ತು ನಮ್ಮದು ಅತ್ಯಾಚಾರ ಪೂರಕ ಸಂಸ್ಕೃತಿ ಎಂದು ವಾದಿಸುತ್ತವೆ. ಅತ್ಯಾಚಾರ ಕುರಿತು ಮಾಧ್ಯಮಗಳು ಮಡಿಸುವ ಮೌನ ಹೆಚ್ಚು ಅಘಾತಕಾರಿಯಾಗಿದ್ದು ಬಹುಪಾಲು ಭಾರತೀಯ ಮಹಿಳೆಯರಲ್ಲಿ ಅತ್ಯಾಚಾರದ ಬಗೆಗೆ ಹಾಗೂ ಅವರ ವೈಯಕ್ತಿಕ ಸುರಕ್ಷತೆಯ ಬಗೆಗೆ ಪ್ರಸ್ತುತ ಕಾಲದಲ್ಲೂ ಸೂಕ್ಷ್ಮ ಮನೋಭಾವ ಇಲ್ಲದಿರುವುದು ಕಂಡುಬರುತ್ತದೆ.

ಚಲನಚಿತ್ರಗಳಲ್ಲಿ ಮಹಿಳೆಯರ ಅಂಗಾಂಗ ತೋರಿಸುವ ದೃಶ್ಯಗಳು ಪ್ರೇಕ್ಷಕರಲ್ಲಿ ಬಲಾತ್ಕಾರ ಪ್ರಚೋದಿಸುವಂಥ ಪ್ರಸ್ತುತಿಗಳನ್ನು ಸಂಕೇತಿಸುತ್ತವೆ. ಅತ್ಯಾಚಾರಕ್ಕೆ ಬಲಿಯಾದ ದೇವದ ಮೇಲೆ ಕ್ಯಾಮರಾ ಕಣ್ಣು ಸುಳಿದಾಡಿ ಅವಳ ಬಟ್ಟೆಗಳು ಅತ್ಯಾಚಾರಿಯಿಂದ ಹರಿದುಹೋದಂತೆ ತೋರಿಸಲಾಗುತ್ತದೆ. ಇದು ಅತ್ಯಾಚಾರದ ಸಮರ್ಪಕ ದೃಶ್ಯವಾಗಿರುತ್ತದೆ. ಸಾಮಾನ್ಯವಾಗಿ ಆಕೆ ನಾಯಕನ ಸೋದರಿಯಾಗಿರುವ ಕಾರಣಕ್ಕಾಗಿ ಅತ್ಯಾಚಾರಕ್ಕೊಳಗಾಗಿರುತ್ತಾಳೆ. ನಾಯಕನು ಬಲಾತ್ಕಾರ ಮಾಡುವವನ ಮೇಲೆ ಹೇಗೆ ಸೇಡು ತೀರಿಸಿಕೊಳ್ಳುತ್ತಾನೆಂಬುದು ಸಿನಿಮಾದ ಮುಂದುವರೆದ ಮುಖ್ಯ ಭಾಗವಾಗಿರುತ್ತದೆ. ಹೊಡೆದಾಟದ ದೃಶ್ಯದಿಂದಲೆ ಅತ್ಯಾಚಾರ ಮನಸ್ಥಿತಿ ಬದಲಿಸುವ ಪ್ರಯತ್ನ ಮಾಡಲಾಗುವುದೆಂದು ನಾವು ಸಿನೆಮಾ ವಿಶ್ಲೇಷಿಸುತ್ತೇವೆ. ಆಹುತಿಯಾದವಳ ಆಘಾತವನ್ನು ಚಿತ್ರೀಕರಿಸಲಾಗುತ್ತದೆ, ಮಾತ್ರವಲ್ಲದೆ ಅತ್ಯಾಚಾರಗಳಲ್ಲಿ ವಿಭಿನ್ನ ರೀತಿಯ ಪ್ರಚೋದನೆಗಳು ಹಾಗೂ ವಿಭಿನ್ನ ರೀತಿಯ ಅತ್ಯಾಚಾರಗಳು ಸಾಧ್ಯವಾಗುವುದನ್ನು ಅಭಿವ್ಯಕ್ತಿಸಲಾಗುತ್ತದೆ. ಮಹಿಳೆಯರ ಮೇಲೆ ನಡೆಯುವ ಸಾರ್ವಜನಿಕ ಅತ್ಯಾಚಾರಗಳು ಪರೋಕ್ಷವಾಗಿ ನ್ಯಾಯ ಪದ್ಧತಿಯಲ್ಲಿರುವ ಕೊರತೆಯನ್ನು ಸೂಚಿಸುತ್ತವೆ.

ಇದರ ವಿಸ್ತೃತ ಚರ್ಚೆಗೆ 'ರಾಮಸ್', 'ಬವಂಡರ್', 'ಜಖ್ಮಿ ಪಿರತ್' ಚಲನಚಿತ್ರಗಳನ್ನು ನೋಡಬಹುದಾಗಿದೆ. 'ರಾಮಸ್'ನಲ್ಲಿ ಮದುವೆ ಸಂಬಂಧದಲ್ಲಿ ಅತ್ಯಾಚಾರ ಚಿತ್ರಿತವಾಗಿದ್ದರೆ, 'ಬವಂಡರ್'ನಲ್ಲಿ ಜಾತಿ (ಮತ) ಹೋರಾಟದಲ್ಲಿ ಅತ್ಯಾಚಾರವೊಂದು ಆಯುಧವಾಗಿ ಉಪಯೋಗವಾಗುವ ಮತ್ತು ಸಾಮಾಜಿಕ ಪದ್ಧತಿ ವಿರುದ್ಧ ದನಿಯೆತ್ತುವ ಹೆಣ್ಣಿನ ಗರ್ವಭಂಗ ಮಾಡುವ ಚಿತ್ರಣವಿದೆ. 'ಜಖ್ಮಿ ಪಿರತ್'ದಲ್ಲಿ ಪುರುಷನ ಸಂತೋಷಕ್ಕಾಗಿ ಮಹಿಳೆಯ ದೇಹ ಉಪಯೋಗಿಸಿಕೊಳ್ಳುವ ಬಗೆ; ಸಾಮೂಹಿಕ ಅತ್ಯಾಚಾರ ಹೇಗೆ ಧೈರ್ಯಶಾಲಿ ಪೋಲೀಸ್ ಆಫೀಸರ್‌ನ ಧೃತಿಗೆಡಿಸುತ್ತದೆಂದು ಚಿತ್ರಿಸುತ್ತದೆ.

ಈ ಎಲ್ಲ ಸಿನಿಮಾಗಳಲ್ಲಿ ಅತ್ಯಾಚಾರ ನಂತರದ ಆಘಾತಕಾರಿ ಪರಿಣಾಮಗಳನ್ನು ವೈಭವೀಕರಿಸಲು ಪ್ರಯತ್ನಿಸಲಾಗಿದೆ. ಅತ್ಯಾಚಾರದೊಂದಿಗಿನ ಮನೋವೈಜ್ಞಾನಿಕ ವ್ಯಾಕುಲತೆ, ಲಜ್ಜಾಮನೋಭಾವ ಮತ್ತು ಮೈಲಿಗೆಯ ಮನೋಭಾವ – ಇವು ಬಲಿಷ್ಠವಾಗಿ ಚಿತ್ರಿತಗೊಂಡಿವೆ. ಜೊತೆಗೆ ಅತ್ಯಾಚಾರ ಕೇವಲ ಲೈಂಗಿಕ ಅಪರಾಧವೆಂಬ ಪುರಾಣಕಾಲದ ನಂಬಿಕೆಯನ್ನು ದೃಢೀಕರಿಸುವ ಪ್ರಯತ್ನ ಮಾಡಲಾಗಿದೆ. ಅತ್ಯಾಚಾರ ಕೇವಲ ಲೈಂಗಿಕ ಬಯಕೆಯೆಂದು ಚಿತ್ರಿಸುವ ಮೂಲಕ ಈ ಚಿತ್ರಗಳ ನಿರ್ದೇಶಕರು ಮಹಿಳೆಯರ ಅಂಗಾಂಗಗಳನ್ನು ಅನಗತ್ಯವಾಗಿ ಸಾರ್ವಜನಿಕ ಪ್ರದರ್ಶನ ಮಾಡುವುದೂ ಒಳಗೊಂಡು ಅತ್ಯಾಚಾರವೆಂಬ ಅಪರಾಧ ಕ್ರಿಯೆಯನ್ನು ಪ್ರಧಾನ–

Scanned with OKEN Scanner

ಗೊಳಿಸುವ ಸಂಕೀರ್ಣ ಪ್ರೇರಣೆಯಲ್ಲಿ ತೊಡಗಿರುತ್ತಾರೆ. ಈ ಮೂಲಕ ಸಿನಿಮಾಗಳು ಪ್ರೇಕ್ಷಕರ ಮನೋಭಾವನೆಯನ್ನು ಸಮಸ್ಯೆಗೀಡುಮಾಡುತ್ತವೆ. ಪ್ರೇಕ್ಷಕರು ಪರದೆಯ ಮೇಲೆ ಅತ್ಯಾಚಾರ ಎಸಗುವ ಪಶುಪವೃತ್ತಿ ದೃಶ್ಯಗಳನ್ನು ನೋಡಿದಾಗ ತಮ್ಮನ್ನು ಶಪ್ತಿತಸ್ಥರ ಸ್ಥಾನದಲ್ಲಿ ಅಥವಾ ಕೆಟ್ಟಕಾರ್ಯದಲ್ಲಿ ಭಾಗಿಯಾದಂತೆ ಭಾವಿಸುತ್ತಾರೆ ಮತ್ತು ಒಂದು ಮಟ್ಟದಲ್ಲಿ ಲೈಂಗಿಕ ಉದ್ರೇಕಕ್ಕೂ ಒಳಗಾಗಿರುತ್ತಾರೆ. 'ಜಖ್ಮಿ ಔರತ್' ಸಿನಿಮಾದ ಯಶಸ್ವಿನಲ್ಲಿ ಈ ಅಂಶವೂ ಕಾರಣವಾಗಿದೆ ಮತ್ತು ನಟಿ ಡಿಂಪಲ್ ವಹಿಸಿದ ಪಾತ್ರದ ಮೇಲಾಗುವ ಅತ್ಯಾಚಾರ ಇಡೀ ಸಿನಿಮಾದಲ್ಲಿ ಅತ್ಯಂತ ಬೇಡಿಕೆಯ ಕ್ಲಿಪಿಂಗ್ ಆಗಿ ಯು-ಟೂಬ್‌ನಲ್ಲಿ ಕಾಣಿಸಿಕೊಂಡಿದೆ.

ಜಖ್ಮಿ ಔರತ್

ಸಾಮೂಹಿಕ ಅತ್ಯಾಚಾರವನ್ನು ಕಥಾವಸ್ತುವಾಗುಳ್ಳ ಈ ಚಿತ್ರ ಅತ್ಯಾಚಾರಕ್ಕೊಳಗಾದ ಮಹಿಳೆಯನ್ನು ಯಾವ ರೀತಿಯಲ್ಲಿ ಅಳಿಸಿಹಾಕಬಹುದು ಹಾಗೂ ಅವಳ ಸೊಕ್ಕು ಮುರಿಯಬಹುದು ಎಂಬುದನ್ನು ಕಾಣಿಸುತ್ತದೆ. ಅತ್ಯಾಚಾರ ಮತ್ತು ಶೋಷಣೆ ಕುರಿತ ಸಾಲುಗಳನ್ನು ಚಿತ್ರದ ಆರಂಭದಲ್ಲಿ ತೋರಿಸಲಾಗಿದೆ. ಧೈರ್ಯಶಾಲಿ ಮಹಿಳಾ ಪೋಲೀಸ್ ಅಧಿಕಾರಿಯಾದ ಇನ್ಸ್‌ಪೆಕ್ಟರ್ ಕಿರಣ್‌ದತ್‌ಳ ಯೋಗ್ಯತೆ ಹಾಗೂ ಶಕ್ತಿ ಎಂತಹದು ಎಂಬುದನ್ನು ಸಿನಿಮಾದ ಆರಂಭಿಕ ದೃಶ್ಯಗಳಲ್ಲಿ ಪದೇ ಪದೇ ತೋರಿಸಿದೆ.

ಮಹಿಳಾ ಪೋಲೀಸ್ ಅಧಿಕಾರಿ ಅತ್ಯಾಚಾರಿಯೊಬ್ಬನನ್ನು ಬಂಧಿಸಿ ಕೋರ್ಟಿಗೆ ಹಾಜರುಪಡಿಸುತ್ತಾಳೆ. ಕೆಲವೇ ದಿನಗಳಲ್ಲಿ ನಡೆಯಲಿರುವ ತನ್ನ ಮದುವೆ ರದ್ದಾಗುವ ಹೆದರಿಕೆ ಇದ್ದರೂ ಅತ್ಯಾಚಾರಕ್ಕೆ ಬಲಿಯಾದ ಹೆಣ್ಣು ಸಾಕ್ಷ್ಯ ಹೇಳಲು ಒಪ್ಪುತ್ತಾಳೆ. ಕಾನೂನು ನಿರೂಪಣೆ ಅತ್ಯಾಚಾರಿಗೆ ಅನುಕೂಲಕರವಾಗಿದ್ದು, ಅತ್ಯಾಚಾರ ಸಾಬೀತು ಪಡಿಸಲು ಸಾಕ್ಷಿಗಳೇ ಇಲ್ಲದಿರುವುದು ಅತ್ಯಾಚಾರಕ್ಕೊಳಗಾದಳ ಅನಾಥ ಸ್ಥಿತಿಯನ್ನು ಬಿಂಬಿಸುತ್ತದೆ. ಪೋಲೀಸ್ ಅಧಿಕಾರಿ ಕಿರಣ್‌ದತ್‌ಳ ಸ್ವಂತ ಹೇಳಿಕೆಯೂ ನಿರಾಧಾರವೆಂದು ಸಲೀಸಾಗಿ ತಳ್ಳಿಹಾಕಲಾಗುತ್ತದೆ. ಸಾಕ್ಷ್ಯಾಧಾರದ ಕೊರತೆಯ ಲಾಭ ಪಡೆಯುವ ಅತ್ಯಾಚಾರಿ ತಾನು ಅಪರಾಧ ನಡೆದ ಸ್ಥಳದಲ್ಲಿ ಇರಲಿಲ್ಲವೆಂದು ಯುಕ್ತಿ ಪ್ರದರ್ಶನ ಮಾಡುತ್ತಾನೆಂದು ಚಿತ್ರಿತವಾಗಿದೆ.

ಪೋಲೀಸ್ ಅಧಿಕಾರಿ ಕಿರಣ್‌ದತ್ ಅಸಹಾಯಕಳಾದರೆ, ಅತ್ಯಾಚಾರಕ್ಕೆ ಬಲಿಯಾದವಳಿಗೆ ಆತ್ಮಹತ್ಯೆ ಮಾಡಿಕೊಳ್ಳುವುದೊಂದು ಹೊರತುಪಡಿಸಿ ಬೇರೆ ದಾರಿಯೇ ಇಲ್ಲದಂತಾಗುತ್ತದೆ. ಕಿರಣ್‌ದತ್ ಸ್ವತಃ ಪೋಲೀಸ್ ಅಧಿಕಾರಿಯಾಗಿದ್ದರೂ ಸಾಮೂಹಿಕ ಅತ್ಯಾಚಾರಕ್ಕೊಳಗಾಗುತ್ತಾಳೆ. ಬಲಾತ್ಕಾರದ ಬಲಿಪಶುವಾದ ಹೆಣ್ಣೊಬ್ಬಳು ತನ್ನ ಬಾಳಿನಲ್ಲಿ ಯಾವ ರೀತಿಯ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆಂದು ಪೋಲೀಸ್ ಅಧಿಕಾರಿಯೆ ಸ್ವತಹ ಅನುಭವಿಸುತ್ತಾಳೆ. ಇದರಿಂದ ಹೆಣ್ಣೊಬ್ಬಳಿಗಿರುವ ತನ್ನ ಸ್ವಂತಿಕೆ ಮೇಲಿನ ನಂಬಿಕೆಯೆ ಅವಳಿಗೆ ಹೊರಟು ಹೋಗುತ್ತದೆ. ಅತ್ಯಾಚಾರಕ್ಕೆ ಬಲಿಯಾದವರು ಎದುರಿಸುವ ಮನೋ ಆಘಾತ ಎಂಥದು ಎಂಬುದನ್ನು ಈ ಸಿನಿಮಾದಲ್ಲಿ ಡಿಂಪಲ್ ಕಪಾಡಿಯ ತಮ್ಮ ಮನೋಜ್ಞ ನಟನೆಯ ಮೂಲಕ ಮೂಡಿಸಿದ್ದಾರೆ.

ಅತ್ಯಾಚಾರದ ಆಘಾತಕ್ಕೊಳಗಾಗಿ ನೋವುಂಡವರು ಮತ್ತು ತಮ್ಮ ಪ್ರಿಯರಾದವರು ಅತ್ಯಾಚಾರಕ್ಕೊಳಗಾಗಿ ಘಾಸಿಗೊಂಡವರು ಸಿನಿಮಾದ ಕೊನೆಯಲ್ಲಿ ಒಟ್ಟುಗೂಡಿ ಅತ್ಯಾಚಾರಿಗೆ ನಪುಂಸಕನಾಗುವ ಶಿಕ್ಷೆ ನೀಡಲು ಮುಂದಾಗುತ್ತಾರೆ. ಪೋಲೀಸ್ ಅಧಿಕಾರಿ ಕಿರಣ್ ಅತ್ಯಾಚಾರಿಗಳನ್ನು ಗುರುತಿಸಲು ತನ್ನ ಕಛೇರಿ ದಾಖಲೆಗಳ ಸಹಾಯ ಪಡೆಯುತ್ತಾಳೆ. ತನ್ನ ಸ್ವಂತ ಮಗಳು ಅತ್ಯಾಚಾರಕ್ಕೊಳಗಾಗಿ ಕೊಲೆಯಾಗಿದ್ದರಿಂದ ಬಹು ನೊಂದಿದ್ದ ಡಾಕ್ಟರ್ ಆಶಾ ಮೆಹತಾ ಪುರುಷರ ವೀರ್ಯಾಣು ಹರಣದ ಶಸ್ತ್ರಚಿಕಿತ್ಸೆ ಮಾಡುತ್ತಾಳೆ. ಸ್ತ್ರೀಯರಿಗೆ ನೀಡಿದ ಹಿಂಸೆಯ ನೋವನ್ನು ತಾವೇ ಅನುಭವಿಸುವಂತಿದು ಮಾಡುತ್ತದೆ. ವೀರ್ಯಾಣು ಹರಣವೊಂದು ವರದಿ ಮಾಡಲಾರದ ಅಪರಾಧವಾಗಿದೆ. ಅದು ಸಾರ್ವಜನಿಕ ಅವಮಾನ್ಯದೆ ಉಂಟುಮಾಡುವ ಕ್ರಿಯೆಯಾಗಿದ್ದು ಅತ್ಯಾಚಾರದಷ್ಟೇ ಕೆಟ್ಟ ಪರಿಣಾಮ ಬೀರುತ್ತದೆ. ಡಾಕ್ಟರು ತನ್ನ ಮಗಳ ಮೇಲೆ ಅತ್ಯಾಚಾರ ಮಾಡಿದ ವ್ಯಕ್ತಿಯನ್ನು ಸಿನಿಮಾದ ಕೊನೆಯಲ್ಲಿ ಕೊಂದು ತಾನೂ ಸಾಯುತ್ತಾಳೆ. ಡಾಕ್ಟರು ಪೋಲೀಸ್ ಅಧಿಕಾರಿ ಕಿರಣ್ ದತ್ತಳ ವಿರುದ್ಧ ಹುಡುಗರ ಗುಂಪನ್ನು ಎತ್ತಿಕಟ್ಟಿ ಅತ್ಯಾಚಾರದಂಥ ಪಾಪಕಾರ್ಯ ಎಸಗಲು ಪ್ರೇರೇಪಿಸಿದ್ದಳೆಂದು ಸಲಹೆ ನೀಡಿದ್ದ ವಕೀಲನೇ ಆ ಕೇಸನ್ನು ಅತಿ ಚಾತುರ್ಯದಿಂದ ನಿರ್ವಹಿಸುತ್ತಾನೆ ಮತ್ತು ಆ ವಕೀಲನೇ ಡಾಕ್ಟರ್‌ಳ ಸ್ವಂತ ಮಗಳ ಮೇಲೆ ಅತ್ಯಾಚಾರ ಎಸಗಿದ ಅಪರಾಧ ವಿರುದ್ಧ ತನ್ನನ್ನು ರಕ್ಷಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾನೆ. ಆ ವಕೀಲ ಅಪರಾಧಿಗಳಿಂದ ರಕ್ಷಣೆ ಪಡೆಯಲು ಪೋಲೀಸ್ ಅಧಿಕಾರಿ ಕಿರಣ್‌ದತ್ತಳ ಮೊರೆ ಹೋಗಬೇಕಾದ ವೈರುಧ್ಯ ಈ ಚಿತ್ರದಲ್ಲಿ ಕಂಡುಬರುತ್ತದೆ. ಪುರುಷರು ಸ್ವಹಿತಾಸಕ್ತಿ ಸಾಧಿಸಲು ಅನುಕೂಲವಾದಿಯೂ ಅವಕಾಶವಾದಿಯೂ ಆಗಿದ್ದು ಯಾವುದೇ ನೈತಿಕತೆ, ನೀತಿ-ನಿಲುವು ಇಲ್ಲದಂತೆ ತನ್ನನ್ನುಳಿಸಿಕೊಳ್ಳುವ ಸಂದರ್ಭದಲ್ಲಿ ಯಾರದೇ ಕಾಲಿಗೆ ಬೀಳಲು ಸಿದ್ಧರಿರುವಂತೆ ಯಾವುದೇ ವ್ಯಕ್ತಿಯ ಬಲಿ ಪಡೆಯಲು ಹಿಂಜರಿಯದಂತೆ ಚಿತ್ರಿಸಲಾಗಿದೆ.

ಬವಂಡರ್

'ಮರಳು ಬಿರುಗಾಳಿ' ಸತ್ಯಕಥೆ ಆಧಾರಿತ ಚಿತ್ರದಲ್ಲಿ ಸಾಮೂಹಿಕ ಅತ್ಯಾಚಾರದ ಆಘಾತಕಾರಿ ಘಟನೆ ಹಾಗೂ ಚಾತಿಪದ್ಧತಿ ಆವೃತ ಉಳಿಗಮಾನ್ಯ ವ್ಯವಸ್ಥೆಯ ಅಂಧಶ್ರದ್ಧೆ ಚಿತ್ರಕಥೆಯಾಗಿದೆ. ಬಾಲ್ಯವಿವಾಹ ಪದ್ಧತಿ ಪ್ರಚಲಿತವಿರುವ ರಾಜಸ್ಥಾನದ ಗ್ರಾಮೀಣ ಪ್ರದೇಶದ ಮರಳುಗಾಡಿನಲ್ಲಿ ಈ ಕಥೆ ನಡೆಯುತ್ತೆಂದು ಹೇಳಲಾಗಿದೆ.

ಇದು ರಾಜಸ್ಥಾನ ಸರಕಾರದ ಮಹಿಳಾ ಅಭಿವೃದ್ಧಿ ಯೋಜನೆಯಲ್ಲಿ ಕೆಲಸ ಮಾಡುವ ಗ್ರಾಮೀಣ ಪ್ರದೇಶದ ಕೆಳಜಾತಿ ಹೆಣ್ಣು ಮಗಳು 'ಸಾಥಿನ್'ಳ ಸುತ್ತ ಹೆಣೆದಿರುವ ಕತೆಯಾಗಿದೆ. ಬಾಲ್ಯವಿವಾಹ, ಪ್ರಚಲಿತ ಸಾಮಾಜಿಕ ಪದ್ಧತಿ ವಿರುದ್ಧ ಅವಳು ಮಾತನಾಡಿದ ಸಮಯದಲ್ಲಿ ಅದೇ ಹಳ್ಳಿಯ ಮೇಲ್ಜಾತಿಯ ಪುರುಷರು ಆಕೆ ಮೇಲೆ ಸಾಮೂಹಿಕ ಅತ್ಯಾಚಾರ ಮಾಡುತ್ತಾರೆ. ತನ್ನ ಮೇಲೆ ಅತ್ಯಾಚಾರ ಮಾಡಿದ ಅಧಿಕಾರಮತ್ತ ಪುರುಷರ ವಿರುದ್ಧ ಆಕೆ ದೂರು ದಾಖಲಿಸಲು ಬಯಸುತ್ತಾಳೆ. ಅದಕ್ಕಾಗಿ ಆಕೆ ಮೆಡಿಕಲ್ ಟೆಸ್ಟ್ ಮಾಡಿಸಿಕೊಳ್ಳಬೇಕಾಗುತ್ತದೆ. ಮಹಿಳಾ ಪೋಲೀಸ್ ಠಾಣೆಯಲ್ಲಿ ಮಹಿಳಾ ಪೋಲೀಸರು ಆಕೆಯನ್ನು ಅವಹೇಳನ ಮಾಡುವ ದೃಶ್ಯವಿದೆ. ಆಕೆ ನಿರಂತರ ಅವಮಾನ ಎದುರಿಸುತ್ತಾಳೆ. ಲೈಂಗಿಕತೆ, ಉಳಿಗಮಾನ್ಯ ಮತ್ತು ರಾಜಕೀಯ 'ಸಮಯ ಸಾಧಕ'ತನ, ಭ್ರಷ್ಟ ನ್ಯಾಯಾಂಗ ಪದ್ಧತಿಯಡಿ ಆಕೆ ಮತ್ತೊಮ್ಮೆ ಅತ್ಯಾಚಾರಕ್ಕೊಳಗಾಗುತ್ತಾಳೆ. ನಂತರ ಸುದ್ದಿ ಮಾಧ್ಯಮಗಳು ಹುಟ್ಟುಹಾಕಿದ ಬಿರುಗಾಳಿಯಲ್ಲಿ ಸಿಲುಕಿಕೊಂಡ ಆಕೆ ಕೇಂದ್ರ ಸರಕಾರದ ಆಡಳಿತ ಪಕ್ಷ ಹಾಗೂ ವಿರೋಧಿ ಪಕ್ಷಗಳ ನಡುವಿನ ರಾಜಕೀಯ ಚದುರಂಗದಾಟದಲ್ಲಿ ದಾಳವಾಗುತ್ತಾಳೆ. ಆಕೆಯನ್ನು ಒಂದು ಪಕ್ಷ ಹೆಚ್ಚಿನ ಮಾನ್ಯತೆಯಿಂದ ನಡೆಸಿಕೊಂಡರೆ, ಇನ್ನೊಂದು ಪಕ್ಷ ಅನೈತಿಕ ನೆಲೆಯಲ್ಲಿ ಅವಳ ಮೇಲೆ ದಾಳಿ ಮಾಡುತ್ತದೆ. ಈ ಎಲ್ಲ ವೈರುಧ್ಯಗಳ ನಡುವೆ ಆಕೆಯೊಬ್ಬ ಮಹಿಳೆಯಾಗಿದ್ದಳು, ಅತ್ಯಾಚಾರಕ್ಕೆ ಬಲಿಯಾದ ಯುವತಿಯಾಗಿದ್ದಳು ಎಂಬುದು ಗೌಣವಾಗುತ್ತದೆ. ಆಘಾತಕರ ಈ ಸತ್ಯಕಥೆ ರಾಜಸ್ಥಾನದ ಸಮಕಾಲೀನ ಮರಳು ದಿನ್ನೆಗಳ ನಡುವೆ ಚಿತ್ರಿಸಿದ ಅಂತಿಮ ರೂಪ ಸಮಸ್ಯೆಯಿಂದ ದೂರವಾಗಿಲ್ಲವೆಂದು ನಂದಿತಾ ದಾಸ್ ವಿಸ್ತಾರವಾಗಿ ವಿವರಿಸಿದ್ದಾರೆ.

Scanned with OKEN Scanner

"ಜನಮೋಹನ ಮುಂದ್ರಾರ ಪ್ರಕಾರ 'ಬವಂಡರ್'ನಲ್ಲಿ ಒಳ್ಳೆಯ ನಂಬಿಕೆಯಿಂದ ಅತ್ಯಾಚಾರಕ್ಕೆ ಬಲಿಯಾದವಳ ಪಾತ್ರ ನಟಿಸಲು ಒಪ್ಪಿಕೊಂಡಿದ್ದನಾದರೂ ನನಗೆ ಬಹಳ ನಿರಾಶೆಯಾಯಿತು ಇಲ್ಲವೆ ಆಘಾತವಾಯಿತು. ಪರದೆ ಮೇಲೆ ಅತ್ಯಾಚಾರದ ದೃಶ್ಯಗಳನ್ನು ನೋಡಿದಾಗ ನನಗೆವು ಅನಗತ್ಯ ಭಾವೋದ್ರೇಕದಿಂದ ಕೂಡಿವೆ ಎನಿಸಿತು. ನನ್ನ ದೇಹಕ್ಕಿಂತ ನನ್ನ ತೊಡೆಗಳನ್ನು ಹೆಚ್ಚು ತೋರಿಸಲಾಗಿತ್ತು. ಆ ದೃಶ್ಯಗಳನ್ನು ನೋಡಿದಾಗ ನನಗೆ "ನೀವು ಆಕ್ಷೇಪಣೆ ವ್ಯಕ್ತಪಡಿಸಿದ ದೃಶ್ಯಗಳನ್ನು ತೆಗೆದು ಹಾಕುತ್ತೇವೆ' ಎಂದು ಹೇಳಲಾಗಿತ್ತು, ಆದರೆ ಹಾಗೆ ಮಾಡಲಿಲ್ಲ."

"ನಮ್ಮ ಸಿನಿಮಾ ನಿರ್ಮಾಪಕರು ಇಂಥ ಭಾವೋದ್ರೇಕದ ಅತ್ಯಾಚಾರದ ದೃಶ್ಯಗಳೊಡನೆ ಆಟವಾಡಬಾರದು ಎಂದು ನನಗನಿಸುತ್ತದೆ. ಚಿತ್ರದಲ್ಲಿ ಸಾಮೂಹಿಕ ಅತ್ಯಾಚಾರದ ದೃಶ್ಯಗಳನ್ನು ಚಿತ್ರೀಕರಿಸುವುದು ಎಂಥ ಕಷ್ಟದ್ದಾಗಿತ್ತು ಎನ್ನುವುದು ನನಗೆ ಗೊತ್ತಿದೆ. ನಾನು ಕೇವಲ ಆ ನಾತ್ರವನ್ನು ಮಾಡುತ್ತಿರುವ ಒಬ್ಬ ನಟಿ ಹಾಗೂ ಆ ದೃಶ್ಯದಲ್ಲಿ ಅತ್ಯಾಚಾರಿಗಳಾಗಿ ನಟಿಸುವವರು ನನ್ನಂತೆಯೇ ಕೇವಲ ನಟರು ಎಂದು ನನಗೆ ನಾನೇ ಅನೇಕ ಬಾರಿ ಹೇಳಿಕೊಳ್ಳುತ್ತಿದ್ದೆ. ಆದರೂ ಸೆಟ್ ಮೇಲಿದ್ದ ಯಾವುದೇ ಗಂಡಸು ಮತ್ತೊಬ್ಬನೊಡನೆ ಅಶ್ಲೀಲವಾಗಿ ಕುಹಕನಗೆ ನಕ್ಕಾಗ ಅಥವಾ ಮೊಣಕೈಯಿಂದ ತಿವಿದಾಗ ಅಥವಾ ಸಿನಿಮಾ ಸಿಬ್ಬಂದಿ ಸದಸ್ಯರಲ್ಲಿ ಕೆಲವರು ಸಮೀಪದಿಂದ ನೋಡಲು ಯತ್ನಿಸಿದಾಗ ಅಥವಾ ನನ್ನನ್ನು ಯಾರಾದರೂ ಒಂದು ರೀತಿಯ ವಿಕಾರ ಆನಂದ ನಡೆಯುವಂತೆ ನೋಡಿದಾಗ ನಾನು ಕಸಿವಿಸಿ ಪಡುತ್ತಿದ್ದೆ, ವಿಲವಿಲ ಒದ್ದಾಡುತ್ತಿದ್ದೆ..."

ಅತ್ಯಾಚಾರವನ್ನು ವೈಭವೀಕರಿಸಿ ಭಾವೋದ್ರೇಕದ ಮಟ್ಟಕ್ಕೊಯ್ಯುವಂತೆ ಚಿತ್ರೀಕರಿಸುವುದು ಅಪಾಯ ಸೂಚಕವಾಗಿದೆ. 'ಡ್ಯಾಂಡಿಚ್ ಕ್ವೀನ್' ಚಿತ್ರದಲ್ಲೂ ಇಂಥದೇ ಅಯಾಮದ ಅಪಾದನೆಯಿದೆ. ಅದರಲ್ಲಿ ಫೂಲನ್‌ದೇವಿಯ ಜೀವನವೂ ಅತ್ಯಾಚಾರ ಹಾಗೂ ಪ್ರತೀಕಾರದ ಕಥೆಯಾಗಿ ಚಿತ್ರಿಸಲಾಗಿದೆ. ಚಿತ್ರದಲ್ಲಿ ಫೂಲನ್‌ದೇವಿಯನ್ನು ಪೋಲಿಸರು ಹಾಗೂ ಮೇಲ್ಜಾತಿಯ ಠಾಕೂರರು ಅತ್ಯಾಚಾರ ಮಾಡುತ್ತಾರೆ. ಅವಳ ಜೀವನದ ವೈಶಿಷ್ಟ್ಯವೇ ಅತ್ಯಾಚಾರವೆನ್ನುವ ಹಾಗೆ ಚಿತ್ರಿಸಲಾಗಿದೆ. ಈ ಚಿತ್ರ ಪತ್ರಿಕಾ ಮಾಧ್ಯಮದಿಂದ ಗಮನಾರ್ಹ ಬೆಂಬಲ ಪಡೆಯುತಲ್ಲದೆ ಸಾಕಷ್ಟು ಯಶಸ್ಸೂ ಗಳಿಸಿತು. ಅಲ್ಲಿ ನಗ್ನತೆ ಮತ್ತು ಲೈಂಗಿಕ ಹಿಂಸೆಯ ಸೂತ್ರ ಮುಖ್ಯವಾಗಿರುವಂತೆ ಚಿತ್ರಿಸಲಾಗಿತ್ತು.

ಇಲ್ಲಿ ವಿವರಿಸಿದ ಎಲ್ಲ ಚಿತ್ರಗಳು ಅತ್ಯಾಚಾರದಿಂದ ಮಹಿಳೆಯರನ್ನು ರಕ್ಷಿಸುವ, ಅತ್ಯಾಚಾರಿಗಳನ್ನು ಅಪರಾಧಿಗಳೆಂದು ನಿರ್ಣಯಿಸುವ ಕಾನೂನು ಹಾಗೂ ಪೋಲೀಸು ತಂತ್ರಗಳ ಪ್ರಭಾವದ ಬಗ್ಗೆ ಆಘಾತಕಾರಿ ಅಪನಂಬಿಕೆ ಹೊಂದಿದ್ದು ಪ್ರತ್ಯೇಕ ಪ್ರತೀಕಾರ ತೀರಿಸುವ ಗುರಿಯನ್ನು ಹೊಂದಿವೆ. ಅತ್ಯಾಚಾರಪೀಡಿತ ಸಂಸ್ಕೃತಿಯಲ್ಲಿ ಅತ್ಯಾಚಾರವೇ ಪುರುಷತ್ವದ ಹೆಗ್ಗಳಿಕೆಯಾಗಿದ್ದು ಅಪಮೌಲ್ಯೀಕೃತ ಪರಿಭಾಷೆಯಿಂದ ಮಹಿಳೆಯನ್ನು ಸ್ವಂತ ನಿರ್ಣಯ ಮತ್ತು ಅಧಿಕಾರ ವಲಯದಿಂದ ದೂರವಿಡುವ ಕ್ರಮ ಮಂಡಿತವಾಗಿದೆ. ಸಮಾಜದಲ್ಲಿ ಮಹಿಳೆಯರಿಗಿರುವ ಕೆಳಸ್ಥಾನ ಹಾಗೂ ಭಿನ್ನ ಲಿಂಗಗಳಲ್ಲಿರುವ ಅಸಮಾನ ಅಧಿಕಾರ ಹಂಚಿಕೆಯನ್ನು ಇದು ದೃಢಪಡಿಸುತ್ತದೆ.

ಮಹಿಳೆಯರ ವಿರುದ್ಧ ನಡೆಯುವ ಲೈಂಗಿಕ ದೌರ್ಜನ್ಯದಂಥ ಘಟನೆಗಳನ್ನು ಪರಿಶೀಲಿಸುವ ವಿಷಯದಲ್ಲಿ ನ್ಯಾಯಾಂಗ ಹಾಗೂ ಕಾನೂನು ವ್ಯವಸ್ಥೆ ಯಾವುದೇ ರೀತಿಯಲ್ಲೂ ಸುಸಜ್ಜಿತವಾಗಿಲ್ಲ ಎನ್ನುವುದನ್ನೇ ಎಲ್ಲ ಚಿತ್ರಗಳೂ ಅಭಿವ್ಯಕ್ತಿಸಿವೆ. ಭಾರತೀಯ ನ್ಯಾಯ ಸಂಹಿತೆ ೩೭೫ರ ಅಡಿಯಲ್ಲಿ ಅತ್ಯಾಚಾರ ಬರುತ್ತದೆ. ಅದನ್ನು ಮಹಿಳೆಯ ಸಮ್ಮತಿ ಇಲ್ಲದೆ ನಡೆಯುವ ಆಕ್ರಮಣ ಎಂದು ಹೇಳಲಾಗುತ್ತದೆ. ಮಹಿಳೆಯ ಸಮ್ಮತಿ ಪಡೆಯದೆ ಇರುವುದಕ್ಕೆ ಸಾಕ್ಷಿಯಾಗಿ ಮಹಿಳೆಯ ದೇಹದ ಮೇಲಿನ ಗಾಯದ ಗುರುತುಗಳಿಗೆ ಮಹತ್ವ ಕೊಡಲಾಗುತ್ತದೆ. ಬುದ್ಧಿಮಾಂದ್ಯ ಮಹಿಳೆಯ ವಿಷಯದಲ್ಲಿ ಈ ಅಂಶ ನಿರ್ಣಯಕ್ಕೆ ಬರಲಾರದಂಥದ್ದಾಗಿದೆ. ಅತ್ಯಾಚಾರ ನಡೆದ ಎಷ್ಟೋ ಸಮಯದ ನಂತರ ಈ ವಿಷಯ ಬಯಲಾಗುತ್ತದೆ. ಆ ವೇಳೆಗೆ ಹೋರಾಟದ ಗುರುತುಗಳು ಹಾಗೂ ದೌರ್ಜನ್ಯದ ಲಕ್ಷಣಗಳು ಮಾಸಿಹೋಗಿರುತ್ತವೆ.

ನ್ಯಾಯ ಸಂಹಿತೆಯೂ ಅನೇಕ ಪ್ರಕಾರದಲ್ಲಿ ಮದುವೆ ಸಂಬಂಧದ ಮಿತಿಯಲ್ಲಿ ನಡೆದ ಅತ್ಯಾಚಾರವನ್ನು ಅತ್ಯಾಚಾರವೆಂದು ಪರಿಗಣಿಸುವುದಿಲ್ಲ. ಗಂಡನಿಗೆ ಹೆಂಡತಿಯ ಲೈಂಗಿಕತೆ ಮೇಲೆ ಹಿಡಿತವಿದೆ ಎಂದು ನ್ಯಾಯನಿರ್ಣಯ ಮಾಡುವುದಲ್ಲದೆ ಆತನ ವೈವಾಹಿಕ ಹಕ್ಕುಗಳ ಪ್ರತಿಪಾದನೆಯನ್ನು ಸಮರ್ಥಿಸುತ್ತದೆ. ಕಾನೂನು ನಿರ್ಣಯ ವೈವಾಹಿಕ ಅತ್ಯಾಚಾರವನ್ನು ರದ್ದುಗೊಳಿಸಲು ನಿರಾಕರಿಸುತ್ತದೆ. ಏಕೆಂದರೆ ಇದರಿಂದ ವೈವಾಹಿಕ ಸಂಬಂಧಗಳಲ್ಲಿ ಹಸ್ತಕ್ಷೇಪ ಮಾಡಿದಂತಾಗುತ್ತದೆ.

ಸಾಕ್ಷ್ಯಾಧಾರದ ವಿಧಾನ ಅತ್ಯಾಚಾರಕ್ಕೊಳಗಾದ ಮಹಿಳೆಯ ಲೈಂಗಿಕ ಇತಿಹಾಸವನ್ನು ಕೆದಕುತ್ತದೆ. ಅದು ಅತ್ಯಾಚಾರ ನಡೆದಿದೆಯೋ ಇಲ್ಲವೋ ಎಂಬುದಕ್ಕೆ ಸಾಕ್ಷಿಯಾಗಬೇಕಾಗುತ್ತದೆ. ಈ ರೀತಿಯ ವಿಚಾರಣೆಯೇ ಅತ್ಯಾಚಾರವ ಭಾವನಾತ್ಮಕ ನೆಲೆಯನ್ನು ಘಾಸಿಗೊಳಿಸುತ್ತದೆ. ಮಹಿಳೆಯರು ಬಿಗಿಯುಡುಪು ಧರಿಸುವ ಆಯ್ಕೆ ಕೂಡ ಅತ್ಯಾಚಾರಕ್ಕೆ ಕರೆ ನೀಡುತ್ತದೆ ಎನ್ನುವ ಊಹೆಯಿದೆ. ಮಹಿಳೆಯರು ತಮ್ಮ ಅಂಗಾಗ ಕಾಣುವಂತೆ ಉಡುಪು ಧರಿಸುವುದು ಅತ್ಯಾಚಾರಕ್ಕೆ ಆಹ್ವಾನ ನೀಡಿದಂತೆಂಬ ಸಮಕಾಲೀನ ಚರ್ಚೆಗಳು ಮಹಿಳೆಯರ ಆಘಾತವನ್ನು ಹೆಚ್ಚಿಸಿವೆ.

ಭಾರತೀಯ ಸಮಾಜದಲ್ಲಿ ಅತ್ಯಾಚಾರದ ಸಂಗತಿ ಗೊಂದಲದ ವಿಷಯವಾಗಿದೆ, ಇದಕ್ಕೆ ಅಪರಾಧ ನಿರ್ಣಯ ಸಂಖ್ಯೆ ಅತಿಕನಿಷ್ಠ ಇರುವುದು ಕಾರಣವಾಗಿದೆ. ಮಥುರಾ ಅತ್ಯಾಚಾರದ ಕೇಸಿನಲ್ಲಿ ಪೋಲಿಸರ ಕಸ್ಟಡಿಯಲ್ಲಿದ್ದ ಬುಡಕಟ್ಟು ಜನಾಂಗದ ಹದಿಯರೆಯ ಯುವತಿಯ ಮೇಲೆ ಪೋಲಿಸರೆ ಅತ್ಯಾಚಾರ ನಡೆಸಿದ್ದು ರಾಷ್ಟ್ರೀಯ ಸುದ್ದಿಯಾಗಿತ್ತು. ಸುಪ್ರೀಂಕೋರ್ಟು ಹುಡುಗಿ ಎಚ್ಚರಿಕೆ ಮಹಿಳಲಿಲ್ಲ; ಆಕೆ ಲೈಂಗಿಕ ಕ್ರಿಯೆಗೆ ಒಪ್ಪಿರಬಹುದೆಂದು ಅದು ಸೂಚಿಸುತ್ತದೆ. ಆದ್ದರಿಂದ ಪೋಲೀಸರು ಮಾಡಿದುದು ಆಕೆಗೆ ಒಪ್ಪಿಗೆಯಾಗಿದೆ ಎಂದು ಅಂತಿಮವಾಗಿ ಹೇಳಿತು. ಇಂಥ ಘಟನೆಗಳು ದಪಲಿಯಲ್ಲಿ ಮೇಲಿಂದ ಮೇಲೆ ನಡೆದಿದ್ದು, ಲಿಂಗ ಸೂಕ್ಷ್ಮವಲ್ಲದ ನ್ಯಾಯಾಂಗ ಅತ್ಯಾಚಾರಕ್ಕೆ ಬಲಿಯಾದವರಿಗೆ ನ್ಯಾಯ ಕೊಡಲು ಅಸಮರ್ಥವಾಗಿರುವುದನ್ನು ಸೂಚಿಸುತ್ತದೆ.

ಇಲ್ಲಿ ವಿವರಿಸಿದ ಚಿತ್ರಗಳ ವಿವಿಧ ಅಂಶಗಳು ಮುಖ್ಯವಾಹಿನಿ ಲೈಂಗಿಕ ಪ್ರದರ್ಶನದ ಚಿತ್ರಣವಾಗಿದ್ದು ಸಿನಿಮಾಗಳ ಗುಣಲಕ್ಷಣಗಳನ್ನು ಹೇಳುತ್ತವೆ. ಬಹುಶಃ ಮಹಿಳಾ ಸಿನಿಮಾ ಬರಹಗಾರ್ತಿಯರು, ಮಹಿಳಾ ನಿರ್ದೇಶಕರು ಮಾತ್ರ ಅತ್ಯಾಚಾರದ ಕಾನೂನುಗಳನ್ನು ಸೂಚಿಸುವಷ್ಟ ಸಾಗಬಹುದು.

ಸಂವಿಧಾನ (೧೯)೨ರಲ್ಲಿ ಸಾರ್ವಜನಿಕ ನೀತಿ ನಿಯಮುಗಳಿಗೆ, ಮರ್ಯಾದೆಗೆ ಅನುಸಾರವಾಗಿ ಅಶ್ಲೀಲ ಪ್ರದರ್ಶನ ಹಾಗೂ ನಡವಳಿಕೆಯನ್ನು ನಿರ್ಬಂಧಿಸಿದೆ. ಈ ನಿಟ್ಟಿನಲ್ಲಿ ಹಲವು ಕಾಯ್ದೆ ಕಾನೂನುಗಳು ಬಂದಿವೆ. ಉದಾ: ಸಿನಿಮಾ ಟೋಗ್ರಾಫಿ ಕಾಯ್ದೆ, ಪ್ರೆಸ್ ಕಾಯ್ದೆ, ಕೇಬಲ್ ಕಾಯ್ದೆ ಇವುಗಳಲ್ಲಿ ಪ್ರಮುಖವಾದುವು. ಸಿನಿಮಾದಂತಹ ಪ್ರಮುಖ ದೃಶ್ಯಮಾಧ್ಯಮದಲ್ಲಿ ಅಶ್ಲೀಲ ಪ್ರದರ್ಶನ ನಿಯಂತ್ರಿಸಲು ೧೯೮೬ ಮತ್ತು ೮೭ರಲ್ಲಿ "ಮಹಿಳೆಯರ ಅಶ್ಲೀಲ ಚಿತ್ರಣ ನಿಷೇಧ ಕಾಯ್ದೆ ತರಲಾಯಿತು. ಭಾರತೀಯ ದಂಡ ಸಂಹಿತೆಯ ೨೯೨ನೇ ಸೆಕ್ಷನ್ ಅನ್ವಯ ಅಶ್ಲೀಲ ಪ್ರದರ್ಶನ ಅಪರಾಧವಾಗಿದೆ. "ಲೈಂಗಿಕ ಪ್ರಚೋದನೆಯುಂಟುಮಾಡುವ ಯಾವುದೇ ಬರಹ, ಪುಸ್ತಕ, ಬಿತ್ತಿಪತ್ರ, ಪತ್ರಿಕೆ, ಚಿತ್ರ ಅಥವಾ ವಸ್ತುಗಳನ್ನು ಓದುವಂತೆ, ನೋಡುವಂತೆ, ಕೇಳುವಂತೆ ಮಾಡುವುದನ್ನು ಕಾನೂನು ವಿರೋಧಿಸುತ್ತದೆ." ಆದರೂ ಅವು

Scanned with OKEN Scanner

ಮುಂದಿನವರಿಗಾಗಿ ಈ ಬಗ್ಗೆ ಸಾಗರಿಕ ಸಮಾಜ ಸಂಘಟಿತ ಪ್ರಯತ್ನ ಮಾಡಬೇಕಾಗಿದೆ.

ಡಾ. ಯರ್ರಿಸ್ವಾಮಿ ಈ.
ಸಹಾಯಕ ಪ್ರಾಧ್ಯಾಪಕ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೩೬, ಹೊಸಪೇಟೆ ತಾಲೂಕು
ವಿಜಯನಗರ ಜಿಲ್ಲೆ, ಕರ್ನಾಟಕ
ಸಂಪರ್ಕದ ಸಂಖ್ಯೆ: 9481715062
ಈ-ಮೇಲ್ ಐಡಿ: yerriswamy91@gmail.com

.....

Scanned with OKEN Scanner